

ಧನ್ಯಜೀವಿ





ಧನ್ಯಜೀವಿ

ಶ್ರೀ

(ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳ
ಜನ್ಮಶತಮಾನೋತ್ಸವ ಸಂದರ್ಭದ ಸವಿಸಂಪುಟ)

ಡಾ. ಜಿ. ಎಸ್. ಎಸ್. ಅವರ ಗ್ರಂಥದಾನ -
26/8/07.

ಸಂಪಾದಕರು
ತ. ಸು. ಶಾಮರಾಯ

ಸಹ ಸಂಪಾದಕರು
ಪ. ನಾಗರಾಜಯ್ಯ

ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ
ಮಲ್ಲಾಡಿಹಳ್ಳಿ ಹೊಳಲ್ಕೆರೆ ತಾಲ್ಲೂಕು
ಕರ್ನಾಟಕ ೫೭೭ ೫೩೧

Dhanyajeevi (Sri Sri Raghavendra Swamiji's Birth Centenary Felicitation Volume)— Edited by Prof T. S. Shama Rao, Published by Anathasevashrama Trust, Malladihalli, Holalkere Taluk, Karnataka State–577 531, First Published 1991. Price Rs.60.

ಪ್ರಥಮ ಮುದ್ರಣ : ೧೯೯೧

ಬೆಲೆ : ರೂ. ೬೦

ಮುದ್ರಕರು
ಶ್ರೀ ಸದ್ಗುರು ಪ್ರಿಂಟರ್ಸ್, ರಾಮಾನುಜ ರಸ್ತೆ, ಮೈಸೂರು–570 004

ಸಂಪಾದಕನ ಬಿನ್ನಹ

ತ.ಸು. ಶಾಮರಾಯ

ಶ್ರೀಕೃಷ್ಣಪರಮಾತ್ಮನು ಭಗವದ್ಗೀತೆಯಲ್ಲಿ

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಎಂದು ಹೇಳಿಕೊಂಡಿದ್ದಾನೆ. ("ಧರ್ಮವು ಖಿಲವಾದಾಗ ಅದರ ಪುನರುದ್ಧಾರಕ್ಕಾಗಿ ನಾನು ಯುಗ ಯುಗದಲ್ಲಿಯೂ ಅವತರಿಸಿ ಬರುತ್ತೇನೆ" ಎಂದು ಹೇಳಿದ್ದಾನೆ.) ಸರ್ವಶಕ್ತನೂ, ಸರ್ವಾಂತರ್ಯಾಮಿಯೂ ಆದ ಭಗವಂತನು ತಾನಿದ್ದ ಕಡೆಯಿಂದಲೇ ಜಗತ್ತಿನ ಆಗುಹೋಗುಗಳನ್ನು ನಿಯಂತ್ರಿಸಲು ಶಕ್ತನಾಗಿದ್ದರೂ, ತಾನೇಕೆ ಮಾನವನಾಗಿ ಜನಿಸಬೇಕು? ಅವತರಣ ಎಂದರೆ ಕೆಳಗಿಳಿದು ಬರುವುದು ಎಂದರ್ಥ. ಎಲ್ಲಿಯೋ (ವೈಕುಂಠದಲ್ಲಿಯೋ ಕೈಲಾಸದಲ್ಲಿಯೋ) ಇರುವವನು ದುಷ್ಟನಿಗ್ರಹಕ್ಕಾಗಿಯೋ, ಶಿಷ್ಟಪರಿಪಾಲನೆಗಾಗಿಯೋ ಕೆಳಗಿಳಿದು ಬರುವ ಕಷ್ಟವನ್ನೇಕೆ ಅವನು ವಹಿಸಬೇಕು? ರಾಮ, ಕೃಷ್ಣ, ಬಸವ, ರಾಮಕೃಷ್ಣ ಮೊದಲಾದವರೆಲ್ಲರೂ ಭಗವಂತನ ಅವತಾರವಾಗಿ ಇಲ್ಲಿಗೆ ಬಂದರೆಂದು ಜನ ಭಾವಿಸುತ್ತಾರೆ. ಇದು ನನಗೆ ಸರಿದೋರುತ್ತಿಲ್ಲ. ಅವತರಣವೆಂಬುದಕ್ಕೆ ನಾನು ಅರ್ಥೈಸುವುದೇ ಬೇರೆಯ ರೀತಿಯಲ್ಲಿ. ದುಷ್ಟರ ಬಾಧೆಯಿಂದ ಸತ್ಪುರುಷರು ಸಂಕಟಪಡುತ್ತಿರುವಾಗ ಅವರ ಪ್ರತಿನಿಧಿಯಾಗಿ ಮಹಾಪುರುಷನೊಬ್ಬನು ಊರ್ಧ್ವಮುಖನಾಗಿ ದೈವಕೃಪೆಯನ್ನು ಯಾಚಿಸುತ್ತ ಧ್ಯಾನಸ್ತಿಮಿತಮೂರ್ತಿಯಾಗಿ ಕುಳಿತುಕೊಂಡಾಗ, ಆತನ ಪ್ರಾರ್ಥನೆ ಊರ್ಧ್ವಮುಖವಾಗಿ ಹೋದಷ್ಟೂ, ಮೇಲಿರುವ ದೈವದ ಕೃಪೆ ಅಧೋಮುಖವಾಗುತ್ತದೆ. ಇವೆರಡೂ ಸಂಗಮವಾದಾಗ, ಧ್ಯಾನೋನ್ಮುಖನಾದವನಲ್ಲಿ ಆ ಕೃಪೆ ಇಳಿದು ಬರುತ್ತದೆ. ಆಗ ಅವನು ಸರ್ವಶಕ್ತನಾಗುತ್ತಾನೆ, ಅವತಾರ ಪುರುಷನಾಗುತ್ತಾನೆ. ಮಲ್ಲಾಡಿಹಳ್ಳಿಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳು ಇಂತಹ ಅವತಾರ ಪುರುಷರು.

ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳ ಜೀವನ ಚರಿತ್ರೆಯನ್ನು ಸಂಗ್ರಹವಾಗಿ ಅವರ ಸಂಭಾವನಾ ಗ್ರಂಥವಾದ 'ನಂದನವನ'ದಲ್ಲಿ ಹೇಳಿದ್ದೇನೆ. ಅದನ್ನು ಮತ್ತೆ ಇಲ್ಲಿ ಹೇಳುವುದು ಅನಗತ್ಯ. ಅವರು ತಮ್ಮ ಗುರುಗಳಾದ ಶಿವಾನಂದತೀರ್ಥ ಸ್ವಾಮೀಜಿಯವರಿಂದ ದೈವೀ ಶಕ್ತಿಯನ್ನು ಪಡೆದವರಾಗಿ, ಬಾಬಾ ಲಕ್ಷ್ಮಣದಾಸರಿಂದ ಆಯುರ್ವೇದ ವಿದ್ಯೆ, ಸ್ವಾಮಿ ನಿತ್ಯಾನಂದರಲ್ಲಿ ಆತ್ಮವಿದ್ಯೆ, ಪಳನಿಮೂರ್ತಿ ಸ್ವಾಮಿಗಳಲ್ಲಿ ಅಂಗವಿದ್ಯೆ-ಯೋಗವಿದ್ಯೆ, ಬರೋಡದ ಪ್ರೊ. ಮಾಣಿಕರಾವ್ ಅವರಿಂದ

ಯೋಗ ಅಂಗಸಾಧನೆಗಳನ್ನು ಕಲಿತರು, ಲೋಕಕಲ್ಯಾಣಕ್ಕಾಗಿ ಇವುಗಳನ್ನೆಲ್ಲ ವಿನಿಯೋಗಿಸಲು ಮಲ್ಲಾಡಿಹಳ್ಳಿ ಇವರ ಕಾರ್ಯರಂಗವಾಯಿತು.

ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮದಲ್ಲಿ ನಡೆಯುವ ಮುಖ್ಯ ಕಾರ್ಯಗಳೆಂದರೆ ವೈದ್ಯ, ಶಿಕ್ಷಣ ಮತ್ತು ಯೋಗಾಭ್ಯಾಸ. ಈ ಮೂರರಲ್ಲಿಯೂ ಅವರ ಸಮನ್ವಯ ತತ್ವವನ್ನು ಕಾಣಬಹುದು.

ಸ್ವಾಮಿಗಳು ಸ್ವತಃ ರೋಗಿಗಳನ್ನು ಪರೀಕ್ಷಿಸಿ, ತಮ್ಮ ನಿರ್ದೇಶನದಲ್ಲೇ ತಯಾರಾದ ಮದ್ದನ್ನು ರೋಗಿಗಳಿಗೆ ಉಚಿತವಾಗಿ ನೀಡುತ್ತಾರೆ. ಇಂದು ಚಿಕಿತ್ಸಾಲಯಕ್ಕೆ ಬರುವ ರೋಗಿಗಳ ಸಂಖ್ಯೆ ವರ್ಷಕ್ಕೆ ಮೂವತ್ತು ಸಾವಿರಕ್ಕೂ ಮಿಕ್ಕಿದೆ. ಔಷಧ, ಮೂಲಿಕೆಗಳಿಗಾಗಿ ಮಾಡುವ ವೆಚ್ಚ ಒಂದು ಲಕ್ಷ ರೂಪಾಯಿಗಳಿಗೂ ಮೀರಿರುತ್ತದೆ. ಪಾಶ್ಚಾತ್ಯ ವೈದ್ಯ ವಿದ್ಯೆಗೆ ಎಟುಕದ ಎಷ್ಟೋ ರೋಗಗಳಿಗೆ ಇಲ್ಲಿ ಪರಿಹಾರ ದೊರೆಯುವುದರಿಂದ ಬೊಂಬಾಯಿ, ಪೂನಾ, ಮದರಾಸು, ದೆಹಲಿ ಇತ್ಯಾದಿ ದೂರದ ಸ್ಥಳಗಳಿಂದಲೂ ರೋಗಿಗಳು ಬರುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿ ಅನಾಥ ಸೇವಾಶ್ರಮ ಸಾಧಿಸಿರುವ ಪ್ರಗತಿ ಅದ್ವಿತೀಯವಾದುದು. ಶಿಶುವಿಹಾರದಿಂದ ಹಿಡಿದು ಕಾಲೇಜಿನವರೆಗೆ ನಡೆಯುವ ಇಲ್ಲಿನ ಶಿಕ್ಷಣ ವಿಧಾನ ಪೂರ್ವಕಾಲದ ನಮ್ಮ ಗುರುಕುಲವಾಸವನ್ನು ನೆನಪಿಗೆ ತರುತ್ತದೆ. ಇಲ್ಲಿ ಜಾತಿ, ಮತ, ಪಂಥಗಳ ಭೇದವಿಲ್ಲ. ಭಜನೆ, ಪ್ರಾರ್ಥನೆ, ದೈಹಿಕ ಸಾಧನೆಯಂತೆಯೇ ಅಶನ, ವಸನ, ವಸತಿಗಳಲ್ಲೂ ಯಾವುದೇ ರೀತಿಯ ತಾರತಮ್ಯವಿಲ್ಲ. ಹಿಂದುಗಳಷ್ಟೇ ಅಲ್ಲ, ಕ್ರೈಸ್ತ, ಮಹಮ್ಮದೀಯರಾದಿಯಾಗಿ ಎಲ್ಲ ಮತಸ್ಥರಿಗೂ ಇಲ್ಲಿ ಸಮಾನಾವಕಾಶವಿದೆ.

ಯೋಗ ಶಿಕ್ಷಣಕ್ಕಾಗಿ 'ವಿಶ್ವಯೋಗ ಕೇಂದ್ರ'ವನ್ನೂ ಸ್ಥಾಪಿಸಲಾಗಿದೆ. ಅಲ್ಲಿ ಕ್ರಮಬದ್ಧವಾಗಿ ಯೋಗ ಶಿಕ್ಷಣವನ್ನು ನೀಡಲಾಗುತ್ತಿದೆ. ಶ್ರೀ ಶ್ರೀ ಸ್ವಾಮಿಗಳು ಯೋಗವಿದ್ಯಾ ಪಾರಂಗತರು, ಮಹಾತಪಸ್ವಿಗಳು, ಸಿದ್ಧ ಪುರುಷರು. ವರ್ಷದಲ್ಲಿ ಒಂದು ತಿಂಗಳು ಜಗತ್ತಿನಿಂದ ವಿಮುಖರಾಗಿ, ಏಕಾಂತವಾಸಿಗಳಾಗಿ ಇದ್ದುಕೊಂಡು, ಅಲ್ಲಿ ತುಂಬಿಕೊಂಡು ಬಂದ ಆಧ್ಯಾತ್ಮ ಶಕ್ತಿಯನ್ನು ಉಳಿದ ಹನ್ನೊಂದು ತಿಂಗಳು ಲೋಕಕಲ್ಯಾಣಕ್ಕಾಗಿ ವಿನಿಯೋಗಿಸುತ್ತಾರೆ.

ಪರಶಿವನಂತೆ, ಮಹಾತ್ಮ ಗಾಂಧೀಜಿಯವರಂತೆ, ಮದನ ಮೋಹನ ಮಾಳವೀಯರಂತೆ ಈ 'ತಿರುಕ' ನಾಮಾತ್ಮಕರು ಕೂಡ ನಿಸ್ವಾರ್ಥರಾಗಿ ಅಕ್ಷಯ ಶಕ್ತಿಯುಳ್ಳ ಭಿಕ್ಷಾಪಾತ್ರೆಯನ್ನು ಹಿಡಿದಿರುವರು. ಇವರ ತಿರಿಕೆಯ ವಾಮನಾಕೃತಿ ತ್ರಿವಿಕ್ರಮ ಕರ್ಮವಾಗಿ ಜಗತ್ತಿನ ಬೆಕ್ಕಸಕ್ಕೆ ವಸ್ತುವಾಗಿದೆ. ಹಿಂಸೆ, ದ್ವೇಷಗಳ ಸೋಂಕಿಲ್ಲದ, ಸೌಹಾರ್ದ ಸಾಮರಸ್ಯಗಳೇ ಇವರ ಬಂಡವಾಳ. ದೈಹಿಕ ಶಕ್ತಿ, ಮುಖದಲ್ಲಿ ಮಿನುಗುವ ಬ್ರಹ್ಮ ತೇಜಸ್ಸು, ಆಸನ ಪ್ರಾಣಾಯಾಮಗಳ ಆಚರಣೆ, ನಡೆನುಡಿಗಳಲ್ಲಿನ ತಾರ್ಕಣೆ, ಪಾದರಸದಂಥ ಕಾರ್ಯಚಟುವಟಿಕೆ, ನಿಷ್ಕಾಮ ಕರ್ಮ-ಇವುಗಳಿಂದ ಅವರ ಸುತ್ತ ಆಧ್ಯಾತ್ಮಿಕ ಪ್ರಭಾವಲಯವೊಂದು ನಿರ್ಮಾಣವಾಗಿದೆ. ಸನಾತನದೊಡನೆ ಆಧುನಿಕತೆಯನ್ನು ಸಮನ್ವಯಗೊಳಿಸಿ ವಿಶ್ವಧರ್ಮವನ್ನು ಪುನರುಜ್ಜೀವನಗೊಳಿಸುವಂತಹ

ಕಾಯಕಲ್ಪದಿಂದ ನಮ್ಮ ಸಮಾಜ ಜೀವನವನ್ನು ಸಚೇತನಗೊಳಿಸಬೇಕೆಂದು ಅವರು ನಿಶ್ಚಯಿಸಿದ್ದಾರೆ. ಆತ್ಮಯಜ್ಞದ ಬಲಿದಾನದಿಂದ ಲೋಕಕಲ್ಯಾಣದ ಸಿದ್ಧಿಯನ್ನು ಸಾಧಿಸಿದ್ದಾರೆ.

ಅನಾಥಸೇವಾಶ್ರಮಕ್ಕೆ ಕೋಟಿಹಣದ ಆಸ್ತಿಯಿದ್ದರೂ ಶ್ರೀ ರಾಘವೇಂದ್ರರಿಗೆ ಗೋಪಾದದಷ್ಟು ಆಸ್ತಿಯೂ ಇಲ್ಲ. ಆಶ್ರಮದ ವ್ಯವಹಾರ ಲಕ್ಷಗಟ್ಟಲೆಯಲ್ಲಿ ನಡೆಯುತ್ತಿದ್ದರೂ ಅದನ್ನು ತಂದು ಹಾಕುವರ ಬಳಿ ಒಂದು ಪೈಸೆಯೂ ಇಲ್ಲ, ಅದರ ವಹಿವಾಟೆಲ್ಲ ಕಾರ್ಯದರ್ಶಿಯವರದು. ಆಶ್ರಮಕ್ಕೆ ಬಂದ ಅತಿಥಿಗಳಿಗೆ ರಸಕವಳ ಸಿಕ್ಕಿದರೂ ಆಶ್ರಮದ ಯಜಮಾನರಿಗೆ ಮಾತ್ರ ಉಪ್ಪುಹುಳಿ ಖಾರಗಳಿಲ್ಲದ ಸಪ್ಪೆ ಊಟ. ಭಕ್ತಾದಿಗಳಿಂದ ಬಗೆಬಗೆಯ ಹಣ್ಣು ಹಂಪಲುಗಳು ಯಥೇಚ್ಛವಾಗಿ ಬಂದು ಬಿದ್ದರೂ, ಸ್ವಾಮಿಗಳು ತಿನ್ನುವುದು ಮಾತ್ರ ಬಡವರಿಗೆ ಸಾಧ್ಯವಾಗಬಹುದಾದ ಬಾಳೆಯ ಹಣ್ಣು, ಪರಂಗೀ ಹಣ್ಣು· ಶ್ರೀಸಾಮಾನ್ಯನಿಗೆ ಎಟುಕದ ಯಾವ ವಸ್ತುವೂ ತನಗೆ ಬೇಡವೆಂಬುದು ಶ್ರೀರಾಘವೇಂದ್ರರ ಸತ್ ಸಂಕಲ್ಪ. ಲೋಕಸೇವೆಯಲ್ಲಿ ಈ ದೇಹ ಸವೆಯಲೆಂಬುದು ದಿನ ದಿನವೂ ದೇವರ ಮುಂದೆ ಅವರ ಪ್ರಾರ್ಥನೆ. ಈ ಆದರ್ಶ ಎಷ್ಟು ದೂರ ಹೋಗಿದೆಯೆಂದರೆ, ಸತ್ತಮೇಲೆ ತನ್ನ ದೇಹವನ್ನು ಸುಡುವುದೂ ಬೇಡ, ಹೂಳುವುದೂ ಬೇಡ ; ಯಾವುದಾದರೂ ಪ್ರಾಣಿಗಳ ಆಹಾರವಾಗುವಂತೆ ವಿನಿಯೋಗವಾಗಲಿ-ಎನ್ನುತ್ತಾರೆ ಈ ತ್ಯಾಗಮೂರ್ತಿ. ಆಶ್ರಮದ ಆಡಳಿತವನ್ನು ನಿರ್ವಹಿಸಲು ದಕ್ಷರಾದ ಮತ್ತು ಯೋಗ್ಯರಾದ ಮಹನೀಯರನ್ನು ಒಳಗೊಂಡ ಒಂದು ವಿಶ್ವಸ್ತ ಸಮಿತಿಯನ್ನು ಏರ್ಪಡಿಸಿ, ಅದನ್ನು ನೊಂದಾಯಿಸಿದೆ. ಶ್ರೀ ಸ್ವಾಮೀಜಿಯವರ ಅಭಿಪ್ರಾಯದಂತೆ 'ಜಗ ಎಂದರೆ ಜನಿಸಿ ಗಮಿಸುವ ಕ್ರಿಯಾವಿಲಾಸ. ಜನನ ಗಮನಗಳ ಮಧ್ಯದ ಪಯಣವೇ ಬಾಳು. ಈ ಬಾಳು ಆದರ್ಶವಾದರೆ ಜಗತ್ತನ್ನೇ ಉದ್ಧಾರ ಮಾಡಿದಂತೆ !' ಶ್ರೀ ರಾಘವೇಂದ್ರರು ಲೋಕೋದ್ಧಾರವನ್ನು ಸಾಧಿಸಿದ ಧನ್ಯಜೀವಿಗಳಾಗಿದ್ದಾರೆ. ಅವರು ಮುಕ್ಕೋಟಿ ಕನ್ನಡಿಗರ ಹಿರಿಯ ಆಸ್ತಿ. ಇಂತಹ ದೇವಮಾನವರು ಸ್ವಾಮೀಜಿ.

'ಅಧ್ಯಾತ್ಮದ ತಳಹದಿ : ಲೌಕಿಕದ ಜೀವನ ಸೌಧ'–ಇದು ಪೂಜ್ಯರ ಜೀವನ ಸಿದ್ಧಾಂತ ! ಇದು ಬರಿಯ ಹೇಳಿಕೆಯಲ್ಲ ; ಪೂಜ್ಯರ ಭವ್ಯಬಾಳು ಈ ಸಿದ್ಧಾಂತದ ಅಕ್ಷರಶಃ ನಿರೂಪಣೆ ಜನಸೇವೆ ಎಂಬ ಅತಿದೊಡ್ಡ ಹುಚ್ಚು ಹಿಡಿದ ಈ ಪ್ರಗಲ್ಭಚೇತನ ನೂರುವರ್ಷಗಳ ತನ್ನ ಬಾಳಿನುದ್ದಕ್ಕೂ ಸಾಧಿಸಿದುದು ಅನಂತ, ಅಪಾರ. ಹೊಟ್ಟೆಯ ಪಾಡಿಗಾಗಿ ಭಿಕ್ಷೆಯನ್ನೆಂದೂ ಬೇಡದ ಈ ತಿರುಕ ಕೋಟ್ಯಂತರ ರೂಪಾಯಿಗಳಷ್ಟು ತಿರುಪೆಯನ್ನೆತ್ತಿ ಅನಾಥಸೇವಾಶ್ರಮವನ್ನು ಸಾಕಾರಗೊಳಿಸಿದರು. ಕೇಳಿದವರು ಎಂದೂ ನಂಬದ, ಕಣ್ಣಾರೆ ಕಂಡವರು 'ಪವಾಡ'ವೆನ್ನುವಂತಹ ಗರಿಷ್ಮಸಾಧನೆ·

ಶ್ರೀ ರಾಘವೇಂದ್ರ ಸ್ವಾಮೀಜಿಯವರ ಪಟ್ಟ ಶಿಷ್ಯರಾದ ಶ್ರೀ ಸೂರದಾಸಜಿಯವರು ತಮ್ಮ ವ್ಯಕ್ತಿತ್ವವನ್ನೇ ಗುರುಗಳ ಧರ್ಮಯಜ್ಞಕ್ಕಾಗಿ ಸಮರ್ಪಿಸಿದವರು. ಗಂಗೆಯೊಡನೆ ಯಮುನೆಯ ಸಂಗಮದಂತೆ, ಈ ಗುರು-ಶಿಷ್ಯರ ಸಂಬಂಧ ಒಂದು

ಅಲೌಕಿಕವಾದ ಅವಿನಾ ಸಂಬಂಧ. ಇದು ಕೇವಲ ಈ ಜನ್ಮದ್ದು ಮಾತ್ರವಲ್ಲ ; ಬಹುಶಃ ಅನಾದಿ, ಅನಂತ. ಯಾವ ಸತ್ ಚಿತ್ ಆನಂದಶಕ್ತಿ ಶ್ರೀ ರಾಮಾವತಾರಿಯಾದಾಗ ತನ್ನ ಕಾರ್ಯಪೂರ್ಣತೆಗಾಗಿ ಆಂಜನೇಯನನ್ನು ಪಡೆಯಿತೋ ಶ್ರೀಕೃಷ್ಣರೂಪನ್ನು ಧರಿಸಿದಾಗ ಅರ್ಜುನನನ್ನು ಅಳವಡಿಸಿಕೊಂಡಿತೋ, ಶ್ರೀ ರಾಮಕೃಷ್ಣ ಪರಮಹಂಸರಾಗಿ ಜನಿಸಿದಾಗ ಶ್ರೀ ವಿವೇಕಾನಂದರನ್ನು ಆಯ್ದುಕೊಂಡಿತೋ, ಅದೇ ವಿಶ್ವಶಕ್ತಿ ಶ್ರೀ ರಾಘವೇಂದ್ರ ರೂಪಿಯಾಗಿರುವಾಗ ಶ್ರೀ ಸೂರದಾಸಜೀಯವರನ್ನು ವರಿಸಿತೆಂದು ತೋರುತ್ತದೆ. ಇಲ್ಲದಿದ್ದರೆ ಈ ಎರಡು ಚೇತನಗಳಿಗೆ ಇಂತಹ ಏಕತಾನತೆ ಹೇಗೆ ಸಾಧ್ಯ? ಒಂದು ಮೂಲಮೂರ್ತಿ, ಮತ್ತೊಂದು ಉತ್ಸವಮೂರ್ತಿ. ಬೆಳಕು, ಕಾವುಗಳು ಸೇರಿ ಸೂರ್ಯಕಾಂತಿಯಾಗುವಂತೆ, ಸತ್ವ–ಕ್ಷಾತ್ರಗುಣಗಳು ಸೇರಿ ಕ್ರತು ಶಕ್ತಿ ಉದಿಸುವಂತೆ ಈ ಮಹಾಪುರುಷರಿಬ್ಬರ ಸಮ್ಮಿಳನದಿಂದ ಮಹಾತ್ಕಾರ್ಯವೊಂದು ನೆರವೇರುತ್ತಿದೆ. ಭಗವತ್ ಸಂಕಲ್ಪದಿಂದ ಅನಾಥ ಸೇವಾಶ್ರಮ ಅಂಕುರಿಸಿದಾಗ ಶ್ರೀ ಶ್ರೀ ರಾಘವೇಂದ್ರರು ಅದರ ಸಂಸ್ಥಾಪಕ ಅಧ್ಯಕ್ಷರಾದರು ; ಶ್ರೀ ಸೂರದಾಸರು ಅದರ ಸಂಸ್ಥಾಪಕ ಕಾರ್ಯದರ್ಶಿಯಾದರು.

ಸನ್ಮಾನ್ಯ ಶ್ರೀ ಸೂರದಾಸರು ೧೯೯೦ನೇ ಸೆಪ್ಟೆಂಬರ್ ತಿಂಗಳ ಅಂತ್ಯದಲ್ಲಿ, ಒಂದು ದಿನ ನನ್ನ ಮನೆಗೆ ಬಂದರು. ಪರಸ್ಪರ ಔಪಚಾರಿಕ ಯೋಗಕ್ಷೇಮವನ್ನು ವಿಚಾರಿಸಿದ ನಂತರ ಅವರು ಶ್ರೀರಾಘವೇಂದ್ರ ಸ್ವಾಮಿಗಳಿಗೆ ಮುಂದಿನ ಯುಗಾದಿಯ ವೇಳೆಗೆ ನೂರು ವರ್ಷಗಳು ತುಂಬುವುದೆಂದೂ, ಆ ಸಂತೋಷ ಸಮಾರಂಭವನ್ನು ಅತ್ಯಂತ ಅರ್ಥಪೂರ್ಣವಾಗಿ ನೆರವೇರಿಸಬೇಕೆಂದೂ, ಶ್ರೀ ಶ್ರೀ ಸ್ವಾಮಿಜಿಯವರ ಶಿಷ್ಯವೃಂದ ನಿಶ್ಚಯಿಸಿರುವುದೆಂದೂ ತಿಳಿಸಿದರು. ಈ ಸಂತೋಷ ಸಮಾರಂಭದಲ್ಲಿ ಸ್ವಾಮಿಗಳಿಗೆ ಶತಮಾನೋತ್ಸವದ ಕಾಣಿಕೆಯಾಗಿ ಪುಟ್ಟದೊಂದು ಸಂಸ್ಮರಣ ಗ್ರಂಥವನ್ನೂ ಅರ್ಪಿಸಬೇಕೆಂದು ನಿಶ್ಚಯಿಸಿರುವುದಾಗಿಯೂ, ಆ ಕಾರ್ಯವನ್ನು ನಾನು ನಿರ್ವಹಿಸಬೇಕೆಂಬುದಾಗಿಯೂ ಸೂಚಿಸಿದರು. ನಾನು ನನ್ನ ವೃದ್ಧಾಪ್ಯದ ಬಗ್ಗೆ, ಅಂಧತ್ವ ಉಂಟಾಗಿರುವ ಬಗ್ಗೆ ನಿವೇದಿಸಿಕೊಂಡು ಸಂಸ್ಮರಣ ಗ್ರಂಥದ ಸಂಪಾದಕತ್ವಕ್ಕೆ ನನಗಿಂತಲೂ ದಕ್ಷರಾದವರನ್ನು ನೇಮಿಸಬೇಕೆಂದೂ ಬಿನ್ನವಿಸಿಕೊಂಡೆ. ಶ್ರೀ ಸೂರದಾಸಜೀಯವರಿಗೆ ನನ್ನಲ್ಲಿ ಅಪಾರವಾದ ಮಮತೆ, ಅತಿಶಯವಾದ ಭರವಸೆ, ಅಮಿತವಾದ ನಂಬಿಕೆ–ಈ ಕಾರಣಗಳಿಂದ "ನೀವು ಕುರುಡರಾಗಿರಲಿ, ಕಿವುಡರಾಗಿರಲಿ, ಮೂಕರಾಗಿರಲಿ ಈ ಕೆಲಸ ನಿಮ್ಮಿಂದಲೇ ನೆರವೇರಬೇಕು" ಎಂದರವರು. ಅವರ ಒತ್ತಾಯದ ಸೂಚನೆ, ಬಲವಂತವನ್ನು ನಾನು ಆಶೀರ್ವಾದವೆಂದು ಸ್ವೀಕರಿಸಿ, ಅವರನ್ನು ಸಂಪಾದಕ ಮಂಡಳಿಯ ಅಧ್ಯಕ್ಷರಾಗಿರುವಂತೆ ಒಪ್ಪಿಸಿ, ಈ ಕಾರ್ಯವನ್ನು ಕೈಗೆತ್ತಿಕೊಂಡೆ. ಒಡನೆಯೇ ನನ್ನ ವಿದ್ಯಾರ್ಥಿಮಿತ್ರರನ್ನು ಪತ್ರಗಳ ಮೂಲಕ ಸಂಪರ್ಕಿಸಿ, ಅವರ ಸಹಾಯ–ಸಹಕಾರಗಳು ನನ್ನವಾಗುವಂತಹ ಸಂಪಾದಕ ಮಂಡಳಿಯನ್ನು, ಶ್ರೀ ಸೂರದಾಸಜೀಯವರ ಅನುಮತಿ ಪಡೆದು ರಚಿಸಿಕೊಂಡೆ.

ಸಂಪಾದಕ ಮಂಡಳಿಯ ಸದಸ್ಯರಾಗಿ ನನಗೆ ಸಹಾಯ ನೀಡಲು ಈ ಮುಂದಿನ ಮಿತ್ರರು ಒಪ್ಪಿಕೊಂಡರು.

ಶ್ರೀಯುತರುಗಳಾದ 1) ಡಾ. ಜಿ.ಎಸ್. ಶಿವರುದ್ರಪ್ಪ
2) ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
3) ಶ್ರೀ ಬಿ.ವಿ. ವೈಕುಂಠರಾಜು
4) ಶ್ರೀಮತಿ ಚಿ.ನ. ಮಂಗಳ
5) ಶ್ರೀಮತಿ ವಿ. ಸುವರ್ಣ

ನನ್ನ ಗೆಳೆಯರಾದ ಶ್ರೀ ಪ. ನಾಗರಾಜಯ್ಯನವರನ್ನು ನನ್ನ ಸಹ-ಸಂಪಾದಕರಾಗಿರಲು ಒಪ್ಪಿಸಿದೆ. ಈ ಸಂಪಾದನಾಕಾರ್ಯ ನಿರ್ವಹಣೆಯಲ್ಲಿ ನನಗಿಂತಲೂ, ಸಹ-ಸಂಪಾದಕರಾದ ಪ. ನಾಗರಾಜಯ್ಯನವರ ಶ್ರಮ-ಪರಿಶ್ರಮಗಳೇ ಹೆಚ್ಚು ಗಣನೀಯವಾದವುಗಳು, ಅವರಿಗೆ ನಾನು ತುಂಬ ಆಭಾರಿಯಗಿದ್ದೇನೆ.

ಸಕಾಲದಲ್ಲಿ ಲೇಖನಗಳನ್ನು ಕಳುಹಿಸಿ ಸಹಕರಿಸಿದ ಎಲ್ಲ ಲೇಖಕರಿಗೂ ನಾನು ಋಣಿಯಾಗಿದ್ದೇನೆ.

ಈ ಗ್ರಂಥವನ್ನು ಅಚ್ಚು ಮಾಡುವುದರಲ್ಲಿ ಶ್ರೀ ಸದ್ಗುರು ಪ್ರಿಂಟರ್ಸ್‌ನ ಶ್ರೀ ವಾಸುರವರು ವಹಿಸಿರುವ ಶ್ರಮ,ಆಸಕ್ತಿ, ಪ್ರೇಮಗಳು ಅಪಾರವಾದವು.ಕೇವಲ ಹತ್ತಿಪ್ಪತ್ತು ದಿನಗಳಲ್ಲಿ ಅವರು ಈ ಗ್ರಂಥವನ್ನು ಅಚ್ಚುಮಾಡಿ ಕೊಟ್ಟಿರುತ್ತಾರೆ. ಹಗಲೂ ರಾತ್ರಿ ಬಿಡುವಿಲ್ಲದೆ ಅಚ್ಚುಕೂಟದ ಜನರು ಶ್ರಮಿಸಿದ್ದಾರೆ. ಇವರೆಲ್ಲರಿಗೂ ನಾನು ಚಿರಋಣಿ. ಅಚ್ಚಿನ ಕರಡನ್ನು ತಿದ್ದುವುದರಲ್ಲಿ ನನ್ನ ಶಿಷ್ಯ ಎನ್.ಎಸ್. ಶಾರದಾ ಪ್ರಸಾದ್, ನನ್ನ ಮಗಳು ಕುಮಾರಿ ಲಕ್ಷ್ಮೀದೇವಿ ಮತ್ತು ನನ್ನ ಮೊಮ್ಮಗಳಾದ ಚಿ.ಸೌ. ಸರ್ವಮಂಗಳಾ ಅಪಾರವಾಗಿ ಶ್ರಮಿಸಿದ್ದಾರೆ. ಅವರಿಗೆ ನಾನು ನನ್ನ ಶುಭಾಶಯಗಳನ್ನು ಕೋರುತ್ತೇನೆ.

ಶ್ರೀ ರಾಘವೇಂದ್ರ ಸ್ವಾಮೀಜಿಯವರು ಸ್ವಭಾವತಃ ಬಿರುದು ಬಾವಲಿಗಳ ವಿರೋಧಿಗಳು. ಮನ್ನಣೆ ಸನ್ಮಾನಗಳನ್ನು ಮೈಲಿಗಳಾಚೆ ಇಟ್ಟಿರುವವರು; ಸರ್ಕಾರದವರು ಸ್ವಪ್ರೇರಣೆಯಿಂದ ನೀಡಿದ ಪ್ರಶಸ್ತಿಯನ್ನು ಹಲವಾರು ಬಾರಿ ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದವರು. ಇತ್ತೀಚೆಗೆ ಕುವೆಂಪು ವಿಶ್ವವಿದ್ಯಾನಿಲಯದವರು ಅವರಿಗೆ ನೀಡಬಯಸಿದ ಗೌರವ ಡಾಕ್ಟರೇಟ್ ಪದವಿಯನ್ನು ಸಹ ನಿರಾಕರಿಸಿರುವರು. ಸ್ವಾಮಿಗಳು ಇಂಥಹ ನಿರ್ಭಯ, ನಿರಾಡಂಬರ, ನಿಸ್ವಾರ್ಥ ಮೂರ್ತಿ.

ಸಾರ್ಥಕ ಜೀವಿಗಳಾಗಿ ಶತಮಾನೋತ್ಸವವನ್ನು ಕಾಣುತ್ತಿರುವ ಪರಮಪೂಜ್ಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳು ಚಿರಾಯುಗಳಾಗಿ ಸಮಾಜೋದ್ಧಾರ ಕಾರ್ಯವನ್ನು ಮುಂದುವರಿಸುವಂತೆ ಭಗವಂತನು ಕರುಣಿಸಲೆಂದು ಮುಕ್ಕೋಟಿ ಕನ್ನಡಿಗರ ಪರವಾಗಿ ಪ್ರಾರ್ಥಿಸುತ್ತೇನೆ.

ಪರಿವಿಡಿ

ಶ್ರೀ ರಾಘವೇಂದ್ರ ಸ್ವಾಮೀಜಿ

ವೈದ್ಯ

ವೇದಾಂತ

ಸಾಹಿತ್ಯ

ಇತರೆ

ಶ್ರೀ ರಾಘವೇಂದ್ರ ಸ್ವಾಮಿಗಳು

ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠ

ವಿಜಯನಗರ, ಬೆಂಗಳೂರು–೫೬೦ ೦೪೦

ಹಾರೈಕೆ

ಹತ್ತು ದಶಕಗಳನ್ನು ದಾಟಿದ್ದರೂ ಬತ್ತದ ಚೈತನ್ಯ ಚಿಲುಮೆಯಾಗಿ ಮಾನವ ಕೋಟಿಗೆ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಿರುವ, ಮಲ್ಲಾಡಿಹಳ್ಳಿ ಸ್ವಾಮಿಗಳೆಂದೇ ಲೋಕಪ್ರಸಿದ್ಧರಾಗಿರುವ ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳವರು ಒಬ್ಬ ವ್ಯಕ್ತಿಯಲ್ಲ; ಮಹಾಶಕ್ತಿ ; ಲೌಕಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಮಹಾಸಾಧಕರು. ಇವರು ಹೊರನೋಟಕ್ಕೆ ವಾಮನರು ; ಒಳನೋಟಕ್ಕೆ ತ್ರಿವಿಕ್ರಮರು. ಮಾನವೀಯತೆಯೇ ಮೂರ್ತಿವೆತ್ತಂತಿರುವ ಇವರು ವಿಶ್ವಧರ್ಮಿಗಳು, ವಿಶ್ವಕುಟುಂಬಿಗಳು. ವಿಶ್ವರೂಪಿಯಾದ ಭಗವಂತನಿಗೆ ತಮ್ಮ ಸೇವಾರೂಪವಾದ ಪೂಜೆಯನ್ನು ಸಲ್ಲಿಸಿ ಸೇವಾಕ್ಷೇತ್ರದಲ್ಲಿ ಸಾರ್ಥಕ್ಯವನ್ನು ಪಡೆದ ಮಹಾಜೀವಿಗಳು. ಇವರ ಸೌಹಾರ್ದ, ಸೌಜನ್ಯಗಳಿಗೆ ಮಣಿಯದವರಿಲ್ಲ. ಇವರ ಸರಳಜೀವನ, ಉದಾರಹೃದಯ, ಬಿಚ್ಚುಮನಸ್ಸು, ಮೃದುವಚನಗಳಿಂದ ಎಲ್ಲರೂಮಂತ್ರಮುಗ್ಧರಾಗುತ್ತಾರೆ. ಇವರು ತಮ್ಮನ್ನು 'ತಿರುಕ'ನೆಂದು ಕರೆದುಕೊಂಡಿದ್ದಾರೆ. ಇವರ ಅಕ್ಷಯ ಜೋಳಿಗೆಯಿಂದ ಪವಾಡವೇ ನಡೆಯುತ್ತಿದೆ.

ಮಹಾಸಾಧಕರಾದ ಇವರದು ಸಾಹಸಮಯ ಜೀವನ. ರಾಷ್ಟ್ರದ ಉದ್ದಗಲ ಸಂಚರಿಸಿ, ವಿವಿಧ ಅನುಭವಗಳನ್ನು ಪಡೆದು ಕನ್ನಡನಾಡಿನ ಪುಣ್ಯದಿಂದ ಮಲ್ಲಾಡಿಹಳ್ಳಿಯಲ್ಲಿ ನೆಲೆಸಿದರು. ಅಡ್ಡಬಂದ ಸಂಕಷ್ಟಗಳನ್ನು ಇದಿರಿಸಿ ಇಲ್ಲಿ ಅನಾಥಸೇವಾಶ್ರಮವನ್ನು ಸ್ಥಾಪಿಸಿದರು. ಇಂದು ದೇವಮಂದಿರ, ಯೋಗಶಾಲೆ, ಆಯುರ್ವೇದ ಕೇಂದ್ರ, ಶಾಲಾಕಾಲೇಜುಗಳು ಮುಂತಾದ ವಿವಿಧ ಸಂಸ್ಥೆಗಳು ಇಲ್ಲಿ ಕಂಗೊಳಿಸುತ್ತಿವೆ. ಯೋಗ ಮತ್ತು ಆಯುರ್ವೇದ ವಿದ್ಯೆಗಳಲ್ಲಿ ಇವರು ಪರಿಣಿತರು. ಸಹಸ್ರಾರು ಮಕ್ಕಳು ಇಲ್ಲಿ ಅಧ್ಯಯನಮಾಡಿ ತಮ್ಮ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ. ಇವರು ಮಾನಸಿಕ ಮತ್ತು ದೈಹಿಕ ರೋಗಗಳಿಗೆ ತುತ್ತಾಗಿ ನರಳುತ್ತಿರುವವರ ನೋವನ್ನು ಚಿಕಿತ್ಸೆ ನೀಡಿ ಪರಿಹರಿಸುವ ದೇವಧನ್ವಂತರಿ ; ಬಲಹೀನರಿಗೆ ಆಸನಗಳ ಶಿಕ್ಷಣದಿಂದ ದೇಹದಾರ್ಢ್ಯ ಮತ್ತು ಆರೋಗ್ಯವನ್ನು ನೀಡುವ ಯೋಗಾಚಾರ್ಯ ; ವಿದ್ಯಾರ್ಥಿಗಳಿಗೆ ಕುಲಪತಿ ; ಆತ್ಮಜ್ಞಾನವನ್ನು ಬಯಸುವ ಭಕ್ತರಿಗೆ ಪರಮ ಗುರು ; ಭವಭಾರದಿಂದ ತತ್ತರಿಸುವ ಜನರಿಗೆ ಊರುಗೋಲು–ಹೀಗೆ ಇವರದು ಬಹುಮುಖ ಸೇವೆ. ಇವರ ದರ್ಶನ, ಆಶೀರ್ವಾದ, ರೋಗಚಿಕಿತ್ಸೆ, ಯೋಗಶಿಕ್ಷಣಗಳಲ್ಲಿ ಜನರಿಗೆ ಬಹಳ ವಿಶ್ವಾಸವಿದೆ. ಸದಾ ಸಹಸ್ರಾರು ಸಂಖ್ಯೆಯಲ್ಲಿ ಜನರು ಇವರ ಆಶ್ರಮಕ್ಕೆ ಬರುತ್ತಾರೆ. ಬಂದವರು ಭಾರ ಕಳೆದುಕೊಂಡು ಹಗುರವಾಗಿ ಹಿಂದಿರುಗು

ತ್ತಾರೆ. ಇಲ್ಲಿನ ಶಿಸ್ತು, ಕಾಲ ನಿಯಮಗಳು ಅನುಕರಣಯೋಗ್ಯವಾಗಿವೆ. ಇಲ್ಲಿನ ಪರಿಸರವು ಪ್ರಾಚೀನ ಋಷ್ಯಾಶ್ರಮಗಳನ್ನು ನೆನಪಿಗೆ ತರುತ್ತದೆ. ಈ ತಪಸ್ವಿಗಳ ಪ್ರಭಾವದಿಂದ ಮಲ್ಲಾಡಿಹಳ್ಳಿ ಸುಪ್ರಸಿದ್ಧ ಯಾತ್ರಾಸ್ಥಳವಾಗಿ ಪರಿವರ್ತನೆಗೊಂಡಿದೆ.

ನಮ್ಮದು ಹಳ್ಳಿಗಳ ನಾಡು. ನಗರಗಳ ಸೌಕರ್ಯಗಳು ಹಳ್ಳಿಗಳನ್ನು ತಲುಪಿಲ್ಲ. ಉತ್ತಮವಾದ ವೈದ್ಯಕೀಯ, ಶೈಕ್ಷಣಿಕ ಸೌಲಭ್ಯಗಳಿಲ್ಲ–ಆಸ್ಪತ್ರೆಯಿಲ್ಲ; ಆಸ್ಪತ್ರೆ ಇದ್ದರೆ ವೈದ್ಯರಿಲ್ಲ; ವೈದ್ಯರಿದ್ದರೆ ಔಷಧವೇ ಇಲ್ಲ. ಶಿಕ್ಷಣದ ಗತಿಯೂ ಇದೇ ಆಗಿದೆ. ಬಹಳ ಗ್ರಾಮಗಳಲ್ಲಿ ಕುಡಿಯುವುದಕ್ಕೆ ನೀರೂ ದೊರಕುವುದಿಲ್ಲ. ಮಳೆ ಬಿದ್ದರೆ ಹೊಟ್ಟೆಗುಂಟು; ಇಲ್ಲವಾದರೆ ಭಿಕ್ಷಾಟನೆಯೇ; ಸರ್ಕಾರವು ನೀಡುವ ಪರಿಹಾರವು ಎಲ್ಲರಿಗೂ ದೊರೆಯುವುದಿಲ್ಲ. ಕಲಿತವರು ಹಳ್ಳಿಗಳನ್ನು ತೊರೆಯುತ್ತಾರೆ. ಧನಿಕರು ನಗರವಾಸವನ್ನು ಇಚ್ಛಿಸುತ್ತಾರೆ. ಹೀಗೆ ಹಳ್ಳಿಗಳು ಸಮಸ್ಯೆಗಳ ಆಗರಗಳಾಗಿವೆ. ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಈ ಹಳ್ಳಿಗಳು ಉದ್ಧಾರವಾಗುವುದು ಹೇಗೆ; ಹಳ್ಳಿಗರ ಕೂಗನ್ನು ಕೇಳುವವರು ಯಾರು? ಹಳ್ಳಿಗಳಲ್ಲಿ ನೆಲೆಸಿ ಅಲ್ಲಿನ ಜನರ ಸಂಕಟ ಪರಿಹಾರಕ್ಕೆ ಮುಂದಾಗುವವರು ಅತಿ ವಿರಳ. ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳು ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಸೇವಾಸಂಸ್ಥೆಗಳನ್ನು ಸ್ಥಾಪಿಸಿ ಗ್ರಾಮೀಣ ಜನರಿಗೆ ಮರಳುಗಾಡಿನ ನೀರ್ದಾಣವಾಗಿದ್ದಾರೆ. ಇದು ಅತ್ಯಂತ ಅಗತ್ಯವೂ ಪ್ರಶಂಸನೀಯವೂ ಆದ ಕಾಯಕ. ಇದೊಂದು ಸ್ವಾಮಿಗಳವರ ವ್ರತವಾಗಿದೆ.

ಹಿಂದೆ ಅನೇಕರು ಮಣಿ, ಮಂತ್ರ, ಮೂಲಿಕೆಗಳ ವಿಷಯವನ್ನು ರಹಸ್ಯವೆಂದು ಭಾವಿಸಿ ಇತರರಿಗೆ ತಿಳಿಸಲಿಲ್ಲ. ಅದರಿಂದ ಮುಂದಿನ ಪೀಳಿಗೆಗೆ ಬಹಳ ನಷ್ಟವಾಯಿತು. ತನ್ನ ಅನುಭವಗಳನ್ನು ಲೋಕಕ್ಕೆ ಧಾರೆ ಎರೆಯಬೇಕಾದುದು ಧರ್ಮ. ಶ್ರೀ ಸ್ವಾಮಿಗಳವರು ತಮ್ಮ ಅಪಾರ ಅನುಭವ ಸಂಪತ್ತನ್ನು ಪ್ರಾಣಾಯಾಮ, ಯೋಗಾಸನಗಳು, ಷಟ್ಕರ್ಮವಿಧಿ, ಅಂಗಮರ್ದನ, ಸ್ವಯಂವೈದ್ಯ ಮುಂತಾದ ಅಮೂಲ್ಯ ಕೃತಿಗಳ ರಚನೆಯ ಮೂಲಕ ಜನತಾಜನಾರ್ದನನಿಗೆ ಒಪ್ಪಿಸಿದ್ದಾರೆ. ಜನರು ಇವುಗಳನ್ನು ಓದಿ ಲಾಭ ಪಡೆಯುವ ಮೂಲಕ ಋಷಿ ಋಣದಿಂದ ಮುಕ್ತರಾಗಬೇಕಾಗಿದೆ.

ಜನರು ಸರ್ವೋದಯ, ವಿಶ್ವಧರ್ಮ, ಸಮತೆ, ಸಾಮರಸ್ಯಗಳ ಬಗ್ಗೆ ಬಹಳ ಮಾತನಾಡುತ್ತಾರೆ. ತಾವು ಬಹಳ ಸೇವೆ ಮಾಡಿದ್ದೇವೆಂದು ಘೋಷಿಸಿಕೊಳ್ಳುತ್ತಾರೆ. ಆದರೆ ನಡೆ ನುಡಿಗಳ ನಡುವೆ ದೊಡ್ಡ ಕಂದರವಿದ್ದು ಎರಡಕ್ಕೂ ಸಂಬಂಧವೇ ಇರುವುದಿಲ್ಲ. ಶ್ರೀ ಸ್ವಾಮಿಗಳವರ ಜೀವನದಲ್ಲಿ ಈ ತತ್ವ ಶುಷ್ಕ ಮಾತಾಗಿ ಉಳಿಯದೆ ಕೃತಿರೂಪ ತಳೆದಿದೆ. ಬೋಧಿಸುವವರು ಬಹಳ ಜನರಿದ್ದಾರೆ; ಆಚರಣೆಗೆ ತಂದುಕೊಂಡವರು ಬಹಳ ವಿರಳ. ಶ್ರೀ ಸ್ವಾಮಿಗಳವರ ಆಶ್ರಮದಲ್ಲಿ ಜಾತಿ, ಮತ, ಪಂಥಗಳ ಸುಳಿವಿಲ್ಲ; ಯಾವ ಭೇದಭಾವಕ್ಕೂ ಎಡೆಯಿಲ್ಲ; ಮಾನವೀಯತೆ ಎದ್ದು ಕಾಣುತ್ತದೆ. 'ಸರ್ವೋ ಭದ್ರಾಣಿ ಪಶ್ಯತು–' ಇದು ಇವರ ಪ್ರಧಾನ ಧ್ಯೇಯ.

ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳು ಮತ್ತು ನಮ್ಮಲ್ಲಿ ಗಾಢವಾದ ಆತ್ಮೀಯತೆ ಇದೆ. ಇವರ ಆದರ್ಶವನ್ನು ನಾವು ಮನಸಾರೆ ಮೆಚ್ಚಿಕೊಂಡಿದ್ದೇವೆ. ಇಂದಿನ ಕಲುಷಿತ ವಾತಾವರಣದ ಸುಧಾರಣೆಗೆ, ದುಃಖದುಮ್ಮಾನಗಳ ಪರಿಹಾರಕ್ಕೆ ಇಂತಹವರ

ಮಾರ್ಗದರ್ಶನದ ಅಗತ್ಯವಿದೆ. ನಾಡಿಗೆ ಚಿರಕಾಲ ಇವರ ಮಾರ್ಗದರ್ಶನ ದೊರೆಯುವಂತೆ ಪರಮಾತ್ಮನು ಕರುಣಿಸಲೆಂದು ಆಶಿಸುತ್ತೇವೆ. ಶ್ರೀ ಸ್ವಾಮಿಗಳವರ ಶತಮಾನೋತ್ಸವ ಸಮಾರಂಭವು ಯಶಸ್ವಿಯಾಗಿ ಜರುಗಲೆಂದೂ, ಸಂಸ್ಮರಣ ಗ್ರಂಥದಲ್ಲಿ ಅವರ ಧ್ಯೇಯಧೋರಣೆಗಳು ಉತ್ತಮವಾಗಿ ಪ್ರತಿಬಿಂಬಿಸಲೆಂದೂ ತುಂಬು ಹೃದಯದಿಂದ ಹಾರೈಸುತ್ತೇವೆ.

ಇತಿ ಶಿವಂ

ಶ್ರೀ ಬಾಲಗಂಗಾಧರನಾಥಸ್ವಾಮಿಗಳು

ಶ್ರೀ ಶ್ರೀಮದ್ ಜಗದ್ಗುರು ಶಂಕರಾಚಾರ್ಯ

ಶ್ರೀ ಶ್ರೀರಾಘವೇಂದ್ರ ಭಾರತೀ ಮಹಾಸ್ವಾಮಿಗಳು

ಶ್ರೀ ಸಂಸ್ಥಾನ, ಗೋಕರ್ಣ, ಶ್ರೀರಾಮಚಂದ್ರಪೂರ ಮಠ

ತೀರ್ಥಹಳ್ಳಿ-೫೭೭೪೩೨ ಶಿವಮೊಗ್ಗ ಜಿಲ್ಲೆ (ಕರ್ನಾಟಕ ರಾಜ್ಯ)

ಹಾರೈಕೆ

ಅನಾಥರಿಗೂ, ಬಡವರಿಗೂ, ರೋಗಿಗಳಿಗೂ, ವಿದ್ಯಾರ್ಥಿಗಳಿಗೂ, ಯೋಗ ಸಾಧಕರಿಗೂ ಹಾಗೂ ಕಲಾಭಿಮಾನಿಗಳಿಗೂ, ಜಿಜ್ಞಾಸುಗಳಿಗೂ, ವೈರಾಗ್ಯಪರರು, ಜ್ಞಾನಾಪೇಕ್ಷೆಗಳಿಗೂ ಸಹ ಅವರವರ ಹಿತಕ್ಕನುಗುಣವಾದ ಮಾರ್ಗದರ್ಶನ ಮಾಡಿ ಅಶನವಸನಗಳ ಪೂರೈಕೆಯೊಂದಿಗೆ ಆಶ್ರಯ ನೀಡುವ ಧ್ಯೇಯೋದ್ದೇಶಗಳನ್ನಿರಿಸಿ ಕೊಂಡು, ಯತ್ನಿಸಿ ಕಾರ್ಯರೂಪದಲ್ಲಿಳಿಸಿ ಪ್ರಗತಿ ಸಾಧಿಸುತ್ತಿರುವ, ಈಗ ಶತಾಯುಷಿಗಳಾಗಿ ನಮ್ಮೊಂದಿಗೆ ಇರುವ ಸದಾ ಕಾರ್ಯನಿರತ "ಶ್ರೀ ರಾಘವೇಂದ್ರ ಸ್ವಾಮೀಜಿ" ಹಲವು ಹೆಸರುಗಳಿಂದ ಜನಪ್ರಿಯರು, ಪ್ರಸಿದ್ಧರು ಮತ್ತು ಶ್ರೀ ಸಂಸ್ಥಾನದವರನ್ನು ಸಹ ತಮ್ಮಲ್ಲಿಗೆ ಆಹ್ವಾನಿಸಿ, ಆದರಿಸಿ ಎಲ್ಲಾ ವಿಷಯಗಳನ್ನು ನಿವೇದಿಸಿ ಆಶೀರ್ವಾದ ಪಡೆದವರಾಗಿರುವರಷ್ಟೆ !

ಕನ್ನಡ ನಾಡಿನಲ್ಲಿ ಸ್ಥಾಪಿತವಾಗಿ, ಜನರ ನೆರವನ್ನು ಪಡೆದು ರಾಷ್ಟ್ರದ, ಪರ ರಾಷ್ಟ್ರದ ಜನರನ್ನೂ ಆಕರ್ಷಿಸುತ್ತ ಪ್ರಯೋಜನ ನೀಡುತ್ತಿರುವ ಸಂಸ್ಥೆಯನ್ನು ನಡೆಸುವ ಸ್ವಾಮೀಜಿ, ಈ ಕಾಲದ ಬಡವರ ಬಂಧು, ಅನಾಥರ ಆಶ್ರಯದಾತ; ನಿರಾಶೆಯ ಕತ್ತಲಿನ ಆಗಸದಲ್ಲಿ, ಮಿನುಗುವ ಧ್ರುವ ನಕ್ಷತ್ರ ! ಇತ್ಯಾದಿ ವಿಶೇಷಣಕ್ಕೆ ತಕ್ಕವರೆಂಬುದು ನಿರ್ವಿವಾದ. ಇವರ ನೆನಪಿಗೆ, ಜನರ ಬಾಳಿನ ಸ್ಫೂರ್ತಿಗೆ, ದಾರಿಯ ನೆರವಿಗೆ "ಬೆಳಕು" ನೀಡುವ ಸಂಸ್ಮರಣ ಸಂಚಿಕೆ ಮುದ್ರಿಸಿ ಹೊರತರಲಿರುವ ನಿಮ್ಮ ಯೋಜನೆ, ಯೋಚನೆ ಕಾರ್ಯರೂಪಕ್ಕೆ ಬರಲಿ. ತನ್ಮೂಲಕ ಎಲ್ಲರೂ ಕರ್ತವ್ಯ ಮರಿತು ನಡೆದು ಸುಖ–ಶಾಂತಿ-ಸಮೃದ್ಧಿ ಪಡೆಯುವಂತಾಗಲಿ ಎಂದು ಆಶಿಸಿದೆ. ಈ ಲಗ್ತು ಶ್ರೀ ಪ್ರಸಾದ ಮಂತ್ರಾಕ್ಷತೆ ಸಹ ಕಳಿಸಿದೆ. ಸ್ವೀಕರಿಸಿ ಭೂಯಃಶ್ರೇಯೋಭಾಜನರಾಗುವುದೆಂದು ಶ್ರೀ ಮಹಾ ಸಂಸ್ಥಾನದವರಿಂದ ಅಪ್ಪಣೆಯಾದ ಸಂಗತಿ ಶ್ರುತ ಪಡಿಸಿದೆ.

ಶ್ರೀ ಸಂ| ಅಪ್ಪಣೆ ಪ್ರಕಾರ ಶ್ರೀಗುರು ಚರಣಾಶ್ರಿತ
ಶ್ರೀಗುರು ಸೇವಾಧುರಂಧರ
ಸುಬ್ರಹ್ಮಣ್ಯ ಶಿವರಾಮ ಶಾಸ್ತ್ರೀ ಉಂಚ್‌ಗೇರಿ

ಜಗದ್ಗುರು ಶ್ರೀ ಕರ್ಮಯೋಗಿ

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

ಶ್ರವಣಬೆಳಗೊಳ ಮಠ

ಹಾರೈಕೆ

ಸರಳತೆಯ ಸಾಕಾರಮೂರ್ತಿಯಾಗಿ, ಬಡವರ ಬಂಧುಗಳಾಗಿ ಮಹಾ ಪರೋಪಕಾರಿಯಾಗಿರುವ ಅನಾಥ ಸೇವಾಶ್ರಮದ ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರ ಶತಮಾನೋತ್ಸವದ ಸಂದರ್ಭದಲ್ಲಿ ವಿಶೇಷ ಸ್ಮರಣ ಸಂಚಿಕೆಯನ್ನು ಹೊರತರಲು ನಿರ್ಧರಿಸಿರುವುದು ಸಮಯೋಚಿತವೂ, ಸಮಂಜಸವೂ ಆಗಿದೆ. ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳು ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಸಮಾಜ ಸೇವೆಗಾಗಿ ಸ್ಥಾಪಿಸಿದ ಅನಾಥ ಸೇವಾಶ್ರಮ ಇಂದು ಸಮಾಜದ ಸೇವೆಗಾಗಿ ಬಹಳಷ್ಟು ಶ್ರಮಿಸುತ್ತಿದೆ. ಶಿಕ್ಷಣ, ವೈದ್ಯಕೀಯ, ವಾಣಿಜ್ಯ, ಸಂಕೀರ್ಣಗಳು ಮತ್ತು ಸಂಸ್ಥೆಗಳು ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿಯೂ ಶ್ರೀಗಳವರು ಸಮಾಜದ ದುರ್ಬಲ ವರ್ಗದವರ ಸೇವೆಗಾಗಿ ಸಾಕಷ್ಟು ಶ್ರಮಿಸಿದ್ದಾರೆ, ಶ್ರಮಿಸುತ್ತಿದ್ದಾರೆ ಎಂಬ ವಿಚಾರ ಪ್ರತಿಯೊಬ್ಬರೂ ಮೆಚ್ಚುವಂತಹದ್ದು.

ಅಂದು ಅನಾಥ ಸೇವಾಶ್ರಮ ಆರಂಭವಾಗುವ ಮೊದಲಿಗೆ ಶ್ರೀಗಳವರ ಕನಸಿನ ಕೂಸಾಗಿದ್ದದ್ದು, ಈಗ ಬೆಳೆಯುತ್ತಾ ಬಂದು ಸಮಾಜದಲ್ಲಿರುವ ಕಡು ಬಡವರಿಗೆ ಉಚಿತವಾಗಿ ವೈದ್ಯಕೀಯ, ಸೇವೆ, ಶಿಕ್ಷಣ ಹಾಗೂ ಊಟ, ವಸತಿ ಬಗ್ಗೆ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿರುವುದನ್ನು ನಾವು ಕಾಣಬಹುದು. ಈ ಅನಾಥ ಸೇವಾಶ್ರಮದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳೂ, ವೈದ್ಯಕೀಯ ಸೇವಾ ಕೇಂದ್ರಗಳೂ, ಅತಿಥಿಗೃಹಗಳೂ, ಇತ್ಯಾದಿ ಹಲವಾರು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಸಮಾಜದಲ್ಲಿ ಗಣನೀಯವಾದ ಸೇವೆಯನ್ನು ಸಲ್ಲಿಸುತ್ತಿವೆ.

ಎಂತಹ ಕಷ್ಟ ಪರಿಸ್ಥಿತಿ ಬಂದರೂ ಕೂಡ ಅವೆಲ್ಲವನ್ನೂ ಸಹಿಸಿಕೊಂಡು, ಎದೆಗಾರಿಕೆಯಿಂದ ತಮ್ಮ ಕ್ಷೇತ್ರವನ್ನು ಬೆಳೆಸಿಕೊಂಡು ಬಂದಿರುವ ಮತ್ತು ಬರುತ್ತಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಉದ್ದೇಶ ಸಫಲವಾಗಲೆಂದೂ ಅವರಿಗೆ ಆಯುರಾರೋಗ್ಯವನ್ನು ಭಗವಂತನು ಕರುಣಿಸಲೆಂದೂ ಶುಭಹಾರೈಕೆ. ಅವರು ಇನ್ನೂರು ವರ್ಷ ಆರೋಗ್ಯವಂತರಾಗಿ ಬಾಳಿ ಬದುಕಿ ಕೀರ್ತಿವಂತರಾಗಲೆಂದು ಶುಭ ಹಾರೈಸುತ್ತೇವೆ.

ಸ್ವಸ್ತಿ ಶ್ರೀ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

ಶ್ರೀಮನ್ನಿರಂಜನ ಜಗದ್ಗುರು
ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು
ಶ್ರೀ ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ

ಹಾರೈಕೆ

ಖ್ಯಾತನಾಮರಾದ ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಗಳವರ 'ಶತಮಾನೋತ್ಸವ' ಇದೀಗ ಜರುಗಲಿರುವುದು ಸ್ವಾಗತಾರ್ಹವಾಗಿದ್ದರೂ ಶ್ರೀ ಸ್ವಾಮೀಜಿಯವರು ಈಗಾಗಲೇ ಶತಾಯುಷಿಗಳಾಗಿದ್ದಾರೆ ಎಂದು ನಂಬುವುದೇ ಕಷ್ಟವಾಗಿದೆ. ಅಷ್ಟೊಂದು ಅವರು ತಮ್ಮ ಶರೀರದ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬಂದಿದ್ದಾರೆ.

'ಸ್ವಾಮಿ' ಎಂಬ ಪದ ಅವರಲ್ಲಿ ಅರ್ಥಪೂರ್ಣವಾಗಿ ಅನ್ವಯಿಸಿದೆ. ಸ್ವಾಮಿ ಎಂದರೆ ಒಡೆಯ. ಯಾವುದಕ್ಕೆ ಒಡೆಯ? ಯಾರು ತಮ್ಮ ದೇಹ-ಇಂದ್ರಿಯ ಮತ್ತು ಮನಸ್ಸು ಇವುಗಳ ಮೇಲೆ ತಮ್ಮ ಒಡೆತನ ಸ್ಥಾಪಿಸಿರುವರೋ ಅವರು ಮಾತ್ರ 'ಸ್ವಾಮಿ' ಪದಕ್ಕೆ ಅರ್ಹರು.

ಶ್ರೀ ರಾಘವೇಂದ್ರ ಸ್ವಾಮಿಗಳವರ ಕರ್ತೃತ್ವಶಕ್ತಿಯ ಫಲವಾಗಿ ಅಜ್ಞಾನವಾಗಿದ್ದ ಮಲ್ಲಾಡಿಹಳ್ಳಿ ಇಂದು ಸಮಗ್ರ ನಾಡಿನ ಲಕ್ಷ್ಯವನ್ನೇ ತನ್ನತ್ತ ಸೆಳೆದಿದೆ. ಐದು ದಶಕಗಳ ಹಿಂದೆ 'ಚಡ್ಡಿ ಬಾಬು' ಎಂಬ ಹೆಸರಿನಿಂದ ಬಂದ ಈ ವಾಮನ ಮೂರ್ತಿಗಳು ಇಂದು 'ರಾಘವೇಂದ್ರ ಸ್ವಾಮೀಜಿ' ಎಂಬ ಖ್ಯಾತ ನಾಮದಿಂದ ತ್ರಿವಿಕ್ರಮನಾಗಿ ಬೆಳೆದಿದ್ದಾರೆ. "ಕ್ರಿಯಾಸಿದ್ಧಿಃ ಸತ್ತ್ವೇಭವತಿ ಮಹತಾಂನೋಪಕರಣೆ" ಎಂಬ ಗೀರ್ವಾಣ ಸುಭಾಷಿತ ಶ್ರೀ ಸ್ವಾಮೀಜಿಯವರನ್ನೇ ಕುರಿತು ಹೇಳಿದಂತಾಗಿದೆ. ಮಾನವನ ಕ್ರಿಯಾಶೀಲತೆ ಹಾಗೂ ಸಂಕಲ್ಪ ಶಕ್ತಿಗೆ ಜೀವಂತ ಉದಾಹರಣೆಯಾಗಿದ್ದಾರೆ, ಶ್ರೀ ಸ್ವಾಮೀಜಿಯವರು.

ಕೇವಲ ಗ್ರಾಮವಾಗಿದ್ದ ಮಲ್ಲಾಡಿಹಳ್ಳಿ ಇಂದು ಶಾಲೆ-ಕಾಲೇಜು, ಆಸ್ಪತ್ರೆ ಅನಾಥಾಶ್ರಮ, ವಾಚನಾಲಯ, ವ್ಯಾಯಾಮಶಾಲೆ, ಮುದ್ರಣ ಮಂದಿರ, ಅನ್ನಪೂರ್ಣ ಮಂದಿರ, ವಿದ್ಯಾರ್ಥಿ ವಸತಿಗೃಹ, ಅಧ್ಯಾಪಕರ ವಸತಿಗೃಹ, ತಪೋವನ, ಧ್ಯಾನಮಂದಿರ, ಅತಿಥಿ ಮಂದಿರ, ಧನ್ವಂತರಿ ಆಯುರ್ವೇದ ಸಂಕೀರ್ಣ ಮುಂತಾದವುಗಳಿಂದಾಗಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಪರಿಣಮಿಸಿದೆ. ಇವುಗಳಿಗಾಗಿ ವಿನಿಯೋಗಿಸಿದ ಹಣ ಕೋಟ್ಯಂತರವಾಗಬಹುದು. ಆದರೂ ಶ್ರೀ ಸ್ವಾಮೀಜಿಯವರಲ್ಲಿ ಈ ಬಗ್ಗೆ ಹಮ್ಮು ಬಿಮ್ಮುಗಳಿಲ್ಲ. ಅವರು ತಾವೊಬ್ಬ 'ತಿರುಕ'ನೆಂದೇ ಹೇಳಿಕೊಂಡಿರುವರು. ಇದು ಅವರ ನಿಷ್ಕಾಮಕರ್ಮಯೋಗಕ್ಕೆ ಸಾಕ್ಷಿಯಾಗಿದೆ.

ಶ್ರೀ ರಾಘವೇಂದ್ರ ಸ್ವಾಮಿಗಳು 'ಯೋಗ' ಶಿಕ್ಷಣದ ಅಧ್ಯಾಪಕ ಮಾತ್ರವಾಗಿರದೆ ಯೌಗಿಕ ಜೀವನವನ್ನು ತಮ್ಮಲ್ಲಿ ಅಳವಡಿಸಿಕೊಂಡಿರುವ ಸ್ವಯಂಯೋಗಿಗಳೇ ಆಗಿರುವರು. ಖಾರ–ಉಪ್ಪು–ಹುಳಿಗಳಿಲ್ಲದ ಆಹಾರವನ್ನೇ ಸೇವಿಸುತ್ತಿದ್ದರೂ ದೃಢಕಾಯರಾಗಿರುವರು. ಅಂತರಂಗದ ಪರಮ ಶಾಂತಿಯೇ ಅವರ ಮುಖದಲ್ಲಿ ಬ್ರಹ್ಮತೇಜಸ್ಸಾಗಿ ಹೊಳೆಯುತ್ತಿದೆ. ಹೀಗೆ ಯೌಗಿಕ ಜೀವನವನ್ನು ವ್ಯಕ್ತಿಗತವಾಗಿ ಅಳವಡಿಸಿಕೊಂಡಿದ್ದರೂ ಬಾಹ್ಯ ಪ್ರಪಂಚದ ಕ್ಷೇಮಚಿಂತನೆಯನ್ನು ಅವರು ಕೈಬಿಟ್ಟಿಲ್ಲ. ಅವರ ದೃಷ್ಟಿಯಲ್ಲಿ ಕಾಣುವ ಪ್ರಪಂಚ ಪರಮಾತ್ಮನ ವಿರಾಡ್ರೂಪ. ಅಲ್ಲಿ ಸಲ್ಲಿಸುವ ಲೋಕಸೇವೆಯೇ ಭಗವಂತನಿಗರ್ಪಿಸುವ ಮಹಾಪೂಜೆ. ಶ್ರೀ ರಾಘವೇಂದ್ರ ಸ್ವಾಮಿಗಳು ಕೇವಲ ಯೋಗದ ಬಗ್ಗೆ ಅಷ್ಟೇ ಆಸಕ್ತಿ ಹೊಂದಿಲ್ಲ. ಯೋಗಕ್ಕೆ ದೇಹ ಸ್ವಾಸ್ಥ್ಯ ಮುಖ್ಯ. ಆದಕ್ಕಾಗಿ ಅವರು ತಮ್ಮ ಕ್ಷೇತ್ರದಲ್ಲಿ ಆಯುರ್ವೇದಕ್ಕೆ ಬಹಳ ಪ್ರಾಶಸ್ತ್ಯ ಕೊಟ್ಟು ಅದನ್ನು ಪುನರುಜ್ಜೀವನಗೊಳಿಸಿರುವರು. ಮಲ್ಲಾಡಿಹಳ್ಳಿಯ 'ಅನಾಥಾಶ್ರಮ' ನತದೃಷ್ಟರಾದ ಅನಾಥರಿಗೆ ವಾತ್ಸಲ್ಯ ತೋರುವ ತಾಯಿಯಂತೆ ಆಶ್ರಯ ಸ್ಥಾನವಾಗಿದೆ. ಶ್ರೀ ಸ್ವಾಮೀಜಿಯವರಲ್ಲಿ ಉಕ್ಕಿಬರುವ ಕರುಣಾರಸದ ಅಭಿವ್ಯಕ್ತಿಯೇ ಈ ಅನಾಥಾಶ್ರಮ.

ಪ್ರಪಂಚಕ್ಕೆ ಉಪಯುಕ್ತವಾದ ಒಂದೊಂದು ಕ್ಷೇತ್ರದಲ್ಲಿ ಒಬ್ಬೊಬ್ಬ ಮಹನೀಯರು ತಮ್ಮ ಪಾಲಿನ ಸೇವೆ ಸಲ್ಲಿಸಿ ಕೃತಾರ್ಥರಾಗಿದ್ದಾರೆ. ಆದರೆ ಶ್ರೀ ಸ್ವಾಮೀಜಿಯವರು ಲೋಕಕಲ್ಯಾಣಕ್ಕಾಗಿ ಗೈದ ಸೇವೆ ಒಂದಲ್ಲ ಅನಂತ ಮುಖವಾಗಿದೆ. ಹೀಗೆ ಒಂದೇ ವ್ಯಕ್ತಿಯಿಂದ ಬಹುಮುಖ ಸೇವೆ ಯಶಸ್ವಿಯಾಗಲು ಅವರಲ್ಲಿಯ ಕಲ್ಯಾಣಿಕಬುದ್ಧಿ ಹಾಗೂ ನಿಃಸ್ವಾರ್ಥ ಸೇವೆಗಳೇ ಕಾರಣವಾಗಿವೆ. ಶ್ರೀ ಸ್ವಾಮಿ ವಿವೇಕಾನಂದರನ್ನು ಒಬ್ಬರು ದೇವರ ಬಗ್ಗೆ ಕೇಳಿದರು. ಅದಕ್ಕೆ ಶ್ರೀ ಸ್ವಾಮೀಜಿಯವರು ನಿಃಸ್ವಾರ್ಥತೆಯೇ ದೇವರು ಎಂದು ಹೇಳಿದರು.

ಇನ್ನು ಕೊನೆಯದಾಗಿ ಒಂದು ಮಾತು. ನಮ್ಮ ಶ್ರೀಮಠದಿಂದ ಮಲ್ಲಾಡಿಹಳ್ಳಿಗೆ 'ಯೋಗ' ಶಿಕ್ಷಣಕ್ಕಾಗಿ ಕೆಲವು ವಿದ್ಯಾರ್ಥಿಗಳನ್ನು ಈ ಹಿಂದೆ ಕಳಿಸಲಾಗಿತ್ತು. ಶಿಕ್ಷಣ ಪಡೆದು ಬಂದ ವಿದ್ಯಾರ್ಥಿಗಳಿಂದ ಆಗಾಗ ಅಲ್ಲಲ್ಲಿ ಯೋಗಾಸನ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಅನೇಕರು ಇದರ ಲಾಭವನ್ನು ಈಗಲೂ ಪಡೆದುಕೊಳ್ಳುತ್ತಿರುವರು. ಈ ಕಾರಣದಿಂದ ನಾವು ಶ್ರೀ ರಾಘವೇಂದ್ರ ಸ್ವಾಮೀಜಿಯವರಲ್ಲಿ ಕೃತಜ್ಞತಾಭಾವವುಳ್ಳವರಾಗಿದ್ದೇವೆ.

ಹೀಗೆ ಆದರ್ಶಪ್ರಾಯರಾದ ಶ್ರೀ ರಾಘವೇಂದ್ರ ಸ್ವಾಮೀಜಿಯವರು ತಮ್ಮ ಸಂಕಲ್ಪಶಕ್ತಿಯಿಂದ ಇನ್ನೂ ಹೆಚ್ಚುಕಾಲ ಬಾಳಿ ಪ್ರಪಂಚಕ್ಕೆ ಮಾರ್ಗದರ್ಶಕರಾಗಲಿ ಎಂದು ಈ ಮೂಲಕ ಹಾರೈಸುತ್ತೇವೆ.

ಶ್ರೀ ಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ
ಮಹಾಸ್ವಾಮಿಗಳವರು

'ತ್ರಿರುಕ'ನಿಗೆ....!

ಗಣೇಶ್ ಕುತ್ಯಾಡಿ

'ತಿರುಕ' ನೆಂದೇ ನೀನು ನಿನ್ನ ಕರೆಯುತಲಿರುವೆ
ನಿನಗಿಂತ ಧನಿಕರೆಲ್ಲಿ ?
ಮಾನವರ ಸೇವೆಯಲಿ ಮಾಧವನ ಕಂಡವನೆ
ಮಧುವಿಗಿಂತಲು ಮಧುರವೆಲ್ಲಿ ?

ಅಕ್ಕರೆಯು ಸಕ್ಕರೆಯು ಹೊನಲಾಗಿ ಹರಿಯುತಿರೆ
ಹರಸುತಿರೆ ಶ್ರೀ ಭಾರತಿ
ವಾಗ್ದೇವಿಸೇವೆಯಲಿ ಚರಕಧನ್ವಂತರಿಯು
ಧರೆಗಿಳಿಸಿದಂಥ ಸುಮತಿ

ಜಾತಿಮತಗಳ ತೊರೆದ ದೀನ ಜನ ಮಂದಾರ
ಕಲ್ಪತರು ಕಾಮಧೇನು
ಹೊಗಳಿಕೆಯು ತೆಗಳಿಕೆಯು ಸಮನಾಗಿ ಕಂಡಿರುವ
ಶ್ರೀರಾಘವೇಂದ್ರ ನೀನು

ಭಾರತದ ಧರ್ಮ-ಸಂಸ್ಕೃತಿಗಳ ಸಮ್ಮಿಲನ
ಅಧ್ಯಾತ್ಮಶಕ್ತಿ ನೀನು
ಸಹನೆ ಸಮತೆಯು ಶಾಂತಿಮಂತ್ರವನು ಬೋಧಿಸುವ
ಶಂಕರನು ಶಿವನು ನೀನು

ಮಲ್ಲಾಡಿಹಳ್ಳಿಯಲಿ ಮಲ್ಲಿಗೆಯು ಹೂವರಳಿ
ಘಮಘಮಿಸೆ ದುಂಬಿವಿಂಡು
ಮಕರಂದ ಹೀರುವಾನಂದದಲಿ ಮೈಮರೆತು
ಸಾಗುತಿದೆ ಹಿಂಡು ಹಿಂಡು

'ಅಶ್ವತ್ಥ'

ನಾನಿಲ್ಲದವನಾಗುವನು
ಎಲ್ಲೆಲ್ಲವೂ.
ಬೇಕಿಲ್ಲದವ ಪಡೆಯುವವನು
ಸರ್ವಸ್ವವೂ.
ಸೊನ್ನೆಯಾದವನೇ
ಸರ್ವಾಂತರ್ಯಾಮಿ.

ಅವ ಕಾಣ ದಣಿ ದಣಿವು
ನೋವು ನಲಿವೇನನೂ.
ಅವಗಿಲ್ಲ ಗೆಲುಸೋಲು
ಕಷ್ಟ ನಷ್ಟಗಳೆಷ್ಟೂ.
ಅವಗಿಲ್ಲ ಶತ್ರುಪಡೆ
ಮಿತ್ರ ಬಂಧುವು ಕೂಡ.

ರಾಜ್ಯವ್ಯಾಜ್ಯಗಳಿಲ್ಲ
ಅವನೊಂಟಿ ಸಾಮ್ರಾಟ.
ಹಮ್ಮಿಲ್ಲ ಬಿಮ್ಮಿಲ್ಲ
ದೈನ್ಯ ಹೀನಾಯವೂ.
ಅವನಿಗೆ ಸಮ ಕೀಳ್ ಮೇಲು
ಅಲ್ಪ ಬ್ರಹ್ಮಾಂಡವೂ.

ಬಡವ ಬಲ್ಲಿದರಿಲ್ಲ
ಸಿರಿ ಬರಿಗಳಾವುವೂ.
ಮುಟ್ಟಲವ ಬರಿಮಣ್ಣು
ಆಗುವುದು ಹೊಳೆ ಚಿನ್ನ.
ಬಿತ್ತಿದರೆ ಬೆಳೆಯುವುದು
ಕಲ್ಪತರು ರಾಶಿಯೇ.

ಮಾಡಿದರಾಗುವುದು
ಸುರಲೋಕ ನಂದನವೆ.
ಆಡಿದರದಾಗುವುದು
ಹಾರ್ದಿಕೆ ಅಭಯ ವರ.
ಆವ ನಿತ್ಯ ತಪನಿರತ
ನಿರ್ಲಿಪ್ತ ಸೃಷ್ಟಿಕರ್ತ.

'ತಿರುಕ'ನ ಸಂದೇಶವಿದೆಕೊ

ಕಲಾಶೇಖರ್

ಸ್ವಾಗತ ಇದೊ ಸ್ವಾಗತಾ
ಸಮಾಜಕಾರ್ಯದ ಗೀತಾ
ಕಾರ್ಯ–ಕಾಯಕ–ದೇವಪೂಜೆಯು
ಕಾಯಕಕೆ ನಾವ್ ಸಾಗುತಾ ||ಸ್ವಾಗತಾ||

ಹಗೆತನದ ಹೊಗೆ ಹೊರಗೆ ಹಾಕುತ
ದಗೆಯು ಬಗೆಯನು ದೂರ ನೂಕುತ
ಸೊಗದ ಸೀಮೆಯು ಸೃಜಿಸಿ ನಾವು
ನಿಜದ ಸುಖವನು ಸವಿಯುತಾ ||ಸ್ವಾಗತಾ||

ದೀನ ದಲಿತರು ದೇವರೆನ್ನುವ
ಬಡವರಿರುವರು ಬಹುಜನ
ಭೂತ ಓಡಿಸಬನ್ನಿರಿ
ಬಳಲುವಗೆ ನೆರವಾಗುತಾ ||ಸ್ವಾಗತಾ||

ನಿರಕ್ಷರತೆಯು ರಕ್ಕಸ
ಅಂಧಕಾರವು ಅತಿ ವಿಷ
ಕೀಡಿ ಅಕ್ಕರ ಅಳಿದು ಅಜ್ಞಾತೆ
ಬದುಕಿನಲಿ ಬೆಳಕಾಗುತಾ ||ಸ್ವಾಗತಾ||

'ನಾನು' ಅಳಿದು 'ನೀನು' ಕಳೆದು
'ನಾವು' ಆಗುವ ಬನ್ನಿರಿ
ಕಿತ್ತು ಬಿಸುಟುತ ಭಿನ್ನಭೇದವ
ಮಾನವತೆಯನು ಮೆರೆಯುತಾ ||ಸ್ವಾಗತಾ||

'ತಿರುಕ'ನ ಸಂದೇಶವಿದೆಕೊ
ಅರಿತು ನಡೆದರೆ ಚೆಲುವು ಬದುಕು
ಕಲಾಶೇಖರ ಪದ ಬರೆದುಕೊ
'ಸ್ವಾಮಿ' ಕರುಣೆಯ ನೀ ಪಡೆದುಕೊ ||ಸ್ವಾಗತಾ||

ತೆರೆದ ಕಾವ್ಯ

ಬೆಳಗೆರೆ ಕೃಷ್ಣಶಾಸ್ತ್ರಿ

ಜಗದ ಕಾವ್ಯವಿದು ತೆರೆದಿದೆ
ಸೊಗದ ಕಾವ್ಯವಿದು ತೆರೆದಿದೆ
ಆದಿಕಾಲದಿಂದಾದಿ ಮೂಲದಿಂ
ದಾದಿ ಅಂತ್ಯವಿದು ತೆರೆದಿದೆ
ಆದಿ ಬೋಧವಿದು ತೆರೆದಿದೆ
ಅನಾದಿ ಶೋಧವಿದು ತೆರೆದಿದೆ.
ಓದಲೆಲ್ಲರಿಗು ತೆರೆದಿದೆ
ಓದಬಲ್ಲರಿಗೆ ತೆರೆದಿದೆ
ಸಂಧಿ ಸಂಧಿಗಳ ಸಂದಿದೆ
ಪರ್ವ ಪರ್ವಗಳ ಪೊಂದಿದೆ
ಖಂಡ ಖಂಡಗಳ ಕಾಂಡ ಕಾಂಡಗಳ,
ಖಂಡ ಕಾವ್ಯವಿದು ತೆರೆದಿದೆ,
ಬ್ರಹ್ಮಾಂಡದಗಲಕೂ ತೆರೆದಿದೆ.
ದಿವ್ಯ ದಿವ್ಯ ಚಿರನವ್ಯ ನವ್ಯವಿಹ
ಭವ್ಯ ಕಾವ್ಯವಿದು ತೆರೆದಿದೆ
ಅವ್ಯಯಾಂಕವಿದು ತೆರೆದಿದೆ.
ಸ್ವರ್ಗದಾಚೆಯ ನಿಸರ್ಗ ಬೋಧಕದ
ಸರ್ಗ ವರ್ಗವಿದು ತೆರೆದಿದೆ
ಪವರ್ಗ ದುರ್ಗವಿದು ತೆರೆದಿದೆ.

ಹುಲ್ಲ ತಿಂದು ಹಾಲೆರಿಯಿರೆಂಬ ಗಾಯಿ
ಹಳಸ ತಿಂದು ಆಳಾಗಿರೆಂಬನಾಯಿ
ಇರಲಿ ಭಾರವೆನಿತಿರಲು ಹೊರುವೆನಾ
ನೆಂಬ ಭೂಮಿತಾಯಿ
ಉಣಿಸನಿಕ್ಕಿ ಜಗವೆಲ್ಲ ಪೊರೆವ
ಹೊಣೆಹೊತ್ತ ಕರುಣಾಮಯಿ
ಸರಳ ಸುಗುಣದಾಯಿ.

ಕಾಲ ಕಳೆಯದಿರಿ ಕರ್ಮ ತೊಳೆಯದಿರಿ
ಏಳಿರೆಂಬ ಕೋಳಿ
ಆಲಸದೆಲ್ಲರುಸಿರಾಗಿ ಸುತ್ತಿ
ಸುಳಿಸುಳಿದು ಸುಯ್ವುಗಾಳಿ
ಎತ್ತಲಿಂದಲೋ ಹೊತ್ತು ತಂದು ಮಳೆ
ಇತ್ತ ಮೇಘಾವಳಿ
ಹಾನಿ ವೃದ್ಧಿ ತನಗಿದ್ದು ಬಾಳ ಚಿರ
ಶಾಂತಿಯೊಂದೆ ತಾಳಿ
ತಿಳಿಯ ಹೊಳೆಯನಿಳೆಗಿಳಿಪ ಚಂದ್ರ ಬಾನ್
ದಳದೊಳಲ್ಲೆ ಬಾಳಿ
ಸುರಿಸಿ ಸುಧೆಯ ಕೇಳಿ.

ಜೀವ ಸುಮದ ಸಾರವನು ಹೀರಿ
ಹಾರಾಡಿರೆಂಬ ಜೇನು
ನೀರನೆರೆಯನುಳಿದುಳಿಯೆನೆಂಬ
ಸುಳುವಿಡಿದು ಸುಳಿವ ಮೀನು
ತನ್ನದೆನ್ನುವಾದರದೊಳೆಲ್ಲವಾ
ವರಿಸಿ ಬಂದ ಬಾನು
ಕಣ್ಮನದ ಕಾಮಧೇನು.

ಕೊಳೆಯ ಕೂಪದೊಳು ಲೇಪಗೊಳದೆ
ತನಿಗಂಪ ತಳೆದ ನಳಿನಿ
ಇಲ್ಲೊ ಅಲ್ಲೆ ಜಲವೆಲ್ಲೆ ಸಿಗುವನಕ
ನಿಲ್ಲೆನೆಂಬ ಹರಿಣಿ
ನಿಶಿಯಮುಸುಕಿನೊಳಗೊಸೆದು ಬಂದು
ನಸುನಗುವ ತಾರಾಮಣಿ
ಸೌಂದರ್ಯ ಸಾರ ಸರಿಣಿ.
ಮೇಲು ಕೀಳುಗಳ ಕೋಳು ಮೂಳುಗಳ
ಸಾಳಿಗೊಳ್ಳನಾಗಿ
ಅಂಧಕಾರದೊಳು ಸಂದ ಜಗವ ರವಿ
ಬೆಳಗೆ ಬಂದ ತೊಳಗಿ.

ಹರಿಯುತಿತ್ತಡಿಯ ಧರೆಯ ಪೊರೆದು ರ್ಝರಿ
ಭರದಿ ಮುಂದೆ ಸಾಗಿ
ಬೆರೆದ ಖಂಡದೊಳು ತೊರೆಯು ತೊರೆಯುತಿದೆ

ತನ್ನ ತನವನೀಗಿ
ತಲೆಯನೊಲೆಯುತಲೆಯುಲಿಕಿಹುದು
ಬೇರಿಲ್ಲವೆಂದು ಕೂಗಿ
ತಾಗಿ ಬಾಗಿ ತೂಗಿ.

ಒಂದೊಂದ ನೋಡೆ ಬಂಧುರದ ಸುಪ್ರಬಂಧ
ಅಂದ ಚಂದದಾನಂದದಿಂದ ಘನ
ಸಂದ ಸಂಧಿ ವೃಂದ.
ಅಂದಿಗಿಂದಿಗೊಂದಾಗಿ ಬಂದ
ಬೃಂದಾರ ಕುಸುಮ ಗಂಧ
ಜೀವನಾನು ಬಂಧ.
ಎನಿತೆನಿತೊರ್ಶ ಜೀವನಾದರ್ಶ
ತುಂಬಿಹುದು ಘನ ವಿಮರ್ಶ
ಎನಿತೆನಿತೊ ನೀತಿ ಜೀವನದ ರೀತಿ
ಯೊಳಗಿಹುದು ಘನ ಸಂಸ್ಕೃತಿ
ಎನಿತೆನಿತೊ ತತ್ವ ಜೀವನದ ಸತ್ವ
ಬಾಳುವೆಯ ಸಾರ್ಥಕತ್ವ
ನಿತ್ಯ ಸತ್ಯತಾ ನೃತ್ಯಗೈದ
ಪ್ರತ್ಯಕ್ಷ ಚಿನ್ಮಯತ್ವ.
ಧೂಳಕಣದಾಚೆ ಗಾಳಿಯುಲಿಯಾಚೆ
ಬಾನ ಬಯಲಾಚೆ ಬೆಳಗಿದೆ
ನುಡಿಯ ಗಡಿಯಾಚೆ ಮನದ ಮೊನೆಯಾಚೆ
ಮೌನದಡೆಯಾಚೆ ನುಡಿದಿದೆ.
ಅರಿವಿನರಿವಾಗಿ ಮೆರೆದಿದೆ
ಇರವಿನಿರವಾಗಿ ತೆರೆದಿದೆ
ಕಾವ್ಯ ತೆರೆದಿದೆ.

'ಶ್ರೀ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ಚರಿತಾ ಲಾವಣಿ'

ಚೀಲೂರು ಚಂದ್ರಶೇಖರ

ಆಲಿಸಿ ಭಕ್ತರೆ ಪೇಳುವೆ ನಾನು । ಶ್ರೀರಾಘವೇಂದ್ರರ ಚರಿತೆಯನು ।
ವೈದ್ಯರತ್ನರು, ಯೋಗವಂತರು । ಮೆರೆದ ಪವಾಡದ ಹಿರಿಮೆಯನು ॥

ಭಿಕ್ಷುಕರಾಗಿ ಬೇಡುತ ಅಲೆಯುತ । ತಿರುಕನ ತೆರದಲಿ ಸಾಗಿಹರು ।
ಭಿಕ್ಷೆಯ ಪಡೆಯುತ ಜನತೆಗೆ ನೀಡುತ । ಜನತಾ ಸೇವೆಯ ಮಾಡಿಹರು ।
ಜನತಾ ಸೇವೆಯೆ ದೇವರ ಸೇವೆ । ಎನ್ನುವ ಮಂತ್ರವ ಪಠಿಸಿಹರು ।
ಕಾಯಕ ಮಾಡುತ ಸಂತಸ ಬೀರುತ । ನಾನಾ ಸೇವೆಯ ಗೈದಿಹರು ॥೧॥

ಗಾಂಧೀಜಿಯರ ಪಾಳವೀಯರ । ತೆರದಲಿ ಅನುದಿನ ನಡೆದಿಹರು ।
ರಾಮರಾಜ್ಯವ ಧರೆಗೆ ನೀಡಲು । ಭಗೀರಥ ಪ್ರಯತ್ನ ಮಾಡಿಹರು ।
ಉಪ್ಪು ಹುಳಿ ಖಾರಗಳಿಲ್ಲದೂಟವ ।ತಿನ್ನುತ ತಪವನು ಗೈದಿಹರು ।
ಯೋಗವ ಕಲಿಸುತ, ತತ್ತ್ವವ ಬೀರುತ । ಯುವ ಚೇತನರೇ ಆಗಿಹರು ॥೨॥

ಕನ್ನಡ ನಾಡಿನ ಚಡ್ಡಿ ಬಾಬರು । ಯುವಜನಾಂಗದ ನೇತಾರರು ।
ಜನತೆಯ ನೆತ್ತರ ಹನಿಹನಿಯಲ್ಲಿ । ಭಾವೈಕ್ಯತೆಯನ್ನು ಹರಿಸಿಹರು ।
ಅನಾಥ ಬಂಧು ಶಾಂತಿಯ ಸಿಂಧು । ಮಲ್ಲಾಡಿ ಹಳ್ಳಿಯ ಆಶ್ರಮದಿಂದು ।
ನಾನಾ ರೋಗಕ್ಕೆ ಮದ್ದನು ನೀಡುತ । ವೈದ್ಯನಾರಾಯಣರಾಗಿಹರು ॥೩॥

ಜಾತಿ ಮತಗಳ ಭೇದವಿಲ್ಲದೆ । ನಡೆದಿದೆ ನಿತ್ಯಭಜನೆ ಆರಾಧನೆ ।
ಸರ್ವಧರ್ಮಗಳ ಪೀಠವಿದಾಗಿ । ಸರ್ವರ ಹೃನ್ಮನ ಸೆಳೆಯುತಿದೆ ।
ಸಿದ್ಧಪುರುಷರು, ಪುಣ್ಯವಂತರು । ಮಹಾತಪಸ್ವೀ ಸ್ವಾಮಿಗಳು ।
ತಪದ ಶಕ್ತಿಯ ಧಾರೆ ಎರೆಯುತ । ಲೋಕಕಲ್ಯಾಣಕೆ ಶ್ರಮಿಸಿಹರು ॥೪॥

ಮಳೆಬೆಳೆ ಬರಲಿಕೆ ರವಿಶಶಿ ಇರಲಿಕೆ । ಪೂಜ್ಯರ ತಪಬಲ ಕಾರಣವು ।
ಕಲಿಗಾಲದಲೂ ಕೀರ್ತಿಯ ಪಡೆಯುತ । ವಿವಿಧೋದ್ದೇಶವ ಸಾರುವರು ।
ದೇಶವಿದೇಶದಿ ಖ್ಯಾತಿಯ ಹೊಂದುತ । ಸಂಜೀವಿನಿಯ ನೀಡುವರು ।
ಶತಶತಮಾನಕೆ ಮಾದರಿ ಕ್ಷೇತ್ರವು । ಚಿರಚೇತನವ ತುಂಬುವುದು ॥೫॥

ಅವಿರತ ದುಡಿಯುತ ತೃಪ್ತಿಯ ಹೊಂದುತ । ಸಾಗಿಹ ನಮ್ಮ ಸ್ವಾಮಿಗಳು ।
ಹರುಷದಿ ಬಾಳುತ ಶತಾಯುವಾದ । ವಿಶ್ವಮಾನವನೆ ನಮ್ಮ ತಿರುಕನು ।
ಧರ್ಮ ಸಂಸ್ಕೃತಿಯ ಆಧ್ಯಾತ್ಮಿಕವ । ಮನೆಮನೆಗರಡಿದ ನಮ್ಮ ರತ್ನರು ।
ಅಪೂರ್ವ ನಿಧಿಯೋ ದೇವರ ವರವೇ । ನಿಮಗಿದೋ ನಮ್ಮ ನಮನಗಳು ॥೬॥

॥ಚಿರಮಭಿವರ್ಧತಾಂ ಶ್ರೀ ಶ್ರೀ ಶ್ರೀ ರಾಘವೇಂದ್ರಸ್ವಾಮಿ ಕೀರ್ತಿಶ್ರೀಃ॥

ನಾನು ಕಂಡಂತೆ ಪೂಜ್ಯ ಶ್ರೀ ರಾಘವೇಂದ್ರ ಸ್ವಾಮೀಜಿ

ಶ್ರೀ ಡಿ. ವೀರೇಂದ್ರಹೆಗ್ಗಡೆಯವರು

ಪೂಜ್ಯ ಶ್ರೀ ರಾಘವೇಂದ್ರ ಸ್ವಾಮಿಗಳು ಸನಾತನ ಧರ್ಮದೊಡನೆ ಆಧುನಿಕತೆಯನ್ನು ಸಮನ್ವಯಗೊಳಿಸಿ, ಸಮಾಜಕ್ಕೆ ಹೊಸ ಚೇತನ, ಸ್ಫೂರ್ತಿಯನ್ನು ನೀಡಿದ್ದಾರೆ. ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ. ಪೂಜ್ಯರು ಮಲ್ಲಾಡಿಹಳ್ಳಿಯಲ್ಲಿ ಅನಾಥ ಸೇವಾಶ್ರಮ ಒಂದನ್ನು ಸ್ಥಾಪಿಸಿ, ಅಲ್ಲಿ ಪವಾಡಸದೃಶವಾದ ಸುಧಾರಣೆ ಮಾಡಿದ್ದಾರೆ. ವೈದ್ಯಕೀಯ, ಶಿಕ್ಷಣ ಹಾಗೂ ಯೋಗಾಭ್ಯಾಸ-ಇವುಗಳಿಗೆ ಹೆಚ್ಚಿನ ಮಹತ್ವ ನೀಡಿ, ಅವುಗಳ ಸುಧಾರಣೆಗಾಗಿ ಶ್ರಮಿಸಿದ್ದಾರೆ. ಲೋಕ ಕಲ್ಯಾಣಾರ್ಥವಾಗಿ ಅವರು ಹಮ್ಮಿಕೊಂಡ ಕಾರ್ಯಗಳು, ಸಾಧನೆಗಳು ನಮ್ಮನ್ನು ಆಶ್ಚರ್ಯ ಚಕಿತರನ್ನಾಗಿ ಮಾಡುತ್ತವೆ.

ಮಲ್ಲಾಡಿಹಳ್ಳಿಯಲ್ಲಿರುವ ಶಿಕ್ಷಣ ಸಂಸ್ಥೆಗಳು, ತಪೋವನ, ಧ್ಯಾನಮಂದಿರ, ಯೋಗ ಶಿಕ್ಷಣಕೇಂದ್ರ, ಧನ್ವಂತರಿ ಆಯುರ್ವೇದ ಸಂಕೀರ್ಣ, ಮಾತೃಮಂದಿರ, ಮಧುವನ ಇತ್ಯಾದಿ ಪೂಜ್ಯರ ದೂರದೃಷ್ಟಿ ಹಾಗೂ ಸಮಾಜ ಸೇವಾಸಕ್ತಿಯಿಂದ ರೂಪಿಸಲ್ಪಟ್ಟ ಸಂಸ್ಥೆಗಳು.

ಪೂಜ್ಯ ಸ್ವಾಮಿಗಳು ಸ್ವತಃ ರೋಗಿಗಳನ್ನು ಪರೀಕ್ಷಿಸಿ, ತಮ್ಮ ನಿರ್ದೇಶನದಲ್ಲಿ ತಯಾರಾದ ಮದ್ದನ್ನು ರೋಗಿಗಳಿಗೆ ಉಚಿತವಾಗಿ ನೀಡುತ್ತಾರೆ. ಇಂದು ಅವರ ಚಿಕಿತ್ಸಾಲಯಕ್ಕೆ ಬರುವ ರೋಗಿಗಳ ಸಂಖ್ಯೆ ವರ್ಷಕ್ಕೆ ಮೂವತ್ತು ಸಾವಿರಕ್ಕೂ ಮಿಕ್ಕಿದೆ ಎಂದರೆ ನಮಗೆಲ್ಲ ಆಶ್ಚರ್ಯವಾಗುತ್ತದೆ. ಜಾತಿ, ಮತ, ಭೇದವಿಲ್ಲದ, ಪ್ರಾದೇಶಿಕ ಭೇದ ಭಾವ ತೊರೆದು ಇವರು ಸಲ್ಲಿಸುತ್ತಿರುವ ಸೇವೆ ಶ್ಲಾಘನೀಯವಾದುದು. ಅವರ ವ್ಯಕ್ತಿತ್ವ ಬಹುಮುಖವಾದುದು. ಸಾಹಿತಿಗಳಾಗಿ, ಯೋಗ ಸಾಧಕರಾಗಿ, ಭವರೋಗ ವೈದ್ಯರಾಗಿ, ಕೃಷಿಕರಾಗಿ ನಾಡಿನ ಜನತೆಗೆ ಇಂದು ಅವರು ಮನೆಮಾತಾಗಿದ್ದಾರೆ.

ನಾನು ಇತ್ತೀಚೆಗೆ ಪೂಜ್ಯರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಮಲ್ಲಾಡಿಹಳ್ಳಿಗೆ ಹೋದಾಗ, ನೂರರ ಇಳಿವಯಸ್ಸಿನಲ್ಲೂ ಅವರಲ್ಲಿರುವ ಯೌವನದ ಲವಲವಿಕೆ ಕಂಡು ಆಶ್ಚರ್ಯಚಕಿತನಾದೆ. ಅವರು ನಡೆಸುತ್ತಿರುವ ವಿವಿಧ ಸಂಸ್ಥೆಗಳನ್ನು ಸಂದರ್ಶಿಸಿದಾಗ, ಒಬ್ಬ ತೀರಾ ಸಾಮಾನ್ಯ ವ್ಯಕ್ತಿಯಂತೆ ಕಾಣುವ ಪೂಜ್ಯರು ಅಲ್ಲಿ ಮಾಡಿದ ಅಸಾಮಾನ್ಯ ಸಾಧನೆ-ಪ್ರಗತಿ ಕಂಡು ಸಂತೋಷವಾಯಿತು. ಅಲ್ಲಿ ನಾವು ಕಾಣುವ ಶಿಸ್ತು, ವ್ಯವಸ್ಥೆ, ಸ್ವಚ್ಛತೆ, ಕಾರ್ಯದಕ್ಷತೆ ಬೇರೆಲ್ಲೂ ಕಾಣಸಿಗದು.

"ಆಧ್ಯಾತ್ಮಿಕ ತಳಹದಿ, ಲೌಕಿಕದ ಜೀವನ ಸೌಧ" ಇದು ಪೂಜ್ಯರ ಜೀವನ ಸಿದ್ಧಾಂತ. ತನ್ನನ್ನು 'ತಿರುಕ' ನೆಂದು ಹೇಳಿಕೊಳ್ಳುವ ಇವರು ತನ್ನ ಲಾಭಕ್ಕಾಗಿ ಯಾ ಹೊಟ್ಟೆ ಪಾಡಿಗಾಗಿ ಎಂದೂ ಭಿಕ್ಷೆ ಬೇಡದೆ, ಕೋಟ್ಯಾಂತರ ರೂಪಾಯಿಗಳ ತಿರುಪೆಯನ್ನೆತ್ತಿ ಅನಾಥಸೇವಾಶ್ರಮವನ್ನು ಕಟ್ಟಿದರು. ತನ್ನ ಹೊಟ್ಟೆಗಾಗಿ, ತನ್ನ ಜೀವನಕ್ಕಾಗಿ ಭಿಕ್ಷೆ ಬೇಡುವುದು ನಾಚಿಕೆ. ಆದರೆ ಜನತೆಗಾಗಿ ಬೇಡುವುದು "ಹೆಮ್ಮೆ" ಎನ್ನುತ್ತಾರೆ ಪೂಜ್ಯರು. "ನಾನು ಸ್ವಾಮಿಯಲ್ಲ, ಒಬ್ಬ ನಮ್ರ ಸೇವಕ" ಎನ್ನುವ ಪೂಜ್ಯರು ಪವಾಡಸದೃಶ ಸಾಧನೆ ಮಾಡಿದ್ದಾರೆ. ಇನ್ನೂ ಹತ್ತು-ಹಲವು ಯೋಜನೆಗಳನ್ನು ರೂಪಿಸಿದ್ದಾರೆ ನೂರು ತುಂಬಿದ ಈ ಯುವಕ ಸ್ವಾಮೀಜಿಯವರು, ಈವರೆಗೆ ಮೂರು ಕೋಟಿ ರೂಪಾಯಿಗಳನ್ನು ಕೂಡಿಸಿಕೊಟ್ಟ ತಮ್ಮ 'ಜೋಳಿಗೆ'ಯ ಮೇಲೆ ಇವರಿಗೆ ಅಪಾರ ಭರವಸೆ ಇದೆ.

ಸೇವೆ, ತ್ಯಾಗ ಮತ್ತು ರಚನಾತ್ಮಕ ಕಾರ್ಯಕ್ರಮಗಳೆ ಅವರ ಜೀವನದ ಉಸಿರು. ತನ್ನನ್ನು ತಾನೆ ಜನತೆಗೆ ಅರ್ಪಿಸಿಕೊಂಡು, ತನ್ನ ಸಾಧನೆಯ ಗುರಿಯಲ್ಲಿ ತನ್ನತನವನ್ನು ಉಳಿಸಿಕೊಂಡಿದ್ದಾರೆ. ಜನತಾ ಜನಾರ್ದನನ ಸೇವೆಗಾಗಿ ಇನ್ನೂ ಯೋಜನೆಗಳನ್ನು ಇವರು ಹಮ್ಮಿಕೊಂಡಿದ್ದಾರೆ ಸರಕಾರದಿಂದ ದೊರೆತ ಎಲ್ಲ ಪ್ರಶಸ್ತಿಗಳನ್ನೂ ಪೂಜ್ಯರು ನಮ್ರತೆಯಿಂದ ಹಿಂತಿರುಗಿಸಿ, ಕೊಡುವುದಾದರೆ ತನ್ನ ಸಂಸ್ಥೆಗೆ ಜಾಗ, ಯೋಜನೆಗಳಿಗೆ ಧನಸಹಾಯ ಕೊಡಿ ಎಂದು ಕೇಳಿದ್ದಾರೆ.

ತನ್ನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ಅನೇಕ ಅಡೆ-ತಡೆ, ಕಷ್ಟಕಾರ್ಪಣ್ಯಗಳನ್ನು ಎದುರಿಸಿದರೂ ಪೂಜ್ಯರು ಎದೆಗುಂದಲಿಲ್ಲ. ಸಾವು-ನೋವುಗಳ ಬಗ್ಗೆ ಭಯಭೀತರಾಗುವುದಿಲ್ಲ. ತನ್ನ ದೇಹದ ಬಗ್ಗೆ ಇವರಿಗೆ ಹೆಚ್ಚು ಗಮನವಿಲ್ಲ. ಇಲ್ಲಿ ಇದ್ದಷ್ಟು ಕಾಲ ದೇಹವನ್ನು ಚೆನ್ನಾಗಿ ದುಡಿಸಬೇಕು, ಬಳಸಿಕೊಳ್ಳಬೇಕು -ಸೇವೆಗಾಗಿ ಎಂಬುದು ಇವರ ವಾದ. ಪೂಜ್ಯರ ಸೇವಾಕಾರ್ಯಗಳಲ್ಲಿ ಶ್ರೀ ಸೂರುದಾಸ್‌ಜಿಯವರ ಪರಿಶ್ರಮ, ಸಹಕಾರ ಉಲ್ಲೇಖನೀಯವಾಗಿದೆ.

ಇಳಿವಯಸ್ಸಿನಲ್ಲೂ ಪಾದರಸದಂತೆ ಚುರುಕಾಗಿ ಪೂಜ್ಯರನ್ನು ಕಂಡಾಗ, ಅವರ ಸಂಸ್ಥೆಗಳ ಸೇವೆ,ಸಾಧನೆಯನ್ನು ವೀಕ್ಷಿಸಿದಾಗ, ನಮ್ಮಲ್ಲೂ ಹೊಸ ಹುರುಪು-ಉತ್ಸಾಹ ಮೂಡಿಬರುತ್ತದೆ. ಶತಮಾನೋತ್ಸವದ ಸಂದರ್ಭದಲ್ಲಿ ಪೂಜ್ಯರನ್ನು ಅಭಿನಂದಿಸುತ್ತೇನೆ ಹಾಗೂ ಅವರು ಜನತಾ ಜನಾರ್ದನನ ಸೇವೆಗಾಗಿ ಹಮ್ಮಿಕೊಂಡ ಮುಂದಿನ ಎಲ್ಲ ಸೇವಾಕಾರ್ಯಗಳು ಸಹೃದಯ ಸಾರ್ವಜನಿಕರ ಸಹಕಾರದೊಂದಿಗೆ ಯಶಸ್ವಿಯಾಗುವಂತೆ ಶ್ರೀ ಮಂಜುನಾಥಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಎಲ್ಲರಂತಲ್ಲ ಈ ಸ್ವಾಮಿಗಳು....

ನಾ. ಪ್ರಭಾಕರ್

ಒಂದು ಪ್ರಶಸ್ತಿ, ಒಂದು ಸನ್ಮಾನಕ್ಕಾಗಿ ತಮ್ಮ ಬುದ್ಧಿಯ ಕಸರತ್ತನ್ನೆಲ್ಲ ಖರ್ಚು ಮಾಡುವ ಮಹಾನ್ ವ್ಯಕ್ತಿಗಳಿಗೆ ನಮ್ಮ ನಾಡಿನಲ್ಲಿ ಕೊರತೆಯಿಲ್ಲ ಅಂತಹ ವ್ಯಕ್ತಿಗಳು ಸಾಹಿತಿಗಳಾಗಿರಬಹುದು, ಸಮಾಜ ಸುಧಾರಕರಾಗಿರಬಹುದು, ಅಧ್ಯಾಪಕ ರಾಗಿರಬಹುದು, ಮಠಾಧೀಶರಾಗಿರಬಹುದು, ರಾಜಕಾರಣಿಗಳಾಗಿರಬಹುದು. ಸನ್ಯಾಸಿ ಗಳನ್ನೂ ಬಿಡದ ಕೀರ್ತಿಶನಿ, ಧನದ ದಾಹ, ಸ್ತ್ರೀವ್ಯಾಮೋಹಗಳು ಸಾಮಾನ್ಯರನ್ನು ಬಿಟ್ಟೀತೆ? ಆದರೆ ಸದ್ದಿಲ್ಲದೆ ಸೇವೆಯನ್ನು ಮಾಡುತ್ತಾ ಪಾಲಿಗೆ ಬಂದ ಪ್ರಶಸ್ತಿ ಗಳನ್ನು, ಗೌರವಗಳ ಕೀರ್ತಿಯನ್ನು ದೂರ ತಳ್ಳಿದವರು ವಿರಳ.

ಅಂತಹ ವಿರಳರಲ್ಲಿ ವಿರಳರಾದವರು–ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಗಳವರು.

ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಅವತಾರವಾದ ಮೇಲೆ ಬೇಕಾದಷ್ಟು ರಾಘವೇಂದ್ರ ಸ್ವಾಮಿಗಳು ಬಂದು, ಹೋದರು. ಆದರೆ ತಮ್ಮ ಸತ್ಯ ಶುದ್ಧ ಕಾಯಕದಿಂದ ಮಲ್ಲಾಡಿಹಳ್ಳಿಯನ್ನು ವಿಶ್ವವಿಖ್ಯಾತ ಮಾಡಿದ ಈ ರಾಘ ವೇಂದ್ರ ಸ್ವಾಮಿಗಳು ವಿರಳರಷ್ಟೇ ಅಲ್ಲ, ವಿಲಕ್ಷಣರೂ ಅಹುದು.

"ಕೇವಲ ಪ್ರಶಸ್ತಿಗಳು ನನಗೆ ಬೇಡ ಪ್ರಶಸ್ತಿಗಳು ನಿಮಗೆ ಬೇಕಾದರೆ ಪಡೆ ಯಿರಿ. ನಾನು ಸಂತೋಷಪಡುವೆ. ಪ್ರಶಸ್ತಿಗಳ ಜೊತೆ ಹಣ ಕೊಡುವಿರೋ.... ಕೊಡಿ....ಅದಕ್ಕಾಗಿ ನನ್ನ ಜೋಳಿಗೆ ಸಿದ್ಧ."

–ಮೊನ್ನೆ ಮೊನ್ನೆ ದೂರದರ್ಶನದ ಸಂದರ್ಶನದಲ್ಲಿ ಹೀಗೆ ಅಪ್ಪಣೆ ಕೊಡಿಸಿದ ಈ ಸ್ವಾಮಿಗಳು ಹಣಕ್ಕಾಗಿ ಬಾಯ್ಬಿಡುವವರೇ?

ಅಲ್ಲ, ಆದರೆ ಇವರಿಗೆ ಹಣಬೇಕು–ಸ್ವಂತಕ್ಕಾಗಿ ಅಲ್ಲ, ಆಶ್ರಮದ ಹಲವಾರು ಯೋಜನೆಗಳ ಕನಸನ್ನು ನನಸಾಗಿಸುವ ಮೂಲಕ ಸಮಾಜ ಸೇವೆ ಮಾಡಲು.

ಕೇವಲ ಭಿಕ್ಷೆಯಿಂದ ನಾಲ್ಕು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಆಶ್ರಮದ ಸಂಪತ್ತನ್ನು ಬೆಳೆಸಿದ ಸ್ವಾಮಿಗಳ ಸಂಪೂರ್ಣ ಯೋಜನೆ ಪೂರೈಸಲು ಇನ್ನೂ ಎಂಟೂವರೆ ಕೋಟಿ ರೂಪಾಯಿಗಳು ಬೇಕು.

ಇವೆಲ್ಲ ಯಾರಿಗಾಗಿ?–

ತಮ್ಮ ಒಂದು ನೂರ ವರ್ಷಗಳ ಸಮಗ್ರ ಬದುಕನ್ನೇ ದೇಶಸೇವೆಗಾಗಿ ಅರ್ಪಿಸಿ ಕೊಂಡಿರುವ, ಅದಕ್ಕಾಗಿ ಹಗಲಿರುಳೂ ಅಕ್ಷರಶಃ ದುಡಿಯುತ್ತಿರುವ ಈ ಸ್ವಾಮಿ ಗಳು ಕಟ್ಟಿ ಬೆಳೆಸಿದ ಆಶ್ರಮವೂ ರಾಷ್ಟ್ರಕ್ಕಾಗಿಯೇ ಅರ್ಪಿತವಾದುದು.

ರಾಷ್ಟ್ರ ಎಂದರೆ ಜನ-ಜನಸೇವೆಯೇ ಜನಾರ್ದನನ ಸೇವೆ !-ಇದು ಸ್ವಾಮಿಗಳ ಸಮಗ್ರ ಬದುಕಿನ ಸಮಷ್ಟಿದೃಷ್ಟಿ.

ಇಂತಹ ತ್ಯಾಗಮೂರ್ತಿಯ ಆದರ್ಶವನ್ನು ಕಾವಿಯನ್ನು ಧರಿಸಿ, ಧರ್ಮವನ್ನೇ ಬಂಡವಾಳ ಮಾಡಿಕೊಂಡು ಮುಗ್ಧ ಜನರನ್ನು ದೇವರ ಹೆಸರಿನಲ್ಲಿ ಶೋಷಿಸುತ್ತಿರುವ ಲಕ್ಷೋಪಲಕ್ಷ ಸನ್ಯಾಸಿಗಳು, ಮಠಾಧಿಪತಿಗಳು ಪಾಲಿಸಿದ್ದಿದ್ದರೆ-

ಒಂದೊಂದು ಹಳ್ಳಿಯನ್ನು ತಮ್ಮ ಸೇವಾಕ್ಷೇತ್ರವನ್ನಾಗಿ ಮಾಡಿಕೊಂಡು ಅದರ ಸುತ್ತಮುತ್ತಲ ಪ್ರದೇಶದ ಜನರ ಏಳಿಗೆಗಾಗಿ ದುಡಿದಿದ್ದರೆ, ಸೇವೆಯಲ್ಲೇ ಸರ್ವಸ್ವವನ್ನೂ ಕಂಡಿದ್ದರೆ—

ಇಂದು ನಿರಕ್ಷರಕುಕ್ಷಿಗಳಿಂದ ತುಂಬಿ, ಸೋಮಾರಿತನದಿಂದ ತಾಂಡವಾಡುತ್ತಿರುವ, ಕೋಮುಗಲಭೆಗಳಿಂದ ಪ್ರಕ್ಷುಬ್ಧಗೊಂಡಿರುವ, ತಮ್ಮ ಸ್ವಾರ್ಥದ ಬೇಳೆ ಬೇಯಿಸಿಕೊಳ್ಳುವ ರಾಜಕಾರಣಿಗಳಿಗೆ ಬಂಡವಾಳವಾಗಿರುವ ಮುಗ್ಧ ಜನರಿಂದ ತುಂಬಿರುವ, ಸದಾ ರೋಗ-ರುಜಿನಗಳು, ಅನೇಕ ವ್ಯಸನಗಳ ಅಜ್ಞಾನಾಂಧಕಾರದಲ್ಲಿ ತೊಳಲಾಡುತ್ತಿರುವ ನಮ್ಮ ಭಾರತದ ಭವಿಷ್ಯವೇ ಬೇರೆಯದಾಗುತ್ತಿತ್ತು.

ಹಾಗಾಗದೆ, ಸಂನ್ಯಾಸದ ನಿಜವಾದ ಅರ್ಥವೂ ವಿಕೃತವಾಗಿ ಮಲ್ಲಾಡಿಹಳ್ಳಿಯ ಸ್ವಾಮಿಗಳಂಥವರು ಏಕಮೇವಾದ್ವಿತೀಯರಾಗಿ ನಮ್ಮ ನಾಡಿನಲ್ಲಿ ಎದ್ದು ಕಾಣುವಂತಾದುದು ಈ ಸ್ವಾಮಿಗಳ ವಿಶಿಷ್ಟತೆಯೇನೋ ಸರಿಯೇ-ಆದರೆ ನಮ್ಮ ದೇಶದ ದೌರ್ಭಾಗ್ಯಕ್ಕೆ ಏನೆಂದು ಹೇಳೋಣ ?

ನನ್ನ ಜೀವನಾನುಭವದಲ್ಲಿ ಅನೇಕ ಜಗದ್ಗುರುಗಳನ್ನು, ಮಠಾಧೀಶರನ್ನು, ಬಿಡಿ ಸನ್ಯಾಸಿಗಳನ್ನು, ಸಮಾಜ ಸೇವಕರೆಂದು ಕರೆದುಕೊಳ್ಳುವವರನ್ನು, ಸೇವೆಯ ಹೆಸರಿನಲ್ಲಿ ಸ್ವಂತ ಜನರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬರುವವರನ್ನು ಉದ್ದುದ್ದ ಭಾಷಣ ಮಾಡಿ, ತಮ್ಮ ಭಾಷಣದಲ್ಲೇ ದೇಶದ ಏಳಿಗೆಯನ್ನು ಸಾಧಿಸುವ ಸಾಹಿತಿ ಶ್ರೇಷ್ಠರನ್ನು ಕಂಡಿದ್ದೇನೆ.

ನಿಜವಾದ ಅರ್ಥದಲ್ಲಿ ಸೇವೆಯನ್ನು ಸಲ್ಲಿಸಿದ ಪಂಡಿತ ತಾರಾನಾಥರಾಯರಂಥವರನ್ನು ನಾನು ಕಾಣಲಾಗಲಿಲ್ಲ. ಆದರೆ ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ಒಂದಲ್ಲ, ಹತ್ತಾರು ಬಾರಿ, ಒಂದು ದಿನವಲ್ಲ ತಿಂಗಳುಗಳಗಟ್ಟಳೆ ಅವರ ಆಶ್ರಮದ ಅತಿಥಿಯಾಗಿಯೇ ಬಹು ಹತ್ತಿರದಿಂದ ಕಂಡಿದ್ದೇನೆ ಅವರ ಕಾರ್ಯವೈಖರಿಯನ್ನು ಕಂಡು ಬೆರಗಾಗಿದ್ದೇನೆ. ಅವರನ್ನು ನೆನೆದಾಗಲೆಲ್ಲ ಮೇಲಿನ ಮಾತುಗಳು ತಲೆಯಲ್ಲಿ ಪ್ರಶ್ನೆಯಾಗಿ ಕಾಡುತ್ತದೆ.

'ಇವರಂತಹ ಸ್ವಾಮಿಗಳು ಇನ್ನೊಬ್ಬರಿಲ್ಲವಲ್ಲ....ಇದ್ದಿದ್ದರೆ-?' ಎನ್ನುವ ವ್ಯಥೆಯೂ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಆಶ್ರಮದ ಅತಿಥಿಯಾಗಿ ಮಲ್ಲಾಡಿಹಳ್ಳಿಯಲ್ಲಿ ಇದ್ದೆ ಎಂದೆನಲ್ಲ. ಅದು ಖ್ಯಾತ ಲೇಖಕ ತ ರಾ ಸು ಅವರ ಜೊತೆಗೆ-೧೯೭೭ರಲ್ಲಿ.

ಸಹಿಮಾಡಲೂ ಸಾಧ್ಯವಾಗದಷ್ಟು ನಿಶ್ಶಕ್ತತೆಯಿಂದ ಬಳಲುತ್ತಿದ್ದ ತ ರಾ ಸು ಅವರು ಆ ವರ್ಷದ ನವೆಂಬರ್ ತಿಂಗಳಲ್ಲಿ ಚಿಕಿತ್ಸೆಗಾಗಿ ಮಲ್ಲಾಡಿಹಳ್ಳಿಗೆ ಬಂದರು.

ಅವರೊಡನೆ ನಾನೂ ಕೂಡ. ಕೇವಲ ಒಂದು ಒಂದೂವರೆ ತಿಂಗಳಲ್ಲಿ ತ ರಾ ಸು ಅವರು ಸ್ವಾಮಿಗಳಿಂದ ಚಿಕಿತ್ಸೆ ಪಡೆದು, ಆಶ್ರಮದ ಶುಶ್ರೂಷೆಯಲ್ಲಿ ಟೇಬಲ್ ಟೆನ್ನಿಸ್ ಆಡುವ ಮಟ್ಟಿಗೆ, ಆಶ್ರಮದ ಆವರಣವನ್ನೆಲ್ಲ ಸುತ್ತಾಡಿ ಬರುವಷ್ಟರ ಮಟ್ಟಿಗೆ ಆರೋಗ್ಯವಂತರಾದ ಪವಾಡವನ್ನು ಕಣ್ಣಾರೆ ಕಂಡು, ಬೆರಗಾದೆ. ಹಾಗೇ ಶುಶ್ರೂಷೆ ಮುಂದುವರಿದಿದ್ದರೆ ಇಂದೂ ಕೂಡ ರೋಗಮುಕ್ತ ತ ರಾ ಸು ನಮ್ಮೊಡನಿರುತ್ತಿದ್ದರೋ–ಏನೋ !

ಆದರೆ ಮಧ್ಯೆ ಅವರ ನಾದಿನಿಯ ಮದುವೆ ಅಡ್ಡಬಂದು, ಸ್ವಾಮಿಗಳು ಎಷ್ಟು ಹೇಳಿದರೂ ಕೇಳದೆ ಮೈಸೂರಿಗೆ ಮರಳಿದ ತ ರಾ ಸು ಸ್ವಲ್ಪ ಕಾಲದ ನಂತರ ಆಶ್ರಮಕ್ಕೆ ಹಿಂತಿರುಗಿ ಚಿಕಿತ್ಸೆ ಮುಂದುವರಿಸಿದರಾದರೂ, ಮತ್ತೆ ಔಷಧಿ ಮೈಗಂಟಲಿಲ್ಲ. ಶಿವರಾತ್ರಿ ಕಾರ್ಯಕ್ರಮದ ನಂತರ ನಾವು ಹಿಂತಿರುಗಬೇಕಾಯಿತು. ಕೊನೆಯವರೆಗೂ ತ ರಾ ಸು ಅವರು ಮಲ್ಲಾಡಿಹಳ್ಳಿಗೆ ಹೋಗಿ ಮೈಗಟ್ಟಿಮಾಡಿಕೊಳ್ಳುವ ಬಯಕೆ ಹೊತ್ತೇ–ಇಹಲೋಕದಿಂದಲೇ ನಡೆದರು.

ಆ ಕಾಲದಲ್ಲಿ ನಾನು ಆಶ್ರಮದ ಶಿವರಾತ್ರಿ ಉತ್ಸವದ ವೈಭವವನ್ನು ಕಣ್ಣಾರೆ ಕಂಡೆ. ಸ್ವಾಮಿಗಳು ಸಮಾರಂಭದಲ್ಲಿ ತೋರಿಸುವ ವ್ಯಾಯಾಮ ಪ್ರದರ್ಶನ, ಯೋಗ ಪ್ರದರ್ಶನಗಳನ್ನು ಕಂಡು ಬೆರಗಾದೆ, ಧನ್ಯನಾದೆ.

ಸ್ವಾಮೀಜಿಯ ಸೇವೆಯ ಗುಟ್ಟು ತಿಳಿದದ್ದೂ ಆಗಲೇ.

ಶಿವರಾತ್ರಿ ಕಾರ್ಯಕ್ರಮಕ್ಕೆಂದು ಬರುವ ಅತಿಥಿಗಳಿಗಾಗಿ ಬಿಡಾರಗಳನ್ನು ಶುಚೀಕರಿಸುವ ಕೆಲಸಕ್ಕೆ ಸ್ವಯಂಸೇವಕರಾಗಿ ಸ್ವಾಮೀಜಿಯವರೇ ಬಂದುಬಿಟ್ಟರು. ಕಕ್ಕಸ್ಸು ಶುದ್ಧೀಕರಿಸುವ ಕಾರ್ಯಕ್ಕೆ ಅವರು ಹಿಂದುಮುಂದು ನೋಡಲಿಲ್ಲ.

ಆಗ ಅವರು ಒಂದು ಮಾತು ಹೇಳಿದರು–

ಗಾಂಧೀಜಿಯವರ ಬಳಿ ಇದ್ದ ಸ್ವಾಮೀಜಿಯವರ ಅನುಭವ ಅದಾಗಿತ್ತು. ಮಹಾತ್ಮಾಗಾಂಧೀಯವರು ಯಾವುದೇ ಶಿಬಿರಕ್ಕೆ ಹೋಗಲಿ ಅಲ್ಲಿ ಕಕ್ಕಸ್ಸು ಹೇಗಿದೆ ಎಂಬ ವ್ಯವಸ್ಥೆ ನೋಡುತ್ತಿದ್ದರಂತೆ. ಸ್ವಯಂಸೇವಕರ ಮೇಲೆ ಸಿ ಐ ಡಿ ಗಳನ್ನು ಬಿಟ್ಟಿರುತ್ತೇನೆ ಎನ್ನುತ್ತಿದ್ದರಂತೆ. ಗಾಂಧೀಜಿಯವರ ಸಿ ಐ ಡಿ ಗಳು ಯಾರು ಗೊತ್ತೆ–ಸೊಳ್ಳೆಗಳು, ನೊಣಗಳು !

ಮಹಾತ್ಮಗಾಂಧೀಜಿಯವರ ಆದರ್ಶವನ್ನು ಮೈಗೂಡಿಸಿಕೊಂಡಿರುವ ಈ ಸ್ವಾಮಿಗಳೂ ಶುಚಿತ್ವಕ್ಕೆ ಮೊದಲ ಆದ್ಯತೆ ಕೊಡುವವರು !

ಕಕ್ಕಸ್ಸು ಶುದ್ಧೀಕರಣದಿಂದ ಹಿಡಿದು ಧ್ಯಾನ, ಪ್ರಾರ್ಥನೆಗಳವರೆಗೆ ಎಲ್ಲವೂ ಅವರಿಗೆ ಭಗವಂತನ ಸೇವೆಯೇ !

ಆಶ್ರಮದ ಸಂಪೂರ್ಣ ಆಗು-ಹೋಗುಗಳನ್ನು ನೋಡಿಕೊಳ್ಳುತ್ತಿರುವ ಸ್ವಾಮಿಗಳು ಎಲ್ಲಿಂದರಲ್ಲಿ, ಯಾವಾಗ ಎಂದರೆ ಆಗ ಪ್ರತ್ಯಕ್ಷ. ಹಾಗಾಗಿ ಆಶ್ರಮದ ವ್ಯವಸ್ಥೆ ಅಚ್ಚುಕಟ್ಟಾಗಿ ಸಾಗಿದೆ.

ಇತ್ತೀಚೆಗೆ ಕೆಲವು ಮಿತ್ರರೊಂದಿಗೆ ಆಶ್ರಮಕ್ಕೆ ಹೋಗಿದ್ದಾಗ–ಸ್ವಾಮೀಜಿ

ಯವರ ಇನ್ನಷ್ಟು ಸಾಧನೆಗಳು ಕಂಡು ಬಂದೆ; ದಿನೇ ದಿನೇ ಆಶ್ರಮ ಬೆಳೆಯುತ್ತಿರುವುದು ಕರ್ನಾಟಕಕ್ಕೇ ಹೆಮ್ಮೆಯನ್ನು ತರುವಂತಿದೆ ಎನಿಸಿತು.

ಸ್ವಾಮಿಗಳೇನೋ ಹಗಲಿರುಳೂ ಜನಸೇವೆಗಾಗಿ, ಆಶ ಮದ ವಿವಿಧ ಯೋಜನೆಗಳ ಮೂಲಕ ಶ್ರಮಿಸುತ್ತಿದ್ದಾರೆ. ತಮ್ಮನ್ನೇ ಧಾರೆ ಎರೆದುಕೊಂಡು ಕೃತಜ್ಞರಾಗುತ್ತಿದ್ದಾರೆ.

ಆದರೆ ನಾವು–?

'ದೇಶ ನನಗಾಗಿ ಅಲ್ಲ, ದೇಶಕ್ಕಾಗಿ ನಾನು ಎನ್ನುವ ಯುವಜನರು ಬೇಕು' ಎನ್ನುವ ಸ್ವಾಮಿಗಳ ಕರೆಗೆ ಕಿವುಡರಾಗಿ, ದೇಶದ ಎಲ್ಲ ಸಮಸ್ಯೆಗಳಿಗೂ ಸರ್ಕಾರವನ್ನು ದೂರುತ್ತಾ, ನಮ್ಮ ಪಾಲಿನ ಕರ್ತವ್ಯಗಳ ಬಗ್ಗೆ ಉದಾಸೀನರಾಗಿ ಸೋಮಾರಿಗಳಾಗಿ ಬಾಳುತ್ತಿದ್ದೇವೆ

ಕಾಶಿ, ರಾಮೇಶ್ವರ, ತಿರುಪತಿ ಮುಂತಾದ ಕ್ಷೇತ್ರಗಳಿಗೆ ಯಾತ್ರೆ ಹೊರಡುತ್ತೇವೆ. ಒಮ್ಮೆಯಾದರೂ ಮಲ್ಲಾಡಿಹಳ್ಳಿಯಂತಹ ಸೇವಾಕ್ಷೇತ್ರವನ್ನು ಸಂದರ್ಶಿಸಿ ಮನುಷ್ಯ ಮನಸ್ಸು ಮಾಡಿ–ತ್ರಿಕರಣಪೂರ್ವಕವಾಗಿ ಸೇವೆಗಾಗಿ ತನ್ನ ಬಾಳನ್ನು ಮೀಸಲಿಟ್ಟರೆ ಎಂತಹ ಅದ್ಭುತವನ್ನು, ಆದರ್ಶದ ಕನಸನ್ನು ನನಸು ಮಾಡಬಹುದು, ಸಾಧಿಸಬಹುದು ಎಂಬುದನ್ನು ಕಣ್ಣಾರೆ ಕಂಡು, ಕಿಂಚಿತ್ತಾದರೂ ನಮ್ಮ ಸುತ್ತಮುತ್ತಲವರ ಏಳಿಗೆಗಾಗಿ ನಮ್ಮ ಬದುಕನ್ನು ಮೀಸಲಿಟ್ಟು, ಮಾಡುವ ಎಲ್ಲ ಕೆಲಸವೂ ಭಗವದಾರಾಧನೆ ಎಂಬ ಭಾವವನ್ನು ಬೆಳೆಸಿಕೊಂಡು ದುಡಿದರೆ, ಸ್ವಾಮಿಗಳ ತ್ಯಾಗ–ಶ್ರಮಕ್ಕೆ ಕನ್ನಡಿಗರಾದ ನಾವು ಕೊಡುವ ಕೃತಜ್ಞತೆಯ ಕಾಣಿಕೆ. ಇದನ್ನು ನಮ್ಮ ಕನ್ನಡಿಗರು ಮಾಡಿಯಾರೆ?

ಇಂದು ದೇಶದ ಮುಂದೆ ಹಲವಾರು ಸಮಸ್ಯೆಯು ಕಾರ್ಮೋಡ ಕವಿದು, ಭವಿಷ್ಯ ಕತ್ತಲಾಗಿದೆ. ಇಂತಹ ವಿಷಮಸ್ಥಿತಿಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆದರ್ಶ ಬದುಕಿನ ಬೆಳಕು, ಇನ್ನೂ ನೂರಾರು ವರ್ಷ ಭಾರತವನ್ನು ಬೆಳಗಲಿ ಎಂದು ಹಾರೈಸುತ್ತೇನೆ; ಪ್ರಾರ್ಥಿಸುತ್ತೇನೆ.

ಮಲ್ಲಾಡಿ ಹಳ್ಳಿಯ ಕಾರಣಪುರುಷ

ಎಸ್. ವಿ. ಪರಮೇಶ್ವರ ಭಟ್ಟ

೧

ನಮ್ಮ ದೇಶದಲ್ಲಿ ಹಿಂದೆ ಅನೇಕಾನೇಕ ಋಷ್ಯಾಶ್ರಮಗಳಿದ್ದವು. ಅವುಗಳಲ್ಲಿ ವಾಸಮಾಡುತ್ತಿದ್ದ ಋಷಿಗಳು ತಪೋನಿರತರಾಗಿದ್ದರು. ಅವರ ತಪಸ್ಸಿನ ಪ್ರಭಾವಕ್ಕೆ ಒಳಗಾಗಿ ಹತ್ತೂ ದಿಕ್ಕಿನಿಂದ ಹತ್ತೂ ದಿಕ್ಕಿನಲ್ಲಿ ಜೀವಿಸುತ್ತಿದ್ದ ವನ್ಯ ಜೀವಿಗಳು ತಮಗೆ ಸಹಜವಾಗಿದ್ದ ವೈರ ಭಾವಗಳನ್ನು ಮರೆತು ಒಗ್ಗೂಡಿ ಬಂದು ಈ ಆಶ್ರಮ ದಲ್ಲಿ ವಾಸಿಸತೊಡಗಿದ್ದುವು. ಹುಲಿ, ಹಸು, ಹುಲ್ಲೆ, ಸಿಂಹ, ಆನೆ, ಕರಡಿ, ಕೋತಿ, ಹಾವು, ಮುಂಗುಸಿ ಮುಂತಾದ ಪ್ರಾಣಿಗಳೆಲ್ಲ ಜಾತಿ ವೈರವನ್ನು ಮರೆತು ಮೈತ್ರಿ ಭಾವವನ್ನು ಬೆಳೆಸಿಕೊಂಡು ಸಹಜೀವನ ನಡೆಸತೊಡಗುತ್ತಿದ್ದುವು. ನಮ್ಮ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಇಂತಹ ಋಷ್ಯಾಶ್ರಮಗಳ ವರ್ಣನೆ ಬರುತ್ತದೆ. ಈಗ ಅಂತಹ ಆಶ್ರಮಗಳೂ ಇಲ್ಲ ಹುಲಿ ಕರಡಿ ಸಿಂಹಗಳೂ ವಿರಳವಾಗುತ್ತಿವೆ. ಆದರೆ ಹುಲ್ಲೆ ಯಂತಹ ಮನುಷ್ಯರ ಜೊತೆಗೆ ಹುಲಿಯಂತಹ ಮನುಷ್ಯರೂ ಇದ್ದಾರೆ. ಸಿಂಹದಂತಹ ಮನುಷ್ಯರ ಜೊತೆಗೆ ಸಾಧು ಸ್ವಭಾವದ ಮನುಷ್ಯರು ಇದ್ದಾರೆ. ಈ ದುಷ್ಟಬುದ್ಧಿಯ ಸ್ವಭಾವ ಮಾನವರಲ್ಲಿ ಕಡಿಮೆಯಾಗುತ್ತ ಶಿಷ್ಟ ಸ್ವಭಾವ ಬೆಳೆಯುವುದಕ್ಕೆ ಬೇರೆಯ ಸ್ವಭಾವ ಬೇಕು. ಮಲ್ಲಾಡಿ ಹಳ್ಳಿಯ ಶ್ರೀ ಸ್ವಾಮೀಜಿಯವರು ಅಂತಹ ಪ್ರಭಾವ ಬೀರತಕ್ಕ ವ್ಯಕ್ತಿಗಳಾಗಿದ್ದಾರೆ.

೨

ಈ ವಿಜ್ಞಾನ ಯುಗದಲ್ಲಿ ಅನೇಕ ವೈಜ್ಞಾನಿಕ ಪ್ರಯೋಗಗಳ ಫಲವಾಗಿ ಮನುಷ್ಯನ ಕಲ್ಯಾಣ ಸಾಧನೆ ಸಾಧಿತವಾಗಿದೆ. ಇಂತಹ ಸಾಧನೆಗಳಲ್ಲಿ ಬದಲೀ ಹೃದಯದ ಅಳವಡಿಕೆಯೂ ಒಂದು. ಇದು ನಮಗೆ ಬೇಕು ನಿಜ. ಆದರೆ ಇದಕ್ಕಿಂತ ಹೆಚ್ಚಾಗಿ ನಮಗೆ ಬೇಕಾಗಿರುವುದು ಹೃದಯದ ಪರಿವರ್ತನೆಯ ಸಾಧನೆ. ಇರುವ ಹೃದಯನ್ನು ತೆಗೆದು ಬೇರೆ ಹೃದಯವನ್ನು ಅಳವಡಿಸುವುದಲ್ಲ. ಇರುವ ಹೃದಯ ವನ್ನೇ ಪರಿವರ್ತಿಸುವುದು. ಮಹಾಭಾರತದಲ್ಲಿ ಯುದ್ಧ ಪ್ರಾರಂಭವಾಗುವುದಕ್ಕಿಂತ ಮುಂಚೆ, ವಿಷಾದಯೋಗ ಸ್ಥಿತಿಯಲ್ಲಿದ್ದ ಅರ್ಜುನನನ್ನು ಶ್ರೀಕೃಷ್ಣನು ತನ್ನ ಉಪ ದೇಶದಿಂದ ಅವನ ಹೃದಯವನ್ನು ಪರಿವರ್ತಿಸಿದನು. ಅರ್ಜುನನು ಮರಳಿ ಕ್ಷತ್ರಿಯ ಧರ್ಮಕ್ಕನುಗುಣವಾಗಿ ಯುದ್ಧದಲ್ಲಿ ಪ್ರವೃತ್ತನಾದನು. ಹಾಗೆಯೇ ಈ ಹಿಂದೆ ಹೇಡಿಯಾಗಿದ್ದ ಉತ್ತರಕುಮಾರನನ್ನು ವೀರಪುರುಷನನ್ನಾಗಿ ಪರಿವರ್ತಿಸಿದ ಅರ್ಜು ನನ ಪ್ರಸಂಗವನ್ನು ಇಲ್ಲಿ ಸ್ಮರಿಸಬಹುದು.

ನಮ್ಮ ಕಾಲದಲ್ಲಿಯೆ ಗಾಂಧೀಜಿಯವರು ಎಷ್ಟು ಜನರ ಹೃದಯ ಪರಿವರ್ತನೆ ಮಾಡಿದ್ದಾರೆ. ದಕ್ಷಿಣಾಫ್ರಿಕಾದಲ್ಲಿ ಗಾಂಧೀಜಿಯವರು ಸ್ಮಟ್ಸ ಸಾಹೇಬರನ್ನೇ ಪರಿವರ್ತಿಸಲಿಲ್ಲವೆ? ಪೂಜ್ಯ ವಿನೋಬಾಜಿಯವರು ಚಂಬಲ್ ಕಣಿವೆಯ ಡಕಾಯಿತರನ್ನೇ ತಮ್ಮ ವ್ಯಕ್ತಿತ್ವದ ಹಿರಿಮೆ ಗರಿಮೆಗಳನ್ನು ಮೆರೆದು ಸಾಧುಗಳನ್ನಾಗಿ ಪರಿವರ್ತಿಸಲಿಲ್ಲವೆ? ಇತಿಹಾಸದಲ್ಲಿ ಇಂತಹ ಸಾವಿರ ಪ್ರಸಂಗಗಳು ಬರುತ್ತವೆ. ಆ ಪ್ರಸಂಗಗಳ ಜೊತೆಗೆ ಪ್ರಕೃತದಲ್ಲಿ ಮಲ್ಲಾಡಿ ಹಳ್ಳಿಯ ಶ್ರೀ ಸ್ವಾಮೀಜಿಯವರನ್ನು ಸೇರಿಸಿಕೊಳ್ಳಬೇಕು. ಶ್ರೀ ಸ್ವಾಮೀಜಿಯವರು ತಮ್ಮ ಸದ್ಗುಣಗಳ ಮಹಿಮೆಯಿಂದ ತಮ್ಮ ಯೋಗಾಭ್ಯಾಸದ ಪ್ರದರ್ಶನಗಳಿಂದ ಸರಳ ಜೀವನದಿಂದ, ವೈದ್ಯಕೀಯ ಚಿಕಿತ್ಸೆಗಳಿಂದ, ಜನರನ್ನು ಅರೋಗ ದೃಢಕಾಯರನ್ನಾಗಿ ಮಾಡುವುದಲ್ಲದೆ ಶುಚಿಶೀಲರನ್ನಾಗಿ ಮಾಡಿದ್ದಾರೆ.

ಇಂದಿನ ವಿಜ್ಞಾನಯುಗದಲ್ಲಿ ಮಾನವ ಚಂದ್ರಲೋಕಕ್ಕೆ ಹೋಗುವುದು ಸಾಧ್ಯವಾಗಿದೆ. ಅದೇ ರೀತಿಯಲ್ಲಿ ಬೇರೆ ಗ್ರಹಗಳಿಗೆ ಹೋಗಿಬರುವ ಸಂಶೋಧನೆಯ ದಾರಿಯಲ್ಲಿ ಮಾನವ ಪ್ರಗತಿ ಸಾಧಿಸಿದ್ದಾನೆ. ಇದು ವಿಜ್ಞಾನದ ಸಂಶೋಧನೆಯ ಫಲ. ಗ್ರಹದಿಂದ ಗ್ರಹಕ್ಕೆ ಆತ ಹೋಗುವುದು ಮುಂದೆ ಸಹಜವೂ ಸುಲಭವೂ ಆಗಿಬಿಡುತ್ತದೆ. ಆದರೆ ನಮ್ಮ ಸಮಾಜದ ಸ್ಥಿತಿಗತಿಗಳನ್ನು ನೋಡಿದರೆ ಗೃಹದಿಂದ ಗೃಹಕ್ಕೆ ಕಷ್ಟವೂ ಕ್ಲೇಶವೂ ಆಗಬಹುದು. ಇದಕ್ಕೆ ನಾವು ವಿಜ್ಞಾನದ ಜೊತೆಗೆ ಮಾನವ ವಿಜ್ಞಾನಗಳನ್ನೂ, ಧರ್ಮಗ್ರಂಥಗಳನ್ನೂ ಸಾಹಿತ್ಯ ಸಂಗೀತ, ನೃತ್ಯದ ಕಲಾವಿಶೇಷಗಳನ್ನು ಅರಿತು ಅಭ್ಯಾಸ ಮಾಡಿ ಹೃದಯಕ್ಕೆ ಸಂಸ್ಕಾರವನ್ನು ತಂದುಕೊಳ್ಳಬೇಕು. ಹಾಗೆಯೇ ಸಾಧು ಸಜ್ಜನರ ನಡೆ ನುಡಿಗಳನ್ನು ಗಮನಿಸಿ ಅವರ ಹಾದಿಯಲ್ಲಿ ಮುಂದೆ ಸಾಗಬೇಕು. ಶ್ರೀ ಮಲ್ಲಾಡಿ ಹಳ್ಳಿ ಸ್ವಾಮೀಜಿಯವರು ನಮಗೆ ಮಾರ್ಗದರ್ಶನ ನೀಡುವ ಮಹಾಮಹಿಮರಾಗಿದ್ದಾರೆ.

ಶ್ರೀ ಸ್ವಾಮೀಜಿಯವರು ನಮ್ಮೊಡನೆ ನೂರು ಕಾಲ ಇದ್ದು ನಮ್ಮನ್ನು ನಡೆಸಲಿ ಎಂದು ಭಗವಂತನನ್ನು ನಾನು ಪ್ರಾರ್ಥಿಸುತ್ತೇನೆ.

ವರ

ತ. ಸು. ಶಾಮರಾಯ

ನನ್ನ ಪೂರ್ವಪುಣ್ಯದಿಂದ ಮಲ್ಲಾಡಿಹಳ್ಳಿಯ ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರು ಸುಮಾರು ಎರಡು ವಾರಗಳು ನನ್ನ ಮನೆಯಲ್ಲಿ ತಂಗಿರುವ ಭಾಗವನ್ನು ನನಗೆ ಒದಗಿಸಿದ್ದರು. ಈ ಸುಸಮಯವನ್ನು ಸದುಪಯೋಗಪಡಿಸಿಕೊಂಡು, ಮೈಸೂರಿನ ನಾನಾ ರೋಗಿಗಳು ಅವರನ್ನು ಕಾಣಲು ಬೆಳಗು ಮುಂಜಾವಿಗೆ ನನ್ನ ಮನೆಗೆ ಬರುತ್ತಿದ್ದರು. ಶ್ರೀ ಶ್ರೀ ಸ್ವಾಮೀಜಿಯವರು ನಾಡಿಯ ಪರೀಕ್ಷೆ ಮಾಡಬೇಕಾಗಿದ್ದುದರಿಂದ ಬರುವವರು ಯಾವ ಆಹಾರವನ್ನು ಸೇವಿಸದೆಯೇ ಬರಬೇಕಾಗಿತ್ತು. ಅವರಲ್ಲಿ ಎಷ್ಟೋ ಜನಕ್ಕೆ ಬೆಳಗ್ಗೆ ಎದ್ದೊಡನೆಯೇ ಕಾಫಿ ಕುಡಿಯುವ ಚಟ ಬೆಳೆದು ಬಂದಿತ್ತು. ಕಾಫಿ ಕುಡಿಯುವ ಚಟವನ್ನು ಬುದ್ಧಿ ಬಂದಂದಿನಿಂದಲೂ ಬೆಳೆಸಿಕೊಂಡು ಬಂದಿದ್ದ ನನಗೆ ಅವರ ಕಷ್ಟವೇನೆಂಬುದು ನನಗೆ ಸುಲಭವಾಗಿಯೇ ಅರ್ಥವಾಗುತ್ತಿತ್ತು. ಆದ್ದರಿಂದ ನಾನು ನನ್ನ ಮಡದಿಯನ್ನು ಕುರಿತು ಬೆಳಕು ಹರಿಯುವ ವೇಳೆಗೆ ೫೦ ಲೋಟ ಕಾಫಿ ಸಿದ್ಧವಾಗಿರಲೆಂದು ತಿಳಿಸಿದ್ದೆ. ಪತಿಭಕ್ತಿ ಪರಾಯಣೆಯಾದ ನನ್ನ ಮಡದಿ ಅವಳೂ ಕಾಫಿಯ ಗುಲಾಮಳೇ—ಅತ್ಯಂತ ಸಂತೋಷದಿಂದ ಈ ಕೆಲಸವನ್ನು ಕೈಕೊಂಡಳು. ಬೆಳಗಿನ ಜಾವ ನಾಲ್ಕು ಗಂಟೆಗೆ ಸ್ನಾನಕ್ಕೆಂದು ಮಹಡಿಯಿಂದ ಕೆಳಗಿಳಿದು ಬಂದ ರಾಘವೇಂದ್ರ ಸ್ವಾಮೀಜಿಯವರು ನನ್ನ ಮಡದಿಯ ಕಾರುಭಾರನ್ನು ಕಂಡು ಇದೇನು ನಿನ್ನ ಹುಚ್ಚಾಟ ಎಂದು ಗದರಿಸಿ ಕೇಳಿದರು. ಅವಳು ತಪ್ಪೆಲ್ಲವನ್ನು ತನ್ನ ಗಂಡನ ತಲೆಯ ಮೇಲೆ ಹೇರಿ ಸುಲಭವಾಗಿಯೇ ತಾನು ತಪ್ಪಿತಸ್ಥಳಲ್ಲವೆಂದು ಸ್ವಾಮಿಗಳನ್ನು ನಂಬಿಸಿದಳು. ಸ್ವಾಮಿಗಳ ಕೋಪ ನನ್ನ ಕಡೆ ತಿರುಗಿತು. "ಏನಯ್ಯಾ, ಇದು ನಿನ್ನ ಕಾರಭಾರು, ನಿನ್ನದೇನು ಮನೆಯೋ ಛತ್ರವೋ? ಐವತ್ತು ಲೋಟ ಕಾಫಿ ತಯಾರಾಗಬೇಕಾದರೆ ಎಷ್ಟು ಹಾಲು ಬೇಕು, ಎಷ್ಟು ಸಕ್ಕರೆ ಬೇಕು, ಎಷ್ಟು ಕಾಫಿಪುಡಿ ಬೇಕು, ಇದೆಲ್ಲಕ್ಕೂ ಹೆಚ್ಚಾಗಿ ಆ ಸಾಧುಪ್ರಾಣಿ ನಿನ್ನ ಹೆಂಡತಿ ಬೆಳಗಿನ ಜಾವಕ್ಕೆ ಎದ್ದು ಎಷ್ಟು ಕಷ್ಟಪಡಬೇಕು? ನಿನಗೇನು ಹೃದಯವಂತಿಕೆಯೇ ಇಲ್ಲವೇ? ಅರಿಯದ ಆ ಅಬಲೆಯನ್ನು ಇಷ್ಟು ಕಷ್ಟಕ್ಕೆ ಈಡುಮಾಡುವುದು ನಿನಗೆ ಸರಿಯೇ?" ಎಂದು ಗದರಿಸಿ ಕೇಳಿದರು. ನಾನು ಮುಗುಳು ನಗೆ ನಗುತ್ತಾ "ಸ್ವಾಮೀಜಿ, ನೀವು ಕಾಫಿ ಕುಡಿಯುವವರಲ್ಲ ಆದ್ದರಿಂದ ಕಾಫಿ ಕುಡಿಯುವವರ ಮನೋವೇದನೆ ಎಷ್ಟೆಂಬುದನ್ನು, ಹೊತ್ತಿಗೆ ಸರಿಯಾಗಿ ಸಿಗದಿದ್ದರೆ, ಮನೋವೇದನೆ ಎಷ್ಟೆಂಬುದನ್ನು ನೀವು ಅರ್ಥಮಾಡಿಕೊಳ್ಳಲಾರಿರಿ. ನಾನು ಕಳೆದ ಐವತ್ತು ವರ್ಷಗಳಿಂದ ಈ ಅಭ್ಯಾಸವನ್ನು ಮಾಡಿಕೊಂಡು

ಬಂದಿರೂದರಿಂದ ಅದನ್ನು ಸುಲಭವಾಗಿಯೇ ಅರ್ಥೈಯಿಸಬಲ್ಲೆ. ನೀವು ರೋಗಿಗಳನ್ನು ಪರೀಕ್ಷಿಸಿದೊಡನೆಯೇ ಅವರು ಮನೆಗೆ ಓಡಿಹೋಗುವಂತಿಲ್ಲ. ತಮ್ಮ ಮನೆಯವರನ್ನೋ, ಬಂಧುಗಳನ್ನೋ, ಗೆಳೆಯರನ್ನೋ ಕಟ್ಟಿಕೊಂಡು ಬಂದಿರುತ್ತಾರೆ. ಅವರ ಪರೀಕ್ಷೆ ಮುಗಿಯುವವರೆಗೆ ಅವರು ಕಾದು ಕುಳಿತಿರಬೇಕು. ಇದರ ಮೇಲೆ ಅವರ ಸರದಿ ಯಾವಾಗ ಬರುವುದೋ ತಮ್ಮನ್ನು ಮೊದಲು ಪರೀಕ್ಷಿಸಿ ಎಂದು ನಿಮ್ಮನ್ನು ಕೇಳೋದಕ್ಕುಂಟೆ. ಕಾಫಿಗಾಗಿ ಪರಿತಪಿಸುತ್ತಿರುವ ಆ ಜನರಿಗಾಗಿ ಒಂದು ಲೋಟ ಕಾಫಿ ಕೊಟ್ಟರೆ ಅವರಿಗೆ ಎಷ್ಟು ಸಂತೋಷವೋ! ಬಹುಶಃ ರೋಗ ನಿವಾರಣೆಗಿಂತಲೂ ಒಂದು ಲೋಟ ಕಾಫಿ ವಿತರಣೆಯಿಂದ ಅವರಿಗಾಗುವ ಸಂತೋಷ ಅತ್ಯಧಿಕವೆಂದು ತೋರುತ್ತದೆ" ಎಂದೆ. ಸ್ವಾಮೀಜಿ ತಮ್ಮ ಕೋಪವನ್ನು ಶಾಂತಗೊಳಿಸಿದವರಂತೆ "ಏನಾದರೂ ಹಾಳು ಮಾಡಿಕೊಂಡು ಹೋಗು" ಎಂದು ಹೇಳಿ ಸ್ನಾನಕ್ಕೆ ಹೊರಟುಹೋದರು. ಸ್ವಾಮೀಜಿ ನಮ್ಮ ಮನೆಯಲ್ಲಿ ಇದ್ದಷ್ಟು ದಿನವೂ ಈ ರಾಮಾಯಣ ನಡೆಯುತ್ತಲೇ ಇತ್ತು.

ಮೇಲಿನ ಸಂಗತಿ ನಡೆದ ಕೆಲವು ದಿನಗಳ ಮೇಲೆ ನಾನು ಮಲ್ಲಾಡಿಹಳ್ಳಿಗೆ ಹೋಗಬೇಕಾಯಿತು. ರಾಘವೇಂದ್ರ ಸ್ವಾಮೀಜಿಯವರಿಗೆ ಒಂದು ಸಂಭಾವನಾ ಗ್ರಂಥವನ್ನು ಅರ್ಪಿಸಬೇಕೆಂದು ಅವರ ಶಿಷ್ಯವರ್ಗ ನಿಶ್ಚಯಿಸಿತ್ತು. ಆ ಕಾರ್ಯಕ್ಕಾಗಿ ಒಂದು ಸಂಪಾದಕ ವರ್ಗವನ್ನು ನೇಮಿಸಿ ನನ್ನನ್ನು ಪ್ರಧಾನ ಸಂಪಾದಕನನ್ನಾಗಿ ಹೆಸರಿಸಿದರು. ಸ್ವಾಮೀಜಿಯವರ ಹೆಸರಿನಲ್ಲಿ ಲೇಖನಗಳನ್ನು ಕೂಡಿಸುವ ಕೆಲಸವೇನು ಕಷ್ಟವಾಗಲಿಲ್ಲ. ಆದರೆ ಸ್ವಾಮೀಜಿಯವರ ಜೀವನ ವೃತ್ತಾಂತ ಯಾರಿಗೂ ಗೊತ್ತಿಲ್ಲ. ನಾನು ಪಾತಾಳಗರಡಿಯನ್ನು ಹಾಕಿ ಇದನ್ನು ಶೋಧಿಸಬೇಕೆಂದು ನಿಶ್ಚಯಿಸಿದೆ. ಅದಕ್ಕಾಗಿ ಮಲ್ಲಾಡಿ ಹಳ್ಳಿಗೆ ಹೋಗಿ ಅಲ್ಲಿಯೇ ಟಿಕಾಣಿ ಹೂಡಿದೆ. ಸುಮಾರು ಮೂರು ತಿಂಗಳಿಗಿಂತಲೂ ಹೆಚ್ಚು ಕಾಲ ಅಲ್ಲಿಯೇ ಇದ್ದು ಸಮಯ ಸಿಕ್ಕಿದಾಗಲೆಲ್ಲಾ ಸ್ವಾಮೀಜಿಯವರನ್ನು ಸಂಧಿಸಿ ಪ್ರಶ್ನೆಗಳ ಸುರಿಮಳೆಯನ್ನು ಸುರಿಸಿ, ಅವರಿಂದ ಉತ್ತರವನ್ನು ಸಂಗ್ರಹಿಸತೊಡಗಿದೆ. ಇವನು ಜೀವನ ಚರಿತ್ರೆಯನ್ನು ಸಂಗ್ರಹಿಸುತ್ತಿರುವನೆಂಬ ಸಂದೇಹವು ಸ್ವಲ್ಪವೂ ಬರದಂತೆ ನಾನು ಪ್ರಶ್ನಿಸುತ್ತಿದ್ದೆ. ಮೂರು ತಿಂಗಳಿನಲ್ಲಿ ನನ್ನ ಸಂಗ್ರಹ ಕಾರ್ಯ ಮುಗಿಯಿತು. ಸಂಭಾವನಾ ಗ್ರಂಥ ಮೈಸೂರಿನಲ್ಲಿ ಅಚ್ಚಾಗಬೇಕಾಗಿತ್ತು. ಆದ್ದರಿಂದ ನಾನು ಗುರುತು ಹಾಕಿಕೊಂಡಿದ್ದ ಸ್ವಾಮಿಗಳ ಜೀವನದ ಕಾಗದಗಳೊಡನೆ ಮೈಸೂರಿಗೆ ಹಿಂದಿರುಗಲು ಸಿದ್ಧನಾಗಿ ಸ್ವಾಮೀಜಿಯವರಿಂದ ಬೀಳ್ಕೊಡಲು ಅವರ ಬಳಿ ಹೋಗಿ "ನಾನು ಹೋಗಿ ಬರುತ್ತೇನೆ" ಎಂದು ಅವರ ಪಾದ ಮುಟ್ಟಿ, ನಮಸ್ಕರಿಸಹೊರಟೆ ನಾನು ಬಾಗುತ್ತಿದ್ದಂತೆಯೇ ಅವರು ನನ್ನನ್ನು ಎತ್ತಿ ಹಿಡಿದು" ಪ್ರೊಫೆಸರ್ ಸಾಹೇಬರೇ ನನಗೊಂದು ವರಕೊಟ್ಟು ಆಮೇಲೆ ನಮಸ್ಕರಿಸಿ, ಆ ವರವನ್ನು ನನಗಾಗಿಯಾಗಲೀ ನಿಮಗಾಗಿಯಾಗಲೀ ನಾನು ಕೇಳುತ್ತಿಲ್ಲ. ಸುತ್ತು-ಮುತ್ತಿನ ಹತ್ತು ಜನಕ್ಕೆ ನೀವು ಉಪಕಾರಿಯಾಗಿ ಬಾಳುತ್ತಿದ್ದೀರಿ. ಆ ಹತ್ತು ಜನಕ್ಕಾಗಿ ನಿಮ್ಮನ್ನು ಕೇಳುತ್ತಿದ್ದೇನೆ" ಎಂದರು. ಅವರ ಮಾತನ್ನು ಕೇಳಿ ನನಗೆ ಆಶ್ಚರ್ಯವಾಯಿತು. ನಾನು ಗಂಭೀರ ಧ್ವನಿಯಲ್ಲಿ

“ಏನು ಸ್ವಾಮೀಜಿ ಅದು ? ನಿಮ್ಮ ಮಾತನ್ನು ಎಂದಿಗಾದರೂ ಮೀರಿಯೇನೆ ? ನಿಮ್ಮ ಅಪ್ಪಣೆಯನ್ನು ಶಿರಸಾವಹಿಸಿ ನಡೆಸುತ್ತೇನೆ. ಅಪ್ಪಣೆಯಾಗಲೀ” ಎಂದೆ. ಅವರು ನಗುತ್ತಾ “ಕೊಟ್ಟ ಮಾತಿಗೆ ತಪ್ಪುವುದಿಲ್ಲವಲ್ಲಾ ? ಕೈಮೇಲೆ ಕೈಹಾಕಿ ಮಾತು ಕೊಡಿ” ಎಂದರು. ನಾನು ಮತ್ತಷ್ಟು ಗಂಭೀರವಾಗಿ “ನನ್ನ ಮಾತಿನಲ್ಲಿ ನಂಬಿಕೆಯಿಲ್ಲವೇ ಸ್ವಾಮೀಜಿ. ಇಗೋ ಕೈಮೇಲೆ ಕೈಹಾಕಿ ಮಾತು ಕೊಡುತ್ತಿದ್ದೇನೆ. ನೀವು ಹೇಳಿದುದನ್ನು ನಡೆಸುತ್ತೇನೆ” ಎಂದೆ. ಆಗ ಅವರು ಗಟ್ಟಿಯಾಗಿ ನಗುತ್ತಾ “ನಾಳೆಯಿಂದ ನೀವು ಕಾಫಿ ಕುಡಿಯಕೂಡದು” ಎಂದರು.

ನಾನು ಮಲ್ಲಾಡಿಹಳ್ಳಿಯಲ್ಲಿ ಇದ್ದಷ್ಟು ದಿನವೂ ಅವರು ಅಡಿಗೆಯ ಮನೆಗೆ ಅಪ್ಪಣೆ ಮಾಡಿದ್ದರು—ಆತ ಎಷ್ಟು ಸಲ ಕೇಳಿದರೂ ಕಾಫಿ ಕೊಡಿ ಎಂದು. ಊರು ಬಿಟ್ಟು ಹೋಗುವಾಗ ಇನ್ನು ಮುಂದೆ ಕಾಫಿ ಕುಡಿಯಲೇಬೇಡ ಎಂದರು. ನಾನು ಕೇಳಿದೆ. “ಸ್ವಾಮೀಜಿ, ಅದಕ್ಕಿಂತಲೂ ಕೆಟ್ಟದಾದ ಕೃತ್ಯವನ್ನು ಬಿಡೆಂದು ಏಕೆ ಹೇಳಲಿಲ್ಲ” ಎಂದೆ. ಅವರು ಹೇಳಿದರು “ಅದು ಕಾಫಿಯಷ್ಟು ಕೆಟ್ಟದಲ್ಲ. ಅದು ಕೇವಲ ಹೊಲಸು ಅಭ್ಯಾಸ ಒಂದಲ್ಲ ಒಂದು ದಿನ ನೀವೇ ಅದನ್ನು ಬಿಡುತ್ತೀರಿ. ಆದರೆ ಕಾಫಿ ಹೊಲಸು ಅಭ್ಯಾಸವಲ್ಲದಿದ್ದರೂ ಅದಕ್ಕಿಂತ ಕೆಟ್ಟದು. ನಿಮಗೆ ಸಕ್ಕರೆ ಕಾಯಿಲೆ ಬರುತ್ತದೆ. ಆ ಸಮಯದಲ್ಲಿ ಕಾಫಿಯ ಚಟವಿದ್ದರೆ ನೀವು ಬದುಕುವುದು ನಿಜವೇ ಅದಕ್ಕಾಗಿಯೇ ಅದನ್ನು ಬಿಡಬೇಕೆಂದೆ” ಎಂದರು. ನಾನು ಅಂದು ರಾತ್ರಿ ರೈಲು ಹತ್ತಿ ಹಾಸನಕ್ಕೆ ಬರುವ ವೇಳೆಗೆ ಬೆಳಕು ಹರಿಯಿತು. ಮೊದಲ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದ ನನ್ನ ಕಿವಿಗೆ ಕಾಫಿ, ಕಾಫಿ ಎಂಬ ಶಬ್ದ ಕೇಳಿತು. ಒಡನೆಯೇ ಮನಸ್ಸು ಪ್ರಫುಲ್ಲಗೊಂಡಿತು–ಒಡನೆಯೇ ಬಾಗಿಲನ್ನು ತೆಗೆದು ಕಾಫಿಯನ್ನು ಕುಡಿಯಬೇಕೆಂದುಕೊಂಡೆ. ಅಷ್ಟರಲ್ಲಿ ಸ್ವಾಮೀಜಿಯವರಿಗೆ ಕೊಟ್ಟ ಮಾತು ಜ್ಞಾಪಕಕ್ಕೆ ಬಂತು. ಜೀವವನ್ನು ಭದ್ರವಾಗಿ ಹಿಡಿದುಕೊಂಡು ಮೈಸೂರಿಗೆ ಬಂದೆ. ಬೆಳಗ್ಗೆ ೧೧ ಗಂಟೆಯಾಗಿತ್ತು ಮನೆ ಸೇರಿದಾಗ. ಸ್ನಾನ ಮಾಡಬೇಕೆಂದು ಮನೆಯ ಯಜಮಾನಿಗೆ ತಿಳಿಸಿದೆ. ದಿನನಿತ್ಯದ ನನ್ನ ಚಟವನ್ನು ಬಲ್ಲ ಆ ಹೆಣ್ಣು ಒಂದು ನಿಮಿಷಕ್ಕೆ ಕಾಫಿ ಮಾಡಿಕೊಡುತ್ತೇನೆ ಎಂದಳು. ನಾನು ಬೇಡ ಎಂದೆ. ಅವಳು ನನ್ನ ಮಾತನ್ನು ನಂಬುವುದು ಸಾಧ್ಯವೇ ಇರಲಿಲ್ಲ. “ಏಕೆ ? ಕೋಪವೇ ?” ಎಂದಳು. ನಾನು ಅಸಹನೆಯಿಂದ “ಕೋಪವಲ್ಲ, ಶಾಪ” ಎಂದು ಹೇಳಿ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ನಾನು ಕೊಟ್ಟಿದ್ದ ಮಾತನ್ನು ಅವಳಿಗೆ ತಿಳಿಸಿದೆ. ಅವಳಿಗೆ ಸಂತೋಷವಾಯಿತೋ, ದುಃಖವಾಯಿತೋ, ಅಸಂತೃಪ್ತಿಯಾಯಿತೋ ದೇವರೇ ಬಲ್ಲ. ಇಂದಿಗೂ ಅವಳೇನೋ ನಾಲ್ಕು ಸಲ ಕಾಫಿ ಕುಡಿಯುತ್ತಾಳೆ. ನಾನು ಅಂದಿನಿಂದ ಇಂದಿನವರೆಗೆ ಕಾಫಿಯನ್ನು ಮುಟ್ಟಿಲ್ಲ. ಈ ಜನ್ಮಕ್ಕೆ ಅದು ಬಿಟ್ಟುಹೋಯಿತು.

ವ್ಯಾಯಾಮ ಮೇಷ್ಟ್ರು

ಆರ್. ವಿ. ಸದಾಶಿವಮೂರ್ತಿ

ನಾನು ೧೯೪೩-೪೪ರಲ್ಲಿ ಅಮೃತಾಪುರಕ್ಕೆ ಸ್ಟೇಷನ್ ಮಾಸ್ಟರ್ ಆಗಿ ಹೋದೆ. ಅಮೃತಾಪುರ ಸ್ಟೇಷನ್ ಚಿಕ್ಕಜಾಜೂರು—ಚಿತ್ರದುರ್ಗ ಲೈನಿನಲ್ಲಿ ಒಂದು ಸಣ್ಣ ರೈಲ್ವೆ ಸ್ಟೇಷನ್. ಕೆಲಸ ಅಲ್ಲಿ ಬಹಳ ಕಡಿಮೆ ಆದ್ದರಿಂದ ನಾನು ಪುರುಸೊತ್ತು ಇದ್ದಾಗಲೆಲ್ಲಾ ಅಲ್ಲೇ ಹತ್ತಿರವಲ್ಲಿದ್ದ ಹಳ್ಳಿಗಳಿಗೆ ಹೋಗಿ ಅಲ್ಲಿಯ ಗ್ರಾಮಸ್ಥರ ಪರಿಚಯ ಮಾಡಿಕೊಳ್ಳುವುದು ನನ್ನ ಇಷ್ಟವಾದ ಹವ್ಯಾಸಗಳಲ್ಲೊಂದು. ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನಗಳಲ್ಲಿರುವ ಒಳಜಗಳ, ನೈರ್ಮಲ್ಯದ ಬಗ್ಗೆ ಅವರಿಗೆ ತಿಳುವಳಿಕೆ ನೀಡಲು ನಾನು ಪ್ರಯತ್ನಿಸುತ್ತಿದ್ದೆ.

"ತೊಡರನಾಳು" ಅಲ್ಲಿಗೆ ಸಮೀಪದ ಒಂದು ಗ್ರಾಮ. ಅಲ್ಲಿಯ ಗ್ರಾಮಸ್ಥರೆಲ್ಲರೂ ನನಗೆ ತುಂಬಾ ಬೇಕಾದವರು. ಆದರೆ ಅವರಲ್ಲಿ 'ಶ್ರೀಮಂತರ ಗುಂಪು' 'ಬಡವರ ಗುಂಪು' ಎಂದಾಗಿ ಒಬ್ಬರಿಗೊಬ್ಬರಿಗೆ ವಿಪರೀತ ಜಗಳವಿತ್ತು. ಅವರನ್ನು ತಿದ್ದುವುದಕ್ಕೆ ನನಗೆ ಅವಕಾಶ ಸಿಕ್ಕಾಗಲೆಲ್ಲಾ ಪ್ರಯತ್ನಿಸುತ್ತಿದ್ದೆ ಆದರೆ ಅದು 'ನಾಯಿಬಾಲ ಡೊಂಕು' ಎಂಬಂತೇ ಆಗಿತ್ತು. ಒಂದು ದಿನ ರಾತ್ರಿ ಸುಮಾರು ೧೨ ಘಂಟೆ ಹೊತ್ತಿನಲ್ಲಿ ತೊಡರನಾಳು ಗೌಡರು ಒಂದು ಎತ್ತಿನ ಗಾಡಿ ಕಳಿಸಿ, ನನ್ನನ್ನು ಕೂಡಲೆ ಕರೆದುಕೊಂಡು ಬರಲು ಆಳನ್ನು ಕಳಿಸಿದ್ದರು. 'ಏನು ವಿಷಯ ?' ಎಂದು ನಾನು ಗಾಡಿಯವನನ್ನು ಕೇಳಿದೆ. ಅವನು 'ಏನು ಹೇಳಲಿ ಸ್ವಾಮಿಯವರೇ, ಊರಿನ ಜನರೆಲ್ಲ ಮಚ್ಚುಕೋಲು ಹಿಡಿದುಕೊಂಡು ಹೊಡೆದಾಡುವ ಸಲುವಾಗಿ ಗುಂಪು ಸೇರಿದ್ದಾರೆ. ಕಾರಣ ಏನೋ ಗೊತ್ತಿಲ್ಲ. ಹೊಡೆದಾಟ ನಡೆದರೆ ಖಂಡಿತವಾಗಿ ಜನರ ಹೆಣಗಳು ಉರುಳಾಡುವ ಸ್ಥಿತಿಯಲ್ಲಿದೆ. ಅವನ್ನು ತಡೆಯುವ ಸಲುವಾಗಿಯೋ ಏನೋ ಗೌಡರು ನನ್ನನ್ನು ಇಲ್ಲಿಗೆ ಗಾಡಿಯಲ್ಲಿ ಕಳಿಸಿ, ತಮ್ಮನ್ನು ಈ ಕೂಡಲೇ ಕರೆದುಕೊಂಡು ಬರಲು ತಿಳಿಸಿದ್ದಾರೆ. ದಯವಿಟ್ಟು ತಾವು ಬನ್ನಿ' ಎಂದು ಅವನು ಕೇಳಿಕೊಂಡ. ನನಗೆ ಗಾಬರಿಯಾಗಿ, ಉಟ್ಟಬಟ್ಟೆಯಲ್ಲೇ 'ನಡೆ ಹೋಗೋಣ' ಎಂದು ಹೇಳಿ ಅಲ್ಲಿಗೆ ಹೊರಟೆ.

ಊರಿನ ಗಂಡಸರೆಲ್ಲಾ ಸೇರಿದ್ದಾರೆ. ದೊಡ್ಡ ಗುಂಪು ಎದುರಿಗೆ ಕಣ್ಣಿಗೆ ಕಾಣುತ್ತಿದೆ. ಸಿಕ್ಕಾಪಟ್ಟೆ ಎಲ್ಲರೂ ಕೂಗಾಡುತ್ತಿದ್ದಾರೆ. ಎಲ್ಲರ ಕೈಯಲ್ಲೂ ಕೋಲು ಮಚ್ಚು, ಮೊದಲಾದ ಆಯುಧಗಳು ವಿಜೃಂಭಿಸುತ್ತಿವೆ. ಬಹಳ ಗಂಭೀರ ಪರಿಸ್ಥಿತಿ. ನಾನು ಗಾಡಿಯಿಂದ ಇಳಿದು ನಿಧಾನವಾಗಿ ನಡೆಯುತ್ತಾ ಒಂದು ಮನೆಯ ಮುಂದಿನ ಜಗಲಿಯ ಮೇಲೆ ನಿಂತುಕೊಂಡೆ. ಸುತ್ತಲೂ ನನ್ನ ದೃಷ್ಟಿಯನ್ನು ಹರಿಸಿದೆ. ಆಗ ಅಲ್ಲಿದ್ದ ಕೆಲವರು 'ತಾರು ಮಾಸ್ತರು ಬಂದರು ತಾರು ಮಾಸ್ತರು ಬಂದರು'

(ಸ್ಟೇಷನ್ ಮಾಸ್ಟರ್‌ರಿಗೆ ಅಲ್ಲಿಯ ಹಳ್ಳಿಯ ಜನಗಳು ತಾರು ಮಾಸ್ತರು ಎಂದೇ ಕರೆಯುತ್ತಿದ್ದುದು.) ಎಂದು ಕೂಗಿಕೊಂಡರು. ತಕ್ಷಣ ಎಲ್ಲಕಡೆ ನಿಶ್ಶಬ್ದವಾಯಿತು. ನಾನು ಎತ್ತರದ ಧ್ವನಿಯಲ್ಲಿ ಗುಂಪಿನ ಎರಡು ಕಡೆಯವರನ್ನೂ ಉದ್ದೇಶಿಸಿ ಮಾತ ನಾಡಿ, ಚೆನ್ನಾಗಿ ಅವರನ್ನು ಬಯ್ದು, ಅವರಿಗೆ ಬುದ್ಧಿ ಹೇಳಿದೆ. "ಕಾರಣ ಏನೇ ಇರಲಿ, ನೀವು ಈ ರೀತಿ ಒಬ್ಬರ ಮೇಲೊಬ್ಬರು ಕಾದಾಡಲು ಮಚ್ಚುಕೋಲು ಹಿಡಿದುಕೊಂಡು ಬಂದಿರುವುದು ಖಂಡಿತ ಸರಿಯಲ್ಲ. ನಿಮಗೆ ನಾನು ಎಷ್ಟು ಸಲ ತಿಳಿಯ ಹೇಳಿಲ್ಲ. ನೀವೆಲ್ಲ ಆಗ 'ನಾವು ಖಂಡಿತ ಇನ್ನು ಮುಂದೆ ಹೀಗೆ ಜಗಳ ಮಾಡುವುದಿಲ್ಲ' ಎಂದು ನನಗೆ ಮಾತುಕೊಟ್ಟಿದ್ದು ಮರೆತು ಹೋಯಿತೆ? ನಿಮಗೆ ಸ್ವಲ್ಪವೂ ಬುದ್ಧಿಯಿಲ್ಲ. ನೀವು ಮನುಷ್ಯರಾಗಿದ್ದರೆ ನನ್ನ ಮಾತು ನಿಮ್ಮ ಅರಿವಿಗೆ ಬರುತ್ತಿತ್ತು. ನೀವು ಕೊಟ್ಟಮಾತು ಉಳಿಸಿಕೊಳ್ಳಿ. ವೃಥಾ ನಿಮ್ಮಲ್ಲಿ ಈ ಹಗೆ ಒಳ್ಳೆಯದಲ್ಲ" ಎಂದು ಮುಂತಾಗಿ ಅವರಿಗೆ ಮನದಟ್ಟಾಗುವ ಹಾಗೆ ತಿಳಿಸಿದೆ. ದೇವರ ದಯೆಯಿಂದ ಅವರುಗಳೆಲ್ಲರೂ ಕಾದಾಡುವುದು ಬಿಟ್ಟು, ಅಣ್ಣ-ತಮ್ಮಂದಿರ ಹಾಗೆ ಇರಲು ಒಪ್ಪಿಕೊಂಡರು.

ಆಗ ಒಬ್ಬ ಅಜ್ಜ "ಸ್ವಾಮಿ, ಹಿಂದೆ ವ್ಯಾಯಾಮ ಮೇಷ್ಟ್ರು ಇಂತಹ ಸಂದರ್ಭ ಗಳಲ್ಲಿ ತಿಳಿಹೇಳಿದ ಹಾಗೆ ಇವತ್ತು ನಿಮ್ಮಿಂದ ಈ ಜಗಳ ನಿಂತಿತು" ಅಂದ. ಆಗ ನಾನು "ವ್ಯಾಯಾಮ ಮೇಷ್ಟ್ರು! ಯಾರಪ್ಪಾ ಆ ಪುಣ್ಯಾತ್ಮ?" ಅಂತ ಕೇಳಿದೆ. ಆಗ ಆ ಅಜ್ಜ "ಸ್ವಾಮಿ, ಈಗ ಎರಡು ವರ್ಷದ ಹಿಂದೆ ಇಲ್ಲಿಗೆ ಒಬ್ಬ ಪುಣ್ಯಾತ್ಮ ಬಂದಿ ದ್ದರು. ಪ್ರತಿ ಹಳ್ಳಿಯಲ್ಲೂ ಅವರು ೪೦ ದಿನಗಳಿದ್ದು ವ್ಯಾಯಾಮದ ಕ್ಯಾಂಪು ಗಳನ್ನು ಮಾಡಿ, ಜನರಿಗೆ ವ್ಯಾಯಾಮವನ್ನು ಕಲಿಸಿ, ಔಷಧೋಪಚಾರನೀಡಿ, ಮುಂದಿನ ಹಳ್ಳಿಗೆ ಹೋಗುತ್ತಿದ್ದರು. ಜನಗಳಲ್ಲಿ ಶಿಸ್ತು ಹೇಗಿರಬೇಕು ಎಂಬುದನ್ನು ಅವರಿಂದ ಕಲ್ತುಕೊಳ್ಳಬೇಕು ಸ್ವಾಮಿ" ಅಂದ.

ಆಗ ನಾನು "ಅಯ್ಯಾ ಅಜ್ಜಾ, ಈಗ ಆ ವ್ಯಾಯಾಮ ಮೇಷ್ಟ್ರು ಎಲ್ಲಿ ದ್ದಾರೆ?" ಎಂದೆ. ಅದಕ್ಕೆ ಅವನು "ಇಲ್ಲೇ ಎಲ್ಲೋ ಹತ್ತಿರದ ಹಳ್ಳಿಯಲ್ಲಿರಬೇಕು. ನನಗೆ ಗೊತ್ತಿಲ್ಲ ಸ್ವಾಮಿ" ಎಂದ.

ಅಮೃತಾಪುರದಿಂದ ಹೊಳಲ್ಕೆರೆಗೆ ಸ್ಟೇಷನ್ ಮಾಸ್ಟರ್ ಆಗಿ ನಾನು ೧೯೪೪ ರಲ್ಲಿ ಬಂದೆ. ಒಂದು ದಿನ ನಾನು ಮತ್ತು ನನ್ನ ಸಹೋದ್ಯೋಗಿ ಬೆಳಗ್ಗಿನ ಕ್ಯಾಷ್-ಕ್ಲೋಸ್ ಮಾಡುತ್ತಾ ಕುಳಿತಿದ್ದೆವು. ಆಗ ಒಬ್ಬರು ಬಿಳಿ ಪೈಜಾಮ, ಜುಬ್ಬ, ಗಾಂಧಿಟೋಪಿ, ಮೇಲೊಂದು ಮಡಿಸಿದ ಬಿಳಿ ಶಾಲು ಹೊದ್ದುಕೊಂಡು ಒಳಗೆ ಬಂದರು. ಆಗ ನನ್ನ ಸಹೋದ್ಯೋಗಿ ಅವರನ್ನು ಕಂಡು "ನಮಸ್ಕಾರ, ಬನ್ನಿ" ಎಂದು ಹೇಳಿ, ನನ್ನ ಕಡೆ ತಿರುಗಿ "ನೋಡಿ ಮೂರ್ತಿ, ಇವರೇ ಮಲ್ಲಾಡಿಹಳ್ಳಿಯ ಆಶ್ರಮದಲ್ಲಿರುವ ವ್ಯಾಯಾಮ ಮೇಷ್ಟ್ರು-ರಾಘವೇಂದ್ರರಾಯರು" ಎಂದು ಪರಿಚಯಿ ಸಿದರು. ನನಗೆ ತಟ್ಟನೆ ಹಿಂದಿನ ಪ್ರಸಂಗ 'ತೊಡರನಾಳು' ಗ್ರಾಮಸ್ಥರಲ್ಲಿಯ ಜಗಳ ದಲ್ಲಾದ ಅನುಭವ ಜ್ಞಾಪಕಕ್ಕೆ ಬಂತು. ನಾನು ಅವರಿಗೆ ನಮಸ್ಕಾರ ಮಾಡಿ, "ತಮ್ಮ ವಿಚಾರ ಕೇಳಿದ್ದೆ. ಇವತ್ತು ತಮ್ಮನ್ನು ನೋಡಿ ತುಂಬಾ ಸಂತೋಷ

ವಾಯಿತು. ಬನ್ನಿ ಮನೆಗೆ ಹೋಗೋಣ" ಎಂದೆ. ಅವರು "ಅದಕ್ಕೆ ನಾನು ಬಂದಿದ್ದು. ಬನ್ನಿ ಹೋಗೋಣ" ಎಂದರು. ಮನೆಗೆ ಅವರನ್ನು ಕರೆದುಕೊಂಡು ಹೋಗಿ, ಅಲ್ಲಿ ಹಜಾರದಲ್ಲಿ ಹಾಕಿದ್ದ ಒಂದು ಉಯ್ಯಾಲೆ ಮಣೆಯ ಮೇಲೆ ಕುಳಿತು ಕೊಳ್ಳುವಂತೆ ವಿನಂತಿಸಿಕೊಂಡೆ. ನಾನು ನನ್ನ ಶ್ರೀಮತಿಯನ್ನು ಕರೆದು ಅವರ ಪರಿಚಯವನ್ನು ಅವಳಿಗೆ ಮಾಡಿಕೊಟ್ಟೆ. ನಂತರ ಅವರನ್ನು ಕುರಿತು "ತಾವು ಒಂದು ಲೋಟ ಹಾಲು ತೆಗೆದುಕೊಳ್ಳಬಹುದಲ್ಲ" ಎಂದು ಕೇಳಿದೆ. ಅದಕ್ಕೆ ಅವರು "ನಾನೆಲ್ಲೂ ಮಧ್ಯೆ ಏನನ್ನು ತೆಗೆದುಕೊಳ್ಳುವುದಿಲ್ಲ. ಆದರೆ ನಿಮ್ಮ ಮನೆಯಲ್ಲಿ ಇಂದು, ಈ ಕ್ಷಣ ಖಂಡಿತ ತೆಗೆದುಕೊಳ್ಳುವೆ, ಕೊಡಿ" ಎಂದು ಕೇಳಿದರು. ಹೀಗಾಯ್ತು ನನಗೆ ಆಗಿನ ವ್ಯಾಯಾಮ ಮೇಷ್ಟ್ರು–ಈಗಿನ ಮಲ್ಲಾಡಿಹಳ್ಳಿಯ ಗುರು ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರ—ಪರಿಚಯ. ಅವತ್ತಿನಿಂದ ಇವತ್ತಿನ ವರೆಗೂ ಏನು ಪುಣ್ಯವೋ ನನ್ನದು. ಸಾವಿರ್ಬ್ಬರೂ ಆಗಾಗ್ಗೆ ಭೇಟಿ ಆಗದಿದ್ದರೆ ಮನಸ್ಸಿಗೆ ಏನೇನೂ ನೆಮ್ಮದಿಯಿಲ್ಲ-ನಾನು ಅವರಲ್ಲಿಗೆ ಹೋಗಬೇಕು ಇಲ್ಲವೇ ಅವರು ಇಲ್ಲಿಗೆ ಬರಬೇಕು.

'ಮಲ್ಲಾಡಿಹಳ್ಳಿ' ಹೊಳಲ್ಕೆರೆಗೆ ಸುಮಾರು ೩ ಮೈಲಿ ದೂರದಲ್ಲಿದೆ. ಸ್ವಾಮೀಜಿ ಇಲ್ಲಿಗೆ ಬಂದು ತಮ್ಮ ವ್ಯಾಯಾಮದ ಕೊನೆಯ ಕ್ಯಾಂಪನ್ನು ಪೂರೈಸಿ, ಮುಂದೆ ಇಲ್ಲಿಂದ ಉತ್ತರ ದೇಶಕ್ಕೆ ಹೋಗುವ ಸಂಕಲ್ಪ ಮಾಡಿದ್ದರು. ಅವರು ಆಗ ಅಲ್ಲಿಯ ಸಾಹುಕಾರ್ ತಿಮ್ಮಪ್ಪನವರ ಬಣ್ಣದ ಮನೆಯಲ್ಲಿ ಇಳಿದು ಕೊಂಡಿದ್ದರು. ಒಂದು ದಿನ ಬೆಳಗಿನ ಜಾವ ಊರಿನವರೆಲ್ಲರೂ ಸೇರಿ, ಸ್ವಾಮೀಜಿಯವರನ್ನು ಹೇಗಾದರೂ ಮಾಡಿ ತಮ್ಮ ಹಳ್ಳಿಯಲ್ಲೇ ಉಳಿಸಿಕೊಳ್ಳುವುದಕ್ಕಾಗಿ ಮಾತುಕತೆಗಳನ್ನು ಆಡಿಕೊಂಡರು. ಆ ಊರಿನಲ್ಲಿದ್ದ ಸಂಕಜ್ಜಿಯು ತನ್ನ ಒಂದು ಸಣ್ಣ ಹೊಲವನ್ನು ಸ್ವಾಮೀಜಿಗೆ ದಾನಕೊಡಲು ಮುಂದೆ ಬಂದಳು. ಊರಿನ ಹಿರಿಯರು ಅವಳ ಕೈಲೊಂದು ತಟ್ಟೆಯನ್ನು ಕೊಟ್ಟು, ಅದರಲ್ಲಿ ೧೦೧ ರೂ. ಮತ್ತು ಅವಳದೇ ಆದ '೩ ಗೆಜ್ಜೆ ಅಡ್ಡಿಕೆ'ಯನ್ನು ಇರಿಸಿ, ಎಲ್ಲರೂ ಅವಳನ್ನು ಮುಂದಿಟ್ಟು ಕೊಂಡು ದೇವರ ಭಜನೆಯನ್ನು ಮಾಡಿಕೊಂಡು ಸ್ವಾಮೀಜಿಯವರು ಉಳಿದು ಕೊಂಡಿದ್ದ ಮನೆಯ ಬಾಗಿಲಿಗೆ ಹೋಗಿ ನಿಂತರು. ಸ್ವಾಮೀಜಿ ಮನೆ ಬಾಗಿಲು ತೆಗೆದು ಹೊರಬಂದಾಗ ಎಲ್ಲರೂ ಅವರಿಗೆ ಅಡ್ಡಬಿದ್ದು, ನಮಸ್ಕಾರ ಮಾಡಿ, "ಸ್ವಾಮಿ, ತಾವು ದಯವಿಟ್ಟು ಇದನ್ನು ಸ್ವೀಕರಿಸಿ, ತಾವು ಇಲ್ಲೇ ಇದ್ದು, ಅವಧೂತ ಪರಪ್ಪಸ್ವಾಮಿಗಳ ಮಠವನ್ನು ಕಟ್ಟಿಸಿಕೊಡಬೇಕು" ಎಂದು ಪ್ರಾರ್ಥಿಸಿದರು. ಆಗ ಶ್ರೀ ಶ್ರೀ ಸ್ವಾಮೀಜಿಯವರಿಗೆ ಗುರುಪ್ರೇರಣೆಯಾಗಿರಬೇಕೆನಿಸುತ್ತದೆ. ಅವರು, ಇವರನ್ನು ನೋಡಿ, "ನೋಡಿ, ನೀವು ಹೇಳಿದ ಕಾರ್ಯಮಾಡುವುದಕ್ಕೆ ಈ ದುಡ್ಡು ಸಾಲುವುದಿಲ್ಲ. ಅದೂ ಅಲ್ಲದೆ ನಾನು ಸುಮ್ಮನೆ ಕುಳಿತು ಕಾಲವ್ಯಯ ಮಾಡುವವನೂ ಅಲ್ಲ. ಆದ್ದರಿಂದ ಏಳು ವರ್ಷದ ಸಾಪ್ತಾಹಿಕ ಯೋಜನೆಯನ್ನು ಹಾಕಿಕೊಂಡು ಪ್ರಾರಂಭಿಸಬೇಕಾಗುತ್ತದೆ. ನೀವೆಲ್ಲರೂ ಅಶಿಸ್ತನ್ನು ಬಿಟ್ಟು ಪೂರ್ಣ ಸಹಕಾರ ಕೊಡಬೇಕಾಗುತ್ತೆ. ನೀವು ಇದಕ್ಕೆ ಒಪ್ಪುವುದಾದರೆ ನಾನು ಇಲ್ಲಿ ನಿಲ್ಲುತ್ತೇನೆ.

ಇದಕ್ಕೆ ನೀವೇನು ಹೇಳುತ್ತೀರಾ ?" ಎಂದರು. ಎಲ್ಲರೂ ಸ್ವಾಮೀಜಿಯವರ ಮಾತಿಗೆ ಒಪ್ಪಿಕೊಂಡರು. ಇದಾದ ನಂತರ ಇವರೆಲ್ಲರೂ ತಮ್ಮ ಮಾತಿಗೆ ಒಪ್ಪಿಕೊಂಡಮೇಲೆ ಸ್ವಾಮೀಜಿಯವರು ಮಲ್ಲಾಡಿಹಳ್ಳಿಯ "ಅನಾಥಸೇವಾಶ್ರಮ"ವನ್ನು ಪ್ರಾರಂಭಿಸುವ ಮನಸ್ಸು ಮಾಡಿದರು.

ನಾನು ಸ್ವಾಮೀಜಿಯವರನ್ನು ನನ್ನ ಮನೆಯಲ್ಲಿ ಭೇಟಿ ಮಾಡಿದ ನಂತರ, ಆಶ್ರಮಕ್ಕೆ ಅಂದಿನಿಂದ ಸುಮಾರು ೨-೩ ದಿನಕ್ಕೊಂದು ಬಾರಿ, ನಾನು ಹೊಳಲ್ಕೆರೆಯಲ್ಲಿರುವವರೆಗೂ, ಹೋಗಿ ಬರುತ್ತಿದ್ದೆ. ಆಗ ಅಲ್ಲಿ 'ಪರಪ್ಪಸ್ವಾಮಿಗಳ ಮಠ' ಮತ್ತು ಅದರ ಪಕ್ಕದಲ್ಲಿರುವ ಆಯುರ್ವೇದ ಆಸ್ಪತ್ರೆ ಮಾತ್ರ ಇತ್ತು. ಅಲ್ಲಿಂದೀಚೆಗೆ ಆಶ್ರಮ ಬೆಳೆದಿದ್ದು -'ಅಲ್ಲಾವುದ್ದೀನನ ಅದ್ಭುತದೀಪ'ದ ಕತೆ ಕೇಳಿದ್ದೀರಲ್ಲಾ -ಹಾಗೆ. ಆಗ ಆಶ್ರಮದಲ್ಲಿ ಅಲ್ಲಿಯ ಪ್ರೈಮರಿ ಸ್ಕೂಲ್ ವಿದ್ಯಾರ್ಥಿಗಳಿಗಾಗಿ ಒಂದು ಸಣ್ಣ ಹಾಸ್ಟೆಲ್. ಆ ವಿದ್ಯಾರ್ಥಿಗಳು ಮತ್ತು ಹಳ್ಳಿಯ ಯುವಕರಿಗೆ ವ್ಯಾಯಾಮ ಶಿಕ್ಷಣ ಮತ್ತು ಅವರಿಗಾಗಿ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಸ್ವಾಮೀಜಿಯವರ ಭಿಕ್ಷೆ. ಈ ಭಿಕ್ಷೆಯಿಂದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಊಟ-ವಸತಿ-ವಿದ್ಯಾರ್ಜನೆ ಎಲ್ಲವೂ ಉಚಿತವಾಗಿ ದೊರೆಯುತ್ತಿತ್ತು. ಸ್ವಾಮೀಜಿಯವರು ತಾವು ಹೇಳಿದಂತೆ ಏಳು ವರ್ಷದ ಸಾಪ್ತಾಹಿಕ ಯೋಜನೆಗನುಗುಣವಾಗಿ ನಡೆಯುತ್ತಿದ್ದರು.

ಪ್ರತಿ ವರ್ಷದಂತೆ ಏಳನೇ ವರ್ಷವೂ-ಶಿವರಾತ್ರಿಯಿಂದ ಪ್ರಾರಂಭ ಮಾಡಿ, ಏಳು ದಿವಸ ಸಪ್ತಾಹ. ಸಪ್ತಾಹಕ್ಕೆ ಹತ್ತಾರು ಸಾವಿರ ಜನ ಸೇರುತ್ತಿದ್ದರು. ಆ ಸಪ್ತಾಹ ಕಾರ್ಯಕ್ರಮದ ವರ್ಣನೆ ಮಾಡುವುದೇ ಒಂದು ದೊಡ್ಡ ಲೇಖನವಾಗುತ್ತದೆ. ಏಳನೇ ಸಪ್ತಾಹ-ಕೊನೆಯ ಸಪ್ತಾಹ ಮಾಡಿ, ಗುರುಪೂಜಾನಂತರ ಸಾರ್ವಜನಿಕರಿಗೆ ಒಂದು ಪ್ರಣಾಳಿಕೆ ಅರ್ಪಿಸಿ, ಸ್ವಾಮೀಜಿ ತಾವು ಮಾಡಿದ ಕರ್ತವ್ಯವೆಲ್ಲವನ್ನೂ ಅವರಿಗೆ ವಿವರಿಸಿ, ಅದುವರೆಗೆ ತಮ್ಮ ಮುಂದಾಳತ್ವದಲ್ಲಿ ಕಟ್ಟಿದ್ದ ಕಟ್ಟಡಗಳೂ ಮತ್ತು ತಮ್ಮ ಯೋಜನೆಗಳನ್ನು ವಿವರಿಸಿ, ಇವೆಲ್ಲವೂ ನಿಮ್ಮದು. ಮುಂದಿನ ಕೆಲಸ ನಿಮ್ಮ ಕರ್ತವ್ಯ. ನಾನು ಮುಂದೆ ಉತ್ತರದೇಶದ ಕಡೆಗೆ ಹೊರಡುತ್ತಿದ್ದೇನೆ- ಎಂದು ಹೇಳಿ ನಮಸ್ಕಾರ ಮಾಡಿ ಕೆಳಗೆ ನಿಂತುಕೊಂಡರು. ಸ್ವಲ್ಪ ಕಾಲ ಅಲ್ಲಿ ನೆರೆದಿದ್ದ ಜನಸಮೂಹಕ್ಕೆ ಏನೂ ಅರ್ಥವಾಗದೆ ಚಪ್ಪಾಳೆ ತಟ್ಟಿದರು. ಆನಂತರ ಅವರ ಮಾತಿನ ಅರ್ಥ ಮನಸ್ಸಿಗೆ ಬಂದು, ಹಾಹಾಕಾರ ಪ್ರಾರಂಭವಾಯಿತು. ಜನಗಳೆಲ್ಲರೂ ಖಂಡಿತವಾಗಿ ತಾವು ನಮ್ಮನ್ನು ಬಿಟ್ಟು ಹೋಗಕೂಡದು ಎಂದು ಕೂಗಲಾರಂಭಿಸಿದರು. ಅಲ್ಲಿದ್ದ ಪೈಲ್ವಾನ್ ಬಾಳಪ್ಪನಂತೂ, "ಅಜ್ಜ, ನೀವು ಈ ಹಳ್ಳಿ ಬಿಟ್ಟು ಹೋಗುವ ಹಾಗಿದ್ದರೆ, ನಾನು ಈ ಚಾಕುವಿನಿಂದ ನನ್ನೆದೆಗೆ ಇರಿದುಕೊಂಡು ಸಾಯುತ್ತೇನೆ. ನಂತರ ನನ್ನ ಎದೆಯ ಮೇಲೆ ನೀವು ನಡೆದುಕೊಂಡು ಹೋಗಿರಿ" ಎಂದು ಕಿರುಚಿಕೊಂಡ. ಇಷ್ಟೆಲ್ಲಾ ಗಲಾಟೆಯಾಗುತ್ತಿದ್ದರೂ, ಸ್ವಾಮೀಜಿ ನಿರ್ವಿಕಲ್ಪ ನಿಶ್ಚಿಂತರಾಗಿ ಕೈಕಟ್ಟಿಕೊಂಡು ಕಂಬಕ್ಕೆ ಒರಗಿ ನಿಂತಿದ್ದರು. ಈ ಉತ್ಸವಕ್ಕೆ ಬಂದಿದ್ದ ದೇವುಡು ನರಸಿಂಹ ಶಾಸ್ತ್ರಿಗಳೇ ಮುಂತಾದ ಮಹನೀಯರು ಸ್ವಾಮೀಜಿಯವರನ್ನು ಕುರಿತು,

"ಸ್ವಾಮೀಜಿ, ಒಬ್ಬ ಮಹಾನುಭಾವ ಸನ್ಯಾಸಿಯಾಗಲು ಬಯಸಿದರೆ, ಆ ಊರಿನವರೆಲ್ಲರೂ ಅವರನ್ನು ಊರ ಹೊರಗೆ ಕರೆದುಕೊಂಡು ಹೋಗಿ ದಂಡ, ಕಾಷಾಯಗಳನ್ನು ಒಪ್ಪಿಸಿ, ನಮಸ್ಕರಿಸಿ ಬರುವುದು ಪದ್ಧತಿ. ಆದರೆ ಇಂದು ಇಷ್ಟು ಜನ ದುಃಖಿತರಾಗಿ ತಮ್ಮನ್ನು ಇಲ್ಲೇ ಇದ್ದು ಉದ್ಧಾರ ಮಾಡಬೇಕೆಂದು ಬಯಸುತ್ತಿದ್ದಾರೆ. ತಾವು ದೊಡ್ಡ ಮನಸ್ಸು ಮಾಡಿ ಇಲ್ಲೇ ಇರಲು ಒಪ್ಪಿಕೊಳ್ಳಬೇಕು" ಎಂದು ಕೇಳಿಕೊಂಡರು. ಆಗ ಸ್ವಾಮೀಜಿ ಹೇಳಿದರು :" "ನಾನೊಂದು ತಪ್ಪು ಮಾಡಿದೆ ನಿಮಗ್ಯಾರಿಗೂ ಈ ವಿಷಯ ತಿಳಿಸದೆ, ರಾತ್ರಿಯೇ ನಾನು ಹೊರಟು ಹೋಗಿದ್ದರೆ ನೀವೇನು ಮಾಡುತ್ತಿದ್ದಿರಿ ? ನಾನಿಲ್ಲದಿರುವುದಕ್ಕಾಗಿ ಸ್ವಲ್ಪ ಹೊತ್ತು ನೀವು ಬೇಸರಪಡುತ್ತಿದ್ದಿರಿ. ಆಮೇಲೆ ನಿಮ್ಮ-ನಿಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿ ಬಿಡುತ್ತಿದ್ದಿರಿ. ನಾನು ನಿಮಗೆ ಮೊದಲೇ ತಿಳಿಸಿದ್ದು ಈ ದೊಡ್ಡ ಗಲಾಟೆಗೆ ಕಾರಣವಾಯಿತು. ಚಿಂತೆಯಿಲ್ಲ ; ಗುರುವಿನ ಇಚ್ಛೆ. ನಾನಿಲ್ಲೇ ಇದ್ದು ಮುಂದಿನ ಯೋಜನೆಗಳನ್ನು ಕಾರ್ಯಗತ ಮಾಡುವ ಕಾರ್ಯಕ್ಕೆ ಅನುವಾಗುತ್ತೀನಿ. ನೀವೆಲ್ಲರೂ ನನ್ನ ಯೋಜನೆಗಳಿಗೆ ಬೆಂಬಲವನ್ನು ನೀಡಿ ಎಂದರು."

ಹೀಗೆ ಶ್ರೀ ಶ್ರೀ ಸ್ವಾಮೀಜಿಯವರು ತಮ್ಮ ಮೊದಲ ೭ ವರ್ಷದ ಸಾಪ್ತಾಹಿಕ ಯೋಜನೆ ಮುಗಿಸಿದರೂ ಹಳ್ಳಿಯವರ ಪ್ರೇಮಕ್ಕೆ ಬಂಧಿತರಾಗಿ, ಉತ್ತರ ಪ್ರದೇಶಕ್ಕೆ ಹೋಗುವುದನ್ನು ನಿಲ್ಲಿಸಿ, ಅಂದಿನಿಂದ ಸ್ವಾಮೀಜಿ-ರಾಘವೇಂದ್ರ ಸ್ವಾಮೀಜಿ–ಎನಿಸಿಕೊಂಡು, ಆಶ್ರಮದ ಮುಂದಿನ ಅಭ್ಯುದಯಕ್ಕೆ ಕಾರಣಕರ್ತರಾದರು.

ವೈದ್ಯ

ಕನ್ನಡದಲ್ಲಿ ಪ್ರಾಚೀನ ಆಯುರ್ವೇದ ಗ್ರಂಥಗಳು

ವೈ. ಸಿ. ಭಾನುಮತಿ

"ಕಾಯಃ ಕಸ್ಯ ನ ವಲ್ಲಭಃ" ಎಂಬ ಮಾತಿದೆ. ದೇಹವು ಎಲ್ಲರಿಗೂ ಪ್ರಿಯ ವಾದುದು. ಪ್ರತಿಯೊಂದು ಜೀವಿಯೂ ತನ್ನ ದೇಹವನ್ನು ಸಂರಕ್ಷಿಸಲು ಪೋಷಿಸಲು ಶ್ರಮಿಸುತ್ತದೆ. ಏಕೆಂದರೆ 'ಜೀವನ್ ಭದ್ರಾಣಿ ಪಶ್ಯತಿ.' ಬದುಕಿದ್ದರೆ ಮಂಗಳ ವನ್ನು ಕಾಣಬಹುದೆಂಬ ಅಪೇಕ್ಷೆ ಎಲ್ಲರಲ್ಲಿಯೂ ಸಹಜವಾಗಿರುತ್ತದೆ. ಜೀವಿಯೊಂದು ತನ್ನ ದೇಹವನ್ನು ರಕ್ಷಿಸುವ ಹಾದಿಯಲ್ಲಿ ಹಲವಾರು ರೋಗರುಜಿನಗಳನ್ನು ಎದುರಿ ಸುತ್ತದೆ ರೋಗಗಳನ್ನು ಹತ್ತಿಕ್ಕಿ ಬದುಕಬೇಕೆಂಬ ಛಲದಲ್ಲಿ ಮಾನವನ ಹೋರಾಟ ಆರಂಭವಾಗುತ್ತದೆ. ರೋಗಗಳು ಮಾನವನಷ್ಟೇ ಪ್ರಾಚೀನ. ಮೊದಮೊದಲು ಆದಿಮಾನವ ಕಾಡಿನಲ್ಲಿ ಸಿಕ್ಕುತ್ತಿದ್ದ ಕಂದಮೂಲಗಳನ್ನು ಪ್ರಾಣಿಗಳ ಮಾಂಸವನ್ನು ತಿಂದು ಜೀವಿಸುತ್ತಿದ್ದ. ಈ ತಿನ್ನುವಿಕೆಯಲ್ಲಿ ಕೆಲವು ಪ್ರಾಣಿಯ ಮಾಂಸ ಅಥವಾ ಕೆಲವು ಸಸ್ಯಾಹಾರಗಳು ಆತನ ಸ್ವಾಸ್ಥ್ಯಕ್ಕೆ ಒಗ್ಗಲಿಲ್ಲ. ಅಂಥ ಹೊಂದಿಕೆಯಾಗದ ಆಹಾರವನ್ನು ತ್ಯಜಿಸಿದ. ಒಗ್ಗಿದ ಆಹಾರವನ್ನು ಸ್ವೀಕರಿಸಿದ. ಈ ಸ್ವೀಕರಣೆ ನಿರಾ ಕರಣೆಯ ಕ್ರಿಯೆಯಲ್ಲಿಯೆ ಆರೋಗ್ಯದ ಪರಿಕಲ್ಪನೆ, ಪಥ್ಯ ಅಪಥ್ಯಗಳ ತಿಳಿವಳಿಕೆ ಮೂಡಿತೆನ್ನಬಹುದು. ಆದಿಮಾನವ ಬೆಂಕಿ ಹಚ್ಚುವುದನ್ನು ಅರಿತುಕೊಂಡಂತೆ, ಲೋಹವ ಬಳಕೆಯನ್ನು ಕಲಿತುಕೊಂಡಂತೆ, ರೋಗಗಳಿಗೆ ಔಷಧವನ್ನೂ ಕಂಡು ಕೊಂಡ. ಪ್ರಕೃತಿಯ ಮಡಿಲಲ್ಲಿ ಬೆಳೆದ ಮಾನವನು ಪ್ರಾಣಿಗಳ ಚಲನವಲನವನ್ನೂ ಪ್ರಕೃತಿಯ ಹತ್ತು ಹಲವು ವ್ಯಾಪಾರಗಳನ್ನೂ ತೆರೆದ ಕಣ್ಣುಗಳಿಂದ ನೋಡಿದಾಗ ವೈದ್ಯದ ಆವಿರ್ಭಾವವಾಯಿತೆನ್ನಬಹುದು. ಇದಕ್ಕೆ ನಿದರ್ಶನವಾಗಿ ಹಾವು ಮುಂಗುಸಿ ಕಥೆಯನ್ನು ಪರಿಭಾವಿಸಬಹುದು. ಹಾವು ಮುಂಗುಸಿ ಜಗಳದಲ್ಲಿ ಹಾವನ್ನು ಕಚ್ಚಿ ಸಾಯಿಸುವ ಮುಂಗುಸಿ ಆಕೂಡಲೇ ಓಡಿಹೋಗಿ ಯಾವುದೋ ಒಂದು ಬಳ್ಳಿಯನ್ನು ತಿನ್ನುತ್ತದೆ ಎಂಬ ಮಾತಿದೆ. ಇಂಥ ಘಟನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ ತೀಕ್ಷ್ಣ ಬುದ್ಧಿಯ ಮನುಷ್ಯ ಹಾವು ಕಚ್ಚಿದಕ್ಕೆ ಔಷಧವನ್ನು ತಿಳಿದುಕೊಂಡ. ಹೀಗೆ ಒಂದೊಂದು ರೋಗಕ್ಕೂ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಸುತ್ತಮುತ್ತ ನಡೆಯುತ್ತಿದ್ದ ವೈವಿಧ್ಯಮಯ ಘಟನೆಗಳ ಸೂಕ್ಷ್ಮಾವಲೋಕನ ಕಾರಣವಾಗಿರ ಬಹುದು.

ಜನಪದರ ನಡುವೆ ಇದ್ದ ವೈದ್ಯಕೀಯ ಸಂಗತಿಗಳನ್ನು ಹೆಚ್ಚು ಪ್ರಚುರಪಡಿಸಿ ದವರು ಅದಕ್ಕೊಂದು ಶಾಸ್ತ್ರಸ್ವರೂಪವನ್ನು ಕಲ್ಪಿಸಿದವರು ಮಹರ್ಷಿಗಳು. ಅನಂತರ ವೈದ್ಯಶಾಲೆಗಳು ರೂಪುಗೊಂಡವು. ಬಹು ಹಿಂದೆಯೆ ಆರೋಗ್ಯಗೃಹಗಳಿದ್ದುದಕ್ಕೆ ಮಂಗರಾಜ ನಿಘಂಟಿನಲ್ಲಿ ಬರುವ 'ಭೇಷಜನಿವಾಸ' ಎಂಬ ಶಬ್ದ ಸಾಕ್ಷಿಯಾಗಿದೆ.

ಪುರಾಣಗಳು ವಿಷ್ಣುವನ್ನು ಮೊದಲ ಧನ್ವಂತರಿ ಎಂದು ವರ್ಣಿಸುತ್ತವೆ. "ವೈದ್ಯೋನಾರಾಯಣೋ ಹರಿಃ" ಎನ್ನುವ ಮಾತು ಪ್ರಚಲಿತ. ಏಕೆಂದರೆ ನಮ್ಮ ಪ್ರಾಚೀನರು ದೇಹದಲ್ಲಿ ಕಂಡುಬರುವ ರೋಗರುಜಿನಗಳಿಗೆ ಪೂರ್ವಕೃತ ಕರ್ಮವೇ ಕಾರಣವೆಂದು ಭಾವಿಸಿದ್ದರು. ವಾತ ಪಿತ್ತ ಶ್ಲೇಷ್ಮಗಳೆನ್ನುವ ಮೂರು ದೋಷಗಳನ್ನು ಕಂಡುಕೊಂಡ ನಾರಾಯಣನು ಅನೇಕ ವೈದ್ಯಗ್ರಂಥಗಳನ್ನು ರಚಿಸಿದನೆಂದು ಪುರಾಣಕಾರರ ಅಭಿಮತ. ಅನಂತರ ನವಬ್ರಹ್ಮರೂ ವಸುಮುನಿಗಳ ವೈದ್ಯಶಾಸ್ತ್ರವನ್ನು ನಿರೂಪಿಸಿದರೆಂದು ಪುರಾಣಗಳು ಹೇಳುತ್ತವೆ.

ಇಂದು ಭಾರತದಲ್ಲಿ ಪ್ರಮುಖವಾಗಿ ಆಯುರ್ವೇದ, ಯುನಾನಿ, ಹೋಮಿಯೊಪತಿ, ಅಲೋಪತಿ ಎಂದು ನಾಲ್ಕು ವಿಧದ ಚಿಕಿತ್ಸೆಗಳು ಪ್ರಚಲಿತವಿವೆ. ಇವುಗಳಲ್ಲಿ ಆಯುರ್ವೇದ ವೈದ್ಯ ಪದ್ಧತಿ ಪ್ರಾಚೀನ ಹಾಗೂ ಆ ಕಾಲದಲ್ಲಿ ಪ್ರಖ್ಯಾತ.

ಆಲುದ್ವೇಡ ಸಮುಸ್ತ್ರೀತಿ ಗಿಂಭಿದೇ ಮುಡಿಪಿಸಾದೋ ವೇಜ್ಞೋ
ರೋಗಾದಂಕಾಭಿಹದಂ ಜಹಣರುಜಂ ಅದುರಂ ಕಣಇ

(ಸಮಸ್ತ ಆಯುರ್ವೇದವನ್ನು ತಿಳಿದವನೂ ಮತ್ತು ಚಿಕಿತ್ಸೆಯಲ್ಲಿ ನಿಪುಣ ಬುದ್ಧಿಯುಳ್ಳವನೂ ಆದ ವೈದ್ಯನು ದೊಡ್ಡ ಮತ್ತು ಅಲ್ಪವ್ಯಾಧಿಯಿಂದ ನರಳುತ್ತಿರುವ ರೋಗಿಯನ್ನು ನಿರೋಗಿಯಾಗಿ ಮಾಡುತ್ತಾನೆ.)

ಆಯುರ್ವೇದ ವೇದದಷ್ಟು ಪ್ರಾಚೀನ ಎಂಬ ನಂಬಿಕೆಯಿದೆ. ಈ ಕಾರಣದಿಂದ ಇದಕ್ಕೆ ಅಥರ್ವಣದ ಉಪವೇದ ಎಂಬ ವಿಶೇಷಣ. ಮತ್ತೊಂದು ರೀತಿಯ ಪರಂಪರಾನುಗತ ಹೇಳಿಕೆಯಂತೆ ಆಯುರ್ವೇದವನ್ನು ಪ್ರಜಾಪತಿಯಿಂದ ಇಂದ್ರ ಕಲಿತ. ಅವನಿಂದ ಭರದ್ವಾಜ ಋಷಿ ಆಯುರ್ವೇದವನ್ನು ತಿಳಿದುಕೊಂಡು ಪುನರ್ವಸು ಆತ್ರೇಯನಿಗೆ ಹೇಳಿಕೊಟ್ಟ. ಈತನಿಂದ ಅಗ್ನಿವೇಶ ಮೊದಲಾದ ಆರು ಮಂದಿ ಶಿಷ್ಯರು ಕಲಿತು ಈ ಶಾಸ್ತ್ರದ ಮೇಲೆ ಗ್ರಂಥಗಳನ್ನು ರಚಿಸಿದರೆಂದೂ ಅವು ಉಪಲಬ್ಧವಿಲ್ಲವೆಂದೂ ತಿಳಿದುಬರುತ್ತದೆ. ಅಗ್ನಿವೇಶನ ಗ್ರಂಥವನ್ನು ಆಧರಿಸಿ ಕ್ರಿ. ಪೂ. ಮೂರು ಅಥವಾ ಎರಡನೆಯ ಶತಮಾನದಲ್ಲಿದ್ದ ಚರಕಾಚಾರ್ಯನು ಆಯುರ್ವೇದ ಸಂಗತಿಗಳಿಗೆ ಶಾಸ್ತ್ರೀಯ ಚೌಕಟ್ಟು ನೀಡಿದ. ಐತಿಹಾಸಿಕವಾಗಿ ಈತನ ಕೃತಿಗೆ ಮಹತ್ವವಿದೆ. ಚರಕ, ಸುಶ್ರುತ ಮತ್ತು ವಾಗ್ಭಟರ ಕೃತಿಗಳು ಭಾರತದ ಪ್ರಾಚೀನ ಆಯುರ್ವೇದ ಗ್ರಂಥಗಳಲ್ಲಿ ಪ್ರಖ್ಯಾತವೆನಿಸಿವೆ.

ಕ್ರಿ. ಶ. ನಾಲ್ಕನೆಯ ಶತಮಾನದಲ್ಲಿದ್ದ ಸುಶ್ರುತನನ್ನು ಭಾರತೀಯ ಶಸ್ತ್ರವೈದ್ಯ ಪಿತಾಮಹ ಎನ್ನುತ್ತಾರೆ. ಈತ ಸುಶ್ರುತ ಸಂಹಿತೆಯಲ್ಲಿ ದ್ರವ್ಯಗಳ ರಸಾದಿಗಳು ದೋಷಭೇದ ಮೊದಲಾದ ಸಂಗತಿಯ ಜೊತೆಗೆ ಮೊಟ್ಟಮೊದಲಿಗೆ ಶಸ್ತ್ರಕ್ರಿಯೆಗೆ ಸಂಬಂಧಿಸಿದಂತೆ ಬಳಸಬಹುದಾದ ಸಾಧನಗಳು ಕ್ರಮಗಳನ್ನು ವಿವರಿಸಿ ಆಯುರ್ವೇದ ಪದ್ಧತಿಗೆ ನೂತನ ಆಯಾಮವನ್ನು ನೀಡಿದ. ಈತನ ಕೃತಿ ಎಂಟನೇ ಶತಮಾನದಲ್ಲೇ ಅರಬ್ಬಿ ಭಾಷೆಗೆ ಭಾಷಾಂತರವಾಯಿತೆಂದು ತಿಳಿದುಬರುತ್ತದೆ. ಸುಮಾರು ಇದೇ ಅವಧಿಯಲ್ಲಿದ್ದ ವಾಗ್ಭಟ ಅಷ್ಟಾಂಗ ಸಂಗ್ರಹ ಮತ್ತು ಅಷ್ಟಾಂಗ ಹೃದಯ ಎಂಬ ಕೃತಿಗಳನ್ನು ಬರೆದ.

ಭಾರತದಲ್ಲಿ ಪ್ರಚಲಿತವಿದ್ದ ದೇಶೀವೈದ್ಯ ಪದ್ಧತಿ ವಿದೇಶಿ ಪ್ರವಾಸಿಗರನ್ನು ಬೆರಗುಗೊಳಿಸಿತ್ತು. ಕ್ರಿ. ಪೂ. ೩೦೦ರಲ್ಲಿದ್ದ ಮೆಗಾಸ್ತನೀಸ್ ತನ್ನ ಪ್ರವಾಸ ಕಥನ ದಲ್ಲಿ ಭಾರತದಲ್ಲಿ ರೂಢಿಯಲ್ಲಿದ್ದ ಕೆಲವು ಔಷಧಗಳನ್ನು ದಾಖಲಿಸಿದ್ದಾನೆ. ವೈದ್ಯರಿಗೆ ಸಮಾಜದಲ್ಲಿ ಗಣ್ಯಸ್ಥಾನವಿದ್ದುದನ್ನು ಉಲ್ಲೇಖಿಸಿದ್ದಾನೆ: "ಹೈಲೋಬಿಗಳನ್ನು ಬಿಟ್ಟರೆ ಸಮಾಜದಲ್ಲಿ ಹೆಚ್ಚು ಸನ್ಮಾನಿತರೆಂದರೆ ಔಷಧಿಯನ್ನು ಕೊಡುವ ವೈದ್ಯರು. ಇವರು ಬಹಳ ಸರಳ ಜೀವಿಗಳು. ಬಯಲಿನಲ್ಲಿ ವಾಸ ಮಾಡುತ್ತಾರೆ. ಇವರು ಔಷಧಿಯ ಪ್ರಯೋಗದಿಂದ ಹೆಂಗಸಿನ ಬಂಜೆತನವನ್ನು ನೀಗಬಲ್ಲರು ಮತ್ತು ಗರ್ಭ ದೊಳಗಿನ ಕೂಸು ಹೆಣ್ಣೋ ಗಂಡೋ ಎಂದು ಹೇಳಬಲ್ಲರು."[1] ಈಗ ಆಧುನಿಕ ವಿಜ್ಞಾನದ ಸಹಾಯದಿಂದ ನಡೆಸುವ ವೀಕ್ಷಣೆಗಳನ್ನು ಕ್ರಿಸ್ತಪೂರ್ವದಲ್ಲಿಯೇ ನಮ್ಮ ವೈದ್ಯರು ಅರಿತಿದ್ದರೆಂಬುದು ಗಮನಾರ್ಹ

ಮೆಗಾಸ್ತನೀಸ್ ಹಸ್ತಿವೈದ್ಯದ ಬಗ್ಗೆ ಕೂಡ ಪ್ರಸ್ತಾಪಿಸಿದ್ದಾನೆ: "ಆನೆಗಳಿಗೆ ಅನೇಕ ರೋಗಗಳು ಬರುವುದುಂಟು ಅವುಗಳನ್ನು ಸುಲಭವಾಗಿ ವಾಸಿ ಮಾಡುವುದ ಕ್ಕಾಗುವುದಿಲ್ಲ. ಕಣ್ಣು ಬೇನೆಯಾದರೆ ಹಸುವಿನ ಹಾಲಿನಿಂದ ಕಣ್ಣು ತೊಳೆಯು ತ್ತಾರೆ. ಇಂತಹ ಕಾಯಿಲೆಗಳಿಗೆಲ್ಲ ಕಪ್ಪು ಬಣ್ಣವುಳ್ಳ ಒಂದು ತರಹ ಮದ್ಯದ ಔಷಧಿ ಯನ್ನು ಕೊಡುತ್ತಾರೆ. ಗಾಯಗಳಾದರೆ ಹೊಟ್ಟೆಗೆ ಬೆಣ್ಣೆಯನ್ನು ತಿನ್ನಿಸುತ್ತಾರೆ. ಬೆಣ್ಣೆಯನ್ನು ತಿನ್ನಿಸುವುದರಿಂದ ಶರೀರದದ ಕಬ್ಬಿಣದ ಅಂಶ ಜಾಸ್ತಿಯಾಗಿ ಗಾಯ ವಾಸಿಯಾಗುತ್ತದಂತೆ. ಹುಣ್ಣುಗಳಿಗೆ ಹಂದಿಯ ಮಾಂಸವನ್ನು ಬಿಸಿಮಾಡಿ ಶಾಖ ಕೊಡುತ್ತಾರೆ."[2]

ಪ್ರವಾಸಕ್ಕಾಗಿ ವ್ಯಾಪಾರಕ್ಕಾಗಿ ಬಂದ ವಿದೇಶಿಯರು ಕೆಲವೊಮ್ಮೆ ತಮ್ಮ ದೇಶದ ಔಷಧಗಳನ್ನು ಇಲ್ಲಿಯ ಜನರಿಗೆ ಹೇಳುತ್ತಿದ್ದರು. ದಿಯೋನಿಸಸನ ಸೈನಿಕರು ಭಾರತಕ್ಕೆ ಬಂದಾಗ ರೋಗಗ್ರಸ್ತರಾದರು. ಆಗ ಆತ ಔಷಧಿಯ ಗಿಡಗಳನ್ನು ಬೆಳೆ ಸುವ ಗುಟ್ಟನ್ನು ಸ್ಥಳೀಯರಿಗೆ ಹೇಳಿಕೊಟ್ಟನೆಂದು ಉಲ್ಲೇಖವಿದೆ[3]

ವೈದ್ಯವು ಬೇರೆ ಬೇರೆ ರೂಪಗಳಲ್ಲಿ ಜನಜೀವನದಲ್ಲಿ ಹಾಸು ಹೊಕ್ಕಾಗಿದೆ. ಜೈನ ಧರ್ಮೀಯರಿಗೆ ಭೇಷಜದಾನ ಸಂಸ್ಕೃತಿಯ ಒಂದು ಅಂಗ. ಉತ್ತರ ಪುರಾಣದ ಸನತ್ಕುಮಾರ ಚರಿತೆಯ ಭಾಗದಲ್ಲಿ ಭೇಷಜದಾನದ ಉಲ್ಲೇಖವಿದೆ. ಜೈನರು ಮತ್ತು ಬೌದ್ಧರು ಇದನ್ನು ಮತಾಂತರ ಕಾರ್ಯದಲ್ಲಿ ಬಳಸಿಕೊಂಡರು. ವ್ಯಾಧಿಪೀಡಿತನಾಗಿ ತೊಂದರೆಗೆ ಸಿಕ್ಕಿದ ವ್ಯಕ್ತಿಗೆ ಔಷಧ ನೀಡಿ ರೋಗ ನಿವಾರಿಸಿ ತಮ್ಮ ದೈವದ ಮಹಿಮೆ ಯಿಂದ ಗುಣವಾಯಿತೆಂದು ಧರ್ಮಬೋಧೆ ಮಾಡುತ್ತಿದ್ದರು. ಧರ್ಮ ಪ್ರಸಾರ ಮಾಡಲು ಬಂದ ವಿದೇಶಿ ಧರ್ಮೋಪದೇಶಕರು ಅನ್ಯಧರ್ಮೀಯರನ್ನು ತಮ್ಮ ಧರ್ಮ ದತ್ತ ಸೆಳೆಯಲು ಇದನ್ನು ತಂತ್ರವಾಗಿಸಿಕೊಂಡರು. ಹೀಗೆ ಧರ್ಮಪ್ರಸಾರಕರಿಂದ ಭಾರತೀಯರಿಗೆ ಅಲೋಪತಿ ವೈದ್ಯಶಾಸ್ತ್ರದ ಪರಿಚಯವಾಯಿತು.

---

1 ಪ್ರವಾಸಿ ಕಂಡ ಇಂಡಿಯಾ, ಪು. ೫೧. 2. ಅದೇ ಪುಟ. ೪೨. 3. ಅದೇ ಪು. ೪೪.

ರೋಗಗಳು ಆಹಾರಾದಿಗಳಲ್ಲಿ ಉಂಟಾಗುವ ಅಕ್ರಮಗಳಿಂದ ಸ್ಥೂಲಜಲವಾದ ದೋಷಗಳಿಂದ ಜನಿಸುತ್ತವೆಂಬುದು ಸಾಮಾನ್ಯ ತಿಳಿವಳಿಕೆ. ಜೊತೆಗೆ ಕಾಲಮಾನಗಳ ವೈಪರೀತ್ಯಕ್ಕನುಗುಣವಾಗಿ ದೈಹಿಕ ಚಟುವಟಿಕೆ ಭಿನ್ನಭಿನ್ನವಾಗಿರುತ್ತವೆ. ಈ ಕುರಿತು ಸಂಸ್ಕೃತದಲ್ಲಿ ಬಹು ಒಳ್ಳೆಯ ಮಾತಿದೆ :

ವೈದ್ಯಾನಾಂ ಶಾರದೀ ಮಾತಾ ಪಿತಾ ಚ ಕುಸುಮಾಕರಃ
ಯಮದಂಷ್ಟ್ರಾ ಸ್ವಸಾಪ್ರೋಕ್ತಾ ಹಿತಭುಕ್ ಮಿತಭುಕ್ ರಿಪುಃ

(ವೈದ್ಯರಿಗೆ ಶರತ್ಕಾಲ ತಾಯಿ, ವಸಂತಋತು ತಂದೆ, ಯಮನ ದವಡೆ ಸಹೋದರಿ, ಹಿತವಾಗಿ ಮಿತವಾಗಿ ಊಟಮಾಡುವವನು ಶತ್ರು.)

ಯಾವುದೇ ಒಂದು ಚಿಕಿತ್ಸೆಯು ಕಾಲ ದೇಶ ಧರ್ಮಗಳಿಗೆ ಅನುಗುಣವಾಗಿ ಬೇರೆ ಬೇರೆಯಾಗಿರುತ್ತವೆ. ವೈದಿಕ ಪಂಥದ ವೈದ್ಯರು ಗಿಡಮೂಲಿಕೆ ಮತ್ತು ಪ್ರಾಣಿ ದ್ರವ್ಯವನ್ನು ಚಿಕಿತ್ಸೆಯಲ್ಲಿ ಬಳಸಿದರು. ಶೈವ ಪಂಥದ ವೈದ್ಯರು ಪಾದರಸ ಲೋಹಾದಿಗಳನ್ನು ಹೆಚ್ಚಾಗಿ ಉಪಯೋಗಿಸಿದರು. ಜೈನ ವೈದ್ಯರು ಲೋಹ ಮತ್ತು ಗಿಡ ಮೂಲಿಕೆಗಳನ್ನು ಬಳಸಿ ಚಿಕಿತ್ಸೆ ನಡೆಸಿದರು. ಇಂಥ ಹಲವು ಕಾರಣಗಳಿಂದ ಆಯುರ್ವೇದದಲ್ಲಿ ಅನೇಕ ಕವಲುಗಳಿವೆ. ಆಯುರ್ವೇದ ಚಿಕಿತ್ಸೆಯಲ್ಲಿ ಶಲ್ಯ, ಶಾಲಾಕ್ಯ, ಕಾಯಚಿಕಿತ್ಸಾ, ಭೂತವಿದ್ಯಾ, ಕೌಮಾರಭೃತ್ಯ, ಅಗದ ತಂತ್ರ, ರಸಾಯನ ತಂತ್ರ ಮತ್ತು ವಾಜೀಕರಣ ತಂತ್ರವೆಂದು ಎಂಟು ವಿಧಗಳಿವೆ.

ಪ್ರಸ್ತುತ ಪ್ರಬಂಧದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ದೊರೆಯುವ ಆಯುರ್ವೇದ ಗ್ರಂಥಗಳ ಸಮೀಕ್ಷೆಯನ್ನು ಕೊಡಲು ಯತ್ನಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಆಯುರ್ವೇದ ಗ್ರಂಥಗಳೆಂದರೆ ಅದು ಕನ್ನಡ ಭಾಷೆಯ ಪ್ರಾಚೀನ ಆಯುರ್ವೇದ ಗ್ರಂಥಗಳ ಇತಿಹಾಸವೆ ಆಗಿದೆ ಇಲ್ಲಿ ಸುಮಾರು ೩೨ ಶೀರ್ಷಿಕೆಗಳು ೧೨೨ ಹಸ್ತಪ್ರತಿಗಳಿವೆ. ಈ ಮೊತ್ತದ ಆಯುರ್ವೇದ ಹಸ್ತಪ್ರತಿಗಳು ಬೇರೆ ಯಾವ ಹಸ್ತಪ್ರತಿ ಭಂಡಾರಗಳಲ್ಲೂ ಕಾಣಸಿಗುವುದಿಲ್ಲವೆಂಬುದು ಗಮನಾರ್ಹ.

ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯ ಪ್ರೇರಕವಾಗಿರುವಂತೆ ಆಯುರ್ವೇದ ಕೃತಿಗಳಿಗೂ ಸಂಸ್ಕೃತವೇ ಪ್ರೇರಣೆ ನೀಡಿದೆ. ಕನ್ನಡ ಆಯುರ್ವೇದ ಗ್ರಂಥಗಳಲ್ಲಿ ಎರಡು ಮುಖ್ಯ ವಿಭಾಗಗಳನ್ನು ಗಮನಿಸಬಹುದು. ಒಂದು ಜೈನ ಸಂಪ್ರದಾಯದ ಕೃತಿಗಳು. ಮತ್ತೊಂದು ವೈದಿಕ ಸಂಪ್ರದಾಯದ ಕೃತಿಗಳು. ಜೈನ ಕೃತಿಗಳು ಪೂಜ್ಯಪಾದನನ್ನು ಸ್ತುತಿಸಿದರೆ ವೈದಿಕ ಕೃತಿಗಳು ಸುಶ್ರುತ ಬಾಹಟರನ್ನು ಸ್ಮರಿಸುತ್ತವೆ. ಕನ್ನಡ ಆಯುರ್ವೇದ ಕೃತಿಗಳ ಇತಿಹಾಸ ಆರಂಭಗೊಳ್ಳುವುದೇ ಜೈನ ಗ್ರಂಥಗಳಿಂದ. ಈ ಗ್ರಂಥಗಳಿಗೆ ಪೂರ್ವದಲ್ಲಿಯೇ ಜೈನಶಾಸ್ತ್ರಜ್ಞರು ಆಯುರ್ವೇದ ವಿಷಯದಲ್ಲಿ ಆಳವಾಗಿ ಅಭ್ಯಸಿಸಿದ್ದರು. ಅಂಗರಚನಾಶಾಸ್ತ್ರ [anatomy]ದ ಬಗೆಗೆ ಕೂಡ ಅರಿತಿದ್ದರು. ಪ್ರಾಕೃತ ಭಾಷೆಯ ಮೂಲಾರಾಧನೆಯಲ್ಲಿ ಶರೀರದ ಅವಯವಗಳು ಮತ್ತು ಕಶ್ಮಲವನ್ನು ತಿಳಿಸುವಾಗ ಅಂಗರಚನೆಗೆ ಸಂಬಂಧಿಸಿದ ಕೆಲವು ಸಂಗತಿ

ಗಳನ್ನು ಗುರುತಿಸಬಹುದು. ಆ ಪ್ರಕಾರ ಶರೀರದಲ್ಲಿ ೩೦೦ ಮೂಳೆಗಳು, ೯೦೦ ನರ ನಾಡಿಗಳು, ೭೦೭ ರಕ್ತನಾಳಗಳು, ೫೦೦ ಮಾಂಸದ ಗಂಟುಗಳು, ೮೦ ಲಕ್ಷ ಕೋಟಿ ರೋಮ, ೧೬ ಕರುಳು, ಒಂದೊಂದು ಅಂಜಲಿ ಪ್ರಮಾಣ ಮಸ್ತಿಷ್ಕ ಮೇದಸ್ಸು ವೀರ್ಯಗಳಿವೆಯೆಂದು ತಿಳಿದುಬರುತ್ತದೆ. ಮನುಷ್ಯನಿಗೆ ಬರುವ ರೋಗಗಳನ್ನು ಇಂತಿಷ್ಟೇ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ ಆದರೆ ಮೂಲಾರಾಧನೆಯ ಅಂಕಿ ಅಂಶಗಳ ಪ್ರಕಾರ ಶರೀರದಲ್ಲಿ ೫ ಕೋಟಿ ೬೮ ಲಕ್ಷ ೯೭ ಸಾವಿರ ೫೮೪ ರೋಗಗಳಿವೆ. ಕಣ್ಣಿಗೆ ಸಂಬಂಧಿಸಿದಂತೆ ೯೬ ಬಗೆಯ ರೋಗಗಳನ್ನು ಗುರುತಿಸಿದೆ. ಹೀಗೆ ವೈದ್ಯಕ್ಕೆ ಸಂಬಂಧಿಸಿವ ಸಂಗತಿಗಳು ಅಲ್ಲಲ್ಲಿ ಮಿಂಚಿ ಮರೆಯಾದರೂ ಇದನ್ನು ಶಾಸ್ತ್ರದ ಚೌಕಟ್ಟಿಗೆ ಅಳವಡಿಸಿ ಬರೆದ ಕನ್ನಡ ಕೃತಿಗಳಲ್ಲಿ ಜಗದ್ದಳ ಸೋಮನಾಥ ಕವಿಯ ಕರ್ಣಾಟಕ ಕಲ್ಯಾಣಕಾರಕವೇ ಪ್ರಾಚೀನ. ಆದರೆ ಈತನಿಗೆ ಪೂರ್ವದಲ್ಲಿ ಸುಮಾರು ಕ್ರಿ. ಶ. ೧೧೦೦ರಲ್ಲಿ ಕೀರ್ತಿವರ್ಮ ಗೋವೈದ್ಯವನ್ನು ಕುರಿತು ಕೃತಿ ರಚಿಸಿದ ದನ್ನು ಮರೆಯುವಂತಿಲ್ಲ. ಕೀರ್ತಿವರ್ಮನ ತರುವಾಯ ಸು. ೧೧೫೦ರಲ್ಲಿದ್ದ ಚಾವುಂಡ ರಾಯ ಪ್ರತ್ಯೇಕವಾದ ವೈದ್ಯಗ್ರಂಥಕ್ಕೆ ಕೈಹಾಕದಿದ್ದರೂ 'ಲೋಕೋಪಕಾರ' ಎಂಬ ಆತನ ಕೃತಿಯಲ್ಲಿ ಎರಡು ಅಧಿಕಾರಗಳಲ್ಲಿ ವೈದ್ಯವಿಚಾರವನ್ನು ಬರೆದಿರುವುದು ಬಹುಮುಖ್ಯ.

ಚಾವುಂಡರಾಯನ ಲೋಕೋಪಕಾರ ಕಂದವೃತ್ತಗಳಲ್ಲಿ ರಚಿತವಾಗಿದೆ. ಇದರಲ್ಲಿ ನರವೈದ್ಯ ಸ್ತ್ರೀವೈದ್ಯ ಬಾಲವೈದ್ಯ ಗೋವೈದ್ಯ ಅಶ್ವವೈದ್ಯ ಗಜವೈದ್ಯ ವಿಷ ವೈದ್ಯಗಳನ್ನು ನಿರೂಪಿಸಿವೆ. ರೋಗಗಳು ವಾತ ಪಿತ್ತ ಕಫದಿಂದ ಹುಟ್ಟುತ್ತವೆಂಬುದು ಆಯುರ್ವೇದದ ಮೊದಲ ಪಾಠ. ಲೋಕೋಪಕಾರದಲ್ಲಿ ಕೂಡ ವಾತ ಪಿತ್ತ ಶ್ಲೇಷ್ಮ ಸ್ಥಾನಗಳನ್ನು ಗುರುತಿಸಿ ಇವುಗಳ ಉಲ್ಬಣದಿಂದ ಉಂಟಾಗುವ ರೋಗ ಹಾಗೂ ಚಿಕಿತ್ಸೆಯನ್ನು ವಿವರಿಸಿದೆ ಬಹುತೇಕ ರೋಗಗಳಿಗೆ ಸಂಗ್ರಹವಾಗಿ ಸ್ಪಷ್ಟವಾಗಿ ಔಷಧ ಹೇಳಿರುವುದುಈ ಕೃತಿಯ ವೈಶಿಷ್ಟ್ಯ. ಕಾಮಾಲೆ, ಪಾಂಡುರೋಗ, ವಿವಿಧಬಗೆಯ ಜ್ವರ, ಸೀವಳಿಗೆ, ಬಾಯಾರಿಕೆ, ಹಗಲು ನಿದ್ರೆ ಬರುವುದಕ್ಕೆ, ವಾಂತಿ, ಛರ್ದಿ, ವಿರೇಚನ, ಮದ್ದು, ಕ್ಷಯ, ಗಳಗಂಡ, ಆಯುಷ್ಯವರ್ಧನ, ಬುದ್ಧಿವರ್ಧನ, ನೆರೆತೆರೆ, ದುರ್ವಾಸನೆ, ವೀರ್ಯವೃದ್ಧಿ, ನರೆಕೂದಲು, ನೀಳಕೂದಲು, ಹೇನು, ತದ್ದು, ತಲೆಹುಣ್ಣು, ತಲೆನೋವು, ಕಿವಿನೋವು, ಕಿವಿಹುಣ್ಣು, ಕಣ್ಣುಬೇನೆ, ಇರುಳ್ಗಣ್ಣು, ನೀಲಿಗಣ್ಣು, ಹೂಗಣ್ಣು, ಮೂಗಿನಲ್ಲಿ ರಕ್ತ ಸುರಿಯುವುದು, ತುಟಿಯಹುಣ್ಣು, ಹಲ್ಲುನೋವು, ಬಂಗು, ಮೊಡವೆ, ನೆಗಡಿ, ಕೆಮ್ಮು, ಕೆಟ್ಟದನಿ, ಗಂಡಮಾಲೆ, ಕಿರುನಾಲಿಗೆ, ಮಾನಸ್ತಂಭರೋಗ, ಚಿಬ್ಬು, ಕಜ್ಜಿ, ತುರಿ, ರಕ್ತ ಮಂಡಲ, ಬಿಳಿಯ ತೊನ್ನು, ಕುಷ್ಠರೋಗ, ಕ್ರಿಮಿ, ಜಲಗರ, ಅತಿಸಾರ, ನೆತ್ತರ ಹೊಡೆ, ದೀಪನ, ವಿಷೂಚಿ, ಗುಲ್ಮರೋಗ, ಜಠರರೋಗ, ಉದರರೋಗ, ಗ್ರಂಥಿ, ಅಸ್ಥಿವೃದ್ಧಿ, ನರವುಲಿ, ಮುರಿದ ಕೈ, ಮೂತ್ರಕೃಚ್ಛ್ರ, ಪಾಷಾಣರೋಗ, ಪ್ರಮೇಹ, ಲಿಂಗ ರೋಗ, ಅಧೋವಾಯು, ಕಾಲಬೀಡೆ, ಗೇರುಹುಣ್ಣು, ಶಸ್ತ್ರ ತಗುಲಿದ ಗಾಯ,

ಮಂಡೆಯ ಹುಣ್ಣು, ನಾಳಿಹುಣ್ಣು, ದೇಹದೊಳಗೆ ಸಿಕ್ಕಿದ ಬಾಣ, ಅಂಬುಹುಣ್ಣು, ಬೇದಹುಣ್ಣು, ಭಗಂದರ, ಕುರು, ಊತಿರೋಗ, ಕಂಚಿಕೆ, ಮುಳ್ಳು, ಉಗುರು ಸುತ್ತು, ಸ್ತನವೃದ್ಧಿ, ಯೋನಿಯ ದುರ್ಗಂಧ, ವ್ಯಾನೆಯುವುದು, ರಕ್ತಗುಲ್ಮ, ಗರ್ಭಧರಿಸುವುದು, ಗರ್ಭನಿಲ್ಲುವುದು—ಇವುಗಳಿಗೆ ಔಷಧಗಳನ್ನು ತಿಳಿಸಿದೆ. ಆ ಕಾಲದ ಜನರಿಗೂ ಜನನ ನಿಯಂತ್ರಣದ ಬಗೆಗೆ ಅರಿವಿತ್ತು. ಈತ ಹೇಳಿರುವ ಗರ್ಭ ನಿವಾರಕಗಳು ಹೀಗಿವೆ—

> ಫಲಮನಪೇಕ್ಷಿಸದಿರ್ದೊಡೆ
> ಪಲಾಶತರುಬೀಜ ಚೂರ್ಣದೊಳ್ ಮಧುಘೃತಮಂ
> ಕಲಸಿ ಬಟಿಕ್ಕದನೆ ರಜ
> ಸ್ವಲೆಯಾದವಳ ಭಗದೊಳಿಟ್ಟೊಡಾಗದು ಗರ್ಭಂ ೯-೧೨೯
> ಸಮಭಿಸೆ ಪುಷ್ಯಾರ್ಕಂ ಕನ
> ಕಮೂಲಮಂ ಕೊಂಡು ಕಟ್ಟೆ ಕಟಿಯೊಳ್ ಪುರುಷಂ
> ರಮಿಯಿಸಿದರ್ದಾಕೆಗೆ ಗ
> ರ್ಭಮಾಗದೇನೆಂದು ಪೇಳ್ದ್ವನಿದಱನ್ನತಿಯಂ ೯-೧೩೦

ಅನಂತರ ಬಾಲವೈದ್ಯ, ಪ್ರಾಣಿವೈದ್ಯವನ್ನು ನಿರೂಪಿಸಲಾಗಿದೆ. ಲೋಕೋಪಕಾರದ ಹತ್ತನೆಯ ಅಧಿಕಾರದಲ್ಲಿ ವಿಷವೈದ್ಯವನ್ನು ದೀರ್ಘವಾಗಿ ಪ್ರಸ್ತಾಪಿಸಿದೆ. ಹಾವಿನ ವಿಷ, ಚೇಳು ವಿಷ, ಹಲ್ಲಿ ಇಲಿ ನಾಯಿ ಕರಡಿ ವಿಷ, ಗೇರು ಹುಣ್ಣು, ಮದ್ದು ಗುಣಿಕೆ, ಕೀಟ, ತಾಂಬೂಲದ ಸೊಕ್ಕು ಹಾಗೂ ಎಲ್ಲ ಬಗೆಯ ವಿಷಕ್ಕೂ ಉಪಯುಕ್ತವಾಗಿರುವ ಒಂದು ಸಾಮಾನ್ಯ ಔಷಧವೂ ಸೇರಿದಂತೆ ಹಲವು ಬಗೆಯ ಪರಿಹಾರಕಗಳು ದೊರೆಯುತ್ತವೆ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರದಲ್ಲಿ ಲೋಕೋಪಕಾರಕ್ಕೆ ಸಂಬಂಧಿಸಿದ ಐದು ಹಸ್ತಪ್ರತಿಗಳಿವೆ (ಕೆ ೫೭೨, ಕೆ ಎ ೨೫೧, ಕೆ ಬಿ ೪೪೧, ಕೆ ೧೪೭೯, ಕೆ ಎ ೪೧೧). ಇವುಗಳಲ್ಲಿ ಕೆ ಬಿ ೪೪೧ ಮತ್ತು ಕೆ ಎ ೪೧೧ ಸಂಖ್ಯೆಯ ಹಸ್ತಪ್ರತಿಗಳು ಸಮಗ್ರ, ಶುದ್ಧ. ಉಳಿದವು ಅಸಮಗ್ರ. ಎಚ್. ಶೇಷಯ್ಯಂಗಾರ್ಯರು ಲೋಕೋಪಕಾರವನ್ನು ೧೯೫೨ರಲ್ಲಿಯೆ ಶಾಸ್ತ್ರೀಯವಾಗಿ ಪರಿಷ್ಕರಿಸಿ ಮದರಾಸಿನಿಂದ ಪ್ರಕಟಿಸಿ ಉಪಕಾರ ಮಾಡಿದ್ದಾರೆ. ಇವರು ಪ್ರತಿ ಮಾಡಿದ ಒಂದು ಹಸ್ತಪ್ರತಿ (ಕೆ ಎ ೪೧೧) ಕೂಡ ಸಂಸ್ಥೆಯ ಭಂಡಾರದಲ್ಲಿದೆ.

ವೈದ್ಯವಿಚಾರವನ್ನೇ ಇಡಿಯಾಗಿ ಸಮಗ್ರ ಗ್ರಂಥದಲ್ಲಿ ಮೊದಲು ನಿರೂಪಿಸಿದ ಕೀರ್ತಿ ಜಗದ್ದಳ ಸೋಮನಾಥನ ಕರ್ಣಾಟಕ ಕಲ್ಯಾಣಕಾರಕಕ್ಕೆ ಸಲ್ಲುತ್ತದೆ. ಇದರ ಕಾಲ ಕ್ರಿ. ಶ. ಸು ೧೧೭೫. ಕರ್ಣಾಟಕ ಕಲ್ಯಾಣಕಾರಕ ಕಂದ ವೃತ್ತಗಳಲ್ಲಿ ರಚಿತವಾಗಿದೆ. ಕವಿ ಜೈನನಾದ ಕಾರಣ ಚಂದ್ರನಾಥನ ಸ್ತುತಿಯಿಂದ ಕೃತಿ ಆರಂಭವಾಗುತ್ತದೆ. ಬಹುಪಾಲು ಜೈನವೈದ್ಯಗ್ರಂಥಗಳಿಗೆ ಪೂಜ್ಯಪಾದಮುನಿಗಳ ಕಲ್ಯಾಣಕಾರಕ ಆಕರ. ಅಂತೆಯೆ ಜಗದ್ದಳನ ಕೃತಿಯೂ ಇದಕ್ಕೆ ಋಣಿ. ಪೂಜ್ಯಪಾದರ ಕೃತಿ ಸಂಸ್ಕೃತದಲ್ಲಿ ಪ್ರಖ್ಯಾತವಾದುದು. ಇವರ ಗ್ರಂಥಕ್ಕೆ ಹಲವಾರು ಟೀಕೆಗಳು ಬಂದಿವೆ. ಕನ್ನಡ ಅಧ್ಯಯನ ಸಂಸ್ಥೆಯ ಕೆ ಎ ೪೮೨ ಸಂಖ್ಯೆಯ ಹಸ್ತಪ್ರತಿಯಲ್ಲಿ ಪೂಜ್ಯಪಾದರ ಕೃತಿಗೆ ವಿಸ್ತಾರವಾದ ಟೀಕೆ ಬರೆದಿದೆ. ಹಿಂದೆ ಪೂಜ್ಯಪಾದ ಮುನಿಗಳು ಸಂಸ್ಕೃತದಲ್ಲಿ ಹೇಳಿ

ರುವ ಕಲ್ಯಾಣಕಾರಕವನ್ನು ಕರ್ಣಾಟಕ ಭಾಷೆಯಲ್ಲಿ ನಿರೂಪಿಸುವೆನೆಂದು ಜಗದ್ದಳ ಸೋಮನಾಥನೆ ತಿಳಿಸಿರುವುದರಿಂದ ಇದೊಂದು ಭಾಷಾಂತರಕೃತಿಯೆಂಬುದು ಸ್ಪಷ್ಟ. ಈ ಕೃತಿಯನ್ನು ಸುಮನೋಬಾಣ ಮತ್ತು ಅಭಯಚಂದ್ರ ಸಿದ್ಧಾಂತಿಗಳು ತಿದ್ದಿದ ರೆಂದು ತಿಳಿದುಬರುತ್ತದೆ :

> ಸುಮನೋಬಾಣಕವೀಂದ್ರ
> ಪ್ರಮುಖಂ ಬೆರಸಭಯಚಂದ್ರಸಿದ್ಧಾಂತಿಗಳು
> ತ್ರಮವಾಗೆ ತಿರ್ದಿದೀ ಕೃತಿ
> ಗಮರ್ದುದು ಸೌಭಾಗ್ಯಮೊಂದಿದಾಯುಂ ಶ್ರೀಯುಂ

ಈ ಪದ್ಯ ಈತನ ಕಾಲನಿರ್ಣಯಕ್ಕೂ ಅನುಕೂಲಕರವಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಈ ಕೃತಿಗೆ ಸಂಬಂಧಿಸಿದಂತೆ ಮೂರು (ಕೆ ಎ ೨೩೧, ಕೆ ಎ ೩೬೧, ಕೆ ಎ ೪೭೦) ಹಸ್ತಪ್ರತಿಗಳಿವೆ. ಇವುಗಳಲ್ಲಿ ಕೆ ಎ ೪೭೦ ಸಂಖ್ಯೆಯ ಪ್ರತಿ ಆರಾಲ್ಟೈಬ್ರರಿ ಯಲ್ಲಿರುವ ಓಲೆಪ್ರತಿಯ ನಕಲು. ಕರ್ಣಾಟಕ ಕಲ್ಯಾಣಕಾರಕದಲ್ಲಿ ೭ ಅಧ್ಯಾಯ ಗಳಿವೆ. ಪೀಠಿಕಾ ಪ್ರಕರಣ, ಪರಿಭಾಷಾ ಪ್ರಕರಣ, ಷೋಡಶಜ್ವರಪ್ರಕರಣ ನಿದಾನ, ಅತಿಸಾರಗ್ರಹಣೀ ನಿದಾನ, ಚಿಕಿತ್ಸಾ ನಿರೂಪಣ, ರಕ್ತಪಿತ್ತ ನಿದಾನ, ಕ್ಷಯನಿದಾನ, ಉದರರೋಗ ನಿದಾನ ಮತ್ತು ಗುಲ್ಮನಿದಾನ ಚಿಕಿತ್ಸಾ ನಿರೂಪಣ—ಇವು ಈ ಕೃತಿಯ ವಸ್ತು. ಇಲ್ಲಿ ಜ್ವರಕ್ಕೆ ಹೇಳಿರುವ ಪಥ್ಯ ಹೀಗಿದೆ :

> ಜ್ವರದಾದಿಯೊಳುಪವಾಸಂ
> ಜ್ವರಮಧ್ಯಮದಲ್ಲಿ ಗಂಜಿ ಪೇಟ್ಟುಕಷಾಯಂ
> ಜ್ವರಪಾಕದೊಳಸ್ತ್ರವಿತ
> ಜ್ವರದೊಳ್ ಮಲಹರಣಮಿನಿತಿವಾರೋಗ್ಯಕರಂ

ಕರ್ಣಾಟಕ ಕಲ್ಯಾಣಕಾರಕ ಸರಳಶೈಲಿಯಲ್ಲಿ ರಚಿತವಾಗಿರುವುದರಿಂದ ಶಾಸ್ತ್ರವಿಷಯ ವಾದರೂ ಸುಲಭವಾಗಿ ಗ್ರಾಹ್ಯವಾಗುತ್ತದೆ.

ಮಕ್ಕಳಿಗೆ ಕಾಡುವ ಬಾಲಗ್ರಹದ ಬಗೆಗೆ ಆರಂಭದಲ್ಲಿಯೆ ಪ್ರತ್ಯೇಕವಾದ ಗ್ರಂಥ ವೊಂದು ರಚಿತವಾಗಿತ್ತು. ದೇವೇಂದ್ರಮುನಿ (ಸು. ೧೨೦೦) ಎಂಬ ಜೈನಗ್ರಂಥ ಕಾರನು ಬಾಲಗ್ರಹಚಿಕಿತ್ಸೆ ಎಂಬ ಗದ್ಯ ಕೃತಿಯನ್ನು ರಚಿಸಿದ್ದನು. ಆಯುರ್ವೇದ ದಲ್ಲಿ ಗಿಡಮೂಲಿಕೆಗಳ ರಸಚೂರ್ಣ ಇತ್ಯಾದಿ ಚಿಕಿತ್ಸೆ ಒಂದು ಬಗೆಯಾದರೆ, ಯಂತ್ರ ಮಂತ್ರಗಳ ಚಿಕಿತ್ಸೆ ಮತ್ತೊಂದು ಬಗೆಯದು. ಇಂಥ ಯಂತ್ರಮಂತ್ರಗಳ ಸಹಾಯ ದಿಂದ ರೋಗ ಪರಿಹಾರವಾದ ಸಂದರ್ಭಗಳು ಇಲ್ಲದಿಲ್ಲ. ಪ್ರಾಚೀನರಿಗೆ ಈ ಬಗೆಯ ಚಿಕಿತ್ಸೆಯಲ್ಲಿ ಅಪಾರ ವಿಶ್ವಾಸ. ದೇವೇಂದ್ರಮುನಿಯ ಬಾಲಗ್ರಹ ಚಿಕಿತ್ಸೆಯಲ್ಲಿ ಯಂತ್ರಮಂತ್ರಗಳಿಂದ ಬಾಲಗ್ರಹವನ್ನು ಬಿಡಿಸುವ ಪರಿ ಹೇಳಿದೆ. ಈ ವಸ್ತುವಿಗೆ ಸಂಬಂಧಿಸಿದಂತೆ ಕರ್ತೃ ಕಾಲಗಳು ಗೊತ್ತಿಲ್ಲದ ಮೂರು (ಕೆ ೩೮೪, ಕೆ ೨೮೪, ಕೆ ೧೦೨೫) ಹಸ್ತಪ್ರತಿಗಳಿವೆ. ಇವೆಲ್ಲವೂ ಗದ್ಯದಲ್ಲಿವೆ. ಒಂದು ದಿನದಿಂದ ಹಿಡಿದು ಒಂದು ವರ್ಷದವರೆಗೆ ಮಕ್ಕಳಿಗೆ ಹಿಡಿಯುವ ವಿವಿಧ ಬಗೆಯ ಗ್ರಹಗಳನ್ನು ಹಾಗೂ ಚಿಕಿತ್ಸೆಗಳನ್ನು ಇವುಗಳಲ್ಲಿ ಹೇಳಿದೆ.

ಕರ್ನಾಟಕದಲ್ಲಿ ಹನ್ನೆರಡು ಹದಿಮೂರನೆಯ ಶತಮಾನದ ಹೊತ್ತಿಗಾಗಲೇ ವೈದ್ಯವಿಷಯಕ್ಕೆ ಸಂಬಂಧಿಸಿದ ಅನೇಕ ಪ್ರಕಾರಗಳಲ್ಲಿ ಕೃತಿಗಳು ಹುಟ್ಟಿಕೊಂಡಿದ್ದವು. ಮಂಗರಾಜನು ಕ್ರಿ. ಶ. ಸು. ೧೩೬೦ರಲ್ಲಿ ವಿಷವೈದ್ಯವನ್ನು ಕುರಿತಂತೆ ಖಗೇಂದ್ರ ಮಣಿದರ್ಪಣ ಎಂಬ ಕೃತಿಯನ್ನು ಬರೆದಿದ್ದನು. ಈತ ಜೈನ ಕವಿ. ಹೊಯ್ಸಳ ರಾಜ್ಯದ ದೇವಳಿಗೆನಾಡಿನ ಮುಗುಳಿಪುರದ ರಾಜನಾಗಿದ್ದಂತೆ ವಿಜಯನಗರದ ರಾಜ ನಾದ ಹರಿಹರರಾಯನ ಸಾಮಂತನಾಗಿದ್ದಂತೆ ತಿಳಿದುಬರುತ್ತದೆ. ಇಲ್ಲಿ ಉಕ್ತವಾಗಿ ರುವ ಮುಗುಳಿಪುರ ಹಾಸನ ಜಿಲ್ಲೆಯಲ್ಲಿರುವ ಈಗಿನ ಮುಗುಳುವಳ್ಳಿ ಆಗಿರಬಹುದು. ರಾಜನಾಗಿದ್ದು ಶಾಸ್ತ್ರಗ್ರಂಥವನ್ನು ರಚಿಸಿದ್ದು ಮಂಗರಾಜನ ವಿಶೇಷ. ಈತನಿಗೆ ಸುಲಲಿತ ಕವಿಪಿಕ ವಸಂತ, ಭುವಂಶಲಲಾಮ, ಕವಿಜನೈಕಮಿತ್ರ ಮೊದಲಾದ ಹಲವು ಬಿರುದುಗಳಿದ್ದವು. ಖಗೇಂದ್ರ ಮಣಿದರ್ಪಣದಲ್ಲಿ ೧೬ ಆಶ್ವಾಸ ೧೪೩೪ ಪದ್ಯ ಗಳಿವೆ. ಚಂಪೂಬಂಧದಲ್ಲಿ ರಚಿತವಾಗಿದೆ. ಈ ಕೃತಿ ತತ್ಪೂರ್ವದ ವೈದ್ಯಗ್ರಂಥಗಳಿಗೆ ಋಣಿಯಾಗಿದ್ದರೂ ಪೂಜ್ಯಪಾದರ ಕೃತಿಯನ್ನು ಪ್ರಧಾನವಾಗಿ ಅವಲಂಬಿಸಿದೆ. ಶ್ರೇಷ್ಠನಾದ ಪ್ರಾಮಾಣಿಕನಾದ ವೈದ್ಯ ರೋಗಿಯ ಹೃನ್ಮನದಲ್ಲಿ ದೈವಸಮಾನ ಸ್ಥಾನ ಪಡೆಯುವನು. ಇಂಥದೇ ಆಶಯ "ಮಂತ್ರೌಷಧಿವ್ರಾತಮಂ ನಿರುತಂ ಭಾವಿಸಿ ಪೇಳ್ದ ಮಾನವನೆ ತಾ ದೇವಂ" ಎಂದು ಮಂಗರಾಜನಲ್ಲಿ ವ್ಯಕ್ತವಾಗಿದೆ. ಹಾವು, ಚೇಳು, ಇಲಿ, ಕಾಡುಪ್ರಾಣಿಗಳು ಕಚ್ಚಿದರೆ ಹಾಗೂ ಇತರ ಬಗೆಯ ವಿಷಕ್ಕೆ ಖಗೇಂದ್ರಮಣಿ ದರ್ಪಣದಲ್ಲಿ ವಿವಿಧ ಚಿಕಿತ್ಸೆಗಳಿವೆ. ವಿಷವೇರಿದ ವ್ಯಕ್ತಿಯ ಶರೀರದಲ್ಲಿ ಉಂಟಾಗುವ ಲಕ್ಷಣಗಳನ್ನು—

ಅತಿಸಾರಂ ಮೂರ್ಛೆ ದಾಹಂ ಮತಿವಿಕಳತೆಯುಂ ಭ್ರಾಂತಿ ಹೃಚ್ಛೂಲತಾಪಂ
ಗತಸತ್ವಂ ನೇತ್ರಮಾಂದ್ಯಂ ಪ್ರಕೃತಿ ವಿಕೃತಿಯುಂ ಗದ್ಗದಧ್ವಾನ ಕಂಠಂ
ಗತಿಭಂಗಂ ಶ್ವಾಸಕೋಶಂ ರುಧಿರವಮನಮುಂ ಸ್ವೇದಮತ್ಯಂತ ಖೇದಂ
ಧೃತಶೋಷಂ ತಾಮಿವಲ್ಲಂ ವಿಷಮಿತರಮೆನಿಪ್ಪಂಗ ಚಿಹ್ನಂಗಳಕ್ಕುಂ

ಎಂದು ನಿಖರವಾಗಿ ಹೇಳಿದೆ. ಈ ಕೃತಿಯ ಆರು ಹಸ್ತಪ್ರತಿಗಳು (ಕೆ ೧೫೭೪, ಕೆ ೧೮೦೪, ಕೆ ಎ ೪೦೭, ಕೆ ಎ ೧೭, ಕೆ ಎ ೮೪, ಕೆ ಎ ೨೦೮) ಕನ್ನಡ ಅಧ್ಯಯನ ಸಂಸ್ಥೆಯಲ್ಲಿವೆ ಎಚ್. ಶೇಷಅಯ್ಯಂಗಾರ್ ಅವರು ಖಗೇಂದ್ರಮಣಿದರ್ಪಣವನ್ನು ಪರಿಷ್ಕರಿಸಿ ಮದರಾಸಿನಿಂದ ಪ್ರಕಟಿಸಿದ್ದಾರೆ.

ಶ್ರೀಧರದೇವ ಎಂಬ ಜೈನಕವಿ 'ವೈದ್ಯಾಮೃತ' ಎಂಬ ಗ್ರಂಥವನ್ನು ಬರೆದಿದ್ದಾನೆ. ಈತನ ಕಾಲ ಸು ೧೫೦೦. ಮುನಿಚಂದ್ರದೇವ ಮೊದಲಾದವರು 'ವೈದ್ಯಾಮೃತಮಂ ಬಾಲವೃದ್ಧರರಿವಂತೆ ಮನಮೊಸೆದು ಪೇಳ್' ಎಂದು ಕೇಳಿಕೊಳ್ಳಲು ಹೊಸಗನ್ನಡದಲ್ಲಿ ಬರೆದುದಾಗಿ ಕವಿಯೇ ಹೇಳಿಕೊಂಡಿದ್ದಾನೆ. ವೈದ್ಯಾಮೃತದ ಆರಂಭದಲ್ಲಿ ಸಂಸ್ಕೃತ ಶ್ಲೋಕ ಕನ್ನಡ ಟೀಕುಗಳು ಕಂಡುಬಂದರೂ ಅನಂತರದಲ್ಲಿ ಮುಕ್ತಾಯದವರೆಗೂ ಗದ್ಯವನ್ನು ಬಳಸಿದೆ. ಈ ಕೃತಿಯಲ್ಲಿ ೨೪ ಅಧಿಕಾರಗಳಿವೆ. ಶ್ರೀಧರದೇವ ತನ್ನನ್ನು 'ಜಗದೇಕ ಮಹಾಮಂತ್ರವಾದಿ' ಎಂದು ಪ್ರತಿಯೊಂದು ಅಧಿಕಾರದಲ್ಲಿಯೂ ಪ್ರಶಂಸಿಸಿಕೊಂಡಿರುವುದರಿಂದ ಈತನೊಬ್ಬ ಜನಪ್ರಿಯವೈದ್ಯನಾಗಿದ್ದ

ನೆಂದು ಊಹಿಸಬಹುದು. ಈ ಕೃತಿಯ ಮೂರು ಹಸ್ತಪ್ರತಿಗಳು (ಕೆ ೧೨೨, ಕೆ ೬೦೫, ಕೆ ೧೫೬೪) ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಂಡುಬರುತ್ತವೆ. ಕೆ ೬೦೫ ಕ್ರಮ ಸಂಖ್ಯೆಯ ಪ್ರತಿಯಲ್ಲಿ ಅಷ್ಟಾಂಗಯೋಗ ಚಿಕಿತ್ಸೆ, ಯೋನಿ ಚಿಕಿತ್ಸೆ ಮೊದಲಾದ ವಿಚಾರಗಳಿವೆ. ಇದರ ಮುಂದುವರೆದ ಭಾಗದಂತೆ ಕೆ ೨೧೨ ಸಂಖ್ಯೆಯ ಪ್ರತಿ ಭಾಸವಾಗುತ್ತದೆ. ಇದರಲ್ಲಿ ೧–೧೯೮ ಪತ್ರಗಳಿವೆ. ಪುಷ್ಟಿ ವೀರ್ಯವರ್ಧನ ಪ್ರಕರಣದಿಂದ ಆರಂಭಗೊಳ್ಳುವ ಈ ಪ್ರತಿಯಲ್ಲಿ ಲಿಂಗವ್ರಣ, ಉದಾವರ್ತ, ಅಪಸ್ಮಾರ, ಬೆಂದ ಹುಣ್ಣು, ಜ್ವರ, ವಿಷಭ, ಗರ್ಭೋತ್ಪತ್ತಿ, ಸುಖಪ್ರಸವ, ಸತ್ತಕೂಸು ಬೀಳುವುದಕ್ಕೆ ಚಿಕಿತ್ಸೆ ಹೇಳಿದೆ. ಆ ಬಳಿಕ ಮಕ್ಕಳಿಗೆ ಹಲ್ಲು ಬರುವ ಲಕ್ಷಣ, ದಶವಾಯುಗಳ ಲಕ್ಷಣ, ವಾತ ಪಿತ್ತ ಶ್ಲೇಷ್ಮ ಲಕ್ಷಣಗಳನ್ನು ನಿರೂಪಿಸಿ ಇದರ ನಿಯಂತ್ರಣಕ್ಕೆ ಪಥ್ಯವನ್ನು ಸೂಚಿಸಿದೆ—"ಕೃಶದೇಹಿಗೆ ಸ್ನಿಗ್ಧಂ ಮಧುರಮಂ ಪ್ರಯೋಗಿಸುಗೆ ಸ್ಥೂಲಂಗೆ ತಾಂಬೂಲಮಂ ರೂಕ್ಷಗುಣಂಗಳಂ ಖಾರ ಕಹಿ ಮಗರಂ ಪ್ರಯೋಗಿಸುಗೆ ಮಧ್ಯಮಂಗೆ ಅತ್ಯಂತ ಪುಳಿಯಂ ರೂಕ್ಷಂಗಳಂ ಕುಡುಗೆ ಭೋಜನಂಗೈದು ಹರಿಯಲು ಆಯುಷ್ಯ ಹಾನಿ ಉಣ್ಣದಿಪ್ಪುದು ಬಲಹಾನಿ ಉಂಡು ಮಲಗುವುದು ಮೈದಿಮ್ಮಿತ್ತು ಎಂದರೆ ಜಡತ್ವ ಉಂಡ ಎಡೆಯಲ್ಲಿ ಕುಳ್ಳಿರ್ದಡೆ ಡೊಳ್ಳು ಪಿರಿದಕ್ಕು ಉಂಡ ಬಳಿಕ ಎದ್ದು ನೂರೆಂಟು ಹಜ್ಜೆಯ ನಡವುದು ಆ ಬಳಿಕ ವೀಳ್ಯಂ ಎಲ್ಲಾಗಳಂ ಮಂದೆರಸಂಗಳಂ ಸೇವಿಸುವುದು ಪಿರಿದು ನಗೆಯುಂ ವಿಷದೃಷ್ಟಿ ಉಳ್ಳವರನ್ನಿರಿಸುವುದು ಪೊಲ್ಲ ದುರ್ಗಂಧಮನೆಯೊಳಂ ಸಮಭೂಮಿಯಲ್ಲದಿರ್ದಡೆಯೊಳಂ ಕಠಿಣಾಸನ ನೊಣ ನಿಪ್ಪೆಡೆ ಸಂಕೀರ್ಣಮಪ್ಪೆಡೆಯೊಳಂ ಉಣಬಾರದು ಕೀತಂಗಳಂ ಅಧಿಕಕಾಲ ಪಾಕಂಗಳಂ ಹೊರಸ ಕಟ್ಟಿದನಂ ಪಾವು ಮೊದಲಾದವುವರೆ ವಿಷಂಗಳಂ ನೋಡುತ್ತಂ ಕತ್ತಲೆಯೊಳಂ ಉಣಲಾಗದು ಮೃದುವಪ್ಪ ಆಸನದೊಳು ಸಮಭೂಮಿಯೊಳಂ ಪ್ರಕಾಶ ಸ್ಥಾನದೊಳಂ ವಳ್ಳಿಯಂ ಮಾಡಿ ಸೊಡರ ಪೊತ್ತಿಸಿ ಮೇಲುಕಟ್ಟ ಕಟ್ಟಿದೆಡೆಯೊಳಂ ಭೋಜನ ಭಾಜನಂಗಳಂ ನಿರ್ಮಳವಾಗಿ ತೊಳದು ಇಗ್ಗಿಣ್ಣದ್ದದ ಅಡ್ಡಣಿಗೆಯಲಿಕ್ಕಿ" ಎಂದು ಹೇಳಿರುವಲ್ಲಿ ನಮ್ಮ ಪ್ರಾಚೀನರು ಶುಚಿತ್ವಕ್ಕೆ ಎಷ್ಟು ಮಹತ್ವ ನೀಡಿದ್ದರೆಂಬುದು ವ್ಯಕ್ತವಾಗುತ್ತದೆ. ಇಂಥ ಕೆಲವು ಸಂಗತಿಗಳು ಇಂದಿಗೂ ಪ್ರಸ್ತುತವಾಗಿವೆ. ಹೀಗೆ ಶ್ರೀಧರದೇವ ರೋಗಗಳಿಗೆ ಔಷಧಗಳನ್ನು ಹೇಳುವಾಗ ಆರೋಗ್ಯಕರ ಜೀವನಕ್ಕೆ ಸಹಕಾರಿಯಾಗುವಂಥ ಹಲವು ಉಪಯುಕ್ತ ಅಂಶಗಳನ್ನು ಸಾಂದರ್ಭಿಕವಾಗಿ ಪ್ರಸ್ತಾಪಿಸಿದ್ದಾನೆ.

ವೈದ್ಯಾಮೃತದಲ್ಲಿ ಸಮತೋಲನ ಭೋಜನಕ್ರಮ ಹೇಳಿದ ಬಳಿಕ ವಿರುದ್ಧಾಹಾರಕ್ರಮ, ಋತುಗಳಲ್ಲಿ ಪಥ್ಯಕ್ರಮ, ಪಾನಕಪ್ರಯೋಗ, ಅಷ್ಟಾಂಗಧೂಪ, ದಶಾಂಗಧೂಪ, ತಣ್ಣೀರು ಗುಣ, ಬಿಸಿನೀರು ಗುಣ, ಕಾದಾರಿದ ನೀರಿನ ಗುಣ ಮೊದಲಾದ ವಿಷಯಗಳನ್ನು ವಿವರಿಸಿದೆ. ಆಯುರ್ವೇದದಲ್ಲಿ ಋತುಮಾನಕ್ಕೆ ಅನುಗುಣವಾಗಿ ವಿವಿಧ ರೀತಿಯ ಚಿಕಿತ್ಸೆಗಳಿವೆ. ಒಂದು ಋತುವಿಗೆ ಒಗ್ಗಿದ ಔಷಧ ಮತ್ತೊಂದು ಋತುವಿಗೆ ಒಗ್ಗುವುದಿಲ್ಲ. ಈ ನಿಟ್ಟಿನಲ್ಲಿ ಯಾವ ಯಾವ ಋತುವಿಗೆ ಯಾವ ಯಾವ ಔಷಧ ಸೂಕ್ತವೆಂಬುದನ್ನು ವೈದ್ಯಾಮೃತದಲ್ಲಿ ವಿವರವಾಗಿ ಹೇಳಿದೆ. ಅನಂತರ

ರಸಾಯನವಿಧಾನ, ಲವಣದೋಷ, ಹುಳಿದೋಷ, ತೈಲದೋಷ, ಸರ್ಪದೋಷ, ಜಲಮಲಕಟ್ಟುವುದು, ವಾಂತಿ, ಕ್ಷಯ, ಮನುಷ್ಯರ ಹಲ್ಲಿನ ವಿಷ, ಉಮ್ಮತ್ತದ ವಿಷ, ಬಹುಮೂತ್ರದ ವಿಷ, ಅಂಡವಾತ, ಚಕ್ಷುರೋಗ, ದಂತರೋಗ, ಕರ್ಣಶೂಲೆ, ಶಿರೋರೋಗ, ಕೇಶವರ್ಧನ, ಮೂಗಿನಲ್ಲಿ ರಕ್ತ ಸುರಿಯುವಿಕೆ, ಮಲರೋಗ, ಭಗಂಧರ, ಭೂತ, ಮಂಡಲದ ಹಾವಿನ ವಿಷ, ಸರ್ಪ ಚೇಳು ಮೂಷಕ ವಿಷ, ಕಳ್ಳಿನ ಸೊಕ್ಕು, ಪಾಂಡುರೋಗ, ಕಾಮಾಲೆ, ಬಿಕ್ಕು, ಕುಷ್ಠ, ಗರ್ಭೋತ್ಪತ್ತಿ, ಮೊಲೆ ಹಾಲು ಬರುವುದಕ್ಕೆ, ಆಸ್ಯಪಾಕ, ಯೋನಿದೋಷ, ಅತಿಸಾರ ಮೊದಲಾದ ಸಮಸ್ಯೆಗಳಿಗೆ ಔಷಧವಾಗಿ ವಿವಿಧ ಚೂರ್ಣ, ಘೃತ, ತೈಲ, ಅಂಜನ, ಕಷಾಯಗಳನ್ನು ಹೇಳಿದೆ. ವೈದ್ಯಕ್ಕೆ ಹೊರತಾದ ಆದರೆ ಗೃಹೋಪಯೋಗಿಯಾದ ಬಟ್ಟೆಗಳಿಗೆ ಬಣ್ಣ ಹಾಕುವ ವಿಧಾನ ಮತ್ತು ಕುಂಕುಮ ತಯಾರಿಸುವ ಕ್ರಮವನ್ನು ವಿವರಿಸಿದೆ. ಇದೇ ಕಟ್ಟಿನಲ್ಲಿ ಗೋವೈದ್ಯಕ್ಕೆ ಸೇರಿದ ಕೆಲವು ಪತ್ರಗಳಿವೆ ಪ್ರಾಯಃ ಈ ಭಾಗ ಕೂಡ ಶ್ರೀಧರದೇವನ ವೈದ್ಯಾಮೃತಕ್ಕೆ ಸಂಬಂಧಿಸಿರಬಹುದು. ಒಟ್ಟಿನಲ್ಲಿ ವೈದ್ಯವಿಷಯಕ್ಕೆ ಸಂಬಂಧಿಸಿದಂತೆ ಇದೊಂದು ಮಹತ್ವದ ಹಸ್ತಪ್ರತಿ ಎಂಬುದರಲ್ಲಿ ಸಂಶಯವಿಲ್ಲ.

ಭಾರತ, ರಸರತ್ನಾಕರ ಮೊದಲಾದ ಗ್ರಂಥರಚಕ ಸಾಳ್ವನು ವೈದ್ಯಸಾಂಗತ್ಯ ಎಂಬ ಕೃತಿಯನ್ನೂ ರಚಿಸಿದ್ದಾನೆ. ಈತನ ಕಾಲ ಕ್ರಿ. ಶ. ೧೫೫೦. ಈತನ ತಂದೆ ಧರ್ಮಚಂದ್ರ, ಗುರು ಶ್ರುತಕೀರ್ತಿ ಎಂದು ಹೇಳಿರುವುದರಿಂದ ಕವಿ ಜೈನನೆಂಬುದು ಸ್ಪಷ್ಟ. ಸಾಳ್ವಕವಿಯು ರಾಜಕವಿ, ಕರ್ನಾಟಕ ಲಕ್ಷಣದೋಜ ಎಂಬ ಬಿರುದುಗಳೊಂದಿಗೆ ವೈದ್ಯಸಾಂಗತ್ಯದ ರಚನೆಗೆ ಕೈಹಾಕಿದ. ಈ ಕೃತಿಯ ಏಕೈಕ ಹಸ್ತಪ್ರತಿ (ಕೆ ೧೫೦೬) ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಈ ಅಸಮಗ್ರ ಪ್ರತಿಯಲ್ಲಿ ಕಫ, ವಾತ, ಸನ್ನಿ ಮೊದಲಾದ ರೋಗಗಳಿಗೆ ಪರಿಹಾರ ದೊರೆಯುತ್ತದೆ.

ಕರ್ತೃ ಕಾಲವಿಚಾರಗಳು ನಿರ್ದಿಷ್ಟವಾಗಿರುವ ಕನ್ನಡ ಪ್ರಾಚೀನ ಆಯುರ್ವೇದ ಕೃತಿಗಳಲ್ಲಿ ವೈದಿಕಸಂಪ್ರದಾಯದಲ್ಲಿ ರಚಿತವಾದ ಮೊದಲಗ್ರಂಥವೆಂದರೆ ನಾರಸಿಂಹ ಶಾಸ್ತ್ರಿಯ ವೈದ್ಯಸಾರಸಂಗ್ರಹ. ಇದು ಹದಿನಾಡುವಂಶಕ್ಕೆ ಸೇರಿದ ಎಳಂದೂರಿನ ರಾಜ ಚನ್ನರಾಜನ ಸನ್ನಿಧಿಯಲ್ಲಿ ರಚಿತವಾಯಿತು. ಆದುದರಿಂದ ಕೆಲವು ಹಸ್ತಪ್ರತಿಗಳಲ್ಲಿ ವೈದ್ಯಸಾರಸಂಗ್ರಹದ ಕರ್ತೃತ್ವವನ್ನು ಚನ್ನರಾಜನ ತಲೆಗೆ ಕಟ್ಟಿದೆ. ಚನ್ನರಾಜನ ಕಾಲ ಕ್ರಿ. ಶ. ೧೫೬೦. ಈತನ ಆಸ್ಥಾನದಲ್ಲಿದ್ದುದರಿಂದ ನಾರಸಿಂಹ ಶಾಸ್ತ್ರಿಯ ಕಾಲವೂ ಇದೇ ಆಗಿದೆ. ಪ್ರಸ್ತುತ ವೈದ್ಯಸಾರಸಂಗ್ರಹಕ್ಕೆ ನಾರಸಿಂಹಭಟ್ಟ ಸಂಹಿತೆ ಎಂಬ ಪರ್ಯಾಯನಾಮವೂ ಇದೆ. ಇದರಲ್ಲಿ ಗುಲ್ಮರೋಗ, ಕುಷ್ಠ, ವಾತರೋಗ, ಪಿತ್ತರೋಗ, ಪಾದರೋಗ, ಪುರುಷವ್ಯಾಧಿ, ದೇಹಚ್ಛೇದ, ಗಂಡಮಾಲೆ, ಸ್ಥಾವರವಿಷ ಮೊದಲಾದ ರೋಗಲಕ್ಷಣ ಹಾಗೂ ಘೃತ ಅಂಜನ ಕಷಾಯಾದಿ ಚಿಕಿತ್ಸೆಗಳನ್ನು ಹನ್ನೆರಡು ಪ್ರಕರಣಗಳಲ್ಲಿ ವಿಸ್ತಾರವಾಗಿ ಹೇಳಿದೆ. ಈ ಕೃತಿಗೆ ಸಂಬಂಧಿಸಿದಂತೆ ಒಂದು ಪ್ರತಿ (ಕೆ. ಬಿ. ೨೨೮) ಮಾತ್ರ ಲಭ್ಯವಿದೆ.

ಚಿಕ್ಕದೇವರಾಜನ ಆಸ್ಥಾನದಲ್ಲಿದ್ದ ಚಿಕ್ಕುಪಾಧ್ಯಾಯನು (ಕ್ರಿ. ಶ. ೧೬೭೨) ಆರೋಗ್ಯಾಮೃತ ಎಂಬ ಗದ್ಯಗ್ರಂಥವನ್ನು ಬರೆದಿದ್ದಾನೆ. ವಸ್ತುವಿನ್ಯಾಸದಲ್ಲಿ ಈ

ಕೃತಿ ವೈದ್ಯಸಾರಸಂಗ್ರಹವನ್ನೇ ಬಹುಮಟ್ಟಿಗೆ ಹೋಲುವುದರಿಂದ ಕರ್ನಾಟ ವೈದ್ಯ ಸಾರ ಸಂಗ್ರಹ ಎಂಬ ಪರ್ಯಾಯನಾಮ ಹಸ್ತಪ್ರತಿಗಳಲ್ಲಿ ಕಾಣಬರುತ್ತದೆ. ಇದರ ೨ ಹಸ್ತಪ್ರತಿಗಳು (ಕೆ ೯೮೫, ಕೆ ೧೦೭೩) ಉಪಲಬ್ಧವಿದೆ. ಎರಡೂ ಅಸಮಗ್ರಪ್ರತಿ ಗಳು. ಇವುಗಳಲ್ಲಿ ಜ್ವರೋತ್ಪತ್ತಿ, ಜ್ವರನಿದಾನ, ಸನ್ನಿಪಾತೋತ್ಪತ್ತಿ, ಸನ್ನಿಪಾತ ನಿದಾನ ಇತ್ಯಾದಿ ಸಂಗತಿಗಳಿವೆ. ಕಾಮಾಲೆ ಮತ್ತು ಪಾಂಡುರೋಗಕ್ಕೆ ಆಡುಸೋಗೆ ಕಟುಕರೋಹಿಣಿ ನೆಲಬೇವು ಇವುಗಳ ಕಷಾಯವನ್ನು ಜೇನುತುಪ್ಪದಲ್ಲಿ ಸೇವಿಸು ವಂಥ ಒಂದೇ ಔಷಧವನ್ನು ಹೇಳಿದೆ.

ನಾರಸಿಂಹಶಾಸ್ತ್ರಿಯ ವೈದ್ಯಸಾರಸಂಗ್ರಹ ಮುಂದೆ ವೈದಿಕ ಮೂಲದ ಹಲವು ಆಯುರ್ವೇದ ಕೃತಿಗಳಿಗೆ ಮಾದರಿಯಾದಂತೆ ತೋರುತ್ತದೆ. ಸುಮಾರು ಕ್ರಿ. ಶ. ೧೭೦೦ರಲ್ಲಿದ್ದ ನಂಜಿನಾಥಭೂಪಾಲ ಕೂಡ ವೈದ್ಯಸಾರಸಂಗ್ರಹ ಎಂಬ ಶೀರ್ಷಿಕೆ ಯಲ್ಲಿಯೆ ಬೃಹತ್ಕೃತಿಯನ್ನು ಸಿದ್ಧಪಡಿಸಿದ. ಈತ ತನ್ನನ್ನು "ಕಪಿಲಾ ಕೌಂಡಿನೀ ಸಂಗಮಕ್ಷೇತ್ರ ನಿವಾಸ ನಂಜುಂಡೇಶಕೃಪಾಲಬ್ಧವಿಭವಂ ಶಾಂಕೂರ ಪುರವರಾಧೀ ಶಂ" ಎಂದು ಹೇಳಿರುವುದರಿಂದ ನಂಜನಗೂಡು ಭಾಗದ ಬಹುಶಃ ಕಳಲೆಯ ರಾಜ ನಾಗಿದ್ದಿರಬಹುದು. ಈತ ಮತ್ತು ಕಳಲೆಯ ನಂಜರಾಜ ಏಕವ್ಯಕ್ತಿಗಳಾಗಿರಬಹುದೆ? ಈ ಗ್ರಂಥಕ್ಕೆ ಸಂಬಂಧಿಸಿದಂತೆ ಮೂರು ಹಸ್ತಪ್ರತಿಗಳು (ಕೆ ೨೧೨, ಕೆ ೨೮೭, ಕೆ ೧೩೮೯)ಕಂಡು ಬರುತ್ತವೆ. ಮತ್ತೊಂದು ಪ್ರತಿಯಲ್ಲಿ (ಕೆ ೧೭೨೮) ಕರ್ತೃವಿನ ಹೆಸ ರಿಲ್ಲದಿದ್ದರೂ ನಂಜಿನಾಥನದೆ ಇರಬೇಕೆಂಬ ಅನುಮಾನ ಉಂಟಾಗುತ್ತದೆ. ಕನ್ನಡ ಗ್ರಂಥಸಂಪಾದನೆ ಇನ್ನೂ ಶೈಶವಾವಸ್ಥೆಯಲ್ಲಿರುವಾಗಲೇ ಅಂದರೆ ಕ್ರಿ. ಶ. ೧೮೮೨ ರಲ್ಲಿಯೆ ನಂಜಿನಾಥನ ವೈದ್ಯಸಾರ ಸಂಗ್ರಹ ಅಚ್ಚಾದದ್ದು ಮಹತ್ವದ ಸಂಗತಿ. ಈ ಕೃತಿಯನ್ನು ಕಂ. ಟಿ. ಶ್ರೀನಿವಾಸಾಚಾರ್ಯರು ಕರ್ನಾಟಕ ಮುದ್ರಾಶಾಲೆಯಲ್ಲಿ ಮುದ್ರಿಸಿ ಪ್ರಕಟಿಸಿದರು. ಗ್ರಂಥಸಂಪಾದನ ಶಾಸ್ತ್ರವನ್ನು ಸೈದ್ಧಾಂತಿಕವಾಗಿ ಅಭ್ಯಾಸಮಾಡದೆಯೆ ಆ ಎಲ್ಲ ಅಂಶಗಳನ್ನು ಒಳಗೊಂಡು ಬಂದಿರುವುದು ಈ ಗ್ರಂಥದ ವೈಶಿಷ್ಟ್ಯ. ಸಂಪಾದಕರು ತಮ್ಮ ಮುನ್ನುಡಿಯಲ್ಲಿ "ಪ್ರತ್ಯಂತರ ಸಹಾಯ ದೊಡನೆ ಇದನ್ನು ಪರಿಷ್ಕರಿಸಿ ಶುದ್ಧವಾಗಿ ಪ್ರಕಟಿಸಬೇಕೆಂದು ಯತ್ನಿಸಿದೆವು. ಆದರೆ ಹಾಗೆ ಬೇರೆ ಪ್ರತಿ ಸಿಕ್ಕದೆ ಇದನ್ನೇ ಕ್ರಮಗೊಳಿಸಬೇಕಾದ ಅಕ್ಕರೆ ಉಂಟಾದುದರಿಂದ ವಿದ್ವಾಂಸರ ಸಹಾಯದಿಂದ ಪರಿಷ್ಕರಿಸಿ ಪ್ರಕಟಿಸಿದೆವು" ಎಂದು ಹೇಳಿರುವ ಮಾತು ಗಳಲ್ಲಿ ಶುದ್ಧಪಾಠಗಳನ್ನು ಕೊಡಬೇಕೆಂಬ ಹಂಬಲ ಎದ್ದುಕಾಣುತ್ತದೆ.

ಶಾರೀರಿಕ ಸ್ವಾಸ್ಥ್ಯದ ಅಗತ್ಯತೆಯನ್ನರಿತ ಕಂ. ಟಿ. ಶ್ರೀನಿವಾಸಾಚಾರ್ಯರು ರೋಗದಿಂದ ಉಂಟಾಗುವ ದುಷ್ಪರಿಣಾಮಗಳನ್ನು ವರ್ಣಿಸಿದ್ದಾರೆ : "ಧನ ವಿದ್ಯಾದಿ ಗಳಲ್ಲಿ ಸಿದ್ಧನಾಗಿ ಕೇವಲ ಭೋಗಾರ್ಥಿಯಾದವನು ರೋಗಪೀಡಿತನಾದರೆ ಶಾರೀರ ಮಾನಸಿಕ ದುಃಖಗಳಿಂದ ಭೋಗ ಸೌಖ್ಯಗಳಿಗೆ ಅಪಾತ್ರನಾಗುತಿಹನು ಮತ್ತು ರೋಗದಿಂದ ಧೀರನಿಗೆ ಧೈರ್ಯಲೋಪವೂ ಉತ್ಸಾಹಿಗೆ ವಿರಕ್ತವೂ ಉಲ್ಲಾಸಿಗೆ ದೈನ್ಯವೂ ಉದ್ಯೋಗಿಗೆ ವೈರಾಗ್ಯವೂ ಕಾಯಪುಷ್ಟಿಯುಳ್ಳವನಿಗೆ ದೌರ್ಬಲ್ಯವೂ

ಸುಂದರನಿಗೆ ವಿರೂಪವೂ ದಾತೃವಿಗೆ ಲೋಭವೂ ವ್ರತೋಪವಾಸಾದಿಧ ರ್ಮಕಾರ್ಯ ನಿರತನಿಗೆ ಅಶ್ರದ್ಧೆಯೂ ವಾಗ್ಬುದ್ಧಿ ಶರೀರಪಟುತ್ವವುಳ್ಳವನಿಗೆ ಜಡತ್ವವೂ ಸಂತೋಷಿಗೆ ದುಃಖವೂ ಕಾಮುಕನಿಗೆ ವಿಷಯವೈರಾಗ್ಯವೂ ಈ ಮೇರೆ ಅವರವರ ಸ್ವರೂಪಕ್ಕೆ ತಕ್ಕಂತೆ ಗುಣವಿಪರ್ಯಾಸ ಉಂಟಾಗುತ್ತದೆ." ಇವರು ತಮ್ಮ ಪೀಠಿಕೆಯಲ್ಲಿ ೩೬ ಜ್ವರ ಹಾಗೂ ಇತರ ವ್ಯಾಧಿಗಳು ಸೇರಿ ೮೦ ವಿಧವಾದ ರೋಗಗಳಿವೆಯೆಂದು ಖಚಿತವಾಗಿ ಹೇಳಿದ್ದಾರೆ. ಪ್ರಸ್ತುತ ಗ್ರಂಥದಲ್ಲಿ ವಾತ ಪಿತ್ತ ಶ್ಲೇಷ್ಮದಿಂದ ಉಂಟಾಗುವ ಎಲ್ಲ ಬಗೆಯ ರೋಗಗಳಿಗೂ ಔಷಧವನ್ನು ಸೂಚಿಸಿದೆ. ಹಾಗೆ ಔಷಧವನ್ನು ಹೇಳುವಾಗ ಹಲವಾರು ಸಂಸ್ಕೃತ ಕೃತಿಗಳಿಗೆ ಋಣಿಯಾಗಿದೆ. ಆಯುರ್ವೇದ, ಧನ್ವಂತರೀಯ, ಹಾರೀತ ಸಂಹಿತ, ಕಾಶ್ಯಪ ಸಂಹಿತ, ಬಾಹಟ, ಭಗೀರಥ ಸಂಹಿತ, ಮಹಾಯಾನ ಸಂಹಿತ, ಕುಮಾರ ಸಂಹಿತ, ಹಿರಣ್ಯಕೇಶೀಯ, ಅಗ್ನಿವರ್ಮ, ಋಷ್ಯಶೃಂಗ ಸಂಹಿತ, ನಾರಾಯಣೀಯ, ಭರಧ್ವಾಜ ಸಂಹಿತ, ಆತ್ರೇಯ ಸಂಹಿತ, ವೃದ್ಧಾತ್ರೇಯ ಸಂಹಿತ, ವೈದ್ಯಕಲ್ಪತರು, ಸಿದ್ಧತಂತ್ರ, ಸಿದ್ಧಸಾರ, ಭೋಜರಾಜೀಯ, ಅಗ್ನಿವೇಶೀಯ, ಚಿಕಿತ್ಸಾಮೃತ, ನಿತ್ಯನಾಥ, ಪ್ರಯೋಗಾಮೃತ, ಸಿದ್ಧಪ್ರಯೋಗ, ವೈದ್ಯಸಂಗ್ರಹ, ಯೋಗಾಮೃತ, ಮಹಾಸಾರ, ಭೇಷಜ್ಯಸೃಷ್ಟಿ, ಚಂದ್ರಿಕಾ, ಕಾಂಚೀನಾಥ, ಶಾರ್ಙ್ಗಧರ, ಸುಶ್ರುತ, ಶತಶ್ಲೋಕಿ, ರೋಲಂಬರಾಜೀಯ, ಪ್ರಯೋಗಸಾರ, ಶಬರಸಂಹಿತೆ ಮೊದಲಾದ ಸಂಸ್ಕೃತ ವೈದ್ಯಗ್ರಂಥಗಳ ಸಾರಸಂಗ್ರಹವೇ ಇದರಲ್ಲಡಗಿದೆ.

ನಂಜಿನಾಥ ಭೂಪಾಲನ ಕನ್ನಡ ವೈದ್ಯಸಾರಸಂಗ್ರಹವು ಸಂಸ್ಕೃತ ಶ್ಲೋಕಗಳಿಗೆ ಬರೆದ ಕನ್ನಡ ಟೀಕು ಗ್ರಂಥವಾಗಿದೆ. ಆರಂಭದಲ್ಲಿ ವೈದ್ಯನಾದವನು ಮೊದಲು ನಾಡಿ ನಾಲಿಗೆ ಮೂತ್ರ ಪರೀಕ್ಷೆ ಮಾಡಬೇಕೆಂಬುದಕ್ಕೆ ಒತ್ತು ನೀಡಿ ಅವುಗಳ ಲಕ್ಷಣವನ್ನು ವಿವರಿಸಿದೆ. ನಾಡಿಮಿಡಿತದಿಂದ ರೋಗವನ್ನು ಪತ್ತೆಹಚ್ಚುವ ಬಗೆಯನ್ನು "ಆ ನಾಡಿ ವಾತಾಧಿಕವಾದರೆ ಡೊಂಕಾಗಿ ನಡೆಯುವುದು ಪಿತ್ತನಾಡಿಯು ಅತಿಚಪಲವಾಗಿ ಎಡಬಿಡದೆ ನಡೆಯುವುದು ಶ್ಲೇಷ್ಮನಾಡಿ ಮಂದವಾಗಿ ಮೆಲ್ಲ ಮೆಲ್ಲನೆ ಏಕತಾಳದ ಹಾಗೆ ಸ್ಥಿರವಾಗಿ ಆಡುತಿಹುದು" ಎಂದು ಈ ಕುರಿತು ದೀರ್ಘವಾಗಿ ನಿರೂಪಿಸಲಾಗಿದೆ. ಇದಾದ ಬಳಿಕ ಚಿಕಿತ್ಸೋಪಕ್ರಮ, ಸನ್ನಿಪಾತ, ಅಭಿನ್ಯಾಸ ಜ್ವರ, ರಕ್ತಪಿತ್ತ, ಸ್ವರಸಾದ, ಛರ್ದಿ, ಹೃದ್ರೋಗ, ಕೃಷ್ಣರೋಗ, ಮದ, ಮೂರ್ಛೆ, ಸನ್ಯಾಸ, ಉದಾವರ್ತ, ಅಶ್ಮರಿ, ಪಾಂಡುರೋಗ, ವಾತ. ಗರ್ಭಿಣಿರೋಗಗಳು, ಬಾಲಗ್ರಹ, ಮಾಸಗ್ರಹ ಹಾಗೂ ವಿಷಚಿಕಿತ್ಸೆಗಳನ್ನು ಹೇಳಿದೆ. ವಿಷದಲ್ಲಿ ಸ್ಥಾವರ, ಜಂಗಮ, ಕೃತ್ರಿಮ ಎಂದು ಮೂರು ಪ್ರಭೇದಗಳು. ಸರ್ಪದಷ್ಟಚಿಕಿತ್ಸೆಯಲ್ಲಿ ಕಚ್ಚಿಸಿಕೊಂಡ ವ್ಯಕ್ತಿಗೆ ಸರ್ಪದ ಎಷ್ಟು ಹಲ್ಲು ನೆಟ್ಟಿದೆ ಎಂಬ ಆಧಾರದ ಮೇಲೆ ಔಷಧ ನೀಡುವ ಕ್ರಮ ಕಂಡುಬರುತ್ತದೆ. ನಿದರ್ಶನಕ್ಕೆ–

"ಶ್ಲೋಕ : ಸರ್ಪಸ್ಯ ತಾಲುಮಧ್ಯೇಚ ದಂಷ್ಟ್ರಾಃ ಕಂಟಕಸನ್ನಿಭಾಃ ವಿಮುಂಚಂತಿ
ವಿಷಂ ಘೋರಂತೆ ಮಾಯುಂ ಕಾಲಸಂಜ್ಞಕಃ ಏಕದಂತೇಃ ಷಂ ಮಾಸಿದ್ವಿದಂ
ತೇ ಮಂತ್ರಸಾಧನಂ ತ್ರಿದಂತೇ ಚಾಷಧ್ಯೈಸ್ಸಾಧ್ಯಂ ಚತುರ್ದಂತೇನ ಜೀವತಿ

ಟೀಕು : "ಸರ್ಪದ ಕಟವಾಯಿಯಲ್ಲಿ ಶೀಗೆಮುಳ್ಳಿನಂತೆ ಹಲ್ಲುಗಳಿರುತ್ತವೆ. ಅವುಗಳಿಂದ ಘೋರವಾದ ವಿಷವಂ ಉಗುಳುವದರಿಂದ ಕಾಲಮೃತ್ಯುವೆಂದು ಹೇಳಲ್ಪಡುವದು. ಒಂದು ಹಲ್ಲು ನೆಟ್ಟರೆ ವಿಷವಿಲ್ಲ, ಎರಡು ಹಲ್ಲು ನೆಟ್ಟರೆ ಮಂತ್ರಸಾಧ್ಯ, ಮೂರು ಹಲ್ಲು ನೆಟ್ಟರೆ ಔಷಧ ಸಾಧ್ಯ, ನಾಲ್ಕು ಹಲ್ಲು ನೆಟ್ಟರೆ ಜೀವಿಸುವುದಿಲ್ಲವೆಂದರಿವುದು." ಹೀಗೆ ನಂಜಿನಾಥ ಸರಳವಾದ ಭಾಷೆಯಲ್ಲಿ ಟೀಕೆಯನ್ನು ನೀಡಿ ತನ್ನ ಉದ್ದೇಶದಲ್ಲಿ ಯಶಸ್ವಿಯಾಗಿದ್ದಾನೆ. ಇದೇ ಗುಂಪಿಗೆ ಸೇರುವ ಕರ್ತೃ ನಿರ್ಣಯವಾಗದ ಮೂರು ಹಸ್ತಪ್ರತಿಗಳು (ಕೆ. ೪೨, ೫, ಕೆಎ ೪೫೯, ಕೆಎ ೫೩೩) ವೈದ್ಯಸಾರ ಸಂಗ್ರಹ ಎಂಬ ಹೆಸರಿನಲ್ಲಿ ದೊರೆಯುತ್ತವೆ. ಇವುಗಳಲ್ಲಿ ವಾತ ಪಿತ್ತ ಶ್ಲೇಷ್ಮಾದಿಯಿಂದ ಉಂಟಾಗುವ ರೋಗಗಳು, ಅವುಗಳಿಗೆ ಔಷಧ ಚೂರ್ಣ ತೈಲ ಮೊದಲಾದುವನ್ನು ವಿವರಿಸಿದೆ.

ಕನ್ನಡ ಆಯುರ್ವೇದದಲ್ಲಿ "ಸಕಲ ವೈದ್ಯ ಸಂಹಿತ ಸಾರಾರ್ಣವ" ಸಂಪುಟಗಳು ಒಂದು ಮೈಲಿಗಲ್ಲು. ಗಾತ್ರದಲ್ಲಿ ಇದನ್ನು ಮೀರಿಸುವಂಥ ವೈದ್ಯಗ್ರಂಥಗಳು ಕನ್ನಡದಲ್ಲಿ ದುರ್ಲಭ. ಈ ಕೃತಿಯ ಕರ್ತೃ ವೀರರಾಜ ಎಂದು ಹಸ್ತಪ್ರತಿಗಳಲ್ಲಿವೆ. ಈತನ ಕಾಲ ಸು. ಕ್ರಿ. ಶ ೧೭೨೦. ಈತನ ತಂದೆ ಚಿಕ್ಕದೇವರಾಜನಲ್ಲಿ ದಳವಾಯಿಯಾಗಿದ್ದ ದೊಡ್ಡೇಂದ್ರ. ವೀರರಾಜ ಮೈಸೂರು ಒಡೆಯರ ಅಧೀನದಲ್ಲಿ ಕಳಲೆಯ ಅಧಿಪತಿಯಾಗಿದ್ದ. ಅಧಿಕಾರಿಯಾಗಿದ್ದ ಈತನಿಗೆ ಇಂಥದೊಂದು ಬೃಹದ್ಗ್ರಂಥವನ್ನು ರಚಿಸಲು ಸಮಯಾವಕಾಶ ಇದ್ದಿತೆ ? ಎಂಬ ಅನುಮಾನ ಸಹಜ. ಅದೂ ಅಲ್ಲದೆ ಆಶ್ರಯದಾತನ ಹೆಸರಿನಲ್ಲಿ ಕೃತಿ ರಚಿಸುವುದು ಕನ್ನಡದಲ್ಲ ಹೊಸತೇನಲ್ಲ. ಈ ಕೆಲವು ಸಂಶಯಗಳಿಗೆ ಪುಷ್ಟಿ ನೀಡುವಂತೆ ದೇವಚಂದ್ರನ ರಾಜಾವಳಿ ಕಥೆಯಲ್ಲಿನ "ಕಳಲೆ ವಂಶದ ವೀರರಾಜಂ ದೊಡ್ಡಕೃಷ್ಣರಾಯರ ದಿವಸದಲ್ಲಿ ಅನೇಕ ವೈದ್ಯಶಾಸ್ತ್ರಗಳೊಳಿರ್ಪ ರೋಗಹರಮಪ್ಪ ಚಿಕಿತ್ಸೆಗಳಂ ಕನ್ನಡ ವಾಕ್ಯದೊಳ್ ವೀರರಾಜೋಕ್ತಿವಿಲಾಸವೆಂದು ಬರೆಯಿಸಿದಂ" ಎಂಬ ಮಾತುಗಳು ವೀರರಾಜನ ಕರ್ತೃತ್ವವನ್ನು ಅಲ್ಲಗಳೆಯುತ್ತವೆ. ಈತನ ಪ್ರೇರಣೆಯಿಂದ ಆಸ್ಥಾನದ ವೈದ್ಯಶಾಸ್ತ್ರಜ್ಞನೊಬ್ಬ ಈ ಗ್ರಂಥವನ್ನು ಸಿದ್ಧಪಡಿಸಿದನೆಂದು ನಂಬಲಡ್ಡಿಯಿಲ್ಲ. ಇಂಥದೊಂದು ಬೃಹದ್ಗ್ರಂಥವನ್ನು ಸಿದ್ಧಪಡಿಸುವಾಗ ವಿವಿಧ ವೈದ್ಯಶಾಸ್ತ್ರಗಳಿಂದ ಮಾಹಿತಿ ಸಂಗ್ರಹಿಸಿರುವುದು ಸಹಜ. ಆ ತಿರುಳನ್ನೆಲ್ಲ ಭಟ್ಟಿಯಿಳಿಸಿ ಸಕಲವೈದ್ಯಸಂಹಿತ ಸಾರಾರ್ಣವದಲ್ಲಿ ಸರಳ ಗದ್ಯದಲ್ಲಿ ಸಾದರಪಡಿಸಿರುವುದು ಗಮನಾರ್ಹ. ವೈದಿಕಮೂಲದ ಯಾವುದೇ ಒಂದು ವೈದ್ಯಗ್ರಂಥದಂತೆ ಇದೂ ಕೂಡ ನಾಡೀ ಪರೀಕ್ಷೆಯಿಂದ ಆರಂಭ. ನಾಡಿ ಜಿಹ್ವೆ ಮೂತ್ರ ಪರೀಕ್ಷೆ, ದೇಶ ಕಾಲ ವಯೋಭೇದ, ವಹ್ನಿ ಶರೀರ ದೋಷ, ವಾತ ಪ್ರಕೋಪ ಲಕ್ಷಣಗಳು ಹಾಗೂ ದ್ರವ್ಯಗಳು, ರೋಗಪರೀಕ್ಷೆ, ವ್ಯಾಧಿಶಮನ, ಅಂಜನ ಪ್ರಯೋಗಿಸುವ ಕಾಲ, ಧೂಮಪಾನ ಗುಣ, ಜ್ವರೋತ್ಪತ್ತಿ, ವಿವಿಧ ಜ್ವರ ಕಲ್ಕ ಕಷಾಯಗಳು, ವಾತ ಪ್ರಕೋಪ, ಪೈತ್ಯ ಪ್ರಕೋಪ, ಆವರಣಪೈತ್ಯ, ಶ್ಲೇಷ್ಮ ಪ್ರಕೋಪ, ತ್ರಯೋದಶ ಸನ್ನಿಪಾತ, ರಕ್ತಜಿಹ್ವಕ, ಸನ್ನಿದೋಷ ರಕ್ತಪಿತ್ತನಿದಾನ, ಮೂಗಿನಲ್ಲಿ ರಕ್ತ ಬೀಳುವುದು, ಅಸೃಗ್ದ್ರ

ಪೈತ್ಯ, ಅಸ್ಥಿಸ್ರಾವ, ಖಾಸಾರೋಗ, ಶ್ವಾಸರೋಗ, ಹಿಕ್ಕಾರೋಗ, ಕ್ಷಯರೋಗ, ಸ್ವರಸಾದ ರೋಗ. ಅರೋಚಕ, ಛರ್ದಿ, ಹೃದ್ರೋಗ, ಮದ, ಮೂರ್ಛೆ, ತೃಷ್ಣೆ, ಅರ್ಶರೋಗ, ಉದಾವರ್ತ, ಅತಿಸಾರ, ಗ್ರಹಣಿ, ವಿಷೂಚಿ, ವಾಂತಿ, ಭ್ರಾಂತಿ, ಅಜೀರ್ಣ, ಮೂತ್ರರೋಗ, ಮೋಹ, ಅಂತ್ರವೃದ್ಧಿ, ಗುಲ್ಮರೋಗ, ಶೂಲೆ, ಪಾಂಡುರೋಗ, ಕಾಮಾಲೆ, ಶೋಭೆರೋಗ, ವಿಸರ್ಪರೋಗ, ಮಸೂರಿಕಾ ರೋಗ, ಶೀತಪಿತ್ತರೋಗ, ಕುಷ್ಠರೋಗ, ಕ್ರಿಮಿರೋಗ, ವಾತರೋಗ, ಆಮ್ಲಪೈತ್ಯ, ಗರ್ಭಶೂಲ, ಉನ್ಮಾದ, ಅಪಸ್ಮಾರ, ಭೂತರೋಗ, ನೇತ್ರರೋಗ, ಕೃಶರೋಗ, ಕರ್ಣರೋಗ, ನಾಸಾರೋಗ, ಕಂಠದಂತ ಶಿರಸಂಬಂಧಿ ರೋಗಗಳು, ಭಗಂದರ ವ್ರಣ, ಉಪದಂಶ, ಗಂಡಮೂಲ, ಬಾವು, ದುಷ್ಟವ್ರಣ, ವಾತಪ್ರಭೇದರೋಗ, ವಿಷರೋಗ ಇವೇ ಮುಂತಾದ ಆರೋಗ್ಯ ಸಮಸ್ಯೆಗಳ ಬಗೆಗೆ ಪ್ರಸ್ತಾಪಿಸುತ್ತ ತೈಲಲೇಪ ಅಂಜನ ಭಸ್ಮ ಮೊದಲಾದ ರೀತಿಯ ಔಷಧಗಳನ್ನು ತಯಾರಿಸುವ ವಿಧಾನವನ್ನು ವಿವರಿಸಿದೆ.

ಸಕಲ ವೈದ್ಯ ಸಂಹಿತ ಸಾರಾರ್ಣವದಲ್ಲಿ ತಲೆನೋವಿಗೆ ಸೂಚಿಸಿರುವ ವಿವಿಧ ಚಿಕಿತ್ಸೆ ಹೀಗಿದೆ:

ಚಿಟ್ಟ ಅವುಡಲದ ಬೇರು ಲೊಕ್ಕಿ ಹೂವು ಸಹ ಅಂಬಿಲದಲ್ಲಿ ಅರೆದು ಮಂಡೆಗೆ ತೊಡೆಯೆಗುಣವಹುದು. ೧

ನವಿಲಗರಿದಿಂಡು ತಾವರೆಗೆಣಸು ಮಾವಿನ ಬೀಜದ ತಿರುಳು ನೀಲಾಂಜನ ನೈದಿಲೆಗೆಣಸು ನೀಲಿರಸ ಕಾಸಿ ಇವನೆಲ್ಲವಂ ಪುಡಿಮಾಡಿ ತಾವರೆಎಣ್ಣೆಯಲ್ಲಿ ಹಾಕಿ ದೀಪಾಗ್ನಿಯಿಂದಟ್ಟು ಕಬ್ಬಿಣದ ಪಾತ್ರೆಯಲ್ಲಿ ಹೊಯಿದು ತಿಂಗಳು ಇರಿಸಿದ್ದು ಪೂಸಲು ಅಕಾಲದಿಂದ ಬಂದ ತಲೆಯ ನರೆಯಂ ಕೆಡಿಸುಗುಂ ೨

ಬಿಳಿಯ ಸಾಸುವೆ, ಕುಂಬಳದಯೆಲೆ, ಬಜೆ, ಹಳೆ ನೆಲ್ಲಹುಲ್ಲು, ಬೇವಿನಹಗಿನು ಇಷ್ಟನೂ ಅಂಬಿಲದಲ್ಲಿ ಅರೆದು ಹಣೆಗೆ ಪೂಸಲು ಮಂಡೆಶೂಲೆ ನಿಲ್ಗುಂ. ೩

ಕರುವಿನ ಸಗಣಿಯಂ ಬಿಸಿಮಾಡಿ ಶಾಖವ ಮಾಡಿಸಲು ವಾತದಿಂದಾದ ಶಿರೋರೋಗ ತೀರ್ಗುಂ. ೪

ಇವೇ ಮೊದಲಾದ ೧೨ ಬಗೆಯ ಲೇಪವನ್ನು ತಲೆನೋವಿಗೆ ಹೇಳಿದ್ದಾನೆ. ಈ ಗ್ರಂಥದಲ್ಲಿ ತೆಲುಗು ವೈದ್ಯಭಾಗಗಳೂ ಕಂಡುಬರುತ್ತವೆ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಕಲ ವೈದ್ಯಸಂಹಿತ ಸಾರಾರ್ಣವ ಕೃತಿಯ ನಾಲ್ಕು (ಕೆ ೧೪೩೦, ಕೆ ೨೪೩, ಕ ಎ ೯೭, ಕೆ ಎ ೪೯) ಹಸ್ತಪ್ರತಿಗಳಿವೆ. ಈ ಪ್ರತಿಗಳನ್ನು ಬಳಸಿಕೊಂಡು ಇದರ ಪರಿಷ್ಕೃತ ಆವೃತ್ತಿಯೊಂದು ಎರಡು ಸಂಪುಟಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಪ್ರಕಟವಾಗಿವೆ. ಮೊದಲನೆಯ ಸಂಪುಟವು ಡಿ. ಶ್ರೀನಿವಾಸಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್ ವಿದ್ವಾಂಸದ್ವಯರಿಂದ ಸಂಪಾದಿಸಲ್ಪಟ್ಟು ೧೯೩೨ರಲ್ಲಿ ಬೆಳಕು ಕಂಡಿತು. ಎರಡನೆಯ ಸಂಪುಟವು ೧೯೪೪ರಲ್ಲಿ ಬಿ.ಎಸ್. ಸಣ್ಣಯ್ಯನವರಿಂದ ಪರಿಷ್ಕೃತಗೊಂಡು ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಪ್ರಕಟವಾಯಿತು.

ಬ್ರಹ್ಮ ಅಥವಾ ಬೊಮ್ಮಯ್ಯಕವಿ ವೈದ್ಯಕಂದ ಎಂಬ ಕೃತಿಯನ್ನು ರಚಿಸಿದ್ದಾನೆ. ಈತನ ಕಾಲ ಸು. ೧೭೫೦. ಈತನ ಕೃತಿಯಿಂದ ತಿಳಿದುಬರುವ ಇತಿವೃತ್ತಗಳನ್ನು ಹೀಗೆ ಪಟ್ಟಿಮಾಡಬಹುದು. ಈತನ ಪಿತಾಮಹ ಹಂಪೆಯ ಪಶ್ಚಿಮಕ್ಕಿರುವ ಕೊಟ್ಟೂರು ಸೀಮೆವಾಸಿ ಇಟ್ಟಿಗೆಯ ಕುಲಕರ್ಣಿ ಸೂರ್ಯರಾಯ. ತಂದೆ ಹನುಮಪ್ಪದಾಸ. ತಾಯಿ ಭಾಗಾಂಬೆ ಕಾವ್ಯಾರಂಭದಲ್ಲಿ ಭಂಡೆಯರಂಗನನ್ನು ಸ್ತುತಿಸಿರುವುದರಿಂದ ಆರಾಧ್ಯದೈವವಾಗಿರಬಹುದು. ವೈದ್ಯಕಂದದಲ್ಲಿ ೬೧೬ ಪದ್ಯಗಳಿವೆ. ಕವಿ ತನ್ನ ಕೃತಿಗೆ

ಚಾರಕ ಸುಶ್ರುತ ಬಾಹಟ
ವಾರಸ್ಫುಟ ಸಾರಂಗಧರ ವೃಂದಾದಿಗಳೊಳ್
ಕಿರಿದಾದ ಯೋಗ ಬಹುಗುಣ
ದಿರವಂ ತಿಳಿದುಸುರ್ವೆ ಕಲ್ಪನೆಗಳಿಲ್ಲವಿದರೊಳ್

ಎಂದು ಆಕರವನ್ನು ಸೂಚಿಸಿದ್ದಾನೆ. ಇದರಲ್ಲಿ ಜ್ವರ, ಅತಿಸಾರ, ಅಜೀರ್ಣ ಮೊದಲಾದ ರೋಗಗಳ ಸ್ವರೂಪವನ್ನು ಸರಳವಾಗಿ ಸಂಕ್ಷಿಪ್ತವಾಗಿ ತಿಳಿಸಿದೆ. ಅಜೀರ್ಣವನ್ನು ದೂರವಿರಿಸಲು

ಹಿತಮಿತವನುಣ್ಣಲೊಮ್ಮೆಗೆ
ಹುತವಾಹದು ಪಚನವಾಗದಲ್ಲಿರೆ ಒಡಲೊಳ್
ಚಿತೆಯಾಗಿಹ ಜಠರಾಗ್ನಿಯು
ಸ್ಥಿತಿ ವಿಷಮುವುಯೆಂದು ಪೇಳ್ವರು ಪೂರ್ವವೈದ್ಯರ್

ಎಂಬ ಸಲಹೆಯಿದೆ. ಅನಂತರ ರಕ್ತಪಿತ್ತ, ಮೂಲರೋಗ, ಗುಲ್ಮರೋಗ ಲಕ್ಷಣಗಳನ್ನು ವಿವರಿಸಿ ಚಿಕಿತ್ಸಾಪ್ರಕರಣದಲ್ಲಿ ವೈದ್ಯೋಪಚಾರಗಳನ್ನು ಸೂಚಿಸಿದೆ. ಜ್ವರ ಚಿಕಿತ್ಸೆ ಪ್ರತ್ಯೇಕ ಅಧ್ಯಾಯವಾಗಿ ಬಂದಿದೆ. ತಣ್ಣೀರು ಬಿಸಿನೀರಿನ ಗುಣಗಳು ಹಾಗೂ ಬಿಸಿನೀರಿನ ಅಗತ್ಯತೆಯನ್ನು

ಅರುಚಿಯುಂ ನಿರ್ನಿದ್ರತೆಯುಂ ಜಾಡ್ಯವ
ಪರಿಹರಿಸುವದು ಪ್ರಾಣಧಾರಣೆಯು ಮಾಡುವದಂ
ವರ ಬಿಸಿನೀರಿನ ಗುಣವಿದ
ಕುರುವಿಪರೀತವನು ಮಾಳ್ಪುದು ತಾ ತಣ್ಣೀರಂ

ಎಂದು ಬಿಸಿನೀರು ಅರುಚಿಯನ್ನೂ ನಿದ್ರೆ ಇಲ್ಲದುವನ್ನೂ ಪರಿಹರಿಸುವುದೆಂಬ ಅಭಿಪ್ರಾಯವಿದೆ. ಬ್ರಹ್ಮಕವಿ ರೋಗಗಳಿಗೆ ಚಿಕಿತ್ಸೆಯನ್ನು ಸೂಚಿಸುವುದರ ಜೊತೆಗೆ ಆರಂಭದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಪ್ರಾಸ್ತಾವಿಕ ಮಾತುಗಳನ್ನಾಡಿದ್ದಾನೆ. ವೈದ್ಯಕಂದದ ಏಕೈಕ ಕಾಗದದ ಪ್ರತಿ (ಕೆ ಬಿ ೧೭೮) ಮಾತ್ರ ಲಭ್ಯವಿದೆ. ಇದರಲ್ಲಿ ಬೇರೆ ಬೇರೆ ರೀತಿಯ ಅಕ್ಷರಗಳಿರುವುದರಿಂದ ಹಲವು ವ್ಯಕ್ತಿಗಳು ಸೇರಿ ಪ್ರತಿಮಾಡಿದಂತೆ ತೋರುತ್ತದೆ. ಬ್ರಹ್ಮಕವಿಯ ಸಮಕಾಲೀನನಾಗಿದ್ದ ತಿಮ್ಮರಾಜಗೌಡ ಎಂಬಾತನು ಸ್ತ್ರೀವೈದ್ಯ ಎಂಬ ಕಿರುಕೃತಿಯನ್ನು ಬರೆದಿರುವ ಸಂಗತಿ ಕವಿಚರಿತೆಕಾರರ ಸಂಪುಟಗಳಿಂದ ತಿಳಿದುಬರುತ್ತದೆ.

'ವೈದ್ಯಚಿಂತಾಮಣಿ' ಎಂಬ ಹೆಸರಿನಲ್ಲಿ ಏಳು ಹಸ್ತಪ್ರತಿಗಳು ದೊರೆಯುತ್ತವೆ. ಇವುಗಳಲ್ಲಿ ಕೆ ೭೬೫, ಕೆ ೯೭೬, ಕೆ ೪೫೯ ಸಂಖ್ಯೆಯ ಹಸ್ತಪ್ರತಿಗಳು ಒಂದು ಗುಂಪಿಗೆ ಸೇರುತ್ತವೆ. ಈ ಗುಂಪಿನ ಕೃತಿಯ ಕರ್ತೃ ವಲ್ಲಭೇಂದ್ರ. ಕಾಲವೊಂದನ್ನು ಬಿಟ್ಟು ಇತರ ಇತಿವೃತ್ತಗಳನ್ನು ಕವಿಯೆ ಹೇಳಿಕೊಂಡಿದ್ದಾನೆ. ಈತನ ತಂದೆ ಶ್ರೀವತ್ಸ ಗೋತ್ರದ ಅಮರೇಶ್ವರ ಭಟ್ಟ. 'ಜನಾನಾಂ ಹಿತ ಕಾರಣಂ' ಈ ಗ್ರಂಥವನ್ನು ರಚಿಸಿದಂತೆ ತಿಳಿದುಬರುತ್ತದೆ. ನಾಡಿ ಪರೀಕ್ಷೆ, ಪಿತ್ತ ಲಕ್ಷಣ, ಶ್ಲೇಷ್ಮ ಲಕ್ಷಣಗಳನ್ನು ವಿವರವಾಗಿ ವರ್ಣಿಸಿ, ಇವರಲ್ಲಿ ಔಷಧಗಳು ಹಾಗೂ ಬೇರೆ ಬೇರೆ ಚೂರ್ಣಗಳನ್ನು ಹೇಳಿದೆ. ವಲ್ಲಭೇಂದ್ರ ತೆಲುಗುಭಾಷೆಯನ್ನು ಬಲ್ಲವನಾಗಿದ್ದಂತೆ ತೋರುತ್ತದೆ. ಕೆಲವೊಂದು ತೆಲುಗು ಮಾತುಗಳು ಕೆ ೪೫೯ನೆಯ ಹಸ್ತಪ್ರತಿಯಲ್ಲಿ ನುಸುಳಿವೆ. ಕರ್ತೃ ನಿರ್ಣಯವಾಗದ ವೈದ್ಯಚಿಂತಾಮಣಿಯ ಇತರ ನಾಲ್ಕು ಹಸ್ತಪ್ರತಿಗಳಲ್ಲಿ ಎರಡು ಪ್ರತಿಗಳು ಶ್ಲೋಕಕ್ಕೆ ಬರೆದ ಟೀಕುಗಳು, ಉಳಿದೆರಡು ಗದ್ಯದಲ್ಲಿವೆ. ಇವುಗಳಲ್ಲಿ ಕೆ ಬಿ ೬೬೩ ಗದ್ಯಕೃತಿ ಸಾಕಷ್ಟು ದೊಡ್ಡ ಗ್ರಂಥವಾಗಿದ್ದು ವಾತ ಪಿತ್ತ ಶ್ಲೇಷ್ಮ ಜ್ವರ ಸನ್ನಿಪಾತ ವಾಂತಿ ಮೊದಲಾದುವುಗಳಿಗೆ ಅಂಜನ ಕಷಾಯ ಘೃತ ರಸಾಯನಗಳನ್ನು ಔಷಧವಾಗಿ ನೀಡುವ ಬಗೆಯನ್ನು ವಿವರಿಸುತ್ತದೆ. ವಾತ ಪಿತ್ತ ಶ್ಲೇಷ್ಮದಿಂದ ಉಂಟಾಗುವ ಮೂರು ವಿಧದ ಮೂಲವ್ಯಾಧಿಯನ್ನು ಗುರುತಿಸಲಾಗಿದೆ. ವಾತದಿಂದ ಒದಗುವ ಮೂಲವ್ಯಾಧಿಯ ಲಕ್ಷಣ ಹೀಗಿದೆ: "ವಾತದಿಂದ ಹುಟ್ಟಿದ ಮೂಲವ್ಯಾಧಿಗೆ ಸಾಸಿವೆ ಪ್ರಮಾಣವಾಗಲಿ ಗುರುಗಂಜಿ ಪ್ರಮಾಣವಾಗಲಿ ಆಸನದಲ್ಲಿ ಮೊಳೆಗಳು ಉಂಟಾಗಿ ಮುಳ್ಳುಚುಚ್ಚುವ ಹಾಗೆ ಚುಚ್ಚುವುದು ರಕ್ತ ಸುರಿವುದು ಮಲ ಬಿಡದೆ ಶಬ್ದ ಉಂಟಾಗಿಹುದು ಹೊಟ್ಟೆನೋವು ಇದು ವಾತದಿಂದ ಉಂಟಾದ ಮೂಲವ್ಯಾಧಿಯೆಂದರಿವುದು." ಈ ಮೂಲವ್ಯಾಧಿಗೆ ಕೆಲವೊಂದು ಔಷಧವನ್ನು ಹೇಳಿ ಅದಕ್ಕೆ ಅನುಗುಣವಾದ ಪಥ್ಯವನ್ನು ಸೂಚಿಸಿದೆ—"ಬೇಳೆಯಸಾರು ಹೆಸರುಕಟ್ಟು ಹುರುಳಿಕಟ್ಟು ಮಜ್ಜಿಗೆ ನೆಲವಾಗರ ಹವಣವರಿತು ಭೋಜನವ ಮಾಡುವುದು ಬೆಳ್ಳಿ ಪಡವಲಕಾಯಿ ಸೂರಣದ ಗೆಡ್ಡೆ ತುಪ್ಪ ಬೆಣ್ಣೆ ಹಸುವಿನ ಮಜ್ಜಿಗೆ ಇಂಗು ಮೆಣಸು ನೆಲ್ಲಿಕಾಯಿ ಗುಳದಕಾಯಿ ನೆಲಗುಳದ ಕಾಯಿ ಕೊಮ್ಮೆಸೊಪ್ಪು ಮೂಲಂಗಿ ಜೀರಿಗೆ ಹುರುಳಿ ದುಗ್ಗಳಿಸೊಪ್ಪು ಬೆಳ್ಳವತ್ತದ ಕಾಯಿ ಬಸಲೆಸೊಪ್ಪು ಎಣ್ಣೆ ಬಿದಿರಕಳಲೆ ಕುಕುಟಾಸನ ಕುದುರೆ ಮೊದಲಾದ ವಾಹನಗಳ ಹೇರಾಟ ಸಹ ಮೂಲವ್ಯಾಧಿಗೆ ಅಪಥ್ಯಗಳು." ಕನ್ನಡ ಆಯುರ್ವೇದ ಗ್ರಂಥಗಳಲ್ಲಿ 'ಲೋಹಶುದ್ಧಿ' ವೈದ್ಯದ ಒಂದು ಭಾಗವಾಗಿಯೆ ಬಂದಿದೆ. ಅಂತೆಯೆ ಇಲ್ಲಿ ಮುತ್ತು ಮರಕತ ನೀಲ ಮೊದಲಾದ ನವರತ್ನಗಳನ್ನೂ ಕಂಚು ಇತ್ಯಾದಿ ಲೋಹಗಳನ್ನೂ ಶುದ್ಧಿಮಾಡುವ ಕ್ರಮ ವಿವರಿಸಿದೆ.

ಈವರೆಗೆ ಕರ್ತೃನಿರ್ದಿಷ್ಟವಿರುವ ಆಯುರ್ವೇದ ಕೃತಿಗಳನ್ನು ಪರಿಶೀಲಿಸಲಾಯಿತು. ಕರ್ತೃಕಾಲ ವಿಚಾರ ತಿಳಿಯದಂಥ ಹಲವಾರು ವೈದ್ಯಗ್ರಂಥಗಳು ಸಾಕಷ್ಟಿವೆ. ಇವುಗಳಲ್ಲಿ ಹೆಚ್ಚಿನ ಕೃತಿಗಳು ಸಂಸ್ಕೃತ ವೈದ್ಯಗ್ರಂಥಗಳಿಗೆ ಬರೆದ ಕನ್ನಡ ಟೀಕುಗಳಾಗಿವೆ. ಇನ್ನು ಮುಂದೆ ಅಂಥ ಕೃತಿಗಳನ್ನು ಅವಲೋಕಿಸಬಹುದು. ಇತ್ತೀಚೆಗೆ ಗುಂಡ್ಲುಪೇಟೆ ತಾಲ್ಲೂಕಿನ ಮೂಡುಗೂರು ಮೇಷ್ಟ್ರು ಶ್ರೀ ದೇವಪ್ಪ

೬೬೨ನೆಯ ಸಂಖ್ಯೆಯ ಪ್ರತಿಯಲ್ಲಿ ೧೧ ಪತ್ರಗಳು ಮಾತ್ರವಿದ್ದು ವಿವಿಧ ಬಗೆಯ ಭಸ್ಮಚೂರ್ಣಗಳನ್ನು ಮಾಡುವ ವಿಧಾನಗಳಿವೆ. ಇದೇ ಬಗೆಯ ಮತ್ತೊಂದು 'ವೈದ್ಯ' ಗ್ರಂಥ (ಕೆ ಬಿ ೭೦೩) ೭ ಪತ್ರಗಳಿರುವ ಗದ್ಯಕೃತಿ. ಇಲ್ಲಿ "ಭಂಗು ಹತ್ತಿದವರಿಗೆ ನಲವರೆ ಬೇರನ್ನು ಗಂಧಕಾಲರಿದಳಯಿಂ ನಿಂಬೆಹುಳಿಯಲಿ ಅರದು ಪೂಸಲು ಭಂಗು ಮಾಯುವದು" ಎಂದು ಭಂಗು ಹುಳುಕಡ್ಡಿ ಜ್ವರ ಮೊದಲಾದ ಕೆಲವು ರೋಗಗಳಿಗೆ ಔಷಧಗಳನ್ನು ತಿಳಿಸಿದೆ. ಕೆ ಬಿ ೭೨೩ ಸಂಖ್ಯೆಯ ಹಸ್ತಪ್ರತಿಯಲ್ಲಿ ೧೩ ಪತ್ರಗಳಲ್ಲಿ ವೈದ್ಯವಿಚಾರವನ್ನು ನಿರೂಪಿಸಿದೆ. ಇದರಲ್ಲಿ ಶಿಶುಗಳ ಬಲವರ್ಧನೆಗೆ ನೀಡುತ್ತಿದ್ದ 'ಬಾಲಾಮೃತ' ಮಾಡುವ ವಿಧಾನ ಮತ್ತು ಕೆಲವು ಔಷಧಗಳಿವೆ. ಈ ಪ್ರತಿಯ ಕಾಲ ಖಚಿತವಾಗಿಲ್ಲದಿದ್ದರೂ ೧೯ನೆಯ ಶತಮಾನಕ್ಕೆ ಹಿಂದೆ ಹೋಗುವುದಿಲ್ಲ.

'ವೈದ್ಯಗ್ರಂಥ' ಎಂಬ ಹೆಸರಿನಲ್ಲಿ ಹದಿನೈದು ಹಸ್ತಪ್ರತಿಗಳು ದೊರೆಯುತ್ತವೆ. ಕೆ ೭೦೩ ಸಂಖ್ಯೆಯ ವೈದ್ಯಗ್ರಂಥ ೨೧ ಪತ್ರಗಳಿರುವ ಒಂದು ಅಪೂರ್ಣ ಕೃತಿ. ಇದರಲ್ಲಿ ಮೂತ್ರಪರೀಕ್ಷೆ ವಾತಪಿತ್ತಾದಿಗಳಿಂದ ಉಂಟಾಗುವ ರೋಗಗಳು ಅವುಗಳಿಗೆ ಔಷಧಗಳು ಕಂಡುಬರುತ್ತವೆ. ಕೆ ೭೨೦ ಸಂಖ್ಯೆಯ ಹಸ್ತಪ್ರತಿ ಶ್ರೀರಂಗಪಟ್ಟಣದಲ್ಲಿ ಪ್ರತಿಯಾದಂತೆ ತೋರುತ್ತದೆ. ಇದೊಂದು ದೀರ್ಘ ಗದ್ಯಗ್ರಂಥವಾಗಿದ್ದು ಸಾಂಪ್ರದಾಯಿಕ ಕ್ರಮದಲ್ಲಿ ವಿವಿಧ ರೋಗಗಳಿಗೆ ಚಿಕಿತ್ಸೆಯನ್ನು ಹೇಳಿದೆ. ದೇಹದಲ್ಲಿ ೭೨ ಸಾವಿರ ನಾಡಿಗಳು ವೀಣೆಯ ತಂತಿಯ ಹಾಗೆ ಸೇರಿವೆ. ಅದರೊಳಗೆ ಮೂರು ಮುಖ್ಯ ನಾಡಿಗಳನ್ನು ಪ್ರಸ್ತಾಪಿಸುವುದಾಗಿ ಗ್ರಂಥಕರ್ತ ನಿವೇದಿಸಿದ್ದಾನೆ. ಕೆ ೭೬೬ ಸಂಖ್ಯೆಯ ವೈದ್ಯಗ್ರಂಥದಲ್ಲಿ ಸಕಲ ಜ್ವರಗಳಿಗೆ ಅನ್ವಯವಾಗುವ ಪಾಷಾಣ ಮಾತ್ರೆ, ಪ್ರವಾಳ ಭಸ್ಮ ಮೊದಲಾದ ಸಂಗತಿಗಳಿವೆ. ಈ ಕೃತಿಯಲ್ಲಿ ಸಕಲಜ್ವರಗಳಿಗೂ ಸಂಜೀವಿನಿಯಾಗುವಂಥ ಪಾಷಾಣಮಾತ್ರೆ ತಯಾರಿಸುವ ವಿಧಾನ ಉಲ್ಲೇಖಗೊಂಡಿದೆ: "ಶಂಖ ಪಾಷಾಣವನ್ನು ಸುಣ್ಣದಲ್ಲಿ ಬಿರಿಹುಯ್ದು ಇದ್ದು ೩ ದಿನ ಸುಣ್ಣದಲ್ಲೆ ಇಟ್ಟು ಅನಂತರ ನೀರಿನಿಂದ ತೊಳೆದು ಇಟ್ಟುಕೊಂಡು ಕಾಡುಮೂಲಂಗಿಸೊಪ್ಪಿನ ರಸದಲ್ಲಿ ೭ ದಿನ ನೆನೆಹಾಕಿ ನಂತರ ತೊಳೆದು ಪುನಹ ಹಿರಿಮದ್ದಿನ ಸೊಪ್ಪಿನ ರಸದಲ್ಲಿ ೭ ದಿನ ನೆನೆಹಾಕಿನಂತರ ತೊಳೆದು ಇಟ್ಟುಕೊಂಡು ೧ ತೊಲ ಪಾಷಾಣ ೨ ತೊಲ ಗುಳಕಾಯಿ ಸಹ ಪುಡಿಮಾಡಿ ಹಿರೀಮದ್ದಿನ ಸೊಪ್ಪಿನರಸದಲ್ಲಿ ೩ ದಿನ ಅರೆದು ಹೆಸರುಕಾಳು ಪ್ರಮಾಣ ಗುಳಿಗೆ ಮಾಡಿ ನೆರಳಲ್ಲಿ ಒಣಗಿಸಿ ಇಟ್ಟುಕೊಂಡು ಎಲ್ಲಾ ಜ್ವರಗಳಿಗೂ ಕೊಡಬಹುದು." ಹೂಗಣ್ಣು, ಮೊಳೆಗಣ್ಣು ಮೊದಲಾದ ನೇತ್ರರೋಗಗಳಿಗೆ ಇನ್ನಿತರ ವ್ಯಾಧಿಗಳಿಗೆ ಕೆ ೧೪೨೯ ಸಂಖ್ಯೆಯ ಪ್ರತಿಯಲ್ಲಿ ಔಷಧಗಳು ಉಕ್ತವಾಗಿವೆ. ಕೆ ೧೪೩೩ ಸಂಖ್ಯೆಯ ಪ್ರತಿಯು ೪೪೩ ಪತ್ರಗಳನ್ನು ಹೊಂದಿರುವ ಬೃಹತ್ಕೃತಿಯಾಗಿದೆ. ಇದರಲ್ಲಿ ಜ್ವರ, ಧನುರ್ವಾತ, ಸರ್ಪದಷ್ಟ ಮೊದಲಾದವುಗಳಿಗೆ ಚಿಕಿತ್ಸೆ ಹೇಳಿದೆ. ಈ ಹಸ್ತಪ್ರತಿ ವಿಶಿಷ್ಟವಾದುದು. ಇದರ ೫೪ನೆಯ ಪತ್ರದಿಂದ ೧೦೩ನೆಯ ಪತ್ರದವರೆಗೆ ವೈದ್ಯ ಚಿಂತಾಮಣಿ ಎಂಬ ಕೃತಿಯಿದೆ. ಈ ಭಾಗದಲ್ಲಿ ಸಂಸ್ಕೃತ ಶ್ಲೋಕಕ್ಕೆ ಕನ್ನಡ ಟೀಕು ಇದೆ. ಅನಂತರ ೧೨೫-೨೦೨ರ ವರೆಗೆ ತೆಲುಗುಟೀಕು ಕಂಡುಬರುತ್ತದೆ. ೨೦೩ ರಿಂದ

ಮುಂದಕ್ಕೆ ಕನ್ನಡವಲ್ಲಿ ಟೀಕು ಮುಂದುವರೆದಿದೆ. ಕನ್ನಡ ಭಾಗದಲ್ಲಿ ಕುಷ್ಠ, ಅಪಸ್ಮಾರ, ನೇತ್ರರೋಗ, ಪಿತ್ತರೋಗ, ತಲೆನೋವು, ಶ್ಲೇಷ್ಮರೋಗಗಳಿಗೆ ಮದ್ದುಗಳನ್ನು ಸೂಚಿಸಿದೆ. ಇನ್ನೊಂದು ವೈದ್ಯಗ್ರಂಥದಲ್ಲಿ (ಕೆ ೧೮೫೩) ಜ್ವರಚಿಕಿತ್ಸೆಗೆ ಜ್ಯೋತಿಷ ಅಂಶಗಳೂ ಸೇರಿವೆ. ಅಶ್ವವೈದ್ಯ ಮತ್ತು ನರವೈದ್ಯಗಳೆರಡನ್ನೂ ಒಂದೇ ಕೃತಿಯಲ್ಲಿ ಹೇಳಿರುವುದು ಕೆ ಎ ೩೯ ಸಂಖ್ಯೆಯ ವೈದ್ಯಗ್ರಂಥದ ವಿಶೇಷ. ವೈದ್ಯಗ್ರಂಥದ ಇಷ್ಟೊಂದು ಹಸ್ತಪ್ರತಿಗಳಿದ್ದರೂ ಕೆಲವು ಹಸ್ತಪ್ರತಿಗಳು ತೀರ ತ್ರುಟಿತವಾಗಿ ಹೋಗಿವೆ.

'ವೈದ್ಯಚಿಕಿತ್ಸೆ' ಎಂಬ ನಾಮಧೇಯದಲ್ಲಿ ಎರಡು ಕೃತಿಗಳಿವೆ. ಒಂದು ಕೃತಿ (ಕೆ ೧೬೧೦) ಶ್ಲೋಕಕ್ಕೆ ಬರೆದ ಟೀಕೆಯಾದರೆ ಮತ್ತೊಂದು (ಕೆ ೧೬೧೬) ಗರ್ಭಿಣಿ ಚಿಕಿತ್ಸೆ ಬಿಕ್ಕಳಿಕೆ ಮೊದಲಾದ ವ್ಯಾಧಿಗಳಿಗೆ ಗದ್ಯದಲ್ಲಿ ಔಷಧೋಪಚಾರಗಳನ್ನು ತಿಳಿಸುತ್ತದೆ.

'ವೈದ್ಯದ ಪುಸ್ತಕ' ಎಂಬ ಹೆಸರಿನಲ್ಲಿ ಮೂರು ಹಸ್ತಪ್ರತಿಗಳು ಕಂಡುಬರುತ್ತವೆ. ಕೆ ೧೧೦೫ ಸಂಖ್ಯೆಯ ಪ್ರತಿಯಲ್ಲಿ ೧-೭೫ ಪ್ರತಿಗಳಿವೆ. ಇದರಲ್ಲಿ ಜ್ವರಕ್ಕೆ ಬೇರೊಂದು ಬಗೆಯ ಚಿಕಿತ್ಸೆಯಿದೆ: "ಲೊಕ್ಕಿಯ ಕೊನರು ತುಂಬೆಯ ಪುಷ್ಪ ತುಳಸಿಯ ಕೊನರು ಉಳ್ಳಿ ಮೆಣಸು ಸುಂಟಿ ಇವಂ ಸಮಾನಂಗೊಂಡು ಅರೆದು ಗಜಗಿನ ಗಾತ್ರ ಗುಳಿಗೆಯ ಮಾಡಿ ದಿನವೊಂದಕ್ಕೆ ಮೂರುಗುಳಿಗೆಯ ಕೊಂಡರೆ ಎಂತಪ್ಪ ಜ್ವರ ಮಾಣ್ಗು" ಸುಮಾರು ೧೧೮ ಪತ್ರಗಳಿರುವ ಕೆ ೧೧೦೬ ಸಂಖ್ಯೆಯ ಪ್ರತಿಯಲ್ಲಿ ಉಷ್ಣಮೇಹ, ಬಹುಮೂತ್ರ ಮೊದಲಾದ ರೋಗಗಳಿಗೆ ಔಷಧವನ್ನು ಹೇಳಿದೆ. ಕೆ ೧೪೩೦ ಸಂಖ್ಯೆಯ ವೈದ್ಯ ಪುಸ್ತಕದಲ್ಲಿ ಜ್ವರದಿಂದ ಹಿಡಿದು ಹೊಟ್ಟೆ ಹುಳುವಿನವರೆಗೆ ವಿವಿಧ ರೋಗಗಳಿಗೆ ಔಷಧವನ್ನು ಸೂಚಿಸಿದೆ. ಹೊಟ್ಟೆಹುಳುವನ್ನು ಹಸುವಿನ ಹಾಲು, ಮೊಸರು, ತುಪ್ಪ, ಸಗಣಿ, ಗೋಮೂತ್ರ ಇವುಗಳಿಂದ ಪರಿಹಾರ ಮಾಡುವ ಸಾಧ್ಯತೆಯನ್ನು ತಿಳಿಸಿದೆ.

ದೇಹದಲ್ಲಿ ಕಂಡುಬರುವ ವ್ಯಾಧಿಗಳು ಮನುಷ್ಯನ ಕರ್ಮಫಲ, ಅದೃಶ್ಯ ಶಕ್ತಿಗಳ ಕೈವಾಡ ಎಂಬ ನಂಬಿಕೆ ಒಂದು ಕಾಲಕ್ಕಿತ್ತು. ಹಾಗಾಗಿ ಕೆಲವು ಸಂದರ್ಭದಲ್ಲಿ ವೈದ್ಯದೊಂದಿಗೆ ಯಂತ್ರಮಂತ್ರವೂ ತಳುಕು ಹಾಕಿಕೊಂಡಿರುವುದುಂಟು. 'ವೈದ್ಯ ಯಂತ್ರಮಂತ್ರ'ಗಳ ಸುಮಾರು ಮೂರು ಪ್ರತಿಗಳು (ಕೆ ೧೭೨೫, ಕೆ ೧೩೯೩, ಕೆ ಬಿ ೬೦೮) ದೊರೆಯುತ್ತವೆ. ಇವುಗಳಲ್ಲಿ ಕೆಮ್ಮು, ನಾರುಣ್ಣಿ, ಬಾಲಗ್ರಹ ಮೊದಲಾದುವುಗಳಿಗೆ ಔಷಧ ಹಾಗೂ ಯಂತ್ರಮಂತ್ರಗಳನ್ನು ಮಾಡುವ ವಿಧಾನವನ್ನು ನಿರೂಪಿಸಿದೆ. ಮಕ್ಕಳಾಗದಿದ್ದರೆ, ಮೈನೆರೆಯದಿದ್ದರೆ, ಹಲ್ಲುಕಡಿಯುತ್ತಿದ್ದರೆ ನಿವಾರಕವಾಗಿ ನೀಲಕಂಠ ಉದ್ಧರಣೆಯನ್ನು ಹೇಳಿದೆ. ನಾರುಣ್ಣಿಗೆ ಬ್ರಹ್ಮದಂಡೆಯ ಬೇರನ್ನು ಎಮ್ಮೆ ಬೆಣ್ಣೆಯಲ್ಲಿ ಕಲಸಿ ಕಟ್ಟಿದರೆ ವಾಸಿಯಾಗುವುದೆಂದು ತಿಳಿಸಲಾಗಿದೆ. ಕೆ ಎ ೪೮೯ ಸಂಖ್ಯೆಯ ಪ್ರತಿ ವೈದ್ಯಶಕುನವನ್ನು ಪ್ರಸ್ತಾಪಿಸುತ್ತದೆ. ವೈದ್ಯವಿಷಯ (ಕೆ ೪೮೯) ಎಂಬ ಗ್ರಂಥವನ್ನು ಜ್ವರ, ಸನ್ನಿಪಾತ ಮೊದಲಾದ ರೋಗಗಳಿಗೆ ಔಷಧಗಳು ಕಂಡುಬರುತ್ತವೆ.

'ವೈದ್ಯಶಾಸ್ತ್ರ' ಎಂಬ ಅಭಿದಾನದಲ್ಲಿ ಸುಮಾರು ಒಂಬತ್ತು ಹಸ್ತಪ್ರತಿಗಳಿದ್ದು ಪರಸ್ಪರ ವ್ಯತ್ಯಾಸಗಳಿವೆ. ಇವು ೩ ಪುಟದಿಂದ ೨೫೦ ಪುಟದವರೆಗೆ ಹಲವು ಆಕಾರದಲ್ಲಿವೆ. ಕೆ ೮೭೯ ಸಂಖ್ಯೆಯ ವೈದ್ಯಶಾಸ್ತ್ರ ಹಸ್ತಪ್ರತಿಯಲ್ಲಿ ಜ್ವರ, ಚಳಿ, ಕೆಮ್ಮು, ಕಿವಿಬೇನೆ, ಗರ್ಭನಿಲ್ಲುವುದು, ಸತ್ತ ಕೂಸು ಬೀಳುವುದು, ಅತಿಸಾರ, ಗರ್ಭನಾಶ, ರುತುಕೊಡುವುದು, ಕೆಮ್ಮು, ಚಳಿ ಮೊದಲಾದ ರೋಗಗಳಿಗೆ ಚಿಕಿತ್ಸೆಯನ್ನು ಹೇಳಿದೆ. ಕೆ ೯೩೭ ಸಂಖ್ಯೆಯ ಪ್ರತಿಯಲ್ಲಿ ವಾತ, ಪಿತ್ತ, ಅಪಸ್ಮಾರ, ಮೊಲೆನಾಗರ, ಬಾಣಂತಿಕೆಮ್ಮು ಜಲಕಟ್ಟುವುದು, ಹುಣ್ಣು, ಪ್ರಮೇಹ, ಉರಿಜ್ವರ, ಮಹಾಜ್ವರ, ಕ್ಷಯ, ರೋಗಗಳಿಗೆ ನಿವಾರಣಾ ಕ್ರಮಗಳಿವೆ. ವಿಷಯಾನುಕ್ರಮಣಿಕೆ ವಸ್ತುವಿನ್ಯಾಸದಲ್ಲಿ ವೈದ್ಯ ಸಾರಸಂಗ್ರಹವನ್ನು ತಕ್ಕಮಟ್ಟಿಗೆ ಹೋಲುವ ಕೆ ೧೪೩೨ ಸಂಖ್ಯೆಯ ಪ್ರತಿ ನಾಡಿ ಪರೀಕ್ಷೆಯಿಂದ ಆರಂಭವಾಗಿ ವಾತಪಿತ್ತಾದಿ ಹಲವು ರೋಗಗಳಿಗೆ ಔಷಧವನ್ನು ತಿಳಿಸುತ್ತದೆ. ಕೆ ಎ ೩೫೫ ಪ್ರತಿಯಲ್ಲಿ ಔಷಧಗಳ ಜೊತೆಗೆ ಯಂತ್ರಮಂತ್ರಗಳ ವಿಚಾರಗಳೂ ಸೇರಿಕೊಂಡಿವೆ. ಇದರ ಲಿಪಿಕಾರ ಕುದೇರ ದೇವಚಂದ್ರಯ್ಯನವರ ಮಗ ಪದ್ಮರಾಜ. ಪ್ರತಿಯಾದ ಕಾಲ ಕ್ರಿ ಶ ೧೮೬೫ ಮತ್ತೊಂದು ಹಸ್ತಪ್ರತಿ ಕೆ ಬಿ ೬೮೯ ಕೂಡ ಇದೇ ಗುಂಪಿಗೆ ಸೇರುವಂಥದ್ದು.

'ವೈದ್ಯಸಂಗ್ರಹ' ಎಂಬ ಹೆಸರಿನಲ್ಲಿ ೮ ಕೃತಿಗಳು ಕಂಡುಬರುತ್ತವೆ. ಇವುಗಳಲ್ಲಿ ಕೆ ೬೯೭ ಸಂಖ್ಯೆಯ ಹಸ್ತಪ್ರತಿ ೪ ಪತ್ರಗಳಿರುವ ಕಿರುಕೃತಿಯಾಗಿದ್ದು ಚಿನ್ನ, ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ, ಸೀಸ, ತವರ, ಕಬ್ಬಿಣ ಈ ನವಲೋಹಗಳನ್ನು ಶುದ್ಧಿ ಮಾಡುವ ಕ್ರಮವನ್ನು ವಿವರಿಸುತ್ತದೆ. ಕೆ ೯೧೪ ಹಸ್ತಪ್ರತಿಯಲ್ಲಿ ಕಣ್ಣು ತೊಳೆಯುವ ಕಷಾಯ, ಕೀವು, ರಸಿಗೆ, ಸುರಿಯುವಿಕೆ ಇತ್ಯಾದಿ ವ್ಯಾಧಿಗಳಿಗೆ ಔಷಧಗಳಿವೆ. ಕೆ ೧೨೩೧ ಸಂಖ್ಯೆಯ ಪ್ರತಿಯಲ್ಲಿ ಪತ್ರಗಳು ಕ್ರಮವಾಗಿಲ್ಲ. ಇದರಲ್ಲಿ ಮೂಗಿನ ರೋಗಗಳು ಅರೋಚಕ ಮೊದಲಾದುವುಗಳಿಗೆ ಚಿಕಿತ್ಸೆಗಳು ದೊರೆಯುತ್ತವೆ. ಶ್ಲೋಕಗಳಿಗೆ ಟೀಕನ್ನು ಒದಗಿಸಿರುವ ಕೆ ೧೫೭೮ ಸಂಖ್ಯೆಯ ವೈದ್ಯಸಂಗ್ರಹ ಒಂದು ಸಮ್ಮಿಶ್ರ ಪ್ರತಿ. ಬೇರೆ ಬೇರೆ ಪ್ರತಿಕಾರರು ಇಲ್ಲಿ ಕೈಯಾಡಿಸಿರುವುದರಿಂದ ವಿಷಯ ನಿರೂಪಣೆಯಲ್ಲಿ ಕ್ರಮಬದ್ಧತೆಯಿಲ್ಲ. ಆದರೂ ಅತಿಸಾರ, ಮೂಲವ್ಯಾಧಿ, ಕಾಮಾಲೆ, ಪಾಂಡುರೋಗ ಮೊದಲಾದ ವ್ಯಾಧಿಗಳಿಗೆ ನಿವಾರಕಗಳು ದೊರೆಯುತ್ತವೆ. ಜೈನ ಸಂಪ್ರದಾಯಕ್ಕೆ ಸೇರಿದ ವೈದ್ಯಸಂಗ್ರಹ (ಕೆ ೧೭೨೭) ಮೂಗೂರು ಪಾರ್ಶ್ವನಾಥ ಬಸ್ತಿಯಲ್ಲಿ ಪ್ರತಿಯಾಗಿರುವಂಥದು. ಇದರಲ್ಲಿ ಸಂಭೋಗಲಕ್ಷಣ, ಪಿಂಡೋತ್ಪತ್ತಿ, ನಂಜಿನ ಜ್ವರ, ಚಳಿಜ್ವರ, ಹುಳುಕಡ್ಡಿ, ಬಾಣಂತಿಜ್ವರ, ವಾಂತಿ, ಹೆನೆತ್ತರು, ಬಹುಮೂತ್ರ, ಅತಿಸಾರ, ಗ್ರಹಣಿ, ವಿಷಚಿಕಿತ್ಸೆ, ಕಾಮಾಲೆ, ಹುಚ್ಚುನಾಯಿಕಡಿತ, ಕಿರುನಾಲಿಗೆ ಬೀಳುವುದು, ಸಿಕ್ಕುಮೂತ್ರ, ಬಹುಮೂತ ಇತ್ಯಾದಿ ರೋಗಗಳಿಗೆ ನೀಡುವಂಥ ಚೂರ್ಣ, ಕಷಾಯ, ಘೃತಗಳನ್ನು ವಿವಿಧ ಔಷಧಗಳನ್ನು ಪ್ರಸ್ತಾಪಿಸಿದೆ. ಕೆ. ಬಿ. ೬೬೫ ಸಂಖ್ಯೆಯ ಪ್ರತಿಯಲ್ಲಿ ಭೇದಿ ಜ್ವರದಂಥ ಕೆಲವು ಸಾಮಾನ್ಯ ಖಾಯಿಲೆಗಳಿಗೆ ಪರಿಹಾರ ಹೇಳಿದೆ. ಇಲ್ಲಿ ಉಕ್ತವಾಗಿರುವ ಕೆಲವು ಗುಳಿಗೆಗಳಿಗೆ ಅನೇಕ ರೋಗಗಳನ್ನು ಗುಣಪಡಿಸುವಂಥ ಸಾಮರ್ಥ್ಯವಿರುವುದನ್ನು ಗಮನಿಸಬಹುದು ಭೇದಿಗೆಂದು ಸಿದ್ಧ

ಪಡಿಸಿದ ಒಂದು ಗುಳಿಗೆಯನ್ನು ಲೊಕ್ಕೆರಸದಲ್ಲಿ ಕೊಟ್ಟರೆ ಪಂಚಗುಲ್ಮ, ಪೈತ್ಯಗುಲ್ಮ ನಿವಾರಣೆ. ಇದೇ ಗುಳಿಗೆ ಜೀರಿಗೆ ಕಷಾಯದಲ್ಲಿ ಕೊಟ್ಟರೆ ಶ್ಲೇಷ್ಮರೋಗ ಪರಿಹಾರ. ಕೆ. ಬಿ. ೨೦೦ ಸಂಖ್ಯೆಯ ಪ್ರತಿಯಲ್ಲಿ ರಸಶುದ್ಧಿಮಾಡುವ ಕ್ರಮವನ್ನು ತಿಳಿಸಿದೆ. ವೈದ್ಯಸಂಗ್ರಹದ ಮತ್ತೊಂದು ಹಸ್ತಪ್ರತಿ (ಕೆ. ಬಿ. ೨೭೬) ೫೭೦ ಪತ್ರಗಳ ಬೃಹದ್ಗ್ರಂಥವೊಂದನ್ನು ಹೊಂದಿದೆ. ಸಂಸ್ಕೃತ ಭಾಗವೇ ಅಧಿಕವಾಗಿರುವ ಈ ಪ್ರತಿಯಲ್ಲಿ ವಾತಪಿತ್ತಾದಿ ಹಲವು ರೋಗಗಳಿಗೆ ಚಿಕಿತ್ಸೆಯಿದೆ.

ಆಯುರ್ವೇದ ಚಿಕಿತ್ಸೆ (ಕೆ೧೭೫) ಎಂಬ ಅಪೂರ್ಣ ಗದ್ಯ ಕೃತಿಯಲ್ಲಿ ವಿವಿಧ ಬಗೆಯ ಚೂರ್ಣ ಹಾಗೂ ಇನ್ನಿತರ ಔಷಧಗಳನ್ನು ಹೇಳಿದೆ.

ಷಟ್ಪದಿಯಲ್ಲಿ ರಚಿತವಾದ ಏಕೈಕ ಆಯುರ್ವೇದ ಕೃತಿ (ಕೆ. ಬಿ. ೬೩೮) ವೈದ್ಯಸಾರ. ಈ ಕಿರುಕೃತಿಯಲ್ಲಿ ಮೊಳೆರೋಗ, ಹಳೆಯಹುಣ್ಣು, ಕ್ಷಯರೋಗ, ಅತಿಸಾರ, ಉರಿಮೂತ್ರ, ಬಾಣಂತಿರೋಗ, ಕಣ್ಣುಬೇನೆ, ತೊನ್ನು, ಬಂಜೆತನ, ತಲೆಬೇನೆ, ಹಲ್ಲುಬೇನೆ, ಅಜೀರ್ಣ, ಹೊಟ್ಟೆಶೂಲೆ, ವಾತ ಮೊದಲಾದ ೭೨ ರೋಗಗಳಿಗೆ ಔಷಧಗಳಿವೆ. ಸನ್ನಿಗೆ ಈ ಕೃತಿಯಲ್ಲಿ:

ಕನ್ನಿಕೆಯೆ ಕೇಳಾದಿವಾರದ
ಯಣ್ಣುಯೊಳು ನೀಂ ವಜ್ರದಲ್ಲಿಯ
ಚಿನ್ನಿಸಿವ ಬೇರನ್ನು ತಂದರಿಸುತ್ತ ಜವದಿಂದ
ಸನ್ನಿ ಮುಚ್ಚಿದ ಜಾರ ಕಣ್ಣಿಗೆ
ನನ್ನಿಯಿಂದೆಚ್ಚಿದರೆ ಸನ್ನಿಯು
ಇನ್ನು ಸಂಶಯವ್ಯಾಕೆ ಹೋಗ್ವದು ಬನ್ನಬಡಿಸದಲೆ॥

ಎಂದು ಬೇರೆ ಕೃತಿಗಳಿಂದ ಭಿನ್ನವಾದ ಚಿಕಿತ್ಸೆ ಹೇಳಿದೆ.

ಕನ್ನಡದ ಬಹಳಷ್ಟು ಆಯುರ್ವೇದ ಗ್ರಂಥಗಳು ಸಂಸ್ಕೃತಕ್ಕೆ ಋಣಿಯಾಗಿರುವುದರಿಂದ ವೈದ್ಯಕೃತಿಗಳ ಅಧ್ಯಯನದಲ್ಲಿ ನಿಘಂಟುಗಳ ಅಗತ್ಯತೆ ಇದ್ದೇ ಇದೆ. ಕೆಲವು ವೈದ್ಯನಿಘಂಟುಗಳಲ್ಲಿ ಶಬ್ದಗಳಿಗೆ ಅರ್ಥವನ್ನು ನೀಡುವುದರ ಜೊತೆಗೆ ಅನೇಕ ವ್ಯಾಧಿಗಳಿಗೆ ಔಷಧಗಳನ್ನು ಹೇಳಿರುವುದು ಕಂಡುಬರುತ್ತದೆ. ಚಿಕದೇವರಾಜನ ಪ್ರೋತ್ಸಾಹದಿಂದ ಚಿಕ್ಕಣ್ಣ ಪಂಡಿತ ಎಂಬುವನು ವೈದ್ಯನಿಘಂಟನ್ನು ರಚಿಸಿದ್ದಾನೆ. ಇದು ಸಂಸ್ಕೃತ ಶ್ಲೋಕಕ್ಕೆ ಬರೆದ ಕನ್ನಡ ಟೀಕು. ಅನಾಮಿಕನೊಬ್ಬನ ವೈದ್ಯನಿಘಂಟಿನಲ್ಲಿ (ಕೆ. ಬಿ. ೨೦೧) ಔಷಧ ವಿಚಾರವೆ ಪ್ರಧಾನವಾಗಿದೆ. ಉಳಿದ ವೈದ್ಯನಿಘಂಟುಗಳಲ್ಲಿ (ಕೆ. ಎ. ೧೬೯, ಕೆ ಎ. ೧೧೮) ಸಂಸ್ಕೃತಶಬ್ದಗಳಿಗೆ ಪರ್ಯಾಯವಾದ ಕನ್ನಡ ಶಬ್ದಗಳನ್ನು ಕೊಟ್ಟಿದೆ.

ಈವರೆಗೆ ನರವೈದ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು, ಹಸ್ತಪ್ರತಿಗಳನ್ನು ಪರಿಶೀಲಿಸಲಾಯಿತು. ಈಗ ಪ್ರಾಣಿವೈದ್ಯವನ್ನು ಕುರಿತಂತೆ ಇರುವ ಪ್ರಾಚೀನ ಕೃತಿಗಳನ್ನು ಅವಲೋಕಿಸಬಹುದು. ಪ್ರಾಣಿವೈದ್ಯದಲ್ಲಿ ಗೋವು, ಕುದುರೆ, ಆನೆಗಳಿಗೆ ಸಂಬಂಧಿಸಿದ ವ್ಯಾಧಿಗಳನ್ನು ಕುರಿತ ಗ್ರಂಥಗಳೆ ಪ್ರಮುಖವಾಗಿ ಕಂಡುಬರುತ್ತವೆ. ಏಕೆಂದರೆ ಹಸು ಸಾಕು ಪ್ರಾಣಿ. ಆನೆ ಕುದುರೆಗಳನ್ನು ಸೈನ್ಯದಲ್ಲಿ ಬಳಸುತ್ತಿದ್ದರು.

ಮನೆಯಿಂದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರಕ್ಕೆ ಸಂಗ್ರಹಿಸಿದ ಹಸ್ತಪ್ರತಿಗಳಲ್ಲಿ ಎರಡು ಆಯುರ್ವೇದಕ್ಕೆ ಸಂಬಂಧಿಸಿದ ಗ್ರಂಥಗಳು ಸೇರಿವೆ. ಎರಡೂ ಓಲೆ ಪ್ರತಿಗಳು. ಒಂದು ಪ್ರತಿಯಲ್ಲಿ ವೈದ್ಯಸಾರಕ್ಕೆ ನಮಸ್ಕಾರ ಎಂದಿರುವುದರಿಂದ ಇದು ಕೃತಿಯ ಹೆಸರೆಂಬುದು ಸ್ಪಷ್ಟ. ಆದರೆ ಕರ್ತೃ, ಕಾಲ, ವಿಚಾರಗಳು ಅಜ್ಞಾತವಾಗಿವೆ. ಈ ಕೃತಿ ಸಂಸ್ಕೃತ ಶ್ಲೋಕಕ್ಕೆ ಬರೆದ ಕನ್ನಡ ಟೀಕೆಯಾಗಿದೆ. ಒಂದನೆಯ ಅಧ್ಯಾಯದಲ್ಲಿ ವಾತಜ್ವರ ಪಿತ್ತಜ್ವರ ಶ್ಲೇಷ್ಮಜ್ವರ ಸನ್ನಿಪಾತಜ್ವರದ ಲಕ್ಷಣಗಳು ವಿವರಿಸಲ್ಪಟ್ಟಿವೆ. ಎರಡನೆಯ ಅಧ್ಯಾಯದಲ್ಲಿ ಸರ್ವವ್ಯಾಪಕ ರೋಗವಾದ ಕೆಮ್ಮಿಗೆ ನೀಡುವ ಬಗೆಬಗೆಯ ಕಷಾಯ ಚೂರ್ಣಗಳನ್ನು ಹೇಳಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಅತಿಸಾರಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ದೊರೆಯುತ್ತದೆ. ಮುಂದಿನ ಅಧ್ಯಾಯಗಳಲ್ಲಿ ಸ್ತ್ರೀರೋಗಗಳಾದ ಬಿಳಿಯಸೀರೆ, ಕೆಂಪಿನ ಸೀರೆ, ರಕ್ತಪಿತ್ತ ಸ್ತ್ರೀಯರ ರೋಗ, ಗರ್ಭಿಣಿಯರ ರಕ್ತಸ್ರಾವ, ಬಾಣಂತಿ ರೋಗ, ಕೂಸು ಬೀಳುವುದು ಇವೇ ಮೊದಲಾದ ವ್ಯಾಧಿಗಳಿಗೆ ನಿವಾರಣೋಪಾಯಗಳನ್ನು ವಿವರಿಸಿದೆ. ಈ ಹಸ್ತಪ್ರತಿಯ ಅಕ್ಷರಗಳು ಸ್ಫುಟವಾಗಿದ್ದರೂ ಓಲೆಗಳು ಅಸ್ತವ್ಯಸ್ತವಾಗಿವೆ. ಇದೇ ದೇವಪ್ಪನವರ ಮನೆಯಿಂದ ಸಂಗ್ರಹಿಸಿದ ಮತ್ತೊಂದು ಓಲೆಪುಸ್ತಕ ವೈದ್ಯಸಾರದ ಮುಂದುವರೆದ ಭಾಗದಂತೆ ತೋರುತ್ತದೆ. ಇದರಲ್ಲಿ ದಂತರೋಗ, ಉಷ್ಣರೋಗ, ನಾಸಿಕ ರೋಗ, ಕಿವುಡು, ಕಿವಿಯ ಗ್ರಂಥಿ, ವಾಂತಿ, ಹೂಗಣ್ಣು ಬಾಲಗ್ರಹ-ಬಂಜೆತನ ಇವೇ ಮುಂತಾದ ರೋಗಗಳಿಗೆ ಚಿಕಿತ್ಸೆಯಿದೆ. ಭೃಂಗಾಮಲಕ ತೈಲ, ಜಂಬೀರ ತೈಲ, ಕೂದಲು ಉದುರದಿರುವುದಕ್ಕೆ ತೈಲ, ಮಂಡೆಹುಣ್ಣಿನ ತೈಲ, ಅರೆವಲೆ ನೋವಿನ ತೈಲ ಇತ್ಯಾದಿ ಅನೇಕ ಬಗೆಯ ತೈಲಗಳನ್ನು ತಯಾರಿಸುವ ವಿಧಾನವನ್ನು ಹೇಳಲಾಗಿದೆ. ನುಗ್ಗೆಸೊಪ್ಪಿನ ರಸ ಬಿಸಿ ಮಾಡಿ ಮಂಡೆಗೆ ಒತ್ತಿದರೆ ತಲೆ ನೋವು ಪರಿಹಾರವಾಗುವುದೆಂದು ಹೇಳುವ ಈ ಗ್ರಂಥಕರ್ತ ನಮ್ಮ ಕೈಗೆಟುಕುವ ಗಿಡಮೂಲಿಕೆಗಳಿಂದಲೆ ರೋಗಗಳನ್ನು ಗುಣಪಡಿಸಬಹುದಾದ ಸರಳ ಕ್ರಮಗಳಿಗೆ ಒತ್ತುಕೊಟ್ಟಿರುವುದು ಗಮನಾರ್ಹ.

'ವೈದ್ಯದ ಪುಸ್ತಕ' ಎಂಬ ಕೃತಿಯ ಎರಡು ಹಸ್ತಪ್ರತಿಗಳಿವೆ. ಎರಡೂ ಸಂಸ್ಕೃತ ಶ್ಲೋಕಕ್ಕೆ ಬರೆದ ಟೀಕೆಗಳು. ಕೆ ೪೩೩ ಸಂಖ್ಯೆಯ ಹಸ್ತಪ್ರತಿಯ ಕಡೆಯಲ್ಲಿ "ಇದು ೧೭೬೯ನೆಯ ಇಸವಿ ಪುಷ್ಯ ಬ ೧೨ರಲ್ಲು ಹಂಗಳದಲ್ಲಿ ಇರುವ ಪುಣಜೂರು ಐಯನವರಿಗೆ ಬಸವಟ್ಟಿ ಉಪಾಧ್ಯರ ನಂಜುಂಡಯ್ಯನು ಬರೆದುಕೊಟ್ಟ ವೈದ್ಯದ ಪುಸ್ತಕಕ್ಕೆ ಜಯಮಂಗಳ ಮಹಾಶ್ರೀ" ಎಂದು ಪ್ರತಿ ಮಾಡಿದ ಕಾಲವನ್ನು ನಮೂದಿಸಿದೆ. ಈ ಆಧಾರದ ಮೇಲೆ ಮೂಲಪ್ರತಿಯ ಕಾಲವನ್ನು ಸು. ೧೩೫೦ ಎಂದುಟ್ಟುಕೊಳ್ಳಬಹುದು. ವೈದ್ಯದ ಪುಸ್ತಕವು ನಾಡಿ ಲಕ್ಷಣದಿಂದ ಶುರುವಾಗಿ ದ್ರವ್ಯಶುದ್ಧಿ, ಸನ್ನಿಪಾತ, ಚಳಿಜ್ವರ, ವಾಂತಿ ಮೊದಲಾದ ರೋಗಗಳ ಸ್ವರೂಪ ಅವುಗಳಿಗೆ ಔಷಧನನ್ನು ಹೇಳುತ್ತದೆ. ಗರ್ಭಶೂಲೆ, ಮಾಸು ಬೀಳುವುದು, ಗರ್ಭಿಣಿ ಸ್ತ್ರೀಯರ ಜ್ವರ, ಅತಿಸಾರ, ಕ್ಷಯ, ಬಂಜೆತನ, ಉಬ್ಬಸ, ಸೊನಬುಹುಣ್ಣು ಮೊದಲಾದ ಸ್ತ್ರೀರೋಗಗಳಿಗೆ ಪರಿಹಾರಕಗಳು, ರಾಮಬಾಣ, ರಸ ಜ್ವರದ ಕಷಾಯ, ವಾಂತಿಗೆ ರಸ

ಮುಂತಾದುವುಗಳ ತಯಾರಿಕೆಯ ವಿವರಣೆಗಳು ದೊರೆಯುತ್ತವೆ. ಈ ಕೃತಿಯ ಮತ್ತೊಂದು ಹಸ್ತಪ್ರತಿ (ಕೆ ೪೨೮) ವಿಶಿಷ್ಟವಾದುದು ಇದು ದೇವನಾಗರಿ ಲಿಪಿಯಲ್ಲಿದೆ. ಹುಚ್ಚುನಾಯಿ, ಸೂಳೆಹುಣ್ಣು ಮೊದಲಾದ ರೋಗಗಳಿಗೆ ಇಲ್ಲಿ ಔಷಧಗಳನ್ನು ನೋಡಬಹುದು.

ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಏಳು ಪ್ರತಿಗಳು ವೈದ್ಯಶಾಸ್ತ್ರ ಎಂಬ ಹೆಸರಿನಲ್ಲಿ ದೊರೆಯುತ್ತವೆ. ಇವುಗಳಲ್ಲಿ ನಾಲ್ಕು ಮೈಕ್ರೊಫಿಲಂ ಪ್ರತಿಗಳು. ಮೂರು ಓಲೆಪ್ರತಿಗಳು. ಎಲ್ಲವೂ ಪರಸ್ಪರ ಭಿನ್ನಮೂಲದವು. ಕೆ. ೪೨೬ ಸಂಖ್ಯೆಯ ವೈದ್ಯಶಾಸ್ತ್ರ ಶ್ಲೋಕ ಟೀಕುಗಳನ್ನೊಳಗೊಂಡಿದೆ. ಈ ಪ್ರತಿಯ ಮೊದಲ ಭಾಗಗಳು ಬಹು ಹಿಂದೆಯೆ ಲುಪ್ತವಾಗಿರುವಂತೆ ತೋರುತ್ತದೆ. ಇಲ್ಲವೆ ಪ್ರತಿಕಾರ ವೈಯುಕ್ತಿಕ ಆಯ್ಕೆಗೆ ಅನುಗುಣವಾಗಿ ತನಗೆ ಬೇಕಾದ ಚಿಕಿತ್ಸೆಯನ್ನು ಬರೆದಿಟ್ಟಿರಬಹುದು. ಆದುದರಿಂದ ಸಾಂಪ್ರದಾಯಿಕ ನಾಡಿಪರೀಕ್ಷೆಯಿಂದ ಆರಂಭಗೊಳ್ಳದೆ ಮೊದಲು ರಕ್ತಪಿತ್ತವನ್ನು ನಿರೂಪಿಸುತ್ತದೆ–"ಬಿಸಿಲುದಾರಿಯ ನಡೆವದು ದುಃಖ ಪಡುವದು ಕಾರದ್ರವ್ಯ ಕಹಿಯಾದ ದ್ರವ್ಯ ಉಷ್ಣದ್ರವ್ಯ ಇವರಿಂದ ಮೂಗು ಬಾಯಿ ಕಿವಿ ಕಣ್ಣುಗಳಲ್ಲಿ ದುಷ್ಟ ರಕ್ತ ಸುರಿವುದು" ಎಂದು ಅದರ ಸುಳಿಹುಗಳನ್ನು ಗುರುತಿಸಲಾಗಿದೆ. ಜ್ವರಕ್ಕೆ ನಾನಾ ಬಗೆಯ ಕಷಾಯಗಳನ್ನು ಹೇಳಿದೆ. ವೈದ್ಯಶಾಸ್ತ್ರದ ಉಳಿದೆರಡು (ಕೆ ೪೬೦, ಕೆ ೪೬೭) ಕೃತಿಗಳು ಸಂಪೂರ್ಣ ಗದ್ಯದಲ್ಲಿವೆ. ಕೆ ೪೬೭ ಸಂಖ್ಯೆಯ ಪ್ರತಿಯಲ್ಲಿ ಕನ್ನಡ ತೆಲುಗು ಭಾಷೆಗಳೆರಡರಲ್ಲೂ ವಸ್ತುವನ್ನು ನಿರ್ವಹಿಸಿದೆ. ಇದರಲ್ಲಿ ೧–೯೦ ಪತ್ರಗಳಿವೆ. ನಮ್ಮ ಪೂರ್ವಿಕರು ಆರೋಗ್ಯಕ್ಕೆ ಎಷ್ಟೊಂದು ಮಹತ್ವ ನೀಡಿದ್ದರೆಂದರೆ, ಊಟಕ್ಕೆ ಬಳಸುವ ಭೋಜನದ ಎಲೆಯಿಂದ ಹಿಡಿದು ಯಾವ ಯಾವ ಕಾಲದಲ್ಲಿ ಯಾವ ಯಾವ ಆಹಾರ ಸೇವಿಸಬೇಕೆಂಬವರೆಗೆ ಅರಿವುಳ್ಳವರಾಗಿದ್ದರು. ಪ್ರಸ್ತುತ ಕೃತಿ ಬಾಳೆ ಎಲೆಯಲ್ಲಿ ಮಾಡುವ ಊಟ ಅತ್ಯಂತ ಆರೋಗ್ಯಕಾರಿ ಎಂದು ಪ್ರತಿಪಾದಿಸುತ್ತ ಅದರ ಗುಣಗಳನ್ನು ಹೀಗೆ ವಿವರಿಸಿದೆ—"ಕದಳೀಪತ್ರ ಗುಣಂ ಅತಿಶುಚಿಯಾಗಿ ಮಹಾಪ್ರಿಯವಾಗಿ ವಾತ ಶ್ಲೇಷ್ಮ ದೋಷಂಗಳನ್ನು ಪರಿಹರಿಸಿ ಬಲವನು ಆರೋಗ್ಯವನ್ನು ಉಂಟುಮಾಡಿ ರತಿಪ್ರಿಯವನು ಶರೀರಕಾಂತಿಯನು ಅನ್ನದ ಮೇಲೆ ಅಪೇಕ್ಷೆಯನ್ನುಂಟುಮಾಡುವದೆ ಬಾಳೆಯ ಎಲೆಯ ಗುಣಂ." ತಾವರೆ ಎಲೆ ಭೋಜನಕ್ಕೆ ಯೋಗ್ಯವಲ್ಲ. ಏಕೆಂದರೆ "ಇದು ಹೊಟ್ಟೆಯಲ್ಲಿ ಹುಟ್ಟುವ ಸಕಲ ರೋಗಸಮೂಹವನು ಹೋಗಲಾಡಿಸಿದರೂ ವಾತರೋಗವನ್ನುಂಟುಮಾಡುತ್ತದೆ." ಭೋಜನವಿಧಿ, ತಾಂಬೂಲವಿಧಿ, ಸ್ವರ್ಣಪಾದುಕಗುಣ, ಚರ್ಮಪಾದುಕಗುಣ, ಕುಕ್ಕುಟಾಸನ ಗುಣ ಮೊದಲಾದುದರ ಗುಣಗಳು, ಜ್ವರೋತ್ಪತ್ತಿ ಲಕ್ಷಣ, ಕಲ್ಕಗಳು, ತೈಲಗಳು, ಅಂಜನಗಳು, ಚೂರ್ಣಗಳು, ಸನ್ನಿಪಾತ ಮೊದಲಾದ ಸಂಗತಿಗಳ ಬಗೆಗೆ ಈ ಕೃತಿಯಿಂದ ಉಪಯುಕ್ತ ಮಾಹಿತಿ ಲಭ್ಯವಾಗುತ್ತದೆ.

ಮತ್ತೊಂದು ವೈದ್ಯಶಾಸ್ತ್ರದ (ಕೆ ೪೬೦) ಕರ್ತೃ ಯಾರೆಂಬುದು ತಿಳಿದುಬರು

ತ್ತಿಲ್ಲ. ಹಸ್ತಪ್ರತಿಯಲ್ಲಿರುವ "ಹಾಸನಾಂಬ ಸಿದ್ದೇಶ್ವರ ವೇಲಾಪುರಿ ಸೌಮ್ಯ ಕೇಶ ವಾಯ ನಮಃ" ಎಂಬ ಉಲ್ಲೇಖದಿಂದ ಇದು ಹಾಸನ ಜಿಲ್ಲೆಯಲ್ಲಿ ಪ್ರತಿಯಾದು ದೆಂದು ಊಹಿಸಬಹುದು. ಇದರ ವಸ್ತುವಿನ್ಯಾಸದಲ್ಲಿ ನಿರ್ದಿಷ್ಟ ಕ್ರಮವಿರುವಂತೆ ಕಂಡುಬರುತ್ತಿಲ್ಲ. ಈ ಕೃತಿಯಲ್ಲಿ ದ್ರಾಕ್ಷಾಚೂರ್ಣ, ಕುಕ್ಕುಟಾದಿ ಚೂರ್ಣ, ಏಲಾದಿಚೂರ್ಣ, ದಾಡಿಂಬಾದಿ ಚೂರ್ಣ, ಭೃಗ್ವಾದಿ ಚೂರ್ಣ, ಅಶ್ವಗಂಧಿ ಚೂರ್ಣ, ಅಯಿಪತ್ತಿ ಚೂರ್ಣ ಮೊದಲಾದ ಚೂರ್ಣಗಳನ್ನು ಸಿದ್ಧಪಡಿಸುವ ಕ್ರಮವನ್ನು ಆರಂಭದಲ್ಲೇ ಹೇಳಿದೆ. ಅನಂತರ ಮೂಲವ್ಯಾಧಿ, ಸನ್ನಿವಾತ ಶ್ಲೇಷ್ಮ ಜ್ವರ, ಅಸ್ತಿಗತ ಜ್ವರ, ವಿರೇಚನ, ವಿಷಹರ, ಜ್ವರ, ರಕ್ತಗಣ್ಣು ಇವುಗಳಿಗೆ ಮದ್ದು ಹಾಗೂ ಗುಗ್ಗುಳಗಳು ಘೃತಗಳನ್ನು ಮಾಡುವ ವಿಧಾನವನ್ನು ಹೇಳಿದೆ. ಗುಲ್ಮ, ಹೊಟ್ಟೆಶೂಲೆ, ಕಿವುಡು ಇವುಗಳಿಗೆ ಸರಳ ಚಿಕಿತ್ಸೆಗಳಿವೆ. "ಹಿಪ್ಪಲಿ ಬೀಜವನ್ನು ಪುಡಿ ಮಾಡಿ ಕೋಲಜೇನುತುಪ್ಪದಲ್ಲಿ ಕಾಸಿಬಿಡಲು ಕಿವುಡು ಮಾಣ್ಗುಂ" ಎಂಬುದು ಒಂದು ಬಗೆಯಾದರೆ ಸೈಂಧವ ಲವಣದಿಂದಲೂ ಕಿವುಡನ್ನು ನಿವಾರಿಸುವ ಸಾಧ್ಯತೆ ಯನ್ನು ತೋರಿಸಿದೆ. ಕಜ್ಜಿ, ತುರಿ, ಹುಣ್ಣು, ತಲೆನೋವು, ಜಲಸ್ತಂಭ, ಕಿವಿಯ ಶಕ್ತಿವರ್ಧನೆಗೆ, ಕಾಮಾಲೆ, ಗ್ರಹಣಿ, ಗರ್ಭ ನಿಲ್ಲುವಿಕೆ, ಮೊಲೆಹಾಲು ಬರುವುದಕ್ಕೆ ರತಿವಿಲಾಸ ಮೊದಲಾದ ರೋಗಗಳಿಗೆ ಚಿಕಿತ್ಸೆಗಳಿವೆ. ಉಳುಕಿಗೆ ಪರಿಹಾರಕವಾಗಿ ಕೆಲವು ಮಂತ್ರವನ್ನು ಹೇಳಿದೆ.

'ವೈದ್ಯಸಂಗ್ರಹ' ಎಂಬ ಗ್ರಂಥದ ಆರು ಕೃತಿಗಳು ಲಭ್ಯವಿವೆ. ಇವುಗಳಲ್ಲಿ ೪ ಮೈಕ್ರೊಫಿಲಂ ಪ್ರತಿಗಳು, ೨ ಓಲೆಪ್ರತಿಗಳು. ಕೆ. ೪೧೧ ಸಂಖ್ಯೆಯ ಓಲೆಪ್ರತಿ ಯಲ್ಲಿ ೧೨ ಪತ್ರಗಳಿರುವ ಒಂದು ಅಸಮಗ್ರ ಕೃತಿಯಾದರೂ ಗರ್ಭೋತ್ಪತ್ತಿ, ರಸ ವೈದ್ಯ, ವಿಷವೈದ್ಯ, ಶಿರೋರೋಗ ವೈದ್ಯ ಮೊದಲಾದ ವಿಷಯಗಳನ್ನು ಪ್ರಸ್ತಾಪಿ ಸಿದೆ. ಬಂಜೆಯರ ಪರೀಕ್ಷೆ ಎಂಬ ವಿಭಾಗದಲ್ಲಿ ಹುಟ್ಟು ಬಂಜೆ, ಹೆತ್ತ ಬಂಜೆ, ನಷ್ಟ ಬಂಜೆ, ಕೀಟ ಬಂಜೆ ಎಂಬ ನಾಲ್ಕು ವಿವಿಧ ಬಂಜೆತನವನ್ನು ಗುರುತಿಸುವುದು ಕಂಡು ಬರುತ್ತದೆ. ಕೆ. ೫೩೬ ಸಂಖ್ಯೆಯ ಪ್ರತಿ ಜೈನ ಸಂಪ್ರದಾಯದ ವೈದ್ಯರ ಕೃತಿ ಯಾಗಿದ್ದು ಸಂಸ್ಕೃತ ಶ್ಲೋಕಗಳಿಗೆ ಟೀಕನ್ನು ಒದಗಿಸಿದೆ. ಮೊದಲನೆಯ ಶ್ಲೋಕ ದಲ್ಲಿ "ಆಯುರ್ವೇದೋಕ್ತ ಸಾರೈರಿಹವಮಲ ಮಹಾ ಸಂಗ್ರಹಂ ಸಂಲಿಖಾಮಿ" ಎಂದು ಹೇಳಿರುವುದರಿಂದ ಸಂಗ್ರಹಗ್ರಂಥವೆಂಬುದು ಸ್ಪಷ್ಟ. ಪೂಜ್ಯಪಾದ, ಹಾರೀತ, ವಾಗ್ಭಟ, ಸುಶ್ರುತ, ವಿಜಯಣೋಪಾಧ್ಯಾಯ, ನಿತ್ಯನಾಥ ಇವರೇ ಮೊದಲಾದವರ ಗ್ರಂಥಗಳಿಂದ ವಿಷಯ ಸಂಗ್ರಹಿಸಿದೆ. ಈ ಕೃತಿಯಲ್ಲಿ ಮುಖ್ಯವಾಗಿ ನಾಡೀತಂತ್ರ, ಜ್ವರ, ಕುಷ್ಠದಂಥ ರೋಗಗಳಿಗೆ ಔಷಧಗಳನ್ನು ಹೇಳಿದೆ.

'ವೈದ್ಯಶಾಸ್ತ್ರಸಾರ' (ಕೆ. ೬೨೨) ಎಂಬ ಸುಮಾರು ೩೩೪ ಪತ್ರಗಳಿರುವ ಗ್ರಂಥವೊಂದಿದೆ. ಇದು ಕೂಡ ಶ್ಲೋಕ ಟೀಕುಗಳಲ್ಲಿದ್ದು ಹಲವು ಗ್ರಂಥಗಳಿಂದ ವಿಷಯ ಸಂಗ್ರಹಿಸಿ ತೈಲ ಚೂರ್ಣಗಳ ಚಿಕಿತ್ಸೆಯನ್ನು ನಿರೂಪಿಸಿದೆ.

ವೈದ್ಯಕೃತಿಗಳಲ್ಲಿ ವ್ರಣಚಿಕಿತ್ಸೆ ಒಂದು ಭಾಗವಾಗಿ ಬರುವುದು ಸಾಮಾನ್ಯ. ಕೆ. ೧೬೫ ಸಂಖ್ಯೆಯ ಪ್ರತಿ 'ವ್ರಣಚಿಕಿತ್ಸೆ'ಗೇ ಮೀಸಲಾದದ್ದು. ಈ ಕುರಿತು

ಕೂಲಂಕಷವಾಗಿ ಸುಮಾರು ೧೦೦ ಪತ್ರಗಳಲ್ಲಿ ವ್ರಣಚಿಕಿತ್ಸೆಯನ್ನು ವಿವರಿಸಲಾಗಿದೆ.

'ವೈದ್ಯ' ಎಂಬ ಶೀರ್ಷಿಕೆಯಲ್ಲಿ ೧೭ ಹಸ್ತಪ್ರತಿಗಳು ದೊರೆಯುತ್ತವೆ. ಒಂದು ಪತ್ರದಿಂದ ನೂರಾರು ಪತ್ರಗಳವರೆಗೆ ವಿವಿಧ ಗಾತ್ರದಲ್ಲಿದೆ. ಈ ಪೈಕಿ ಕೆ. ೧೦೪೮ ಸಂಖ್ಯೆಯ ಹಸ್ತಪ್ರತಿಯಲ್ಲಿ ೩-೨೨೬ ಪತ್ರಗಳಿದ್ದು ಈ ಗುಂಪಿನ ದೊಡ್ಡ ಕೃತಿಯಾಗಿದೆ. ಇದರ ಆದಿಭಾಗ ಲುಪ್ತವಾಗಿದೆ. ಉಳಿದ ಭಾಗದಲ್ಲಿ ಜ್ವರ, ಗುಲ್ಮ, ಪಾಂಡುರೋಗ, ಪ್ರಮೇಹ, ಸನಿಪಾತ ಮೊದಲಾದ ರೋಗಗಳಿಗೆ ಮದ್ದು ಹಾಗೂ ಯಂತ್ರ ಮಂತ್ರಗಳಿವೆ. ಕೆ. ೧೯೯೨ ಸಂಖ್ಯೆಯ ಹಸ್ತಪ್ರತಿ ಕಟ್ಟಿನಲ್ಲಿ ಒಂದೊಂದೆ ಪತ್ರವಿರುವ ಎರಡು ಕೃತಿಗಳಿವೆ. ಇದರಲ್ಲಿ ಕಣ್ಣಿನ ಬೇನೆ, ಪೀನಸ ಮುಂತಾದವಕ್ಕೆ ಔಷಧಗಳನ್ನು ಹೇಳಿದೆ. ಕಣ್ಣಿನ ಬೇನೆಗೆ ಇಲ್ಲಿ ಸೂಚಿಸುವ ಚಿಕಿತ್ಸೆ ಹೀಗಿದೆ— "ಅರಿಸಿನ ಬೇವಿನ ಎಲೆ ಹಿಪ್ಪಲಿ ಮೆಣಸು ಭದ್ರಮುಷ್ಟಿ ವಾಯುವಿಳಂಗ ಚಿತ್ರಮೂಲ ಬಜೆ ಕೋಷ್ಟ ಅಳಿಲೆಕಾಯಿ ಇವನೆಲ್ಲವ ಸಮಾನಗೊಂಡು ಆಡಿನ ಮೂತ್ರದಲ್ಲಿ ಅರೆದು ಕಡಲೆಕಾಳಷ್ಟು ಗುಳಿಗೆಯಂ ಮಾಡಿ ಕಣ್ಣು ತಿಮಿರಾದರೆ ನೀರಲ್ಲಿ ತೆಯಿದು ಹಚ್ಚುವದು ಕಣ್ಣು ಸಿಜ್ಞಾದರೆ ಗೋಮೂತ್ರದಲ್ಲಿ ಹಚ್ಚುವುದು ಕಣ್ಣಲಿ ನೀರು ಸುರಿದರೆ ಬಾಳೆಗೆಡ್ಡೆರಸದಲ್ಲಿ ಹಚ್ಚುವದು ಅಜೀರ್ಣವಾದರೆ ಒಂದು ಗುಳಿಗೆ ವಿರೋಚನೆ ಯಾದರೆ ಎರಡು ಗುಳಿಗೆಯ ಕೊಡುವದು" ಎಂದು ಕಣ್ಣಿನ ಬೇನೆಗೆ ತಯಾರಿಸಿದ ಗುಳಿಗೆ ಬಹುರೋಗನಿವಾರಕವಾಗಿರುವುದನ್ನು ಅರಿಯಬಹುದು. ಇದೇ ಗುಳಿಗೆ ಬೇರೆ ಪ್ರಮಾಣದಲ್ಲಿ ಉಪಯೋಗಿಸಿದಾಗ ಸರ್ಪದಷ್ಟಕ್ಕೆ, ಹೆರಲಾಗದವರಿಗೆ ಔಷಧವಾಗ ಬಲ್ಲುದನ್ನು ತಿಳಿಸಿದೆ. ಕೆ ೧೪೮೭ ಸಂಖ್ಯೆಯ ಕಟ್ಟಿನಲ್ಲಿ ಎರಡು ಕೃತಿಗಳಿವೆ. ಒಂದು ೯ ಪತ್ರಗಳಿರುವ ಚಿಕ್ಕಕೃತಿ ಮತ್ತೊಂದರಲ್ಲಿ ೭೮ ಪತ್ರಗಳಿವೆ. ಇವೆರಡೂ ಕೃತಿಗಳು ಶ್ಲೋಕಕ್ಕೆ ಬರೆದ ಟೀಕುಗಳಾಗಿವೆ. ಎರಡೂ ಅಪೂರ್ಣ ಗ್ರಂಥಗಳು. ಮತ್ತೊಂದು 'ವೈದ್ಯ' ಕೃತಿ (ಕೆ ೧೫೭೪) ಮಿಶ್ರಪ್ರತಿಯಾಗಿದ್ದು ಅಷ್ಟೇನೂ ಉಪಯೋಗಿಯಾಗಿಲ್ಲ. ಕೆ ೧೫೮೭ ಸಂಖ್ಯೆಯ ವೈದ್ಯಹಸ್ತಪ್ರತಿ ಗದ್ಯಗ್ರಂಥವಾಗಿದ್ದು ಗರ್ಭಿಣಿಯರ ರಕ್ತ ಸ್ರಾವ, ವಾಂತಿ, ಕಿವುಡು ಮೊದಲಾದ ರೋಗಗಳಿಗೆ ನಿವಾರಣೆ ಹೇಳಿದೆ. ಕೆ. ೧೫೯೦ ಸಂಖ್ಯೆಯ ಹಸ್ತಪ್ರತಿಯಲ್ಲಿ ವಾತ, ಕಾಮಾಲೆ, ಗರ್ಭಕರಗಿ ಬೀಳುವುದು ಇವೇ ಮೊದಲಾದ ರೋಗಗಳಿಗೆ ಔಷಧಗಳಿವೆ. ಕೆ ೧೯೦೫, ಕೆ ೧೮೦೭ ಹಸ್ತಪ್ರತಿಗಳಲ್ಲಿ ಜ್ವರಾದಿಗಳಿಗೆ ಚಿಕಿತ್ಸೆ ತಿಳಿಸಲಾಗಿದೆ. ಕೆ.ಎ. ೩೫೪ ಸಂಖ್ಯೆಯ ಹಸ್ತಪ್ರತಿಯಲ್ಲಿ ಸರ್ಪದಷ್ಟದಿಂದ ಪೀನಸದ ವರೆಗೆ ಹಲವು ವ್ಯಾಧಿಗಳಿಗೆ ನಿವಾರಣೋಪಾಯಗಳಿವೆ. ಸರ್ಪ ಯಾವ ವಾರ ಕಚ್ಚುತ್ತದೆ ಎಂಬುದರ ಮೇಲೆ ಆಯಾಯಾ ವಾರಕ್ಕೆ ಅನುಗುಣ ವಾಗಿ ಚಿಕಿತ್ಸೆ ನೀಡುವ ಕ್ರಮ ಇಲ್ಲಿ ಕಂಡುಬರುತ್ತದೆ: "ಆದಿತ್ಯವಾರ ಕಚ್ಚಿದ ಸರ್ಪನ ತಕ್ಷಕನೆಂಬರು ಅದಕ್ಕೆ ಔಷಧ ತಾವರೆಗಡ್ಡೆ ನೀರಲು ತೇದು ನಸ್ಯವಂ ಮಾಡಲು ವಿಷಹರ. ಸೋಮವಾರ ಕಚ್ಚಿದ ಸರ್ಪ ಅನಂತನೆಂಬರು ಅದಕ್ಕೆ ಔಷಧ ಕೆಂಪುಗಣಗಿಲು ಬೇರಂ ನೀರಲು ತೇದು ನಸ್ಯಂ ಮಾಡೆ ವಿಷಹರ." ಹೀಗೆ ಶನಿವಾರದ ವರೆಗೆ ಬೇರೆ ಬೇರೆ ಮದ್ದುಗಳನ್ನು ಹೇಳಿರುವುದು ಈ ಚಿಕಿತ್ಸೆಯ ವೈಶಿಷ್ಟ್ಯ. ಕೆ ಬಿ

ಲೋಕೋಪಕಾರದಲ್ಲಿಯೆ ಪ್ರಾಣಿವೈದ್ಯದ ಬಗೆಗೆ ಸಾಕಷ್ಟು ಮಾಹಿತಿ ದೊರೆಯುತ್ತದೆ. ಇದರಲ್ಲಿ ಗೋವೈದ್ಯ, ಅಶ್ವವೈದ್ಯ ಗಜವೈದ್ಯ, ಮೂರನ್ನೂ ಸಂಕ್ಷಿಪ್ತವಾಗಿ ಹೇಳಿದೆ. ಗೋವುಗಳು ತೆನೆಯಾಗುವುದು, ಗರ್ಭದಲ್ಲಿ ಸತ್ತ ಕರುಗಳು ಹೊರ ಬರುವುದು, ಕರುವಿನ ಮೇಲೆ ಮಮತೆ ಉಂಟಾಗುವುದು, ಒದೆಯುವ ಹಸು ಸಾಧುವಾಗುವುದು, ಮುಖರೋಗ, ಕೆಮ್ಮು, ಹೂಕಣ್ಣು, ಬಾವು, ಶೂಲೆ, ಜ್ವರ, ನಾಳಿಹುಣ್ಣು, ಕೊಂಬಿನಹುಳು ಹಾಗೂ ಸರ್ವರೋಗಕ್ಕೆ ಔಷಧಗಳನ್ನು ಹೇಳಿದೆ. ಅಶ್ವವೈದ್ಯಕ್ಕೆ ಸಂಬಂಧಿಸಿದಂತೆ ಕುದುರೆಗಳ ದೀಪನ, ಪಿತ್ತ ಕಫ ವಾತ, ಜ್ವರ, ನಾನಾ ರೋಗ, ಬಾವು, ತುರುಗಜ್ಜಿ, ವ್ರಣ ಈ ರೋಗಗಳಿಗೆ ಚಿಕಿತ್ಸೆಗಳನ್ನು ವಿವರಿಸಿದೆ. ಗಜವೈದ್ಯಕ್ಕೆ ಸೇರಿದಂತೆ ಹಲವು ರೋಗಗಳು ಪರಿಹಾರವಾಗುವಂಥ ಒಂದು ಸಾಮಾನ್ಯ ಔಷಧವನ್ನು ಹೇಳಲಾಗಿದೆ.

ಗೋವೈದ್ಯವನ್ನು ವಿವರಣಾತ್ಮಕವಾಗಿ ಪ್ರತ್ಯೇಕ ಗ್ರಂಥವಾಗಿ ಹೇಳಿದವನು ಕೀರ್ತಿವರ್ಮ. ಈತನ ಗೋವೈದ್ಯಕ್ಕೆ ಈ ದೃಷ್ಟಿಯಿಂದ ಮಹತ್ವವಿದೆ. ಗ್ರಂಥದಲ್ಲಿ ದೊರೆಯುವ ಆಂತರಿಕ ಆಧಾರಗಳಿಂದ ಕೀರ್ತಿವರ್ಮನು ಚಾಳುಕ್ಯರಾಜ ತ್ರೈಲೋಕ್ಯ ಮಲ್ಲಾಧಿಪನ ಪುತ್ರ, ವಿಕ್ರಮನ ಸೋದರ, ದೇವಚಂದ್ರಮುನಿಯ ಶಿಷ್ಯನೆಂದು ತಿಳಿದು ಬರುತ್ತದೆ. ಈ ಎಲ್ಲಾ ಅಂಶಗಳನ್ನು ಬ್ರಹ್ಮಶಿವ ತನ್ನ ಸಮಯ ಪರೀಕ್ಷೆಯಲ್ಲಿ ದಾಖಲಿಸುತ್ತ ಕೀರ್ತಿವರ್ಮನ ಬಗೆಗೆ ಅಭಿಮಾನದ ಮಾತುಗಳನ್ನಾಡಿದ್ದಾನೆ. ಗೋವೈದ್ಯವು ಗದ್ಯಪದ್ಯಗಳಲ್ಲಿ ರಚಿತವಾಗಿದೆ. ಸಮಗ್ರಪ್ರತಿ ದೊರೆತಿಲ್ಲ. ಲಭ್ಯವಿರುವ ಭಾಗದಲ್ಲಿ ಗೋವಿಗೆ ಸಂಬಂಧಿಸಿದ ರೋಗಗಳಿಗೆ ಔಷಧಗಳು, ಯಂತ್ರ ಬರೆ ಹಾಕುವುದು ಮೊದಲಾದ ಕ್ರಮವನ್ನು ವಿವರಿಸಿದೆ. ಅನಾಮಧೇಯ ಕವಿಯ ಗೋವೈದ್ಯ (ಕೆ. ೨೧೩) ಗ್ರಂಥವೊಂದು ದೊರೆತಿದೆ. ಇದರಲ್ಲಿ ೧೧೩ ಕಂದವೃತ್ತಗಳಲ್ಲಿ ವಿವಿಧ ರೋಗಗಳ ಲಕ್ಷಣ ಹಾಗೂ ಔಷಧಗಳನ್ನು ನಿರೂಪಿಸಲಾಗಿದೆ.

ಈಗಾಗಲೆ ನೋಡಿರುವಂತೆ ಅಶ್ವವೈದ್ಯಕ್ಕೆ ಸಂಬಂಧಿಸಿದಂತೆ ಕನ್ನಡದ ಸಂದರ್ಭದಲ್ಲಿ ಪ್ರಥಮ ಸಾಹಿತ್ಯಿಕ ವಿವರಗಳು ಲಭ್ಯವಾಗುವುದು ಚಾವುಂಡರಾಯನ ಲೋಕೋಪಕಾರದಲ್ಲಿ. ಸುಶ್ರುತನು ಅಶ್ವವೈದ್ಯವನ್ನು ಮೊದಲು ಶಾಲಿಹೋತ್ರನಿಗೆ ಸಂಸ್ಕೃತದಲ್ಲಿ ಹೇಳಿದನು. ಶಾಲಿಹೋತ್ರನು ಅಶ್ವಶಾಸ್ತ್ರವನ್ನು ವಿಸ್ತಾರವಾಗಿ ಬರೆದು ಈ ಕ್ಷೇತ್ರದಲ್ಲಿ ಅಧ್ವರ್ಯು ಎನಿಸಿದನೆಂದು ಪರಂಪರೆಯಿಂದ ವ್ಯಕ್ತವಾಗುತ್ತದೆ. ಕನ್ನಡದಲ್ಲಿ ಸುಮಾರು ೧೫೦೦ ರಲ್ಲಿದ್ದ ಬಾಚರಸ ಅಶ್ವವೈದ್ಯ ಎಂಬ ಗ್ರಂಥವನ್ನು ಬರೆದಿದ್ದಾನೆ. ಈತ ಜೈನಕವಿ. ಈತನ ತಂದೆ ಚೌಂಡರಾಜ. ಕೀರ್ತಿವರ್ಮನಂತೆ ಬಾಚರಸ ಕೂಡ ರಾಜನಾಗಿದ್ದು ಶಾಸ್ತ್ರಗ್ರಂಥವನ್ನು ರಚಿಸಿದವ. ಈತನಿಗೆ ಸುಜನೈಕ ಬಾಂಧವ ಎಂಬ ಬಿರುದು ಇದ್ದಂತೆ ತಿಳಿದುಬರುತ್ತದೆ. ಅಶ್ವವೈದ್ಯದಲ್ಲಿ ೩೫ ವೃತ್ತ ಹಾಗೂ ಗದ್ಯಭಾಗವಿದೆ—

ಸುಶ್ರುತ ಶಾಲಿಹೋತ್ರ ನಳವಾಕ್ಯದೊಳಂ ಹಯಚೇಷ್ಟೆರೂಪುದಂ
ತಚ್ಛ್ರವಣಾಕ್ಷಿ ವರ್ಣ ಸುಟಿ ನಾಲಗೆ ಗಂಧ ಶುಭಾಶುಭಂಗಳಂ

ವಿಶ್ರುತ ಮೂವತ್ತೆ ದೆನಿಪ ವೃತ್ತದೊಳ್ ನೆಱೆ ಪೇಳ್ದನಾಗಮ್ಯೈ
ಕಾಶ್ರಯ ಚೌಂಡರಾಜಸುತ ಬಾಚರಸಂ ಸುಜನೈಕಬಾಂಧವಂ

ಎಂಬ ಪದ್ಯದಿಂದ ಈ ಕೃತಿಯ ಆಕರ ಮತ್ತು ವಸ್ತುವನ್ನು ಅರಿಯಬಹುದು. ಈ ಕೃತಿಯ ಏಕೈಕ ಹಸ್ತಪ್ರತಿ (ಕೆ. ಬಿ. ೧೦೩) ಮಾತ್ರ ದೊರೆತಿದೆ.

ಮೈಸೂರು ಅರಸರಾದ ನರಸರಾಜ ಒಡೆಯರ ಕಾಲದಲ್ಲಿ ರಾಮಚಂದ್ರ ಎಂಬ ಕವಿ ಅಶ್ವಶಾಸ್ತ್ರವನ್ನು ರಚಿಸಿದ್ದಾನೆ. ಈತನ ಕಾಲ ಕ್ರಿ. ಶ. ೧೬೨೫. ಹದಿನೆಂಟು ಅಧ್ಯಾಯಗಳಲ್ಲಿ ಶಾಲಿಹೋತ್ರನ ಅಶ್ವಶಾಸ್ತ್ರವನ್ನು ಅನುವಾದಿಸಲಾಗಿದೆ. ಈ ಕೃತಿಯಲ್ಲಿ ಕುದುರೆಗಳ ವಯಸ್ಸು ಹಲ್ಲು ಸುಳಿ ಮೊದಲಾದುವುಗಳಿಗೆ ಆದ್ಯತೆ ಇದ್ದರೂ ಅಶ್ವವ್ಯಾಧಿಗಳಿಗೆ ಚಿಕಿತ್ಸೆಯನ್ನು ಹೇಳಿರುವುದರಿಂದ ವೈದ್ಯಗ್ರಂಥವಾಗಿಯೂ ಗಮನಾರ್ಹವೆನಿಸಿದೆ. ಈ ಕೃತಿಗೆ ಸಂಬಂಧಿಸಿದಂತೆ ಕೆ. ಬಿ. ೨೨೭ ಸಂಖ್ಯೆಯ ಪ್ರತಿಯೊಂದಿದ್ದು ಅಸಮಗ್ರವಾಗಿದೆ.

ಪದ್ಮಣಪಂಡಿತ ಎಂಬ ಜೈನಕವಿ ಕ್ರಿ. ಶ. ೧೬೨೭ರಲ್ಲಿ ಹಯಶಾಸ್ತ್ರವೆಂಬ ಕೃತಿಯನ್ನು ರಚಿಸಿದ್ದಾನೆ. ಇದಕ್ಕೆ ಹಯಸಾರ ಸಮುಚ್ಚಯವೆಂಬ ಪರ್ಯಾಯ ನಾಮವೂ ರೂಢಿಯಲ್ಲಿದೆ. ಚಾಮರಾಜ ಒಡೆಯರ ಪ್ರೋತ್ಸಾಹದಿಂದ ಈ ಕೃತಿ ರಚಿತವಾದಂತೆ ತಿಳಿಯುತ್ತದೆ. ಪದ್ಮಣಪಂಡಿತನ ತಂದೆ ಕನಕಪುರದ ದೇಪರಸ, ತಾಯಿ ಗುಮ್ಮಾಂಬೆ. ಹಯಸಾರ ಸಮುಚ್ಚಯವು ಕಂದವೃತ್ತಗಳಲ್ಲಿದೆ. ಇದರ ಕೆ. ೪೨೪ ಸಂಖ್ಯೆಯ ಪ್ರತಿಯಲ್ಲಿ ೨೦ ಅಧ್ಯಾಯಗಳಲ್ಲಿ ಕುದುರೆಗಳ ಸ್ವರೂಪ ಲಕ್ಷಣದ ಜೊತೆಗೆ ಅವುಗಳಿಗೆ ತಗಲುವ ರೋಗ ಮತ್ತು ಔಷಧಗಳನ್ನು ನಿರೂಪಿಸಿದೆ. ಅನಾಮಧೇಯ ಕವಿಗಳ ಅಶ್ವವೈದ್ಯದ ನಾಲ್ಕು ಪ್ರತಿಗಳು (ಕೆ ೮೩, ಕೆ ೪೮೩, ಕೆ ೧೮೬೫, ಕೆಎ ೫೭೧) ದೊರೆತಿವೆ. ಇವುಗಳಲ್ಲಿ ಹೆಚ್ಚಿನವು ಟೀಕು ಗ್ರಂಥಗಳು. ಕೆ. ಎ. ೫೭೧ ಸಂಖ್ಯೆಯ ಪ್ರತಿಯಲ್ಲಿ ಸಚಿತ್ರ ವಿವರಣೆಯಿರುವುದು ಅಪೂರ್ವವೆನಿಸಿದೆ. ಅಶ್ವವೈದ್ಯದ ಸಂಗ್ರಹ (ಕೆ ೧೦೩೭) ಎಂಬ ಗದ್ಯ ಕೃತಿಯೊಂದು ಕಂಡುಬರುತ್ತದೆ. ಅಶ್ವಶಾಸ್ತ್ರದ ಕೆ ೧೫೭೨ ಸಂಖ್ಯೆಯ ಪ್ರತಿಯಲ್ಲಿ ಕುದುರೆಗೆ ತಗಲುವ ರೋಗಗಳಿಂದ ಅದರ ಆಯುಷ್ಯವನ್ನು ತಿಳಿಯುವ ಬಗೆಯನ್ನು ಹೇಳಿದೆ.

ಅಶ್ವವೈದ್ಯದ ಕೃತಿಗಳಲ್ಲಿ ಅಭಿನವಚಂದ್ರನ ಅಶ್ವಶಾಸ್ತ್ರ ಪ್ರಸಿದ್ಧವಾದುದು. ಈ ಕೃತಿಯ ಮೂಲವನ್ನು ಕವಿಯೇ ಹೇಳಿದ್ದಾನೆ—

ಅನುಪಮ ಹಯಶಾಸ್ತ್ರಾಗಮ
ವನಧಿಯೊಳಾ ಸಿಂಹದತ್ತ ಕೃತಿ ಲಕ್ಷಣದಿಂ
ದಿನಕರತನಯ ರೇವಂ
ತನ ಮತದಿಂ ಪೇಳ್ವೆನೆಸೆವ ಪೊಸಕನ್ನಡದಿಂ

ಅಭಿನವಚಂದ್ರನ ಈ ಕೃತಿ ಎಷ್ಟೊಂದು ಪ್ರಸಿದ್ಧವೆಂದರೆ ಇದಕ್ಕೆ ಗದ್ಯದಲ್ಲಿ ಟೀಕುಗಳು ಬಂದಿವೆ. ಕೆ. ಎ. ೫೫೨ ಸಂಖ್ಯೆಯ ಪ್ರತಿಯಲ್ಲಿ ಅಭಿನವಚಂದ್ರನ ಅಶ್ವವೈದ್ಯವನ್ನು 'ಅಶ್ವವೈದ್ಯ ನಾನಾ ಸಂಗ್ರಹ ನಿರ್ಣಯ' ಎಂದು ಕರೆಯಲಾಗಿದೆ. ಪ್ರಸ್ತುತ ಕೃತಿಯನ್ನು ಮೊದಲು ಎಚ್. ಶೇಷ ಅಯ್ಯಂಗಾರ್ ಅವರು ಮದರಾಸು

ಪ್ರಾಚ್ಯಕಾವ್ಯಮಾಲೆಯ ಮೂಲಕ ಪ್ರಕಟಿಸಿದ್ದರು. ಅನಂತರ ಅಧ್ಯಯನ ಸಂಸ್ಥೆಯು ಆರು ಹಸ್ತಪ್ರತಿಗಳನ್ನು ಬಳಸಿಕೊಂಡು ಜಿ. ಜಿ. ಮಂಜುನಾಥನ್ ಅವರು ಉಪಲಬ್ಧ ಟೀಕನ್ನು ಅಳವಡಿಸಿ ಪರಿಷ್ಕೃತ ಆವೃತ್ತಿಯೊಂದನ್ನು ೧೯೮೭ರಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ಮೂಲಕ ಹೊರತಂದಿದ್ದಾರೆ. ವೀರಭದ್ರರಾಜನು ಪಾಲಕಾಪ್ಯ ಕೃತ ಹಸ್ತ್ಯಾಯುರ್ವೇದಕ್ಕೆ ಟೀಕೆಯನ್ನು ಬರೆದಿದ್ದಾನೆ. ಹಸ್ತಿವೈದ್ಯಕ್ಕೆ ಸಂಬಂಧಿಸಿ ದಂತೆ ಕನ್ನಡದ ಏಕೈಕ ಗ್ರಂಥವಾಗಿದೆ.

ಕನ್ನಡ ಪ್ರಾಚೀನ ಆಯುರ್ವೇದ ಗ್ರಂಥಗಳ ಹಾಗೂ ಹಸ್ತಪ್ರತಿಗಳ ಸಮೀಕ್ಷೆ ಯಿಂದ ಹೊರಬರುವ ಅಂಶಗಳು ಹೀಗಿವೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಆಯು ರ್ವೇದ ಗ್ರಂಥಗಳ ಕೃಷಿ ಹುಲುಸಾಗಿದೆ. ಆರಂಭದಲ್ಲಿ ವೈದ್ಯಗ್ರಂಥಗಳನ್ನು ಬರೆದವ ರಲ್ಲಿ ಜೈನಕವಿಗಳದೆ ಮೇಲುಗೈ. ಆ ಬಳಿಕದಲ್ಲಿ ಮೈಸೂರು ಒಡೆಯರ ಕಾಲದಲ್ಲಿ ಸಾಕಷ್ಟು ವೈದ್ಯಗ್ರಂಥಗಳು ರಚಿತವಾದವು. ಮೂಲತಃ ನಮ್ಮ ಬಹುಪಾಲು ವೈದ್ಯ ಗ್ರಂಥಗಳು ಸಂಸ್ಕೃತ ಗ್ರಂಥಗಳ ಪಡಿನೆಳಲಾಗಿವೆ. ಕೆಲವು ಕನ್ನಡ ವೈದ್ಯಗ್ರಂಥ ಕಾರರು ಅಪವಾದವೆಂಬಂತೆ ಸಂಸ್ಕೃತ ಕೃತಿಯನ್ನಿಟ್ಟುಕೊಂಡು ಸ್ವತಂತ್ರವೆನಿಸುವಂತೆ ಕೃತಿ ರಚಿಸಿರುವುದೂ ಉಂಟು. ಚಾವುಂಡರಾಯ ಜಗದ್ದಳ ಸೋಮನಾಥ ಮೊದ ಲಾದವರು ಈ ಗುಂಪಿನ ಕವಿಗಳು. ಮತ್ತೆ ಕೆಲವರು ಸಂಸ್ಕೃತ ಗ್ರಂಥಗಳಿಗೆ ಕನ್ನಡ ದಲ್ಲಿ ನೇರವಾದ ಟೀಕೆಯನ್ನು ಬರೆದಿದ್ದಾರೆ. ಹಾಗಾಗಿ ಕನ್ನಡ ವೈದ್ಯಗ್ರಂಥಗಳೆಂದರೆ ಶ್ಲೋಕ ಟೀಕುಗಳು ಎನ್ನುವಷ್ಟರ ಮಟ್ಟಿಗೆ ಇವುಗಳ ಸಂಖ್ಯೆ ಅಧಿಕವಾಗಿವೆ. ಕನ್ನಡ ಆಯುರ್ವೇದ ಹಸ್ತಪ್ರತಿಗಳ ವಿಪುಲಗ್ರಂಥರಾಶಿಯಲ್ಲಿ ಬೆಳಕು ಕಂಡಿರುವ ಕೃತಿಗಳು ಬೆರಳೆಣಿಕೆಯಷ್ಟು ಮಾತ್ರ. ಶಾಸ್ತ್ರೀಯ ಚೌಕಟ್ಟಿನಲ್ಲಿ ಪರಿಷ್ಕಾರಗೊಂಡು ಪ್ರಕಟ ವಾಗಬೇಕಾದ ಕೃತಿಗಳ ಸಂಖ್ಯೆ ಬಹಳಷ್ಟಿದೆ. ಕನ್ನಡ ಆಯುರ್ವೇದ ಗ್ರಂಥಗಳ ಸಂಪಾದನೆ ಸುಲಭಸಾಧ್ಯವೇನಲ್ಲ. ಅಚ್ಚಾಗಬೇಕಾದ ಕೃತಿಗಳ ಶುದ್ಧಹಸ್ತಪ್ರತಿಗಳು ದೊರೆಯುವುದು ದುರ್ಲಭ. ಒಂದು ಗ್ರಂಥಕ್ಕೆ ಹತ್ತು ಹಲವು ಪ್ರತಿಗಳು ಲಭ್ಯ ವಾದರೂ ಅವು ಒಂದೊಂದೂ ಭಿನ್ನಮೂಲದಿಂದ ಬದಿಂದ್ದು ಪ್ರಕ್ಷಿಪ್ತಗಳು ಪಾಠಾಂತರಗಳು ಹೇರಳವಾಗಿವೆ. ಈ ಗೋಜಲು ಗೊಂದಲಗಳನ್ನೆಲ್ಲ ದಾಟಿ ಮುನ್ನಡೆ ಯಲು ಸಮರ್ಥರೆ ಆಗಬೇಕಾಗುತ್ತದೆ. ಕನ್ನಡ ಆಯುರ್ವೇದ ವಿಷಯದಲ್ಲಿ ತಜ್ಞತೆ ಪಡೆದವರೂ ಓಲೆಗರಿಗ್ರಂಥಗಳನ್ನು ಓದಬಲ್ಲವರೂ ಆಗಿರುವಂಥ ವಿದ್ವಾಂಸರಿಂದ ಮಾತ್ರ ಕನ್ನಡ ಆಯುರ್ವೇದಗ್ರಂಥಗಳ ಶಾಸ್ತ್ರೀಯ ಸಂಪಾದನೆ ಸಾಧ್ಯ.

ಒಂದು ರೋಗಕ್ಕೆ ಒಂದುನೂರು ಚಿಕಿತ್ಸೆಗಳನ್ನು ಹೇಳುವವನು ವೈದ್ಯ. ಏಳು ನೂರು ವೈದ್ಯಗಳನ್ನು ಹೇಳುವವನು ಧನ್ವಂತರಿ ಎಂಬ ಮಾತಿದೆ. ಹಾಗಾಗಿ ನಮ್ಮಲ್ಲಿ ದೊರೆಯುವ ಹಸ್ತಪ್ರತಿಗಳು ಬೇರೆ ಬೇರೆ ವೈದ್ಯಗಳನ್ನು ಹೇಳುವಂಥ ಸಂದರ್ಭ ಒದಗಿದೆ. ಹಸ್ತಪ್ರತಿಗಳ ಬಾಹುಳ್ಯಕ್ಕೆ ಕಾರಣವಾಗಿದೆ. ಭಿನ್ನ ಭಿನ್ನ ಚಿಕಿತ್ಸಾವಿಧಾನ ಗಳು ಲಭ್ಯವಾಗಿವೆ.

ಭರತಖಂಡದಂಥ ವಿಶಾಲದೇಶದಲ್ಲಿ ಬಡತನದ ರೇಖೆಯಲ್ಲಿರುವ ಜನರ ಸಂಖ್ಯೆಯೆ ಅಧಿಕ. ಇಂದು 'ತಜ್ಞತೆ' ಎಂಬ ಮುಖವಾಡದಲ್ಲಿ ಅಲೋಪತಿ ಚಿಕಿತ್ಸೆ ಅತ್ಯಂತ ದುಬಾರಿ ವೆಚ್ಚದ್ದಾಗಿದೆ. ಶ್ರೀಸಾಮಾನ್ಯನ ಆರ್ಥಿಕಸ್ಥಿತಿಗೆ ಎಟುಕಲಾರದ ಸ್ಥಿತಿಯಲ್ಲಿದೆ. ಹನ್ನೊನೆಯ ಶತಮಾನದಲ್ಲಿಯೆ ಕ್ಷೇಮೇಂದ್ರನೆಂಬ ಲಾಕ್ಷಣಿಕ "ವೈದ್ಯೋ ವಿದ್ಯುದಿವೋಗ್ರಃ ಪತತಿ ನಿಧಾನೇಷು ಸದನೇಷು" ಎಂದು ಹೇಳಿದ್ದಾನೆ. ಅಂದರೆ ಸಿಡಿಲಿನಂತೆ ಉಗ್ರನಾದ ವೈದ್ಯನು ನಿಧಿಯುಳ್ಳ ಮನೆಗಳಲ್ಲಿ ಎರಗುತ್ತಾನೆ. ಈ ಮಾತು ಇಂದಿಗೂ ಪ್ರಸ್ತುತವೆನಿಸುವಂಥ ಹೊತ್ತಿನಲ್ಲಿ ಆಯುರ್ವೇದಚಿಕಿತ್ಸೆಯನ್ನು ಅಲ್ಪವೆಚ್ಚದಲ್ಲೆ ಪಡೆಯಬಹುದಾಗಿದೆ.

ಆಯುರ್ವೇದ ವೈದ್ಯಕ್ಕೆ ದೇಶೀಯರ ಪ್ರೋತ್ಸಾಹದ ಕೊರತೆ ಇರುವುದು ನಿಜ. ಅಲೋಪತಿ ವೈದ್ಯ ಎಷ್ಟೇ ಮುಂದುವರಿದಿದ್ದರೂ ಅದು ಸಂಜೀವಿನಿಯೇನೂ ಅಲ್ಲ. ಅದರ ಒಳಿತುಗಳಷ್ಟೇ ಕೆಡುಕುಗಳೂ ಇವೆ ಅಲೋಪತಿ ವಿಫಲಗೊಂಡಾಗ ಆಯುರ್ವೇದ ಸಫಲವಾಗಿರುವುದುಂಟು. ಆಯುರ್ವೇದವನ್ನು ಸರಿಯಾಗಿ ಬಳಸಿ ಕೊಂಡಲ್ಲಿ ಕಾಮಾಲೆ ಪಾರ್ಶ್ವವಾಯು ಅರ್ಬುದ ಮಧುಮೇಹದಂಥ ಎಷ್ಟೋ ರೋಗಗಳಿಗೆ ಪರಿಹಾರ ಸಿಕ್ಕುವ ಸಂಭವವಿದೆ. ಈ ನಿಟ್ಟಿನಲ್ಲಿ ಕನ್ನಡ ಆಯುರ್ವೇದ ಗ್ರಂಥಗಳಿಗೆ ಗಣನೀಯ ಸ್ಥಾನವಿದೆ.

ಮಧುಮೇಹ-ಈಚಿನ ಕೆಲವು ಮಾಹಿತಿಗಳು

ಡಾ. ದೊಡ್ಡನಾರಣಪ್ಪ

ಸಕ್ಕರೆ ಕಾಯಿಲೆಗೆ ಮತ್ತೊಂದು ಅನ್ವರ್ಥನಾಮ ಮಧುಮೇಹ ಎಂದು. ಮಧುಮೇಹ ಎಂಬ ಹೆಸರು ಸುಮಾರು ಕ್ರಿ ಪೂ ೧೫೦೦ರಲ್ಲಿ ಈಜಿಪ್ಟಿನ ಪಾಪಿರಸ್ ಎಬರಸ್ ಮತ್ತು ಕ್ರಿ ಪೂ ೪೦೦ರಲ್ಲಿ ಶುಶ್ರುತ ಸಂಹಿತದಲ್ಲಿದೆ. ಕ್ರಿ ಪೂ ೧೫೦೦ರಿಂದ ಕ್ರಿ ಶ ೧೯೮೭ರವರೆಗೂ ಈ ಮಧುಮೇಹದ ಬಗ್ಗೆ ಪ್ರಪಂಚದಾದ್ಯಂತ ಸಂಶೋಧನೆಗಳು ನಡೆಯುತ್ತಲೇ ಇವೆ. ಸಾಮಾನ್ಯವಾಗಿ ವಿಜ್ಞಾನ ಸಂಶೋಧನೆಗಳಿಂದ ಹೆಚ್ಚಿನ ವಿಷಯಗಳು ತಿಳಿದು, ಕಠಿಣ ಅವ್ಯಕ್ತ ವಿಷಯಗಳಿಗೆ ಉತ್ತರಗಳು ದೊರಕುತ್ತವೆ ಅಲ್ಲವೆ ? ಆದರೆ ಮಧುಮೇಹದ ಬಗ್ಗೆ ಸಾವಿರಾರು ವರ್ಷಗಳು ಕಳೆದರೂ, ಸಂಶೋಧನೆಗಳು ಬಹುಮುಖವಾಗಿ ನಡೆದರೂ, ಹೆಚ್ಚು ಹೆಚ್ಚಿನ ವಿಷಯಗಳು ತಿಳಿದರೂ, ಮಧುಮೇಹ ಬರಲು ನಿಖರವಾದ ಕಾರಣ ಇನ್ನೂ ಇಂದಿಗೂ ಗೊತ್ತಿಲ್ಲ. ಇದರ ಬಗೆಗೆ ಊಹಾಪೋಹಗಳೇ ತುಂಬಿ ತುಳುಕುತ್ತಿವೆ. ಈ ಕೋಟ್ಯಂತರ ಊಹಾಪೋಹಗಳೆಲ್ಲಾ ದೇಹದಲ್ಲಿನ ಪ್ಯಾಂಕ್ರಿಯಾಸ್ ಗ್ರಂಥಿಯ ಲ್ಯಾಂಗರ್ ಹ್ಯಾನ್ಸ್ ಐಲ್ಲೆಟ್ಸಿನ β–ಜೀವಕಣಗಳನ್ನು ಸುತ್ತುತ್ತಿವೆಯೇ ಹೊರತು, ಮಧುಮೇಹಗಳಲ್ಲಿ ಈ β ಜೀವಕಣಗಳ ನ್ಯೂನತೆ ಏನು, ಅಥವಾ ಅವುಗಳಿಂದ ಹೊರಬರುವ ಇನ್‌ಸುಲಿನಿನ ನ್ಯೂನತೆ ಏನು ಅಥವಾ ಹೀಗೆ ಹೊರಬಂದ ಇನ್‌ಸುಲಿನ್ ರಕ್ತ ಸೇರಿದಾಗ ಅದಕ್ಕೆ ಯಾವ ಬದಲಾವಣೆಗಳಾಗಬಹುದು, ಅಥವಾ ರಕ್ತದಿಂದ ಇನ್‌ಸುಲಿನ್ ಜೀವಕಣಗಳಿಗೆ ಸೇರುವಾಗ ಏನಾದರೂ ನ್ಯೂನತೆ ಉಂಟಾಗುವುದೇ, ಈ ವಿಷಯಗಳಿಗೆ ಉತ್ತರ ದೊರಕಿಲ್ಲ. ಪ್ರಪಂಚಾದ್ಯಂತ ನಡೆಯುತ್ತಿರುವ ವೈದ್ಯಕೀಯ ಸಂಶೋಧನೆಗಳಲ್ಲಿ ಮಧುಮೇಹ ಅರ್ಧ ಭಾಗಕ್ಕಿಂತ ಹೆಚ್ಚು ಸ್ಥಾನ ಆಕ್ರಮಿಸಿದೆ. ಮಧುಮೇಹದ ಬಗ್ಗೆ ಹೊರಬರುತ್ತಿರುವ ಸಾಹಿತ್ಯವೂ ಅಗಾಧವಾಗಿದೆ. ಈ ಸಾಹಿತ್ಯವನ್ನೆಲ್ಲಾ ಒಬ್ಬ ವ್ಯಕ್ತಿ ಓದುವುದು ಕೂಡ ಕಷ್ಟದ ಕೆಲಸವೇ. ಇಷ್ಟು ಬೃಹದಾಕಾರವಾಗಿ ನಿಂತಿರುವ ಈ ಮಧುಮೇಹದ ಬಗೆಗೆ ಈಚಿನ ಕೆಲವು ಮುಖ್ಯ ಮಾಹಿತಿಗಳನ್ನು ಇಲ್ಲಿ ವಿವರಿಸುತ್ತೇನೆ.

ಮಧುಮೇಹ ಎಂದರೇನು ? ಇಲ್ಲ. ಇದಕ್ಕೆ ನಿಖರವಾದ ಒಂದು ಉತ್ತರವಿಲ್ಲ. ಇನ್‌ಸುಲಿನ್‌ನ ಪೂರ ಅಥವಾ ಪರಸ್ಪರ ಕೊರತೆಯಿಂದ (Absolute or Relative insufficiency) ಹಲವಾರು ರಸಾಯನಿಕ ಕ್ರಿಯೆಗಳು ಕ್ರಮತಪ್ಪಿ ನಡೆದು ಉಂಟಾಗುವ ಲಕ್ಷಣಗಳ ಒಕ್ಕೂಟ ಸ್ಥಿತಿಗೆ ಮಧುಮೇಹ ಎನ್ನಬಹುದು. ಇತ್ತೀಚೆಗೆ ವೈದ್ಯರು ಈ ಮಧುಮೇಹವನ್ನು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಈ ಎರಡು

ಗುಂಪುಗಳಿಗೂ ಮುಖ್ಯವಾಗಿ ಇನ್‌ಸುಲಿನ್ ಕೊರತೆ ಅಥವಾ ಅಭಾವ ಮೂಲ. ಒಂದನೇ ಗುಂಪಿನ ಮಧುಮೇಹಿಯನ್ನು (Type I Diabetic) ಅಥವಾ ಇನ್‌ಸುಲಿನ್ ಅವಶ್ಯಕತೆಯ ಮಧುಮೇಹಿ (Insulin Dependent Diabetic I D D) ಎನ್ನುತ್ತಾರೆ. ಈ ಗುಂಪಿನವರಿಗೆ ಹಲವಾರು ದಿವಸಗಳು ಇನ್‌ಸುಲಿನ್ ಕೊಡದೆ ಇದ್ದರೆ ಅವರು ಸಾವನ್ನಪ್ಪುವ ಸಂಭವ ಹೆಚ್ಚು. ಇವರಲ್ಲಿ ಇನ್‌ಸುಲಿನ್ ತಯಾರು ಮಾಡುವ β ಜೀವಕಣಗಳು ಕಾರಣಾಂತರಗಳಿಂದ ಇರುವುದಿಲ್ಲ ಮತ್ತು ಇವರ ದೇಹದಲ್ಲಿ ಇನ್‌ಸುಲಿನ್ ತಯಾರಿಕೆಯೇ ಇರುವುದಿಲ್ಲ. ಈ ಸ್ಥಿತಿ ಸಾಮಾನ್ಯವಾಗಿ ಮಕ್ಕಳಿಂದ ಕಿಶೋರಾವಸ್ಥೆಯವರೆಗೂ ಬರಬಹುದು. ಅಪರೂಪವಾಗಿ ವಯಸ್ಕರಲ್ಲೂ ಕಾಣಬಹುದು. ಎರಡನೆ ವಿಧದ (Type II) ಮಧುಮೇಹಿಯನ್ನು ಇನ್‌ಸುಲಿನ್ ಅನಾವಶ್ಯಕತೆಯ ಮಧುಮೇಹಿ (Non-Insulin Dependent Diabetic N I D D) ಎನ್ನುತ್ತಾರೆ. ಈ ಗುಂಪಿನವರು ಸಾಮಾನ್ಯವಾಗಿ ೫೦-೬೦ ವರ್ಷಗಳು ವಯಸ್ಸಾದವರು. ಆದರೆ ಇದೂ ಕೂಡ ಯಾವ ವಯಸ್ಸಿನಲ್ಲಾದರೂ ಬರಬಹುದು. ಇವರ ದೇಹದಲ್ಲಿ ಇನ್‌ಸುಲಿನ್ ತಯಾರುಮಾಡುವ β–ಜೀವಕಣಗಳು ಇರುತ್ತವೆ. ಇನ್‌ಸುಲಿನ್ ತಯಾರಾಗುತ್ತದೆ...ಆದರೆ ಹಿಂದೆ ಹೇಳಿದಂತೆ, ಇನ್ನೂ ಗೊತ್ತಿಲ್ಲದ ನ್ಯೂನತೆಗಳಿಂದ ಸಾಕಷ್ಟು ಕೆಲಸ ಮಾಡುವುದಿಲ್ಲ.

ಮಧುಮೇಹವನ್ನು ಗುರುತಿಸುವ ಪರೀಕ್ಷೆಗಳು ದಿನದಿನಕ್ಕೆ ರೂಪಾಂತರವಾಗುತ್ತಿವೆ. ಮೂತ್ರವನ್ನು ೩೦ ಸೆಕೆಂಡುಗಳಿಂದ ಒಂದು ನಿಮಿಷದಲ್ಲಿ ಪರೀಕ್ಷಿಸಿ ಸಕ್ಕರೆ ಇದೆಯೇ, ಇಲ್ಲವೆ, ಇದ್ದರೆ ಎಷ್ಟು ಪ್ರಮಾಣ ಎಂದು ಹೇಳುವ ಪರೀಕ್ಷಾ ಪಟ್ಟಿಗಳು (Test Strips) ಬಂದಿವೆ ನಾನಾ ಕಾರಣಗಳಿಂದ ಪ್ರಯಾಣಗಳಲ್ಲಿ ತಲ್ಲೀನರಾದ ಮಧುಮೇಹಿಗಳಿಗೆ ಇವು ತುಂಬಾ ಉಪಯುಕ್ತ. ರಕ್ತದಲ್ಲಿನ ಗ್ಲೂಕೋಸ್ ಪ್ರಮಾಣವನ್ನು ಪರೀಕ್ಷಿಸಲು ಇದೇ ರೀತಿಯ ಪರೀಕ್ಷಾ ಪಟ್ಟಿಗಳು ಮತ್ತು ಕಂಪ್ಯೂಟರ್ ಮಾಪಕಗಳು ಬಂದಿವೆ. ಇವುಗಳ ಸಹಾಯದಿಂದ, ಒಂದು ತೊಟ್ಟು ರಕ್ತದಿಂದ ಒಂದು ನಿಮಿಷದಲ್ಲಿ ರಕ್ತದ ಗ್ಲೂಕೋಸ್ ಪ್ರಮಾಣವನ್ನು ಅಳೆಯಬಹುದು. ಸಾಮಾನ್ಯ ಪೆನ್ನಿನಂತಿರುವ ಒಂದು ಕಂಪ್ಯೂಟರ್ ಮಾಪಕವನ್ನು ಇತ್ತೀಚೆಗೆ ಮಾಡಿದ್ದಾರೆ. ಈ ಪೆನ್‌ಮಾಪಕದ ಸಹಾಯದಿಂದ ೩೦ ಸೆಕೆಂಡುಗಳಲ್ಲಿ ಒಂದು ತೊಟ್ಟು ರಕ್ತದಿಂದ ಗ್ಲೂಕೋಸ್ ಪ್ರಮಾಣವನ್ನು ಅಳೆಯಬಹುದು. ಒಂದು ತೊಟ್ಟು ರಕ್ತವನ್ನು ಕೈಬೆರಳುಗಳ ಅಂಚಿನಿಂದ ಪಡೆಯಲು ಕೂಡ, ವ್ಯಕ್ತಿಗಳಿಗೆ ನೋವಾಗದಂತೆ, ಪಡೆಯಲು ಪುಟ್ಟ ಪುಟ್ಟ ಸಾಧನಗಳನ್ನು ಮಾಡಿದ್ದಾರೆ. ಇವನ್ನು ತೊಳೆದ ಬೆರಳುಗಳ ಮೇಲಿಟ್ಟು ಒಂದು ಗುಂಡಿಯನ್ನು ಒತ್ತಿದರೆ ಒಂದು ತೊಟ್ಟು ರಕ್ತ ಬರುತ್ತದೆ. ಈ ವಿಧವಿಧವಾದ ಮಾಪಕಗಳನ್ನು ದಿನಬಳಕೆಯಲ್ಲಿ ಉಪಯೋಗಿಸಲು ಹಲವು ತೊಂದರೆಗಳಿವೆ. ಆದರೆ ಆಕಸ್ಮಿಕಗಳಾದಾಗ, ತುರ್ತು ಶಸ್ತ್ರಕ್ರಿಯೆಗಳಿಗೆ ಮೊದಲು, ಶಸ್ತ್ರಕ್ರಿಯೆಗಳಾದ ಮೇಲೆ, ಮುಖ್ಯವಾಗಿ ಅಂಗಾಂಗಗಳನ್ನು ನಾಟಿ ಹಾಕಿದಾಗ (Transplant) ಅರ್ಧರ್ಧ ಗಂಟೆಗೂ, ಇಲ್ಲ ಗಂಟೆ ಗಂಟೆಗೂ ರಕ್ತ ಮೂತ್ರಗಳ ಸಕ್ಕರೆಯ ಪ್ರಮಾಣವನ್ನು ಕ್ಷಣಗಳಲ್ಲಿ ತಿಳಿಸಿ, ಪ್ರಾಣಗಳನ್ನುಳಿಸುವ

ಸಾಧನಗಳು. ಆದರೆ ಈ ಸಾಧನಗಳಿಂದ, ವ್ಯಕ್ತಿಯ ಗೊತ್ತಾದ ಕಾಲದ ಪರಿಸ್ಥಿತಿ ಮಾತ್ರ ಗೊತ್ತಾಗುತ್ತದೆ. ಗ್ಲೈಕೊಸಿಲೆಟಡ್ ಹಿಮೊಗ್ಲಾಬಿನ್ ಎಂಬ ರಕ್ತದಲ್ಲಿನ ರಾಸಾಯನಿಕ ವಸ್ತುವನ್ನೇ ಅಂದಾಜು ಮಾಡುವುದರಿಂದ, ವ್ಯಕ್ತಿಯ ರಕ್ತದ ಸಕ್ಕರೆಯ ನಿಯಂತ್ರಣ ಸುಮಾರು ಎರಡೂವರೆ ತಿಂಗಳುಗಳಿಂದ ಹೇಗಿತ್ತೆಂದು ಕೂಡ ಹೇಳಬಹುದು. ಇದೇ ರೀತಿ ರಕ್ತದಲ್ಲಿನ ಪ್ರುಕ್ಟೋಸಮೀಸ್ ಎಂಬ ರಸಾಯನಿಕ ವಸ್ತುವಿನ ಪ್ರಮಾಣವನ್ನು ಅಂದಾಜು ಮಾಡಿ ವ್ಯಕ್ತಿಯು ಕಳೆದ ೧೫ ಅಥವಾ ೮ ದಿವಸಗಳಿಂದೀಚೆಗೆ ಹೇಗೆ ನಿಯಂತ್ರಣದಲ್ಲಿದ್ದ ಎಂದು ಹೇಳಬಹುದು. ಈ ಪರೀಕ್ಷೆ ಗರ್ಭಿಣಿ ಸ್ತ್ರೀಯರಿಗೆ, ಮತ್ತು ತುರ್ತು ಶಸ್ತ್ರಕ್ರಿಯೆಗೆ ಹೋಗುವವರಿಗೆ ತುಂಬಾ ಉಪಯುಕ್ತ.

ಮಧುಮೇಹದ ಚಿಕಿತ್ಸೆಗಳ ಬಗೆಗೆ ನೋಡೋಣ. ಯಾವ ವೈದ್ಯನೇ ಆಗಲಿ ಅಥವಾ ವೈದ್ಯಕೀಯ ಪಠ್ಯಪುಸ್ತಕವೇ ಆಗಲಿ, ಇದಕ್ಕೆ ಚಿಕಿತ್ಸೆಯನ್ನು ಹೇಳುವಾಗ ಮೊದಲು ಹೇಳಬೇಕಾದ್ದು ಆಹಾರದ ವಿಷಯ. ನಂತರ ವ್ಯಾಯಾಮ, ಅದಾದ ನಂತರ ಔಷಧಿಗಳು. ಹೆಚ್ಚು ತೂಕದ ಸ್ಥೂಲಕಾಯರು ಬಂದಾಗಲಂತು, ಅವರಿಗೆ ಆಹಾರವನ್ನು ಆದಷ್ಟು ಕಡಿಮೆ ಮಾಡಿ ತೂಕವನ್ನು ಕಡಿಮೆ ಮಾಡಿಸುವುದೇ ಮುಖ್ಯ ಚಿಕಿತ್ಸೆಯಾಗುತ್ತದೆ. ಯಾವ ಮಧುಮೇಹಿಯೇ ಆಗಲಿ ವೈದ್ಯರನ್ನು ಸಂಧಿಸಿದಾಗ ಕೇಳುವ ಮೊದಲ ಪ್ರಶ್ನೆ : "ನಾನು ಏನೇನು ತಿನ್ನಬಹುದು ಡಾಕ್ಟ್ರೆ?" ಎಂದು. ತಾವು ಏನನ್ನು ತಿನ್ನಬಾರದು ಎಂಬ ವಿಷಯವನ್ನು ಮಾತ್ರ ಕೇಳುವುದಿಲ್ಲ. ಹಿಂದೆ ಆಹಾರದಲ್ಲಿ ಸಕ್ಕರೆ ಅಥವಾ ಪಿಷ್ಟಪದಾರ್ಥಗಳು (Carbohydrates) ಇರಲೇಬಾರದು. ಹೆಚ್ಚು ಜಿಡ್ಡು ಅಥವಾ ಕೊಬ್ಬು ಪದಾರ್ಥಗಳು (Fats) ಮತ್ತು ಸಾರಜನಕ ಪದಾರ್ಥಗಳನ್ನು (Proteins) ತೆಗೆದುಕೊಳ್ಳಬೇಕು ಎನ್ನುತ್ತಿದ್ದರು. ಮುಖ್ಯವಾಗಿ ನಮ್ಮಲ್ಲಿ ಅನ್ನವನ್ನು ತಿನ್ನಲೇಬಾರದು ಎನ್ನುತ್ತಿದ್ದರು. ವೈದ್ಯಶಾಲೆಗಳಲ್ಲಿ ಮಧುಮೇಹಿಗಳ ಕೇಸ್ ಷೀಟುಗಳಲ್ಲಿ : "ಅನ್ನರಹಿತ ಆಹಾರ" (Rice free diet) ಎಂದು ಕೆಂಪು ಶಾಯಿಯಲ್ಲಿ ಬರೆಯುತ್ತಿದ್ದರು. ಇದು ಪೂರ್ಣ ಬದಲಾವಣೆಯಾಗಿದೆ. ಪಿಷ್ಟ ಪದಾರ್ಥಗಳನ್ನು ಸಾಕಷ್ಟು ಕೊಟ್ಟು ಸಾರಜನಕ ಪದಾರ್ಥಗಳನ್ನು ಸುಮಾರಾಗಿ ಕೊಟ್ಟು, ಕೊಬ್ಬು ಪದಾರ್ಥಗಳನ್ನು ಕಡಿಮೆ ಮಾಡಿದ್ದಾರೆ. ಇದರಲ್ಲಿ ಬಹು ಮುಖ್ಯವಾದ ವಿಷಯವೆಂದರೆ ಪ್ರತಿಯೊಬ್ಬ ವ್ಯಕ್ತಿಗೂ, ಅವನ ವಯಸ್ಸು, ಅವನು ಮಾಡುವ ಕೆಲಸ ಮತ್ತು ಅವನಿಗಿರುವ ತೂಕಕ್ಕೆ ತಕ್ಕಂತೆ, ಒಂದು ದಿವಸಕ್ಕೆ ಎಷ್ಟು ಒಟ್ಟು ಆಹಾರವನ್ನು ಕೊಡಬೇಕು ಎಂದು ಮೊದಲು ನಿಶ್ಚಯ ಮಾಡಬೇಕು. ಆ ಮೊತ್ತವನ್ನು ಬೆಳಿಗ್ಗೆ, ಮಧ್ಯಾಹ್ನ, ರಾತ್ರಿಗಳಿಗೆ ಹಂಚಬೇಕು. ತಾನು ತೆಗೆದುಕೊಳ್ಳುವ ಒಟ್ಟು ಆಹಾರದ ಕಡೆ ಗಮನವಿದ್ದರೆ, ಯಾವ ಮಧುಮೇಹಿ ಆಗಲಿ ತನ್ನ ಆಹಾರವನ್ನು ತಾನೇ ಮಾರ್ಪಡಿಸಿಕೊಳ್ಳಬಹುದು. ತಾನು ಮಧುಮೇಹಿ ಎಂದು ಸಾರಿಕೊಂಡು, ನನಗೆ ಇದು ಬೇಡ, ಅದು ಬೇಡ ಎನ್ನುವ ಅವಶ್ಯಕತೆ ಖಂಡಿತ ಇಲ್ಲ ಕಾರಣಾಂತರಗಳಿಂದ ಊಟವೇ ದೊರಕದಿದ್ದರೆ ಅಂತಹ ಸಂದರ್ಭದಲ್ಲಿ ದೊರಕುವ ಸಿಹಿ ಪದಾರ್ಥಗಳನ್ನೇ ಮಿತವರಿತು ತೆಗೆದುಕೊಳ್ಳಬಹುದು

ಚಿಕಿತ್ಸೆಯಲ್ಲಿ ವ್ಯಾಯಾಮದ ಬಗ್ಗೆ ಹೆಚ್ಚಿನ ಮಾಹಿತಿಗಳೇನು ಇಲ್ಲ. ಇನ್‌ಸುಲಿನ್ ಕಂಡುಹಿಡಿಯುವ ಮೊದಲು—"ಊಟ ಬಿಡು–ಆಟ ಆಡು" (Miss a meal–Play Tennis) ಎನ್ನುತ್ತಿದ್ದರು. ಈಗ ಮಿತವರಿತು ಊಟ ಮಾಡು, ವ್ಯಾಯಾಮ ಮಾಡು ಎನ್ನುತ್ತಾರೆ. ಸಧ್ಯಕ್ಕೆ ಯೋಗಾಸನಗಳು ತುಂಬಾ ಬಳಕೆಗೆ ಬಂದಿವೆ. ಉಪಯುಕ್ತವಾಗಿವೆ. ವಿಜ್ಞಾನಿಗಳ ಇತ್ತೀಚಿನ ವರದಿಗಳ ಪ್ರಕಾರ ವ್ಯಾಯಾಮ, ಜೀವಕಣಗಳು ಕೆಡದಂತೆ ತಡೆದು, ಒಳ್ಳೆಯ ಆರೋಗ್ಯ ಸ್ಥಿತಿಯಲ್ಲಿಟ್ಟು ಹೆಚ್ಚು ಹೆಚ್ಚು ಇನ್‌ಸುಲಿನ್ ಹೊರಬರಲು ಸಹಾಯ ಮಾಡುತ್ತದೆ.

ಮಧುಮೇಹಕ್ಕೆ ಔಷಧಿಗಳೆಂದರೆ, ಇನ್‌ಸುಲಿನ್ ಮತ್ತು ಮಾತ್ರೆಗಳು. ಪ್ರಪಂಚದಾದ್ಯಂತ ಮಧುಮೇಹಿಗಳು ತಮ್ಮ ಜೀವನದಲ್ಲಿ ಮರೆಯಲಾಗದ ವ್ಯಕ್ತಿಗಳೆಂದರೆ ಬ್ಯಾಂಟಿಂಗ್ ಮತ್ತು ಬೆಸ್ಟ್ ವಿಜ್ಞಾನಿಗಳು. ಇವರು ೧೯೨೧ರಲ್ಲಿ ನಾಯಿಯ ಪ್ಯಾಂಕ್ರಿಯಾಸ್ ಗ್ರಂಥಿಯಿಂದ ಇನ್‌ಸುಲಿನ್ ಕ್ರಿಯಾಂಶವನ್ನು ಹೊರತೆಗೆದರು. ೧೯೨೨ರ ಜನವರಿ ೧೨ರಲ್ಲಿ ಇವನ್ನೇ ೧೪ ವರ್ಷದ ಒಬ್ಬ ಮಧುಮೇಹಿ ಹುಡುಗನಿಗೆ ಕೊಡಲಾಯಿತು. ಈ ಸುಮಾರು ೬೫ ವರ್ಷಗಳಲ್ಲಿ ಅಚ್ಚ ಬೆರೆತಿರದ ಇನ್‌ಸುಲಿನ್‌ಗಳ ತಯಾರಿಕೆ ನಡೆದಿದೆ. ಮೊದಲು ಇನ್‌ಸುಲಿನ್‌ನನ್ನು ಹಸುಗಳಿಂದ (Bovine Insulin), ನಂತರ ಹಂದಿಗಳಿಂದ (Pork Insulin) ತಯಾರಿಸಿದರು. ಜರ್ಮನಿ ಮತ್ತು ಅಮೇರಿಕಗಳಲ್ಲಿ ಪ್ರಯೋಗಾಲಯಗಳಲ್ಲಿ ೧೯೬೬ರಲ್ಲಿ ಕೃತಕ ಮಾನವ ಇನ್‌ಸುಲಿನನ್ನು ತಯಾರಿಸಿದರು. ಇದು ತುಂಬಾ ಕಷ್ಟ ಮತ್ತು ತೊಡಕಿನ ಕೆಲಸವಾಗಿಯೇ ಉಳಿದಿದೆ. "ಸೆಮಿಸಿಂತೆಟಿಕ್" ಅಥವಾ "ಅರೆ ಕೃತಕ" ಇನ್‌ಸುಲಿನ್ ತಯಾರಿಸಲು ಮಾರಲಾಗಿ ಈಗತಾನೆ ಅದು ಮಾರಾಟಕ್ಕೆ ಬಂದಿದೆ. ಇಲ್ಲಿ ಹಂದಿಗಳ ಪ್ಯಾಂಕ್ರಿಯಾಸ್ ಗ್ರಂಥಿಗಳಿಂದ ಇನ್‌ಸುಲಿನ್ ತಯಾರಿಸಿ, ಅದರ 'ಬಿ' ಕೊಂಡಿಯ, (B Chain) ಕೊನೆಯ ಅಮೈನೊ ಆಮ್ಲವಾದ ಅಲನಿನ್‌ನ್ನು ಬೇರ್ಪಡಿಸಿ, ತ್ರಿಯೋನಿನ್ ಎಂಬ ಅಮೈನೊ ಆಮ್ಲವನ್ನು ಸೇರಿಸಿ-ಕೃತಕ ಮಾನವ ಇನ್‌ಸುಲಿನ್ ತಯಾರಿಸಿದ್ದಾರೆ. ಇದಲ್ಲದೆ ಆರ್ ಡಿ ಎನ್ ಎ (Recombinant D N A) ಮಾನವ ಇನ್‌ಸುಲಿನ್ ಕೂಡ ಈಗ ಮಾರಾಟಕ್ಕೆ ಬಂದಿದೆ. ಇದರ ಬೆಲೆ ಕಡಿಮೆ. ಇದನ್ನು E Coli ಎಂಬ ಜೀವಾಣುಗಳಿಂದ ತಯಾರಿಸುತ್ತಾರೆ. A ಮತ್ತು B ಕೊಂಡಿಗಳನ್ನು ಬೇರೆ ಬೇರೆಯಾಗಿ ತಯಾರಿಸಿ ನಂತರ ಗಂಧಕದಿಂದ ಕೂಡಿಸುತ್ತಾರೆ. ಈ ಇನ್‌ಸುಲಿನ್, ಮನುಷ್ಯನ ದೇಹದ ಇನ್‌ಸುಲಿನ್‌ನಂತೆ, ಬೆರಕೆ ಇಲ್ಲದೆ ಅಪ್ಪಟವಾಗಿರುತ್ತದೆ ಮತ್ತು ಈಗಿನ ಮಾಹಿತಿಗಳ ಪ್ರಕಾರ ಬೇಗ ರಕ್ತಗತವಾಗುತ್ತದೆ.

ಇನ್‌ಸುಲಿನ್‌ನನ್ನು ದೇಹಕ್ಕೆ ಕೊಡುವ ಮಾರ್ಗಗಳಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಕೊಡುವ ಸಾಧನಗಳಲ್ಲೂ ಬದಲಾವಣೆಗಳನ್ನು ಕಾಣಬಹುದು. ಇನ್‌ಸುಲಿನ್ ಕೊಡುವ ಸಾಮಾನ್ಯ ವಿಧಾನ ಚುಚ್ಚುಮದ್ದಿನ ರೂಪದಲ್ಲಿ ಚರ್ಮದ ಕೆಳಗಡೆಗೆ ಕೊಡುವುದು. ಆದರೆ ಈಗ ಮೆಡಿಜೆಕ್ಟಾರ್ ಅಥವಾ ಸಿರಿಜೆಟ್ ಉಪಕರಣಗಳಿಂದ ಸೂಜಿಯೇ ಇಲ್ಲದೆ ಇನ್‌ಸುಲಿನನ್ನು ಚರ್ಮದೊಳಕ್ಕೆ ಸಿಂಪಡಿಸುತ್ತಾರೆ (Spray). ಇದಲ್ಲದೆ ಇನ್‌ಸುಲಿನ್ ಪಂಪ್ ಎಂಬ ಉಪಕರಣವಿದೆ. ಇದಕ್ಕೆ "ಓಪನ್

ಲೂಪ್" ಪದ್ಧತಿ ಎನ್ನುತ್ತಾರೆ. ಈ ಉಪಕರಣದಲ್ಲಿ ಎರಡು ಭಾಗಗಳಿರುತ್ತವೆ. ಒಂದು ಭಾಗ ದೇಹಕ್ಕೆ ಬೇಕಾದ ಇನ್‌ಸುಲಿನ್‌ನ್ನು ಗುರುತಿಸಿ ವಿದ್ಯುತ್ ಪ್ರೇರಣೆಯನ್ನು ಕಳುಹಿಸುತ್ತದೆ. ಇದರ ಇನ್ನೊಂದು ಭಾಗದಲ್ಲಿ ಒಂದು ಅಥವಾ ಎರಡು ದಿವಸಗಳಿಗೆ ಬೇಕಾಗುವಷ್ಟು ಇನ್‌ಸುಲಿನ್ ತುಂಬಿರುವ ಸಿರಿಂಜ್ ಇರುತ್ತದೆ. ಮೊದಲನೆ ಭಾಗದಿಂದ ಬಂದ ವಿದ್ಯುತ್ ಪ್ರೇರಣೆಗಳ ಪ್ರಕಾರ ಇನ್‌ಸುಲಿನ್ ತಾನೇ ತಾನಾಗಿ ರಕ್ತಕ್ಕೆ ಸೇರುತ್ತಿರುತ್ತದೆ. ಈ ವಿಧಾನ ಒಂದೆರಡು ಅಥವಾ ಮೂರು ದಿನಗಳಿಗೆ ಸರಿಹೋಗಬಹುದೇ ಹೊರತು ಬಹಳ ದಿವಸಗಳು ಉಪಯೋಗಿಸಲಾಗುವುದಿಲ್ಲ. ಇಟಲಿಯ ವಿಜ್ಞಾನಿಗಳು ಇನ್‌ಸುಲಿನನ್ನು ನಶ್ಯದ ತರಹ ಉಪಯೋಗಿಸುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಇಲ್ಲಿ ಇನ್‌ಸುಲಿನನ್ನು ಸೋಡಿಯಂ ಗ್ಲೈಕೊಕಾಲೇಟ್ ಎಂಬ ರಸಾಯನಿಕ ವಸ್ತುವಿನೊಡನೆ ಸೇರಿಸಿ ಮೂಗಿನ ಒಂದೊಂದು ಹೊಳ್ಳೆಗೂ ೨–೩ ತೊಟ್ಟುಗಳನ್ನು ಹಾಕಿಕೊಳ್ಳುವುದು. ೧೦–೧೫ ನಿಮಿಷಗಳಲ್ಲಿ ಸಕ್ಕರೆ ನಿಯಂತ್ರಣ ಮೊದಲಾಗಿ ಸುಮಾರು ೧೦-೧೨ ಗಂಟೆಗಳವರೆಗೂ ನಡೆಯುತ್ತದೆ. ಇದು ಇನ್ನೂ ಮಧುಮೇಹಿಗಳ ಉಪಯೋಗಕ್ಕೆ ಬಂದಿಲ್ಲ.

ಪ್ಯಾಂಕ್ರಿಯಾಸ್ ಗ್ರಂಥಿಯನ್ನು ಮತ್ತು β ಜೀವಕಣಗಳನ್ನು ಬೇರ್ಪಡಿಸಿ ನಾಟಿ ಹಾಕುವ (Transplant) ಮಾಡುವ ಕಾರ್ಯ ಸಾಕಷ್ಟು ವರ್ಷಗಳಿಂದ ನಡೆಯುತ್ತಿದೆ. ಆದರೆ ಇನ್ನೂ ಪೂರ್ಣ ಜಯಶೀಲವಾಗಿಲ್ಲ.

ಈಗ ಒಂದು ಬಯೋಸ್ಟೇಟಸ್ ಗ್ಲೂಕೋಸ್ ಟ್ರೋಲರ್ ಎಂಬ ಉಪಕರಣವನ್ನು ತಯಾರಿಸಿದ್ದಾರೆ. ಇದಕ್ಕೆ "ಕೃತಕ β—ಜೀವಕಣ" ಎಂಬ ಹೆಸರು ಸಲ್ಲುತ್ತದೆ. ಈ ಉಪಕರಣ ಮಧುಮೇಹಿಯ ರಕ್ತದಲ್ಲಿ ಗ್ಲೂಕೋಸ್ ಪ್ರಮಾಣವನ್ನು ನಿರಂತರವಾಗಿ ಅಂದಾಜು ಮಾಡಿ ಕಂಪ್ಯೂಟರ್ ಭಾಗಕ್ಕೆ ಕಳುಹಿಸುತ್ತದೆ. ಕಂಪ್ಯೂಟರ್‌ನಲ್ಲಿಟ್ಟಿರುವ ಇನ್‌ಸುಲಿನ್‌ನ್ನು ಬೇಕಷ್ಟನ್ನು ಬೇಕಾದಾಗ ಕಳುಹಿಸುತ್ತಿರುತ್ತದೆ. ಇದು ಕೂಡ ಇನ್ನು ಮಧುಮೇಹಿಗಳ ಉಪಯೋಗಕ್ಕೆ ಮಾರಾಟಕ್ಕೆ ಬಂದಿಲ್ಲ.

ಮಧುಮೇಹದ ಸಂಶೋಧನೆ ಬಾಹ್ಯಾಕಾಶಕ್ಕೂ ಹರಡಿದೆ. ಗುರುತ್ವಾಕರ್ಷಣೆ ಇಲ್ಲದ ಬಾಹ್ಯಾಕಾಶದಲ್ಲಿ ಎಲೆಕ್ಟ್ರೋಪಾರಿಸಿಸ್ ಉಪಕರಣಗಳಿಂದ ಜೀವಕಣಗಳನ್ನು ಬಿಡಿ ಬಿಡಿಯಾಗಿ ಬೇರ್ಪಡಿಸುವುದು ಸುಲಭ. ಈ ವಿಧಾನದಿಂದ ಪ್ಯಾಂಕ್ರಿಯಾಸ್‌ನ β ಜೀವಕಣಗಳನ್ನು ಬೇರ್ಪಡಿಸುವ ಕಾರ್ಯ ಸುಮಾರು ೧೯೮೨ ರಿಂದ ನಡೆಯುತ್ತಿದೆ. ಹೀಗೆ ಬೇರ್ಪಡಿಸಿದ β ಜೀವಕಣಗಳನ್ನು ಮುಂದೆ ಮಧುಮೇಹಿ ಮಾನವನ ದೇಹಕ್ಕೆ ಸೇರಿಸಿ ಇನ್‌ಸುಲಿನ್ ಉತ್ಪತ್ತಿಸಬಹುದೆಂದು ಲೂಯಿಸ್‌ನ ವಾಷಿಂಗ್‌ಟನ್ ವಿಜ್ಞಾನಿಗಳ ಭರವಸೆ.

ಮಧುಮೇಹವನ್ನು ಪೂರ್ಣವಾಗಿ ವಾಸಿ ಮಾಡಬಹುದೇ ? ಇದಕ್ಕೆ ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ. ಇವರ ಪ್ರಯತ್ನಗಳಿಗೆ ಜೀನ್ "(Gene) ಚಿಕಿತ್ಸೆ" ಎನ್ನಬಹುದು. ನಮಗೆ ತಿಳಿದಿರುವಷ್ಟು ಮಟ್ಟಿಗೆ ಮಧುಮೇಹ ವಂಶಗತವಾದದ್ದು. ಈ ಬಗೆಗೆ ಒಬ್ಬ ವಿಜ್ಞಾನಿ ಹೇಳುತ್ತಾನೆ. ತಂದೆತಾಯಿಗಳ ಪೈಕಿ ಒಬ್ಬರಿಗೆ ಮಧು

ಮೇಹವಿದ್ದರೆ ೮೦ ಭಾಗ ಮಗುವಿಗೆ ಬರುವ ಸಾಧ್ಯತೆ ಇದೆ. ತಂದೆ ತಾಯಿಗಳಿಬ್ಬರಿಗೂ ಇದ್ದರೆ ೧೦೦ ಭಾಗ ಮಗುವಿಗೆ ಬರುವ ಸಾಧ್ಯತೆ ಇದೆ ಎಂದು. ಹೀಗೆ ವಂಶಗತವಾಗಿ ಬರಬೇಕಾದರೆ ಜೀನಿನ ನ್ಯೂನತೆ ಇರಲೇಬೇಕು. ಈ ನ್ಯೂನತೆ ಯಾವ ರೂಪದ್ದು. β ಜೀವಕಣ ನ್ಯೂನತೆಯೋ, ಜೀವಕಣದಲ್ಲಿ ಇನ್‌ಸುಲಿನ್ ತಯಾರು ಮಾಡುವ ಡಿ ಎನ್. ಎ. ನ್ಯೂನತೆಯೋ, ಅಥವಾ ಈ ನ್ಯೂನತೆಯಿಂದ ತಯಾರಾದ ಇನ್‌ಸುಲಿನ್‌ನೇ ನ್ಯೂನವೆ, ಇದನ್ನೆಲ್ಲಾ ಯೋಚಿಸಿ ಮಧುಮೇಹಕ್ಕೆ ಜೀನ್ ಚಿಕಿತ್ಸೆಯನ್ನು ಕಂಡುಹಿಡಿಯಲು ಹೊರಟಿದ್ದಾರೆ. ವಾಷಿಂಗ್‌ಟನ್‌ನ ಜೀನ್ ವಿಜ್ಞಾನಿಗಳು ಪ್ರಕಾರ ಇನ್‌ಸುಲಿನ್ ತಯಾರಿಸುವ ಜೀನನ್ನು ಕಂಡುಹಿಡಿದಾಗಿದೆ. ಈ ಜೀನ್ ಇರುವ ಜೀವಕಣಗಳನ್ನು ಮಧುಮೇಹಿಗಳಿಗೆ ಜೋಡಿಸಿ, ಅವರಲ್ಲೇ ಇನ್‌ಸುಲಿನ್ ಉತ್ಪತ್ತಿಯಾಗುವಂತೆ ಮಾಡಬಹುದು ಎನ್ನುತ್ತಾರೆ. ಈ ಕಾರ್ಯ ಜಯಪ್ರದವಾಗಿ ಮಧುಮೇಹಿಗಳನ್ನು ತಲುಪಲು ಒಂದೆರಡು ದಶಕಗಳೆ ಆಗಬಹುದು.

‘ಅನುಭವದಲ್ಲಿ ಪ್ರಸಿದ್ಧವಾದ ಔಷಧಿ’

ಡಾ. ಡಿ. ವಿಶಾಲಾಕ್ಷ ಪಂಡಿತ

ಶ್ರೀ ರಾಘವೇಂದ್ರ ಸ್ವಾಮಿಗಳವರ ನಿಷ್ಕಾಮ ಸೇವೆಯನ್ನು ಕೇಳಿದ್ದೇನೆ. ಅವರ ಹಲವಾರು ಗ್ರಂಥಗಳನ್ನು ಓದಿ ಅವರ ಜ್ಞಾನ ಸಂಪತ್ತನ್ನೂ ತಿಳಿದಿರುತ್ತೇನೆ ಅವರನ್ನು ಸ್ವತಃ ಭೇಟಿಮಾಡಲು ನನಗೆ ತುಂಬಾ ಕಾತುರವಿದ್ದರೂ ಇನ್ನೂ ಆಸೆ ಈಡೇರಿಲ್ಲ. ಅವರ ನೂರು ವರ್ಷದ ಉತ್ಸವದ ಸಂಸ್ಮರಣ ಗ್ರಂಥಕ್ಕೆ ಆಯುರ್ವೇದ ಚಿಕಿತ್ಸೆಯ ಬಗ್ಗೆ ಬರೆದಿರುವ ಈ ಲೇಖನ ಅನುಕೂಲವಾಗಬಹುದೆಂದು ತಿಳಿದು ಕಳುಹಿಸಲಾಗಿದೆ. ಶ್ರೀ ಸ್ವಾಮಿಗಳಿಗಿರುವ ಆಯುರ್ವೇದ ಚಿಕಿತ್ಸಾ ಅನುಭವದಲ್ಲಿ ಅವರ ಚಿಕಿತ್ಸಾ ಒರೆಗಲ್ಲಿಗೆ ಇದೂ ಸೇರಲಿ ಎಂತ ಬರೆದು ಕಳುಹಿಸಿರುತ್ತೆ. ಇಂತಹ ಹಲವಾರು ಅನುಭವಕ್ಕೆ ಬಂದಿರುವ ಉತ್ತಮ ಕೆಲಸ ಮಾಡುವ ಔಷಧಿಗಳು ನಮ್ಮಮನೆತನದಲ್ಲಿ ಬಂದಿರುತ್ತೆ. ನನ್ನ ವೈದ್ಯ ವೃತ್ತಿಯಲ್ಲಿ ಕೆಲವು ಔಷಧಿಗಳನ್ನು ಬಳಸುತ್ತಾ ಫಲ ಕಂಡಿರುತ್ತೇನೆ. ಪ್ರಕೃತ ಒಂದು ಔಷಧದ ವಿವರ ತಿಳಿಸುತ್ತೇನೆ.

ಬಜ್ಜಿ ಔಷಧ

ಇದು ಬಹಳ ಉತ್ತಮವಾಗಿ ನನ್ನ ಅನುಭವದಲ್ಲಿ ಕಂಡುಬಂದಿದೆ ಇದನ್ನು ವಾತ, ಚರ್ಮ, ಮತ್ತು ಮೇಹ ಸಂಬಂಧವಾದ ರೋಗಗಳು–ಇವುಗಳಿಗೆ ಯಶಸ್ವಿಯಾಗಿ ಉಪಯೋಗಿಸಲಾಗುತ್ತಿದೆ. “ಪರಂಗಚಕ್ಕೆ” (ಮಧುಸ್ನುಹಿ) ಯಿಂದ ತಯಾರಾಗುವ ಈ ಔಷಧವನ್ನು ಬದನೆಕಾಯಿ ಬಜ್ಜಿಯಲ್ಲಿ ಕೊಡುವುದರಿಂದ ಇದಕ್ಕೆ ಬಜ್ಜಿ ಔಷಧಿ ಎಂದೇ ಹೆಸರು ಬಂದಿರುವಂತೆ ತೋರುತ್ತದೆ.

ಪರಂಗಚಕ್ಕೆಯನ್ನು ಹಾಲಿನಲ್ಲಿ ಬೇಯಿಸಿ ನೆರಳಿನಲ್ಲಿ ಒಣಗಿಸಿ ಚೂರ್ಣ ಮಾಡಿದರೆ ಶುದ್ಧಿಯಾಗುತ್ತದೆ. ನಂತರ ಈ ಚೂರ್ಣವನ್ನು ‘ಸುರುಸುರಿಕೆ’ ಸೊಪ್ಪಿನ ರಸದಲ್ಲಿ ಮುದ್ದೆಯಾಗಿ ಕಲಸಿ ಉಸಿರಿನಲ್ಲಿಟ್ಟು ಬೇಯಿಸಿದರೆ ನಂತರ ಪುನಃ ನೆರಳಿನಲ್ಲಿ ಒಣಗಿಸಿದರೆ ಔಷಧಿ ಸಿದ್ಧವಾಗುತ್ತದೆ. ಇದನ್ನು ದೇಹದ ಬಲವರಿತು ಖಾಯಿಲೆಯ ಅವಸ್ಥೆಯನ್ನು ತಿಳಿದು ೫-೭-೯-೧೨ ದಿನಗಳು ಎರಡು ವೇಳೆ ಬದನೇಕಾಯಿ ಹುಳಿ ಬಜ್ಜಿಯಲ್ಲಿ ಇಚ್ಛಾ ಪಥ್ಯದಲ್ಲಿ ಕೊಡಬೇಕು. ನಂತರ ಅಷ್ಟೇ ದಿನಗಳು ಮರುಪಥ್ಯ ಮಾಡಿಸಬೇಕು. ಈ ಕಾಲದಲ್ಲಿ ಹಾಲು, ಹಣ್ಣು, ಸಿಹಿಸಾರು, ಅನ್ನ ಕೊಡಬೇಕು. ಮರುಪಥ್ಯ ಕಾಲದಲ್ಲಿ ಯಾವ ಔಷಧಿಯನ್ನೂ ನಮ್ಮ ಹಿರಿಯರು ಕೊಡುತ್ತಿರಲಿಲ್ಲ. ಈವಾಗ ನನ್ನ ಅನುಭವದಲ್ಲಿ ಆಯಾಯಾ ಕಾಯಿಲೆಗೆ ಸೂಕ್ತವಾದ ಔಷಧಿಯನ್ನೂ ಕೊಡುವುದು ಉತ್ತಮವಾಗಿ ಕಂಡುಬಂದು ಅದನ್ನು ಅನುಸರಿಸುತ್ತೇನೆ. ಇದಕ್ಕಾಗಿ

ಪ್ರಕೃತ ಒಂದೆರಡು ಖಾಯಿಲೆಗಳ ಚಿಕಿತ್ಸಾ ಪರಿಚಯ ಕೊಡುವುದು ಅಪ್ರಕೃತ ವಾಗಲಾರದು.

೧. ರೋಗಿ-ಮಹಿಳೆ ವಯಸ್ಸು ೨೮ ವರ್ಷಗಳು. ತೊಂದರೆ –ಎಲ್ಲಾ ಸಂದುಗಳು ಊತ ಮತ್ತು ನೋವಿನಿಂದ ತುಂಬಾ ಬಾಧೆ ಕೊಡುತ್ತಿತ್ತು. ನಿಶ್ಶಕ್ತಿ, ಸ್ವಲ್ಪ ಜ್ವರ, ರೋಗಿ ನಡೆಯಲು ಅಶಕ್ತಳಾಗಿ ಇಬ್ಬರು ಎತ್ತಿಕೊಂಡು ನನ್ನ ಚಿಕಿತ್ಸಾಲಯಕ್ಕೆ ಬಂದರು. ಹಿಂದಿನ ಚಿಕಿತ್ಸೆ ವಿಚಾರಿಸಲಾಗಿ ಆಸ್ಪತ್ರೆಯಲ್ಲಿ ರೋಗಿಯನ್ನು ದಾಖಲು ಮಾಡಿ ಮೂಳೆ ತಜ್ಞರಿಂದ ಚಿಕಿತ್ಸೆ ಕೊಡಿಸಲಾಗಿತ್ತು. ಚಿಕಿತ್ಸೆ ಕೊಡುವಾಗ ಊತ, ನೋವು ಕಡಿಮೆಯಾಗಿ ಚಿಕಿತ್ಸೆ ನಿಲ್ಲಿಸಿದರೆ ಪುನಃ ಪ್ರಾರಂಭವಾಗುತ್ತಿತ್ತು. ವೈದ್ಯರಿಂದ ಇದೇರೀತಿ ದೀರ್ಘಕಾಲ ಚಿಕಿತ್ಸೆ ತೆಗೆಯುತ್ತಾ ಇರಬೇಕು ಎಂಬ ಸಲಹೆ ಬಂತು. ರೋಗ ಆಯುರ್ವೇದ ಪದ್ಧತಿ ಪ್ರಕಾರ 'ಆಮವಾತ'–ಎಂದು ನಿರ್ಧರಿಸಿ ಚಿಕಿತ್ಸೆ ಪ್ರಾರಂಭ ಮಾಡಲಾಯ್ತು. ಮೊದಲು ವಿರೇಚನಕ್ಕೆ ಔಷಧಿ ಕೊಟ್ಟು ನಂತರ ೧೨ ದಿನಗಳು ಇಚ್ಛಾ ಪಥ್ಯದಲ್ಲಿ ಬಜ್ಜಿ ಔಷಧಿ ಕೊಡಲಾಯ್ತು. ಬಜ್ಜಿ ಔಷಧಿ ಮುಗಿಯುವವರೆಗೆ ರೋಗಿ ಸ್ವಲ್ಪ ಸುಧಾರಿಸಿದಳು. ನಂತರ ರೋಗಕ್ಕೆ ತಕ್ಕಂತೆ 'ಮಹಾಯೋಗರಾಜ ಗುಗ್ಗುಳ'—ಮತ್ತು 'ಮಹಾ ರಾಸ್ನಾದಿ ಕಷಾಯ'ಗಳನ್ನು ಮರುಪಥ್ಯದಲ್ಲಿ ಕೊಡಲಾಯ್ತು. ನಂತರವೂ ಸುಮಾರು ಎರಡು ತಿಂಗಳು ಚಿಕಿತ್ಸೆ ಮುಂದುವರೆಸಲಾಯಿತು. ರೋಗಿ ಸಂಪೂರ್ಣ ಗುಣ ಹೊಂದಿದಳು.

೨. ರೋಗಿ-ಮಹಿಳೆ, ವಯಸ್ಸು ೩೦ ವರ್ಷಗಳು. ತೊಂದರೆ: ಎಲ್ಲಾ ಚಿಹ್ನೆಗಳೂ ಮೊದಲಿನ ರೋಗಿತರಹವೇ ಇತ್ತು. ಜೊತೆಗೆ ಶ್ವಾಸರೋಗ, (ಕೆಮ್ಮಲು ಕಫ ಕಟ್ಟಿ ಉಸಿರಾಡಲು ತೊಂದರೆ) ಸೊಂಟ ಬಗ್ಗಿಸಿ ನಡೆಯುತ್ತಾ ಕಷ್ಟದಿಂದ ಚಿಕಿತ್ಸಾಲಯಕ್ಕೆ ಬಂದಳು. ಚಿಕಿತ್ಸೆ ಎಲ್ಲಾ ಮೊದಲಿನ ರೋಗಿತರಹವೇ ಕೊಡಲಾಯಿತು. ಜೊತೆಗೆ ವಾಸಾಸವ, ಚವನಪ್ರಾಶ ಲೇಹ–ಇವನ್ನು ಮುಖ್ಯವಾಗಿ ಯೋಜಿಸಲಾಯಿತು. ರೋಗಿಗೆ ಆರು ತಿಂಗಳ ಕಾಲ ಚಿಕಿತ್ಸೆ ಕೊಡಲಾಯಿತು. ನಿಧಾನವಾಗಿ ಚೇತರಿಸಿಕೊಂಡು ಸಂಪೂರ್ಣ ಗುಣ ಹೊಂದಿದಳು. ಅಸ್ತಮಾಕ್ಕೆ ಮಾತ್ರ ಈಗಲೂ ಆಗಾಗ್ಗೆ ಸೂಕ್ತ ಚಿಕಿತ್ಸೆ ಕೊಡಲಾಗುತ್ತಿದೆ. ಈ ಎರಡೂ ಖಾಯಿಲೆಗಳು ಮುಖ್ಯವಾಗಿ ರೋಗ ತುಂಬಾ ಉಲ್ಬಣಾವಸ್ಥೆಗೆ ಬಂದು ಗುಣವಾಗಿರುತ್ತೆ.

೩. ರೋಗಿ–ಗಂಡಸು–ವಯಸ್ಸು ೫೦. ತೊಂದರೆ: ಮೈಯೆಲ್ಲಾ ತುಂಬಾ ನವೆ ಅಲ್ಲಲ್ಲಿ ಗಾಯದ ಗಂಟುಗಳು–ಗಾಯಗಳು ಆಗಾಗ್ಗೆ ಹಸಿಯಾಗಿ ಕೀವು ಬರುತ್ತಿತ್ತು. ೨ ವರ್ಷದಿಂದ ತೊಂದರೆ ಬೇರೂರಿತ್ತು.

ಚಿಕಿತ್ಸೆ: ಮೇಲಿನಂತೆ ಬಜ್ಜಿ ಔಷಧಿಯನ್ನು ೧೨ ದಿನಗಳು ಕೊಡಲಾಯಿತು. ಆಗಲೇ ಗಾಯಗಳು ಒಣಗಿ ನವೆ ಕಡಿಮೆಯಾಯಿತು. ಮರುಪಥ್ಯದಲ್ಲಿ 'ಗಂಧಕ ರಸಾಯನ'–ಕೊಡಲಾಯಿತು. ನಂತರ ಎರಡು ತಿಂಗಳು ಮಹಾಮಂಜಿಷ್ಠಾದಿ ಕಷಾಯ ಕೊಡಲಾಯಿತು. ರೋಗಿ ಸಂಪೂರ್ಣ ಗುಣ ಹೊಂದಿದನು.

೪. ರೋಗಿ–ಹೆಂಗಸು–ವಯಸ್ಸು ೪೦. ತೊಂದರೆ : ಮೈಯೆಲ್ಲಾ ಕಪ್ಪು ಮಚ್ಚೆಗಳು, ನವೆ, ಗಂಟುಗಳು, ಮೈ ಬಣ್ಣ ಕೆಂಪಾಗಿದ್ದು ಖಾಯಿಲೆಯಿಂದ ಕಪ್ಪಾಗಿ ನೋಡಲು ವಿಕಾರವಾಗಿತ್ತು.

ಚಿಕಿತ್ಸೆ : ವಿರೇಚನ ಮಾಡಿಸಿ ಬಜ್ಜಿ ಔಷಧಿ ೧೨ ದಿನಗಳು ಕೊಡಲಾಯಿತು. ಮರುಪಥ್ಯದಲ್ಲಿ ರಕ್ತಶೋಧನ್, ಲೇಪನಕ್ಕೆ 'ಶತಧೌತಘೃತ' ಯೋಜಿಸಲಾಯಿತು. ಮರುಪಥ್ಯದ ನಂತರ ಸೇವನೆಗೆ 'ಮಧುಸ್ನುಹೀ ರಸಾಯನ'–ಕೊಡಲಾಯಿತು. ಚಿಕಿತ್ಸೆ ಮೂರು ತಿಂಗಳು ನಡೆದು ರೋಗಿ ಸಂಪೂರ್ಣ ಗುಣ ಹೊಂದಿದಳು. ನಂತರ ೫-೬ ವರ್ಷಗಳು ಚೆನ್ನಾಗಿದ್ದಳು. ಪುನಃ ರೋಗಚಿಹ್ನೆ ಕಾಣಿಸಲಾಗಿ ಜಿಲ್ಲಾ ಆಸ್ಪತ್ರೆಗೆ ಹೋಗಿ ಚರ್ಮರೋಗ ತಜ್ಞರ ಬಳಿ ಚಿಕಿತ್ಸೆ ಪಡೆದಳು. ಗುಣವಾಗಿಲ್ಲ. ಈವಾಗ ಅಲರ್ಜಿಗಾಗಿ 'ಇಮ್ಯುನೋಥೆರಪಿ' (Immunotherapy) ಕೊಡಲಾಗುತ್ತಿದೆ.

ಹಲವಾರು ರೋಗಿಗಳು ಗುಣವಾಗಿದ್ದರೂ ನೆನಪಿನಲ್ಲಿ ಉಳಿದಿರುವ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡಲಾಯಿತು.

ಹೀಗೇ ಸುಲಭ ಚಿಕಿತ್ಸೆಯಲ್ಲಿ ಇನ್ನೊಂದು ಮುಖ್ಯವಾದ ಮದ್ದು ಎಂದರೆ ಜಾಂಡೀಸ್ (ಅರಿಶಿನ ಕಾಮಾಲೆ) ಖಾಯಿಲೆಯಲ್ಲಿ ಬಹು ಉಪಯೋಗಿಯಾದ **'ಕಿರುನೆಲ್ಲಿ'**. ಸಾಮಾನ್ಯವಾಗಿ ಅನೇಕ ಹಳ್ಳಿ ಹಾಗೂ ಪಟ್ಟಣದ ಕೆಲವು ಕಡೆ ಅನೇಕ ಮಂದಿ ಜಾಂಡೀಸ್‌ಗೆ ಔಷಧಿ ಕೊಡುತ್ತಿರುವುದು ಎಲ್ಲರ ಗಮನಕ್ಕೆ ಬಂದಿದೆ. ಬಹುತೇಕ ಅವರೆಲ್ಲರೂ ಅದು ಒಂದೇ ಔಷಧಿಯನ್ನು ಕೊಡಬಲ್ಲರೇ ವಿನಾ ಜಾಂಡೀಸ್‌ದಿಂದ ಉಂಟಾಗಬಹುದಾದ ಅನೇಕ ತೊಂದರೆ ಅರಿತು ತಿಳಿಸಲು ಅವರಿಗೆ ಗೊತ್ತಿರುವುದಿಲ್ಲ. ಬಹಳವಾಗಿ ಈ ಜಾಂಡೀಸ್ ಪ್ರಥಮಾವಸ್ಥೆಯಲ್ಲಿ ಯಾವ ಚಿಕಿತ್ಸೆಯೂ ಇಲ್ಲದೆ ವಿಶ್ರಾಂತಿ ಮತ್ತು ಪಥ್ಯ ಮಾಡಿದರೇ ಗುಣವಾಗುವ ಸಂಭವ ಹೆಚ್ಚು. ಅಂತಹ ಸಮಯದಲ್ಲಿ ಚಿಕಿತ್ಸೆ ಮಾಡಿದ ಹಳ್ಳಿ ಜನರು ಮತ್ತು ಚಿಕಿತ್ಸೆಮಾಡಿಸಿಕೊಂಡವರು ಅವರು ಕೊಟ್ಟ ಔಷಧಿಯಿಂದ ಗುಣವಾಯಿತೆಂದು ತಿಳಿಯುತ್ತಾರೆ. ಒಂದು ವೇಳೆ ಖಾಯಿಲೆ ಮೀರಿದ್ದರೆ ಕೆಡಕುಗಳು ಹೆಚ್ಚಾದಾಗ ಗುಣವಾಗದೇ ಬೇರೆ ವೈದ್ಯರಲ್ಲಿಗೆ ಧಾವಿಸುತ್ತಾರೆ. ಒಂದೊಂದು ಸಾರಿ ಎಲ್ಲಾ ಚಿಕಿತ್ಸೆಗೂ ಮೀರಿ ಖಾಯಿಲೆ ಬೆಳೆಯುತ್ತದೆ. ಆದರೆ ನಾನು ಹೇಳುವ 'ಕಿರುನೆಲ್ಲಿ'—ಚಿಕಿತ್ಸೆ ಬಹಳ ಉತ್ತಮವಾಗಿ ಕೆಲಸ ಮಾಡುತ್ತದೆ. ದಿನವೂ ಎರಡು ವೇಳೆ ಗಜ್ಜುಗದ ಪ್ರಮಾಣ 'ಕಿರುನೆಲ್ಲಿ'—ಸೊಪ್ಪನ್ನು ಮಜ್ಜಿಗೆಯಲ್ಲಿ ಅರೆದು ಸೇವಿಸಲು ಕೊಡಬೇಕು. ಖಾಯಿಲೆಯ ಬಲ ಅರಿತು ೫ ರಿಂದ ೩೦ ದಿನಗಳಲ್ಲಿ ಸಂಪೂರ್ಣ ಗುಣವಾಗುತ್ತದೆ. ಔಷಧಿ ಸೇವನೆ ಕಾಲದಲ್ಲಿ ಮಜ್ಜಿಗೆ ಅನ್ನ ಎಳನೀರು ಮಾತ್ರ ಸೇವಿಸಬೇಕಾದುದು ಮುಖ್ಯ. ಹಿರಿಯರಿಗಿಂತ ಕಿರಿಯರಲ್ಲಿ ಖಾಯಿಲೆ ಬೇಗ ಗುಣವಾಗುವುದು ಕಂಡುಬಂದಿದೆ. ಈ ಔಷಧಿಯನ್ನು ಕೆಲವು ಅಲೋಪತಿ ವೈದ್ಯರೂ ಸಲಹೆ ಮಾಡುವುದು ನನ್ನ ಗಮನಕ್ಕೆ ಬಂದಿದೆ.

ಆಯುರ್ವೇದ ಚಿಕಿತ್ಸೆಯಲ್ಲಿ ಇರುವ ಮಹತ್ವ ಗುಣವನ್ನು ಶ್ರೀ ಸ್ವಾಮಿಗಳವರು ಚೆನ್ನಾಗಿ ತಿಳಿದವರಾಗಿರುತ್ತಾರೆ. ಅವರ ಜ್ಞಾನ ಸಮುದ್ರದಲ್ಲಿ ಇದು ಒಂದು ಬಿಂದು ಮಾತ್ರ. ಶ್ರೀ ಸ್ವಾಮಿಗಳವರು ಯೋಗಪಟುಗಳು ಎಂದು ತಿಳಿದಿರುತ್ತೇನೆ. ಅವರ ಗ್ರಂಥಗಳನ್ನು ಈ ಬಗ್ಗೆ ಓದಿರುತ್ತೇನೆ. ಸತತವಾದ ಯೋಗಾಭ್ಯಾಸ ಮತ್ತು ನಿಯತ ಪ್ರಾಣಾಯಾಮ ಅಭ್ಯಾಸ ಮಾಡಿದರೆ ಒಳ್ಳೆಯ ಆರೋಗ್ಯ ಪಡೆಯಬಹುದು ಮತ್ತು ಮುಖ್ಯವಾಗಿ ಸಕ್ಕರೆ ಖಾಯಿಲೆ, ರಕ್ತದೊತ್ತಡ, ಶ್ವಾಸರೋಗ ಇವುಗಳಿಂದ ಬಳಲುತ್ತಿರುವವರು ಈ ಯೋಗಾಸನ ಮಾಡುವುದರಿಂದ ಔಷಧಿಯಿಂದ ದೂರವಾಗಿ ಆರೋಗ್ಯವನ್ನು ಸುಧಾರಿಸಬಹುದು. ಯೋಗಾಸನದ ಬಗ್ಗೆ ಶ್ರೀ ಸ್ವಾಮಿಗಳವರು ಮಾಡಿರುವ ಸಾಧನೆ ಅದ್ಭುತವಾದುದು. ಇದರ ಬಗ್ಗೆ ಅವರು ಬರೆದಿರುವ ಪುಸ್ತಕ ಬಹಳ ಉಪಯುಕ್ತವಾಗಿದೆ. ಇತ್ತೀಚೆಗೆ ಯೋಗಾಸನ ಎಲ್ಲಾ ಕಡೆ ಮಕ್ಕಳು ಆಡುವ ಡ್ರಿಲ್ ತರಹ ಬರುತ್ತಿದೆ. ಇದು ಒಳ್ಳೆಯದಲ್ಲ ಎಂದು ನನ್ನ ಭಾವನೆ. ನಮ್ಮ ಭಾರತೀಯ ವೈದ್ಯ ಮತ್ತು ಜ್ಯೋತಿಷ ಎಲ್ಲವೂ ಈ ರೀತಿ ಅಭ್ಯಾಸ ಕ್ರಮ ಬಂದು ಅದರ ನಿಜ ಪರಿಸ್ಥಿತಿ ಮರೆಯಾಗಿದೆ. ಆದ್ದರಿಂದ ಯೋಗಾಸನವನ್ನು ಶಾಸ್ತ್ರರೀತಿ ನುರಿತ ಶಿಕ್ಷಕರಲ್ಲಿ ಮಾತ್ರ ಅಭ್ಯಾಸ ಮಾಡಬೇಕೆಂದು ನನ್ನ ಅಭಿಮತ. ಶ್ರೀ ಸ್ವಾಮಿಗಳವರೂ ಇದರ ಬಗ್ಗೆ ತಮ್ಮ ಪುಸ್ತಕಗಳಲ್ಲಿ ಚೆನ್ನಾಗಿ ತಿಳಿಸಿರುತ್ತಾರೆ.

ಇನ್ನು ಆಯುರ್ವೇದ ಪದ್ಧತಿಯ ಬೆಳವಣಿಗೆ ಮತ್ತು ಉಳಿವು ಇದರ ಬಗ್ಗೆ ಚಿಂತಿಸಬೇಕಾಗಿದೆ. ಸುಮಾರು ೨೦–೩೦ ವರ್ಷಗಳ ಹಿಂದೆ ಆಯುರ್ವೇದದ ಬಗ್ಗೆ ಗ್ರಾಮಾಂತರ ಜನತೆಯಲ್ಲಿ ಅಭಿಮಾನವಿತ್ತು. ಪಟ್ಟಣವಾಸಿ ಜನರಲ್ಲೂ, ವಿದ್ಯಾವಂತ ರೆನಿಸಿಕೊಂಡವರಲ್ಲೂ ಅಷ್ಟಾಗಿ ಒಲವು ಕಾಣುತ್ತಿರಲಿಲ್ಲ. ಆದರೆ ಈಗಿನ ದಿನಗಳಲ್ಲಿ ನೋಡಿದಾಗ ಪಟ್ಟಣವಾಸಿ ಜನತೆ ಹಾಗೂ ವಿದ್ಯಾವಂತರು, ಸುಶಿಕ್ಷಿತರು ಇಂಗ್ಲಿಷ್ ಔಷಧಿಗಳಲ್ಲಿ ಇರುವ ದುಷ್ಪರಿಣಾಮಗಳನ್ನು ತಿಳಿದು ಆಯುರ್ವೇದದ ಬಗ್ಗೆ ಸ್ವಾಭಾವಿಕವಾಗಿ ಒಲವು ತೋರುತ್ತಿರುವುದು ಕಂಡುಬರುತ್ತಿದೆ. ಹಾಗೇ ಗ್ರಾಮಾಂತರ ಜನರು ಇಂಗ್ಲಿಷ್ ವೈದ್ಯಪದ್ಧತಿಯ ಕಡೆ ಹೆಚ್ಚು ಗಮನ ಕೊಡುತ್ತಿರುವುದು ಕಂಡುಬರುತ್ತಿದೆ. ಸರ್ಕಾರ ಮತ್ತು ಸುಶಿಕ್ಷಿತ ಜನರು ಆಯುರ್ವೇದದ ಅಭಿವೃದ್ಧಿ ಕಡೆ ಗಮನ ಹರಿಸುತ್ತಿರುವುದು ಒಳ್ಳೆಯ ವಿಚಾರವಾಗಿರುತ್ತದೆ.

ನನ್ನ ಸ್ವಂತ ಅಭಿಪ್ರಾಯದಲ್ಲಿ ಆಯುರ್ವೇದ ಬೆಳವಣಿಗೆ ಕ್ಷೀಣವಾಗುತ್ತಿರುವುದಕ್ಕೆ ಮುಖ್ಯವಾಗಿ ವೈದ್ಯರು ಹಾಗೂ ಜನತೆ ಇಬ್ಬರೂ ಕಾರಣರಾಗಿರುತ್ತಾರೆ. ಮೊದಲು ವೈದ್ಯರನ್ನು ತೆಗೆದುಕೊಂಡು ಯೋಚಿಸಿದಾಗ ನಮಗೆ ತಿಳಿದು ಬರುವುದೇನೆಂದರೆ ಈಗೀಗ ಶುದ್ಧ ಆಯುರ್ವೇದ ಚಿಕಿತ್ಸೆ ನೀಡುವ ಆಯುರ್ವೇದ ವೈದ್ಯರೆನಿಸಿಕೊಂಡವರೇ–ಅದರಲ್ಲೂ ತಿಳಿದಂಥ ಅನುಭವೀ ವೈದ್ಯರು–ಕಡಿಮೆಯಾಗುತ್ತಿದ್ದಾರೆ. ಆಯುರ್ವೇದದ ಸರಿಯಾದ ಜ್ಞಾನ ತಿಳಿಯದ ಅರೆಬರೆ ವೈದ್ಯರೆನಿಸಿಕೊಂಡವರ ಕೈಗೆ ಆಯುರ್ವೇದ ಸಿಕ್ಕಿಕೊಂಡು ತನ್ನ ನೈಜಗುಣವನ್ನು ಕಳೆದುಕೊಳ್ಳುತ್ತಿದೆ ಎಂದು ವಿಧಿಯಿಲ್ಲದೆ ಹೇಳಬೇಕಾಗಿದೆ [ಹೀಗೇನೇ ಜ್ಯೋತಿಷವೂ ಕೂಡ ರೂಪಾಯಿಗೆ ಒಂದು ಜಾತಕ ಬರೆಯುವವರ, ಹೇಳುವವರ ಕೈಗೆ ಸಿಕ್ಕಿ ತನ್ನ ನಿಜರೂಪವನ್ನು ಕಳೆದು

ಕೊಳ್ಳುತ್ತಿರುವುದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿರುವ ವಿಚಾರ.] ಮೇಲಾಗಿ ತಿಳಿದಂಥ ವೈದ್ಯರಿಗೆ ಸೂಕ್ತ ಔಷಧಿಯ ಅಭಾವ. ಇದು ಎಲ್ಲಾ ವೈದ್ಯರಿಗೂ ದೊಡ್ಡ ಸಮಸ್ಯೆಯಾಗಿದೆ. ಸ್ವತಃ ಔಷಧಿ ತಯಾರು ಮಾಡಲು ಅನುಭವವುಳ್ಳ ವೈದ್ಯರಿಗೆ ಗಿಡಮೂಲಿಕೆ ಸಿಕ್ಕುವುದು ಬಹಳ ಕಷ್ಟವಾಗಿರುತ್ತೆ. ಈಗೀಗ ಅರಣ್ಯನಾಶದಿಂದ ಅರ್ಧ ಭಾಗ ಔಷಧಿ ಸಸ್ಯ ಹಾಳಾಗಿದೆ ಹಾಗೂ ಔಷಧಿ ಸಸ್ಯಗಳನ್ನು ಬಲ್ಲ ಜನರು ವಿರಳ ವಾಗುತ್ತಿದ್ದಾರೆ. ಹೀಗಾಗಿ ಸ್ವತಃ ಔಷಧಿ ತಯಾರಿಕೆ ಕಷ್ಟವಾಗಿದೆ. ಇನ್ನು ಕಂಪೆನಿ ಗಳಿಂದ ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿರುವ ಔಷಧಿಗಳು ನಿರೀಕ್ಷಿಸಿದ ಗುಣ ಮಟ್ಟದಲ್ಲಿ ಇರುವುದಿಲ್ಲ. ಹೀಗಾಗಿ ಆಯುರ್ವೇದ ಅಭಿಮಾನವುಳ್ಳ ವೈದ್ಯರಿಗೆ ಮುಂದುವರಿಯಲು ಆಯುರ್ವೇದವನ್ನು ಅಭಿವೃದ್ಧಿಪಡಿಸಲು ಕಷ್ಟವಾಗಿರುತ್ತದೆ.

ಇನ್ನು ಜನತೆಯನ್ನು ತೆಗೆದುಕೊಂಡರೆ ಈಗಿನ ಜೀವನ ಪರಿಸ್ಥಿತಿಯಲ್ಲಿ ಎಲ್ಲರಿಗೂ ಆತುರ ಮನೋಭಾವ ವಿಪರೀತವಾಗಿದೆ. ಯಾವ ಖಾಯಿಲೆ ಬಂದರೂ ಅವರಿಗೆ ಬೇಗ ಗುಣವಾಗಬೇಕು. "ನಿಧಾನವಾಗಿ ಕ್ರಮವರಿತು ಚಿಕಿತ್ಸೆ ತೆಗೆದು ಕೊಂಡು ಗುಣವಾದ ರೋಗ ಪುನಃ ಬರುವುದಿಲ್ಲ. ಬೇಗ ಗುಣವಾದಂತೆ ತೋರುವ ರೋಗ ಪುನಃ ಬರುವ ಸಂಭವ ಹೆಚ್ಚು." ಈ ತತ್ವ ಸಾಮಾನ್ಯವಾಗಿ ಎಲ್ಲರಿಗೂ ತಿಳಿ ದಿರುವುದಿಲ್ಲ. ಉದಾಹರಣೆಗೆ ಜ್ವರದಿಂದ ನರಳುವ ಒಬ್ಬ ರೋಗಿ ಆಯುರ್ವೇದ ವೈದ್ಯ ರಲ್ಲಿಗೆ ಬಂದರೆ ಆತನಿಗೆ ಸಂಜೆಗೇ ಜ್ವರ ಬಿಡಬೇಕು. ಮರುದಿನ ಅವನು ತನ್ನ ಕೆಲಸಕ್ಕೆ ಹೋಗಬೇಕು. ಇದನ್ನು ಆ ರೋಗಿ ಬಯಸಿ ವೈದ್ಯರಲ್ಲಿಗೆ ಬಂದಿರುತ್ತಾನೆ. ಆದರೆ ವಾಸ್ತವಿಕವಾಗಿ ಆಯುರ್ವೇದ ಔಷಧಿಯ ಗುಣ ಕಾಣುವುದು ಸ್ವಲ್ಪ ನಿಧಾನ. ಆದರೆ ರೋಗಿಗೆ ತಾಳ್ಮೆ ಇರುವುದಿಲ್ಲ. ಸಂಜೆ ಹೊತ್ತಿಗೆ ಅವನಿಗೆ ಜ್ವರ ಬಿಡದಿದ್ದರೆ ಪುನಃ ಬೆಳಿಗ್ಗೆ ಬೇರೆ ಡಾಕ್ಟರಲ್ಲಿಗೆ ಹೋಗಿ ಇಂಜಕ್ಷನ್ ತೆಗೆದುಕೊಳ್ಳುತ್ತಾನೆ. ರೋಗಿಗೆ ಇದನ್ನೆಲ್ಲ ತಿಳಿಯಹೇಳಿದರೂ ಅವರು ತಾಳ್ಮೆಯಿಂದ ಇರುವುದಿಲ್ಲ. ಅವರವರ ಕಾರ್ಯಒತ್ತಡ ಹಾಗಿರುತ್ತೆ. ನಿಜವಾಗಿ ಆಯುರ್ವೇದ ಅಭಿವೃದ್ಧಿ ಹೊಂದಿ ಉಳಿಯ ಬೇಕಾದಗೆ ಸರ್ಕಾರ, ಜನರು, ವೈದ್ಯರು ಅದರ ಮೇಲೆ ನಿಜವಾದ ಅಭಿಮಾನ ಇಡ ಬೇಕು. ಸಭೆಗಳಲ್ಲಿ ಬರೀ ಹೇಳಿಕೆಯಲ್ಲಿ ಆಯುರ್ವೇದದ ಉತ್ತೇಜನದ ಬಗ್ಗೆ ಬರೀ ಮಾತುಗಳನ್ನಾಡುವುದು ಸರಿಯಲ್ಲ. ಆಯುರ್ವೇದ ಉತ್ತಮವಾದ ಶಾಸ್ತ್ರ. ಅದರ ವಿಶಿಷ್ಟತೆಯನ್ನು ವಿದ್ಯಾವಂತರೆಲ್ಲರೂ ಬಲ್ಲರು. ಆಧುನಿಕ ವೈದ್ಯ ಪದ್ಧತಿಯಲ್ಲಿರುವ ದುಷ್ಪರಿಣಾಮಗಳು, ವಿಪರೀತ ಪರಿಣಾಮಗಳು ಇದರಲ್ಲಿಲ್ಲ. ಅಲೋಪತಿಯಲ್ಲಿ ಈವಾಗ ಚಾಲ್ತಿಯಲ್ಲಿರುವ ಪರಿಣಾಮಕಾರಿ ಎಂದು ಹೆಸರು ಪಡೆದಿರುವ ಔಷಧಿಗಳು ನಾಲ್ಕಾರು ವರ್ಷಗಳು ಕಳೆದು ಅದರ ಜಾಗದಲ್ಲಿ ಬೇರೆ ಔಷಧಿ ಬಂದಾಗ ಅದು ತಾನಾಗಿ ಕಣ್ಮರೆಯಾಗುತ್ತದೆ. ಆದರೆ ಆಯುರ್ವೇದದಲ್ಲಿ ಹೀಗಾಗುವುದಿಲ್ಲ. ಸಾವಿರಾರು ವರುಷಗಳ ಹಿಂದೆ ಯಾವ ಔಷಧಿಯನ್ನು ಚರಕ, ಸುಶ್ರುತರು ಮತ್ತಿತರ ಮಹರ್ಷಿಗಳು ಪರಿಣಾಮಕಾರಿಯಾಗಿ ಉಪಯೋಗಿಸಿ ಬರೆದಿಟ್ಟರೋ ಅದೇ ಔಷಧಿ ಯನ್ನು ಈಗಲೂ ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ. ಇದು ಆಯುರ್ವೇದದ ಮಹತ್ವ ಗುಣ.

ಸರಕಾರ ಬರೀ ಪ್ರಕಟಣೆಯಲ್ಲಿ ಆಯುರ್ವೇದದ ಅಭಿವೃದ್ಧಿ ಕುರಿತು ತಿಳಿಸಿದರೆ ಸಾಲದು. ಕಾರ್ಯತಃ ಮಾಡಬೇಕು. ಅದಕ್ಕಾಗಿ ಪ್ರತೀ ಆಸ್ಪತ್ರೆಯಲ್ಲೂ ಆಧುನಿಕ ವೈದ್ಯಪದ್ಧತಿಯ ಜೊತೆಗೇ ಆಯುರ್ವೇದ ಪದ್ಧತಿಯ ವಿಭಾಗವನ್ನೂ ತೆರೆಯಬೇಕು. ಅಲ್ಲಿ ಆಯುರ್ವೇದ ವೈದ್ಯರೊಬ್ಬರನ್ನು ನೇಮಿಸಬೇಕು. ಉತ್ತಮವಾದ ಔಷಧಿಗಳನ್ನು ಸರಬರಾಜು ಮಾಡಬೇಕು. ಹೀಗಾದಾಗ ಜನರಿಗೆ ಆಯುರ್ವೇದ ಚಿಕಿತ್ಸೆ ನೇರವಾಗಿ ದೊರೆಯುತ್ತದೆ ಮತ್ತು ತನ್ಮೂಲಕ ಆಯುರ್ವೇದ ಅಭಿವೃದ್ಧಿ ಹೊಂದುತ್ತದೆ.

ಇನ್ನು ಒಂದು ಮುಖ್ಯ ವಿಷಯವೆಂದರೆ ಪದವೀಧರ ಆಯುರ್ವೇದ ವೈದ್ಯರಿಗೆ ಗಿಡಮೂಲಿಕೆಗಳ ನಿಜವಾದ, ನೇರವಾದ ಪರಿಚಯವಿರಬೇಕು. ಉದಾಹರಣೆಗೆ ಒನ್ಮೆ ಒಂದು ಗ್ರಂಥಿಕೆ ಅಂಗಡಿಯಲ್ಲಿ ಪದವೀಧರ ಆಯುರ್ವೇದ ವೈದ್ಯರೊಬ್ಬರ ಭೇಟಿ ನನಗೆ ಆಯಿತು. ಆ ವೈದ್ಯರು ಅಗಳುಶುಂಠಿ (ಸಂಸ್ಕೃತದಲ್ಲಿ 'ಪಾಠಾ')ಯನ್ನು ಅಂಗಡಿಯವರಲ್ಲಿ ಕೇಳಿದರು. ಅಂಗಡಿಯಾತ ತನ್ನಲ್ಲಿದ್ದ ಒಣಗಿದ ಪಂಜಾಬು ಕಡೆಯಿಂದ ಬಂದಿದೆ ಎಂದು ಹೇಳಿದ ಸರಕನ್ನು ವೈದ್ಯರಿಗೆ ಕೊಟ್ಟನು. ಅಕಸ್ಮಾತ್ ಆ ದಿನ ನನ್ನಲ್ಲಿ ಹಸಿಯಾದ ಅಗಳುಶುಂಠಿ ಇತ್ತು. ಆ ವೈದ್ಯರಿಗೆ ನನ್ನಲ್ಲಿದ್ದ ಅಗಳುಶುಂಠಿಯನ್ನು ತೋರಿಸಿ ಇದೇನೆಂದು ಕೇಳಿದೆ. ಆದರೆ ಆ ವೈದ್ಯರಿಗೆ ಹಸಿಯದಾದ ನಮ್ಮಲ್ಲೇ ದೊರಕುವುದಾದ ಅಗಳುಶುಂಠಿಯ ನಿಜವಾದ ರೂಪ ತಿಳಿದಿರಲಿಲ್ಲ. ಹೀಗಾಗಬಾರದು. ಎಲ್ಲಾ ಸುಶಿಕ್ಷಿತ ವೈದ್ಯರಿಗೆ ನಿಜವಾದ ಗಿಡಮೂಲಿಕೆಗಳ ಪರಿಚಯ ಮಾಡಿಸಬೇಕು. ಅನುವಂಶೀಯ ಆಯುರ್ವೇದ ವೈದ್ಯರಿಗೆ ಸಾಕಷ್ಟು ಗಿಡಮೂಲಿಕೆಗಳ ಪರಿಚಯವಿರುತ್ತದೆ. ಅಂತಹವರನ್ನು ಗುರುತಿಸಿ ಅವರ ಮಾರ್ಗಸೂಚಿಯಲ್ಲಿ ಪದವೀಧರ ವೈದ್ಯರಿಗೆ ಪ್ರತ್ಯಕ್ಷ ತರಬೇತಿಯನ್ನು ಅರಣ್ಯ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೊಡಿಸಿದರೆ ನೇರವಾದ ಗಿಡಮೂಲಿಕೆಗಳ ಜ್ಞಾನ ದೊರಕಿದಂತಾಗುತ್ತದೆ. ಈ ದಿಶೆಯಲ್ಲಿ ಆಯುರ್ವೇದ ಕಾಲೇಜಿನವರು, ಸರಕಾರ ಹಾಗೂ ಕರ್ಣಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯರ ಬೋರ್ಡ್, ಎಲ್ಲರೂ ಮನಸ್ಸು ಮಾಡಬೇಕು.

ಮತ್ತೊಂದು ಗಹನವಾದ ವಿಚಾರವೆಂದರೆ, ಆಧುನಿಕ ವೈದ್ಯ ಪದ್ಧತಿಯಲ್ಲಿ ವಿಜ್ಞಾನಿಗಳು, ವೈದ್ಯರು, ಕಂಡುಹಿಡಿದ ಹೊಸದಾದ ಯಾವುದೇ ಒಂದು ಪರಿಣಾಮಕಾರಿಯಾದ ಔಷಧ ಶೀಘ್ರವಾಗಿ ವಿಶ್ವದಾದ್ಯಂತ ಬೆಳಕಿಗೆ ಬರುತ್ತದೆ. ಆದರೆ ಆಯುರ್ವೇದದಲ್ಲಿ ಪರಿಣಾಮಕಾರಿಯಾದ ಗ್ರಂಥಸ್ಥವಲ್ಲದ ಕೆಲವು ಔಷಧಿಗಳು ಕೆಲವೇ ವೈದ್ಯರಲ್ಲಿ ಅಥವ ಕೆಲವೇ ಮನೆತನದವರಲ್ಲಿ ಉಳಿದುಹೋಗಿರುತ್ತೆ. ಆ ಅಮೂಲ್ಯವಾದ ಔಷಧಿ ಅವರುಗಳು ಇರುವವರೆಗೆ ಬಳಕೆಯಲ್ಲಿದ್ದು ಹೆಸರುಗಳಿಸಿ ಅವರ ಜೊತೆಯಲ್ಲೇ ಅದೂ ನಾಶವಾಗುತ್ತಿದೆ. ಇದು ಆಯುರ್ವೇದಕ್ಕೆ ಒಂದು ಘೋರವಾದ ಆಘಾತವಾಗಿರುತ್ತದೆ. ಉತ್ತಮ ಔಷಧಿಗಳನ್ನು ಬಲ್ಲವರು ಅನುಕೂಲಕರವಾದ ಪರಿಸ್ಥಿತಿಯಲ್ಲಿ ಅದನ್ನು ಪ್ರಚಾರ ಮಾಡಬೇಕು. ಗೋಪ್ಯ ಖಂಡಿತ ಕೂಡದು.

ಇತ್ತೀಚಿಗೆ ಜನತೆಯನ್ನು ಬಹಳ ಭಯಕ್ಕೆ ಗುರಿಮಾಡುತ್ತಿರುವ 'ಕ್ಯಾನ್ಸರ್' ರೋಗದ ಬಗ್ಗೆ ಆಯುರ್ವೇದ ವೈದ್ಯರೊಬ್ಬರು ಪರಿಣಾಮಕಾರಿ ಚಿಕಿತ್ಸೆಯನ್ನು ಕೊಡುವುದಾಗಿ ಬೊಂಬಾಯಿಯಿಂದ ಪ್ರಚಾರ ಮಾಡಿದ್ದರು. ಗುಣವಾದ ಬಗ್ಗೆ ಕೆಲವು ರೋಗಿಗಳಿಂದಲೂ ಅಭಿಪ್ರಾಯವು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಇರ ಬಹುದು. ಚಿಕಿತ್ಸೆಯನ್ನು ಅಲ್ಲಗಳೆಯುವುದಿಲ್ಲ. ಆದರೆ ಎಷ್ಟು ಜನ ಕ್ಯಾನ್ಸರ್ ರೋಗಿಗಳು ಬೊಂಬಾಯಿಗೆ ಹೋಗಿ ಅಲ್ಲಿ ಇದ್ದುಕೊಂಡು ಚಿಕಿತ್ಸೆ ಪಡೆಯಲು ಸಾಧ್ಯ ?* ಅದಕ್ಕೆ ಬದಲಾಗಿ ಅದೇ ವೈದ್ಯರು ತಾವು ಕಂಡುಹಿಡಿದಿರುವ ಔಷಧಿಯನ್ನು ದೇಶದ ನಾನಾ ಮೂಲೆಗಳಿಂದ ಸ್ವತಃ ವೈದ್ಯರನ್ನೇ ಕರೆಸಿ ಆ ಔಷಧಿ ಬಗ್ಗೆ ಅವರಿಗೇ ತರಬೇತಿ ಕೊಟ್ಟು ಅವರವರ ಪ್ರಾಂತ್ಯದಲ್ಲಿ ಅವರೇ ರೋಗಿಗಳಿಗೆ ಚಿಕಿತ್ಸೆ ಮಾಡುವಂತೆ ಏರ್ಪಾಡು ಮಾಡಿದ್ದರೆ ಅದರಿಂದ ಬಹಳ ಉಪಯೋಗವಾಗುತ್ತಿತ್ತು. ಔಷಧಿಯನ್ನು ಬೇಕಾದರೆ ಅವರೇ ನೇರವಾಗಿ ಆಯಾಯ ವೈದ್ಯರಿಗೇ ಸರಬರಾಜು ಮಾಡಬಹುದಿತ್ತು. ಇದರಿಂದ ಕ್ಯಾನ್ಸರ್ ರೋಗಿಗಳಿಗೂ ಅನುಕೂಲವಾಗುತ್ತಿತ್ತು ಮತ್ತು ಆಯುರ್ವೇದ ಪದ್ಧತಿಗೂ ಶ್ರೇಯಸ್ಸು ಬರುತ್ತಿತ್ತು.

ಶ್ರೀ ಸ್ವಾಮಿಗಳವರ ಶತಮಾನೋತ್ಸವ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಈ ಸ್ಮರಣ ಸಂಚಿಕೆಯಲ್ಲಿ ಸ್ವಾಮಿಗಳವರಿಗೆ ಪ್ರಾಣಕ್ಕೆ ಪ್ರಾಣವಾದ ಆಯುರ್ವೇದದ ಉಳಿವು ಹಾಗೂ ಬೆಳವಣಿಗೆ ಬಗ್ಗೆ ನನಗೆ ಅನಿಸಿದ ವಿಚಾರಗಳನ್ನು ತಿಳಿಸಲು ಸಂತೋಷವೆನಿಸುತ್ತದೆ. ಈ ಸಲಹೆಗಳು ಕೆಲವರಿಗಾದರೂ ಮೆಚ್ಚುಗೆಯಾಗಿ ಶ್ರೀ ಸ್ವಾಮಿಗಳವರು ತಮ್ಮ ಅವಗಾಹನೆಗೆ ಈ ವಿಚಾರಗಳನ್ನು ತಂದುಕೊಂಡು ತಮ್ಮ ಆಶೀರ್ವಾದಪೂರ್ವಕವಾದ ಸಲಹೆಗಳನ್ನು ಜನರಿಗೆ ಹಾಗೂ ಸ್ವತಃ ನನಗೆ ಕೊಟ್ಟು ಆಯುರ್ವೇದ ಅಭಿವೃದ್ಧಿ ಮಾಡಿಸುತ್ತಾರೆಂದು ನಂಬಿ ನನ್ನ ಈ ಲೇಖನವನ್ನು ಶ್ರೀ ಸ್ವಾಮಿಗಳವರ ಜ್ಞಾನ ಸಮುದ್ರಕ್ಕೆ ಸೇರಿಸಲು ಬಯಸುತ್ತೇನೆ ಮತ್ತು ಚರಕ ಮಹರ್ಷಿಗಳ ಒಂದು ಮಾತು ತಿಳಿಸಿ ಈ ಲೇಖನ ಮುಗಿಸುತ್ತೇನೆ.

ಆಯುರ್ಹಿತಾಹಿತಂ ವ್ಯಾಧಿರ್ನಿಧಾನಂ ಶಮನಂಥತಾ
ವಿದ್ಯತೇಯತ್ರವಿದ್ವದ್ಭಿಃ ಸ ಆಯುರ್ವೇದ ಉಚ್ಯತೇ

ಆಯುಸ್ಸಿಗೆ ಹಿತ ಮತ್ತು ಅಹಿತವಾದ ವಿಚಾರಗಳೂ ವ್ಯಾಧಿಗೆ ಕಾರಣವೂ ಮತ್ತು ಅದಕ್ಕೆ ಶಮನವೂ ಎಲ್ಲಿ ಹೇಳಿದೆಯೋ ಅದನ್ನು ವಿದ್ವಾಂಸರುಗಳು 'ಆಯುರ್ವೇದ'-ಎಂದು ಕರೆದಿರುತ್ತಾರೆ. ಈ ಮಾತು ಸರ್ವಜನರೂ ಸರ್ವಕಾಲಕ್ಕೂ ಒಪ್ಪಬೇಕಾದ ಸತ್ಯವಾದ ವಿಚಾರವಾಗಿರುತ್ತದೆ.

---

* ಮಲ್ಲಾಡಿಹಳ್ಳಿಯ ಶ್ರೀ ಶ್ರೀ ಸ್ವಾಮಿಗಳು ಆರಂಭದ ದೆಸೆಯಲ್ಲಿದ್ದ ರೋಗವನ್ನು ಗುಣಪಡಿಸಿರುವದು ಸರ್ವವಿದಿತವಾಗಿದೆ.

ಎದೆ ನೋವು

ಡಾ|| ಡಿ. ಎಸ್. ಶಿವಪ್ಪ

ಎದೆ ನೋವು ಕಂಡ ಕೂಡಲೇ ಎಲ್ಲರೂ ಮೊದಲು ಚಿಂತಿಸುವುದು ಹೃದ್ರೋಗವನ್ನೇ. ಹಾಗೆನ್ನಲು ಆಧಾರಗಳಿಲ್ಲ. ಮಾಂಸಖಂಡ, ಮೂಳೆಗಳಿಗೆ ಸಂಬಂಧಿಸಿದ ನೋವೇ ಎದೆ ನೋವಿನ ಮುಖ್ಯ ಕಾರಣ. ತಮ್ಮ ಎದೆ ನೋವಿಗಾಗಿ ವೈದ್ಯರಲ್ಲಿಗೆ ಹೋಗುವವರಿಗೆ ಬಹುಮಟ್ಟಿಗೆ ಹೃದ್ರೋಗ ಇರುವುದೇ ಇಲ್ಲ.

ಮಾಂಸಖಂಡಗಳು, ಮೂಳೆಗಳು, ತಂತು ಊತಕ, ತಂತುಗಟ್ಟುಗಳಿಂದ ಆಗಿರುವ ಒಂದು ಪಂಜರ ಎದೆಗೂಡು. ಹೃದಯ ಮತ್ತದನ್ನು ಆವರಿಸಿರುವ ಪರೆಗಳು, ಶ್ವಾಸಕೋಶಗಳು ಮತ್ತವನ್ನು ಆವರಿಸಿರುವ ಪರೆಗಳು, ಮಹಾಧಮನಿ (ಅಯೋರ್ಟ), ಅನ್ನನಾಳ, ಉಸಿರ್ನಾಳ ಇದರೊಳಗಿವೆ. ಈ ಅಂಗಗಳಲ್ಲಿ ಯಾವುದೇ ಅಂಗವನ್ನೋ, ಅಂಗಾಂಶವನ್ನೋ ಬಾಧಿಸುವ ಯಾವುದೇ ಬೇನೆಯಿಂದ ಎದೆನೋವು, ಕೊಂಚವಾಗೋ ತೀವ್ರವಾಗೋ ಆಗಬಹುದು. ಬಹುಮಟ್ಟಿಗೆ ಎದೆ ನೋವಿನ ಕಾರಣಗಳನ್ನು ಕೆಲವು ಕಣ್ಣರಿಕೆಗಳಿಂದ ಊಹಿಸಬಹುದು. ನೋವು ಎಲ್ಲಿದೆ, ಎಂತಹದು, ಏತರಿಂದ ಹೆಚ್ಚುವುದು, ಯಾವುದರಿಂದ ತಗ್ಗುವುದು, ದೈಹಿಕ ಚಟುವಟಿಕೆ, ಊಟ, ತಿಂಡಿ, ಅಂಗವಿನ್ಯಾಸ, ಆಳದ ಉಸಿರಾಟ ಇವಕ್ಕೂ, ನೋವಿಗೂ ಇರುವ ಸಂಬಂಧ, ಜೊತೆಗೆ ಬರುವ ಓಕರಿಕೆ, ಜ್ವರ ಇಲ್ಲವೇ ಒಂದೆಡೆಯಲ್ಲಿ ಮುಟ್ಟಿದರೆ ನೋವುಗಳಂತಹ ಚಿಹ್ನೆ, ಲಕ್ಷಣಗಳಿಂದ ಗುರುತಿಸಬಹುದು. ಕೆಲವು ಸಂದರ್ಭಗಳಲ್ಲಿ ಇಷ್ಟು ಸರಳವಾಗಿ ಪತ್ತೆ ಆಗದಿದ್ದರೆ ಮತ್ತಷ್ಟು ಪರೀಕ್ಷೆಗಳು, ಕಣ್ಣರಿಕೆ ಆಗತ್ಯ ಆಗಬಹುದು.

ಹೃದಯ ನೋವು: ಹೃದಯದ ಧಮನಿಯಿಂದೇಳುವ ಶೂಲೆಗೆ ಎಲ್ಲರೂ ಹೆದರುವರು. ಇದು ಅತ್ಯಂತ ಮಾರಕ. ಹೃದಯವೇ ಮಾಂಸಖಂಡದಿಂದಾದ ಅಂಗ. ಆದ್ದರಿಂದ ಸಾಕಷ್ಟು ರಕ್ತದ ಪೂರೈಕೆಯಿಲ್ಲದೆ ಕೆಲಸ ಮಾಡಲಾರದು ಇದಕ್ಕಾಗಿ ವಿಶೇಷ ಧಮನಿಗಳಿವೆ. ಒಂದೋ ಎರಡೋ ಧಮನಿಗಳಲ್ಲಿ, ಹೃದಯದ ಮಾಂಸಖಂಡಗಳಿಗೆ ಪೂರೈಕೆಯಾಗುವ ರಕ್ತವೋ ಆಮ್ಲಜನಕವೋ ಸಾಲದಾದಾಗ ಅಂಬಲಿಪೆಡಸಣೆ(ಆತೀರೊಸ್ಕ್ಲೆರೋಸಿಸ್)ಯಿಂದ ಕೊಬ್ಬುಗೂಡಿದ್ದರೆ 'ಎದೆಶೂಲೆ' (ಆಂಜೈನ ಪೆಕ್ಟೊರಿಸ್) ಆಗುವುದು. ಸಾಧಾರಣವಾಗಿ ದೈಹಿಕ ಚಲನೆಯಿಂದಲೋ ಇದ್ದಕ್ಕಿದ್ದ ಹಾಗೆ ಮನೋದ್ವೇಗದಿಂದಲೋ ಹೀಗಾಗಬಹುದು. ಅಂತಹ ಹೊತ್ತಿನಲ್ಲಿ ಇನ್ನೂ ಬಲವಾಗಿ ಬಡಿದುಕೊಳ್ಳಲು ಇನ್ನಷ್ಟು ಆಮ್ಲಜನಕ ಬೇಕಾಗುತ್ತದೆ.

ಕಳೆದ ಎರಡು ದಶಕಗಳಲ್ಲಿ ತೆಪ್ಪಗೆ ಕೂತಿರುವವರಲ್ಲೂ ಎದೆ ಶೂಲೆ ಆಗುವುದು ಪತ್ತೆಯಾಗಿದೆ. ಇದಕ್ಕೆ ಕಾರಣ ಸಹಜವಾದ ಧಮನಿಯಲ್ಲಿ ಸೆಡೆತ ಇಲ್ಲವೇ, ಮೊದಲೇ ಅಂಬಲಿಪೆಡಸಣೆಯಿಂದ ಧಮನಿಯ ಒಳವ್ಯಾಸ ಕಿರಿಯದಾಗಿದ್ದು ಅದರ ಮೇಲೆ ಸೆಡೆತ ಆಗುವುದೇ ಕಾರಣ. ಇದೂ ಎದೆ ಶೂಲೆಯೇ. ಆದರೆ ಸುಮ್ಮನಿದ್ದರೂ ಬಾಧಿಸುವುದಷ್ಟೆ.

ಎರಡೂ ತೆರನ ಎದೆಶೂಲೆಗಳಲ್ಲಿ ನೋವು ಎದೆಮೂಳೆಯ ಸದ್ಯ ಹಿಂದೆ ಎದೆಯ ನಡುವೆ ತೋರುವುದಾದರೂ ಒಂದು ಬೆರಳಿಟ್ಟು ಇಲ್ಲಿದೆಯೆಂದು ತೋರುವಂತಿರುವುದಿಲ್ಲ. ಅಷ್ಟು ಹರಡಿರುತ್ತದೆ. ಅಲ್ಲಿ ಒಂದು ತೆರನಾಗಿ ಬಿಗಿಯಾಗಿ ಹಿಡಿದಂತೆ, ಉರಿ, ಒತ್ತಿದಂತೆ, ಜಜ್ಜಿದಂತೆ, ಹಿಸುಕಿದಂತೆ ಇಲ್ಲವೇ ಎದಯ ಮೇಲೆ ಭಾರ ಹೇರಿದಂತೆ ಅನಿಸುವುದು. ಕೆಲವು ವೇಳೆ ಈ ಶೂಲೆ ಇದ್ದಲ್ಲಿರದೆ ಕತ್ತು, ಕೆಳದವಡೆ ಇಲ್ಲವೇ ಒಂದೋ ಎರಡೋ ತೋಳುಗಳ ಒಳಭಾಗಕ್ಕೆ ಸಾಗಬಹುದು. ಸಾಧಾರಣವಾಗಿ ಸೆಡೆತ ಇಲ್ಲವೇ ಒತ್ತಡ ತಗ್ಗಿದಂತೆ ಕೆಲವೇ ನಿಮಿಷಗಳಲ್ಲಿ ತಾನಾಗಿ ಇಲ್ಲವೇ ರೋಗಿ ನಾಲಗೆಯಡಿಯಲ್ಲಿ ನೈಟ್ರೊಗ್ಲಿಸರೀನ್ (ಇಲ್ಲವೇ ಮಾನೊ ನೈಟ್ರೇಟ್) ಮಾತ್ರೆ ಇಟ್ಟುಕೊಂಡರೆ ಇಳಿದು ಹೋಗುವುದು. ಈ ಮಾತ್ರೆ ರಕ್ತನಾಳಗಳನ್ನು ಹಿಗ್ಗಲಿಸಿ ಹೃದಯದ ಧಮನಿಗಳಲ್ಲಿ ರಕ್ತದ ಹರಿವನ್ನು ಹೆಚ್ಚಿಸುವುದಲ್ಲದೆ, ಹೃದಯದ ಮೇಲೆ ಬೀಳುವ ಒತ್ತಡವನ್ನೂ ತಗ್ಗಿಸುವುದು.

ಈ ತೆರನ ಎದೆಶೂಲೆ ಕಂಡವರು ತಡಮಾಡದೆ ವೈದ್ಯರ ಸಲಹೆ ಪಡೆಯಬೇಕು. ರೋಗಿಯ ಹೇಳಿಕೆ, ವಿವರಗಳಿಂದಲೇ ಇದನ್ನು ಗುರುತಿಸಬಹುದಾದರೂ, ಇದರ ತೀವ್ರತೆಯ ದೆಸೆಯಿಂದ ಮೊದಲು ಇದು ಖಚಿತವಾಗಬೇಕು. ಒಂದು ಇಸಿಜಿ (ವಿದ್ಯುತ್ ಹೃದಯ ಚಿತ್ರ)ಯನ್ನು ತೆಗೆಸಿದರೆ ಸಾಕಾಗಬಹುದಾದರೂ,ವ್ಯಾಯಾಮದ ಇಸಿಜಿಯನ್ನೂ ತೆಗೆಸುವುದು ಒಳ್ಳೆಯದು. ಇದೊಂದನ್ನೇ ಮಾಡಬಹುದು ಇಲ್ಲವೇ ಜೊತೆಗೆ ಸೋನಾತೀತ (ಅಲ್ಟ್ರಾಸೌಂಡ್) ಚಿತ್ರಗಳನ್ನೂ ತೆಗೆಸಿ ನೋಡಬಹುದು. ಅನಾಹುತ ಆಗುವುದನ್ನು ತಪ್ಪಿಸಲು, ಇನ್ನೂ ಕೆಲವೇಳೆ ವೈದ್ಯ ಧಮನ ಚಿತ್ರಣವನ್ನು ಬಯಸಬಹುದು. ಇದಕ್ಕೆ ಖರ್ಚೂ ಹೆಚ್ಚು, ಅಪಾಯಕಾರಿ. ಹೃದಯದ ಧಮನಿಗಳನ್ನು ಹಿಗ್ಗಿಸುವ ಮಾನೋನೈಟ್ರೇಟುಗಳು, ಸುಣ್ಣಾಂಶದ ನಾಲೆ ತಡೆಕ (ಕ್ಯಾಲ್ಸಿಯಂ ಚಾನಲ್ ಬ್ಲಾಕರ್) ದಂತಹವನ್ನು ಬೇಗನೆ ಸೇವಿಸುವುದರಿಂದ, ಹೃದಯದ ಆಮ್ಲಜನಕ ಬೇಡಿಕೆಯನ್ನು ಇಳಿಸುವುದು. ಬೀಟ ಬ್ಲಾಕರುಗಳೂ ಇಂತಹವೇ. ಇದಲ್ಲದೆ, ಆಹಾರ ಪಥ್ಯ, ಹೊಗೆ ಸೇದುವುದರ ವರ್ಜನೆ, ದೈಹಿಕ ಚಟುವಟಿಕೆಗಳನ್ನೂ ಮನೋದ್ವೇಗದ ಒತ್ತರಗಳನ್ನೂ ಮಿತಿಗೊಳಿಸುವುದರಿಂದ ಹೃದಯ ಧಮನಿ ರೋಗವನ್ನು ತಡೆಗಟ್ಟಬಹುದು.

ಹೃದಯದ ಧಮನಿಗಳಲ್ಲಿ ಅಡಚಣೆ ಸಾಕಷ್ಟು ತೀವ್ರವಾಗಬಹುದು. ಅಂತಹ ಹೊತ್ತಿನಲ್ಲಿ ಎದೆ ಶೂಲೆ ಎಡೆಬಿಡದಿದ್ದು ಇನ್ನೂ ತೀವ್ರವಾಗಿ ಹಲವು ಗಂಟೆಗಳಿರುತ್ತದೆ. ಹೃದಯದ ಮಾಂಸಖಂಡದಲ್ಲಿ ರಕ್ತ ಪೂರೈಕೆ ಇಲ್ಲದ ಭಾಗ ಆಮ್ಲಜನಕವೂ

ಪುಷ್ಟಿಯೂ ಇಲ್ಲವಾಗಿ 'ಸತ್ತು'ಹೋಗುವುದು. ಇದನ್ನು ಕೊಳೆತ (ನೆಕ್ರೋಸಿಸ್) ಎನ್ನುವರು. ಈ ಘಟನೆಗೆ ಗಿಡಿಕೆ (ಇನ್‌ಫಾರ್ಕ್‌ಷನ್) ಎಂದಿದೆ. ಇದನ್ನೇ ಜನರು ಹೃದಯಾಘಾತ (ಹಾರ್ಟ್ ಅಟ್ಯಾಕ್) ಎನ್ನುವುದು. ಇಂತಹ ನೋವು ಬಂದಾಗ ರೋಗಿ ಚಲಿಸದೆ, ಕದಲದೆ ಇರುವನು. ಇದರ ಪರಿಹಾರಕ್ಕಾಗಿ ಪ್ರಬಲ ನೋವುಹರಿಯನ್ನೋ ಮಂಪರಕಾರಿ (ನಾರ್ಕೋಟಿಕ್)ಯನ್ನೋ ನೀಡಬೇಕಾಗುತ್ತದೆ. ಇಂತಹ ನೋವು ತೋರದೆಯೇ ಹೃದಯಾಘಾತ ಆಗಲೂಬಹುದು.

ಎಷ್ಟೋ ವೇಳೆ, ಎದೆ ಶೂಲೆ ಕ್ರಮೇಣ ಉಲ್ಬಣಿಸುತ್ತ ಹೃದಯಾಘಾತದಲ್ಲಿ ಕೊನೆಗೊಳ್ಳುವುದು. ಎದೆ ನೋವು ಎಡೆಬಿಡದಂತಿದ್ದು ಹೃದಯಾಘಾತದ ರೋಗಿ ವಿಪರೀತ ಬೆವರುತ್ತ, ಬಿಳಿಚಿಕೊಂಡು, ಓಕರಿಕೆ, ವಾಂತಿ ಆಗಿ ಸುಸ್ತಾಗುವನು. ಅಂತಹವನನ್ನು ಕೂಡಲೇ ಆಸ್ಪತ್ರೆಗೆ ಸೇರಿಸಬೇಕು. ತುರ್ತು ಚಿಕಿತ್ಸೆಯಲ್ಲಿ ರೋಗಿಗೆ ಆಮ್ಲಜನಕವನ್ನು ಕೊಟ್ಟು, ರಕ್ತಗರಣೆರೋಧಕಗಳನ್ನೂ ಗರಣೆಕರಗಿಕ ಮದ್ದುಗಳನ್ನೂ ನೀಡಿ ಅಡಚಣೆಯಾಗಿರುವ ಹೃದಯದ ಧಮನಿಯನ್ನು ತೆರೆಯಲು, ಊದಬಹುದಾದ ಬೆಲೂನನ್ನು ಆ ಭಾಗಕ್ಕೆ ಒಳತೂರಿಸಬಹುದು. ಇಲ್ಲವೇ ಆ ಭಾಗಕ್ಕೆ ಲೇಸರ್ ಅನ್ನು ನೀಡಬಹುದು. ಹೃದಯಾಘಾತವಾದ ಎರಡು ತಾಸುಗಳೊಳಗಾಗಿ ಈ ಕ್ರಮಗಳನ್ನು ಅನುಸರಿಸಿದರೆ ಹೃದಯದ ಮಾಂಸಖಂಡದಲ್ಲಾಗುವ ಹಾನಿಯನ್ನು ತಪ್ಪಿಸಬಹುದು.

ಮಾಂಸಖಂಡ, ಮೂಳೆ, ಮೂಳೆರಜ್ಜುವಿನ ನೋವು : ಎದೆಶೂಲೆ ಎಷ್ಟು ವಿನಾಶಕಾರಿಯೆಂದು ಗೊತ್ತಿರುವುದರಿಂದ ಬಹಳ ಮಂದಿ ಎದೆ ನೋವು ಎಂತಹದಿದ್ದರೂ ಹೃದಯಾಘಾತವೆಂದೇ ಭಾವಿಸುವರು. ಉದಾಹರಣೆಗೆ, ವ್ಯಾಯಾಮದಲ್ಲೋ ಮತ್ತಾವುದೋ ಕಾರಣದಿಂದಲೋ ಒಂದು ಮಾಂಸಖಂಡ, ಮೂಳೆ ಇಲ್ಲವೇ ಮೂಳೆ ರಜ್ಜುವಿನಲ್ಲಿ ಸರಕ್ಕನೆ ಕಿತ್ತುಹೋಗಿರಬಹುದು. ಇದಾದ ಎಷ್ಟೋ ಗಂಟೆಗಳ ನಂತರ ನೋವು ಗೊತ್ತಾಗುವುದರಿಂದ, ರೋಗಿಗೆ ಅದರ ನೆನಪೇ ಇಲ್ಲದಿರಬಹುದು. ಇದು ಎದೆ ಶೂಲೆಯನ್ನು ಹೋಲುವುದಿಲ್ಲ. ಒಂದೆಡೆಯಲ್ಲೇ ಹೆಚ್ಚು ನೋಯುತ್ತಿದ್ದು, ಆ ಭಾಗದ ಮೂಳೆ, ಮಾಂಸಖಂಡ, ಮೂಳೆ ರಜ್ಜನ್ನು ಚಲಿಸಿದಾಗ ನೋವು ಹೆಚ್ಚುವುದು. ಆ ಭಾಗವನ್ನೇ ಒತ್ತಿದರೆ ಇನ್ನಷ್ಟು ನೋವು.

ಕೆಲವೇಳೆ, ಎದೆಯ ಗೂಡಿನ ನೋವು (ಟೀಟ್ಜೆಯ ಲಕ್ಷಣಕೂಟ) ವೈದ್ಯ, ರೋಗಿ ಇಬ್ಬರನ್ನೂ ತಬ್ಬಿಬ್ಬುಗೊಳಿಸಬಹುದು. ಗಾಯ ಪೆಟ್ಟುಗಳಿಂದಾಗುವುದಿಲ್ಲ. ಇದರ ಕಾರಣ ಸರಿಯಾಗಿ ಗೊತ್ತಿಲ್ಲ. ಆದರೆ ಎದೆಮೂಳೆಯ ಹತ್ತಿರ ಇರುವ ಪಕ್ಕೆಲುಬುಗಳನ್ನು ಜೋಡಿಸುವ ಮೃದ್ವಸ್ಥಿಗಳಲ್ಲಿ ನೋವು, ಉರಿಯೂತವಿದ್ದು ಅಲ್ಲಿ ಮುಟ್ಟಿದರೆ ನೋಯುವುದು. ನೋವು ಒಂದೇ ಸಮನಾಗಿ ಇರಬಹುದಾದರೂ, ಕೆಮ್ಮಿದರೆ, ಸೀನಿದರೆ, ಎದೆಗೂಡು ಚಲಿಸುವುದರಿಂದ ನೋವು ಉಲ್ಬಣಿಸುವುದು. ಸಾಧಾರಣವಾಗಿ ಉರಿಯೂತ ಆಗಿರುವೆಡೆ ಒತ್ತಿದರೆ ನೋಯುತ್ತದೆ.

ಶ್ವಾಸಕೋಶಗಳಲ್ಲಿ, ಅಳ್ಳೆಪರೆಯಲ್ಲಿ ನೋವು : ಶ್ವಾಸಕೋಶಗಳಲ್ಲಿ

ಅರಿವಿನ ನರಗಳು ಇಲ್ಲವಾದ್ದರಿಂದ, ಅವನ್ನು ಸುತ್ತುವರಿದಿರುವ ಅಳ್ಳಿಪರೆ (ಪ್ಲೂರ) ಯನ್ನು ಬಾಧಿಸುವಾಗ ಮಾತ್ರ ನೋವು ತೋರುವುದು. ಈ ಅಳ್ಳಿಪರೆ ಒಂದೊಂದು ಶ್ವಾಸಕೋಶವನ್ನು ಹೊರಪಕ್ಕದಲ್ಲಿ ಆವರಿಸಿರುವ ಒಂದು ಚೀಲದಂತಿರುವುದು. ಅದರ ಒಂದು ಪದರ ಶ್ವಾಸಕೋಶವನ್ನು ಸುತ್ತುವರಿದರೆ, ಇನ್ನೊಂದು ಪದರ ಎದೆಗೂಡಿನ ಗೋಡೆಯ ಒಳವರಿ ಪದರವಾಗಿರುವುದು. ಇವೆರಡು ಪದರಗಳ ನಡುವೆ ಒಂದ ನ್ನೊಂದು ನುಣುಪಾಗಿ ಜಾರಿಸಲು ಕೊಂಚ ತೆಳು ರಸ ಇರುವುದು. ನ್ಯುಮೋನಿಯ ದಲ್ಲಿ, ಕಾಲಿನಲ್ಲಿನ ರಕ್ತದ ಗರಣೆ ಶ್ವಾಸಕೋಶಕ್ಕೆ ರಕ್ತದ ಮೂಲಕ ಸಾಗಿ ಬಂದು, ಧಮನಿಯ ಅಡಚಣೆ ಮತ್ತಿತರ ಕಾರಣಗಳಿಂದಲೂ ಅಳ್ಳಿಪರೆಯುರಿತ(ಪ್ಲೂರಿಸಿ) ಆಗ ಬಹುದು. ಇಂತಹ ಬಹಳಷ್ಟು ಸಂದರ್ಭಗಳಲ್ಲಿ ರೋಗಿಗೆ ಬೇರೊಂದು ರೋಗ ಮೊದಲೇ ಇರುವುದು. ಇದರ ನೋವು ಚುರುಕಾಗಿ ಪಕ್ಕೆಯಲ್ಲಿ ಚೂರಿ ಇರಿದಂತಿರು ವುದು. ಬಹುಮಟ್ಟಿಗೆ ಬೆನ್ನಲ್ಲೋ ಎದೆಯ ಕೆಳಪಕ್ಕದಲ್ಲೋ ತೋರುವುದು. ಆಳವಾಗಿ ಉಸಿರೆಳೆದುಕೊಂಡರೆ, ಕೆಮ್ಮಿದರೆ, ಅಳ್ಳಿಪರೆಯ ಎರಡು ಪದರಗಳೂ ಒಂದ ಕ್ಕೊಂದು ಉಜ್ಜುವುದರಿಂದ ಈ ನೋವು ತೋರುವುದು. ಇದರೊಂದಿಗೇ ಕೆಮ್ಮು, ಜ್ವರ, ಕಾಲು ನೋವೂ ಇರುತ್ತವೆ.

ರೋಗಿಯ ಆ ಭಾಗದ ಎದೆಯ ಮೇಲಿರಿಸಿದ ಸ್ಟೆತಸ್ಕೋಪಿನ ಮೂಲಕ ವಿಶಿಷ್ಟ ವಾದ 'ಉಜ್ಜುವ ಸದ್ದು' ವೈದ್ಯನಿಗೆ ಕೇಳಿಬರುತ್ತದೆ. ಬಹುಮಟ್ಟಿಗೆ ಇಂತಹ ನೋವಿಗೆ ಆ ಭಾಗದ ಶ್ವಾಸಕೋಶದ ರೋಗದಿಂದ ಏಳುವುದರಿಂದ ಎದೆಯ ರೇಡಿಯೊ ಗ್ರಾಮನ್ನು ತೆಗೆಯಿಸಿದರೆ, ರೋಗ ನಿರ್ಧಾರ ಆಗುತ್ತದೆ. ರೇಡಿಯೋಗ್ರಾಮಿನಲ್ಲಿ ಏನೂ ತೋರದರೆ ಇಲ್ಲವಾಗಿ ರಕ್ತಗರಣೆಯಿಂದಾದ ಅಡಚಿಕೆ ಅನುಮಾನವಾದರೆ ಒಂದು ವಿಶೇಷ ರೇಡಿಯೊ ಐಸೊಟೋಪನ್ನು ಬಳಸಬೇಕಾಗುತ್ತದೆ.

ಹೃದಯ ಸುತ್ತಣ ನೋವು : ಶ್ವಾಸಕೋಶದ ಸುತ್ತ ಇರುವ ಚೀಲದ ಹಾಗೆಯೇ ಹೃದಯದ ಸುತ್ತಲೂ ಒಂದು ಚೀಲವಿದೆ. ಉರಿಯೂತದಿಂದ ಎದೆ ನೋವು ಆಗಬಹುದು ಏಕಾಣುಜೀವಿ ಇಲ್ಲವೇ ವಿಷಕಣ(ವೈರಸ್)ಗಳಿಂದ ಸೋಂಕು ಹತ್ತಿ ಉರಿಯೂತ ಆಗಿರಬಹುದು. ಇದೂ ಎದೆ ಶೂಲೆಯ ಹಾಗೇ ಇರುತ್ತದೆ. ಆದರೆ ಹೀಗಾಗುವುದು ಅಪರೂಪ. ಇಂತಹ ಉರಿಯೂತ ಸಾಧಾರಣವಾಗಿ ಆರೋಗ್ಯ ವಂತ ಎಳೆಯರಲ್ಲಿ ಜ್ವರದೊಂದಿಗೆ ತೋರುವುದು. ಎದೆಶೂಲೆಯ ಹಾಗೆ ಈ ನೋವು ಕತ್ತಿಗಾಗಲಿ ತೋಳಿಗಾಗಲಿ ಸಾಗದು. ಆಳವಾಗಿ ಉಸಿರೆಳೆದರೆ ಇನ್ನೂ ಹೆಚ್ಚುತ್ತದೆ. ರೋಗಿ ಕುಳಿತು ಮುಂದಕ್ಕೆ ಬಾಗಿದರೆ ಶಮನವಾಗುತ್ತದೆ.

ರೋಗಿಯ ಹೃದಯದ ಕೆಳ ಭಾಗದ ಮೇಲಿಟ್ಟ ಸ್ಟೆತಸ್ಕೋಪಿನ ಮೂಲಕ ಉಜ್ಜುವ ಸದ್ದು ವೈದ್ಯನಿಗೆ ಕೇಳಿಬರುತ್ತದೆ. ಇಸಿಜಿಯಲ್ಲಿ ವಿಶಿಷ್ಟ ಚಿಹ್ನೆಗಳಿದ್ದು, ರೇಡಿಯೋಗ್ರಾಂನಲ್ಲಿ ಹೃದಯಾವರಣದ ಚೀಲದಲ್ಲಿ ನೀರು ತುಂಬಿರುವುದು ಕಾಣು ವುದು. ಕೆಲವೇಳೆ ಇಸಿಜಿಯಲ್ಲೂ ಎದೆಯ ರೇಡಿಯೋಗ್ರಾಂನಲ್ಲೂ ಎದೆಶೂಲೆಯಲ್ಲಿ ಇದ್ದ ಹಾಗೇ ಇರುವುದುಂಟು. ಆದರೆ ಹೃದಯಾವರಣದ ಉರಿಯೂತದ ರೋಗಿ ಗಳನ್ನೂ ಕೂಡಲೇ ಆಸ್ಪತ್ರೆಗೆ ಸೇರಿಸಬೇಕು.

ಜಠರ ಕರುಳಿನ ನೋವು : ಹೊಟ್ಟೆಯಲ್ಲಿನ ಬೇನೆಗಳೊಂದಿಗೆ ಎದೆನೋವು ತೋರುವುದುಂಟು. ಅನ್ನನಾಳದಲ್ಲಿ ಹುಣ್ಣು, ಸೆಡೆತ, ಉರಿಯೂತ, ಒಳವ್ಯಾಸ ಕಿರಿದಾಗಿರುವುದೇ ಮುಂತಾದ ಕಾರಣಗಳಿಂದಲೂ ಹೀಗಾಗಬಹುದು. ಎದೆಶೂಲೆಯನ್ನು ಹೋಲುವುದಾದರೂ, ಕತ್ತಿಗೂ ತೋಳಿಗೂ ಅಷ್ಟಾಗಿ ಸಾಗದೆ ಹೊಟ್ಟೆಯ ಮೇಲ್ಭಾಗದಲ್ಲಿ ಮಾತ್ರವಿದ್ದು ಚಲನೆಯಿಂದ ಹೆಚ್ಚುವುದಿಲ್ಲ ಇದರೊಂದಿಗೆ ಎದೆಯುರಿ, ನುಂಗಣೆ ಕಷ್ಟ ಆಗಬಹುದು. ಜಠರದಿಂದ ಆಮ್ಲರಸ ಅನ್ನನಾಳವನ್ನು ಹೊಕ್ಕಾಗ ಏಳುವ ನೋವು ಆಮ್ಲರೋಧಕ ಗುಳಿಗೆಗಳಿಂದ ತಗ್ಗುವುದು.

ಅನ್ನನಾಳದಿಂದೇಳುವ ಎದೆನೋವು ಹಿಂದಿಗಿಂತಲೂ ಈಗ ಹೆಚ್ಚಿರುವಂತೆ ಕಂಡುಬರುತ್ತಿದೆ. ಕೆಲವೇಳೆ ಇದಕ್ಕೂ ಎದೆಶೂಲೆಗೂ ವ್ಯತ್ಯಾಸವನ್ನು ತಿಳಿಯಲು ಹಲವು ಪರೀಕ್ಷೆಗಳು ಅಗತ್ಯ ಆಗಬಹುದು. ಇವೆರಡರ ಚಿಕಿತ್ಸೆಗಳೂ ತೀವ್ರತೆಯೂ ತೀರ ಬೇರೆ ಬೇರೆ. ಅನ್ನನಾಳದ ಬೇನೆಗಳ ನಿರ್ಧಾರದಲ್ಲಿ, ಹೈಡ್ರೊಕ್ಲೋರಿಕಾಮ್ಲದ ದ್ರಾವಣವನ್ನು ಕುಡಿಸಿದರೆ ನೋವು ಮತ್ತಷ್ಟು ಹೆಚ್ಚುತ್ತದೆ. ಇದಲ್ಲದೆ ಬೇರಿಯಂ ಉಣಿಸನ್ನು ರೋಗಿಗೆ ಕೊಟ್ಟು ಅನ್ನನಾಳದ ರಚನೆ ಇಲ್ಲವೇ ಅದರ ಕ್ರಿಯೆಯಲ್ಲಿನ ಲೋಪದೋಷಗಳು, ನುಂಗಣೆ, ಅನ್ನನಾಳದ ಚಲನಶೀಲತೆಯನ್ನು ಗುರುತಿಸಬಹುದು. ಹೇಗೆಂದರೆ ಹಾಗೆ ಬಾಗುವ ಫೈಬರಾಸ್ಕೋಪ್ ಸಾಧನವನ್ನು ಅನ್ನನಾಳದೊಳಗೆ ತೂರಿಸಿ ಒಳಗಿರುವ ತೊಂದರೆಯನ್ನು ಕಣ್ಣಾರೆ ನೋಡಬಹುದು. ಇದರೊಂದಿಗೆ ದುರ್ಬಲ ವಿಕಿರಣಶಕ್ತ ದ್ರಾವಣವನ್ನೂ ನುಂಗಿಸಿದರೆ ಅನ್ನನಾಳದೊಳಕ್ಕೆ ಹಿಂಗಾರಿಸಿ ಗೀಗರ್ ಎಣಿಕದಿಂದ ಅಳೆಯಬಹುದು.

ಹೊಟ್ಟೆಯಲ್ಲಿ ವಾಯು, ತೇಗು, ಓಕರಿಕೆ, ಕೆಲವೇಳೆ ವಾಂತಿ ಆಗಿಸುವ 'ಅಜೀರ್ಣ'ದಿಂದ ಹೊಟ್ಟೆಯ ಮೇಲ್ಭಾಗದಲ್ಲಿ ಒಂದು ತರಹದ ತೊಂದರೆ ಆಗುವುದಾದರೂ, ಸಾಧಾರಣವಾಗಿ ಎದೆನೋವು ಇರುವುದಿಲ್ಲ. ಆದರೆ ಸುಮಾರು ಅರೆ ಶತಕದ ಹಿಂದೆ, ನಿಜವಾದ ಎದೆಶೂಲೆಯನ್ನೇ ಆಗ 'ತೀವ್ರ ಅಜೀರ್ಣ' ವೆಂದೇ ಹೆಸರಿಡುತ್ತಿದ್ದರು. ಇವೆರಡಕ್ಕೂ ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಲ್ಲ. ಮಿತಿಮೀರಿ ತಿಂದರೆ, ಅತಿಯಾಗಿ ಕುಡಿದರೆ ಅಜೀರ್ಣ ಆಗುವುದು. ಕೆಲವು ಆಹಾರ ವಸ್ತುಗಳಿಂದಲೂ, ಆಸ್ಪಿರಿನ್ನಂತಹ ಮದ್ದುಗಳಿಂದಲೂ ಇನ್ನಷ್ಟು ಹೆಚ್ಚುವುದು.

ಕೆಲವು ಅಸಾಧಾರಣ ಸಂದರ್ಭಗಳಲ್ಲಿ ಜಠರದ ಇಲ್ಲವೇ ಮುಂಗರುಳಿನ ಹುಣ್ಣುಗಳು ಇಲ್ಲವೆ ಪಿತ್ತದ ಕಲ್ಲುಗಳಿಂದೇಳುವ ನೋವು ಹೊಟ್ಟೆಯ ತೀರ ಮೇಲ್ಭಾಗಕ್ಕೂ ಕೆಲವೇಳೆ ಎದೆಯ ಕೆಳ ಭಾಗಕ್ಕೂ ಸಾಗಬಹುದು. ಹೀಗಾಗುವುದು ಅಪರೂಪ. ದೈಹಿಕ ಪರೀಕ್ಷೆಯಿಂದಲೂ ಜೊತೆಗಿರುವ ಲಕ್ಷಣಗಳಿಂದಲೂ ಸುಲಭವಾಗಿ ನಿರ್ಧರಿಸಬಹುದು. ಹೊಟ್ಟೆ ಹುಣ್ಣಿನ ರೋಗಿಗಳು ಸಾಮಾನ್ಯವಾಗಿ ಎದೆಯುರಿ, ಹೊಟ್ಟೆ ಮೇಲ್ಭಾಗದಲ್ಲಿ ನೋವು, ತೊಂದರೆ ಅನುಭವಿಸುವರು. ನೋವಿಗೂ ಊಟಕ್ಕೂ ಸಂಬಂಧ ಇರುವುದು. ಊಟವಾದ ಕೊಂಚ ಹೊತ್ತಿನ ಮೇಲೆ ಜಠರ ಬರಿದಾಗಿ ಆಮ್ಲರಸ ತುಂಬಿರುವಾಗ ನೋವು ಬರುವುದು. ಪಿತ್ತದ ಕಲ್ಲುಗಳಿರುವವರು

ಹೊಟ್ಟೆಯ ಬಲಗಡೆ ಮೇಲ್ಭಾಗದಲ್ಲಿ ಪಕ್ಕೆಲುಬಿನ ಪಂಜರದೊಳಗೆ ಚುರುಕಾಗಿ ನೋವು ಅನುಭವಿಸುವರು. ಅಲ್ಲದೆ ಕೊಬ್ಬಿನ ಇಲ್ಲವೆ ಕರಿದ ತಿಂಡಿಗಳಿಂದ ನೋವು ಉಲ್ಬಣಿಸುವುದು. ಇವೆರಡರಲ್ಲೂ ಹೊಟ್ಟೆ ನೋಯುವುದೇ ಹೊರತು ಎದೆಯಲ್ಲಲ್ಲ. ಇದನ್ನು ದೃಢಪಡಿಸಲು ಬೇರಿಯಂ ಉಣಿಸನ್ನು ಕುಡಿಸಿ ರೇಡಿಯೋಗ್ರಾಂ ಚಿತ್ರವನ್ನು ತೆಗೆಸಬೇಕು. ಪಿತ್ತದ ಕಲ್ಲುಗಳಿಗಾಗಿ ಸೋನಾತೀತ ಪರೀಕ್ಷೆ ಮಾಡಿಸಬೇಕಾಗಬಹುದು.

ನರದ ನೋವು : ಎದೆನೋವಿಗೆ ಇನ್ನೊಂದು ಕಾರಣ ಬೆನ್ನುಗಂಬದಿಂದ ಹೊರಬೀಳುವ ನರಗಳು. ಉದಾಹರಣೆಗೆ, ಕೊರಳಲ್ಲಿರುವ ಬೆನ್ನುಮೂಳೆಗಳ ನಡುವಣ ಬಟ್ಟು ಜಾರಿ, ಎದೆಗೆ ಹೋಗುವ ನರದ ಬುಡವನ್ನು ಒತ್ತುತ್ತಿರಬಹುದು. ಆಗ ಸಾಧಾರಣವಾಗಿ ಕೊರಳನ್ನು ಆಡಿಸಿದರೆ ನೋವು ಉಲ್ಬಣಿಸುತ್ತದೆ. ನೋವು ಇರುವ ಜಾಗದಿಂದ ಯಾವ ನರದ ಮೇಲೆ ಒತ್ತಡ ಇದೆಯೆಂದು ಗುರುತಿಸಬಹುದು. ಈ ನೋವು ಬಿಟ್ಟು ಬಿಟ್ಟು ಬರುವುದಲ್ಲದೆ, ಕೊರಳಿನ ಕೆಲವು ವಿನ್ಯಾಸಗಳಲ್ಲಿ ನೋವಿರದು. ಅಲ್ಲದೆ ಎದೆಶೂಲೆಯ ರೀತಿ, ಎಡೆ, ಸಾಗಣೆ, ಚಲನೆಗೆ ಸಂಬಂಧ ಇರುವುದಿಲ್ಲ. ಕೊರಳಿನ ಇಲ್ಲವೆ ಎದೆಯ ಭಾಗದ ಬೆನ್ನುಮೂಳೆಗಳ ಕೀಲುರಿತದ ನೋವೂ ಅದೇ ರೀತಿಯಲ್ಲಿರುತ್ತದೆ. ಬೆನ್ನುಗಂಬದ ರೇಡಿಯೊಗ್ರಾಂ ಕೆಲವೇಳೆ ಸಿಟಿಸ್ಕ್ಯಾನ್‌ನಿಂದಲೂ ರೋಗ ಪತ್ತೆಯಾಗುತ್ತದೆ ಆದರೆ ಬೆನ್ನುಗಂಬದ ಅಸಹಜ ರೇಡಿಯೊಗ್ರಾಂನ ವ್ಯಾಖ್ಯಾನದಲ್ಲಿ ಹುಷಾರಿರಬೇಕು.

ಎದೆ ನೋವಿಗೆ ಕಾರಣವಾಗುವ ಇನ್ನೊಂದು ನರಬೇನೆ ಉಡಿತದ್ದು (ಹರ್ಪೀಸ್ ಜೋಸ್ಟರ್). ಅರಿವಿನ ನರದ ವಿಷಕಣದ ಸೋಂಕು ಬಾಧಿತವಾದ ನರದ ಉದ್ದಕ್ಕೂ ದದ್ದುಗಳೆದ್ದು ಬೆಂಕಿ ಇಟ್ಟಂತೆ ಉರಿಯುವುದು. ಈ ನೋವು ಹಲವು ದಿನಗಳು ಕಾಡುತ್ತದೆ. ಮೊದಮೊದಲು ವಿಚಿತ್ರವಾಗಿ ಚುಮುಗುಟ್ಟುತ್ತಿರುವುದು. ನರದ ಪೂರೈಕೆಯ ಗೆರೆಗೇ ಸೀಮಿತವಾಗಿರುವುದು. ಜೊತೆಗೆ ಚಳಿ ಜ್ವರ, ಹೊಟ್ಟೆ ಕೆಡುವುದೂ ಇರುಸು ಮುರುಸೂ ಆಗುತ್ತವೆ. ಉಡಿತದ್ದನ್ನು ಎದೆ ಶೂಲೆಗೆ ತಪ್ಪು ತಿಳಿಯುವಂತಿಲ್ಲ. ಏಕೆಂದರೆ, ೩–೪ ದಿನಗಳಲ್ಲಿ ಸಣ್ಣ ಕೆಂಪು ಬೊಬ್ಬೆಗಳು ನರದ ಉದ್ದಕ್ಕೂ ಚರ್ಮದ ಮೇಲೆ ಎದ್ದಿರುತ್ತವೆ.

ಉಸಿರ್ಗಟ್ಟು : ಉಸಿರ್ಗಟ್ಟನ್ನು ಎದೆ ಶೂಲೆಗೆ ತಪ್ಪು ತಿಳಿಯುವಂತಿಲ್ಲ. ಊಟ ಮಾಡುತ್ತಿರುವಾಗ ಗಂಟಲಲ್ಲಿ ಉಸಿರ್ನಾಳದ ಆರಂಭದಲ್ಲಿ ತಿಂದಿದ್ದು ಸಿಕ್ಕಿಕೊಂಡಾಗ ಉಸಿರ್ಗಟ್ಟುತ್ತದೆ. ಉಸಿರ್ಗಟ್ಟಿದ ರೋಗಿ ಮಾತಾಡಲಾರ, ಉಸಿರಾಡಲಾರ. ಉದ್ರೇಕಿತನಾಗಿ ಆಮ್ಲಜನಕದ ಕೊರತೆಯಿಂದ ಬೇಗನೆ ನೀಲಿಗಟ್ಟುವನು. ಒಂದಿಗರು ಇದನ್ನು ಎದೆ ಶೂಲೆಯೆಂದೇ ಭಾವಿಸುವರು. ನಿಜವಾದ ಎದೆ ಶೂಲೆ ರೋಗಿ ಮಾತಾಡಬಲ್ಲ. ಅಲುಗಾಡದಂತಿದ್ದು ನೀಲಿಗೆ ಬದಲಾಗಿ ಬಿಳಿಚಿಕೊಳ್ಳುವನು. ಉಸಿರ್ಗಟ್ಟಿದವನಿಗೆ ಎದೆನೋವು ಇರದು. ತನ್ನ ಬೆರಳಿಂದ ಉಸಿರು ಕಟ್ಟಿರುವ ಗಂಟಲನ್ನು ತೋರುತ್ತಾನೆ. ಇದನ್ನು ನೋಡುತ್ತಿರುವ ಹುಷಾರಿಗ ಹೀಮ್ಲಿಚ್

ವಿಧಾನದಲ್ಲಿ ಬಲವಾಗಿ ತಬ್ಬಿಕೊಂಡರೆ ಗಂಟಲಲ್ಲಿ ಅಡ್ಡಿಯಾಗಿರುವುದು ತಾನಾಗಿ ಹೊರಬೀಳುತ್ತದೆ.

ಬೇರೆ ಕಾರಣಗಳು : ಎದೆ ನೋವಿನ ಕೆಲವು ಅಪರೂಪದ ಘಟನೆಗಳಲ್ಲಿ ಕೆಲವು ತೀವ್ರವಾಗಿದ್ದು, ಕೊನೆಗೆ ಮಾರಕ ಆಗಲೂಬಹುದು. ನೋವಿನ ತೀವ್ರತೆಯೊಂದಿಗೆ ಬೇರೆ ಲಕ್ಷಣಗಳೂ ಇರುವುದರಿಂದ ರೋಗಿ ಕೂಡಲೇ ವೈದ್ಯನ ನೆರವು ಕೋರುವನು. ಹೃದಯದಿಂದ ಎಲ್ಲೆಡೆಗಳಿಗೂ ರಕ್ತವನ್ನು ಸಾಗಿಸುವ ಮಹಾಧಮನಿಯ ಒಳವರಿ ಪದರ ಹರಿದುಹೋದಾಗ, ರಕ್ತನಾಳದ ಪದರಗಳ ನಡುವೆ ರಕ್ತ ನುಗ್ಗಿದಾಗ, ರೋಗಿ ತೀರ ಸುಸ್ತಾಗಿ ಮೈ ಬೆವರಿ ತಣ್ಣಗಾಗಿ ಸುಸ್ತು ಧಕ್ಕೆ (ಷಾಕ್) ಅನುಭವಿಸುವನು. ಇದರಿಂದ ತಡೆಯಲಾಗದ ಒಂದೇಸಮನ ನೋವು ಎದೆಶೂಲೆಯನ್ನೇ ಅನುಕರಿಸಬಹುದು. ರೋಗಿಯನ್ನು ಕೂಡಲೇ ಆಸ್ಪತ್ರೆಗೆ ಸೇರಿಸಬೇಕು. ಅಲ್ಲಿ ಎದೆಯ ಸರಳ ರೇಡಿಯೋಗ್ರಾಂ ಅಲ್ಲದೆ ಧಮನಿಯ ಮೂಲಕ ವಿಕಿರಣತೂರದ ದ್ರವವನ್ನು ಚುಚ್ಚಿ, ಮಹಾಧಮನಿಯ ರೇಡಿಯೋಗ್ರಾಮನ್ನೂ ಅದರ ಪದರಗಳ ಸೋನಾತೀತ ಚಿತ್ರವನ್ನೂ ತೆಗೆಸುವರು. ಕೆಲವೇಳೆ, ಸರಳ ದೈಹಿಕ ಪರೀಕ್ಷೆಗಳಿಂದಲೇ ರೋಗ ಪತ್ತೆಯಾಗುವುದು.

ಶ್ವಾಸಕೋಶದ ಮೇಲ್ಮೈ ಹರಿದಿರುವಾಗ ಉಸಿರಲ್ಲಿ ಎಳೆದುಕೊಂಡ ಗಾಳಿ ಅಳ್ಳೆಪರೆಯ ಚೀಲದೊಳಕ್ಕೆ ನುಗ್ಗಿ ಆ ಭಾಗದ ಶ್ವಾಸಕೋಶವೇ ಮುದುಡಿಕೊಳ್ಳುವುದು. ಇದಕ್ಕೆ ಗಾಳಿದುಂಬೆದೆ (ನ್ಯೂಮೊತೊರ್ಯಾಕ್ಸ್) ಎಂದಿದೆ. ಸಾಧಾರಣವಾಗಿ ಆರೋಗ್ಯವಂತ ಹರೆಯದ ಗಂಡು ಮಕ್ಕಳಲ್ಲಿ ಗಾಳಿದುಂಬೆದೆ ತಂತಾನಾಗಿ ಆಗುವುದಾದರೂ, ಗೂರಲು ಇಲ್ಲವೇ ಬೇರೂರಿದ ಶ್ವಾಸಕೋಶ ಬೇನೆಗಳಿಂದ ಅದರ ಮೇಲ್ಮೈಗಳು ಅತಿಯಾಗಿ ಹಿಗ್ಗಿಸಿದಂತಾಗಿ ತೆಳುವಾಗಿರುವುದರಿಂದ ವಯಸ್ಸಾದವರಲ್ಲೂ ತೋರಬಹುದು. ಎದೆಗೂಡಿನ ಗಾಯ ಪೆಟ್ಟುಗಳಿಂದಲೂ ಎದೆಯ ತಿವಿತ, ಇರಿತಗಳಿಂದಲೂ ಹೀಗಾಗುತ್ತದೆ. ಆಗ ಪೆಟ್ಟಾದ ಭಾಗದ ನೋವಿನೊಂದಿಗೆ ಬೇಗನೆ ಉಸಿರಾಟ ಕಷ್ಟವಾಗುವುದು. ಪರೀಕ್ಷೆಯಿಂದ ಸ್ಪಷ್ಟ ಗಾಳಿದುಂಬೆದೆಯನ್ನು ಕೂಡಲೇ ಗುರುತಿಸಬಹುದಾದರೂ, ಎದೆಯ ರೇಡಿಯೊಗ್ರಾಂ ಖಚಿತಪಡಿಸುತ್ತದೆ. ಕೂಡಲೇ ವೈದ್ಯ ಚಿಕಿತ್ಸೆ ನಡೆಸಲೇಬೇಕು.

ಕೊನೆಯದಾಗಿ, ಗೊತ್ತಿರುವ ಯಾವ ರೋಗವನ್ನೂ ಅದರ ರೀತಿ, ಎಡೆ, ಕಾರಣಗಳು ಯಾವುವೂ ಅಸ್ಪಷ್ಟವಾಗಿದ್ದರೆ, ಹೆಚ್ಚೂ ಕಡಿಮೆ ಆಗುತ್ತಿದ್ದರೆ, ಮನೋದ್ವೇಗ ಮತ್ತು ಕಳವಳದ ಕಾರಣಗಳನ್ನು ಯೋಚಿಸಬೇಕು. ಎದೆ ನೋವಿನ ತೆರತೆರನ ಕಾರಣಗಳು ಗೊತ್ತಾದ ಹಾಗೆಲ್ಲ ಮನೋದ್ವೇಗದ ಕಾರಣಗಳನ್ನು ಅಷ್ಟಾಗಿ ಯೋಚಿಸುವುದಿಲ್ಲವಾದರೂ, ಆ ಕಾರಣವೂ ಇದೆ ಎನ್ನುವುದನ್ನು ಮರೆಯಬಾರದು.

ಕೆಲವು ಸಾಮಾನ್ಯೀಕರಣಗಳು : ಮೇಲಿನ ಭಿನ್ನತೆಗಳು ಸೂಚಿಸುವಂತೆ ಎದೆ ನೋವನ್ನು ಮೂರು ಬಗೆಗಳಾಗಿ ವಿಂಗಡಿಸಬಹುದು. ಅತಿ ತೀವ್ರವಾದ, ಒಂದೇ

ಹೊತ್ತಿನ, ಇದ್ದೇ ಇರುವ, ನೋವಿನೊಂದಿಗೆ ತೀವ್ರ ರೋಗದ ಲಕ್ಷಣಗಳಾದ ತಣ್ಣಗೆ ಕೊರೆವ ಚರ್ಮ, ಕಷ್ಟದ ಉಸಿರಾಟ, ಇಲ್ಲವೇ ಜ್ವರ ಇರುವುದು ಮೊದಲನೆಯದು. ಇಂತಹ ನೋವನ್ನು ಕೂಡಲೇ ವೈದ್ಯರ ಗಮನಕ್ಕೆ ತರಬೇಕು.

ಎರಡನೆಯದು ಅಲ್ಪಕಾಲದ ಘಟನೆ. ಮತ್ತೆ ಮತ್ತೆ ಬಂದರೂ ಮೊದಲನೆಯದರಷ್ಟು ತೀವ್ರವಲ್ಲ. ಸಾಧಾರಣವಾಗಿ ಇದು ಒಂದು ನಮೂನೆಯಂತಿದ್ದು, ಘಟನೆಯ ಕಾಲ, ಶೂಲೆ ಆಗಿಸುವ ಅಂಶಗಳು, ನೋಯುವ ಜಾಗ, ಶಮನವಾಗಿಸುವ ಕ್ರಮಗಳಿಂದ ಪತ್ತೆಯಾಗುವುದು. ಇಂತಹ ರೋಗಿ ಕೂಡ ವೈದ್ಯನನ್ನು ಕಾಣಬೇಕು.

ಎದೆನೋವಿನ ಮೂರನೆಯ ಮಾದರಿಯೂ ಸೌಮ್ಯವಾಗಿದ್ದು ಮತ್ತೆ ಮತ್ತೆ ಬರುವುದಾದರೂ, ನೋವಿನ ಎಡೆ, ಹೊತ್ತು, ಶೂಲೆ ಉಂಟುಮಾಡುವ ಇಲ್ಲವೇ ಶಮನಗೊಳಿಸುವ ಅಂಶಗಳಲ್ಲಿ ಗೊತ್ತಾದ ಯಾವ ನಮೂನೆಯನ್ನೂ ಹೋಲದು. ಒಂದೊಂದು ಸಲವೂ ಬೇರೆಡೆಗಳಲ್ಲಿ ತೋರಬಹುದು. ಸಾಧಾರಣವಾಗಿ ಈ ನೋವುಗಳಿಂದ ಯಾವ ತೊಂದರೆಯೂ ಇಲ್ಲದೆ ಸೌಮ್ಯ ಅಲ್ಲದೆ ಮನೋದೈಹಿಕ ಮೂಲದ್ದಾಗಿರಬಹುದು.

ಬಹಳಷ್ಟು ಸಂದರ್ಭಗಳಲ್ಲಿ ಎದೆನೋವಿನ ಕಾರಣವನ್ನು ವೈದ್ಯ ಖಚಿತವಾಗಿ ಗುರುತಿಸಬಲ್ಲ. ರೋಗವನ್ನು ಪತ್ತೆ ಹಚ್ಚಲು ಹಿಂದಿನ ಚರಿತ್ರೆಯನ್ನು ವಿಚಾರಿಸುವನು. ಆದರೆ ವೈದ್ಯವೃತ್ತಿಯಲ್ಲಿ ಅನೇಕ ವೇಳೆ ರೋಗಿಯ ಲಕ್ಷಣಗಳು ಪಠ್ಯಪುಸ್ತಕದಲ್ಲಿ ನಿರೂಪಿಸಿರುವ ಹಾಗೇ ಇರುವುದಿಲ್ಲ. ಎಷ್ಟೋ ರೋಗಿಗಳಲ್ಲಿ ಅಷ್ಟು ಕರಾರುವಾಕ್ಕಾಗೂ ನಿರ್ಧಾರಕವಾಗೂ ಇರುವುದಿಲ್ಲ. ಅಂತಹವರಲ್ಲಿ ಖಚಿತವಾಗಿ ಇದೇ ರೋಗವೆಂದು ಹೇಳುವಂತಿರದು. ಒಂದಕ್ಕಿಂತಲೂ ಹೆಚ್ಚು ರೋಗಗಳಿಂದ ರೋಗ ಲಕ್ಷಣಗಳು ತೋರುತ್ತಿರಬಹುದು. ಇಂತಹ ಸಂದರ್ಭಗಳಲ್ಲಿ ರೋಗಿಯ ಹೇಳಿಕೆಗೂ ಅವನ ರೋಗ ಲಕ್ಷಣಗಳಿಗೂ ತಾಳೆಬೀಳದಿದ್ದಲ್ಲಿ ಇನ್ನಷ್ಟು ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ.

ವೇದಾಂತ

ಆರ್ಯರು ಭಾರತದ ಮೂಲ ನಿವಾಸಿಗಳೆ ಅಲ್ಲವೆ?

ಡಾ. ಸ. ಸುಬ್ರಹ್ಮಣ್ಯಂ

ಬಾಲ್ಯದಲ್ಲಿ ನಾವು ಶಾಲೆ ಕಾಲೇಜುಗಳಲ್ಲಿ ಕಲಿತ ಮತ್ತು ಇಂದೂ ನಮ್ಮ ಮಕ್ಕಳು ಕಲಿಯುತ್ತಿರುವ ಇತಿಹಾಸ ಪಾಠಗಳಲ್ಲಿ ಆರ್ಯರು ಮಧ್ಯ ಏಷ್ಯಾದಿಂದಲೋ ಬೇರೆಲ್ಲಿಂದಲೋ ವಲಸೆ ಹೊರಟು ವಾಯುವ್ಯದ ಕಣಿವೆಗಳ ಮೂಲಕ ಭಾರತವನ್ನು ಪ್ರವೇಶಿಸಿ ಸಿಂಧೂ ಕಣಿವೆಯಲ್ಲಿ ಮೊದಲು ನೆಲೆಸಿ, ಅನಂತರ ಅಲ್ಲಿದ್ದ ದ್ರಾವಿಡ ಜನಾಂಗವನ್ನು ದಕ್ಷಿಣಕ್ಕೆ ಅಟ್ಟಿ ಉತ್ತರದ ನದಿಯ ಬಯಲುಗಳಲ್ಲಿ ವ್ಯಾಪಿಸಿದರು ಎಂದು ತಿಳಿದು ಬರುತ್ತದೆ.ಅನಂತರದ ಇತಿಹಾಸದಲ್ಲಿ ಮೊಗಲರು,ಪಠಾಣರು,ಫ್ರೆಂಚರು ಪೋರ್ಚುಗೀಸರು, ಇಂಗ್ಲೀಷರು, ಹೇಗೆ ನುಗ್ಗಿಬಂದರೋ ಹಾಗೆಯೇ ಆರ್ಯರೂ ಹೊರಗಿನಿಂದ ಬಂದವರೆಂಬುದು ಪಾಶ್ಚಾತ್ಯ ಇತಿಹಾಸಜ್ಞರ ಸಿದ್ಧಾಂತ. ಆದರ ಪರಿಣಾಮವಾಗಿಯೇ ದಕ್ಷಿಣವಲ್ಲಿರುವ ಜನಾಂಗ ಉತ್ತರದಲ್ಲಿರುವವರಿಂದ ಪ್ರತ್ಯೇಕ ಎಂಬ ಭಾವನೆ ಬೆಳೆದಿದೆ. ತಮಿಳುನಾಡಿನ ದ್ರವಿಡಕಳಗಂ,ದ್ರವಿಡಮುನ್ನೇಟ್ರ ಕಳಗಂ ಮೊದಲಾದ ಪಕ್ಷಗಳ ಸ್ಥಾಪನೆಗೂ ಆ ಭಾವನೆಯೇ ಕಾರಣ.

ಆರ್ಯರು ಇರಾನ್ ನಿಂದಲೋ, ಅಫ್ ಘಾನಿಸ್ತಾನದಿಂದಲೋ ಮಧ್ಯ ಏಷ್ಯಾದಿಂದಲೋ ಬಂದವರೆಂಬುದಕ್ಕೆ ದೃಢವಾದ ಆಧಾರವಿದೆಯೊ ? ಇಲ್ಲ, ಅದು ಕೇವಲ ಊಹಾತ್ಮಕ. ಐತಿಹಾಸಿಕವಾದ ಆಧಾರಗಳು ದೊರೆಯುವು. ಆರ್ಯರು ಬೇರೆ ಕಡೆಯಿಂದ ಬಂದವರಾಗಿದ್ದರೆ ಕಡೆಯ ಪಕ್ಷ ಅವರಾದರೂ ತಮ್ಮ ವೇದಗಳಲ್ಲಿ ಅಥವಾ ಮತ್ತಿತರ ಕೃತಿಗಳಲ್ಲಿ ತಮ್ಮ ಮೂಲ ನಿವಾಸ ಇಂತಹುದು ಎಂದು ಉದ್ದೇಶಪಟ್ಟೋ ಉದ್ದೇಶವಿಲ್ಲದೆಯೋ ಸೂಚಿಸದಿರುತ್ತಿದ್ದರೆ? "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಹೆತ್ತ ತಾಯಿಯನ್ನೂ ಜನ್ಮಕೊಟ್ಟ ನಾಡನ್ನೂ ಮರೆಯುವುದಕ್ಕೆ ಸಾಧ್ಯವೇ ? ಅವರು ಭಾರತಕ್ಕೆ ಬಂದ ಮೇಲೆಯೇ ರಚಿಸಿದುದು ವೇದವೇದಾಂಗಗಳಂತಹ ಪ್ರೌಢವಾದ ಸಾಹಿತ್ಯವನ್ನು. ಅವುಗಳ ರಚನೆಗೆ ಪ್ರೇರಕವಾಗಿ ಪೋಷಕವಾಗಿ ಬಂದ ಮೂಲ ಸೆಲೆಗಳು ಅವರ ಪೂರ್ವದ ನಾಡಿನಲ್ಲಿ ಸಿಗುತ್ತವೆಯೇ? ಆರ್ಯಾವರ್ತವೆಂಬುದು ಪ್ರಥಮತಃ ದೊರೆವ ಈ ದೇಶದ ಹೆಸರು. ಅವರು ಬಂದು ನೆಲೆಸಿರುವ ನಾಡನ್ನು ಆರ್ಯಾವರ್ತವೆಂದು ಅನಂತರ ಕರೆದರಾದರೆ ಅಪಕ್ಕೆ ಪೂರ್ವದಲ್ಲಿದ್ದ ನಾಡಿನ ಹೆಸರೇನು ? ದಾಖಲೆಗಳೇನಾದರೂ ಇವೆಯೇ ?

ಯೂರೋಪಿನಿಂದಲೋ, ಮಧ್ಯ ಏಷ್ಯಾದಿಂದಲೋ ಹೊರಟ ಆರ್ಯರು ವಾಯುವ್ಯ ಮಾರ್ಗದಿಂದ ಭಾರತದೊಳಕ್ಕೆ ನುಸುಳಿಬಂದರೆಂಬುದು ಕೇವಲ ಪಾಶ್ಚಾತ್ಯ ಇತಿಹಾಸಜ್ಞರ ಸಿದ್ಧಾಂತ. ಆದರೆ ಅವರ ಸಿದ್ಧಾಂತವನ್ನು ಸಮರ್ಥಿಸುವಂತಹ

ಯಾವುದೇ ದಾಖಲೆಗಳು ವೇದಗಳಲ್ಲಾಗಲಿ ಬೇರಾವುದೇ ಪ್ರಾಚೀನ ಗ್ರಂಥಗಳಲ್ಲಾಗಲಿ ದೊರೆಯುವುದಿಲ್ಲ.

ಅವರ ಸಿದ್ಧಾಂತ ನಿಜವೆಂದು ಭಾವಿಸೋಣವೆಂದರೂ ಆರ್ಯರ ಮೂಲಸ್ಥಾನ ಯಾವುದಿದ್ದಿರಬಹುದು ಮತ್ತು ಅವರ ವಲಸೆ ಎಲ್ಲಿಂದ ಪ್ರಾರಂಭವಾಗಿರಬಹುದು ಎಂಬುದನ್ನು ಸಮನ್ವಯವಾಗುವಂತೆ ಸಾಧಿಸಿ ತೋರಿಸಲು ವಿದ್ವಾಂಸರು ಅಸಮರ್ಥ ರಾಗಿದ್ದಾರೆ. ಅದನ್ನು ನೋಡಿದರೇ ಅವರ ಸಿದ್ಧಾಂತ ಕಾಲ್ಪನಿಕವೆಂದು ತಿಳಿಯುತ್ತದೆ. ಆದ್ದರಿಂದ ಆರ್ಯರು ಭಾರತದಲ್ಲಿಯೇ ಹುಟ್ಟಿ ಬೆಳೆದವರಾಗಿರಬಾರದೇಕೆ? ಎನ್ನಿಸುತ್ತದೆ.

ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ೧೯೬೧ರಲ್ಲಿ ಪ್ರಕಟಗೊಂಡ "ಋಗ್ವೇದ ಕಾಲದಲ್ಲಿ ಭಾರತ" ಎಂಬ ಗ್ರಂಥದಲ್ಲಿ ವೇದಗಳ ಅಂತಃಪ್ರಮಾಣಗಳಿಂದ ಸಮರ್ಥಿಸಿ ತೋರಿಸಿದ್ದಾರೆ. ಅದೂ ಗಮನಿಸಬೇಕಾದ ಅಂಶ. ಭಾರತವೇ ಆರ್ಯರ ಜನ್ಮಭೂಮಿ ಯೆಂದು ಪಾಶ್ಚಾತ್ಯ ವಿದ್ವಾಂಸರು ಆ ರೀತಿ ಹೇಳಿದರೇನೋ ನಿಜ. ಅದು ಊಹೆ ಯೆಂಬುದೂ ನಿಜ. ನಮ್ಮ ಆಧ್ಯಾತ್ಮಿಕತೆ-ಸಂಸ್ಕೃತಿಯನ್ನೂ ಸಾಹಿತ್ಯ ಇತಿಹಾಸ ಗಳನ್ನೂ ಸಮಗ್ರವಾಗಿ ಮತ್ತು ಸಮಂಜಸವಾಗಿ ಅರ್ಥಮಾಡಿಕೊಳ್ಳಲಾಗದಿರುವುದು ಅವರ ಇತಿಮಿತಿಗಳಿಗನುಗುಣವಾಗಿದೆ. ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿರುವುದೂ ಅವರ ಅಭಿವ್ಯಕ್ತಿಯ ಸ್ವಾತಂತ್ರ್ಯವಷ್ಟೆ. ಅದಕ್ಕೆ ತಮ್ಮದೇ ಆದ ವೈಯುಕ್ತಿಕ ಕಾರಣಗಳೂ ಇರಬಹುದು. ಪರದಾಸ್ಯದ ಮಂಕುಕವಿದಿದ್ದ ನಾವು ಅವರ ವೇಷಭೂಷಣಗಳನ್ನೂ ನಡೆನುಡಿಗಳನ್ನೂ ಅನುಕರಣೆ ಮಾಡಿ ಅವರ ಅಭಿಪ್ರಾಯಗಳಿಗೆ ಮಾನ್ಯತೆ ಕೊಡುತ್ತಿದ್ದೇವೆಂಬುದೂ ನಿಜ. ಆದರೆ ಪ್ರಕೃತ ಪರದಾಸ್ಯ ಕಳೆದು ನಾಲ್ಕು ದಶಕಗಳು ಕಳೆದವು. ನಾವು ಸ್ವತಂತ್ರರಾದ ಮೇಲಾದರೂ ಅವರ ಅಭಿಪ್ರಾಯಗಳು ಸರಿಯೇ ತಪ್ಪೇ ಎಂದು ವಿವೇಚಿಸಿ ಗ್ರಾಹ್ಯವಾದುದನ್ನು ಮಾತ್ರ ಗ್ರಹಿಸುವ ಸ್ವಾತಂತ್ರ್ಯ ನಮಗೆ ಬೇಡವೆ? ಮುಂದಿನ ಜನಾಂಗವಾದ ನಮ್ಮ ಮಕ್ಕಳಿಗೆ ಪೂರ್ವಾಗ್ರಹವರ್ಜಿತವಾದ ತಿಳಿವಳಿಕೆಯನ್ನು ಕೊಡಬೇಕಲ್ಲವೆ?

ಹರಪ್ಪಾ ಹಾಗೂ ಮೊಹಂಜದಾರೋ ಸಂಸ್ಕೃತಿ ಪ್ರಾಚೀನತಮವಾದುದೆಂದು ಇತಿಹಾಸಕಾರರು ಒಪ್ಪಿದ್ದಾರೆ. ಅದು ದ್ರಾವಿಡರ ಸಂಸ್ಕೃತಿಯೆಂದೂ ಆ ಸಂಸ್ಕೃತಿಯ ಅವನತಿಯ ನಂತರವೇ ಆರ್ಯರ ಪ್ರವೇಶವೆಂದೂ ಪಾಶ್ಚಾತ್ಯರ ಹೇಳಿಕೆ. ಆದರೆ ಇತ್ತೀಚೆಗೆ ಅದು ಆರ್ಯಸಂಸ್ಕೃತಿಯೆಂದೇ ದೃಢಪಟ್ಟಿದೆ. ಅಲ್ಲಿನ ಅವಶೇಷಗಳಲ್ಲಿ ದೊರೆಯುವ ಮುದ್ರೆಗಳಲ್ಲಿ ಒಂದು ಸಂಖ್ಯೆ ೩೮೭ನೆಯದು. ಅದರಲ್ಲಿ ಒಂದು ವೃಕ್ಷದ ಮೇಲೆ ಎರಡು ಹಕ್ಕಿಗಳಿದ್ದು ಒಂದು ಹಕ್ಕಿ ಹಣ್ಣನ್ನು ತಿನ್ನುತ್ತಿರುವಂತೆಯೂ ಮತ್ತೊಂದು ಸುಮ್ಮನೆ ನೋಡುತ್ತಿರುವಂತೆಯೂ ಇರುವ ಚಿತ್ರವಿದೆ. ಇದು ತದ್ವತ್ತಾಗಿ ಋಗ್ವೇದದಲ್ಲಿ ಬರುವ ಒಂದು ಮಂತ್ರವನ್ನು (೧-೧೬೪-೨೦) ಹೋಲುತ್ತದೆ.

"ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ"

(ಸಂಸಾರ ರೂಪೀ ವೃಕ್ಷ. ಸಮಾನ ಸ್ವಭಾವದ ಎರಡು ಹಕ್ಕಿಗಳಿವೆ. ಒಂದು ಸಂಸಾರಸುಖವನ್ನು ಅನುಭವಿಸುತ್ತಿದೆ, ಇನ್ನೊಂದು ಆ ಪಕ್ಷಿಯನ್ನು ನೋಡುತ್ತಿದೆ– ಇದು ಅದರ ತಾತ್ಪರ್ಯ.)

ಈ ಚಿತ್ರ ಋಗ್ವೇದದಿಂದ ಪ್ರೇರಿತವಾಗಿರುವುದರಿಂದ ಇದಕ್ಕೆ ಮೊದಲೇ ಋಗ್ವೇದ ಅಸ್ತಿತ್ವದಲ್ಲಿರಬೇಕು. ಅಲ್ಲದೆ ಅದರಿಂದ ಹರಪ್ಪಾ ಸಂಸ್ಕೃತಿ ಆರ್ಯೇತರ ಸಂಸ್ಕೃತಿಯಲ್ಲವೆಂದೂ ಆರ್ಯಸಂಸ್ಕೃತಿಯೇ ಎಂದೂ ವಿದಿತವಾಗುತ್ತದೆ.

ಇದನ್ನು ನೋಡಿದರೆ ಅನ್ಯದೇಶೀಯರು ಈ ಪ್ರಪಂಚಕ್ಕೆ ಕಣ್ಣು ತೆರೆದು ಇತಿಹಾಸವನ್ನು ಸೃಷ್ಟಿಸುವ ಮೊದಲೇ ನಮ್ಮ ದೇಶದವರು ಅತ್ಯುಚ್ಚಾಶ್ರಯವಾದ ಸಂಸ್ಕೃತಿಯನ್ನು ಸೃಷ್ಟಿಸಿಯಾಗಿತ್ತು. ಅಂದಿನಿಂದ ಹಿಡಿದು ಇಂದಿಗೆ ಕೇವಲ ಮುನ್ನೂರು ವರ್ಷಗಳ ಹಿಂದಿನವರೆಗೆ ನಮ್ಮ ದೇಶ ಅತ್ಯಂತ ಸಂಪತ್ಸಮೃದ್ಧವಾದ ದೇಶವಾಗಿತ್ತು.

ಪ್ರಾಚೀನ ಕಾಲದಿಂದಲೂ ಭಾರತ ಐರೋಪ್ಯ ದೇಶಗಳೊಡನೆ ಹಡಗಿನ ವ್ಯಾಪಾರವನ್ನು ನಡೆಸುತ್ತಿತ್ತೆಂಬುದಕ್ಕೆ ದಾಖಲೆಗಳಿವೆ.

ತಾರ್ಶೀಷ್‌ನ ಹಡಗುಗಳು ಆಫಿರ್‌ನಿಂದ (ಅಂದರೆ ಮುಂಬಯಿಯ ಬಂದರಿನಲ್ಲಿರುವ ಸೊಪಾರದಿಂದ) ಸಾಲೊಮನ್ ರಾಜನಿಗೆ ಚಿನ್ನ, ಬೆಳ್ಳಿ, ದಂತ, ಕಪಿಗಳು, ನವಿಲುಗಳು, ಗಂಧದಮರ ಮತ್ತು ರತ್ನಗಳನ್ನು ತಂದುಕೊಡುತ್ತಿದ್ದನೆಂಬ ಉಲ್ಲೇಖ ಬೈಬಲಿನಲ್ಲಿ ಬರುತ್ತದೆ. (ಕ್ರಾನಿಕಲ್ಸ್ ೯:೨೧, ೧೦)

ಕ್ರಿ ಪೂ ನಾಲ್ಕನೇ ಶತಮಾನದಲ್ಲಿ ಗ್ರೀಸಿನ ರಾಯಭಾರಿಯಾದ ಮೆಗಾಸ್ತನೀಸನು ಭಾರತ ದೇಶದ ಸಂಪತ್ಸಮೃದ್ಧಿ ಹೇಗಿತ್ತೆಂಬುದನ್ನು ವಿವರಿಸುತ್ತಾನೆ.

ಒಂದನೇ ಶತಮಾನದಲ್ಲಿ ಪ್ಲಿನಿ ಎಂಬ ಇತಿಹಾಸಜ್ಞ, ರೋಮನ್ನರು ಭಾರತದಿಂದ ಪ್ರತಿವರ್ಷ ೫೦ ದಶಲಕ್ಷ ಸೆಸ್ಟರ್ಸ್‌ಗಳ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರೆಂದೂ ಸಮುದ್ರ ವ್ಯಾಪಾರದಲ್ಲಿ ಭಾರತ ಸಮರ್ಥ ಬೃಹದ್ರಾಷ್ಟ್ರವಾಗಿತ್ತೆಂದೂ ಹೇಳುತ್ತಾನೆ. (ಸೆಸ್ಟರ್ಸ್ ಎಂದರೆ ರೋಮಿನ ಬೆಳ್ಳಿಯ ನಾಣ್ಯಗಳು.) ಚೀನಾ ದೇಶದ ಬೌದ್ಧ ಯಾತ್ರಿಕರಾದ ಫಾಹಿಯಾನ್ ಹಾಗೂ ಹ್ಯೂಯನ್‌ತ್ಸಾಂಗ್ ಭಾರತದ ಸುಸಮೃದ್ಧಿಯ ಬಗ್ಗೆ ಶಿಕ್ಷಣದ ಬಗ್ಗೆ ಹಾಗೂ ಅತಿಶ್ರೇಷ್ಠ ಆಡಳಿತದ ಬಗ್ಗೆ ವಿವರವಾಗಿ ಬರೆದಿದ್ದಾರೆ. ೧೫ನೇ ಶತಮಾನದ ಕೊಲಂಬಸ್ ಭಾರತಕ್ಕೆ ಹತ್ತಿರದ ವ್ಯಾಪಾರಮಾರ್ಗ ಕಂಡುಹಿಡಿಯಲೆಂದೇ ಸಮುದ್ರ ಪ್ರಯಾಣ ಮಾಡಹೊರಟವನು.

ಶತಶತಮಾನಗಳ ಕಾಲ ರೇಷ್ಮೆ ವಸ್ತ್ರಗಳು, ಚೀಟಿ ಬಟ್ಟೆಗಳು, ಉಬ್ಬುಚಿತ್ರಗಳನ್ನು ನೇಯ್ದ ಬಟ್ಟೆಗಳು, ಕಂಬಳಿಗಳು, ಚೂರಿ, ಕತ್ತರಿ, ಯುದ್ಧಕವಚಗಳು, ಶ್ರೀಗಂಧ, ದಂತ ಹಾಗೂ ದಂತದ ಕೆತ್ತನೆಗಳು, ಸುಗಂಧದ್ರವ್ಯಗಳು, ಮಣ್ಣಿನಪಾತ್ರೆಗಳು, ಔಷಧಗಳು, ಅಭ್ಯಂಜನ ಲೇಪಗಳು, ಹವಳ, ಚಿನ್ನ, ಬೆಳ್ಳಿ, ಮುತ್ತು, ಮಾಣಿಕ್ಯ, ಮರಕತ, ವಜ್ರ, ಅಕ್ಕಿ, ಸಂಬಾರ ಪದಾರ್ಥಗಳು, ನೀಲಿ ಇತ್ಯಾದಿಗಳು ಭಾರತದಿಂದ ರಫ್ತಾಗುತ್ತಿದ್ದವು. ಅವುಗಳನ್ನು ಪಡೆದುಕೊಳ್ಳಲು ಐರೋಪ್ಯ ರಾಷ್ಟ್ರ

ಗಳು ತವಕಪಡುತ್ತಿದ್ದವಂತೆ ಭಾರತ ರಫ್ತು ಮಾಡುತ್ತಿದ್ದ ನವುರಾದ ಬಟ್ಟೆ ಆ ಜನಕ್ಕೆ ಆಶ್ಚರ್ಯಕರವೆನಿಸಿತ್ತು. ಅದನ್ನವರು "ನೆಯ್ದ ಗಾಳಿ" "ಅಗೋಚರ ಹಿಮ ವರ್ಷ" ಎಂದು ವ್ಯಾಖ್ಯಾನಿಸುತ್ತಿದ್ದರಂತೆ.

೧೩೩೬ರಿಂದ ೧೫೬೫ರವರೆಗಿನ ವಿಜಯನಗರ ಸಾಮ್ರಾಜ್ಯದ ವೈಭವ 'ನ ಭೂತೋ ನ ಭವಿಷ್ಯತಿ' ಎನಿಸಿತ್ತು. ಅದನ್ನು ಅರೇಬಿಯದ ರಾಯಭಾರಿ, ಇಟಲಿ ಹಾಗೂ ಪೋರ್ಚುಗೀಸ್ ವಣಿಜರು ಎಂದೂ ಕಣ್ಣು ಕಂಡರಿಯದುದು ಕಿವಿ ಕೇಳರಿಯದುದು ಎಂದು ವರ್ಣಿಸಿದ್ದಾರೆ.

೧೫೨೬ರಲ್ಲಿ ಬಾಬರ್ ಮುಸ್ಲಿಂ ರಾಜ್ಯವನ್ನು ಸ್ಥಾಪಿಸಿದಾಗಲೇ ಭಾರತೀಯರಿಗೆ ಪರವಾಸ್ಯ ಮೊದಲಾಯಿತು. ಇಲ್ಲಿ ನೆಲಸಿದ ಶತ್ರುಗಳು ಸಂಪತ್ತನ್ನು ದೋಚತೊಡಗಿದರು. ದೇಶದಲ್ಲಿ ಆತಂಕ, ಕಚ್ಚಾಟಗಳು ಪ್ರಾರಂಭವಾದುದರಿಂದ ಭಾರತ ದುರ್ಬಲಗೊಂಡಿತು. ೧೭ನೇ ಶತಮಾನದಲ್ಲಿ ಐರೋಪ್ಯ ರಾಷ್ಟ್ರಗಳ ಬಾಯಿಗೆ ತುತ್ತಾಯಿತು. ಬರಬರುತ್ತಾ ಇಂಗ್ಲಿಷರು ಇಡೀ ರಾಷ್ಟ್ರದ ಸೂತ್ರ ಹಿಡಿದರು. ನಮ್ಮ ಐಶ್ವರ್ಯವನ್ನೆಲ್ಲಾ ಕೊಳ್ಳೆ ಹೊಡೆದು ತಮ್ಮ ನಾಡಿಗೆ ಒಯ್ಯತೊಡಗಿದರು. ಭಾರತ ಬಡವಾಯಿತು. ಮೊನ್ನೆ ಮೊನ್ನೆಯವರೆಗೆ ಇಡೀ ಭಾರತ ದೇಶವನ್ನು ಹೀಗೆ ಅತ್ಯುಚ್ಛ್ರಾಯಸ್ಥಿತಿಗೆ ಬೆಳೆಸಿ ತಂದ ಆರ್ಯರು ಹೊರಗಿನಿಂದ ಬಂದವರೆನ್ನುವುದು ಹೇಗೆ ?

ನಿಷ್ಪಕ್ಷಪಾತರಾದ ಕೆಲವು ಪಾಶ್ಚಾತ್ಯ ವಿದ್ವಾಂಸರೇ ಈ ಬಗ್ಗೆ ಏನು ಹೇಳುತ್ತಾರೆಂಬುದನ್ನು ನೋಡಿ : "ನನಗೆ ತಿಳಿದಿರುವಂತೆ, ಆರ್ಯರು ವಿದೇಶದಿಂದ ಬಂದ ಬಗ್ಗೆ ಯಾವುದೇ ಸಂಸ್ಕೃತ ಗ್ರಂಥದಲ್ಲಾಗಲಿ ಯಾವ ಉಲ್ಲೇಖವೂ ದೊರಕುವುದಿಲ್ಲವೆಂದು ನಿಷ್ಪಕ್ಷಪಾತವಾಗಿ ಒಪ್ಪಿಕೊಳ್ಳುತ್ತೇನೆ. ಋಗ್ವೇದದಲ್ಲಿ ಬರತಕ್ಕ ದಾಸ ಮತ್ತು ಅಸುರ ಶಬ್ದಗಳು ಅನಾರ್ಯರನ್ನು ಅಥವಾ ಭಾರತದ ಮೂಲನಿವಾಸಿಗಳನ್ನು ಉದ್ದೇಶಿಸಿ ಹೇಳಿರುವ ಬಗ್ಗೆ ಯಾವ ಪ್ರಮಾಣವೂ ದೊರಕುವುದಿಲ್ಲ" ಎನ್ನುತ್ತಾನೆ, ಪಾಶ್ಚಾತ್ಯ ವಿದ್ವಾಂಸ ಮ್ಯೂರ್ (*Original Sanskrit Texts*, II) Vol

"ಮನುಸ್ಮೃತಿಯಲ್ಲಿ, ವೇದಗಳಲ್ಲಿ ಮತ್ತು ಮನುಸ್ಮೃತಿಗಳಂತಹ ಪ್ರಾಚೀನವಾದ ಇತರ ಅನ್ಯ ಗ್ರಂಥಗಳಲ್ಲೆಲ್ಲಿಯೂ ಆರ್ಯರು ಭಾರತದ ಹೊರಗಿನ ಯಾವ ದೇಶದಲ್ಲಾಗಲಿ ವಾಸಿಸುತ್ತಿದ್ದ ಬಗ್ಗೆ ಪ್ರತ್ಯಕ್ಷ ಪುರಾವೆ ಯಾವುದೂ ಇಲ್ಲ" ಎನ್ನುತ್ತಾನೆ—ವಿಶ್ವವಿಖ್ಯಾತ ಇತಿಹಾಸತಜ್ಞ ಎಲ್‌ಫಿನ್‌ಸ್ಟನ್ (*History of India*, Vol I).

ಆಕ್ಸ್‌ಫರ್ಡ್‌ನಲ್ಲಿ ಪ್ರಸಿದ್ಧ ಪ್ರಾಚ್ಯಶೋಧಕರಾದ ಟಿ ಬರೋ ಮತ್ತು ಎ ಎಲ್ ಭಾಷಮ್‌ರ ಸಂಪಾದಕತ್ವದಲ್ಲಿ ೧೯೭೫ರಲ್ಲಿ ಪ್ರಕಟವಾದ "ದ ಅರ್ಲೀ ಆರ್ಯನ್ಸ್" ಎಂಬ ಲೇಖನದಲ್ಲಿ ಆರ್ಯರು ಭಾರತದ ಮೇಲೆ ಆಕ್ರಮಣ ನಡೆಸಿದ ಬಗ್ಗೆ ಯಾವುದೇ ದಾಖಲೆಯಿಲ್ಲವೆಂದೂ ಪ್ರಾಚ್ಯಸಂಶೋಧನೆಯಿಂದ ಏನೂ ಪತ್ತೆಯಾಗಿಲ್ಲವೆಂದೂ ಅವರು ಹೇಳಿದ್ದಾರೆ.

ಪಾಶ್ಚಾತ್ಯ ಇತಿಹಾಸಕಾರರು ನಿರಾಧಾರವಾದ ಊಹೆಯನ್ನು ಮಾಡಲು ಕಾರಣವೇನು ? ಅದು ಅವರ ಅಜ್ಞತೆ ಎಂದು ಸಮಾಧಾನ ಹೇಳುವುದಕ್ಕೆ ಸಾಧ್ಯವಿಲ್ಲ.

ಅದಕ್ಕೆ ಆವರದೇ ಆದ ಬೇರೊಂದು ಉದ್ದೇಶ ಇರುವಂತೆ ಕಾಣುತ್ತದೆ. ಅದನ್ನು ಕುರಿತು ಹೀಗೆ ವಿಶ್ಲೇಷಿಸಬಹುದು :

ಬೈಬಲಿನ ಮುಂದೆ ವೇದಗಳು ಶ್ರೇಷ್ಠವೆಂದು ಒಪ್ಪಲು ಅವರ ಮನಸ್ಸು ಸಿದ್ಧವಿರಲಿಲ್ಲ. ಬೈಬಲಿಗಿಂತ ಅನ್ಯಧರ್ಮೀಯ ಗ್ರಂಥವೊಂದು ಪ್ರಾಚೀನವೆಂದರೂ ಅವರಿಗೆ ಸಹನೆಯಾಗದು. ತಮ್ಮ ಧರ್ಮವೇ ಶ್ರೇಷ್ಠವೆಂಬ ನಂಬಿಕೆ, ನಿಷ್ಠೆ ಅವರಿಗೆ. ತಮ್ಮ ಧರ್ಮವನ್ನವಲಂಬಿಸಿ ಅನ್ಯರೂ ಭಗವಂತನ ಒಲವನ್ನು ಸಂಪಾದಿಸಿ ಮೋಕ್ಷ ಪಡೆಯಲಿ ಎಂಬ ಶ್ರದ್ಧೆಯೂ ಇತ್ತು, ಅವರಿಗೆ. ಆದ್ದರಿಂದ ಅವರಿಗೆ ಅನ್ಯಧರ್ಮವನ್ನು ಮೆಟ್ಟಿ ಕ್ರೈಸ್ತಧರ್ಮ ದಿಗಂತವ್ಯಾಪಿಯಾಗುವಂತೆ ಮಾಡಬೇಕೆಂಬ ಉತ್ಸಾಹ. ಇದು ಒಂದು ಕಡೆ.

ಮತ್ತೊಂದು ಕಡೆ ತಮ್ಮ ವೈದಿಕ ಧರ್ಮದ ಬಗ್ಗೆ ಹೆಮ್ಮೆಪಡುವ ಭಾರತೀಯರ ಹಮ್ಮನ್ನು ಅಡಗಿಸಿ ಅವರನ್ನು ತಮ್ಮ ವಾಚೋವಿಧೇಯರನ್ನಾಗಿ ಮಾಡಿಕೊಳ್ಳಬೇಕೆಂಬ ಛಲ. ಹಾಗೆ ಅವರನ್ನು ತಮ್ಮ ಅಧೀನರನ್ನಾಗಿ ಮಾಡಿಕೊಳ್ಳಬೇಕಾದರೆ ಅವರ ಹೆಮ್ಮೆಯ ಸಂಸ್ಕೃತಿಯನ್ನು ನಾಶಮಾಡಬೇಕು. ಅವರ ಸಂಸ್ಕೃತಿಯ ಬುನಾದಿಯೇ ವೇದಗಳು. ವೇದಗಳನ್ನು ನಾಶಪಡಿಸಿದಲ್ಲದೆ ಅವರ ಸಂಸ್ಕೃತಿ ಕುಸಿಯದು ಆದ್ದರಿಂದ ಏನಾದರೂ ಮಾಡಿ ಅವರ ಮನಸ್ಸನ್ನು ತಮ್ಮತ್ತ ಆಕರ್ಷಿಸಿ, ಪರಿವರ್ತನೆಗೊಳಿಸಿ, ತಮ್ಮ ಸಂಸ್ಕೃತಿಯ ಬಗ್ಗೆ ತಾವೇ ಅಸಹ್ಯಪಟ್ಟುಕೊಳ್ಳುವಂತೆ ಮಾಡಬೇಕು. ಈ ಉದ್ದೇಶವನ್ನು ಅವರು ಬಹುಮಟ್ಟಿಗೆ ಸಾಧಿಸಿಯೂ ಸಾಧಿಸಿದರು.

ಈ ವಿಷಯದಲ್ಲಿ ಅವರು ಮುಚ್ಚುಮರೆಯೇನನ್ನೂ ಮಾಡಲಿಲ್ಲ. ರಾಜಾರೋಷವಾಗಿ ಅಲ್ಲಲ್ಲಿ ಬಾಯಿಬಿಟ್ಟು ಹೇಳಿಕೊಂಡಿದ್ದಾರೆ. ಕೈಯಾರೆ ಪ್ರಯತ್ನ ನಡೆಸಿದ್ದಾರೆ.

ಭಾರತೀಯರನ್ನೆಲ್ಲಾ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲು ಅನುವಾಗುವಂತೆ ವೈದಿಕ ಸಾಹಿತ್ಯವನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಬೇಕೆಂಬ ಉದ್ದೇಶದಿಂದಲೇ ಕರ್ನಲ್ ಬೋಡನ್ ಎಂಬಾತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಒಂದು ಸಂಸ್ಕೃತ ಪ್ರಾಧ್ಯಾಪಕ ಪೀಠವನ್ನು ಸ್ಥಾಪಿಸಲು ತನ್ನ ಐಶ್ವರ್ಯವನ್ನು ಉಯಿಲಿನಲ್ಲಿ ೧೮೧೧ರಲ್ಲಿ ಬರೆದುಕೊಟ್ಟ. ಆ ಪೀಠವನ್ನು ಮೊದಲು ಅಲಂಕರಿಸಿದವನು ಪ್ರಾಧ್ಯಾಪಕ ಹೊರೇಸ್ ಹೇಮನ್ ವಿಲ್ಸನ್ (Horace Hayman Wilson). ಆತನ ಉತ್ತರಾಧಿಕಾರಿ ಎಂ. ಮೋನಿಯರ್ ವಿಲಿಯಮ್ಸ್ (M. Monier Williams).

ವಿಲ್ಸನ್ *Religious and Philosophical System of the Hindus* (ಹಿಂದುಗಳ ಧಾರ್ಮಿಕ ಮತ್ತು ದಾರ್ಶನಿಕ ಪದ್ಧತಿ) ಎಂಬ ಗ್ರಂಥವನ್ನು ಪ್ರಕಟಿಸಿದ. ಅದೊಂದು ಉಪನ್ಯಾಸಗಳ ಸಂಪುಟ. ಅದನ್ನು ಪ್ರಕಟಿಸಿದ ಉದ್ದೇಶ ಹಿಂದೂ ಧರ್ಮವನ್ನು ತೆಗಳಿ ಬರೆಯುವಂತಹ ಲೇಖನಗಳನ್ನು ಪ್ರೋತ್ಸಾಹಿಸುವುದಕ್ಕಾಗಿ. ಹಾಗೆ ತೆಗಳಿ ಬರೆದುದರಲ್ಲಿ ಅತ್ಯುತ್ತಮವಾದ ಪ್ರಬಂಧಕ್ಕೆ ೨೦೦ ಪೌಂಡುಗಳ ಬಹುಮಾನ

ವಿತ್ತು. ಹೈಲೇಬರಿಯ ಜಾನ್ ಮ್ಯೂರ್ ಎಂಬ ಸಂಸ್ಕೃತ ವಿದ್ವಾಂಸ ಆ ಬಹುಮಾನ ವನ್ನು ಸ್ಥಾಪಿಸಿದ್ದ.

["These lectures were written to help candidates for a prize of £ 200 Given by John Muir, a well known old Haileybury man and great Sanskrit scholar,-for the best reputation of the Hindu Religious System [*Eminent Orientalists*, Madras, P. 72])

ಬೋಡೆನ್ ಪೀಠದ ಎರಡನೆಯ ಪ್ರಾಧ್ಯಾಪಕ ಮೋನಿಯರ್ ವಿಲಿಯಮ್ಸ್ ತಾನು ಸಂಪಾದಿಸಿದ ಸಂಸ್ಕೃತದ ಬೃಹದ್ ನಿಘಂಟಿನ ಪೀಠಿಕೆಯಲ್ಲಿ ಪ್ರಾಧ್ಯಾಪಕ ಪೀಠ ಸ್ಥಾಪಕರ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ.

"ಈ ವಿಷಯದತ್ತ ನಾನು ನಿಮ್ಮ ಗಮನವನ್ನು ಸೆಳೆಯಬೇಕು. ಬೋಡೆನ್ ಪೀಠವನ್ನು ಅಲಂಕರಿಸಿದವರಲ್ಲಿ ನಾನು ಎರಡನೆಯವನಷ್ಟೆ. ಪೀಠಸಂಸ್ಥಾಪಕರಾದ ಕರ್ನಲ್ ಬೋಡೆನ್ ೧೮೧೧ರ ಆಗಸ್ಟ್ ೧೫ರಂದು ಬರೆದ ತಮ್ಮ ಉಯಿಲಿನಲ್ಲಿ ಅತ್ಯಂತ ಸ್ಪಷ್ಟವಾಗಿಯೇ ಹೇಳಿದ್ದಾರೆ. ಅವರ ಈ ಧಾರಾಳ ಕೊಡುಗೆಯ ವಿಶೇಷ ಧ್ಯೇಯವೆಂದರೆ ತಮ್ಮ ದೇಶದ ಜನ ಭಾರತನಿವಾಸಿಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುವ ಕಾರ್ಯವನ್ನು ಮುಂದುವರಿಸಲನುವಾಗುವಂತೆ ಧರ್ಮಗ್ರಂಥ ಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸುವುದು.'

[I must draw attention to the fact that I am only the second occupant of the Boden chair, and its Founder, Colonel Boden, stated most explicitly in his (will dtd August 15, 1811 A. D) that the special object of his munificent request was to promote the translation of scriptures into Sanskrit so as to enable his country men to proceed in the conversion of the natives of India to the Christian Religion.] [*Sanskrit English Dictionary* by Sir Williams, preface, p. ix].

ಫ್ರಾನ್ಸಿನಲ್ಲಿದ್ದ ಅದೇ ಬಗೆಯ ಮನೋಭಾವದ ಸಂಸ್ಕೃತ ಅಧ್ಯಾಪಕ ಯೂಜಿನ್ ಬರ್ನೋಫ್ (Eugene Burnouf)ನ ಶಿಷ್ಯರೇ ರುಡಾಲ್ಫ್ ರಾಥ್ ಹಾಗೂ ಮ್ಯಾಕ್ಸ್ ಮ್ಯೂಲರ್ (Max Muller). ತಮ್ಮ ಉದ್ದೇಶಕ್ಕೆ ಪೂರಕವಾಗುವಂತೆ ಅಪ ವ್ಯಾಖ್ಯಾನಿಸಿ ಜರ್ಮನ್ ಭಾಷೆಯಲ್ಲಿ "ವೈದಿಕ ಸಾಹಿತ್ಯ ಮತ್ತು ವೇದದ ಇತಿಹಾಸ" ಎಂಬ ಗ್ರಂಥವನ್ನು ಬರೆದವನು ರಾಥ್; ವೇದಗಳನ್ನು ಭಾಷಾಂತರಿಸಿದವನು ಮ್ಯಾಕ್ಸ್ ಮ್ಯೂಲರ್.

ಮ್ಯಾಕ್ಸ್ ಮ್ಯೂಲರ್ ತನ್ನ ಪತ್ನಿಗೆ ಬರೆದ ಒಂದು ಪತ್ರದಲ್ಲಿ "....ನಾನು ಮಾಡಿದ ವೇದ ಭಾಷಾಂತರದ ಈ ಸಂಸ್ಕರಣವಿದೆಯಲ್ಲ, ಅದು ಭಾರತದ ಭವಿಷ್ಯದ ಮೇಲೆ ಬಲು ಘಾಸಿಯುಂಟುಮಾಡುತ್ತದೆ.... ಅದೇ (ವೇದ) ಅವರ ಧರ್ಮದ ಬೇರು, ಆ ಬೇರು ಹೇಗಿದೆಯೆಂದು ತೋರಿಸಿಕೊಡುವುದೇ ಕಳೆದ ಮೂರು ಸಾವಿರವರ್ಷ

ಗಳಿಂದಲೂ ಆ ಬೇರಿನ ಬಲದಿಂದ ಬೆಳಕು ಬಂದಿರುವುದನ್ನೆಲ್ಲಾ ಮೂಲೋತ್ಪಾಟನ ಮಾಡಲಿರುವ ಏಕೈಕ ಮಾರ್ಗವೆಂದು ನನಗೆ ಖಂಡಿತ ನಂಬಿಕೆಯಿದೆ" ಎನ್ನುತ್ತಾನೆ.

["...This edition of mine and the translation of the Veda will hearafter tell to a great extent on the fate of India...It is the root of their religion and to show them what the root is, I feel sure, is the only way of uprooting all that has sprung from it during the last three thousand years".—*Life and letters of Frederich Max Muller*, Vol. I, Ch. VX, p. 346.]

ತನ್ನ ಮಗನಿಗೆ ಬರೆದ ಒಂದು ಪತ್ರದಲ್ಲಿ "ಪ್ರಪಂಚದಲ್ಲಿರುವ ಎಲ್ಲಾ ಪವಿತ್ರ ಗ್ರಂಥಗಳಿಗಿಂತ ಶ್ರೇಷ್ಠವಾದದ್ದು ಯಾವುದು ತಿಳಿದಿದೆಯಾ ?.... ನಾನು ಹೇಳುತ್ತೇನೆ, 'ಹೊಸ ಒಂಡಬಡಿಕೆ'. ಅದರ ನಂತರ ನನ್ನ ಅಭಿಪ್ರಾಯದಲ್ಲಿ ಕುರಾನ್. ಅದೂ ಸಹ ನೀತಿಬೋಧೆಯಲ್ಲಿ ಹೊಸ ಒಡಂಬಡಿಕೆಯ ಪುನಃಸಂಸ್ಕರಣ ಎನ್ನುವುದಕ್ಕಿಂತ ಹೆಚ್ಚಿನ ದೇನಲ್ಲ. ನನ್ನ ಅಭಿಪ್ರಾಯದಂತೆ ಅನಂತರ ಬರುವುದು 'ಹಳೆಯ ಒಡಂಬಡಿಕೆ', ಅನಂತರ ದಕ್ಷಿಣದ ಬೌದ್ಧರ ತ್ರಿಪಿಟಕ, ಟಾಓಟೇ ಕಿಂಗ್ ಆಫ್ ಲಓಟ್ಸೆ, ಕಿಂಗ್ ಆಫ್ ಕನ್‌ಫ್ಯೂಶಿಯಸ್, ಅನಂತರ ವೇದ ಹಾಗೂ ಅವೆಸ್ತ."

["Would you say any one sacred book that is superior to all others in the world ?...I say, the New Testament. Then would follow according to my opinion the Old Testament, the Southern Buddhist Tripitika, the Taote King of Laotze, the King of Confucius, the Veda and the Avesta"-Vol II, Ch X XII, p. 39]

ತನ್ನ ಪ್ರಯತ್ನದಿಂದ ಭಾರತೀಯರ ಧರ್ಮವನ್ನೇ ಮೂಲೋತ್ಪಾಟನೆ ಮಾಡಿದೆನೆಂದುಕೊಂಡ ಮ್ಯಾಕ್ಸ್ ಮ್ಯೂಲರ್, ಅದರ ಜಾಗದಲ್ಲಿ ಕ್ರೈಸ್ತ ಧರ್ಮ ನಿರೀಕ್ಷಿತ ಮಟ್ಟದಲ್ಲಿ ಹರಡಲಿಲ್ಲವಲ್ಲ ಎಂದು ಪೇಚಾಡಿಕೊಂಡು ೧೮೬೮ನೇ ಡಿಸೆಂಬರ್ ೧೬ರಂದು ಇಂಗ್ಲೆಂಡಿನಲ್ಲಿ ಆಗಿನ ಭಾರತದ ಸಚಿವರಾಗಿದ್ದ ಡ್ಯೂಕ್ ಆಫ್ ಆರ್ಗಿಲ್‌ಗೆ "ಭಾರತದ ಪುರಾತನ ಧರ್ಮ ನಾಶವಾಯಿತು. ಅದರ ಸ್ಥಾನದಲ್ಲಿ ಕ್ರೈಸ್ತಧರ್ಮ ಬಂದು ಸೇರಿಕೊಳ್ಳದಿದ್ದರೆ ಅದು ಯಾರ ತಪ್ಪು ?'* ಎಂದು.

ಭಾರತದಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರ ನಿರಂತರವಾಗಿ ನಡೆಯುತ್ತಿದ್ದ ಕಾಲ. ಆ ಕಾರ್ಯಕ್ಕೆ ಪ್ರೋತ್ಸಾಹಿಸುತ್ತಾ ತನ್ನ ಭಾರತೀಯ ಮಿತ್ರ ಎನ್ ಕೆ ಮಜುಮ್‌ದಾರ್‌ಗೆ ಬರೆದ ಪತ್ರವಿದು : "ನನ್ನ ದೃಷ್ಟಿಯಲ್ಲಿ, ಭಾರತವೆಲ್ಲಾ ಅಲ್ಲ ದಿದ್ದರೂ ಅದರ ಮುಖ್ಯ ಭಾಗಗಳೆಲ್ಲಾ ಈಗಾಗಲೇ ಕ್ರೈಸ್ತ ಧರ್ಮಕ್ಕೆ ಮತಾಂತರ ಪೂರ್ಣಗೊಂಡಿದೆ. ಕ್ರೈಸ್ತನ ಅನುಯಾಯಿಯಾಗಲು ಜನರನ್ನು ಒತ್ತಾಯಮಾಡ ಬೇಕಾದ ಪ್ರಮೇಯವಿಲ್ಲ.... ನಿನಗಿಂತ ಮುಂಚೆ ಬಂದವರು ಆಗಲೇ ಸೇತುವೆಯನ್ನು

*["The ancient religion of India is doomed and if Christianity does not step in, whose fault will it be ?"-Vol I, Ch. XVI, p 378]

ಕಟ್ಟಿದ್ದಾರೆ. ಧೈರ್ಯವಾಗಿ ಅದರ ಮೇಲೆ ಹೆಜ್ಜೆಯಿಟ್ಟುಕೊಂಡು ಹೋಗು,ಅದೇನೂ ಮುರಿಯುವುದಿಲ್ಲ. ಅದರ ಆಚೆಯ ದಡದಲ್ಲಿ ಹಲವು ಮಿತ್ರರು ನಿನ್ನನ್ನು ಎದುರುಗೊಳ್ಳಲಿರುತ್ತಾರೆ. ಅವರ ಪೈಕಿ ಇರುವ ನಿನ್ನ ಹಳೆಯ ಮಿತ್ರನೂ ಸಹಕಾರ್ಮಿಕನೂ ಆದ ಎಫ್ ಮ್ಯಾಕ್ಸ್ ಮ್ಯೂಲರ್‌ನಿಗಿಂತ ಹೆಚ್ಚು ಆನಂದ ಯಾರಿಗಾದೀತು ?"

["From my point of view India, at least the best part of it, is already converted to Christianity. You want no persuation to become a follower of Christ—The bridge has been built for you by those who came before you, and you will find many friends to wel come you on the other shore and among them none more delighted than your old friend and fellow labourer F Max Muller."-Vol. II, Pp. 415-416]

"ಆಧುನಿಕ ಭಾರತ ಹಾಗೂ ಭಾರತೀಯರು" ಎಂಬ ತನ್ನ ಗ್ರಂಥದಲ್ಲಿ ಮೋನಿಯರ್ ವಿಲಿಯಮ್ಸ್ ಹೀಗೆ ಹೇಳಿದ್ದಾನೆ: "ಆದ್ದರಿಂದ ಬ್ರಾಹ್ಮಣ ಧರ್ಮ ನಾಶವಾಗಲೇಬೇಕು ವಾಸ್ತವವಾಗಿ ಅದರ ತತ್ತ್ವಗಳೊಡನೆ ಅತ್ಯಂತ ಸಾಮಾನ್ಯವಾದ ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದ ತಪ್ಪು ಕಲ್ಪನೆಗಳೆಲ್ಲ ಹೇಗೆ ಬೆರೆತುಹೋಗಿದೆಯೆಂದರೆ, ಕ್ರೈಸ್ತ ಧರ್ಮದ ಸಹಾಯದೊಡನೆ ಅತಿ ಸಾಧಾರಣ ಶಿಕ್ಷಣ-ಅತ್ಯಂತ ಸರಳವಾದ ಭೂಗೋಳದ ಪಾಠ—ಕಲಿಸಿದರೆ ಸಾಕು ಕೊನೆಗೆ ಅನಿವಾರ್ಯವಾಗಿ ಅದರ ಅಸ್ತಿಭಾರವೇ ಕಳಚಿಹೋಗುತ್ತದೆ."

"ಬ್ರಾಹ್ಮಣ ಧರ್ಮವೆಂಬ ಸುಭದ್ರಕೋಟೆಯ ಗೋಡೆಗಳನ್ನು ನಮ್ಮ ಶಿಲುಬೆ ಧರಿಸಿದ ಯೋಧರು ಸುತ್ತುಗಟ್ಟಿ, ಅಡಿಪಾಯದ ತಳವನ್ನು ಕೊರೆದುಹಾಕಿ ದಾಳಿಯಿಟ್ಟರೆಂದರೆ ಕ್ರೈಸ್ತ ಧರ್ಮದ ವಿಜಯ ಅತ್ಯಂತ ಗಮನಾರ್ಹವೂ ಸಂಪೂರ್ಣವೂ ಆಗಲೇಬೇಕು.

["Brahmanism, therefore, must die out. In point of fact, false ideas on the most ordinary scientific subjects are so mixed up with its doctrines that the commonest education-the simplest lessons in geography-with the aid of Christianity must inevitably in the end sap its foundations".

"When the walls of the mighty fortress of Brahmanism are encircled, undermined, and finally stormed by the soldiers of the cross, the victory of Christianity must be signal and complete."

–*Modern India and the Indians* by M. Monior Williams, 3rd edition 1879, Pp. 261 & 262.]

ಋಗ್ವೇದದಲ್ಲಿ ಬರುವ ಆರ್ಯ ಮತ್ತು ದಸ್ಯು ಶಬ್ದಗಳನ್ನು ಕುರಿತು ಹೇಳುತ್ತಾ ಆರ್ಯರು ಅತಿಕ್ರಮಣಕಾರರೆಂದೂ ದಸ್ಯುಗಳು ಭಾರತದ ಮೂಲ ನಿವಾಸಿಗಳೆಂದೂ ಅವರಿಬ್ಬರಿಗೂ ಸದಾ ಯುದ್ಧ ನಡೆಯುತ್ತಿತ್ತೆಂದೂ ಆರ್ಯರು ತೀಕ್ಷ್ಣ ಬುದ್ಧಿಯುವರಾಗಿದ್ದು ಉತ್ತಮ ಶಸ್ತ್ರಾಸ್ತ್ರಗಳನ್ನು ಹೊಂದಿದವರಾಗಿದ್ದುದರಿಂದ ಅವರೇ ಜಯ

ಗಳಿಸಿ ದಸ್ಯುಗಳನ್ನು ದಾಸರನ್ನಾಗಿ ಮಾಡಿಕೊಳ್ಳುತ್ತಿದ್ದರೆಂದೂ ಪಾಶ್ಚಾತ್ಯರ ವ್ಯಾಖ್ಯಾನ. ಆದರೆ ಆರ್ಯ, ದಸ್ಯು ಇತ್ಯಾದಿ ಶಬ್ದಗಳು ಜಾತಿಪಂಗಡಗಳನ್ನು ಸೂಚಿಸುವ ಶಬ್ದವಾಗಿರದೆ ಗುಣ ಸ್ವಭಾವಗಳನ್ನು ಸೂಚಿಸುವ ಶಬ್ದಗಳು. ಅಸತ್ಯ, ಹಿಂಸೆ, ದುಷ್ಕೃತ್ಯಾದಿ ಕರ್ಮಗಳನ್ನೂ ಅಮಾನುಷ,ಅವ್ಯವಹಾರಾದಿ ಕರ್ಮಗಳನ್ನು ಆಚರಿಸುವವರನ್ನೂ ಮತ್ತು ದಿವ್ಯಗುಣಯುಕ್ತರಾದ ವಿದ್ವಾಂಸರನ್ನು ಅಲ್ಲಗಳೆಯುವವರನ್ನೂ ದಸ್ಯುಗಳೆನ್ನುವರು (ಋ. ೮-೭೦-೧೧) ಸದ್ಗುಣ ಸಂಪನ್ನರು ಆರ್ಯರು. "ಋಗ್ವೇದದಲ್ಲಿ ಬಂದಿರುವ ದಸ್ಯು ಹಾಗೂ ಅಸುರರ ಬಗ್ಗೆ ಅಭ್ಯಾಸ ಮಾಡಿದ್ದೇನೆ. ಅವರಲ್ಲಿ ಯಾರನ್ನಾದರೂ ಆರ್ಯೇತರರೆಂದು ಅಥವಾ ಅಲ್ಲಿನ ಮೂಲ ನಿವಾಸಿಗಳೆಂದು ಪರಿಗಣಿಸಲಾಗಿದೆಯೇ ಎಂದು ಕಂಡುಹಿಡಿಯಲೆತ್ನಿಸಿದ್ದೇನೆ. ಆದರೆ ಅದರಲ್ಲಿ ಅಂತಹ ಲಕ್ಷಣಗಳಿರುವುದು ಕಂಡುಬಂದಿಲ್ಲ" ಎಂದು ಮ್ಯೂರ್ ಎಂಬ ಪಾಶ್ಚಾತ್ಯ ವಿದ್ವಾಂಸನೇ ಹೇಳಿದ್ದಾನೆ. (*Original Sanskrit Texts*–Vol II, p. 387)

"Give me the education in my hand I will rule the land"- –ಶಿಕ್ಷಣವನ್ನು ನನ್ನ ಕೈಗೆ ಕೊಡು, ನಾನು ದೇಶವನ್ನು ಆಳುತ್ತೇನೆ ಎಂದಿದ್ದ ಒಬ್ಬ ರಾಜಕಾರಣಿ. ಆ ಮಾತನ್ನು ಸತ್ಯಪಡಿಸಲೋ ಎಂಬಂತೆ ಹುಟ್ಟಿಕೊಂಡವನು ಲಾರ್ಡ್ ಮೆಕಾಲೇ. ಆತ ಯೋಜಿಸಿದ ಶಿಕ್ಷಣದ ದೆಸೆಯಿಂದಲೇ ಇಡೀ ಭಾರತ ಆಂಗ್ಲರಿಗೆ ದಾಸಾನುದಾಸವಾದದ್ದು. ಆ ದಾಸ್ಯಭಾವ, ಆಂಗ್ಲರೇ ನಮ್ಮ ದೇಶವನ್ನು ಬಿಟ್ಟು ಹೋಗಿ ಅರ್ಧಶತಮಾನವಾಗುತ್ತಾ ಬಂದರೂ ಇನ್ನೂ ನಮ್ಮಿಂದ ದೂರವಾಗಿಲ್ಲ! ಆ ಶಿಕ್ಷಣ ಪ್ರಣಾಲಿಕೆಗೇ ಇನ್ನೂ ಜೋತುಬಿದ್ದಿದ್ದೇವೆ!

ಭಾರತೀಯರಿಗೆ ತಮ್ಮ ಪ್ರಾಚೀನ ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಸಭ್ಯತೆಗಳ ಬಗ್ಗೆ ಅಶ್ರದ್ಧೆ, ತಿರಸ್ಕಾರ, ಅವಹೇಳನ ಉಂಟುಮಾಡಬೇಕೆಂಬುದೇ ಅವನು ಯೋಜಿಸಿದ ಆಂಗ್ಲ ಶಿಕ್ಷಣದ ಉದ್ದೇಶವಾಗಿತ್ತು. ಆ ಕೆಲಸಕ್ಕೆ ಮ್ಯಾಕ್ಸ್ ಮ್ಯೂಲರನ್ನು ನಿಯೋಜಿಸಿದವನೂ ಆತನೇ. ಆತನ ಯೋಜನಾಬದ್ಧ ಪ್ರಯತ್ನದ ಪರಿಣಾಮವಾಗಿ ಭಾರತೀಯ ವಿದ್ವಾಂಸರೂ ಸಹ ಅವರ ಪ್ರಭಾವಕ್ಕೊಳಗಾಗಿ ಅವರ ವಿಚಾರಧಾರೆಯ ಪ್ರಚಾರಕ್ಕೆ ಅನುವು ಮಾಡಿಕೊಟ್ಟರು. ಲೋಕಮಾನ್ಯ ಬಾಲ ಗಂಗಾಧರ ತಿಲಕ್‌ರಂಥವರೂ ಅವರ ಪ್ರಚಾರಕ್ಕೆ ಬಲಿಯಾದರು. ಆರ್ಯರು ಉತ್ತರ ಧ್ರುವದಿಂದ ಇರಾನಿಗೂ ಅಲ್ಲಿಂದ ಭಾರತಕ್ಕೂ ಬಂದರೆಂದು ತಾವು ಬರೆದಿದ್ದ ಅಭಿಪ್ರಾಯಕ್ಕೆ ಕಾರಣ ತಾವು ಮೂಲವೇದವನ್ನು ಓದಿಲ್ಲದಿದ್ದುದು ಎಂದು ಅನಂತರ ತಿಲಕರು ಒಪ್ಪಿಕೊಂಡಿದ್ದಾರೆ. "ನಾನು ಮೂಲ ವೇದವನ್ನು ಓದಿಲ್ಲ. ಪಾಶ್ಚಾತ್ಯ ವಿದ್ವಾಂಸರ ಅನುವಾದವನ್ನು ಮಾತ್ರ ಓದಿದ್ದೇನೆ" ಎಂದು ಅವರು ಹೇಳಿದುದನ್ನು 'ಮಾನವೇರ್ ಆದಿ ಜನ್ಮಭೂಮಿ' ಎಂಬ ಕೃತಿಯ ಪುಟ ೧೨೮ರಲ್ಲಿ ಪಶ್ಚಿಮ ಬಂಗಾಳದ ವಿದ್ವಾನ್ ಉಮೇಶ ಚಂದ್ರ ವಿದ್ಯಾರತ್ನ ಸೂಚಿಸಿದ್ದಾರೆ.

ವಾಸ್ತವಿಕ ಸಂಗತಿಯೆಂದರೆ ಭಾರತದಿಂದಲೇ ಆರ್ಯರು ಕೆಲವರು ಇರಾನಿಗೆ ಹೋಗಿ ನೆಲೆಸಿದ್ದುಂಟು. "ಆರ್ಯರು ಕೆಲವು ವರ್ಷಗಳ ಹಿಂದೆ ಹಿಮಾಲಯದಿಂದ ಬಂದು, ಇರಾನಿನ ನೀರು ಮತ್ತು ಹವಾಮಾನ ಹಿತಕರವಾಗಿದ್ದುದರಿಂದ ಅಲ್ಲಿ ನೆಲೆಸಿ

ದರು" ಎಂದು ತೆಹ್ರಾನ್ ಹಿಜ್ರಿ ೧೩೧೯ರ 'ಜುಗ್ರಾಫಿಯಾ ಪಂಜ್ ಕಿತಾಬನಾವ್ ತದ್ ರೀಸ್ ದರ್ ಸಾಲ್ ಪಂಜುವ್'ನಲ್ಲಿ ಹೇಳಲಾಗಿದೆ.

ಇವನ್ನೆಲ್ಲ ನೋಡಿದರೆ, ಆರ್ಯಸಂಸ್ಕೃತಿಯು ಭಾರತದಲ್ಲಿಯೇ ಹುಟ್ಟಿ ಆಳವಾಗಿ ಬೇರುಬಿಟ್ಟು, ಸಹಸ್ರಾರು ವರ್ಷಗಳ ಅವಧಿಯಲ್ಲಿ ಮಹಾನ್ ವೃಕ್ಷವಾಗಿ ಬೆಳೆದು ಎಲ್ಲ ದಿಕ್ಕುಗಳಿಗೂ ತನ್ನ ರೆಂಬೆಗಳನ್ನು ಚಾಚಿಕೊಂಡಿದೆ ರೆಂಬೆಯ ತುದಿಯ ಚಿಗುರುಗಳನ್ನು ಹಿಡಿದ ಕೆಲವು ಅಜ್ಞರು "ಹಾಂ....ಇಲ್ಲಿಂದಲೇ ಈ ವೃಕ್ಷ ಮೊದಲಾಗಿರುವುದು" ಎಂದು ಉದ್ಗರಿಸಿದ್ದಾರೆ, ಅಷ್ಟೆ.

ಏಸುಕ್ರಿಸ್ತನ ಕಡೆಗೊಂದು ಇಣುಕು ನೋಟ

ಜಿ. ಎಸ್. ಶಿವರುದ್ರಪ್ಪ

ಡಿಸೆಂಬರ್ ತಿಂಗಳ ರಾತ್ರಿ ಹೊರಗೆ ಥಣ್ಣಗೆ ಕೊರೆವ ಛಳಿ. ದನದ ಕೊಟ್ಟಿಗೆಯ ಮೂಲೆಯೊಂದರಲ್ಲಿ ಸಣ್ಣಗೆ ದೀಪ ಉರಿಯುತ್ತಿತ್ತು. ಹುಲ್ಲು ಮೇಯುವುದನ್ನೂ ಮರೆತು ಹಸುಗಳು ಬಿಡುಗಣ್ಣು ತೆರೆದು ದಿಟ್ಟಿಸುತ್ತಿದ್ದವು; ಪಾರಿವಾಳಗಳು ಹುಲ್ಲುಮಾಡದ ಸಂದಿಯಲ್ಲಿ ಗುಟುಕರಿಸುತ್ತಿದ್ದವು. ಇಡೀ ಬೆತ್ಲೆಹೇಮ್ ನಗರ ಕತ್ತಲಿನ ಹೊದಿಕೆಯಲ್ಲಿ ನೈಮರೆತು ಮಲಗಿತ್ತು.

ಆಗ,

ಲಕ್ಷ ನಕ್ಷತ್ರಗಳ ವಜ್ರದ ಕಣ್ ತೆರೆದ ಗಗನದ ಕೆಳಗೆ, ಮಾತೆ ಮೇರಿಯ ಪವಿತ್ರಗರ್ಭದಿಂದ ಜನಿಸಿದನು ದೇವಪುತ್ರ ಏಸು. ಯಹೂದ್ಯ ಜನಾಂಗ ಶತ ಶತಮಾನಗಳ ಕಾಲದಿಂದ ದಾಸ್ಯ–ದಬ್ಬಾಳಿಕೆಗಳಲ್ಲಿ, ದುಃಖ, ದಾರಿದ್ರ್ಯ, ಅವಮಾನ, ಹಿಂಸೆಗಳಲ್ಲಿ ನೊಂದು ತಮ್ಮ ಬಿಡುಗಡೆಗಾಗಿ ಉದ್ಧಾರಕನೊಬ್ಬನು ಬಂದೇ ಬರುತ್ತಾನೆಂದು ಹಾರೈಸಿದ್ದರು, ಕಾದಿದ್ದರು. ಅವರ ಹಂಬಲವೇ ಹಣ್ಣಾದಂತೆ ನಜರೇತಿನ ಬಡಗಿಯೊಬ್ಬನ ಬಡಕುಟುಂಬದಲ್ಲಿ ಅವತರಿಸಿದ ಏಸು.

ಏಸುವಿನ ಜನನದ ಸಂಗತಿಯನ್ನು ದಿವ್ಯ ಚೇತನವೊಂದರಿಂದ ಮೊಟ್ಟ ಮೊದಲು ಅರಿತು ಬೆತ್ಲೆಹೇಮಿನ ಅನತಿ ದೂರದ ಗುಡ್ಡದ ಮೇಲೆ ಕುರಿಗಳನ್ನು ಮೇಯಿಸುತ್ತಿದ್ದ ಕುರುಬರು, ಮೊದಲು ಬಂದು ಕೊಟ್ಟಿಗೆಯ ಹುಲ್ಲು ಹಾಸಿನ ಮೇಲೆ ಪವಡಿಸಿದ ಶಿಶು ಏಸುವನ್ನು ಕಂಡು ಭಯಭಕ್ತಿಗಳಿಂದ ನಮಿಸಿದರು.

ಏಸುವಿನ ಜನನದ ಸಂದರ್ಭ ಆತನಂತೆಯೇ, ಸರಳ ಸಾಮಾನ್ಯತೆಯಂತೆ ರಮ್ಯವಾಗಿದೆ. ಏಸು ಹುಟ್ಟಿದ್ದು, ಸಾಮಾನ್ಯ ಸಂಸಾರದ ಸಾಮಾನ್ಯವಾದ ಹುಲ್ಲು ಗುಡಿಸಲಲ್ಲಿ; ಆತ ಬದುಕಿದ್ದು, ಅತ್ಯಂತ ಸರಳವಾದ ರೀತಿಯಲ್ಲಿ; ಆತನ ಬದುಕು ಮೀಸಲಾದದ್ದು ಸಾಮಾನ್ಯರಿಗಾಗಿ.

ದನದ ಕೊಟ್ಟಿಗೆಯಲ್ಲಿ ತಲೆಯಿಡಲು ನೆಲೆಯಿಲ್ಲದ ದೂರದ ಊರೊಂದರಲ್ಲಿ ಹುಟ್ಟಿದ ಏಸು ಮುಂದೆ ಅಸಾಧಾರಣ ದಾರಿದೀಪವಾಗಿ ಮನುಕುಲದ ಮುಡಿಯ ಮಾಣಿಕ್ಯವಾದ. ಅವನ ಬದುಕು ಸಾಮಾನ್ಯತೆಯಿಂದ ಅಸಾಮಾನ್ಯತೆಗೆ ನಡೆದ ಒಂದು ಯಾತ್ರೆಯಾಗಿದೆ. ಈ ಅಸಾಮಾನ್ಯತೆಯನ್ನು ಅವನು ತಲುಪಿದ್ದು, ತನ್ನ ಒಳಗಿನ ಹಾಗೂ ಹೊರಗಿನ ಜಗತ್ತಿನೊಂದಿಗೆ ನಿರಂತರವಾಗಿ ಸಂಘರ್ಷಿಸುತ್ತ. ಅವನು ನಡೆದದ್ದು ಹೂವು ಚೆಲ್ಲಿದ ಹಾದಿಯಲ್ಲ; ಕಲ್ಲು ಮುಳ್ಳಿನ, ಕಷ್ಟ ಕಾರ್ಪಣ್ಯಗಳ ನೋವಿನ ದಾರಿ.

ಸತ್–ಅಸತ್‌ಗಳ ಸಂಘರ್ಷವನ್ನು ಎಲ್ಲ ಸಾಧಕರ ಹಾಗೆಯೇ ಆತ ಅನುಭವಿಸಿದ. ಆತ ಅಸತ್ತನ್ನು ಗೆದ್ದು ಸತ್ತಿನೆಡೆಗೆ ನಡೆದ ರೀತಿಯನ್ನು, ಏಸು ಸೈತಾನನ ಪ್ರಲೋಭನೆಗಳನ್ನು ಗೆದ್ದ ಸಂದರ್ಭ ಸಾಂಕೇತಿಸುತ್ತದೆ. ಏಸು ಯೋಹಾನನಿಂದ ಸ್ನಾನದೀಕ್ಷೆಯನ್ನು ಪಡೆದ ನಂತರ ನಲವತ್ತು ದಿವಸಗಳ ಕಾಲ ಏಕಾಂತವಾಸಿಯಾಗಿ ಪರ್ವತಾರಣ್ಯಗಳಲ್ಲಿ ಸುತ್ತಿದ. ಈ ನಲವತ್ತು ದಿನಗಳ ಕಾಲ ತನ್ನ ಅಂತರಂಗವನ್ನು ತಾನು ಶೋಧಿಸಿಕೊಂಡ. ಈ ಶೋಧನೆಯ, ಸಾಧನೆಯ ತುದಿಗೆ ಬಂದು ಕಾಡಿತು, ಸೈತಾನನ ಪರೀಕ್ಷೆ. ಸತ್ವಶಕ್ತಿಗೆ ವಿರೋಧಿಯಾದ ತಾಮಸ ಪ್ರಭೆಯ ಪ್ರತೀಕವೇ ಸೈತಾನ. ಈ ಶಕ್ತಿ ಏಸುವನ್ನು ನಾನಾ ಬಗೆಯಿಂದ ಪರೀಕ್ಷಿಸಿ, ಕಡೆಗೆ ಎತ್ತರವಾದೊಂದು ಬೆಟ್ಟದ ನೆತ್ತಿಗೆ ಒಯ್ದು, ಆ ಎತ್ತರದಿಂದ ಕೆಳಗೆ ಚಾಚಿಕೊಂಡ ಬಹು ಬಗೆಯ ಆಕರ್ಷಕವಾದ ಲೌಕಿಕ ರಾಜ್ಯಗಳನ್ನು ತೋರಿಸಿ, ಏಸು ಒಪ್ಪುವುದಾದರೆ, ಅವನನ್ನು ಅವುಗಳ ಒಡೆಯನನ್ನಾಗಿ ಮಾಡುವುದಾಗಿ ಹೇಳಿತು. ಆದರೆ ಆ ಆಕರ್ಷಣೆಗೆ ಏಸು ಬಲಿಯಾಗಲಿಲ್ಲ. ಈ ನೆಲದ ಮೇಲೆ ದೇವರ ರಾಜ್ಯವನ್ನು ನೆಲೆಗೊಳಿಸಲು ಬಂದ ಏಸು, ಸೈತಾನನ ಮಾತುಗಳಿಗೆ ಮರುಳಾಗಲಿಲ್ಲ. ತಾನು ನಂಬಿದ ದೈವದಲ್ಲಿನ ಅದಮ್ಯವಾದ ಶ್ರದ್ಧೆಯಿಂದ ಸೈತಾನನನ್ನು ಗೆದ್ದ.

ಇದಕ್ಕೂ ಹಿಂದೆ, ಸಿದ್ಧಾರ್ಥನೆಂಬ ಶಾಕ್ಯ ರಾಜಕುಮಾರ, ಮನುಕುಲದ ದುಃಖದ ಮೂಲವನ್ನು ಶೋಧಿಸಲು ಹೊರಟು ಬೋಧಿವೃಕ್ಷದ ಕೆಳಗೆ ಮಹಾ ತಪಸ್ಸಿಗೆ ಕೂತಾಗ, ಇದೇ ಅಸತ್ ಶಕ್ತಿಯಾದ ಮಾರನು ಬಂದು, ಬಗೆ ಬಗೆಯ ಬಯಕೆಗಳ ಬಲೆಯನ್ನು ಹಾಸಿ, ಮರಳುಗೊಳಿಸಿದಾಗ, ವಿಚಲಿತನಾಗದ ಸಿದ್ಧಾರ್ಥ ಮಾರನನ್ನು ಗೆದ್ದು ಬುದ್ಧನಾದ. ಹಾಗೆಯೇ ಸೈತಾನನನ್ನು ಗೆದ್ದು ಏಸು, ದೇವಪುತ್ರನಾದ ಊರೂರು ಕೇರಿಗಳನ್ನು ಸುತ್ತುತ್ತ, ಪ್ರೀತಿ–ಕರುಣೆಗಳನ್ನು ಬಿತ್ತುತ್ತ, ದೈವಶ್ರದ್ಧೆಯಿಂದ ಹುಟ್ಟಿಕೊಳ್ಳುವ ಆತ್ಮಪ್ರತ್ಯಯವನ್ನು ಶ್ರೀಸಾಮಾನ್ಯರಲ್ಲಿ ಜಾಗೃತಗೊಳಿಸುತ್ತ, ಅರ್ಥಹೀನ ಆಚಾರಗಳ ಹಾಗೂ ಮೂಢನಂಬಿಕೆಗಳ ವಿರುದ್ಧವಾಗಿ ದನಿಯೆತ್ತುತ್ತ, ಜನರ ಪ್ರೀತಿಗೆ ಗೌರವಕ್ಕೆ ಪಾತ್ರನಾದ ; ಹಾಗೆಯೇ ಮತ ಮೌಢ್ಯಗಳನ್ನು ಗುತ್ತಿಗೆ ಹಿಡಿದುಕೊಂಡು, ಧರ್ಮದ ಹಾಗೂ ದೇವರ ಹೆಸರಿನಲ್ಲಿ ಸಾಮಾನ್ಯ ಜನರನ್ನು ದಾರಿ ತಪ್ಪಿಸುತ್ತಿದ್ದ ಹಾಗೂ ಶೋಷಿಸುತ್ತಿದ್ದ ಪುರೋಹಿತ ಷಾಹಿಯ ಹಾಗೂ ಆಳುವ ವರ್ಗದ ರೋಷಕ್ಕೆ ಗುರಿಯಾದ.

ತನ್ನನ್ನು ಮೋಸದಿಂದ ಸೆರೆ ಹಿಡಿಸಿ ವಿಚಾರಣೆಗೆ ಗುರಿಪಡಿಸಿದ ಮಹಾ ಯಾಜಕರ ಅಧ್ಯಕ್ಷ ಏಸುವನ್ನು ಕುರಿತು ಒಂದು ಪ್ರಶ್ನೆ ಹಾಕಿದ ; "ಹೇಳು ಓ ದೇವಪುತ್ರ, ನೀನು ಈ ಜನಕ್ಕೆ ಏನನ್ನು ಉಪದೇಶ ಮಾಡಿದೆ ?" ಏಸು ಹೇಳಿದ : "ನಾನು ಎಲ್ಲಿಯೂ ಏನನ್ನೂ ರಹಸ್ಯವಾಗಿ ಬೋಧಿಸಲಿಲ್ಲ. ನಾನು ಏನು ಹೇಳಿದೆ ಎಂಬುದನ್ನು, ನೀನು ಯಾರನ್ನು ಬೇಕಾದರೂ ಕೇಳಿ ಖಚಿತಪಡಿಸಿಕೊಳ್ಳಬಹುದು."

ಏಸುವಿನ ಈ ಉತ್ತರ ಬಹುಮುಖ್ಯವಾದದ್ದು. ಏಸು ಎಂದೂ ಯಾವುದನ್ನೂ ಮುಚ್ಚುಮರೆ ಮಾಡಲಿಲ್ಲ. ಅವನು ಜನಸಂಗದೂರವಾದ ಯಾವುದೋ ದೂರದ ಗುಹಾವಾಸದ ಏಕಾಂತದಲ್ಲಿ ಬದುಕಿದವನಲ್ಲ. ಜಿಜ್ಞಾಸುಗಳಾದವರು ನಾಸಿದ್ದಲ್ಲಿಗೇ

ಬಂದು ನನ್ನಿಂದ ಉಪದೇಶವನ್ನು ಪಡೆಯುಕೊಳ್ಳಲಿ ಎಂಬ ಧೋರಣೆಯುವನಲ್ಲ. ಅವರ ಬದಲು ಅವನು ಬದುಕಿದ್ದು ಬಯಲಿನಲ್ಲಿ; ನಿಬಿಡ ಜನಸಂದಣಿಯಲ್ಲಿ. ನೀಲಾಕಾಶದ ಕೆಳಗಿನ ನಲದ ಏರಿಳಿತಗಳಲ್ಲಿ, ಊರಿಂದೂರಿಗೆ ಸಂಚಾರಮಾಡುತ್ತಾ, ಉದ್ದಕ್ಕೂ ತಾನು ಕಂಡ ಸತ್ಯವನ್ನು ಜನಕ್ಕೆ ತಿಳಿಸುತ್ತ, ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತ, ನದೀ ತೀರಗಳಲ್ಲಿ, ಸರೋವರಗಳ ಮೇಲೆ, ಸಂತೆಗಳಲ್ಲಿ, ಜಾತ್ರೆಗಳಲ್ಲಿ, ದಿನ್ನೆಗಳ ಮೇಲೆ, ಗುಡ್ಡಗಳ ನೆತ್ತಿಯಲ್ಲಿ, ಎಲ್ಲೆಂದರಲ್ಲಿ ನಿಂತು ತನ್ನ ಸುತ್ತ ಸಂದಣಿಸಿದ ಜನಕ್ಕೆ ಉಪದೇಶ ಮಾಡಿದ. ಯಾವ ಮಾತನ್ನು ಯಾರಿಗೂ ರಹಸ್ಯವಾಗಿ ಹೇಳಲಿಲ್ಲ; ಚರ್ಚಿನ ಗಂಟೆಯ ಅನುರಣನ ಧ್ವನಿಯಂತೆ ಗಟ್ಟಿಯಾಗಿ ಹೇಳಿದ; ಎಲ್ಲರಿಗೂ ತಿಳಿಯುವಂತೆ ಸ್ಪಷ್ಟವಾಗಿ ಹೇಳಿದ; ಪ್ರೀತಿಯಿಂದ, ವಾತ್ಸಲ್ಯದಿಂದ, ಅನುಕಂಪದಿಂದ ಹೇಳಿದ. 'ಹಕ್ಕಿಗಳಿಗೆ ಗೂಡುಗಳುಂಟು. ನರಿಗಳಿಗೆ ಗುಹೆಗಳುಂಟು. ಆದರೆ ಮಣ್ಣಿನ ಮಗನಿಗೆ ತಲೆಯಿಡಲು ಎಲ್ಲೂ ನೆಲೆಯಿಲ್ಲ'–ಎಂದು ಹೇಳುವುದರ ಮೂಲಕ ತಾನು ಯಾವ ಮುಚ್ಚುಮರೆಯೂ ಇಲ್ಲದೆ, ಈ ನೆಲ ಮುಗಿಲು ನಡುವಣ ಸಂಚಾರಿ ಎಂಬುದನ್ನು ಸ್ಪಷ್ಟಪಡಿಸಿದ.

"ನಾನು ಬಂದಿರುವುದು ಕಟ್ಟುವುದಕ್ಕೆ; ಕೆಡಹುವುದಕ್ಕಲ್ಲ. ಕಟ್ಟಿ ಪೂರೈಸುವುದಕ್ಕೆ"—ಎಂದು ತನ್ನ ಜೀವನೋದ್ದೇಶವನ್ನು ಸಾರಿಹೇಳಿದ. ಆದರೆ ಕಟ್ಟುವ ಕೆಲಸ ಮಾಡಬೇಕಾದರೆ ಕಟ್ಟಡದ ಕೆಟ್ಟ ಭಾಗಗಳನ್ನು ಕೆಡವಬೇಕಷ್ಟೆ? ಹಳೆಯ ಅರ್ಥಹೀನ ಆಚಾರಗಳನ್ನು ಪ್ರಶ್ನಿಸಬೇಕಷ್ಟೆ?

ಒಮ್ಮೆ ಏಸು ಜೆರುಸಲೇಮಿನ ಮಹಾದೇವಾಲಯವನ್ನು ನೋಡಲೆಂದು ಬಂದ. ನೋಡುತ್ತಾನೆ: ಇಡೀ ದೇವಸ್ಥಾನ ಅಂಗಡಿಮಳಿಗೆಗಳಿಂದ ತುಂಬಿಹೋಗಿದೆ. ದೇವರಿಗೆ ಬಲಿಕೊಡಲೆಂದು ಪಶುಪಕ್ಷಿಗಳನ್ನು ಮಾರುವ ಅಂಗಡಿಗಳೇ ಅಧಿಕವಾಗಿ ದೇವಸ್ಥಾನ ಕಟುಕರ ಮಾರುಕಟ್ಟೆಯಾಗಿದೆ. ಹರಕೆಗಳ ನೆಪದಲ್ಲಿ ಜನಸಾಮಾನ್ಯರನ್ನು ವರ್ತಕರು ಸುಲಿಯಲು ಮಾಡಿದ ಈ ಸಂಚನ್ನು ನೋಡಿ ಏಸು ಕೆರಳಿ ಕೆಂಡವಾದ. ಕೈಯಲ್ಲಿ ಚಾಟಿ ಹಿಡಿದು 'ಪವಿತ್ರವಾದ ದೇವಸ್ಥಾನವನ್ನು ಕಳ್ಳರ ಕೂಟವನ್ನಾಗಿ ಮಾಡಿರುವ ಖದೀಮರೇ, ತೊಲಗಿ ಇಲ್ಲಿಂದ' ಎನ್ನುತ್ತ ಅಲ್ಲಿದ್ದ ಮಾರಾಟಗಾರರ ತಂಡವನ್ನು ಒದ್ದು ಓಡಿಸಿದನು. ಯಾವ ದೇವಸ್ಥಾನ ಧ್ಯಾನಯೋಗ್ಯವಾದ ಶಾಂತಿಯ ಸದನವಾಗಬೇಕಾಗಿತ್ತೋ, ಅದನ್ನು ಪ್ರಾಣಿಗಳ ದೊಡ್ಡಿಯನ್ನಾಗಿ, ವ್ಯಾಪಾರದ ಸಂತೆಯನ್ನಾಗಿ, ಸುಲಿಗೆಯ ಸಾಧನವನ್ನಾಗಿ ಮಾಡಿದ ಈ ವ್ಯವಹಾರವನ್ನು ಆತ ವಿರೋಧಿಸಿದ. ದೇವಸ್ಥಾನವೇನೋ ವರ್ತಕರ ಹಾವಳಿಯಿಂದ ಪಾರಾಯಿತು. ಆದರೆ ಏಸು, ಫರಿಸಾಯರೆಂಬ ಅವತ್ತಿನ ಪುರೋಹಿತರ ಕೋಪ ಹಾಗೂ ದ್ವೇಷಗಳಿಂದ ಪಾರಾಗಲಿಲ್ಲ.

ಹೀಗಾಯಿತಲ್ಲ ಎಂದು ಏಸು ಎದೆಗುಂದಲಿಲ್ಲ. ಅನ್ಯಾಯ ಅನಾಚಾರಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಿಲ್ಲ. ತಾನು ಯಾವುದನ್ನು ನಿಜವೆಂದು ನಂಬಿದನೋ ಅದರ ನೇರಕ್ಕೆ ನಿರ್ಭಯವಾಗಿ ನಡೆದನು. "ವಿನಾಶದ ಹಾದಿ ವಿಶಾಲವಾಗಿದೆ. ಆ ಹಾದಿಯ ಬಾಗಿಲು ಅಗಲವಾಗಿದೆ ಬಹುಮಂದಿ ಅದರೊಳಕ್ಕೇ ನುಗ್ಗುತ್ತಾರೆ. ಆದರೆ

ನಿಜದ ಹಾದಿ ನೇರವಾಗಿದೆ ; ಅದರ ಬಾಗಿಲು ಇಕ್ಕಟ್ಟಾಗಿದೆ. ಅಲ್ಲಿಗೆ ಹೋಗುವವರು ಎಲ್ಲೋ ಕೆಲವರು ಮಾತ್ರ"–ಎಂದು ಕೊರಗಿದ. ವಿಶಾಲವಾದ ವಿನಾಶದ ಹಾದಿಗೆ ನುಗ್ಗುವ ಈ ಬಹುಸಂಖ್ಯಾತರನ್ನು, ನಿಜದ ನೇರವಾದ ದಾರಿಯ ಕಡೆಗೆ ತಿರುಗಿಸುವುದು ಹೇಗೆ ಎಂದು ಬದುಕಿನ ಉದ್ದಕ್ಕೂ ಚಿಂತಿಸಿದ. ಈ ನಿಜದ ನೇರವಾದ ದಾರಿಗೆ ಬರಬೇಕಾದರೆ ಅಗತ್ಯವಾದದ್ದು, ಸ್ವಾರ್ಥ ತ್ಯಾಗ ಮತ್ತು ಪ್ರೀತಿ; ಆದ ಕಾರಣ ವ್ಯಕ್ತಿಗಳನ್ನು ಅವರ ಯಾವುದೇ ದೋಷಗಳನ್ನು ಪರಿಗಣನೆಗೆ ತಂದುಕೊಳ್ಳದೆ ಪ್ರೀತಿಸಿರಿ ಎಂದು ಬೋಧಿಸಿದ. ಅಷ್ಟೇ ಅಲ್ಲ ತಾನೇ ಎಲ್ಲರನ್ನೂ ಪ್ರೀತಿಸಿದ. ದಲಿತರ ಸೇವೆ ಮಾಡಿದ. ನೊಂದವರ ಕಣ್ಣೀರು ಒರೆಸಿದ. ರೋಗಿಗಳನ್ನು ಆರೈಕೆ ಮಾಡಿದ. ಮನೆ ಮನೆಗೆ ಹೋಗಿ ಅಶುಚಿಯಾದ ಸ್ಥಳಗಳನ್ನು ಸ್ವಚ್ಛಮಾಡಿದ. ಈ ಪ್ರೀತಿಯ ಹಾದಿಯಲ್ಲಿ ಅವನು ಮಾಡಿದ ಎಷ್ಟೋ ಕಾರ್ಯಗಳು, ಅಘಟಿತ ಘಟನೆಗಳಂತೆ, ಪವಾಡಗಳಂತೆ ವ್ಯಾಖ್ಯಾನಿತವಾಗಿವೆ. ಅವನು ಕುರುಡರಿಗೆ ಕಣ್ಣು ಬರುವಂತೆ ಮಾಡಿದ; ರೋಗಿಗಳ ರೋಗವನ್ನು ತನ್ನ ಸ್ಪರ್ಶ ಮಾತ್ರದಿಂದ ಗುಣಪಡಿಸಿದ ; ಉಬ್ಬಿದ ಕಡಲನ್ನು ಶಾಂತಗೊಳಿಸಿದ ; ಸತ್ತವನನ್ನು ಬದುಕಿಸಿದ–ಇತ್ಯಾದಿಯಾಗಿ ಅವನ ಪವಾಡಗಳನ್ನು ಕ್ರೈಸ್ತ ಧಾರ್ಮಿಕ ಗ್ರಂಥಗಳು ಉಲ್ಲೇಖಿಸುತ್ತವೆ. ಏಸು, ಜಗತ್ತಿನ ಹಲವಾರು ಮಹಿಮಾ ಪುರುಷರಂತೆ ಪವಾಡಗಳನ್ನು ಮಾಡಿರಬಹುದು ಅಥವಾ ಅವನ ಎಷ್ಟೋ ಕಾರ್ಯಗಳು ಪವಾಡಗಳಂತೆ ತೋರಿರಲೂಬಹುದು. ಆದರೆ ಯಾವುವನ್ನೂ ತನ್ನ ಸ್ವಂತಕ್ಕೆ ವ್ಯಕ್ತಿಪ್ರತಿಷ್ಠೆಗೆ ಅವನು ಮಾಡಲಿಲ್ಲ; ಅವು ಅವನ ಪ್ರೀತಿ-ಕರುಣೆಗಳ ಸಂಕೇತಗಳು ಮಾತ್ರ. ಅಲ್ಲದೆ ಈ ಪವಾಡಸದೃಶ ಘಟನೆಗಳನ್ನು ಈ ದಿನ ನಾವು ಬೇರೊಂದು ಅರ್ಥದಲ್ಲಿಯೂ ಗ್ರಹಿಸಬಹುದು : ಅವನು ಕುರುಡರಿಗೆ ಕಣ್ಣುಕೊಟ್ಟ, ಸ್ಪರ್ಶಮಾತ್ರದಿಂದ ರೋಗಿಗಳ ರೋಗಗಳನ್ನು ಗುಣ ಮಾಡಿದ, ಪ್ರಕ್ಷುಬ್ಧವಾದ ಕಡಲನ್ನು ಶಾಂತಗೊಳಿಸಿದ ಎಂಬ ಸಂಗತಿಗಳನ್ನು 'ವಾಸ್ತವ'ಗಳೆಂದು ಭಾವಿಸಬೇಕಾಗಿಲ್ಲ. ಏಸು ನಿಜವಾಗಿಯೂ ಜನಕ್ಕೆ ಹೊಸ ದೃಷ್ಟಿಯೊಂದನ್ನು ಕೊಟ್ಟಿರಬಹುದು; ರೋಗಗ್ರಸ್ತವಾದ ಮನಸ್ಸುಗಳನ್ನು ಆರೋಗ್ಯಪೂರ್ಣವನ್ನಾಗಿ ಮಾಡಿರಬಹುದು, ಅನೇಕರ ಅಂತರಂಗದ ಅಲ್ಲೋಲಕಲ್ಲೋಲಗಳನ್ನು ತನ್ನ ವಾಣಿಯಿಂದ ಉಪಶಮನಗೊಳಿಸಿರಬಹುದು. ಒಂದು ರೀತಿಯಲ್ಲಿ ಸತ್ತಂತೆ ಇದ್ದವರನ್ನು ಆತ ಹೊಸ ಬದುಕಿಗೆ ಎಚ್ಚರಗೊಳಿಸಿರಬಹುದು. ನಿಜವಾದ ಪ್ರವಾದಿಗಳಿಂದ ಆಗುವ ಕೆಲಸಗಳೇ ಇವು—ಎಲ್ಲ ದೇಶಗಳಲ್ಲಿಯೂ, ಎಲ್ಲ ಕಾಲಗಳಲ್ಲಿಯೂ.

ಏಸುವಿನ ಕರುಣೆ ಹಿರಿದೆನ್ನದೆ ಕಿರಿದೆನ್ನದೆ, ಮೇಲೆನ್ನದೆ ಕೀಳೆನ್ನದೆ ನೆಲವನ್ನು ತಬ್ಬಿದ ಬೆಳುದಿಂಗಳಿನಂತೆ ಹಬ್ಬಿಕೊಂಡಿದೆ. "ಅನ್ಯರ ದೋಷಗಳನ್ನು ಕೆದಕಿನೋಡದೆ ಅವರನ್ನು ತಿದ್ದುವುದು ನಿಜವಾದ ಪ್ರೀತಿಯ ಲಕ್ಷಣವಾಗಿದೆ. ಇನ್ನೊಬ್ಬರ ದೋಷಗಳನ್ನು ಬೆದಕಿ ಪರೀಕ್ಷಿಸಲು ಹೋಗಬೇಡಿರಿ. ಇನ್ನೊಬ್ಬರ ದೋಷವನ್ನು ಕುರಿತು ನೀವು ಕೊಡುವ ತೀರ್ಪು, ನಿಮ್ಮನ್ನು ಕುರಿತ ತೀರ್ಪು ಆಗುತ್ತದೆ ಎನ್ನುವುದನ್ನು ಮರೆಯಬೇಡಿರಿ. ಬೇರೆಯವನ ಕಣ್ಣಿನಲ್ಲಿ ಬಿದ್ದಿರುವ ಧೂಳನ್ನು ಒರೆಸುವ ಮೊದಲು,

ನಿಮ್ಮ ಕಣ್ಣಿನಲ್ಲಿ ಬಿದ್ದಿರುವ ಧೂಳನ್ನು ಒರೆಸಿಕೊಳ್ಳಿರಿ" ಎಂದು ಮತ್ತೆ ಮತ್ತೆ ಹೇಳಿದನು.

ಒಮ್ಮೆ ಏಸುವಿಗೆ ಪ್ರತಿಪಕ್ಷದವರಾದ ಫರಿಸಾಯರು ಮಗ್ದಲದ ಮೇರಿ ಎಂಬ ಹೆಣ್ಣೊಬ್ಬಳನ್ನು ದರದರನೆ ಎಳೆದುಕೊಂಡು ಬಂದು ಏಸುವಿನ ಮುಂದೆ ಕೆಡವಿದರು. "ಇವಳೊಬ್ಬಳು ವ್ಯಭಿಚಾರಿಣಿ. ನೀನೇ ಹೇಳು ಇವಳಿಗೆ ಯಾವ ಶಿಕ್ಷೆ ಕೊಡೋಣ" ಎಂದು ಏಸುವನ್ನು ಕೇಳಿದರು.

ಏಸು, ಎತ್ತರದ ಗಿರಿಶಿಖರ, ಕಣಿವೆಯನ್ನು ನೋಡುವಂತೆ ಮಗ್ದಲದ ಮೇರಿಯನ್ನು ನೋಡಿದ: ಕೆದರಿದ ತಲೆ, ಕಂಬನಿದುಂಬಿದ ಕಣ್ಣು, ದೀನವಾದ ಮುಖ. ಅಸಹಾಯಕತೆಯೇ ಮೂರ್ತಿವೆತ್ತ ವ್ಯ. ಹಾಗೆಯೆ ಹಸಿದ ತೋಳಗಳಂತೆ ಅಟ್ಟಹಾಸದ ನಗೆ ಬೀರುತ್ತಾ ನಿಂತ ಫರಿಸಾಯರನ್ನೂ ನೋಡಿದ.

"ಹಾಗೋ. ಇವಳು ವ್ಯಭಿಚಾರಿಣಿ ಎಂದು ತಾನೆ ನಿಮ್ಮ ಆಗ್ರಹ, ಒಳ್ಳೆಯದು. ಇಂಥ ವ್ಯಭಿಚಾರಿಣಿಗೆ ಏನು ಶಿಕ್ಷೆ ಕೊಡಬೇಕೆಂದು ನಿಮ್ಮ ಶಾಸ್ತ್ರಗಳಲ್ಲಿ ಬರೆದಿದೆ ಹೇಳಿ"—ಎಂದ ಏಸು.

ಏಸುವಿನ ಪ್ರಶ್ನೆಯಿಂದ ಕೊಂಚ ಪ್ರಸನ್ನ ಚಿತ್ತರಾದ ಫರಿಸಾಯರು ಹೇಳಿದರು. "ಇಂಥವಳನ್ನು ಕಲ್ಲುಗಳಿಂದ ಹೊಡೆದು ಸಾಯಿಸಬೇಕೆಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ."

"ಸರಿ ಹಾಗಾದರೆ" ಏಸು ಹೇಳಿದ, "ಈಕೆಯನ್ನು ಕಲ್ಲುಗಳಿಂದ ಹೊಡೆದು ಸಾಯಿಸಿ. ನನ್ನದೇನೂ ಅಭ್ಯಂತರವಿಲ್ಲ."

ಫರಿಸಾಯರಿಗೆ ಆಶ್ಚರ್ಯವಾಯಿತು. ಸಂತೋಷವೂ ಆಯಿತು. ಅಷ್ಟರಲ್ಲಿ ಏಸು ತನ್ನ ಮಾತನ್ನು ಮುಂದುವರಿಸಿದ: "ಆದರೆ, ನಿಮ್ಮಲ್ಲಿ ಇದುವರೆಗೂ ಒಂದು ತಪ್ಪನ್ನೂ ಮಾಡದೆ ಇರುವವರು ಮೊದಲು ಇವಳನ್ನು ಕಲ್ಲಿನಿಂದ ಹೊಡೆಯಿರಿ."

ಕಯ್ಯಲ್ಲಿ ಕಲ್ಲುಹಿಡಿದು ನಾನು ಮೊದಲು ತಾನು ಮೊದಲು ಎಂದು ನಿಂತ ಜನಕ್ಕೆ ಏಸುವಿನ ಈ ತೀರ್ಪನ್ನು ಕೇಳಿ ಬೆಳಕಿನ ಛಳಕು ಹೊಡೆದ ಹಾಗಾಯಿತು. ಸದ್ದಿಲ್ಲದೆ ಒಬ್ಬೊಬ್ಬರೂ ತಮ್ಮ ಕೈಯ್ಯಲ್ಲಿದ್ದ ಕಲ್ಲನ್ನು ಕೆಳಗೆ ಹಾಕಿ ಹೊರಟು ಹೋದರು. ಮಗ್ದಲದ ಮೇರಿ ತನ್ನ ಕೃತಜ್ಞತೆಯ ಕಣ್ಣೀರಿನಿಂದ ಏಸುವಿನ ಪಾದಗಳನ್ನು ತೊಳೆದು, ತನ್ನ ಉದ್ದವಾದ ತಲೆಗೂದಲುಗಳಿಂದ ಒರೆಸಿದಳು.

ಏಸು ಎದುರಿಸಬೇಕಾಗಿ ಬಂದದ್ದು, ತಮ್ಮ ಹುಳುಕುಗಳನ್ನು ಒಳಗಿಟ್ಟುಕೊಂಡು, ಇನ್ನೊಬ್ಬರನ್ನು ಶಾಸ್ತ್ರಗಳ ಹೆಸರಿನಿಂದ ಶಿಕ್ಷಿಸಲು ಕಾತರರಾಗಿದ್ದ ಫರಿಸಾಯರಂಥ ಪುರೋಹಿತಶಾಹಿಯನ್ನು, ಮತ್ತು ಏಸುವಿನ ಉಪದೇಶಗಳಿಂದ ಎಚ್ಚೆತ್ತ ಜನ ತಮ್ಮ ಬುಡಕ್ಕೆ ಯಾವತ್ತು ಸಂಚಕಾರವನ್ನು ತಂದಾರೋ ಎಂಬ ಭಯಕ್ಕೆ ಒಳಗಾದ ಆಡಳಿತಶಾಹಿಯನ್ನು, ಹಾಗೆಯೆ, ಈ ಎರಡರ ಹಿಂದೆ ಸದಾ ಬೆಂಬಲವಾಗಿ ನಿಂತ ಶ್ರೀಮಂತರನ್ನು. ದೀನರ, ದಲಿತರ, ದುರ್ಬಲರ ಪರವಾಗಿ ಮಾತನಾಡುತ್ತಿದ್ದ ಮತ್ತು ಜತೆಗೆ ನಿಂತ ಏಸುವಿಗೆ, ಹಣವಂತರ ಬಗ್ಗೆ ಅಪಾರವಾದ

ತಿರಸ್ಕಾರ. ದೇವರ ರಾಜ್ಯವಿರುವುದು ದೀನರಿಗಾಗಿ ದಲಿತರಿಗಾಗಿ ಎಂದು ಉದ್ಘೋಷಿಸಿದ ಏಸು, "ಒಂದು ಸೂಜಿಯ ಕಣ್ಣಿನಲ್ಲಿ ಒಂಟೆ ಬೇಕಾದರೂ ಹಾದು ಹೋದೀತು; ಆದರೆ ಈ ಹಣವಂತರು ಮಾತ್ರ ಯಾವತ್ತೂ ದೇವರ ರಾಜ್ಯದೊಳಗೆ ಪ್ರವೇಶಿಸಲಾರರು" ಎಂದು ಹೇಳುತ್ತಿದ್ದ.

ಜೆರುಸಲೇಮಿನಲ್ಲಿ ಒಂದು ಜಾತ್ರೆಯ ದಿನ. ಸಾವಿರಾರು ಜನ ಪವಿತ್ರವಾದ ಅಲ್ಲಿನ ದೇವಾಲಯಕ್ಕೆ ಬಂದಿದ್ದರು. ಭಕ್ತಾದಿಗಳು ಕಾಣಿಕೆ ಸಲ್ಲಿಸಲೆಂದು ಅಲ್ಲಲ್ಲಿ ಪೆಟ್ಟಿಗೆಗಳನ್ನು ಇರಿಸಿದ್ದರು. ಯೇಸು ತನ್ನ ಶಿಷ್ಯರೊಂದಿಗೆ ಆ ಜಾತ್ರೆಯ ದಿನ ದೇವಸ್ಥಾನದಲ್ಲಿ ಕೂತು, ಬಂದು ಹೋಗುವ ಜನಸಮೂಹವನ್ನು ಗಮನಿಸುತ್ತಿದ್ದ. ಹಣವಂತರು ತಮ್ಮ ಭಕ್ತಿಯ ಪ್ರದರ್ಶನಕ್ಕೆಂದು ಮತ್ತು ತಾವು ಮಾಡಿದ ಪಾಪಗಳ ಪರಿಹಾರಕ್ಕೆಂದು ಹೆಚ್ಚು ಹೆಚ್ಚು ಹಣವನ್ನು ಎಲ್ಲರಿಗೂ ಕಾಣುವಂತೆ, ಆ ಕಾಣಿಕೆಯ ಪೆಟ್ಟಿಗೆಗಳೊಳಕ್ಕೆ ಸುರಿದು ತಮ್ಮ ಹೆಮ್ಮೆಯನ್ನು ಸಾರ್ವಜನಿಕವಾಗಿ ಪ್ರದರ್ಶಿಸುತ್ತಿದ್ದರು. ಬಡವರು ತಮಗೆ ಸಾಧ್ಯವಾದ ಅಲ್ಪ ಕಾಣಿಕೆಗಳನ್ನು, ಅತ್ಯಂತ ಸಂಕೋಚದಿಂದ, ಆದರೆ ಭಕ್ತಿಯಿಂದ ಸಲ್ಲಿಸಿ ತಲೆಬಾಗುತ್ತಿದ್ದರು. ಆ ಹೊತ್ತಿನಲ್ಲಿ ಒಬ್ಬಳು ಬಡವಿಧವೆ ಅಲ್ಲಿಗೆ ಬಂದಳು. ಹೊತ್ತು ಹೊತ್ತಿಗೆ ಅನ್ನವಿಲ್ಲದೆ ಬಡಕಲಾಗಿದ್ದ ಶರೀರ, ಬತ್ತಿದ ಕೆನ್ನೆ, ದೀನವಾದ ಕಣ್ಣುಗಳು. ಹರುಕು ಬಟ್ಟೆಯ ಈ ಹೆಣ್ಣುಮಗಳು ತನಲ್ಲಿದ್ದ ಅಲ್ಪ ಕಾಣಿಕೆಯನ್ನು ಯಾರಾದರೂ ಕಂಡಾರೋ ಎಂಬ ಅಳುಕಿನಿಂದ, ಕಿರುಗಾಸುಗಳನ್ನು ದೇವರಿಗೆ ಸಮರ್ಪಿಸಿ ತಲೆಬಾಗಿದಳು. ಹಾಗೆ ಅರ್ಪಿಸುವಾಗ ಅವಳ ಕಣ್ಣುಗಳಲ್ಲಿ ಸಂತೋಷದ ಕಣ್ಣೀರು, ಬತ್ತಿದ ಕೆನ್ನೆಗಳನ್ನು ತೋಯಿಸಿತ್ತು.

ಇದನ್ನು ಗಮನಿಸಿದ ಯೇಸು ತನ್ನ ಶಿಷ್ಯರಿಗೆ ಹೇಳಿದ: "ಈ ಬಡ ವಿಧವೆಯು ಸಲ್ಲಿಸಿದ ಈ ಕಿರುಕಾಣಿಕೆಗೆ ಯಾವುದು ಸಾಟಿ? ಈ ಹಣವಂತರೆಲ್ಲರೂ ದೇವರಿಗೆ ನೀಡಿದ ಕಾಣಿಕೆಗಳೆಲ್ಲವನ್ನು ರಾಶಿ ಹಾಕಿದರೂ, ಅದು ಈ ವಿಧವೆಯು ಸಲ್ಲಿಸಿದ ನಿರ್ಮಲ ಮನಸ್ಸಿನ ಭಕ್ತಿಯ ಅಲ್ಪ ಕಾಣಿಕೆಗೆ ಸಮನಾಗಲಾರದು."

ಯೇಸು, ತನ್ನ ಶಿಷ್ಯರಿಗೆ ಉಪದೇಶ ಮಾಡಿದ್ದು ಹೀಗೆ: ಕಣ್ಣಿನೆದುರು ಕಾಣುವ ಘಟನೆಗಳ ಮೂಲಮಾನದಲ್ಲಿ, ಅನೇಕ ಸಾಮತಿ, ದೃಷ್ಟಾಂತಗಳನ್ನು ಬಳಸಿ, ಅವನು ಉಪದೇಶಮಾಡಿದ್ದು ಶಿಷ್ಯರಿಗೆ ಮಾತ್ರವಲ್ಲ; ಜನಕ್ಕೆ, ಸಾಮಾನ್ಯ ಜನಕ್ಕೆ: "ಪ್ರೀತಿಸು. ಎಲ್ಲರನ್ನೂ ಅವ್ಯಾಜವಾಗಿ ಪ್ರೀತಿಸು. ಇದೇ ಮೂಲಮಂತ್ರ. ಯಾರಾದರೂ ನಿನ್ನ ಒಂದು ಕೆನ್ನೆಗೆ ಹೊಡೆದರೆ, ನಿನ್ನ ಇನ್ನೊಂದು ಕೆನ್ನೆಯನ್ನೂ ಒಡ್ಡು. ಯಾವುದರಲ್ಲಿಯೂ ತೋರಿಕೆ ಬೇಡ. ದಾನ ಮಾಡುವಾಗ ಯಾರಾದರೂ ನೋಡಲಿ ಎಂದು ಮಾಡಬೇಡ. ಕೊಡುವುದನ್ನು ಗುಟ್ಟಾಗಿ ಕೊಡು ನಿನ್ನ ಬಲಗೈ ಕೊಟ್ಟಿದ್ದು, ನಿನ್ನ ಎಡಗೈಗೆ ಗೊತ್ತಾಗಬಾರದು-ಅಷ್ಟು ರಹಸ್ಯವಾಗಿರಬೇಕು ನೀನು ನೀಡುವ ದಾನ ...

"ಈ ನೆಲದ ಉಪ್ಪು ನೀವು. ಈ ಉಪ್ಪೇ ಸಪ್ಪೆಯಾದರೆ ಮತ್ತೆ ಅದನ್ನು ಉಪ್ಪಾಗಿಸುವುದು ಹೇಗೆ? ಜಗತ್ತಿನ ಬೆಳಕು ನೀವು. ಉರಿಯುವ ಜ್ಯೋತಿಯನ್ನು

ಯಾರೂ ಡಬರಿಯ ಕೆಳಗೆ ಮುಚ್ಚಿಡಲಾರರು. ಎಲ್ಲರಿಗೂ ಕಾಣುವಂತೆ ದೀಪದ ಕಂಬದ ಮೇಲೆ ಇಡುತ್ತಾರೆ. ಹಾಗೆಯೇ ನಿಮ್ಮೊಳಗಿನ ಬೆಳಕು ಲೋಕದ ಎದುರು ಬೆಳಗಲಿ."

ಏಸು ಹೇಳಿದ ಸಾಮತಿಯೊಂದು ಹೀಗಿದೆ :

'ಒಮ್ಮೆ ನೂರು ಕುರಿಗಳಿರುವ ಮಂದೆಯೊಂದನ್ನು ಮೇಯಿಸುತ್ತ ಕುರುಬರು ಕಾಡುಮೇಡುಗಳಲ್ಲಿ ಅಲೆಯುತ್ತಿದ್ದರು. ಈ ಮಂದೆಯಿಂದ ಒಂದು ದಿನ ಕುರಿಯೊಂದು ಎಲ್ಲಿಯೋ ತಪ್ಪಿಸಿಕೊಂಡು ಹೋಯಿತು. ಹೋದದ್ದು ಒಂದು ಕುರಿ ತಾನೇ, ಹೋದರೆ ಹೋಯಿತು ಎಂದು ಆ ಕುರುಬರು ಸುಮ್ಮನಾಗಲಿಲ್ಲ. ತಪ್ಪಿಸಿಕೊಂಡ ಕುರಿಗಾಗಿ ಕಾಡುಮೇಡನ್ನೆಲ್ಲಾ ಅಲೆದಾಡಿದರು. ಸುತ್ತಿ ಸುತ್ತಿ ಆಯಾಸವಾದರೂ ಹುಡುಕುವುದನ್ನು ನಿಲ್ಲಿಸಲಿಲ್ಲ. ಕಡೆಗೊಂದು ದಿನ ಕಳೆದುಹೋದ ಆ ಕುರಿ ಸಿಕ್ಕಿತು. ಆಗ ಅವರಿಗಾದ ಆನಂದ ಹೇಳತೀರದು. ಆ ಕುರಿಯನ್ನು ಹೆಗಲ ಮೇಲೆ ಹೊತ್ತು ಕುಣಿಯುತ್ತಾ ನಡೆದರು. ಕಳೆದುಹೋದ ಕುರಿ, ಕಡೆಗೂ ಮಂದೆಗೆ ಬಂದು ಸೇರಿತು. ಹೀಗೆ ದಾರಿತಪ್ಪಿದ ವ್ಯಕ್ತಿಯೊಬ್ಬ ಒಳ್ಳೆಯವನಾಗಿ ದೇವರ ರಾಜ್ಯಕ್ಕೆ ಹಿಂದಿರುಗಿ ಬಂದರೆ,ಅದೊಂದು ಸಂತೋಷದ ಸಂದರ್ಭವಲ್ಲವೆ ?

ಈ ಸಾಮತಿಯನ್ನು ಹೇಳಿದ ಏಸುವೇ ಒಬ್ಬ ದೊಡ್ಡ ಕುರುಬ ದಾರಿ ತಪ್ಪಿದ ಕುರಿಗಳನ್ನು ಹುಡುಕಿ ಸರಿಯಾದ ದಾರಿಗೆ ತರಲು ಶ್ರಮಿಸಿದವನು. ಆದರೆ ನಾವು ಮತ್ತೆ ಮತ್ತೆ ದಾರಿ ತಪ್ಪಲು ಕಾರಣಗಳೇನು ? ಒಂದು ಮಾತಿನಲ್ಲಿ ಹೇಳುವುದಾದರೆ ನಾವು ದಾರಿ ತಪ್ಪಲು ಕಾರಣ ಅಜ್ಞಾನ ಮತ್ತು ಅಶ್ರದ್ಧೆ. ಏಸುವಿನ ದೃಷ್ಟಾಂತವನ್ನೆ ಬಳಸಿ ಹೇಳುವುದಾದರೆ, ಯಾವ ಮನುಷ್ಯ ನಿಜವಾದ ವಿವೇಕಿಯೋ ಆತನ ಶ್ರದ್ಧೆ ಗಟ್ಟಿ ಬಂಡೆಯ ಮೇಲೆ ಕಟ್ಟಿದ ಮನೆಯಂತೆ ನಿಶ್ಚಲ. ಮಳೆ ಬರಬಹುದು. ಹೊಳೆಯುಕ್ಕಿ ಹರಿಯಬಹುದು, ಬಿರುಗಾಳಿ ಬೀಸಬಹುದು, ಆ ಮನೆಗೆ ತೊಂದರೆಯಿಲ್ಲ. ಆದರೆ ವಿವೇಕಿಯಲ್ಲದವನ ಶ್ರದ್ಧೆ ಮರಳ ಮೇಲೆ ಕಟ್ಟಿದ ಮನೆಯಂತೆ ಹುಸಿ; ಶಿಥಿಲ. ಬಿರುಗಾಳಿ ಬೀಸಿ, ಮಳೆ ಹೊಯ್ದು ಹೊನಲುಕ್ಕಿಹರಿಬಾಗ ಆ ಮನೆ ಕುಸಿದು ಹೋಗುತ್ತದೆ.

ಈಗ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ : ನೀನು ನಿನ್ನ ಮನೆಯನ್ನು ಕಟ್ಟಿರುವುದೆಲ್ಲಿ ? ಗಟ್ಟಿ ಬಂಡೆಯ ಮೇಲೋ ಅಥವಾ ಹುಸಿ ಮರಳಿನ ಮೇಲೋ ?

ಗುರುಸಂಸ್ಥೆಯ ಮಹತ್ವ

ಮೂಲ : ಆಚಾರ್ಯಶ್ರೀವಿದ್ಯಾನಂದಜಿ
ಅನು : ಡಾ ಎಸ್ ಪಿ ಪಾಟೀಲ

ಅಜ್ಞಾನ ತಿಮಿರಾಂಧಾನಾಂ ಜ್ಞಾನಾಂಜನ ಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈಶ್ರೀ ಗುರುವೆ ನಮಃ ॥

ಸಮಾಜವು ತನ್ನ ಆದರ್ಶಗಳ ಮೇಲೆ ನಿಂತಿದೆ. ಆದರ್ಶ ಚರಿತ್ರೆಯ 'ಸಿಮೆಂಟ್' ನಿಂದ ಚಿರಂಜೀವಿಯತೆಯನ್ನು ಪಡೆಯುತ್ತದೆ. ಅಪರಿಚಿತ ಭೌತಿಕ ವಿಭೂತಿಗಳಿದ್ದರೂ, ಯಾವ ಉನ್ನತ ಆಧ್ಯಾತ್ಮಿಕ ಲಕ್ಷ್ಯಗಳಿಲ್ಲದೆ ಹೋದರೆ ಆ ಸಮಾಜವು ಜೀವವಿಲ್ಲದ ಸುಂದರ ಶರೀರಕ್ಕೆ ಸಮಾನ. ಶರೀರದ ಕುರೂಪತೆ ಅದರಲ್ಲಿನ ಉನ್ನತ ಆತ್ಮನಿಂದಾಗಿ ಮರೆಯಾಗಿ ಹೋಗುವಂತೆಯೇ ಸಮಾಜ–ಶರೀರದ ಕೊರತೆಗಳು ಅದರ ಆಧ್ಯಾತ್ಮಿಕ ಸೌಂದರ್ಯದಿಂದ ಪರಾಭವಗೊಳಿಸಲ್ಪಡುತ್ತವೆ ಈ ಆಧ್ಯಾತ್ಮಿಕ ವಿಭೂತಿಯು ಸಮಾಜದ ಪಾರ್ಥಿವ ರಚನೆಯ ಮೇಲೆ ನವಜೀವನದ ವಜ್ರಲೇಪವನ್ನು ಮಾಡುತ್ತದೆ. ಈ ಆಧ್ಯಾತ್ಮ ಸಂಪತ್ತಿಯನ್ನು 'ಧರ್ಮ'ವೆಂಬ ಹೆಸರಿನಿಂದ ಕರೆಯಲಾಗುತ್ತದೆ. ಆತ್ಮವು ಶರೀರವನ್ನು ಧರಿಸುವಂತೆ, ಮಾನವನನ್ನು ಧರ್ಮವು ಧರಿಸುತ್ತದೆ. 'ಧಾರಣಾದ್ ಧರ್ಮಮಿತ್ಯಾಹುಃ' ಅದರಿಂದಾಗಿ ಇದನ್ನು ಧರ್ಮವೆಂದು ಕರೆಯಲಾಗುತ್ತದೆ. ಧಾರಣ ಮಾಡುವ ಕ್ರಿಯೆಯನ್ನೇ ಚಾರಿತ್ರ್ಯವೆಂದು ಕರೆಯಲಾಗುತ್ತದೆ. ಆದುದರಿಂದ ಚಾರಿತ್ರ್ಯವೇ ಧರ್ಮವಾಗಿದೆ. 'ಚಾರಿತ್ತಂ ಖಲುಧಮ್ಮೋ' ಶಾಸ್ತ್ರಕಾರರು ಧರ್ಮದ ಸ್ವರೂಪವನ್ನು ವಿವರಿಸುತ್ತ ಚಾರಿತ್ರ್ಯದರ್ಪಣದಲ್ಲಿ ಧರ್ಮಮುಖವನ್ನು ಕಂಡಿದ್ದಾರೆ. ನಿರ್ಗ್ರಂಥ ಮುನಿಗಳು ತೀರ್ಥಂಕರ ಪರಮದೇವರ ಚಾರಿತ್ರ ಪಾಲನೆಯನ್ನು ಮಾಡುತ್ತಾರೆ. ಇಪ್ಪತ್ತೆಂಟು ಮೂಲ ಗುಣಗಳ ಪಾಲನೆಯನ್ನು ಮಾಡುವ ಅವರು ಸಾಕ್ಷಾತ್ ಧರ್ಮಸ್ವರೂಪರಾಗಿದ್ದಾರೆ. ಸಮಾಜದ ಉನ್ನತ ಆದರ್ಶಗಳು ಮುನಿಗಳ ಚಾರಿತ್ರದಲ್ಲಿ ಸಮಾಹಿತವಾಗಿರುತ್ತವೆ. ಅವರು ಸ್ವತಃ ಚಾರಿತ್ರ್ಯದ ಆಚರಣೆಯನ್ನು ಮಾಡುತ್ತಾರೆ ಹಾಗೂ ಸಂಘದಿಂದಲೂ ಅಂಥ ಆಚರಣೆಯನ್ನು ಮಾಡಿಸುತ್ತಾರೆ. ಆದುದರಿಂದ ಸಮ್ಯಕ್ ಉಪದೇಶ ನೀಡುವವರಾದುದರಿಂದ ಅವರನ್ನು ಗುರುಗಳೆಂದು ಮನ್ನಿಸಲಾಗುತ್ತದೆ. ಶಾಸ್ತ್ರಗಳ ಮಾನ್ಯತೆಯ ಮೇರೆಗೆ ನಿರ್ಗ್ರಂಥ ದಿಗಂಬರ ಮುನಿಗಳೇ ವಾಸ್ತವಿಕ ಗುರುಗಳಾಗಿದ್ದಾರೆ 'ಪಂಚವಿ ಗುರುವೆ' ಪಂಚಪರಮೇಷ್ಠಿಗಳೇ ಗುರುಗಳಾಗಿದ್ದಾರೆ ಎಂದು ಆಚಾರ್ಯ ಕುಂದಕುಂದರು ಹೇಳಿದ್ದಾರೆ. ಈ ಗುರುಗಳು ಪ್ರತ್ಯಕ್ಷ ರೂಪದಲ್ಲಿ ಜಗತ್ತಿನಲ್ಲಿ ವಿಚಾರಣೆ ಮಾಡತಕ್ಕ 'ಸಾಧು'ಗಳಾಗಿದ್ದಾರೆ. ಅವರು ತಮ್ಮ ಸಮ್ಯಕ್ತ್ವ ಶುದ್ಧ ಆಚರಣೆಯಿಂದ ನಿರಂತರ ಉಪದೇಶವನ್ನೀಯುತ್ತಾರೆ ಹಾಗೂ ಮಿಥ್ಯಾತ್ವ

ವನ್ನು ಪರಿಹರಿಸುತ್ತಾರೆ. 'ಮೋಕ್ಷಮಾರ್ಗ ಪ್ರಕಾಶ'ದಲ್ಲಿ ಪಂಡಿತ ಪ್ರವರ ಶ್ರೀ ತೋಡರ ಮಲ್ಲರು 'ಗುರು'ವಿನ ವಿಷಯದಲ್ಲಿ ಒಂದು ಮಹತ್ವಪೂರ್ಣ ಸೂಕ್ತಿಯನ್ನು ಹೇಳಿದ್ದಾರೆ. ನಿರ್ಗ್ರಂಥ ದಿಗಂಬರ ಮುನಿಗಳನ್ನು ಹೊರತುಪಡಿಸಿ ಬೇರೆ ಯಾರನ್ನೋ ಗುರುವೆಂದು ಮನ್ನಿಸುವುದರಿಂದ ಎಂಥ ಹಾನಿಯಾಗುತ್ತದೆ? 'ಹಂಸ'ವನ್ನು ಮಾತ್ರ ಹಂಸವೆಂದು ಕರೆಯಲಾಗುತ್ತದೆ. ಯಾವುದಾದರೊಂದು ಸರೋವರದಲ್ಲಿ ಹಂಸವು ಕಾಣದಿದ್ದರೆ ಬಕಪಕ್ಷಿಯನ್ನು ಹಂಸವೆಂದು ಒಪ್ಪಿಕೊಳ್ಳಲು ಸಾಧ್ಯವೇ? ಆದುದರಿಂದ ಬಾಹ್ಯಾಭ್ಯಂತರ ಪರಿಗ್ರಹರಹಿತ ನಿರ್ಗ್ರಂಥ ಮುನಿಗಳನ್ನೇ ಮುನಿಯೆಂದು ಮನ್ನಿಸುವುದೆಂದು ಪಂಡಿತಜಿಯವರ ಅಭಿಮತವಾಗಿದೆ. ಅವರು ಸಾಧು ಜನರಲ್ಲಿ ಉತ್ತಮರಾದುದರಿಂದ ಶರಣು ಹೋಗಲು ಯೋಗ್ಯರಾಗಿದ್ದಾರೆ. ಸಮ್ಯಕ್ ಮಾರ್ಗದ ಆಚರಣೆಯಲ್ಲಿ ಸಾವಧಾನರಾದುದರಿಂದ ಗುರುಗಳಾಗಿದ್ದಾರೆ; ಉಪದೇಶ ನೀಡುವವರಾಗಿದ್ದಾರೆ.

> ಉಪಸ್ಯಾ ಗುರುವೊ ನಿತ್ಯಮಪ್ರಮತ್ತೈಃ ಶಿವಾಥಿಭಿಃ
> ತತ್ಪಕ್ಷ ತಾತ್ಪರ್ಯ ಪಕ್ಷಾಂತಶ್ಚರಾ ವಿಘ್ನೋರಗೋತ್ತರಾಃ ॥ ೨ : ೪೫ ॥

ಎಂದು ಪಂಡಿತ ಆರಾಧಕರು 'ಸಾಗರ ಧರ್ಮಾಮೃತ'ದಲ್ಲಿ ಬರೆದಿದ್ದಾರೆ.

ತಮ್ಮ ಕಲ್ಯಾಣದ ಅಭಿಲಾಷೆಯನ್ನಿರಿಸಿಕೊಂಡ ಮುಮುಕ್ಷುಗಳು ನಿತ್ಯವೂ ಗುರುಗಳ ಉಪಾಸನೆಯನ್ನು ಮಾಡಬೇಕು. ಗುರುಸೇವೆಯಲ್ಲಿ ಯಾವ ಪ್ರಕಾರದ ಪ್ರಮಾದವನ್ನೂ ಮಾಡಕೂಡದು. ಗುರುರೂಪಿ ಗರುಡ ರೆಕ್ಕೆಗಳ ಆಶ್ರಯದಲ್ಲಿ ನಡೆಯುವವರಿಗೆ ವಿಘ್ನರೂಪ ಸರ್ಪವು ಎಂದೂ ಬಾಧೆಯನ್ನುಂಟು ಮಾಡಲಾರದು. ಗುರುವಿನ ಭಕ್ತಿಯಲ್ಲಿ ಯಾವುದೇ ಪ್ರಕಾರದ ಮೋಸ, ವಂಚನೆ, ಛಲ ಅಥವಾ ಕುಟಿಲ ಭಾವವನ್ನು ಇಡಕೂಡದು. ವಿನಯಪೂರ್ವಕವಾಗಿ ಗುರುವಿನ ಮನವನ್ನು ತನ್ನೆಡೆಗೆ ಸೆಳೆದುಕೊಳ್ಳುವುದು ಧಾರ್ಮಿಕ ಶಿಷ್ಯನ ಆವಶ್ಯಕ ಕರ್ತವ್ಯವಾಗಿದೆ.

ಭಾಗ್ಯಶಾಲಿಯಾದವನಿಗೆ ಸಮ್ಯಕ್ ಧರ್ಮ ಪ್ರಾಪ್ತವಾಗುತ್ತದೆ. ಇದು ಅವನ ಪ್ರತ್ಯಕ್ಷ ಸಂಪತ್ತಾಗಿದೆ. ಸಾಧುಗಳ ಸಹವಾಸ ಹಾಗೂ ಸದ್ಗುರುಗಳ ಬಿನ್ನಹದ ಸೌಭಾಗ್ಯ, ಶೀಲದ ನಿರ್ಮಲತೆಯು ಎಲ್ಲರಿಗೂ ದುರ್ಲಭವಾಗಿದೆ. ಗುರುವಿನ ಸೇವೆಯ ಅವಕಾಶ ದೊರೆಯುವುದು ಪುಣ್ಯ ಉದಯದ ಸೂಚನೆಯಾಗಿದೆಯೆಂದು ತಿಳಿಯಬೇಕು. ಉಷಃಕಾಲವಿಲ್ಲದೆ ಸೂರ್ಯನ ಉದಯದ ಸಾಧ್ಯತೆಯನ್ನು ತಿಳಿಯಲು ಸಾಧ್ಯ, ಅದರಂತೆ ಕಾಲಲಬ್ಧಿಯಿಲ್ಲದೆ ಶ್ರೇಷ್ಠ ಚಾರಿತ್ರ್ಯವುಳ್ಳ ಗುರುವಿನ ಚರಣಧೂಳಿ ಪಡೆಯುವ ಅವಸರ ದೊರೆಯುವುದು ದುರ್ಲಭ

> ಜೈನೊ ಧರ್ಮಃ ಪ್ರಕಟ ವಿಭವಃ ಸಂಗತಿಃ ಸಾಧುಲೋಕೆ
> ವಿದ್ವದ್‌ಗೋಷ್ಠೀ ವಚನ ಪಟುತಾ ಕೌಶಲಂ ಸತ್ಕ್ರಿಯಾಸು ।
> ಸಾಧ್ವೀ ಲಕ್ಷ್ಮೀಶ್ಚರಣ ಕಮಲೋಪಾಸನಾ ಸದ್‌ಗುರುಣಾಂ
> ಶುದ್ಧಂ ಶೀಲಂ ಮತಿವಿಮಲತಾ ಪ್ರಾಪ್ಯತೆ–ಭಾಗ್ಯವದ್ಭಿಃ॥

ಎಂದು ಓರ್ವ ಸೂಕ್ತಕಾರನು ಹೇಳಿದ್ದಾನೆ.

ಗುರು ಸಂಸ್ಕಾರಗಳ ಪಾಠಶಾಲೆಯಾಗಿದ್ದಾರೆ. ನಿಯಮಿತವಾಗಿ ಪಾಠಶಾಲೆಗೆ ಹೋಗುವವನು ಶಿಕ್ಷಾವಿಶಾರದನಾಗುವಂತೆಯೇ ಸದ್ಗುರುಕುಲದ ಸಹವಾಸಿಯು ತನ್ನ ಕರ್ಮ ನಿರ್ಜರೆಯ ಅಧ್ಯಾಯಗಳನ್ನು ಸಮ್ಯಕ್ ರೀತಿಯಿಂದ ತಿಳಿದುಕೊಂಡು ಆ ಮಾರ್ಗದಲ್ಲಿ ಮುನ್ನಡೆಯಲು ಪ್ರವೃತ್ತನಾಗುತ್ತಾನೆ. ಗುರುವನ್ನು ಅನುಸರಿಸಿ ನಡೆಯುವುದು ಶಿಷ್ಟಾಚಾರವಾಗಿದೆ. ಅದಲ್ಲದೆ ಹಾಗೆ ಮಾಡುವುದರಿಂದ ಆದರ್ಶಗತ ಪ್ರಾಯೋಗಿಕ ಅನುಷ್ಠಾನದ ಅವಸರ ದೊರೆಯುವುದೆಂಬುದು ಮಹತ್ವದ ಅಂಶ. ನಮಗಿಂತ ಅಧಮರಾದವರೊಂದಿಗೆ ಸಂಪರ್ಕವಿರಿಸಿಕೊಳ್ಳುವುದರಿಂದ ಬುದ್ಧಿ ಹೀನತೆ ಉಂಟಾಗುತ್ತದೆ. ಸಮಾನರೊಂದಿಗೆ ಇರುವುದರಿಂದ ಬುದ್ಧಿ ಸಮಾನವಾಗಿ ಉಳಿಯುತ್ತದೆ. ಆದರೆ ವಿಶಿಷ್ಟರಾದವರೊಂದಿಗೆ ಇರುವುದರಿಂದ ಬುದ್ಧಿಯಲ್ಲಿ ವಿಶಿಷ್ಟತೆ ಕಾಣಿಸಿಕೊಳ್ಳುತ್ತದೆ. ಇಂಥ ವಿಶಿಷ್ಟತೆಯ ಅಧಿಕಾರಿ ಗುರುವೇ ಆಗಿರುತ್ತಾನೆ ಅವರ ಸಹವಾಸದಿಂದ ಮನಸ್ಸು ಹಾಗೂ ಬುದ್ಧಿಯಲ್ಲಿ ಉತ್ಕೃಷ್ಟತೆಯುಂಟಾಗುತ್ತದೆ. ಈ ಉತ್ಕೃಷ್ಟತೆ ಆತ್ಮಹಿತಕ್ಕೆ ಪ್ರೇರಣೆ ನೀಡುತ್ತದೆ. 'ಬುದ್ಧೇಃ ಫಲಂ ಆತ್ಮಹಿತ ಪ್ರವೃತ್ತಿಃ' ಆತ್ಮಹಿತವೇ ಸರ್ವಶ್ರೇಷ್ಠ ಪ್ರಾಪ್ಯ ವಸ್ತುವಾಗಿದೆ. ಆತ್ಮ ಹಿತದ ಮಾರ್ಗವನ್ನು ತಿಳಿದವರು ಎಲ್ಲವನ್ನೂ ತಿಳಿದುಕೊಂಡಂತೆ ಜೈನ ಸಮಾಜವನ್ನು ಜಾಗೃತಗೊಳಿಸಿದ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರು ಮತ್ತು ಪೂಜ್ಯ ಗಣೇಶ ಪ್ರಸಾದ ವರ್ಣಿಜಿಯವರು ಈ ಯುಗದಲ್ಲಿ ಆದರ್ಶ ಗುರುಗಳಾಗಿ ಹೋಗಿದ್ದಾರೆ. ಚರಿತ್ರೆಯಲ್ಲಿ ಇವರ ಹೆಸರುಗಳು ಸುವರ್ಣಾಕ್ಷರಗಳಿಂದ ನಮೂದಿಸತಕ್ಕವುಗಳಾಗಿವೆ. 'ಗುರುಪದ'ವು ಪ್ರತಿಯೊಂದು ಪ್ರತಿಷ್ಠಿತ ಸಾಧು ಸಮಾಜದ ನೈತಿಕ ಮತ್ತು ಧಾರ್ಮಿಕ ಪಾತಳಿಯನ್ನು ಕಾಯ್ದುಕೊಂಡು, ಅದನ್ನು ಉನ್ನತಗೊಳಿಸುವ ಕಾರ್ಯದಲ್ಲಿ ತತ್ಪರರಾದುದಾದರೆ ಅದು ಜನಕಲ್ಯಾಣದ ಕಾರ್ಯದಲ್ಲಿ ಬಲು ದೊಡ್ಡ ಸಫಲತೆಯನ್ನು ಪಡೆಯುತ್ತದೆ. ದಾರಿಯಲ್ಲಿ ನಡೆಯುವಾಗ ಮುಂದೆ ನೋಡದೆ ಹೋದರೆ ಕೆಲಮಟ್ಟಿಗೆ ತೊಂದರೆಯನ್ನೆದುರಿಸಬೇಕಾಗುತ್ತದೆ. ಆದರೆ ಪೂರ್ವಾಚಾರ್ಯರು ಹೇಳಿಕೊಟ್ಟ, ಸ್ವಲ್ಪ ಮಟ್ಟಿಗಿನ ಆಧ್ಯಾತ್ಮಿಕ ಸಾವಧಾನತೆಯ ಮಾರ್ಗವನ್ನು ಅನುಸರಿಸಿ ಯಶಸ್ವಿಯಾಗುವುದು ಸುಲಭವಾಗಿದೆ. ಈ ಹೊಣೆಗಾರಿಕೆ ಗುರುಗಳ ಮೇಲಿದೆ; ಹಾಗೂ ಇಂಥ ಉತ್ತಮ ಗುರುಗಳ ಪರಂಪರೆಯು ಈ ಕಲಿಯುಗದಲ್ಲಿಯೂ ಮುಂದುವರಿದುಕೊಂಡು ಹೋಗಬೇಕಾದುದರ ಹೊಣೆಗಾರಿಕೆ ಶ್ರಾವಕರ ಮೇಲಿದೆ. ಸಮ್ಯಕ್ತ್ವ ಭಾವವುಳ್ಳ ಗುರುಗಳು ಸಮಾಜದಲ್ಲಿ ಉಪಲಬ್ಧವಾಗದಿದ್ದರೆ ಸಂಸ್ಕಾರದ ಎಲ್ಲ ಪಾಠಶಾಲೆಗಳು ಶೂನ್ಯವಾಗಿ ಹೋಗಿಬಿಡಬಹುದು.

ಜಿನಧರ್ಮ ಜಗದ್‌ಬಂಧುಮನುಬದ್ಧುಮಪತ್ಯವತ್
ಯತೀನ್ ಜನಯಿತುಂ ಯಸ್ಯೇತ್ತಥೋತ್ಕರ್ಷಯಿತುಂ ಗುಣೈಃ॥

ಎಂದು ಪಂಡಿತ ಆಶಾಧಾರಸೂರಿಯವರು ಸಮಾಜಕ್ಕೆ ಎಚ್ಚರಿಕೆ ನೀಡಿದ್ದಾರೆ.

ಜನ ತಮ್ಮ ವಂಶ-ಪರಂಪರೆಯನ್ನು ಮುಂದುವರಿಸಿಕೊಂಡು ಬರುವಲ್ಲಿ ತುಂಬ ಆಸಕ್ತಿ ವಹಿಸುತ್ತಾರೆ. ತಮ್ಮ ಸ್ವಂತ ಸಂತಾನವಿರದಿದ್ದರೆ ದತ್ತಕ್ಕ ಮಗನನ್ನು

ಪಡೆದು ವಂಶರಕ್ಷಣೆ ಮಾಡುತ್ತಾರೆ. ಹಾಗಾದರೆ ಇದರಂತೆಯೇ ವಿಶ್ವಬಂಧು, ಜಗತ್ತಿನ ಸರ್ವಜೀವಿಗಳಿಗೂ ಉಪಕಾರವಾದ ಜೈನಧರ್ಮದ ಪರಂಪರೆಯನ್ನು ಮುಂದುವರಿಸಲು ಶ್ರುತಜ್ಞಾನಾದಿಯುಳ್ಳ ಶ್ರೇಷ್ಠ ಹೊಸ ಯತಿಗಳನ್ನು ನಿರ್ಮಿಸಲು ಪ್ರಯತ್ನ ಮಾಡಬೇಕಾಗಿಲ್ಲವೆ? ಅವಶ್ಯ ಮಾಡಬೇಕು! ಹೀಗೆ ಮಾಡುವುದರಲ್ಲಿ ಆವನಿಗೆ ಸ್ವಂತದ ಹಿತವಿದೆ. ಕತ್ತಲಾದ ಮೇಲೆ ಜನ ತಮ್ಮ ತಮ್ಮ ಮನೆಗಳಲ್ಲಿ ದೀಪಗಳನ್ನು ಹಚ್ಚುತ್ತಾರೆ. ನದಿಯ ಪ್ರವಾಹವನ್ನು ದಾಟಲು ಕೈಯಲ್ಲಿ ಹಲಗೆಯನ್ನು ಹಿಡಿದು ನೀರು ಸರಿಸುತ್ತ ಸಾಗುತ್ತಾರೆ. ಆಗ ದೀಪ ಅಥವಾ ಹಲಗೆಯ ಮೇಲೆ ಅವರು ಕೃಪೆದೋರುವುದಿಲ್ಲ. ತಮ್ಮ ರಕ್ಷಣೆಯನ್ನೇ ಮಾಡಿಕೊಳ್ಳುತ್ತಾರೆ. ಗುರುಪರಂಪರೆಯನ್ನು ಸಜೀವವಿರಿಸಿಕೊಳ್ಳುವಲ್ಲಿ ಸಮಾಜವೂ ಸಹ ತನ್ನ ಮಾರ್ಗದರ್ಶಕ ಜ್ಯೋತಿಸ್ತಂಭಗಳ ಲಾಭವನ್ನು ಪಡೆಯುತ್ತದೆ. ಪವಿತ್ರ ಜೀವನ, ವ್ರತ, ನಿಯಮ, ಪುಣ್ಯಮಾರ್ಗ ಹಾಗೂ ನಾಶವಾಗದ ಒಳ್ಳೆಯತನಗಳ ನಿರ್ದೇಶವನ್ನು ಆ ಗುರುಗಳು ಸಮಾಜಕ್ಕೆ ನೀಡುತ್ತಾರೆ; ಹಾಗೂ ಶಿಥಿಲಾಚಾರ, ಪತನದಿಂದ ರಕ್ಷಿಸುತ್ತಾರೆ. 'ಬಡಾ ವಿಕಟ ಯಮಘಾಟ ಗುರುವಿನ ಕೌನ ಬಚಾವೆ ವಾಟ' ಎಂದು ಯಾವನೋ ಒಬ್ಬ ಕವಿ ಸರಿಯಾಗಿಯೇ ಹೇಳಿದ್ದಾನೆ. ಈ ಸಂಸಾರವೆಂಬುದು ಯಮಘಾಟವಾಗಿದೆ. ಜನನ–ಮರಣಗಳ ಸಾಲು ಸಾಗಿದೆ. ಜನ್ಮಮೃತ್ಯುಜರಾತೀತ ಮಾರ್ಗವನ್ನು ಗುರುವಲ್ಲದೆ ಬೇರಾರು ಹೇಳಲು ಸಾಧ್ಯ? 'ಅಜಾತಾ ನೈವ ಗೃಹಣಾತಿ ಕುರು ಯತ್ರಮಜನ್ಮನಿ' (ಯಮನು ಅಜನ್ಮರನ್ನು ಆವರಿಸುವುದಿಲ್ಲ). ಆದ್ದರಿಂದ ಮತ್ತೆ ಪುನರ್ಭವವಾಗದಂತೆ ಪ್ರಯತ್ನ ಶೀಲನಾಗು ಎಂಬ ಉಪದೇಶವನ್ನು ಗುರುವಿನ ಹೊರತಾಗಿ ಬೇರಾರು ಕೊಡಬಹುದು? 'ನ ಶಿಲಾ ತಾರಯೇತ್ ಶಿಲಾಮ್'–ಕಲ್ಲು ಸ್ವತಃ ನೀರಲ್ಲಿ ಮುಳುಗುವುದರಿಂದ ಅದು ಬೇರೆಯದನ್ನು ಹೇಗೆ ತೇಲಿಸಲು ಸಮರ್ಥವಾದೀತು? 'ಛಿನ್ನ ಹಸ್ತೋ ವಿಹಸ್ತಸ್ಯ ಕಥಂ ಬಂದಾತು ಕಂಕಣಮ್'–ಕೈ ಕಡಿದು ಹೋದವ ಕೈಯಿಲ್ಲದವರಿಗೆ ಮಂಗಲಸೂತ್ರವನ್ನು ಕಟ್ಟಲು ಹೇಗೆ ಸಾಧ್ಯ? ಸಂಸಾರಿ ಜೀವಿಗಳು ತಾವೇ ಭವಗಳಿಂದ ಕೂಡಿದ ಚಕ್ರದಲ್ಲಿ ಸುತ್ತುತ್ತಿರುವಾಗ, ಮುಳುಗುತ್ತಿರುವ ಬೇರೆಯವರನ್ನು ಹೇಗೆ ದಂಡೆಗೆ ತರಲು ಸಾಧ್ಯ? ಅದಕ್ಕಾಗಿಯೇ—

> ರತ್ನತ್ರಯ ವಿಶುದ್ಧಃ ಸನ್ ಪಾತ್ರಸ್ನೇಹಿ ಪರಾರ್ಥಕೃತ್
> ಪರಿಪಾಲಿತ ಧರ್ಮಾ ಹಿ ಭವಾಬ್ಧಿಸ್ತಾರಕೋ ಗುರುಃ ॥

ರತ್ನತ್ರಯಗಳಿಂದ ವಿಶುದ್ಧ, ಸತ್ಪಾತ್ರರಲ್ಲಿ ಸ್ನೇಹವುಳ್ಳ ಹಾಗೂ ಲೋಕಕಲ್ಯಾಣ ಮಾಡತಕ್ಕ ಗುರುವೇ ಭವಸಮುದ್ರದಿಂದ ಪಾರು ಮಾಡತಕ್ಕವನಾಗಿದ್ದಾನೆ. ಧರ್ಮವು ಚಾರಿತ್ರ್ಯವಾಗಿದೆ ಹಾಗೂ ಮುನಿಯು ಚಾರಿತ್ರ್ಯವನ್ನು ಪರಿಪಾಲಿಸತಕ್ಕವರಾಗಿದ್ದಾರೆ. ಆದುದರಿಂದ ಭವಸಾಗರದಿಂದ ಪಾರು ಮಾಡತಕ್ಕ ದಿಗಂಬರ ಮುನಿಯೇ ಗುರುವಾಗಿದ್ದಾರೆ.

ಇಂಥ ಗುರುವಿನ ಶುಭಾಗಮನ ಯಾವ ಭೂಪ್ರದೇಶದ ಮೇಲೆ ಆಗುವುದೋ ಆ ಪ್ರದೇಶದ ಜನರ ಪುಣ್ಯದ ವರ್ಣನೆ ಮಾಡಲು ಯಾರಿಗೆ ಸಾಧ್ಯ?

'ಸಾಧುಸಂತರು ಬರುವ ಮನೆಯಲಿ
ಅಂದೇ ದೀಪಾವಳಿ ದಸರಾ'

(ಸಾಧು ಸಂತ ಏಟಿ ಘರಾ । ತೋಟಿ ದಿವಾಲಿ ದಸರಾ) ಎಂದು ಓರ್ವ ಮರಾಠಿ ಕವಿ ಹೇಳಿದ್ದಾನೆ. ದಸರಾ-ದೀಪಾವಳಿ ಎರಡು ಹಬ್ಬಗಳ ಮಧ್ಯೆ ಕೆಲ ದಿನಗಳ ಅಂತರವಿರುತ್ತದೆ. ಆದರೆ ಸಾಧುಗಳು ಯಾರ ಮನೆಗೆ ಬರುವರೋ ಅವರಲ್ಲಿ ಆಗ ಇವೆರಡೂ ಹಬ್ಬಗಳು ತಮ್ಮ ಮಧ್ಯದ ಅಂತರವನ್ನು ತೊರೆದು ಏಕಕಾಲಕ್ಕೆ ಪ್ರತ್ಯಕ್ಷವಾಗಿ ಅಧಿಕ ಸಂತೋಷವನ್ನೀಯುತ್ತವೆ. ಮರಾಠಿ ಭಾಷೆಯ ಈ ಕವಿಯ ಆಶಯಕ್ಕೆ ಹೊಂದಿಕೆಯಾಗುವ ಒಂದು ಸಂಸ್ಕೃತ ಶ್ಲೋಕ ಈ ರೀತಿ ಇದೆ :

ಪದ್ಮಿನೀ ರಾಜಹಂಸಾಶ್ಚ ನಿರ್ಗ್ರಂಥಶ್ಚ ತಪೋಧನಾ
ಯಂ ದೇಶಮುಪಸರ್ಪಂತಿ ಸುಭಿಕ್ಷಂ ನಿದಿಶೇತ್ ॥

—ಸೋಮದೇವಸೂರಿ

ಪದ್ಮಿನಿ ಸ್ತ್ರೀ, ರಾಜಹಂಸಪಕ್ಷಿ ಮತ್ತು ನಿರ್ಗ್ರಂಥ ದಿಗಂಬರ ಮುನಿಗಳು ವಿಹಾರ ಮಾಡುವ ಪ್ರದೇಶಗಳು ಸುಭಿಕ್ಷೆಯನ್ನು ನಿರ್ದೇಶಿಸುತ್ತವೆ. ಸೋಮದೇವಸೂರಿಯ ಈ ಉಕ್ತಿಯು ಕೇವಲ ವಾಣಿಯ ರೋಚಕತೆ ಮಾತ್ರವಾಗಿರದೆ ಅನುಭೂತಿಯ ಸ್ಪರ್ಶವೂ ಇದರಲ್ಲಿದೆ.

ಜಗತ್ತಿನಲ್ಲಿ ಪುಣ್ಯ ಮತ್ತು ಪಾಪಗಳು ಭಾವನಾತ್ಮಕ ಉಪಸ್ಥಿತಿಯನ್ನು ಸಂಕೇತಿಸುತ್ತಿವೆ. ಆದ್ರಾರ್ ನಕ್ಷತ್ರದ ಸೂರ್ಯನು ಮಳೆಗೆ ಕಾರಣನಾಗುವಂತೆ ಈ ಜಗತ್ತಿನಲ್ಲಿ ಪಾಪ-ಪುಣ್ಯ-ಹೇತು ಅನುಬಂಧಗಳಿಂದಾಗಿ ಅಸತ್ ಮತ್ತು ಸತ್, ಸುಭಿಕ್ಷೆ-ದುರ್ಭಿಕ್ಷೆಗಳ ಸಂಭವನೀಯತೆ ಅವಶ್ಯವಾಗುತ್ತದೆ. ಸೂರ್ಯೋದಯವು ಅಂಧಕಾರವನ್ನು ನಾಶಗೊಳಿಸುವ ಘೋಷಣೆಯಾಗಿದೆ. ಹಾಗೆಯೇ ದಿಗಂಬರ ಜೈನ ಮುನಿಯ ವಿಹಾರವು ಸುಖ-ಸುಭಿಕ್ಷೆ ಹಾಗೂ ಪ್ರಜೆಗಳ ಕಲ್ಯಾಣದ ಸಂಕೇತವಾಗಿರುತ್ತದೆ. ಈ ಪಿಂಛಿ ಕಮಂಡಲಧಾರಿ, ಜಿನೇಂದ್ರ ಮುದ್ರಾಂಕಿತ, ಅಷ್ಟವಿಂಶತಿ ಮೂಲ ಗುಣಪಾಲಕ, ಚಾರಿತ್ರ್ಯನಿಷ್ಠ, ಮಹಾವ್ರತಿ, ಸಂಯಮಸ್ವಾಧ್ಯಾಯ ಪರಾಯಣ, ನಿರ್ಗ್ರಂಥ, ನಿಷ್ಪರಿಗ್ರಹ ಮುನಿಯು ನಿವೃತ್ತಿಮಾರ್ಗದ ಸದೇಹಪ್ರತೀಕವಾಗಿದ್ದಾರೆ. ಅಪರಿಮಿತ ಭೌತಿಕತೆಯ ಕೆಸರಿನಿಂದ ಜಿಡ್ಡಾದ ಜಿನಸರೋವರದಲ್ಲಿ ಕಮಲದಂತೆ ನಿರ್ಲೇಪ, ಕೆಸರಿನಿಂದ ಮೇಲೆ ಬಂದ, ಆತ್ಮ ಪ್ರದೇಶದ ಏಕಾಂತಗುಹೆಯಲ್ಲಿ ರಮಿಸುವ ಇವರ ದರ್ಶನ ಮಾತ್ರದಿಂದ ಕರ್ಮನಿರ್ಜರೆಯಾಗುತ್ತದೆ ಇಂಥ ಚಾರಿತ್ರ್ಯದ ಸ್ವರೂಪವನ್ನು, ಇವರ ಮಹಿಮೆಯನ್ನು ವರ್ಣಿಸಲು ಯಾರು ಸಮರ್ಥರು ?

ಗುರುವಃ ಪಾಂತು ವೊ ನಿತ್ಯಂ ಜ್ಞಾನದರ್ಶನ ನಾಯಕಾಃ
ಚಾರಿತ್ರಾರ್ಣವ ಗಂಭೀರಾ ಮೋಕ್ಷಮಾರ್ಗೋಪದೇಶಕಾಃ ॥

ಕವಿಗಳ ಭಾವೋಚ್ಛ್ವಾಸ ಕೇವಲ ಇಷ್ಟು ಮಾತ್ರವನ್ನು ಹೇಳಲು ಸಮರ್ಥವಾಗುತ್ತದೆ. ಸಮ್ಯಕ್ ದರ್ಶನ ಜ್ಞಾನಗಳ ನಾಯಕ, ಚಾರಿತ್ರ್ಯ ಸರೋವರ ಹಾಗೂ ಮೋಕ್ಷ ಮಾರ್ಗದ ಉಪದೇಶಕ ಗುರು. ನಿತ್ಯ ನಮ್ಮ (ನಿಮ್ಮ) ರಕ್ಷಣೆಯನ್ನು ಮಾಡಲಿ.

ವಾಸ್ತವವಾಗಿ ಈ ಘೋರ ಸಂಸಾರದಲ್ಲಿ ಗುರು 'ಹಡಗಿ'ನಂತಿದ್ದಾರೆ. ಅವರ ತ್ಯಾಗ ವಿಷಯದ ನಿರೂಪಣೆ ಮಾಡುತ್ತ ಕವಿಭೂದರದಾಸರು-'ಸಂಸಾರ ಬಾಳೆ ಗಿಡವಾಗಿದೆ. ತ್ಯಾಗಿಗಳು ಇದನ್ನು ಬಲ್ಲರು' ಎಂದಿದ್ದಾರೆ. ಅವರು ಸಂಸಾರದ ಅಸಾರತೆಯನ್ನು ತಿಳಿದುಕೊಂಡಿದ್ದಾರೆ ಹಾಗೂ ಸದಾ ಕಾಲಕ್ಕೂ ಇದರ ತ್ಯಾಗವನ್ನು ಮಾಡಿದ್ದಾರೆ. ಬಾಳೆಯ ಗಿಡವು ಸಂಸಾರದ ಅಸಾರತೆಯ ಸಂಕೇತವಾಗಿದೆ. ಇದರ ತೊಗಟೆಯನ್ನು ಸುಲಿಯುತ್ತ ಹೋದಂತೆ, ಒಂದು ಪದರಿನ ತರುವಾಯ ಇನ್ನೊಂದು ಪದರನ್ನು ಸುಲಿಯುತ್ತ ಹೋದಂತೆ ಕೊನೆಯಲ್ಲಿ ಏನೂ ಸಿಗುವುದಿಲ್ಲ. ಕೇವಲ ಪದರಗಳ ಥರ ವನ್ನು ಸುತ್ತಿಕೊಂಡು ಬಾಳೆಗಿಡ ನಿಂತಿರುವಂತೆ, ನಶ್ವರ ವಿಷಯಗಳಆವರಣಗಳಿಂದ ಮಾನವ ತನ್ನ ತುಚ್ಛ ಜೀವನದ ಸಮ್ರಾಟನೆಂದು ತಿಳಿಯುತ್ತಾನೆ. ಅವನು ತನ್ನ ಭೌತಿಕ ವಿಪುಲತೆಯ ಕೆಳಗೆ ಚೂರು ಚೂರಾಗಿ ಆತ್ಮಧರ್ಮದ, ಯಾರೂ ಕದಿಯ ಲಾರದ ಸಂಪತ್ತಿನಿಂದ ವಂಚಿತನಾಗುವ ಪೂರ್ವದಲ್ಲಿಯೇ ನಿರ್ಮಲ ಚಾರಿತ್ರ್ಯವುಳ್ಳ ಮುನಿಗಳಿಂದ ಪುಣ್ಯ ಪ್ರಾಪ್ತವಾಗುವ ಸತ್ಸಂಗದ ಮಾರ್ಗದರ್ಶನವನ್ನು ಪಡೆಯು ತ್ತಿರಬೇಕು ಹಾಗೂ ಭೌತಿಕ ಸಂಪತ್ತಿಗಿಂತಲೂ ಉತ್ಕೃಷ್ಟವಾದ ಈ ಆಧ್ಯಾತ್ಮಿಕ ಸಂಪತ್ತಿನ ರಕ್ಷಕರ ಪರಂಪರೆಯು ಸದಾಕಾಲ ಉಳಿಯುವಂತೆ ನೋಡಿಕೊಳ್ಳುವಲ್ಲಿ ತಮ್ಮ ವೈಯ್ಯಾವೃತ್ಯದ ಸಹಕಾರವನ್ನು ನೀಡಬೇಕು. ಇದು ಅವನ ಕಲ್ಯಾಣದ ಸೇತುವಾಗಿದೆ. ಶ್ರೀಗಂಧದ ಗಿಡವು ತನ್ನ ಸಮೀಪದ, ಸುತ್ತಮುತ್ತಲಿನ ಬೇವಿನ ಮರ ವನ್ನೂ ಸಹ ಶ್ರೀಗಂಧದಂತೆ ಮಾಡುವುದರಲ್ಲಿ ಆಶ್ಚರ್ಯವೇನಿದೆ?

ಭಗವಾನ್ ಕುಂದಕುಂದರು

ಜಿ. ಬ್ರಹ್ಮಪ್ಪ

ಜೈನ ಪರಂಪರೆಯಲ್ಲಿ ಭಗವಾನ್ ಕುಂದಕುಂದರನ್ನು ಮಹಾತಪಸ್ವಿಯೆಂದೂ, ಆಚಾರ್ಯರತ್ನರೆಂದೂ, ಆಧ್ಯಾತ್ಮಿಕ ರಸಿಕರೆಂದೂ ಕೊಂಡಾಡಿದೆ.

ಮಂಗಳಂ ಭಗವಾನ್ ವೀರೋ ಮಂಗಳಂ ಗೌತಮೋ ಗಣೀ ।
ಮಂಗಳಂ ಕುಂದಕುಂದಾಚಾರ್ಯೋ ಜೈನ ಧರ್ಮೋಽಸ್ತು ಮಂಗಳಂ ॥

–ಭಗವಾನ್ ಮಹಾವೀರರಿಗೂ ಅವರ ಮುಖವಾಣಿಯಾದ ಗೌತಮಗಣಧರರಿಗೂ, ತೀರ್ಥಂಕರರೂ ಗಣಧರರೂ ಇಲ್ಲದಾಗ ಜೈನಧರ್ಮವನ್ನು ಪರಿಣಾಮಕಾರಿಯಾಗಿ ವಿವರಿಸಿದ ಕುಂದಕುಂದರಿಗೂ ಮತ್ತು ಜೈನಧರ್ಮಕ್ಕೂ ಸಹಸ್ರಾರು ವರ್ಷದಿಂದ ಜಿನಭಕ್ತರು ಮಂಗಳವನ್ನು ಕೋರಿ ಸುಪ್ರಭಾತವನ್ನು ಹಾಡುತ್ತಿರುವರು. ಕುಂದ ಕುಂದರ ಪ್ರಾಮುಖ್ಯತೆಯನ್ನು ಗ್ರಹಿಸಲು ಈ ಶ್ಲೋಕಕ್ಕಿಂತ ಬೇರೆ ಇನ್ನೇನು ಬೇಕು ?

ಕುಂದಕುಂದರು ಚಾರಣಯದ್ಧಿಯಿದ್ದ ಮಹಾ ತಪಸ್ವಿಗಳು. ಆಗಾಗ ವಿದೇಹ ಕ್ಷೇತ್ರಕ್ಕೆ ಹೋಗಿ ಶ್ರೀಮಂದರ ತೀರ್ಥಂಕರರ ದರ್ಶನ ಪಡೆದು* ಇವರು ಆಧ್ಯಾತ್ಮಿಕ ಸಾಹಿತ್ಯವನ್ನು ರಚಿಸಿದ ದ್ರಷ್ಟಾರರು. ಶ್ರಮಣಸಂಘಕ್ಕೆ ಆಚಾರ್ಯರಾಗಿ ಅಹಿಂಸಾ ಧರ್ಮಕ್ಕೆ ಭದ್ರ ಬುನಾದಿ ರಚಿಸಿ, ಭೇದ ವಿಜ್ಞಾನದಿಂದ ಆತ್ಮಾನುಸಂಧಾನವೆಸಗಿ ಕೃತಕೃತ್ಯರಾದರು. ಸಾಧಕರಲ್ಲಿ ಇವರು ಮಹಾಸಾಧಕರು. ಸುಧಾರಕರಲ್ಲಿ ಇವರು ಮಹಾ ಸುಧಾರಕರು. ವಿಜ್ಞಾನಿಗಳಲ್ಲಿ ಕುಂದಕುಂದರು ಆತ್ಮವಿಜ್ಞಾನಿಗಳು.

ಭರತ ಖಂಡದ ಮಹಾಮನುಷರಲ್ಲಿ ಎಷ್ಟು ಜನದ ಜಾತಕಗಳು ನಮಗೆ ದೊರೆತಿವೆ? ಲೋಕದ ಜಾತಕಗಳ ಅರಿಷ್ಟವನ್ನು ನಿವಾರಿಸಲು ಹೆಣಗಾಡಿದ ಈ ಮಹಾಮಹಿಮರ ಜಾತಕಗಳನ್ನಾದರೂ ಲೋಕ ಉಳಿಸಿಕೊಂಡಿದೆಯೆ ?

ಗುಂತಕಲ್ ರೈಲ್ವೆ ನಿಲ್ದಾಣದಿಂದ ದಕ್ಷಿಣಕ್ಕೆ ನಾಲ್ಕು ಮೈಲಿ ದೂರದಲ್ಲಿ ಕೋನಕೊಂಡಲವೆಂಬ ಸ್ಥಳವಿದೆ. ಇದು ಅನಂತಪುರ ಜಿಲ್ಲೆಯ ಗುತ್ತಿ ತಾಲ್ಲೋಕಿನಲ್ಲಿದೆ. ಪ್ರಾಚೀನ ಶಿಲಾಲೇಖಗಳಲ್ಲಿ ಇದನ್ನು ಕೊಂದಕುಂದೆ ಎಂದು ಕರೆದಿರುವರು.

---

* ಮಧ್ಯಮ ಲೋಕದ ನಡುವೆ ಜಂಬೂದ್ವೀಪವಿದೆ. ಈ ದ್ವೀಪದಲ್ಲಿ ಭರತ, ಹೈಮವತ, ಹರಿ, ವಿದೇಹ, ರಮ್ಯಕ, ಹೈರಣ್ಯವತ ಮತ್ತು ಐರಾವತವೆಂಬ ಏಳು ಕ್ಷೇತ್ರಗಳಿವೆ. ವಿದೇಹ ಕ್ಷೇತ್ರದಲ್ಲಿ ಎಲ್ಲಾ ಕಾಲದಲ್ಲೂ ತೀರ್ಥಂಕರರು ಇರುತ್ತಾರೆ. ಉಳಿದ ಕ್ಷೇತ್ರಗಳಲ್ಲಿ ಸದಾ ಕಾಲದಲ್ಲೂ ತೀರ್ಥಂಕರರು ಇರುವುದಿಲ್ಲ.

ಇಲ್ಲಿಯ ಜನ ಈಗಲೂ ಇದನ್ನು ಕೊಂದಕುಂದಿ ಎನ್ನುವರು. ಇಲ್ಲೇ ಕುಂದಕುಂದರು ಜೀವಿಸಿರಬೇಕು ಎಂದು ಪಿ. ಬಿ. ದೇಸಾಯಿಯರು ಊಹಿಸಿರುವರು.

ಪದ್ಮನಂದಿ, ವಕ್ರಗ್ರೀವಾಚಾರ್ಯ, ಗೃದ್ರಪಿಂಛಾಚಾರ್ಯ, ಏಲಾಚಾರ್ಯ ಈ ಹೆಸರುಗಳೂ ಕುಂದಕುಂದರವೇ ಆಗಿವೆ. ಕುಂದಕುಂದರನ್ನು ಕುಮಾರನಂದಿಗಳ ಶಿಷ್ಯರೆಂದು ಪಂಚಾಸ್ತಿಕಾಯದ ಟೀಕಾಕಾರರಾದ ಜಯಸೇನಾಚಾರ್ಯರು ಹೇಳಿರುವರು. § ನಂದಿಸಂಘದ ಪಟ್ಟಾವಳಿಯಲ್ಲಿ ಜಿನಚಂದ್ರರನ್ನು ಕುಂದಕುಂದರ ಗುರುವೆಂದು ಉಲ್ಲೇಖವಿದೆ. ಶ್ರವಣಬೆಳ್ಗೊಳದ ೪೦ನೆಯ ಶಿಲಾಲೇಖದಲ್ಲಿ ಕುಂದಕುಂದರನ್ನು ಶ್ರುತಕೇವಲಿ ಭದ್ರಬಾಹುವಿನ ಪರಂಪರೆಯವರೆಂದು ಹೇಳಿದೆ. ಕುಂದಕುಂದರು ತಮ್ಮ ಸಮಯಸಾರವನ್ನು ಶ್ರುತಕೇವಲಿಗಳಿಂದ ಬಂದುದೆಂದು ಹೇಳಿಕೊಂಡಿರುವರು.*

ಕುಂದಕುಂದರು ಕೇವಲ ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ ಜಿನಚಂದ್ರರ ಶಿಷ್ಯರಾದರು. ತಮ್ಮ ಮೂವತ್ತಮೂರನೆಯ ವಯಸ್ಸಿನಲ್ಲಿ ಇವರು ಆಚಾರ್ಯರಾದರು. ಇವರು ಕ್ರಿ ಪೂ ಒಂದನೆಯ ಶತಮಾನದ ಉತ್ತರಾರ್ಧದಲ್ಲಿ ಜನಿಸಿ ಕ್ರಿ ಶ ದಲ್ಲೂ ಬಾಳಿದಂತೆ ಕಾಣುವುದು.

ಷಟ್‌ಖಂಡಾಗಮ ಮತ್ತು ಕಷಾಯಪ್ರಾಭೃತಗಳನ್ನು ಬಿಟ್ಟರೆ ಜೈನಪರಂಪರೆಯಲ್ಲಿ ಕುಂದಕುಂದರ ಗ್ರಂಥಗಳೇ ಪ್ರಾಚೀನತಮ ಗ್ರಂಥಗಳಾಗಿವೆ ಷಟ್‌ಖಂಡಾಗಮ ಮತ್ತು ಕಷಾಯಪ್ರಾಭೃತದಲ್ಲಿ ಯಾವ ವಿಷಯವನ್ನು ವಿವರಿಸಿಲ್ಲವೋ ಅವನ್ನು ಕುಂದಕುಂದರು ತಮ್ಮ ಪ್ರಾಭೃತಗಳಲ್ಲಿ ವಿವರಿಸಿರುವರು. ಕುಂದಕುಂದರ ಪ್ರಾಭೃತ ತ್ರಯವನ್ನು (ಪಂಚಾಸ್ತಿಕಾಯ, ಪ್ರವಚನಸಾರ ಮತ್ತು ಸಮಯಸಾರ) ಜೈನ ಪ್ರಸ್ಥಾನತ್ರಯವೆಂದು ಕರೆದರೆ ತಪ್ಪಾಗದು. (ಹಿಂದೂ ಧರ್ಮದಲ್ಲಿ ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ ಇವನ್ನು ಪ್ರಸ್ಥಾನತ್ರಯಗಳೆಂದು ಕರೆದಿರುವರು.)

ಸಮಯಸಾರವು ಜೈನದರ್ಶನದ ನವನೀತವಾಗಿದೆ. ಇದನ್ನು ಜೈನರ ಎಲ್ಲ ಪಂಗಡಗಳೂ ಮಾನ್ಯ ಮಾಡಿವೆ. ಕುಂದಕುಂದರ ಗ್ರಂಥಗಳನ್ನು ಪಾಹುಡಗಳೆನ್ನುವರು. ಇವರ ಗ್ರಂಥಗಳು ಗಹನವಾದುವು. ಇವು ಜನಸಾಮಾನ್ಯರಿಗೆ ಅರ್ಥವಾಗುವುದು ಕಷ್ಟ. ಸಮ್ಯಕ್ತ್ವ ಶಿರೋಮಣಿಗಳಾಗಿ ಮೋಕ್ಷಾರ್ಥಿಗಳಾದವರಿಗೆ ಇವರ ಕೃತಿಗಳೆಲ್ಲ ಪಂಚಪ್ರಾಣವಾಗಿವೆ. ಇವರು ೮೪ ಪಾಹುಡಗಳನ್ನು ರಚಿಸಿದ್ದಾರೆಂದು ವದಂತಿ. ಆದರೆ ಎಲ್ಲ ಪಾಹುಡಗಳೂ ನಮಗೆ ದೊರೆತಿಲ್ಲ.

ಕುಂದಕುಂದರ ಪಂಚಾಸ್ತಿಕಾಯ, ಪ್ರವಚನಸಾರ, ನಿಯಮಸಾರ, ಮತ್ತು ಸಮಯಸಾರ ಇವು ವಿಚಾರಪ್ರಧಾನವಾದ ದಾರ್ಶನಿಕ ಗ್ರಂಥಗಳಾಗಿವೆ. ಕಲಿಕಾಲ ಗಣಧರರಾದ ಕುಂದಕುಂದರು ಪರಂಪರಾಗತವಾಗಿ ಬಂದ ಜಿನವಾಣಿಯನ್ನು ತಮ್ಮ

---

§ ಕ್ರಿ ಶ ೧೩ನೆಯ ಶತಮಾನ.

* ವಂದಿತ್ತು ಸವ್ವಸಿದ್ಧೇ ಧುವಮಚಲ ಮಣೋವಮಂಗ ಇಂಪತ್ತೇ ।
ವೋಚ್ಛಾಮಿ ಸಮಯಪಾಹುಡ ಮಿಣಮೋಸುಯ ಕೇವಲೀ ಭಣಿಯಂ ॥
ಸಮಯಸಾರ ೧-೧

ಗ್ರಂಥರಾಶಿಯಲ್ಲಿ ಸಂಗ್ರಹಿಸಿರುವರು. ಇವರ ಸಾಹಿತ್ಯವು ಆತ್ಮರಂಜನೆಯ ಸಾಹಿತ್ಯವಾಗಿದೆ. ಭವರೋಗ ನಿವಾರಣೆಗಾಗಿ ಆಧ್ಯಾತ್ಮಿಕ ಸಂಜೀವಿನಿಯನ್ನು ಆಚಾರ್ಯರು ತಮ್ಮ ಪಾಹುಡಗಳಲ್ಲಿ ತುಂಬಿಟ್ಟಿರುವರು. ಇವರ ಎಲ್ಲ ಕೃತಿಗಳೂ ಪ್ರಾಕೃತದಲ್ಲಿವೆ.

ಕುಂದಕುಂದರ ಗ್ರಂಥಗಳು

೧) **ಪಂಚಾಸ್ತಿಕಾಯ**ದಲ್ಲಿ ೧೬೩ ಗಾಹೆಗಳಿವೆ. ಈ ಗ್ರಂಥಕ್ಕೆ ಅಮೃತಚಂದ್ರರೂ, ಜೈಸೇನರೂ ಟೀಕೆಯನ್ನು ರಚಿಸಿರುವರು. ಇದರಲ್ಲಿ ಜೀವ, ಪುದ್ಗಲ, ಆಕಾಶ, ಧರ್ಮ ಮತ್ತು ಅಧರ್ಮವೆಂಬ ಪಂಚಾಸ್ತಿಕಾಯಗಳನ್ನು ವರ್ಣಿಸಿರುವರು. ಜೊತೆಗೆ ಕಾಲದ್ರವ್ಯ ಮತ್ತು ನವಪದಾರ್ಥಗಳನ್ನೂ ವಿವರಿಸಿದೆ.

೨) **ಪ್ರವಚನಸಾರ :** ಜೈನ ದ್ರವ್ಯಾನುಯೋಗ ಮತ್ತು ಚರಣಾನುಯೋಗಗಳನ್ನು ಈ ಕೃತಿಯಲ್ಲಿ ಆಚಾರ್ಯರು ಸಂಗ್ರಹಿಸಿರುವರು. ವಿಷಯ ವಾಸನೆಯನ್ನು ಈ ಕೃತಿಯಲ್ಲಿ ಹೇಯವೆಂದು ಸಾರಿ, ಅತೀಂದ್ರಿಯ ಜ್ಞಾನ ಮತ್ತು ಇವನ್ನು ಉಪಾದೇಯವೆಂದು ಪ್ರತಿಪಾದಿಸಿರುವರು. ಆತ್ಮದ ಸರ್ವಜ್ಞತ್ವವನ್ನು ಈ ಗ್ರಂಥದಲ್ಲಿ ಸಿದ್ಧಮಾಡಿ ತೋರಿಸಿರುವರು. ಈ ಕೃತಿಯಲ್ಲಿ ೨೭೫ ಗಾಹೆಗಳಿವೆ.

೩) **ಸಮಯಸಾರ :** ಈ ಗ್ರಂಥವನ್ನು ಆಧ್ಯಾತ್ಮಿಕ ವಿಶ್ವರೂಪವೆಂದು ಕರೆಯಬಹುದು. ವೀತರಾಗರಸಿಕನಾದ ಅಮೃತ ಚಂದ್ರಸೂರಿಯು ಸಮಯಸಾರವನ್ನು ನಾಟಕಕ್ಕೆ ಅಳವಡಿಸಿರುವನು. ಸಂಸಾರವು ಒಂದು ರಂಗಮಂಟಪ, ಜೀವಾಜೀವರು ನಟರಾಗಿ ಇದರಲ್ಲಿ ಆಸ್ರವಾದಿ ಪಾತ್ರಗಳನ್ನು ವಹಿಸಿರುವರು. ಓದುಗರು ಪ್ರೇಕ್ಷಕರಾಗಿ ಈ ಸಂಸಾರ ನಾಟಕವನ್ನು ಗ್ರಹಿಸಿ ಮೋಕ್ಷಾರ್ಥಿಗಳಾಗುವರು. ಈ ಗ್ರಂಥವು ಆಧ್ಯಾತ್ಮಿಕ ನವನೀತವಾಗಿ ವಿಶ್ವದರ್ಶನಕ್ಕೆ ಅಪೂರ್ವ ಕಾಣಿಕೆಯಾಗಿದೆ. ಸಮ್ಯಗ್ ದೃಷ್ಟಿಯು ಲೋಕವ್ಯವಹಾರದಲ್ಲಿ ತೊಡಗಿದ್ದರೂ ಕರ್ಮ ನಿರ್ಜರೆಯಾಗುವುದೆಂದು ಆಚಾರ್ಯರು ಪ್ರತಿಪಾದಿಸಿರುವರು. ಬ್ಯಾಂಕ್ ಕ್ಯಾಷಿಯರ್ ಹಣದ ವಹಿವಾಟಿನಲ್ಲಿ ನಿರ್ಲಿಪ್ತನಾಗಿರುವಂತೆ ಸಮ್ಯಗ್‌ದೃಷ್ಟಿಯಾದ ಸಂಸಾರಿಯೂ ಉದಾಸೀನನಾಗಿ ಕರ್ತವ್ಯನಿರ್ವಹಣೆ ಮಾಡಿ ಉಂಡುಪವಾಸಿಯಾಗಿ ಬಳಸಿ ಬ್ರಹ್ಮಚಾರಿಯಾಗಿ ಕರ್ಮನಿರ್ಜರೆಮಾಡಿಕೊಳ್ಳುವನು. ಭೇದವಿಜ್ಞಾನದ ಪೀಠದ ಮೇಲೆ ಸಾಧಕ ವಿರಾಜಮಾನನಾಗಿ ಹಂಸಕಲೆಯ ಕಿರೀಟವನ್ನು ತೊಟ್ಟು ಕಂಗೊಳಿಸುವನು. ಭೇದವಿಜ್ಞಾನಕ್ಕೆ ಭದ್ರವಾದ ಬುನಾದಿ ರಚಿಸಿದವರೇ ಕುಂದಕುಂದರು. ಹಂಸಕಲೆಗೆ ಮೆರಗುಕೊಟ್ಟವರೂ ಇವರೇ.

ಕರ್ಮಬಂಧದ ರಹಸ್ಯವನ್ನು ತಿಳಿದ ಮಾತ್ರಕ್ಕೇ ಯಾರೂ ಮುಕ್ತರಾಗಲಾರರು. ರಾಗಾದಿಗಳನ್ನು ತೊರೆದು ವೀತರಾಗರಸಿಕರಾದವರು ಮಾತ್ರ ಪರಮಾತ್ಮ ಪ್ರಕಾಶವನ್ನು ಪಡೆಯುವರು. ಲೋಕದಲ್ಲಿ ಇದ್ದೂ ಇಲ್ಲದಂತೆ ಬಾಳಿದರೆ ಭೇದ ವಿಜ್ಞಾನವನ್ನು ಸಾಧಿಸಿದಂತಾಗುವುದು. ಆದರೆ ಲೋಕದೊಡನೆ ಇಷ್ಟಾನಿಷ್ಟಗಳನ್ನು ಬೆಳೆಸಿಕೊಂಡಾಗ ಎಂಥ ಸಾಧಕನಾದರೂ ಅಜ್ಞಾನಿಯಾಗುವನು. "ಭವ್ಯಾತ್ಮನೇ

ಮೋಕ್ಷಮಾರ್ಗದಲ್ಲಿ ಆತ್ಮವನ್ನು ಸ್ಥಾಪಿಸಿಬಿಡು, ಅದನ್ನೇ ಧ್ಯಾನಿಸು, ಅದನ್ನೇ ಅನುಭವಿಸು, ಅದರೊಡನೆ ವಿಹರಿಸು. ಅನ್ಯದ್ರವ್ಯದೊಡನೆ ವಿಹರಿಸಬೇಡ" ಎಂಬುದಾಗಿ ಭಗವಾನ್ ಕುಂದಕುಂದರು ಸಮಯಸಾರದಲ್ಲಿ ಕೈವಲ್ಯ ಪಥವನ್ನು ತೋರಿಸಿರುವರು. ಸಮಯಸಾರದಲ್ಲಿ ೪೧೫ ಗಾಹೆಗಳಿವೆ.

೪) **ನಿಯಮಸಾರ :** ಇದರಲ್ಲಿ ೧೮೭ ಗಾಹೆಗಳಿವೆ. ಈ ಗ್ರಂಥದ ಮೇಲೆ ಪದ್ಮಪ್ರಭಾಮಲಧಾರಿದೇವನು ಸಂಸ್ಕೃತದಲ್ಲಿ ಟೀಕೆ ಬರೆದಿರುವನು. ಇದರಲ್ಲಿ ಸಮ್ಯಗ್ ದರ್ಶನ–ಜ್ಞಾನ-ಚಾರಿತ್ರಗಳ ವಿವರಣೆಯಿದೆ. ಜೊತೆಗೆ ಷಡ್‌ದ್ರವ್ಯಗಳನ್ನೂ ಅಸ್ತಿಕಾಯಗಳನ್ನೂ ವಿವರಿಸಿರುವರು. ನಿಶ್ಚಯನಯದಿಂದ ಷಡಾವಶ್ಯಕ ಕರ್ಮಗಳನ್ನು ಆಚಾರ್ಯರು ಬಹುಸುಂದರವಾಗಿ ನಿರೂಪಿಸಿರುವರು.

೫) **ದರ್ಶನ ಪಾಹುಡ :** ಇದರಲ್ಲಿ ಸಮ್ಯಗ್‌ದರ್ಶನದ ಮಹತ್ವವನ್ನು ವಿವರಿಸಿದೆ. ಜೀವಕ್ಕೆ ಉಸಿರಾಟ ಹೇಗೋ ಮೋಕ್ಷಾರ್ಥಿಗೆ ಸಮ್ಯಗ್‌ದರ್ಶನವು ಹಾಗೆ. ಸಮ್ಯಗ್‌ದರ್ಶನವಿಲ್ಲದೆ ಮಾಡುವ ತಪ, ಮಾಡುವ ವ್ರತಗಳು ಸೂತ್ರವಿಲ್ಲದ ಗಾಳಿಪಟವಾಗುವುವು ಎಂದು ಮಾರ್ಮಿಕವಾಗಿ ಆಚಾರ್ಯರು ಬಿತ್ತರಿಸಿರುವರು.

೬) **ಚಾರಿತ್ರ ಪಾಹುಡ :** ಇದರಲ್ಲಿ "ಸಮ್ಯಕ್ತ್ವ ಚರಣ ಚಾರಿತ್ರ"ವನ್ನು "ಸಂಯಮ ಚರಣ ಚಾರಿತ್ರ"ವನ್ನೂ ವಿವರಿಸಿರುವರು. ನಿಶ್ಶಂಕಾದಿಗುಣಗಳಿಂದ ಕೂಡಿದ ನಿರ್ದೋಷ ಸಮ್ಯಕ್ತ್ವವನ್ನು "ಸಮ್ಯಕ್ತ್ವ ಚರಣ ಚಾರಿತ್ರ"ವೆನ್ನುವರು. ಸಂಯಮಚಾರಿತ್ರದಲ್ಲಿ ಸಾಗಾರ ಮತ್ತು ಅನಾಗಾರವೆಂದು ಎರಡು ಭೇದ.

೭) **ಸುತ್ತಪಾಹುಡ :** ಜಿನವಾಣಿಯನ್ನು ಸೂತ್ರವೆನ್ನುವರು. ಜಿನವಾಣಿ ಪರಂಪರೆಯ ಸೂತ್ರವನ್ನು ಗ್ರಹಿಸದೇ ಹೋದರೆ ಜೀವನು ಮುಕ್ತನಾಗಲಾರನು. ಇದರಲ್ಲಿ ಮುನಿಗಳಿಗೆ ಉಪಯುಕ್ತವಾದ ಉಪದೇಶವಿದೆ

೮) **ಬೋಧಪಾಹುಡ :** ಇದರಲ್ಲಿ ಸಿದ್ಧಾಯತನ (ಜ್ಞಾನಿಯಾದ ಮುನಿ), ಚೈತ್ಯಗೃಹ (ಭೇದ ವಿಜ್ಞಾನಿಯಾಗಿ ಅನ್ಯರಿಗೆ ದಾರಿ ತೋರಿಸುವ ಮುನಿ), ಜಿನಪ್ರತಿಮೆ (ದರ್ಶನ ಜ್ಞಾನ ಚಾರಿತ್ರಯುಕ್ತನಾದ ಮುನಿಸ್ವರೂಪ), ಜಿನಪ್ರತಿಮೆ (ನಿರಾಕಾರವಾದ ಪರಮಾತ್ಮಾವಸ್ಥೆ), ದರ್ಶನ (ಸಮ್ಯಕ್ತ್ವ, ಸಂಯಮ, ಸುಧರ್ಮ, ರೂಪವಾದ ಮೋಕ್ಷಮಾರ್ಗವನ್ನು ತೋರಿಸುವ ದಿಗಂಬರ ಮುನಿ), ಜಿನಮುದ್ರೆ (ಜಿನನ ಪ್ರತಿರೂಪವಾದ ಜಂಗಮಜಿನೇಂದ್ರನಾದ ಮುನಿ) ಇವೆಲ್ಲವನ್ನೂ ದಿಗಂಬರ ಮುನಿಗೆ ಅನ್ವಯಿಸಿ ಆಚಾರ್ಯರು ಸಾಧುಪರಮೇಷ್ಠಿಯ ಪ್ರಾಮುಖ್ಯತೆಯನ್ನು ಬಣ್ಣಿಸಿರುವರು.

೯) **ಭಾವಪಾಹುಡ :** ಬಾಹ್ಯಪರಿಗ್ರಹಗಳನ್ನು ತ್ಯಜಿಸಿದರೆ ಸಾಲದು. ವ್ಯೆಯ ಬತ್ತಲೆಮಾಡಿಕೊಂಡಾಕ್ಷಣಕ್ಕೆ ಮೋಕ್ಷವನ್ನು ಸಾಧಕನು ಪಡೆಯಲಾರನು. ಅಂತರಂಗ ಪರಿಗ್ರಹಗಳನ್ನೂ ತ್ಯಜಿಸಿದಾಗ ಮಾತ್ರ ನಿಜವಾದ ಅಪರಿಗ್ರಹಿಯಾಗುವನು. ಇಂಥವನು ಸಹಜಾನಂದದಲ್ಲಿ ತನ್ಮಯನಾಗಿ ಭಾವಲಿಂಗಿಯೆನಿಸುವನು. **ಬಾಹ್ಯಪರಿಗ್ರಹಗಳನ್ನು ತೊರೆದು ರಾಗಾದಿಗಳಲ್ಲಿ ಮುಳುಗಿದವರನ್ನು ದ್ರವ್ಯಲಿಂಗಿ**

ಯೆನ್ನುವರು. ಮೂಕಪ್ರಾಣಿಗಳೆಲ್ಲವೂ ಬತ್ತಲೆಯಾಗೇ ಇವೆ. ಆದರೆ ಅವುಗಳ ಪರಿಣಾಮ ಬತ್ತಲೆಯಾಗಿಲ್ಲ. ಆದರಿಂದ ಮನಕತ್ತಲೆ ಮಾಡಿಕೊಂಡು ಮೈಬತ್ತಲೆಯಾದವನು ಯಾವ ಕಾಲಕ್ಕೂ ಮುಕ್ತನಾಗುವುದಿಲ್ಲ ಎಂದು ಆಚಾರ್ಯರು ಎಚ್ಚರಿಕೆ ನೀಡಿರುವರು.

೧೦ ಮೋಕ್ಷಪಾಹುಡ : ಮೋಕ್ಷಕ್ಕೆ ಕಾರಣವಾದ ಪರಮಾತ್ಮ ಧ್ಯಾನವನ್ನೂ ಅದರ ರಹಸ್ಯವನ್ನೂ ಅದರ ಮಹತ್ವವನ್ನೂ ಇದರಲ್ಲಿ ವಿವರಿಸಿ ಬಹಿರಾತ್ಮ, ಅಂತರಾತ್ಮ ಮತ್ತು ಪರಮಾತ್ಮ ಇವರ ಸ್ವರೂಪವನ್ನು ಬಣ್ಣಿಸಿರುವರು.

೧೧) ಶೀಲಪಾಹುಡ : ಇದರಲ್ಲಿ ಶೀಲದ ಮಹತ್ವವನ್ನು ವಿವರಿಸಿರುವರು. ಶೀಲ ಮತ್ತು ಜ್ಞಾನಗಳು ಒಂದೇ ನಾಣ್ಯದ ಎರಡು ಮುಖಗಳು. ಶೀಲವಿಲ್ಲದವನ ಜ್ಞಾನವೂ ನಷ್ಟವಾಗುವುದು ಎಂದು ಆಚಾರ್ಯರು ಸಾರಿರುವರು.

೧೨) ಲಿಂಗಪಾಹುಡ : ಇದರಲ್ಲಿ ದಿಗಂಬರತತ್ವದ ಮಹತ್ವವನ್ನು ನಿರೂಪಿಸಿರುವರು. ದಿಗಂಬರರಾಗಿಯೂ ಮಾರ್ಗ ಬಿಟ್ಟವರನ್ನು ಆಚಾರ್ಯರು ನಿರ್ದಾಕ್ಷಿಣ್ಯವಾಗಿ ಖಂಡಿಸಿರುವರು.

೧೩) ದಶಭಕ್ತಿ : ಸಿದ್ಧಭಕ್ತಿ, ಶ್ರುತಭಕ್ತಿ, ಚಾರಿತ್ರಭಕ್ತಿ, ಯೋಗಭಕ್ತಿ, ಆಚಾರ್ಯಭಕ್ತಿ, ನಿರ್ವಾಣಭಕ್ತಿ, ಪಂಚಪರಮೇಷ್ಠಿಭಕ್ತಿ, ತೀರ್ಥಂಕರಭಕ್ತಿ, ನಂದೀಶ್ವರಭಕ್ತಿ ಮತ್ತು ಶಾಂತಿಭಕ್ತಿಗಳನ್ನು ಈ ಕೃತಿಯಲ್ಲಿ ಆಚಾರ್ಯರು ವಿವರಿಸಿರುವರು.

ಕುಂದಕುಂದರ ದರ್ಶನ

ಸತ್ತಾರೂಪವಾದುದೇ ದ್ರವ್ಯ. ಉತ್ಪಾದವ್ಯಯ ಮತ್ತು ಧ್ರೌವ್ಯಗಳ ತ್ರಿವೇಣೀ ಸಂಗಮವೇ ದ್ರವ್ಯವಾಗಿದೆ. ಗುಣ ಪರ್ಯಾಯಗಳಿಗೆ ಆಶ್ರಯವಾದುದೇ ದ್ರವ್ಯವಾಗಿದೆ. ಸತ್ತ ಮತ್ತು ದ್ರವ್ಯಗಳ ಪ್ರದೇಶವು ಅಭಿನ್ನವಾದುದು. ದ್ರವ್ಯವನ್ನು ಬಿಟ್ಟು ಗುಣ ವಿರಲಾರದು. ಅಂತೆ ಗುಣವನ್ನು ಬಿಟ್ಟು ದ್ರವ್ಯವಿರಲಾರದು. ದ್ರವ್ಯವು ಅನಾದಿಯಾಗಿ ಅನಂತವಾಗಿ ಸದಾ ತನ್ನ ಸ್ವಭಾವದಲ್ಲಿ ತಾನಿದ್ದು ಇದು **'ಸತ್'** ಎನಿಸಿದೆ. ದ್ರವ್ಯದಿಂದ ಉತ್ಪನ್ನವಾದುದು ಪರ್ಯಾಯ. ಉತ್ಪಾದವ್ಯಯ ಮತ್ತು ಧ್ರೌವ್ಯ ಇವು ಪರಸ್ಪರ ಅವಿನಾಭಾವಿಯಾಗಿ ನಿತ್ಯವಾದ ದ್ರವ್ಯದಲ್ಲಿ ನಿರಂತರವಾಗಿ ಸಾಗುವ ತ್ರಿವೇಣೀಸಂಗಮವಾಗಿದೆ.

ಜೀವಪುದ್ಗಲಗಳು ಸಂಸಾರ ನಾಟಕದ ಸೂತ್ರಧಾರಿಗಳಾಗಿವೆ. ಇವೆರಡರ ಅನ್ಯೋನ್ಯದಿಂದ ಆದಿಯೂ ಅಂತ್ಯವೂ ಇಲ್ಲದ ಸಂಸಾರ ನಾಟಕ ನಡೆಯುತ್ತಿದೆ. ದಾರ್ಶನಿಕನಾದವನು ಈ ಸಂಸಾರ ನಾಟಕದಲ್ಲಿ ಬಸವಳಿದು ಬೆಂಡಾಗಿ ಕೊನೆಗೆ ಜೀವ ಮತ್ತು ಪುದ್ಗಲಗಳ ಸಖ್ಯವನ್ನು ಭೇದಿಸಲು ಪ್ರಯತ್ನಿಸಿ ಇವೆರಡರ ರಹಸ್ಯವನ್ನು ಗ್ರಹಿಸುವನು. ಅನಂತರ ಪುದ್ಗಲದ ಕಪಿಮುಷ್ಟಿಯಿಂದ ಪಾರಾಗಲು ಸತತ ಪ್ರಯತ್ನವೆಸಗಿ ಕೊನೆಗೆ ವಿಜಯಿಯಾಗಿ ಮುಕ್ತನಾಗುವನು. ಜೀವದ ಚೈತನ್ಯವಾಗಲಿ ಉಪ

ಯೋಗವಾಗಲಿ (ಜ್ಞಾನದರ್ಶನಗಳು) ಎಂದೂ ದಿವಾಳಿಯಾಗುವುದಿಲ್ಲ. ಜೀವದ ಲಕ್ಷಣವಾದ ಚೇತನವು ಇಂದ್ರಿಯಾತೀತವಾದುದು. ಸಂಸಾರೀಜೀವವು ರಾಗಾದಿ ರೋಗದಿಂದ ನರಳುತ್ತಾ ಕರ್ಮವನ್ನು ರಾಶಿ ಹಾಕಿಕೊಳ್ಳುವುದು. ಕರ್ಮೋದಯ ವಾಗಿ ಜೀವವು ನರಕಾದಿ ಗತಿಗಳಲ್ಲಿ ಶರೀರಧಾರಿಯಾಗಿ ಜನ್ಮ ಪಡೆಯುವುದು, ಶರೀರ ದಲ್ಲಿ ಇಂದ್ರಿಯ ಮೂಡುವುದು, ಇಂದ್ರಿಯದ ಮುಖೇನ ವಿಷಯವನ್ನು ಭೋಗಿಸು ವುದು, ಮತ್ತೆ ರಾಗದ್ವೇಷದಲ್ಲಿ ಮುಳುಗುವುದು–ಈ ರೀತಿ ನಿರಂತರ ಸಂಸಾರದಲ್ಲಿ ಜೀವವು ತೊಳಲಾಡುವುದು.

ಜೀವವು ದ್ರವ್ಯದೃಷ್ಟಿಯಿಂದ ಶುದ್ಧವಾಗಿದೆ. ಪರ್ಯಾಯದ ದೃಷ್ಟಿಯಿಂದ ಅಶುದ್ಧವಾಗಿದೆ. ಶುದ್ಧತೆ ಮತ್ತು ಅಶುದ್ಧತೆಗಳು ಆಯಾ ಅವಸ್ಥೆಗಳಲ್ಲಿ ವಾಸ್ತವಿಕ ವೆನಿಸುವುವು. ಪರದ್ರವ್ಯದ ಸಂಯೋಗದಿಂದ ಜೀವವು ಅಶುದ್ಧವಾಗುವುದು. ತನ್ನ ಸ್ವಸ್ವಭಾವದಲ್ಲಿ ಇರುವಂಥ ಜೀವವು ಶುದ್ಧವಾಗಿರುತ್ತದೆ. ಜೀವವು ಪುದ್ಗಲದಿಂದ ಕೂಡಿ ಪರತಂತ್ರವಾಗುವುದು. ಪುದ್ಗಲದ ಬೆಸುಗೆಯಿಂದ ಬಿಡುಗಡೆ ಪಡೆದು ಜೀವವು ಸ್ವತಂತ್ರವಾಗಬೇಕೆಂಬುದೇ ಜೈನದರ್ಶನದ ಗುರಿಯಾಗಿದೆ. ಈ ಗುರಿಯನ್ನೇ ಶುದ್ಧ ನಯ ಅಥವಾ ನಿಶ್ಚಯ ನಯವೆನ್ನುವರು.

ಪಾಪಪುಣ್ಯಗಳು

ಅಶುಭ ಕರ್ಮವು ಪಾಪವಾಗಿ ಕುಶೀಲವಾದುದು ಶುಭಕರ್ಮವು ಪುಣ್ಯವಾಗಿ ಸುಶೀಲವಾದುದು ಎಂದು ಸಾಮಾನ್ಯರು ತಿಳಿಯುವರು. ಶುಭಾಶುಭ ಕರ್ಮಗಳೆರಡೂ ಸಂಸಾರ ವೃಕ್ಷಕ್ಕೆ ನೀರೆರೆಯುವ ಕಾಯಕಗಳಾಗಿವೆ. ಶುಭಾಶುಭಗಳೆರಡರಿಂದಲೂ ಜೀವ ಪಾರಾದ ಮೇಲೇನೆ ಕೈವಲ್ಯಲಕ್ಷ್ಮಿಯ ಕಟಾಕ್ಷ ಪಡೆಯುವುದು. ನಿಶ್ಚಯ ನಯವು ಶುದ್ಧ ದ್ರವ್ಯವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವುದು. ಯಥಾರ್ಥ ವಾಗಿ ಕೇವಲಿಯು ಆತ್ಮದರ್ಶಿಯಾಗಿರುವನು. ಆತ್ಮದರ್ಶಿಯು ಶಕ್ತಿ ರೂಪದಿಂದ ಸರ್ವದರ್ಶಿಯೂ ಆಗುವನು. ಕುಂದಕುಂದರ ದರ್ಶನವನ್ನು ಇಲ್ಲಿ ಸಂಕ್ಷೇಪವಾಗಿ ಹೇಳಿದೆ.

ಪೂಜ್ಯಪಾದ ಮುನಿ

ಕೆ. ಆರ್. ಶೇಷಗಿರಿ

ಕನ್ನಡ ಸಾಹಿತ್ಯವು ಜೈನ, ವೈದಿಕ, ವೀರಶೈವ ಕವಿಗಳಿಂದ ಸಮೃದ್ಧವಾಗಿದೆ. ಜೈನ ಸಾಹಿತ್ಯದಿಂದ ಉಗಮವಾದ ಕನ್ನಡ ಸಾಹಿತ್ಯ ಅನೇಕ ಮಹಾಕವಿಗಳನ್ನೊಳಗೊಂಡಿದೆ. ಕರ್ಣಾಟಕದಲ್ಲಿ ಜೈನ ಕವಿಗಳಿಗೆ ಹಾಗೂ ಜೈನ ಮುನಿಗಳಿಗೆ ದೊರಕಿದ ರಾಜಾಶ್ರಯ ಪ್ರೋತ್ಸಾಹಗಳು ಬಹುಶಃ ಭಾರತದ ಮತ್ತಾವ ಪ್ರದೇಶಗಳಲ್ಲಿ ದೊರೆತಿರಲಾರದು. ಅದರಲ್ಲಿಯೂ ಜೈನ ಮುನಿಗಳಿಗೆ ಬಹಳ ಗೌರವ. 'ಅಹಿಂಸಾಹಿ ಪರಮೋ ಧರ್ಮಃ' ಎಂಬ ಸೂಕ್ತಿಯನ್ನು ಅನೇಕಾನೇಕ ದೃಷ್ಟಾಂತಗಳಿಂದ ಪ್ರಚಾರಕ್ಕೆ ತಂದ ಕೀರ್ತಿ ಜೈನರಿಗೇ ಮೀಸಲು. ಪ್ರಸಿದ್ಧರಾದ ಜೈನಕವಿಗಳು ಮೂಲತಃ ವೈದಿಕರಾಗಿದ್ದು ಯಜ್ಞ, ಹೋಮಾದಿಗಳಿಂದ ಅನೇಕಾನೇಕ ಜೀವಗಳು ದಹಿಸಿಹೋಗುತ್ತಿದ್ದುದನ್ನು ಮನಗಂಡು ಜೈನ ಧರ್ಮಾನುಯಾಯಿಯಾದರೆಂದರೆ ತಪ್ಪೆನಿಸುವುದಿಲ್ಲ. ಪಂಪನಿಂದ ದೇವಚಂದ್ರನವರೆಗೂ ಈ ಮಾತು ಸತ್ಯವೆನಿಸುತ್ತದೆ.

ಕನ್ನಡದ ಕವಿಗಳು ತೀರ್ಥಂಕರರನ್ನು ಕುರಿತಂತೆ ಕಾವ್ಯ, ಮಹಾಕಾವ್ಯಗಳನ್ನು ಬರೆದಿದ್ದಾರೆ. ಆದಿ ತೀರ್ಥಂಕರ ಅಥವ ವೃಷಭ ತೀರ್ಥಂಕರನ ಚರಿತ್ರೆಯನ್ನು ಕನ್ನಡ ಸಾಹಿತ್ಯದ ಆದಿ ಕವಿಯಾದ ಪಂಪನೇ ರಚಿಸಿದ್ದಾನೆ. ಅನಂತರ ಬಂದ ಕವಿಗಳು ಇತರ ತೀರ್ಥಂಕರರುಗಳ ಚರಿತ್ರೆಯನ್ನು ಬರೆದಿದ್ದಾರೆ. ಅದೇ ರೀತಿ ಪ್ರಾತಃ ಸ್ಮರಣೀಯನೂ ಮಹಾಮುನಿಯೂ ಆದ ಪೂಜ್ಯಪಾದನ ಚರಿತೆಯನ್ನು ನಂಜನಗೂಡು ಚಾಮರಾಜನಗರಗಳ ನಡುವೆ ಇರುವ ಮಲೆಯೂರಿನ ಕವಿ ದೇವಚಂದ್ರನು ರಚಿಸಿದ್ದಾನೆ ಈತನ ಕಾಲ ಕ್ರಿ ಶ ೧೭೭೦ ರಿಂದ ೧೮೪೧ ಎಂದು ಆತನ ಗ್ರಂಥಾಧಾರದಿಂದಲೇ ನಿರ್ಧರಿಸಬಹುದಾಗಿದೆ. ಈತನು ರಚಿಸಿರುವ ನಾಲ್ಕು ಕೃತಿಗಳಲ್ಲಿ ಪೂಜ್ಯಪಾದ ಚರಿತೆ ಮೊದಲನೆಯದು. ಈ ಕೃತಿಯನ್ನು ಕ್ರಿ ಶ. ೧೭೯೨ ರಲ್ಲಿ ಬರೆದನೆಂಬುದಕ್ಕೂ ಈ ಗ್ರಂಥವೇ ಆಧಾರವಾಗಿದೆ. ಮತ್ತಿತರ ಉಪಲಬ್ಧ ಕೃತಿಗಳೆಂದರೆ ರಾಮ ಕಥಾವತಾರ, ರಾಜಾವಳೀ ಕಥಾ ಸಾರ, ಭಕ್ತಿ ಸಾರ ಶತಕ ತ್ರಯ. ಈತನ ಇತರ ಕೃತಿಗಳಾದ ಸುಮೇರು ಶತಕ, ಪದ್ಮಾವತೀ ಯಕ್ಷಗಾನ, ಶಾಸ್ತ್ರಸಾರ ಲಘು ವೃತ್ತಿ, ಪ್ರವಚನ ಸಿದ್ಧಾಂತ, ದ್ರವ್ಯ ಸಂಗ್ರಹ, ದ್ವಾದಶಾನುಪ್ರೇಕ್ಷೆ ಕಥೆ, ಧ್ಯಾನ ಸಾಮ್ರಾಜ್ಯ, ಅಧ್ಯಾತ್ಮ ವಿಚಾರ ಎಂಬುವು ಇನ್ನೂ ದೊರೆಯಬೇಕಾಗಿವೆ. ಪ್ರಸ್ತುತ ಪೂಜ್ಯಪಾದ ಚರಿತೆ ಎಂಬ ಸಾಂಗತ್ಯ ಕಾವ್ಯದಲ್ಲಿ ಪೂಜ್ಯಪಾದ ಮುನಿಯ ಬಗೆಗೆ ದೊರೆತ ವಿವರವನ್ನು ಇಲ್ಲಿ ಹೇಳಲಾಗಿದೆ.

ಜಂಬೂದ್ವೀಪದ ಆರ್ಯಾ ಖಂಡದ ಚಪ್ಪನ್ನ ರಾಷ್ಟ್ರಗಳಲ್ಲಿ ಒಂದಾದ ಕರ್ನಾಟಕ ದೇಶದಲ್ಲಿ ಹದಿನಾಡು ಎಂಬ ಒಂದು ಪ್ರದೇಶವಿದೆ. ಸಿರಿ ಸಂಪದಕ್ಕೆ ಆ ಊರು ಹೆಸರಾಗಿದೆ. ಅಲ್ಲಿ ಒಂದು ತೊರೆ ಹರಿಯುತ್ತಿದೆ. ಸಮೀಪದಲ್ಲಿ ಕೊಳ್ಳಾಗಾಲ (ಕೊಳ್ಳೇಗಾಲ) ಎಂಬ ಪುರವಿದೆ. ಅಲ್ಲಿ ಆದಿತೀರ್ಥಂಕರನ ಒಂದು ಜಿನ ಭವನವಿದೆ. ಜಿನ ಮುನಿಗಳ ವಾಸಸ್ಥಾನಗಳು ಜಿನಾಲಯದ ಹತ್ತಿರವಲ್ಲಿವೆ. ಆ ಊರಿನಲ್ಲಿರುವವರು ಸತ್ಯಸಂಧರು, ನಿರ್ಮಲ ಸ್ವಭಾವದವರು, ಆಚಾರವಂತರಾಗಿರುವರು. ವೈದಿಕನಾದ ಮಾಧವಭಟ್ಟನೆಂಬ ಒಬ್ಬ ಬ್ರಾಹ್ಮಣನು ವೇದಪಾರಾಯಣನಾಗಿದ್ದು ವ್ಯಾಕರಣ ಶಾಸ್ತ್ರಗಳಲ್ಲಿ ಪಂಡಿತನೆನಿಸಿದ್ದನು. ಅವನ ಪತ್ನಿ ಸುಗುಣೆಯಾದ ಶ್ರೀದೇವಿ. ಬಹಳ ಕಾಲದವರೆಗೂ ಸಂತಾನವಿರಲಿಲ್ಲ. ಒಂದು ದಿನ ಬೆಳಗಿನ ಜಾವದ ಕನಸಿನಲ್ಲಿ ಅವಳು ಐರಾವತ, ವೃಷಭ, ಕಮಲಗಳನ್ನು ಕಂಡಳು. ಅನಂತರ ಗರ್ಭವತಿಯಾದಳು. ಆ ವೇಳೆಯಲ್ಲಿ ಅವಳಿಗೆ ಜಿನಮಾರ್ಗದತ್ತಲೇ ಒಲವು, ಜೈನ ನೋಂಪಿಗಳನ್ನು ಅನುಸರಿಸಬೇಕೆಂಬ ಉತ್ಕಟೇಚ್ಛೆಯಾಯಿತು. ಸತಿಪತಿಯರು ಜಿನಾಲಯವನ್ನು ಸೇರಿ ಚಂದ್ರಶಾಲೆಯ ಒಳಗಿದ್ದ ಜಿನೇಂದ್ರರಿಗೆ ನಮಸ್ಕರಿಸಲು ಅವರು ಹೊಸ ವ್ರತವನ್ನು ಆಚರಿಸಲು ಉಪದೇಶಿಸಿದರು. ದಂಪತಿಗಳು ಆನಂದತುಂದಿಲರಾಗಿ ಮುನಿಗಳಿಗೆರಗಿ ಮನೆಗೆ ತೆರಳಿದರು. ಕೆಲವು ಕಾಲದ ನಂತರ ಶ್ರೀದೇವಿಗೆ ಗಂಡು ಮಗುವೊಂದು ಜನಿಸಿತು. ತಕ್ಷಣವೇ ಜೋಯಿಸರು ಪಂಚಾಂಗವನ್ನು ನೋಡಿ, ಗುಣಿಸಿ 'ಈತನು ಮುಂದೆ ಸಿದ್ಧನಾಗುವನು' ಎಂದು ಭವಿಷ್ಯವನ್ನು ನುಡಿದರು. ಮಗು ಹುಟ್ಟಿದ ಹತ್ತನೆಯ ದಿನ ಗೃಹ ಭಾವದಶುದ್ಧಿ, ಗ್ರಹಯಜ್ಞಗಳನ್ನು ಮಾಧವಭಟ್ಟನು ನಡೆಸಿದನು. ಶಿಶು ಜನಿಸಿದ್ದರಿಂದ ನಮ್ಮ ಜನ್ಮವು ಪೂಜ್ಯವಾಯಿತೆಂದು ತಿಳಿದು ಪೂಜ್ಯಪಾದಯ್ಯ ಎಂದು ನಾಮಕರಣ ಮಾಡಿದರು. ಅವನಿಗೆ ಅನಂತರ ಉಪನಯನವಾಯಿತು. ಅಕ್ಷರಾಭ್ಯಾಸದ ಮೊದಲ ಹಂತದಲ್ಲಿ ಬಲಗೈಯಿಂದ 'ಸಿದ್ಧಂ ನಮಃ' ಎಂದು ಮರಳಿನ ಮೇಲೆ ಬರೆಸಿದರು. ದೊಡ್ಡವನಾದ ಮೇಲೆ ಕಂಠದಿಂದ ತಾಳೆ ಗರಿಯ ಮೇಲೆ ಬರೆಯಲಾರಂಭಿಸಿದನು. ಸಕಲ ಶಾಸ್ತ್ರಾಗಮಗಳನ್ನು ಅಭ್ಯಸಿಸಿದನು. ಏಳೆಂಟನೆಯ ವಯಸ್ಸಿಗೆ ಮುಂಜಿ ಮಾಡಿ, ಅನುಗುಣ ಶಿಕ್ಷಾವ್ರತಗಳನ್ನು ಅನುಸರಿಸುವ ಮಾರ್ಗಗಳನ್ನು ತಂದೆಯೇ ಬೋಧಿಸಿದನು.

ಶ್ರೀದೇವಿಯು ಪುನಃ ಗರ್ಭವತಿಯಾಗಿ ಒಂದು ಹೆಣ್ಣು ಮಗುವಿಗೆ ಜನ್ಮವಿತ್ತಳು. ಆ ಮಗುವಿಗೆ ಕಮಲಿನಿ ಎಂಬ ಹೆಸರನ್ನಿಟ್ಟರು. ಮಾಧವಭಟ್ಟನು ತನ್ನ ತಂಗಿಯನ್ನು ಪಾಣಿನ್ಯನಿಗೆ ವಿವಾಹ ಮಾಡಿಕೊಟ್ಟಂತೆ ವಯಸ್ಸಿಗೆ ಬಂದ ಕಮಲಿನಿಯನ್ನು ಗುಣಭಟ್ಟನಿಗೆ ವಿವಾಹ ಮಾಡಿಕೊಡಲು ನಿರ್ಧರಿಸಿದನು. ಕಾಲಾಂತರದಲ್ಲಿ ಅವರಿಬ್ಬರಿಗೆ ಮದುವೆಯಾಗಿ ನಾಗಾರ್ಜುನನೆಂಬ ಒಂದು ಶಿಶುವಿಗೆ ಕಮಲಿನಿ ಜನ್ಮವಿತ್ತಳು.

ಪೂಜ್ಯಪಾದನು ಸರ್ವಾಗಮ, ಜಿನಪುರಾಣ, ತತ್ತ್ವನೀತಿ, ಗಣಿತ, ವೈದ್ಯ ಮೊದಲಾದ ೬೪ ವಿದ್ಯೆಗಳನ್ನು ಕಲಿತು ಪರಿಣತನೆನಿಸಿದನು. ಆತನ ನಡೆ ನುಡಿ

ಗಳೆಲ್ಲಾ ಜಿನಮಯ. ದೇಹ ಮನಸ್ಸುಗಳು ಪರಿಶುದ್ಧ. ಸುಪ್ರಭಾತದಲ್ಲಿ ಶೌಚಾಚಾರ ಜಿನಸ್ತವನಗಳನ್ನಾಚರಿಸುತ್ತಿದ್ದುದರಿಂದ ಅವನ ಕೀರ್ತಿ ಜಗತ್ತಿನಲ್ಲಿ ಮೆರೆಯಲಾರಂಭಿಸಿತು. ಕೆಲವು ಕಾಲದ ಮೇಲೆ ಅವನು ದೀಕ್ಷೆಯನ್ನು ಸ್ವೀಕರಿಸಿದನು. ಮದುವೆಯಾಗದ ಕಾರಣ ಶ್ರಾವಕ ವ್ರತವನ್ನು ಆಚರಿಸಿದ ಬ್ರಹ್ಮಚಾರಿ ಹಾಗೂ ಸುಗುಣನೆನಿಸಿದನು.

ಕೊಳ್ಳೇಗಾಲ ಗ್ರಾಮಕ್ಕೆ ದಕ್ಷಿಣ ದಿಕ್ಕಿಗಿರುವ ಬೆಟ್ಟವನ್ನು ಕೈಲಾಸ ಪರ್ವತವೆಂದೇ ಜನರು ತಿಳಿದಿದ್ದರು. ಇದನ್ನು ಪೂಜ್ಯಪಾದ ಮುನಿಯ ಯಾಗದ ನೆಲೆಯೆಂದು ತಿಳಿದ ಮೇಲೆ ಭಕ್ತರು ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದರು. ಪೂಜ್ಯಪಾದ ಮುನಿಯು ಉಗ್ರ ತಪಸ್ಸಿನಲ್ಲಿ ನಿರತನಾಗಿದ್ದುದನ್ನು ಕಂಡು ಅವನನ್ನು ಅಪಾರವಾಗಿ ಕೊಂಡಾಡುತ್ತಿದ್ದರು.

ಪೂಜ್ಯಪಾದ ಮುನಿಯ ಸೋದರಮಾವನಾದ ಪಾಣಿನ್ಯಾಚಾರ್ಯನು ಮುಡಿಗುಂಡದಲ್ಲಿ ವಾಸಿಸುತ್ತಿದ್ದನು. ಅವನು ಕೂಡ ತಪಸ್ವಿ ಹಾಗೂ ವಿದ್ಯಾಪಾರಂಗತನಾಗಿದ್ದು ಬ್ರಾಹ್ಮಣರಿಗೆ ಗುರುವಾಗಿದ್ದನು. ಆತನು ಒಂದು ವ್ಯಾಕರಣವನ್ನು ರಚಿಸಬೇಕೆಂಬ ಮನದಾಸೆಯಿಂದ ರಚಿಸತೊಡಗಿದನು. ಆದರೆ ಗ್ರಂಥವು ಪೂರ್ಣವಾಗುವುದಕ್ಕೆ ಮೊದಲೇ ಅವಸಾನ ಕಾಲ ಸಮೀಪಿಸಿತು. ಆಗ ಪೂಜ್ಯಪಾದನನ್ನು ಕರೆಸಿ ಆ ಗ್ರಂಥವನ್ನು ಪೂರ್ಣಗೊಳಿಸಲು ತಿಳಿಸಿ, ಅವನಿಂದ ಪೂರೈಸುವ ಆಶ್ವಾಸನೆಯನ್ನು ಪಡೆದು ಗತಿಸಿದನು. ವಾಗ್ದಾನ ಮಾಡಿದ್ದ ಪೂಜ್ಯಪಾದನಿಗೆ ಆ ಕೆಲಸವನ್ನು ಮುಗಿಸಬೇಕೆಂಬ ವಿಚಾರ ಮರೆತು ಹೋಯಿತು. ಆದರೆ ಒಂದು ದಿನ ಅವನು ದಾರಿಯಲ್ಲಿ ಹೋಗುತ್ತಿರಲು ಘಟಸರ್ಪವೊಂದು ಬುಸುಗುಡುತ್ತಾ ಎದುರಾಗಿ ಬಂದು ನಿಂತಿತು. ಆಗ ತನ್ನ ದಿವ್ಯ ದೃಷ್ಟಿಯಿಂದ ಆ ಸರ್ಪವು ತನ್ನ ಸೋದರಮಾವನಾದ ಪಾಣಿನ್ಯನೆಂದು ತಿಳಿದು ವ್ಯಾಕರಣವನ್ನು ಪೂರ್ಣಗೊಳಿಸುವುದಾಗಿ ಭರವಸೆ ನೀಡಿ, ತನ್ನ ಪಿಂಛವನ್ನು ಅದರ ಹೆಡೆಯ ಮೇಲಿಡಲು ಸಮಾಧಾನದಿಂದ ಹೊರಟು ಹೋಯಿತು. ಮರುದಿನವೇ ಆ ಕೆಲಸವನ್ನು ಕೈಗೆತ್ತಿಕೊಂಡು, ಅನತಿ ಕಾಲದಲ್ಲಿ ಗ್ರಂಥವನ್ನು ಮುಗಿಸಿ ಪುನಃ ಯತಿಧರ್ಮದಲ್ಲಿ ನಿರತನಾದನು.

ಪೂಜ್ಯಪಾದನ ತಂಗಿ ಕಮಲಿನಿಯ ಪತಿಯು ಗತಿಸಿದಾಗ ಅವಳ ಒಬ್ಬನೇ ಮಗನಾದ ನಾಗಾರ್ಜುನನು ಅನ್ಯರ ದನಕರುಗಳನ್ನು ಕಾಯುತ್ತಿದ್ದನು. ಅವಳ ಈ ಕಷ್ಟವನ್ನು ಮನಗಂಡು ಆಕೆಯ ಮನೆಗೆ ಹೋಗಿ ಅಲ್ಲಿದ್ದ ಒಂದು ಕಬ್ಬಿಣದ ಬಟ್ಟಲನ್ನು ಪಡೆದು ಪೂಸಿ ಮತ್ತೆ ಹಿಂತಿರುಗಿಸಿಕೊಟ್ಟು, ಈ ಬಟ್ಟಲನ್ನು ಎರಡು ಜಾವದವರೆಗೆ ಬೆಂಕಿಯಲ್ಲಿಟ್ಟರೆ ಅದು ಚಿನ್ನವಾಗುವುದೆಂದು ಹೇಳಿ ಹೊರಟುಹೋದನು. ಸ್ವಲ್ಪ ಹೊತ್ತಾದ ಮೇಲೆ ನಾಗಾರ್ಜುನನು ಬಂದು ತನ್ನ ಊಟದ ಬಟ್ಟಲನ್ನು ಕೇಳಲಾಗಿ ನಿಜಾಂಶವನ್ನು ತಾಯಿ ತಿಳಿಸಿದಳು. ಒಲೆಯಿಂದ ಬಟ್ಟಲನ್ನು ತೆಗೆದು ನೋಡಲು ಅದು ಚಿನ್ನದ ಮೆರಗನ್ನು ಪಡೆಯುತ್ತಿರುವುದನ್ನು ಕಂಡು ಹರ್ಷಗೊಂಡನು. ಮಾವನ ಬಳಿಗೆ ಓಡಿಬಂದು ತನಗೆ ರಸವಿದ್ಯೆಯನ್ನು ಕಲಿಸಬೇಕೆಂದು ಕಾಡಿ, ಬೇಡಿದನು. ಪೂಜ್ಯಪಾದನು ಇವನು ಅಜ್ಞಾನಿ ಎಂಬುದನ್ನು ತಿಳಿದು ಪದ್ಮಾವತೀ

ಮೂಲಮಂತ್ರವನ್ನು ಬರೆದುಕೊಟ್ಟು ಗಿರಿವನಗುಹೆಗಳಲ್ಲಿ ಬ್ರಹ್ಮವ್ರತವನ್ನಾಚರಿಸಿದಲ್ಲಿ ವಿದ್ಯೆಯು ಕರಗತವಾಗುವುದೆಂದು ಹೇಳಿ ಕಳಿಸಿದನು. ಅದರಂತೆ ನಾಗಾರ್ಜುನನು ದನ ಕಾಯುವುದನ್ನು ಬಿಟ್ಟು, ಕಾಡು ಮೇಡುಗಳಲ್ಲಿ ಅಲೆದು ಒಂದು ದೊಡ್ಡ ಗವಿಯ ಬಳಿ ಪದ್ಮಾಸನ ಹಾಕಿ, ಮಾವನು ಉಪದೇಶಿಸಿದ ಮಂತ್ರವನ್ನು ಪಠಿಸಿದನು, ಹಸಿವು ನೀರಡಿಕೆಗಳನ್ನು ತ್ಯಜಿಸಿದನು. ಕೊನೆಗೆ ಪದ್ಮಾವತಿಯ ಕರುಣೆಯಿಂದ ರಸವಿದ್ಯೆ ಕರಗತವಾಯಿತು. ತಾನು ಕಲಿತ ರಸವಿದ್ಯೆಯಿಂದ ಗಿರಿಯನ್ನು ಕನಕಗಿರಿಯನ್ನಾಗಿ ಮಾರ್ಪಡಿಸಲು ಯೋಚಿಸಿದನು. ಆಗ ಬ್ರಹ್ಮದೇವನೇ ಬಂದು ತಡೆದನು. ನಾಗಾರ್ಜುನನು ಒಂದು ಪಾರ್ಶ್ವ ಜಿನಾಲಯವನ್ನು ಕಟ್ಟಿಸಿದನು. ಹೇಮಗಿರಿಯಲ್ಲಿ ಬ್ರಹ್ಮ ಪದ್ಮಾವತಿಯರನ್ನು ಪ್ರತಿಷ್ಠಾಪಿಸಿದನು. ಕೆಲವು ಪ್ರದೇಶಕ್ಕೆ ಪ್ರಭುವಾಗಿ ಯಂತ್ರ ಮಂತ್ರ ತಂತ್ರಾದಿಗಳಿಂದ ಸಿದ್ಧ ನಾಗಾರ್ಜುನನೆಂಬ ಹೆಸರು ಪಡೆದು ಖ್ಯಾತಿ ಪಡೆದನು. ಕಂಡ ಕಂಡಲ್ಲಿ ಚಿನ್ನವನ್ನು ಮಾಡಲುದ್ಯೋಗಿಸಿದಾಗ ವರ್ತಕರು ಚಿನ್ನದ ಬೆಲೆ ಅಗ್ಗವಾಗುವುದೆಂಬ ಭೀತಿಯಿಂದ, ಉಪಾಯದಿಂದ ಜಾರೆಯರನ್ನು ಬಿಟ್ಟು ಅವನನ್ನು ಕೊಲ್ಲಿಸಿದರು.

ಪದಿನಾಡಿನಲ್ಲಿ ಯತೀಂದ್ರನಾದ ಪೂಜ್ಯಪಾದನು ತಪಸ್ಸು ಮಾಡಿ ಆಂಧ್ರ ಕರ್ಣಾಟ ಚೋಳ ಪ್ರಾಂತ್ಯ ಮೊದಲಾದ ದೇಶಗಳಲ್ಲಿ ಸಂಚರಿಸಿ, ಕೆಲವು ಜೈನ ಸಿದ್ಧಾಂತಗಳಲ್ಲಿ ಸಂಶಯ ತಲೆದೋರಿದುದರಿಂದ ಪಾದ ಲೇಪೌಷಧಿ ಸಾಮರ್ಥ್ಯದಿಂದ ಪೂರ್ವ ವಿದೇಹಕ್ಕೆ ತೆರಳಿ, ಸಮವಸರಣಮುಖರಾಗಿದ್ದ ಜಿನಪತಿಗಳನ್ನು ಕಂಡು ವಂದಿಸಿ ತನ್ನ ಸಂಶಯಗಳನ್ನು ಪರಿಹರಿಸಿಕೊಂಡನು ಪುನಃ ಹಿಂತಿರುಗುವಾಗ ಭರತ ಕ್ಷೇತ್ರದಲ್ಲಿ ಸೂರ್ಯನ ಕಿರಣವು ತುಂಬಾ ತೀಕ್ಷ್ಣವಿದ್ದುದರಿಂದ ಅವನ ಕಣ್ಣುಗಳ ಕುರುಡಾದವು. ಮುಂದೆ ಬಂಕಾಪುರದಲ್ಲಿಳಿದು ಶಾಂತೀಶ್ವರನನ್ನು ಅಷ್ಟಕದಿಂದ ಸ್ತುತಿಸಿ ದೃಷ್ಟಿಯನ್ನು ಮರಳಿ ಪಡೆದನು. ಅನಂತರ ಮಲೆಯೂರಿಗೆ ಬಂದು ತನಗೆ ತಿಳಿದಿದ್ದ ಜೈನ ಸಿದ್ಧಾಂತಗಳನ್ನು ಶಿಷ್ಯ ಪ್ರಶಿಷ್ಯರಿಗೆ ಬೋಧಿಸಿದನು. ತನ್ನಲ್ಲಿದ್ದ ಜೈನ ಗ್ರಂಥಗಳನ್ನು ಅವರಿಗೆ ನೀಡಿದನು. ಕೊನೆಗೆ ತನಗೆ ಅವಸಾನ ಸಮೀಪಿಸಿರುವುದನ್ನು ತಿಳಿದುಕೊಂಡು ಸಲ್ಲೇಖನ ವ್ರತವನ್ನಾಚರಿಸಿ ದೇಹತ್ಯಾಗ ಮಾಡಿ ಕೈವಲ ಪದವಿಯನ್ನು ಪಡೆದನು.

ದೇವಚಂದ್ರನ ಈ ಕಾವ್ಯದಲ್ಲಿ ಪೂಜ್ಯಪಾದ, ಪೂಜ್ಯಪಾದಯ್ಯ, ಪೂಜ್ಯಪಾದ ಮುನಿ ಎಂಬ ಪರ್ಯಾಯ ನಾಮಗಳು ದೊರೆಯುತ್ತವೆ; ಆದರೆ ದೇವನಂದಿ ಎಂಬ ನಾಮಪದ ದೊರೆಯುವುದಿಲ್ಲ. ಆದರೆ ಕವಿಚರಿತೆಯಲ್ಲಿ 'ಈತನಿಗೆ ಮೊದಲು ದೇವನಂದಿ ಎಂಬ ಹೆಸರು ಇದ್ದಿತು. ತರುವಾಯ ಬುದ್ಧಿ ಮಾಹಾತ್ಮ್ಯದಿಂದ ಜಿನೇಂದ್ರ ಬುದ್ಧಿ ಎಂಬ ನಾಮಧೇಯವು ಉಂಟಾಯಿತು. ಬಳಿಕ ವನದೇವತೆಗಳಿಂದ ಇವನ ಪಾದಗಳು ಪೂಜಿಸಲ್ಪಟ್ಟುದರಿಂದ ಪೂಜ್ಯಪಾದ ಎಂಬ ಹೆಸರು ಬಂದಿತು. ಈತನ ಪಾದತೀರ್ಥ ಸ್ಪರ್ಶದಿಂದ ಕಬ್ಬಿಣವು ಚಿನ್ನವಾಯಿತು. ಈತನು ಪೂರ್ವ ವಿದೇಹಕ್ಕೆ ಹೋಗಿ ಜಿನದರ್ಶನ ಮಾಡಿದನು.'[1]

---

1 ಕರ್ಣಾಟಕ ಕವಿಚರಿತೆ (೧೯೬೩), ಪ್ರಥಮ ಸಂಪುಟ, ಪು. ೭

ಪೂಜ್ಯಪಾದ ಮುನಿಯ ಕಾಲ ವಿಚಾರವಾಗಿ ಸದ್ಯಕ್ಕೆ ತತ್ತ್ವರತ್ನ ಪ್ರದೀಪಿಕೆಯ ಸಂಪಾದಕರಾದ ಎ ಶಾಂತರಾಜಶಾಸ್ತ್ರೀ ಅವರ ಹೇಳಿಕೆಯನ್ನಿಲ್ಲಿ ಉದ್ಧರಿಸಬಹುದು.

"ಪೂಜ್ಯಪಾದರ ಕಾಲವಾವುದೆಂದು ಪರಿಶೀಲಿಸುವುದಾದರೆ,

೧. ಅವರು ಕಿ ಸ್ತ ಶಕ ಎರಡನೆಯ ಶತಮಾನದವರಾದ ಸ್ವಾಮಿ ಸಮಂತಭದ್ರಾಚಾರ್ಯರಿಗಿಂತ ಕಿರಿಯರಾಗಿರುವುದರಿಂದಲೂ,

೨. ಕ್ರಿಸ್ತ ಶಕ ೪೬೮ರಲ್ಲಿ ದ್ರಾವಿಡ ಸಂಘವನ್ನು ಸ್ಥಾಪಿಸಿದ ವಜ್ರಮುನಿಗಿಂತ ಅವನ ಗುರುವಾದ ಪೂಜ್ಯಪಾದಾಚಾರ್ಯರು ಹಿರಿಯರಾಗಿರುವುದರಿಂದಲೂ,

೩. ಪೂಜ್ಯಪಾದ ಚರಿತೆಯಲ್ಲಿ ಅವರ ಕಾಲವು ಶಾಲಿವಾಹನ ಶಕ ೩೦೦ ಎಂದು ಹೇಳಿರುವುದರಿಂದಲೂ,

೪. ದೇವಚಂದ್ರನು ರಾಜಾವಳೀ ಕಥೆಯಲ್ಲಿಯೂ ಶಾಲಿವಾಹನ ಶಕ ೩೦೦ ಎಂದೇ ಉಲ್ಲೇಖಿಸಿರುವುದರಿಂದಲೂ,

೫. ಜುಗಮಂದರ ಲಾಲಜೈನಿಯವರಿಂದ ಇಂಗ್ಲಿಷಿನಲ್ಲಿ ಸಂಪಾದಿತವಾಗಿರುವ ತತ್ತ್ವಾರ್ಥ ಸೂತ್ರದ ಪ್ರಸ್ತಾವನೆಯಲ್ಲಿ

'His date of birth as stated in the Pattavalis is the 10th Jestha Sudi 308 Saka year' ಎಂದು ಹೇಳಿರುವುದರಿಂದಲೂ ಅವರು ಕ್ರಿ. ಶ. ನಾಲ್ಕನೆಯ ಶತಮಾನದ ಕೊನೆ (೩೭೮)ಯವರೆಂದು ಸಿದ್ಧವಾಗುವುದು."

ಪೂಜ್ಯಪಾದನ ಕಾಲವನ್ನು ಉಲ್ಲೇಖಿಸಿರುವ ಪ್ರಾಚೀನ ಸಂಸ್ಕೃತ ಕವಿ ಎಂದರೆ ಜಯದೇವ ಕವಿ. ಆತನ ಕಾಲ ಕ್ರಿ. ಶ ೭೩೦. ಸಂಸ್ಕೃತದಲ್ಲಿ ಹರಿವಂಶದ ಜಿನಸೇನ, ಛಂದೋನುಶಾಸನದ ಜಯಕೀರ್ತಿ, ಪಾಂಡವ ಪುರಾಣದ ಶುಭಚಂದ್ರ, ಸಮಯಭೂಷಣದ ಇಂದ ಭೂತಿ, ಯಶಸ್ತಿಲಕ ಚಂಪೂವಿನ ಸೋಮದೇವ ಸೂರಿ, ದರ್ಶನಸಾರದ ದೇವಸೇನ, ಜ್ಞಾನಾರ್ಣವದ ಆಚಾರ್ಯ ಶುಭಚಂದ್ರರೇ ಮೊದಲಾದವರು ಪೂಜ್ಯಪಾದನನ್ನು ಸ್ಮರಿಸಿದ್ದಾರೆ.

ಕನ್ನಡ ಕವಿಗಳು ಅವರಲ್ಲಿಯೂ ಜೈನಕವಿಗಳು ಪೂಜ್ಯಪಾದನ ಹೆಸರನ್ನು ಬಿಡದೆ ನೆನಪಿಸಿಕೊಂಡಿದ್ದಾರೆ. ಆದಿ ಪಂಪನಿಂದ ಹಿಡಿದು ಹದಿನೆಂಟನೆಯ ಶತಮಾನದವರೆಗೆ ಆತನ ಗುಣಗಾನ ಮಾಡಿದ್ದಾರೆ. ಪೂಜ್ಯಪಾದನ ಬಗ್ಗೆ ೧೮ನೆಯ ಶತಮಾನದಲ್ಲಿದ್ದ ದೇವಚಂದ್ರನು ಒಂದು ಸಾಂಗತ್ಯ ಕೃತಿಯನ್ನೇ ರಚಿಸಿರುವನು. ಕನ್ನಡ ಕವಿಗಳಲ್ಲಿ ಕೆಲವರ ಉಲ್ಲೇಖವನ್ನು ಇಲ್ಲಿ ಗಮನಿಸಬಹುದು.

ಪಂಪ : ಆದಿಪುರಾಣ (೧ ೧೧) ದಲ್ಲಿ
ಶ್ರೀಮತ್ಸಮಂತ ಭದ್ರ
ಸ್ವಾಮಿಗಳ ಜಗತ್ಪ್ರಸಿದ್ಧ ಕವಿಪರಮೇಷ್ಠಿ
ಸ್ವಾಮಿಗಳ ಪೂಜ್ಯಪಾದ
ಸ್ವಾಮಿಗಳ ಪದಂಗಳಿಂಗೆ ಶಾಶ್ವತ ಪದಮಂ

ಮೇಘಚಂದ್ರ : ೧೧೪೮ರಲ್ಲಿ 'ವಿತತಯಶೋನಿಧಿ ಪಂಪನ ಸುತಂಗೆ ತಿಳಿವಂತು ಪೊಚ್ಚ ಪೊಸಗನ್ನಡದಿಂ' ಎಂದು ಪೂಜ್ಯಪಾದನ ಸಮಾಧಿ ಶತಕಕ್ಕೆ ವ್ಯಾಖ್ಯಾನ ಬರೆದುದಾಗಿ ತಿಳಿದುಬರುತ್ತದೆ.[1]

ಶಾಂತಿನಾಥನು ಅನಂತನಾಥ ಪುರಾಣದಲ್ಲಿ (ಕ್ರಿ.ಶ. ೧೨೩೦) ಗುರು ಪರಂಪರೆಯನ್ನು ತಿಳಿಸುತ್ತಾ, ಅವರಲ್ಲಿ ಒಬ್ಬನಾದ ಪೂಜ್ಯಪಾದನನ್ನು ಸ್ತುತಿಸಿದ್ದಾನೆ (೧-೧೪, ೧೫, ೧೬).

ಬಾಹುಬಲಿ ಪಂಡಿತ : ನಾಗಕುಮಾರ ಚರಿತೆಯ ಪೀಠಿಕಾ ಸಂಧಿಯ ೧೪ನೆಯ ಪದ್ಯದಲ್ಲಿ–

ನಾಗಾರ್ಜುನನಟ್ಟಿದ ಸಿದ್ಧರಸಕೆಣೆ
ಯಾಗೆ ಕಾಲ್ತೊಳೆದುದಕವನು
ತೂಗಿ ತೋಱಿದ ಪೂಜ್ಯಪಾದರ ಪಾದಕ್ಕೆ
ಬಾಗುವೆನೆನ್ನ ಶಿರವ

ಬಾಲಚಂದ್ರ : ಸು. ಕ್ರಿ. ಶ. ೧೧೫೦ರಲ್ಲಿದ್ದವನು. ತತ್ತ್ವರತ್ನ ಪ್ರದೀಪಿಕೆಯಲ್ಲಿ–

ಶ್ರೀನಿಧಿ ಸಮಂತಭದ್ರನ
ನೂನಬಲಂ ಪೂಜ್ಯಪಾದನಜಿತನಜಂ ವಿ
ದ್ಯಾನಂದಂ ತತ್ತ್ವಶ್ರ
ದ್ಧಾನಮನೆಮಗೀಗೆ ಸಮಯಸಾರಂ ವೀರಂ

ವೃತ್ತವಿಳಾಸ : ಧರ್ಮಪರೀಕ್ಷೆ (೧-೧೪)ಯಲ್ಲಿ

ಭರದಿಂ ಜೈನೇಂದ್ರಮಂ ಭಾಸುರಮೆನಲೊರೆದಂ ಪಾಣೀಯಕ್ಕೆ ಟೀಕಂ
ಬರೆದಂ ತತ್ತ್ವಾರ್ಥಮಂ ಟಿಪ್ಪಣದಿನಡಿನಱಿಪಿದಂ ಯಂತ್ರಮಂತ್ರಾದಿ ಶಾಸ್ತ್ರೋ
ತ್ಕರಮಂ ಭೂರಕ್ಷಣಾರ್ಥಂ ವಿರಚಿಸಿ ಜಸಮಂ ತಾಳ್ದಿದಂ ವಿಶ್ವವಿದ್ಯಾ
ಭರಣಂ ದೇವಾಂಗನಾರಾಧಿತ ಪದಕಮಳಂ ಪೂಜ್ಯಪಾದ ವ್ರತೀಂದ್ರಂ.

ನಾಗಚಂದ್ರ : ಮಲ್ಲಿನಾಥ ಪುರಾಣ (೧-೧೪)ದಲ್ಲಿ

ಕವಿಪರಮೇಷ್ಠಿಗಳಗುಣ
ಸ್ತವನಂಗಳ್ ಪೂಜ್ಯಪಾದಯತಿಪತಿಯಗುಣ
ಸ್ತವನಂಗಳೊರ್ಮೆ ನಾಲಗೆ
ಗೆ ವಂದ ಮಾನವನ ವಾಙ್ಮಲಂ ಸಿಂದಪುದೇ

ಪಂಚಬಾಣ : (೧೬೧೨) ಭುಜಬಲ ಚರಿತೆ (೧-೨೧)ಯಲ್ಲಿ

ಪರಮಾಗಮ ವ್ಯಾಕರಣ ಸಂಹಿತೆ ವೈದ್ಯ
ಶರಧಿಶಶಾಂಕನೆಂದೆನಿಪ
ಉರುತರ ಪೂಜ್ಯಪಾದ ಸ್ವಾಮಿಗಳ ಶ್ರೀ
ಚರಣವೆ ಶರಣಕ್ಕೆನಗೆ

[1] Indian Antiquary XIV (ಕ. ಕ. ಚ. ಸಂ. ೧, ಪುಟ ೧೬೭)

ಚಾವುಂಡರಾಯ : ತ್ರಿಷಷ್ಟಿಲಕ್ಷಣಮಹಾಪುರಾಣ (೧-೭)ದಲ್ಲಿ

ಸುಕವಿ ಪ್ರಣುತರ್ ವ್ಯಾಕರ
ಣಕರ್ತೃಗಳ್ ಗಮಕ ಸುಸಮರ್ಥರ್ ತಾ
ರ್ಕಿಕ ತಿಳಕರೆಂದು ಪೊಗಳ್ವುದು
ಸಕಲಜನಂ ಪೂಜ್ಯಪಾದ ಭಟ್ಟಾರಕರಂ

ಇನ್ನು ಪೂಜ್ಯಪಾದನ ಕೃತಿಗಳನ್ನು ಗಮನಿಸಬಹುದು. ಡಾ. ಹಂ ಪ ನಾಗರಾಜಯ್ಯನವರು ತಮ್ಮ ಒಂದು ಲೇಖನದಲ್ಲಿ ಕೊಟ್ಟಿರುವುದನ್ನೇ ಇಲ್ಲಿ ಉದ್ಧರಿಸಲಾಗಿದೆ.[1] ಈ ಕೃತಿಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ:

೧. ಜೈನೇಂದ್ರ ವ್ಯಾಕರಣ ೨. ನ್ಯಾಯ ಕುಮುದ ಚಂದ್ರೋದಯ ೩. ಮುಗ್ಧಬೋಧ ವ್ಯಾಕರಣ ೪. ಶಬ್ದಾವತಾರ ಟೀಕೆ ೫. ಛಂದಶ್ಶಾಸ್ತ್ರ ೬. ಸರ್ವಾರ್ಥಸಿದ್ಧಿ ೭. ವೈದ್ಯಸಾರ ೮. ಇಷ್ಟೋಪದೇಶ ೯. ಸಮಾಧಿಶತಕ ೧೦. ಸಾರಸಂಗ್ರಹ ೧೧. ಜೈನಾಭಿಷೇಕ ೧೨. ಜ್ಞಾನಚಂದ್ರಚರಿತೆ ೧೩. ದಶಭಕ್ತಿ ೧೪. ಶಾಂತ್ಯಷ್ಟಕ ೧೫. ಪಂಚಕವಸ್ತು ೧೬. ಸ್ವಪ್ನಾವಲೀ. ಮೇಲ್ಕಂಡ ಕೃತಿಗಳಲ್ಲಿ ಸರ್ವಾರ್ಥಸಿದ್ಧಿ, ಇಷ್ಟೋಪದೇಶ, ಸಮಾಧಿಶತಕ, ದಶಭಕ್ತಿಗಳು ಉಪಲಬ್ಧವಿದ್ದು ಅಧ್ಯಾತ್ಮವನ್ನೂ ಆತ್ಮೋದ್ಧಾರವನ್ನೂ ಬೋಧಿಸುತ್ತವೆ.

ಜೈನೇಂದ್ರ ವ್ಯಾಕರಣದ ಬಗೆಗೆ ಡಾ. ಎಂ ಡಿ ವಸಂತರಾಜ್ ಅವರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳದೆ ವಿಧಿಯಿಲ್ಲ:[2]

"ಸಾಧಾರಣವಾಗಿ ಇಂದ್ರ, ಚಂದ್ರ ಮುಂತಾದ ಎಂಟು ಪ್ರಾಚೀನ ವ್ಯಾಕರಣಗಳನ್ನು ಹೆಸರಿಸಿರುವುದು ಕಂಡುಬರುತ್ತದೆ. ಈ ಎಂಟು ವ್ಯಾಕರಣಗಳಲ್ಲಿ ಜೈನೇಂದ್ರವೂ ಒಂದು ಎಂಬುದು ಪ್ರಕೃತದಲ್ಲಿ ಗಮನಾರ್ಹವಾದ ಅಂಶ. ಈಗ ದೊರೆಯುವ ಜೈನ ವ್ಯಾಕರಣಗಳಲ್ಲಿ ಇದು ಅತ್ಯಂತ ಪ್ರಾಚೀನವಾದುದು. ಇತರ ಕರ್ತೃವಿನ ಬಗ್ಗೆ ವಿಪುಲ ಚರ್ಚೆ ನಡೆದು ಕೊನೆಯದಾಗಿ ಪ್ರಸಿದ್ಧ ತತ್ತ್ವಾರ್ಥ ಸೂತ್ರದ ವ್ಯಾಖ್ಯಾನ, ಸರ್ವಾರ್ಥಸಿದ್ಧಿ, ಸಮಾಧಿಶತಕ, ಇಷ್ಟೋಪದೇಶ, ದಶಭಕ್ತ್ಯಂತರ್ಗತ ಸಂಸ್ಕೃತ ಭಕ್ತಿ ಪಾಠಗಳ ಕರ್ತೃ ಪೂಜ್ಯಪಾದದೇವನಂದಿಯು ಇದರ ಕರ್ತೃವೆಂಬ ವಾದ ಅಂತಿಮವಾಗಿ ಸರ್ವಸಮ್ಮತವಾಗಿ ನಿಂತಿದೆ." ಇದೇ ಲೇಖಕರ "ದೇವನಂದಿ ಪೂಜ್ಯಪಾದ ರಚಿತ ಜೈನೇಂದ್ರ ವ್ಯಾಕರಣ" ಎಂಬ ಅಪ್ರಕಟಿತ ಲೇಖನದಲ್ಲಿರುವ ಹೇಳಿಕೆಯನ್ನು ಇಲ್ಲಿ ಗಮನಿಸುವುದೂ ಸೂಕ್ತ.

"ಪೂಜ್ಯಪಾದ ಎಂಬ ಹೆಸರನ್ನು ಹೇಳಿದ ಕೂಡಲೆ ಅದು ಸರ್ವಾರ್ಥ ಸಿದ್ಧಿಯ ವಚನಕಾರ ದೇವನಂದಿಯನ್ನೇ ಸೂಚಿಸುವುದೆಂದೇನಿಲ್ಲ. ಹಾಗೂ ದೇವನಂದಿ ಎಂಬ ಹೆಸರು ಸರ್ವತ್ರ 'ಪೂಜ್ಯಪಾದ' ಎಂಬ ಹೆಸರಿನೊಡನೆ ಕೂಡಿಕೊಳ್ಳಬೇಕೆಂದೇನೂ

---

[1] ಆಸ್ವಾದ, ಪುಟ ೩೩೨.

[2] ಸಂ : ಹ ನಾಗರಾಜಯ್ಯ, ಜೈನ ಸಾಹಿತ್ಯ ಸಮ್ಮೇಳನ (೧೯೮೫), ಸನ್ಮತಿ ಸಾಹಿತ್ಯ ಪರಿಷತ್ತು, ಬೆಂಗಳೂರು. ಲೇಖನ : ಎಂ ಡಿ ವಸಂತರಾಜ್, ಪು. ೧೦೬-೧೦೮.

ಇಲ್ಲ ...ದೇವನಂದಿಗೆ ಪೂಜ್ಯಪಾದ ಎಂಬ ಗೌರವದ ಪ್ರಸಿದ್ಧಿಯ ಹೆಸರೂ ಇದ್ದಿತೆಂದು ಕ್ರಿ ಶ ೧೦ನೇ ಶತಮಾನದಾದಿಯ ಐತಿಹ್ಯಗಳಿಂದ ತಿಳಿದು ಬರುವುದು. ಮೊದಲಿಗೆ 'ದೇವನಂದಿ' ಎಂಬ ಹೆಸರು ರೂಢಿಯಲ್ಲಿ ಬಂದಿತೆಂದು ಶ್ರವಣಬೆಳಗುಳದ ಒಂದೆರಡು ಶಾಸನಗಳು ಹೇಳಿವೆ. ಅವು ಹೀಗಿವೆ :

ಯೋ ದೇವನಂದಿ ಪ್ರಥಮಾಭಿಧಾನೋ
ಬುದ್ಧ್ಯಾ ಮಹತ್ಯಾ ಸ ಜಿನೇದ್ರಂ ಬುದ್ಧಿಃ ।
ಶ್ರೀ ಪೂಜ್ಯಪಾದೋಜನಿ ದೇವತಾಭಿರ್ಯತ್
ಪೂಜಿತಂ ಪಾದಯುಗಂ ಯದೀಯಂ ॥

ಜಿನೇಂದ್ರ ನಿಜ ಶಬ್ದಭಾಗ ಮತುಳಂ ಸರ್ವಾರ್ಥಸಿದ್ಧಿಃ ಪರಾ
ಸಿದ್ಧಾಂತೇ ನಿಪುಣತ್ವ ಮುದ್ಧಕವಿತಾಂ ಜೈನಾಭಿಷೇಕಃ ಸ್ವಕಃ
ಛಂದಸ್ಸೂಕ್ಷ್ಮಧಿಯಾಂ ಸಮಾಧಿಶತಕ ಸ್ವಾಸ್ಥ್ಯಂ ಯದೀಯಂ ವಿದಾ
ಮುಖ್ಯಾತೀಹಸ ಪೂಜ್ಯಪಾದ ಮುನಿಪಃ ಪೂಜ್ಯೋ ಮುನೀನಾಗಣೈಃ [1] ॥

ಈ ಶಾಸನಗಳಲ್ಲದೆ ಚಾಮರಾಜನಗರದ (ಸಂ. ೭. IV. ಪು. 5) ಒಂದು ಶಾಸನದಲ್ಲಿ (ಎಪಿಗ್ರಾಫಿಯಾ ಕರ್ಣಾಟಿಕ, ೧೯೭೫) ಪೂಜಾಂಘ್ರಿ ಎಂಬ ನಾಮ ಪದದ ಉಲ್ಲೇಖವಿದೆ. ಇಲ್ಲಿ ಆ ಪದಕ್ಕೆ 'ಪೂಜ್ಯಪಾದ'ನೆಂದೇ ಅರ್ಥ. ಆ ಶಾಸನ ಹೀಗಿದೆ :

ಶ್ರೀಮತ್ಸ್ವಾಮಿ ಸಮನ್ತಭದ್ರಮುನಿಪೋ ದೇವಾಕಳಂಕ ಸ್ತುತಃ
ಶ್ರೀ ಪೂಜ್ಯಾಂಘ್ರಿರುದಾತ ವಿತ್ತನಿಳಯಿೂ ಶ್ರೀವಾದಿ ರಾಜಾಂಬುದಾ
ಆಚಾರ್ಯೋ ದ್ರವಿಡಾನ್ವಯೋ ಜಿನಮುನಿಃ ಶ್ರೀ ಮಲ್ಲಿಷೇಣ ವ್ರತೀ
ಶ್ರೀಪಾಳಃ ಪರಿಪಾಳಿತಾಖಿಳ ಮುನಿಸ್ಸೋನಂತ ವೀರ್ಯಕ್ರಮಃ

ಹೀಗೆ ಅನೇಕ ಶಾಸನಗಳು ಪೂಜ್ಯಪಾದನನ್ನು ಹೊಗಳಿರುವುದನ್ನು ನೋಡ ಬಹುದು. ಶಾಸನಗಳಿಂದ ಮುಖ್ಯಾಂಶಗಳನ್ನು ಸಂಗ್ರಹಿಸುವುದಾದರೆ ಪೂಜ್ಯಪಾದನ ಬಗ್ಗೆ ಈ ಗುಣವಿಶೇಷಗಳು ದೊರೆಯುತ್ತವೆ.

ಬಾಲ್ಯದಲ್ಲಿ ಪೂಜ್ಯಪಾದನಿಗೆ ದೇವನಂದಿ ಎಂಬ ಹೆಸರಿತ್ತು. ಆತನ ಗುರುವು ಅವನ ಜ್ಞಾನಸಂಪತ್ತನ್ನು ಕಂಡು ಅವನನ್ನು ಜಿನೇಂದ್ರಬುದ್ಧಿ ಎಂತಲೂ ವನದೇವತೆ ಗಳಿಂದ ಪೂಜಿತನಾಗುತ್ತಿದ್ದುದರಿಂದ ಪೂಜ್ಯಪಾದನೆಂತಲೂ ಕರೆಯುತ್ತಿದ್ದರು. ಈತನು ವ್ಯಾಕರಣ ವೈದ್ಯ ಶಾಸ್ತ್ರಗ್ರಂಥಗಳಲ್ಲಿ ಪ್ರಕಾಂಡ ಪಂಡಿತನಾಗಿದ್ದುದಲ್ಲದೆ 'ಜಿನ'ನಲ್ಲಿರಬೇಕಾದ ವಿಶೇಷ ಗುಣಗಳನ್ನು ಹೊಂದಿದ್ದುದರಿಂದ ಜಿನೇಂದ್ರಬುದ್ಧಿ

---

[1] ಎಪಿಗ್ರಾಫಿಯ ಕರ್ನಾಟಕ ಸಂ II (೧೯೭೩) ಶಾಸನ ಸಂಖ್ಯೆ ೬೪. ಇದಲ್ಲದೆ ಇನ್ನೂ ಅನೇಕ ಶಾಸನಗಳು ಪೂಜ್ಯಪಾದನನ್ನು ಹೆಸರಿಸುತ್ತವೆ. ಉದಾ : ಶಾ ಸಂ ೭೧ (೬೪) ಪಂಕ್ತಿ ೨೬–೩೬, ಶಾ ಸಂ ೭೯ (೬೯) ಪಂಕ್ತಿ ೮೩-೮೮, ಶಾ ಸಂ ೧೫೬ (೧೨೭) ಪಂಕ್ತಿ ೧೦೬–೧೧೦, ಶಾ ಸಂ ೧೭೩ (೧೮೧-೧೦೬) ಇತ್ಯಾದಿ.

ಎಂಬ ಹೆಸರೂ ಬಂದಿತು. ಈತನ ಪಾದಗಳನ್ನು ತೊಳೆದ ನೀರನ್ನು ಲೋಹದ ಮೇಲೆ ಹಾಕಿದಾಗ ಅದು ಚಿನ್ನವಾಗಿ ಪರಿವರ್ತಿಸಿತು ; ಹಾಗಾಗಿ ವನದೇವತೆಗಳಿಂದಲೂ ಕವಿಗಳಿಂದಲೂ ಪೂಜಿತನಾಗಿದ್ದನು.

ಒಟ್ಟಿನಲ್ಲಿ ಈ ಪೂಜ್ಯಪಾದಮುನಿಯು ೪–೫ನೆಯ ಶತಮಾನದಲ್ಲಿದ್ದು ಕವಿಯಾಗಿ ಮಾತ್ರವಲ್ಲದೆ ಸಚ್ಚಾರಿತ್ರದ ಬಹು ಪೂಜ್ಯವ್ಯಕ್ತಿಯಾಗಿ ಜೈನರಿಗೆ ಪ್ರಾತಃಸ್ಮರಣೀಯನಾಗಿದ್ದಾನೆಂದರೆ ಅತಿಶಯೋಕ್ತಿಯಾಗಲಾರದು.[1]

---

[1] ವಿವರಗಳಿಗೆ ಇದೇ ಲೇಖಕನಿಂದ ಸಂಪಾದಿತವಾಗಿರುವ ಕೃತಿಯನ್ನು ಅವಲೋಕಿಸಬಹುದು. ಪೂಜ್ಯಪಾದ ಚರಿತೆ, (೧೯೮೮) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಧರ್ಮಾಧಿಕಾರಿ ಶ್ರೀ ಮಂಜಯ್ಯ ಹೆಗ್ಗಡೆಯವರು

ಪ. ನಾಗರಾಜಯ್ಯ

ಮಹಾಚೇತನ, ದೇವರಂಥ ಮನುಷ್ಯ, ಮಾತಾಡುವ ಮಂಜುನಾಥ ಎಂದೆಲ್ಲ ಖ್ಯಾತನಾಮರಾಗಿ, ಶ್ರೇಷ್ಠ ದ್ರಷ್ಟಾರರಾಗಿ ಬಾಳಿದವರು ಶ್ರೀ ಕ್ಷೇತ್ರ, ಧರ್ಮಸ್ಥಳದ, ಧರ್ಮಾಧಿಕಾರಿ ಶ್ರೀ ಮಂಜಯ್ಯ ಹೆಗ್ಗಡೆಯವರು.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ವಿಟ್ಲ ಪ್ರಾಂತದ ಒಂದು ಗ್ರಾಮ ಕೇಪು. ಈ ಗ್ರಾಮ ಹಿಂದೆ ವಿಟ್ಲದ ಹೆಗ್ಗಡೆಯವರ ಆಳ್ವಿಕೆಗೆ ಸೇರಿದ್ದಿತು. ಅಲ್ಲಿನ ಜನರ ದೂರುಗಳನ್ನು ನಿವಾರಿಸಿ ತೀರ್ಮಾನಿಸುವ ಕೆಲಸ, ಅಲ್ಲಿನ ಪಟೇಲಿಕೆ-ಇವು ಆವರ ಗೌರವದ ಪ್ರತೀಕಗಳಾಗಿದ್ದವು. ಇಂತಹ ಗೌರವದ ಮನೆತನದ ಹೆಣ್ಣು ಮಗಳು ಶ್ರೀಮತಿ ಅನಂತಮತಿ ಅಮ್ಮನವರು. ಇವರನ್ನು ಚಿಕ್ಕಿತ್ತಡಿ ಅಣ್ಣಿಯಾನೆ ಪದ್ಮ ಶೆಟ್ಟರಿಗೆ (ಅಣ್ಣಿಶೆಟ್ಟರಿಗೆ) ಮದುವೆ ಮಾಡಿಕೊಟ್ಟಿದ್ದರು. ಈ ದಂಪತಿಗಳ ಏಕ ಮಾತ್ರ ಪುತ್ರರತ್ನವೇ ನಮ್ಮ ಶ್ರೀ ಮಂಜಯ್ಯನವರು (ಜನನ: ನವಂಬರ್ ೨, ೧೮೮೮).

ಇವರ ಶಿಕ್ಷಣ ವಿಟ್ಲದಲ್ಲಿ ಮೊದಲಾಗಿ ಧರ್ಮಸ್ಥಳದಲ್ಲಿ ಮುಂದುವರಿದು ನಾಲ್ಕನೆ ತರಗತಿಗೇ ನಿಂತಿತು ಹುಡುಗನಿಗೆ ಓದಿನಲ್ಲಿ ಆಸಕ್ತಿಯಿತ್ತಾದರೂ ಓದಿಸಬೇಕಾದ ಹಿರಿಯರಿಗೆ ಅನುಕೂಲವಾದ ಅವಕಾಶವಿರಲಿಲ್ಲ. ಸ್ವಲ್ಪ ದಿನಗಳ ಕಾಲ ಇಂಗ್ಲಿಷ್ ಭಾಷಾಭ್ಯಾಸ ಖಾಸಗಿಯಾಗಿ ನಡೆಯಿತು. ಅಷ್ಟರಲ್ಲಿ ಈ ಹುಡುಗ ಎತ್ತರದಿಂದ ಬಿದ್ದು, ಕಾಲಿಗೆ ಪೆಟ್ಟಾಗಿ ಈ ಬಾಧೆಯಲ್ಲೇ ಒಂದೆರಡು ವರ್ಷ ಕಳೆಯಿತು. ಓದಿನ ಆಸಕ್ತಿಯಿಂದ ವಿಮುಖನಾಗದಿದ್ದ ಬಾಲಕನ ಪ್ರಯತ್ನದಿಂದಲೇ ಪುತ್ತೂರಿನಲ್ಲಿ ಎರಡು ವರ್ಷ ಅಭ್ಯಾಸ ನಡೆದು, ಅನಂತರ ಮಂಗಳೂರಿನ ಕೆನರಾ ಹೈಸ್ಕೂಲಿನ ಮೂರನೆ ಫಾರಂಗೆ ಸೇರುವಂತಾಯಿತು. ಆ ಹೊತ್ತಿಗೆ ಮತ್ತೆ ವಿಘ್ನ. ಆರೋಗ್ಯ ಕೆಟ್ಟು ಒಂದು ವರ್ಷ ಅಭ್ಯಾಸ ನಿಂತಿತು. ಆರೋಗ್ಯ ಸುಧಾರಣೆಯ ನಂತರ ಅದೇ ಶಾಲೆಯಲ್ಲಿ ಅಭ್ಯಾಸವನ್ನು ಮುಗಿಸಿ, ಸೇಂಟ್ ಎಲೋಷಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ತರಗತಿಯಲ್ಲಿ ವ್ಯಾಸಂಗ ಮಾಡತೊಡಗಿದರು. ಇದು ಮುಗಿಯುವ ಮೊದಲೇ ಮತ್ತೆ ವಿಘ್ನ. ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿದ್ದ ಶ್ರೀ ಚಂದಯ್ಯ ಹೆಗ್ಗಡೆಯವರ ಅಕಾಲ ಮರಣದಿಂದ ತೆರವಾದ ಧರ್ಮಾಧಿಕಾರ ಪೀಠವನ್ನು (೧೯೧೮ನೆ ಅಕ್ಟೋಬರ್‌ನಲ್ಲಿ) ಸ್ವೀಕರಿಸಿದರು; ಸು. ೮೦೦ ವರ್ಷಗಳ ಹಳಮೆಯ ಶ್ರೀ ಕ್ಷೇತ್ರಕ್ಕೆ, ಶ್ರೀ ಭರಮಣ್ಣ ಹೆಗ್ಗಡೆಯವರಿಂದ ಮೊದಲಾದ ಹೆಗ್ಗಡೆ ಪರಂಪರೆಯಲ್ಲಿ ೨೧ನೆ ಧರ್ಮಾಧಿಕಾರಿಯಾದರು. ಅಂದಿನಿಂದ ಶ್ರೀ ಕ್ಷೇತ್ರದ ಇತಿಹಾಸದಲ್ಲಿ ಹೊಸ ಅಧ್ಯಾಯ-ಸುವರ್ಣಾಧ್ಯಾಯ ಪ್ರಾರಂಭವಾಯಿತು.

ಹೆಗ್ಗಡೆಯವರು ಅಧಿಕಾರಕ್ಕೆ ಬಂದಾಗ ಕೈಗೊಳ್ಳಲೇಬೇಕಾಗಿದ್ದ ಮೊದಲ ಕೆಲಸವೆಂದರೆ ಕ್ಷೇತ್ರದ ಮತ್ತು ಆಸುಪಾಸಿನ ಜನರ ಆರೋಗ್ಯ ಸುಧಾರಣೆ. ಇದಕ್ಕಾಗಿ, ಸರಕಾರ ಮಲೇರಿಯಾನಿರ್ಮೂಲನಾ ಕಾರ್ಯವನ್ನು ಧರ್ಮಸ್ಥಳದಿಂದಲೇ ಪ್ರಾರಂಭಿಸುವಂತೆ ಮಾಡಿದರು. ಇದರ ಫಲವಾಗಿ ೨-೩ ವರ್ಷಗಳಲ್ಲೇ ಜನರ ಆರೋಗ್ಯ ಸುಧಾರಣೆಯಾಗುತ್ತಾ ಬಂದಿತು. ಇದಕ್ಕೆ ಪೂರಕವಾಗಿ ಅಲ್ಲಿನ ಆರೋಗ್ಯ ಕೇಂದ್ರವನ್ನು ಅಭಿವೃದ್ಧಿಪಡಿಸಿದರು. ವೈಯಕ್ತಿಕ ಕಾರಣಗಳಿಂದಾಗಿ ವೈದ್ಯಕೀಯ ಸೇವೆಯನ್ನೇ ಬಿಟ್ಟುಹೋಗಲಿದ್ದ ವೈದ್ಯರ ಮನವೊಲಿಸಿ, ತಮ್ಮಲ್ಲಿನ ಆಯುರ್ವೇದ ಆರೋಗ್ಯ ಕೇಂದ್ರಕ್ಕೆ ಕರೆಸಿಕೊಂಡರು. ಬಡತನದಿಂದಾಗಿ ತಮ್ಮ ಔಷಧೋಪಚಾರಗಳನ್ನು ಮಾಡಿಕೊಳ್ಳಲಾಗದ ಜನರನ್ನು ಕಂಡು ಕನಿಕರಿಸಿದ ಶ್ರೀ ಹೆಗ್ಗಡೆಯವರು ಆಸುಪಾಸಿನ ಗ್ರಾಮೀಣ ಪ್ರದೇಶಗಳವರಿಗೂ ಔಷಧೋಪಚಾರಗಳನ್ನು ಒದಗಿಸಿಕೊಡುವ ಸಲುವಾಗಿ (೧೯೭೨ರ ಅಂತ್ಯಭಾಗದಲ್ಲಿ) ಸಂಚಾರಿ ಆಯುರ್ವೇದ ಚಿಕಿತ್ಸಾಲಯವನ್ನು ತೆರೆದು ಉಪಕಾರ ಮಾಡಿದರು. ಇದರ ಫಲವನ್ನು ಸುತ್ತಮುತ್ತಲಿನ ಸಾವಿರಾರು ಜನ ಪಡೆದುಕೊಳ್ಳುವಂತಾದರು. ಪ್ರಥಮದಲ್ಲಿ ಧರ್ಮಸ್ಥಳವನ್ನು ಕೇಂದ್ರವಾಗಿಟ್ಟುಕೊಂಡು ಮುಂದೆ ೧೦-೧೬ ಮೈಲುಗಳ ವಿಸ್ತೀರ್ಣಕ್ಕೆ ಇದರ ಪ್ರಯೋಜನ ವಿಸ್ತರಿಸಿತು. ಈ ಉಪಚಾರವನ್ನು ಪಡೆದುಕೊಳ್ಳುವ ಜನ ಹೆಚ್ಚಿದಂತೆಲ್ಲ, ಬೇಕಾದ ಔಷಧಗಳನ್ನು ಕೊಳ್ಳುವ ಆರ್ಥಿಕ ಹೊಣೆ ಹೆಚ್ಚಾಗುವುದನ್ನು ಕಂಡು ತಮ್ಮಲ್ಲಿಯೇ ಔಷಧ ಸಿದ್ಧಪಡಿಸುವ ಕೆಲಸವನ್ನೂ ಪ್ರಾರಂಭಿಸಿದರು. ಇದಕ್ಕೆ ಪೋಷಕವಾಗುವಂತೆ ಗಿಡಮೂಲಿಕೆಗಳನ್ನು ಬೆಳೆಸುವಂತಹ ಒಂದು ಉದ್ಯಾನವನ್ನೇ ನಿರ್ಮಿಸುವ ಆಶಯವನ್ನು ಹೊಂದಿದ್ದರು. ಅಂತೆಯೇ, ಈ ವೈದ್ಯಕೀಯ ಸೇವೆ ನಿರಂತರವಾಗಿ ನಡೆದುಕೊಂಡು ಹೋಗಲು ಅನುಕೂಲವಾಗುವಂತೆ ಪ್ರತ್ಯೇಕವಾದ ನಿಧಿಯೊಂದನ್ನು ಸ್ಥಾಪಿಸುವ ಯೋಜನೆಯೂ ಒಂದಿದ್ದಿತು. ಆದರೆ ಈ ಎರಡೂ ನಡೆಯಲಾಗಲಿಲ್ಲ. ತಮ್ಮ ಜನಾರೋಗ್ಯ ಸೇವಾ ಯೋಜನೆಯ ಅಂಗವಾಗಿ ಜಿಲ್ಲೆಗೇ ಪ್ರಪ್ರಥಮವಾಗಿ ಡಾ. ಮೋದಿಯವರಿಂದ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು (ಸು. ೧೯೭೧ರಲ್ಲಿ) ಏರ್ಪಡಿಸಿ, ಬಡವರಿಗೆ ಮಹದುಪಕಾರ ಮಾಡಿದರು. ಹೀಗೆ ದಿನ ಸಾಗುತ್ತಾ ಔಷಧೋಪಚಾರವನ್ನು ಪಡೆದುಕೊಳ್ಳುವ ಜನ ಹೆಚ್ಚಿದಂತೆಲ್ಲ ಹೆಗ್ಗಡೆಯವರ ಮನಸ್ಸಿಗೆ ತೃಪ್ತಿಯಾಗುತ್ತಿತ್ತು.

ಧರ್ಮಸ್ಥಳದ ಲಕ್ಷದೀಪೋತ್ಸವ ನಾಡಿಗೇ ಸಂಭ್ರಮದ ಉತ್ಸವ. ಒಮ್ಮೆ (೧೯೮೨) ದೀಪೋತ್ಸವದ ಪೂಜೆ ಮುಗಿದು ಪ್ರಸಾದ ವಿನಿಯೋಗವಾಗುತ್ತಿದ್ದಾಗ ಹೆಗ್ಗಡೆಯವರು ತಮ್ಮೊಂದಿಗಿದ್ದ ಹುರುಳಿ ಭೀಮರಾಯರ ಕಡೆ ತಿರುಗಿ, 'ನಾಲಗೆಗೆ ಸವಿಯಾದಂತಾಯಿತು. ಜೊತೆಗೆ ಮನಸ್ಸಿಗೂ ಹರ್ಷವಾಗುವ ಧರ್ಮಾಮೃತವಿದ್ದರೆ ಎಷ್ಟು ಚೆನ್ನ ! ಅಲ್ಲವೆ ?' ಎಂದರಂತೆ. 'ಚಿನ್ನಕ್ಕೆ ಸುಗಂಧ ಬೆರೆಸಿದಂತಾದೀತು' ಎಂದ ಅವರ ಉತ್ತರದಿಂದ ಪ್ರೀತರಾಗಿ ಮರುದಿನವೇ ಪೂಜೆ ಆರತಿಗಳ ನಂತರ ಹೆಗ್ಗಡೆಯವರೇ ಎದ್ದುನಿಂತು 'ಬಹುದೂರದಿಂದ ಕಷ್ಟಪಟ್ಟು ಇಲ್ಲಿಗೆ ಆಗಮಿಸಿರುವ ನಿಮಗೆ

ಇಂದು ನಾಲಗೆಗೆ ಸಿಹಿ ನೀಡುವ ಪ್ರಸಾದದ ಜೊತೆಗೆ, ಅದಕ್ಕೂ ಮಿಗಿಲಾಗಿ ಮನಸ್ಸಿಗೆ ಸವಿಯಾಗುವ ಧರ್ಮಾಮೃತ ಪ್ರಸಾದವನ್ನು ನೀಡಬೇಕೆಂದು ನಿಶ್ಚಯಿಸಿ'ರುವುದನ್ನು ತಿಳಿಸಿ, 'ಶ್ರೀಯುತ ಹುರುಳಿ ಭೀಮರಾಯರು ಮಂಗಳೂರಿನಿಂದ ಇಲ್ಲಿಗೆ ಬಂದಿರುತ್ತಾರೆ. ಅವರಿಂದ ಸ್ವಲ್ಪ ಹೊತ್ತು ಧರ್ಮದ ಬಗೆಗೆ ನಾಲ್ಕು ಮಾತು ಕೇಳೋಣ' ಎಂದರು. ಅಂತೆಯೇ ಅವರೂ 'ಉತ್ಸವದ ಉದ್ದೇಶ ಮತ್ತು ಅದರ ಪ್ರಯೋಜನ' ಕುರಿತು ಮಾತನಾಡಿದರು. ಧರ್ಮ ಸಮ್ಮೇಳನಕ್ಕೆ ಇದೇ ನಾಂದಿಯಾಯಿತು. ಮರು ವರ್ಷ (೧೯೩೩)ದಿಂದಲೇ ದೀಪೋತ್ಸವ ಕಾಲದಲ್ಲಿ 'ವಿವಿಧ ಧರ್ಮ ಸಮ್ಮೇಳನ'ದ ಏರ್ಪಾಟಾಗತೊಡಗಿತು. ಮುಂದೆ ಇದು 'ಸರ್ವಧರ್ಮ ಸಮ್ಮೇಳನ' ಎಂದಾಗಿ ಇಂದಿಗೂ ನಡೆದು ಬರುತ್ತಿದೆ. ಆನಂತರ ಇದರೊಂದಿಗೆ ಸಾಹಿತ್ಯ ಸಮ್ಮೇಳನವೂ ಕೂಡಿಕೊಂಡಿತು. ಧರ್ಮ ಸಮನ್ವಯದ ಬೀಡಾದ ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಳನ ! ಎಂತಹ ಸುದೂರ ದೃಷ್ಟಿ !!

ಭಾರತೀಯ ಆಶ್ರಮ ಪದ್ಧತಿಯಲ್ಲಿ ಆದರ್ಶ ಶಿಕ್ಷಣ ನೀಡುವುದು ತರುಣರ ಭವಿಷ್ಯಕ್ಕೆ ಭವ್ಯ ಬುನಾದಿ ಎಂದು ಭಾವಿಸಿದ್ದ ಹೆಗ್ಗಡೆಯವರು ಉಜಿರೆಯ ಬಳಿ ವಿಶಾಲವಾದ ಪ್ರದೇಶದಲ್ಲಿ ಪ್ರಶಾಂತವಾದ ವಾತಾವರಣದಲ್ಲಿ 'ಸಿದ್ಧವನ ಗುರುಕುಲ' ಎಂಬ ಆಶ್ರಮ ವಿದ್ಯಾಸಂಸ್ಥೆ (ಜೂನ್ ೮, ೧೯೪೦)ಯನ್ನು ಪ್ರಾರಂಭಿಸಿದರು. ಸಂಸ್ಕೃತ ಭಾಷೆಯ ಅಭ್ಯಾಸಕ್ಕೆ ಆದ್ಯತೆ ಇದ್ದ 'ಪ್ರಾಚ್ಯ ಪ್ರೌಢಶಾಲೆ'ಯನ್ನು (೧೯೩೪) ತೆರೆದರು. ಇದರ ಗ್ರಂಥಾಲಯವನ್ನು 'ಸಂಸ್ಕೃತ ಗ್ರಂಥಾಲಯ' ಎಂದು ಕರೆದು ಸಂಸ್ಕೃತ ಸಂವರ್ಧನೆಗೆ ಪೋಷಕವಾಗುವ ಸಂಸ್ಕೃತ ಗ್ರಂಥಗಳನ್ನೂ ಕವಿ ಕೃತಿಗಳನ್ನೂ ಆಯುರ್ವೇದ ವೈದ್ಯಕೀಯ ಸಂಸ್ಕೃತ ಗ್ರಂಥಗಳನ್ನೂ ಅಲ್ಲಿ ಸಂಗ್ರಹಿಸಿದರು. ಗುರುಕುಲದಲ್ಲಿ ಪುಸ್ತಕ ವಿದ್ಯೆಗಿಂತ ಉದ್ಯಮಶೀಲತೆಗೆ ಹೆಚ್ಚಿನ ಪ್ರಾಶಸ್ತ್ಯವಿತ್ತು. ಅಲ್ಲಿ ಕಲಿತವರು ಕರಕುಶಲಿಗರಾಗಿ ಕಾಯಕ ಮಾಡುತ್ತಾ ಗ್ರಾಮಾಂತರ ಸಾಮಾನ್ಯ ಜನರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಬೇಕೆಂದು ಅವರು ಬಯಸಿದ್ದರು. ಇದರಿಂದಾಗಿ ಅಲ್ಲಿ ಸಾಬೂನು ತಯಾರಿಕೆ, ಕುಂಬಾರಿಕೆ, ತೋಟಗಾರಿಕೆ, ಜೇನು ಸಾಕಣೆ ಮೊದಲಾದ ಕಾಯಕಗಳನ್ನು ಕಲಿಸಲಾಗುತ್ತಿತ್ತು. ಅಲ್ಲಿ ಎಲ್ಲ ಧರ್ಮೀಯರಿಗೂ ಪ್ರವೇಶಾವಕಾಶವಿದ್ದು, ಇದಕ್ಕೆ ಅನುಗುಣವಾದ ಪ್ರಾರ್ಥನೆಗಳ ಸಂಗ್ರಹವೊಂದನ್ನು ಪ್ರಕಟಿಸಿದ್ದು, ಇದನ್ನೇ ದಿನದ ಪ್ರಾರ್ಥನಾ ಸಭೆಗಳಲ್ಲಿ ಬಳಸಲಾಗುತ್ತಿತ್ತು. ಈ ವಿಷಯವಾಗಿ ಗಾಂಧೀಜಿ ಮತ್ತು ಪಾಂಡಿಚೆರಿಯ ಮಾತಾಜಿಯವರ ಕ್ರಮಗಳನ್ನು ಹೆಗ್ಗಡೆಯವರು ಅನುಸರಿಸಿದ್ದರು. ಸಹಪಂಕ್ತಿ ಭೋಜನವೂ ಅಲ್ಲಿನ ಮತ್ತೊಂದು ವೈಶಿಷ್ಟ್ಯ. ಆಶ್ರಮವಾಸಿಗಳ ನಡೆನುಡಿಗಳಲ್ಲಿ ಸಮನ್ವಯ ಸಹಿಷ್ಣು ಭಾವಗಳು ಬೆಳೆದು ಬರುವಂತೆ ಯೋಜಿಸಿದರು. ಗುರುಕುಲದ ಆವರಣದಲ್ಲಿರುವ ಹಲವಾರು ಹೆಮ್ಮರಗಳ ಜೊತೆಗೆ, ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಹೆಚ್ಚಿಸಲು ಸುಂದರ ಗುಲಾಬಿವನವನ್ನು ನಿರ್ಮಿಸಿದರು. ಇಂದು ಆ ಶಾಲೆಯಾಗಲಿ, ಆ ಅಭ್ಯಾಸ ಕ್ರಮವಾಗಲಿ ಉಳಿದಿಲ್ಲ. ಇಂದಿನ ಶಾಲಾ ಕಾಲೇಜುಗಳಿಗೇ ಮಕ್ಕಳು ಹೋಗಿ ಕಲಿಯುತ್ತಾರೆ. ಉಳಿದೆಲ್ಲ ಹಿಂದಿನಂತೆಯೇ

ಇಂದೂ ನಡೆಯುತ್ತಿದೆ. ಧಾರ್ಮಿಕ ಶಿಕ್ಷಣವನ್ನೂ ನೀಡಲಾಗುತ್ತಿದೆ. ಇಂದು ಇದೊಂದು ಮಾದರಿ ವಿದ್ಯಾರ್ಥಿನಿಲಯ.

ಉಜಿರೆಯ ಹೈಸ್ಕೂಲಿನ ಸ್ಥಾಪನಾ ಕಾರ್ಯದಲ್ಲಿ ಶ್ರೀ ಹೆಗ್ಗಡೆಯವರು ತೋರಿರುವ ಆಸಕ್ತಿ ಅಸಾಮಾನ್ಯವಾದುದು. ಆ ಸಂಬಂಧದ 'ಕರ್ನಾಟಕ ಗುರುಕುಲ ವಿದ್ಯಾವರ್ಧಕ ಸಂಘ, ಉಜಿರೆ' ಇದಕ್ಕೆ ರೂ. ಹತ್ತು ಸಾವಿರವನ್ನೂ ಮೂವತ್ತು ಎಕರೆ ಭೂಮಿಯನ್ನೂ ದಾನ ಮಾಡಿರುವರಲ್ಲದೆ, ಆ ಶಾಲೆಗೆ ನೂತನ ವಿದ್ಯಾರ್ಥಿ ಭವನವೊಂದನ್ನು ಸು. ನಲವತ್ತು ಸಾವಿರ ರೂ ಗಳ ವೆಚ್ಚದಿಂದ ಕಟ್ಟಿಸಿಕೊಟ್ಟಿರುತ್ತಾರೆ. ಬುನಾದಿ ಶಿಕ್ಷಣ ಶಾಲೆಯನ್ನು ಆರಂಭಿಸಿ, ಸಕಲ ಸಲಕರಣೆಗಳೊಂದಿಗೆ ಅದನ್ನು ಸರ್ಕಾರಕ್ಕೆ ವಹಿಸಿಕೊಟ್ಟರು. ಹಲವಾರು ವಿದ್ಯಾಸಂಸ್ಥೆಗಳಿಗೆ ಉದಾರ ಸಹಾಯವನ್ನು ನೀಡಿದರು. ಹೀಗೆ ಶಿಕ್ಷಣ ಪ್ರಸಾರಕ್ಕಾಗಿ ಶ್ರೀಯುತರು ಮಾಡಿರುವ ಕಾರ್ಯವು ಮಹತ್ತರವಾದುದು.

ನೇತ್ರಾವತಿ ನದಿಗೆ ಸೇತುವೆ ಇರಲಿಲ್ಲ. ಮಳೆಗಾಲ ಬಂತೆಂದರೆ ಮಹಾಪೂರ. ಶ್ರೀಕ್ಷೇತ್ರಕ್ಕೆ ಬರುವ ಭಕ್ತಾದಿಗಳು ಪ್ರವಾಹ ಇಳಿಯುವ ತನಕ ಆಸರೆಯಿಲ್ಲದೆ ದಿನ ಕಳೆಯಬೇಕಿತ್ತು. ಇವನ್ನು ಕಂಡು ನೊಂದ ಹೆಗ್ಗಡೆಯವರು ನದಿಗೆ ಸೇತುವೆ ಕಟ್ಟಿಸಲು ಮನಸ್ಸು ಮಾಡಿದರು. ಆದರೆ ಸರ್ಕಾರದ ಸಹಾಯ ಸಿಗಲಿಲ್ಲ. ಹೆಗ್ಗಡೆಯವರು ಹಿಂದೆಗೆಯದೆ ಜನೋಪಯೋಗಿಯಾದ ಈ ಕಾರ್ಯಕ್ಕೆ– ಸಾಹಸದ ಮಹಾಕಾರ್ಯಕ್ಕೆ ತಾವೇ ಧೈರ್ಯತಾಳಿ ಮುಂದಾಗಿಯೇ ಬಿಟ್ಟರು. ವರಮಾನದ ಅಭಾವವಿದ್ದ ಆ ಕಾಲದಲ್ಲೇ ಉರುಳು ಸೇತುವೆಯ ನಿರ್ಮಾಣ (೧೯೩೭) ಮಾಡಿದರು. ಅದನ್ನು ಇಂದಿಗೂ ಕಾಣಬಹುದಾಗಿದೆ. ಶ್ರೀಕ್ಷೇತ್ರದಲ್ಲಿ ಉಚಿತ ವಸತಿ ಮತ್ತು ಭೋಜನ ಸೌಕರ್ಯವು ಹಿಂದಿನಿಂದಲೂ ಇದ್ದಿತಾದರೂ ಇವರ ಕಾಲದಲ್ಲಿ ಯಾತ್ರಾರ್ಥಿಗಳು ಬರುವುದು ಹೆಚ್ಚಾದ ಕಾರಣ ಈ ಸೌಕರ್ಯವನ್ನು ಕಾಲ ಧರ್ಮಾನುಗುಣವಾಗಿ ಅಭಿವೃದ್ಧಿಪಡಿಸಿದರು.

ಒಬ್ಬ ಹೆಗ್ಗಡೆಯವರ ಕಾಲದಲ್ಲಿ ಒಮ್ಮೆ ಅಥವಾ ಹಲವು ದಶಕಗಳಿಗೊಮ್ಮೆ ನಡೆಯುವ, ಲಕ್ಷಾಂತರ ಜನ ಆಗಮಿಸುವ ಮಹಾನಡಾವರಿಯನ್ನ ನಡೆಸುವ ಆಕಾಂಕ್ಷೆಯಿಂದ ತುಂಬ ವಿಚಾರ ಮಾಡುತ್ತಿದ್ದರು. ಧರ್ಮದೇವತೆಗಳ ಕೃಪಕಟಾಕ್ಷಕ್ಕೆ ಇದರ ಹೊಣೆಯನ್ನೆಲ್ಲ ಒಪ್ಪಿಸಿ, ಈ ಮಹೋತ್ಸವವನ್ನು ನಡೆಸುವ (೧೯೫೧ ಫೆಬ್ರವರಿ ೧೫ ರಿಂದ ೨೩ರ ವರೆಗೆ) ಸಂಕಲ್ಪ ಮಾಡಿದರು. ಇದರ ಅಂಗವಾಗಿ ಮಂಜುನಾಥಸ್ವಾಮಿಗೆ ಬ್ರಹ್ಮಕಲಶಾಭಿಷೇಕ, ಮಹಾರುದ್ರಾಭಿಷೇಕ ಮೊದಲಾದ ವಿಶೇಷ ಪೂಜೋತ್ಸವಗಳೂ ಚಂದ್ರನಾಥಸ್ವಾಮಿಗೆ ಪಂಚಕಲ್ಯಾಣ ಪೂಜೋತ್ಸವವೂ ಸರ್ವಧರ್ಮ ಸಮ್ಮೇಳನ ಸಾಹಿತ್ಯ ಸಮ್ಮೇಳನಗಳೂ ಸಂಗೀತ ನೃತ್ಯ ನಾಟಕ ಕಲಾಗೋಷ್ಠಿಗಳೂ ಅತ್ಯಂತ ವಿಜೃಂಭಣೆಯಿಂದ ನಡೆದು ತುಂಬ ಮೆಚ್ಚಿಕೆಯನ್ನು ಪಡೆದುವು. ವಾಹನ ಸಂಚಾರದ ಸೌಕರ್ಯವೇ ಕಡಿಮೆಯಿದ್ದು ಗಾಡಿ ಕಾಲ್ನಡಿಗೆಗಳಿಂದಲೇ ಯಾತ್ರಾರ್ಥಿಗಳು ಬರುತ್ತಿದ್ದ ಆ ಕಾಲದಲ್ಲಿಯೇ ಈ ಮಹೋತ್ಸವಕ್ಕೆ ಬಂದ ಲಕ್ಷ ಜನರಿಗೆ ಅನ್ನ

ಸಂತರ್ಪಣೆ ನಡೆದಿತ್ತಂತೆ! ಧರ್ಮ ದೇವತೆಗಳ ಅನುಗ್ರಹವೋ, ಹೆಗ್ಗಡೆಯವರ ಸಂಕಲ್ಪ ಸಿದ್ಧಿಯ ಫಲವೋ ಅಂತೂ ಅದೇ ಹೊತ್ತಿಗೆ ಸರ್ಕಾರದ ಆಹಾರ ನಿಯಂತ್ರಣ ರದ್ದಾದುದು ಒಂದು ಮಹಾ ಪವಾಡವೇ ಆಗಿತ್ತು.

ಅನೇಕ ಜಾತ್ರೆ ಸಮಾರಂಭಗಳಲ್ಲಿ ದೇವರಿಗೆ ಪ್ರಾಣಿ ಬಲಿ ಕೊಡುವುದು ರೂಢಿಯಿದ್ದುದನ್ನು ಕಂಡು ತುಂಬ ನೊಂದರು. ಆ ಜನರ ಅಜ್ಞಾನವನ್ನು ತೊಡೆದು ಹಾಕಲು ಧರ್ಮ ಪ್ರಚಾರಕರನ್ನು ಅಲ್ಲಿಗೆ ಕಳುಹಿಸಿಕೊಡುತ್ತಿದ್ದರು. ಸಾಧ್ಯವಾದಾಗೆಲ್ಲ ತಾವೂ ಹೋಗಿ ಪ್ರಚಾರ ಮಾಡುತ್ತಿದ್ದರು. ಪ್ರಾಣಿ ಬಲಿಯ ಬದಲಿಗೆ ಮೃಷ್ಟಾನ್ನ ಭಕ್ಷ್ಯಗಳನ್ನು ಸಿದ್ಧಪಡಿಸಿ ತಾವೇ ಇದ್ದು ದೇವರಿಗೆ ಅರ್ಪಿಸುತ್ತಿದ್ದುದೂ ಉಂಟು. ಇವರ ಈ ನಿಷ್ಕಾಮಂತ ಪ್ರಯತ್ನದಿಂದಲೋ ಅಥವಾ ವ್ಯಕ್ತಿ ಪ್ರಭಾವದಿಂದಲೋ ಈ ಪ್ರಯತ್ನ ಸಫಲವಾಗತೊಡಗಿತ್ತು. ಅಂತೆಯೇ ತಮ್ಮ ಅಧೀನದಲ್ಲಿನ ಒಂದು ಮಾರಿಗುಡಿಯಲ್ಲಿ ಪ್ರಾಣಿ ಬಲಿ ನಡೆಯುತ್ತಿದ್ದುದನ್ನು ಕಂಡು ಪರಂಪರಾಗತ ಪದ್ಧತಿಯ ಈ ಹೇಯ ಕೃತ್ಯವನ್ನು ಯಾವ ಅಂಜಿಕೆಗೂ ಒಳಪಡದೆ ನಿರ್ಭಯವಾಗಿ ನಿಲ್ಲಿಸಿದರು. ಇದರಿಂದ ಮಾರಿಯಮ್ಮನ ದರ್ಶನ ಪಾತ್ರಿ ಉಗ್ರಕೋಪದಿಂದ ಹೆಗ್ಗಡೆಯವರ ಬೀಡಿನ ಬಾಗಿಲಿಗೆ ಬಂದು ಆವೇಶ ಪ್ರದರ್ಶಿಸಿದಾಗ ಅವರು ಅಳುಕದೆ, ತನ್ನನ್ನೇ ಬಲಿಯಾಗಿ ಸ್ವೀಕರಿಸಿ ಸಂತೋಷಪಟ್ಟುಕೊಳ್ಳಬಹುದು ಎಂದರಂತೆ! ಆ ಕ್ಷಣ ದರ್ಶನ ಪಾತ್ರಿಯ ಆವೇಶವೆಲ್ಲ ಕರಗಿ ನೀರಾಯಿತಂತೆ!! ಪಾತ್ರಿ ಶಾಂತಿಯಿಂದ ಗುಡಿಗೆ ತೆರಳಿದ. ಹೆಗ್ಗಡೆಯವರ ಆದೇಶದಂತೆ ಸಾತ್ವಿಕ ನೈವೇದ್ಯಗಳಿಂದ ಪೂಜೆ ಜರುಗಿತು. ಇಂದಿಗೂ ಆ ಮಾರಿಯಮ್ಮ ಸಾತ್ವಿಕ ಪೂಜೆಯಿಂದ ತೃಪ್ತಳಾಗಿ ಜನರಿಂದ ಹಣ್ಣುಕಾಯಿ ಸ್ವೀಕರಿಸುತ್ತಿದ್ದಾಳೆ.

ಹೀಗೆ ಶ್ರೀಕ್ಷೇತ್ರದ ಅಭಿವೃದ್ಧಿ, ಕ್ಷೇತ್ರದ ದೇವಾಲಯಗಳ ಅಭಿವೃದ್ಧಿ ಮಾತ್ರವಲ್ಲದೆ, ನಾಡಿನ ಮೂಲೆ ಮೂಲೆಗಳಲ್ಲಿ ಹಾಳುಬಿದ್ದ ಹಲವು ಪ್ರಾಚೀನ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿ, ಅಲ್ಲಿನ ಅರ್ಚಕರೂ ಬದುಕಲು ಸರಿಯಾದ ವ್ಯವಸ್ಥೆಯನ್ನು ಮಾಡುತ್ತಿದ್ದರು.

ಪ್ರಾಚೀನ ಜೈನ ಪರಂಪರೆಯ ಮನೆತನದಲ್ಲಿ ಜನಿಸಿದವರಾದ ಶ್ರೀ ಹೆಗ್ಗಡೆಯವರು ಜೀವನ ಸಂಗಾತಿಯಾಗಿ ಧರ್ಮಪತ್ನಿಯಾಗಿ ಬರುವ ಕನ್ಯೆ ಉತ್ತಮ ಮನೆತನದವಳಾಗಿರಬೇಕೆಂದು ಮೂಡಬಿದರೆಯ ಪ್ರಸಿದ್ಧ ಪಟ್ಣಶೆಟ್ಟರ ಮನೆತನದ ಶ್ರೀಮಾನ್ ಪಟ್ಣಶೆಟ್ಟಿ ದೇವರಾಜ ಶೆಟ್ಟಿಯವರ ಸುಪುತ್ರಿ ಶ್ರೀಮತಿ ಲೋಕಮ್ಮನವರನ್ನು ವಿಧಿವತ್ತಾಗಿ ವಿವಾಹ (ಮೇ, ೧೯೨೨) ವಾದರು. ಇವರು ಪತಿಭಕ್ತಿ ಪರಾಯಣೆಯೂ, ಸುಶೀಲೆಯೂ, ಸುಗುಣೆಯೂ, ವಿಚಾರ–ವಿವೇಕ ಸಂಪನ್ನೆಯೂ ಆಗಿದ್ದರು. ಇವರ ಸಹಯೋಗದಿಂದ ಶ್ರೀ ಹೆಗ್ಗಡೆಯವರ ಧಾರ್ಮಿಕ ಮನೋಭಾವಕ್ಕೆ ಪುಟವಿಟ್ಟಂತಾಯಿತು. ಇವರೊಂದಿಗೆ ತಮ್ಮ ೨೩ ವರ್ಷಗಳ ದಾಂಪತ್ಯ ಜೀವನವನ್ನು ಸುಗಮವಾಗಿ ಸಫಲಗೊಳಿಸಿದರು. ತಮ್ಮ ಏಕಮಾತ್ರ ಪುತ್ರಿಯಾದ ಚಿ। ಸೌ। ವಿಮಲಮ್ಮನವರನ್ನು ಜಿಲ್ಲೆಯ ಪ್ರಸಿದ್ಧ ಜೈನಮನೆತನದ ಕಟ್ಟೆಮಾರ್ ರಘುಚಂದ್ರ ಬಲ್ಲಾಳರ ಏಕಮಾತ್ರ ಸುಪುತ್ರ ಶ್ರೀ ಶ್ರೀನಿವಾಸ ಬಲ್ಲಾಳರಿಗೆ ಕೊಟ್ಟು

ತುಂಬು ಸಂಭ್ರಮದ ವಿವಾಹ ಮಹೋತ್ಸವವನ್ನು ಧರ್ಮಸ್ಥಳದ ತಮ್ಮ ಬೀಡಿನಲ್ಲಿ ನೆರವೇರಿಸಿದರು. ಹೆಗ್ಗಡೆ ದಂಪತಿಗಳು ಸದ್ಗೃಹಸತ್ವಕ್ಕೆ ಬೇಕಾದ ಸಂಪೂರ್ಣ ಗುಣಗಳಿಂದ ಕೂಡಿದವರಾಗಿದ್ದು, ಆಚಾರ ಸಂಪನ್ನರಾಗಿ ಆದರ್ಶ ದಂಪತಿಗಳೆನಿಸಿದರು. ಸ್ವಸ್ತಿಶ್ರೀ ನೇಮಿಸಾಗರ ವರ್ಣಿಗಳವರಿಂದ ಮಂತ್ರೋಪದೇಶ ವ್ರತೋಪದೇಶಗಳನ್ನು ಪಡೆದೇ ಯಜ್ಞೋಪವೀತವನ್ನು ಧರಿಸಿದ ಇವರು ಆದರ್ಶ ಶ್ರಾವಕರಾಗಿದ್ದರು. ಶ್ರೀವರ್ಣಿಗಳವರು ಶ್ರವಣ ಬೆಳಗೊಳದ ಭಟ್ಟಾರಕರಾದಾಗ ಅವರನ್ನು ಶ್ರೀಕ್ಷೇತ್ರಕ್ಕೆ ಬರಮಾಡಿಕೊಂಡು ತಮ್ಮ ಭಕ್ತ್ಯಾದರಗಳನ್ನು ಸಲ್ಲಿಸಿದರು. ಮಿಗಿಲಾಗಿ ಈ ಪೂಜ್ಯರು ತಮ್ಮ ಅಂತ್ಯ ದಿನಗಳನ್ನು ನೆಮ್ಮದಿಯಿಂದ ಕಳೆಯಲು ಸಿದ್ಧವನ ಗುರುಕುಲದಲ್ಲಿ ಸುಯೋಗ್ಯ ವ್ಯವಸ್ಥೆ ಮಾಡಿಕೊಟ್ಟರು. ಅದೇ ಮೊದಲ ಬಾರಿಗೆ ಶ್ರೀಕ್ಷೇತ್ರಕ್ಕೆ ಪರಮಪೂಜ್ಯ ೧೦೮ ಪಾಯಸಾಗರ ನಿರ್ಗ್ರಂಥ ಮುನಿಗಳ ಸಂಘವನ್ನು ಆಹ್ವಾನಿಸಿ, ಬೀಡಿನಲ್ಲಿ ಆಹಾರ ದಾನ ಮಾಡಿದರು. ಇದರ ಸ್ಮರಣಾರ್ಥವಾಗಿ ಆಚಾರ್ಯ ಯೋಗೀಂದ್ರ ದೇವ ವಿರಚಿತ 'ಪರಮಾತ್ಮ ಪ್ರಕಾಶ' ಎಂಬ ಆಧ್ಯಾತ್ಮಿಕ ಗ್ರಂಥವನ್ನು ಕನ್ನಡ ಅನುವಾದದೊಡನೆ ಪ್ರಕಾಶಪಡಿಸಿ ಶಾಸ್ತ್ರ ದಾನ ಮಾಡಿದರು. ಅವರ ನಂತರ ಪೂಜ್ಯವರ ೧೦೮ ಜಯಕೀರ್ತಿ ಮುನಿವರ್ಯರ ಮುನಿಸಂಘ ಬಂದಿದ್ದಿತು. ಮುನಿಸಂಘವು ರಾತ್ರಿ ಯೋಗ ಮಾಡಿದ ಬೆಟ್ಟಕ್ಕೆ 'ಜಯಕೀರ್ತಿ ಬೆಟ್ಟ' ಎಂದು ನಿತ್ಯಸ್ಮರಣೆಗಾಗಿ ನಾಮಕರಣ ಮಾಡಿದರು.

ಕ್ಷೇತ್ರದ ಅಭಿವೃದ್ಧಿಗೆ ಬಹುಮುಖವಾಗಿ ಶ್ರಮಿಸುತ್ತಾ ಸ್ವಾಂತಃಸುಖಾಯ ಧರ್ಮ, ಸಾಹಿತ್ಯ, ಸಂಗೀತ, ಚಿತ್ರಕಲೆಗಳಲ್ಲಿ ಅತಿಶಯವಾದ ಅಭಿರುಚಿಯನ್ನು ಹೊಂದಿ ಆಳವಾಗಿ ಅಭ್ಯಾಸ ಮಾಡಿದರು. ಇವಕ್ಕೆ ಅವರು ಸಂಗ್ರಹಿಸಿರುವ ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಇಂಗ್ಲಿಷ್ ಭಾಷೆಗಳಲ್ಲಿರುವ–ಇಂಗ್ಲಿಷ್ ಭಾಷೆಯವೇ ಬಹಳ– ಪೌರ್ವಾತ್ಯ ಪಾಶ್ಚಾತ್ಯ ಗ್ರಂಥಗಳೇ ಸಾಕ್ಷಿ. ಇದೊಂದು ಅಪೂರ್ವ ಗ್ರಂಥ ರಾಶಿ. ಅಲ್ಲದೆ, ಅಂದಿಗೆ ಶ್ರೇಷ್ಠಮಟ್ಟದವೆನಿಸಿದ್ದ ವಿವಿಧ ಪತ್ರಿಕೆಗಳನ್ನು ಓದುತ್ತಿದ್ದರು. ಫಲವಾಗಿ ಅವರೊಬ್ಬ ವಿದ್ವಾಂಸರಾದರು. ಬರವಣಿಗೆಯನ್ನು ಒಂದು ಹವ್ಯಾಸವಾಗಿ ಮಾಡಿಕೊಂಡರು. ತುಳು ನಿತ್ಯವಿಧಿ, ದೇವೇರ್ ಬಾಹುಬಲಿಸ್ವಾಮಿ ಚರಿತ್ರೆ, ಪಾಪ-ಪುಣ್ಯ, ಪಂಚ ಕಲ್ಯಾಣ, ಮೃತ್ಯುಂಜಯ (ನಾಟಕ), ನನ್ನ ನೆಂಬರಿಕೆ–ಇವು ಇವರ ತುಳು ಕನ್ನಡ ಕೃತಿಗಳಲ್ಲಿ ಕೆಲವು.

ಹೆಗ್ಗಡೆಯವರು ಉತ್ತಮ ಕಲಾವಿದರು. ಚಿತ್ರ ಕಲೆಯ ಬಗೆಗೆ ಚೆನ್ನಾಗಿ ಅಭ್ಯಾಸಮಾಡಿ ಹಲವಾರು ಉತ್ತಮ ಮಟ್ಟದ ಚಿತ್ರಗಳನ್ನು ಬರೆದು ಹೆಸರಾಗಿದ್ದಾರೆ ಸಮವಸರಣದಲ್ಲಿ ಮಹಾವೀರ, ಕಡೆಗೋಲು ಕೃಷ್ಣ, ನೆಪೋಲಿಯನ್, ಬಾಹುಬಲಿಯ ಕಥಾ ಚಿತ್ರಗಳು, ಪ್ರಕೃತಿ ಚಿತ್ರಗಳು–ಇವು ಅವರ ಹಲವು ಖ್ಯಾತ ಚಿತ್ರಗಳಲ್ಲಿ ಕೆಲವು; 'ಕರ್ಣಾವಸಾನ' ಹೃದಯಸ್ಪರ್ಶಿಯಾದ ತೈಲ ಚಿತ್ರ. ಛಾಯಾ ಚಿತ್ರ ಗ್ರಹಣ ಕಲೆಯಲ್ಲೂ ಪೂಜ್ಯರಿಗೆ ವಿಶೇಷವಾದ ಆಸಕ್ತಿ. ಶ್ರೀಯುತರ ಕ್ಯಾಮರಾದಿಂದ ಮೂಡಿ ಬಂದಿರುವ ಹಲವು ಚಿತ್ರಗಳೇ ಇದಕ್ಕೆ ಸಾಕ್ಷಿ. ಜಿಲ್ಲೆಯ ಸುಖ್ಯಾತ ಯಕ್ಷಗಾನ ಕಲಾ ರಂಗದಲ್ಲೂ ಇವರಿಗೆ ವಿಶೇಷವಾದ ಆಸಕ್ತಿ. ಈ ಕಲೆಯಲ್ಲಿ ನುರಿತ

ವರಾಗಿದ್ದವರನ್ನು ಕೂಡಿಸಿ, ಬೀಡಿನಲ್ಲಿ ಯಕ್ಷಗಾನ ಕೂಟವನ್ನು ಏರ್ಪಡಿಸಿ, ಎಲ್ಲ ಕಲಾವಿದರಿಗೂ ಸಂಭಾವನೆ ನೀಡಿ ಗೌರವಿಸುತ್ತಿದ್ದರು. ಜಾನಪದ ಕಲಾವಿದರಿಗೂ ವಿಶೇಷ ಪ್ರೋತ್ಸಾಹವನ್ನೀಯುತ್ತಿದ್ದರು. ಶಾಸ್ತ್ರೀಯ ಸಂಗೀತ ಕಲೆಯಲ್ಲಿ ಪೂಜ್ಯರಿಗೆ ವಿಶೇಷವಾದ ಪ್ರೇಮಾಭಿಮಾನಗಳಿದ್ದುವು. ಅಂದಿನ ವಿಖ್ಯಾತ ವಿದ್ವಾಂಸರಾದ ದೇವೇಂದ್ರಪ್ಪ, ಚೌಡಯ್ಯ-ಇವರನ್ನು ಬರಮಾಡಿಕೊಂಡು ಗೌರವಿಸಿದ್ದರು.ಚೌಡಯ್ಯ ನವರೊಡನೆ 'ನೀವು ಪಿಟೀಲು ಬಾರಿಸುವುದಿಲ್ಲ, ಪಿಟೀಲು ನುಡಿಸುತ್ತಿದ್ದಿರಿ' ಎಂದು ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. ಹೀಗೇ ಹಲವರನ್ನು ಗೌರವಿಸಿದ್ದಾರೆ. ಪೆನ್ಸಿಲ್ ರೇಖಾಚಿತ್ರವೂ ಇವರ ಕುಶಲತೆಗೆ ಹೊರತಾಗಿರಲಿಲ್ಲ. ಮೊದಲ ಧರ್ಮ ಸಮ್ಮೇಳನ (೧೯೩೩)ದ ಜೊತೆಗೇ ಅಖಿಲ ಭಾರತ ಲಲಿತಕಲಾ ಮತ್ತು ಕೈಗಾರಿಕಾ ಪ್ರದರ್ಶನವನ್ನು ಏರ್ಪಡಿಸಿದ್ದರು. ತೀರ್ಪುಗಾರರು ತೀರ್ಮಾನಿಸಿದಂತೆ ಉತ್ತಮ ಕಲೆಗಳಿಗೆ ಪ್ರಥಮ–ಸುವರ್ಣ ಹಾಗೂ ದ್ವಿತೀಯ-ರಜತ ಪದಕಗಳನ್ನು ವಿತರಿಸಿದರು. ಇನ್ನುಳಿದ ಎಲ್ಲಾ ಕಲಾವಿದರಿಗೂ ಅವರ ಸಹಕಾರಕ್ಕಾಗಿ ರಜತ ಪದಕ ಮತ್ತು ಮೆಚ್ಚುಗೆಪತ್ರಗಳನ್ನು ಕೊಟ್ಟು ಸನ್ಮಾನಿಸಿದರು. ಶ್ರೀಗಂಧದ ಮರದಲ್ಲಿ ಕೆತ್ತಲಾದ 'ಗೀತೋಪದೇಶ'ವನ್ನು ಮನಸಾ ಮೆಚ್ಚಿ, ವಿಶೇಷವಾದ ಬಹುಮಾನವನ್ನು ಕೃತಿ ನೀಡಿ ಪ್ರೋತ್ಸಾಹಿಸಿದರು.

ವಿದ್ವಾಂಸರನ್ನು ಲೇಖಕರನ್ನು ಗೌರವಿಸುವುದು ಅವರ ದಿನನಿತ್ಯದ ಕ್ರಿಯೆ ಗಳಲ್ಲೊಂದಾಗಿದ್ದಿತು. ೭ ಮೇ (೧೯೫೩-?) ಮಿತ್ರ ಶ್ರೀ ಜಿ. ಬ್ರಹ್ಮಪ್ಪನವರೊಂದಿಗೆ- ಅದೇ ಮೊದಲಿಗೆ- ಶ್ರೀ ಕ್ಷೇತ್ರ ದರ್ಶನಕ್ಕಾಗಿ ಹೋಗಿದ್ದ-ಕನ್ನಡ ಪಂಡಿತ ತರಗತಿಯ ವಿದ್ಯಾರ್ಥಿಯಾಗಿದ್ದ ಈ ಲೇಖಕನಿಗೂ ರೂ. ಐವತ್ತು ಸಂಭಾವನೆ ಕೊಟ್ಟು ಆಶೀರ್ವ ದಿಸಿದ್ದು ಅವರ ಸಾಹಿತ್ಯ ಪ್ರೇಮಕ್ಕೆ, ಪ್ರೋತ್ಸಾಹಕ್ಕೆ ಒಂದು ಉತ್ತಮ ಉದಾ ಹರಣೆ.

ಕನ್ನಡ ನಾಡು-ನುಡಿ, ಕರ್ನಾಟಕ ಏಕೀಕರಣಗಳಲ್ಲಿ ತುಂಬ ಆಸಕ್ತಿ ಹೊಂದಿ ದ್ದರು. ಫಲವಾಗಿ ಕಾಸರಗೋಡಿನಲ್ಲಿ (೧೯೪೮ ಡಿಸೆಂಬರ್ ೨೯ ರಿಂದ ೩೧) ನಡೆದ ೩೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿದ್ದು ಸಮ್ಮೇಳನದ ಯಶಸ್ಸಿಗೆ ಕಾರಣರಾದರು. ಕರ್ನಾಟಕ ಏಕೀಕರಣಕ್ಕಾಗಿ ಆ ಜಿಲ್ಲೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಮದ್ರಾಸು ವಿಧಾನ ಪರಿಷತ್ತಿನ ಸದಸ್ಯರಾಗಿ ಸು. ೨೦ ವರ್ಷ ಗಳಿಗೂ ಮೇಲ್ಪಟ್ಟು ಸೇವೆ ಸಲ್ಲಿಸಿ ವಿಶುದ್ಧರಾಜಕಾರಣಿ, ಸಮಾಜ ಸುಧಾರಕ ಎಂದೆಲ್ಲ ಗುರುತಿಸಲ್ಪಟ್ಟರು, ಗೌರವಿಸಲ್ಪಟ್ಟರು.

ಹೆಗ್ಗಡೆಯವರ ಬೀಡು ನಿರಂತರ ಅತಿಥಿ ನೆಲೆವೀಡು. ಬಂದ ಅತಿಥಿಗಳೊಡನೆ ಕುಳಿತು ಊಟ ಮಾಡುತ್ತಿದ್ದರೆಂಬುದು ಅವರ ಸರಳತೆಗೆ ಶ್ರೇಷ್ಠ ನಿದರ್ಶನ; ಅಂತೆಯೆ ಬಂದವರೊಡನೆ ತಮ್ಮ ಬಿಡುವಿನ ವೇಳೆಯನ್ನು ಸಂಭಾಷಣೆಯಲ್ಲಿ, ಚರ್ಚೆಯ ಕ್ಷೇತ್ರಾಭಿವೃದ್ಧಿಗೆ ಸಹಾಯಕವಾಗುವ ಸಲಹೆ ಪಡೆದುಕೊಳ್ಳುವಲ್ಲಿ, ಕಳೆಯುತ್ತಿದ್ದ ರೆಂಬುದೂ ಅಷ್ಟೇ ಸತ್ಯ. 'ಅವರು ನಡೆಸಿದ ಅನ್ನಯಜ್ಞ, ಸಾರಸ್ವತ ಯಜ್ಞ, ಧರ್ಮ ಯಜ್ಞಕ್ಕೆ ಸಾಟಿಯುಂಟೆ ?'

ಹೆಗಡೆಯವರು, ನಿಸ್ಪೃಹತೆ, ಶಿಸ್ತಿನ ಜೀವನ, ಸರಳತೆ, ಸೇವಾನಿಷ್ಠೆ, ಸಾಮಾನ್ಯರಲ್ಲಿ ಮಮತೆ, ಪ್ರತಿಭೆಯನ್ನು ಗುರುತಿಸಿ ಗೌರವಿಸುವ ಬುದ್ಧಿ-ಈ ಒಂದೊಂದೂ ಅವರ ವ್ಯಕ್ತಿಗೌರವವನ್ನು ಎತ್ತಿ ಹಿಡಿದವು. ಅವರು ವ್ಯಕ್ತಿಶಃ ಮಿತ ಭಾಷಿಗಳು ; ಜ್ಞಾನಾಸಕ್ತರು ; ಜ್ಞಾನ ಭಂಡಾರದ ಒಡೆಯರು. ಜೀವನದಲ್ಲಿ ಶುಚಿಯಾಗಿ ಬಾಳಿದವರು, ಮಿತವಾಗಿ ವರ್ತಿಸಿದವರು. ವಿಶೇಷ ಗೌರವ ಪ್ರತಿಷ್ಠೆಗಳಿಂದ ಬೀಗದೆ, ಸರಳ ಜೀವನ ನಡೆಸಿದವರು. 'ಸ್ತುತಿ ಪಾಠಕರು, ಸಂಪತ್ತು, ಪ್ರಭಾವಗಳ ದೃಷ್ಟಿಯಿಂದ ಎಷ್ಟು ಬೀಗಿದರೂ ಬೀಗಬಹುದಾದ....ಅವರು ತಮ್ಮ ಯೋಗ್ಯತೆ, ತೂಕ, ಶುಚಿಗಳನ್ನು ಕಾಯ್ದುಕೊಂಡೇ ಬಂದವರು.' ಅವರ ಮಾತು ಹಿತ, ಮಿತ, ಪ್ರಿಯ. ಅದು ಶುದ್ಧ ಅಂತರಂಗದ ಧ್ವನಿ. ವಚನ ಸಿದ್ಧಿ ಅವರಿಗೆ ಲಭಿಸಿದ್ದಿತು. ಜ್ಞಾನಯೋಗ ಮತ್ತು ಕರ್ಮಯೋಗಗಳ ಸಮನ್ವಯತೆಯ ರಾಜಯೋಗಿ, ಮಹಾಪುರುಷ, ಮಹಾಚೇತನ, ಮಾತನಾಡುವ ಮಂಜುನಾಥ ಎಂದೆಲ್ಲ ಗೌರವಪಾತ್ರರು. ತಮ್ಮ ಗುರು ಸ್ವಸ್ತಿಶ್ರೀ ನೇಮಿಸಾಗರವರ್ಣಿಗಳವರಿಂದ ಸಲ್ಲೇಖನಾ ವ್ರತವನ್ನು ಪಡೆದು, ಮೃತ್ಯು ಮಹೋತ್ಸವ (ದಿನ ೩೧ ಆಗಸ್ಟ್, ೧೯೫೫)ವನ್ನೆಸಗಿದ ಸಚೇಲಕ ಸಾಧು. ಅವರು ನಮಗೆ ಇಂದಿಗೂ ಎಂದಿಗೂ ಗೌರವ ಪಾತ್ರರು ; ಪುಣ್ಯಶ್ಲೋಕರು.

ಸ್ವ॥ ಮಂಜಯ್ಯ ಹೆಗ್ಗಡೆಯವರ ಉತ್ತರಾಧಿಕಾರಿಗಳಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಹಿರಿಯರ ಮೇಲ್ಪಂಕ್ತಿಯನ್ನೇ ಅನುಸರಿಸಿ ಧರ್ಮಸ್ಥಳದ ಉಪಯುಕ್ತತೆ, ಕೀರ್ತಿ ವೈಭವಗಳನ್ನು ಹೆಚ್ಚಿಸಿದುದು ಅಭಿಮಾನಾಸ್ಪದವಾಗಿದೆ. ಇವರ ಸುಪುತ್ರ ಶ್ರೀ ಕ್ಷೇತ್ರದ ಇಂದಿನ ಒಡೆಯರಾದ ಶ್ರೀ ವೀರೇಂದ್ರ ಹೆಗ್ಗಡೆಯವರು ತಮ್ಮ ಹಿರಿಯರ ಹಾದಿಯಲ್ಲೇ ನಡೆಯುತ್ತಾ, ಮಂಜುನಾಥನ ಕೃಪೆಗೂ ತಾಯಿ ರತ್ನಮ್ಮನವರ ಹರಕೆಗೂ ಪಾತ್ರರಾಗಿ ವಿನಮ್ರವಾಗಿ ಧರ್ಮಸ್ಥಳದ ಕೀರ್ತಿ ವೈಭವಗಳನ್ನೂ ಉನ್ನತೋನ್ನತವಾಗಿಸುತ್ತಾ ಸೇವೆ ಸಲ್ಲಿಸುತ್ತಿದ್ದಾರೆ.

ಸಂತ ದಾದೂ ದಯಾಲ್

ಮ. ಸು. ಕೃಷ್ಣಮೂರ್ತಿ

ಮಧ್ಯಯುಗದ ಧರ್ಮಸಾಧನೆಯ ಇತಿಹಾಸದಲ್ಲಿ ಔತ್ತರೇಯ ಸಂತರ ಸ್ಥಾನ ವಿಶಿಷ್ಟವಾದುದು. ಸಂತ ಕಬೀರ, ರೈದಾಸ, ಗುರುನಾನಕ್, ದಾದೂ ದಯಾಲ್ ಮತ್ತು ಸಂತ ಜಗಜೀವನ ಮೊದಲಾದ ನೂರಾರು ಮರಾಠಿ ಸಂತರು ಈ ಯುಗದಲ್ಲಿ ಭಕ್ತಿ ಭಾಗೀರಥಿಯನ್ನು ಮನೆ ಮನೆಗೆ ಒಯ್ದು ಮುಟ್ಟಿಸಿದರು. ಜಾತಿ, ಪಂಥ, ಧರ್ಮ ಮೊದಲಾದ ಅಡ್ಡಗೋಡೆಗಳನ್ನು ಪುಡಿಗುಟ್ಟಿ 'ಒಂದೆ ವಲಂ ಮನುಜ ಕುಲಂ' ಎಂದು ಸಾರಿದರು, ವರ್ಗಹೀನ ಸಮಾಜವೊಂದರ ಕನಸು ಕಂಡರು.

ದಾದೂ ದಯಾಲನ ದೇಶ, ಕಾಲ, ಜಾತಿ, ಕುಲ, ಗೋತ್ರ ಇವೆಲ್ಲ ದಂತಕಥೆಗಳು. ಕಿಂವದಂತಿಗಳ ಪೊದೆಯಲ್ಲಿ ಹುದುಗಿಹೋಗಿವೆ. ಪರಂಪರೆಯ ಪ್ರಕಾರ ದಾದುವಿನ ಜನನ ಕ್ರಿ ಶ ೧೫೪೪ರ ಫಾಲ್ಗುಣ ಅಷ್ಟಮಿ ಗುರುವಾರದಂದು ಆಯಿತು. ಆತ ಅಹಮದಾಬಾದಿನಲ್ಲಿ ಜನಿಸಿದ ಎಂದು ಕೆಲವರು ಹೇಳಿದರೆ ಮಹಾಮಹೋಪಾಧ್ಯಾಯ ಸುಧಾರಕ ದ್ವಿವೇದಿ ಹಾಗೂ ಕಾಶಿಯ ಬಹುಳನ ಭಕ್ತರ ಪ್ರಕಾರ ದಾದುವಿನ ಜನ್ಮಸ್ಥಾನ ಕಾಶಿ.

ಈತನ ಗುರು ಬುಡ್ಡನ್ ಎಂಬ ಸಂತ ಎಂದು ಕೆಲವರು ಹೇಳುತ್ತಾರೆ. ಈ ಬುಡ್ಡನ್ ರಾಮಾನಂದರ ಪರಂಪರೆಯ ಸಂತನಂತೆ. ದಾದು ಬ್ರಾಹ್ಮಣ ಎಂದು ಕೆಲವರು ಹೇಳಿದರೆ ಪಿಂಜಾರೆಯವನು ಎಂದು ಕೆಲವರು ಹೇಳುತ್ತಾರೆ. ಮುಸಲ್ಮಾನ ಎಂದು ಕೆಲವರು ಅಭಿಪ್ರಾಯಪಟ್ಟರೆ, ಮತ್ತೆ ಕೆಲವರ ಪ್ರಕಾರ ಮೋಚಿ. ಒಟ್ಟಿನಲ್ಲಿ ಆತನೊಬ್ಬ ದಲಿತ ವರ್ಗದ ಸಂತ ಎಂದು ಹೇಳಬಹುದು. ಆತನ ಮೊದಲ ಹೆಸರು ಮಹಾಬಲಿ ಎಂದು. ಆತನ ಗುರು ಕಬೀರನ ಮಗ ಕಮಾಲನಂತೆ. ಕಮಾಲ್ ಎಲ್ಲರನ್ನು ದಾದಾ ಎಂದು ಕರೆಯುತ್ತಿದ್ದನಂತೆ. ಹೀಗಾಗಿ ಆತನ ಹೆಸರು ದಾದೂ ಎಂದಾಯಿತಂತೆ. ಆತನ ತಂದೆ, ತಾಯಿ, ಶಿಕ್ಷಣ ಮೊದಲಾದವುಗಳ ಬಗೆಗೆ ವಿವರ ದೊರೆಯುವುದಿಲ್ಲ. ದಾದೂ ಮದುವೆಯಾಗಿದ್ದನೆಂದೂ ಎರಡು ಗಂಡು ಹಾಗೂ ಎರಡು ಹೆಣ್ಣು–ನಾಲ್ಕು ಮಕ್ಕಳಿದ್ದವೆಂದೂ ಹೇಳಲಾಗುತ್ತದೆ. ಮತ್ತೆ ಕೆಲವರ ಪ್ರಕಾರ ದಾದೂ ಅವಿವಾಹಿತ.

ದಾದೂ ಚಿಕ್ಕಂದಿನಿಂದಲೂ ಪರ್ಯಟನ ಪ್ರಿಯ. ನಾನಾ ಸ್ಥಾನಗಳಲ್ಲಿ ಆತ ಸಂಚರಿಸಿದ. ನಾನಾ ವಿಧವಾದ ಧರ್ಮಸಾಧಕರ ಪರಿಚಯ ಮಾಡಿಕೊಂಡ. ಕಾಶಿ, ಬಿಹಾರ, ಬಂಗಾಳ ಹೀಗೆ ಬಹುದೂರದವರೆಗೆ ಈತ ಸಂಚಾರ ಮಾಡಿದ ಆತ ನಾಥ ಪಂಥದಲ್ಲಿ ದೀಕ್ಷಿತನಾಗಿದ್ದನೆಂದೂ ಆಗ ಆತನ ಹೆಸರು 'ಕುಂಭಾರೀಪಾವ್' ಎಂದೂ ಕೆಲವರು ಹೇಳುತ್ತಾರೆ. ಆದರೆ ದಾದೂ ಅನಿಕೇತನ; ಎಲ್ಲ ಧರ್ಮ ಪಂಥಗಳ ಸಾರ

ಸಂಗ್ರಹಿ. ಎಲ್ಲ ಕುಸುಮರಸವನ್ನು ಹೀರುವ ಮಧುಕರದಂಥ ಮಧುಕರೀವೃತ್ತಿ ಆತನದು. ಸ್ವಭಾವವೂ ಮಧುವಿನಂತೆ ಮಧುರ. ಖಂಡನೆ ಮಂಡನೆಯಲ್ಲಿ ಆತನಿಗೆ ಆಸಕ್ತಿಯಿಲ್ಲ. ಹೀಗಾಗಿ ಸಹಜವಾಗಿಯೇ ಅವನ ಸುತ್ತ ಜನ ಸೇರಿತು. ರಾಜಾಸ್ಥಾನದ ಆಮೇರಿನಲ್ಲಿ ನೆಲೆನಿಂತು ಆತ ಅಧ್ಯಾತ್ಮ ಸಾಧನೆ ಮಾಡತೊಡಗಿದ. ಅಲ್ಲಿಯ ರಾಜ ಭಗವಂತ ದಾಸನಿಗೆ ಪಟ್ಟಾಭಿಷೇಕವಾಯಿತು. ಎಲ್ಲರೂ ರಾಜನ ದರ್ಶನಕ್ಕೆ ಹೋದರು. ಆದರೆ ದಾದೂ ಹೋಗಲಿಲ್ಲ. ಕೆಲ ದಿನಗಳ ತರುವಾಯ ಸ್ವತಃ ಮಹಾರಾಜನೇ ದಾದೂವಿನ ಆಶ್ರಮಕ್ಕೆ ಬಂದ. ಆ ಮಾತು ಈ ಮಾತು ಆಡುತ್ತ ದಾದೂವನ್ನು ಕೇಳಿದ, 'ನೀವು ಇಲ್ಲಿ ಎಷ್ಟು ದಿನಗಳಿಂದ ಇದ್ದೀರಿ?'

'ತುಂಬ ದಿನಗಳಿಂದ' ದಾದೂ ಹೇಳಿದ. ಮಹಾರಾಜ ಹೇಳಿದ: 'ಆದರೆ ಒಂದು ದಿನವಾದರೂ ನಿಮ್ಮ ದರ್ಶನ ನನಗಾಗಲಿಲ್ಲ!'

ದಾದೂ ಇದರ ಇಂಗಿತವನ್ನು ಅರ್ಥಮಾಡಿಕೊಂಡ. ಕೂಡಲೇ ಆ ರಾಜ್ಯವನ್ನು ತೊರೆದ.

ಅಕ್ಬರ್ ದಾದೂವನ್ನು ಕಾಣಬಯಸಿದ. ಆಗ ದಾದೂ ಆಮೇರಿನಲ್ಲೇ ಇದ್ದ. ಅಕ್ಬರನ ದೂತ ದಾದೂವಿಗೆ ತನ್ನ ಸಾಮ್ರಾಟನ ಅಪೇಕ್ಷೆಯನ್ನು ತಿಳಿಸಿದಾಗ ಆತ ಕೇಳಿದ: 'ನನ್ನನ್ನು ಕಂಡು ಏನಾಗಬೇಕು?'

ಆಗ ಅಕ್ಬರ್ ಹೇಳಿಕಳಿಸಿದ-'ಸಮ್ರಾಟ್ ಅಕ್ಬರ್ ಅಲ್ಲ, ಭಗವತ್ ಪ್ರಸಂಗ ಪಿಪಾಸು ಅಕ್ಬರ್ ತಮ್ಮ ದರ್ಶನಾಕಾಂಕ್ಷಿಯಾಗಿದ್ದಾನೆ.' ಆಗ ದಾದೂ ಸಮ್ಮತಿಸಿದ. 'ಹೇಗೆ ಭೆಟ್ಟಿಯಾಗುವುದು?' ಅಕ್ಬರನ ದೂತ ಕೇಳಿದ. ದಾದೂ ಹೇಳಿದ: 'ನೀವು ನನ್ನನ್ನು ಕಂಡು ನನ್ನ ಸಾಧನೆ ಮತ್ತು ಸತ್ಯದ ಪರಿಚಯ ಮಾಡಿಕೊಳ್ಳ ಬಯಸುವಿರಿ. ನಾನು ನಿರ್ಜನ ಪ್ರದೇಶದಲ್ಲಿ ವಾಸಿಸುವ ಜೀವ. ನಿಮ್ಮ ಕಣ್ಣು ಕೋರೈಸುವ ಐಸಿರಿಯ ಊರಿಗೆ ಬಂದು ನಾನು ನನ್ನನ್ನು ಕಳೆದುಕೊಳ್ಳುತ್ತೇನೆ. ಆದ್ದರಿಂದ ನನ್ನನ್ನು ಅರಿಯಲು ನನ್ನ ತಾಣಕ್ಕೇ ಬರಬೇಕು.'

ಆದರಂತೆ ಅವರು ಫತೇಹ್‌ಪುರ ಸಿಕ್ರಿಯಲ್ಲಿ ಭೆಟ್ಟಿಯಾದರು. ನಲವತ್ತು ದಿನಗಳ ತನಕ ಅವರ ಸತ್ಸಂಗ ನಡೆಯಿತು. ಅಕ್ಬರ್ ದಾದೂವಿನ ವ್ಯಕ್ತಿತ್ವ ಹಾಗೂ ವಿಚಾರಗಳಿಗೆ ಮಾರುಹೋದ.

ದಾದೂ ೨೯-೩೦ ವರ್ಷದವನಾಗಿದ್ದಾಗ ತನ್ನ 'ಬ್ರಹ್ಮ ಸಂಪ್ರದಾಯ'ವನ್ನು ಸ್ಥಾಪಿಸಿದ. ಆಗಲೇ ಆತನ ವಾಣಿಯ ರಚನೆಯೂ ಆರಂಭವಾಯಿತು. ಕೆಲವರ ಪ್ರಕಾರ ದಾದೂ ಮಠಗಟ್ಟುವ ಮಾಯೆಗೆ ಒಳಗಾದವನಲ್ಲ. ಅವನ ಶಿಷ್ಯರು ಸಂಪ್ರದಾಯ ಸ್ಥಾಪನೆ ಮಾಡಿದರು. 'ಬ್ರಹ್ಮ ಸಂಪ್ರದಾಯ' ಎಂದು ಮಧ್ವಮತಕ್ಕೆ ಹೆಸರಿಸುವುದು ಗೊತ್ತಾದ ಮೇಲೆ ಈ ಸಂಪ್ರದಾಯವನ್ನು 'ಪರಬ್ರಹ್ಮ ಸಂಪ್ರದಾಯ' ಎಂದು ಕರೆಯಲಾಯಿತು. ದಾದೂ ಮೇಲುಕೀಳು ಎಂಬ ತಾರತಮ್ಯವಿಲ್ಲದ, ಸರ್ವ ಸಮಾನತೆಯ ಆಧಾರದ ಮೇಲೆ ನೆಲೆ ನಿಂತ, ನಿರ್ಬಲರನ್ನು ಶೋಷಿಸಿ ಅಗತ್ಯಕ್ಕಿಂತ ಹೆಚ್ಚು ಧನಸಂಗ್ರಹ ಮಾಡುವ ಜನರಿಲ್ಲದ ಒಂದು ವರ್ಗಹೀನ, ವರ್ಣಹೀನ ಸಮಾಜದ ಕನಸನ್ನು ಕಂಡ.

ದಾದೂ ತನ್ನ ಮತದ ಬಗೆಗೆ ಹೀಗೆ ಹೇಳಿದ್ದಾನೆ :

'ಅಪಾಮೇರೇ ಹರಿಭಜ್ಜೈ ತನಮನ ತಜ್ಜೈ ವಿಕಾರ್
ನಿರ್ವೈರೀ ಸಬು ಜೀವಸೇಂ ದಾದೂ ಯಹಮತ ವಿಕಾರ ॥"
'ಹಮ್ಮು ತೊರೆದು ಹರಿಯಭಜಿಸ ತೊರೆದು ಮನಸಾರಾ ।
ಎಲ್ಲ ಜೀವರೊಂದಿಗೆ ನಿರ್ವೈರ, ಇದುವೆ ದಾದೂ ಮತಸಾರ ।"

ಈ ಸಂಪ್ರದಾಯದಲ್ಲಿ ದಾದೂ ಯಾವುದೇ ಸಂಪ್ರದಾಯ ಇಲ್ಲವೆ ಮತದ ಬಗೆಗೆ ಅಂಥ ನಿಷ್ಠೆ ತೋರಿಸಿಲ್ಲ. ಪರಮಾತ್ಮನ ಬಗೆಗೆ ಆತನಲ್ಲಿ ಅಚಲ ನಿಷ್ಠೆ. ಯಾವುದಾದರೂ ಒಂದಲ್ಲ ಒಂದು ಪಂಥದೊಡನೆ ಸಂಪರ್ಕವಿಟ್ಟುಕೊಳ್ಳಬೇಕು ಎಂದು ಜನ ಹೇಳಿದಾಗ ದಾದೂ ಹೇಳಿದ: 'ದಾದೂ ಆವಪಥದಲಿವೆ ಇವೆಲ್ಲ ನೆಲ ಮುಗಿಲು ಜಲ, ಪವನ, ಸೂರ್ಯ ಚಂದ್ರಹಗಲಿರುಳು ?'

ಅಸೀಮ ಅಗೋಚರ ಪರಮಾತ್ಮನನ್ನು ನೆರೆನಂಬಿ ಇವೆಲ್ಲ ಸೇವೆಯಲ್ಲಿ ತತ್ಪರವಾಗಿವೆ. ಆ ಜಗದ್ಗುರು ಪರಮಾತ್ಮನನ್ನು ಸತ್ಯ ಪಥದಲ್ಲಿ ಮಾತ್ರ ಪಡೆಯಬಹುದು.

ದಾದೂವಿನ ದೃಷ್ಟಿಯಲ್ಲಿ ಭೌತಿಕ ಸಿರಿ ಸಂಪದ ಹಾಗೂ ಸಿರಿವಂತರ ನಂಟು ಇವೆಲ್ಲ ಪರಮಾತ್ಮನಿಲ್ಲದೆ ಬರಿಯ ಗಂಟು, ವ್ಯರ್ಥ, ಮಿಥ್ಯೆ. ಆದ್ದರಿಂದ ಆತ ಹೇಳಿದ : 'ಓ ತಂದೆ, ನಿನ್ನ ಬಲವೊಂದಿದ್ದರೆ ಸಾಕು. ದಾದೂ ಯಾವ ರಾಣಾ, ರಾಜನನ್ನು ಲೆಕ್ಕಿಸ, ಸಾಹುಕಾರ, ಧಣಿ, ಪ್ರಧಾನ, ಪತಿ ಇವರೆಲ್ಲ ನೀನಿಲ್ಲದೆ ವ್ಯರ್ಥ.' ಆದ್ದರಿಂದ ಪರಮಾತ್ಮನಲ್ಲಿ ದಾದೂವಿನ ಪ್ರಾರ್ಥನೆ ಇಷ್ಟೆ :

"ಸಬ್ ಜಗ ಛಾಡೈ ಹಾತ ಥೈಂ, ತೋಮ್‌ನು ಜಿನಿ ಛಾಡಹು ರಾಮ್"

"ಜಗವೆಲ್ಲ ಕೈಬಿಟ್ಟರೂ ನೀ ಮಾತ್ರ ಕೈ ಬಿಡದಿರು ಎನ್ನೊಡೆಯ ರಾಮ."

ಸತ್ಯದ ಪ್ರಸಂಗ ಬಂದಾಗ ದಾದೂ ನಿರ್ಭೀತ ನ್ಯಾಯನಿಷ್ಠುರಿ. ಆದರೂ ಆತ ಬಸವಣ್ಣನವರಂತೆ ಎನಗಿಂತಲೂ ಕಿರಿಯರಿಲ್ಲ ಎಂದು ನಡೆದುಕೊಂಡ. ಆತನ ವರ್ತನೆ ಅತ್ಯಂತ ಪ್ರೇಮಪೂರ್ಣ. ಆತ ಅತ್ಯಂತ ಕ್ಷಮಾಶೀಲ ; ನಿಂದಿಸುವ ಶತ್ರುಗಳನ್ನು ಪ್ರೀತಿಸುವಂಥ ಉದಾರಿ.

ದಾದೂ ಸಾಂಭರ್‌ನಲ್ಲಿದ್ದಾಗ ಒಮ್ಮೆ ಒಬ್ಬ ಮುಸಲ್ಮಾನ ಅಧಿಕಾರಿ ಬಂದು ಆತನೊಡನೆ ವಿತಂಡವಾದ ಮಾಡತೊಡಗಿದ. ಆಗ ದಾದೂ ಸ್ವಲ್ಪವೂ ತಾಳ್ಮೆಗೆಡದೆ ಹೇಳಿದ, 'ನಂಬಿಕೆಟ್ಟವರಿಲ್ಲ ನಂಬಿನಡೆ, ಅಂತರಂಗ ಶುದ್ಧಿಯನ್ನು ಕಾಪಾಡಿಕೋ. ಅನಂತ ಪ್ರೇಮಮಯನಾದ ಪರಮಾತ್ಮನ ಸೇವೆಯಲ್ಲಿ ಸದಾ ತೊಡಗಿರು. ಅಹಂಕಾರವನ್ನು ತೊರೆದು ಪಶುಭಾವ ಹಾಗೂ ಕ್ರೋಧವನ್ನು ದೂರ ಮಾಡಿ ಪ್ರಭುವನ್ನು ಗುರುತಿಸು. ಅಲ್ಲಿ ದ್ವೈತ ನಡೆಯದು, ಮಿಥ್ಯೆ ನಡೆಯದು, ಜ್ಞಾನದಿಂದ ಅವನನ್ನು ಅರಸು.'

ದಾದೂವಿನ ಮಾತಿನ ಪರಿಣಾಮ ಅವನ ಮೇಲೆ ತೀವ್ರವಾಗಿ ಆಯಿತು. ಅವನು ದಾದೂವಿನ ಅನುಯಾಯಿಯಾದ. ದಾದೂ ಇನ್ನೊಮ್ಮೆ ಅವನಿಗೆ ಹೇಳಿದ : 'ವಿಚಾರಮಾಡಿ ಸತ್ಯವನ್ನು ಕಾಣುವುದೇ ಎಲ್ಲ ದುಃಖಗಳಿಗೂ ಮದ್ದು. ವೇದ, ಶಾಸ್ತ್ರ ಪಠಣದಿಂದೇನೂ ಪ್ರಯೋಜನವಿಲ್ಲ. ಸೃಷ್ಟಿಕರ್ತನ ಹೃದಯದೊಳಗಿರುವ

ಪ್ರೇಮದ ವ್ಯಥೆಯೇ ಆಗ ಜಗವೆಲ್ಲೆಲ್ಲ ವ್ಯಾಪಿಸಿದೆ. ಇದೊಂದು ವಿರಾಟ್ ಗಂಭೀರ ರಹಸ್ಯ. ಬ್ರಹ್ಮಚಿತ್ತದೊಂದಿಗೆ ಒಂದಾಗದೆ ಇದರ ರಹಸ್ಯ ಅರಿವಾಗದು. ಭಗವಂತನಿಗೆ ನಿನ್ನ ಹೃದಯವನ್ನು ಸಮರ್ಪಿಸು. ಪ್ರೇಮವನ್ನು ನಿವೇದಿಸು, ಪ್ರೇಮದಿಂದ ಅವನ ಮನಸನ್ನು ಕೂಡು. ಆಗಲೇ ಅವನ ಎದೆಯ ಕದ ತೆರೆದುಕೊಳ್ಳುವುದು, ಅದರಿಂದ ಸೃಷ್ಟಿ ರಹಸ್ಯ ಅರಿವಾಗುವುದು. ಅದಿಲ್ಲದೆ ವೇದ ಪುರಾಣಗಳನ್ನು ಗಟ್ಟಿ ಮಾಡುತ್ತ ಮಾಡುತ್ತ ಸತ್ತರೂ ಅವನ ರಸರಾಜ್ಯಕ್ಕೆ ಪ್ರವೇಶ ದೊರೆಯದು. ಪಂಡಿತನ ರಾಜ್ಯ ಶಾಸ್ತ್ರದಲ್ಲಿ, ರಸಿಕನ ವಿಹಾರ ಪ್ರೇಮ ರಾಜ್ಯದಲ್ಲಿ, ಅಲ್ಲಿ ಪಂಡಿತನಿಗೆ ಎಡೆಯೆಲ್ಲಿ?'

ಸುಖದೊಳಗೆ ಅನೇಕ ವಿಧವಾದ ದುಃಖವಿದೆ. ದುಃಖದೊಳಗೆ ಅನೇಕ ವಿಧವಾದ ಸುಖವಿದೆ. ಆದಿ ಅಂತ್ಯಗಳನ್ನು ಅಂತರತಮದೊಂದಿಗೆ ಪ್ರೇಮದಿಂದ ಕೂಡಿಸದೆ, ಅದನ್ನು ಸಮಗ್ರವಾಗಿ ಪಡೆಯದೆ ಸಾಧಕ ಸುಖದುಃಖದ ಮರ್ಮವನ್ನು ಅರಿಯ. ವಸ್ತು ವಿಚಾರದಲ್ಲಿ ಕೇವಲ ವಿಚ್ಛೇದವಿದೆ, ಖಂಡನೆಯಿದೆ. ಆದರಿಂದ ಪ್ರಾಣಿಗಳ ಮಿಲನವಾಗದು; ಮರ್ಮ ದೊರೆಯದು.

ಈ ಚರಾಚರ ವಿಶ್ವವೆಲ್ಲ ದಾದುವಿನ ಪ್ರಕಾರ 'ಸಬದ್' (ಶಬ್ದಬ್ರಹ್ಮ). ಪ್ರಥಮ ಶಬ್ದ ನಾದ ಓಂಕಾರ, ಅದರಿಂದ ಜಗತ್ತಿನ ಉತ್ಪತ್ತಿಯಾಯಿತು. ಅದರಲ್ಲೇ ಸ್ಥಿತಿ, ಅದರಲ್ಲೇ ಲಯ, ತಾನ ಮತ್ತು ಸ್ವರ 'ಸಬದ್'ನ ವಿಸ್ತಾರ. (ಸುರತಿ) ತಾಳ ಹಾಗೂ ಲಯ ಸಬದ್‌ನ ನಿಸ್ತಾರ (ಬಿಡುಗಡೆ, ವಿರತಿ) ಬರಿಯ ತಾನದಿಂದ ಸಬದವಾಗದು. ತಾನ–ಲಯದಿಂದ ಸಬದ ಪೂರ್ಣವಾಗುತ್ತದೆ. ಹಗಲು–ಇರುಳು, ಸುಖ–ದುಃಖ, ಹುಟ್ಟು-ಸಾವು ಸೃಷ್ಟಿ-ಪ್ರಳಯ ಇವುಗಳ ಜೊತೆಯಲ್ಲೇ ಹಾಡು ಪೂರ್ಣವಾಗುವುದು.

ಈ ಜಗತ್ತು ಈ ಸಬದ್‌ನಲ್ಲೇ ಅನುಸ್ಯೂತವಾಗಿದೆ. ಈ 'ಸಬದ'ವನ್ನು ಪಡೆಯುವುದರಿಂದಲೇ ಮುಕ್ತಿ. ಆಗ ಸರಕ್ಕೆ ಯಾವ ಬಂಧನವೂ ಬಂಧನವೆನಿಸುವುದಿಲ್ಲ. ಸಾಧಕ ಅದನ್ನು ಪಾನಮಾಡಿ ತೃಪ್ತನಾಗುತ್ತಾನೆ. ಓಂಕಾರ ಶಬ್ದದಿಂದಲೇ ವಿಧಾತ ಸೃಷ್ಟಿಕಾರ್ಯ ಮಾಡುತ್ತಿದ್ದಾನೆ. ಈಗಲೂ ಎಲ್ಲ ಘಟ್ಟಗಳಲ್ಲೂ ಅತನ ಸಂಗೀತ ತರಂಗವಾಗುತ್ತಿದೆ. ಆ ಯಾವ 'ಘಟ' ಈ ಸಂಗೀತದೊಂದಿಗೆ ಕೂಡಿಕೊಂಡಿಲ್ಲವೋ ಅದು ವಿಶ್ವ ಸಂಗೀತದಲ್ಲಿ ಒಂದು ವಿಘ್ನ, ಬಾಧೆ. ಅದ್ದರಿಂದ ಇವೆಲ್ಲವನ್ನೂ ಸಾಧಿಸಬೇಕು. ಸಾಧುಗಳು ಅನವರತರವೂ ಈ ಶಬ್ದದೊಡನೆ ಸಂಲಗ್ನರಾಗಿರುತ್ತಾರೆ. ಅದರಿಂದಲೇ ಅವರು ತಮ್ಮನ್ನು ಹಾಗೂ ಇತರರನ್ನು ಎಚ್ಚರವಾಗಿಟ್ಟಿರುತ್ತಾರೆ. ಈ 'ಸಬದ್'ದಿಂದ ಭ್ರಷ್ಟರಾದರೆ ಸಾಧನೆ ಭ್ರಷ್ಟವಾಗುತ್ತದೆ. ಈ ಶಬ್ದಬಾಣದಿಂದಲೇ ಸಾಧುಗಳು ಸಾಧಕನ ಹೃದಯವನ್ನು ಭೇದಿಸುತ್ತಾರೆ. ಈ ಬಾಣದಿಂದ ಭೇದಿಸಲ್ಪಟ್ಟವರೇ ಪೂರ್ಣಪುರುಷರು. ಈ ಸಬದ್ ವ್ಯಥಾಮಯ, ನೋವಿನ ನೋಂಪಿ, ಅನ್ನಮಯ.

ವೀರಸಾಧಕರು ಸ್ವೇಚ್ಛೆಯಿಂದ ಆ ಅಗ್ನಿಗೆ ಧುಮುಕುತ್ತಾರೆ. ಅದಕ್ಕೆ ಆತ್ಮ

ಸಮರ್ಪಣ ಮಾಡಿಕೊಳ್ಳುತ್ತಾರೆ. ಕಾಪುರುಷರು ಹೇಡಿಗಳು ಓಡಿಹೋಗುತ್ತಾರೆ, ಕಣದಿಂದ ಕಾಲ್ತೆಗೆಯುತ್ತಾರೆ.

ಈ 'ಸಬದ್'ನಲ್ಲೇ ಭಾಗವತ ಆನಂದವಿದೆ. ಈ ಶಬ್ದವೇ ಎಲ್ಲ ಭ್ರಮೆಯ ತಿಮಿರವನ್ನು ನಾಶಮಾಡುತ್ತದೆ. ಈ ಶಬ್ದದಲ್ಲೇ ವಿಶ್ವದ ಎಲ್ಲ ಸಾಧಕ ಹಾಗೂ ಸಾಧನೆಗಳ ರಸವಿದೆ. ಇದನ್ನು ಗಾನ ಮಾಡುವುದೇ ವಿಶ್ವರಸದ ಪಾನ. ಅಸಂಖ್ಯ ಬಂಧನಗಳು, ಎಲ್ಲೆಗಳು ಇದ್ದರೂ ಆ ಸಂಗೀತದ ಅಸೀಮ ಆನಂದವನ್ನು ಸಾಕ್ಷಾತ್ಕಾರ ಗೊಳಿಸುವುದರಿಂದ ಎಲ್ಲೆಯೊಳಗೆ ಅಸೀಮಬ್ರಹ್ಮಾನುಭವ ಸಹಜವಾಗುತ್ತದೆ.

ಸಬದೈಂ ಬಂಧ್ಯಾ ಸಬ್‌ರಹೈ ಸಬದೈಂ ಹೀ ಸಬ್ ಜಾಇ
ಸಬದೈಂ ಹೀ ಸಬ್ ಉಪಜೈ ಸಬದೈಂ ಸಬೈ ಸಮಾಇ
ಸಬದೈಂ ಹೀ ಸುಖಿಯುಭಯಾ ಸಬದೈಂ ಸಹ ಅಸಮಾನ್
ಸಬದೈಂ ಹೀ ನಿರ್ಗುನ ಮಿಲೈ ಸಬದೈ ನಿರ್ಮಲಜ್ಞಾನ್

ಸೃಷ್ಟಿಯ ಮೂಲವೂ ಶಬ್ದವೇ ಎಂದು ದಾದೂ ಹೇಳುತ್ತಾನೆ.

ಪಹಲೀ ಕೀಯಾ ಆಪದೈಂ ಉತ್ಪತಿ ಊಂಕಾರ
ಊಂಕಾರ ಹೀ ಥೈಂ ಉಪಜೈ ಪಂಚತತ್ತ ಆಕಾರ್ ।
ಏಕ ಸಬದ ಸಬ್‌ಕುಛ್ ಕಿಯಾ ಐಸಾ ಸಮರಥ ಸೋಈ
ಆಗೈಪೀಛೈಂ ತೌಕರೈಂಜೇ ಬಲಹೀನಾ ಹೋಇ ।
ನಿರಂಜನ ನಿರಾಕಾರ ಹೈ ಊಂಕಾರ ಹೀ ಆಕಾರ್ ।
ದಾದೂ ಸಬ್ ರಂಗ್‌ರೂಪ್ ಸಬ್ ವಿಧಿಸಬ ವಿಸ್ತಾರ್ ।
ಆದಿ ಸಬದ ಊಂಕಾರ ಹೈ ಬೋಲೈ ಸಬಘಟ ಮಾಹಿಂ ।
ದಾದೂ ಮಾಯಾ ವಿಸ್ತರೀ ಪರಮತತ್ತಯಹ್ ನಾಹಿಂ ॥

ಮೊದಲಿಗೆ ಓಂಕಾರ ತನ್ನಷ್ಟಿಗೆ ತಾನೆ ಹುಟ್ಟಿತು. ಓಂಕಾರದಿಂದ ಪಂಚ ತತ್ವಗಳು ಜನಿಸಿದವು. ಒಂದು ಶಬ್ದದಿಂದ ಇವೆಲ್ಲ ನಡೆದವು. ಬಲಹೀನರಾದವರು ಹಿಂದೆ ಮುಂದೆ ನೋಡುತ್ತಾರೆ. ಓಂಕಾರವೇ ನಿರಂಜನ, ನಿರಾಕಾರ. ದಾದೂ ಹೇಳುತ್ತಾನೆ–ರಂಗು, ರೂಪ ಇವೆಲ್ಲ ಅದರದೇ ವಿಸ್ತಾರ. ಆದ ಶಬ್ದ ಓಂಕಾರ. ಅದು ಘಟ ಘಟದಲ್ಲಿ ನುಡಿಯುತ್ತದೆ. ಮಾಯೆಯ ಆಟ ಇದರ ಮುಂದೆ ಸಾಗದು.

ದಾದೂವಿನ ಪ್ರಕಾರ ನಮ್ಮ ಸಾಧನೆ ಸಹಜವಾಗಿರಬೇಕು. ಸಾಧನೆಗೂ ಬದುಕಿಗೂ ವಿರೋಧವಿರಬಾರದು. ಸಾಧನೆಯ ದೈನಿಕ ಹಾಗೂ ನಿತ್ಯದ ಗುರಿಯಲ್ಲಿ ಯಾವ ಅಂತರವೂ ಇಲ್ಲ. ದೈನಿಕದೊಂದಿಗೆ ಶಾಶ್ವತವನ್ನು ಬೆಸೆಯುವುದೇ ಸಹಜ ಸಾಧನೆ. ದಾದೂವಿನ ದೃಷ್ಟಿಯಲ್ಲಿ ಹಿಂದೂ, ಮುಸಲ್ಮಾನ ಮೊದಲಾದವರ ಬಾಹ್ಯಾಚಾರ, ನಿಯಮಗಳು ವ್ಯರ್ಥ. ಈ ಬಾಹ್ಯ ಕ್ರಿಯೆಗಳನ್ನು ತೊರೆದು ಆತ್ಮ ಪರಮಾತ್ಮರ, ನಿತ್ಯವೂ ಸಹಜವೂ ಆದ ಮಿಲನದಲ್ಲೇ ನಿತ್ಯ ಸಹಜವಾದ ಹಾಗೂ ಸಹಜ ಆನಂದವಿದೆ. ನಾನಾ ವಿಧವಾದ ಕೃತ್ರಿಮ ವೇಷ ತೊಟ್ಟು, ಮನುಷ್ಯ ತನ್ನ ದೈನ್ಯ, ವೈರಾಗ್ಯ ಹಾಗೂ ತಪಸ್ಸನ್ನು ಹೊರಕ್ಕೆ ತೋರಿಸ ಬಯಸುತ್ತಾನೆ. ಆದರೆ ಇದು ಸಾಧಾರಣವಾದ ವಿಲಾಸಕ್ಕಿಂತ ದೊಡ್ಡ ವಿಲಾಸ.

ಸಹಜ ಪಥಗಾಮಿಯಾದ ಸಾಧಕನಿಗೆ ಗುರುವೇ ಆಶ್ರಯ. ನಿಜವಾಗಿ ನೋಡಿದರ ಭಗವಂತನೇ ಸದ್ಗುರು.

'ನನ್ನ ಗುರು ಆಡುವ ಒಂಟಿ,
ಬರುವ ಅಲಖ್ ನಿರಂಜನ್ ರಾಯ,
ಚಂದ್ರಸೂರ್ಯರ ದೀಪವ ಮಾಡಿ ಬೆಳಗುತಿಹ ಹಗಲಿರುಳ ಜಂಟಿ,
ಅಂಥ ಗುರುವೆ ನನ್ನ ಹರಿಣ
ದಾದೂ ಆದ ಅಲ್ಲಿ ಅನಂತ ಅಪಾರ ಕಣಾ।

ಸದ್ಗುರು ಒಳಗೆ ವಿರಾಜಿಸುತ್ತಿದ್ದಾನೆ ಅಲ್ಲೇ ಅವನಿಗೆ ಆರತಿ, ಪೂಜೆ. ಇದನ್ನು ಅರಿಯುವ ಮಂದಿ ವಿರಳ.

ಈ ರೀತಿ ದಾದೂವಿನ ದೃಷ್ಟಿಯಲ್ಲಿ ಗುರು ಸ್ವತಃ ಭಗವಂತ, ಲೌಕಿಕ ಗುರು ಉಪಲಕ್ಷ್ಯ ಮಾತ್ರ. ಆತ ಸ್ವತಃ ಕರುಣೆದೋರಿ ತಿಳಿಸದಿದ್ದರೆ ಆತನ ಬಗೆಗೆ ಅರಿವು ನೀಡುವ ಶಕ್ತಿ ಯಾರಿಗಿದೆ? ಅವನು ಲೌಕಿಕ ಗುರುವನ್ನು ಉಪಲಕ್ಷ್ಯ ಮಾಡಿ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತಾನೆ. ಗುರುವಿನೊಡನೆ ಸಾಧಕನ ಸಂಬಂಧ ವೈಯಕ್ತಿಕ. ಪರಮಾತ್ಮ ತನ್ನ ಇಚ್ಛೆಯಂತೆ ಲೌಕಿಕ ಗುರುವಿಲ್ಲದೆಯೂ ತನ್ನ ಕಾರ್ಯ ಮಾಡಬಲ್ಲ. ಆತ ಹೃದಯದಲ್ಲಿ ಪ್ರೇಮದ ಜ್ಯೋತಿಯನ್ನು ಬೆಳಗಿ ಎಲ್ಲವನ್ನೂ ಪ್ರತ್ಯಕ್ಷಗೊಳಿಸಬಲ್ಲ. ದಾದೂವಿನ ಗುರು ಎಲ್ಲ ಸಂಪ್ರದಾಯ, ಗುಣ ಹಾಗೂ ಆಕಾರದಿಂದ ಅತೀತ.

'ದಾದೂ ಅಲಹಂರಾಮಕಾ ದೋನೋಂ ಪಥತೈಂ ನ್ಯಾಕಾ।
ರಹಿತಾಗುನ ಆಕಾರಕಾ ಸೋ ಗುರು ಹಮಾರಾ।

ಆಗಿನ ಸಾಧಕರು, ಭಕ್ತರು ಗುರುವನ್ನು ಶೂನ್ಯಕ್ಕೆ ಹೋಲಿಸುತ್ತಿದ್ದರು. ಸಂತ ಜಜ್ಜಬ್ ಹೀಗೆ ಹೇಳಿದ್ದಾನೆ. 'ಸದ್ಗುರು ಶೂನ್ಯ ಸಮಾನಹೈ. (ಸದ್ಗುರು ಶೂನ್ಯದೊಲಿಗ) ಇಲ್ಲ ಶೂನ್ಯವೆಂದರೆ ದೊಡ್ಡ ಬಯಲು ಎಂದರ್ಥ. ಅದರ ಪ್ರಕಾರ ಸಾಧನೆ ಸಹಜವಾಗಬೇಕಾದರೆ ಎಲ್ಲ ಬಾಧೆಗಳಿಂದ ದೂರವಾದ ಸಹಜ ಅನಂತ ಆಧಾರ ಬೇಕು. ಅದೇ ಶೂನ್ಯ. ಗುರು ತನ್ನ ವ್ಯಕ್ತಿತ್ವದಿಂದ ಶಿಷ್ಯನನ್ನು ಅದುಮಿದ್ದರೆ ಅವನ ಧರ್ಮಜೀವನ ನೊಳೆತು ಚಿಗುರುವ ಬದಲು ಅದರ ಭಾರಕ್ಕೆ ಮುರುಟಿಹೋಗುತ್ತದೆ. ಪ್ರತಿಯೊಂದು ಮೊಳಕೆಯೂ ಮೇಲೆದ್ದು ವಿಕಾಸಗೊಳ್ಳ ಬಯಸುತ್ತದೆ. ಆದರೆ ಅದಕ್ಕೆ ಅನಂತ ಅಪಾರ ಆಕಾಶ ದೊರೆಯದಿದ್ದರೆ ಅದು ನಶಿಸುತ್ತದೆ. ಆದ್ದರಿಂದ ಗುರು ಶೂನ್ಯವಾದರೆ ಯಾವ ಬಾಧೆಯೂ ಇಲ್ಲ. ಆ ಶೂನ್ಯವೇ ಗುರು, ಗುರುವೇ ಶೂನ್ಯ. ಈ ಶೂನ್ಯತೆಯೇ ಆತ್ಮದ ವಿಚಾರದ ಸಹಜ ಭೂಮಿ. ಈ ಸಹಜದೊಳಗೇ ಆತ್ಮದ ನಿತ್ಯ ಕೇಳಿ ಆನಂದ ಕಲ್ಲೋಲದ ನೆಲೆಯಿದೆ. ಎಲ್ಲ ಜೀವಿಗಳ ವಿಕಾಸಕ್ಕೆ ಅನಂತ ಸ್ವರೂಪ ತನ್ನನ್ನು ತಾನು ಸಹಜ ಶೂನ್ಯಗೊಳಿಸಿ ಆ ಪರಮ ಅವಕಾಶ' ವನ್ನು ರಚಿಸಿದೆ.

ಸಾಧನೆಯಲ್ಲಿ ೧೪ ಅಂಗಗಳಿವೆ. ಅವುಗಳಲ್ಲಿ ಏಳು ಬಾಧಕ ಉಳಿದ ಏಳು

ಸಾಧಕ. ಭಗವಂತನನ್ನು ಪಡೆಯಲು ಸಾಧಕ ಸಾಧನಾ ಪಥದಲ್ಲಿಮುನ್ನಡೆದಾಗ ಈ ವಿಘ್ನಸಪ್ತಕ ಅವನಿಗೆ ಎದುರಾಗುತ್ತದೆ.

೧ ಭೇಜ್ (ವೇಷ, ಹೊರಗಿನ ಥಳುಕು, ಬಳುಕು)

೨ ಮನಸ್ಸು (ಒಳಗೆ ಕಲ್ಪನೆ ಹಾಗೂ ಮಿಥ್ಯಾ ಕೃಷಿಯ ವಿಘ್ನ)

೩ ಮಾಯೆ (ನಿತ್ಯದ ವಿಘ್ನ)

೪ ಸೂಕ್ಷ್ಮ ಜನ್ಮ (ಒಳಗಿನ ಚಾಂಚಲ್ಯದ ಕಾಟ)

೫ ಉಪಜ್ (ಅಹಂನ ಉದಯ)

೬ ಅನಿಗ್ರ್ಯನಿಯಾ (ಸಾಧಕನ ಸ್ವಂತ ಅಯೋಗ್ಯತೆ)

೭ ಹೈರಾನ್ (ಪ್ರಭಾವಕ್ಕೆ ಒಳಗಾಗುವುದು)

ಈ ವಿಘ್ನ ಸಪ್ತಕಗಳ ಜೊತೆಗೆ ಅವುಗಳ ನಿವಾರಣೋಪಾಯವನ್ನೂ ಹೇಳಿದೆ. ಎಲ್ಲೆಡೆಯೂ ದಾದೂ ಭಗವತ್ಕೃಪೆಗೆ ಒತ್ತು ಕೊಡುತ್ತಾನೆ.

ಈ ವಿಘ್ನ ಸಪ್ತಕಗಳ ತರುವಾಯ ಆಶ್ರಯ ಸಪ್ತಕ (ಸಹಾರಾ) ಬರುತ್ತದೆ. ಅವು ಹೀಗಿವೆ. ೧ ವಿನಂತಿ ೨ ವಿಶ್ವಾಸ, ೩ ಮಾಯೆ (ಪಕ್ಷಪಾತವಿಹೀನತೆ) ೪ ಸಾರಗ್ರಾಹಿತೆ ೫ ಸುಮಿರನ್ (ಸ್ಮರಣೆ) ೬ ಲಯ (ಪ್ರೇಮದಿಂದ ತನ್ನನ್ನು ತಾನು ಭಗವಂತನಲ್ಲಿ ಲೀನಗೊಳಿಸುವುದು. ೭ ಸಂಜೀವನ.

ದಾದೂವಿನ ಪ್ರಕಾರ ಬಾಹ್ಯಾಚಾರ ಹಾಗೂ ಸಂಪ್ರದಾಯಗಳು ವ್ಯರ್ಥ. ಒಂದೆಡೆ ಆತ ಹೀಗೆ ಹೇಳಿದ್ದಾನೆ.

> "ದಾದೂ ಹಿಂದೂ ಲೋಗ ದೇಹರೈ ಮುಸಲ್ಮಾನ ಮಸೀತಿ ।
> ಹಮ ಲೋಗ ಏಕ್ ಏಕ್ ಅಲೇಖ ಸೌಸದಾ ನಿರಂತರ ಪ್ರೀತಿ ॥
> ನ ತಹಾಂ ಹಿಂದೂ ದೇಹಗಾ ನತಹಾಂ ತುರಕ ಮಸೀತಿ ।
> ದಾದೂ ಆಪೈ ಆಪ ಹೈ, ನಹೀಂ ತಹಾಂ ರಹ ರೀತಿ ॥

ದಾದೂವಿನ ಆ ನೆಲೆಯಲ್ಲಿ ಹಿಂದೂಗಳ ದೇವಾಲಯವೂ ಇಲ್ಲ, ಮುಸಲ್ಮಾನರ ಮಸೀದಿಯೂ ಇಲ್ಲ. ದಾದೂ ಅಲ್ಲಿ ತನ್ನಷ್ಟಿಗೆ ತಾನು ಆತ್ಮಾರಾಮನಾಗಿ ರಮಿಸುತ್ತಿದ್ದಾನೆ.

ದಾದೂ ಬಾಹ್ಯಶಕ್ತಿಯ ವ್ಯರ್ಥತೆಯೊಂದಿಗೆ ವೇಷ. ಮತವಾದ ಋದ್ಧಿ, ಸಿದ್ಧಿ, ಶಾಸ್ತ್ರ ತೀರ್ಥ ಪೂಜೆ, ಸಮಾಜ, ಮಿಥ್ಯಾ ಚಾರ, ಹಿಂಸೆ, ಫಲಕಾಮನೆ, ಮೊದಲಾದವುಗಳನ್ನು ತೊರೆಯುವಂತೆ ಹೇಳಿದ್ದಾನೆ. ಹಿಂಸೆ ಹಾಗೂ ದುರಾಚಾರವನ್ನು ತೊರೆದು ಗಾರ್ಹಸ್ಥ್ಯ ಧರ್ಮವನ್ನು ಪಾಲಿಸಿಕೊಂಡೇ ಸಾಧನಾ ಪಥದಲ್ಲಿ ಮುಂದುವರೆಯಬಹುದು. ದಾದೂವಿನ ಈ ಸಿದ್ಧಾಂತವನ್ನು ಹಲವರು ವಿರೋಧಿ ಪ್ರಶ್ನಿಸಿದರು. ಸಾಧಕ ಗೃಹಧರ್ಮಪಾಲನೆ ಮಾಡತೊಡಗಿದರೆ ಸತ್ಯ ಪ್ರಚಾರ ಮಾಡುವವರಾರು ? ಅದಕ್ಕೆ ದಾದೂ ಹೇಳಿದ, 'ದೀಪ ಹಚ್ಚಿ, ಮನೆಯಲ್ಲಾದರೂ ಇಡಿ, ಕಾಡಿನಲ್ಲಾದರೂ ಇಡಿ. ಪ್ರಾಣಪತಂಗ ಮಾತ್ರ ಎಲ್ಲಿ ದೀಪವಿದೆಯೋ ಅಲ್ಲಿಗೆ ಹೋಗುತ್ತದೆ.'

ಘಟ ಬನ ಮಾಹ್ಯೆಂ ರಾಖಿಯೋ ದೀಪಕ ಜ್ಯೋತಿ ಜಗಾಯಿ ।
ದಾದೂ ಪ್ರಾಣ ಪತಂಗ ಸಬ್ ಜಹಾಂ ದೀಪಕ ತಹಾಂ ಜಾಇ ॥

ಸಾಧನೆ ಮತ್ತು ಜಗತ್ತನ್ನು ಮಾತ್ರ ಅಖಂಡ ಭವದಿಂದ ದಾದೂ ಕಂಡನೋ ಅದೇ ಭಾವದಿಂದ ಭಿನ್ನ ಭಿನ್ನ ಧರ್ಮ ಪಂಥಗಳಲ್ಲಿ ಐಕ್ಯಭಾವನನ್ನು ಕಂಡ. ಖಂಡ ದೃಷ್ಟಿಯಿಂದ ನೋಡಿದ್ದರಿಂದಲೇ ವಿಭಿನ್ನ ಧರ್ಮ ಪಂಥಗಳಲ್ಲಿ ದ್ವೇಷ.

ಖಂಡ ಖಂಡಕರಿಬ್ರಹ್ಮಕೋ ಪಖಿ ಪಖಿಲಿಂಗೊ ಬಾಯಿ
ದಾದೂ ಪೂರಣ ಬ್ರಹ್ಮ ತಜಿ ಬಂಧೇ ಭರಮಾಕೀ ಗಾಂಠೀ ॥

ಸಾಧಕ ಯಾವಾಗಲೂ ರಸಭಾವವನ್ನು ಇಟ್ಟುಕೊಳ್ಳಬೇಕು. ಅದೇ ರೀತಿ ತನ್ನ 'ಅಹಂ'ನನ್ನೂ ತ್ಯಾಗ ಮಾಡಬೇಕು 'ಅಹಂ'ಕಾರವನ್ನು ತೊರೆಯದೆ ಪರಮಾತ್ಮ ಪ್ರಾಪ್ತಿ ಅಸಂಭವ. ಇದಲ್ಲದೆ ಸಾಧಕ ಸೇವಾ ಧರ್ಮವನ್ನು ಕೂಡ ಪಾಲಿಸಲಾರ. ಅವನು ತನ್ನ ಮನಸ್ಸನ್ನು ಸ್ಥಿರಗೊಳಿಸಬೇಕು. ಸಾಧಕ ನಮ್ರನಾಗಿ. ಭಗವಂತನಲ್ಲಿ ಪೂರ್ಣವಾಗಿ ನಂಬಿಕೆಯಿಟ್ಟು, ಅವನಿಗೆ ಶರಣಾಗಬೇಕು.

ಆಪ ಗರ್ವ ಗ್ರಹೂನ್ ತಜೆ, ಮದಮಂಛರ ಹಂಕಾರ್ ।
ಗಹೈಗರೀಬೀ ಬಂದಗೀ, ಸೇವಾ ಸಿರಜನಹಾರ್ ॥

(ತಾನು ಗರ್ವ, ಅಂಕೆ ಶಂಕೆಗಳನ್ನು ತೊರೆದು ಮದ, ಮತ್ಸರ, ಹಮ್ಮು ಬಿಮ್ಮನ್ನು ಬಿಟ್ಟು, ದಾರಿದ್ರ್ಯವನ್ನು ಸ್ವೀಕರಿಸಬೇಕು, ಪ್ರಭುಸೇವೆಯಲ್ಲಿ ತೊಡಗಬೇಕು.)

ಜಪ, ಮಾಲೆ, ಧ್ಯಾನ ಮೊದಲಾದವುಗಳ ಬಗೆಗೆ ದಾದೂ ಹೇಳುತ್ತಾನೆ. ಅಪಾದ ಮಸ್ತಕ ಜಪ ನಡೆಯುತ್ತಿರುತ್ತದೆ. ನಿಖಿಲ ಚರಾಚರಗಳಿಂದ ತುಂಬಿದ ಈ ವಿಶ್ವದಲ್ಲಿ ಎಲ್ಲ ವಿಧವಾದ ಮಾಲೆ ನಿರಂತರ ಸುತ್ತುತ್ತದೆ. ಈ ಮಾಲೆಯಿಂದಲೇ ಆ ಜಪ ಸಾಗುವುದು.

ದಾದೂ ಭಕ್ತಿಯ ಬಗೆಗೆ ಇಂಥದೇ ಮಾತನ್ನು ಆಡಿದ್ದಾನೆ. ಭಗವಂತ ವಿರಾಟ, ಅಸೀಮ ಅಪಾರ. ಅತನನ್ನು ಪಡೆಯಬೇಕಾದರೆ ಭಕ್ತಿಯೂ ಅಂತಹುದೇ ಆಗಿರಬೇಕು.

ಜೈಸೇ ರಾಮ ಅಪಾರ ಹೈ ತೈಸೀ ಭಗತಿ ಅಗಾಧ್ ।
ಇನ್ ದೋನ್ಯೂಂ ಕೀ ಮಿತನಹಿಂ ಸಕಲ ಪುಕಾರೈ ಸಾಧ್ ॥

(ಎಲ್ಲ ಸಾಧುಗಳೂ ಕೂಗಿ ಕೂಗಿ ಹೇಳುತ್ತಾರೆ. ರಾಮ ಅಪಾರ, ಅಂತೆಯೇ ಭಕ್ತಿಯೂ ಅಗಾಧ. ಇವೆರಡಕ್ಕೂ ಮಿತಿಯಿಲ್ಲ.)

ಎಲ್ಲೆಲ್ಲೂ ಭಗವಂತನ ಲೀಲೆ ಕಂಡು ಬರುತ್ತದೆ. ಅವನು ಒಳಗೆ ಹೊರಗೆ ಎಲ್ಲೆಡೆಯೂ ಇದ್ದಾನೆ. ಅವನ ಲೀಲೆಯೂ ಹಾಗೆಯೇ ನಡೆಯುತ್ತಿದೆ. ಇದೇ ಲೀಲೆಯನ್ನು ಕುರಿತು ದಾದೂ ಹೇಳುತ್ತಾನೆ.

'ಘುಟಘುಟಗೋಪೀ ಘುಟಘುಟಕಾನ್ಹ
ಘುಟಘುಟ ಕೇಲಿ ತಹೇ ಪರಮವಿಲಾಸ ।
ಸಖಿ ಸಂಗೀ ಮಿಲೀ ಖೇಲೈ ರಾಸ ॥

ತಹಂ ಬಿನ ಜೈನಾ ಬಾಜೈ ತೂರ್ ।
ಬಿಗಸೈ ಕಮಲ ಚಂದ ಅರು ಸೂರ್ ।
ಪೂರಣ ಬಹ್ಮ ಪರಮ ಪರಕಾಶ್ ।
ತಹಂ ನಿಜ ದೇಖೇ ದಾದೂದಾಸ್ ॥

(ಘಟ ಘಟದಲ್ಲೂ ಗೋಪಿ, ಘಟ ಘಟದಲ್ಲೂ ಕೃಷ್ಣ. ಕುಂಜ ಕೇಳಿ ಅಲ್ಲಿ ನಡೆವುದು. ಎಲ್ಲ ಸಖಿಯರೂ ಸೇರಿ ಆಡುವರು. ರಾಸ ಕ್ರೀಡೆ. ಅಲ್ಲಿ ಶಬ್ದವಿಲ್ಲದೆಯೇ ಆಗುವುದು ಸೂರ್ಯನಾದ, ಅರಳುವುದು ಕಮಲ, ಬೆಳಗುವುದು ಚಂದ್ರ ಸೂರ್ಯ ಪೂರ್ಣ ಬ್ರಹ್ಮ ಪರಮ ಪ್ರಕಾಶವನ್ನು ಅಲ್ಲಿ ಕಾಣುವ ದಾದೂದಾಸ).

ಈ ಲೀಲಾರಸವನ್ನು ಅಂತರಂಗದಲ್ಲಿ ಕಂಡು ಉಂಡವರು ಅದನ್ನು ಮಾತಿನಲ್ಲಿ ವ್ಯಕ್ತಪಡಿಸಲಾರರು. ಈ ಆನಂದದ ಋಣವನ್ನು ಸೇವೆಯ ಮೂಲಕ ತೀರಿಸುವರು. ಸಾಧಕನ ಸಂಪೂರ್ಣ ಸಾಧನೆಯ ಫಲ ಆ ಪರಮ ಪ್ರಿಯನ ಪ್ರಾಪ್ತಿ. ಅವನು ಆ ಪ್ರಿಯತಮನನ್ನೇ ಬಯಸುತ್ತಾನೆ, ಪ್ರೀತಿಸುತ್ತಾನೆ. ಅವನಿಗಾಗಿ ಅವನ ಹೃದಯ ತಳಮಳಗೊಳ್ಳುತ್ತದೆ. ಆದ್ದರಿಂದ ದಾದೂವಿನ ಹೃದಯ ನಿತ್ಯವೂ ಈ ರೀತಿ ವ್ಯಾಕುಲ ಪ್ರಾರ್ಥನೆ ಸಲ್ಲಿಸುತ್ತದೆ. ಓ ಪ್ರಭು, ನನಗೆ ನೀನು ಮಾತ್ರ ಬೇಕು, ಬೇರೇನೂ ಬೇಡ. ನೀನು ದರ್ಶನ ನೀಡು ದರ್ಶನ ನೀಡು. ನನಗೆ ನಿನ್ನ ಮುಕ್ತಿ ಬೇಡ, ಬುದ್ಧಿ ಸಿದ್ಧಿಗಳು ನನಗೆ ಹೊಲ್ಲ. ನನಗೆ ಬೇಕಾದುದು ಗೋವಿಂದ ನೀನಲ್ಲದೆ ಬೇರಲ್ಲ. ನನಗೆ ಮನೆ ಬೇಡ, ವನ ಬೇಡ, ಓ ನನ್ನ ದೇವ ನನಗೆ ಬೇಕು ನೀನು.'

'ದರ್ಶನದೇ ದರ್ಶನದೇ ಹಾಂತಾಂ ತೋರಿ ಮುಕ್ತಿ ನಮಾಗಾಂ ।
ಸಿಧಿ ನಮಾಂಗಾಂ, ರಿಧಿ ನಮಾದಾಗಾಂ ತುಮ್ಹಹೀಂ ಮಾಂಗಾಂ ಗೋವಿಂದ
ಘರಸಹೀಂ ಮಾಂಗಾಂ, ಬನ ನಹೀಂ ಮಾಂಗಾಂ ತುಮ್ಹಹೀ ಮಾಂಗಾಂ ದೇವಜೀ ॥

ಭಗವಂತನ ಬಗೆಗೆ ಈ ಸೀಳು, ಸೀಳಾಗಿ ಬಾಳಿನ ಗಾಳಿಯಾಗಿ ದಾದೂವಿನ ಬಾಳನ್ನು ಅಹರ್ನಿಶಿಯೂ ಮುಂದೆ ತಳ್ಳುತ್ತದೆ.

ದೈವೀ ಪ್ರೇಮದ ಮುಂದೆ ಮೋಕ್ಷವನ್ನೂ ತಿರಸ್ಕರಿಸುವ ದಾದೂವಿನ ಜೀವನ ದರ್ಶನ ಮುಮುಕ್ಷುಗಳಿಗೆ, ಸಾಧಕರಿಗೆ ದಾರಿದೀಪ, ತೋರುದೀಪ. ದಾದೂವಿನ ವಾಣೀ 'ಹರಡೇ ಬಾನೀ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ದೋಹೆ (ದ್ವಿಪದಿ) ಮತ್ತು ಪದದ ರೂಪದಲ್ಲಿ ರುಮುತನ ರಸವಾಣಿಯುನ್ನು ಓದಿದಡೆ ಕೊಂಚ ಕಾಲವಾದರ ಆ ದೀಪದ ಸಮೀಪವಿದ್ದ ಅನುಭವ ಪಾಠಕರಿಗೆ ಆಗದಿರದು.

ದಾದೂನ ತರುವಾಯ ಆತನ ಹೆಸರಿನಲ್ಲಿ ಗದ್ದುಗೆಗಳು, ಮಠಗಳು ಹುಟ್ಟಿಕೊಂಡವು. ಯಾತ್ರೆಗೆ ಹೋಗಿ ಪಾತ್ರೇ ತಂದಿದಂತೆ ಆತನ ರಸವಾಣಿಯ ಯಾತ್ರೆ ಮಾಡಲು ಹೊರಟ ಮಂದಿ ತಮ್ಮ ಅಪಾತ್ರತೆಯಿಂದಾಗಿ ಇಂಥ ಮಠ, ಮಂದಿರಗಳನ್ನು ಕಟ್ಟಿಕೊಂಡರು. ದಾದೂವಿನ ಶಿಷ್ಯರಲ್ಲಿ ಅತ್ಯಂತ ಪ್ರಸಿದ್ಧನಾದವನು ಸಂತ ಸುಂದರದಾಸ.

ಅಕ್ಕಮಹಾದೇವಿಯ ವಚನಗಳಲ್ಲಿ ಸಂಸಾರದ ಅಸಾರತೆಯ ನಿರೂಪಣೆ

ಜಿ. ಆರ್. ಮಣಿಶೆಟ್ಟಿ

ಸಾಹಿತ್ಯ ಸರ್ವಸಾಮಾನ್ಯನ ಹೃದಯ ಮಂದಿರ ಪ್ರವೇಶ ಮಾಡಿದ ಕಾಲ ೧೨ನೆಯ ಶತಮಾನ. ಈ ಶತಮಾನದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದ ಸಾಹಿತ್ಯಿಕ ರೂಪ "ವಚನ". ಅದು ಅತ್ಯಂತ ಸರಳವಾದ ಜನಪರ ಧೋರಣೆಯನ್ನು ಬಿತ್ತರಿಸಿದ್ದರಿಂದ ಹೆಚ್ಚು ಜನಪ್ರಿಯತೆಯನ್ನು ಪಡೆಯಿತು. ಈ ಯುಗದಲ್ಲಿ ಶರಣರ ಪ್ರಯೋಗಶೀಲ ಮನಸ್ಸು ಅಂತರಂಗ ಶುದ್ಧಿ ಇಲ್ಲದ ಸಮಾಜದ ಉದ್ಧಾರದ ಕಡೆಗೆ ಹರಿಯಿತು. ಸಮಕಾಲೀನತೆಯೊಂದಿಗೆ ಸಾರ್ವಕಾಲಿಕವಾಗಿ ಬಾಳಿ ಬೆಳಗಬಲ್ಲ ಮೌಲ್ಯಗಳ ಪ್ರತಿಪಾದನೆಗಾಗಿ ಸಾಹಿತ್ಯವನ್ನು ಶರಣರು ಬಳಸಿಕೊಂಡರು. ಅವರ ಮೂಲ ಉದ್ದೇಶ ಸಮಾಜದ ಶುಚಿತ್ವವಾಗಿತ್ತು.

ವಚನ ಸಾಹಿತ್ಯದ ಮೂಲ ಅಡಿಪಾಯ ಹಾಕಿದವರಲ್ಲಿ ಅಗ್ರಗಣ್ಯರೆಂದರೆ— ದೇವರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮ ಹಾಗೂ ಅಸಂಖ್ಯಾತ ಶಿವಶರಣ-ಶರಣೆಯರು. ಇವರು ಸಾಂಘಿಕ ಜೀವನದಿಂದ ತತ್ಕಾಲೀನ ಸಮಾಜದ ಸಮಾಜದ ಸ್ವರೂಪ, ಅದರ ಸ್ಥಿತಿಗತಿ ಕಂಡು ಜನಾರೋಗ್ಯದ ದೃಷ್ಟಿಯಿಂದ ಸಕಾಲಕ್ಕೆ ಅವಶ್ಯಕವಾದ ಸಾಹಿತ್ಯಿಕ ಪರಿಸರವನ್ನು ಆವಿಷ್ಕಾರ ಮಾಡಿದರು. ಅವರು ನವಸಮಾಜದ ನಿರ್ಮಾಣದ ಕಡೆಗೆ ಗಮನ ಹರಿಸಿದ ಪ್ರಯೋಗ ವಿಶ್ವಮಾನ್ಯತೆಯನ್ನು ಪಡೆಯುವ ಮಟ್ಟವನ್ನು ಮುಟ್ಟುವಂತಾಯಿತು. ಇಂತಹ ಸಾಹಿತ್ಯಿಕ ಪರಿಸರದಲ್ಲಿ ತನ್ನ ಸರ್ವಸ್ವವನ್ನೆಲ್ಲಾ ತ್ಯಜಿಸಿ, ವೈರಾಗ್ಯಮೂರ್ತಿಯಾಗಿ, ಶರಣ ಸಂಕುಳದಲ್ಲಿ ಸ್ಥಾನ ಪಡೆದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೇ ಪ್ರಪ್ರಥಮ ಮಹಿಳಾಕವಯಿತ್ರಿಯ ಪಟ್ಟವನ್ನು ಅಲಂಕರಿಸಿಕೊಂಡಿರುವ ಅಕ್ಕಮಹಾದೇವಿ ೧೨ನೆಯ ಶತಮಾನದ ವಿಚಾರ ಕ್ರಾಂತಿಯಿಂದ ವಿಶೇಷವಾಗಿ ಪ್ರಭಾವಿತಳಾದವಳು. ಸ್ತ್ರೀಕುಲದ ಪ್ರತಿನಿಧಿಯಾಗಿ ಸಮಾಜದಲ್ಲಿ ನಡೆಯುವ ಅನ್ಯಾಯ, ಅತ್ಯಾಚಾರ, ಶೋಷಣೆ ಹಾಗೂ ಹಿಂದಿನಿಂದ ಬೆಳೆದು ಬಂದಿದ್ದ ಮೂಢನಂಬಿಕೆ, ಸಂಪ್ರದಾಯಗಳನ್ನು ಕಂಡು ಅವುಗಳ ಸುಧಾರಣೆಯತ್ತ ಗಮನ ಹರಿಸಿದ ಅಕ್ಕಮಹಾದೇವಿಯ ಕಾರ್ಯ ವೈಚಿತ್ರ್ಯಪೂರ್ಣವಾದದ್ದು.

೧೨ನೆಯ ಶತಮಾನದ ಶಿವಶರಣ-ಶರಣೆಯರು ತಮ್ಮ ತಮ್ಮ ವಚನಗಳ ಮುಖಾಂತರ ಸಂಸಾರದ ಅಸಾರತೆಯ ನಿರೂಪಣೆಯನ್ನು ತುಂಬಾ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ಆಡುವ ಮಾತುಗಳು ಭಾವಗರ್ಭಿತವಾಗಿರಬೇಕು; ವಿಚಾರ ಒಮ್ಮೆಲೆ

ಹಸೆಗೋಡೆಯ ಮೇಲೆ ಹಳ್ಳು ಒಗೆದಂತೆ ಆಗಬೇಕೆಂಬುದು ಶರಣರ ಮೂಲ ದೃಷ್ಟಿಕೋನವಾಗಿರಬಹುದು. ಆದ್ದರಿಂದಲೇ ಅವರ ವಚನಗಳು ವಿರಳ-ಸರಳ, ಒಳಗು-ಹೊರಗು ಮುಚ್ಚುಮರೆಯಿಲ್ಲದೆ ಅಭಿವ್ಯಕ್ತಿಯನ್ನು ಪಡೆದಿರುವುದನ್ನು ಕಾಣಬಹುದಾಗಿದೆ. ಇಂತಹ ಗುಣಗಳನ್ನು ವ್ಯಕ್ತಪಡಿಸಿದವರ ಸಾಲಿನಲ್ಲಿ ಅಕ್ಕಮಹಾದೇವಿಯು ಕೂಡ ಪ್ರಮುಖಳೆನಿಸಿದ್ದಾಳೆ. ಆದ್ದರಿಂದ ಪ್ರಸ್ತುತ ಲೇಖನದಲ್ಲಿ ಅಕ್ಕಮಹಾದೇವಿಯು ತನ್ನ ವಚನಗಳ ಮುಖಾಂತರ ಸಂಸಾರದ ಅಸಾರತೆಯ ನಿರೂಪಣೆಯನ್ನು ಹೇಗೆ ನಿರೂಪಿಸಿದ್ದಾಳೆ? ಅವುಗಳ ಬಗೆಗೆ ಮಹಾದೇವಿಯಕ್ಕನ ನಿಲುವೇನು? ಎಂಬುದರ ಬಗ್ಗೆ ಕೆಲವೊಂದು ಪ್ರಮುಖ ವಚನಗಳ ಸ್ಥೂಲ ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶವಾದ್ದರಿಂದ ಇಲ್ಲಿ ದೀರ್ಘ ನಿರೂಪಣೆ ಅಸಾಧ್ಯವಾಗಿದೆ.

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ,
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ,
ನೆನಹಿಂಗೆ ಅಱುಹಾಗಿ ಕಾಡಿತ್ತು ಮಾಯೆ
ಅಱುಹಿಂಗೆ ಮಱಹಾಗಿ ಕಾಡಿತ್ತು ಮಾಯೆ
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ
ಚೆನ್ನಮಲ್ಲಿಕಾರ್ಜುನಾ,
ನೀನೊಡ್ಡಿದ ಮಾಯೆಯನಾದರೂ ಗೆಲಬಾರದು !

ಎಂದು ಮಾಯೆಯ ಪ್ರಾಬಲ್ಯವನ್ನು ಕುರಿತು ಅಕ್ಕಮಹಾದೇವಿ ಮಾರ್ಮಿಕವಾಗಿ ಹೇಳಿದ್ದಾಳೆ. ಮಾಯಾಪಾಶದಿಂದ ಮುಕ್ತರಾದವರು ಸಿಗುವುದಂತೂ ವಿರಳ. ಎಲ್ಲ ಕಡೆಯೂ ಮಾಯೆಯ ಅವತಾರವೆ ಅಧಿಕವಾಗಿವೆ ಎಂಬುದನ್ನು ಸಹಜವಾದ ಜನಜೀವನದ ರೀತಿ, ಕಣ್ಮುಂದೆ ಇರುವ ವಸ್ತುಗಳನ್ನು ಉಪಮೆ, ರೂಪಕ, ಪ್ರತಿಮೆಗಳನ್ನಾಗಿ ಬಳಸಿಕೊಂಡು ಮಾಯೆ ಮುತ್ತುವ ಅವತಾರದ ಕಲ್ಪನೆಯನ್ನು ನಿರೂಪಿಸಿದ್ದನ್ನು ಕಾಣಬಹುದು. ಮಾಯೆಯು ಯಾರನ್ನು ಹೇಗೆ ನುಂಗಿತು ಎಂಬುದನ್ನು ಮುಂದಿನ ವಚನದಲ್ಲಿ ಕಾಣುತ್ತೇವೆ,

ಹರಿಯ ನುಂಗಿತ್ತು ಮಾಯೆ, ಅಜನ ನುಂಗಿತ್ತು ಮಾಯೆ
ಇಂದ್ರನ ನುಂಗಿತ್ತು ಮಾಯೆ, ಚಂದ್ರನ ನುಂಗಿತ್ತು ಮಾಯೆ
ಬಲ್ಲೆನೆಂಬ ಬಲುಗೈಯರ ನುಂಗಿತ್ತು ಮಾಯೆ
ಅಱಿಯೆನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ
ಈರೇಳು ಭುವನನಾಅಡಿಗೊಂಡಿತ್ತು ಮಾಯೆ
ಚೆನ್ನಮಲ್ಲಿಕಾರ್ಜುನಯ್ಯಾ
ಎನ್ನಯ ಮಾಯವ ಮಾಣಿಸಾ, ಕರುಣಿ !

ಅಕ್ಕನ ಈ ವಾಚನದಲ್ಲಿ ಮಾಯೆಯು 'ಹರಿ', 'ಬ್ರಹ್ಮ', 'ಇಂದ್ರ', 'ಚಂದ್ರ' ಮುಂತಾದ ದೇವಾನುದೇವತೆಗಳನ್ನು, ಋಷಿಪುಂಗವರನ್ನು, ಜ್ಞಾನಿಗಳನ್ನು ತನ್ನ ಬಲೆಯಲ್ಲಿ ಸಿಲುಕಿಸಿಕೊಂಡಿದೆ. ಈ ಮಾಯಾಪಾಶವು ಹದಿನಾರು ಲೋಕವನ್ನು ಸುತ್ತುವರೆದು ಸಮಾಜವನ್ನು ತಲ್ಲಣಗೊಳಿಸುತ್ತಿದೆ. ಇಂತಹ ಮಾಯೆಯ ಪ್ರಾಬಲ್ಯ

ವಿರುವ ಪರಿಸರದಲ್ಲಿ ಜೀವಿಸುವುದು ಅಸಾಧ್ಯವಾಗಿದೆ ಎಂಬ ಅಕ್ಕನ ಭಾವನಾತ್ಮಕ ನಿರೂಪಣೆಯೂ ಕಂಡುಬರುತ್ತದೆ.

ಬಿಟ್ಟೆನೆಂದಡೆ ಬಿಡದೀ ಮಾಯೆ, ಬಿಡದಿದ್ದಡೆ ಬೆಂಬತ್ತಿತ್ತು ಮಾಯೆ
ಯೋಗಿಗೆ ಯೋಗಿಣಿಯಾಗಿತ್ತು ಮಾಯೆ,
ಸವಣಂಗೆ ಸವಣಿಯಾಗಿತ್ತು ಮಾಯೆ
ಯತಿಗೆ ಪರಾತಿಯಾಗಿತ್ತು ಮಾಯೆ
ನಿನ್ನ ಮಾಯೆಗೆ ನಾನಂಜುವಳಲ್ಲ
ಚೆನ್ನಮಲ್ಲಿಕಾರ್ಜುನ ದೇವಾ ನಿಮ್ಮಾಣೆ !

ಮಾಯಾಜಾಲವು ತನ್ನ ಸುತ್ತು ಪರೆದು ಕಾಡುತ್ತಿರುವಾಗ ಅದರ ವಿರುದ್ಧ ಅಕ್ಕಮಹಾದೇವಿ ದೃಢ ನಿಲುವು ತಾಳಿದ್ದು. ಅದು ಹೇಗಾದರೂ ಮಾಡಿ ನನ್ನ ಮೇಲೆ ಬಲೆ ಬೀಸಿದರೆ ಅಂತಹ ಜಾಲಕ್ಕೆ ನಾನೆಂದಿಗೂ ಅಂಜುವಳಲ್ಲ ಎಂಬ ನಿಲುವೆಯು ಮೆಚ್ಚುವಂಥದ್ದೇ ! ಆದರೆ ಮಾಯಾಜಾಲದಿಂದ ದೂರ ಮಾಡುವದಕ್ಕೆ ನೀನೇ ಶಕ್ತನಾಗಿರುವೆ ಎಂಬುದು ಮುಂದಿನ ವಚನದಲ್ಲಿ ನಿರೂಪಣೆಗೊಂಡಿದೆ.

ಎನ್ನ ಮಾಯದ ಮದವ ಮುರಿಯಯ್ಯಾ
ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ
ಎನ್ನ ಜೀವದ ಜಂಜಡ ಮಾಣಿಸಯ್ಯಾ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ
ಎನ್ನ ಸುತ್ತಿದ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ

ಎಂದು ತನ್ನ ಸುತ್ತಲೂ ಆವರಿಸಿದ ಮಾಯಾ ಪ್ರಪಂಚದಿಂದ ಪಾರು ಮಾಡಲು ನೀನು (ಶಿವ) ಶಕ್ತನಾಗಿರುವೆ, ಲೌಕಿಕ ಬದುಕಿನಲ್ಲಿರುವ ಸಾಮಾಜಿಕ ಕಟ್ಟಳೆಗಳನ್ನು ಬದಿಗೊತ್ತಿ ಹೊರಬರಲು ಅಕ್ಕನ ಮಾನಸಿಕ ತೊಳಲಾಟ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಅಲ್ಲದೆ ನನ್ನ ಸ್ಥಿತಿಯು ಈಗ–

ಹಿಂದಣ ಹಳ್ಳ ಮುಂದಣ ತೊರೆ
ಸಲ್ಲುವ ಪರಿಯೆಂತು ಹೇಳಾ
ಹಿಂದಣ ಕೆರೆ ಮುಂದಣ ಬಲೆ
ಹದುಳವಿನ್ನೆಲ್ಲಿಯದು ಹೇಳಾ !
ನೀನಿಕ್ಕಿದ ಮಾಯೆ ಕೊಲುತಿರ್ಪುದು
ಕಾಯಯ್ಯ, ಕಾಯಯ್ಯ ಚೆನ್ನಮಲ್ಲಿಕಾರ್ಜುನಾ

ಎಂದು ಅಕ್ಕಮಹಾದೇವಿಯು ತನ್ನ ಆರಾಧ್ಯದೇವನ ಮುಂದೆ ತನ್ನ ಅಸಹಾಯಕ ಸ್ಥಿತಿಯನ್ನು ನಿವೇದಿಸಿಕೊಂಡಿದ್ದಾಳೆ :

ಉಳ್ಳುದೊಂದು ತನು ಉಳ್ಳುದೊಂದು ಮನ
ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ ?
ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯಾ ?
ಅಕಟಕಟಾ, ಕೆಟ್ಟೆ, ಕೆಟ್ಟೆ ! ಸಂಸಾರಕ್ಕಲ್ಲ, ಪರಮಾರ್ಥಕ್ಕಲ್ಲ !
ಎರಡಕ್ಕೆ ಬಿಟ್ಟ ಕರುವಿನಂತೆ !

ಬಿಲ್ವ ಬೆಳವಲ ಕಾಯನೊಂದಾಗಿ ಹಿಡಿಯಬಹುದೆ
ಚೆನ್ನಮಲ್ಲಿಕಾರ್ಜುನಾ ?

ಒಂದೇ ದೇಹ ಒಂದೇ ಮನಸ್ಸು ನಾನು ಹೇಗೆ ಧ್ಯಾನಿಸಲಿ ? ಕ್ಷಣ ಕ್ಷಣಕ್ಕು ಈ ಮಾಯೆಯ ಪ್ರಾಬಲ್ಯ ಅಧಿಕವಾಗತೊಡಗಿದೆ ; ಇಂತಹ ಸಂಸಾರದಲ್ಲಿ ಇನ್ನುಂದೆ ಹೇಗೆ ಬಾಳಿ ಬದುಕಲಿ ನಾನು ಈ ಬಂಧನದಲ್ಲಿ ಸಿಲುಕಿ ಕೆಟ್ಟುಹೋದೆ. ಲೌಕಿಕ-ಪಾರಮಾರ್ಥಿಕ ಇವೆರಡರ ನಡುವೆ ನನ್ನ ಬದುಕು ಅಡ್ಡಗೋಡೆಯ ಮೇಲೆ ದೀಪ ವಿಟ್ಟಂತಾಗಿದೆ. ದೇವಾ ನನ್ನಲ್ಲಿರುವ ದ್ವಂದ್ವತೆ (ಲೌಕಿಕ–ಪಾರಮಾರ್ಥಿಕ)ಯನ್ನು ಹೊಡೆದೋಡಿಸಿ ಪಾರಮಾರ್ಥಿಕದ ಕಡೆಗೆ ಸಾಗುವ ಸುಮಾರ್ಗವನ್ನು ತೋರಿಸೆಂದು ಅಕ್ಕನ ಅಂತರಂಗದ ನಿವೇದನೆಯಾಗಿದೆ.

ಎಮ್ಮೆಗೊಂದು ಚಿಂತೆ ; ಸಮ್ಮಗಾಱಗೊಂದು ಚಿಂತೆ,
ಧರ್ಮಿಗೊಂದು ಚಿಂತೆ ; ಕರ್ಮಿಗೊಂದು ಚಿಂತೆ,
ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ
ಒಲ್ಲೆ ಹೋಗು ಸೆರಗುಬಿಡು ಮರುಳೆ
ಎನಗೆ ಚೆನ್ನಮಲ್ಲಿಕಾರ್ಜುನ ದೇವರು
ಒಲಿವರೋ ಒಲಿಯರೋ ಎಂಬ ಚಿಂತೆ !

ಎಂದು ಅಕ್ಕಮಹಾದೇವಿ ತನ್ನ ನಲ್ಲನಿಗಾಗಿ (ಪಾರಮಾರ್ಥಿಕನಲ್ಲ–ಶಿವ) ಹಂಬಲಿಸುವ ಪರಿ ತುಂಬಾ ಹೃದಯಂಗಮವಾಗಿ ಚಿತ್ರಣಗೊಂಡಿದೆ. ಇಲ್ಲಿ ಅಕ್ಕನ ಭಾವಗಳು ಒಂದಕ್ಕೊಂದು ವಿರುದ್ಧವಾಗಿ ವ್ಯಕ್ತವಾಗಿದ್ದರೂ, ಅವಳ ನಿಲುವು ಲೌಕಿಕ ತೊರೆದು ಪಾರಮಾರ್ಥಿಕದೆಡೆಗೆ ಸೆಳೆಯುತ್ತಿರುವುದು ಸ್ಪಷ್ಟವಾಗುತ್ತದೆ.

ಅಯ್ಯಾ ನಿನ್ನ ಮುಟ್ಟಿ ಮುಟ್ಟಿದೆನ್ನ ಮನನೋಡಾ
ಬೆಚ್ಚು ಬೇಸಱವಾಯಿತ್ತೆನ್ನ ಮನ
ಹೊಳಲ ಸುಂಕಿಗನಂತೆ ಹೊಮುಕುಳಿಗೊಂಡಿತ್ತೆನ್ನಮನ
ಎರಡೆಂಬುದು ಮಱೆದು ಬಱಿದಾಗವೆನ್ನಮನ
ನೀನು ಆನಪ್ಪ ಪರಿಯೆಂತು ಹೇಳಾ ಚೆನ್ನಮಲ್ಲಿಕಾರ್ಜುನಾ.

ನನ್ನ ಮನಸ್ಸು ಅದು ಬೇಕು, ಇದು ಬೇಕು ಎಂದು ಸದಾ ಚಂಚಲತೆಯಲ್ಲಿ ಹೊಯ್ದಾಡುತ್ತಿದೆ. ಲೌಕಿಕ–ಪಾರಮಾರ್ಥಿಕದ ದ್ವಂದ್ವತೆಯಲ್ಲಿ ಸಿಲುಕಿದ ನಾನು ನಿನ್ನಲ್ಲಿಗೆ ಬರಬೇಕೆಂದು ಕಾತರಳಾಗಿದ್ದೇನೆ. ನಾನು ನಿನ್ನಲ್ಲಿ ಒಂದಾಗುವ ಪರಿಯ ಮಹಿಮೆಯನ್ನು ದಯಪಾಲಿಸೆನ್ನ ತಂದೆ ಎಂದು ತನ್ನ ದೈನ್ಯತಾಭಾವವನ್ನು ವ್ಯಕ್ತಪಡಿಸಿದ್ದನ್ನು ಕಾಣಬಹುದು.

ನಾಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು
ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು
ಅಜ್ಞಾನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು
ಆಶೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು
ಆ ಕೋಪಾಗ್ನಿಯ ತಾಮಸಧೂಮ ಮುಸುಕಿನಲ್ಲಿ
ನಾ ನಿಮ್ಮ ಮಱೆದು ಭವದುಃಖಕ್ಕೀಡಾದೆ

ನೀ ಕರುಣದಿಂದೆತ್ತಿ ಎನ್ನಮುಳಿಹವಿಂಗಡಿಸಿ
ನಿಮ್ಮ ಪಾದವನಱುಹಿಸಯ್ಯಾ ಚನ್ನಮಲ್ಲಿಕಾರ್ಜುನಾ !

ಮಾನವನ ಸಂಸಾರ ಜೀವನದಲ್ಲಿ ಆಶೆ, ಅಜ್ಞಾನ, ಕೋಪ ಇತ್ಯಾದಿ ಗುಣಗಳು ಬರುವದು ಸಹಜ. ಅದು ಪ್ರಕೃತಿ ಧರ್ಮ. ಇವು ವ್ಯಕ್ತಿಯ ಉದ್ಧಾರಕ್ಕೆ ಅಡಚಣೆ ಯನ್ನುಂಟುಮಾಡುತ್ತವೆಯೇ ವಿನಃ ಅವುಗಳಿಂದ ಪ್ರಗತಿ ಅಸಾಧ್ಯ. ಇಂತಹ ಗುಣ ಗಳು ಅಕ್ಕನ ಜೀವನದಲ್ಲಿ ಒಂದರ ಮೇಲೊಂದರಂತೆ ಪ್ರಭಾವ ಬೀರುತ್ತಲಿದ್ದುದರಿಂದ ಅವಳ ಆಧ್ಯಾತ್ಮಿಕ ಬದುಕು ಸಫಲವಾಗಲಾರದೆಂಬುದು ಅಕ್ಕನ ಆಶಯವಾದ್ದರಿಂದ. ಅವಳು ತನ್ನ ಆರಾಧ್ಯ ದೇವನಲ್ಲಿ ನಾನು ಈ ಭವದುಃಖ ಸಾಗರದಲ್ಲಿ ಮುಳುಗು ತಿದ್ದೇನೆ ನನ್ನನ್ನು ಮೇಲೆತ್ತಿ ನಿಮ್ಮ ಪಾದವ ಅರ್ಚಿಸುವ ಭಾಗ್ಯವ ಕಲ್ಪಿಸಿಕೊಡೆಂದು ಅಂಗಲಾಚಿ ಬೇಡಿಕೊಳ್ಳುತ್ತಿರುವುದು ಅವಳಲ್ಲಿ ಪಾರಮಾರ್ಥಿಕ ಸೆಳೆತದ ಅರಿವು ಎದ್ದು ಕಾಣುತ್ತದೆ.

ಅಕಟಕಟಾ ಸಂಸಾರದ ಹಗರಣ ಬಂದಾಡಿತ್ತಲ್ಲ !
ಅಪ್ಪಾ ಬೊಪ್ಪಾ ಎಂಬ ಜೋಹ [ವು, ಅದು] ಮೊಟ್ಟಮೊದಲಲ್ಲಿ
ತುಪ್ಪವ ತೊಡೆದಂತೆ ಮೀಸೆಯ ಜೋಹವು ಅದು ನಟ್ಟನಡುವೆ ಬಂದಾಡಿತ್ತು
ಬಂದಾಡಿತ್ತು
ಮುಪ್ಪುಮುಪ್ಪು ಎಂಬ ಜೋಹವು ಅದು ಕಟ್ಟ ಕಡೆಯಲಿ ಬಂದಾಡಿತ್ತು
ನಿಮ್ಮ ನೋಟವು ತೀರಲೊಡನೆ
ಜಗದಾಟವು ತೀರಿತ್ತು, ಕಾಣಾ ಚನ್ನಮಲ್ಲಿಕಾರ್ಜುನಾ॥

ಈ ವಚನದಲ್ಲಿ ಬಾಲ್ಯ, ಯೌವನ, ಮುಪ್ಪು-ಈ ಮೂರು ಅವಸ್ಥೆಗಳು ವ್ಯಕ್ತಿಯ ಜೀವನದಲ್ಲಿ ಆವರಿಸುವ ಬಗೆಯನ್ನು ಅಕ್ಕಮಹಾದೇವಿ ನಿಸ್ಸಾರತೆಯಿಂದ ನುಡಿದಿದ್ದನ್ನು ಕಾಣಬಹುದು.

ತನ್ನ ವಿನೋದಕ್ಕೆ ತಾನೇ ಸೃಜಿಸಿದ ಸಕಲ ಜಗತ್ತು
ತನ್ನ ವಿನೋದಕ್ಕೆ ತಾನೇ ಸುತ್ತಿದನದಕ್ಕೆ ಸಕಲ ಪ್ರಪಂಚನು
ತನ್ನ ವಿನೋದಕ್ಕೆ ತಾನೇ ತಿರುಗಿಸಿದನಂತಭವ ದುಃಖಗಳಲ್ಲಿ
ಇಂತೆನ್ನ ಚನ್ನಮಲ್ಲಿಕಾರ್ಜುನನೆಂಬ ಪರಶಿವನು
ತನ್ನ ಜಗದ್ವಿಲಾಸ ಸಾಕಾದಡೆ ಮತ್ತೆ
ತಾನೆ ಪರಿವನದರ ಮಾಯಾಪಾಶವನು ॥

ಎಂದು ಸಂಸಾರದ ಹೇಯವನ್ನು ಕಂಡು, ಜೀವನವನ್ನು ಅರಿಷಡ್ವರ್ಗಗಳಿಂದ ದೂರವಿಡಬೇಕೆಂಬುದು ಅಕ್ಕನ ಆಶಯ. ಆದರೆ ಈ ಮಾಯಾಪಾಶವನು ಒಡ್ಡಿದ ವನು ಅವನೇ (ಶಿವ) ಆದುದರಿಂದ ಕಾಲಕಾಲಕ್ಕೆ ತನ್ನ ಮನ ಬಂದಂತೆ ನಮ್ಮನ್ನು ಕುಣಿಯುವಂತೆ ಮಾಡುವವನು ಅವನೇ. ತಾನು (ಶಿವ) ಸಂತೋಷ ಹೊಂದಲು ತನ್ನದೇ ಆದ ಸಕಲ ಜೀವಿಗಳ ಈ ಜಗತ್ತನ್ನು ರೂಪಿಸಿದ್ದಾನೆ. ಅದರಲ್ಲಿ ಆಟ ಆಡಿಸಿ ನೋಡಬೇಕೆಂದು ಸಂಸಾರದ ಜೀವಿಗಳನ್ನು ಸಿಲುಕಿಸಿದ್ದಾನೆ. ಅವರ ಸುಖ ದುಃಖ ಗಳನ್ನು ಕಂಡು, ಭವದ ಲೀಲೆಯಿಂದ ಅವನ ಮನಸ್ಸು ನಲಿಯುತ್ತಿದೆ. ಆದರೆ ಜಗತ್ತೆಂಬುದು ಸೃಷ್ಟಿಕರ್ತನ ಲೀಲಾ ಆಟದ ಮಂದಿರ. ಅವನೇ ಅದರ ಒಡೆಯ.

ಅವನಿಗೆ ಜಗತ್ತಿನ ಲೀಲೆಯನ್ನು ನೋಡುವುದು ಸಾಕಾಯಿತೆಂದರೆ' ತಾನೊಡ್ಡಿದ ಮಾಯಾಪಾಶವನ್ನು ತಾನೇ (ಶಿವ) ಹಿಂತೆಗೆದುಕೊಳ್ಳುವನು. ಅವನೇ ಸಕಲ ಕಾರ್ಯಕಾರಣಗಳಿಗೆ ಸಮರ್ಥನಾದವ. ಆದರೆ ಶಿವನ ಲೀಲಾ ಆಟದ ಮಂದಿರ ದಂತಿರುವ ಈ ಜಗತ್ತಿನಲ್ಲಿ ಜನಿಸಿ ಬಂದವಳಾದ್ದರಿಂದ ಅವನೊಡ್ಡಿದ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ. ಎನ್ನ ಆರಾಧ್ಯಮೂರುತಿಯೇ ನನ್ನನ್ನು ನಿನ್ನ ಕೃಪಾಕಟಾಕ್ಷ ದಿಂದ ನಿನ್ನಲ್ಲಿ ವಿಲೀನಳಾಗುವಂತೆ ಮಾಡೆಂಬ ಅಕ್ಕಮಹಾದೇವಿಯ ಭಾವ ಧ್ವನಿತ ವಾಗಿರುವುದನ್ನು ಕಾಣಬಹುದು.

ಬಾರದ ಭವಂಗಳಲ್ಲಿ ಬಂದೆನಯ್ಯಾ
ಕಡೆಯಿಲ್ಲದ ತಾಪಂಗಳಿಲ್ಲದ ನೊಂದು
ನಿಮ್ಮ ಕರುಣೆಗೆ ಬಳಿಸಂದೆನಯ್ಯ
ಇದು ಕಾರಣ ಎನ್ನದೇವ ಚೆನ್ನಮಲ್ಲಿಕಾರ್ಜುನಂಗೆ
ತನುಮನವಾಗಿ ಮನಮಾಱುವೋಗೆ
ಮತ್ತಿಲ್ಲದ ತವಕದ ಸ್ನೇಹಕ್ಕೆ ತೆಱಹಿನ್ನೆಂತು ಹೇಳಾತಂದೆ ?
ಹುಟ್ಟದ ಯೋನಿಗಳಲ್ಲಿ ಹುಟ್ಟಿಸಿ, ಬಾರದ ಭವಂಗಳಲ್ಲಿ ಬರಿಸಿ
ಉಣ್ಣದ ಊಟವನುಣಿಸಿ, ಪಧಿಗೊಳಗಾಗಿಸುವ ಕೇಳಿರಣ್ಣಾ !
ತನ್ನವರೆಂದಡೆ ಮನ್ನಿಸುವನೆ ?...

ಎಂದು ಅಕ್ಕಮಹಾದೇವಿಯು ಈ ಭವದ ಜೀವನದ ಅನುಭವದಲ್ಲಿ ಜೀವಿಸಿ ದಿಕ್ಕುಗಾಣದವಳಾಗಿ, ತನ್ನ ಪಾರಮಾರ್ಥಿಕ ನಲ್ಲನ ದರ್ಶನ ಪಡೆಯಲು ಆತುರಪಡು ತ್ತಿದ್ದಾಳೆ. ದೇವಾ ನನ್ನ ತನು ಮನಗಳು ನಿನಗಾಗಿ ಮೀಸಲಿವೆ. ನನ್ನನ್ನು ನಾನಾ ಯೋನಿಗಳಲ್ಲಿ ಹುಟ್ಟಿ ಬರುವಂತೆ ಮಾಡಿದೆ. ನನ್ನಿಂದ ಮಾಡಬಾರದ ಕಾರ್ಯಗಳನ್ನೆಲ್ಲ ಮಾಡಿಸಿದೆ. ಆದರೆ ನಿನ್ನಲ್ಲಿ ನನ್ನವರು ತನ್ನವರು ಎಂಬ ಭೇದಭಾವವಿಲ್ಲ. ಅಂದರೆ "ತನ್ನವರೆಂದೊಡನೆ ಮನ್ನಿಸುವವನೆ ?....ಆದರೆ ನಿನ್ನ ಆಣತಿಯಿಲ್ಲದೆ ಒಂದು ಹುಲ್ಲು ಕಡ್ಡಿಯೂ ಸಹ ಅಲುಗಾಡಲಾರದು. ಸಕಲ ಕಾರ್ಯಕಾರಣಗಳಿಗೆ ನೀನೇ ಸಮರ್ಥ. ಆದಕ್ಕಾಗಿ ನಾನು ನಿನ್ನಲ್ಲಿ ಅಚಲ ನಿಷ್ಠೆಯಿಂದ ಹಗಲಿರುಳೆನ್ನದೆ ನಿನ್ನ ಧ್ಯಾನವೇ ನನ್ನ ಉಸಿರಾಗಿದೆ" ಎಂಬುದು ಅಕ್ಕಮಹಾದೇವಿಯ ಭಾವ ನಿರೂಪಿತವಾಗಿದ್ದನ್ನು ಕಾಣು ತ್ತೇವೆ.

ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿಸಾವಂತೆ
ಮನ ಬಂದುದನು ಬಯಸಿ ಬೇವುತ್ತಿದ್ದೆನಯ್ಯ
ಎನ್ನ ಮನ ದುರಾಶೆಯು ಮಾಣಿಸಿ
ನಿಮ್ಮತ್ತ ತೋಱಾ ಚೆನ್ನಮಲ್ಲಿಕಾರ್ಜುನಾ ॥

ಮನುಷ್ಯ ಈ ಸಂಸಾರದ ಬಲೆಯಲ್ಲಿ ಹೇಗೆ ಸಿಲುಕಿಕೊಂಡಿದ್ದಾನೆಂಬುದಕ್ಕೆ ಅಕ್ಕಮಹಾದೇವಿಯು ಕೊಡುವ ನಿದರ್ಶನ ಜೇಡರ ಹುಳು. ಜೇಡರ ಹುಳು ತನ್ನ ಸುತ್ತಲೂ ಬಲೆಯನ್ನು ನೇಯ್ದುಕೊಂಡು ತನ್ನ ಸಾವನ್ನು ತಾನೇ ಆಹ್ವಾನಿಸಿ ಕೊಂಡಂತೆ ಮನುಷ್ಯರಾದ ನಾವು ಮನಸ್ಸಿಗೆ ಬಂದುದ್ದನ್ನು ಬಯಸಿ ಅರಿವು ಇಲ್ಲದ

ಜೀವನ ಕಳೆಯುತ್ತಿದ್ದೇವೆ. ಆದರೆ ಈ ಮನದೆ ದುರಾಶೆಯನ್ನು ಜೇಡರ ಹುಳದಂತೆ ಅಂಟಿಸಿಕೊಂಡು ಜೀವನವನ್ನು ವ್ಯರ್ಥವಾಗಿ ಕಳೆಯುತ್ತಿದ್ದೇವೆ. ಇನ್ಮುಂದೆಯಾದರೂ ನನ್ನ ಜೀವನದಲ್ಲಿ ದುರಾಶೆಯ ಛಾಯೆಯೂ ಮೂಡದಂತೆ ಮಾಡಿ ನನ್ನ ಬದುಕು ತೆರಣಿಯ ಹುಳದಂತಾಗಬಾರದೆಂಬುದು ಅಕ್ಕನ ಆಶಯವಾಗಿದ್ದು ಮೇಲಿನ ವಚನ ದಿಂದ ವಿದಿತವಾಗುತ್ತದೆ.

ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ....
ಎಂಬತ್ತು ನಾಲ್ಕು ಲಕ್ಷ ಯೋನಿಯೊಳಗೆ ಬಂದೆ ಬಂದೆ
ಬಾರದ ಭವಂಗಳಲ್ಲಿ ಉಂಡೆ ಉಂಡೆ ಸುಖಾಸುಖಂಗಳ
ಹಿಂದಣ ಜನ್ಮ ತಾನೇನಾದಡೆಯೂ ಆಗಲಿ
ಮುಂದೆ ನೀ ಕರುಣಿಸಾ ಚೆನ್ನಮಲ್ಲಿಕಾರ್ಜುನಾ"

ಎಂಬಲ್ಲಿ ಈ ಭವವೆಂಬ ಚಕ್ರದಲ್ಲಿ ಸಿಲುಕಿ ಒಂದಲ್ಲ, ಎರಡಲ್ಲ....೮೪ ಲಕ್ಷ ಯೋನಿ ಗಳಲ್ಲಿ ಹುಟ್ಟಿ ಬಂದೆನು. ದೇವಾ ನಾನು ಹಿಂದೆ ಆದುದೆಲ್ಲವನ್ನು ಸಹಿಸಿಕೊಂಡಿರುವೆ. ಇನ್ಮುಂದೆಯಾದರು ಅಂಥ ಅವಸ್ಥೆಯು ನನ್ನ ಸುತ್ತ-ಮುತ್ತಲೂ ಸಹ ಸುಳಿಯದಂತೆ ಕರುಣಿಸಿ ಕಾಪಾಡುವುದು ನಿಮ್ಮ ಧರ್ಮ. ಅಲ್ಲದೆ ಈ ಸಂಸಾರ ಸುಖವು ಸ್ಥಿರವಾದು ದಲ್ಲ. ಕ್ಷಣ ಸುಖಕ್ಕಾಗಿ ಜೀವನವನ್ನೇ ಹಾಳು ಮಾಡಿಕೊಳ್ಳಲಾರೆ. ಆದ್ದರಿಂದ ನಾನು ಕೆಟ್ಟು ಹಾಳಾಗುವುದಕ್ಕಿಂತ ಮುನ್ನವೇ ನಿಮ್ಮ ಧ್ಯಾನದಲಿ ತೊಡಗುವಂತೆ ಮಾಡೆನ್ನ ತಂದೆ ಎಂದು ಅಕ್ಕಮಹಾದೇವಿ ಅಂಗಲಾಚಿ ಬೇಡುತ್ತಿರುವುದನ್ನು ಕಾಣ ಬಹುದಾಗಿದೆ.

ಎರೆಯಂತೆ ಕರಕರಾಗಿ, ಮಳಲಂತೆ ಜರಿಜರಿದು
ಕನಸ್ಸಿನಲ್ಲಿ ಕಳವಳಿಸಿ ಅನುಬೆಳಗಾದೆ
ಅವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ
ಆಪತ್ತಿಗೆ ಸಖಿಯರನಾರನೂ ಕಾಣೆ
ಅಱಸಿ ಕಾಣದ ತನುವ ಬೆರಸಿ ಕೂಡದ ಸುಖನಾ

ಎನಗೆ ನೀ ಕರುಣಿಸಾ ಚೆನ್ನಮಲ್ಲಿಕಾರ್ಜುನಾ॥

ಈ ಸಂಸಾರವೆಂಬ ಬಿಸಿಲಲ್ಲಿ ನಾನು ಬೆಂದು ಅಸಹಾಯಕ ಸ್ಥಿತಿಯನ್ನು ಮುಟ್ಟಿರುವೆ ನನಗೆ ಬಂದೊದಗಿದ ಆಪತ್ತಿನ ಸಮಯದಲ್ಲಿ ಯಾರೂ ಸಹಾಯಕರಿಲ್ಲದ್ದರಿಂದ "ಅಱಸಿ ಕಾಣದ ತನುವ, ಬೆರಸಿ ಕೂಡದ ಸುಖವನ್ನು ನನಗೆ ದಯ ಪಾಲಿಸಿ ನನ್ನನ್ನು ರಕ್ಷಿಸುವ ಹೊಣೆಗಾರಿಕೆಯು ನಿನ್ನಿಂದ ಸಾಧ್ಯ ಪ್ರಭುವೇ" ಎಂಬುದು ಅಕ್ಕ ಮಹಾ ದೇವಿಯ ಪ್ರಾರ್ಥನೆ.

ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ
ಬಂಧನಕ್ಕೆ ಬಂದಗಿಳಿ
ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ
ಕಂದ ನೀನಿತ್ತ ಬಾ ಎಂದು
ನೀವು ನಿಮ್ಮಂದವ ತೋಱಯ್ಯಾ ಚೆನ್ನಮಲ್ಲಿಕಾರ್ಜುನಾ"॥

ಈ ಜೀವ ಪರಮಾತ್ಮನಿಂದ ಬೇರೆಯಾಗಿ ಬಂದ ನಂತರ ಪುನಃ ಅತ್ತ ಹೋಗಲು ಪ್ರಯತ್ನಿಸುತ್ತಿರುವಂತೆ ಹಿಂಡನ್ನು ಅಗಲಿಸಿ ಆನೆಯನ್ನು ಕಟ್ಟಿ ಹಾಕಿದರೆ ಅದು ತನ್ನ ಹಿಂಡಿನಲ್ಲಿಯ ಸುಖ-ಸಂತೋಷವನ್ನು ನೆನೆಯುವಂತೆ, ಗಿಳಿಯನ್ನು ತಂದು ಪಂಜರದಲ್ಲಿ ಪಳಗಿಸಿದಾಗಲೂ ಅದು ತನ್ನ ಪೂರ್ವ ಬಂಧು ಬಳಗವನ್ನೆಲ್ಲ ನೆನೆಯುವಂತೆ ನಾನು ನಿನ್ನಿಂದ ಬಂದವಳಲ್ಲವೆ? ಅದಕ್ಕಾಗಿ ಸದಾ ನನಗೆ ನಿನ್ನ ಧ್ಯಾನವೇ ನನ್ನ ಜೀವನಾಂಶವಾಗಿರುವಾಗ ನೀನು ಎನ್ನನು ಕಡೆಗಾಣಿಸಬಾರದು. ನನ್ನನ್ನು ಮುದ್ದು ಮಮತೆಯಿಂದ ಕಂದಾ ನೀ ನಿತ್ತ ಬಾ ಎಂದು ಕರೆಯಬಾರದೆ? ನಿಮ್ಮಂದವ ಕಾಣುವ ಸೌಭಾಗ್ಯವನ್ನು ಕಲ್ಪಿಸಿಕೊಡಬೇಕೆಂಬುದು ಅಕ್ಕಮಹಾದೇವಿಯ ಅಂತರಂಗದ ನಿವೇದನೆ.

ಇನ್ನು ಇಂತಹ ಅನೇಕ ವಚನಗಳ ಮುಖಾಂತರ ಅಕ್ಕ ಮಹಾದೇವಿಯು ಸಂಸಾರ ಜೀವನದಲ್ಲಿ ಕಂಡುಂಡ ಅನುಭವಗಳ ಸರಮಾಲೆಯನ್ನು ವ್ಯಕ್ತಪಡಿಸಿದ್ದನ್ನು ಕಾಣಬಹುದಾಗಿದೆ. ಹೀಗೆ ಅಕ್ಕಮಹಾದೇವಿಯ ತನ್ನ ವಚನಗಳಲ್ಲಿ ಸಂಸಾರವೆಂಬುದು ಅಸಾರತೆಯಿಂದ ಕೂಡಿದೆ. ಮಾಯಾ ಪಾಶವು ಪ್ರತಿಯೊಂದು ಜೀವಿಯನ್ನು ಬಂಧಿಸಿದೆ. ಅದರ ಬಂಧನದಿಂದ ಬಿಡುಗಡೆಯಾಗಿ, ಜೀವನದಲ್ಲಿ ಪರಿಶುದ್ಧರಾಗಿ ಸಾರ್ಥಕ ಬದುಕನ್ನು ಕಳೆಯಿರಿ ಎಂಬ ಸಂದೇಶವನ್ನು ವಚನಗಳ ಮುಖಾಂತರ ವ್ಯಕ್ತಪಡಿಸಿ ಅಮರಳಾಗಿದ್ದಾಳೆ.

ಆಧ್ಯಾತ್ಮಿಕ ಶಿಖರವೇರಿದ ಮಹಾದೇವಿಯಕ್ಕ

ಡಾ. ಬಿ. ವ್ಹಿ. ಯಕ್ಕುಂಡಿಮಠ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ೧೦ನೆಯ ಶತಮಾನ ವೀರಯುಗವೆಂದೂ, ಸುವರ್ಣಯುಗವೆಂದೂ, ರತ್ನತ್ರಯರ ಯುಗವೆಂದೂ ಹೀಗೆ ಪ್ರಖ್ಯಾತಿಯನ್ನು ಪಡೆದಂತೆ ೧೨ನೆಯ ಶತಮಾನ 'ಭಕ್ತಿಯುಗ'ವೆಂದು, ಬಸವಯುಗವೆಂದೂ, ಸಾಹಿತ್ಯವು ಸರ್ವಸಾಮಾನ್ಯ ಪ್ರಸಿದ್ಧಿಯನ್ನು ಪಡೆದಿದೆ. ಆದರೆ ಈ ಕಾಲದ ವಚನಕಾರರ ಮನಸ್ಸು ಪ್ರಯೋಗಶೀಲವಾದುದರಿಂದ ಅವರು ಧಾರ್ಮಿಕ, ಸಾಮಾಜಿಕ, ಮತ್ತು ಕಾಯಕನಿಷ್ಠವಾದ ನವಸಮಾಜ ರೂಪುಗೊಳ್ಳಬೇಕೆಂದು ಪಣತೊಟ್ಟು ಅಂತಹ ಸಮಾಜದ ಆವಿಷ್ಕಾರ ಮಾಡಿದ ಕೀರ್ತಿ ಅವರದು. ಅದರಂತೆ ಅವರು ಸಾಹಿತ್ಯಕವಾಗಿಯೂ ತಮ್ಮದೇ ಆದ ಹೊಸ ಮಾರ್ಗದ ಆವಿಷ್ಕಾರಕ್ಕೆ ಕಾರಣರಾದರು. ಬಸವ, ಅಲ್ಲಮ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮ, ಜೇಡರ ದಾಸಿಮಯ್ಯಾದಿಗಳು ಅಂದಿನ ಸಾಹಿತ್ಯಿಕ ಜಗತ್ತಿಗೆ ಹೊಸ ಬೆಳೆಯ ಬೀಜವನ್ನು ಬಿತ್ತಿದರು. ಅಲ್ಲದೆ ಅದರ ಹಸನಾದ ಬೆಳೆಯನ್ನು ಬೆಳೆದರು; ನಾಡನ್ನು ಬೆಳಗಿದರು. ಇವರಲ್ಲಿಯ ವೀರವೈರಾಗಿಣಿಯಾದ, ಸ್ತ್ರೀಕುಲದ ಪ್ರತಿನಿಧಿ ಕನ್ನಡದ ಸಾಹಿತ್ಯಕ್ಕೆ ಪ್ರಥಮ ಕಾಣಿಕೆ ಸಲ್ಲಿಸಿದ 'ಕವಯಿತ್ರಿ'ಯೆಂಬ ಕೀರ್ತಿಗೆ ಪಾತ್ರಳಾದಂತಹ 'ಮಹಾದೇವಿಯಕ್ಕ'ನನ್ನು ಕುರಿತು ವಿವೇಚನೆಯನ್ನು ಮಾಡುವುದು ಪ್ರಸ್ತುತ ಲೇಖನದ ಉದ್ದೇಶ.

'ಮಹಾದೇವಿಯಕ್ಕನ ಜೀವನ ಚಿತ್ರಿಸುವಲ್ಲಿ ಹಲವಾರು ಕನ್ನಡ ಕಾವ್ಯಗಳು ನಮಗೆ ದೊರೆಯುತ್ತವೆ. ಪ್ರಪ್ರಥಮವಾಗಿ ಕಾವ್ಯದ ಮುಖಾಂತರ ಅಕ್ಕಮಹಾದೇವಿಯ ಜೀವನ ಚಿತ್ರಣ ನಿರೂಪಿಸಿದ ಕವಿಯೆಂದರೆ ಹಂಪೆಯ ಹರಿಹರ ಹರಿಹರ ವಚನಕಾರರ ಕಾಲಕ್ಕೆ ಸಮೀಪನಾದುದರಿಂದ ಅಲ್ಲದೇ ಸ್ವತಃ ಭಕ್ತನು ಆದಂತಹ ಹರಿಹರ ಅವಳ ಜೀವನ ಚರಿತ್ರೆಯನ್ನು 'ಉಡುತಡಿಯ ಮಹಾದೇವಿಯಕ್ಕನ ರಗಳೆ'ಯಲ್ಲಿ ಅತ್ಯಂತ ಸ್ವಾರಸ್ಯಕರವಾದ ರೀತಿಯಲ್ಲಿ ಚಿತ್ರಿಸಿದ್ದಾನೆ. ಇವರ ತರುವಾಯ 'ಚಾಮರಸನ ಪ್ರಭುಲಿಂಗ ಲೀಲೆ', ಚೆನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ಶೂನ್ಯ ಸಂಪಾದನೆಯ ಗ್ರಂಥಗಳು ಮುಂತಾದ ಪ್ರಮುಖವಾದವುಗಳಿಂದ ತಿಳಿಯುತ್ತದೆ.

ಆಧುನಿಕ ಸಾಹಿತ್ಯದಲ್ಲಿ ಬಸವರಾಜ ಕಟ್ಟೀಮನಿಯವರ "ಗಿರಿಯ ನವಿಲು", ಶಿವ್ಹೇರುದ್ರ ಸ್ವಾಮಿಯವರ "ಕದಳಿ ಕರ್ಪುರ", ಕಾದಂಬರಿಗಳಿಂದ ಅಲ್ಲದೇ ಪ್ರೊ. ಸಂ. ಶಿ. ಭೂಸನೂರಮಠರ "ಭವ್ಯ ಮಾನವ" ಇಂತಹ ಗ್ರಂಥಗಳ ಅವಲೋಕನದಿಂದ ಮಹಾದೇವಿಯಕ್ಕನ ಜೀವನ ಚಿತ್ರಣದ ಬಗ್ಗೆ ಮಾಹಿತಿಯು ದೊರೆಯುತ್ತದೆ.

ಅಕ್ಕನು ಹುಟ್ಟಿನೊಡನೆಯೇ ಆಕೆಯ ಆಧ್ಯಾತ್ಮಿಕ ಪಿಪಾಸೆ. ಹುಟ್ಟಿದಂತೆ ಅದರ ಕುರುಹನ್ನು ತಂದೆ ತಾಯಿಗಳು ಅವಳ ಬಾಲ್ಯಲೀಲೆಯಲ್ಲಿಯೇ ಕಂಡರು,—ಎಂಬ ಮಾತನ್ನು ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿ ಹೀಗೆ ನಿರೂಪಿತವಾಗಿದೆ.

[1]ತಾಯ ಮಗು ಲ ತಂಪಿನೊಳಂ, ಮೊಲೆವಾಲಿಂಪಿನೊಳಂ
ರಾಗಿಸುವವರ ಜೋಗುಳದೊಳಂ, ಸಾಗಿಸುವವರ ಸೋಗಿನೊಳಂ
ಎತ್ತಿಕೊಂಬರಳ್ಕ್ರಿಯೊಳಂ, ಮುಟ್ಟುವರ ಮೋಹದೊಳಂ
ಉಪ್ಪಳದೊಳು ಸಿಲ್ಕಿದ, ಪೆಣ್ದುಂಬಿ ಜಿನುಗುವಂತೆ ಮ್ಮೊಮ್ಮೆ ಅಳುತ್ತಂ
ಕಮಲ ಕುಟ್ಮಲವರಳ್ವಂತೆ ನಗುತ್ತಂ
ಕುಮುದಂ ಮುಗಿವಂತೆ ಕಣ್ಮುಚ್ಚುತಂ
ಶಿವಭಕ್ತಿಯು ಮುಚ್ಚಳಂದೆಗೆವಂತೆ ಕಣ್ದೆರೆವುತಂ

ಆದರೆ ಆಕೆಯೇ ಹೇಳಿದಂತ ಯೋಗಾಂಗ ತ್ರಿವಿಧಿಯಲ್ಲಿ ಪದ್ಯ—

ಗುರು ನಿಮ್ಮ ಚರಣವ ಮರೆಯನು ಮರೆದಡೆ
ಪರಿಭವದ ಬಾಧೆ ಬರಲಯ್ಯ । ಕಡೆಯಲ್ಲಿ
ದೊರೆ ನರಕದೊಳಗೆ ತುಳಿಯಯ್ಯ
ನಡೆವಲ್ಲಿ, ನುಡಿವಲ್ಲಿ, ಉಡುವಲ್ಲಿ, ಉಂಬಲ್ಲಿ
ಬಿಡೆನಯ್ಯ, ನಿಮ್ಮ ಚರಣವ । ಈ ಛಲವ
ಕಡೆ ಮುಟ್ಟಿಸೆನಗೆ ಗುರುರಾಯ

ಎಂದು ಮುಂತಾಗಿ 'ಯೋಗಾಂಗ ತ್ರಿವಿಧಿ'ಯಲ್ಲಿ ಹೇಳಿದ ಅಕ್ಕನ ಈ ಮಾತುಗಳು ಅವಳ ಅಂತರ್ಯದ ಆಧ್ಯಾತ್ಮಿಕ ಹಂಬಲವನು, ನಿರೂಪಿಸಿವೆ. ಸದ್ಗುರುವಿನ ಸೇವೆಯಲ್ಲಿಯೇ ಜೀವನವನ್ನು ಮುಡುಪಾಗಿರಿಸಿ, ಕೊನೆಗಾಣಬೇಕೆಂಬ ಅಕ್ಕನ ಅದಮ್ಯ ಆಶಯದ ಎದುರು ಭೌತಿಕ ಆಶೆ-ಆಕಾಂಕ್ಷೆಗಳೆಲ್ಲ ಕ್ಷುಲ್ಲಕವಾಗಿ ಕಂಡವು.

ಮಹಾದೇವಿಯಕ್ಕನಿಗೆ ಆಧ್ಯಾತ್ಮಿಕ ಜೀವನಕ್ಕೆ ಭದ್ರವಾದ ನೆಲೆಗಟ್ಟು ದೊರೆಯುವಲ್ಲಿ ಗುರುವಿನ ಪಾತ್ರ ಮುಖ್ಯವಾದುದು ಎಂದು ತನ್ನ ವಚನವೊಂದರಲ್ಲಿ ವ್ಯಕ್ತಪಡಿಸಿದಂತಹ ಮಾತು :

ಗುರುವಿನ ಕರುಣದಿಂದ ಲಿಂಗಜಂಗಮವಕಂಡೆ
ಗುರುವಿನ ಕರುಣದಿಂದ ಪಾದೋದಕ ಪ್ರಸಾದವಕಂಡೆ
ಗುರುವಿನ ಕರುಣದಿಂದ ಸಜ್ಜನಸದ್ಭಕ್ತರ ಗೋಷ್ಠಿಯಕಂಡೆ
ಚೆನ್ನಮಲ್ಲಿಕಾರ್ಜುನಯ್ಯ, ನಾಹುಟ್ಟಲೊಡನೆ
ವಿಭೂತಿಯ ಪಟ್ಟವಕಟ್ಟಿ, ಸದ್ಗುರುಸ್ವಾಮಿ
ಲಿಂಗಾಯತವ, ಮಾಡಿದನಾಗಿ, ಧನ್ಯಳಾದೆನು.

ನರಜನ್ಮವ ತೊಡೆದು ಹರಜನ್ಮವ ಮಾಡಿದವನು
ಭವಬಂಧನವಬಿಡಿಸಿ ಪರಮಸುಖ ತೋರಿದವನು

ಇಂತಹ ಅಕ್ಕನ ನುಡಿಗಳಿಂದಲೇ ನಾವು ಆಕೆ ಗುರುವಿನ ಕರುಣೆಯಿಂದ ಜೀವನದಲ್ಲಿ ಆಧ್ಯಾತ್ಮಿಕ ಬದುಕಿನ ನೆಲೆ ಬೆಲೆ ಅರಿಯುವಂತಾಯಿತು ಎಂಬುದು ಸ್ಪಷ್ಟವಾಗದಿರದು.

[1] ಮಹಾದೇವಿಯಕ್ಕನ ರಗಳೆ ಸ್ಥಲ ೨, ಚರಣ ೬೩

ಬಾಲ್ಯಾವಸ್ಥೆ ಕಳೆದು ಯೌವನಾವಸ್ಥೆಗೆ ಕಾಲಿಟ್ಟಂತೆ ಅಕ್ಕನ ಆಧ್ಯಾತ್ಮಿಕ ಜ್ಞಾನಪಿಪಾಸೆ ಸಹಜವಾಗಿ ಬೆಳೆಯುತೊಡಗಿತು. ತನ್ನ ಮನದೊಡೆಯನಾದ ಚನ್ನ ಮಲ್ಲಿಕಾರ್ಜುನನನ್ನು ಕಾಣಬೇಕೆಂಬ ತವಕ ವರ್ಧಿಸತೊಡಗಿತು. ಲಿಂಗನಿಷ್ಠೆಯೊಡನೆ ಬೆಳೆದ ಮಹದೇವಿಯಕ್ಕನ ವರ್ಣನೆ ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಹೀಗಿದೆ—

ತುಂಬಿ ಲಿಂಗದ ನಿಷ್ಠೆಯೊಡನೆ, ನಿ
ತಂಬವೊಳೆ ಮುಡಿಹೆಚ್ಚಿ ಬೆಳೆದುವು
ಶಂಭುವಿನ ಸತ್ಕರ್ಮ ಭಕ್ತಿಜ್ಞಾನವೆಂಬಂತೆ
ಶಂಬರಾರಿಯ ಶಸ್ತ್ರಹಕ್ಕೆಯ ವಿ
ಡಂಬನೆಯು ಧಿಕ್ಕರಿಸಿ ತೋರುವೆ
ವೆಂಬ ಭರದಲಿ ಜವ್ವನವ ಹೇರಿದಳು ಮಹದೇವಿ[1]

ಬಸವಣ್ಣನಿಗೆ ಎಂಟು ವರ್ಷಗಳು ತುಂಬಿದಾಗ ಅವನ ತಂದೆ ತಾಯಿಗಳು ಉಪ ನಯನದ ಉಪಾಧಿಯನ್ನಂಟಿಸ ತೊಡಗಿದಂತೆ ಮಹದೇವಿಯಕ್ಕನಿಗೆ ಷೋಡಶ ವರ್ಷ ಗಳಾದಾಗ ವಿವಾಹದ ತೊಡಕನ್ನುಂಟುಮಾಡಲು ಆಗಿನ ಪರಿಸ್ಥಿತಿ ಒತ್ತಾಯಪಡಿಸು ತ್ತಿತ್ತು. ಬಸವಣ್ಣನಿಗಾದ ಅಸಹಾಯಕ ಸ್ಥಿತಿ ಮಹಾದೇವಿಯಕ್ಕನಿಗೂ ಆಗಿರಬೇಕು. ಕೈಲಾಸನಾಥನ ಕರುಣೆಯ ಶಿಶು. ನಂದಿಯ ಅವತಾರ ಬಸವನೆಂಬ ನಾಮವನ್ನು ಇಟ್ಟುಕೊಂಡು ಬಂದ ಈ ಶಿಶು ಕರ್ಮಲತೆಯ ಜಂಜಡದಲ್ಲಿ ಸಿಕ್ಕಿಕೊಳ್ಳಲಾರದೆ; ಕರ್ಮಲತೆಯಂತಿರ್ಪ ಜನ್ನಿವಾರಂ ಬಿಸುಟು, ಮೌಂಜೀ ಬಂಧನವನ್ನು ತಪ್ಪಿಸಿ ಕೊಂಡು ಸಂಗಮನಾಥನಲ್ಲಿಗೆ ಹೋದಂತೆ ಮಹಾದೇವಿಯಕ್ಕ ಉಡುತಡಿಬಿಟ್ಟು ತನ್ನ ಗುರಿಸಾಧನೆಗಾಗಿ ಹೋರಾಡಬೇಕಾಯಿತು. ಇದಕ್ಕೂ ಮೊದಲು ಕೌಶಿಕ ಮಹಾರಾಜ ಮಹಾದೇವಿಯಕ್ಕನನ್ನು ಮೆಚ್ಚಿ ತನಗೆ ಕೊಟ್ಟು ಮದುವೆ ಮಾಡಬೇಕೆಂಬ ವಿಷಯ ತನ್ನ ಸೇವಕರ (ಭಟರ) ಮುಖಾಂತರ ಕಳಿಸುವನು. ಆದರೆ ಲೌಕಿಕ ಸುಖಭೋಗದ ಕಡೆಗೆ ಕಣ್ಣೆತ್ತಿ ರೆಯದ, ಸಾಮ್ರಾಜ್ಯದ ಸುಖಲಾಲಸೆಗೆ ಮನಕರಗಿಸದೆ ವೈರಾಗ್ಯದ ಕಡೆಗೆ ಗಮನ ಕೊಟ್ಟದ್ದು ಅವಳ ವಚನದಿಂದ ಸ್ಪಷ್ಟವಾಗುವುದು.

ಅಯ್ಯಾ ಸರ್ವಮೂಲಹುಂಕಾರವಿದಿದು, ಕುಲಭ್ರಮೆ, ಛಲಭ್ರಮೆ, ಜಾತಿಭ್ರಮೆ
ನಾನು, ವರ್ಣ, ಆಶ್ರಮ, ಮತಶಸ್ತ್ರಭ್ರಮೆ, ತರ್ಕಭ್ರಮೆ, ರಾಜ್ಯಭ್ರಮೆ
ಧನಧಾನ್ಯ ಪುತ್ರಮಿತ್ರ ಭ್ರಮೆ ಐಶ್ವರ್ಯ ತ್ಯಾಗಭೋಗ ಭ್ರಮೆ
ಕಾಯಕಾರಣ ವಿಷಯ ಭ್ರಮೆ, ವಾಯುಮನಸಭಾವ ಜೀವಮೋಹಭ್ರಮೆ ಮೊದಲಾದ
ಬತ್ತೀಸ ಪಾಶಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು
ಶಿವಶಕ್ತಿ, ಶಿವಭಕ್ತ ಶಿವಪ್ರಸಾದ ಶಿವಶರಣ ಶಿವೈಕ್ಯ
ಶಿವಜಂಗಮವೆಂದು ನುಡಿಯಲಾರದೆ ಎನ್ನ ಮನನಾಚಿ
ನಿಮ್ಮಡಿಗಳಭಿಮುಖವಾತ್ತಯ್ಯ ಚೆನ್ನಮಲ್ಲಿಕಾರ್ಜುನ

ಹೀಗೆ ಮಹಾದೇವಿಯಕ್ಕನ ಜೀವನದಲ್ಲಿ ವಿವಾಹಸಮಸ್ಯೆ ಆಕೆಯ ಅಂತರಂಗದ ನಿಲುವನ್ನು ಬಾಳಪಥವನ್ನು ಬದಲು ಮಾಡಿತು. ಯಾವುದರಿಂದ ಮುಕ್ತಿಯನ್ನು ಪಡೆಯಬೇಕೆಂದಿದ್ದಳೋ ಅದೇ ತನ್ನ ಜೀವನವನ್ನು ಸುತ್ತುವರಿದಾಗ ಮನೆಯ

[1] ಚಾಮರಸನ ಪ್ರಭುಲಿಂಗಲೀಲೆ ಮಹದೇವಿಯಕ್ಕನಗತಿ ಪದ್ಯ. ೪ ಸಂ. ಲ. ಶಿ ಶಿ ಬಸವನಾಳ

ವಾಸವೇ ಅವಳಿಗೆ ಬೇಸರವಾಗಿ ಬಟ್ಟೆಗಳ ಹೊದಿಕೆಯೂ ಬೇಡವೆನ್ನುವಷ್ಟು ವೈರಾಗ್ಯದ ತುದಿಯನ್ನೇರಿ ಅಕ್ಕನು "ಉಟ್ಟ ಸೀರೆಯ ಸೆಳೆದು ತೊಟ್ಟ ತೊಡಿಗೆಯ ಹರಿದು ಬಿಟ್ಟೆನೋ ನಾನು ಬಿಡುಮುಡಿಯ ಎಲೆ ದೇವ ಕೊಟ್ಟೆನೋ ಎನ್ನ ತನು ಮನವ" ಎಂದು ದಿಗಂಬರೆಯಾಗಿ ಸಂಸಾರವನ್ನು ತೊರೆದು ಹೊರಟಳು. ತಂದೆ-ತಾಯಿಗಳ ಮಮತೆಯೂ ಅವಳನ್ನು ತಡೆಯಲಾಗಲಿಲ್ಲ. ಮುಂದೆ ಏಕಾಂಗಿಯಾಗಿ ತನ್ನ ಆರಾಧ್ಯ ಮೂರುತಿಯನ್ನು ಅರಸುತ್ತ ಹೊರಟ ಸಮಯದಲ್ಲಿ ಅನೇಕ ಅಡೆತಡೆಗಳು ಬಂದೊದಗಿದರೂ ಅಕ್ಕ ಧೃತಿಗೆಡದೆ, ಅದನ್ನು ಆತ್ಮವಿಶ್ವಾಸದಿಂದ ಮುಂದೆ ಸಾಗಿದಳು ಎಂಬುದು ಅಕ್ಕನ ವಚನದಿಂದಲೇ ತಿಳಿಯಬಹುದು.

> ಆರೂ ಇಲ್ಲದವಳೆಂದು ಆಳಿಗೊಳಲಬೇಡ ಕಂಡಯ್ಯ !
> ಏನು ಮಾಡಿದಡೆಯೂ ನಾನಂಜುವವಳಲ್ಲ !
> ತರಗೆಲೆಯ ಮೆಲ್ಲದ್ದು ನಾನಿಹೆನು, ಸುರಗೆಯ ಮೇಲೊರಗಿ ನಾನಿಹೆನು
> ಚೆನ್ನಮಲ್ಲಿಕಾರ್ಜುನಯ್ಯ, ತರೆತೆಡೆ ಕಾಡಿದೊಡೆ
> ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು ॥

ಆಧ್ಯಾತ್ಮ ಸಾಧನೆಯನ್ನೇ ತನ್ನ ಪರಮಗುರಿಯನ್ನಾಗಿಟ್ಟುಕೊಂಡು ಮುನ್ನಡೆದ ಮಹಾದೇವಿಯಕ್ಕ ಎದುರಿಸಿದ ಸಮಸ್ಯೆಗಳು ಹಲವು. ಅವೆಲ್ಲವನ್ನು ಶಿವಪ್ರಸಾದವೆಂದು ಸ್ವೀಕರಿಸಿ ಇಹದಲ್ಲಿ ಪರವನ್ನು ಕಾಣಬೇಕೆಂಬ ಆಸೆ ಅಕ್ಕನದು–

> ಕಿಡಿಕಿಡಿ ಕೆದರಿದಡೆ ಎನಗಃಹಸಿವು ತೃಷೆ ಅಡಗಿತೆಂದೆನು !
> ಮುಗಿಲ ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು !
> ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು !
> ಚೆನ್ನಮಲ್ಲಿಕಾರ್ಜುನಯ್ಯ ಶಿರಹರಿದು ಬಿದ್ದಡೆ
> ಪ್ರಾಣನಿಮಗರ್ಪಿತವೆಂಬೆನ !"

ಹರನೆ ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಿಸಿದ್ದೆ ನೋಡಾ" ಎಂದು ಚೆನ್ನಮಲ್ಲಿಕಾರ್ಜುನನ್ನು ಅರಸುತ್ತ ಹೊರಟ ಅಕ್ಕಮಹಾದೇವಿಯಕ್ಕ ಬೇಕು ಬೇಡೆಂಬಳ ಆಸೆಯನ್ನು ತೊರೆದು ವೈರಾಗ್ಯದ ದಾರಿಯತ್ತ ನಡೆದು ಮತ್ತೆ ನನ್ನನ್ನು ಸಂಸಾರದ ಮಾಯಾ ಬಲೆಯಲ್ಲಿ ಸಿಲುಕದಂತೆ ಮಾಡಯ್ಯ ಯಾರಿಗೂ ಕೈಯೊಡ್ಡಿ ಕೇಳದಂತೆ ಶಕ್ತಿಯನ್ನು ಕೊಡಯ್ಯ ಎಂದು ಪ್ರಾರ್ಥಿಸಿದ್ದಾಳೆ. ಅಕ್ಕ ಹೀಗೆ–

> ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡದಂತೆ ಮಾಡಯ್ಯ
> ಬೇಡಿದೊಡೆ ಇಕ್ಕದಂತೆ ಮಾಡಯ್ಯ ।
> ಇಕ್ಕಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯ !
> ನೆಲಕ್ಕೆ ಬಿದ್ದೊಡೆ ನಾನೆತ್ತಿಗೊಂಬುದಕ್ಕೆ ಮುನ್ನವೆ
> ಶುನಿ ಎತ್ತಿಕೊಂಬಂತೆ ಮಾಡಯ್ಯ ಚೆನ್ನಮಲ್ಲಿಕಾರ್ಜುನ

ಎಂದು ಅಕ್ಕ ದೈನ್ಯತೆಯಿಂದ ತನ್ನ ಮನ ಸಂಸಾರದ ಸುಖದ ಬಯಕೆಗಳಿಂದ ದೂರ ನನ್ನ ಮಾಡು ಎಂದು ಹೆಜ್ಜೆ ಹೆಜ್ಜೆಗೂ ಅಕ್ಕನ ಆಧ್ಯಾತ್ಮಿಕ ಪಿಪಾಸೆ ಅವಳಿಗಾಗಿ, ಅವಳು ಚೆನ್ನಮಲ್ಲಿಕಾರ್ಜುನನಲ್ಲಿ ಕಾಣುವ–ಕೂಡುವ ತವಕದಲ್ಲಿದ್ದ ಅಕ್ಕ ಸಮಸ್ತ

ಪಶು ಪಕ್ಷಿ ಸಂಕುಳಕ್ಕೆ ಹಾಗೂ ಪ್ರಕೃತಿಯನ್ನು ಕುರಿತು ಹಂಬಲಿಸುವ ರೀತಿ ಮಾರ್ಮಿಕವಾಗಿದೆ.

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ ನೀವು ಕಾಣಿರೆ ನೀವು ಕಾಣಿರೆ
ಸರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೆ ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ ನೀವು ಕಾಣಿರೆ
ಕೊಳದ ತಡಿಯೊಳಾಡುವ ಹಂಸಗಳಿರಾ ನೀವು ಕಾಣಿರೆ ನೀವು ಕಾಣಿರೆ
ಗಿರಿಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೆ ನೀವು ಕಾಣಿರೆ
ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ

ಎಂದು ತನ್ನ ವಸ್ತು ತನ್ನಿಂದ ದೂರವಾದಾಗ ಅದನ್ನು ತೀವ್ರತೆಯಿಂದ ಹಂಬಲಿಸುವ ದೃಶ್ಯವು ನಮಗೆ–ಹರಿಶ್ಚಂದ್ರ ಕಾವ್ಯದಲ್ಲಿ ಚಂದ್ರಮತಿಯು ಮಗನನ್ನು ಕಳೆದು ಕೊಂಡಾಗ ಪಡುವ ಹಂಬಲ, ಷಡಕ್ಷರಿ ದೇವನ ರಾಜಶೇಖರ ವಿಳಾಸದಲ್ಲಿ ತಿರುಕೊಳವಿ ನಾಚಿಯು ಮಗನನ್ನು ಕಳೆದುಕೊಂಡಾಗ ಪಡುವಂತಹ ಹಂಬಲ ಅಲ್ಲದೆ ಮಧುರ ಚೆನ್ನರು ತನ್ನ "ನನ್ನ ನಲ್ಲ" ಎಂಬ ನೀಳ್ಗವಿತೆಯಲ್ಲಿ "ನಲ್ಲನಿಗಾಗಿ" ಪಡುವಂತಹ ಹಂಬಲಗಳ ಚಿತ್ರ ನಮ್ಮ ಕಣ್ಮುಂದೆ ಕಟ್ಟಿ ನಿಲ್ಲುತ್ತದೆ. ಹಾಗೆಯೇ ಅವಳ 'ನಲ್ಲ' ಚೆನ್ನಮಲ್ಲಿಕಾರ್ಜುನನನ್ನು ನೆನೆಯದೆ ಒಂದರಗಳಿಗೆಯೂ ಇರಲಾರೆ ಎಂಬ ಮಾತು ಗಳನ್ನು ಅಕ್ಕ ಹೀಗೆ ನುಡಿದಿದ್ದಾಳೆ–

ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದೊಡೆ ಮಾಣು ;
ನಾ ನಿನ್ನ ಹಾಡಿಲ್ಲದೆ ಸೈರಿಸಲಾರೆನಯ್ಯ,
ಅಯ್ಯಾ ನೀ ಒಲಿದರೆ ಒಲಿ ಒಲಿಯದಿರ್ದೊಡೆ ಮಾಣು,
ನಾ ನಿನ್ನ ಪೂಜಿಸದಲ್ಲದೆ ಸೈರಿಸಲಾರೆನಯ್ಯ !
ಅಯ್ಯಾ ನೀ ನೋಡಿದೊಡೆ ನೋಡು, ನೋಡದಿರ್ದಡೆ ಮಾಣು
ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ !
ಚೆನ್ನಮಲ್ಲಿಕಾರ್ಜುನಯ್ಯ ನಾ ನಿಮ್ಮ ಪೂಜಿಸಿ ಹರುಷದಲಿ
ಲೋಲಾಡುವೆನಯ್ಯಾ !

ಹೀಗೆ ಅಚಲ ನಿಷ್ಠೆಯಿಂದ ಆಧ್ಯಾತ್ಮಪಥದತ್ತ ನಡೆದಿರುವ ಮಹಾದೇವಿ ಅಕ್ಕನ ಅಂತರಂಗಕ್ಕೆ ಕಲ್ಯಾಣದ ಆಗುಹೋಗುಗಳ ಬಗೆಗೆ ತಿಳಿಯದೇ ಇರಲಿಲ್ಲ. ಅಕ್ಕನ ದೃಷ್ಟಿಯಲ್ಲಿ ಕಲ್ಯಾಣ ಕೇವಲ ಲೌಕಿಕ ಕಲ್ಯಾಣ ಪಟ್ಟಣವಾಗಿರದೆ ಆತ್ಮ ಕಲ್ಯಾಣದತ್ತ ಕರೆದೊಯ್ಯುವ ಪುರ ; ಅಲ್ಲಿರುವ ಶರಣ ಸಂಕುಳದಲ್ಲಿ ಆತ್ಮಕಲ್ಯಾಣದ ಸಾಧನೆಯಲ್ಲಿ ನಿರತರಾದವರು ಎಂಬ ಮಾತನ್ನು ಅತೀ ಭಕ್ತಿಭಾವದಿಂದ ಹೇಳಿರುವ ಅಕ್ಕನ ವಚನ ಈ ಕೆಳಗಿನಂತಿದೆ–

ಕಲ್ಯಾಣ ಕೈಲಾಸವೆಂಬ ನುಡಿ ಹುಸಿಯಾಯಿತ್ತು ;
ಒಳಗೂ ಕಲ್ಯಾಣ ಹೊರಗೂ ಕಲ್ಯಾಣ
ಇದರಾತುವನಾರು ಬಲ್ಲರಯ್ಯ ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯ !
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನ
ಗಾಯಿತ್ತು ಕೇಳಾ ಚೆನ್ನಮಲ್ಲಿಕಾರ್ಜುನ !

ಹೀಗೆ ಕಲ್ಯಾಣವನ್ನು ಕಾಣುವ, ಶರಣ ಸಂಕುಳವನ್ನು ಕೂಡುವ ಭರದಲ್ಲಿ ಬರುತ್ತಿರುವ ದಾರಿಯಲ್ಲಿ ಅರಿಯದ ಅಜ್ಞಾನಿಗಳು ಅಕ್ಕನನ್ನು ಕೆಳದೃಷ್ಟಿಯಲ್ಲಿ ಕಂಡಿರಲು ಸಾಕು. ಅಂತಹವರಿಗೆಲ್ಲ ಅಕ್ಕ ಸಮರ್ಪಕವಾದ ಉತ್ತರವನ್ನಿತ್ತು ಅವರಲ್ಲಿ ನೆಲೆನಿಂತ ಅಜ್ಞಾನದ ಸ್ಥಳದಲ್ಲಿ ಸುಜ್ಞಾನ ಜೀಜ ಬಿತ್ತಿ ಹೇಳಿದ ಮಾತು–

ಮುಡಿಬಿಟ್ಟು ಮೊಗಬಾಡಿ ತನುಕರಗಿದವಳ
ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ ?
ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ ?
ಬಲುಹಳಿದು ಭವಗೆಟ್ಟು ಛಲವಳಿದು ಭಕ್ತೆಯಾಗಿ
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ ?

ಇಹದಲ್ಲಿ ಪರವನ್ನು ಸಾಧಿಸಬಹುದೆಂಬುದಕ್ಕೆ ಸಾಕ್ಷಿಯಾಗಿರುವ ಮಹಾದೇವಿ ಅಕ್ಕ ಕೇವಲ ತನ್ನ ಆತ್ಮೋದ್ಧಾರದತ್ತ ಗಮನ ಹರಿಸದೇ ಇಡೀ ಜಡಭರಿತ ಜಗತ್ತನ್ನು, ಸರ್ವರನ್ನು ಕಲ್ಯಾಣದತ್ತ ಒಯ್ಯುವ ಪ್ರಯತ್ನದಲ್ಲಿದ್ದಾಳೆ ಮಹಾದೇವಿಯಕ್ಕ. ಅನುಭವಪೂರ್ಣ ವಿಚಾರಗಳನ್ನೊಳಗೊಂಡ ಅಕ್ಕನ ವಚನಗಳು ಸಂಸಾರದ ನಶ್ವರತೆಯನ್ನು ಜಾಲಾಡಿಬಿಡುತ್ತವೆ. ಅಕ್ಕನ ವಚನಗಳಲ್ಲಿರುವ ಪ್ರತಿಯೊಂದು ಶಬ್ದಕ್ಕೂ ತತ್ವದ ಹಿನ್ನೆಲೆ ಇದೆ ಕಲ್ಯಾಣ ಪಟ್ಟಣದ ಸಮೀಪ ಬಂದ ಅಕ್ಕ ಅದನ್ನು ಕೊಂಡಾಡಿದ ಬಗೆ ಅಕ್ಕನ ವಚನವೊಂದರಲ್ಲಿ ಹೀಗೆ ವ್ಯಕ್ತವಾಗಿದೆ–

ಕಲ್ಯಾಣವೆಂಬುದನಾರಿಗೆ ಹೋಗಬಾರದು, ಹೋಗಬಾರದು ಹೋಗಬಾರದು
ಅಸಾಧ್ಯವಯ್ಯ । ಆಸೆ ಅಮಿಷ ಅಳಿದನುಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು ।
ಒಳಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೋಗಬಾರದು !
ನಾನೆಂಬುದು ಹರಿದವಂಗಲ್ಲ ಕಲ್ಯಾಣವ ಹೋಗಬಾರದು !
ಒಳಗು ತಿಳಿದು, ಚೆನ್ನಮಲ್ಲಿಕಾರ್ಜುನನಂಗೊಲಿದು ಉಭಯಲಜ್ಜೆಯಳಿದೆನಾಗಿ
ಕಲ್ಯಾಣವ ಕಂಡು ನಮೋ ನಮೋ ಎನುತಿರ್ದೆನು !"

ಎಂದು ಕಲ್ಯಾಣವನ್ನು ಪ್ರವೇಶ ಮಾಡುವಳು. ಕಲ್ಯಾಣದತ್ತ ಬರುವಾಗ ಕಿನ್ನರಿ ಬೊಮ್ಮಯ್ಯ ಮಹದೇವಿಯಕ್ಕನಿಗೆ "ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆಯಿರಲು ಏತರ ಮನೆ ? ಇದೇತರ ನಿರ್ವಾಣ ? ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಸಾರಿಯೆಂಬೆನಲ್ಲವೆ ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ" ಎಂದು ಕೇಳಿದ ಕಿನ್ನರಿ ಬೊಮ್ಮಯ್ಯನಿಗೆ ಸಮರ್ಪಕವಾಗಿ ಕೊಡುವ ಉತ್ತರ–

"ಎನ್ನಂತೆ ಪುಣ್ಯಗೈದವರುಂಟೆ ? ಎನ್ನಂತೆ ಭಾಗ್ಯಗೈದವರುಂಟೆ ?
ಕಿನ್ನರನಂತಪ್ಪ ಸೋದರನೆನಗೆ
ಏಳೇಳು ಜನ್ಮದಲ್ಲಿ ಶಿವಭಕ್ತರೆ ಬಂಧುಗಳೆನಗೆ
ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ !

ಎಂದು ಸಮರ್ಪಕವಾದ ರೀತಿಯಲ್ಲಿ ಕಿನ್ನರಿ ಬೊಮ್ಮಯ್ಯನ ಸವಾಲಿನಲ್ಲಿ ಜಯಶಾಲಿಯಾದ ಮಹಾದೇವಿಯಕ್ಕ ಬಸವಣ್ಣನ ಮಹಾಮನೆಗೆ ಬಂದಾಗ ಆಕೆಯ ಧನ್ಯತೆಗೆ, ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಅಕ್ಕ ತನ್ನ ಧನ್ಯತಾಭಾವವನ್ನು ವಚನವೊಂದರಲ್ಲಿ ವ್ಯಕ್ತಪಡಿಸುವಂತಹ ರೀತಿ–

ಅರಸಿ ತೊಳಲಿದಡಿಲ್ಲ. ಹರಸಿ ಬಳಲಿದಡಿಲ್ಲ
ಬಯಸಿ ಹೊಕ್ಕಡಿಲ್ಲ ತಪಸ್ಸು ಮಾಡಿದರಿಲ್ಲ
ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು
ಶಿವನೊಲಿದಲ್ಲದೆ ಕೈಗೂಡದು
ಚೆನ್ನಮಲ್ಲಿಕಾರ್ಜುನನೆನಗೊಲಿದವನಾಗಿ
ನಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆನಾ

ಬಸವಣ್ಣನವರನ್ನು ಕಂಡು "ನಿಮ್ಮ ಶರಣ ಸಂಗನ ಬಸವಣ್ಣನ ಪಾದವ ಕಂಡು ಮಿಗೆ ಮಿಗೆ ನಮೋ ನಮೋ ಎನುತಿರ್ದೆ" ಎಂದು ನಮಸ್ಕರಿಸುತ್ತಿರಲು "ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ ನಿಲುವ ನೋಡಯ್ಯಾ ಪ್ರಭುವೆ" ಎಂದು ಪ್ರೇಮಮೂರುತಿ ಅಲ್ಲಮಪ್ರಭುದೇವರಿಗೆ ಹೇಳಿದಾಗ ಪ್ರಭುದೇವರು ಅಂತರ್ಮುಖದಿಂದ ಅವಳ ನಿಲುವನ್ನು ಅಳೆಯಬಯಸಿ

ಉದಮದವ ಯೌವನವನೊಳಕೊಂಡ ಸತಿ ನೀನು ಇತ್ತಲೇಕೆ ಬಂದೆಯವ್ವಾ ?
ನಿನ್ನ ಪತಿಯ ಕುರುಹು ಹೇಳಿದರೆ ಬಂದಂತಾಳಳು ; ಅಲ್ಲದಿರೆ ತೊಲಗು ತಾಯೆ !
ನಮ್ಮ ಗುಹೇಶ್ವರನ ಶರಣರಲ್ಲಿ ಸಂಗಸುಖ ಸನ್ನಿಹಿತವ ಬಯಸುವರೆ
ನಿನ್ನ ಪತಿ ಯಾರೆಂಬುದು ಹೇಳಾ ಎಲೆ ಅವ್ವಾ !

ಎಂದು ಪ್ರಶ್ನಿಸುತ್ತಾರೆ. ಈ ಮಾತಿಗೆ ಧೃತಿಗೆಡದೆ ಅಕ್ಕ "ಪಟ್ಟೆಯ ನೆಲೆಗಟ್ಟು, ಕನಕದ ತೋರಣ ವಜ್ರದ ಕಂಬ... ಕಂಕಣ ಕೈದಾರ ಸ್ಥಿರ ಸೇಸೆಯಿಕ್ಕಿ ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆ ಮಾಡಿದರು" ಎಂದು ಧೈರ್ಯದಿಂದ ಉತ್ತರಿಸುವಳು. ಈ ಉತ್ತರಕ್ಕೆ ಸಮಾಧಾನಗೊಳ್ಳದ ಪ್ರಭುದೇವರು ಅಕ್ಕನಿಗೆ ಇನ್ನೂ ಜಟಿಲವಾದ ತಾತ್ವಿಕ ಪ್ರಶ್ನೆ ಹಾಕುವರು. ಪ್ರಭುದೇವರ ಪ್ರಶ್ನೆಗಳೆಲ್ಲ ಆಳವಾದ ಅನುಭವ, ಅಪಾರ ತತ್ವಜ್ಞಾನ, ವೈರಾಗ್ಯದ ಚರಮ ಸೀಮೆಯನ್ನು ಹೊಂದಿದಂಥ ಮಹಾದೇವಿಯಕ್ಕ ಅನುಭವ ಮಂಟಪದ ಶರಣ ಸಮುದಾಯ ತಲೆದೂಗುವಂತೆ ಸಮರ್ಪಕವಾದ ರೀತಿಯಲ್ಲಿ ಉತ್ತರವನ್ನೀಯುವಳು. ಈ ಸಂದರ್ಭದಲ್ಲಿ "ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ ಎಡೆಯಿಲ್ಲದ, ಕಡೆಯಿಲ್ಲದ, ತೆರೆಹಿಲ್ಲದ, ಕುರುಹಿಲ್ಲದ ಚೆಲುವಂಗಾನೊಲಿದೆ" ಎಂದು ನಿರಾಕಾರ ಮೂರ್ತಿಯಾದ ಚೆನ್ನಮಲ್ಲಿಕಾರ್ಜುನನ ಸತಿ ತಾನೆಂದು ಶರಣಸಮುದಾಯದ ಮಧ್ಯದಲ್ಲಿ ನಿಂತು ಕೊಡುವ ಅಕ್ಕನ ಈ ಮಾತು ಅವಳಲ್ಲಿ ಆಧ್ಯಾತ್ಮಿಕ ಜೀವನದ ಪರಮೋನ್ನತಿಯನ್ನು ಸೂಚಿಸುವುದು. ಹೀಗೆ ಅನುಭವ ಮಂಟಪದಲ್ಲಿ ನಡೆದಂತಹ ಅಗ್ನಿಪರೀಕ್ಷೆಯಲ್ಲಿ ಶರಣ ಸಂಕುಳದ ಮನವನ್ನು ಗೆಲ್ಲುವಳು.

ಪರಮ ವೈರಾಗ್ಯ ಮೂರುತಿಯಾದ ಅಕ್ಕನ ತ್ಯಾಗಮನೋಭೂಮಿಕೆಯನ್ನು ಆಲಿಸಿದ ಪ್ರಭುದೇವರು—

ಆದಿಶಕ್ತಿ ಅನಾದಿಶಕ್ತಿಯೆಂಬರು,
ಅದನಾರು ಬಲ್ಲರಯ್ಯ ?
ಆದಿ ಎಂದರೆ ಕುಳ-ಹಿಂಗೆ ಬಂದಿತ್ತು.
ಅನಾದಿ ಎಂದರೆ ನಾಮಕ್ಕೆ ಬಂದಿತ್ತು.

ಆದಿಯಲ್ಲಿ ಅನಾದಿಯಲ್ಲ !
ನಾನುಂಟಿಲ್ಲದ ಸೀಮೆಯಿಲ್ಲದ ನಿಜಶಕ್ತಿ !
ಚಿಚ್ಛಕ್ತಿಯಾಯಿತ್ತು ನೋಡಾ !
ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ
ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ
ಶ್ರೀಪಾದಕ್ಕೆ ನಮೋ ನಮೋ ಎಂಬೆನು.

ಎಂಬ ಮಾತು ಅಕ್ಕನ ಆಧ್ಯಾತ್ಮಿಕ ಬದುಕು ಮಹೋನ್ನತ ಶಿಖರ ಮುಟ್ಟಿದೆ, ಆ ಶಿಖರದಲ್ಲಿರುವಂತಹ ಅಕ್ಕ ಸರ್ವರಿಗೂ ಪೂಜ್ಯಳು ಎಂದು ಪ್ರಭುದೇವರು ಆಕೆಯ ಜ್ಞಾನಪಿಪಾಸೆಯನ್ನು ಕಂಡು ಪ್ರಸನ್ನರಾಗಿ ಹೇಳಿರುವುದು ನಮಗೆ ವೇದ್ಯವಾಗುತ್ತದೆ.

ಭಾವುಕ ಜೀವಿಯಾದ ಮಹಾದೇವಿ ಅನುಭವ ಮಂಟಪದ ಶರಣ ಜೀವನ ಆದರಲ್ಲಿ ಅಡಗಿರುವ ಭಕ್ತಿಯ ಮಹಿಮೆ. ತಾನು ಅವರೊಂದಿಗೆ ಒಂದಾಗಿ ಕಳೆದ ಸವಿದಿನಗಳ ಬಗೆಗೆ ಅತೀ ವಿನೀತಭಾವದಿಂದ ಅವರಿಗೆ ತನ್ನ ಗೌರವವನ್ನರ್ಪಿಸಿದ್ದಾಳೆ.

ಬಸವಣ್ಣನ ಮನೆಯ ಮಗಳಾದ ಕಾರಣ
ಭಕ್ತಿ ಪ್ರಸಾದವ ಕೊಟ್ಟೆನು.
ಚೆನ್ನಬಸವಣ್ಣನ ತೊತ್ತಿನಮಗಳಾದ ಕಾರಣ
ಒಕ್ಕ ಪ್ರಸಾದವ ಕೊಟ್ಟೆನು.
ಸಿದ್ಧರಾಮಯ್ಯನ ಶಿಶು ಮಗಳಾದ ಕಾರಣ
ಪ್ರಾಣ ಪ್ರಸಾದವ ಸಿದ್ಧಿಸಿಕೊಟ್ಟೆನು
ಮಡಿವಾಳಯ್ಯನ ಮನೆಯ ಮಗಳಾದ ಕಾರಣ
ನಿರ್ಮಲ ಪ್ರಸಾದವ ನಿಶ್ಚೈಸಿ ಕೊಟ್ಟೆನು.
ಇಂತೀ ಅಸಂಖ್ಯಾತ ಗಣಂಗಳೆಲ್ಲರು
ತಮ್ಮ ಕರುಣದ ಕಂದನೆಂದು ತಲೆದಡಹಿದ ಕಾರಣ
ಶ್ರೀ ಚೆನ್ನಮಲ್ಲಿಕಾರ್ಜುನಯ್ಯನ ಶ್ರೀಪಾದಕ್ಕೆ ಯೋಗ್ಯಳಾದೆನು.

ಎಂದು ಸರ್ವರ ಮನ ಮಿಡಿಯುವಂತೆ ಅಕ್ಕನ ತ್ಯಾಗಜೀವನದ ಕಲ್ಪನೆ ನಮಗಿರಿವಾಗದಿರದು.

ಮಹಾದೇವಿಯಕ್ಕನ ಅಂತರಂಗದ ಆಶೆ ಈಡೇರಿದಾಗ ಆಕೆ ಆನಂದಭರಿತಳಾಗಿ—

ಅರಲುಗೊಂಡಕೆರೆಗೆ ತೊರೆ ಬಂದು ಹಾಯ್ದಂತಾಯಿತ್ತು.
ಬರಲಗೊಂಡ ಸಸಿಗೆ ಮಳೆಸುರಿಸಿದಂತಾಯಿತ್ತು ನೋಡಾ ಇಂದೆನಗೆ
ಇಹದ ಸುಖ, ಪರದಗತಿ ನಡೆದು ಬಂದಂತಾಯಿತ್ತು ನೋಡಾ ಎನಗೆ
ಚನ್ನಮಲ್ಲಿಕಾರ್ಜುನಯ್ಯ ಗುರು ಪಾದವ ಕಂಡು ಧನ್ಯಳಾದೆನು ನೋಡಾ

ಎಂದು ಹೇಳಿರುವಳು. ಹೀಗೆ ಭಕ್ತಿ-ಜ್ಞಾನ-ವೈರಾಗ್ಯಗಳೆಲ್ಲದರ ಸಮಾನಸಿದ್ಧಿಯನ್ನು ಸಾಧಿಸಿದ ಅಕ್ಕನ ದಿವ್ಯ ನಿಲುವನ್ನರಿತ ಸಮ್ಯಜ್ಞಾನಿ ಚನ್ನಬಸವಣ್ಣನವರು ಅಕ್ಕನ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

ಅಜಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೆ ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ ?
ನಡುವಲುರಿದು ಗುಡುಗೂರಿ ತಲೆನಡುಗಿ, ನೆರೆತೆರೆ ಹೆಚ್ಚಿ ಮತಿಗೆಟ್ಟ
ಒಂದನಾಡಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರು ಹಿರಿಯರೆ ?
ಅನುಭವಸರಿದು, ಘನವ ಬೆರೆಸಿ ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲ ಚೆನ್ನ ಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿದ್ದ ಹಿರಿಯತನು
ನಮ್ಮ ಮಹಾದೇವಿಯಕ್ಕಂಗಾಯಿತ್ತು.”

ಅದೇ ರೀತಿಯಾಗಿ ಅಕ್ಕನ ವಚನ (ಮಾತು) ಗಳು ಪಡೆದ ಸಿದ್ಧಿಯು ಬಗೆಗೆ—

ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ ಕೂಡಲ ಚೆನ್ನ ಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯ

ಎಂಬಂತಹ ಮಾತುಗಳು ಮಹಾದೇವಿಯಕ್ಕನ ವಚನಗಳು ಆದ್ಯರ ವಚನಕ್ಕಿಂತಲೂ ಪರಮವೇದ್ಯವಾದವುಗಳು ಎಂಬುವರ ಅರಿವು ನಮ್ಮಲ್ಲಿ ಮೂಡುತ್ತದೆ.

ಇದೇ ರೀತಿಯಾಗಿ ಬಸವಣ್ಣ, ಸಿದ್ಧರಾಮ ಅಲ್ಲಮ ಪ್ರಭುದೇವ ಇವರಿಂದೆಲ್ಲ ಪ್ರಶಂಸೆಯ ಮಾತುಗಳನ್ನು ತೆಗೆದುಕೊಂಡು ಅಕ್ಕ ಇನ್ನು ಸಾಧಿಸಬೇಕಾದ ಕಾರ್ಯ ಮತ್ತು ಶ್ರಮಿಸಬೇಕಾದ ದಾರಿ ಇನ್ನು ಮುಂದೆ ಇದ್ದೀತು. ಇದಕ್ಕೆ ಪ್ರಭುದೇವರ ಸಮ್ಮತಿ ದೊರೆಯುತ್ತದೆ ಇಂತು—

“ನೀನು ನಾನೆಂಬಭಾವ ಸಂಗವಳಿದು, ತಾನುತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟ ತುದಿಯುಲಿ ನೋಡಲು ಬಟ್ಟ ಬಯಲು ಕಾಣಬಹುದು ನೋಡಾ ॥ ಆ ಬಟ್ಟ ಬಯಲು ಬೆರಸುವರೆ ಶ್ರೀಗಿರಿಯುಳಗೊಂದು ಕಾರಣ ಬಾರದ ಕದಳಿಯುಂಟು ನೋಡಾ । ಆ ಕದಳಿಯ ತಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ನೋಡಾ ನಡೆಯಲ್ಲಿಗೆ ತಾಯೇ ಗುಹೇಶ್ವರ ಲಿಂಗವಲ್ಲಿ ಪರಮ ಪದವು ನಿನಗೆ ಸಾಧ್ಯವಪ್ಪುದು ನೋಡಾ.”

ಹೇಗೆ ಮೀರಾಬಾಯಿಯು ವೃಂದಾವನವನ್ನು ಬಿಟ್ಟು ಇಷ್ಟದೇವನನ್ನು ಅರಸುತ್ತ ದ್ವಾರಕೆಯ ಕಡೆಗೆ ಹೊರಟಂತೆ ಅಕ್ಕಮಹಾದೇವಿಯು ಕಲ್ಯಾಣದಿಂದ ಶ್ರೀಶೈಲದ ಕಡೆಗೆ ಹೋಗಲು ನಿಶ್ಚಯಿಸಿದಳು. ಆತ್ಮಕಲ್ಯಾಣದ ಸಾಧನೆಗಾಗಿ ಕಲ್ಯಾಣ ಬಿಟ್ಟು ಹೊರಡುವ ಸಂದರ್ಭದಲ್ಲಿ ಅಕ್ಕನು ಶರಣಸಂಕುಳಕ್ಕೆ ಅವರು ತೋರಿದ ಭಕ್ತಿ ಮಾರ್ಗವನ್ನು ಅರಸಲು ಹೊರಟಾಗ ಅವರಿಗೆ ದೈನ್ಯತೆಯಿಂದ ನಮಸ್ಕರಿಸುವ ರೀತಿ—

ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದುಸಲುಹಿದರೆನ್ನ

ವಿವಾಹವ ಮಾಡಿದಿರಿ, ಸಯಾವಪ್ಪ. ಗಂಡಂಗೆ ಕೊಟ್ಟಿರಿ,
ಕೊಟ್ಟ ಮನೆಗೆ ಕಳುಹಲೆಂದು ಅಕ್ಕಿಯ್ಯಾತರೆಲ್ಲರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ
ಚೆನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು
ಅವಧರಿಸಿ ನಿಮ್ಮಡಿಗಳೆಲ್ಲರು ಮರಳಿ ಬಿಜಯಂಗೈವುದು ಶರಣಾರ್ಥಿ.

ಎಂದು ಸರ್ವರಿಗೂ ವಂದಿಸಿ, ಪ್ರಭುದೇವರು ಸೂಚಿಸಿದಂತೆ ಕಾಣಬಾರದ ಕದಳಿಯ ಕುರಿತು ಅಕ್ಕ ಹೀಗೆ ನುಡಿದಿದ್ದಾಳೆ.

ಕದಳಿ ಎಂಬುದು ತನು, ಕದಳಿ ಎಂಬುದು ಮನ,
ಕದಳಿ ಎಂಬುದು ವಿಷಯಂಗಳ
ಕದಳಿ ಎಂಬುದು ಭವಘೋರಾರಣ್ಯ
ಈ ಕದಳಿ ಎಂಬುದು ಗೆದ್ದ ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
ಭವಗೆದ್ದು ಬಂದ ಮಗಳೆ ಎಂದು ಕರುಣದಿ ತೆಗೆದು ಬಿಗಿಯಪ್ಪಿದಡೆ
ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆ.

ಈ ರೀತಿಯಾಗಿ ಅಕ್ಕಮಹಾದೇವಿಯು ಭವಘೋರಾರಣ್ಯದಂತಿರುವ ಸಂಸಾರವೆಂಬ ಕದಳಿಯನ್ನು ಗೆದ್ದು, ಆಧ್ಯಾತ್ಮಿಕ ಬದುಕಿನ ನೆಲೆ ಬೆಲೆ ಅರಿತು, ಆ ಶಿಖರವನ್ನೇರಿದ, ತ್ಯಾಗ ಮೂರ್ತಿಯಾದ ಮಹಾದೇವಿಯಕ್ಕ ಕದಳಿಯ ಬನದಲ್ಲಿ ತನ್ನ (Personal God) ಆರಾಧ್ಯ ದೇವನಾದ ಚನ್ನಮಲ್ಲಿಕಾರ್ಜುನನ ಕಂಡೆ. ಸದಾ ಅವನದೆ ಚಿಂತೆ ಎಂದು ಹಂಬಲಸಿದ ಅಕ್ಕ—

ವನವೆಲ್ಲ ನೀವೆ ವನದೊಳಗಣದೇವ, ತರುವೆಲ್ಲ ನೀವೆ
ತರುವಿನೊಳಗಾಡುವ ಖಗಮೃಗವೆಲ್ಲ ನೀವೆ,
ಚನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರಾ !

ಎಂದು ಆಧ್ಯಾತ್ಮಿಕ ಜೀವನದಲ್ಲಿ ತುತ್ತತುದಿಯನೇರಿ ಲಿಂಗಾಂಗ ಸಾಮರಸ್ಯ, ಭಾವ ಸಮಾಧಿಯಲ್ಲಿ ಬಯಲಾಗುವ ದೃಶ್ಯ ಮನೋಹರವಾದುದು. ಇಂತಹ 'ಲಿಂಗಾಂಗ ಸಾಮರಸ್ಯ'ದ ಬದುಕು ಕಳೆದ ಅಕ್ಕನ ಆದರ್ಶ ಜೀವನ ಸರ್ವಕಾಲಕ್ಕೂ ಸರ್ವರಿಗೂ ಅನುಕರಣೀಯವಾದುದು.

ಮೌನೇಶ್ವರ ವಚನಗಳಲ್ಲಿ ಕಾಲಜ್ಞಾನ

ಕೆ. ಪಿ. ಈರಣ್ಣ

ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿ ಆಗಿ ಹೋದ ಮಹಾತ್ಮ ಮೌನೇಶ್ವರರು, ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ದೇವರಗೋನಾಳ ಎಂಬ ಗ್ರಾಮದ ಹಾವಪ್ಪ ಮತ್ತು ಹಾವಕ್ಕ ಎಂಬ ವಿಶ್ವಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರು ಸಹ ಸರ್ವಜ್ಞನಂತೆ ನಿಷ್ಠುರವಾಗಿ ಅನ್ಯಾಯ, ಜಾತಿ, ಮತ, ಲಿಂಗ, ಇತ್ಯಾದಿಗಳನ್ನು ಕುರಿತು ತ್ರಿಪದಿ, ಚೌಪದಿಯಲ್ಲಿ ಸುಮಾರು ೮೦೦ ವಚನಗಳನ್ನು ರಚಿಸಿದ್ದಾರೆ. ಇವರು ತ್ರಿಕಾಲ ಜ್ಞಾನಿಗಳು ತಮ್ಮ ದಿವ್ಯ ಚಕ್ಷುಗಳಿಂದ ಭವಿಷ್ಯದಲ್ಲಿ ಆಗುವ ಘಟನೆಗಳನ್ನು ಸ್ಥಿತ್ಯಂತರಗಳನ್ನು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ. ಮುಂದಾಗುವ ಘಟನೆಗಳನ್ನು ೨೦೦-೩೦೦ ವರ್ಷಗಳ ಹಿಂದೆಯೇ ಸೂಚ್ಯವಾಗಿ ಹೇಳಿದ ಮಹಿಮಾಪುರುಷರಿವರು. ಇವರನ್ನು ಈಶ್ವರನ ಪರಮಾವತಾರವೆಂತಲೂ, ಎರಡನೆಯ ವಿಶ್ವಕರ್ಮ ಜಗದ್ಗುರು ಎಂತಲೂ ಕರೆಯುವದುಂಟು.

ಬ್ರಿಟಿಷರು ಭಾರತಕ್ಕೆ ಬಂದು ಆಡಳಿತ ನಡೆಸುವುದನ್ನು ತಮ್ಮದೊಂದು ವಚನದಲ್ಲಿ ಇಂತು ಹೇಳಿದ್ದಾರೆ.

ವಾಣಿಯೊಳು ಹೊಕ್ಕು ವಾಣಿ ಮಾತಾಡಬಹುದು.
ಜಾಣ ಫಿರಂಗೇರು ಬರುವಾಗ ಪ್ರಾಣಸಿಲ್ಲುವದು.
ಕಡುಕಷ್ಟ ಕಾಣ ಬಸವಣ್ಣ.

ಟೆಲಿಫೋನು, ಟೆಲಿಗ್ರಾಮ್ ರೇಡಿಯೋದಂತ ಮಾತನಾಡುವ ಸಂಪರ್ಕ ಸಾಧನಗಳಾಗಿ ಬರುವುದನ್ನು ಹೇಳಿದ್ದಾರೆ. ಇಂಗ್ಲಿಷರಿಗೆ ಜಾಣ ಫಿರಂಗೇರು ಎಂದಿದ್ದಾರೆ. ಏಕೆಂದರೆ ಬ್ರಿಟಿಷರು ಭಾರತದಲ್ಲಿ ಜ್ಞಾನ ವಿಜ್ಞಾನ ಪ್ರಸಾರ ಮಾಡಿ ಅದು ಬೆಳೆಯುವಂತೆ ಮಾಡಿದ್ದಾರೆ. ಈ ವಿಷಯವನ್ನು ಸುಮಾರು ೩೦೦ ವರ್ಷಗಳಷ್ಟು ಮೊದಲೇ ಈ ಭವಿಷ್ಯವನ್ನು ಹೇಳಿದ್ದು ಆಶ್ಚರ್ಯವನ್ನುಂಟು ಮಾಡುತ್ತದೆ.

ಮತ್ತೊಂದು ವಚನದಲ್ಲಿ ಇಂಗ್ಲಿಷರ ಬರುವಿಕೆಯನ್ನು ಇಂತು ಹೇಳಿದರು.

ಬಡಗೂ ದೇಶದಿಂದ ಬಡಿಗನು ಬರುತಾನೆ.
ಕರಿದು ಬಿಳಿದುಗಳ ಸಹಜವ ಮಾಡಿ
ಆಯಆಯುದಲಿ ನಡಸ್ಯಾಡುವ ಅಲ್ಲಮಃರಾಯ ಬರುತಾನೆ ಮರ್ತ್ಯಕ್ಕೆ.

ಪಶ್ಚಿಮ ದೇಶದಿಂದ ಬರುವವನು ಬಡಿಗನೆಂದರೆ ಬಡಿಗ (ಜೋಸೆಫ್)ನ ಮಗನಾಗಿ ಹುಟ್ಟಿದ ಪ್ರವಾದಿ ಏಸುಕ್ರಿಸ್ತನೆಂದು ಅರ್ಥ. ಏಸುವಿನ ಧರ್ಮ ಕ್ರೈಸ್ತ ಧರ್ಮವು ಈ ಕ್ರೈಸ್ತ ಮಿಷನರಿಗಳೂ ಹಾಗೂ ಕ್ರೈಸ್ತರಾದ ಇಂಗ್ಲಿಷರೂ ಭಾರತಕ್ಕೆ ಬಂದು ರಾಜ್ಯವಾಳಿ ನಮ್ಮ ದೇಶದಲ್ಲಿ ಸಾರ್ವತ್ರಿಕ ಶಿಕ್ಷಣ ಪ್ರಸಾರವನ್ನು ಮಾಡಿ ಅಸಮಾನತೆ

ತೊಲಗಿ ಸಮಾನತೆ ಉಂಟಾಯಿತು. "ಕರಿದು ಬಿಳಿದುಗಳ ಸಹಜವ ಮಾಡಿ" ಎಂದರೆ ಸಮಾನತೆಯನ್ನು ಉಂಟು ಮಾಡಿದ್ದು ಎಂಬರ್ಥ. ಇವನ್ನು ಬಹು ಹಿಂದೆಯೇ ಮೌನೇಶ್ವರರು ತಮ್ಮ ವಚನದಲ್ಲಿ ಹೇಳಿದ್ದರು.

ಇಂದು ಸಮಾಜದಲ್ಲಿ ಯುವ ಪೀಳಿಗೆಯವರು ಅಕಾಲ ಮರಣಕ್ಕೆ ತುತ್ತಾಗುತ್ತಿರುವ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ.

ಮುಪ್ಪಿನವರು ಬದುಕ್ಯಾರು
ಪ್ರಾಯದವರು ಅಳಿದಾರು
ನಡುಪ್ರಾಯದವರು ಮಡಿದಾರು
ಮರ್ತ್ಯದೊಳಗೆ ಮುದುಕರಿಗೆ ಉಳಿವು ಬಸವಣ್ಣ

ಎಂದರೆ, ಮುದುಕರು ಬದುಕುವರು, ತರುಣರು ನಾಶವಾಗುವರು ಮತ್ತು ನವ ತರುಣರು ಸಾಯುವರು, ಮುದುಕರೇ ಉಳಿಯುವರು ಎಂದಿರುವರು ಇದು ಸತ್ಯ. ಇಂದು ಅನೇಕ ಜನ ತರುಣರು ಅಪಘಾತ ಜಡ್ಡು ಹೃದಯಾಘಾತದಿಂದ ಸಾಯುತ್ತಿದ್ದಾರೆ. ಮುದುಕರು ಮಾತ್ರ ಉಳಿಯುತ್ತಿರುವದು ಇಂದು ಸಾಮಾನ್ಯವಾಗಿದೆ.

ಭಾರತವು ೧೯೪೭ಕ್ಕಿಂತ ಪೂರ್ವದಲ್ಲಿ ವಿವಿಧ ಸಂಸ್ಥಾನಗಳಾಗಿ ಹರಿದು ಹಂಚಿ ಹೋಗಿ ರಾಜರೆಲ್ಲಗೂ ಸ್ವತಂತ್ರವಾಗಿ ವರ್ತಿಸುತ್ತಿದ್ದರು. ಹೀಗೆ ದೇಶವು ಹರಿದು ಹಂಚಿ ಹೋಗುವ ಸನ್ನಿವೇಶವನ್ನು ಮೊದಲೇ ಅರಿತಿದ್ದ ಮೌನೇಶ್ವರರು—

ಪಟ್ಟಕ್ಕೆ ಅರಸಿಲ್ಲ, ಕೊಟ್ವಾರಕೆ ಮೊನ್ನೇರಿಲ್ಲ
ಕೊಟ್ಟೇನೆಂದರೆ ಕರುಪಿಲ್ಲ ರಾಜ್ಯವು
ಹಿಟ್ಟಿಟ್ಟಾಗುವ ದಿನ ಬಂದಾವು ಬಸವಣ್ಣ

ಎಂದು ಹೇಳಿ ಅಂದು ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಜಮನೆತನಗಳೆಲ್ಲ ಅಳಿಯುವದನ್ನು ಅವರು ಮೊದಲೆ ಉಲ್ಲೇಖಿಸಿದ್ದನ್ನು ಕಾಣಬಹುದಾಗಿದೆ.

ಇಂದಿನ ಸಮಾಜದ ನಿಜಚಿತ್ರಣವನ್ನು ಹಿಂದೆಯೇ ಮೌನೇಶ್ವರರು

ಅಂಗಡಿ ರಾಜಬೀದಿಯೊಳು ಭಂಗಿ ಸುರೆಮಾಂಸ
ಕಳ್ಳ ಕಿವುಡಮೂಳ ಇದ್ದಲ್ಲಿ ಲಿಂಗಾಂಗಿಗಳು ಹ್ಯಾಗಿರಬೇಕು ?

ಎಂದು ಹೇಳಿ ಇಂದು ಪ್ರತಿ ಹಳ್ಳಿಯಲ್ಲೂ ನಗರ ಪ್ರದೇಶವಾಗಿದ್ದರೆ ಪ್ರತಿ ಗಲ್ಲಿಯಲ್ಲಿ ಸರಾಯಿ, ಶಿಂಧಿ, ಮಾಂಸದ ಅಂಗಡಿಗಳು ಇರುವುದನ್ನು ಎಲ್ಲ ಕಡೆ ಕುಡಿಯುವವರನ್ನು, ಕಳವು ಮಾಡುವವರನ್ನು, ಚಾಡಿ ಹೇಳುವವರನ್ನು ಕಾಣಬಹುದಾಗಿದೆ. ಇಂತಹ ಸಮಾಜವಲ್ಲಿ ಸಜ್ಜನರು ಸದಾಚಾರಿಗಳು ಹೇಗೆ ಇರುವುದೆಂದು ತಮ್ಮಲ್ಲೆ ಪ್ರಶ್ನಿಸಿಕೊಂಡಿದ್ದಾರೆ. ಇಂಥವರಿಂದ ತೊಂದರೆಯಾಗುವುದೆಂದು ಮೊದಲೆ ಸಾರಿದ್ದಾರೆ.

ಮತ್ತೊಂದು ವಚನದಲ್ಲಿ ಇಂದು ಬರಗಾಲ ಬಿದ್ದು ಎಲ್ಲೆಡೆಯಲ್ಲೂ ಜನರು ನೀರು ಮೇವಿಗಾಗಿ ಪರದಾಡುವಂತಹ ಕಠಿಣ ಪರಿಸ್ಥಿತಿಯನ್ನು ಇಂತು ನೀಡಿದ್ದಾರೆ:

ಮಳೆಗಾಲ ಹೋದೀತು ಹೊಳೆಬಾವಿ ಬತ್ಯಾವು
ಪ್ರಳಯ ಲೋಕದ ಪ್ರಜೆಗಳಿಗೆ ಇದರೊಳಗೊಂದು
ಉಳಿದದ್ದೆ ಬೀಜ ಬಸವಣ್ಣ ...

ಹಿಂದೆ ನಡೆಯುತ್ತಿದ್ದ ಶೀಲ ವ್ರತಾಚಾರಗಳು ನಡೆಯುವುದಿಲ್ಲ, ವ್ರತಗಳು ಕೆಟ್ಟು ಹೋಗುವಂತಹ ಕಠಿಣ ದಿನಗಳು ಬರುತ್ತವೆ ಎಂಬುದನ್ನು

ಹಿಂದಿನ ಶೀಲವು ಮುಂದತ್ತ ನಡೆಯದು
ಹಂದಿಯು ತಿಂದು ವ್ರತಗೆಟ್ಟು ಹೋಗುವ
ಅಂದು ನೋಡುವೆನು ನಿಮ್ಮ ನಿಜಗಳನು ಬಸವಣ್ಣ

ಎಂದು ಬಹಳ ಹಿಂದೆಯೇ ಈ ಮಾತನ್ನು ಹೇಳಿದ್ದರು ಅದರಂತೆ ಇಂದು ಯಾವ ಶೀಲ, ವ್ರತ, ಪೂಜಾ, ಆಚಾರ ವಿಚಾರ ನಿಯಮಗಳು ಹಿಂದಿಗಿಂತಲೂ ಇಂದು ಬಹಳಷ್ಟು ಕಡಿಮೆಯಾಗಿರುವುದನ್ನು ಕಾಣಬಹುದಾಗಿದೆ ಮತ್ತೊಂದು ವಿಷಯದಲ್ಲಿ ಇಂದು ದಾನ ಧರ್ಮ ಮಾಡುವುದನ್ನು ಬಿಟ್ಟಿರುವ ಈ ಜನರನ್ನು ಕುರಿತು ಹೇಳುತ್ತಾ,

ಪುಣ್ಯಕ್ಕೆ ಬೇಡಿದರೆ...ತೋರುವರು
ಟೊಣ್ಣೆಯ ತಕ್ಕೊಂಡು ಹೊಡೆದರೆ ಮನೆಯೊಳಗಣ
ಸಣ್ಣ ಚರಿಗಿಯ ಹೊನ್ನ ತಂದಿಕ್ಕುವರು
ಬಸವಣ್ಣ

ಅಂದರೆ ಇಂದು ಯಾರಾದರು ದೇವಾಲಯವನ್ನು ಕಟ್ಟಿಸುತ್ತೇವೆ, ಸಮಾಜಕ್ಕೆ ಒಳ್ಳೆಯ ಕಾರ್ಯವನ್ನು ಮಾಡುತ್ತೇವೆ, ದೇಣಿಗೆ ಕೊಡಿ ಎಂದು ಕೇಳಿದರೆ ಯಾರು ದೇಣಿಗೆ ಕೊಡಲು ಮುಂದೆ ಬರುವುದಿಲ್ಲ. ಒತ್ತಾಯ ಮಾಡಿದರೂ ಸಾಧ್ಯವಿಲ್ಲ. ಅದೇ ಆದಾಯ ತೆರಿಗೆಯ ಅಧಿಕಾರಿಗಳು ಬಂದರೆ ಅವರಿಗೆ ಸಾವಿರಾರು ರೂಪಾಯಿ ಲಂಚವನ್ನಾದರು ಕೊಟ್ಟು ತಮ್ಮ ಆಸ್ತಿಯನ್ನು ಕಾಪಾಡಿಕೊಳ್ಳುವುದು ಸರ್ವೆಸಾಮಾನ್ಯವಾಗಿದೆ.

ಮುಂದೆ ಒದಗಿ ಬರುವಂತಹ ಐತಿಹಾಸಿಕ ಘಟನೆಗಳನ್ನು ಕುರಿತು ಹೇಳುತ್ತಾ,

ಪಚ್ಚೇದ ಪಲ್ಲಕ್ಕಿ ಮುತ್ತಿನ ತುರಾಯಿ
ಮಾಯ....ಮರುತಾಪಗ ಡೊಳ್ಳು ಡಿಳ್ಳಿಯ ಖಾನರು
ಅಳಿವದಿನಗಳು ಬಂದವು ಬಸವಣ್ಣ

ಮತ್ತೊಂದು ವಚನದಲ್ಲಿ

ದೇಶವಾಳುವವರು ನಾಶವಾದರು
ಜಗದೀಶ್ವರ ತಾನು ನುಡಿದ ಕಾರಣದಿಂದ
ಮೊಗಲರ ದಂಡು ಬರತೈತಿ

ಈ ಎರಡು ವಚನಗಳಲ್ಲಿ ದೆಹಲಿಯಲ್ಲಿ ೧೫೨೬ರಲ್ಲಿ ಮೊದಲನೆಯ ಪಾಣಿಪತ್ ಯುದ್ಧದಲ್ಲಿ ದೆಹಲಿಯ ಸುಲ್ತಾನರು ಸೋತು ಮೊಗಲರ ದಂಡು ಬಂದು ಅದನ್ನು ಆವರಿಸಿಕೊಳ್ಳುವ ಘಟನೆಯನ್ನು ಮುಂಚಿತವಾಗಿಯೇ ಹೇಳಿದ್ದರು. ಬಾಬರನು ೧೫೨೬ರಲ್ಲಿ ಮೊಗಲ ಸಾಮ್ರಾಜ್ಯವನ್ನು ಸ್ಥಾಪಿಸಿದುದು ಇತಿಹಾಸ ಪುಟದಿಂದ ತಿಳಿದು ಬರುತ್ತದೆ.

ಹೀಗೆ ಮೌನೇಶ್ವರ ವಚನಗಳಲ್ಲಿ ಅನೇಕ ರಾಜಕೀಯ, ಧಾರ್ಮಿಕ, ಸಾಮಾಜಿಕ, ಐತಿಹಾಸಿಕ ಘಟನೆಗಳ ಭವಿಷ್ಯವನ್ನು ಹೇಳಿದ್ದನ್ನು ನೋಡಬಹುದು. ಅವರು

ಹೇಳಿದ ನುಡಿಗಳೆಲ್ಲವೂ ನಿಜವಾಗಿವೆ. ಮಹಾತ್ಮರ ದಿವ್ಯ ದೃಷ್ಟಿಗೆ ಕಾಣದೇ ಇರುವ ವಿಷಯುವಾವುದು ? ಅವರು ತ್ರಿಕಾಲಜ್ಞಾನಿಗಳಾಗಿದ್ದರು. ಅವರ ವಚನಗಳಲ್ಲಿ ಲೌಕಿಕ ಅನುಭವವೂ ಸಾಹಿತ್ಯ ಸೌಂದರ್ಯವೂ ಸತ್ಯದ ದರ್ಶನವೂ ಆಗುತ್ತದೆ.*

---

* ಈ ಲೇಖನದಲ್ಲಿ ಉಪಯೋಗಿಸಿದ ವಚನಗಳನ್ನು "ತಿಂಥಣಿ ಮೌನೇಶ್ವರರ" ವಚನಗಳು ಸಂ.) ಸಿ.ಬಿ. ಕವಕೋಳ ಮತ್ತು ಕೆ. ಪಿ. ಈರಣ್ಣ, ಕ.ವಿ.ಪಿ. ಧಾರವಾಡ-೧೯೮೫ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಭಾರತೀಯ ಪರಂಪರೆಯಲ್ಲಿ ಸರಸ್ವತೀ

ಚಿ. ನ. ಮಂಗಳಾ

ಜ್ಞಾನಂ ದೇಹಿ ಸ್ಮೃತಿಂ ದೇಹಿ ವಿದ್ಯಾಂ ವಿದ್ಯಾಧಿದೇವತೇ ।
ಪ್ರತಿಷ್ಠಾಂ ಕವಿತಾಂ ದೇಹಿ ಶಕ್ತಿಂ ಶಿಷ್ಯ ಪ್ರಬೋಧಿತಾಮ್ ॥
ಸ್ಮೃತಿ ಶಕ್ತಿಃ ಜ್ಞಾನ ಶಕ್ತಿಃ ಬುದ್ಧಿ ಶಕ್ತಿ ಸ್ವರೂಪಿಣೀ ।
ಪ್ರತಿಭಾ ಕಲ್ಪನಾ ಶಕ್ತಿಃ ಯಾ ಚ ತಸ್ಯೈ ನಮೋ ನಮಃ ॥

(ಬ್ರಹ್ಮವೈವರ್ತ ಪುರಾಣ ೩.೪)

ವಿದ್ಯಾಧಿದೇವತೆ ವಾಗ್ದೇವಿ 'ಸರಸ್ವತಿ'ಯ ಕಲ್ಪನೆ ವೇದಗಳ ಕಾಲದಿಂದಲೂ ಭಾರತೀಯರ ಜೀವನ ಸಾಹಿತ್ಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ. ದೇವೀ ಶಕ್ತಿಯ ಪ್ರಮುಖ ಪ್ರಾದುರ್ಭಾವಗಳಲ್ಲೊಂದಾಗಿ 'ಸರಸ್ವತಿ' ಋಗ್ವೇದ ಕಾಲದಲ್ಲಿ ನದಿಯಾಗಿ ಅನಂತರದಲ್ಲಿ ವಾಗ್ದೇವಿಯಾಗಿ ವಿದ್ಯೆಗೆ ಅಧಿದೇವತೆಯಾಗಿ ಪ್ರಕಾಶಿಸಿದ್ದಾಳೆ.

ನಾಗರೀಕತೆಗಳ ಹುಟ್ಟು ಬೆಳವಣಿಗೆಗಳಲ್ಲಿ ನದಿಗಳ ಪಾತ್ರ ಪ್ರಮುಖವಾದದ್ದು. ನೀರಿಲ್ಲದೆ ಬದುಕು ಅಸಾಧ್ಯ. ಇದರಿಂದಾಗಿಯೇ ವಿಶ್ವದ ಮಹಾನದಿಗಳು ಜನಾಂಗಗಳ ಬೆಳವಣಿಗೆಗೆ ಕಾರಣವಾದದ್ದು. ಭಾರತೀಯರಂತೂ ಋಗ್ವೇದ ಕಾಲದಿಂದಲೂ ತಮ್ಮ ಜೀವನಕ್ಕೆ ಆಧಾರವಾದ ನದಿಗಳನ್ನು ಹಾಡಿ ಹೊಗಳಿದ್ದಾರೆ. ಋಗ್ವೇದದ ನದೀ ಸೂಕ್ತಗಳು ವಿಖ್ಯಾತವಾಗಿವೆ. ಋಗ್ವೇದದ ಹತ್ತನೇ ಮಂಡಲದ ಎಪ್ಪತ್ತೈದನೇ ಸೂಕ್ತ ಸಂಪೂರ್ಣವಾಗಿ ನದೀ ಸೂಕ್ತವಾಗಿದೆ. "ಯತ್ರ ದೇಶೇ ನದೀ ನಾಸ್ತಿ ತಂ ದೇಶಂ ಪರಿವರ್ಜಯೇತ್ ॥" ಯಾವ ದೇಶದಲ್ಲಿ ನದಿಯಿಲ್ಲವೋ ಆ ದೇಶವನ್ನು ತ್ಯಜಿಸು ಎಂಬ ಮಾತೇ ಇದೆ. ನದಿತಟಗಳಲ್ಲಿ ನೆಲೆಸಿದ ಜನ ಆ ನದಿಗಳನ್ನು ಪೂಜ್ಯಭಾವದಿಂದ ನೋಡುತ್ತಿದ್ದುದು ಸಹಜವೇ ಆಗಿದೆ. ವೇದ ಕಾಲದ ನದಿಗಳಲ್ಲಿ ಸರಸ್ವತಿ, ಸರಯು, ಸಿಂಧು ಮಹಾನದಿಗಳೆಂದು ಪ್ರಖ್ಯಾತವಾಗಿದ್ದವು.

ಸರಸ್ವತೀ ಸರಯುಃ ಸಿಂಧುರೂರ್ಮಿಭಿಃ
ಮಹೋಮಹೀರವಸಾ ಯಂತು ವಕ್ಷಣೀಃ
ದೇವೀರಾಪೋ ಮಾತರಃ ಸೂದಯಿತ್ನ್ವೋ
ಘೃತವತ್ಪಯೋ ಮಧುಮನ್ನೋ ಅರ್ಚಕ

(೧೦-೬೪-೯)

"ಮಹತ್ತಿಗಿಂತಲೂ ಮಹತ್ತರವಾದ ಸರಸ್ವತೀ, ಸರಯೂ, ಸಿಂಧು ಮೊದಲಾದ ನದಿಗಳು ತಮ್ಮ ಊರ್ಮಿಗಳಿಂದ ಕೂಡಿ ನಮ್ಮನ್ನು ರಕ್ಷಿಸಲು ನಮ್ಮ ಯಜ್ಞಕ್ಕೆ ಆಗಮಿಸಲಿ. ಪ್ರಕಾಶಯುತರೂ, ಮಾತೃಭೂತರೂ, ಪ್ರೇರಕರೂ ಆದ ಆ

ಮಹಾನದಿಗಳು ಘೃತಯುತವೂ ಮಧುಯುತವೂ ಆದ ತಮ್ಮ ಜಲಗಳನ್ನು ನಮಗೆ ಕರುಣಿಸಲಿ."

ಋಗ್ವೇದದ ೧೦-೭೫-೫ರಲ್ಲಿ ಸಪ್ತನದಿಗಳ ಪ್ರಸ್ತಾಪವಿದೆ.

> ಇಮಂ ಮೇ ಗಂಗೇ ಯಮುನೇ ಸರಸ್ವತೀ
> ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ ।
> ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾ
> ಆರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥

(೧೦-೭೫-೫)

ಎಲೆ ಗಂಗೇ ಹೇ ಯಮುನೇ ಹೇ ಸರಸ್ವತೀ, ಹೇ ಶತುದ್ರಿ, ಹೇ ಪರುಷ್ಣಿ ಹೇ ಆಸಿಕ್ನೆಯಿಂದೊಡಗೂಡಿದ ಮರುದ್ವೃಧೇ, ವಿತಸ್ತಾ ಮತ್ತು ಸುಷೋಮಾ ಗಳಿಂದ ಕೂಡಿದ ಆರ್ಜೀಕೀಯೇ, ನೀವು ಸಪ್ತನದಿಗಳೂ ನಮ್ಮ ಸ್ತೋತ್ರಕ್ಕೆ ಸಂತೋಷಿಸಿ. ಸಾವಧಾನದಿಂದ ಲಾಲಿಸಿ."

ಈ ಸಪ್ತನದಿಗಳಲ್ಲಿ ಸರಸ್ವತಿಗೆ ವಿಶೇಷವಾದ ಸ್ಥಾನವಿದೆ. "ಈ ನದಿಯ ಎರಡೂ ದಡದಲ್ಲಿ ಜನರು ನೆಲಸಿದ್ದಾರೆ. ಎಲ್ಲರನ್ನೂ ರಕ್ಷಿಸುವ ನೀನು ನಮ್ಮನ್ನು ಸಲಹು" ಎಂದಿದ್ದಾರೆ (೭-೯೬-೨). ಅಲ್ಲದೆ ಈ ನದಿಯ ದಡಗಳಲ್ಲಿದ್ದ ರಾಜರು ರಾಜ್ಯಗಳನ್ನು ವಿಸ್ತರಿಸಿದ್ದಾರೆ (೮-೨೧-೧೮.) ಸರಸ್ವತೀ ಕಲ್ಯಾಣಮಯಿ. ಅನ್ನವತೀ. ಸರಸ್ವತೀ ಪಾವನತರಳು. ಎಲ್ಲರನ್ನೂ ಪುನೀತಗೊಳಿಸುವವಳು. ಈ ನದಿ ಪ್ರವಾಹದಿಂದ ತುಂಬಿ ಬಂದು ಧನ ಧಾನ್ಯಗಳನ್ನು ಕರುಣಿಸಬೇಕೆಂದು ಋಷಿಗಳು ಬೇಡಿದ್ದಾರೆ [೧೦-೩೦-೧೨). ಋಗ್ವೇದದಲ್ಲಿ ಮೂರು ಸೂಕ್ತಗಳು ಸಂಪೂರ್ಣವಾಗಿ 'ಸರಸ್ವತೀ' ಸೂಕ್ತ ಗಳು. ಸರಸ್ವತಿ ಸೂಕ್ತದ ಪಠಣದಿಂದ ವಾಗ್ಮಿಯಾಗುವರೆಂದು ಋಗ್ವಿಧಾನ ಹೇಳಿದೆ.

ಸರಸ್ವತೀ ತಮ್ಮ ಯಜ್ಞದ ನಿರ್ವಾಹ ಮಾಡಲಿ ಎಂಬ ಈ ಕೆಳಗಿನ ಮಂತ್ರ ಜನಪ್ರಿಯವಾಗಿದೆ.

> ಪಾವಕಾ ನಃ ಸರಸ್ವತೀ
> ವಾಜೇಭಿರ್ವಾಜಿನೀ ವತೀ !
> ಯಜ್ಞಂವಷ್ಟು ಧಿಯಾವಸುಃ ॥

(೧-೩-೧೦)

ಸರಸ್ವತೀ ಮಾತೃಶ್ರೇಷ್ಠಳು **ಅಂಬೀತಮಾ**, ನದಿಶ್ರೇಷ್ಠಳು-**ನದೀತಮಾ** ಮತ್ತು ದೇವಿಯರಲ್ಲೆಲ್ಲಾ ಶ್ರೇಷ್ಠಳು **ದೇವೀತಮಾ.** ೧೦-೯೫-೨೪ ಮಂತ್ರದಲ್ಲಿ ಸರಸ್ವತಿ ನದಿಯನ್ನು ನದಿಗಳಲ್ಲೆಲ್ಲಾ ಮೊದಲು ಆವಿರ್ಭವಿಸಿದ ನದಿಯೆಂದೂ ಅತ್ಯಂತ ಪ್ರಮುಖಳೆಂದೂ ಪ್ರಶಂಸಿಸಲಾಗಿದೆ. ಆಕೆಯ ಜಲ ಆರೋಗ್ಯದಾಯನಿ (೪, ೩, ೧೦; ೭, ೯೬, ೩) ಆಕೆ ಸಿಂಧುಮಾತೆ [೭, ೩೬, ೬]. ಆಕೆ ಭದ್ರೆ, ಶುಭ್ರೆ [೭, ೯೬, ೨]. ಆಕೆಯ ಜಲ ಮಧುಮಧುರ; ಆಕೆ ಜನರಿಗೊಂದು ಕಬ್ಬಿಣದ ಕೋಟೆಯಿದ್ದಂತೆ (೯೫, ೧).

'ಸರಸ್ವತೀ' ಎಂಬ ಪದಕ್ಕೆ √ಸೃ (Sr)-ಚಲನೆ. ಈ ಧಾತುವಿನಿಂದಲೇ 'ಸರಸ್' ನೀರು ಎಂಬ ಪದದ ಉಗಮ.

ವೇದಕಾಲದಲ್ಲಿ ಸರಸ್ವತಿ ಒಂದು ಮಹಾನದಿಯಾಗಿತ್ತು. ಆದರೆ ಈ ನದಿಯ ಹುಟ್ಟು, ಹರಿವು ಇವುಗಳ ಬಗ್ಗೆ ಪಂಡಿತರಲ್ಲಿ ಒಮ್ಮತವಿಲ್ಲ. ಹಲವಾರು ವಿದ್ವಾಂಸರು ಈ ನದಿಯನ್ನು ಸಿಂಧು ನದಿಯೆಂದು ಗುರುತಿಸಿದ್ದಾರೆ. ಸಿಂಧು ನದಿಯ ಮೂಲ ಹೆಸರು ಸರಸ್ವತಿ ಎಂದು ಅವರ ಅಭಿಮತ. ಆರ್ಯರು ಪೂರ್ವ ಇರಾನಿನಿಂದ ಪೂರ್ವಾಭಿಮುಖವಾಗಿ ಬಂದಾಗ ಅವರು ಸಿಂಧು ನದಿಯ ತಟದಲ್ಲಿ ನೆಲೆನಿಂತರೆಂದೂ ಇರಾನಿನಲ್ಲಿದ್ದ ನದಿ 'ಹರಾಕೈಟಿ' ಅಥವಾ 'ಹರಾಕ್ವತಿ'ಯ ನೆನಪಿಗಾಗಿ ಸಿಂಧುವಿಗೇ ಸರಸ್ವತಿ ಎಂದು ಹೆಸರಿಟ್ಟರೆಂದೂ ಹೇಳುತ್ತಾರೆ. ಆದರೆ ವೇದಗಳಲ್ಲಿ 'ಹರಾಕ್ವತಿ' ಎಂಬ ಹೆಸರು ಒಮ್ಮೆಯೂ ಬಂದಿಲ್ಲ. ಅಲ್ಲದೆ ಹರಾಕ್ವತೀ ಎಂದೇ ತಾವು ನೆಲೆನಿಂತಲ್ಲಿನ ನದಿಯನ್ನು ಕರೆಯದೆ ಅದನ್ನು 'ಸರಸ್ವತಿ' ಎಂದದ್ದೂ ಅಸಂಭವ.

'ಸಿಂಧು'ವೇ 'ಸರಸ್ವತಿ' ಎಂಬ ವಾದವನ್ನು ಹಲವಾರು ವಿದ್ವಾಂಸರು ಮುಂದೊಡ್ಡಿದರೂ ಮ್ಯಾಕ್ಸ್‌ಮುಲ್ಲರ್, ಮ್ಯಾಕ್ಡೊನಾಲ್, ಕೀತ್ ಮೊದಲಾದವರು ಈ ವಾದವನ್ನು ತಳ್ಳಿ ಹಾಕಿದ್ದಾರೆ.

ಮ್ಯಾಕ್ಸ್‌ಮುಲ್ಲರರ ಪ್ರಕಾರ ವೇದ ಕಾಲದಲ್ಲಿ ಸರಸ್ವತಿ ಸಟ್ಲೆಜ್ ನದಿಯಷ್ಟೇ ದೊಡ್ಡದಾಗಿದ್ದು ಮುಂದೆ ಪಂಜಾಬಿನ ದಕ್ಷಿಣ ಪ್ರದೇಶದಲ್ಲಿ ಕೆಲವೊಂದು ಭೂಗರ್ಭ ಬದಲಾವಣೆಗಳಿಂದಾಗಿ ಮರುಭೂಮಿಯಲ್ಲಿ ಮಾಯವಾಯಿತು. ಇದು ಯಾವಾಗ ಆಯಿತೆಂಬುದನ್ನು ಭೂಗರ್ಭಶಾಸ್ತ್ರದ ದಾಖಲೆಗಳಿಂದ ಹೇಳುವುದು ಸಾಧ್ಯವಲ್ಲವಾದರೂ ಅದು ಮರುಭೂಮಿಯಲ್ಲಿ ಹುದುಗಿಹೋದದ್ದು ವೇದಕಾಲದ ಅನಂತರವೆ. ಆದರೆ ವೇದಕಾಲದ ಆರ್ಯರ ಬದುಕಿನಲ್ಲಿ ಅದು ಪಂಜಾಬಿನ ನದಿಗಳಲ್ಲಿ ಕೊನೆಯ ನದಿಯಾಗಿದ್ದು ನಿಜವಾಗಿಯೂ ಕಬ್ಬಿಣದ ಕೋಟೆಯಂತೆ ಆ ಪ್ರದೇಶವನ್ನು ಭಾರತದ ಉಳಿದ ಪ್ರದೇಶಗಳಿಂದ ಭಿನ್ನವಾಗಿ ಬೇರ್ಪಡಿಸಿರಬೇಕು.

ಸರಸ್ವತಿ ನದಿಯ ಹುಟ್ಟು, ಬೆಳವಣಿಗೆ ಹಾಗೂ ಕಾಣೆಯಾಗುವಿಕೆ ಅನೇಕ ಸ್ವಾರಸ್ಯಕರ ವಾದಗಳಿಗೆ ಎಡೆಮಾಡಿಕೊಟ್ಟಿದೆ. ವಾದ ವಿವಾದಗಳನ್ನು ಎಬ್ಬಿಸಿದೆ. ಶಿವ ಪ್ರಸಾದ್ ದಾಸ್ ಗುಪ್ತ ಎಂಬ ವಿದ್ವಾಂಸರು ಸರಸ್ವತಿ ಅಸ್ಸಾಮಿನಲ್ಲಿ ಪೂರ್ವ ಹಿಮಾಚಲ ಪ್ರದೇಶದಲ್ಲಿ ಹುಟ್ಟಿತೆನ್ನುತ್ತಾರೆ. ಅವರ ವಾದಕ್ಕೆ ಪುಷ್ಟಿ ಕೊಡಲು ಪಿಲ್‌ಗ್ರಿಮ್ ಹಾಗೂ ಪಾಸ್ಕಲ್ ಎಂಬ ವಿಖ್ಯಾತ ಭೂಗರ್ಭಶಾಸ್ತ್ರಜ್ಞರ ಅಭಿಪ್ರಾಯದ ನೆರವು ತೆಗೆದುಕೊಂಡಿದ್ದಾರೆ. ಅವರ ಪ್ರಕಾರ ಉತ್ತರ ಭಾರತದಲ್ಲಿ ಬಹಳ ದೊಡ್ಡ ನದಿ ಇದ್ದಿತು. ಅದನ್ನ ಪಾಸ್ಕಲ್ 'ಇಂಡೋ-ಬ್ರಾಹ್ಮ!' ಎಂದಿದ್ದಾನೆ. ಈ ನದಿ ಅಸ್ಸಾಮಿನಿಂದ ಪಶ್ಚಿಮ ಪಂಜಾಬಿನತ್ತ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತಿತ್ತು. ಅವರ ಪ್ರಕಾರ ಈಗಿರುವ ನದಿಗಳಾದ ಯಮುನ, ಗಂಗಾ, ಗಂಡಕಿ ಮೊದಲಾದ ನದಿಗಳೆಲ್ಲಾ ಇಂಡೋ ಬ್ರಹ್ಮದ ಉಪನದಿಗಳಾಗಿದ್ದುವು. ಈ ಇಂಡೋ ಬ್ರಹ್ಮವೇ ವೇದಕಾಲದ ಸರಸ್ವತಿ. ಹರಪ್ಪ ಮೊಹೆಂಜೊದಾರೋ ಸಂಸ್ಕೃತಿಗಳು ಹುಟ್ಟಿ ಬೆಳೆದದ್ದು ಈ ಸರಸ್ವತೀ ನದಿಯ ಪ್ರದೇಶದಲ್ಲಿಯೆ. ಆದರೆ 'ರಿವರ್ ಕ್ಯಾಪ್ಚರ್' ಎಂಬ ಭೂಗರ್ಭ ಘಟನೆಯಿಂದಾಗಿ (ನದಿ ಹಿಂದಕ್ಕೆ ಉದ್ಭವಾಗುವುದು), ಸರಸ್ವತಿ ನದಿಯ ಮೇಲ್ಭಾಗ ತುಂಡು ತುಂಡಾಯಿತು. ಇದರಿಂದಾಗಿ ಗಂಗ,

ಯಮುನ, ಗಂಡಕಿ ಮೊದಲಾದ ನದಿಗಳು ಬೇರೆ ಬೇರೆ ಸ್ವತಂತ್ರ ನದಿಗಳಾದವು. ಹೀಗಾದಾಗಲೂ ಸರಸ್ವತಿ ಸಾಕಷ್ಟು ದೊಡ್ಡ ನದಿಯಾಗಿಯೇ ಇದ್ದಿತು. ಮಾನಸ ಸರೋವರದಲ್ಲಿ ಉಗಮವಾಗಿದ್ದ ಈ ನದಿ ಸುತುದ್ರಿ, ಯಮುನ, ಘಾಘರ್ ಇವುಗಳ ಮೇಲ್ಭಾಗದಲ್ಲಿ ಹರಿದು ಅರಬ್ಬಿ ಸಮುದ್ರ ಸೇರುತ್ತಿತ್ತು. ಸಿಂಧು, ಚಂದ್ರ ಭಾಗ, ವಿಟಸ್ಟ, ವಿಪಾಸ, ಸುತುದಿ, ಇವೆಲ್ಲಾ ಸರಸ್ವತಿಯ ಉಪನದಿಗಳಾಗಿದ್ದವು. ಆದರೆ ಮತ್ತೊಮ್ಮೆ ಸರಸ್ವತಿ ನದಿ ಉದ್ದವಾಗುತ್ತ ಆಗುತ್ತ ತುಂಡಾದಾಗ ಯಮುನೆ ಹಿಂದಕ್ಕೆ ನುಗ್ಗಿ ವೇದಕಾಲದ ಸರಸ್ವತಿಯನ್ನು ತನ್ನೊಳಗೆ ಸೆಳೆದುಕೊಂಡಿತು. ಅಲ್ಲದೆ ಅಲಹಾಬಾದಿನಲ್ಲಿ ತಾನು ಗಂಗೆಯೊಡನೆ ಸಂಗಮಿಸಿತು. ಪ್ರಯಾಗದಲ್ಲಿ ಗಂಗೆ ಯಮುನೆ ಸರಸ್ವತಿಯರ ತ್ರಿವೇಣಿ ಸಂಗಮವಾಗಿ ಸರಸ್ವತಿ ಯಮುನೆಯಲ್ಲಿ ಸೇರಿದ ಗುಪ್ತಗಾಮಿನಿಯಾದಳು.

ಇದೊಂದು ಅಭಿಪ್ರಾಯ.

ಆದರೆ ಸರಸ್ವತಿ ಒಂದು ಸ್ವತಂತ್ರವಾದ ಮಹಾ ನದಿಯಾಗಿ ಹರಿಯುತ್ತಿದ್ದ ಳೆಂಬುದಕ್ಕೆ ಅನೇಕ ವಿದ್ವಾಂಸರ ಒಮ್ಮತದ ಅಭಿಪ್ರಾಯವಿದೆ.

ಸಪ್ತ ಸಿಂಧು ಪ್ರದೇಶದಲ್ಲಿ ಹರಿಯುತ್ತಿದ್ದ ಸರಸ್ವತಿ ಹಾಗೂ ಆರ್‌ಜಿಕಿಯ ಎಂಬ ನದಿಗಳು ಒಣಗಿ ಹೋಗಿ ಸಪ್ತ ಸಿಂಧು ಪ್ರದೇಶ ಐದು ನದಿಗಳು ಪಂಜಾಬ್ ಆಯಿತೆಂಬ ವಾದವೂ ಇದೆ.

ಇನ್ನೊಂದು ಸ್ವಾರಸ್ಯಕರವಾದ ಅಭಿಪ್ರಾಯವೆಂದರೆ ಈಗಿನ ರಾಜಾಸ್ಥಾನ ಮರುಭೂಮಿ ಹಿಂದೆ ಅರಬ್ಬೀ ಸಮುದ್ರದ ಭಾಗವಾಗಿತ್ತೆಂದೂ, ಆಗ ಆರಾವಳಿ ಪರ್ವತಗಳು ಹಿಮಾಲಯಕ್ಕಿಂತ ಎತ್ತರವಾಗಿದ್ದವೆಂದೂ, ಯಾವುದೋ ಕಾರಣ ದಿಂದಾಗಿ ಆರಾವಳಿ ಪರ್ವತಗಳು ಛಿದ್ರವಾಗ ತೊಡಗಿ ಅವುಗಳಿಂದ ಕಳಚಿಕೊಂಡು ಬಿದ್ದ ಭಾಗಗಳು ರಾಜಾಸ್ಥಾನದ ನದಿಯೊಳಗೆ ಬಿದ್ದು ವೇದಕಾಲದ ಕೊನೆಗೆ ರಾಜಾ ಸ್ಥಾನದ ಸಮುದ್ರ ಮರುಭೂಮಿಯಾಯಿತೆಂದೂ ಮಹಾನದಿಯಾಗಿದ್ದ ಸರಸ್ವತಿ ಈ ಮರುಭೂಮಿಯಲ್ಲಿ ಮಾಯವಾಗಿ ಈಗ ಪುಟ್ಟ ನದಿ 'ಸರಸುತಿ' [Sarasuti]ಯಾಗಿ ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಿಸಿಕೊಳ್ಳುತ್ತಾಳೆಂದೂ ಹೇಳುವವರೂ ಇದ್ದಾರೆ.

ಈ ಎಲ್ಲ ಅಭಿಪ್ರಾಯಗಳ ಮಧ್ಯೆ ಒಂದು ಮಾತು ನಿಜ. ವೇದಕಾಲದಲ್ಲಿ ಆರ್ಯರ ಬದುಕಿಗೆ ಸಮೃದ್ಧಿಯನ್ನೊದಗಿಸಿ ಅವರ ಜೀವಕ್ಕೆ ಬೇಕಾದ ಪೌಷ್ಟಿಕರ ಜಲವನ್ನಿತ್ತು ಅಲೆಮಾರಿಗಳಾಗಿದ್ದ ಆರ್ಯರು ತನ್ನ ದಂಡೆಯ ಮೇಲೆ ನೆಲೆ ನಿಂತ ಮೇಲೆ ಅವರ ಕೃಷಿಗೆ ಬೇಕಾದ ನೀರಿತ್ತು ಅವರನ್ನು ಸಂರಕ್ಷಿಸಿದ ಸರಸ್ವತಿ ವೇದ ಕಾಲದ ಅಂತ್ಯಕ್ಕೆ ತಾನೇ ಅದೃಶ್ಯಳಾದಳು.

ವೇದ ಕಾಲದ ಆರ್ಯರು ಈ ಮಹಾನದಿಗೆ ಸಲ್ಲಿಸಿದ ಪ್ರಾರ್ಥನೆ, ಕೃತಜ್ಞತೆ ಗಳು ಅನುಪಮ ಕಾವ್ಯ ಸಂಪತ್ತಿನಿಂದ ಕೂಡಿವೆ. ಆದರೆ ಈ ನದಿ ಬರ ಬರುತ್ತ 'ನದಿ' ಎಂಬುದನ್ನೇ ಮರೆಸುವಷ್ಟು ಅದೃಶ್ಯವಾಯಿತು.

ಆದರೆ ನದಿಯಾಗಿ ಮರೆಯಾದರೂ ಆ ನದಿಯ ನೀರು ಯಾವ ಸಮೃದ್ಧಿಗೆ ಕಾರಣವಾಯಿತೋ ಆ ಗುಣಗಳೇ 'ಸರಸ್ವತಿ' ನದಿಯನ್ನು ಸರಸ್ವತಿ ದೇವಿಯನ್ನಾಗಿ

ಸಿತು. ಉತ್ತಮ ಸತ್ವಾಂಶಗಳಿಂದ ಕೂಡಿದ ಖನಿಜಮಯ ನೀರು, ಅದರಲ್ಲಿ ಸ್ನಾನ ಮಾಡುವವರ, ಅದರ ಜಲವನ್ನು ಪಾನಮಾಡುವರ ಆರೋಗ್ಯವನ್ನು ವರ್ಧಿಸುತ್ತಿತ್ತು. ಜಡತ್ವವನ್ನು ಹೋಗಲಾಡಿಸಿ ಬುದ್ಧಿಯನ್ನು ಚುರುಕುಗೊಳಿಸುತ್ತಿತ್ತು. ಹೀಗೆ ದೇಹಕ್ಕೂ ಬುದ್ಧಿಗೂ ಶಕ್ತಿ ಸಾಮರ್ಥ್ಯಗಳನ್ನು ನೀಡುತ್ತಿದ್ದ 'ನೀರು' ಬತ್ತಿ ಹೋದಾಗ ಅದರ ಗುಣಗಳೇ ಪ್ರಧಾನವಾಗಿ, ಸರಸ್ವತಿ ನದಿಯೆಂಬುದು ಮರೆತು ಹೋಗಿ ಆ ಗುಣಗಳನ್ನೆಲ್ಲ ಪ್ರತಿನಿಧಿಸುವ ಪ್ರತೀಕವಾಗಿ ಉಳಿಯಿತು. ಬೆಳೆಯಿತು. ವಾಕ್ಕಿಗೆ ಸ್ಫೂರ್ತಿಯನ್ನೀಯುತ್ತಿದ್ದ ನದಿಯ ನೀರು ವಾಗ್ದೇವಿಯೇ ಆದಳು. ಬುದ್ಧಿ ಸಾಮರ್ಥ್ಯವನ್ನು ವರ್ಧಿಸುತ್ತಿದ್ದ ನೀರು, ಗ್ರಹಣಶಕ್ತಿಯನ್ನು ಚುರುಕುಗೊಳಿಸುತ್ತಿದ್ದ ನೀರು, ತನ್ನ ನೆಲದಲ್ಲಿ ನೆಲೆಸಿದ ಋಷಿ ಮುನಿಗಳನ್ನು ವಿದ್ಯಾಸಂಪನ್ನರನ್ನಾಗಿ ಮಾಡುತ್ತಿದ್ದ ನೀರು ಜಲದೇವಿಯಾಗಿ ಅದೃಶ್ಯಳಾಗಿ ವಿದ್ಯಾದೇವತೆಯಾಗಿ ಪ್ರತಿಷ್ಠಾಪಿತಳಾದಳು.

ವೇದಕಾಲದಲ್ಲಿ ನದಿಯಾಗಿ ಪೂಜ್ಯಳಾಗಿದ್ದ ಸರಸ್ವತೀ ವೇದಕಾಲದ ಅನಂತರ ಪ್ರತಿಭೆಯನ್ನು ಸ್ಫುರಿಸುವವಳಾಗಿ ಪೂಜನೀಯಳಾದಳು. ಚರಿಸುತ್ತಿದ್ದವಳು ಸ್ಥಿರವಾಗಿ ನಿಂತಳು.

ವೇದಕಾಲದ ಅನಂತರದಲ್ಲಿ ಬಂದ ಪುರಾಣಗಳು ಸರಸ್ವತಿಯನ್ನು ಬ್ರಹ್ಮನ ರಾಣಿಯನ್ನಾಗಿಸಿದವು. ದೇವಿಭಾಗವತ ಸರಸ್ವತಿ ಶ್ರೀ ಕೃಷ್ಣನ ನಾಲಗೆಯಿಂದ ಹುಟ್ಟಿದಳೆಂದು ಹೇಳುತ್ತದೆ. ಶ್ರೀಕೃಷ್ಣನು ರಾಧೆಯನ್ನು ಮಾತ್ರ ತನ್ನ ಬಳಿ ಇಟ್ಟುಕೊಂಡು ಸರಸ್ವತಿಯನ್ನು ವಿಷ್ಣುವಿಗೆ ಅರ್ಪಿಸಿದನಂತೆ ಪುರಾಣದ ಪ್ರಕಾರ ವಿಷ್ಣುವಿಗೆ ಮೂರು ಜನ ಮಡದಿಯರು–ಗಂಗೆ, ಲಕ್ಷ್ಮಿ, ಸರಸ್ವತಿ. ಆದರೆ ಒಂದು ಸಲ ವಿಷ್ಣು ಗಂಗೆ ಇವರ ಪ್ರೇಮವನ್ನು ಕಂಡು ಸರಸ್ವತಿ ಅಸೂಯೆಯಿಂದ ಮಾತಾಡಿದಳು. ಆಗ ವಿಷ್ಣು ಸರಸ್ವತಿಯನ್ನು ಬ್ರಹ್ಮನಿಗೆ ಕೊಟ್ಟನು. ಗಂಗೆ ಸರಸ್ವತಿಗೆ ಭೂಮಿಯಲ್ಲಿ ನದಿಯಾಗಿ ಹರಿ ಎಂದು ಶಾಪಕೊಟ್ಟಳೆಂದೂ, ಸರಸ್ವತಿ ಗಂಗೆಗೆ ಇದೇ ರೀತಿ ಶಾಪ ಕೊಟ್ಟಳೆಂದೂ ಲಕ್ಷ್ಮಿ ಗಂಗೆಯ ಪಕ್ಷವನ್ನು ವಹಿಸಿದಳೆಂದು ಅವಳಿಗೂ ಶಾಪ ಬಂದು ಅವಳೂ ನದಿಯಾದಳೆಂದು ಪುರಾಣದ ಕತೆ ಹೇಳುತ್ತದೆ. ಪುರಾಣದ ಕತೆಯ ಪ್ರಕಾರ ಸರಸ್ವತಿ ವಿಷ್ಣು ಪತ್ನಿ. ಅಂಶತಃ ನದಿ ಮತ್ತು ಬ್ರಾಹ್ಮೀ ರೂಪದಲ್ಲಿರುವವಳು. ಬ್ರಹ್ಮನ ರಾಣಿ ಸರಸ್ವತಿ ಎಂದಾಗ ಮನುಷ್ಯ ಸೃಷ್ಟಿಯಲ್ಲಿನ ಕಲ್ಪನಾ ಶಕ್ತಿ, ಪ್ರತಿಭಾ ಸಂಪತ್ತು, ಬುದ್ಧಿ ಕೌಶಲ್ಯ ಇವುಗಳಿಗೆ ಮೂರ್ತ ಸ್ವರೂಪ ಕೊಟ್ಟನೆಂದು ಮಾತ್ರ ಅರ್ಥೈಸಿದರೆ ಪುರಾಣ ಕಥೆ ಅರ್ಥಗರ್ಭಿತವಾಗುತ್ತದೆ.

ಪುರಾಣದ ಕಥೆ ಏನೇ ಇರಲಿ ಇಂದು ಸರಸ್ವತಿ ಗಣಪತಿಯಷ್ಟೇ ಪೂಜ್ಯ. ಈ ಶಕ್ತಿಯ ಸಾರ್ವತ್ರಿಕತೆ ಅದ್ಭುತ. ಈಕೆಯ ಪೂಜೆಯಲ್ಲಿ ಜಾತೀಯತೆಯಿಲ್ಲ. ಗಂಡು ಹೆಣ್ಣೆಂಬುದಿಲ್ಲ ವಿದ್ಯೆ, ಸಾಹಿತ್ಯ, ಕಲೆಗಳ ಅಧಿದೇವತೆಯಾದ ಸರಸ್ವತಿ ಭಾರತೀಯರ ಕಲ್ಪನೆಯಲ್ಲಿ ಧೀ ಶಕ್ತಿ ಪ್ರತೀಕ. ನಾಲ್ಕು ಕೈಯುಳ್ಳ ಸರಸ್ವತಿಯ ಒಂದು ಕೈಯ್ಯಲ್ಲಿ ಪುಸ್ತಕ, ಇನ್ನೊಂದರಲ್ಲಿ ಜಪಮಾಲೆ, ಇನ್ನೆರಡು ಕೈಗಳಲ್ಲಿ ಒಂದರಲ್ಲಿ ಕಮಂಡಲು

ಇನ್ನೊಂದರಲ್ಲಿ ವೀಣೆ. ಆಕೆ ಶುಕ್ಲ ವರ್ಣಳು. ಶುಕ್ಲಾಂಬರಧರಳು. ಶ್ವೇತ ಪದ್ಮಾಸನೆ. ನವರಾತ್ರಿಯ ಸಪ್ತಮಿಯ ಅಧಿದೇವತೆ. ಈಕೆ ದೇವಿಶಕ್ತಿಯ ತ್ರಿಸ್ವರೂಪಗಳಲ್ಲೊಬ್ಬಳು. ಈ ತ್ರಿಸ್ವರೂಪಗಳೇ ಮಹಾವಿಷ್ಣು, ಮಹಾ ಸರಸ್ವತಿ, ಮಹಾಕಾಳಿ. ಸರಸ್ವತಿ ಹಂಸವಾಹಿನಿಯೂ ಹೌದು. ಹಂಸ, ಪದ್ಮ ಇವೆರಡೂ ಆಧ್ಯಾತ್ಮಿಕ ಪ್ರತೀಕಗಳು. ಕಮಲ ಹೃದಯತತ್ವದ ವಿಕಸನ. ಹಂಸ ಆತ್ಮತತ್ವ ಪರಮಾತ್ಮ ತತ್ವದಲ್ಲಿ ತನ್ನ ಪರಿಪೂರ್ಣತೆಯನ್ನು ಅರಿತುಕೊಳ್ಳುವುದರ ಚಿನ್ಹೆ. ಪರಮಹಂಸತ್ವ ಅಧ್ಯಾತ್ಮದ ಉತ್ತುಂಗ ಸ್ಥಿತಿ, ಸಿದ್ಧಿ. ವೇದಕಾಲದ "ಶುಭ್ರಾ" ಪದಪಯೋಗವೇ ಇಂದು ಸರಸ್ವತಿಯನ್ನು "ಶುಕ್ಲ ವರ್ಣ ಶ್ವೇತಪದಾಶನಸ್ಥಿತಾ" ಎಂದಾಗಿಸಿತು.

ನದಿಯಾಗಿ ಹರಿಯುತ್ತಿದ್ದ ಪ್ರಕೃತಿಯನ್ನು ನದೀಮಾತೆಯಾಗಿ ಸ್ಮರಿಸಿ, ನದೀ ಮಾತೆಯನ್ನು ದೇವೀ ಶಕ್ತಿಯಾಗಿ ಪರಿವರ್ತಿಸಿ ಜ್ಞಾನ ದೇಗುಲದಲ್ಲಿ ಪ್ರತಿಷ್ಠಾಪಿಸಿದ ಸಾಧನೆ ಸಿದ್ಧಿಗಳು ನಾಗರೀಕತೆಯ ವಿಶಿಷ್ಟ ಮೈಲುಗಲ್ಲುಗಳು. ಆದರೆ ಈ ಇತಿಹಾಸವೂ ಹೊಸ ತಿರುವನ್ನು ಪಡೆಯಲು ಸಾಧ್ಯ. ಸರಸ್ವತೀ ನದಿಯ ಮೂಲವನ್ನು ಹುಡುಕಿ ಆ ಮಹಾನದಿ ಹರಿದು ಹೋಗಿ ಬತ್ತಿಹೋದ ದಾರಿಯನ್ನು ಮತ್ತೆ ಕಂಡುಹಿಡಿಯುವ ಪ್ರಯತ್ನದಲ್ಲಿ ಭಾರತೀಯ ವಿಜ್ಞಾನಿಗಳು ಯಶಸ್ವಿಯಾದರೆ ರವಿವರ್ಮನ ಕುಂಚದಿಂದ ಚಿತ್ರಿತವಾಗಿ ಕಲ್ಲಿನ ಮೇಲೆ ಭದ್ರವಾಗಿ ಕುಳಿತಿರುವ ಸರಸ್ವತಿ ಮತ್ತೆ ಮಹಾನದಿಯಾಗಿ ಸರಿದಾಳು. ರಾಜಾಸ್ಥಾನದ ಮರುಭೂಮಿಯನ್ನು ಫಲಭರಿತವನ್ನಾಗಿ ಮಾಡಿಯಾಳು.

ಶ್ರುತಿ, ಮಂತ್ರಶಾಸ್ತ್ರಗಳಲ್ಲಿ ಪ್ರಣವ-ಒಂದು ಕಿರುನೋಟ

ಡಾ. ಎಸ್. ಆರ್. ಲೀಲ

ಹಿರಿದಾದದ್ದನ್ನು ಕಿರಿದಾಗಿ ಹೇಳಬೇಕೆಂಬುದು ನಮ್ಮ ಪ್ರಾಚೀನರಲ್ಲಿ ಕಾಣುವ ಒಂದು ಪ್ರಬಲ ಆಕಾಂಕ್ಷೆ. ಇದರಿಂದಲೇ ಜಗತ್ತಿನಲ್ಲಿ ಎಲ್ಲೂ ಕಾಣದ 'ಸೂತ್ರಸಾಹಿತ್ಯ' ಇಲ್ಲಿ ಹುಟ್ಟಿಕೊಂಡಿತು. ವ್ಯಾಕರಣ ಸೂತ್ರಗಳು, ಮೀಮಾಂಸಾ ಸೂತ್ರಗಳು, ನ್ಯಾಯ ಸೂತ್ರಗಳು, ವೈಶೇಷಿಕ ಸೂತ್ರಗಳು, ಬ್ರಹ್ಮಸೂತ್ರಗಳು—ಹೀಗೆ ಎಲ್ಲ ಗಹನ ಗಂಭೀರ ಶಾಸ್ತ್ರಗಳೂ ಸಣ್ಣ ಸಣ್ಣ ಸೂತ್ರಗಳಲ್ಲಿ ಮೈದಾಳಿವೆ.

ಅವರ ಮಹತ್ತನ್ನು ಅಣುರೂಪದಲ್ಲಿ ಸಾಧಿಸಬೇಕೆಂಬ ಈ ಆಸೆ ನಿಜವಾಗಿಯೂ ಸಾರ್ಥಕವಾಗಿರುವುದು ಪ್ರಣವದ ಪ್ರತಿಪಾದನೆಯಲ್ಲಿ. ಅನೇಕ ಸಂಪುಟಗಳಲ್ಲಿ ಸುದೀರ್ಘವಾಗಿ ವಿವರಿಸಬೇಕಾದ ಒಂದು ಇಡೀ ದರ್ಶನವನ್ನು 'ಓಂ'ಕಾರವು ಅಡಗಿಸಿಕೊಂಡಿದೆ.

'ಓಂ'ಕಾರವು ಅ, ಉ, ಮ ಕಾರಗಳು ಸೇರಿ ಆಗಿದೆ. ಮೊದಲೆರಡು ಸೇರಿ (ಗುಣ ಸಂಧಿ) ಓಕಾರವಾಗಿ, ಮೇಲೆ ಚಂದ್ರ ಬಿಂದು ಅಥವಾ ನಾದ ಮತ್ತು ಬಿಂದು-ಅರ್ಧ ಚಂದ್ರದಲ್ಲಿ ಕೂಡಿಸಿದ ಬಿಂದುವಿನ ರೂಪದಲ್ಲಿ ಕೊಡಲಾಗಿದೆ—ಓಂ ||

ಭಾರತೀಯ ದರ್ಶನದ ಎರಡು ಆಧಾರ ಸ್ತಂಭಗಳೆಂದರೆ ಒಂದು "ಅವಿಕಾರ" [Changelessness], ಇನ್ನೊಂದು 'ವಿಕಾರ' [Change]. ಜಗನ್ಮೂಲವಾದ ಪರಬ್ರಹ್ಮದಲ್ಲಿ ವಿಕಾರವಿಲ್ಲ. ಶಕ್ತಿಯಾದ ಬ್ರಹ್ಮದಲ್ಲಿ ವಿಕಾರವಿದೆ. ಅವಿಕಾರಿಯಾದ ಬ್ರಹ್ಮ ವಿಕಾರಿಯಾದ ಜಗತ್ತಿನಲ್ಲಿ ಸ್ವಸ್ವರೂಪಕ್ಕೆ ಚ್ಯುತಿ ಬಾರದಂತೆ ಇದೆ. ಹೇಗೆಂದರೆ, ಸಾಮಾನ್ಯರ ಅನುಭವದಲ್ಲಿ ನಾಮರೂಪಾತ್ಮಕವಾದ (ವಿಕಾರಿ) ಜಗತ್ತಿದೆ. ಯೋಗಿಯ ಅನುಭವದಲ್ಲಿ ಅದ್ವೈತ ಸಮಾಧಿ ಸ್ಥಿತಿ (ಅವಿಕಾರಿ) ಇದೆ. ಎರಡೂ 'ಅನುಭವಗಳೇ'. ಹೇಗೆಂಬುದು ಮಾತ್ರ ನಿಗೂಢ ಇದು ವೇದಾಂತಶಾಸ್ತ್ರ.

ಇದೇ ದರ್ಶನವನ್ನು, ಮಂತ್ರಶಾಸ್ತ್ರವು ತನ್ನದೇ ಆದ ರೀತಿಯಲ್ಲಿ ಪ್ರತಿಪಾದಿಸುತ್ತದೆ, ತಾನು ಪ್ರತಿಪಾದಿಸುವ ವಿಷಯಕ್ಕನುಸಾರವಾದ ಪರಿಭಾಷೆಯಲ್ಲಿ. ಮಂತ್ರಶಾಸ್ತ್ರದ ವಿಷಯ ಶಬ್ದ. ಮಂತ್ರಗಳು 'ಶಬ್ದ'ದ ನಾನಾರೂಪಗಳು,

ಎಲ್ಲಿ ಸ್ಪಂದವಿದೆಯೋ ಅಲ್ಲಿ ಶಬ್ದವಿದೆ. ಎಲ್ಲಿ ಸ್ಪಂದವಿಲ್ಲವೋ ಅಲ್ಲಿ ಶಬ್ದವಿಲ್ಲ. ಪರಬ್ರಹ್ಮ ನಿರ್ವಿಕಾರ. ಆದ್ದರಿಂದ ನಿಸ್ಪಂದ, ಅಶಬ್ದ. ಈ ನಿರ್ವಿಕಾರ ಸ್ಥಿತಿಗೆ ಚ್ಯುತಿ ಬಾರದಂತೆ ಸೃಷ್ಟಿಸ್ಪಂದ ಮೂಡಿದಾಗ ಅದೇ ಚರಾಚರ ಜಗತ್ತಿಗೆ ಕಾರಣವಾಗುತ್ತದೆ. ಪರಬ್ರಹ್ಮದ ಈ ಅಂಶವೇ ಸಕ್ರಿಯ ಬ್ರಹ್ಮ, ಈಶ್ವರ, ಶಕ್ತಿ, ಮಾಯೆ, ಶಬ್ದಬ್ರಹ್ಮ ಮುಂತಾದ ನಾನಾ ಹೆಸರುಗಳಿಂದ ಕರೆಯಲ್ಪಡುತ್ತದೆ. ಪರಬ್ರಹ್ಮ ನಿಸ್ಪಂದ, ನಿಶ್ಶಬ್ದ;

ಶಬ್ದಬ್ರಹ್ಮ ಸಸ್ಪಂದ, ಪರಶಬ್ದ. ಶಬ್ದಬ್ರಹ್ಮವೇ ಸೃಷ್ಟಿಮೂಲ. ಏಕೆಂದರೆ ಜಗತ್ತು ನಾಮರೂಪಾತ್ಮಕ, ಶಬ್ದಶಬ್ದಾರ್ಥಾತ್ಮಕ. ಶಬ್ದಬ್ರಹ್ಮದ ಮೊದಲ ಸೃಷ್ಟಿಯು ಸ್ಪಂದವೇ ನಾದ ಅಥವಾ 'ಓಂ'ಕಾರ. ಇಲ್ಲಿಂದಲೇ ಎಲ್ಲ ಶಬ್ದಗಳು ಅಂದರೆ ಧ್ವನ್ಯಾತ್ಮಕವಾದ (ಭೇರಿ, ಮೃದಂಗಾದಿಗಳಿಂದ ಹೊರಡುವ ಧ್ವನಿ) ಮತ್ತು ವರ್ಣಾತ್ಮಕವಾದ (ಭಾಷೆಗಳು) ಶಬ್ದಗಳು ಹೊಮ್ಮುವುವು. ಈ ನಿಟ್ಟಿನಿಂದ ನೋಡಿದಾಗ ಓಂಕಾರವೇ ಸೃಷ್ಟಿಮೂಲವಾಗುತ್ತದೆ. ತೈತ್ತಿರೀಯೋಪನಿಷತ್ತು ಹೇಳುತ್ತದೆ—

ಓಮಿತಿ ಬ್ರಹ್ಮ, ಓ ಮಿತೀದಗಂ ಸರ್ವಂ
ಓಮಿತಿ ಬ್ರಹ್ಮಾ ಪ್ರಸೌತಿ ॥

ಬ್ರಹ್ಮಸೃಷ್ಟಿ (ಪ್ರಸೂತಿ) ಪ್ರಾರಂಭವಾಗುವುದು 'ಓಂ'ಕಾರದಿಂದ. ಸರ್ವವ್ಯಾಪಿಯಾದ ಪರಬ್ರಹ್ಮದ ಮೊದಲ ವ್ಯಕ್ತರೂಪ ಓಂ. ಈ ಓಂ ಕಾರವೇ ಉಳಿದೆಲ್ಲ ಸೃಷ್ಟಿಗೂ ಆಧಾರ, ಬೀಜ, ಉತ್ಪತ್ತಿಸ್ಥಾನ. ಆದಿಶಕ್ತಿಯ ಮೊದಲ ಸ್ಪಂದವೇ ಓಂ ಕಾರವಾದ್ದರಿಂದ, ಮಂತ್ರಶಾಸ್ತ್ರದಲ್ಲಿ ಇದನ್ನು ಮಹಾಬೀಜವೆನ್ನುತ್ತಾರೆ. ಬೀಜಾಕ್ಷರಗಳಲ್ಲಿ ಸರ್ವಪ್ರಥಮ ಓಂಕಾರ. ಇಷ್ಟಮಂತ್ರಗಳಲ್ಲಿ ಪ್ರಧಾನ ಓಂಕಾರ. ಜಪ ಮಾಡುತ್ತಾ ಮಾಡುತ್ತಾ ಕೊನೆಗೊಂದು ದಿನ ಜಪಕರ್ತನ ಮನಸ್ಸು ಲೀನವಾಗುವುದು ಈ ಓಂ ಕಾರದಲ್ಲಿ. ಮಂತ್ರಶಾಸ್ತ್ರ ಪ್ರಕ್ರಿಯೆಗನುಸಾರವಾಗಿ ಹೇಳಬೇಕೆಂದರೆ, ಕುಂಡಲಿನೀ ಶಕ್ತಿಯು ಷಟ್‌ಚಕ್ರ (ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ) ಭೇದನ ಮಾಡುವಾಗ ಯೋಗಿಯು ಈ ಮಹಾಬೀಜ ಮಂತ್ರವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಮನುಷ್ಯನಲ್ಲಡಗಿರುವ ಅಮೇಯ ಆಧ್ಯಾತ್ಮಿಕ ಸಂಪತ್ ಸಾಮರ್ಥ್ಯವನ್ನು ಎತ್ತಿತೋರುವ ಕಠೋಪನಿಷತ್ತು ಓಂಕಾರದ ಮಹಿಮೆಯನ್ನು ಅದ್ವಿತೀಯವಾಗಿ ಎತ್ತಿ ಹಿಡಿಯುತ್ತದೆ. ಶ್ರೇಯಸ್ಸು, ಪ್ರೇಯಸ್ಸುಗಳೆರಡರ ದಾರಿಯೂ ಮನುಷ್ಯನಿಗೆ ತೆರೆದಿರುವಾಗ ಧೀರಬಾಲಕ ನಚಿಕೇತ ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನಷ್ಟೆ. ತಾನು ಕೊಟ್ಟ ವರಕ್ಕೆ ಕಟ್ಟುಬಿದ್ದು ಯಮದೇವ ನಚಿಕೇತನಿಗೆ ಬ್ರಹ್ಮವಿದ್ಯೆಯನ್ನೇ ಉಪದೇಶಿಸಬೇಕಾಗಿಬರುತ್ತದೆ. ಗಹನವೂ, ನಿಗೂಢವೂ ಆದ ಈ ವಿದ್ಯೆಯನ್ನು ವಿಸ್ತಾರವಾಗಿಯೇ ಬೋಧಿಸುತ್ತಾನೆ, ಬ್ರಹ್ಮವಿದ್ಯಾಚಾರ್ಯನಾದ ಯಮದೇವ. ತಾನು ಉಪದೇಶಿಸಲಿರುವ ಪರಾವಿದ್ಯೆಗೆ ಪೀಠಿಕೆಯಾಗಿ ಹೇಳುತ್ತಾನೆ :

ಸರ್ವೇ ವೇದಾ ಯತ್ಪದಮಾಮನಂತಿ
ತಪಾಂಸಿ ಸರ್ವಾಣಿ ಚ ಯದ್ವದಂತಿ
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ
ತತ್ತೇ ಪದಂ ಸಂಗ್ರಹೇಣ ಬ್ರವೀಮಿ
'ಓಮಿತ್ಯೇತತ್' ॥

ಸಕಲವೇದಗಳು ಒಕ್ಕೊರಲಿನಿಂದ ಯಾವ ಧ್ಯೇಯವನ್ನೇ ಪ್ರತಿಪಾದಿಸುತ್ತಿವೆಯೋ, ಎಲ್ಲ ತಪಸ್ಸು ಯಾವುದನ್ನೇ ಕುರಿತು ಹೇಳುತ್ತಿದೆಯೋ, ಯಾವುದನ್ನು

ಲಕ್ಷಿಸಿ ಬ್ರಹ್ಮಚರ್ಯ, ಸನ್ಯಾಸ ವ್ರತವನ್ನಾಚರಿಸುತ್ತಾರೋ, ಆ ಸ್ಥಾನವನ್ನು ಸಂಗ್ರಹವಾಗಿ ಹೇಳುವೆ. ಅದೇ 'ಓಂ' ಎಂಬುದು.

ವೇದಾಧ್ಯಯನ, ತಪಾಚರಣೆ, ವೈರಾಗ್ಯದಿಂದ ಪಡೆಯಬೇಕಾದ ಒಂದೇ ವಸ್ತು, ಸೇರಬೇಕಾದ ಒಂದೇ ಗುರಿ 'ಓಂ'. ಈ ಮಹಾಮಂತ್ರದ ಗರಿಮೆಯನ್ನು ಅದೇ ಕಠೋಪನಿಷತ್ತು ಮತ್ತೆ ಮೊಳಗುತ್ತದೆ.

ಏತದಾಲಂಬನಂ ಶ್ರೇಷ್ಠಂ ಏತದಾಲಂಬನಂ ಪರಂ ।
ಏತದಾಲಂಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ ॥

ಓಂಕಾರವೇ ಶ್ರೇಷ್ಠವಾದ ಆಲಂಬನ, ಮಾಧ್ಯಮ. ಇದಕ್ಕಿಂತ ಮಿಗಿಲಾದದ್ದು ಇಲ್ಲವೇ ಇಲ್ಲ. ಬ್ರಹ್ಮಸಾಕ್ಷಾತ್ಕಾರಕ್ಕೆ ಪ್ರಣವೋಪಾಸನೆಗಿಂತ ಮಿಗಿಲಾದ ಉಪಾಯ ವಿಲ್ಲ.

ಮಹಾನಾರಾಯಣೋಪನಿಷತ್ತು ಪ್ರಣವಮಂತ್ರದ ಸ್ವರೂಪವನ್ನೂ, ವಿನಿಯೋಗವನ್ನು ಹೇಳುತ್ತದೆ.

ಓಮಿತ್ಯೇಕಾಕ್ಷರಮ್ ಬ್ರಹ್ಮ ।...
ಸಾಯುಜ್ಯಂ ವಿನಿಯೋಗಮ್ ।

ಬ್ರಹ್ಮಸಾಯುಜ್ಯದಲ್ಲೇ ಈ ಮಂತ್ರದ ವಿನಿಯೋಗ.

ಅ, ಉ, ಮ ಕಾರಗಳು ಓಂಕಾರದ ಅವಯವಗಳೆಂದಾಗ ಒಂದು ಸಂದೇಹ ಮೂಡಬಹುದು. ಆದ್ಯಸ್ಪಂದವು ಓಂಕಾರವಾಗಿರುವಾಗ ಮತ್ತು ಅದರಿಂದಲೇ ವರ್ಣಾತ್ಮಕವಾದ, ಧ್ವನ್ಯಾತ್ಮಕವಾದ ಸಕಲ ಶಬ್ದಗಳೂ ಹೊಮ್ಮುವಾಗ ಅಕಾರಾದಿ ಗಳಿಗೆ ಓಂಕಾರವು ಕಾರಣ ಸ್ಥಾನದಲ್ಲಿರುವಾಗ, ಕಾರ್ಯವಾದ ಅಕಾರ, ಉಕಾರ, ಮಕಾರಗಳು ಹೇಗೆ ತಾನೇ ತಮ್ಮ ಕಾರಣವನ್ನು ತೋರುತ್ತವೆ? ಎಂಬುದೇ ಆ ಸಂದೇಹ.

ಆದ್ಯಸ್ಪಂದವು 'ಓಂ'ಕಾರ ಸ್ವರೂಪಿಯಾಗಿದೆ ಎಂದು ಹೇಳುವುದರ ಅರ್ಥ ಇಷ್ಟೆ. ಸ್ಥೂಲ ಶ್ರವಣೇಂದ್ರಿಯಕ್ಕೆ ಕೇಳಬಹುದಾದ ಆದ್ಯಸ್ಪಂದದ ಸ್ಥೂಲ ರೂಪ 'ಓಂ'. ಆದ್ಯಸ್ಪಂದಕ್ಕೆ ವಾಗಿಂದ್ರಿಯ ತೊಡಿಸಬಹುದಾದ ಆಕಾರ 'ಓಂ'ಕಾರ. ವೈಖರೀ ವಾಕ್ಕು ಆದ್ಯಸ್ಪಂದವನ್ನು ಹೊರಗೆಡಹುವ ಪರಿ 'ಓಂ'.

ಓಂಕಾರದ ಅವಯವಗಳಾದ ಅ, ಉ, ಮ ಕಾರಗಳು ಸೃಷ್ಟಿ, ಸ್ಥಿತಿ, ಲಯ ಕರ್ತರಾದ ತ್ರಿಮೂರ್ತಿಗಳ ಪ್ರತೀಕವೂ ಹೌದು. ಸೃಷ್ಟಿ, ಸ್ಥಿತಿ, ಲಯಗಳು ಅನು ದಿನವೂ, ಅನುಕ್ಷಣವೂ ನಡೆಯುತ್ತಿರುವ ಕ್ರಿಯೆ. ಆಧುನಿಕ ವಿಜ್ಞಾನ ಪ್ರಚುರಪಡಿ ಸಿರುವ "Theory of Conservation of Energy" ಶಕ್ತಿಸ್ಥಿತಿ ಸಿದ್ಧಾಂತವು ಈ ತ್ರಿಮೂರ್ತಿ ತತ್ವಕ್ಕೆ ಪೋಷಕವಾಗಿದೆ ಎಂದೇ ಹೇಳಬಹುದು. ಏಕೆಂದರೆ ಸೃಷ್ಟಿ ಯಾದದ್ದು ಲಯವಾಗುತ್ತಲೇ ಇದೆ. ಲಯವಾಗುವವರೆಗೆ ಸ್ಥಿತಿಯಲ್ಲಿರುತ್ತದೆ. ಲಯ ವಾದದ್ದೇ ಪುನಃ ಸೃಷ್ಟಿಯಾಗುತ್ತದೆ. ಓಂಕಾರವು ಈ ಅರ್ಥದಲ್ಲಿ ಮೂಲಶಕ್ತಿಯ ಪ್ರತೀಕವಾಗಿದೆ.

ಶ್ರುತಿಯ ತತ್ವಪ್ರತಿಪಾದನೆಗೆ ಮಂತ್ರಶಾಸ್ತ್ರವು, ಪ್ರಯೋಗದ ವಿಧಿ, ವಿಧಾನ ಗಳನ್ನು ನಿರೂಪಿಸಿ ಓಂಕಾರವನ್ನು ಸಾಕ್ಷಾತ್ಕಾರ ಸಾಧನವನ್ನಾಗಿ ರೂಪಿಸಿವೆ.

ಶ್ವೇತಾಶ್ವತರೋಪನಿಷತ್ತಿನಲ್ಲಿ ಧ್ಯಾನಯೋಗ

ಡಾ. ವ್ಹಿ. ಎಸ್. ಕಂಬಿ

ಹಲವು ಉಪನಿಷತ್ತುಗಳು ಪರಬ್ರಹ್ಮ ಸಾಕ್ಷಾತ್ಕಾರಕ್ಕಾಗಿರುವ ಸಾಧನಗಳಲ್ಲಿ ಒಂದಾದ ಧ್ಯಾನವನ್ನು ಸೂಚಿಸುತ್ತವೆ. ಶ್ವೇತಾಶ್ವತರೋಪನಿಷತ್ತು ಧ್ಯಾನರೂಪದ ಸಾಧನವನ್ನು 'ಧ್ಯಾನಯೋಗ'ವೆಂದು ಹೆಸರಿಸಿದೆ. ಧ್ಯಾನಯೋಗವೆಂದು ಹೆಸರಿಸಿದ ಉಪನಿಷತ್ತು ಅದರ ತಂತ್ರ, ಸಾಧನ ರೀತಿ, ಮತ್ತು ಸಾಧನದ ಗುರಿ ಇವನ್ನು ತಿಳಿಸಿದೆ. ಉಪನಿಷತ್ತು ತನ್ನ ಮೊದಲನೆಯ ಅಧ್ಯಾಯದ ಮೂರನೆಯ ಮಂತ್ರದಲ್ಲಿ ಈ ಸಾಧನದ ನಾಮನಿರ್ದೇಶನವು ಇರುತ್ತದೆ :

ತೇ ಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಮ್ ।
ಯಃ ಕಾರಣಾನಿ ನಿಖಿಲಾನಿ ತಾನಿ ಕಾಲಾತ್ಮಯುಕ್ತಾನ್ಯಧಿತಿಷ್ಠತ್ಯೇಕಃ ॥

ಶ್ವೇ. ಉ. ೧.೩

[ಧ್ಯಾನಯೋಗದಲ್ಲಿ ಸಮಾಹಿತರಾದ ಆ ಋಷಿಗಳು ತನ್ನ ಗುಣಗಳಿಂದ ಮುಚ್ಚಲ್ಪಟ್ಟ ದೇವನ ಆತ್ಮಶಕ್ತಿಯನ್ನು ಸಾಕ್ಷಾತ್ಕರಿಸಿದರು. ಅದ್ವಿತೀಯನಾದ ಆ ಪರಮಾತ್ಮನು ಕಾಲದಿಂದ ಆತ್ಮನವರೆಗಿರುವ ಕಾರಣಗಳನ್ನೆಲ್ಲ ನಿಯಮಿಸುತ್ತಾನೆ.] ಹೀಗೆ ಅನ್ಯಪಕ್ಷಗಳನ್ನೆಲ್ಲ ನಿರಾಕರಿಸಿ, ಬೇರೆ ಪ್ರಮಾಣಗಳಿಗೆ ಅಗೋಚರವಾದ ವಸ್ತುವಿನ ವಿಷಯದಲ್ಲಿ ಮತ್ತಾವ ಉಪಾಯವನ್ನು ನೋಡದೆ ಧ್ಯಾನಯೋಗದ ಮೂಲಕ ಪರಮ ಮೂಲ ಕಾರಣವನ್ನು ಋಷಿಗಳು ತಾವೇ ಪಡೆದುಕೊಂಡರು ಎಂಬುದಿಲ್ಲಿ ವ್ಯಕ್ತವಾಗಿದೆ. ಈ ಮಂತ್ರದಲ್ಲಿ ದೇವನ ಆತ್ಮಶಕ್ತಿಯ ಸಾಕ್ಷಾತ್ಕಾರವಾಗಿರುವುದರ ಉಲ್ಲೇಖವಿರುತ್ತದೆ. ಧ್ಯಾನಯೋಗದ ಪ್ರಕಾರ ಪರಬ್ರಹ್ಮದ ನಾನಾ ಸ್ವರೂಪಗಳ ಧ್ಯಾನವನ್ನು ಮಾಡಲು ಸೂಚಿಸಿದ್ದೂ ಉಂಟು ಆದರಲ್ಲಿ 'ಓಂ' ಕಾರದ ಧ್ಯಾನವೇ ಸರ್ವೋತ್ತಮವೆಂದು ಗೊತ್ತಾಗುತ್ತದೆ. ಚಿತ್ತದ ಏಕಾಗ್ರತೆಯೇ ಧ್ಯಾನವೆಂದು ಟಿಪ್ಪಣಿಯಲ್ಲಿ ತಿಳಿಸಲಾಗಿದೆ.

ಧ್ಯಾನಯೋಗಿಗೆ ದೇವರ ಅನುಗ್ರಹವೂ ಬಹಳ ಅವಶ್ಯವಿರುತ್ತದೆ ಎಂಬ ಮಾತನ್ನು ಉಪನಿಷತ್ತು ತಿಳಿಸಿದ್ದು ಗಮನಾರ್ಹ ಸಂಗತಿಯಾಗಿದೆ. ದೇವರ ಅನುಗ್ರಹದ ಮಾಹಿತಿಯನ್ನು ಕುರಿತು ಬೇರೆ ಉಪನಿಷತ್ತುಗಳೂ ತಿಳಿಸಿರುವುದು ಮಾರ್ಜಾಲ ಕಿಶೋರ ನ್ಯಾಯ ಭಕ್ತಿಯನ್ನು ಸ್ಮರಣೆಗೆ ತರುತ್ತದೆ. ದೇವತಾ ಪ್ರತ್ಯಕ್ಷಕ್ಕೆ ಪುರುಷಪ್ರಯತ್ನದೊಡನೆ ದೇವರ ಅನುಗ್ರಹವು ತೀವ್ರ ಫಲಪ್ರದವೆಂಬುದರ ಸೂಚನೆಯೂ ಇಲ್ಲಿ ಇರುತ್ತದೆ.

...ಜುಷ್ಟಸ್ತತಸ್ತೇನಾಮೃತತ್ವಮೇತಿ ॥ ಶ್ವೇ. ಉ. ೧.೬॥

[ಯಾವಾಗ ಅವನು ಈಶ್ವರನಿಂದ ಅನುಗ್ರಹಿಸಲ್ಪಡುವನೋ ಆಗ ಅಮೃತತ್ವವನ್ನು ಹೊಂದುತ್ತಾನೆ.] ಈ ಅನುಗ್ರಹದ ಮಹತ್ವವನ್ನು ಮುಂಡಕ ಉಪನಿಷತ್ತು ತಿಳಿಸಿದ್ದು ಈ ಸಂದರ್ಭದಲ್ಲಿ ಸ್ಮರಣಾರ್ಹವಾಗಿದೆ. ಮುಂಡಕವು ಹೀಗೆ ಹೇಳುತ್ತದೆ–

ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥
(ಮುಂ. ಉ. ೩-೨-೩)

[ಈ ಆತ್ಮನು ಪ್ರವಚನದಿಂದ ಲಭ್ಯನಲ್ಲ; ಗ್ರಂಥಧಾರಣ ಶಕ್ತಿಯಿಂದಲೂ ಬಹುಶ್ರವಣದಿಂದಲೂ ಲಭ್ಯನಲ್ಲ; ಯಾವ ಪರಮಾತ್ಮನನ್ನೇ ಈ ಸಾಧಕನು ಪಡೆಯಲು ಇಚ್ಛಿಸುತ್ತಾನೆಯೋ ಆ ಪರಮಾತ್ಮನ ಇಚ್ಛೆಯಿಂದಲೇ ಅವನು ಲಭ್ಯನು; ಅವನಿಗೆ ಈ ಆತ್ಮನು ತನ್ನ ಶರೀರವನ್ನು ಪ್ರಕಾಶಪಡಿಸುತ್ತಾನೆ.] ಇಲ್ಲಿ ಉಲ್ಲೇಖಿತವಾದ ಹಲವು ಪ್ರಮಾಣಗಳ ಪರಿಚಯು ಆ ಪ್ರಮಾಣಶಾಸ್ತ್ರದ ಚರಿತ್ರೆಯ ಪುರಾತನತೆಯನ್ನು ತಿಳಿಸುವುದರ ಜೊತೆಗೆ ಅವುಗಳ ಸಿದ್ಧಪ್ರಯೋಜಕತೆಯನ್ನು ತಿಳಿಸುವುದು ಕಂಡುಬರುತ್ತದೆ. ದೇವರ ಕೃಪೆಯ ಮಹತ್ವದ ಪಾತ್ರದ ಅರಿವು ನಮಗೆ ಆಗುವುದು. 'ಉದ್ಧರೇದಾತ್ಮನಾತ್ಮಾನಂ' ಎಂಬ ಪೌರುಷದಲ್ಲಿಯೂ ಆ ಪೌರುಷ ತತ್ತ್ವದ ಹಿರಿಮೆಯೇ ವ್ಯಕ್ತವಾಗುತ್ತದೆ. ಆ ಪುರುಷೋತ್ತಮನು ಸರ್ವಶ್ರೇಷ್ಠ ಸಾಧನ–ಪ್ರಮಾಣ–ವಾಗಿರುವನೆಂಬುದೂ ಗೊತ್ತಾಗುತ್ತದೆ. ಸೇಶ್ವರ ಯೋಗವು ನಿರೀಶ್ವರ ಯೋಗಕ್ಕಿಂತ ಪುರಾತನ. ಸೇಶ್ವರ ಯೋಗದ ಚರಿತ್ರೆಯು ಯಾವುದೇ ಕಾಲಹಂತದಲ್ಲಿ ನಿರೀಶ್ವರ ವಾದವನ್ನು ಎದುರಿಸಿರಬೇಕು.

ಅನುಗ್ರಹವು ಯೋಗಸಿದ್ಧಿಯ ಅವಶ್ಯಕತೆಗಳಲ್ಲಿ ಒಂದು. ಅದು ಧ್ಯಾನಯೋಗದ ಅಂಗವಾಗಿದೆ. ಧ್ಯಾನಯೋಗಿಯು ಪರಬ್ರಹ್ಮ ತತ್ತ್ವವನ್ನು ಅರಿಯಬೇಕು. ಅದರ ಕಾರ್ಯಗಳಾದ ಜೀವ, ಜಗತ್ತು ಹಾಗೂ ಸೃಷ್ಟಿಗಳ ಲಕ್ಷಣಗಳನ್ನು ತಿಳಿದುಕೊಂಡು ಪರಶಿವನನ್ನು ಧ್ಯಾನಿಸಬೇಕು. ಆಗ ಸಂಸಾರವು–ಜನನ ಮರಣಭವ ಚಕ್ರವು ಧ್ಯಾನಯೋಗಿಗೆ ನಿಂತುಹೋಗುವುದು. ಇದು ಉಪನಿಷತ್ತಿನ ಉಪದೇಶ. ಈ ಧ್ಯಾನಯೋಗದಲ್ಲಿ ತಾನು ಮತ್ತು ಪರಶಿವನ ಪ್ರತೀಕವಾದ ಮಂತ್ರ ಅಥವಾ ಪ್ರಣವನೆಂಬ ಲಿಂಗವು ಕೂಡಿ ಅಂದರೆ ಇದಿರಿಟ್ಟುಕೊಂಡು, ಸದಾ ಧ್ಯಾನಿಸುವುದರಿಂದ ಆ ಪರಶಿವನು ಪ್ರತ್ಯಕ್ಷವಾಗುವನು. ಆ ಧ್ಯಾನದ ಇನ್ನೊಂದು ಪರಿಣಾಮವನ್ನು ಈ ಉಪನಿಷತ್ತು ತಿಳಿಸುತ್ತದೆ–

ತಸ್ಯಾಭಿಧ್ಯಾನಾತ್ ತೃತೀಯಂ ದೇಹಭೇದೇ ವಿಶ್ವೈಶ್ವರ್ಯಂ ಕೇವಲ ಆಪ್ತಕಾಮಃ ।
(ಶ್ವೇ. ಉ. ೧-೧೧)

[ಅವನ ಧ್ಯಾನದಿಂದ ಸರ್ವೈಶ್ವರ್ಯ ಲಕ್ಷಣವುಳ್ಳ ಮೂರನೆಯ (ಅವಸ್ಥೆಯನ್ನು) ಶರೀರಪಾತವಾದ ಮೇಲೆ (ಹೊಂದುತ್ತಾನೆ) (ಅನಂತರ) ಕೇವಲನೂ ಆಪ್ತಕಾಮನೂ (ಆಗುತ್ತಾನೆ).] ಯೋಗದ ವಸ್ತು, ವಸ್ತು ಲಕ್ಷಣ, ಧ್ಯಾನಯೋಗಿಯ ಸಿದ್ಧಿಗಳನ್ನು ಪರಿಚಯಿಸಿದ ಮೇಲೆ ಯೋಗದ ಮುದ ತಂತ್ರದ ವಿಚಾರವನ್ನು ವಿವರಿಸುವದು ಕಂಡುಬರುತ್ತದೆ–

ತ್ರಿರುನ್ನತಂ ಸ್ಥಾಪ್ಯ ಸಮಂ ಶರೀರಂ ಹೃದೀಂದ್ರಿಯಾಣಿ ಮನಸಾ ಸನ್ನಿವೇಶ್ಯ ।
ಬ್ರಹ್ಮೋಡುಪೇನ ಪ್ರತರೇತ ವಿದ್ವಾನ್ ಸ್ರೋತಾಂಸಿ ಸರ್ವಾಣಿ ಭಯಾವಹಾನಿ ॥
(ಶ್ವೇ. ಉ. ೨-೮)

[ವಿದ್ವಾಂಸನು (ತಲೆ ಕೊರಳು ಎದೆ ಎಂಬ) ಉನ್ನತವಾದ ಮೂರು ಅಂಗಗಳುಳ್ಳ ಶರೀರವನ್ನು ಸಮನಾಗಿ ನಿಲ್ಲಿಸಿ, ಮನಸ್ಸಿನ ಮೂಲಕ ಇಂದ್ರಿಯಗಳನ್ನು ಹೃದಯದಲ್ಲಿ ನಿಯಮಿಸಿ, ಭಯಾನಕವಾದ ಸಮಸ್ತ ಸಂಸಾರ ಪ್ರವಾಹಗಳನ್ನೂ ಬ್ರಹ್ಮವೆಂಬ ತೆಪ್ಪದ ಸಹಾಯದಿಂದ ದಾಟಬೇಕು.] ಯೋಗಸಾಧಕನು ತನ್ನ ಶರೀರವನ್ನು ಧ್ಯಾನದ ಸಮಯದಲ್ಲಿರಿಸಿಕೊಳ್ಳಬೇಕಾದ ಸ್ವರೂಪವನ್ನು ಇಲ್ಲಿ ತಿಳಿಸಲಾಗಿದೆ. ಈ ಉಪದೇಶದ ಚರಿತ್ರೆಯಲ್ಲಿ ಇದೇ ಪ್ರಥಮ ಸಲ ಉಪನಿಷತ್ ಕಾಲದಲ್ಲಿ ಧ್ಯಾನಯೋಗಿಯ ಉತ್ತಮಾಂಗದ ಬಗ್ಗೆ ಹೇಳಿದ್ದೆಂದು ನಿಸ್ಸಂಕೋಚವಾಗಿ ಹೇಳಬಹುದು. ಅಂದರೆ ಆಸನ ವಿಚಾರ ಯೋಗವಿಜ್ಞಾನದ ಅಂಗವಾಗಿಯೇ ಬೆಳೆದು ಬಂದಿದೆ ಎಂಬುದು ಸ್ಪಷ್ಟವಿದೆ.

ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ॥ ಭ. ಗೀ. ೬-೧೩

ಎಂಬ ಗೀತೆಯ ಮಾತಿಗೆ ಶ್ವೇತಾಶ್ವತರೋಪನಿಷತ್ತೇ ಆಕರವೆಂದು ಕಂಡುಬರುವುದು. ಯೋಗಸಾಧಕನು ಧ್ಯಾನಕ್ಕಾಗಿ ಕುಳಿತಾಗ ಮೂರು ಅಂಗಗಳನ್ನು ಅಂದರೆ ತಲೆ, ಕೊರಳು ಮತ್ತು ಮೇರುದಂಡವನ್ನು ಸಮಸ್ಥಿತಿಯಲ್ಲಿರಿಸಬೇಕೆಂಬ ನಿಯಮ ಪರಿಪಾಲಿಸಬೇಕೆಂದನ್ನಿದು ತಿಳಿಸುತ್ತದೆ. ಆಸನದ ನಂತರ ಸಾಧಕನು ಪಾಲಿಸಬೇಕಾದ ವಿಧಿಗಳ ಪ್ರಸ್ತಾಪವನ್ನು ಮಾಡುತ್ತದೆ.

ಪ್ರಾಣಾನ್ ಪ್ರಪೀಡ್ಯೇಹ ಸಂಯುಕ್ತಚೇಷ್ಟಃ ಕ್ಷೀಣೇ ಪ್ರಾಣೇನಾಸಿಕ ಯೋಚ್ಛ್ವಸೀತ ।
ದುಷ್ಟಾಶ್ವಯುಕ್ತಮಿವ ವಾಹಮೇನಂ ವಿದ್ವಾನ್ ಮನೋಧಾರಯೇತಾಪತ್ರಮತ್ತಃ ॥
(ಶ್ವೇ. ಉ. ೨-೯)

[ವಿದ್ವಾಂಸನು ಯೋಗಮಾರ್ಗದಲ್ಲಿ ಯುಕ್ತಾಹಾರವಿಹಾರನಾಗಿ, ಪ್ರಾಣಗಳನ್ನು ವಿರೋಧಿಸಿ, ಪ್ರಾಣಶಕ್ತಿಯು ಕ್ಷೀಣವಾದಾಗ ಪ್ರಾಣವಾಯುವನ್ನು ಮೂಗಿನಿಂದ ಹೊರಗೆ ಹಾಕಬೇಕು ; ಕೆಟ್ಟ ಕುದುರೆಗಳನ್ನು ಕಟ್ಟಿದ ರಥವನ್ನು (ಸಾರಥಿಯು ಹೇಗೆ ನಿಗ್ರಹಿಸುವನೋ) ಹಾಗೆ ಜಾಗರೂಕನಾಗಿ (ತನ್ನ) ಮನಸ್ಸನ್ನು ನಿಗ್ರಹಿಸಬೇಕು.] ಈ ಮಂತ್ರವು ಪ್ರಾಣಾಯಾಮ, ಪ್ರತ್ಯಾಹಾರಗಳನ್ನು ಕುರಿತು ತಿಳಿಸುತ್ತದೆ. ಹೀಗೆ ಯೋಗ ತಂತ್ರದ, ಆಚಾರದ ವಿಚಾರಗಳನ್ನು ಈ ಉಪನಿಷತ್ತು ತಿಳಿಸುತ್ತದೆ. ಇದು ಉಪನಿಷದ್ ಯುಗದಲ್ಲಿ ವ್ಯವಸ್ಥಿತವಾದ ವಿಜ್ಞಾನವಾಗಿ ಬೆಳೆದು, ಅನುಷ್ಠಾನ ಮೂಲಕ ಸಿದ್ಧಿಸಂಪಾದನೆಯು ಪ್ರಚಾರದಲ್ಲಿತ್ತೆಂಬುದನ್ನು ಸೂಚಿಸುತ್ತದೆ.

ಯೋಗಸಾಧಕನು ಆಹಾರ, ವಿಹಾರ, ಪ್ರಾಣಾಯಾಮಗಳ ಜ್ಞಾನ ಮಾಡಿಕೊಳ್ಳುವುದು ಅವಶ್ಯವಿರುವಂತೆ ಯೋಗಾನುಷ್ಠಾನಕ್ಕೆ ಬೇಕಾದ ಸ್ಥಳದ ಆಯ್ಕೆಯನ್ನು ಕೂಡ ನಿವೇದಿಸುತ್ತದೆ–

ಸಮೇ ಶುಚೌ ಶರ್ಕರಾವಹ್ನಿವಾಲುಕಾವಿವರ್ಜಿತೇ ಶಬ್ದಜಲಾಶ್ರಯಾದಿಭಿಃ ।
ಮನೋಽನುಕೂಲೇ ನ ತು ಚಕ್ಷುಪೀಡನೇ ಗುಹಾನಿವಾತಾಶ್ರಯಣೇ
ಪ್ರಯೋಜಯೇತ್ ॥ (ಶ್ವೇ. ಉ. ೨-೧೦)

[ಹಳ್ಳತಿಟ್ಟುಗಳಿಲ್ಲದೆ ಸಮವಾದ, ಶುಚಿಯಾದ, ಸಣ್ಣಕಲ್ಲುಗಳು ಬೆಂಕಿ ಧೂಳು ಶಬ್ದ ನೀರು ಜನರ ವಾಸಸ್ಥಾನ–ಇವುಗಳಿಲ್ಲದ, ಮನಸ್ಸಿಗೆ ಅನುಕೂಲವಾದ ಕಣ್ಣಿಗೆ ಪೀಡೆಯನ್ನುಂಟುಮಾಡದ, ಗುಹೆಯೇ ಮೊದಲಾದ ವಾಯುಪ್ರವಾಹವಿಲ್ಲದ ಸ್ಥಾನದಲ್ಲಿ (ಕುಳಿತು ಮನಸ್ಸನ್ನು ಪರಮಾತ್ಮನಲ್ಲಿ) ನಿಯೋಜಿಸಬೇಕು.] ಈ ಮಂತ್ರದಲ್ಲಿ ಯೋಗಸಾಧನೆಗೆ ಬೇಕಾದ ಭೂಪ್ರದೇಶವು ಯಾವ ಯಾವ ತೊಂದರೆಗಳಿಂದ ಮುಕ್ತವಿದ್ದು ಧ್ಯಾನಕ್ಕೆ ಅನುಕೂಲವಾಗಿರಬೇಕು ಎಂಬ ಮಹತ್ವದ ಮಾತುಗಳನ್ನು ತಿಳಿಪಡಿಸುತ್ತದೆ. ಧ್ಯಾನಕ್ಕೆ ಪ್ರಶಾಂತತೆಯ ಅವಶ್ಯಕತೆಯು ಎಷ್ಟಿದೆಯೆಂಬುದನ್ನು ಉಪನಿಷದ್ ಋಷಿಗಳು ತಿಳಿಸುತ್ತಾರೆ. ನಿಶ್ಚಲವಾದ ವಾಯುವು ಪ್ರಾಣಾಯಾಮಕ್ಕೆ ಅನಿವಾರ್ಯವಾದ ಅವಶ್ಯಕತೆ ಎಂಬುದಿಲ್ಲಿಯ ಅನುಭವದ ಮಾತು. ಸ್ಥಳವು ಶುಚಿ ಭೂರ್ತವಾಗಿರಬೇಕೆಂಬುದನ್ನು ಸಾಧಕನು ಗಮನಿಸಬೇಕು. ಹೀಗೆ ಈ ಮಂತ್ರದಲ್ಲಿ ಹಲವಾರು ಅತ್ಯಂತ ಉಪಯುಕ್ತ ಪ್ರಾಯೋಗಿಕ ಸಲಹೆ ಸೂಚನೆಗಳು ಇರುತ್ತವೆ.]

ಯೋಗಾನುಷ್ಠಾನ ಮಾಡುವಾಗ ಆಗುವ ಅನುಭವಗಳು ಇನ್ನೊಂದು ಮಂತ್ರದಲ್ಲಿ ಇವೆ–

ನೀಹಾರ ಧೂಮಾರ್ಕಾನಿಲಾನಲಾನಾಂ ಖದ್ಯೋತ ವಿದ್ಯುತ್ ಸ್ಫಟಿಕಶಶೀನಾಮ್ ।
ಏತಾನಿ ರೂಪಾಣಿ ಪುರಃಸರಾಣಿ ಬ್ರಹ್ಮಣ್ಯಭಿವ್ಯಕ್ತಿಕರಾಣಿ ಯೋಗೇ ॥
(ಶ್ವೇ. ಉ. ೨-೧೧)

[ಪೃಥ್ವಿ ನೀರು ತೇಜಸ್ಸು ವಾಯು ಆಕಾಶ–ಇವು ಅಭಿವ್ಯಕ್ತವಾದಾಗ, ಎಂದರೆ, ಪಂಚಭೂತಮಯವಾದ ಯೋಗಗುಣಗಳು ಪ್ರಕಟಿತವಾದಾಗ ಯೋಗಾಗ್ನಿಮಯವಾದ ಶರೀರವನ್ನು ಹೊಂದಿರುವ ಯೋಗಿಗೆ ರೋಗವಾಗಲಿ ಮುಪ್ಪಾಗಲಿ ಮೃತ್ಯುವಾಗಲಿ ಇರುವುದಿಲ್ಲ.] ಈ ಅನುಭವವು ಯೋಗಮಾರ್ಗಕ್ರಮಣದಲ್ಲಿ ಉಂಟಾಗುವ ಅವ್ಯಕ್ತದ ಅಥವಾ ಮಹತ್ತಿನ ಕಾರ್ಯದ ಸೂಕ್ಷ್ಮಾವಸ್ಥೆಯು ಪ್ರತ್ಯಕ್ಷವಾದುದರದೆಂದು ಬೇರೆ ಹೇಳಬೇಕಿಲ್ಲ. ಇವರನಂತರ ಯೋಗಸಿದ್ಧಿಯ ಪೂರ್ವಭಾವಿಯಾಗಿ ವ್ಯಕ್ತವಾಗುವ ಚಿಹ್ನೆಗಳನ್ನು ಈಗ ತಿಳಿಸಲಾಗುತ್ತದೆ.

ಲಘುತ್ವಮಾರೋಗ್ಯಮಲೋಲುಪತ್ವಂ ವರ್ಣಪ್ರಸಾದಂ ಸ್ವರಸೌಷ್ಠವಂ ಚ ।
ಗಂಧಃ ಶುಭೋ ಮೂತ್ರಪುರೀಷಮಲ್ಪಂ ಯೋಗಪ್ರವೃತ್ತಿಂ ಪ್ರಥಮಾಂ ವದಂತಿ ॥
(ಶ್ವೇ. ಉ. ೨-೧೩)

[ಶರೀರಲಾಘವ, (ಶಾರೀರಿಕ ಮತ್ತು ಮಾನಸಿಕ) ಆರೋಗ್ಯ, ವಿಷಯ ವಿತೃಷ್ಣೆ, ಉಜ್ವಲ ಶರೀರ ಕಾಂತಿ, ಸ್ವರಮಾಧುರ್ಯ, (ಶರೀರದ) ಮಧುರಗಂಧ, ಮೂತ್ರಪುರೀಷಗಳ ಅಲ್ಪತೆ–ಇವು ಮೊದಲು ಉಂಟಾಗುವ ಯೋಗಪ್ರವೃತ್ತಿಯೆಂದು (ಯೋಗಿಗಳು) ಹೇಳುತ್ತಾರೆ.] ಹೀಗೆ ಯೋಗಮಾರ್ಗದಲ್ಲಿ ಕ್ರಮಿಸುತ್ತ ಹೊರಹೋದಂತೆ ಒಂದರಿಂದೊಂದಧಿಕವಾದ ಪ್ರಗತಿಯು ಕಂಡುಬರುವದೆಂದು ಧ್ಯಾನ

ಯೋಗಿಯು ತಿಳಿಸಿ ಮಾರ್ಗಕ್ರಮಣದ ಸಾಧುತ್ವದ ಲಕ್ಷಣಗಳನ್ನು ಎತ್ತಿ ತೋರಿಸಿ, ಸಾಧಕನ ಆತ್ಮವಿಶ್ವಾಸಾಭಿವೃದ್ಧಿಗೆ ಹೆಚ್ಚಿನ ಚಾಲನೆಗೆ ಈ ಮಂತ್ರವು ಕಾರಣೀಭೂತ ವಾಗುತ್ತದೆ.

ಈಗ ಶ್ವೇತಾಶ್ವತರ ಋಷಿಯು ಯೋಗಸಾಧಕನು ಮುಟ್ಟಬೇಕಾದ ಕೊನೆಯ ಗುರಿಯನ್ನು ತಿಳಿಸುವನು–

> ಯದಾತ್ಮ ತತ್ವೇನ ತು ಬ್ರಹ್ಮತತ್ವಂ ದೀಪೋಪಮೇನೇಹ ಯುಕ್ತಃ ಪ್ರಪಶ್ಯೇತ್ ।
> ಅಜಂ ಧ್ರುವ ಸರ್ವತತ್ತ್ವೈ ರ್ವಿಶುದ್ಧಂ ಜ್ಞಾತ್ವಾದೇವಂ ಮುಚ್ಯತೇ ಸರ್ವಪಾಶೈಃ ॥
>
> (ಶ್ವೇ. ಉ. ೨-೧೫)

[ಯೋಗಿಯು (ಅಂದರೆ ಧ್ಯಾನಯೋಗಿಯು) ತನ್ನ ಹೃದಯ ಕಮಲದಲ್ಲಿ ಪ್ರಕಾಶಸ್ವರೂಪನಾದ ಆತ್ಮನಿಂದ ಬ್ರಹ್ಮತತ್ವವನ್ನು ಯಾವಾಗ ನೋಡುತ್ತಾನೆಯೋ ಆಗ ಜನ್ಮರಹಿತನೂ, ಅಚ್ಯುತಸ್ವರೂಪನೂ, ಅವಿದ್ಯೆಯಿಂದ ಮತ್ತು ಅದರ ಕಾರ್ಯಗಳಿಂದ ಅಸಂಸ್ಪೃಷ್ಟನೂ ಆದ ದೇವನನ್ನು ಅರಿತುಕೊಂಡು, ಸರ್ವ ಪಾಪಗಳಿಂದಲೂ ಮುಕ್ತನಾಗುತ್ತಾನೆ.] ಧ್ಯಾನಯೋಗಿಯು ಸರ್ವೋನ್ನತ ಸಾಧನವನ್ನು ಬಳಸಬಲ್ಲವನಾಗಿದ್ದಾನೆಂದು ಇದರಿಂದ ಗೊತ್ತಾಗುತ್ತದೆ. ಆ ಸಾಧನವು ತನ್ನಿಂದನ್ಯವಲ್ಲದ ಸರ್ವೋತ್ತಮ ಸಿದ್ಧಿ ಸಂಪಾದನಾಶೀಲವಾದುದಾಗಿರುವುದು ಕೂಡ ಇಲ್ಲಿ ವ್ಯಕ್ತವಾಗಿರುತ್ತದೆ. ಅಂದರೆ ಆತ್ಮತತ್ತ್ವದಿಂದ ಪರಮಾತ್ಮ ಅಥವಾ ಪರಬ್ರಹ್ಮವನ್ನು ತಿಳಿಯುವ ಬಹು ಮಹತ್ವದ ಸತ್ಯವು ಈ ಮಂತ್ರದಲ್ಲಿದೆ. ಇದೇ ಪರಮ ಯೋಗ. ಇದು ಧ್ಯಾನಯೋಗದಿಂದ ಸಾಧ್ಯ ಇಲ್ಲಿ ಒಂದು ತೌಲನಿಕ ವಿಚಾರ ಪ್ರತಿಪಾದಿಸಿದರೆ ಸಾಧನ ಮತ್ತು ಸಿದ್ಧಿಗಳ ಮಹತಿಯು ಗೊತ್ತಾಗುತ್ತದೆ.

ಮ್ಯಾಕ್ಸ್ ಮುಲ್ಲರನೆಂಬ ವಿದ್ವಾಂಸನು History of Ancient Samskrit Literature ಎಂಬ ಗ್ರಂಥವನ್ನು ಬರೆದಿದ್ದಾನೆ. ಅದರ ೧೧ನೆಯ ಪುಟದಲ್ಲಿ ಭಾರತೀಯರ "ಆತ್ಮಾನಂ ಆತ್ಮನಾ ಪಶ್ಯ" ಎಂಬ ಮಾತನ್ನು ಗ್ರೀಕರ "Know thyself" ಎಂಬ ಸುಪ್ರಸಿದ್ಧ ಮಾತಿನೊಡನೆ ಹೋಲಿಸಿ ಹೀಗೆ ಬರೆಯುತ್ತಾನೆ. "The Samskrit, 'ātmanām ātmanāpasya' "See [thy self] self by [thy] self", had a deeper signification than the Greek "to know thy self", because it has not only a moral, but also a metaphysical mdaning" * ಭಾರತೀಯರ ಈ ವಿಚಾರ ಗ್ರೀಕ ದಾರ್ಶನಿಕರಿಗೆ ಗೊತ್ತಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂಥ ಮಹತ್ವದ ಸಾಧನವು ಉಪನಿಷತ್ತಿನ ಋಷಿಗಳಿಗೆ ಸಾಧ್ಯವಾಗಿದೆ. ಇದು ಧ್ಯಾನಯೋಗಿಯ ಹಿರಿಮೆ, ಧ್ಯಾನಯೋಗದ ಹಿರಿಮೆ.

ಸೂತ್ರಗಳ ಕಾಲದಲ್ಲಿಯು ಪತಂಜಲಿ ಮಹರ್ಷಿಯು ಈ ಉಪನಿಷತ್ತಿನಲ್ಲಿಯ ಹಲವು ವಿಚಾರಗಳನ್ನು ಸ್ವೀಕರಿಸಿದ್ದಾನೆ. ಆದರೆ ಸಾಂಖ್ಯದರ್ಶನದ ವಸ್ತುವಿಜ್ಞಾನ

---

* ನೋಡಿ ಹೆಚ್ಚಿನ ವಿವರಣೆಗಾಗಿ–ಡಾ. ವ್ಹಿ. ಎಸ್. ಕಂಬಿ, ವೀರಶೈವ ದರ್ಶನ ಮೀಮಾಂಸೆ, ಸಂ. ೪ ಪು. ೫೮. ಶ್ರೀ ವಿದ್ಯಾ ಪ್ರಕಾಶನ, ಧಾರವಾಡ–೭ (೧೯೮೯)

ವನ್ನು ಸ್ವೀಕರಿಸಿದ ಈ ಸೂತ್ರಕಾರನಿಗೆ ಈ ಧ್ಯಾನಯೋಗದ ಸಾಧನ ರೀತಿ, ತಂತ್ರ ಜ್ಞಾನ ಮತ್ತು ಸಿದ್ಧಿಗಳು ವಿಶೇಷಾರ್ಥದಲ್ಲಿ ಅಪರಿಚಿತ. ಭಗವದ್ಗೀತೆಯು ನೇರವಾಗಿ ಧ್ಯಾನಯೋಗವೆಂಬ ಪ್ರಕರಣವನ್ನೇ ಒಳಗೊಂಡಿದೆ. ಅದು ಧ್ಯಾನಯೋಗಿಗೆ ಅವಶ್ಯಕವಾದ ಪರಿಸರ, ಆಸನ ಸಾಧನ, ಪ್ರಗತಿಯನ್ನರಿಯುವ ದಂಡಮಾನ, ಪ್ರಗತಿ ಮತ್ತು ಅದರ ಅಸಾಧಾರಣೆಯನ್ನು ಕುರಿತು ಬರೆದಿದೆ. ಇಲ್ಲಿ ಸುವ್ಯವಸ್ಥಿತವಾಗಿ ಶಾಸ್ತ್ರದ ರೂಪತಾಳಿದೆ. ಈ ಎಲ್ಲ ವಿಚಾರಗಳಿಗೆ ಶ್ವೇತಾಶ್ವತರೋಪನಿಷತ್ತು ಆಕರ ವಾಗಿದೆ. ಧ್ಯಾನಯೋಗದ ಉತ್ತಮ ಅಸ್ತಿವಾರವನ್ನು ಶ್ವೇತಾಶ್ವತರೋಪನಿಷತ್ತು ಹಾಕಿದೆಯೆಂದರೆ ಅತಿಶಯೋಕ್ತಿಯೇನಲ್ಲ. ಉಪನಿಷತ್ತುಗಳಿಗೆ ವ್ಯವಸ್ಥೆಗೊಳಿಸಿದ. ಆಶ್ರೌತ ಸಾಧನಗಳಲ್ಲಿ ಯೋಗವೂ ಒಂದಾಗಿದ್ದು ಯೋಗಪ್ರಭೇದವೂ ಆಗಿರುತ್ತದೆ.

ಇಸ್ಲಾಂ ಧರ್ಮದ ಸಮೀಕ್ಷೆ

ಕೆ. ಮೊಹಮ್ಮದ್ ಶರೀಫ್

ಇಸ್ಲಾಂ ಜಗತ್ತಿನ ದೊಡ್ಡ ಧರ್ಮಗಳಲ್ಲಿ ಒಂದು ಇದು ಮುಸ್ಲಿಮರ ಧರ್ಮಕ್ಕೆ ಇರುವ ಅರಬ್ಬೀ ಹೆಸರು. ಈ ಪದದ ಅರ್ಥ ಅಲ್ಲಾಹ್‌ನಿಗೆ (ದೇವನಿಗೆ) ಶರಣಾಗು ಅಥವ ವಿಧೇಯನಾಗು ಎಂದಿದೆ. ಈ ಪದದ ಇನ್ನೊಂದು ಅರ್ಥ 'ಶಾಂತಿ' ಎಂದಿದೆ. ಅಂದರೆ ದೈಹಿಕ ಹಾಗೂ ಮಾನಸಿಕ ಶಾಂತಿ ಎಂದರ್ಥ. ಈ ಪದವು 'ಸಿಲ್ಮ್' ಎಂಬ ಮೂಲ ಪದದಿಂದ ಉಂಟಾಗಿದ್ದು ಅಲ್ಲಾಹ್‌ನಿಗೆ ಅನನ್ಯ ಭಕ್ತಿಭಾವಗಳಿಂದ ಶರಣಾಗುವಿಕೆ, ಮೊರೆಹೋಗುವಿಕೆ, ಸಮರ್ಪಣಾ ಭಾವನನ್ನು ಮನಸಾ ತೋರುವಿಕೆ ಎಂಬ ಅರ್ಥ ನೀಡುತ್ತದೆ.

ವಿಶ್ವದ ಅನೇಕ ಧರ್ಮಗಳು ಬಹುಮಟ್ಟಿಗೆ ಆ ಧರ್ಮದ ಸ್ಥಾಪಕನ ಅಥವ ಆ ಧರ್ಮದ ದೀಕ್ಷೆ ಪಡೆದ ಜನಾಂಗದ ಹೆಸರಿನಿಂದ ಕರೆಯಲ್ಪಡುತ್ತವೆ. ಆದರೆ ಇಸ್ಲಾಂ ಧರ್ಮ ಯಾವನೊಬ್ಬ ನಿರ್ದಿಷ್ಟ ವ್ಯಕ್ತಿಗೆ, ಜನಾಂಗಕ್ಕೆ ಅಥವ ದೇಶಕ್ಕೆ ಸೀಮಿತವಾದ ಧರ್ಮವಲ್ಲ. ಈ ಧರ್ಮದ ವ್ಯಾಪ್ತಿ ಬಹು ದೊಡ್ಡದು ಇದರ ನಿಜವಾದ ಸ್ಥಾಪಕ ಮೊಹಮ್ಮದ್ ಪೈಗಂಬರ್‌ರ (ಸ. ಅ. ಸ.) ಮಾತಿನಲ್ಲೇ ಹೇಳುವುದಾದರೆ ಪ್ರಥಮ ಪ್ರವಾದಿಯಾದ ಆದಂ ರ (ಅ) ಕಾಲದಿಂದಲೂ ಜಾರಿಯಲ್ಲಿದ್ದ ಮತಧರ್ಮಗಳಲ್ಲಿ ಅತ್ಯಂತ ಪ್ರಾಚೀನವೂ, ಸಂಪ್ರದಾಯಬದ್ಧವೂ ಆದ ಧರ್ಮವೆಂದರೆ 'ಇಸ್ಲಾಂ ಧರ್ಮ'. ಈ ಹೆಸರನ್ನು ಇಟ್ಟವರು ಆದಂ. ಅವರ (ಅ) ನಂತರದ ಪ್ರವಾದಿಗಳಲ್ಲಿ ಒಬ್ಬರಾದ ಇಬ್ರಾಹೀಂ (ಅ) ಎಂದು ಮುಸ್ಲಿಮರ ಪವಿತ್ರ ಗ್ರಂಥವಾದ ಖುರಾನಿನಲ್ಲಿ ಹೇಳಿದೆ.

ಇಸ್ಲಾಂ ಧರ್ಮವು ಸತ್ಯಸ್ವರೂಪವೂ, ಸತ್ಯಪೂರ್ಣವೂ ಆಗಿದೆ. ಸೃಷ್ಟಿಕರ್ತನೂ ಜಗನೊಡೆಯನೂ ಆದ ಅಲ್ಲಾಹ್‌ನು ಮನುಕುಲಕ್ಕೆ ಮಾರ್ಗದರ್ಶನ ರೂಪದಲ್ಲಿ ಅವತೀರ್ಣಗೊಳಿಸಿದ ಸಮಗ್ರ ಜೀವನ ಕ್ರಮವನ್ನು ಇಸ್ಲಾಂ ಒಳಗೊಂಡಿದೆ. ಇಸ್ಲಾಂ ಧರ್ಮದಲ್ಲಿ ಇತರ ಕೆಲವು ಧರ್ಮಗಳಲ್ಲಿರುವಂತೆ ಮುನಿಧರ್ಮ, ಗೃಹಸ್ಥ ಧರ್ಮ ಎಂಬ ವ್ಯತ್ಯಾಸವಿಲ್ಲ ಇಸ್ಲಾಂ ಧರ್ಮದಲ್ಲಿ ಗುರು ವರ್ಗವಿಲ್ಲ. ಸನ್ಯಾಸ ಜೀವನವನ್ನು ಇಸ್ಲಾಂ ನಂಬುವುದಿಲ್ಲ. ಆದುದರಿಂದ ಬ್ರಹ್ಮಚಾರಿಗಳಾಗಿ ಯಾರೂ ಉಳಿಯಬೇಕಾಗಿಲ್ಲ. ಜೀವನದ ಸಿಹಿ-ಕಹಿಗಳನ್ನು ಉಣ್ಣುತ್ತ ಸದಾಚಾರದಿಂದ ಕೂಡಿದ ಗೃಹಸ್ಥಜೀವನವನ್ನು ಅದು ಮೆಚ್ಚುತ್ತದೆ ಪುರುಷನಿಗೆ ಕುಟುಂಬದ ಮೇಲ್ವಿಚಾರಕನ ಸ್ಥಾನವನ್ನು ಇಸ್ಲಾಂ ನೀಡಿದೆ. ಕುಟುಂಬದ ಹಿರಿಯನೆನಿಸಿದ ಈತನ ಮೇಲೆ ಕೆಲವು ಹೊಣೆಗಳನ್ನು ಹೂರಿಸಿದೆ. ಜೀವನದ ನಿರ್ವಹಣೆಗೆ ಬೇಕಾದ ಧನಾರ್ಜನೆ ಮಾಡುವುದು, ಮನೆಯ ಹೊರಗಿನ ಎಲ್ಲಾ ಕೆಲಸ ಕಾರ್ಯಗಳನ್ನು

ನಿರ್ವಹಿಸುವುದು ಇತ್ಯಾದಿ ಈತನ ಕರ್ತವ್ಯ ಆಗಿದೆ. ಮನೆಯ ಒಳಗಿನ ಕೆಲಸಗಳ ಸರಿಯಾದ ನಿರ್ವಹಣೆ, ಮಕ್ಕಳ ಪಾಲನೆ ಇವು ಸ್ತ್ರೀಗೆ ನೀಡಲಾದ ಕೆಲಸ.

ಇಸ್ಲಾಂ ಧರ್ಮವು ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ, ಅಂತರ ರಾಷ್ಟ್ರೀಯ ರಂಗಗಳಿಗೆ ಅನ್ವಯಿಸುವ ಅನೇಕ ವಿಷಯಗಳನ್ನು ಬೋಧಿಸುತ್ತದೆ. "ಸಮಗ್ರ ವಿಶ್ವವು ಏಕೈಕ ಪ್ರಭುವಿನಿಂದ ನಿರ್ಮಿತವಾಗಿದೆ. ಆ ಪ್ರಭುವೇ ಇಸ್ಲಾಂ ಹೆಸರಿಸುವ 'ಅಲ್ಲಾಹ್.' ಎಲ್ಲರ ಸೃಷ್ಟಿ, ಕರ್ತನೂ ಒಬ್ಬನೇ 'ದೇವ'. ಮನುಕುಲ ವೆಲ್ಲ ಒಂದೇ ಕುಟುಂಬವಿದ್ದಂತೆ. ಕಾರಣ, ಪರಸ್ಪರ ಯಾರೂ ದ್ವೇಷಿಸದಿರಿ. ಸಹಕಾರ ದೊಡನೆ ಬಾಳಿ. ಯಾರೂ ಜನಾಂಗ ದ್ವೇಷ ಮತ್ತು ಮದ್ಯಪಾನ ಮಾಡಬಾರದು. ದೇವರು ಒಬ್ಬನೇ. ಅವನು ನಿರ್ವಿಕಾರಿ. ಅವನೇ ಎಲ್ಲರ, ಎಲ್ಲಾ ವಸ್ತುಗಳ ಸೃಷ್ಟಿಕರ್ತ. ಅವನು ಸರ್ವಶಕ್ತ, ಸರ್ವರಕ್ಷಕ, ಸರ್ವವ್ಯಾಪಿ. ಅವನು ಸೃಷ್ಟಿಸಿದ ಎಲ್ಲಾ ಪ್ರಾಣಿಗಳನ್ನು ಪ್ರೀತಿಸಬೇಕು. ಪರಮತವನ್ನು, ಅದರ ಸ್ಥಾಪಕರನ್ನು ಗೌರವಿಸಬೇಕು. ಎಲ್ಲರೂ ಸಮಾನರು ಹಾಗೂ ಸಹೋದರರು. ಯಾರಲ್ಲೂ ಮೇಲು ಅಥವ ಕೀಳೆಂಬ ಭೇದವಿಲ್ಲ. ರಾಜ-ಮಂತ್ರಿ, ಬಲ್ಲಿದ–ಬಡವ, ಹೆಣ್ಣು–ಗಂಡು ಎಲ್ಲರೂ ದೇವರ ದೃಷ್ಟಿಯಲ್ಲಿ ಒಂದೇ. ಸುಳ್ಳು, ಮೋಸ, ಮದ್ಯಪಾನ, ಜೂಜು ಇವೆಲ್ಲವನ್ನು ಪ್ರತಿಯೊಬ್ಬನೂ ತ್ಯಜಿಸಬೇಕು. ವಿದ್ಯಾವಂತರು ದೇವರ ಪ್ರತಿನಿಧಿಗಳಿದ್ದ ಹಾಗೆ"—ಇವು ಮೊಹಮ್ಮದ್ ಪೈಗಂಬರರು (ಸ.ಅ.ಸ.) ಖುರಾನಿನ ಮೂಲಕ ಬೀರಿದ ಇಸ್ಲಾಂ ಸಂದೇಶದ ಸಾರಾಂಶ.

ಇಸ್ಲಾಂ, ಪ್ರಪಂಚದಲ್ಲಿ ಏಷ್ಯಾ, ಆಫ್ರಿಕ ಮತ್ತು ಯುರೋಪ್ ಖಂಡಗಳ ಅನೇಕ ಭಾಗಗಳಲ್ಲಿ ವಾಸಿಸುವ ಅರವತ್ತು ಕೋಟಿಗಿಂತಲೂ ಹೆಚ್ಚು ಜನರ ಮುಖ್ಯ ಧರ್ಮವಾಗಿದೆ. ಆಧುನಿಕ ಪ್ರಪಂಚದಲ್ಲಿ ಆಫ್ಘಾನಿಸ್ತಾನ, ಅಲ್ಬೇನಿಯ, ಇರಾಕ್, ಇರಾನ್, ಇಂಡೋನೇಷ್ಯ, ಈಜಿಪ್ಟ್, ತುರ್ಕಿ, ಟ್ಯುನೀಷಿಯ, ಪಾಕಿಸ್ತಾನ, ಬಂಗ್ಲಾದೇಶ, ಮೊರಾಕೊ, ಲಿಬಿಯ, ಸಿರಿಯ, ಸೌದಿ ಅರೇಬಿಯ ಮುಂತಾದುವು ಮುಖ್ಯ ಮುಸ್ಲಿಂ ರಾಷ್ಟ್ರಗಳು. ಇವಲ್ಲದೆ ಮುಸ್ಲಿಮರು ಆಫ್ರಿಕ, ಚೀನ, ಫಿಲಿಪ್ಪೈನ್ಸ್, ಭಾರತ, ಯುಗೋಸ್ಲಾವಿಯ, ಲೆಬನಾನ್, ಸೋವಿಯತ್ ಮುಂತಾದ ದೇಶಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಇದ್ದಾರೆ.

ಇಸ್ಲಾಂ ಧರ್ಮದ ಪಾರಮಾರ್ಥಿಕ ಸ್ವರೂಪವು ಮೂಲಭೂತವಾಗಿ ಐದು ತತ್ವಗಳ (ಸಿದ್ಧಾಂತಗಳ) ಮೇಲೆ ಆಧಾರಿತವಾಗಿದೆ. ಪ್ರತಿಯೊಬ್ಬ ಮುಸ್ಲಿಮನಿಗೂ ಇವು ಬಹಳ ಮುಖ್ಯವಾದವು. ಅವುಗಳಾವುವೆಂದರೆ ೧. ಈಮಾನ್ ೨. ನಮಾಜ್ ೩. ರೋಜಾ ೪. ಜಕಾತ್ ಮತ್ತು ೫. ಹಜ್.

೧. **ಈಮಾನ್ :** ಈಮಾನ್ ಅಂದರೆ ಅರಿವು (ಜ್ಞಾನ), ನಂಬಿಗೆ ಅಥವಾ ವಿಶ್ವಾಸ; ದೇವರಲ್ಲಿ ವಿಶ್ವಾಸ ತೋರುವುದು ಎಂದರ್ಥ. ಪ್ರತಿಯೊಬ್ಬ ಮುಸ್ಲಿಮನು ದೇವರಲ್ಲಿ ವಿಶ್ವಾಸವನ್ನಿಡಬೇಕು. ಸತ್ಯ ವಿಶ್ವಾಸವಿಲ್ಲದೆ ಯಾರೂ ನೈಜ ಮುಸಲ್ಮಾನನಾಗಲಾರ. ಬೀಜವಿಲ್ಲದೆ ಗಿಡ ಬೆಳೆಯದಂತೆ ಈಮಾನ್ ಇಲ್ಲದೆ

ಇಸ್ಲಾಂ ಬೆಳೆಯಲಾರದು. ಈ ಮಾನ್ ಇಲ್ಲದೆ ಇಸ್ಲಾಂ ಇಲ್ಲ. ಇದು ಐದು ವಿಧ.

ಈ ಮಾನ್ ಅಥವ ವಿಶ್ವಾಸದಲ್ಲಿ ಮೊದಲನೆಯದೇ ಏಕದೇವನಲ್ಲಿ ವಿಶ್ವಾಸ. "ಲಾ–ಇಲಾಹ–ಇಲ್ಲ ಲ್ಲಾ ಹು'...." ಅಂದರೆ ಅಲ್ಲಾಹ್‌ನೊಬ್ಬನೇ ಆರಾಧನೆಗೆ ಯೋಗ್ಯನಾದವನು. ಈ ಮಾತಿನಲ್ಲಿ ವಿಶ್ವಾಸವುಳ್ಳವನೇ ಮುಸಲ್ಮಾನ. ಇದುವೇ ಪ್ರವಾದಿ ಮೊಹಮ್ಮದ್ (ಸ.ಅ.ಸ)ರ ಮೂಲಭೂತ ಹಾಗೂ ಅತ್ಯಂತ ಪ್ರಮುಖವಾದ ಬೋಧನೆ. ಇದುವೇ ಇಸ್ಲಾಮಿನ ಜೀವಾಳ. ದೇವರ ಅಸ್ತಿತ್ವದಲ್ಲಿ ಅಚಲ ಶ್ರದ್ಧೆ ಇರಬೇಕಾದುದು ಪ್ರತಿಯೊಬ್ಬ ಮುಸ್ಲಿಮನಲ್ಲಿರಬೇಕಾದ ಪ್ರಾಥಮಿಕ ಅವಶ್ಯಕತೆ.

ಎರಡನೆಯದು ಮಲಕ್ ಅಥವ ದೇವದೂತರಲ್ಲಿ ವಿಶ್ವಾಸ. ಈ ದೇವದೂತರನ್ನು ಅಲ್ಲಾಹ್‌ನು ಜ್ಯೋತಿ (ಬೆಳಕು) ಯಿಂದ ಸೃಷ್ಟಿಸಿದ್ದಾನೆ. ಅವರಲ್ಲಿ ಪ್ರಸಿದ್ಧರು ನಾಲ್ವರು. ಹ|| ಜಿಬ್ರಾಯಿಲ್(ಅ) ಅವರು ಅಲ್ಲಾಹ್‌ನ ಆಜ್ಞೆ, ಅಪ್ಪಣೆಗಳನ್ನು, ಸಂದೇಶಗಳನ್ನು, ಗ್ರಂಥಗಳನ್ನು ಎಲ್ಲಾ ಪ್ರವಾದಿಗಳ ಬಳಿ ಕೊಂಡೊಯ್ಯುತ್ತಿದ್ದರು. ಹ|| ಇಸ್ರಾಫೀಲ್(ಅ) ಅವರು ನಿರ್ಣಾಯಕ ದಿನದಂದು ಸೂರ್ ಅಥವ ಕಹಳೆ ಊದುವವರು. ಹ|| ಮೀಕಾಈಲ್(ಅ) ಅವರು ಮಳೆಯನ್ನು ಬರಿಸುವವರು ಹಾಗೂ ದೇವರು ಸೃಷ್ಟಿಸಿದ ಎಲ್ಲ ಜೀವಿಗಳಿಗೂ ಆಹಾರವನ್ನೊದಗಿಸುವವರು ಮತ್ತು ಹ|| ಇಜ್ರಾಈಲ್(ಅ) ಅವರು ಜೀವಿಗಳ ಪ್ರಾಣ ತೆಗೆಯುವವರು. ಪ್ರತಿಯೊಬ್ಬ ಮುಸ್ಲಿಮನು ಇವರಲ್ಲಿ ವಿಶ್ವಾಸವನ್ನಿಡಬೇಕಾದುದು ಆವಶ್ಯಕ.

ಪ್ರತಿಯೊಬ್ಬ ಮುಸ್ಲಿಮನು ದೇವರು ಕರುಣಿಸಿದ ಧರ್ಮಗ್ರಂಥಗಳಲ್ಲಿ ವಿಶ್ವಾಸವನ್ನಿಡಬೇಕಾದುದು ಮೂರನೆಯದು. ಅವುಗಳಲ್ಲಿ ತೌರಾತ್ ಹ|| ಮೂಸ(ಅ) ಅವರ ಮೇಲೆ ಅವತೀರ್ಣವಾದ ಗ್ರಂಥ (ಯಹೂದಿಗಳ ಗ್ರಂಥ), ಝಬೂರ್ ಹ|| ದಾವೂದ್ (ಅ) ಅವರ ಮೇಲೆ ಅವತೀರ್ಣವಾದ ಗ್ರಂಥ, ಇಂಜಿಲ್ ಹ|| ಈಸಾ (ಅ) ಅವರ ಮೇಲೆ ಅವತೀರ್ಣವಾದ ಗ್ರಂಥ (ಕ್ರಿಶ್ಚಿಯನ್ನರ ಗ್ರಂಥ) ಮತ್ತು ಖುರಾನ್ ಹ|| ಮೊಹಮ್ಮದ್ (ಸ.ಅ.ಸ) ಅವರ ಮೇಲೆ ಅವತೀರ್ಣವಾದ ಗ್ರಂಥ (ಮುಸ್ಲಿಮರ ಗ್ರಂಥ) ಮುಖ್ಯವಾದುವು. ಈ ಗ್ರಂಥಗಳು ಮೊದಲು ದೇವದೂತರ ಮುಖಾಂತರ ಪ್ರವಾದಿಗಳ ಮೇಲೆ ಅವತೀರ್ಣವಾಗಿ ನಂತರ ಜನರಿಗೆ ತಲುಪಿದುವು. ಇವುಗಳಲ್ಲಿ ವಿಶ್ವಾಸವನ್ನಿಡುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿದೆ.

ನಾಲ್ಕನೆಯದು ದೇವನು ಕಳುಹಿಸಿದ ಪ್ರವಾದಿಗಳಲ್ಲಿ ವಿಶ್ವಾಸ ಇಡುವುದು; ಇಸ್ಲಾಂ ಧರ್ಮದ ಮೂಲಭೂತ ಸಿದ್ಧಾಂತಗಳಲ್ಲಿ ಇದು ಎರಡನೆಯದು. ಇಲ್ಲಿಯವರೆಗೆ ದೇವರು ಜನರ ಕಲ್ಯಾಣಕ್ಕಾಗಿ ಒಂದು ಲಕ್ಷ ಇಪ್ಪತ್ತ ನಾಲ್ಕು ಸಾವಿರ ಪ್ರವಾದಿಗಳನ್ನು ಈ ಭೂಲೋಕಕ್ಕೆ ಕಳುಹಿಸಿದ್ದಾನೆ. ಅವರಲ್ಲಿ ಪ್ರಥಮ ಪ್ರವಾದಿ ಆದಂ (ಅ) ಮತ್ತು ಕೊನೆಯ ಪ್ರವಾದಿ ಮೊಹಮ್ಮದ್(ಸ.ಅ.ಸ.). "ಮೊಹಮ್ಮದರ್ರಸೂಲಿಲ್ಲಾಹಿ" ಅಂದರೆ ಮೊಹಮ್ಮದರು ದೇವರು ಕಳುಹಿಸಿದ ಪ್ರವಾದಿ. ಇವರ ಪ್ರವಾದಿತ್ವದಲ್ಲಿ ವಿಶ್ವಾಸವಿರುವುದು ಹಾಗೂ ಅವರ ಆದೇಶ ಮತ್ತು ಆದರ್ಶಗಳನ್ನು ಅನುಸರಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿದೆ.

ಮರಣೋತ್ತರ ಜೀವನದಲ್ಲಿ ವಿಶ್ವಾಸವನ್ನಿಡುವುದು ಐದನೆಯದು ಮತ್ತು ಕೊನೆಯದು. ಮರಣೋತ್ತರ ಜೀವನದಲ್ಲಿ ಮತ್ತು ನಿರ್ಣಾಯಕ ದಿನದಂದು ಮನುಷ್ಯನು ತಾನು ಇಹ ಜೀವನದಲ್ಲಿ ಮಾಡಿದ ಕೆಲಸಕಾರ್ಯಗಳಿಗಾಗಿ ಫಲಾಫಲಗಳನ್ನು ಪಡೆಯಲಿರುವನೆಂಬ ಸಂಗತಿಯಲ್ಲಿ ವಿಶ್ವಾಸ. ಮೊಹರಂ ತಿಂಗಳ ಹತ್ತನೆಯ ದಿವಸ ಶುಕ್ರವಾರದಂದು ಪ್ರಪಂಚವು ಪ್ರಳಯವಾಗುತ್ತದೆ. ಆಗ ಸರ್ವನಾಶವಾಗುತ್ತದೆ. ಸತ್ತು ಹೋದ ಎಲ್ಲರಿಗೂ ದೇವರು ಜೀವ ಕೊಡುತ್ತಾನೆ. ದೇವರು ಆ ನಿರ್ಣಾಯಕ ದಿನದಂದು ನ್ಯಾಯಾಧೀಶನ ಸ್ಥಾನದಲ್ಲಿದ್ದು ಅವರವರ ಕರ್ಮಗಳಿಗನುಸಾರ ಸ್ವರ್ಗ ಹಾಗೂ ನರಕಗಳಿಗೆ ಕಳುಹಿಸುವನು ಎಂಬ ವಿಷಯದ ಬಗ್ಗೆ ವಿಶ್ವಾಸ ಪ್ರತಿಯೊಬ್ಬ ಮುಸ್ಲಿಮನು ಇಡಬೇಕು.

ಈ ಐದು ವಿಚಾರಗಳಲ್ಲಿ ವಿಶ್ವಾಸವಿಡಬೇಕೆಂದು ಪ್ರವಾದಿ ಮೊಹಮ್ಮದರು (ಸ. ಅ. ಸ.) ಆದೇಶವಿತ್ತಿದ್ದಾರೆ. ಈ ಎಲ್ಲ ವಿಶ್ವಾಸಗಳೂ ತರ್ಕಬದ್ಧವೆನಿಸಿವೆ.

೨. **ನಮಾಜ್ :** ನಮಾಜ್ ಅಂದರೆ ಪ್ರಾರ್ಥನೆ. ಯಾವ ರೀತಿಯಲ್ಲಿ ಹಿಂದುಗಳಲ್ಲಿ ದೇವರ ಭಕ್ತಿಗಾಗಿ ಪೂಜೆ, ಭಜನೆ, ಕೀರ್ತನೆ, ಜಪ-ತಪ, ಸಾಮೂಹಿಕ ಪ್ರಾರ್ಥನೆ ಇತ್ಯಾದಿ ಮಾರ್ಗಗಳಿವೆಯೋ ಅದೇ ರೀತಿಯಲ್ಲಿ ಮುಸ್ಲಿಮರಲ್ಲಿ ನಮಾಜ್ ಮಾಡುವುದು ಒಂದು ಅನಿವಾರ್ಯ ಭಕ್ತಿ ಮಾರ್ಗ. ದೇವರು ನಮಗೆ ಗಾಳಿ, ಬೆಳಕು, ನೀರು, ಆಹಾರ, ವಸತಿ ಇತ್ಯಾದಿ ಅವಶ್ಯಕತೆಗಳನ್ನು ಪೂರೈಸಿದ್ದಾನೆ. ತನ್ನ ಅವಶ್ಯಕತೆಗಳನ್ನೆಲ್ಲಾ ಪೂರೈಸಿದ ದೇವರಿಗೆ ಮನುಷ್ಯನು ಕೃತಜ್ಞತಾಪೂರ್ವಕವಾಗಿ ಸಲ್ಲಿಸುವ ನಮನವೇ ನಮಾಜ್. ಪ್ರತಿಯೊಬ್ಬ ಮುಸ್ಲಿಮನು ದಿನಕ್ಕೆ ಐದು ಬಾರಿ ಪ್ರಾರ್ಥನೆಯನ್ನು ಮಾಡಬೇಕು. ಈ ಪ್ರಾರ್ಥನೆಗೆ ಶರೀರದ, ಉಡುಪಿನ ಮತ್ತು ಸ್ಥಳದ ಪರಿಶುದ್ಧತೆ ಅವಶ್ಯಕ. ಪ್ರತಿದಿನ ಆಗಾಗ್ಗೆ ಮಾಡುವ ಈ ಪ್ರಾರ್ಥನೆಗಳು ವ್ಯಾವಹಾರಿಕ ಚಟುವಟಿಕೆಗಳ ಗೊಂದಲದಲ್ಲಿ ನಮ್ಮ ಜೀವನದ ಧ್ಯೇಯೋದ್ದೇಶಗಳೇ ಮರೆತು ಹೋಗದಂತೆ ಎಚ್ಚರಿಕೆ ನೀಡುತ್ತವೆ. ಪ್ರತಿನಿತ್ಯ ಐದು ಸಲ ಮಸೀದಿಗಳಲ್ಲಿ ಮುಸ್ಲಿಮರು ನಮಾಜ್ ಮಾಡಲು ಸೇರುತ್ತಾರೆ. ಇದರಿಂದ ಪರಸ್ಪರ ಪ್ರೇಮ ಮತ್ತು ಐಕ್ಯ ಭಾವನೆ ಉಂಟಾಗುತ್ತದೆ. ಬಡವ-ಬಲ್ಲಿದ, ಉಚ್ಚ-ನೀಚ, ಒಡೆಯ-ಸೇವಕ, ಕಪ್ಪು-ಬಿಳಿಯರೆಂಬ ಯಾವುದೇ ವಿಧದ ತಾರತಮ್ಯವಿಲ್ಲದೆ ಭುಜಕ್ಕೆ ಭುಜ ಹಚ್ಚಿ ಏಕಕಾಲದಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದರಿಂದ ನಮ್ಮಲ್ಲಿ ಪರಸ್ಪರ ಸಮಾನತೆ ಮತ್ತು ಅನನ್ಯವಾದ ಭ್ರಾತೃಭಾವನೆ ಉಂಟಾಗುತ್ತದೆ. ಪ್ರಾರ್ಥನೆ ಮುಸ್ಲಿಮನಿಗೆ ಮರಣದ ಭಯ, ಪುನರುತ್ಥಾನದ ದಿವಸ ದೇವರ ಮುಂದೆ ಹೋಗಿ ನಿಲ್ಲುವ ಭಯ ಮುಂತಾದ ಭಯಗಳನ್ನು ತೊಲಗಿಸುತ್ತದೆ. ಖುರಾನ್ ಹೀಗೆ ಹೇಳುತ್ತದೆ : ಪ್ರಾರ್ಥನೆ ಮುಸ್ಲಿಮನನ್ನು ದೇಹದಲ್ಲಿ ಮತ್ತು ಆತ್ಮದಲ್ಲಿ ಕ್ಲುಪ್ತನನ್ನಾಗಿ, ವ್ಯವಸ್ಥಿತನನ್ನಾಗಿ, ಸ್ವಸ್ಥ ಹಾಗೂ ಶುದ್ಧನನ್ನಾಗಿ ಇರಿಸುವ ಆಧ್ಯಾತ್ಮಿಕ ಸಾಧನ. ದೊಡ್ಡವನಿರಲಿ ಸಣ್ಣವನಿರಲಿ, ಧನಿಕನಾಗಿರಲಿ ದರಿದ್ರನಿರಲಿ, ದೊರೆಗಳಾಗಲಿ ಪ್ರಜೆಗಳಾಗಲಿ ಎಲ್ಲ ಮುಸ್ಲಿಮರು ಧರ್ಮದ ಕಾರ್ಯದಲ್ಲಿ ಸಮಾನರು.

ಇಸ್ಲಾಂ ಧರ್ಮದಲ್ಲಿ ಪ್ರತಿಯೊಬ್ಬ ಮುಸ್ಲಿಮನು ದಿನಕ್ಕೈದು ಸಾರಿ ಪ್ರಾರ್ಥನೆ ಮಾಡುವುದು ಕಡ್ಡಾಯವೂ ಮತ್ತು ಕರ್ತವ್ಯವೂ ಆಗಿದೆ.

೩. **ರೋಜಾ :** ರೋಜಾ ಅಂದರೆ ಉಪವಾಸ ವ್ರತ. ರಂಜಾನ್ ತಿಂಗಳಲ್ಲಿ ಮೂವತ್ತು ದಿವಸಗಳ ಉಪವಾಸಾಚರಣೆ ಮುಸ್ಲಿಮರ ಮೂಲಭೂತ ಕರ್ತವ್ಯಗಳಲ್ಲಿ ಒಂದು. "ಸತ್ಯವಿಶ್ವಾಸಿಗಳೇ ನಿಮ್ಮ ಪೂರ್ವಜರ ಮೇಲೆ ಕಡ್ಡಾಯಗೊಳಿಸಿದಂತೆ ನಿಮ್ಮ ಮೇಲೂ ಉಪವಾಸಾಚರಣೆಯನ್ನು ಕಡ್ಡಾಯಗೊಳಿಸಿದೆ. ನೀವು ದೇವರ ಭಕ್ತರಾಗಬೇಕೆಂದು ಹೀಗೆ ಮಾಡಿದೆ" ಎನ್ನುತ್ತದೆ ಪವಿತ್ರ ಖುರಾನ್. ಉಪವಾಸದ ಮಹತ್ವವನ್ನು ಯಾವ ಮುಸ್ಲಿಮನೂ ನಿರಾಕರಿಸಲು ಸಾಧ್ಯವಿಲ್ಲ. ನಿರಾಕರಿಸುವವರು ಮುಸ್ಲಿಮರಾಗಿ ಉಳಿಯುವುದಿಲ್ಲ. ಇದು ಇಸ್ಲಾಮಿನ ಇತಿಹಾಸದ ಉದ್ದಕ್ಕೂ ಕಂಡುಬಂದಿರುವ ಒಂದು ವಾಸ್ತವ ಸಂಗತಿ. ಒಂದು ತಿಂಗಳಲ್ಲಿ ಮುಸ್ಲಿಮರು ಸಹಿಸುವ ಕಷ್ಟಯಾತನೆಗಳಿಂದ ಜೀವನದ ಕಠಿಣತೆಯ ಅರಿವಾಗಿ ಇತರ ತಿಂಗಳುಗಳಲ್ಲಿಯೂ ಸರಳ ಜೀವನದೊಂದಿಗೆ ದೇವರ ನೈಜ ಇಚ್ಛೆಗನುಗುಣವಾಗಿ ಬಾಳುವಂತಹ ರೂಢಿ ಉಂಟಾಗುತ್ತದೆ. ದುರಭ್ಯಾಸಗಳು ಕಡಿಮೆಯಾಗುತ್ತವೆ. ಮಾಡಿದ ಪಾಪಗಳು ಕ್ಷಮಿಸಲ್ಪಡುತ್ತವೆ. ಧನಿಕ-ಬಡವ ಪ್ರತಿಯೊಬ್ಬನು ಒಂದೇ ರೀತಿಯಲ್ಲಿ ಉಪವಾಸ ವ್ರತವನ್ನಾಚರಿಸುವುದರಿಂದ ಪರಸ್ಪರ ಸಮಾನತೆ, ಪ್ರೀತಿ, ವಾತ್ಸಲ್ಯ ಹಾಗೂ ಬಾಂಧವ್ಯಗಳು ಬೆಳೆಯಲು ಅನುಕೂಲವಾಗುತ್ತದೆ. ಬಡವರ ಕಷ್ಟದ ಅರಿವಾಗಿ ಅವರಿಗೆ ಸಹಾಯ ಮಾಡುವ ಮನೋಭಾವ ಶ್ರೀಮಂತರಲ್ಲಿ ಬೆಳೆಯುತ್ತದೆ. ಉಪವಾಸ ವ್ರತವು ಅನೇಕ ರೋಗರುಜಿನಗಳ ನಿವಾರಣೆಗೆ ಒಳ್ಳೆಯದೆಂದು ಹಲವು ತಜ್ಞ ವೈದ್ಯರ ಅಭಿಪ್ರಾಯ. ವ್ಯಕ್ತಿಗೆ ಉಪವಾಸ ವ್ರತವು ದೈವಭಕ್ತಿಯನ್ನು ಸದಾ ಜಾಗೃತ ವಿಡುವಲ್ಲಿ ಸಹಾಯಕವಾಗಿದೆ. ಉಪವಾಸ ವ್ರತವು ಉಪವಾಸಿಗಳಿಗೆ ಪ್ರಾಮಾಣಿಕತೆಯನ್ನು ಕಲಿಸುತ್ತದೆ, ಸತ್ಕರ್ಮಗಳ ಒಲವನ್ನು ಬೆಳೆಸುತ್ತದೆ. ವ್ಯಕ್ತಿಯಲ್ಲಿ ತಾಳ್ಮೆ ಮತ್ತು ಔದಾರ್ಯದ ಗುಣಗಳನ್ನು ಬೆಳೆಸುತ್ತದೆ. ದೇವನ ದೃಷ್ಟಿಯಲ್ಲಿ ಮನುಷ್ಯರೆಲ್ಲರೂ ಸಂಪೂರ್ಣ ಸಮಾನರೆಂಬ ಪ್ರಜ್ಞೆಯನ್ನು ಬೆಳೆಸುತ್ತದೆ ಮತ್ತು ಸಾಮಾಜಿಕ ಬಾಂಧವ್ಯ ಬೆಳೆಸುವಲ್ಲಿ ಬಹಳ ಪರಿಣಾಮಕಾರಿ ಪಾತ್ರ ವಹಿಸುತ್ತದೆ. ಇದರಿಂದ ಪ್ರತಿಯೊಬ್ಬ ಮುಸ್ಲಿಮನಿಗೂ (ವ್ಯಕ್ತಿಗೂ) ಇದರ ಮಹತ್ವಗಳೇನೆಂದು ತಿಳಿಯುತ್ತದೆ.

೪. **ಜಕಾತ್ :** ಜಕಾತ್ ಎಂಬುದು ಒಂದು ಬಗೆಯ ದಾನ. ಇದರ ಉದ್ದೇಶ ಸಾಮಾಜಿಕ ಸೇವೆ. ದಲಿತರ ಉದ್ಧಾರಕ್ಕಾಗಿ ಕೊಡಬೇಕಾದ ಕಡ್ಡಾಯ ಶುಲ್ಕ. ವಾರ್ಷಿಕ ಉಳಿತಾಯದಲ್ಲಿ ನಲವತ್ತನೇ ಒಂದಂಶ. ಅಂದರೆ ಶೇಕಡ ಎರಡೂವರೆ ಭಾಗವನ್ನು ದೀನದಲಿತರ, ದುರ್ಬಲರ, ಅಂಗವಿಕಲರ, ಅಬಲೆಯರ, ಅನಾಥರ, ವಿಧವೆಯರ ಸಹಾಯಾರ್ಥ ನೀಡುವ ಶುಲ್ಕವೇ ಜಕಾತ್. ಹೀಗೆ ನೀಡುವುದರಿಂದ ನೀಡಿದ ವ್ಯಕ್ತಿ ಹಗಲು ರಾತ್ರಿ ನಮಾಜ್ ಮಾಡಿದವರಂತೆ, ಅನುದಿನವೂ ಉಪವಾಸ ವ್ರತ ಕೈಗೊಂಡವರಂತೆ, ದೇವರ ಆದೇಶದಂತೆ ಸಕಲ ಸಂಪತ್ತನ್ನು

ಸತ್ಕಾರ್ಯದಲ್ಲಿ ತೊಡಗಿಸಿದವರಂತೆ ಸತ್ಫಲಕ್ಕೆ ಅರ್ಹನಾಗುತ್ತಾನೆ ಎಂಬುದಾಗಿ ಪ್ರವಾದಿಯವರು ನುಡಿದಿದ್ದಾರೆ. ಸ್ವಾರ್ಥ ಹಾಗೂ ಧನದ ಆರಾಧನೆಗಳನ್ನು ತೊರೆದು, ತ್ಯಾಗಮನೋಭಾವವನ್ನು ಬೆಳೆಸುವುದೇ ಜಕಾತ್‌ನ ವೈಶಿಷ್ಟ್ಯ ಮತ್ತು ಮಹತ್ವ. ಇದರಿಂದ ಅನೇಕರಿಗೆ ಆರ್ಥಿಕ ನೆರವು ಆಗುತ್ತದೆ. ಇದರಿಂದ ಶ್ರೀಮಂತರ ಒಂದಿಷ್ಟು ಹಣ ಸತ್ಕಾರ್ಯಕ್ಕೆ ತನ್ಮೂಲಕ ಬಡವರ ನೆರವಿಗೆ ಉಪಯೋಗಿಸಿದಂತಾಗುತ್ತದೆ. ವಾರ್ಷಿಕ ಉಳಿತಾಯದಲ್ಲಿ ಪ್ರತಿಯೊಬ್ಬ ಮುಸ್ಲಿಮನಿಗೂ ಜಕಾತ್ ಕಡ್ಡಾಯವಾಗಿದೆ.

೫. **ಹಜ್ :** ಹಜ್ ಅಂದರೆ ಅರೇಬಿಯಾದ ಮಕ್ಕಾ ನಗರದಲ್ಲಿರುವ 'ಕಾಬಾ' ಮಂದಿರದ ದರ್ಶನ, ಮದಿನಾ ನಗರದಲ್ಲಿರುವ (ಕಾಬಾದಿಂದ ಸು. ೨೫೦ ಮೈಲಿಗಳಷ್ಟು ದೂರ) ಅಂತ್ಯ ಪ್ರವಾದಿಗಳ ಗೋರಿಗಳ ದರ್ಶನ ಮಾಡಿ ವಿಧಿವತ್ತಾದ ಪ್ರಾರ್ಥನೆಯನ್ನು ಸಲ್ಲಿಸುವುದೇ ಹಜ್ ಯಾತ್ರೆ. ಯಾವ ರೀತಿಯಲ್ಲಿ ಕಾಶಿ, ರಾಮೇಶ್ವರ, ದ್ವಾರಕಾ ಇತ್ಯಾದಿ ತೀರ್ಥ ಕ್ಷೇತ್ರಗಳ ಯಾತ್ರೆ ಮಾಡುವುದು ಹಿಂದುಗಳಲ್ಲಿ ಪುಣ್ಯಪ್ರದವೆಂದು ಭಾವಿಸಲಾಗಿದೆಯೋ, ಜೈನರಲ್ಲಿ ತೀರ್ಥಂಕರರ ಕ್ಷೇತ್ರಗಳು, ಬೌದ್ಧರಲ್ಲಿ ಬುದ್ಧನಿಗೆ ಸಂಬಂಧಪಟ್ಟ ಸ್ಥಳಗಳು ಪವಿತ್ರವಾಗಿವೆಯೋ ಅದೇ ರೀತಿಯಲ್ಲಿ ಮುಸ್ಲಿಮರಲ್ಲಿ ತನ್ನ ಜೀವಿತದಲ್ಲಿ ಒಂದು ಬಾರಿಯಾದರೂ ಮಕ್ಕಾ ಯಾತ್ರೆ ಮಾಡಿದವನು ಪುಣ್ಯವಂತನೆಂದು ನಂಬಿಕೆ. ಮಕ್ಕಾ ನಗರದ ಕಾಬಾ ಮಂದಿರವನ್ನು ಇಸ್ಲಾಂನ ಪ್ರವಾದಿಗಳಲ್ಲೊಬ್ಬರಾದ ಇಬ್ರಾಹಿಂ (ಅ) ಮತ್ತು ಅವರ ಮಗ ಇಸ್ಮಾಯಿಲ್ (ಅ) ಅವರು ಅಲ್ಲಾಹ್‌ನ ಆಜ್ಞೆಯನುಸಾರ ಪ್ರಾರ್ಥನೆಗೋಸ್ಕರ ಕಟ್ಟಿದರು. ಅನುಕೂಲವಿದ್ದ ಪ್ರತಿಯೊಬ್ಬ ಮುಸ್ಲಿಮನೂ ಜೀವನದಲ್ಲಿ ಒಂದು ಸಾರಿಯಾದರೂ ಹಜ್ ಯಾತ್ರೆ ಮಾಡಬೇಕು. ಹೀಗೆ ಹಜ್ ಯಾತ್ರೆ ಮಾಡಿದ ಮುಸ್ಲಿಮನಿಗೆ ಹಾಜಿ ಎಂದು ಕರೆಯುತ್ತಾರೆ. ವಿಶ್ವದ ನಾನಾ ಭಾಗಗಳಿಂದ ಜನರು ಇಲ್ಲಿ ಬಂದು ಒಂದೇ ಕಡೆ ಪ್ರಾರ್ಥನೆಗೆ ಪಾಲ್ಗೊಳ್ಳುವುದರಿಂದ ಇದು 'ವಿಶ್ವಮಾನವ ಬಾಂಧವ್ಯಕ್ಕೆ' ಸಹಾಯವಾಗುತ್ತದೆ. ಇದು ಪ್ರತಿಯೊಬ್ಬ ಮುಸ್ಲಿಮನಿಗೆ ಕಡ್ಡಾಯವಲ್ಲದಿದ್ದರೂ ಹಣ ಹಾಗೂ ಆರೋಗ್ಯವಂತರಿಗೆ ಇದು ಅನಿವಾರ್ಯ.

ಪ್ರತಿಯೊಬ್ಬ ಮುಸ್ಲಿಮನ ಜೀವನವನ್ನು ನಡೆಸುವ ಪ್ರೇರಕ ಶಕ್ತಿಗಳು ಎರಡು. ಒಂದು ಆತನ ಮತಧರ್ಮಶಾಸ್ತ್ರ. ಇನ್ನೊಂದು ನ್ಯಾಯಶಾಸ್ತ್ರ. ಅವನ ಶ್ರದ್ಧೆ, ನಂಬಿಕೆಗಳಿಗೆ ಮತಧರ್ಮಶಾಸ್ತ್ರ ಮೂಲ. ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎಂಬುದನ್ನು ನಿರ್ಣಯಿಸುವುದು ನ್ಯಾಯ. ನ್ಯಾಯದ ಅಡಿಗಲ್ಲಿನ ಮೇಲೆಯೇ ಮುಸ್ಲಿಮನ ವ್ಯಕ್ತಿತ್ವ ಬೆಳೆಯುತ್ತದೆ. ನ್ಯಾಯ ಸೂತ್ರಕ್ಕೆ ತುಂಬಾ ಪ್ರಾಧಾನ್ಯ ಈ ಧರ್ಮದಲ್ಲಿ ಉಂಟು. ಇಸ್ಲಾಮಿ ನ್ಯಾಯದ ಮೂಲದ ಆಧಾರಗಳೆಂದರೆ ಖುರಾನ್ ಹದೀಸ್, ಸುನ್ನಾ, ಇಜ್ಮಾ ಮತ್ತು ಕಿಯಾಸ್.

ಪ್ರತಿಯೊಬ್ಬ ಮುಸ್ಲಿಮನು ತನ್ನ ಪಾಲಿನ ಆರಾಧನಾ ಕಾರ್ಯಗಳನ್ನು ತಾನೇ ಪೂರೈಸಬೇಕಾಗುತ್ತದೆ. ಜೀವನದ ಆಸೆ-ಆಮಿಷಗಳನ್ನು ಯಥಾಶಕ್ತಿ ನಿಗ್ರಹಿಸಿ

ನಿರಾಡಂಬರ ರೀತಿಯಲ್ಲಿ ಧರ್ಮಸಮ್ಮತವಾಗಿ ಬಾಳುವ ಮೂಲಕ ಆಧ್ಯಾತ್ಮಿಕ ಹೆಗ್ಗಳಿಕೆಯನ್ನು ಗಳಿಸಬೇಕೆಂದು ಪ್ರತಿಯೊಬ್ಬ ಮುಸ್ಲಿಮನಿಗೆ ಇಸ್ಲಾಂ ತಿಳಿಸುತ್ತದೆ.

ಇಸ್ಲಾಂ ಕೇವಲ ಮನುಷ್ಯನ ಆಧ್ಯಾತ್ಮಿಕ ದಾಹ ತಣಿಸಲು ಪ್ರಯತ್ನಿಸುವ ಧರ್ಮವಲ್ಲ. ಅದು ಮನುಷ್ಯನ ಸಾಮಾಜಿಕ, ಆರ್ಥಿಕ, ರಾಜಕೀಯ, ಮಾನಸಿಕ ಇತ್ಯಾದಿ ಎಲ್ಲ ಕ್ಷೇತ್ರಗಳ ಸರ್ವಾಂಗೀಣ ಅಭ್ಯುದಯದ ಧ್ಯೇಯ ಹೊಂದಿದೆ. ಅಂತೆಯೇ ಇಸ್ಲಾಂ ಧರ್ಮದಲ್ಲಿ ಕಡ್ಡಾಯಗೊಳಿಸಿರುವ ಆರಾಧನೆಗಳಲ್ಲೂ ನಾವು ಈ ಸಮಗ್ರತೆಯನ್ನು ಮತ್ತು ಸರ್ವಾಂಗೀಣ ಪ್ರಭಾವಗಳನ್ನು ಕಾಣಬಹುದು.

ಇಸ್ಲಾಂ ಕೇವಲ ಒಂದು ಕಾಲ್ಪನಿಕ ಧರ್ಮವಲ್ಲ. ಅದು ಒಂದು ಜೀವನ ಸಿದ್ಧಾಂತ ಮತ್ತು ಅತ್ಯುತ್ತಮ ಜೀವನ ವ್ಯವಸ್ಥೆಯಾಗಿದೆ. ಈ ಜೀವನದ ಕ್ರಮವನ್ನು ಪ್ರಪಂಚದಲ್ಲಿ ಅನೇಕ ರಾಷ್ಟ್ರಗಳ ಜನರು ಪಾಲಿಸುತ್ತಿದ್ದಾರೆ. ಪ್ರಸಿದ್ಧ ಲೇಖಕ ಜಾರ್ಜ್ ಬರ್ನಾರ್ಡ್ ಷಾನು "ಮೊಹಮ್ಮದನು ಬೋಧಿಸಿದ ಧರ್ಮದಲ್ಲಿಯ ಅಗಾಧ ಸತ್ವ ಮತ್ತು ಚೇತನಗಳಿಂದಾಗಿ ನಾನು ಆ ಧರ್ಮವನ್ನು ಬಹುವಾಗಿ ಗೌರವಿಸುತ್ತೇನೆ. ಬದಲಾಗುತ್ತಿರುವ ಜೀವನದ ಅವಶ್ಯಕತೆಗಳಿಗೆ ಹೊಂದಿಕೊಳ್ಳುವ ವೈಶಾಲ್ಯವನ್ನು ಪಡೆದ ಧರ್ಮ ಇದೊಂದೇ ಎಂದು ನನಗನಿಸುತ್ತದೆ. ಹೀಗಾಗಿ ಈ ಧರ್ಮವು ಎಲ್ಲ ಕಾಲಗಳಿಗೂ ಅನ್ವಯಿಸುವಂತಿದೆ" ಎಂದಿದ್ದಾನೆ. ಅವನು ಮೊಹಮ್ಮದ್ ಪೈಗಂಬರರನ್ನು ಕುರಿತು "ಮನುಕುಲವನ್ನು ವಿನಾಶದಿಂದ ರಕ್ಷಿಸಿದ ತಾರಕ" ಎಂದೂ ಹೇಳಿದ್ದಾನೆ.

ಮಾನವನ ವೈಯಕ್ತಿಕ ಜೀವನಕ್ಕೆ ಮಾತ್ರ ಸೀಮಿತವಾದ ಧರ್ಮ ಇಸ್ಲಾಂ ಅಲ್ಲ. ಅದು ವೈಯಕ್ತಿಕ, ಸಾಮಾಜಿಕ, ನ್ಯಾಯನೈತಿಕ, ಸಾಂಸ್ಕೃತಿಕ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮುಂತಾದ ಎಲ್ಲ ರಂಗಗಳಿಗೂ ಅನ್ವಯಿಸುವ ಮಾರ್ಗದರ್ಶನಗಳನ್ನು ನೀಡುತ್ತದೆ. ಅಂತೆಯೇ ಜೀವನದ ಎಲ್ಲ ಕ್ಷೇತ್ರಗಳಲ್ಲೂ ದೇವರ ಮಾರ್ಗದರ್ಶನವನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕೆಂದು ಖುರಾನ್ ಬೋಧಿಸುತ್ತದೆ. ವ್ಯಕ್ತಿ ಸಮಾಜಗಳ ನಡುವೆ ಸುಮಧುರಸಮನ್ವಯವನ್ನುಂಟುಮಾಡುವುದು ಇಸ್ಲಾಂ ಧರ್ಮದ ಇನ್ನೊಂದು ವೈಶಿಷ್ಟ್ಯವೆನಿಸಿದೆ. ಜನಾಂಗದ ಸಾಮರಸ್ಯ ಮತ್ತು ಪಾನನಿರೋಧ ಸಾಧನೆಯಲ್ಲೂ ಇಸ್ಲಾಮಿನ ಪಾತ್ರ ದೊಡ್ಡದು.

ಒಟ್ಟಿನಲ್ಲಿ ಇಸ್ಲಾಂ ಧರ್ಮವು ಗೃಹಸ್ಥ ಜೀವನ, ಗೃಹಸ್ಥನಾದವನಿಗೆ ಪ್ರಾರ್ಥನೆ, ಸರಳ ಜೀವನ ಕ್ರಮ, ದಾನ, ಧರ್ಮ, ಪರೋಪಕಾರ, ಆತ್ಮೋದ್ಧಾರ, ಪರಸ್ಪರ ಪ್ರೇಮ, ಸಮಾನತೆ, ಭ್ರಾತೃತ್ವ, ಮಾನವೀಯತೆ ಮತ್ತು ವಿಶ್ವಬಾಂಧವ್ಯವನ್ನು ಬೋಧಿಸುತ್ತದೆ.

ಜ್ಞಾನಾರ್ಜನೆಯ ಅವಶ್ಯಕತೆಯನ್ನು, ಮಹತ್ವವನ್ನು, ಇಸ್ಲಾಂ ಧರ್ಮ ಬಲವಾಗಿ ಪ್ರತಿಪಾದಿಸಿದೆ. ಅವಕ್ಕೆ ಅನ್ವಯಿಸುವ ಮೊಹಮ್ಮದ್ ಪೈಗಂಬರರ (ಸ.ಅ.ಸ.) ಕೆಲವು ನುಡಿಮುತ್ತುಗಳು (ನುಡಿರತ್ನಗಳು) ಇಂತಿವೆ :

೧ ಜ್ಞಾನಾರ್ಜನೆಗಾಗಿ ಚೀನಾದ ತುದಿಯವರೆಗೆ ಹೋಗಬೇಕಾಗಿಬಂದರೂ ಹಿಂಜರಿಯದಿರಿ.

೨. ವಿದ್ಯಾದಾನಕ್ಕಿಂತ ಮಿಗಿಲಾದ ದಾನ ಬೇರೊಂದಿಲ್ಲ.

೩. ಬಾಲ್ಯದಲ್ಲಿ ಗಳಿಸಿದ ಜ್ಞಾನ ಕಲ್ಲಿನಲ್ಲಿ ಕೆತ್ತಿದಂತೆ; ವೃದ್ಧಾಪ್ಯದಲ್ಲಿ ಗಳಿಸಿದ ಜ್ಞಾನ ನೀರಿನಲ್ಲಿ ಬರೆದಂತೆ.

೪. ಜ್ಞಾನಾರ್ಜನೆಯಲ್ಲಿ ತೊಡಗಿಸಿದ ಕಾಲ ದೇವರಾರಾಧನೆಯಲ್ಲಿ ತೊಡಗಿಸಿದ ಕಾಲವೆಂದು ತಿಳಿ.

೫. ಯೋಗ್ಯ ವಿದ್ಯಾಭ್ಯಾಸಕ್ಕಿಂತ ಹೆಚ್ಚಿನ ಕಾಣಿಕೆಯನ್ನು ಯಾವ ತಂದೆಯೂ ತನ್ನ ಮಕ್ಕಳಿಗೆ ಕೊಡಲಾರ.

೬. ವೆಚ್ಚ ಮಾಡಿದಷ್ಟೂ ಸಂಪತ್ತು ಕಡಿಮೆಯಾಗುತ್ತದೆ. ವಿತರಣೆ ಮಾಡಿದಷ್ಟೂ ಜ್ಞಾನ ಅಧಿಕವಾಗುತ್ತದೆ.

೭. ಜ್ಞಾನವನ್ನು ಮೂಲಧನವನ್ನಾಗಿಯೂ, ನ್ಯಾಯವನ್ನು ಧರ್ಮವನ್ನಾಗಿಯೂ, ಸಹನೆಯನ್ನು ರಕ್ಷಾಕವಚವನ್ನಾಗಿಯೂ ಮತ್ತು ಅಸ್ತ್ರವನ್ನಾಗಿಯೂ ಉಪಯೋಗಿಸುವವನು ಇಹಪರಗಳೆರಡರಲ್ಲಿಯೂ ಯಶಸ್ವಿಯಾಗುತ್ತಾನೆ.

೮. ತನ್ನ ತಾನರಿಯಲು ಜ್ಞಾನ ಬೇಕು.

ಜೀವನದ ಇತರ ಕ್ಷೇತ್ರಗಳಿಗೆ ಅನ್ವಯಿಸುವ ಮೊಹಮ್ಮದ್ ಪೈಗಂಬರ್ ಅವರ (ಸ.ಅ.ಸ.) ಕೆಲವು ನುಡಿರತ್ನಗಳು ಇಂತಿವೆ:

೧. ನೆರೆಹೊರೆಯವರು ಹಸಿದಿರುವಾಗ ಹೊಟ್ಟೆ ತುಂಬಾ ಊಟ ಮಾಡುವವ ಮುಸಲ್ಮಾನನಲ್ಲ.

೨. ಸುಳ್ಳು ಹೇಳುವವನು, ಮೋಸ ಮಾಡುವವನು, ದ್ರೋಹ ಬಗೆಯುವವನು, ಮಾತಿಗೆ ತಪ್ಪುವವನು, ತ್ಯಾಗಕ್ಕೆ ಹೆದರುವವನು ಮುಸಲ್ಮಾನನಲ್ಲ.

೩. ಅನಾಥ ಮಕ್ಕಳಿಗೆ ಆಶ್ರಯ ನೀಡಿ, ಶುಶ್ರೂಷೆ ಮಾಡಿ ಪೋಷಿಸುವ ಮನೆ ನಿಜ ಮುಸಲ್ಮಾನನ ಮನೆ ಎನಿಸಿಕೊಳ್ಳುತ್ತದೆ.

೪. ಮನುಕುಲದ ಮೇಲೆ ದಯೆ ತೋರದವನ ಮೇಲೆ ದೇವರು ದಯೆ ತೋರಲಾರ.

೫. ಮಿತವ್ಯಯ ಅಭ್ಯಾಸ ಮಾಡಿದವನು ದರಿದ್ರನಾಗಲಾರ.

೬. ಬಡವರೊಂದಿಗೆ ಬೆರೆತು ಅವರೊಂದಿಗೆ ಸ್ನೇಹದಿಂದ ವರ್ತಿಸಿ.

೭. ನೆರೆಹೊರೆಯವರು ನಿಮ್ಮನ್ನು ಹೊಗಳಿದರೆ ನೀವು ಉತ್ತಮರು. ಅವರು ನಿಮ್ಮನ್ನು ತೆಗಳಿದರೆ ನೀವು ಕೆಟ್ಟವರು.

೮. ಮಾತಾಪಿತರೊಡನೆ ಔದಾರ್ಯದಿಂದ ವರ್ತಿಸಿರಿ. ನಿಮ್ಮ ಮಕ್ಕಳು ಸಹ ನಿಮ್ಮೊಡನೆ ಉದಾರತೆಯಿಂದ ವರ್ತಿಸುವರು. ನೀವು ನಿಮ್ಮ ಚಾರಿತ್ರ್ಯವನ್ನು ಕಾಪಾಡಿಕೊಳ್ಳಿ. ನಿಮ್ಮ ಸ್ತ್ರೀಯರೂ ಚಾರಿತ್ರ್ಯವತಿಗಳಾಗುವರು.

೯. ನಿಷ್ಠೆ ಪ್ರಾಮಾಣಿಕತೆಯಿಂದ ದುಡಿದು ಬಾಳುವವರು ದೇವರಿಗೆ ಅತ್ಯಂತ ಪ್ರೀತಿಪಾತ್ರರು.

೧೦. ದಾನ ಮಾಡಲು ಹಣವೇ ಬೇಕೆಂದೇನೂ ಇಲ್ಲ. ಸತ್ಕಾರ್ಯವನ್ನು ಮಾಡುವ ಇಲ್ಲವೆ ದುಷ್ಟ ಕಾರ್ಯಗಳಿಂದ ದೂರವಿರುವ ಮೂಲಕವೂ ಆ ಕಾರ್ಯವನ್ನು ಮಾಡಬಹುದು.

೧೧. ಪಚ್ಚಾಳಿಕೆಗೆ ಒಳಗಾದವರು ಮುಸ್ಲಿಮರೇ ಆಗಿರಲಿ ಮುಸ್ಲಿಮೇತರರೇ ಆಗಿರಲಿ ಅವರ ರಕ್ಷಣೆ ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯ.

೧೨. ನಿಮ್ಮ ಸಂಪತ್ತನ್ನೆಲ್ಲ ನೀವೇ ತಿಂದು ಮುಗಿಸಬೇಡಿ. ಪರರ ಧನದಲ್ಲೂ ಪಾಲು ಪಡೆಯಲು ಯತ್ನಿಸಬೇಡಿ. ಹಾಗೆ ಮಾಡಿದರೆ ನಿಮ್ಮ ವಿನಾಶಕ್ಕೆ ನೀವೇ ದಾರಿ ಮಾಡಿಕೊಂಡಂತೆ.

೧೩. ಕೃಷಿಕನ ವಶವಿದ್ದ ಭೂಮಿಯನ್ನು ಬಲಾತ್ಕಾರದಿಂದ ವಶಪಡಿಸಿ ಕೊಳ್ಳುವವನಿಗೆ ನರಕವೇ ಶಾಶ್ವತ ನೆಲೆ.

೧೪. ನೈಜ ಸ್ನೇಹಿತನ ಪರೀಕ್ಷೆಯಾಗುವುದು ಕಷ್ಟಕಾಲದಲ್ಲಿ, ಬೆನ್ನ ಹಿಂದೆ ಮತ್ತು ಮರಣಾನಂತರ.

೧೫. ರೋಜಾ (ಉಪವಾಸ), ನಮಾಜ್ (ಪ್ರಾರ್ಥನೆ), ಜಕಾತ್ (ದಾನ) ಗಳಿಗಿಂತಲೂ ಪವಿತ್ರವಾದ ಕೆಲಸ ಸೌಹಾರ್ದ ಸಾಧನೆ.

ಮಹಿಳೆಯರ ಬಗ್ಗೆ ಮೊಹಮ್ಮದ್ ಪೈಗಂಬರ್ (ಸ.ಅ.ಸ.) ಅವರ ಕೆಲವು ನುಡಿರತ್ನಗಳು ಇಂತಿವೆ :

೧. ತಾಯಿಯ ಪಾದಗಳಡಿಯಲ್ಲಿ ಸ್ವರ್ಗವಿದೆ.

೨. ವಿಧವೆಯರಿಗೂ, ಬಡವರಿಗೂ ನೆರವು ನೀಡುವುದು ಆಜೀವ ಉಪವಾಸ ವ್ರತಾಚರಣೆಗಿಂತ ಮಿಗಿಲು.

೩. ತನ್ನ ಹೆಂಡತಿಯ ಹಕ್ಕುಬಾಧ್ಯತೆಗಳನ್ನು ಮನ್ನಿಸಿ ಪುರಸ್ಕರಿಸುವವನೇ ಉತ್ತಮ ಗೃಹಸ್ಥ.

೪. ಅನಾಥ ಹೆಣ್ಣು ಮಗುವನ್ನು ಪೋಷಿಸಿ, ಸೂಕ್ತ ವಿದ್ಯಾಭ್ಯಾಸ ಮಾಡಿಸಿ ಯೋಗ್ಯ ವರನಿಗೆ ಕೊಟ್ಟು ಮದುವೆ ಮಾಡಿಸುವಂತಹ ಪುಣ್ಯಕಾರ್ಯ ಬೇರೊಂದಿಲ್ಲ.

೫ ವಿವಾಹ ವಿಚ್ಛೇದನವು ನ್ಯಾಯಸಮ್ಮತವೆನಿಸಿದಾಗಲೂ ದೇವರಿಗೆ ಪ್ರಿಯವಲ್ಲ.

೬. ಮಾತೃಸೇವೆಯೇ ಎಲ್ಲದಕ್ಕೂ ಮಿಗಿಲಾದ ಸೇವೆ

೭. ನೀತಿವಂತಳಾದ ಸ್ತ್ರೀ ಸರ್ವೋತ್ಕೃಷ್ಟ ನಿಧಿ ಇದ್ದಂತೆ.

೮. ಗುಣವತಿಯೂ ಸುಶೀಲೆಯೂ ಆದ ಸ್ತ್ರೀಯು ಅತ್ಯಮೂಲ್ಯಳು.

೯. ಮಹಿಳೆಯರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲು ದೇವನು ಆಜ್ಞಾಪಿಸಿರುವನು. ಏಕೆಂದರೆ ಅವರು ನಿಮ್ಮ ತಾಯಂದಿರು, ಸಹೋದರಿಯರು ಮತ್ತು ಪುತ್ರಿಯರು.

೧೦. ನಿಮ್ಮ ಪತ್ನಿಯರನ್ನು ದಾಸಿಯರಂತೆ ಕಾಣಬೇಡಿ.

ಇಸ್ಲಾಂ ಧರ್ಮ ಇಷ್ಟು ಹಕ್ಕುಗಳನ್ನು ನೀಡಿ ಮಹಿಳೆಯರಿಗೆ ಸ್ವತಂತ್ರವಾಗಿ ಬಿಡಲಿಲ್ಲ. ಅವಳ ಕೆಲವು ಗುಣ ಹಾಗೂ ಕರ್ತವ್ಯಗಳನ್ನು ಈ ರೀತಿ ಹೇಳಿದೆ :

೧. ಪತಿ ಮನೆಯಿಂದ ದೂರವಿರುವಾಗ ಅವರ ಸೊತ್ತು ಮತ್ತು ತನ್ನ ಮಾನವನ್ನು ಕಾಪಾಡಿಕೊಳ್ಳಬೇಕು. ಇಂತಹ ಪತ್ನಿ ಮಾತ್ರ ಮಾದರಿ ಪತ್ನಿ ಎನಿಸುವಳು.
೨. ಲೋಕದಲ್ಲಿ ಸಂಪತ್ತಿಗಿಂತಲೂ ಮಿಗಿಲಾದ ವಸ್ತು ಉತ್ತಮ ಗುಣ ನಡತೆಯುಳ್ಳ ಪತ್ನಿ.
೩. ಯಾವ ಮಹಿಳೆ ದಿನಕ್ಕೆ ಐದು ಬಾರಿ ಪ್ರಾರ್ಥನೆ ಮಾಡುತ್ತಾಳೆಯೊ, ಉಪವಾಸ ವ್ರತವನ್ನು ಆಚರಿಸುತ್ತಾಳೆಯೋ, ತನ್ನ ಪತಿಯ ಸೇವೆ ಮಾಡುತ್ತಾಳೆಯೊ, ತನ್ನ ಮಾನವನ್ನು ರಕ್ಷಿಸಿಕೊಳ್ಳುತ್ತಾಳೆಯೊ, ಅಂತಹ ಮಹಿಳೆಯು ಯಾವ ಬಾಗಿಲಿನಿಂದ ಬೇಕಾದರೂ ಸ್ವರ್ಗವನ್ನು ಪ್ರವೇಶಿಸುವಳು.

ಶಿವಯೋಗ-ಪೂರ್ಣಯೋಗ

ಡಾ. ಎಚ್. ತಿಪ್ಪೇರುದ್ರಸ್ವಾಮಿ

'ಯೋಗ' ಎನ್ನುವುದು ಭಾರತೀಯ ಆಧ್ಯಾತ್ಮ ಪರಿಭಾಷೆಯಲ್ಲಿ ಅರ್ಥವತ್ತಾದ ಮತ್ತು ಶಕ್ತಿ ಸಮನ್ವಿತವಾದ ಒಂದು ಪದ. ಷಡ್ ದರ್ಶನಗಳಲ್ಲಿ ಒಂದಾಗಿ ಬಂದ 'ಯೋಗ', ಆ ಮಿತಿಯನ್ನೂ ಮೀರಿ ಎಲ್ಲ ಸಾಧನೆಯ ಮೂಲ ಆಗತ್ಯ ಎನ್ನುವಷ್ಟರ ಮಟ್ಟಿಗೆ ಬೆಳೆಯಿತು. "ಯೋಗಶ್ಚಿತ್ತವೃತ್ತಿ ನಿರೋಧಃ"-ಎಂಬ ಪತಂಜಲಿಯ ಯೋಗಸೂತ್ರದಲ್ಲಿ ಈ ಮಾತಿನ ಅರ್ಥ ವ್ಯಕ್ತವಾಗಿದೆ. ಚಿತ್ತವೃತ್ತಿಗಳನ್ನು ನಿರೋಧಿಸಿದರೆ ಜೀವಾತ್ಮನಿಗೆ ತನ್ನ ಸ್ವಸ್ವರೂಪ ಗೋಚರಿಸುತ್ತದೆ. ಆ ಮೂಲಕ ಜೀವಾತ್ಮ ಪರಮಾತ್ಮರ ಸಂಯೋಗ ಸಂಭವಿಸುತ್ತದೆ.

ಭಗವದ್ಗೀತೆ 'ಯೋಗ' ಎಂಬುದನ್ನು ವ್ಯಾಪಕವಾದ ಅರ್ಥದಲ್ಲಿ ಬಳಸಿತು. "ಯೋಗಃ ಕರ್ಮ ಸುಕೌಶಲಂ." "ಸಿದ್ಧ್ಯಸಿದ್ಧ್ಯೋಃ ಸಮೋಭೂತ್ವಾ ಸಮತ್ವಂ ಯೋಗ ಉಚ್ಯತೇ" ಎಂದು ಮುಂತಾಗಿ ಅದು ಹೇಳುತ್ತದೆ. ಕೆಲಸವನ್ನು ಮಾಡಿಯೂ ಮಾಡದೆ ಇರುವ ನಿರ್ಲಿಪ್ತ ಸ್ಥಿತಿಯೇ 'ಯೋಗ'ವೆಂದು ಹೇಳುವ ಈ ಮಾತು, ಮತ್ತು ಭಕ್ತಿ ಜ್ಞಾನ ಕರ್ಮಯೋಗಗಳನ್ನು ಕುರಿತು ಕೊಡುವ ಅದರ ವಿವರಗಳು ಯೋಗದ ಪರಿಕಲ್ಪನೆಯನ್ನು ಬೆಳೆಸಿದುವು. ಮನಸ್ಸಿನ ಸಮತ್ವ ಸ್ಥಿತಿಯನ್ನು ಬೆಳಸುವುದಕ್ಕಿರುವ ಪ್ರಮುಖ ಸಾಧನಗಳಾಗಿ ಭಕ್ತಿ ಜ್ಞಾನ ಕರ್ಮಗಳು ಇಲ್ಲಿ ಪರಿಣಮಿಸಿದುವು. ಆದರೆ ಯೋಗ ಎನ್ನುವುದನ್ನು ಪತಂಜಲಿ ಹೇಳುವಂತೆ ಯಮ ನಿಯಮ ಪ್ರಾಣಾಯಾಮಾದಿ ಸಾಧನಗಳಿಂದ ಮನಸ್ಸಿನ ಚಲನ ವಲನಗಳನ್ನು ತಡೆದು ಅದನ್ನು ಕೇಂದ್ರೀಕರಿಸಿ ಅದರಿಂದ ಪಡೆಯಬಹುದಾದ ಶಕ್ತಿ – ಎಂಬ ಅರ್ಥದಲ್ಲಿ ತೆಗೆದುಕೊಂಡಾಗ ಯೋಗದಲ್ಲಿ ಸಾಮಾನ್ಯವಾಗಿ ನಾಲ್ಕು ವಿಧಗಳನ್ನು ಗುರುತಿಸಬಹುದು– ಮಂತ್ರಯೋಗ, ಲಯಯೋಗ, ಹಠಯೋಗ ಮತ್ತು ರಾಜಯೋಗ ಎಂಬುದಾಗಿ. ಇವುಗಳಲ್ಲಿ ಮೊದಲನೆಯ ಮೂರು, ದೇಹದಲ್ಲಿರುವ ಸುಪ್ತ ಶಕ್ತಿಗಳನ್ನು ಜಾಗ್ರತಗೊಳಿಸಿ ದೇಹದ ಮೇಲೆ ಪ್ರಭುತ್ವವನ್ನು ಸ್ಥಾಪಿಸುವುದಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತವೆ. ಆದರೆ ರಾಜಯೋಗ ಅವುಗಳಂತೆ ವಿಶೇಷ ದೇಹ ದಂಡನೆಯನ್ನು ಹೇಳದೆ ಮನೋವೃತ್ತಿಗಳನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಹೆಚ್ಚಿನ ಗಮನ ಕೊಡುತ್ತದೆ ; ಧ್ಯಾನಧಾರಣ ಸಮಾಧಿಗಳಿಂದ ಆತ್ಮ ಪರಮಾತ್ಮರ ಸಂಯೋಗವನ್ನು ಸಾಧಿಸಲು ತೊಡಗುತ್ತದೆ.

ಭಕ್ತಿಯೋಗ ನಿಷ್ಕಾಮ ಪ್ರೇಮರೂಪವಾದ ಶರಣಾಗತಿಯಿಂದ ಇದನ್ನು ಸಾಧಿಸಲು ತೊಡಗುತ್ತದೆ. ಕರ್ಮಯೋಗ ಸುಖದುಃಖಗಳಲ್ಲಿ ಸಮತ್ವವನ್ನು

ಕಾಯ್ದುಕೊಂಡು ಫಲಪದದಾಸೆಯಿಲ್ಲದೆ ನಿರ್ಲಿಪ್ತ ಕರ್ಮಗಳಿಂದ ಇದನ್ನು ಪಡೆಯಲು ಹವಣಿಸುತ್ತದೆ. ಜ್ಞಾನಯೋಗ ಸಾಧನ ಚತುಷ್ಟಯಗಳ, ಅಂದರೆ ವಿವೇಕ ವೈರಾಗ್ಯ ಶಮದಮಾದಿ ಷಡ್ಗುಣಗಳು ಮತ್ತು ಮುಮುಕ್ಷುತ್ವಗಳ ಬೆಳವಣಿಗೆಯ ಮೂಲಕವಾದ ಅರಿವಿನ ಸಾಧನೆಯಿಂದ ಆ ಗುರಿಯತ್ತ ನಡೆಯುತ್ತದೆ. ವಾಸ್ತವವಾಗಿ ಇವು ಬೇರೆ ಬೇರೆಯಲ್ಲ. ಇವು ಪರಸ್ಪರ ಅವಲಂಬಿಗಳಾಗಿ, ಪೂರಕವಾಗಿ ನಡೆಯಬೇಕಾಗುತ್ತದೆ. ಒಬ್ಬೊಬ್ಬ ಸಾಧಕನಲ್ಲಿಯೂ ಅವನ ಮನೋಧರ್ಮಕ್ಕನುಗುಣವಾಗಿ ಇವು ಹೆಚ್ಚು ಕಡಮೆ ಪ್ರಮಾಣದಲ್ಲಿರಬಹುದು. ಆದರೆ ಯೋಗಮಾರ್ಗ ಪೂರ್ಣ ಫಲದಾಯಕವಾಗಲು ಇವು ಮೂರೂ ಆವಶ್ಯಕ. ಈ ಸಮನ್ವಯವನ್ನೇ ಭಗವದ್ಗೀತೆ ಬೋಧಿಸಿತು; ಆಗಮಗಳು ಸಾರಿದುವು. ಅನೇಕ ಪುರಾತನರು ಆಚರಿಸಿ ತೋರಿಸಿದರು. ಇದೆಲ್ಲದರ ಮೇಲೆ ಕರ್ನಾಟಕದ ಶಿವಶರಣರು ಹೊಸದೊಂದು ಯೋಗಸೌಧವನ್ನೇ ನಿರ್ಮಿಸಿದರು. ಷಟ್‌ಸ್ಥಲಗಳ ಮಟ್ಟಿಲುಗಳಲ್ಲಿ ಕಂಡ ಅಂತರ್ ವಿಕಾಸದ ಪೂರ್ಣದೃಷ್ಟಿ ಅವರ ಯೋಗ ಸಮನ್ವಯಕ್ಕೆ ತಳಹದಿಯಾಯಿತು; ಶಿವಯೋಗಕ್ಕೆ ಕಾರಣವಾಯಿತು.

ಇಲ್ಲಿ ಸಮನ್ವಯವೆಂದರೆ ಎಲ್ಲ ಯೋಗಗಳ ಬೆರಸುವಿಕೆಯಲ್ಲ; ಅಥವಾ ಒಂದಾದ ಮೇಲೊಂದರಂತೆ ಅವುಗಳ ಅನುಕ್ರಮವಾದ ಆಚರಣೆಯೂ ಅಲ್ಲ. ಸಾಧನೆಯ ಪ್ರಾರಂಭದಲ್ಲಿಯೇ ಎಲ್ಲ ಯೋಗಗಳ ಒಟ್ಟು ದೃಷ್ಟಿಯಿಂದ ಉಂಟಾದ ಮೂಲಭೂತವಾದ ಪರಿವರ್ತನೆ ಅದು. ವ್ಯಕ್ತಿಯ ಉದ್ಧಾರದೊಡನೆ ಸಮಷ್ಟಿ ಹಿತವೂ ಸೇರಿಕೊಂಡು ಅವಿನಾಭಾವದಿಂದ ಅದು ವಿಕಾಸಗೊಳ್ಳುತ್ತಾ ಹೋಗುವಂತಹ ಜೀವನ ದರ್ಶನ ಮತ್ತು ಅದಕ್ಕನುಗುಣವಾದ ಧೋರಣೆಯಿಂದಲೇ ಈ ಯೋಗ ಸಾಧನೆ ಪ್ರಾರಂಭವಾಗುತ್ತದೆ. ವ್ಯಷ್ಟಿಯ ಉದ್ಧಾರ, ಸಮಷ್ಟಿಯ ಉದ್ಧಾರಕ್ಕೆ ಕಾರಣವಾಗಿರಬೇಕು – ಎನ್ನುವುದು ಇದರ ತಳಹದಿ. ಆಧುನಿಕ ಯುಗದಲ್ಲಿ ಅರವಿಂದರು ಪ್ರತಿಪಾದಿಸಿದ ಪೂರ್ಣಯೋಗದ (integral Yoga) ಎಂದು ಅವರು ಅದನ್ನು ಕರೆದಿದ್ದಾರೆ) ಆಶಯವೂ ಇದೇ ಆಗಿದೆ ಎಂಬುದನ್ನು ಗಮನಿಸಬೇಕು.

ಅರವಿಂದರು ಯೋಗ ಸಮನ್ವಯವೆಂದರೇನೆಂಬುದನ್ನೂ ಆ ಸಮನ್ವಯದ ಆಶಯವೇನೆಂಬುದನ್ನೂ ಬಹಳ ಸ್ಪಷ್ಟವಾಗಿ ವಿವೇಚಿಸಿದ್ದಾರೆ. ಅವರ "Synthesis of Yoga" ಎಂಬ ಕೃತಿಯ ಎರಡು ಸಂಪುಟಗಳಲ್ಲಿ ಈ ವಿವರಗಳು ಬರುತ್ತವೆ. 'ಸಮನ್ವಯ'ವೆಂದರೆ ಎಲ್ಲ ಯೋಗಗಳ ಅವಿವೇಚಿತವಾದ ಒಟ್ಟುಗೂಡುವಿಕೆಯಲ್ಲ. "An undiscriminating combination in block would not be a synthesis, but a confusion" ಎಂದು ಹೇಳುತ್ತಾ ಸಮನ್ವಯವೆಂದರೇನೆಂಬುದನ್ನು ಬಹಳ ಅರ್ಥವತ್ತಾಗಿ ವಿವರಿಸುತ್ತಾರೆ. ಎಲ್ಲ ಯೋಗಗಳ ಕೇಂದ್ರ ಶಕ್ತಿ ಏನೆಂಬುದನ್ನು ಕಂಡುಕೊಂಡು, ಆ ವಿವಿಧ ಮಾರ್ಗಗಳು ಹೊಂದಿರುವ ಮೂಲ ಆಶಯ ಈಡೇರುವಂತಹ ಸಮಗ್ರ ದರ್ಶನದಿಂದ ಉಂಟಾಗುವ ಬದಲಾವಣೆಯೇ ನಿಜವಾದ ಸಮನ್ವಯ-ಎಂಬ ಮಾತು ಗಮನಾರ್ಹವಾದುದು. ಇದು ಮೂಲಭೂತ ಧೋರಣೆಯಲ್ಲಿಯೇ ಆಗುವ ಬದಲಾವಣೆ. ಇದರಿಂದ ತನಗೂ ಸಮಾಜಕ್ಕೂ ಇರುವ ಸಂಬಂಧ ಪರಿವರ್ತಿತವಾಗು

ತ್ತದೆ. ತನ್ನ ಬೆಳವಣಿಗೆಯ ಜೊತೆ ಜೊತೆಯಲ್ಲಿಯೇ ಸಮಾಜವನ್ನು ಕರೆದೊಯ್ಯುವ ಶಕ್ತಿಯನ್ನು ಆತ ಪಡೆಯುತ್ತಾನೆ. ಇದಕ್ಕೆ ಪೂರ್ಣ ವ್ಯಕ್ತಿತ್ವದ ಪರಿವರ್ತನೆ ಅಗತ್ಯ. ಅದೇ ಸಮನ್ವಯದ ಮುಖ್ಯ ಆಶಯ ಮತ್ತು ಉದ್ದೇಶ. ವೈಯಕ್ತಿಕ ಬಿಡುಗಡೆಯನ್ನಷ್ಟೇ ಪಡೆಯುವುದಷ್ಟೇ ಉದ್ದೇಶವಾಗಿದ್ದರೆ ಸಮನ್ವಯದ ಅಗತ್ಯವೇ ಇಲ್ಲವೆನ್ನುತ್ತಾರೆ. ವೈಯಕ್ತಿಕವಾದ ಪರಿವರ್ತನೆಯಿಂದ ಸಾಮಾಜಿಕ ಹಿತವೂ ಸಾಧಿತವಾಗಬೇಕಾದರೆ ಆಗ ಯೋಗ ಸಮನ್ವಯ ಅಥವಾ ಪೂರ್ಣಯೋಗ ಆವಶ್ಯಕ. ಇದೇ ಶರಣರ ಶಿವಯೋಗದ ಆಶಯವೂ ಆಗಿತ್ತೆಂಬುದನ್ನು ಗಮನಿಸಬೇಕು.

ಇವೆರಡರಲ್ಲಿಯೂ ಕಂಡುಬರುವ ಬಹುಮುಖ್ಯವಾದ ಇನ್ನೊಂದು ಸಾಮ್ಯವನ್ನು ಪ್ರಾರಂಭದಲ್ಲಿಯೇ ಗಮನಿಸಬೇಕು. ಪೂರ್ಣಯೋಗಕ್ಕೆ ಶಿವಯೋಗವೇ ಮೂಲ ಮಾತೃಕೆಯೋ ಎನ್ನುವಷ್ಟರ ಮಟ್ಟಿಗೆ ಆ ಸಾಮ್ಯ ಗೋಚರಿಸುತ್ತದೆ. ಅದೆಂದರೆ ಈ ಎರಡರಲ್ಲಿಯೂ ಕಂಡುಬರುವ ಉತ್ತರಣ ಮತ್ತು ಅವತರಣಕ್ರಿಯೆಯ ಪರಿಕಲ್ಪನೆ. ಇದನ್ನು ಕುರಿತು ಅರವಿಂದರು ಹೇಳುವ ಅನೇಕ ಮಾತುಗಳಲ್ಲಿ ಇದೊಂದನ್ನು ಇಲ್ಲಿ ನೋಡಬಹುದು :

"Our Yoga is a double movement of ascent and descent ; one rises to higher and higher levels of consciousness, but at the same time one brings down their power not only into mind and life, bu in the end even into the body. And the highest of these levels, the one at which it aims is the Supermind."

[On Yoga, Vol II]

ಅಂದರೆ ಈ ಪೂರ್ಣ ಯೋಗ ದ್ವಿಮುಖ ಸಂಚಾರವನ್ನುಳ್ಳದ್ದು; ಉತ್ತರಣ ಮತ್ತು ಅವತರಣ ಕ್ರಿಯೆಗಳಿಂದ ಕೂಡಿದ್ದು. ಉತ್ತರಣ ಊರ್ಧ್ವಗಾಮಿಯಾಗಿ ಹಂತದಿಂದ ಹಂತಕ್ಕೆ ಮೇಲೇರುವ ಕ್ರಿಯೆ ಅದು ಅತೀತ ಪ್ರಜ್ಞೆಯ ಉನ್ನತ ಸ್ತರಕ್ಕೇರುತ್ತದೆ. ಆ ಉನ್ನತ ಸ್ತರವನ್ನು ಮುಟ್ಟಿದ ಮೇಲೆ ಅದು ಅಲ್ಲಿಯೇ ನಿಲ್ಲುವುದಿಲ್ಲ. ಆ ಶಕ್ತಿಯನ್ನು ಒಳಗೊಂಡು ಕೆಳಗಿಳಿದು ಬರುತ್ತದೆ. ಇದು ಅವತರಣ ಕ್ರಿಯೆ. ಆ ಶಕ್ತಿ ಮನಸ್ಸು ಮತ್ತು ಪ್ರಾಣಗಳಿಗೆ ಹರಿಯುವುದು ಮಾತ್ರವಲ್ಲ, ಕೊನೆಯಲ್ಲಿ ಈ ಭೌತ ದೇಹಕ್ಕೂ ಹರಿದು ಅದರ ಒಟ್ಟು ಪರಿವರ್ತನೆಗೆ ಕಾರಣವಾಗುತ್ತದೆ. ಇಂತಹ ಅತಿಮಾನಸ ನಿಲವನ್ನು ಪಡೆಯುವುದು ಪೂರ್ಣಯೋಗದ ಗುರಿ.

ಇದನ್ನು ನೋಡುತ್ತಿದ್ದಂತೆಯೇ ಶಿವಯೋಗದಲ್ಲಿ ಕಾಣುವ ಷಟ್‌ಸ್ಥಲ ಮಾರ್ಗದ ಆರು ಮೆಟ್ಟಿಲನ ಊರ್ಧ್ವಮುಖ ಕ್ರಿಯೆ ಥಟ್ಟನೆ ಮನಸ್ಸಿನ ಮುಂದೆ ಸುಳಿಯುತ್ತದೆ. ಮೂಲ ಪರಶಿವ ತತ್ವದಿಂದ ಈ ಅಂಗ, ಶಕ್ತಿವಿಶಿಷ್ಟವಾಗಿ ಇಳಿದು ಬಂದಿದೆ. ಉಪಾಸಕನಾದ ಈತನಿಗೆ ಉತ್ತರಣ ಕ್ರಿಯೆಯಲ್ಲಿ ನೆರವಾಗುವುದಕ್ಕಾಗಿ ಉಪಾಸ್ಯವಾದ ಲಿಂಗವೂ ಬಂದಿದೆ. ಆ ಲಿಂಗದ ಉಪಾಸನೆಯಿಂದ ಲಿಂಗ ಭಕ್ತಸ್ಥಲದಿಂದ ಮೇಲೇರಿ ಬೆಳೆಯುತ್ತಾ ಹೋಗುತ್ತಾನೆ. ತುತ್ತತುದಿಯಾದ ಐಕ್ಯಸ್ಥಲದ

ನಿಲವನ್ನು ಅಂದರೆ ಅರವಿಂದರು ಹೇಳುವ ಅತಿಮಾನಸಸ್ಥಿತಿಯನ್ನು ಪಡೆಯುತ್ತಾನೆ. ಆದರೆ ಅಲ್ಲಿಯೇ ನಿಲ್ಲುವುದಿಲ್ಲ. ಆ ಶಕ್ತಿಯನ್ನು ಒಡಗೊಂಡು ಲೋಕಹಿತಕ್ಕಾಗಿ ಐಕ್ಯಸ್ಥಲದಿಂದ ಶರಣಸ್ಥಲಕ್ಕೆ ಮತ್ತು ಇನ್ನೂ ಕೆಳಗಿನ ಮೆಟ್ಟಲುಗಳಿಗೆ ಇಳಿಯುತ್ತಾನೆ; ವೈಯಕ್ತಿಕ ಅನುಸಂಧಾನದಲ್ಲಿ ಮತ್ತೆ ಮೇಲೇರುತ್ತಾನೆ. ಅರವಿಂದರು ಹೇಳುವ ಉತ್ತರಣ ಅವತರಣ ಕ್ರಿಯೆಗಳು ಇಲ್ಲಿ ಲೀಲಾಜಾಲವಾಗುತ್ತವೆ. ಇದನ್ನು ಷಟ್‌ಸ್ಥಲಗಳ ಸ್ವಲ್ಪ ವಿವರವಾದ ಪರಿಶೀಲನೆಯಿಂದ ಇನ್ನೂ ಹೆಚ್ಚು ಸ್ಪಷ್ಟವಾಗಿ ಕಂಡುಕೊಳ್ಳಬಹುದು.

ಈ ಸಂಸಾರ, ಬಂಧನಕ್ಕೆ ಕಾರಣ; ನಶ್ವರ, ಹೇಯ–ಎಂದು ತಿಳಿದ ಭಕ್ತ ಇದರಿಂದ ಓಡಿಹೋಗಬೇಕೆಂದು ಹೇಳುವುದಿಲ್ಲ. ಇದೆಲ್ಲಾ ಮಾಯೆ ಎಂಬ ಅಸಹಜ ವೈರಾಗ್ಯದ ನಿರಾಶೆಯನ್ನು ಬೋಧಿಸುವುದಿಲ್ಲ. ಇದನ್ನು ಸತ್ಯ ಎಂದು ಒಪ್ಪಿಕೊಂಡು, ಇಲ್ಲಿದ್ದು ಚೆನ್ನಾಗಿ ಬಾಳಿ ಬದುಕಿ,ಇದಕ್ಕೆ ಅತೀತವಾಗುವ ಮಾರ್ಗವನ್ನು ಷಟ್‌ಸ್ಥಲ ರೂಢಿಸಿದೆ. "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ" ಎಂಬ ಬಸವಣ್ಣನವರ ಮಾತಿನಲ್ಲಿ ಇದು ವ್ಯಕ್ತವಾಗಿದೆ. ಜೀವನವನ್ನು ನೋಡುವ ಮೂಲಭೂತವಾದ ಧೋರಣೆ ಬದಲಾಗಬೇಕೆಂಬುದನ್ನು ಶರಣರು ಇಲ್ಲಿ ಒತ್ತಿ ಹೇಳುತ್ತಾರೆ. "ಹೊನ್ನು ಹೆಣ್ಣು ಮಣ್ಣು ಮಾಯೆಯಲ್ಲ-ಮನದ ಮುಂದಣ ಆಶೆಯೇ ಮಾಯೆ" ಎಂಬ ಅಲ್ಲಮ ಪ್ರಭುವಿನ ಮಾತಿನಲ್ಲಿ ಇದು ಮೂಡಿಬಂದಿದೆ. ಅವುಗಳನ್ನು ತಿರಸ್ಕರಿಸುವುದರಿಂದ ಅವುಗಳ ಪ್ರಲೋಭನೆಯನ್ನು ಗೆಲ್ಲುವುದು ಸಾಧ್ಯವಿಲ್ಲ. ಅವುಗಳನ್ನು ಅನುಭವಿಸಿ ಅವುಗಳ ಮಿತಿಯನ್ನು ತಿಳಿದು ಮುಂದುವರಿಯಬೇಕೆಂದು ಶರಣರು ಸೂಚಿಸುತ್ತಾರೆ. ತಾವು ಲೌಕಿಕ ಜೀವನದಲ್ಲಿ ನಿರತರಾಗಿದ್ದು ತಮ್ಮ ನಿತ್ಯ ಉದ್ಯೋಗವನ್ನು ನಿರ್ವಹಿಸುತ್ತಲೇ ಈ ಮಾರ್ಗವನ್ನು ಅಳವಡಿಸಿಕೊಳ್ಳುವುದು ಸಾಧ್ಯವೆಂದು ಅವರು ತೋರಿಸಿಕೊಟ್ಟರು.

ಅವರ ಈ ಸಾಧನೆಯಲ್ಲಿ ಇಷ್ಟಲಿಂಗ ಪ್ರಮುಖ ಪಾತ್ರ ವಹಿಸಿತು. ಗುರು ಇಷ್ಟಲಿಂಗವನ್ನು ದೀಕ್ಷಾಪೂರ್ವವಾಗಿ ಭಕ್ತನಿಗೆ ಅನುಗ್ರಹಿಸುತ್ತಾನೆ. ಇದು ಭಕ್ತಸ್ಥಲದಲ್ಲಿ 'ಆಚಾರಲಿಂಗ' ಎನಿಸಿಕೊಳ್ಳುತ್ತದೆ. ಭಕ್ತ ತನ್ನ ಸಾಧನೆಯನ್ನು ಬೆಳೆಸಿಕೊಂಡು ಮುಂದಿನ ಸ್ಥಲಗಳಿಗೆ ಹೋದಂತೆಲ್ಲಾ ಲಿಂಗವೂ ವಿಕಾಸಗೊಳ್ಳುತ್ತಾ ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಿಲಿಂಗ, ಮಹಾಲಿಂಗವಾಗಿ ಬೆಳೆಯುತ್ತದೆ. ಲಿಂಗ ಬೆಳೆಯುತ್ತದೆ ಎಂದರೆ ಲಿಂಗದಲ್ಲಿ ಪ್ರತಿಫಲಿಸಿ ತೋರುವ ಭಕ್ತನ ದೃಷ್ಟಿ ಬೆಳೆಯುತ್ತದೆ; ಆತನ ಮಾನಸಿಕ ಸ್ಥಿತಿ ಬೆಳೆಯುತ್ತದೆ, ಉಪಾಸನೆಯ ಅನುಭವ ಬೆಳೆಯುತ್ತದೆ. ಇಲ್ಲಿ ಉಪಾಸನೆ ಎನ್ನುವುದು ಜಡವಾದ ಕ್ರಿಯೆಯಲ್ಲ. ಭಕ್ತ ಬೆಳೆಯುತ್ತಾನೆ, ಭಕ್ತಿ ಬೆಳೆಯುತ್ತದೆ, ಉಪಾಸನೆಯ ಲಿಂಗ ಬೆಳೆಯುತ್ತದೆ; ಲಿಂಗವನ್ನಾಶ್ರಯಿಸಿದ ಶಕ್ತಿ ಬೆಳೆಯುತ್ತದೆ. ಹೀಗೆ ಇದೊಂದು ಚೈತನ್ಯಪೂರ್ಣವಾದ ಸಂಚಲನ ಕ್ರಿಯೆಯಾಗಿ ಮೇಲೇರುತ್ತಾ ಹೋಗುತ್ತದೆ.

ಷಟ್‌ಸ್ಥಲ ಮಾರ್ಗದ ಈ ವಿವರಗಳಿಗೆ ಇಲ್ಲಿ ಹೋಗದೆ ಒಂದೇ ಮಾತಿನಲ್ಲಿ

ಹೇಳುವುದಾದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ–ಈ ಆರು ಸ್ಥಲಗಳು ಶಿವಯೋಗದಲ್ಲಿ ಕಾಣುವ ಉತ್ತರಣ ಕ್ರಿಯೆಯ ಆರು ಹಂತಗಳು. ಪ್ರಾರಂಭದಲ್ಲಿ ಶ್ರದ್ಧಾ ಭಕ್ತಿಯನ್ನು ಅವಲಂಬಿಸಿ ಕ್ರಮವಾಗಿ ನೈಷ್ಠಿಕಾಭಕ್ತಿ, ಅವಧಾನಭಕ್ತಿ, ಅನುಭಾವಭಕ್ತಿ, ಆನಂದಭಕ್ತಿಗಳಲ್ಲಿ ಬೆಳೆಯುತ್ತ ಕೊನೆಯ ಐಕ್ಯಸ್ಥಲದಲ್ಲಿ ಸಮರಸ ಭಕ್ತಿಯಲ್ಲಿ ಲೀನನಾಗುತ್ತಾನೆ. ಒಂದೊಂದು ಹಂತದಲ್ಲಿಯೂ ಸಾಧಕನಲ್ಲಿ ಪರಿವರ್ತನೆ ಆಗುತ್ತಾ ಹೋಗುತ್ತದೆ. ಈ ಪರಿವರ್ತನೆ ಮನಸ್ಸು ಪ್ರಾಣಗಳಲ್ಲಷ್ಟೇ ಅಲ್ಲ. ಭೌತದೇಹವೂ ಸೇರಿದಂತೆ ವ್ಯಕ್ತಿತ್ವದ ಸಂಪೂರ್ಣ ಪರಿವರ್ತನೆ (Complete Tranformation) "ಸರ್ವಾಂಗ ಲಿಂಗ" ಎಂಬ ಮಾತನ್ನು ಶಿವಯೋಗ ಇದಕ್ಕೆ ಬಳಸುತ್ತದೆ. ಅಲ್ಲಮಪ್ರಭುವಿನ ಈ ವಚನವನ್ನು ನೋಡಬಹುದು:

ಹರಿವ ನದಿಗೆ ಮೈಯೆಲ್ಲಾ ಕಾಲು :
ಉರಿವ ಅಗ್ನಿಗೆ ಮೈಯೆಲ್ಲಾ ನಾಲಗೆ ;
ಬೀಸುವ ಗಾಳಿಗೆ ಮೈಯೆಲ್ಲಾ ಕೈ;
ಮಹೇಶ್ವರಾ ನಿಮ್ಮ ಶರಣಂಗೆ ಸರ್ವಾಂಗಲಿಂಗ.

ಪೂರ್ಣವ್ಯಕ್ತಿತ್ವದ ಸಂಪೂರ್ಣ ಪರಿವರ್ತತೆ-Transformation of our integral being –ಎಂದು ಅರವಿಂದರು ಹೇಳುವ ಮಾತಿನ ಸಾರ್ಥಕತೆ ಇಲ್ಲಿ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಅರವಿಂದರ ಪೂರ್ಣಯೋಗಕ್ಕೂ ಶಿವಶರಣರ ಶಿವಯೋಗಕ್ಕೂ ಇರುವ ಸಾಮ್ಯಗಳನ್ನು ಇನ್ನೂ ಹೆಚ್ಚು ಹತ್ತಿರದಿಂದ ಕಂಡುಕೊಳ್ಳುವ ದಿಸೆಯಲ್ಲಿ ಒಂದೆರಡು ಮುಖ್ಯ ಅಂಶಗಳನ್ನು ಇಲ್ಲಿ ಗಮನಿಸಬಹುದು.

ಅರವಿಂದರ ಪೂರ್ಣಯೋಗ ಹಿಂದಿನ ಯೋಗಗಳನ್ನೆಲ್ಲಾ ತಿರಸ್ಕರಿಸುವುದಿಲ್ಲ. ಮತ್ತು ಇದು ಸಂಪೂರ್ಣವಾಗಿ ಹೊಸದೆಂದೇನೂ ಅವರು ಹೇಳುವುದಿಲ್ಲ. ಹಿಂದಿನ ಯೋಗಗಳ ಸಾರಭೂತವಾದ ಅಂಶಗಳನ್ನೆಲ್ಲಾ ಇದು ಗ್ರಹಿಸಿದೆ ಎಂಬುದನ್ನು ಅವರು ಒಪ್ಪುತ್ತಾರೆ. ಆದರೆ ಅದನ್ನೆಲ್ಲಾ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಅರಗಿಸಿಕೊಂಡು ಅಳವಡಿಸಿಕೊಂಡಿದೆ. ಇದರ ಹೊಸತನ ಏನೆಂಬುದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಪ್ರಕಾರ ಆ ಹೊಸತನ ಇರುವುದು ಅದರ ಗುರಿಯಲ್ಲಿ, ಅದರ ಧೋರಣೆಯಲ್ಲಿ, ಮತ್ತು ಅದರ ಒಟ್ಟು ಮಾರ್ಗದಲ್ಲಿ–ಶರಣರ ಶಿವಯೋಗಕ್ಕೂ ಈ ಮಾತು ಅನ್ವಯಿಸುತ್ತದೆ. ಇದರ ಗುರಿ ಧೋರಣೆ ಮತ್ತು ಒಟ್ಟು ಮಾರ್ಗವನ್ನು ಸದಾ ದೇಹದ ಮೇಲೆ ಧರಿಸುವ ಇಷ್ಟಲಿಂಗದ ಸುತ್ತ ಪರಿಭಾವಿಸಿ ರೂಪಿಸಿರುವುದು ಮತ್ತು ಷಟ್‌ಸ್ಥಲಗಳಲ್ಲಿ ಅದರ ವಿಕಾಸವನ್ನು ಕಂಡಿರುವುದು ಶಿವಯೋಗದ ವೈಶಿಷ್ಟ್ಯವಾಗಿದೆ. ಅರವಿಂದರು ಹೇಳುವ ಪೂರ್ಣಯೋಗದ ಆಶಯಗಳನ್ನೆಲ್ಲಾ ಇದು ತನ್ನಲ್ಲಿ ಅಳವಡಿಸಿಕೊಂಡಿದೆ.

ಮೊದಲನೆಯದಾಗಿ ಈ ಪೂರ್ಣಯೋಗ ಈ ಪ್ರಪಂಚದಿಂದ ಮತ್ತು ಈ ಜೀವನದಿಂದ ದೂರ ಹೋಗಿ ಮೋಕ್ಷವನ್ನೋ ನಿರ್ವಾಣವನ್ನೋ ಪಡೆಯಬೇಕೆನ್ನುವುದಿಲ್ಲ. ಇಲ್ಲಿಯೇ ಇದ್ದ ಜೀವನಕ್ರಮವನ್ನೂ ಧೋರಣೆಯನ್ನೂ ಬದಲಾಯಿಸಿಕೊಳ್ಳಬೇಕೆನ್ನುತ್ತದೆ. ಈ ಬದಲಾದ ನಿಲವಿನಿಂದ ಸಾಧನೆಯನ್ನು ಕೈಕೊಂಡು ಮೇಲಕ್ಕೇರ

ಬೇಕು ಆದರೆ ಹೀಗೆ ಮೇಲಕ್ಕೇರುವುದು ಅಲ್ಲೇ ನಿಂತುಬಿಡುವುದಕ್ಕಲ್ಲ. ಹೊಸದಾದ ಅತಿಮಾನಸ ಪ್ರಜ್ಞೆಯನ್ನು ಪಡೆದು ಮತ್ತೆ ಅಲ್ಲಿಂದ ಇಳಿದು ಜನಹಿತಕಾರ್ಯಕ್ಕೆ ತನ್ನನ್ನು ಅರ್ಪಿಸಿಕೊಳ್ಳಬೇಕು. ಇದು ಪೂರ್ಣಯೋಗದ ಬಹು ಮುಖ್ಯವಾದ ಅಂಶ ಎನ್ನುತ್ತಾರೆ ಅರವಿಂದರು. ಅಂದರೆ ಪೂರ್ಣಯೋಗದ ಉದ್ದೇಶ ಕೇವಲ ವೈಯಕ್ತಿಕ ವಿಧಾನವನ್ನು ಸಾಧಿಸುವುದಲ್ಲ. ಆ ಅನುಭವದಿಂದ ಕೆಳಗಿಳಿದು ಮರ್ತ್ಯಪ್ರಜ್ಞೆಗೆ ಶ್ರೀಮಂತಿಕೆಯನ್ನು ತಂದುಕೊಡುವುದು ಇದರ ಆಶಯ. "It is the descent of the consciousness attained by the ascent that is the stamp and seal of the sadhana" ಎನ್ನುವ ಅವರ ಮಾತು ಗಮನಿಸಬೇಕಾದುದು. ಅರವಿಂದರು ಹೇಳಿದ ಪೂರ್ಣಯೋಗದ ಈ ಪ್ರಮುಖ ಲಕ್ಷಣಗಳೇ ಶರಣರ ಶಿವಯೋಗದ ತಳಹದಿಯಾಗಿರುವುದನ್ನು ಈಗ ನೋಡಬಹುದು.

ಮೊದಲನೆಯದಾಗಿ ಈ ಲೌಕಿಕದಲ್ಲಿಯೇ ಇದ್ದು ಸಾಧನೆಯನ್ನು ಕೈಕೊಳ್ಳಬೇಕೆನ್ನುವುದು. ಶಿವಯೋಗದ ಮೂಲ ತತ್ವವೇ ಇದು. ಷಟ್‌ಸ್ಥಲದ ಒಂದೊಂದು ಹಂತದಲ್ಲಿಯೂ ಶರಣರು ಇದನ್ನು ಬೇರೆ ಬೇರೆ ರೀತಿಯಲ್ಲಿ ಆಚರಿಸಿ ತೋರಿಸಿದ್ದಾರೆ; ಅಭಿವ್ಯಕ್ತಪಡಿಸಿದ್ದಾರೆ. ಸರ್ವಸಂಗ ಪರಿತ್ಯಾಗಿಯ ಏಕಾಂತ ಜೀವನ ಅವರ ಮಾರ್ಗವಲ್ಲ. ಸರ್ವಸಂಗದಲ್ಲಿದ್ದೂ ನಿಸ್ಸಂಗವನ್ನು ಸಾಧಿಸಿದ ಸಮನ್ವಯ ಯೋಗ ಅವರದು:

> ಆರುವನೊಲ್ಲೆನೆಂದು ಅರಣ್ಯಕ್ಕೆ ಹೋಗುವುದು ದುರುಳತನ.
> ಊರೊಳಿದ್ದೊಡೆ ನರರ ಹಂಗು ;
> ಅರಣ್ಯದೊಳಗಿದ್ದೊಡೆ ತರುಗಳ ಹಂಗು.
> ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿ
> ಕೊಂಬ ಶರಣನೇ ಜಾಣ ಸಕಳೇಶ್ವರಾ

ಎಂದು ಹೇಳಿದ ಶರಣರು ಈ ಪ್ರಪಂಚದಲ್ಲಿಯೇ ಇದ್ದು "ಬೇಕೆನ್ನದೆ ಬೇಡೆನ್ನದೆ" "ಬಂದ ಸುಖವನತಿಗಳೆಯದೆ" "ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿ"ಗಳಾಗಿ ಸಾಧನೆಯನ್ನು ಮಾಡಿದರು. ಪ್ರಸಾದಿ ಸ್ಥಲದಲ್ಲಿ ವಿಶೇಷವಾಗಿ ಈ ನಿಲವನ್ನು ಕಾಣುತ್ತೇವೆ.

ಜೀವನದ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕೆಂಬ ಅರವಿಂದರ ಮಾತು ಇಲ್ಲಿ ಬಹಳ ಚೆನ್ನಾಗಿ ಅನ್ವಯಿಸುತ್ತದೆ. ಮಾಯೆ ಎಂಬುದು ವಸ್ತುಗಳಲ್ಲಿಲ್ಲ; ಅವನ್ನು ನೋಡುವ ದೃಷ್ಟಿಯಲ್ಲಿದೆ, ಮನೋಧರ್ಮದಲ್ಲಿದೆ." ಮನದ ಮುಂದಣ ಆಶೆಯೇ ಮಾಯೆ." ಈ ಆಶೆಯನ್ನು ಗೆದ್ದು ಬದುಕಬಲ್ಲವನು ಇಲ್ಲಿಯೇ ಈಶತ್ವವನ್ನು ಪಡೆಯಬಲ್ಲ-ಎಂದು ಗೃಹಸ್ಥಜೀವನದ ಪವಿತ್ರತೆಯನ್ನು ಸಾರಿದರು, ಸಾಧಿಸಿದರು. ಇಲ್ಲಿ ವ್ಯಕ್ತಿ ಕೈಕೊಂಡ ಯಾವುದೇ ಉದ್ಯೋಗ ಸಾಧನೆಗೆ ಅಡ್ಡಿಯಾಗಬಾರದು. ಅದನ್ನು ಸಾಧನೆಯ ಸನ್ನಿವೇಶಕ್ಕೆ ಅಳವಡಿಸಿಕೊಂಡು ಬೆಳೆಯಬೇಕು. ಇದಕ್ಕೆ ಅಲ್ಲಮಪ್ರಭು ಒಂದು ಒಳ್ಳೆಯ ಸಾದೃಶ್ಯವನ್ನು ಕೊಟ್ಟಿದ್ದಾನೆ :

> ಕೊಟ್ಟ ಕುದುರೆಯನೇರಲರಿಯದೆ
> ಮತ್ತೊಂದು ಕುದುರೆಯ ಬಯಸುವವರು,

ವೀರರೂ ಅಲ್ಲ, ಧೀರರೂ ಅಲ್ಲ.
ಇದು ಕಾರಣ ಮೂರು ಲೋಕವೆಲ್ಲ
ತಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ ಗುಹೇಶ್ವರಾ

ಜೀವನದಲ್ಲಿ ತನ್ನ ಪಾಲಿಗೆ ಬಂದುದನ್ನೇ ಅಭ್ಯುದಯದ ಮಾರ್ಗಕ್ಕೆ ಅಳವಡಿಸಿಕೊಳ್ಳುವುದು ಸಾಧಕನ ಜಾಣ್ಮೆ. ಇಲ್ಲವಾದರೆ ಕುದುರೆ ಹೊರಬೇಕಾದ ಜೀನನ್ನು ತಾನು ಹೊತ್ತುಕೊಂಡು ಅಲೆದಾಡಬೇಕಾದ ಪಾಡು ಬರುತ್ತದೆ.

ಇಲ್ಲಿ ಅರವಿಂದರು ಹೇಳುವ ಇನ್ನೊಂದು ಮುಖ್ಯವಾದ ಮಾತು ಉತ್ತರಣ ಮತ್ತು ಅವತರಣ ಕ್ರಿಯೆಗೆ ಸಂಬಂಧಪಟ್ಟದ್ದು. ಶಿವಯೋಗದಲ್ಲೂ ಇದನ್ನು ಬಹಳ ಸ್ಪಷ್ಟವಾಗಿ ಗುರುತಿಸುತ್ತೇವೆ. ಒಂದು ಕಡೆ ಭಕ್ತ ಮತ್ತು ಭಕ್ತಿ ಬೆಳೆಯುತ್ತಾ ಬಂದಂತೆ, ಅವನು ಉಪಾಸಿಸುವ ಲಿಂಗ ಮತ್ತು ಅದನ್ನಾಶ್ರಯಿಸಿದ ಶಕ್ತಿಯೂ ಬೆಳೆಯುತ್ತದೆನ್ನುವುದು ಷಟ್‌ಸ್ಥಲದ ಒಂದು ವಿಶಿಷ್ಟ ಕಾಣ್ಕೆ. ಅರವಿಂದರ ಪೂರ್ಣಯೋಗಕ್ಕೂ ಇದು ಮೀರಿದುದು. ಆದರೆ ಒಂದು ಮಾತನ್ನು ಅರವಿಂದರು ಒತ್ತಿ ಹೇಳುತ್ತಾರೆ: ಪೂರ್ಣಯೋಗದಲ್ಲಿ ಮುಂದುವರಿದು ಮೇಲೇರಿದಂತೆಲ್ಲಾ ಪೂರ್ಣಪರಿವರ್ತನೆಯನ್ನು ಪಡೆಯುತ್ತಾ ಹೋಗುತ್ತಾನೆ ಸಾಧಕ. ಪ್ರಾಣ ಮನಸ್ಸುಗಳಲ್ಲಿ ಮಾತ್ರವಲ್ಲ, ಈ ಪರಿವರ್ತನೆ ದೈಹಿಕವಾಗಿಯೂ ಸಂಭವಿಸುತ್ತದೆಂದು ಅರವಿಂದರು ಹೇಳುತ್ತಾರೆ. ಅದನ್ನು ಶಿವಯೋಗವೂ ಎತ್ತಿ ಹಿಡಿಯುತ್ತದೆ. ಶರಣರ "ಸರ್ವಾಂಗಲಿಂಗ" ಕಲ್ಪನೆಯಲ್ಲಿ ಹಿಂದೆ ಅದನ್ನು ಆಗಲೇ ನೋಡಿದ್ದೇವೆ. ಹೀಗೆ ಏರುವ ನಿಚ್ಚಣಿಗೆಯಲ್ಲಿ ತುತ್ತತುದಿಯನ್ನು ಮುಟ್ಟಿದ ಮೇಲೆ ಆತ ಅಲ್ಲಿಯೇ ನಿಲ್ಲುವುದಿಲ್ಲ. ಅಲ್ಲಿ ತಾನು ಪಡೆದ ಅತೀತ ಮನಸ್ಸಿನ ಅನಂತ ಅನುಭವದೊಡನೆ ಮತ್ತೆ ಕೆಳಗಿಳಿದು ಬರುತ್ತಾನೆನ್ನುವ ಅರವಿಂದರ ದೃಷ್ಟಿ ಶಿವಯೋಗದಲ್ಲಿಯೂ ಸ್ಪಷ್ಟವಾಗಿ ಗೋಚರವಾಗುತ್ತದೆ. ಇಲ್ಲಿ ಸ್ಥಲದಿಂದ ಸ್ಥಲಕ್ಕೆ ಆತ ಏರುತ್ತಾ ಹೋಗುವಾಗ ಕೆಳಗಿನದನ್ನು ಬಿಟ್ಟು ಹೋಗುವುದಿಲ್ಲ. ಭಕ್ತ ಮಹೇಶಸ್ಥಲಕ್ಕೆ ಬಂದಾಗ ಭಕ್ತಸ್ಥಲವನ್ನು ಬಿಟ್ಟು ಬರುವುದಿಲ್ಲ; ಅದನ್ನು ಒಡಗೊಂಡು ಬರುತ್ತಾನೆ. ಪ್ರಸಾದಿ ಸ್ಥಲದಲ್ಲಿ ಭಕ್ತ ಮಹೇಶ ಸ್ಥಲಗಳೆರಡೂ ಅಡಗಿರುತ್ತವೆ ಈ ಮೂರನ್ನೂ ಅಡಗಿಸಿಕೊಂಡು ಪ್ರಾಣಲಿಂಗಿಯಾಗುತ್ತಾನೆ. ಇವುಗಳ ಸಮೇತ ಶರಣ ಐಕ್ಯ ಸ್ಥಲಗಳನ್ನೇರುತ್ತಾನೆ. ಆದರೆ ತನ್ನೊಬ್ಬನ ಉದ್ಧಾರವನ್ನು ಕಂಡುಕೊಂಡು ಅಲ್ಲೇ ಐಕ್ಯನಾಗಿಬಿಡುವುದಿಲ್ಲ; ಜಗತ್ತಿನ ಉದ್ಧಾರಕ್ಕಾಗಿ ಆ ನಿಲುವನ್ನು ಒಳಗೊಂಡು ಇಳಿದು ಬರುತ್ತಾನೆ. ಷಟ್‌ಸ್ಥಲದ ನಿಚ್ಚಣಿಗೆಯನ್ನು ಇಳಿಯಬಿಡುತ್ತಾನೆ. ಐಕ್ಯಸ್ಥಲದಿಂದ ಶರಣ ಸ್ಥಲಕ್ಕೆ ಬರುತ್ತಾನೆ. ಹಾಗೇ ಪ್ರಾಣಲಿಂಗ, ಪ್ರಸಾದಿ, ಮಹೇಶ, ಭಕ್ತಸ್ಥಲದವರೆಗೂ ಇಳಿಯುವ ಲೀಲೆ ಆತನಿಗೆ ಸಹಜವಾಗುತ್ತದೆ. ಶರಣಸ್ಥಲದ ಆನಂದಭಕ್ತಿಯಲ್ಲಿ ನಿಂತು ಲೋಕಸಂಗ್ರಹ ಕಾರ್ಯದಲ್ಲಿ ತೊಡಗುತ್ತಾನೆ ಇದು ಅರವಿಂದರ ಪೂರ್ಣಯೋಗದ ಕಲ್ಪನೆಯನ್ನು ಅಂತೇ ಸಾಕಾರಗೊಳಿಸಿದ ಆಶ್ಚರ್ಯಕರ ಸಾಧನೆಯಾಗಿ ಕಾಣುತ್ತದೆ.

ಒಂದು ಕಡೆ ಅರವಿಂದರು ಪೂರ್ಣಯೋಗದಲ್ಲಿ ಮೂರು ಹಂತಗಳನ್ನು ಹೇಳುತ್ತಾರೆ. ಮೊದಲನೆಯದು ದೈವಶಕ್ತಿಯೊಡನೆ ಸಂಬಂಧವನ್ನು ಪಡೆಯುವ

ಪ್ರಾರಂಭದ ಪ್ರಯತ್ನ; ಎರಡನೆಯದು ಆ ಅತೀತ ಶಕ್ತಿಯನ್ನು ನಮ್ಮೊಳಗೆ ಆಹ್ವಾನಿಸಿ ಅದರಿಂದ ಸಂಪೂರ್ಣವಾಗಿ ಪರಿವರ್ತಿತರಾಗಿ ಪಡೆಯುವ ಸಾಮರಸ್ಯ. ಮೂರನೆಯದು ಪರಿವರ್ತಿತ ವ್ಯಕ್ತಿತ್ವವನ್ನು ದೈವಿಕವಾದ ಕೇಂದ್ರವಾಗಿಟ್ಟುಕೊಂಡು ಈ ಲೋಕಕ್ಕೆ ಅದರ ಫಲವನ್ನು ನೀಡುವುದು. ಈ ಮೂರೂ ಅಂಶಗಳು ಶಿವಯೋಗದಲ್ಲಿ ಅಡಕವಾಗಿವೆ. ಭಕ್ತಮಹೇಶ್ವರ ಸ್ಥಲಗಳಲ್ಲಿ ಅವರು ಹೇಳುವ ಮೊದಲನೆಯ ಸ್ಥಿತಿ ಇದೆ. ಪ್ರಸಾದಿ ಪ್ರಾಣಲಿಂಗಿಸ್ಥಲಗಳಲ್ಲಿ ಎರಡನೆಯ ಅಂಶ ಪೂರ್ಣಗೊಳ್ಳುತ್ತದೆ; ವ್ಯಕ್ತಿತ್ವದ ಪೂರ್ಣವಿಕಾಸಕ್ಕೆ ಕಾರಣವಾಗುತ್ತದೆ. ಮುಂದಿನ ಕ್ರಿಯೆಗಳೆಲ್ಲಾ ಲೋಕಹಿತಾರ್ಥವಾಗಿ ನಡೆಯತಕ್ಕವು. ಶರಣ ಐಕ್ಯಸ್ಥಲಗಳನ್ನು ಮುಟ್ಟಿ ಮತ್ತೆ ಕೆಳಗಿಳಿದು ಬರುತ್ತಾನೆ. ಶರಣಸ್ಥಲ ಸಂಗ್ರಹಸಾಧನೆಯ ಕೇಂದ್ರವಾಗುತ್ತದೆ. ಇಲ್ಲಿ ದೈವಿಕವಾದ ಆತನ ಚಲನವಲನಗಳೆಲ್ಲ ಸಮಷ್ಟಿ ಹಿತಕ್ಕಾಗಿ. ಆತ ನಡೆದುದೆಲ್ಲಾ ಪಾವನ; ನುಡಿದುದೆಲ್ಲಾ ಶಿವಮಂತ್ರ. ಹಿಂದೆ ಅರವಿಂದರು ಹೇಳಿದಂತೆ ಇದು ಎಷ್ಟರಮಟ್ಟಿಗೆ ಅತಿಕ್ರಾಂತ ಸಾಧನೆಯಾಗುತ್ತದೆಯೋ ಅಷ್ಟರಮಟ್ಟಿಗೆ ಈ ಲೋಕಹಿತ ಕಾರ್ಯದ ಕರ್ತವ್ಯವೂ ಆಗುತ್ತದೆ ಇಲ್ಲಿ ಮರ್ತ್ಯಪ್ರಜ್ಞೆ ಸಂಪೂರ್ಣ ಪರಿವರ್ತನೆಗೊಂಡು ಮರ್ತ್ಯಕ್ಕೆ ಅಮರ್ತ್ಯವನ್ನು ಇಳಿಸಿ ತರುವ ಸಾಧನವಾಗುತ್ತದೆ. ಅರವಿಂದರು ಹೇಳುವ ಈ ಅರ್ಥದಲ್ಲಿಯೂ ಶಿವಯೋಗ ಪೂರ್ಣಯೋಗವಾಗಿದೆ.

ಹೀಗೆ ಅರವಿಂದರು ತಮ್ಮ ಪೂರ್ಣಯೋಗದಲ್ಲಿ ಕಾಣುವ ಆದರ್ಶವನ್ನು ಶರಣರು ತಮ್ಮ ಶಿವಯೋಗದಲ್ಲಿ ಸಾಧಿಸಿ ಸಾಧ್ಯವನ್ನಾಗಿಸಿ ತೋರಿಸಿದ್ದಾರೆ. ಯೋಗ ಸಾಧನೆಗೆ ಅಗತ್ಯವಾದ ಪೂರ್ವಸಿದ್ಧತೆಗಳನ್ನೆಲ್ಲಾ, ಅಂದರೆ ಸತ್ಕ್ರಿಯಾಚರಣೆ ಆಶರೋಷ ಅಹಂಕಾರಗಳ ನಿರಸನ, ನಿಷ್ಠೆ, ಸಾತ್ವಿಕತೆ, ಸುಪ್ತಶಕ್ತಿಗಳನ್ನು ಜಾಗ್ರತಗೊಳಿಸುವ ಮನಸ್ಸಿನ ಕೇಂದ್ರೀಕರಣ, ಅಂತರಂಗ ವಿಕಾಸದ ಹೆಜ್ಜೆಗಳು ಇತ್ಯಾದಿ ವಿವರಗಳನ್ನೆಲ್ಲಾ ಹೇಳುತ್ತಾ (ಶಿವಯೋಗದಲ್ಲಿಯೂ ಇವೆಲ್ಲಾ ಇಷ್ಟಲಿಂಗವನ್ನು ಅನುಸರಿಸಿ ಬರುತ್ತವೆ)-ಇವುಗಳಿಂದ ಉದಾತ್ತೀಕೃತವಾದ ವ್ಯಕ್ತಿತ್ವ ಊರ್ಧ್ವಮುಖವಾಗಿ ಮೇಲೇರಿ ತನ್ನ ಗುರಿಯನ್ನು ಮುಟ್ಟಿದ ಮೇಲೆ ಆ ಅತಿಮಾನಸ ಚೈತನ್ಯ ಸಹಿತವಾಗಿ ಇಳಿದು ಬರಲು ಸಾಧ್ಯವಾಗಬೇಕೆಂಬುದು ತಮ್ಮ ಪೂರ್ಣಯೋಗದ ಆದರ್ಶ-ಎಂದು ತಮ್ಮ ಆಶಯವನ್ನು ಹೇಳುತ್ತಾರೆ.

"There to reach, and thence to bring down a supramental dynamism that can transform the Ignorance, is the distant but imperative supreme good of the Integral Yoga" (*On Yoga, Vol I*, ಎಂಬುದು ಪೂರ್ಣಯೋಗವನ್ನು ಕುರಿತ ಅವರ ದೂರದ ಆಶಯ. ಆದರೆ ಇದು ಆಗಲೇ ಶರಣರಲ್ಲಿ ಕಾರ್ಯಗತಗೊಂಡ ವಾಸ್ತವಿಕ ಸತ್ಯವಾಗಿದೆ.

ಇಲ್ಲಿ ಅದರ ಒಳ ವಿವರಗಳಿಗೆ ಹೋಗದೆ ಶಿವಯೋಗ ಪೂರ್ಣಯೋಗಗಳಿಗಿರುವ ಸಮಾನ ಅಂಶಗಳಲ್ಲಿ ಇನ್ನೂ ಒಂದೆರಡು ಮುಖ್ಯವಾದವುಗಳನ್ನು ಗಮನಿಸಬಹುದು. ಪೂರ್ಣಯೋಗದ ಸಾಧಕ ಒಂದು ಮಾತನ್ನು ನೆನಪಿನಲ್ಲಿಡಬೇಕು– ಎಂದು ಅರವಿಂದರು ಹೇಳುತ್ತಾರೆ. ಯಾವುದೇ ಶಾಸ್ತ್ರ ಅದು ಎಷ್ಟೇ ಮಹತ್ವದ್ದಾಗಿರಲಿ,

ಅಧಿಕೃತವಾಗಿರಲಿ, ಅದು ಅನಂತ ಸತ್ಯದ ಪರಿಪೂರ್ಣ ಅಭಿವ್ಯಕ್ತಿ ಆಗಲಾರದು. ಅದು ಮಾರ್ಗದರ್ಶಕವಾಗಬಹುದು; ಆದರೆ ಅದೇ ಕೊನೆಯ ಮಾತಾಗಲಾರದು. ಸಾಧಕ ಅದರಿಂದ ಉಪಯೋಗವನ್ನು ಪಡೆಯಬೇಕು. ಅದಕ್ಕೇ ಕಟ್ಟು ಬೀಳ ಬಾರದು–ಎನ್ನುತ್ತಾರೆ ಅರವಿಂದರು. ಈ ಆಧುನಿಕ ಮತ್ತು ವೈಚಾರಿಕ ದೃಷ್ಟಿ ಯನ್ನು ಶರಣರ ಶಿವಯೋಗದಲ್ಲಿ ಹೆಜ್ಜೆ ಹೆಜ್ಜೆಗೂ ಕಾಣುತ್ತೇವೆ. ಯಾವುದನ್ನೂ ವೇದದಲ್ಲಿ ಹೇಳಿದೆ, ಆಗಮದಲ್ಲಿ ಹೇಳಿದೆ ಎಂದು ಒಪ್ಪಿಕೊಳ್ಳದೆ ವಿಚಾರ ಮಥನ ದಿಂದ ಅನುಭಾವದ ಒರೆಗಲ್ಲಿಗೆ ಉಜ್ಜಿ ನೋಡಬೇಕೆನ್ನುತ್ತಾರೆ ಅವರು. ಅನುಭವ ಮಂಟಪದಲ್ಲಿ ಶರಣರು ಮಾಡುತ್ತಿದ್ದುದು ಈ ವಿಚಾರ ಮಥನವನ್ನೇ. ಒಂದು ಹಂತ ದಲ್ಲಿ 'ಅನುಭಾವ' ಎನ್ನುವುದಕ್ಕೆ 'ವಿಚಾರ ಮಥನ' ಎನ್ನುವ ಅರ್ಥವೇ ಕಂಡು ಬರುತ್ತದೆ. ಆದರೆ ವಿಚಾರ ಮಥನ ವಿತಂಡವಾದವಲ್ಲ; ಅದು ಅನುಭವದ ಹಿನ್ನೆಲೆ ಯಲ್ಲಿ ನಡೆಯುವ ಸತ್ಯಶೋಧನೆ.

ಯಾವುದೇ ಒಂದು ಶಾಸ್ತ್ರವನ್ನು ಪರಮಪ್ರಮಾಣವೆಂದು ಪೂರ್ಣಯೋಗ ಹೇಗೆ ಒಪ್ಪುವುದಿಲ್ಲವೋ ಹಾಗೆಯೇ ಯಾವುದೇ ಒಂದು ಮಾರ್ಗವನ್ನು ಅದು ಭಕ್ತಿ ಯಾಗಲಿ, ಜ್ಞಾನವಾಗಲೀ, ಕರ್ಮವಾಗಲಿ- ಸರ್ವಶ್ರೇಷ್ಠವೆಂದು ಒಪ್ಪುವುದಿಲ್ಲ. ಮಾನವ ಸ್ವಭಾವ ಬಹುಮುಖವಾದದ್ದು; ಸಂಸ್ಕಾರ ಹಲವು ಬಗೆಯಾದದ್ದು. ಜೀವನ ವಿಕಾಸಮಾರ್ಗದಲ್ಲಿ ಒಬ್ಬೊಬ್ಬರು ಒಂದೊಂದು ಹಂತದಲ್ಲಿರುವವರು, ಅವರವರ ಸ್ವಭಾವಕ್ಕೆ ಮನೋಧರ್ಮಕ್ಕೆ ಒಪ್ಪುವಂತಹ ಮಾರ್ಗವನ್ನು ಅವಲಂಬಿಸು ತ್ತಾರೆ. ಯಾರು ಎಲ್ಲಿ ನಿಂತಿರುತ್ತಾರೋ ಅಲ್ಲಿಂದ ಮುಂದೆ ನಡೆಯಲು ಸಹಾಯಕ ವಾಗಬೇಕು ಅವರು ಆರಿಸಿಕೊಂಡ ಮಾರ್ಗ. ಪೂರ್ಣಯೋಗ ಈ ಸ್ವಾತಂತ್ರ್ಯ ವನ್ನು ಕೊಡುತ್ತದೆ. ಮೂಲಭೂತವಾದ ಕೆಲವು ಸಾರ್ವತ್ರಿಕ ನಿಯಮಗಳನ್ನು ರೂಪಿಸಿ, ಅವನ್ನು ಅವಲಂಬಿಸಿ ಬೆಳೆಯುವ ವ್ಯಕ್ತಿಗತವಾದ ಸಾಧನೆಯ ವೈವಿಧ್ಯಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಶರಣರ ಮಾರ್ಗವೂ ಇದರ ಜ್ವಲಂತ ನಿದರ್ಶನವಾಗಿರುವುದನ್ನು ಕಾಣಬಹುದು.

ಶರಣರಲ್ಲಿ ಅದೆಷ್ಟು ಮನೋಧರ್ಮದ ಸಾಧಕರಿದ್ದರು! ಕಾಯಕಗಳಲ್ಲಿ, ಆಸಕ್ತಿ ಶಕ್ತಿಗಳಲ್ಲಿ, ಒಲವು ನಿಲುವುಗಳಲ್ಲಿ ಅದೆಷ್ಟು ವೈವಿಧ್ಯ! ಭಕ್ತಿ ಭಂಡಾರಿ ಬಸವಣ್ಣ ಒಂದು ಕಡೆಯಾದರೆ, ಮಹಾವೈರಾಗ್ಯನಿಧಿ ಅಲ್ಲಮಪ್ರಭು ಇನ್ನೊಂದು ಕಡೆ. ಚನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ—ಹೀಗೆ ಒಂದೇ ಎರಡೇ! ಶರಣ ಸಮುದಾಯ ಆಶ್ಚರ್ಯಕರವಾದುದು. ಅವರೆಲ್ಲಾ ವಿಸ್ತಾರವಾದ ತಳಹದಿಯುಳ್ಳ ಒಂದು ಆಧ್ಯಾ ತ್ಮಿಕ ಮಾರ್ಗದ ನೆರಳಿನಲ್ಲಿ ಬೆಳೆದರು. ಅವರವರ ವ್ಯಕ್ತಿ ವೈಶಿಷ್ಟ್ಯವನ್ನುಳಿಸಿ ಕೊಂಡೇ ಬೆಳೆದರು. ಆ ಎಲ್ಲ ವೈಶಿಷ್ಟ್ಯಗಳ ಆಂತರ್ಯದಲ್ಲಿ ಪ್ರವಹಿಸುವ ಮತ್ತು ಅವೆಲ್ಲ ವನ್ನೂ ಒಂದಾಗಿ ಬೆಸೆದು ಬೇರೆ ಬೇರೆ ಮಾನಸಿಕ ಸ್ತರಗಳಿಂದ ಒಂದೇ ಗುರಿಯ ಕಡೆಗೆ ನಡೆಸುವ ಜೀವಂತ ಶಕ್ತಿಯಾಯಿತು ಶರಣರ ಶಿವಯೋಗ. ಯಾವ ವ್ಯಾಪಕ

ವಾದ ಕಲ್ಪನೆಯನ್ನು ಅರವಿಂದರು ತಾತ್ವಿಕವಾಗಿ ಕಂಡರೋ ಅದನ್ನಾಗಲೇ ಶರಣರು ಯಶಸ್ವಿಯಾಗಿ ಸಾಮೂಹಿಕ ಜಾಗ್ರತಿಯ ಸಾಧ್ಯಮವಾಗಿಯೂ ಬಳಸಿದ್ದರು.

ಅರವಿಂದರ ಪೂರ್ಣಯೋಗ ಸಾಮೂಹಿಕ ಜಾಗೃತಿಯ ಒಂದು ಆಂದೋಳನ ಆಗಲಿಲ್ಲ. ಆದರೆ ಶರಣರ ಶಿವಯೋಗ ಅದನ್ನು ಸಾಧಿಸಿತು. ಎಲ್ಲರಲ್ಲೂ ಅದು ಒಂದೇ ರೀತಿಯಲ್ಲಿ ಕಾರ್ಯಗತಗೊಳ್ಳಲಿಲ್ಲ. ಅರವಿಂದರು ಹೇಳುವಂತೆ ಎಷ್ಟು ಜನ ಸಾಧಕರೋ ಅಷ್ಟು ಮಾರ್ಗಗಳು. ಮೂಲಭೂತ ಧೋರಣೆಯನ್ನು ಖಚಿತವಾಗಿ ಉಳಿಸಿಕೊಂಡು ಈ ಎಲ್ಲಾ ವೈವಿಧ್ಯಕ್ಕೂ ಅವಕಾಶ ಮಾಡಿಕೊಡಬೇಕು, ಪೂರ್ಣಯೋಗ ಎಂಬ ಮಾತು ಶಿವಯೋಗಕ್ಕೂ ಅನ್ವಯಿಸುತ್ತದೆ. ಅಲ್ಲಮನ ಮಾರ್ಗ ಒಂದಾದರೆ ಸಿದ್ಧರಾಮನ ಮಾರ್ಗ ಇನ್ನೊಂದು. ಸಿದ್ಧರಾಮ ಕೆರೆ ದೇವಾಲಯಗಳನ್ನು ಕಟ್ಟುತ್ತಲೇ ಅದನ್ನು ಮೀರಿದವನು ಬಸವಣ್ಣ ರಾಜಕಾರ್ಯದ ಅಧಿಕಾರದಲ್ಲಿದ್ದೂ, ಸಂಸಾರಿಯಾಗಿದ್ದೂ ಪೂರ್ಣಯೋಗದ ಉತ್ತರಣ ಅವತರಣ ಕ್ರಿಯೆಗಳಲ್ಲಿ ಲೀಲಾಜಾಲವಾಗಿ ಓಡಾಡಬಲ್ಲವನು. ಚನ್ನಬಸವಣ್ಣ ಷಟ್‌ಸ್ಥಲ ಸಿದ್ಧಾಂತ ಸ್ಥಾಪಕನೆಂದು ಹೆಸರಾದ ಮಹಾಜ್ಞಾನಿ. ಆದರೆ ಅವನು ಬೌದ್ಧಿಕ ಜಡನಾಗದೆ ಚೈತನ್ಯಾತ್ಮಕಯೋಗ ಸಂಚಾರದಲ್ಲಿ ಉತ್ತುಂಗ ಶಿಖರಗಾಮಿಯಾದವನು. ಇಂತಹವರಿರಲಿ ಆಯ್ದಕ್ಕಿ ಮಾರಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಕಿನ್ನರಿ ಬೊಮ್ಮಣ್ಣ, ತುರುಗಾಹಿ ರಾಮಣ್ಣ ಮೊದಲಾದವರಲ್ಲದೆ ತೀರಾ ಸಾಮಾನ್ಯರೆಂದು ತಿರಸ್ಕೃತರಾಗಿದ್ದ ಅಸ್ಪೃಶ್ಯ ಧೂಳಯ್ಯ, ಕಕ್ಕಯ್ಯಾದಿಗಳು ಸಹ ಈ ಯೋಗಸ್ಪರ್ಶದಿಂದ ಪರಿವರ್ತಿತವಾದುದಕ್ಕೆ ವಚನಗಳಲ್ಲಿ ಕಾಣುವ ಅವರ ನಿಲವೇ ಸಾಕ್ಷಿಯಾಗಿದೆ. ಇಂತಹ ಪೂರ್ಣಯೋಗದ ಒಂದು ಮಹಾಪೂರವೇ ಅಂದು ಏಕಕಾಲದಲ್ಲಿ ಉಕ್ಕಿ ಹರಿಯಲು ಸಾಧ್ಯವಾದುದು ಆಧ್ಯಾತ್ಮಿಕ ಚರಿತ್ರೆಯಲ್ಲಿ ಒಂದು ಮಹತ್ವಪೂರ್ಣವಾದ ಘಟನೆ; ಆಧುನಿಕ ಯುಗದಲ್ಲೂ ಸಾಧ್ಯವಾಗದಿರುವ ಘಟನೆ.

ಅರವಿಂದರ ಪೂರ್ಣಯೋಗಕ್ಕೆ ಇಲ್ಲದಿರುವ ಒಂದು ಸೌಲಭ್ಯ ಶರಣರ ಶಿವಯೋಗಕ್ಕೆ ಬೆನ್ನೆಲುಬಾಗಿದ್ದುದು ಬಹುಶಃ ಇವಕ್ಕೆ ಕಾರಣವೆಂದು ಹೇಳಬಹುದು. ಉಪಾಸನೆಯ ವಿಧಾನದಲ್ಲಿ ಶರಣರು ಖಚಿತವಾದ ಒಂದು ನೈಷ್ಠಿಕ ನಿಲವನ್ನು ತೆಗೆದುಕೊಂಡರು. ಶರಣರ ಮನೋಧರ್ಮದಲ್ಲಿ ವಿಪುಲ ವೈವಿಧ್ಯಗಳಿದ್ದರೂ ಅವೆಲ್ಲಾ ಇಷ್ಟಲಿಂಗದ ಸುತ್ತ ಬೆಳೆದುವು. ಇಷ್ಟಲಿಂಗವೇ ಎಲ್ಲಕ್ಕೂ ಕೇಂದ್ರಶಕ್ತಿಯಾಯಿತು. ಸತಿ ಪತಿ ಭಾವದ ಭಾವುಕತೆಯಿಂದ ಹಿಡಿದು ನಿರಾಕಾರ ನಿರ್ಗುಣದ ಆತ್ಯಂತಿಕ ಅನುಭವದವರೆಗೂ ಎಲ್ಲ ಮಾನಸಿಕ ಸ್ತರಗಳನ್ನೂ ಅದು ಭರಿಸಬಲ್ಲದಾಗಿತ್ತು. ಇದನ್ನು ಸಾಮಾಜಿಕ ಸಮತೆಯ ಸಾಧನವಾಗಿಯೂ ಬಸವಣ್ಣನವರು ಬಳಸಿಕೊಂಡರು. ಆದರೆ ಅದು ಅಷ್ಟರಲ್ಲೇ ನಿಲ್ಲದೆ ಯೋಗದ ಉತ್ತರಣ ಅವತರಣ ಕ್ರಿಯೆಗಳಿಗೆ ನಿಚ್ಚಣಿಗೆಯನ್ನು ನಿರ್ಮಿಸುವ ಅತಿ ಮಹತ್ವಪೂರ್ಣವಾದ ಸಾಧನವಾಯಿತು. ಇಂದು ಅದೊಂದು ಜಾತಿಯ ಗುರುತಾಗಿರುವುದನ್ನು ಬಿಟ್ಟು ತಾತ್ವಿಕ ಉಪಾಸನೆಯ ದೃಷ್ಟಿಯಿಂದ ನೋಡಬೇಕು. ಆಗ ಅದೊಂದು ಅರ್ಥವತ್ತಾದ ಅನುಭವದ ಸಂಕೇತವಾಗಿ ಕಾಣುತ್ತದೆ. ಅರವಿಂದರ ಪೂರ್ಣಯೋಗಕ್ಕೆ ಇಂತಹ ಒಂದು ಸಂಕೇತದ ಅವಲಂಬನೆ

ಯಿಲ್ಲ. ಇಲ್ಲಿ ಸಾಧಕ ತೀರಾ ನಿರಾಲಂಬ ಸ್ಥಿತಿಯಲ್ಲಿ ಮೆಟ್ಟಿಲುಗಳನ್ನು ಏರಬೇಕಾಗುತ್ತದೆ. ಆದರೆ ಶರಣರು ಇಷ್ಟಲಿಂಗದ ಒಂದು ಆಧಾರಸ್ತಂಭವನ್ನು ಕೊಟ್ಟಿದ್ದು ಜನಸಾಮಾನ್ಯರಿಗೂ ಧೈರ್ಯವನ್ನು ತಂದುಕೊಟ್ಟಿತು. ಅವರೂ ಅದನ್ನು ಏರುವ ಸಾಹಸ ಮಾಡಿ ಸಾಮೂಹಿಕ ಆಧ್ಯಾತ್ಮಿಕ ಆಂದೋಳನಕ್ಕೆ ಕಾರಣರಾದರು.

ಒಟ್ಟಿನಲ್ಲಿ ಪೂರ್ಣಯೋಗ ಮತ್ತು ಶಿವಯೋಗಗಳಲ್ಲಿ ಯೋಗಸಾಧನೆಯ ಅಥವಾ ಇಡೀ ಆಧ್ಯಾತ್ಮಿಕ ಜೀವನದ ಪೂರ್ಣವಿಕಾಸ ಕೈಗೊಂಡಿರುವುದನ್ನು ಕಾಣಬಹುದು. ಇವುಗಳ ಉದ್ದೇಶ, ಆಶಯ,ವ್ಯಾಪ್ತಿಗಳಲ್ಲಿ ಅಂತೆಯೇ ಪರಿಣಾಮ ಪ್ರಭಾವಗಳಲ್ಲಿ ಕಂಡುಬರುವ ಸಮಾನತೆ, ಭಾರತೀಯ ಧಾರ್ಮಿಕ ಪರಂಪರೆಯನ್ನು ವೈಚಾರಿಕವಾಗಿ ಅಳವಡಿಸಿಕೊಂಡುದರ ಫಲ. ಈ ಎರಡಕ್ಕೂ ಇರುವ ವ್ಯತ್ಯಾಸ ಉಪಾಸನೆಯ ವಿಧಾನ ಮತ್ತು ಮಾಧ್ಯಮದಲ್ಲಿ ಕಂಡು ಬರುವಂತಹುದು. ಅಲ್ಲದೆ ಆಧುನಿಕ ಜಗತ್ತಿನ ವೈಜ್ಞಾನಿಕ ಪರಿಸರದ ಹಿನ್ನೆಲೆಯಲ್ಲಿ ಅರವಿಂದರ ಮಹಾಮನಸ್ಸು ದೀರ್ಘ ಕಾಲದ ವೈಚಾರಿಕ ವಿಶ್ಲೇಷಣೆಯಿಂದ ನಿರೂಪಿಸಿದ ಖಚಿತತೆ ಮತ್ತು ವ್ಯವಸ್ಥೆಯ ಪೂರ್ಣತೆಗಳು ಪೂರ್ಣಯೋಗದಲ್ಲಿ ಕಾಣುತ್ತವೆ. ಆದರೆ ಶಿವಯೋಗ ಎಂಟುನೂರು ವರ್ಷಗಳ ಹಿಂದೆ, ಅಂದಿನ ಸಾಮಾಜಿಕ ವ್ಯವಸ್ಥೆಗೆ ಹೊರತಾದ ಸರ್ವಸಮಾನತೆಯ ಆಧಾರದ ಮೇಲೆ ಜನಸಾಮಾನ್ಯರನ್ನು ಮೇಲೆತ್ತುವ ಸಾಮೂಹಿಕ ಚಳುವಳಿಯ ಹಿನ್ನೆಲೆಯಲ್ಲಿ ರೂಪುಗೊಂಡಿತು. ಮಹಾಮನಸ್ಸುಗಳ ಸಮಷ್ಟಿ ಪ್ರಯತ್ನದಿಂದ ಹಿಂದಿನ ಪರಂಪರೆಯ ಸತ್ವವನ್ನೆಲ್ಲಾ ಅರಗಿಸಿಕೊಂಡು, ವಿಚಾರದ ಮೂಸೆಯಲ್ಲಿ ಕರಗಿ ಅನುಭವದ ಜ್ಯೋತಿಯಾಗಿ ಬೆಳಗಿತು. ಹೀಗೆ ಇವುಗಳ ಕಾಲ ಮತ್ತು ಪರಿಸರದ ಅಂತರವನ್ನು ಗಮನಿಸಿಯೂ ಅವುಗಳಿಗೆ ಅತೀತವಾದ ಆಂತರಿಕ ಅಭೀಪ್ಸೆ ಮತ್ತು ನಿರಂತರ ವಿಕಾಸಶೀಲವಾದ ಮುನ್ನಡೆಯ ಪ್ರಯತ್ನಗಳನ್ನು ಈ ಎರಡರಲ್ಲಿಯೂ ಸಮಾನ ಅಂಶಗಳನ್ನಾಗಿ ಗುರುತಿಸಬಹುದು.

ಶುಚಿತ್ವದಿಂದ ಆತ್ಮದರ್ಶನ

ಶೌಚಾತ್ ಸ್ವಾಂಗಜುಗುಪ್ಸಾ ಪರೈರಸಂಸರ್ಗಃ ।

(ಶೌಚದಿಂದ ತನ್ನ ಶರೀರದ ಬಗ್ಗೆ ಜುಗುಪ್ಸೆ ಮತ್ತು ಇನ್ನೊಬ್ಬರ ಶರೀರಗಳೊಡನೆ ಅಸಂಸರ್ಗ - ಇವು ಉಂಟಾಗುವುವು.)

ಯೋಗಸೂತ್ರ. ೨, ೪೦

ಸತ್ತ್ವಶುದ್ಧಿ-ಸೌಮನಸ್ಯ. ಐಕಾಗ್ರ್ಯ-ಇಂದ್ರಿಯಜಯ-ಆತ್ಮದರ್ಶನ ಯೋಗ್ಯತ್ವಾನಿ ಚ ॥

(ಹಾಗೆಯೇ, ಸತ್ತ್ವಶುದ್ಧಿ, ಮನಃಪ್ರಸಾದ, ಏಕಾಗ್ರತೆ, ಇಂದ್ರಿಯಗಳ ಮೇಲೆ ಹಿಡಿತ ಮತ್ತು ಆತ್ಮವನ್ನು ಕಾಣುವ ಯೋಗ್ಯತೆ-ಇವೂ ಸಹ ಶೌಚದ ಫಲಗಳು) ಯೋಗಸೂತ್ರ. ೨, ೪೧

ರಾಜಯೋಗವೆಂದು ಪ್ರಸಿದ್ಧವಾಗಿರುವ ಪತಂಜಲಿಗಳ ಯೋಗಶಾಸ್ತ್ರವು ನಾಲ್ಕು ಪಾದಗಳಲ್ಲಿ ಒಟ್ಟು ೧೯೫ ಸೂತ್ರಗಳ ರೂಪದಲ್ಲಿ ಇದೆ. ಬಹು ವಿಸ್ತಾರವೂ ಗಂಭೀರವೂ ಆದ ಅರ್ಥಗಳನ್ನು ಬಹಳ ಕಡಮೆ ಶಬ್ದಗಳಲ್ಲಿ ತಿಳಿಸುವ ಒಂದು ವಿಶೇಷ ರೀತಿಯ ಶಬ್ದರಚನೆಯೇ ಸೂತ್ರ. ಆಧುನಿಕ ರಸಾಯನ ಶಾಸ್ತ್ರ (Chemistry) ಯಲ್ಲಿ ಸಂಯುಕ್ತ ವಸ್ತುಗಳನ್ನು (compounds) ಸೂತ್ರಗಳ ಮೂಲಕ(formulae) ಮತ್ತು ರಾಸಾಯನಿಕ ಕ್ರಿಯೆಗಳನ್ನು (Chemical reactions) ಸಮೀಕರಣಗಳ (equations) ಮೂಲಕ ತಿಳಿಸುವ ರೂಢಿ ಇದೆ. ವೈಜ್ಞಾನಿಕ ಪರಿಭಾಷೆಯನ್ನು ಬಲ್ಲವರು ಈ ಸಣ್ಣ ಸಣ್ಣ ಸೂತ್ರಗಳೂ ಸಮೀಕರಣಗಳೂ ಎಷ್ಟೊಂದು ವೈಜ್ಞಾನಿಕ ಮಾಹಿತಿಗಳನ್ನೂ, ಲೆಖ್ಖಾಚಾರಗಳನ್ನೂ ತಮ್ಮೊಳಗೆಅಡಗಿಸಿಕೊಂಡಿವೆಯೆಂದು ತಿಳಿದಿರುವರು. ಹಾಗೆಯೇ ನಮ್ಮ ಪ್ರಾಚೀನ ಋಷಿಗಳ ಚಿಂತನೆಯ ರೀತಿ ಮತ್ತು ಅದನ್ನು ಶಬ್ದಗಳ ಮೂಲಕ ಅವರು ವ್ಯಕ್ತಗೊಳಿಸುವ ವಿಧಾನ - ಇವುಗಳನ್ನು ಬಲ್ಲ ವಿದ್ವಾಂಸರು ತಮ್ಮ ವ್ಯಾಖ್ಯಾನಗಳ ಮೂಲಕ ಸೂತ್ರಗಳ ಅರ್ಥ ವಿಸ್ತಾರವನ್ನು ನಮಗೆ ತೋರಿಸಿರುವರು. ಅವರು ತೋರಿಸಿದ ದಾರಿಯಲ್ಲಿಯೇ ಮುಂದೆ ಸಾಗಿ ನಮ್ಮ ಸ್ವಂತ ಅನುಭವ ಮತ್ತು ನಮ್ಮ ಕಾಲದ ಬದುಕಿನ ರೀತಿಯ ಹಿನ್ನೆಲೆಯಲ್ಲಿ ಈ ಸೂತ್ರಗಳಿಂದ ನಾವು ತಿಳಿಯಬಹುದಾದ ಸಂದೇಶಗಳೇನೆಂದು ಚಿಂತನೆ ಮಾಡುವುದು ಒಂದು ಒಳ್ಳೆಯ ಬೌದ್ಧಿಕ ವ್ಯಾಯಾಮ.

ಬಾಹ್ಯ ಶೌಚ : ಯೋಗಕ್ಕೆ ಎಂಟು ಅಂಗಗಳು (ಸೂತ್ರ ೨, ೨೯) ಮತ್ತು ಎರಡನೆಯ ಅಂಗವಾದ ನಿಯಮವು ಶೌಚ, ಸಂತೋಷ, ತಪಸ್, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನ-ಹೀಗೆ ಐದು ಅಂಶಗಳನ್ನು ಹೊಂದಿದೆ (ಸೂತ್ರ ೨, ೩೨)

ಇವು ಎಲ್ಲರಿಗೂ ತಿಳಿದ ವಿಷಯ. **ಶೌಚ** ಎಂದರೆ ಕೊಳೆ ಇಲ್ಲದೆ ಶುಚಿಯಾಗಿ ಇರುವಿಕೆ ಎಂದು ಸಾಮಾನ್ಯವಾದ ಅರ್ಥ. ಅಗ್ನಿ ಪುರಾಣದಲ್ಲಿ ಹೀಗೆ ಕೇಳಿದೆ :

ಶೌಚಂ ತು ದ್ವಿವಿಧಂ ಪ್ರೋಕ್ತಂ, ಬಾಹ್ಯಂ ಅಭ್ಯಂತರಂ ತಥಾ ।
ಮೃಜ್ಜಲಾಭ್ಯಾಂ ಸ್ಮೃತಂ ಬಾಹ್ಯಂ, ಭಾವಶುದ್ಧೇಃ ತಥಾಂತರಂ ॥

(ಶೌಚವು ಎರಡು ವಿಧ. ಒಂದು ಹೊರಗಿನದು, ಇನ್ನೊಂದು ಒಳಗಿನದು. ನೀರು ಮಣ್ಣು ಮುಂತಾದವುಗಳಿಂದ ಹೊರಗಿನ ಶುದ್ಧಿ, ಭಾವಶುದ್ಧಿಯಿಂದ ಒಳಗಿನ ಶೌಚ.)

ಯೋಗಸೂತ್ರದ ಭಾಷ್ಯಕಾರರಾದ ವ್ಯಾಸರು ಹೀಗೆ ಹೇಳಿದ್ದಾರೆ (ಸೂತ್ರ ೨,೩೨)....**ಶೌಚಂ** ಮೃಜ್ಜಲಾದಿಜನಿತಂ, ಮೇಧ್ಯಾಭ್ಯವಹರಣಾದಿ ಚ ಬಾಹ್ಯಂ ; ಅಭ್ಯಂತರಂ ಚಿತ್ತಮಲಾನಾಂ ಆಕ್ಷಾಳನಂ

ಇಲ್ಲಿ ಪವಿತ್ರವಾದ ಆಹಾರ ಸೇವನೆ-ಮುಂತಾದ್ದು-ಎಂದು ಬಾಹ್ಯ ಶೌಚದಲ್ಲಿ ಸೇರಿಸಿರುತ್ತಾರೆ. ಮತ್ತು ಚಿತ್ತದ ಮಲಗಳನ್ನು ತೊಳೆಯುವುದೇ ಒಳಗಿನ ಶೌಚ ಎಂದು ವಿವರಿಸಿರುತ್ತಾರೆ. ಪ್ರಾತಃಸ್ಮರಣೀಯರಾದ ಮಹಾತ್ಮಾ ಶ್ರೀ ರಾಘವೇಂದ್ರ ಸ್ವಾಮಿಗಳು (ಮಂತ್ರಾಲಯ ಮುನಿಗಳು) ತಾವು ಬರೆದಿರುವ ಗೀತಾರ್ಥ ಸಂಗ್ರಹದಲ್ಲಿ (೧೬, ೩) ಹೀಗೆ ಹೇಳುತ್ತಾರೆ :-

"**ಶೌಚಂ**, ಮೃತ್ತಿಕಾಧಿಭಿಃ ಬಾಹ್ಯ ಶೌಚಂ. ಭಗವತ್‌ಸ್ಮೃತ್ಯಾದಿನಾ ಆಂತರ ಶೌಚಂ ॥"

ಇಲ್ಲಿ ಆಂತರ ಶೌಚವೆಂದರೆ ಭಾವಶುದ್ಧಿ ಎಂದು ಹಿಂದೆ ಹೇಳಿದ್ದಕ್ಕೆ ಸಾಧನವಾಗಿ ಭಗವಂತನ ಸ್ಮೃತಿ-ಮುಂತಾದವುಗಳನ್ನು ಹೆಸರಿಸಿರುವುದೇ ವಿಶೇಷ.

ನಮ್ಮ ನಾಗರಿಕ ಬದುಕಿನಲ್ಲಿ ಹೊರಗಿನ ಶೌಚಕ್ಕೆ ಹೆಚ್ಚಿನ ಗಮನ ಇರುವುದೇನೋ ಒಳ್ಳೆಯದೇ. ನೀರು ಪ್ರಧಾನ ಸಾಧನವಾಗಿದೆ ; ಮಣ್ಣು, ಸೀಗೆಕಾಯಿ ಪುಡಿ ಮುಂತಾದ ಸಾಧನಗಳ ಸ್ಥಾನದಲ್ಲಿ ಆಧುನಿಕ ರಾಸಾಯನಿಕ ವಸ್ತು ಸಾಬೂನು (Soap) ಬಂದಿದೆ. ಸಾಬೂನು ಎಷ್ಟೇ ಸುಗಂಧವಾಗಿ ಕೋಮಲವಾಗಿ ಇದ್ದರೂ (ಹಾಗೆಂದು ಜಾಹೀರಾತುಗಳು ಬಣ್ಣಿಸಿ ನಮ್ಮ ಮನ ಒಲಿಸುತ್ತಲಿವೆ) ಕೆಲವು ಚರ್ಮಗಳಿಗೆ ಅದು ಒಗ್ಗದು-ಎನ್ನುವುದಂತೂ ಅನುಭವ ಸಿದ್ಧ. ಆಯುರ್ವೇದ ಹಾಗೂ ಧರ್ಮಶಾಸ್ತ್ರಗಳ ವಿಚಾರಗಳನ್ನು ಅನುಸರಿಸಿ ನಾವೇ ಸುಲಭವಾಗಿ ತಯಾರಿಸಿಕೊಳ ಬಹುದಾದ ಒಂದು ಉತ್ತಮವಾದ **ಸ್ನಾನಚೂರ್ಣ**ದ ತಯಾರಿಕೆಯನ್ನು ನಮ್ಮ ಮಲ್ಲಾಡಿಹಳ್ಳಿ ಆಶ್ರಮದ ಶ್ರೀ ಸ್ವಾಮೀಜಿಯವರು ತಮ್ಮ ಪ್ರಕಟನೆಯಲ್ಲಿ ವಿವರಿಸಿದ್ದಾರೆ. ಇದನ್ನು ಉಪಯೋಗಿಸಿ ಚರ್ಮವನ್ನು ಶುಭ್ರವಾಗಿ, ಮೃದುವಾಗಿ, ಸ್ನಿಗ್ಧವಾಗಿ ಮತ್ತು ಹೊಳಪಾಗಿ ಕಾಪಾಡಿಕೊಳ್ಳಬಹುದು. ಆಸಕ್ತರು ಪ್ರಯೋಗ ಮಾಡಿ ನೋಡಲೆಂದು ವಿನಂತಿಸುತ್ತೇನೆ. ಶ್ರಮಜೀವಿಗಳು ಬೆಳಗ್ಗೆ ಸ್ನಾನ ಮಾಡದಿದ್ದರೂ, ಸಂಜೆ ತಮ್ಮ ಮಣ್ಣು ಮತ್ತು ಬೆವರಿನ ದುಡಿಮೆಯೆಲ್ಲ ಮುಗಿದ ಮೇಲೆ ಸ್ನಾನ ಮಾಡುತ್ತಾರೆ. ಇದೂ ಒಳ್ಳೆಯ ರೂಢಿಯೇ. ಹಾಗೆಯೇ ನಾವು ಉಪಯೋಗಿಸುವ ಬಟ್ಟೆ, ಪಾತ್ರೆ, ಇತರ ಉಪಕರಣಗಳು ಮುಂತಾದವನ್ನೂ ಕೊಳೆಯಿಲ್ಲದೆ ಇಟ್ಟುಕೊಳ್ಳುವುದೂ ಬಾಹ್ಯ ಶೌಚದ ಇನ್ನೊಂದು ಅಂಶ.

ನಮ್ಮ ಆಹಾರವು ಶುದ್ಧವಾಗಿದ್ದಷ್ಟೂ, ನಮ್ಮ ಆರೋಗ್ಯವು ಉತ್ತಮವಾಗಿರುವುದು ಆಧುನಿಕ ವೈಜ್ಞಾನಿಕ ಪದ್ಧತಿಗೂ ಪ್ರಾಚೀನ ಋಷಿಗಳ ಪದ್ಧತಿಗೂ ಸಮ್ಮತವಾದ ವಿಚಾರ. ಛಾಂದೋಗ್ಯ ಉಪನಿಷತ್ತಿನಲ್ಲಿ ನಾರದರಿಗೆ ಸನತ್ಕುಮಾರರು ಹೀಗೆ ಉಪದೇಶ ಮಾಡಿದ್ದಾರೆ.

"ಆಹಾರಶುದ್ಧೌ ಸತ್ತ್ವಶುದ್ಧಿಃ, ಸತ್ತ್ವಶುದ್ಧೌ ಧ್ರುವಾ ಸ್ಮೃತಿಃ"
(೭/೭೬/೬)

ಇಲ್ಲಿ 'ಸತ್ತ್ವ' ಎಂದರೆ ನಮ್ಮ ಅಂತಃಕರಣ, ಚಿತ್ತ. ಇದರ ಶುದ್ಧಿ ನಾವು ಸೇವಿಸುವ ಆಹಾರದ ಶುದ್ಧಿಯನ್ನು ಅವಲಂಬಿಸಿದೆ. ನಾವು ಸೇವಿಸುವ ಅನ್ನಪಾನಗಳೇ ನಮ್ಮ ಮನಸ್ಸನ್ನು ರೂಪಿಸುತ್ತವೆಂದು ಇದೇ ಉಪನಿಷತ್ತಿನಲ್ಲಿ ಇನ್ನೊಂದು ಕಡೆ ಹೇಳಿದೆ (೬/೨/೮)

"ಅನ್ನಮಶಿತಂ ತ್ರೇಧಾ ವಿಧೀಯತೇ...ತಸ್ಯ ಯೋಽಣಿಷ್ಠಃ ತನ್ಮನಃ
ಅನ್ನಮಯಂ ಹಿ ಸೋಮ್ಯ ಮನಃ..."

ಮನಸ್ಸನ್ನು ಅನ್ನಮಯವೆಂದು ಕರೆಯಲು ಇದೇ ಕಾರಣ. ಭಗವದ್ಗೀತೆಯಲ್ಲಿ ಆಹಾರವನ್ನು ಸಾತ್ತ್ವಿಕ, ರಾಜಸ ಮತ್ತು ತಾಮಸ–ಎಂದು ಮೂರು ವಿಧವಾಗಿ ವಿಂಗಡಿಸಿ, ವಿವರಗಳನ್ನು ಹೇಳಿದೆ (೧೭/೭, ೮, ೯, ಮತ್ತು ೧೦) ಶುದ್ಧವಾದ ಸಾತ್ತ್ವಿಕ ಆಹಾರವೇ ಗ್ರಾಹ್ಯವೆಂದು ಇದರ ಭಾವನೆ.

'ಆಹಾರ' ಎಂದರೆ ನಾವು ಮುಖದಿಂದ ಜಠರದ ಒಳಗೆ ಕಳಿಸುವ ಅನ್ನ–ಪಾನಗಳು–ಎಂದು ಇಷ್ಟು ಮಾತ್ರ ಅರ್ಥವಲ್ಲ. ನಾವು ಇಂದ್ರಿಯಗಳಿಂದ ಹೊರಗಿನ ಪ್ರಪಂಚದಿಂದ ಒಳಗೆ ತೆಗೆದುಕೊಳ್ಳುವ ಶಬ್ದ, ರೂಪ, ರಸ, ಸ್ಪರ್ಶ, ಮತ್ತು ಗಂಧ–ಇವೂ ಸಹ ವಿಶಾಲವಾದ ಅರ್ಥದಲ್ಲಿ 'ಆಹಾರ'ಗಳೇ. ಇವುಗಳು ಶುದ್ಧವಾಗಿರದೆ, ನಮ್ಮ ಚಿತ್ತವು ಶುದ್ಧವಾಗಿರಲಾರದು. ಹಾಗೆಯೇ ನಾವು ಓದುವ, ಕೇಳುವ, ಚಿಂತನೆ ಮಾಡುವ, ಮತ್ತು ಮಾತನಾಡುವ ವಿಷಯಗಳೂ ಸಹ ನಮ್ಮ 'ಆಹಾರ'ಗಳೇ ಆಗಿವೆ.

"ಗುರೋಃ ವಿದ್ಯಾಹೃತಿಃ ಯಾ ತು ಸ ಆಹಾರ ಇತಿ ಸ್ಮೃತಃ ।
ತಚ್ಛುದ್ಧೌ ಜ್ಞಾನಶುದ್ಧಿಃ ಸ್ಯಾತ್.... ॥
–ಇತಿ ಸಾಧನ ನಿರ್ಣಯೇ

(ಛಾಂದೋಗ್ಯ ಉಪನಿಷದ್ : ಶ್ರೀ ಮಾಧ್ವ ಭಾಷ್ಯ) ೭-೩-೬

(ಗುರುವಿನಿಂದ ನಾವು ಕೇಳಿ ಪಡೆಯುವ ವಿದ್ಯೆಯು ಆಹಾರ. ಅದು ಶುದ್ಧವಾಗಿದ್ದರೆ ನಮ್ಮ ತಿಳಿವು ಶುದ್ಧವಾಗಿರುವುದು.)

ಇಂತಹ ಆಹಾರಶುದ್ಧಿಯು, ವ್ಯಾಸರ ಪ್ರಕಾರ ಬಾಹ್ಯಶುದ್ಧಿಯ ಅಂಗವಾಗಿದ್ದರೂ, ಮುಖ್ಯವಾಗಿ ಅಂತರಶುದ್ಧಿಗೆ ಸಾಧನವಾದ ಒಂದು ಪ್ರಧಾನ ಅಂಶ.

ಚಿತ್ತಶುದ್ಧಿ

ನಮ್ಮ **ಚಿತ್ತವು** (ಅಂತಃಕರಣವು) ಅನಾದಿಕಾಲದಿಂದ ಸೇರಿಹೋದ ನಾನಾ

ಬಗೆಯ ಕೊಳೆಗಳಿಂದ ತುಂಬಿಹೋಗಿವೆ. ಸ್ವಲ್ಪಮಟ್ಟಿಗೆ ಅಂತರ್ ನಿರೀಕ್ಷಣೆ [Introspection]ಯ ಅಭ್ಯಾಸವುಳ್ಳವರು ಯಾರಾದರೂ ಸರಿ, ಸುಲಭವಾಗಿ ನಮ್ಮ ಚಿತ್ತ ಮಲಗಳನ್ನು ನಾವೇ ಗುರ್ತಿಸಿಕೊಳ್ಳಬಹುದು. ಅರಿಷಡ್ವರ್ಗವೆಂದೂ, ನರಕದ ಹೆಬ್ಬಾಗಿಲುಗಳೆಂದೂ ಶಾಸ್ತ್ರಗಳು ವರ್ಣಿಸಿರುವುದೂ ಇದನ್ನೇ. ನಿಧಾನವಾಗಿ ನಿರಂತರ ವಾಗಿ ಈ ಕೊಳೆಯನ್ನು ತೊಳೆಯುತ್ತ ಬರಬೇಕು. ಇದು ಒಂದು ಜನ್ಮದಲ್ಲಿ ಮುಗಿ ಯುವ ಕೆಲಸವಲ್ಲ, ಅನೇಕ ಜನ್ಮಗಳ ಕಾಲ ತಾಳ್ಮೆಯಿಂದ ಆಗಬೇಕಾದ ಕೆಲಸ (ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ ಅನೇಕಜನ್ಮಸಂಸಿದ್ಧಃ ತತೋ ಯಾತಿ ಪರಾಂ ಗತಿಂ॥–ಗೀತಾ ೬-೪೫) ಚಿತ್ತದ ಅಂತರಾಳದಲ್ಲಿ ಸೂಕ್ಷ್ಮವಾಗಿ ಬೀಜರೂಪದಿಂದ ಇರುವ ಇಂತಹ ಕೊಳೆಗಳಿಗೆ ಸಂಸ್ಕಾರ, ಪೂರ್ವವಾಸನೆ–ಎಂದು ಹೆಸರುಗಳು. ಹೊರಗಿನ ಪರಿಸರದಿಂದ ಒಂದು ಸಂವೇದನೆ ಬಂದ ಕೂಡಲೇ ಈ ಸಂಸ್ಕಾ ರವು ಎಚ್ಚರಗೊಂಡು, ಮೇಲೆ ಬಂದು, ಬೆಳೆದು, ವಿಚಾರವಾಗಿ ಕಾಣಿಸಿಕೊಳ್ಳುವುದು. ಸಾಮಾನ್ಯವಾಗಿ ಮಾನವನು ಇಂತಹ ಕುವಿಚಾರಗಳನ್ನು ನಿಗ್ರಹಿಸಲಾಗಲಿ, ಕೊನೆಗೆ ಅವುಗಳ ಸೂಕ್ಷ್ಮರೂಪದಲ್ಲಿ ಗುರ್ತಿಸಲಾಗಲಿ ಶಕ್ತನಲ್ಲ. ಈ ವಿಚಾರಗಳು ಮೊದಲು ಮಾತಿನಿಂದಲೂ, ನಂತರ ಕೃತಿಯಿಂದಲೂ ಅಭಿವ್ಯಕ್ತಿಗೊಳ್ಳುತ್ತವೆ. ತನ್ನ ಇಂದ್ರಿಯ ಗಳ ಮೂಲಕ ಮಾನವನು ಹೊರಗಿನ ಪರಿಸರದ ಮೇಲೆ ಈ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸಿದ ಮೇಲೆಯೂ ಸಹ ಇದು ನಿಃಶೇಷವಾಗಿ ನಾಶವಾಗದು. ಇದಕ್ಕೆ ಬದ ಲಾಗಿ ಸಂಸ್ಕಾರವು ಈ ಮಾತು ಮತ್ತು ಕ್ರಿಯೆಗಳಿಂದ ಬಲಪಟ್ಟು ಮತ್ತಷ್ಟು ದೃಢ ವಾಗಿ ಚಿತ್ತದಲ್ಲಿಯೇ ನೆಲೆಸುತ್ತದೆ. ಇದರಿಂದ ಮತ್ತೆ ಮತ್ತೆ ಕೆಟ್ಟ ಮಾತು, ಕೆಟ್ಟ ಕೃತಿಗಳು—ಹೀಗೆ ಕೊನೆಯಿಲ್ಲದೆ ಮುಂದುವರೆಯುತ್ತದೆ. ಪತಂಜಲಿಗಳು ತಮ್ಮ ಒಂದು ಸೂತ್ರದಲ್ಲಿ (೨,೩,೪) ಇಂತಹ ಕೆಟ್ಟ ಸಂಸ್ಕಾರಗಳನ್ನು ತಡೆಗಟ್ಟಲು ಒಂದು ವಿಚಾರ ಮಾರ್ಗವನ್ನು ಸೂಚಿಸಿದ್ದಾರೆ. ಉದಾಹರಣೆಗೆ: ಪರಹಿಂಸೆಯ ಪ್ರೇರಣೆ ಯನ್ನು ತೆಗೆದುಕೊಳ್ಳೋಣ. ಇನ್ನೊಬ್ಬರನ್ನು ಹಿಂಸಿಸಲು ನಮಗೆ ಮೂರು ರೀತಿ ಯಿಂದ ಪ್ರೇರಣೆ ಆಗಬಹುದು. (i) ಕಾಮ (ಮಾಂಸದ ಆಸೆಗಾಗಿ, ರುಚಿಗಾಗಿ ಜಿಂಕೆ ಯನ್ನು ಕೊಲ್ಲುವುದು) (ii) ಕ್ರೋಧ ('ಇವನು ನನ್ನನ್ನು ನಿಂದಿಸಿದ್ದಾನೆ' ಎಂದು ಕೋಪ ತಾಳಿ ಪ್ರತೀಕಾರ ಮಾಡುವುದು) (iii) ಮೋಹ (ಈ ದೇವತೆಗೆ ಈ ಪ್ರಾಣಿ ಯನ್ನು ಬಲಿಯಾಗಿ ಕೊಟ್ಟರೆ ನನಗೆ ಪುಣ್ಯ ಬರುವುದು—ಎಂಬ ತಪ್ಪು ತಿಳುವಳಿಕೆ). ಇವು ಒಂದೊಂದೂ ಮೂರು ಬಗೆ (i) ಕೃತ (ತಾನೇ ಸ್ವತಃ ಮಾಡಿದ್ದು) (ii) ಕಾರಿತ (ಇನ್ನೊಬ್ಬರಿಗೆ ಹೇಳಿ ಮಾಡಿಸಿದ್ದು) (iii) ಅನುಮೋದಿತಃ (ಮೂರನೆಯವರು ಮಾಡಿದ್ದನ್ನು "ಸರಿ, ಒಳ್ಳೆಯದಾಯಿತು" ಎಂದು ಒಪ್ಪುವುದು) ಮತ್ತೆ ಇವು ಒಂದೊಂದೂ ಮೂರು ಬಗೆ (i) ಮೃದು (ಸಾಮಾನ್ಯ) (ii) ಮಧ್ಯಮ ಮತ್ತು (iii) ತೀವ್ರ (ಮತ್ತೆ ಮುಂದೆ ಇದರಲ್ಲಿಯೂ ಮೂರು ಮೂರು ರೀತಿಯಾಗಿ ಭೇದ ಗಳು) ಹೀಗೆ ಒಟ್ಟು ೩⁴ = ೮೧ ಪ್ರಭೇದಗಳಾದವು. ಹೀಗೆಯೆ ಅಸತ್ಯ, ಚೌರ್ಯ ಮುಂತಾದ ವಿಷಯಗಳಲ್ಲಿಯೂ ಇದೇ ರೀತಿಯಾಗಿದೆ. ಚಿತ್ತಶುದ್ಧಿಯನ್ನು ಬಯಸು ವವನು ನಿರಂತರವೂ ತನ್ನ ಮನಸ್ಸು, ತನ್ನ ಮಾತು, ಮತ್ತು ತನ್ನ ಕೃತಿಗಳನ್ನು

ಎಚ್ಚರಿಕೆಯಿಂದ ವಿಮರ್ಶಿಸುತ್ತ, ಇಂತಹ ತಪ್ಪು ಭಾವನೆಗಳು ಬಂದಾಗಲೆಲ್ಲ "ಇವುಗಳಿಂದ ನನಗೆ ಆಗುವ ಫಲವೇನು? ಇಂದಲ್ಲ ನಾಳೆ, ಈ ಜನ್ಮದಲ್ಲಿ ಅಲ್ಲವಾದರೆ ಮುಂದಿನ ಜನ್ಮದಲ್ಲಿ ಅಂತೂ ಎಂದೋ ಒಂದು ಕಾಲದಲ್ಲಿ ತಪ್ಪದೆ ಇದರ ಫಲ ನನಗೆ ಬಂದೇ ತೀರುವುದು. ಅದೇ ಅನಂತವಾದ ದುಃಖ ಮತ್ತು ಅಜ್ಞಾನ. ಈ ಫಲ ನನಗೆ ಸರ್ವಥಾ ಬೇಡ. ಹಾಗಾದರೆ ಇವುಗಳಿಗೆ ಕಾರಣಗಳಾದ ಹಿಂಸಾದಿಗಳನ್ನೂ ದೂರ ಮಾಡುವೆನು" ಎಂದು ವಿಚಾರವನ್ನು ಮಾಡುತ್ತಿರಬೇಕು.

ನಾರದ, ವ್ಯಾಸ, ಶುಕ ಮುಂತಾದ ಭಕ್ತಿಯೋಗದ ಆಚಾರ್ಯರು ಇದರ ಜೊತೆಗೆ ಇನ್ನೊಂದು ಸುಲಭವಾದ ಉಪಾಯವನ್ನು ಸೂಚಿಸುತ್ತಾರೆ. ಅದು-ನಿರಂತರವಾದ ಹರಿಸ್ಮೃತಿ. ಭಗವಂತನ ನಾಮಗಳನ್ನು ಶ್ರದ್ಧೆಯಿಂದ ಹೇಳುವುದು, ಕೇಳುವುದು ಮತ್ತು ಅವುಗಳ ಅರ್ಥವನ್ನು ಚಿಂತಿಸುವುದು—ಈ ಉಪಾಯಗಳಿಂದ ಚಿತ್ತವನ್ನು ಭಗವನ್ಮಯವಾಗಿ ಮಾಡಿಕೊಳ್ಳುವುದು.

ಶೃಣ್ವತಾಂ ಗೃಣತಾಂ ವೀರ್ಯಾಣಿ ಉದ್ದಾಮಾನಿ ಹರೇರ್ಮುಹುಃ ।
ಯಥಾ ಸುಜಾತಯಾ ಭಕ್ತ್ಯಾ ಶುದ್ಧ್ಯೇನ್ನಾತ್ಮಾ ವ್ರತಾದಿಭಿಃ ॥

—ಶ್ರೀಮದ್ಭಾಗವತ, ೬/೩/೩೨

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂಗತೋಽಪಿ ವಾ ।
ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥

—ಸ್ಮೃತಿ

ಮಾನವನು ಅಪವಿತ್ರನಾಗಲಿ, ಅಥವಾ ಪವಿತ್ರನಾಗಿರಲಿ, ಅಥವಾ ಯಾವುದೇ ಅವಸ್ಥೆಯಲ್ಲಾದರೂ ಇರಲಿ, ಅವನು ಪುಂಡರೀಕಾಕ್ಷನನ್ನು ಸ್ಮರಿಸಿದರೆ, ಆಗಲೇ ಒಳಗೂ ಹೊರಗೂ ಶುಚಿಯಾಗುತ್ತಾನೆ.

ಚಕ್ರಾಯುಧಸ್ಯ ನಾಮಾನಿ ಸರ್ವದಾ ಪರಿಕೀರ್ತಯೇತ್ ।
ನಾಶೌಚಂ ಕೀರ್ತನೇ ತಸ್ಯ ಪವಿತ್ರೋ ಭಗವಾನ್ ಯತಃ ॥

—ದಕ್ಷಸ್ಮೃತಿ

ಚಕ್ರಾಯುಧನ (ವಿಷ್ಣುವಿನ) ಹೆಸರುಗಳನ್ನು ಯಾವಾಗಲೂ ಕೀರ್ತನೆ ಮಾಡುತ್ತಿರಬೇಕು. "ತಾನು ಅಶುಚಿಯಾಗಿರುವುದರಿಂದ ಭಗವಂತನ ನಾಮವನ್ನು ಹೇಗೆ ಹೇಳಲಿ?" ಎಂದು ಸಂಶಯ ಬೇಡ. ಭಗವಂತನು ಯಾವಾಗಲೂ ಪವಿತ್ರನೇ, ಆದ್ದರಿಂದ ಅವನ ನಾಮವನ್ನು ಹೇಳುವುದರಲ್ಲಿ ಅಶೌಚ ಎಂಬ ಅಡ್ಡಿ ಬಾರದು.

(ಮತ್ತೆ ಮತ್ತೆ ಹರಿಯ ವೀರ್ಯಗಳನ್ನು ವರ್ಣಿಸುವ ನಾಮವನ್ನು ಕೇಳುವುದು ಮತ್ತು ಹೇಳುವುದು ಭಕ್ತಿಗೆ ಕಾರಣವಾಗುತ್ತದೆ. ಇದರಿಂದ ಆತ್ಮವು ಶುದ್ಧವಾಗುವುದು.)

ಅರ್ಥಶೌಚ

ಬಾಹ್ಯಶೌಚಕ್ಕಿಂತ ಆಂತರಶೌಚವೇ ಹಿರಿದು-ಎಂದು ಸರ್ವಸಾಧುಗಳ ಸಮ್ಮತ. ಶೌಚದ ಇನ್ನೊಂದು ಮುಖ-ವ್ಯಾವಹಾರಿಕ ಮುಖವೂ-ಇಷ್ಟೇ ಹಿರಿದಾದುದು. ಮನುಮಹರ್ಷಿಗಳು ಹೀಗೆ ಹೇಳುತ್ತಾರೆ:

ಸರ್ವೇಷಾಮಪಿ ಶೌಚಾನಾಂ ಅರ್ಥಶೌಚಃ ಪರಂ ಸ್ಮೃತಃ
ಯೋಽರ್ಥೇ ಶುಚಿಃ ಸ ಹಿ ಶುಚಿಃ, ನ ಮೃದ್ವಾರಿಶುಚಿಃ ಶುಚಿಃ ॥
—ಮನುಧರ್ಮಶಾಸ್ತ್ರ, ೫/೧೦೬

(ಎಲ್ಲ ವಿಧವಾದ ಶೌಚಗಳಲ್ಲಿ ಅರ್ಥಶೌಚವೆಂಬುದು ಬಹಳ ಹಿರಿಯದು. ಯಾರು ಹೀಗೆ ಅರ್ಥದ ವಿಷಯದಲ್ಲಿ ಶುಚಿಯಾಗಿರುವನೋ ಅವನೀಗ ನಿಜವಾಗಿ ಶುಚಿಯು; ನೀರು ಮಣ್ಣುಗಳಿಂದ ಮೈತೊಳೆದವನು ಶುಚಿಯಲ್ಲ.)

ನಾವು ಹಣ ಸಂಪಾದನೆ ಮಾಡುವ ದಾರಿ ಶುಚಿಯಾಗಿರಬೇಕು ; ಅಂದರೆ ಅದರಲ್ಲಿ ಅಸತ್ಯ, ಅನ್ಯಾಯ ಮತ್ತು ಅಧರ್ಮಗಳು ಸ್ವಲ್ಪವೂ ಸೇರದೆ, ಸತ್ಯ ನ್ಯಾಯ ಮತ್ತು ಧರ್ಮಗಳಿಗೆ ಸಮ್ಮತವಾಗಿರಬೇಕು. ಇದೇ ಮುಖ್ಯವಾದ ಶೌಚ.

ಪ್ರಾಮಾಣಿಕನಾಗಿ ಬೆವರು ಸುರಿಸಿ ದುಡಿಯುವ ಒಬ್ಬ ಬಡವನ ಮೈ-ಬಟ್ಟೆಗಳು ಸಾಬೂನು ನೀರು ಕಾಣದೆ ಕೊಳಕಾಗಿರಬಹುದು. ಆದರೆ ಋಷಿಗಳ ಅಭಿಪ್ರಾಯದಲ್ಲಿ ಅವನೇ ಶುಚಿ. ಕಲಬೆರಿಕೆ, ಮೋಸದ ತೂಕ, ಅಕ್ರಮದಾಸ್ತಾನು-ಮುಂತಾದ ತಪ್ಪುದಾರಿಗಳಿಂದ ಕಪ್ಪುಹಣವನ್ನು ಜಮಾಯಿಸಿ, ಸುಂದರವಾದ ಬಟ್ಟೆಗಳಿಂದಲೂ ಸುಗಂಧ ಚೂರ್ಣಗಳಿಂದಲೂ ಮೆರೆಯುತ್ತಿರುವ ಒಬ್ಬ ಶ್ರೀಮಂತ ಹೊರಗೆ ಬಹಳ ಶುಚಿ, ಆದರೆ ಋಷಿಗಳ ದೃಷ್ಟಿಯಲ್ಲಿ ಅವನೇ ಕೊಳಕ.

ಗುರು ನಾನಕ್ ಒಮ್ಮೆ ಒಂದು ಊರಿಗೆ ಹೋದರು. ಭಾಯಿ ಲಾಲೋ ಎಂಬ ಬಡ ಚಮ್ಮಾರನ ಮನೆಯಲ್ಲಿ ಬಿಡಾರ ಹೂಡಿದರು. ಆ ಊರಿನ ಶ್ರೀಮಂತ ದಿವಾನ್ ಮಲ್ಲಿಕ್ ಭಾಗೋ ಎಂಬುವರ ಮನೆಯಲ್ಲಿ ಒಂದು ಸಾಮೂಹಿಕ ಸಂತರ್ಪಣೆ ಇತ್ತು. ಎಲ್ಲ ಸಾಧುಗಳಿಗೂ ಫಕೀರರಿಗೂ ಕರೆ ಇತ್ತು. ನಾನಕರಿಗೂ ಕರೆ ಇತ್ತು, ಆದರೆ ಅವರು ಹೋಗಲಿಲ್ಲ. ಆ ಸಂಜೆ ಊರಿನ ಸಾಧುಗಳು ಒಂದೆಡೆ ಸೇರಿದಾಗ ಈ ವಿಷಯ ಚರ್ಚೆಗೆ ಬಂದಿತು. ಕೆಲವರು ನಾನಕನು ಬೇಕೆಂತಲೇ ಊಟಕ್ಕೆ ಹೋಗದೆ ಶ್ರೀಮಂತನನ್ನು ಅಪಮಾನ ಮಾಡಿದ್ದಾನೆ-ಎಂದು ಜರಿದರು. ಕೆಲವರು "ಅಂಥ ದಿವ್ಯವಾದ ಊಟ ಮಾಡುವ ಯೋಗ್ಯತೆ ಇವನಿಗೆ ಇದ್ದರೆ ತಾನೇ" ಎಂದು ಹೀಯಾಳಿಸಿದರು. ಆಗ ನಾನಕರು ಶ್ರೀಮಂತರ ಮನೆಯಿಂದ ಎರಡು ಜಿಲೇಬಿಗಳನ್ನು ತರಿಸಿ ಎಡಗೈಯಲ್ಲಿ ಹಿಡಿದು, ಬಡ ಚಮ್ಮಾರನ ಮನೆಯಲ್ಲಿ ತಾನು ಆ ದಿನ ಉಂಡು ಉಳಿದಿದ್ದ ಒಣ ರೊಟ್ಟಿ ಚೂರನ್ನು ಬಲಗೈಯಲ್ಲಿ ಹಿಡಿದು ಹಿಂಡಿದರು. ಎಡಗೈಯಿಂದ ಕೆಂಬಣ್ಣದ ರಕ್ತ ಸುರಿಯಿತು ; ಬಲಗಡೆಯಿಂದ ಬಿಳಿಯ ಹಾಲಿನ ಧಾರೆ! "ಯಾವ ಆಹಾರವು ಶುಚಿ, ಯಾವುದು ಅಶುಚಿ-ನೀವೇ ನೋಡಿಕೊಳ್ಳಿ" ಎಂದರು. ಹೀಗೆ ಒಂದು ಕತೆ ನಾನಕ-ಚರಿತ್ರದಲ್ಲಿ ಇದೆ. ಸಂತರು ಸಮಾಜಕ್ಕೆ ಬೋಧನೆ ಮಾಡಲು ತಮ್ಮದೇ ಆದ ವಿಶಿಷ್ಟ ರೀತಿಯನ್ನು ಆಯ್ದುಕೊಳ್ಳುತ್ತಾರೆ. ನಾವು ಪವಾಡವನ್ನು ನಂಬಿ ನೀತಿಯನ್ನು ಬಿಡುವುದು ಅವರ ಗುರಿಯಲ್ಲ. ಪವಾಡವನ್ನು ನಂಬದಿದ್ದರೂ ನೀತಿಯನ್ನು ಗ್ರಹಿಸಿದರೆ ಸಾಕು.

ಅನ್ಯಾಯದಿಂದ ಗಳಿಸಿದ ಹಣದ ಒಂದು ಅಂಶವನ್ನು ದೇವಾಲಯಗಳ ವೈಭವದ ಉತ್ಸವ ಪೂಜೆಗಳಿಗಾಗಿ ಕಾಣಿಕೆಯಾಗಿ ಕೊಟ್ಟರೆ ಹೇಗೆ? -ಇದೊಂದು

ಕ್ಲಿಷ್ಟವಾದ ಸಮಸ್ಯೆ. ಪುನಃ ಅನ್ಯಾಯದ ಗಳಿಕೆಗೆ ಹೋಗೆನೆಂದು ನಿಶ್ಚಯಿಸಿ ಪಶ್ಚಾತ್ತಾಪದಿಂದ ಶುದ್ಧವಾದ ಮನಸ್ಸಿನಿಂದ ಕೊಟ್ಟ ಪೂಜೆಯನ್ನು ಭಗವಂತನು ಸ್ವೀಕರಿಸುತ್ತಾನೆ. ಹಾಗೆ ಮಾಡದೆ ಕೇವಲ ಆಡಂಬರಕ್ಕೆ, ಹೊಗಳಿಕೆಗೆ ಮಾಡುವ ಸೇವೆಯು ಗಜಸ್ನಾನದಂತೆ ವ್ಯರ್ಥ. ಮಾಹುತನು ಆನೆಯನ್ನು ಕೆರೆಗೆ ಕೊಂಡೊಯ್ದು ಬಹಳ ಶ್ರಮದಿಂದ ಸ್ನಾನ ಮಾಡಿಸಿ ಮೇಲೆ ಬಿಟ್ಟನಂತೆ; ಕೂಡಲೇ ಆನೆ ತನ್ನ ಸ್ವಭಾವನಂತೆ ಸೊಂಡಿಲಿಂದ ಮಣ್ಣನ್ನು ಎತ್ತಿ ತಲೆಯ ಮೇಲೆ ಸುರಿದು ಕೊಂಡಿತಂತೆ. ಇದನ್ನೇ ಭಾಗವತವು 'ಕುಂಜರ ಶೌಚ' (೬/೧/೧೦) ವೆಂದು ಕರೆದಿದೆ! ಶುಚಿಯಾದ ವ್ಯವಹಾರ ಇಟ್ಟುಕೊಂಡು, ಬಂದ ಸ್ವಲ್ಪ ಆದಾಯದಲ್ಲಿಯೇ ಒಂದು ಸಣ್ಣ ಅಂಶವನ್ನು ಸಾತ್ವಿಕವಾದ ಹೂವು, ಎಲೆ, ಹಣ್ಣು, ಮತ್ತು ಕೊನೆಗೆ ನೀರು-ಹೀಗೆ ಪವಿತ್ರ ವಸ್ತುಗಳ ದ್ವಾರಾ ಭಗವಂತನಿಗೆ ಅರ್ಪಿಸಿದರೆ ಅವನ್ನೇ ಅವನು ಬಹು ಪ್ರೀತಿಯಿಂದ ಭಕ್ಷಿಸುತ್ತಾನಂತೆ.

ಗುರು ನಾನಕ್ ಬಹಳ ಚಮತ್ಕಾರವಾಗಿ ಹೇಳುತ್ತಾರೆ:

ಬಾಹರ ಧೋತೀ ತೂಮಡೀ ಅಂದರ ವಿಸು ನಿಕೋರ।
ಸಾಧ ಭಲೇ ಅಣನಾತಿಆ ಚೋರ ಸಿ ಚೋರಾ ಚೋರ ॥
–(ವಾಸ ರೂಹೀ ಪಉಡೀ. ೧೨, ಸಲೋಕ)

'ಕಹಿ ಸೋರೆ ಕಾಯಿಯನ್ನು ನೀವು ಹೊರಗೆ ಬೇಕಾದಷ್ಟು ತೊಳೆಯಿರಿ, ಒಳಗೆ ವಿಷವೇ ತುಂಬಿರುತ್ತದೆ. ಸಾಧುವು ಸ್ನಾನ ಮಾಡದಿದ್ದರೂ ಸಾಧುವೇ; ಚೋರನು ಸ್ನಾನ ಮಾಡಿಯೂ ಚೋರನೇ.

ಇಂತಹ ಮಾತುಗಳನ್ನು ನಾವು ಸಂತ-ಸಾಹಿತ್ಯದಲ್ಲಿ ಬಹಳ ನೋಡುತ್ತೇವೆ. ಇವುಗಳ ತಾತ್ಪರ್ಯವನ್ನು ಗ್ರಹಿಸಬೇಕು. ಬಾಹ್ಯ ಶೌಚ ಬೇಕು, ಅದು ಒಳ್ಳೆಯದು, ನಿಜ. ಆದರೆ ಅದೇ ಸರ್ವಸ್ವವಲ್ಲ. ಅದು ಪ್ರಾಥಮಿಕ ಹಂತ, ಮೊದಲ ನೆಯ ಹೆಜ್ಜೆ, ಅಷ್ಟೇ. ಆಂತರಿಕ ಶೌಚ, ವ್ಯಾವಹಾರಿಕ ಶೌಚ–ಇವು ಹಿರಿಯ ವಸ್ತುಗಳು. ಇವೇ ಪ್ರಧಾನ.

ಸ್ವಾಂಗ ಜುಗುಪ್ಸಾ–ಪರೈಃ ಅಸಂಸರ್ಗಃ

ಈಗ ಪತಂಜಲಿಗಳು ಸೂತ್ರದಲ್ಲಿ (೨/೪೦) ಹೇಳಿದ ವಿಷಯಗಳನ್ನು ಕುರಿತು ಚಿಂತಿಸೋಣ. ಬಾಹ್ಯ, ಆಂತರ, ಮತ್ತು ವ್ಯಾವಹಾರಿಕ-ಹೀಗೆ ಮೂರು ವಿಧವಾದ ಶೌಚಗಳನ್ನು ಕ್ರಮವಾಗಿ ಶ್ರದ್ಧೆಯಿಂದ ಆಚರಿಸುತ್ತ ಬಂದಂತೆ, ನಮಗೆ ಆಗುವ ಫಲ ಗಳನ್ನು ಸೂತ್ರದಲ್ಲಿ ಹೇಳಿದೆ. ಹೊರಗೆ ಶೌಚವನ್ನು ಅಭ್ಯಾಸ ಮಾಡುತ್ತ, ತನ್ನ ಅನುಭವವನ್ನು ತಾನೇ ವಿಚಾರ ಮಾಡುತ್ತ ಬಂದಾಗ, ಫಲಗಳು ಸಿಗುತ್ತವೆ. ನಾವು ಎಷ್ಟೆಷ್ಟು ಶರೀರವನ್ನು ಶುಚಿಯಾಗಿ ಇಡಲು ಪ್ರಯತ್ನಿಸಿದರೂ ಸಹ, ಅದು ಸ್ವಭಾವ ದಿಂದಲೇ- ತನ್ನ ರಚನೆ ಮತ್ತು ಕ್ರಿಯೆಗಳಿಂದಾಗಿಯೇ-ಅಶುಚಿಯೂ ಹೌದೆಂಬ ತಿಳುವಳಿಕೆ ನಮಗೆ ಮೊದಲು ಬರುವುದು. ನಮ್ಮ ದೇಹದ ಒಳಗೆ ಹೋಗುವುದು ಆಮ್ಲಜನಕ(O_2)ಅಧಿಕವಾಗಿರುವ ಶುದ್ಧಗಾಳಿಯಾದರೆ, ನಾವು ಹೊರಗೆ ಬಿಡುವುದು

ಇಂಗಾಲಾಮ್ಲ (CO_2) ಅಧಿಕವಾಗಿರುವ ಅಶುದ್ಧಗಾಳಿ. ನಾವು ಒಳಗೆ ಕಳಿಸುವುದು ಅನ್ನ-ಹಾಲು-ಪಾಯಸ-ಜಿಲೇಬಿ ಮುಂತಾದ ಸುಗಂಧಿ, ಸುರಸ ವಸ್ತುಗಳಾದರೆ, ಶರೀರವು ಹೊರಗೆ ಹಾಕುವುದು ದುರ್ಗಂಧದ ಮಲ-ಮೂತ್ರಗಳು. ಶುದ್ಧವಾದ ನೀರನ್ನು ತಂದು ಮೈ ತೊಳೆಯೋಣ; ನಂತರ ಆ ನೀರನ್ನು ಪರೀಕ್ಷಿಸೋಣ. ಎಷ್ಟು ಕೊಳೆಯಾಗಿದೆ! ಹೇಗೆ ಬಂದಿತು, ಎಲ್ಲಿಂದ ಬಂದಿತು ಈ ಕೊಳೆ? ನಮ್ಮಿಂದಲೇ, ನಮಗೆ ಪ್ರಿಯವಾದ ಈ ಶರೀರದಿಂದಲೇ. ಶುದ್ಧ ಬಿಳಿ ಬಟ್ಟೆಯನ್ನು ಈ ಬೆಳಿಗ್ಗೆ ಉಡೋಣ; ನಾಳೆ ಬೆಳಿಗ್ಗೆ ಅದನ್ನು ತೆಗೆದು ಪರೀಕ್ಷಿಸೋಣ. ಎಷ್ಟು ಕೊಳೆಯಾಗಿಬಿಟ್ಟಿದೆ! ಈ ಕೊಳೆಯೆಲ್ಲವೂ ನಮ್ಮ ಈ ಶರೀರದ ಪ್ರಸಾದವೇ, ಬೇರೆಯಲ್ಲ. ನಾವೇನೋ ಶುಚಿವ್ರತ ವನ್ನು ಹಿಡಿದಿದ್ದೇವೆ; ಆದರೆ ಈ ನಮ್ಮ ಶರೀರವಾದರೋ ಅಶುಚಿವ್ರತವನ್ನೇ ಪಟ್ಟಾಗಿ ಹಿಡಿದು ಕೂತಿದೆ. ಇದರಿಂದಾಗಿ ನಾವು ನಮ್ಮ ಶರೀರದ ಬಗ್ಗೆ ಜುಗುಪ್ಸೆ (ಇದು ಹೇಯವೆಂಬ ಭಾವನೆ) ತಾಳುತ್ತೇವೆ. 'ಶರೀರವು ನಾನಲ್ಲ'-ಎಂಬ ಜ್ಞಾನಕ್ಕೆ ಇದು ಸಾಧಕ. ಶರೀರವನ್ನು ಕೊಳಕಾಗಿ, ದುರ್ಬಲವಾಗಿ ಇಟ್ಟುಕೊಳ್ಳಬೇಕೆಂದು ಇದರ ಆಶಯವಲ್ಲ. ಶರೀರವು 'ಬ್ರಹ್ಮಮಂದಿರ', ಸಾಧನೆಗೆ ಒಂದು ಉಪಕರಣ. ಅದನ್ನು ಶುದ್ಧವಾಗಿ ಬಲಯುತವಾಗಿ ಇಟ್ಟುಕೊಳ್ಳುವುದೇನೋ ಸರಿ, ಆದರೆ ಆದರ ಬಗ್ಗೆ ಅತಿಯಾದ ಮೋಹ ಸಲ್ಲದು.

ತನ್ನ ಶರೀರದ ಬಗ್ಗೆಯೇ ಹೀಗೆ ಜುಗುಪ್ಸೆ ತಾಳಿದ ಯೋಗಿಯು ಇನ್ನು ಆ ಶರೀರದ ಮೂಲಕ ಇತರ ಶರೀರಗಳನ್ನು 'ಸಂಸರ್ಗ' ಮಾಡಲು ಬಯಸನು-ಎಂಬುದು ಮುಂದಿನ ಹಂತ. ಯೋಗಿಯು ಸಮಾಜದೂರನಾಗಿ, ಯಾರನ್ನೂ ಮುಟ್ಟದೆ, ಇನ್ನೊಬ್ಬರ ಮೈ ಮೇಲೆ ಬೀಸಿ ಬಂದ ಗಾಳಿಯೂ ಸಹ ತನ್ನ ಮೈಗೆ ಸೋಕದಂತೆ, ಬಹಳ 'ಮಡಿ'ಯಾ।। (?) ಇರಬೇಕೆಂದು ಇದರ ತಾತ್ಪರ್ಯವಲ್ಲ. ತನ್ನಷ್ಟು 'ಶುಚಿ'ಯಾಗಿ ಇಲ್ಲದವರನ್ನು ಕೀಳಾಗಿ ತಿರಸ್ಕಾರದಿಂದ ಕಾಣುತ್ತಾನೆಂದೂ ಅಲ್ಲ. ಶರೀರದಿಂದ ಸಮಾಜರೂಪಿ ಭಗವಂತನ ಸೇವೆ ಮಾಡುವುದು ಯೋಗದ ಒಂದು ಆವಶ್ಯಕವಾದ ಅಂಶ. ಇದಕ್ಕಾಗಿ ಇನ್ನೊಬ್ಬರೊಡನೆ ಸಂಪರ್ಕ ಅನಿವಾರ್ಯ, ಆವಶ್ಯಕವೂ ಹೌದು. ತಾಯಿ ತನ್ನ ಮಗುವಿನ ಮಲ-ಮೂತ್ರಗಳನ್ನು ಮುಟ್ಟುವುದಿಲ್ಲವೆಂದರೆ ಹೇಗೆ? ವೈದ್ಯನು ರೋಗಿಯನ್ನು ಮುಟ್ಟದೆ ಅವನಿಗೆ ಸೇವೆ ಹೇಗೆ ಮಾಡಿಯಾನು? ನಾವು ನಿತ್ಯವೂ ಹೊರಗೆ ಹಾಕುವ ಕಸಗಳನ್ನು ನಮ್ಮ ಪೌರಕಾರ್ಮಿಕರು ಒಟ್ಟು ಗೂಡಿಸಿ ಹೊರಗೆ ಸಾಗಿಸದೆ ಇದ್ದರೆ ನಮ್ಮ ಗತಿ ಏನು? ಸೇವೆಗಾಗಿ ಪರರ ಸಂಪರ್ಕ ಇರಲಿ. ಆದರೆ ಆರೋಗ್ಯಶಾಸ್ತ್ರವು ವಿಧಿಸುವ ರೀತಿಯಿಂದ ತನ್ನ ನೈರ್ಮಲ್ಯವನ್ನು ಕಾಪಾಡಿಕೊಳ್ಳಬೇಕು-ತನಗಿಂತ ಬೇರೆಯವರು ಕೀಳರೆಂಬ ಮನಸ್ಸಿನ ಕೊಳೆಯನ್ನು ತಾಳದೆ, ಅವರೆಲ್ಲರೂ ಭಗವಂತನ ಪ್ರತಿಮೆಗಳೆಂಬ ಉದಾತ್ತ ಭಾವನೆಯನ್ನು ತಾಳಿ, ಯಥಾಯೋಗ್ಯವಾಗಿ ಇತರರ ಸೇವೆ ಆಗಲಿ. ಆದರೆ ಮೋಹದಿಂದ ನಡೆಯುವ ಶರೀರ ಗಳ ಸಂಸರ್ಗವು ಮಾತ್ರ ಬೇಡ-ಎಂದು ಆಶಯ.

ಆತ್ಮದರ್ಶನ

ಮುಂದಿನ ಸೂತ್ರ (೨/೪೧)ದಲ್ಲಿ ಪತಂಜಲಿಗಳು ಶೌಚದಿಂದ ಉಂಟಾಗುವ ಮುಂದಿನ ಫಲಗಳನ್ನು ಸೂಚಿಸುತ್ತಾರೆ. ಇಲ್ಲಿ ಐದು ಫಲಗಳನ್ನು ಒಂದು ಕ್ರಮ ದಲ್ಲಿ ಹೇಳಲಾಗಿದೆ. ಒಂದರಿಂದ ಮತ್ತೊಂದು, ಉತ್ತರೋತ್ತರ ಕ್ರಮದಲ್ಲಿ, ಉಂಟಾಗುತ್ತದೆ–ಎಂದು ಕಾರ್ಯಕಾರಣ ಭಾವವನ್ನು ಈ ಕ್ರಮದಿಂದ ಸೂಚಿಸಲಾಗಿದೆ ಎಂದು ಭಾಷ್ಯಕಾರರು ತಿಳಿಸಿದ್ದಾರೆ. ಶೌಚದಿಂದ ಮೊದಲು ಸತ್ತ್ವಶುದ್ಧಿ, ಅಂದರೆ ಚಿತ್ತದ (ಅಂತಃಕರಣದ) ನೈರ್ಮಲ್ಯವು ಲಭಿಸುವುದು. ಇದರಿಂದ 'ಸೌಮನಸ್ಯ,' ಎಂದರೆ ಮನಸ್ಸಿನ ಒಳ್ಳೆಯ ಸ್ಥಿತಿ–ಉಂಟಾಗುವುದು. ಶುದ್ಧಿಯನ್ನು ನಿಷೇಧಾತ್ಮಕ, ನೇತ್ಯಾತ್ಮಕ (negetive)- ಎಂದರೆ ಕೊಳೆಯ ನಾಶ ಎಂದು ಭಾವಿಸುವುದಾದರೆ, 'ಸೌಮನಸ್ಯ'ವನ್ನು ವಿಧಾಯಕ, ಇತ್ಯಾತ್ಮಕ (positive) ಎಂದರೆ ಸದ್ಗುಣಗಳ ಸಂವರ್ಧನೆ–ಎಂದು ಭಾವಿಸಿ ಇವೆರಡನ್ನೂ ಒಂದೇ ಪ್ರಕ್ರಿಯೆಯ ಎರಡು ಮುಖ ಗಳೆಂದು ಭಾವಿಸಬಹುದು. ಮನಸ್ಸಿನ ಪ್ರಸಾದ ಎಂದರೆ ಮನಸ್ಸು ಶಾಂತವಾಗಿ, ಸೌಮ್ಯವಾಗಿ ನಿಂತು ವಿಷಯಗಳ ಕಡೆಗೆ ತಾನಾಗಿಯೇ ಹರಿದು ಓಡದೆ ಇರುವಂತಹ ಒಳ್ಳೆಯ ಸ್ಥಿತಿ (ಮನಸಃ ಸ್ವತೋತಪಿ ಪ್ರಾಯೋ ವಿಷಯಾಗತಿಲಕ್ಷಣಂ ಪ್ರಸಾದಂ-ಗೀತಾವಿವೃತಿಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳು, ೨/೬೪) ಮೌಢ್ಯಕ್ಕೆ ಕಾರಣ ವಾದ ತಮೋಗುಣವೂ, ಚಾಂಚಲ್ಯಕ್ಕೆ ಕಾರಣವಾದ ರಜೋಗುಣವೂ ಹಿಮ್ಮೆಟ್ಟಿ ಶಾಂತಿಗೆ ಕಾರಣವಾದ ಸತ್ವಗುಣವು ಮೇಲೆ ಬಂದಾಗ ಈ ಸ್ಥಿತಿ ಉಂಟಾಗುವುದು. ಭಾಗವತದಲ್ಲಿ (೪/೨೪/೨೦) ವ್ಯಾಸರು ಒಂದು ಸರೋವರನ್ನು ಹೀಗೆ ವರ್ಣಿಸುತ್ತಾರೆ:

'ಮಹನ್‌ಮನ ಇವ ಸ್ವಚ್ಛಂ ಪ್ರಸನ್ನಸಲಿಲಾಶಯಂ'

ಆ ಸರೋವರದ ನೀರು ಮಹಾತ್ಮರ ಮನಸ್ಸಿನಂತೆ ಸ್ವಚ್ಛವಾಗಿ ಪ್ರಸನ್ನವಾಗಿ ಇತ್ತಂತೆ! ವಾಲ್ಮೀಕಿಗಳು ತಮ್ಮ ಶಿಷ್ಯ ಭರದ್ವಾಜರಿಗೆ ತಮಸಾ ನದಿಯ ನೀರನ್ನು ತೋರಿಸುತ್ತ ಹೀಗೆ ಹೇಳುತ್ತಾರೆ (ರಾಮಾಯಣ ಬಾಲಕಾಂಡ/೨/೫) :

ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ ॥
ರಮಣೀಯ ಪ್ರಸನ್ನಾಂಬು ಸನ್ಮನುಷ್ಯಮನೋ ಯಥಾ ॥

"ಭರದ್ವಾಜ ! ಈ ತೀರ್ಥವನ್ನು ನೋಡು. ಇದರಲ್ಲಿ ಕೆಸರಿಲ್ಲ. ಇದು ಪ್ರಸನ್ನವಾಗಿ ರಮಣೀಯವಾಗಿರುವ ನೀರು, ಸಜ್ಜನರ ಮನಸ್ಸು ಹೇಗೋ ಹಾಗೆ ಇದು."

ನಮ್ಮ ಋಷಿಗಳು ತುಂಬಾ ಮೆಚ್ಚುತ್ತಿದ್ದ ವಸ್ತುಗಳೆಂದರೆ ಈ ಎರಡು : ಒಂದನೆಯದು ಹೊರಗಡೆ ಕೆಸರಿಲ್ಲದೆ ತಿಳಿಯಾಗಿ ಮನೋಹರವಾಗಿರುವ ಕೊಳಗಳ ನೀರು. ಎರಡನೆಯದು ಒಳಗಡೆ ಕೊಳೆಯಿಲ್ಲದೆ ಶಾಂತವಾಗಿ ಸೌಮ್ಯವಾಗಿ ಇರುವ ಚಿತ್ತ. **ತೀರ್ಥ** ಎಂಬ ಸಂಸ್ಕೃತ ಶಬ್ದವೊಂದೇ ಸಾಕು, ಪಾವಿತ್ರ್ಯ, ಪ್ರಸಾದ, ಮಾಧುರ್ಯ, ರಮಣೀಯತೆ ಮುಂತಾದ ಸದ್ಗುಣಗಳನ್ನು ಸೂಚಿಸುತ್ತದೆ. ಆದ್ದ ರಿಂದಲೇ ಮಹಾತ್ಮರಾದ ಯತಿಗಳನ್ನು **ತೀರ್ಥ** ಎಂಬ ಹೆಸರಿನಿಂದ ಕರೆಯುತ್ತೇವೆ.

ಇಂತಹ ಮನಸ್ಸು ಏಕಾಗ್ರವಾಗಬಲ್ಲದು, ಅಂದರೆ ಚಾಂಚಲ್ಯವಿಲ್ಲದೆ ಬಹುಕಾಲ ಸ್ಥಿರವಾಗಿ ಒಂದೇ ವಿಷಯದ ಮೇಲೆ ನೆಲೆ ನಿಲ್ಲಬಲ್ಲದು. ಶುದ್ಧವಾದ ಮನಸ್ಸು ಸ್ವಾಭಾವಿಕವಾಗಿಯೇ ಒಳ್ಳೆಯ ವಿಷಯದ ಮೇಲೆ ನೆಲೆ ನಿಲ್ಲುವುದು. ಅಶುದ್ಧವಾದ ಮನಸ್ಸು ಮೊದಲು ಶುದ್ಧಗೊಳ್ಳದೆ, ಹೇಗೋ ಕೃತ್ರಿಮವಾದ ಉಪಾಯಗಳಿಂದ ಏಕಾಗ್ರವಾಗುವುದು ತುಂಬಾ ಅಪಾಯಕರ. ಅದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು. ಮೊದಲು ಚಿತ್ತಶುದ್ಧಿ, ಆಮೇಲೆ ಏಕಾಗ್ರತೆ, ಇದೇ ಸರಿಯಾದ ಕ್ರಮ.

ಇದರಿಂದ ಮುಂದೆ ಇಂದ್ರಿಯ-ಜಯ-ಎಂದರೆ ಇಂದ್ರಿಯಗಳ ಮೇಲೆ ಹತೋಟಿ, ಕಠೋಪನಿಷತ್ತಿನಲ್ಲಿ ಒಂದು ಸುಂದರವಾದ ರೂಪಕವಿದೆ (I, ೩ನೇವಲ್ಲಿ) ಶರೀರವು ರಥ, ಇಂದ್ರಿಯಗಳು ಕುದುರೆಗಳು, ಮನಸ್ಸು ಹಗ್ಗ (ಕಡಿವಾಣ), ಬುದ್ಧಿಯು ಸಾರಥಿ, ಆತ್ಮನೇ ಪಯಣಿಗ. ಹೋಗಬೇಕಾದ ಸ್ಥಾನವು ವಿಷ್ಣುವಿನ ಪರಮಪದ. ಕುದುರೆಗಳಿಲ್ಲದೆ ಪಯಣ ಸಾಗದು. ಕುದುರೆಗಳು ದುರ್ಬಲವಾಗಿಯೂ ಅಂಗವಿಕಲಗಳಾಗಿಯೂ ಇರಬಾರದು. ಅವು ಬಲವಾಗಿಯೇ ಇರಲಿ. ಆದರೆ ಅವುಗಳನ್ನು ಸರಿಯಾದ ದಾರಿಯಲ್ಲಿ ನಡೆಸಲು ಬಲವಾದ ಹಗ್ಗ ಇರಬೇಕು. ಸಾರಥಿಯ ಇಚ್ಛೆಯಂತೆ ಹಾದಿಯೇ ಹೊರತು ಕುದುರೆಗಳ ಇಚ್ಛೆಯಂತೆ ದಾರಿಯಲ್ಲ. ಇಂದ್ರಿಯಗಳ ಸದುಪಯೋಗ ಆಗಬೇಕಾದರೆ ಅವುಗಳ ಮೇಲೆ ನಮ್ಮ ಹತೋಟಿ ಸರಿಯಾಗಿ ಇರಬೇಕು. ಇಲ್ಲವಾದರೆ ಅವು ನಮ್ಮನ್ನು ದಾರಿ ತಪ್ಪಿಸಿ ಹೊಂಡಕ್ಕೆ ಕೆಡವಿ ತಾವೂ ಹಾಳಾಗುತ್ತವೆ.

ಕೊನೆಯದಾಗಿ, ನಮ್ಮ ಬುದ್ಧಿಗೆ ಆತ್ಮವನ್ನು ಕಾಣುವ ಯೋಗ್ಯತೆ–ಇದು ಶೌಚದ ಅಂತಿಮ ಫಲ. ಆತ್ಮನು ಸ್ವಭಾವತಃ ಶುಚಿಯೇ. ಆವನು ಈಗ ಪ್ರಕೃತಿಯ ಸಂಬಂಧದಿಂದಾಗಿ ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ ಮತ್ತು ಅಭಿನಿವೇಶ– ಈ ಐದು ಕ್ಲೇಶಗಳಿಗೆ ಈಡಾಗಿ, ತನ್ನ ನೈಜವಾದ ಜ್ಞಾನ ಮತ್ತು ಆನಂದಸ್ವರೂಪವನ್ನು ಮರೆತುಕೊಂಡು ಅಜ್ಞಾನ ಮತ್ತು ದುಃಖಗಳನ್ನು ಹೊಂದಿದ್ದಾನೆ. ನಮ್ಮ ಸತ್ವವು ಅಂದರೆ ಬುದ್ಧಿಯು 'ಪ್ರಕೃತಿ ಬೇರೆ, ಪುರುಷ ಬೇರೆ' ಎಂಬ ಜ್ಞಾನವನ್ನು ಪಡೆದುಕೊಳ್ಳಬೇಕಾಗಿದೆ. ಇಂತಹ ಜ್ಞಾನಕ್ಕೆ ಸಮಾನವಾದ ಪವಿತ್ರ ವಸ್ತು ಇನ್ನೊಂದು ಇಲ್ಲ (ಗೀತಾ/೪,೩೬) ಇಂತಹ ಜ್ಞಾನವನ್ನು ಪಡೆದುಕೊಂಡು ಇದರಿಂದ ತಮ್ಮ ಎಲ್ಲಾ ಕೊಳೆಗಳನ್ನೂ ತೊಳೆದುಕೊಳ್ಳುವವರು ಮತ್ತೆ ಹುಟ್ಟು ಸಾವುಗಳಿಲ್ಲದ ಮುಕ್ತಿಯನ್ನು ಹೊಂದುತ್ತಾರೆ (ಗೀತಾ/೫/೩೬). ಪ್ರಕೃತಿ ಪುರುಷ ವಿವೇಕ ಜ್ಞಾನವನ್ನು ಪಡೆದುಕೊಂಡಾಗ, ಬುದ್ಧಿಸತ್ತ್ವವು ತನ್ನ ರಜಸ್ ಮತ್ತು ತಮಸ್–ರೂಪ ಕೊಳೆಯನ್ನು ನೀಗಿಕೊಂಡು, ಪುರುಷನು (ಆತ್ಮನು) ಹೇಗೆ ಸ್ವಭಾವತಃ ಶುದ್ಧನೋ ಹಾಗೆಯೇ ತಾನೂ ಶುದ್ಧವಾಗುತ್ತದೆ (ಯೋಗಸೂತ್ರ ೩, ೫೫). ಆಗ ಪುರುಷನು ಸ್ವರೂಪಮಾತ್ರದಿಂದ ಬೆಳಗುತ್ತ, ಮಲರಹಿತನೂ ಕೇವಲನೂ ಆಗಿ ಉಳಿಯುತ್ತಾನೆ. ಇದು ಕೊನೆಯ ಪುರುಷಾರ್ಥ. ಇದೇ ಯೋಗದ ಅಂತಿಮ ಗುರಿ

ಹೀಗೆ ಬಾಹ್ಯಶೌಚದ ಪ್ರಾಥಮಿಕ ಹಂತದಿಂದ ಆರಂಭಿಸಿ, ಆಹಾರಶುದ್ಧಿ, ಚಿತ್ತ ಶುದ್ಧಿ, ವ್ಯವಹಾರ ಶುದ್ಧಿಗಳನ್ನು ಕ್ರಮಕ್ರಮವಾಗಿ ಅಭ್ಯಾಸ ಮಾಡುತ್ತ ಕೊನೆಯದಾಗಿ ಆತ್ಮಶುದ್ಧಿಯನ್ನು ಸಾಧಿಸುವುದು ಯೋಗದ ದಾರಿ, ಈಶ್ವರನ ಕೃಪೆಯಿಂದಲೂ, ಮಹಾತ್ಮರಾದ ಯೋಗಿಗಳ ಅನುಗ್ರಹದಿಂದಲೂ ಇದನ್ನು ಸಾಧಿಸುವ ಪುಣ್ಯಾತ್ಮನೇ ಧನ್ಯನು, ಮಾನ್ಯನು.

ಪರಮಾತ್ಮ

ಜಿ. ಆರ್. ಶ್ರೀನಿವಾಸರಾವ್

ನಾನು ಈ ಪ್ರಪಂಚವನ್ನು 'ಸೃಷ್ಟಿ' ಮಾಡಿದ ದೇವರೊಬ್ಬನಿದ್ದಾನೆಂದು ನಂಬುತ್ತೇನೆ. ಅವನು ಸಾಕಾರನೂ ಹೌದು, ನಿರಾಕರನೂ ಹೌದು. ತತ್ವವೂ ಹೌದು, ತತ್ವನಿಷ್ಠನೂ ಹೌದು. ಅಷ್ಟೇ ಅಲ್ಲ. ಇವೆರಡೂ ಅಲ್ಲದ, ನನ್ನ ಊಹೆಗೂ ನಿಲುಕದ ಬೇರಾವುದಾದರೂ ಅವಸ್ಥೆಯಿದ್ದಲ್ಲಿ ಹಾಗೂ ಇರಬಲ್ಲ. ಏಕೆಂದರೆ ಅವನ ಶಕ್ತಿ ಅಚಿಂತ್ಯ. ಆದ್ದರಿಂದಲೇ ಅವನು ಈ ಪ್ರಪಂಚವನ್ನು ಸೃಷ್ಟಿಸಿದ್ದಲ್ಲದೇ ಅದನ್ನು ಒಳಗೂ ಹೊರಗೂ ವ್ಯಾಪಿಸಿ ಇವಕ್ಕೂ ಮಿಗಿಲಾಗಿಸಿದ್ದಾನೆ. ಅವನು ಅತ್ಯತಿಷ್ಠದ್ದಶಾಂಗುಲವ್. ಸರ್ವಾಂತರ್ಯಾಮಿ, ಸರ್ವಜ್ಞ, ಸರ್ವಶಕ್ತ. ಈ ಪ್ರಪಂಚದ ಆದಿಯೇ ನಮ್ಮ ಊಹೆಗೆ ನಿಲುಕದ್ದಾಗಿದೆ. ಆದುದರಿಂದ ಈ ಪ್ರಪಂಚವನ್ನು ಅನಾದಿ ಎನ್ನುತ್ತೇವೆ. ಅಂದಮೇಲೆ ದೇವರು ಅನಾದಿ ಎಂದು ಹೇಳಬೇಕಾದ್ದೇನಿದೆ ? ಅಂತೆಯೇ ಅವನು ಕಾಲಾತೀತನು. ಪ್ರಪಂಚದ ಸೃಷ್ಟಿಯ ಜತೆಯಲ್ಲಿಯೇ ಪ್ರಪಂಚದ ಸ್ಥಿತಿಗಾಗಿ ನಿಯಮಗಳನ್ನೂ ಮಾಡಿದ್ದಾನೆ. ಈ ನಿಯಮವನ್ನು ಯಾರೂ ಮೀರಲಾರರು. ತಾನೂ, ಈ ನಿಯಮಗಳನ್ನು ಮೀರಿಹೋಗಲು ಶಕ್ತನಾದರೂ, ಸಾಧಾರಣವಾಗಿ ನಿಯಮಗಳನ್ನು ಮೀರಿ ನಡೆಯುವುದಿಲ್ಲ. ಆದರೂ ಸಂದರ್ಭಾನುಸಾರ, ಭಕ್ತರ ಕೋರಿಕೆಯಂತೆಯೋ ಅಥವಾ ಲೋಕಕಲ್ಯಾಣಕ್ಕಾಗಿಯೋ ಸಂಕಲ್ಪ ಮಾಡಿದಲ್ಲಿ ಈ ನಿಯಮಗಳನ್ನು ಅಲ್ಲಗಳೆಯಲು ಶಕ್ತನು. ಈ ಪ್ರಪಂಚವು, ಇದರಲ್ಲಿರುವ ಅನೇಕ ಜೀವರಾಶಿಗಳೂ ಅವನ ನಿಯಮಗಳಿಗನುಸಾರವಾಗಿಯೇ ಹುಟ್ಟು, ಬೆಳೆಯುವಿಕೆ, ಅವಸಾನಗಳನ್ನು ಹೊಂದುತ್ತಿವೆ.

ಪ್ರಪಂಚದಲ್ಲಿ ಶಕ್ತಿ, ಐಶ್ವರ್ಯ, ದಯೆ ಮುಂತಾದ ಗುಣಗಳೆಲ್ಲವೂ ಅವನಲ್ಲಿ ಪೂರ್ಣರೂಪದಲ್ಲಿದೆ. ಈ ಪ್ರಪಂಚದ ಸೃಷ್ಟಿ ಸ್ಥಿತಿಗಳೆಲ್ಲವೂ ಅವನ ಅಧೀನವಾಗಿರುವುದರಿಂದಲೂ, ಅವನ ಸಕಲ ಚೇಷ್ಟೆಗಳೂ ಲೋಕ ಕಲ್ಯಾಣಕ್ಕೆ ಆಗಿರುವುದರಿಂದಲೂ, ನಾವು ಯಾವುದನ್ನು ದುಷ್ಟಗುಣಗಳೆನ್ನುತ್ತೇವೆಯೋ ಅವು, ಅವನಲ್ಲಿ ಇಲ್ಲವೇ ಇಲ್ಲ. ಅವನು ಸರ್ವದೋಷರಹಿತನು. ಸಕಲ ಕಲ್ಯಾಣಗುಣ ಪರಿಪೂರ್ಣನು. ಪ್ರಪಂಚದ ಎಲ್ಲ ಪ್ರಾಣಿಗಳೂ ಅಲ್ಪಬುದ್ಧಿಯವರಾದ್ದರಿಂದ ಅವನ ಈ ಪೂರ್ಣತೆಯನ್ನು ಅರಿಯಲು ಯಾರಿಗೂ ಸಾಧ್ಯವಿಲ್ಲ. ಆದರೂ ಎಲ್ಲರಿಗೂ ಅವರವರ ಬುದ್ಧಿಶಕ್ತಿಗನುಗುಣವಾಗಿ ಅವನ ಅರಿವುಂಟಾಗುತ್ತದೆ. ಯಾವ ರೀತಿಯಲ್ಲಿ ಮನುಷ್ಯನು ಕಣ್ಣಿನ ಪೂರ್ಣ ಪರಿಚಯವಿಲ್ಲದಿದ್ದರೂ ಪ್ರಪಂಚವನ್ನು ನೋಡಿ ಅದರ ಅರಿವನ್ನು ಹೊಂದುತ್ತಾನೋ, ಹೇಗೆ ಪ್ರಾಣವೆಂದರೇನು, ಅದು ಹೇಗಿರುತ್ತವೆ ಎಂಬ ವಿವರಗಳು

ತಿಳಿಯದಿದ್ದರೂ ನಿತ್ಯಜೀವನವನ್ನು ಸಾಗಿಸುತ್ತಿರುತ್ತಾನೋ ಹಾಗೆಯೇ ದೇವರ, ಪರಮಾತ್ಮನೆಂಬ ಮೂಲತತ್ವದ ವಿಷಯದಲ್ಲಿ ನಮಗೆ ಎಷ್ಟೋ ವಿವರಗಳು ತಿಳಿಯದಿದ್ದರೂ, ತಿಳಿಯಲು ನಾವು ಶಕ್ತರಲ್ಲದಿದ್ದರೂ ಎಲ್ಲರಿಗೂ ಅವನ ಅರಿವು ಇದೆ, ಮತ್ತು ಆತನ ಕಾರ್ಯಗಳಲ್ಲಿ (ವಿದ್ಯುಚ್ಛಕ್ತಿ, ಗಾಳಿ ಮುಂತಾದುವನ್ನು ಪ್ರತ್ಯಕ್ಷ ಗೋಚರವಾಗದಿದ್ದರೂ ಅವುಗಳ ಕಾರ್ಯಗಳಿಂದ ಅವುಗಳ ಇರವನ್ನು ಖಚಿತವಾಗಿ ತಿಳಿಯುತ್ತೇವೆಯೋ ಹಾಗೆ) ಪರಮಾತ್ಮನನ್ನು ಕಾಣುತ್ತೇವೆ. ಇದು ನನ್ನ ಪ್ರಮುಖ ನಂಬಿಕೆ. ಈ ತಳಹದಿಯ ಮೇಲಿಂದಲೇ, ಈ ಪ್ರಪಂಚವನ್ನೂ ಅದರಲ್ಲಡಗಿರುವ ಸಕಲ ವಸ್ತು ಜಾಲವನ್ನೂ ನೋಡುತ್ತೇನೆ.

ಪ್ರಪಂಚ (೧)

ಪರಮಾತ್ಮನ ಸಂಕಲ್ಪವೇ ಋತ, ನಿಯಮ. ಈ ಋತ ಕ್ರಿಯಾರೂಪವಾಗಿ ಕಾರ್ಯವಾದಾಗ ಸತ್ಯವಾಗುತ್ತದೆ. ಈ ಸತ್ಯವೇ ಪ್ರಪಂಚ. ಅವ್ಯಕ್ತವಾದ ಪರಮಾತ್ಮನು ಋತವೇ ವ್ಯಕ್ತವಾಗಿ ಸತ್ಯವಾದಾಗ ಪ್ರಪಂಚವೆನ್ನಿಸಿಕೊಳ್ಳುತ್ತದೆ. ಪರಮಾತ್ಮನು ಹೇಗೆ ನಿತ್ಯನೂ, ಅಪ್ರೇಯನೂ ಮತ್ತು ಅದ್ಭುತನೂ ಆಗಿರುವನೋ ಹಾಗೆಯೇ ಅವನ ಕಾರ್ಯವಾದ ಈ ಜಗತ್ತು ನಿತ್ಯನೂತನ, ಅಪರಿಮಿತ ಮತ್ತು ಅದ್ಭುತವೂ ಹೌದು. ಎರಡು ಕಾರ್ಯಗಳ ಅಂತರವೇ ಕಾಲ. ಆದ್ದರಿಂದ ಪ್ರಪಂಚವೂ ಅದಕ್ಕೆ ಕಾರಣನಾದ ಪರಮಾತ್ಮನೂ ಕಾಲಾತೀತರು. ಕಾಲಕ್ಕೆ ಮೊದಲೇ ಇದ್ದುದರಿಂದ ಅನಾದಿಗಳು. ಪ್ರಪಂಚವು ಪ್ರವಾಹದಂತೆ ನಿತ್ಯನೂತನ. ಅನಾದಿ ಹೇಗೋ ಹಾಗೆಯೇ ಅನಂತವೂ ಆಗಿದೆ. ದೇಶತಃ ಅನಂತ ಕಾಲತಃ ಅನಂತ. ಇಂದ್ರಿಯ ಗೋಚರವಾಗುವ ಪ್ರಪಂಚವೇ ಅನಂತವಾಗಿರುವಾಗ, ಅಗೋಚರಗಳಾದ ಪ್ರಪಂಚಗಳೆಷ್ಟಿವೆಯೋ ಬಲ್ಲವರಾರು ? ಇವೆಲ್ಲವೂ ಪರಮಾತ್ಮನ ಸಂಕಲ್ಪವೇ ಆಗಿರುವುದರಿಂದ, ಅವನ ಋತಕ್ಕೆ, ನಿಯಮನಕ್ಕೆ ಒಳಪಟ್ಟಿವೆ.

ಉದಾಹರಣೆಗೆ ಒಂದು ವೃತ್ತವನ್ನು ತೆಗೆದುಕೊಳ್ಳೋಣ. ಈ ವೃತ್ತವು ಒಂದು ಬಿಂದುವು ಕೆಲವು ನಿಯಮಗಳಿಗನುಗುಣವಾಗಿ ಚಲಿಸಿ 'ಸೃಷ್ಟಿ'ಸಿದ ರೇಖೆ. ಬಿಂದುವು ಮೊಟ್ಟಮೊದಲು ಯಾವುದೋ ಒಂದು ಜಾಗದಿಂದ ಚಲಿಸಿರಬೇಕೆಂದು ನಿರ್ವಿವಾದ ; ಆದರೆ ಈಗ ಆ ಬಿಂದುವಿನ ಮೊಟ್ಟಮೊದಲ ಸ್ಥಾನ ಕಂಡುಹಿಡಿಯಲು ಸಾಧ್ಯವೇ ? ಅಥವಾ ಸಮುದ್ರದ ಅಲೆ ಮೊದಲೆಲ್ಲಾದರೂ ಪ್ರಾರಂಭವಾಗಿರಬೇಕೆಂಬುದೂ ಸತ್ಯ. ಆದರೆ ವರ್ತಮಾನದಲ್ಲಿ ಅಲೆ ಎಲ್ಲಿ ಯಾವಾಗ ಹುಟ್ಟಿತೆಂಬುದು ತಿಳಿಯಲು ಸಾಧ್ಯವಾಗಲಾರದು. ಪ್ರಪಂಚವೂ ಕೂಡ ಪರಮಾತ್ಮನ ನಿಯಮದಂತೆ ಸಂಕೋಚ, ವಿಕಾಸಗಳ ಪರಂಪರೆ, ಕಾಲಗರ್ಭದಲ್ಲಿ ಅವ್ಯಾಹತವಾಗಿ ನಡೆಯುತ್ತ ಬಂದಿದೆ. ಆದ್ದರಿಂದಲೇ ಪ್ರಪಂಚವು ಅನಾದಿ, ಅನಂತ.

ಪ್ರಪಂಚವು ವ್ಯಕ್ತವಾದಾಗಲೆಲ್ಲ ಜಡ, ಚೇತನಗಳೆರಡೂ ಮಿಳಿತವಾಗೇ ಇರುತ್ತವೆ. ನಾವು ಪ್ರಪಂಚವೆಂದು ಹೇಳಿದಾಗಲೆಲ್ಲ ಜಡಪ್ರಪಂಚವನ್ನೇ ದೃಷ್ಟಿಯಲ್ಲಿಟ್ಟು ನಿರ್ದೇಶಿಸುತ್ತೇವೆ. ಇದನ್ನೇ ಭೌತಿಕ ಪ್ರಪಂಚವೆಂದೂ ಕರೆಯುತ್ತೇವೆ. ಇದಲ್ಲದೇ

ಚೇತನವೇ ಬೇರೆ ಎಂದು ಭಾವಿಸುತ್ತೇವೆ. ಆದರೆ ಪ್ರಪಂಚದ ಯಾವುದೇ ಘಟನೆಗಳು ಪ್ರತ್ಯೇಕವಾಗಿಲ್ಲ. ಮನುಷ್ಯನು ತನ್ನ ಸೀಮಿತ ಬುದ್ಧಿಗೆ ನಿಲುಕುವಂತೆ ಪ್ರಪಂಚವನ್ನು ಭಾಗಭಾಗಗಳಾಗಿ ವಿಂಗಡಿಸಿ, ಅರಿಯಲು ಪ್ರಯತ್ನಿಸುತ್ತಾನೆ. ಆದ್ದರಿಂದ ಚೇತನವು ಜಡದಿಂದ ಬೇರೆಯಾಗಿದೆ ಎಂದು ತಿಳಿಯಬಾರದು. ಪ್ರಪಂಚವೂ, ಜಡವೂ ಬೇರೆ ಬೇರೆ ಪ್ರಮಾಣಗಳಲ್ಲಿ, ಆದರೆ ನಿರಂತರವೂ ಒಟ್ಟಿಗೆಯೇ ಇರುತ್ತವೆ. ವಿದ್ವಾಂಸರೊಬ್ಬರು ಇದನ್ನು (ಪ್ರಪಂಚವನ್ನು) ಹೀಗೆ ಹೇಳಿದ್ದಾರೆ. ಪ್ರಪಂಚವೆಲ್ಲವೂ ದೇವದೇವನ ಸಂತತಿಯೇ. ಅವರಲ್ಲಿ ಕೆಲವರು ದೇವದೇವನ ದಡ್ಡ ಮಕ್ಕಳು, ಕೆಲವರು ಬುದ್ಧಿವಂತ ಮಕ್ಕಳು ಮತ್ತು ಕೆಲವರು ಅತಿಬುದ್ಧಿವಂತರು.

ಇಲ್ಲಿ ಒಂದು ಎಚ್ಚರಿಕೆಯನ್ನು ಕೊಡಬೇಕಾಗಿದೆ. ನಾವು ಪ್ರಯೋಗಿಸುವ ಶಬ್ದಗಳೆಲ್ಲಾ ಬರಿಯ ಪ್ರತೀಕಗಳು. ಸಂಜ್ಞೆಗಳು ಮಾತ್ರ. ಅವು ನಿಖರವಾಗಿ ವಸ್ತುಜ್ಞಾನ ಹುಟ್ಟಿಸವು. ಒಂದು ಶಬ್ದ ಅಥವಾ ಮಾತು ಯಾವುದೇ ವಸ್ತುವನ್ನು ನಮ್ಮ ಅನುಭವಕ್ಕೆ ಬಂದಿರುವ ಒಂದು ಘಂಟೆಗೆ ಸಂಬಂಧಿಸಿದಂತೆ, ನಮ್ಮ ಅಂತಃಕರಣಕ್ಕೆ ಇದು 'ನಿಜತತ್ವ' ಎಂಬ ಸಿದ್ಧಾಂತ (ನಂಬಿಕೆ) ಹುಟ್ಟಿಸುವ ಸಂಜ್ಞೆ ಮಾತ್ರ. ಮತ್ತು ಉಪಮಾನಗಳು ಒಂದು ವಸ್ತುವಿನ ಪೂರ್ಣ ಪರಿಚಯ ಮಾಡಿಕೊಡಲಾರದು ಅವು ಯಾವಾಗಲೂ ಏಕದೇಶೀಯವಾದವು. ಪದಾರ್ಥದ ಒಂದು ವಿಶೇಷವನ್ನು ಇನ್ನೊಂದು ಅಂಥದೇ ವಿಶೇಷದೊಡನೆ ಹೋಲಿಸಿ ಸಮಾನತೆಯನ್ನು ತೋರಿಸಿಕೊಡುತ್ತದೆ ಅಷ್ಟೆ. ಅವನು ಬೆಂಕಿಯಂಥವನು ಎಂದರೆ ಅವನು ಬೆಂಕಿಯ ಹಾಗೆ ತೇಜಸ್ಸಿರುವವನು ಎಂದಷ್ಟೇ ಅರ್ಥ ಹೊರತು ಬೆಂಕಿಯಂತೆ ಶಾಖ ಕೊಡುವನೆಂದಾಗಲಿ ಸುಡುವನೆಂದಾಗಲಿ ಅಲ್ಲ. ದಡ್ಡ ಮಕ್ಕಳು ಇತ್ಯಾದಿ ಹೇಳುವುದರ ಸಾರಾಂಶ ನಾವು ಪ್ರಪಂಚದ ಪದಾರ್ಥಗಳನ್ನು ಕಾಣುವ ರೀತಿ.

ಮೇಲೆ ಹೇಳಿದಂತೆ ಪ್ರಪಂಚವು ಈ ಜಡ ಚೇತನಗಳ ಸಂಕೋಚ ವಿಕಾಸಗಳು. ಒಮ್ಮೆ ಜಡ ಅಧಿಕವಾಗಿದ್ದು ಕ್ರಮೇಣ ಜಡ ತಗ್ಗುತ್ತಾ ಚೇತನ ಬೆಳೆಯುತ್ತಾ (ಹೆಚ್ಚುತ್ತಾ), ಒಂದು ಪರಮಾವಧಿಯನ್ನು ಮುಟ್ಟಿ ಮತ್ತೆ ಚೇತನವು ತಗ್ಗಿದಂತೆಲ್ಲ ಜಡವು ಹೆಚ್ಚುತ್ತಾ ಪ್ರವಾತಹಃ ನಿರಂತರವಾಗಿ ಸಾಗುತ್ತಿರುತ್ತದೆ. ಪ್ರಪಂಚಕ್ಕೆ ಹೇಗೋ ಹಾಗೆ, ಪ್ರಪಂಚದ ಪ್ರತಿಜೀವಿಗೂ, ಪ್ರತಿಪದಾರ್ಥಕ್ಕೂ ಈ ನಿಯಮ ಅನ್ವಯಿಸುತ್ತದೆ. ತಿಳಿನೀರಿನ ಸರೋವರದ ಮಧ್ಯದಲ್ಲಿ ಒಂದು ಸಣ್ಣ ಕಲ್ಲು ಒಗೆದಲ್ಲಿ ಯಾವ ರೀತಿಯಲ್ಲಿ ಅಲೆಗಳು ಒಂದಾದ ಮೇಲೊಂದರಂತೆ ಏಳುತ್ತಾ ಕುಗ್ಗುತ್ತಾ ದಡಕ್ಕೆ ಮುಟ್ಟಿ, ಮತ್ತೆ ಅಲ್ಲಿಂದ ಪ್ರತಿಫಲಿಸಿ ಇತರ ಅಲೆಗಳೊಡನೆ ಸಂಘರ್ಷಿಸಿ ಬೇರೆ ಬೇರೆ ಅಲೆಗಳನ್ನು ನಿರ್ಮಿಸುತ್ತಾ ತತ್ವಶಃ ಅನಂತಕಾಲದವರೆಗೂ ಚಲಿಸುತ್ತಿರುತ್ತದೋ ಹಾಗೆಯೇ ಈ ಪ್ರಪಂಚವೂ ಪ್ರಪಂಚದಲ್ಲಿರುವ ವಸ್ತುಗಳೂ ಪರಮಾತ್ಮನ 'ಋತೀನ' ನಿಯಮದಂತೆ ಅವ್ಯಕ್ತದಲ್ಲಿ ಬೆರೆತು ಮತ್ತು ಅವ್ಯಕ್ತದಿಂದ ವ್ಯಕ್ತವಾಗುತ್ತಾ 'ಚಕ್ರನೇಮಿಕ್ರಮೇಣ' ನಡೆಯುತ್ತದೆ.

ಈ ನನ್ನ ನಂಬಿಕೆಗಳಿಗೆ ಆಧಾರ ೧) ಆಧುನಿಕ ವಿಜ್ಞಾನದ ಪ್ರಕಾರ ಪ್ರಪಂಚವೆಲ್ಲಾ ತರಂಗಮಯವಾಗಿ ನಾಲ್ಕು ಮೂಲಶಕ್ತಿಗಳ ಪರಿಣಾಮ, ಸ್ವರೂಪ ಇವುಗಳಲ್ಲೂ

ಮೂರು ಅಂದರೆ ತೀಕ್ಷ್ಣ (strong), ದುರ್ಬಲ (weak) ಮತ್ತು ವಿದ್ಯುತ್ಕಾಂತ ಶಕ್ತಿಗಳು ಒಂದರಿಂದ ಮತ್ತೊಂದಕ್ಕೆ ಪರಿವರ್ತನ ಸಾಧ್ಯ. ನಾಲ್ಕನೆಯದಾದ ಗುರುತ್ವಾಕರ್ಷಣೆ ಮಾತ್ರ ಇನ್ನೂ ಬೇರೆಯಾಗೇ ಉಳಿದಿದೆ. ಆದರೂ ವಿಜ್ಞಾನಿಗಳು ಪ್ರಪಂಚ ಒಂದೇ ಶಕ್ತಿ ಮೂಲಾಧಾರವೆಂದು ಅಭಿಪ್ರಾಯಪಟ್ಟು ಈ ನಾಲ್ಕು ಶಕ್ತಿಗಳಿಗೂ ಮೂಲವಾದ ಒಂದೇ ಶಕ್ತಿಯ ಶೋಧದಲ್ಲಿ ತೊಡಗಿದ್ದಾರೆ. ೨) ಈಚೆಗಿನ ಪಳೆಯುಳಿಕೆಗಳ ಸಂಶೋಧನೆಯಿಂದ ವಿಜ್ಞಾನಿಗಳೂ ಕೂಡ, ಜಡ ಮತ್ತು ಚೇತನ ಎರಡೂ ಒಟ್ಟಿಗೆಯೇ ಪ್ರಪಂಚದಲ್ಲಿ ಮೊಟ್ಟಮೊದಲು ಕಾಣಿಸಿಕೊಂಡಿರಬಹುದೆಂದು ನಿಶ್ಚಯಿಸಿದ್ದಾರೆ. ಐಸ್‌ಲ್ಯಾಂಡಿನ ಪಳೆಯುಳಿಕೆಗಳ ಅಧ್ಯಯನ ನಡೆಸಿ, ಅಲ್ಲಿನ ಶಿಲಾಪದರಗಳು ಸುಮಾರು ೩-೪ ನೂರುಕೋಟಿ ವರ್ಷಗಳ ಹಿಂದಿನವೆಂದೂ ಅವುಗಳಲ್ಲೂ ಜೀವಾಣುಗಳ ಅವಶೇಷಗಳು ಕಂಡುಬಂದಿವೆಯೆಂದೂ ಹೇಳುತ್ತಾರೆ. ೩) ಪ್ರಪಂಚದ ಎಲ್ಲ ಘಟನೆಗಳೂ ಹಂತ ಹಂತವಾಗಿ ಕ್ರಮಬದ್ಧವಾಗಿ ಯಾವುದೋ ಒಂದು ನಿಯಮದ ಪ್ರಕಾರ ಉಂಟಾಗಿದೆಯಲ್ಲದೆ, ಹಟಾತ್ತನೆ ಮಂತ್ರದಿಂದ ಮಾವಿನಗಿಡ ಹುಟ್ಟಿದಂತೆ ಹುಟ್ಟಿಲ್ಲ. ಈ ದೃಢ ನಂಬಿಕೆಯ ಮೇಲೆಯೇ ಇಡೀ ವಿಜ್ಞಾನ ನಿಂತಿದೆ. ಅಲ್ಲದೆ ಮನುಷ್ಯನು ಪ್ರಪಂಚದಲ್ಲಿದ್ದ ಮೂಲವಸ್ತುಗಳನ್ನೇ ತನಗನುಕೂಲವಾಗುವಂತೆ, ಪ್ರಪಂಚದ ನಿಯಮಗಳಿಗನುಗುಣವಾಗಿ ಪರಿವರ್ತಿಸಿದ್ದಾನೆಯೇ ಹೊರತು ಹೊಸದನ್ನೇನೂ ಸೃಷ್ಟಿಸಿಲ್ಲ. (Man is onlv a converter, he is not a creator)

ಪ್ರಪಂಚ (೨)

ನಮ್ಮ ಅನುಭವಕ್ಕೆ ಬರುವ ಈ ಪ್ರಪಂಚವು ಪರಮಾತ್ಮ (ತತ್ವ) ದಿಂದಲೇ ಪ್ರಕಟವಾಯಿತೆಂದು ಹಿಂದೆ ಹೇಳಿತಷ್ಟೆ. ಈ ಪ್ರಪಂಚ ಹೇಗೆ ಪ್ರಕಟವಾಯಿತೆಂಬ ಕುತೂಹಲ ಮನುಷ್ಯನಿಗೆ ಮೊದಲಿನಿಂದಲೂ ಅಂದರೆ 'ಅನಾದಿ' ಕಾಲದಿಂದಲೂ ಇತ್ತು. ಇದೇ ಕುತೂಹಲವನ್ನು, ತನ್ನ ಅನುಭವಗಳ ಬುನಾದಿಯ ಮೇಲೆ, ತನ್ನ ಬುದ್ಧಿಶಕ್ತಿಯ ಬಲದ ಮೇಲೆ ತನಗೆ ಅರಿವಾದಂತೆ ನಿರೂಪಿಸಿದ್ದಾನೆ. ಇವೇ ಈಗ ಪ್ರಚಲಿತವಿರುವ ಪರಿಣಾಮವಾದ, ವಿಕಾಸವಾದ, ಭೌತಿಕವಾದ, ದ್ವೈತ, ಅದ್ವೈತ ಇತ್ಯಾದಿ ಅನೇಕ 'ವಾದ'ಗಳಿಗೆ ಕಾರಣವಾಗಿದೆ. ಇವೆಲ್ಲವೂ ಅನುಭವಗಳ ಆಧಾರವಿರುವವರೆಗೂ ಸತ್ಯವಾದುವುಗಳೇ. ಮನುಷ್ಯನ ಜೀವಿತವು ಕ್ಲುಪ್ತವಾದದ್ದರಿಂದ ಮತ್ತು ಅವನ ಅನುಭವಗಳೂ ದೇಶ, ಕಾಲ, ಗುಣ ಮೊದಲಾದ ಅನೇಕ ವಸ್ತುಗಳಿಂದ ಸೀಮಿತವಾಗಿರುವುದರಿಂದ ಅವನ ಅರಿವೂ ಸೀಮಿತವಾದದ್ದೇ. ಆದ್ದರಿಂದ ಈ ಎಲ್ಲಾ 'ವಾದಿಗಳೂ' ಅನಂತವಾದ ಪ್ರಪಂಚವನ್ನೂ, ಅದರ ಮೂಲ ಕಾರಣವಾದ ಪರಮಾತ್ಮನನ್ನೂ, ತಮ್ಮ ತಮ್ಮ 'ವಾದದ' ಚೌಕಟ್ಟಿನಲ್ಲಿ ತುರುಕಲು ಹೋದಾಗ ಮಾತ್ರ ಅಸತ್ಯವಾದಿಗಳಾಗುತ್ತಾರೆ. ಒಂದು ಛಾಯಾಗ್ರಾಹಕವು (Camera) ತನ್ನ ಕೇಂದ್ರದ ಪರಿಧಿಯಲ್ಲಿರುವುದನ್ನು ಮಾತ್ರ ಸ್ಪಷ್ಟವಾಗಿ ಚಿತ್ರಿಸಬಹುದು. ಅದರ ಆಚೆ ಇರುವುದು ಅಸ್ಪಷ್ಟವಾಗಿಯೂ ವಿಕೃತವಾಗಿಯೂ ಕಾಣುವುದು ಅಥವಾ ಚೌಕಟ್ಟಿನಲ್ಲಿ ಕಾಣದೆಯೇ ಹೋಗುವುದು. ಆದ್ದರಿಂದ ಯಾವ ವಾದವೂ ಪರಿಪೂರ್ಣವಲ್ಲ. ಮನು-

ಷ್ಯನ ಅನುಭವವು ಹೆಚ್ಚಿದಂತೆಲ್ಲ, ಛಾಯಗಾ ಹಕದ ಪರಿಧಿ ವಿಸ್ತಾರವಾದಂತೆಲ್ಲಾ ಮಾನವನ ಅರಿವಿನ ಎಲ್ಲೆಯೂ ವಿಸ್ತಾರವಾಗಿ ಹೆಚ್ಚು ಹೆಚ್ಚು ಪ್ರಪಂಚದ ವಿಷಯ ಗಳು ಅವನ ತಿಳಿವಿನ ಚೌಕಟ್ಟಿನಲ್ಲಿ ಯಥಾರ್ಥವಾಗಿ ಸೇರಲು ಸಾಧ್ಯವಾಗುತ್ತದೆ. ಪ್ರಪಂಚವು ಅನಂತವಾದದ್ದರಿಂದ ಈ ಅರಿವೂ ಅನಂತಕಾಲದವರೆಗೂ ನಡೆಯುತ್ತಿರ ಬೇಕು 'ಅನಂತಾ ವೈವೇದಾಃ',

ಹೀಗೆ ಪ್ರಪಂಚದ ಮೂಲ ಮತ್ತು ವಿಕಾಸಗಳ ಅರಿವು ದೇಶತಃ ಕಾಲತಃ ಅನಂತವಾಗಿರುವುದರಿಂದ ಅದನ್ನು ನಮ್ಮ ಸೀಮಿತ ಬುದ್ಧಿಯ ಎಲ್ಲೆಯಲ್ಲಿ ತರಲು ಸಾಧ್ಯವಿಲ್ಲವೆಂದು ಅದರ ವಿಚಾರವನ್ನೇ ತೊರೆದುಬಿಡೋಣವೇ? ಇದು ಮನುಷ್ಯನ ಸ್ವಭಾವಕ್ಕೆ ವಿರುದ್ಧವಾದದ್ದು. ಪರಮಾತ್ಮನ 'ಋತ' ಅಥವಾ ನಿಯಮಕ್ಕೆ ವಿರುದ್ಧ ವಾದದ್ದು. ಏಕೆಂದರೆ ಚೈತನ್ಯದ ಕುರುಹು 'ವಿಕಾಸ'; ಒಂದು ಗುರಿಯನ್ನು ಸಂಕಲ್ಪಿಸಿ ಆ ಗುರಿಗಾಗಿ ಸಾಧಿಸುವುದೇ ಆಗಿದೆ. ಜೀವಿಯಲ್ಲಿ ಈ ಸ್ವಭಾವ ಕ್ಷೀಣವಾದಂತೆಲ್ಲಾ ಅದು ಜಡವಾಗುತ್ತಾ ಹೋಗುತ್ತದೆ. ಆದುದರಿಂದಲೇ ಚೇತನವು ಹೊಸ ಹೊಸ ಗುರಿ ಯನ್ನು ಸಂಕಲ್ಪಿಸಿಕೊಂಡು ಅದನ್ನು ಸಾಧಿಸಲು ಸತತ ಪ್ರಯತ್ನ ನಡೆಸುತ್ತಿರು ತ್ತದೆ. ನಾವು ಪ್ರಪಂಚದ ಮೂಲದ ವಿಚಾರ ಮಾಡಲು ಮತ್ತೊಂದು ಕಾರಣವೂ ಇದೆ. ನಾವು ಯಾವುದೇ ಕಾರ್ಯದಲ್ಲಿ ಪ್ರವೃತ್ತರಾಗಲು ಆ ಕಾರ್ಯದಲ್ಲಿ ನಮಗೆ ಆಸಕ್ತಿ ಇದ್ದರೆ ಮಾತ್ರ ಸಾಧ್ಯ. ಆ ಆಸಕ್ತಿ ಇರಲು ಪ್ರತ್ಯೇಕ ಸಂದರ್ಭ ಅಥವಾ ಸನ್ನಿವೇಶದಲ್ಲಿ ನಮ್ಮ ಪಾತ್ರವೇನು ಎಂದು ತಿಳಿದಿದ್ದರೆ ಮಾತ್ರ ಸಾಧ್ಯ. ಆ ತಿಳಿವಳಿಕೆ ಇಲ್ಲದಿದ್ದರೆ ನಾವೂ ಕೂಡ, ಯಾವುದೊ ಜಡಯಂತ್ರದಂತೆ ಯಾವುದೋ ಒಂದು ನಿಯಮವನ್ನು ಉದಾಸೀನರಾಗಿ ಪಾಲಿಸುತ್ತಿರುತ್ತೇವೆಯಲ್ಲದೆ ಆ ಕ್ರಿಯೆಯಲ್ಲಿ 'ಮನಸ್ಸಿ'ರುವುದಿಲ್ಲ. ಆ ಸನ್ನಿವೇಶದ ಪೂರ್ವಾಪರ ತಿಳಿದಿದ್ದಲ್ಲಿ, ನಮ್ಮ ಪಾತ್ರದ ಅರಿವು ನಮಗಿದ್ದಲ್ಲಿ, ಆ ಕಾರ್ಯ ಎಷ್ಟೇ ಕ್ಷುಲ್ಲಕವಾದರೂ ನಮಗೆ ಅದರಲ್ಲಿ 'ಪ್ರವೃತ್ತಿ' ಉಂಟಾಗಿ ಅದರಲ್ಲಿ ತಲ್ಲೀನರಾಗುತ್ತೇವೆ. ಆ ಕಾರ್ಯದಿಂದ ಒಂದು ತೃಪ್ತಿ ಅಥವಾ ಆನಂದವನ್ನು ಪಡೆಯುತ್ತೇವೆ. ಪರಮಾತ್ಮ ತತ್ವದ ಈ ಮೂರು ಅವಸ್ಥೆ ಗಳನ್ನೇ ಸತ್ (ಜಡ), ಚಿತ್ (ಚೇತನ), ಆನಂದ (ಮಾನವ) ಎಂದು ಹೇಳ ಬಹುದು. ಬೇರೆ ಕೋನದಿಂದ ಕಂಡಾಗ ಇವೇ ತಮ, ರಜ, ಸತ್ವಗುಣಗಳು. ಈ ಮೂರು ಗುಣಗಳಿಂದಲೇ ಪರಮಾತ್ಮನು ಪ್ರಪಂಚವಾಗಿ ಪ್ರಕಟವಾಗುತ್ತಾನೆ.

ನಮ್ಮ ಪುರಾತನ ಋಷಿಗಳು ಕಂಡ ಕೆಲ ಅನುಭವಗಳನ್ನು ವೇದಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ ತಿಳಿಸಿದ್ದಾರೆ. ಇವುಗಳಲ್ಲಿ ಯಥಾಪಿಂಡಾಂಡೇ ತಥಾ ಬ್ರಹ್ಮಾಂಡೇ ಎಂಬುದು ಒಂದು, ಇನ್ನೊಂದು ಪದಾರ್ಥಗಳಲ್ಲಿ ಶಕ್ತಿ (ಊರ್ಜ) ಹೇಗೋ ಹಾಗೆ ಜೀವಿಗಳಲ್ಲಿ ಚೈತನ್ಯ ಎಂಬುದು. ಇವೆರಡೂ ಮೂಲಭೂತ ಅನು ಭವಗಳ ಆಧಾರದ ಮೇಲೆ ಪ್ರಪಂಚ ಹೇಗೆ ಪ್ರಕಟವಾಯಿತೆಂಬುದನ್ನು ನಾವು ಊಹಿಸ ಬಹುದು.

ನಾವು ಈಗ ವಿಜ್ಞಾನದಿಂದ, ಒಂದು ಜೀವಿಯು ಅನೇಕ 'ಜಡ' ವಸ್ತುಗಳ ಒಂದು ವ್ಯವಸ್ಥಿತ ಸಂಯೋಗವೆಂದೂ ಈ ಜಡವಸ್ತುಗಳೇ ಜೀವಿಯು ವೃದ್ಧಿ

ಹೊಂದಲೂ ಮತ್ತು ಹ್ರಾಸವಾಗಲೂ ಕಾರಣವೆಂದು ತಿಳಿದಿದ್ದೇನೆ. ಈ ಸಂಯೋಗ ವಿಯೋಗಗಳು ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ನಾವು ಪ್ರಪಂಚದ ಬೇರು, ಮೂಲ ಪರಮಾತ್ಮ ತತ್ವವೇ ಎಂದೂ ಅದು ಪೂರ್ಣ ಚೈತನ್ಯ ರೂಪಿಯೆಂದೂ ಹಿಂದೆಯೇ ತಿಳಿದಿದ್ದೇವೆ. ಈ ಮೂಲ ತತ್ವದ ಸಂಕೋಚ ವಿಕಾಸಗಳೇ ಪ್ರಲಯ ಮತ್ತು ಪ್ರಕೃತಿ (ಪ್ರಪಂಚ). ಆ ಪರಮ ಚೈತನ್ಯದ ಸಂಕಲ್ಪವೇ ಋತ. ಈ ಸಂಕಲ್ಪ ಋತ ಕಾರ್ಯರೂಪಕ್ಕೆ ಬಂದಾಗ ಸತ್ಯವಾಗುತ್ತದೆ. ಪರಮಾತ್ಮನ ಈ ಕಾರ್ಯವೇ ಪ್ರಪಂಚ. ಒಂದು ಚೇತನದ ಮನಸ್ಸಿನಲ್ಲಿ ನಿರಂತರವಾಗಿ ಭಾವನೆಗಳು ಉಂಟಾಗುತ್ತಿರುವಂತೆ ಈ ಪ್ರಪಂಚದ 'ಸೃಷ್ಟಿ'ಯೂ ನಿರಂತರ. ಚೇತನದ ಮನಸ್ಸಿನ ಭಾವನೆಗಳು–ಪ್ರಪಂಚದ ಒಂದು ಅಂಗವಾಗಿರುವುದರಿಂದ–ಸ್ವಭಾವತಃ ಪ್ರವಚನ ಇತರ ವಸ್ತುಗಳ ಪ್ರಭಾವ, ಸಂಯೋಗಗಳ ಫಲವಾಗಿ, ಆ ಮನಸ್ಸಿನ ಎಷ್ಟೋ ಭಾವನೆಗಳು ಕಾರ್ಯರೂಪಕ್ಕೆ ಬರದೆ ಭಾವನೆಗಳಾಗಿಯೇ ಇರುತ್ತವೆ. ಕೆಲವು ಮಾತ್ರ ಕಾರ್ಯರೂಪಕ್ಕೆ ಬರುತ್ತವೆ. ಆದರೆ ಪರಮಾತ್ಮನು ಪರಮಕಾರಣನಾದುದರಿಂದ–original cause–ಅವನ ಭಾವನೆಗಳೆಲ್ಲವೂ ಕಾರ್ಯರೂಪಕ್ಕೆ ಬರುತ್ತವೆ. ಆದ್ದರಿಂದ ಋತಕ್ಕೂ ಸತ್ಯಕ್ಕೂ ಇಲ್ಲಿ ಭೇದವಿಲ್ಲ. ಪರಮಾತ್ಮತತ್ವದ ಸಂಕೋಚವಿಕಾಸಗಳು ನಿರಂತರವಾಗಿ ನಡೆಯುತ್ತಲೇ ಇವೆ. ಎಂದರೆ ಅವನ ಶಕ್ತಿ ನಿಗೂಢವಾದಾಗ–ಪರಮಾತ್ಮನು ಯೋಗನಿದ್ರೆಯಲ್ಲಿರುವಾಗ–ಪ್ರಪಂಚ ಸಂಕುಚಿತವಾಗಿ ಪ್ರಲಯವಾಗುತ್ತದೆ. ಅದೇ ಅವನು ಯೋಗನಿದ್ರೆಯಿಂದ ಎಚ್ಚೆತ್ತಾಗ ಶಕ್ತಿ ಚಲನೆ ಹೊಂದಿದಾಗ-ಪ್ರಪಂಚ ಪ್ರಕಟವಾಗುತ್ತದೆ. ಇತ್ತೀಚಿನ ಆವಿಷ್ಕಾರಗಳಾದ ಕೃಷ್ಣರಂಧ್ರಗಳಿಗೆ (Black holes) ಸ್ವಲ್ಪಮಟ್ಟಿಗೆ ಇದನ್ನು ಹೋಲಿಸಬಹುದು.

ಇಂತಹ ಒಂದು ವಿಕಾಸದ ಮೊಟ್ಟಮೊದಲು [ಇದೂ ಊಹಾತೀತ. ಏಕೆಂದರೆ ಸಂಕೋಚ ವಿಕಾಸಗಳು ವಿಕಿರಣದ ಅಲೆಗಳಂತೆ ಇರುವಾಗ ಒಂದು ಅಲೆಯ ಮೊಟ್ಟಮೊದಲು, ಕೊಟ, ಕೊನೆ ಯಾವುದೆಂದು ಹೇಳಲು ಹೇಗೆ ಸಾಧ್ಯ ? ಪರಮಾತ್ಮನ ಒಂದಂಶ ಈ ದೃಶ್ಯ ಪ್ರಪಂಚಕ್ಕೆ ಮೂಲವಾಗಿದ್ದಿರಬಹುದು. ನಮಗೆ ಅಗೋಚರವಾದ ಇನ್ನೂ ಎಷ್ಟೋ ಪ್ರಪಂಚಗಳಿಗೂ ಅವನೇ ಮೂಲ. ಆ ಪರಮಾತ್ಮನೇ (ಅವನ ಅಂಶವೇ) ತನ್ನ ಸಂಕಲ್ಪದಂತೆ, (ಋತದ ಪ್ರಕಾರ, ಪ್ರಕೃತಿಯ ನಿಯಮಕ್ಕನುಸಾರವಾಗಿ) ವಿಕಾಸಗೊಂಡು ನಾವು ಕಾಣುತ್ತಿರುವ ಪ್ರಪಂಚವಾಗಿದೆ. ತಿನ್ನುವ ಆಹಾರವೇ ಪುರುಷನಲ್ಲಿ ವೀರ್ಯಾಣುವಾಗಿ ಸ್ತ್ರೀಯಲ್ಲಿ ಅಂಡಾಣುವಾಗಿ ಇವುಗಳ ಕ್ರಮಬದ್ಧ ಸಂಯೋಗದಿಂದ ಒಂದು ಜೀವಕೋಶವಾಗಿ, ಈ ಒಂದು ಜೀವಕೋಶವೇ ಬೆಳೆದು ಭ್ರೂಣವಾಗಿ, ಮಗುವಾಗಿ, ಪೂರ್ಣ ಮಾನವನಾಗಿ, ತನ್ನ ಅವಧಿ ಪೂರ್ಣವಾಗುವವರೆಗೂ ಕಾರ್ಯತತ್ಪರವಾಗಿದ್ದು, ಅವಧಿ ಮುಗಿದನಂತರ ನಿಶ್ಚೇಷ್ಟವಾಗಿ ಮೂಲಪ್ರಕೃತಿಯಲ್ಲಿ ಲೀನವಾಗುತ್ತದೆ. ಪ್ರತಿ ಜೀವಿಯ ಜೀವನಚಕ್ರ ಇದೇ ಆಗಿದೆ. ಈ ಮಾನವನಲ್ಲಿಯೂ ಅಸ್ಥಿ, ಮಾಂಸ, ಚರ್ಮರೋಮ ಮುಂತಾದ ಜಡವೆಂದೆನ್ನಿಸಿಕೊಳ್ಳುವ ಪದಾರ್ಥಗಳಿವೆ. ಚೈತನ್ಯ ಸೂಚಕಗಳಾದ ನರಗಳಿವೆ. ಪೂರ್ಣ ಚೈತನ್ಯದ ನೆಲೆಯಾದ ಮೆದುಳಿದೆ.

ವಿಜ್ಞಾನವು ಪ್ರತಿಯೊಂದು ಜೀವಿಗೂ ಬೇರೆ ಬೇರೆ 'ಕಾಲ' ಮಾಪನವಿದೆ ಯೆಂದು ತಿಳಿಸುತ್ತದೆ. ನಾವು ಸಾಧಾರಣವಾಗಿ 'ಕಾಲ' ಎಂದು ತಿಳಿದು ಅಳೆಯುವ ಭೌತಕಾಲಕ್ಕೂ ಅಥವಾ ಸಾರಕಾಲಕ್ಕೂ ಪ್ರತಿಯೊಂದು ವಸ್ತುವಿನ 'ಜೈವಿಕ ಕಾಲ'ಕ್ಕೂ ಎಷ್ಟೋ ವ್ಯತ್ಯಾಸವಿದೆ. ಅಲ್ಪ 'ಕಾಲ' ಜೀವಿಗಳಾದ ಚಿಟ್ಟೆ ಮುಂತಾದ ಪ್ರಾಣಿಗಳಿಗೆ ಮಾನವನು ಅಮರನಾಗಿ ತೋರಬಹುದು. ಅಂತೆಯೇ ಅತಿವೇಗವಾಗಿ ಓಡುವ ಪ್ರಾಣಿಗೆ ಮಂದಗತಿಯ ಪ್ರಾಣಿ 'ಜಡ' ವಸ್ತುವಾಗಿ ತೋರಬಹುದು. ಆದ್ದರಿಂದ ಜಡತೆ, ಅಥವಾ ಚೈತನ್ಯವೆಂಬುದು ಸಾಪೇಕ್ಷ ಎಂದೇ ತಿಳಿಯಬೇಕು. ಈ ದೃಶ್ಯ ಪ್ರಪಂಚ ಮೊದಲೂ ರೂಪರೇಷೆಗಳೇನೂ ಇಲ್ಲದ ಒಂದು ಮಹಾ ಭಯಂಕರ ಶೂನ್ಯವಾಗಿತ್ತು. ಆ ಶೂನ್ಯದಲ್ಲಿ ಕೆಲವು ವಿದ್ಯುತ್ಕಣಗಳು ದಿಕ್ಕಾಪಾಲಾಗಿ ಅನಿಯ ಮಿತವಾಗಿ ಚಲಿಸುತ್ತಿದ್ದುವು. ಇವೇ ಕಾಲಾನುಕಾಲದಲ್ಲಿ ಅನೇಕ ಕೋಟಿ ವರ್ಷಗಳ ಘರ್ಷಣೆ, ಸಂಯೋಗ, ವಿಯೋಗಗಳಿಂದ ಈಗಿನ ಪ್ರಪಂಚವಾಗಿದೆ ಎಂಬುದು ವಿಜ್ಞಾನಿ ಗಳ ಮತ. ಮೊದಲು ಜಡ ವಸ್ತುಗಳು ಕಾಣಿಸಿಕೊಂಡು ಪುನಃ ಅನೇಕ ವರ್ಷಗಳ ನಂತರ ಜೀವಿಯು ಪ್ರಕಟವಾಯಿತೆಂದೂ ಈ ಜೀವಿಯು ಅನೇಕ ಮಾರ್ಪಾಟುಗಳನ್ನು ಹೊಂದಿ ಕಾಲಾಂತರದಲ್ಲಿ ಮನುಷ್ಯನಾದನೆಂದೂ ಅವರ ನಂಬಿಕೆ. ಇದರಿಂದ ಚಪಲ ನಾದ ಮನುಷ್ಯನು ಯುಗಾಂತರಗಳಲ್ಲಿ ಬದಲಾಗುವ ಪ್ರಕೃತಿಯ ಸ್ವರೂಪವನ್ನು ಜಡವೆಂದು ಪರಿಗಣಿಸುವುದು ಸಹಜ. ಆದರೆ ಆಪಾತತಃ ಜಡವೆಂದು ಕಾಣುವ ಪದಾರ್ಥಗಳಲ್ಲಿಯೂ ಒಂದು. ಮೂಲಭೂತ ಶಕ್ತಿಯು ಕಾರ್ಯನಿರತವಾಗಿದ್ದು, ಅದು ಗುಡ್ಡವಾಗಿಯೋ, ಬೆಟ್ಟವಾಗಿಯೋ, ನಿಜವಾಗಿಯೋ, ನೀರಾಗಿಯೋ, ಗಿಡ ವಾಗಿಯೋ ಕಡೆಗೆ ಮನುಷ್ಯನಾಗಿಯೋ ಪ್ರಕೃತಿಯ ಅವಿಭಾಜ್ಯ ಅಂಗವಾಗಿದೆ ಯೆಂಬುದು ಸತ್ಯ. ಹೀಗೆ ಜಡ, ಚೇತನವೆಂಬುದು ಸಾಪೇಕ್ಷ ಸತ್ಯವೆಂದು ನನ್ನ ನಂಬಿಕೆ. ಎತ್ತರದಲ್ಲಿರುವ ಒಂದು ಕಲ್ಲಿನಲ್ಲಿರುವ ಶಕ್ತಿ ಗುಪ್ತವಾಗಿದೆ. ಅದು ಒಂದೆಡೆ ಇರುವವರೆಗೂ ಅದು ಜಡವೇ. ಅದೇ ಕಲ್ಲನ್ನು ಆ ಸ್ಥಳದಿಂದ ಆಧಾರ ತಪ್ಪಿಸಿ ಬಿಟ್ಟಲ್ಲಿ, ಗುರುತ್ವಾಕರ್ಷಣ ಶಕ್ತಿಗೆ ಗುರಿಯಾಗಿ ಕ್ರಿಯಾಶೀಲವಾಗುತ್ತದೆ. ಈ ಗುರುತ್ವಾಕರ್ಷಣ ಶಕ್ತಿ ಆ ಕಲ್ಲಿನ ಕಣಕಣದಲ್ಲಿಯೂ ವ್ಯಾಪಿಸಿದ್ದರೂ, ನಮ್ಮ ಅನುಕೂಲಕ್ಕಾಗಿ ಆ ಶಕ್ತಿಯು ಒಂದು ಬಿಂದುವಿನಲ್ಲಿ ಕೇಂದ್ರೀಕೃತವಾಗಿದೆಯೆಂದು ನಾವು ಭಾವಿಸುತ್ತೇವೆ. ಹಾಗೆಯೇ ಕಾರ್ಯತತ್ಪರವಾದ ಕ್ರಿಯಾಶೀಲವಾದ ಚೇತನದ ಶಕ್ತಿ, ಊರ್ಜ, ವರ್ಚಸ್ಸು, ಆತ್ಮನಲ್ಲಿ ಕೇಂದ್ರೀಕೃತನಾಗಿದೆಯೆಂದು ಭಾವಿಸುತ್ತೇನೆ. ಚೈತನ್ಯದ ಕುರುಹು ವಿಕಾಸ. ಒಂದು ಗುರಿಯನ್ನು ಕಲ್ಪಿಸಿ ಅದರತ್ತ ಸಾಗುವುದೆಂದು ಹಿಂದೆಯೇ ಹೇಳಿದ್ದೇನೆ. ಹೀಗೆ ಈ ಪ್ರಪಂಚವು ಮೂಲತಃ ಪೂರ್ಣ ಚೇತನವಾದ ಪರಮಾತ್ಮನ ಅಂಶವೇ ಆಗಿ ಆತನ ಸಂಕಲ್ಪದಂತೆ ನಿಯತಕಾಲದವರೆಗೆ ಕ್ರಿಯಾಶೀಲವಾಗಿ ಪುನಃ ಪರಮಾತ್ಮ ತತ್ವದಲ್ಲಿ ಲೀನವಾಗುತ್ತದೆ. ಈ ಕಾರ್ಯ ನಿರಂತರವಾಗಿ ನಡೆಯುತ್ತಿರುವುದರಿಂದಲೂ ಆ ಪರಮಾತ್ಮನ ಅಂಗವಾದ ಪ್ರಕೃತಿ ಯಲ್ಲಿನ ಪ್ರತಿ ಪದಾರ್ಥದ 'ಕಾಲ' ಕಲ್ಪನೆ ಬೇರೆ ಬೇರೆಯಾಗಿರುವುದರಿಂದಲೂ, ಪ್ರಕೃತಿಯು ತನ್ನ 'ಕಾಲ' ಗತಿಯ ಪ್ರಕಾರ ಮುನ್ನಡೆಯುತ್ತಿದ್ದರೂ ಪ್ರಪಂಚದಲ್ಲಿ

ವಿವಿಧ ಸ್ತರದ ಚೇತನಗಳು ಅಸ್ತಿತ್ವದಲ್ಲಿವೆ ಮತ್ತು ಅನಂತಕಾಲದವರೆಗೂ ನಿರಂತರವಾಗಿ ನಡೆಯುತ್ತಿರುತ್ತದೆ.

ಈ ಹಿಂದೆ ಹೇಳಿದ ವಿಷಯುಗಳೆಲ್ಲವನ್ನೂ ಗಮನದಲ್ಲಿರಿಸಿಕೊಂಡು ಪ್ರಪಂಚದ 'ಆದಿ'ಯನ್ನು ಹೀಗೆ ಊಹಿಸಬಹುದು ಎಂದು ನನ್ನ ನಂಬಿಕೆ.

ಅನಂತನೂ, ಅಪ್ರಮೇಯನೂ, ಪೂರ್ಣ ಚೈತನ್ಯ ಸ್ವರೂಪನೂ ಆದ ಪರಮಾತ್ಮನು ಈ ಪ್ರಪಂಚವನ್ನು ಸೃಷ್ಟಿಸಬೇಕೆಂದು ಸಂಕಲ್ಪ ಮಾಡಿದನು. (ಪರಮಾತ್ಮ ಎಂಬ ಆದಿ ತತ್ವವು ನಮ್ಮ ಅನುಭವಕ್ಕೆ ಬಂದಿರುವ ಇತರ ಪದಾರ್ಥಗಳಂತೆ ಜಡವಲ್ಲವೆಂದೂ, ಅದು ಈ ಪ್ರಪಂಚವನ್ನೆಲ್ಲಾ ಆವರಿಸಿರುವುದಲ್ಲದೇ ತನ್ನದೇ ಆದ ನಿಯಮಗಳಿಗನುಸಾರವಾಗಿ ನಡೆಯುವಂತೆ ಮಾಡುತ್ತಿದೆಯೆಂದೂ ನಮ್ಮ ಮನುಷ್ಯ ಬುದ್ಧಿಗೆ ನಿಲುಕುವಂತೆ ಮನದಟ್ಟಾಗುವಂತೆ ತಿಳಿಯಪಡಿಸಲೋಸುಗುವೇ ಆ ಆದಿ ತತ್ವಕ್ಕೆ ಮನುಷ್ಯತ್ವವನ್ನು, ಒಂದು ವ್ಯಕ್ತಿತ್ವವನ್ನು ಕಲ್ಪಿಸಿ 'ಪರಮಾತ್ಮನು' ಎಂದು ಹೇಳುತ್ತೇವೆಯೇ ಹೊರತು ಆ ತತ್ವವು ನಿಜಕ್ಕೂ ಅಮೂರ್ತ, ನಿರ್ಲಿಂಗ, ನಿರ್ವಚನೀಯ ಹಾಗೂ ಸರ್ವಜ್ಞ, ಸರ್ವಗುಣ ಪರಿಪೂರ್ಣ. ಏಕೆಂದರೆ ಎಲ್ಲವೂ ಅವನೇ. ಎಲ್ಲೆಲ್ಲೂ ಅವನೇ.) ಅವನ ಈ ಸಂಕಲ್ಪವೇ ಪ್ರಕೃತಿ ನಿಯಮ, ಋತ. ಆತನ ಇಚ್ಛಾಶಕ್ತಿ. ಪ್ರಪಂಚದ ಸೃಷ್ಟಿಗೆ ಸಂಕಲ್ಪಿಸಿದ ನಂತರ ಅದು ಹೇಗಿರಬೇಕೆಂದು ಯೋಜಿಸಿದನು. ಅವನು ಸಂಕಲ್ಪವನ್ನು ಇಚ್ಛಾಶಕ್ತಿಯನ್ನು ಪ್ರಕೃತಿ, ಋತವೆಂದು ಕರೆದಂತೆ, ಈ ಯೋಜನೆಯನ್ನು ಜ್ಞಾನಶಕ್ತಿಯನ್ನು ಬುದ್ಧಿ ಎಂದು ಕರೆಯುತ್ತೇವೆ. ಪ್ರಕೃತಿಯೇ ಆಗಲಿ ಬುದ್ಧಿಯೇ ಆಗಲಿ ವ್ಯಕ್ತತೆಯನ್ನು ಹೊಂದಿಲ್ಲ. ಅವು ಬರಿಯ ಕಾರಣ ರೂಪಗಳನ್ನುಳ್ಳದ್ದಾಗಿರುತ್ತವೆ. ಅವುಗಳನ್ನು ಕಾರ್ಯರೂಪಕ್ಕೆ ತರಲು, ತನ್ನ ಕ್ರಿಯಾಶಕ್ತಿಯನ್ನು ಪ್ರಕಟಗೊಳಿಲು ಪರಮಾತ್ಮನು ತನ್ನ ಅನಂತತೆಯಲ್ಲಿ ಒಂದಂಶವನ್ನು ಸೀಮಿತಗೊಳಿಸಿ ಅದಕ್ಕೆ ಒಂದು ಆವರಣ ಕಲ್ಪಿಸಿ ಒಂದು ಅಣುವಾದನು. (ಇಲ್ಲದಿದ್ದಲ್ಲಿ ಆಕಾಶದಂತೆ, ಸಮುದ್ರದ ನೀರಿನಂತೆ ಎಲ್ಲವೂ ಅನಂತವೇ ಆಗಿರುತ್ತಿತ್ತು.) ಯಾವ ಕ್ಷಣದಲ್ಲಿ ಈ ಅಣುರೂಪಗೊಂಡಿತೋ, ಆ ಕ್ಷಣದಿಂದ ಕಾಲಗಣನೆ ಪ್ರಾರಂಭವಾಯಿತು. ದೇಶ, ಅಂತರ, ದಿಕ್ಕುಗಳು ಅಂಕಿತವಾದುವು.

ಆದರೆ ಈ ಅಣುವು ಭೌತಿಕ ಶಾಸ್ತ್ರದ ಬರಿಯ ಶಕ್ತಿಯ ಪ್ರತೀಕ. ಒಂದು Electron ಅಲ್ಲ. ಇದು ಚೈತನ್ಯಾತ್ಮಕ ಬಿಂದುವು ತನ್ನ ಇಚ್ಛಾಶಕ್ತಿಯಿಂದ ತನ್ನದೇ ಯೋಜನೆ ಪ್ರಕಾರ ತಾನೇ ಒಂದು ಆವರಣ ಕಲ್ಪಿಸಿಕೊಂಡು ಮುನ್ನಡೆಯುತ್ತಿರುವ ಆ ಅನಂತ ತತ್ವದ ಒಂದಂಶ. ಈ ಅಣುವು ತನ್ನದೇ ಆದ ನಿಯಮಗಳಿಗನುಗುಣವಾಗಿ ಈ ಪ್ರಪಂಚವನ್ನು ವ್ಯಕ್ತಗೊಳಿಸಿ ನಡೆಸುತ್ತಲಿವೆ. ಈ ಒಂದೇ ಚೇತನಾತ್ಮಕ ಅಣುವು ವಿಭಜನೆಗೊಳ್ಳುತ್ತಾ ಅನೇಕವಾಗಿ ವೃದ್ಧಿ ಹೊಂದಿ ಪುನಃ ಸಂಯೋಗ ವಿಯೋಗಗಳಿಂದ ಅನೇಕ ರೂಪಗಳನ್ನು ತಳೆಯುತ್ತಾ ಪ್ರಪಂಚದ ಅಸ್ತಿತ್ವಕ್ಕೆ ಕಾರಣವಾಗಿದೆ. ಆ ಪರಮಾತ್ಮನ ಯೋಜನೆಯನ್ನು ತಿಳಿಯುವುದೇ ಜ್ಞಾನ.ಅವನ ಸಂಕಲ್ಪ ಅಂದರೆ ಪ್ರಕೃತಿಯ ನಿಯಮಗಳನ್ನು ತಿಳಿದುಕೊಳ್ಳುವುದೇ ವಿಜ್ಞಾನ.

ನಾವು ವಿಜ್ಞಾನದ ಪ್ರಕಾರ 'ಒಂದೊಂದು ಜೀವಕೋಶವೂ ವಿಭಜನೆ ಆದಾಗ ಭಾಗಲಬ್ಧಗಳಾದ ಜೀವಕೋಶಗಳೊಂದೊಂದೂ ಮೊದಲನೆ ಜೀವಕೋಶದ ಪ್ರತಿಕೃತಿಳೇ ಆದರೂ ಒಂದೊಂದು ಬೇರೆ ಬೇರೆಯಾಗಿಯೇ ವರ್ತಿಸುತ್ತವೆ ಎಂಬುದನ್ನು ತಿಳಿದಿದ್ದೇವೆ, ಒಂದು ಜೀವಿಯು ಒಂದೇ ಜೀವಕೋಶದಿಂದ ರೂಪುಗೊಳ್ಳುತ್ತದೆ. ಒಂದೇ ಒಂದು ಜೀವಕೋಶವೂ, ಎರಡಾಗಿ, ನಾಲ್ಕಾಗಿ, ಅನೇಕವಾಗಿ ವಿಭಜನೆಯಾಗುತ್ತಾ ಹೋಗುತ್ತದೆ. ಪುನಃ ಈ ಜೀವಕೋಶಗಳು ಬೇರೆ ಬೇರೆ ಗುಂಪುಗಳಾಗಿ ವಿಶಿಷ್ಟ ಕಾರ್ಯಗಳಲ್ಲಿ ಪೂರ್ವಯೋಜನೆಯಿಂದಲೋ ಎಂಬಂತೆ ತಾವೇ ತೊಡಗುತ್ತವೆ. ವಿಶಿಷ್ಟ ಕಾರ್ಯಗಳೇನಿದ್ದರೂ ಇತರ ಜೀವಕೋಶಗಳೊಡನೆ ಆದಿಯಲ್ಲಿದ್ದ ಐಕ್ಯತೆಯನ್ನು ಮರೆಯುವುದಿಲ್ಲವೆಂದು ಕಾಣುತ್ತದೆ. ಏಕೆಂದರೆ ಅನೇಕ ವೇಳೆ ಕೆಲವು ಅಂಗಗಳು ಕೆಲಸ ಮಾಡದೇ ಹೋದಲ್ಲಿ ಅಥವಾ ಅವನ್ನು ಪೂರ್ತಿ ತೆಗೆದು ಹಾಕಿದಾಗ ಉಳಿದ ಅಂಗಗಳು ಅದರ ಕೆಲಸವನ್ನು ಹಂಚಿಕೊಂಡು ದೇಹದ ಅವಸರಗಳನ್ನು ನಡೆಸುತ್ತವೆ. ಇವು ಪ್ರತ್ಯಕ್ಷ ಅನುಭವ. ದೇಹದ ಬೇರೆ ಬೇರೆ ಅವಯವಗಳು ಬೇರೆ ಯಾವ ಬಾಹ್ಯ ವಸ್ತುಗಳಿಂದಲೂ ತಯಾರಾಗಿ ದೇಹಕ್ಕೆ ಸೇರಿಕೊಳ್ಳುವುದಿಲ್ಲ. ಪ್ರತಿಯೊಂದು ಅವಯವವೂ, ಜೀವಿಗಳ ನರಮಂಡಲವೂ ಕೂಡ, ಮೊದಲಿನ ಜೀವಕೋಶದ ವಿಭಜನೆಯಿಂದ 'ಸೃಷ್ಟ'ವಾದ ಜೀವಕೋಶಗಳಿಂದಲೇ ರೂಪುಗೊಳ್ಳುತ್ತವೆ. ತೀರ ಜಡವೆನ್ನಿಸಿಕೊಳ್ಳುವ ಹಲ್ಲುಗಳು, ಕೂದಲು, ಉಗುರುಗಳೂ ಕೂಡ ಈ ಜೀವಕೋಶಗಳ ಸಮೂಹಗಳೇ. ಮೊದಲಿನ ಏಕೈಕ ಜೀವಕೋಶದಿಂದ ಉದ್ಭವವಾದ ಜೀವಕೋಶಗಳೇ, ಅಲ್ಲಾವುದ್ದೀನನ ಭೂತದ ಕಥೆಯಂತೆ ತಾವೇ ತಾವಾಗಿ, ಪಾರದರ್ಶಕವಾದ ಕಣ್ಣಾಗಿ, ಮೃದ್ವಸ್ಥಿಗಳಾಗಿ, ದೃಢವಾದ ಮೂಳೆಗಳಾಗಿ, ದೇಹದ ಮಲ ತೊಳೆಯುವ ರಕ್ತವಾಗಿ, ಜಡವಾದ ಉಗುರು, ಕೂದಲುಗಳಾಗಿ, ಹೀಗೆ ನಾನಾ ವಿಧವಾಗಿ ಮಾರ್ಪಾಡು ಮಾಡಿಕೊಳ್ಳುವುದು ಅತ್ಯಾಶ್ಚರ್ಯವಾದರೂ ಪ್ರತ್ಯಕ್ಷ ವಿಷಯವಲ್ಲವೆ?' ಯಥಾಪಿಂಡಾಂಡೇ ತಥಾ ಬ್ರಹ್ಮಾಂಡೇ ಎಂದು ಹೇಳಿದಂತೆ. ಈ ದೇಹವು ಒಂದೇ ಜೀವಕೋಶದಿಂದ ರೂಪುಗೊಂಡಂತೆ ಪರಮಾತ್ಮನ ಅಂಶವಾದ ಒಂದೇ ಅಣುವಿನಿಂದ ಈ ಬ್ರಹ್ಮಾಂಡ ರೂಪುಗೊಳ್ಳುವುದು ಅತಿಶಯವೇನಲ್ಲ. ಇದನ್ನೇ ಪರಮಾತ್ಮನ ಅಚಿಂತ್ಯ ಶಕ್ತಿ ಎನ್ನುತ್ತೇವೆ.

ಅವ್ಯಕ್ತವಾಗಿ 'ಶೂನ್ಯ'ವಾಗಿ ಗಾಳಿಯಂತೆ ಇದ್ದ ಪರಮಾತ್ಮನು ಈಗ ನೀರಿನಂತೆ ಪ್ರಕಟವಾದನು. ಆದರೂ ಸರ್ವವ್ಯಾಪಿಯಾಗೇ ಇದ್ದದ್ದರಿಂದ 'ವಿಷ್ಣು' ಎಂದೆನಿಸಿಕೊಂಡನು. ನೀರಿನಂತೆ (ಎಲ್ಲ ನಾಮ, ಉಪಮೆಗಳು ಬರಿಯ ಸಂಕೇತಗಳೆಂಬುದನ್ನು ಮರೆಯಬಾರದು) ಪ್ರಕಟವಾದದ್ದರಿಂದ 'ನಾರಾಯಣ'ನೆಂದೂ ಕರೆಯುತ್ತೇವೆ.

ಪರಮಾತ್ಮನ ಅಂಶ ವ್ಯಕ್ತವಾದ ಕ್ಷಣದಿಂದ ಕಾಲ, ದೇಶ (ಅಂತರ), ದಿಕ್ಕುಗಳೂ 'ಹುಟ್ಟಿದುವೆಂ'ದು ಹೇಳಿತಷ್ಟೆ. ಇವುಗಳ ಗಣನೆಗೆ ಆ ಅಣುವೇ ಕೇಂದ್ರವಾಯಿತು. "ನನಗಿಂತ ಈಚಿನದು 'ನನ್ನ ಮೇಲೆ ನನಗೆ ದೂರ, ನನ್ನ ಹತ್ತಿರ' ಇತ್ಯಾದಿ ವ್ಯವಹಾರಕ್ಕೆ ಮೂಲವಾಯಿತು. ಇದೇ ಅಹಂಕಾರ-ಇವೆಲ್ಲವೂ ಪರಮಾತ್ಮನ

ವಿವಿಧ ಶಕ್ತಿಗಳೇ ಹೊರತು ಬೇರೇನೂ ಅಲ್ಲ. ಈ ಶಕ್ತಿಗಳು ಕಾರ್ಯರೂಪಕ್ಕೆ ಬಂದಾಗ ವೈವಿಧ್ಯತೆ ಕಾಣುತ್ತದೆ. ಅಲ್ಲಿಯವರೆಗೂ ಆ ಪರಮಾತ್ಮನಲ್ಲೇ ಗೂಢವಾಗಿ ಇದ್ದು, ಅವುಗಳಲ್ಲಿ ಭೇದವೇನೂ ಇರದು. (ನೇಹ ನಾನಾಸ್ತಿ ಕಿಂತನ) ಈ ಶಕ್ತಿಗಳನ್ನು ನಮಗೆ ತಿಳಿದಂತೆ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಎಂದು ಮೂರು ವಿಧಗಳಾಗಿ ವಿಭಾಗಿಸಬಹುದು. ಮೊಟ್ಟಮೊದಲು ಒಂದೇ ಅಣುವಿದ್ದಾಗ ಅದರ ಶಕ್ತಿ ಅವಿರೋಧವಾಗಿ ಅವ್ಯವಹಿತವಾಗಿತ್ತು. ಯಾವಾಗ ಋತದಂತೆ ಅಣುವಿಭಜನೆಯಾಗಿ ಒಂದರ ಜತೆ ಅನೇಕ, ಎಲ್ಲಾ ವಿಧದಲ್ಲಿಯೂ 'ಜನಕ' ಅಣುವನ್ನೇ ಹೋಲುವ ಅಣುಗಳು ಉಂಟಾದುವೋ (ಪ್ರತಿ ಅಣುವು ಚೈತನ್ಯಾತ್ಮಕವೇ ಆದುದರಿಂದ) ಒಂದೊಂದೂ ಮತ್ತೊಂದರ ಮೇಲೆ ಪ್ರಭಾವ ಬೀರಿತು. ಈ ಪ್ರಭಾವಕ್ಕೆ ದೇಶ, ಕಾಲ (ಗುಣಗಳ) ಅಂತರಗಳಿಗನುಗುಣವಾಗಿ ಪ್ರತಿಕ್ರಿಯೆಯೂ ವ್ಯಕ್ತವಾಯಿತು. ಮೂರು ವಿಧ ಶಕ್ತಿಗಳಿಗನುಗುಣವಾಗಿ ಇಚ್ಛಾಶಕ್ತಿಯ ಪ್ರತಿಕ್ರಿಯೆಗಳೇ ರಾಗ, ದ್ವೇಷ, ಮದ, ಮೋಹ ಇತ್ಯಾದಿ. ಜ್ಞಾನ ಶಕ್ತಿಯ ಪ್ರತಿಕ್ರಿಯೆಯೇ ವಿದ್ಯೆ, ಅವಿದ್ಯೆ, ಭ್ರಮೆ, ಸಂಶಯ ಇತ್ಯಾದಿ ಮತ್ತು ಕ್ರಿಯಾಶಕ್ತಿ ಪ್ರತಿಕ್ರಿಯೆಯೇ ಆಕರ್ಷಣೆ, ಸಂಕೋಚ, ವಿಸ್ತಾರ ಇತ್ಯಾದಿ. ಈ ಪ್ರತಿಕ್ರಿಯೆಗಳು ಪ್ರತ್ಯೇಕವಾಗಿ ಒಂದಕ್ಕೊಂದು ಸಂಬಂಧಿಸಿಲ್ಲವೆಂದಲ್ಲ. ಇಚ್ಛಾಶಕ್ತಿಯ ಪ್ರತಿಕ್ರಿಯೆ ಪ್ರತಿ ಅಣುವಿನ ಇಚ್ಛಾ, ಜ್ಞಾನ ಕ್ರಿಯೆಗಳ ಮೇಲೆ ಪರಿಣಾಮ ಬೀರಬಹುದು ಅಥವಾ ಮೂರು ಶಕ್ತಿಗಳ ಪರಿಣಾಮವೂ ಪ್ರತಿ ಅಣುವಿನ ಇಚ್ಛೆ ಅಥವಾ ಜ್ಞಾನ ಅಥವಾ ಕ್ರಿಯೆಯ ಮೇಲೆ ಮಾತ್ರ ಆಗಬಹುದು. ಒಂದೆಡೆ 'ಈ ರೀತಿಯ ಕ್ರಿಯೆ ಪ್ರತಿಕ್ರಿಯೆಗಳ ವ್ಯಾಪಾರ, ಬೇರೊಂದೆಡೆ ಅಣುಗಳ ಸಂಕಿರಣ, ವಿಕಿರಣಗಳ ಫಲವಾಗಿ, ಕೆಲ ಅಣುಗಳು ಕೇವಲ ಕ್ರಿಯಾಶಕ್ತಿ ಪ್ರತೀಕಗಳೇ ಆದುವು–ಇವು ಕ್ರಿಯೆಗೆ ಪ್ರತಿಕ್ರಿಯೆ ವ್ಯಕ್ತ ಮಾಡಬಲ್ಲವಲ್ಲದೆ ಇಚ್ಛಾ ಅಥವಾ ಜ್ಞಾನಶಕ್ತಿಯ ಪ್ರತಿಕ್ರಿಯೆ ಅವುಗಳಲ್ಲಿ ಅತ್ಯಲ್ಪ ಅಥವಾ ಶೂನ್ಯ. ಇಂತಹ ಪದಾರ್ಥಗಳನ್ನು ನಾವು ಜಡ ವಸ್ತುಗಳೆನ್ನುತ್ತೇವೆ ಇಂತಹ ಜಡ ವಸ್ತುಗಳು ತಮ್ಮ ಇಚ್ಛಾ ಅಥವ ಬುದ್ಧಿಯ ಪ್ರತಿಕ್ರಿಯೆ ತೋರಿಸಬಹುದು. ಆದರೆ ಜಡವಸ್ತುಗಳೆಲ್ಲ ಅಚೇತನಗಳೆಂಬ ನಂಬಿಕೆ ನಮ್ಮಲ್ಲಿರುವುದರಿಂದಲೂ, ಇಂತಹ ಪ್ರತಿಕ್ರಿಯೆಗಳೂ ಅತ್ಯಲ್ಪ ಪ್ರಮಾಣದಲ್ಲಿರುವುದರಿಂದಲೂ ನಾವು ಅವುಗಳನ್ನು ಉಪೇಕ್ಷೆ ಮಾಡುತ್ತೇವೆ, ಇಲ್ಲವೇ ಆ ಪ್ರತಿಕ್ರಿಯೆಗಳಿಗೇ ಇನ್ನಾವುದೋ ಅಜ್ಞಾತ ಶಕ್ತಿಯ ಪ್ರಭಾವವೆಂದು ಹೇಳುತ್ತೇವೆ. ಜ್ಞಾನಶಕ್ತಿ ಪ್ರಧಾನವಾದುವನ್ನು ಪ್ರಾಣಿಗಳೆಂದು ಕರೆಯುತ್ತೇವೆ. ಹಾಗೆಯೇ ಇಚ್ಛಾಶಕ್ತಿ ಪ್ರಧಾನವಾದ ಜೀವಿಗಳೇ ಮನುಷ್ಯರು.

ಈ ರೀತಿ ಪರಮಾತ್ಮ ತತ್ವದ ಒಂದಂಶವು ವ್ಯಕ್ತ ಪ್ರಪಂಚಕ್ಕೆ ಮೂಲವಾಗಿ ತನ್ನ ಇಚ್ಛೆಯಂತೆ, ಅಂದರೆ ಪ್ರಕೃತಿ ನಿಯಮದಂತೆ ಅಭಿವೃದ್ಧಿ ಹೊಂದಿ ಈ ವಿಸ್ತಾರವಾದ ಬ್ರಹ್ಮಾಂಡವಾಗಿದೆ. ಇದು ಸಮುದ್ರದ ಅಲೆಯಂತೆ, ನದಿಯ ಪ್ರವಾಹದಂತೆ, ನಿರಂತರವಾಗಿ ಋತಕ್ಕನುಗುಣವಾಗಿ ಅನಂತ ಕಾಲದವರೆಗೂ ನಡೆಯುತ್ತಲೇ ಇರುತ್ತದೆ.

ಮೇಲಿನ ಅಂಶಗಳ ಸಾರಾಂಶ

1) ಈ ವಿಶ್ವದ ಚರಾಚರ ವಸ್ತುಗಳೆಲ್ಲವೂ ಅಖಂಡವಾದ, ಅವ್ಯಕ್ತವಾದ ಪರಮಾತ್ಮನ (ಪರಮಾತ್ಮ ತತ್ವದ) ಒಂದಂಶದ ವಿಕಾರದಿಂದಲೇ ಸೃಷ್ಟಿಯಾಗಿದೆ, ವ್ಯಕ್ತವಾಗಿದೆ. ಆದ್ದರಿಂದ ವಿಶ್ವದ ಪ್ರತಿಕಣವೂ ಚೇತನಾತ್ಮಕವಾದ ಪರಮಾತ್ಮನ ಸ್ವರೂಪವೇ.

2) ಈ ಪರಮಾತ್ಮನ ಕಣಗಳು ಒಂದೊಂದೂ ಸ್ವತಃ ಸರ್ವಶಕ್ತಿವಂತವಾದರೂ ಸ್ವಇಚ್ಛೆಯಂತೆ ಸ್ವನಿರ್ಧಾರಿತ ಋತಕ್ಕೆ ಅಧೀನವಾಗಿ ಕಾಲ, ದೇಶ, ಸಂದರ್ಭಗಳಿಗನುಗುಣವಾಗಿ ಪ್ರಪಂಚದ ವ್ಯಾಪಾರಗಳನ್ನು ನಡೆಸುತ್ತಿವೆ. ಉದಾಹರಣೆಗೆ ಆಕಾಶದಲ್ಲಿ ಮಿಂಚುವ ವಿದ್ಯುತ್ತು ನಮ್ಮ ರೇಡಿಯೋಗಳಿಗೆ, ದಿನನಿತ್ಯಕ್ಕೆ ಉಪಯೋಗಿಸುವ ವಿದ್ಯುತ್ತು ಒಂದೇ ಆದರೂ ಆಕಾಶದ ಮಿಂಚನ್ನು ಮನೆ ಕೆಲಸಕ್ಕೆ ತರಲಾಗುವುದಿಲ್ಲ. ಭೌತಿಕ ನಿಯಮಗಳಿಗನುಗುಣವಾಗಿಯೇ ವಿದ್ಯುತ್ತನ್ನು ನಾವು ಅನುಕೂಲವಾಗುವಂತೆ ಮಾಡಿಕೊಳ್ಳದಿದ್ದರೆ ಭಾರಿ ಅನಾಹುತವಾಗುತ್ತದಷ್ಟೆ. ಈ ವಿದ್ಯುಚ್ಛಕ್ತಿನ ಕಾಲ, ದೇಶ, ಸ್ವಭಾವಗಳಿಗೆ ತಕ್ಕಂತೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟು ಅವುಗಳನ್ನು ಉಪಯೋಗಿಸುತ್ತೇವೆ.

3) ಒಂದೇ ಕೋಶದಿಂದ ಉದ್ಭವಿಸಿದ ಹಲವಾರು ಜೀವಕೋಶಗಳು (ಮನುಷ್ಯ ದೇಹದಲ್ಲಿ) ಹಲವಾರು ವಿನ್ಯಾಸಗಳಿಂದ ಒಟ್ಟುಗೂಡಿ ಮೂಳೆ, ಮಾಂಸ, ರಕ್ತ, ಕೂದಲು, ಉಗುರು, ಹೀಗೆ ನಾನಾ ರೀತಿಯ, ನಾನಾ ಬಗೆಯ ವಸ್ತುಗಳಾಗಿ[1] ತಾವು ಸ್ವತಃ ಅಮರರಾದರೂ[2] ಸಮಷ್ಟಿಯಲ್ಲಿ, ತಮ್ಮ ತಮ್ಮ ನಿಯತಕಾಲದವರೆಗೂ ವ್ಯಾಪಾರ ನಡೆಸಿ ಲಯವನ್ನು ಹೊಂದುವಂತೆಯೇ, ಈ ವಿಶ್ವದಲ್ಲಿ (ವಿರಾಟ್ಪುರುಷನ ಶರೀರದಲ್ಲಿ) ಮೂಲಕಣಗಳು ಋತಕ್ಕೆ ಅನುಗುಣವಾಗಿ ಸಂಯೋಗ ವಿಯೋಗಗಳಿಂದಾಗಿ ವಿಕಾಸ ಸಂಕೋಚಗಳನ್ನು ಹೊಂದುತ್ತಾ ಜಡ, ಜಂಗಮ ಪದಾರ್ಥಗಳಾಗಿ ಪ್ರಕಟವಾಗುತ್ತಲಿವೆ.

4) ಪರಮಾತ್ಮನ ತತ್ವದ ಪೂರ್ಣ ವ್ಯಾಪಾರವನ್ನು ಅಂದರೆ ಈ ವಿಶ್ವದ ಪೂರ್ಣ ಸ್ವರೂಪವನ್ನು ಪೂರ್ಣ ತಿಳಿಯಲು ಸಾಧ್ಯವಿಲ್ಲ. ಮೊದಲನೆಯದಾಗಿ, ಕಾಲವು ಅನಂತವಾಗಿದೆ. ವರ್ತಮಾನವೆನ್ನುವುದು ಈ ಕ್ಷಣ ನಮಗೆ ಗೋಚರವಾಗುತ್ತಿದ್ದರೂ, ಭೂತಕಾಲವೆನ್ನುವುದು ನಮ್ಮ ಇತಿಮಿತಿಗೆ ಸಿಲುಕದೆ ಹಿಂದಕ್ಕೆ ಹೋಗುತ್ತಲೇ ಇದೆ. ಭವಿಷ್ಯವನ್ನಂತೂ ಊಹಿಸಲೂ ಸಾಧ್ಯವಿಲ್ಲವಾಗಿದೆ. ವರ್ತಮಾನವೂ ಕೂಡ ಕಾಲ, ದೇಶ, ಸ್ವಭಾವ ಇತ್ಯಾದಿಗಳಿಂದ ಸೀಮಿತವಾಗಿ (ಕ್ಯಾಮರದಲ್ಲಿ ತೆಗೆದ ಛಾಯಾಚಿತ್ರದಂತೆ) ಖಂಡ ಖಂಡವಾಗಿ ನಮಗೆ ಕಾಣುವುದೇ ಹೊರತು ಪೂರ್ಣತೆ

1 The cells may be roughly divided into two classes, fixed cells and mobile cells. [A Carell, p. 64]

2 When the composition of the medium is kept constant the cells at colonies remain indefinitly in the same state of activity......In fact they are immortal. [Ibid p. 132, 133]

ಯನ್ನು ನಾವು ಅರಿಯಲಾರೆವು. ಒಬ್ಬನೇ ವ್ಯಕ್ತಿಯು ಕೂಡ ಕಾಲ, ದೇಶ ಮುಂತಾದ ಉಪಾಧಿಗಳಿಂದಾಗಿ ಬಹುವ್ಯಕ್ತಿತ್ವವನ್ನು ಹೊಂದುತ್ತಾನೆ. ಭೌತ ವಾಗಿಯೇ ಎಷ್ಟೋ ಪದಾರ್ಥಗಳ ಪೂರ್ಣ ಪರಿಚಯ ನಮಗಿಲ್ಲ. ವಿಜ್ಞಾನ (ವಿಶೇಷ ಜ್ಞಾನ) ಹೆಚ್ಚಿದಂತೆಲ್ಲ ಸಾಮಾನ್ಯವಾದ ವಸ್ತುಗಳಲ್ಲೂ ಅಡಗಿರುವ ವಿಶೇಷ ಗುಣ ಗಳು ಈಚೀಚೆಗೆ ತಿಳಿದುಬರುತ್ತಿವೆ. ಸ್ಥೂಲ ಅಸ್ತಿತ್ವವೇ ಇಲ್ಲದ ಬೆಳಕು, ಶಬ್ದಗಳ ತರಂಗಗಳಿಂದ ಕಬ್ಬಿಣ, ಉಕ್ಕು ಮುಂತಾದ ಕಠಿಣ ಪದಾರ್ಥಗಳನ್ನು ಕತ್ತರಿಸಬಹು ದಾಗಿದೆ. ಹೀಗೆ ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳದೇ ಪೂರ್ಣ ಪರಿಚಯ ನಮಗಿಲ್ಲದಿರುವಾಗ, ಇಂದ್ರಿಯಾತೀತವೂ, ವಿಲಕ್ಷಣವೂ ಆದ ಪರಮಾತ್ಮ ತತ್ವವನ್ನು ಪೂರ್ಣ ಅರಿಯಲು ಹೇಗೆ ಸಾಧ್ಯ ?

ಆತ್ಮವಿದ್ಯೆ

ಕೆ. ಪ್ರಾಣೇಶಾಚಾರ್ಯ

ಅಂದಿನ ಶಿಲಾಯುಗದ ಆದಿಮಾನವನು ಇಂದಿನ ಅಂತರಿಕ್ಷ ಯುಗದ ವಿಕಾಸ ಶೀಲ ಮಾನವನಾಗಿದ್ದಾನೆ. ಇಂದು ಪರಿಷ್ಕೃತ ಯಂತ್ರಗಳ ಸಹಾಯದಿಂದ ಎಲ್ಲ ತರದ ಸುಖಸಂವಿಧತೆಗಳನ್ನು ಹೊಂದಿ ಮನುಷ್ಯನು ಜೀವನದಲ್ಲಿ ಸಮೃದ್ಧಿಯನ್ನು ಸಂಪಾದಿಸಿದ್ದರೂ, ಹಠಾತ್ತನೆ ಬರಸಿಡಿಲಿನಂತೆ ಎರಗುವ ಮೃತ್ಯುವನ್ನು ಜಯಿಸಲು ಸಾಧ್ಯವಾಗಿಲ್ಲ. ಅನಾದಿ ಕಾಲದಿಂದ ಜ್ಞಾನಿಗಳು ಮೃತ್ಯುವನ್ನು ಕುರಿತು ಚಿಂತನೆ ಮಾಡಿದ್ದು ಭಸ್ಮಾಸುರನಂಥ ಅಸುರರು. ಯಯಾತಿಯಂಥ ರಾಜರು ಅಜರಾಮರರಾಗಿ ಬಾಳಲು ಬಯಸಿದರು. ಆದರೂ ಒಂದು ದಿನ ಅವರು ಮೃತ್ಯುವಿನಿಂದ ಪರಾಭೂತರಾದರು. ಹಾಗಾದರೆ ಶಾಶ್ವತವಾದುದು ಯಾವುದು ? ಋಷಿಮುನಿಗಳು ಅನೇಕ ವರುಷಗಳವರೆಗೆ ತಪಗೈದು ನಿದಿಧ್ಯಾಸದಿಂದ ಚಿರಂತನ ಸತ್ಯವನ್ನು ತಿಳಿದರು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಹೇಳುತ್ತಾನೆ: "ಜಾತಸ್ಯ ಹೀ ಧ್ರುವೋ ಮೃತ್ಯು: ಧ್ರುವಂ ಜನ್ಮ ಮೃತಸ್ಯ ಚಾ" (ಯಾವುದು ಹುಟ್ಟುತ್ತದೋ ಅದು ಸಾಯಬೇಕು. ಯಾವುದು ಸಾಯುತ್ತದೋ ಅದು ಹುಟ್ಟಬೇಕು) ಇದು ಜನನ ಮರಣ ಚಕ್ರ. ಈ ಚಕ್ರದಿಂದ ಪಾರಾಗಿ ಶಾಶ್ವತ ಮೋಕ್ಷ ಪದವಿಯನ್ನು ಪಡೆಯುವುದೇ ಮಾನವ ಜೀವನದ ಅಂತಿಮ ಗುರಿ, ಇದು ಪರಮ ವಿದ್ಯೆ. ಇದೇ ಆತ್ಮವಿದ್ಯೆ. "ಅವಿದ್ಯಯಾ ಮೃತ್ಯುಂ ತೀರ್ತ್ವಾ, ವಿದ್ಯಯಾಮೃತಮಶ್ನುತೆ" ಎಂದು ಈಶೋಪನಿಷತ್ತು ಹೇಳುತ್ತದೆ. ಈ ಸತ್ಯವನ್ನು ತಿಳಿಸುವ ಸಾಹಿತ್ಯವೇ ಉಪನಿಷತ್ತುಗಳು, ಸಾಮಾನ್ಯನಾಗಲಿ, ಶ್ರೀಮಂತನಾಗಲಿ ಈ ವಿದ್ಯೆಯನ್ನು ಪಡೆಯಲು ಗುರುವಿನ ಹತ್ತಿರ ವಿನಯದಿಂದ ಇದ್ದು, ಅವರು ಹೇಳಿದಷ್ಟು ಕಾಲ ಅಧ್ಯಯನ ಮಾಡಬೇಕು. 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯಃ, ಮಂತವ್ಯಃ, ನಿದಿಧ್ಯಾಸಿತವ್ಯಃ' ಎನ್ನುವ ಉಪನಿಷತ್ತಿನ ವಾಕ್ಯದಂತೆ, ಆತ್ಮವನ್ನು ಅನುಭವಿಸಿ ತಿಳಿಯಬೇಕು. ಗುರುವು ಉಪದೇಶಿಸಿದಂತೆ ವರ್ತಿಸಿ, ಗುರುವಿನ ಮನಸ್ಸಿಗೆ ಒಪ್ಪಿಗೆಯಾಗುವಂತೆ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕು. ಇಂಥ ಒಂದು ಸನ್ನಿವೇಶ ಛಾಂದೋಗ್ಯ ಉಪನಿಷತ್ತಿನಲ್ಲಿ ಬರುತ್ತದೆ.

ಪ್ರಜಾಪತಿಯು ಒಮ್ಮೆ ಹೇಳುತ್ತಾನೆ : "ಪಾಪ ವಿದೂರನಾದ, ಅಜರಾಮರನಾದ, ದುಃಖರಹಿತ, ತೃಷೆ ಪಿಪಾಸೆ ಬಾಧಿಸದ, ಸತ್ಯ-ಕಾಮ, ಸತ್ಯಸಂಕಲ್ಪ ಆತ್ಮನನ್ನು ತಿಳಿಯಬೇಕು. ಇಂಥ ಆತ್ಮನನ್ನು ಅರಿತವನು ಸರ್ವಲೋಕಗಳನ್ನು, ಸರ್ವ ಇಚ್ಛೆಗಳನ್ನು ಜಯಿಸಲು ಸಾಧ್ಯ".

ದೇವ ದಾನವರು ಇದನ್ನು ಕೇಳಿ, ಆತ್ಮಜ್ಞಾನವನ್ನು ಪಡೆದು ಸರ್ವ ಲೋಕ

ಗಳನ್ನು ಹಾಗೂ ಇಚ್ಛೆಗಳನ್ನು ದೊರಕಿಸಲು ಉತ್ಸುಕರಾಗುತ್ತಾರೆ. ಅದಕ್ಕಾಗಿ ದೇವತೆಗಳ ಒಡೆಯನಾದ ದೇವೇಂದ್ರ ಹಾಗೂ ದಾನವೇಂದ್ರ ವಿರೋಚನ ಇವರಿಬ್ಬರು ಪರಸ್ಪರ ವಿಷಯ ವಿನಿಮಯ ಮಾಡಿಕೊಳ್ಳದೆ,ಸಮಿತ್ಪಾಣಿಗಳಾಗಿ, ಬಹುವಿನೀತರಾಗಿ ಪ್ರಜಾಪತಿಯ ಬಳಿಸಾರುತ್ತಾರೆ. ಅಲ್ಲಿ ಮೂವತ್ತೆರಡು ವರ್ಷ ಬ್ರಹ್ಮಚರ್ಯೆಯಿಂದ ವಿದ್ಯಾರ್ಥಿಗಳಾಗಿದ್ದು ಸಂಯಮ ಜೀವನ ಆಚರಿಸುತ್ತಾರೆ "ನೀವು ಏನನ್ನು ಕುರಿತು ಇಲ್ಲಿ ವಾಸವಾಗಿದ್ದೀರಾ ?" ಎಂದು ಪ್ರಜಾಪತಿಯು ಕೇಳುತ್ತಾನೆ. "ತಾವು ಉಸುರಿದ ಪಾಪವಿದೂರ, ಅಜರ, ಅಮರ, ದುಃಖರಹಿತ ತೃಷೆ ಪಿಪಾಸೆ ಬಾಧಿಸದ ಸತ್ಯಕಾಮ ಸತ್ಯಸಂಕಲ್ಪ ಆತ್ಮನನ್ನು ಅರಿಯಲು ಇಲ್ಲಿದ್ದೇವೆ" ಎಂದು ಇಂದ್ರ ವಿರೋಚನರು ಹೇಳಿದರು. "ಕಣ್ಣಲ್ಲಿ ಕಾಣುವ ಪುರುಷನೇ ಆತ್ಮನು. ಅವನು ಅಮರ ಹಾಗೂ ಅಭಯನು. ಅದೇ ಬ್ರಹ್ಮ" ಎಂದು ಪ್ರಜಾಪತಿಯು ಹೇಳಿದನು. ಆಗ ಅವರಿಬ್ಬರು ಕೇಳುತ್ತಾರೆ. "ಆದರೆ ನೀರಿನಲ್ಲಿ ಹಾಗೂ ಕನ್ನಡಿಯಲ್ಲಿ ಕಾಣಿಸುವ ಪುರುಷನು ಯಾರು ?" ಪ್ರಜಾಪತಿಯು ಹೇಳುತ್ತಾನೆ, "ಅವನೇ ಬ್ರಹ್ಮ, ನೀವು ನೀರಿನ ಪಾತ್ರೆಯಲ್ಲಿ ನಿಮ್ಮನ್ನು ವೀಕ್ಷಿಸಿರಿ ಏನು ತಿಳಿಯುವುದಿಲ್ಲವೋ ಅದನ್ನು ಕೇಳಿ." ಆಗ ಅವರಿಬ್ಬರು ನೀರಿನ ಪಾತ್ರೆಯಲ್ಲಿ ತಮ್ಮನ್ನು ನೋಡಿಕೊಂಡರು. "ಏನನ್ನು ನೋಡುತ್ತಿರುವಿರಿ' ಎಂದು ಪ್ರಜಾಪತಿಯು ಕೇಳಲಾಗಿ "ನಖಶಿಖಾಂತ ನಾವಿದ್ದಂತೆಯೇ ನಮ್ಮ ಪ್ರತಿಬಿಂಬವನ್ನು ಕಾಣುತ್ತಿದ್ದೇವೆ" ಎಂದರು. "ಹಾಗಾದರೆ ಸುಂದರವಾದ ವೇಷ ಭೂಷಣಗಳಿಂದಲಂಕೃತರಾಗಿ ನಿಮ್ಮನ್ನು ನೀರಿನ ಪಾತ್ರೆಯಲ್ಲಿ ನೋಡಿಕೊಳ್ಳಿರಿ" ಎಂದು ಪ್ರಜಾಪತಿಯು ನುಡಿದನು. ಅವರು ಹಾಗೆಯೇ ಸುಂದರ ವೇಷಭೂಷಣ ಮಂಡಿತರಾಗಿ ನೀರಿನಲ್ಲಿ ನೋಡಿದರು. 'ಏನನ್ನು ನೋಡಿದಿರಿ' ಎಂಬ ಪ್ರಜಾಪತಿಯ ಪ್ರಶ್ನೆಗೆ "ಸುಂದರ ವೇಷಭೂಷಣ ಅಲಂಕಾರಪ್ರಾಯರಾದ ನಮ್ಮನ್ನೇ ಕಂಡೆವು' ಎಂದು ಇಂದ್ರ ವಿರೋಚನರು ಹೇಳಿದರು. 'ಅದೇ ಅಭಯ, ಅಮರ ಆತ್ಮ; ಅದೇ ಬ್ರಹ್ಮ' ಎಂದು ಪ್ರಜಾಪತಿಯು ಹೇಳಲಾಗಿ ಅವರಿಬ್ಬರು ಸಂತುಷ್ಟರಾಗಿ ಮರಳಿದರು.

ಪ್ರಜಾಪತಿಯು ಅವರು ಹೋಗುವುದನ್ನು ನೋಡಿ 'ಆತ್ಮನನ್ನು ಸರಿಯಾಗಿ ಅರಿಯದೆ ಮರಳುತ್ತಿದ್ದಾರೆ. ದೇವತೆಗಳೇ ಆಗಲಿ, ದಾನವರೇ ಆಗಲಿ, ತಮ್ಮ ಪ್ರತಿಬಿಂಬವೇ ಆತ್ಮವೆಂದು ತಿಳಿದರೆ ನಾಶಹೊಂದುತ್ತಾರೆ' ಎಂದು ನೊಂದುಕೊಂಡನು. ವಿರೋಚನನು ದಾನವರನ್ನು ಸೇರಿ 'ದೇಹದ ಪ್ರತಿಬಿಂಬವನ್ನೇ ಪೂಜಿಸಬೇಕು. ದೇಹವನ್ನು ಪಚರಿಸಿದರೆ ಇಹಪರಗಳನ್ನು ಜಯಿಸುವುದು ಸಾಧ್ಯ' ಎಂದು ಹೇಳಿದನು. ಆದ್ದರಿಂದ ಯಾರು ಇನ್ನೊಬ್ಬರಿಗೆ ಏನನ್ನು ದಾನಮಾಡುವುದಿಲ್ಲವೋ, ಯಾರಿಗೆ ಯಾವ ತರದ ಶ್ರದ್ಧೆಯಿಲ್ಲವೋ, ಯಾರಿಗೆ ತ್ಯಾಗ ಬುದ್ಧಿಯಿಲ್ಲವೋ ಅವನು ಇಂದಿಗೂ ಅಸುರನೆಂದೇ ಕರೆಯಲ್ಪಡುತ್ತಾನೆ ಇದು ದಾನವ ತತ್ವ. ಆದ್ದರಿಂದ ಅವರು ಸತ್ತವನ ದೇಹವನ್ನು ವೇಷಭೂಷಣಗಳಿಂದ ಅಲಂಕರಿಸುತ್ತಾರೆ. ಇದರಿಂದಲೇ ಪರಲೋಕ ಪ್ರಾಪ್ತಿಯೆಂದು ತಿಳಿಯುತ್ತಾರೆ.

ಆದರೆ ಇಂದ್ರನಿಗೆ ದೇವತೆಗಳನ್ನು ಸೇರುವುದಕ್ಕಿಂತ ಮೊದಲೇ ಒಂದು ಅನುಮಾನವುಂಟಾಯಿತು. "ವೇಷ ಭೂಷಣಗಳಿಂದಲಂಕೃತವಾದ ಶರೀರದ ಪ್ರತಿಬಿಂಬವು

ಸುಂದರವಾಗಿ ಕಾಣುವಂತೆ ಈ ದೇಹವು ಕುರುಡ ಇಲ್ಲವೆ ಕುಂಟುಳ ದಾಗ ಅದರ ಪ್ರತಿ ಬಿಂಬವು ದೂಷಿತವಾಗಿ ಕಾಣುತ್ತದೆ. ದೇಹವು ನಾಶವಾದಾಗ ಪ್ರತಿಬಿಂಬವೂ ನಾಶ ವಾಗುತ್ತದೆ. ಆದ್ದರಿಂದ ಇದು ನನಗೆ ಸರಿಯೆನಿಸುವುದಿಲ್ಲ. ಆದ್ದರಿಂದ ಅವನು ಮತ್ತೆ ಸಮಿತ್ಪಾಣಿಯಾಗಿ ಪ್ರಜಾಪ್ರತಿಯ ಬಳಿಗೆ ಬಂದನು. ಅವನು ಮರಳಿ ಬಂದ ಕಾರಣ ವನ್ನು ಪ್ರಜಾಪತಿಯು ಕೇಳಲು ಇಂದ್ರನು ತನ್ನ ಈ ಸಮಸ್ಯೆಯನ್ನು ಹೇಳುತ್ತಾನೆ. "ಅಲಂಕೃತ ದೇಹದ ಪ್ರತಿಬಿಂಬ ಸುಂದರ, ದೂಷಿತ ದೇಹದ ಪ್ರತಿಬಿಂಬ ವಿರೂಪ. ಆದ್ದರಿಂದ ಇದು ಸರಿಯಲ್ಲ." ಮತ್ತೆ ಮೂವತ್ತೆರಡು ವರುಷ ಬ್ರಹ್ಮಚರ್ಯ ವಿದ್ಯಾರ್ಥಿಯಾಗಿರಲು ಪ್ರಜಾಪತಿ ಹೇಳುತ್ತಾನೆ. ಮೂವತ್ತೆರಡು ವರುಷದ ನಂತರ ಪ್ರಜಾಪತಿ ನುಡಿದನು. "ಸ್ವಪ್ನದಲ್ಲಿ ಗೌರವಾನ್ವಿತವಾಗಿ ಸಂಚರಿಸುವ ಪುರುಷ. (ತನ್ನ ಪ್ರತಿಬಿಂಬ) ಅಭಯ ಅಮರ ಆತ್ಮ" ಇಂದ್ರನು ಸಂತುಷ್ಟನಾಗಿ ತೆರಳಿದನು. ಆದರೆ ದೇವತೆಗಳನ್ನು ಸೇರುವ ಮುನ್ನವೇ ಮತ್ತೊಂದು ಸಂದೇಹ ಅವನನ್ನು ಬಾಧಿಸಿತು. ವ್ಯಕ್ತಿಯು ಕುರುಡನಾಗಿದ್ದರೂ ಕನಸಿನ ವ್ಯಕ್ತಿ ಕುರುಡನಾಗುವುದಿಲ್ಲ. ದೇಹದ ದೋಷಗಳು ಕನಸಿನ ಪುರುಷನನ್ನು ದೂಷಿಸುವುದಿಲ್ಲ. ಯಾರು ಹೊಡೆಯದಿದ್ದರೂ ಕನಸಿನಲ್ಲಿ ಹೊಡೆಸಿಕೊಂಡಂತೆ, ನೋವು ಅನುಭವಿಸಿದಂತೆ, ಆಗುತ್ತದೆ. ಅಳುವ ಸಾಧ್ಯ ತೆಯೂ ಇದೆ. ಆದ್ದರಿಂದ ಇದು ಸರಿಯಲ್ಲ. ಅವನು ಮತ್ತೆ ಸಮಿತ್ಪಾಣಿಯಾಗಿ ಪ್ರಜಾಪತಿಯ ಹತ್ತಿರ ಬಂದನು. ಪ್ರಜಾಪತಿಯು ಅವನು ಮರಳಿ ಬಂದ ಕಾರಣ ವನ್ನು ಕೇಳಿದಾಗ ಇಂದ್ರನು ಹೇಳುತ್ತಾನೆ: "ಜಾಗೃತಾವಸ್ಥೆಯಲ್ಲಿದ್ದ ವ್ಯಕ್ತಿಯು ಸ್ವಪ್ನದಲ್ಲಿ ತನ್ನನ್ನು ವಿಪರೀತವಾಗಿ ನೋಡುವುದಷ್ಟೇ ಅಲ್ಲ ತಾನು ಅನುಭವಿಸದ ನೋವನ್ನು ಅನುಭವಿಸುತ್ತಾನೆ. ಆದ್ದರಿಂದ ಇದು ಸರಿಯಾದ ಜ್ಞಾನವಲ್ಲ." ಆಗ ಬ್ರಹ್ಮನು ಮತ್ತೆ ಮೂವತ್ತೆರಡು ವರುಷ ಬ್ರಹ್ಮಚಾರಿ ವ್ರತದಲ್ಲಿರಲು ಆದೇಶ ನೀಡುತ್ತಾನೆ. ಆ ಅವಧಿ ಕಳೆಯಲು ಪ್ರಜಾಪತಿಯು ಹೇಳುತ್ತಾನೆ 'ಸ್ವಪ್ನಗಳನ್ನು ಅನುಭವಿಸದ ಪ್ರಸನ್ನ, ಶಾಂತ, ಸುಪ್ತವಾದುದೇ ಆತ್ಮ' ಎಂದು ಹೇಳುತ್ತಾನೆ. ಇಂದ್ರನು ಶಾಂತ ಹೃದಯನಾಗಿ ಮರಳುತ್ತಾನೆ. ಆದರೆ ದೇವತೆಗಳ ಬಳಿ ಸಾರುವ ಮೊದಲೇ ಮತ್ತೊಂದು ಭಯವು ಅವನನ್ನು ಪೀಡಿಸುತ್ತದೆ. "ಗಾಢ ನಿದ್ರೆಯಲ್ಲಿ ನಾನೇ ಆತ್ಮ—ಎನ್ನುವ ಭಾವನೆಯೇ ಇಲ್ಲ. ಬೇರೆ ಜಗತ್ತಿನ ಅರಿವೂ ಇಲ್ಲ. ಜೀವನವೇ ನಾಶವಾದಂತಿರುತ್ತದೆ. ಆದ್ದರಿಂದ ಇದು ಸರಿಯಲ್ಲ"—ಮತ್ತೆ ಸಮಿ ತ್ಪಾಣಿಯಾಗಿ ಪ್ರಜಾಪತಿಯು ಹೇಳುತ್ತಾನೆ: "ಇಂದ್ರಾ, ಇಲ್ಲಿ ಇನ್ನು ಐದು ವರುಷ ವಾಸವಾಗಿರು. ಇನ್ನು ಹೆಚ್ಚಿನದನ್ನು ಹೇಳುವೆ. ಅಷ್ಟೇ ಅಲ್ಲ. ಅದನ್ನು ತಿಳಿದ ಮೇಲೆ ನೀನು ಮತ್ತೇನೂ ತಿಳಿಯಬೇಕಾಗಿಲ್ಲ!" ಇಂದ್ರನು ಮತ್ತೆ ಐದು ವರುಷ ಪ್ರಜಾಪತಿಯ ಬಳಿಯಿದ್ದನು. ಹೀಗೆ ಒಂದುನೂರ ಒಂದು ವರುಷಗಳನ್ನು ಇಂದ್ರನು ಬ್ರಹ್ಮಚಾರಿಯಾಗಿದ್ದು ಕಳೆದನು.

ನಂತರ ಪ್ರಜಾಪತಿಯು ಹೇಳುತ್ತಾನೆ: "ಇಂದ್ರಾ, ಈ ದೇಹವು ಮರ್ತ್ಯ, ಮೃತ್ಯುಗ್ರಸಿತ ಆದರೂ ಅದು ಅಶರೀರಿಯಾದ ಹಾಗೂ ಅಮರವಾದ ಆತ್ಮನ ಅಧಿ

ಷ್ಠಾನವಾಗಿದೆ. ಸಶರೀರನಾದ ಆತ್ಮನನ್ನು ಪ್ರಿಯ, ಅಪ್ರಿಯ ಬಾಧಿಸುತ್ತವೆ. ಸಶರೀರನಾದವನಿಗೆ ಸುಖ ದುಃಖಗಳ ಬಾಧೆ ತಪ್ಪಿಲ್ಲ. ಆದರೆ ಅಶರೀರನಾದವನಿಗೆ ಪ್ರಿಯಾಪ್ರಿಯಗಳ ಬಾಧೆಯಿಲ್ಲ. ವಾಯು, ಬಿಳಿ ಮೋಡ, ಗುಡುಗು, ಮಿಂಚು ಇವೆಲ್ಲ ಶರೀರ ರಹಿತ. ಆಕಾಶದಲ್ಲಿ ಇವು ಕಾಣಿಸಿಕೊಂಡು ಮತ್ತೆ ತಮ್ಮ ತಮ್ಮ ರೂಪದಲ್ಲಿ ಆ ಪರಮ ಆಕಾಶದಲ್ಲಿ ವಿಲೀನವಾಗುವಂತೆ ಈ ಆತ್ಮವೂ ದೇಹದಲ್ಲಿ ಕಾಣಿಸಿಕೊಂಡು ಪರಮ ಪ್ರಕಾಶವನ್ನು ತಲುಪಿ ಉತ್ತಮ ಪುರುಷನಾಗುತ್ತಾನೆ. ಅಲ್ಲಿ ತನಗೆ ಇಷ್ಟವಾದ ಸಂಬಂಧಿಗಳನ್ನು ಸೇರಿ ಸಂಚರಿಸಿ ನಕ್ಕು ನಲಿಯುತ್ತಾ ಈ ದೇಹವನ್ನು ಮರೆತು ಬಿಡುತ್ತಾನೆ. ರಥಕ್ಕೆ ಜೋಡಿಸಿದ ಪ್ರಾಣಿಯಂತೆ ಈ ಪ್ರಾಣವು ದೇಹವನ್ನು ಎಳೆಯುತ್ತದೆ.

"ಆಕಾಶವು ವಿಲೀನವಾಗುವ ನೇತ್ರ ಬಿಂಬದಲ್ಲಿ ಚಾಕ್ಷುಷ ಪುರುಷನಿರುತ್ತಾನೆ. ಅದರಂತೆ ವಾಸನೆಗಾಗಿ ಮೂಗು, ಮಾತಿಗಾಗಿ ಬಾಯಿ, ಕೇಳಲು ಕಿವಿ, ಇವಕ್ಕೆಲ್ಲ ಅಧಿಷ್ಠಾತೃ ಪುರುಷರಿದ್ದು ಅದೇ ಆತ್ಮ, ಆಲೋಚಿಸಲು ಮನಸ್ಸು. ಮನಸ್ಸೇ ದಿವ್ಯ ಚಕ್ಷು. ಇದರಿಂದ ಬ್ರಹ್ಮಲೋಕದಲ್ಲಿ ಅಭೀಷ್ಟ ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ. ಹೀಗೆ ಪ್ರಜಾಪತಿಯು ಇಂದ್ರನಿಗೆ ಆತ್ಮಜ್ಞಾನವನ್ನು ಉಪದೇಶಿಸಿದನು. ಇಂದ್ರನಿಂದ ಆತ್ಮಜ್ಞಾನವರಿತ ದೇವತೆಗಳು ಅಮರರು."

ಇದೇ ಆತ್ಮಜ್ಞಾನ. ಆತ್ಮಜ್ಞಾನಿಗೆ ಜನ್ಮ ಸಂಸಾರ ಬಂಧನದಿಂದ ಮುಕ್ತಿ. ಇದೇ ನಿತ್ಯ. ಇದೇ ಸತ್ಯ.

॥ ಓಂ ಶಾಂತಿಃ ಶಾಂತಿಃ ॥

ಪರಿಪೂರ್ಣ ಜೀವನ ವಿಧಾನ.... ಭಾವಾತೀತ ಧ್ಯಾನ

ಪ್ರಮೀಳಾ ಪ್ರಾಣೇಶಾಚಾರ್ಯ

ಮಾನವ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಇಂದು ವಿಜ್ಞಾನ ಹಾಸು ಹೊಕ್ಕಾಗಿದೆ. ಇಂದಿನ ತಾಂತ್ರಿಕ ಯುಗದಲ್ಲಿ ಮಾನವನು ಚಂದ್ರಲೋಕದಲ್ಲಿ ಪದಾರ್ಪಣ ಮಾಡಿದ್ದಾಯಿತು. ಮಂಗಳದ ಅಂಗಳಕ್ಕೂ ಹೋಗಿ ಶೋಧ ನಡೆಸಿದ್ದಾಯಿತು. ಈ ವೈಜ್ಞಾನಿಕ ಪ್ರಗತಿ, ಜ್ಞಾನದಾಹ ಮನುಷ್ಯನನ್ನು ಎಲ್ಲಿಗೆ ಕರೆದೊಯ್ಯುವದೊ? ಜಗತ್ತಿನಲ್ಲಿ ಈಗ ಅಷ್ಟೇ ವೇಗವಾಗಿ ಗೊಂದಲ ಹೆಚ್ಚುತ್ತಿದೆ. ಸಮಾಜ ಹಾಗೂ ರಾಷ್ಟ್ರ ಜೀವನದಲ್ಲಿ, ಅದರಂತೆ ಅಂತರ್‌ರಾಷ್ಟ್ರ ಜೀವನದಲ್ಲಿ ತಳಮಳ ಕಾಣುತ್ತಿದೆ. ನಾವು ಯಾವದನ್ನು ಇಂದು ಜ್ಞಾನ, ವಿಜ್ಞಾನ ಎಂದು ತಿಳಿದಿದ್ದೇವೆಯೋ ಅದು ಮಾನವನಿಗೆ ಸಂತೃಪ್ತಿಯನ್ನು ಕೊಡಲಾರದು. ಈಗ ನಮಗೆ ಬೇಕಾಗಿರುವದು ಬುದ್ಧಿ ಹಾಗೂ ಹೃದಯ ಸಮನ್ವಯ. ಹೃದಯದ ಕರೆಯನ್ನು ತಿರಸ್ಕರಿಸಿ ಬುದ್ಧಿ ಮಾತ್ರ ವಿಕಾಸಗೊಂಡಾಗ ಮನುಷ್ಯ ತಪ್ಪು ಮಾಡದೆ ಇರಲಾರ ಅದಕ್ಕಾಗಿ ಪರಮ ಪೂಜ್ಯ ಮಹರ್ಷಿ ಮಹೇಶ ಯೋಗಿಗಳು ಪ್ರತಿಪಾದಿಸಿದ ಧ್ಯಾನ ವಿಧಾನವು ಮಾನವನ ಬುದ್ಧಿ ಹಾಗೂ ಹೃದಯವನ್ನು ವಿಕಾಸಗೊಳಿಸಿ ಆತನು ತನ್ನ ಉನ್ನತ ಸ್ವರೂಪವನ್ನು ಕಂಡುಕೊಳ್ಳಲು ಸಹಕಾರಿಯಾಗಿದೆ. ಈ ಧ್ಯಾನ ಕ್ರಮದಿಂದ ಮಾನವನು ತನ್ನ ಅಂತರ್ಯವನ್ನು ಹೊಕ್ಕು ಅಲ್ಲಿರುವ ಜೀವಸಾರ, ಜ್ಞಾನದ ಉಗಮ, ಚೈತನ್ಯ, ಶಾಂತಿ ಹಾಗೂ ಆನಂದವನ್ನು ಸವಿಯಬಹುದು. ಧ್ಯಾನವು ನಮಗೆ ಹೊಸದಲ್ಲ, ಅದರ ಪ್ರಯೋಜನಗಳು ನವೀನವಾಗಿಲ್ಲ. ಬುದ್ಧ, ಏಸು ಕ್ರಿಸ್ತ, ಶ್ರೀಕೃಷ್ಣ ಮೊದಲಾದ ಅವತಾರ ಪುರುಷರು ಉಸುರಿದ ಸಂದೇಶವೇ ಇದಾಗಿದೆ. ಧ್ಯಾನದಿಂದ ನಮ್ಮ ಹೃದಯ ಸಾಮ್ರಾಜ್ಯವನ್ನು ನಾವು ಜೀವಿಸಿರುವಾಗಲೇ ದೊರಕಿಸಿಕೊಳ್ಳಬಹುದು.

ಮಹರ್ಷಿಗಳ ಅಭಿಪ್ರಾಯದಲ್ಲಿ ಜೀವನವು ಜಂಜಡವಲ್ಲ. ಅದು ಆನಂದ. ಮನುಷ್ಯನು ಕಷ್ಟ ಪಡಲು ಹುಟ್ಟಿಲ್ಲ. ಅವನು ಆನಂದ, ಪ್ರಜ್ಞೆ, ಚೈತನ್ಯ ಹಾಗೂ ಜ್ಞಾನದಿಂದ ಜನಿಸಿದ್ದಾನೆ. ಆಂತರಿಕ ಆತ್ಮ, ಹಾಗೂ ಬಹಿರಂಗ ಭೌತಿಕ ವೈಭವಗಳು ಬುದ್ಧಿಪೂರ್ವಕವಾಗಿ ಸಮ್ಮಿಳಿತವಾದಾಗ ಜೀವನವು ಸಮನ್ವಯಗೊಂಡು ಜೀವಿಸಲು ಅರ್ಹತೆಯನ್ನು ಪಡೆಯುತ್ತದೆ. ಆದರೆ ನಮ್ಮ ಸುತ್ತಲು ನೋವು ಕಷ್ಟಗಳೇ ಕಾಣುತ್ತಿರುವಾಗ, ಜೀವನವು ಆನಂದವೆನ್ನುವುದರ ಅರ್ಥವೇನು? ಕಿತ್ತಳೆ ಹಣ್ಣು ಸಿಹಿ. ಅಂದರೆ ಅದರಲ್ಲಿಯ ಸಾರ ಸಿಹಿ. ಆದರೆ ಅದರ ಸಿಪ್ಪೆ ಕಹಿ. ಆದರೂ ಹಣ್ಣಿನ ರಸವು ಸಿಹಿಯಾಗಿರುವುದರಿಂದ ಹಣ್ಣು ಸಿಹಿ. ಹಾಗೆಯೇ ಜೀವನಕ್ಕೂ ಎರಡು ಅಂಗಗಳು. ಒಂದು ಆಂತರಿಕ, ಇನ್ನೊಂದು ಬಾಹ್ಯ.

ಬಾಹ್ಯವು ಕ್ಷಣಿಕ, ನಿತ್ಯವೂ ಬದಲಾಗುವದು; ಆಂತರಿಕ ಅಂಗವು ಶಾಶ್ವತ, ಎಂದೂ ಬದಲಾಗದು. ಇದು ಆನಂದಮಯ ಎನ್ನುವದನ್ನು ನಾವು ಅನುಭವಿಸಬಹುದು. ಅದಕ್ಕಾಗಿಯೇ ಜೀವನವು ಆನಂದಮಯ. ಇದೇ ಪರಮ ಸತ್ಯ. ಈ ಪರಮ ತತ್ವದ ವೈಶಿಷ್ಟ್ಯಗಳು ಜ್ಞಾನ, ಆನಂದ ಹಾಗೂ ಚೈತನ್ಯ. ಪರಮ ತತ್ವವು ಪರಿಶುದ್ಧ ಪ್ರಜ್ಞೆ. ಇದೇ ಮಾನವನ ಮೂಲ. ಆದ್ದರಿಂದ ಯಾವದೇ ಮಾನವ ಜೀವನದಲ್ಲಿ ಅಜ್ಞಾನ, ಜಡತ್ವಕ್ಕೆ ಅವಕಾಶವಿಲ್ಲ. ಎಲ್ಲಿಯವರೆಗೆ ಮನುಷ್ಯನು ಈ ಜ್ಞಾನ ಮೂಲ ದಿಂದ ದೂರವಾಗಿದ್ದಾನೋ, ಅಲ್ಲಿಯವರೆಗೆ ಮಾತ್ರ ಆತನು ಅಜ್ಞಾನ ಹಾಗೂ ಗೊಂದಲಕ್ಕೀಡಾಗುತ್ತಾನೆ. ಒಳಕೋಣೆಯ ಬೆಚ್ಚನೆ ಹವೆಯನ್ನು ಅನುಭವಿಸದೆ ಹೊರಕೋಣೆಯಲ್ಲಿ ಚಳಿಯಲ್ಲಿ ನಡುಗಿದಂತೆ ಆತನ ವಿಧಿಯಾಗಿದೆ. ಮಾನವನಲ್ಲಿ ಸೃಜನಶೀಲತೆಗೆ ವಿಪುಲವಾದ ಶಕ್ತಿಯಿದೆ. ಅವನು ಸುಖಪಡಲು ಹುಟ್ಟಿದ್ದಾನೆ. ದುಃಖಿಸಲು ಅಲ್ಲ. ಪರಿಶುದ್ಧ ಪ್ರಜ್ಞೆಯನ್ನು ಅನುಭವಿಸಲು ಯೋಗ್ಯವಾದ ನರ ಮಂಡಲ ವ್ಯವಸ್ಥೆ ಮಾನವ ಜಾತಿಗಿದೆ. ಆನಂದ ಹಾಗೂ ಪ್ರಜ್ಞೆಯನ್ನು ಪರಿಪೂರ್ಣ ವಾಗಿ ಅನುಭವಿಸುವ ಶಕ್ತಿ ಆತನಿಗಿದೆ.

ಜಗತ್ತಿನಲ್ಲಿ ನಮ್ಮ ನಿತ್ಯದ ಅನುಭವದಂತೆ ಸುಖ, ದುಃಖಗಳು ಕಣ್ಣು ಮುಚ್ಚಾಲೆಯಾಡುತ್ತಿವೆ. ಇವೆರಡನ್ನೂ ಮೀರಿದ ಆತ್ಯಂತಿಕ ಆನಂದವೂ ಇದೆ. ಇದು ಶಾಶ್ವತವಾಗಿದೆ. ಇಂದು ವಿಜ್ಞಾನವು ಅರಿತಂತೆ ಆತ್ಯಂತಿಕ ಶಕ್ತಿಯೊಂದಿದೆ. ಅದು ರೂಪರಹಿತವಾಗಿದೆ. ಎಲ್ಲ ವ್ಯಕ್ತ ಸ್ವರೂಪದ ವಿಭಿನ್ನತೆಯ ಹಿಂದೆ ಅವ್ಯಕ್ತ, ಅಭಿನ್ನ ಅಮೂರ್ತ ಶಕ್ತಿಯೊಂದಿದೆ. ಇಂದು ವಿಜ್ಞಾನವೂ ಈ ಪರಿಶುದ್ಧ ಶಕ್ತಿ ಯನ್ನು ಅಭ್ಯಸಿಸಲು ಮುಂದುವರಿಯಬೇಕಾಗಿದೆ.

ನಮಗೆ ಭೌತಿಕ ಶರೀರವಿದೆ. ಅದರಂತೆ ಮನಸ್ಸು, ಅಹಂಕಾರ, ಆತ್ಮ ಇವೂ ಇವೆ. ಇವು ದೇಹದಂತೆ ಭೌತಿಕವಾಗಿಲ್ಲ. ಇವುಗಳನ್ನು ವಿಶ್ಲೇಷಿಸಲು ನಮಗಿಂದು ವೈಜ್ಞಾನಿಕ ಸೌಕರ್ಯಗಳಿಲ್ಲ. ಇದ್ದಿದ್ದರೆ ಇವು ಕೂಡ ಪರಿಶುದ್ಧ ಶಕ್ತಿಯ ಪರಿಣಾಮಗಳೆಂದು ಹೇಳಬಹುದು. ಈ ಪರಿಶುದ್ಧ ಶಕ್ತಿಯೇ ಭೌತಿಕ ದೇಹ ಹಾಗೂ ಮನಸ್ಸು, ಅಹಂಕಾರ, ಬುದ್ಧಿಗೂ ಮೂಲ. ಸರ್ವಮೂಲಾಧಾರ ಶಕ್ತಿಯ ಗುಣಾ ಕಾರ, ಸಂಕಲನಗಳಿಂದ ಇಡೀ ವಿಶ್ವವು ನಿರ್ಮಾಣಗೊಂಡಿದೆ.

ಆದ್ದರಿಂದ ಸತ್ಯವು ಒಂದೇ; ಅಕ್ಷರವಾದುದು. ಕ್ಷರವಾದುದು ವ್ಯಾವಹಾರಿಕ. ವ್ಯಾವಹಾರಿಕ ಕ್ಷೇತ್ರದ ಮೂಲ ನಿತ್ಯಸತ್ಯ. ಅದರ ನೈಜಸ್ವರೂಪವು ಸಚ್ಚಿದಾ ನಂದವು. 'ತದೇವಾಸ್ತಿ; ತದೇವಾಹಂ, ತತ್ವಮಸಿ'. ಪ್ರತಿಯೊಬ್ಬ ವ್ಯಕ್ತಿಗೂ ಆಧ್ಯಾತ್ಮಿಕ ಹಾಗೂ ಭೌತಿಕ ಅಂಗಗಳಿವೆ. ನಮ್ಮಲ್ಲಿಯ ಕರ್ತೃ ಆಧ್ಯಾತ್ಮಿಕ. ಈ ಕರ್ತೃ ಪ್ರಾಣ, ಮನಸ್ಸು ಬುದ್ಧಿ, ಅಹಂಕಾರ ಹಾಗೂ ಆತ್ಮವನ್ನೊಳಗೊಂಡಿದೆ.

ಮನಸ್ಸು,ಬುದ್ಧಿ. ಅಹಂಕಾರ ಹಾಗೂ ದೇಹ ಎಲ್ಲವೂ ಪರಿವರ್ತನಶೀಲವಾಗಿವೆ. ಈ ಎಲ್ಲ ಪರಿವರ್ತನಶೀಲ ವಿಷಯಗಳ ಮೂಲವು ಅಕ್ಷರತತ್ವ. ಅದೇ ಆತ್ಮ. ಈ ಅಕ್ಷರ ತತ್ವವು ಸರ್ವವ್ಯಾಪಿ, ಸರ್ವಸಾಕ್ಷಿಯಾಗಿದ್ದರೂ ನಾವದನ್ನು ಏಕೆ ಅನುಭವಿಸಲಾರೆವು? ಈ ಪರಮತತ್ವದ ಅವಸ್ಥೆಗಳು ಎರಡು. ಒಂದುವ್ಯಕ್ತ, ಇನ್ನೊಂದುಅವ್ಯಕ್ತ. ಅವ್ಯಕ್ತವು

ಅಣೋರಣೀಯಾನ್. ಈ ಅತ್ಯಂತ ಸೂಕ್ಷ್ಮಾವಸ್ಥೆಯಲ್ಲಿ ಅದು ಆನಂದ ಪ್ರಜ್ಞೆ ವ್ಯಕ್ತ ಸ್ವರೂಪದಲ್ಲಿ ಈ ಗುಣವು ಮರೆಯಾಗಿ, ಬೇರೆ ಗುಣಗಳು ಮಾತ್ರ ಎದ್ದು ಕಾಣುತ್ತವೆ. ಹಿಮದಲ್ಲಿ ನೀರಿನ ಅಂಶವು ಗುಪ್ತವಾಗಿದ್ದಂತೆ ಈ ಅವಸ್ಥೆ. ಪರಿವರ್ತನೆಯ ತೀವ್ರತೆಯಂತೆ ಗುಣಗಳು ಮೂಲದಿಂದ ಭಿನ್ನವಾಗುತ್ತವೆ. ಹೊಗೆ, ಮೋಡ, ಮಂಜು, ಹಿಮಗಡ್ಡೆ ಇವು ನೀರಿನ ಬೇರೆ ಬೇರೆ ರೂಪಗಳೇ. ಸಚ್ಚಿದಾನಂದವು ವ್ಯಕ್ತ ಸ್ವರೂಪದಲ್ಲಿ ಗುಪ್ತವಾಗಿ, ಅದಕ್ಕೆ ವಿರುದ್ಧವಾದ ಗುಣಗಳು ಕಂಡು ಬರುವದು ಹೀಗೆಯೇ. ನಮ್ಮ ಶರೀರ ಯಂತ್ರವು ಸ್ಥೂಲವಾದುದನ್ನು ಮಾತ್ರ ಅನುಭವಿಸಬಲ್ಲದು. ಪ್ರತಿಯೊಂದು ಇಂದ್ರಿಯಕ್ಕೂ ಅದರದೇ ಆದ ಅನುಭವದ ಮಿತಿ ಇದೆ. ನಮ್ಮ ಜ್ಞಾನೇಂದ್ರಿಯಗಳೆಲ್ಲವೂ ಸ್ಥೂಲ ಪರಿಶೀಲನೆಯಲ್ಲಿಯೇ ತೊಡಗಿದ್ದು, ಸೂಕ್ಷ್ಮವನ್ನು ಗ್ರಹಿಸಲಾರವು. ವಿಜ್ಞಾನವು ಅದಕ್ಕಾಗಿ ಸೂಕ್ಷ್ಮ ಯಂತ್ರಗಳನ್ನು ಒದಗಿಸಿದೆ. ಸೂಕ್ಷ್ಮ ಕ್ಷೇತ್ರದಲ್ಲಿ ಅಧಿಕ ಶಕ್ತಿ, ಅಧಿಕ ಸೌಂದರ್ಯ ಇದೆ. ನಾವು ಇದನ್ನು ಪಡೆದದ್ದಾದರೆ ಅಧಿಕ ಆನಂದವನ್ನು ಹೊಂದಬಹುದು. ನಮ್ಮ ಜೀವನವು ಭೌತ ಕ್ಷೇತ್ರಕ್ಕೆ ಸೀಮಿತವಾಗಿದೆ. ಆದರೆ ಇದು ಸ್ಥೂಲದಿಂದ ಸೂಕ್ಷ್ಮದ ವರೆಗೆ ವ್ಯಾಪ್ತವಾಗಿದೆ. ನಮ್ಮ ಇಂದ್ರಿಯಗಳು ಬಹಿರ್ಮುಖವಾಗಿವೆ. ಮನಸ್ಸು ಸ್ಥೂಲ ಹಾಗೂ ಸೂಕ್ಷ್ಮದ ಮಧ್ಯಗೆರೆಯಲ್ಲಿರುವುದನ್ನು ನಾವು ತಿಳಿದಿಲ್ಲ. ಅದು ಪೂರ್ಣ ವ್ಯಕ್ತವೂ ಅಲ್ಲ; ಪೂರ್ಣ ಅವ್ಯಕ್ತವೂ ಅಲ್ಲ. ಇಂದ್ರಿಯಗಳು ಬಹಿರ್ಮುಖವಾದಾಗ ಮನಸ್ಸು ಸೂಕ್ಷ್ಮದತ್ತ ಹೊರಳದೆ, ಬಹಿರ್ಮುಖವಾಗುತ್ತದೆ. ಮನಸ್ಸನ್ನು ಅಂತರ್ಮುಖಗೊಳಿಸುವ ವಿಧಾನವು ಇದ್ದುದಾದರೆ, ಮನಸ್ಸು ಅಂತರ್ಮುಖವಾಗಿ ಅಧಿಕ ರಮ್ಯತೆ, ಹಾಗೂ ಅಧಿಕ ಆನಂದವನ್ನು ಅನುಭವಿಸಬಲ್ಲದು. ಸತತವಾಗಿ ಶಾಂತಿ ಹಾಗೂ ಆನಂದವನ್ನರಸುವುದೇ ಮನಸ್ಸಿನ ಸ್ವಭಾವ. ಅದು ಬಹಿರ್ಮುಖವಾದಾಗ ಅದು ಅವಿಶ್ರಾಂತವಾಗಿ ಒಂದರಿಂದ ಇನ್ನೊಂದು ಬಾಹ್ಯ ವಿಷಯದಲ್ಲಿ ಶಾಂತಿಯನ್ನು ಹುಡುಕುತ್ತಲೇ ಇರುತ್ತದೆ. ಒಮ್ಮೆ ಅದು ಅಂತರ್ಮುಖವಾದರೆ ತನ್ನ ಸ್ವಭಾವದಂತೆ ಸೂಕ್ಷ್ಮ, ಸೂಕ್ಷ್ಮತರ, ಸೂಕ್ಷ್ಮತಮ ಕ್ಷೇತ್ರದಲ್ಲಿ ಕೊನೆಗೆ ಅವ್ಯಕ್ತದಲ್ಲಿ—ಭಾವಾತೀತ ಆನಂದ ಪ್ರಜ್ಞೆಯಲ್ಲಿ ವಿರಮಿಸುತ್ತದೆ.

ಪ್ರತಿಯೊಬ್ಬ ವ್ಯಕ್ತಿಯ ಮನಸ್ಸೂ ಅಧಿಕವಾಗಿ ಸಂತೋಷಪಡಲು, ಅಧಿಕ ಜ್ಞಾನಪಡೆಯಲು, ಅಧಿಕಸೃಷ್ಟಿಮಾಡಲು ಇಚ್ಛಿಸುತ್ತದೆ. ಅತ್ಯಧಿಕ ಶಾಂತಿ, ಚೈತನ್ಯ, ಜ್ಞಾನ, ಆನಂದ ಇರುವ ತಾಣವೊಂದಿದ್ದರೆ ಮನಸ್ಸು ಅದನ್ನು ಎಳಸುವದು. ವ್ಯಾವಹಾರಿಕ ಜೀವನದಲ್ಲಿ ಈ ಪರಮ ತಾಣವು ಇಲ್ಲದಿರುವುದರಿಂದಲೇ ಮನಸ್ಸು ಸದಾಕಾಲ ಈ ಚಿರಂತನ ನೆಲೆಯನ್ನು ಹುಡುಕಲು ಧಾವಿಸುತ್ತಿದೆ. ಮನುಷ್ಯನು ಈ ಆನಂದ ದಾಣವನ್ನು ದೊರಕಿಸಿಕೊಳ್ಳಲು ಅಸಮರ್ಥನಾಗಿರುವುದರಿಂದ ದುಃಖಕ್ಕೀಡಾಗಿದ್ದಾನೆಯೇ ವಿನಃ ತನ್ನ ಜನ್ಮಸಿದ್ಧ ಹಕ್ಕುಗಳಾದ ಶಾಂತಿ, ಆನಂದ, ಜ್ಞಾನ ಇವುಗಳನ್ನು ಇಚ್ಛಿಸುವುದರಿಂದಲ್ಲ. ಇಚ್ಛೆಗಳನ್ನು ತ್ಯಜಿಸಿದರೆ ಮಾನವನು ಮಾನವನಾಗಿ ಬದುಕಲಾರ. ಆದ್ದರಿಂದ ಮನುಷ್ಯನು ಬಳಲಬೇಕಾಗಿಲ್ಲ. ಜಲಾಶಯದಲ್ಲಿ ಮೀನು ಬಾಯಾರಬೇಕಿಲ್ಲ. ನೀರಿದ್ದೂ ಮೀನು ಬಾಯಾರಿದರೆ ಅದು ಅದರ ಮೂರ್ಖತನ.

ಬಾಯಾರಿಕೆಯನ್ನೇ ಅದು ಬಯಸಿದೆ ಎಂದಂತಾಗುವದು. ಪರಮ ಆನಂದ ಪ್ರಜ್ಞೆ ಎಲ್ಲೆಲ್ಲೂ ತಾನೇ ತಾನಾಗಿರುವಾಗ ಮಾನವನು ದುಃಖಿಸಬೇಕಾಗಿಲ್ಲ. ಅಪಾರ ಕರುಣಾಳು ಪರಮಾತ್ಮನ ಮಗನಾದ ಮಾನವನು ಆನಂದ ಪ್ರಜ್ಞಾವಾರಿಧಿಯಲ್ಲಿ ಈಜಬೇಕು. ಕೋಟ್ಯಾಧೀಶನ ಮಗನು ದರಿದ್ರನೇ ? ಇಂದು ಮಾನವನು ಬಳಲುತ್ತಿದ್ದರೆ ಅವನು ಜೀವನ ಸತ್ಯವನ್ನು ಕಡೆಗಣಿಸಿರುವುದೇ ಕಾರಣ. ಆತ್ಮ ಸಾಕ್ಷಾತ್ಕಾರವಾಗುವವರೆಗೂ ಮನುಷ್ಯನು ದುಃಖದೂರನಾಗಲಾರ. ಆತ್ಮಸಾಕ್ಷಾತ್ಕಾರದ ಮಾರ್ಗ ಬಹು ಸುಲಭ. ಆತ್ಮಸಾಕ್ಷಾತ್ಕಾರಕ್ಕೆ ನಾವು ಬಹುದೂರ ಪ್ರಯಾಣ ಬೆಳೆಸಬೇಕಿಲ್ಲ. 'ನಾನು' ನನ್ನಲ್ಲಿಯೇ ಇದೆ. ಅದರ ಪಥ ಅಪಥ. ಯಾವುದು ಎಲ್ಲದರ ಸಾರವೋ ಅದು ಎಲ್ಲೆಡೆಯಲ್ಲಿ, ಅಂದರೆ ಅನುಭವಿ ಹಾಗೂ ಅನುಭಾವ್ಯದಲ್ಲಿದೆ. ಅನುಭವಿಯ ನಿಜಸ್ವರೂಪ ಆತ್ಮ. ಆತ್ಮಸಾಕ್ಷಾತ್ಕಾರವು ಪ್ರತಿಯೊಬ್ಬರ ಜನ್ಮಸಿದ್ಧ ಹಕ್ಕು.

ಪ್ರತಿಯೊಬ್ಬನೂ 'ನಾನಿದ್ದೇನೆ' ಎನ್ನುತ್ತಾನೆ ವಿನಃ 'ನಾನಿಲ್ಲ' ಎನ್ನುವುದಿಲ್ಲ. ನಮ್ಮಲ್ಲಿಯ ದಿವ್ಯತ್ವ ಕಾಳಾಗಿಲ್ಲ. ಹೊರಗಿನಿಂದ ಶೋಧಿಸಿ ಶೋಧಿಸಿ ಅದನ್ನು ತರಬೇಕಾಗಿಲ್ಲ. ಕಣ್ಣ ಮೇಲೆ ಕನ್ನಡಕವಿದ್ದಾಗಲೂ ಅದನ್ನು ಕಳೆದುಕೊಂಡಂತೆ ಭಾವಿಸಿ ಹುಡುಕುತ್ತಿರುವವನಂತೆ ನಮ್ಮ ಪಾಡಾಗಿದೆ. ಕಣ್ಣ ಮೇಲೆಯೇ ಕನ್ನಡಕ ಇದೆ ಎಂದರಿತರೆ ಸಾಕು.' ತನ್ನ ತಾನರಿವಡೆ ಗುರು' ಎಂದಂತೆ. ಆತ್ಮ ಸಾಕ್ಷಾತ್ಕಾರದ ಪಥವು ಅಪಥವಾಗಿದ್ದರೂ, ಎಲ್ಲೆಡೆ ಅದ್ವೈತವಿದ್ದಾಗಲೂ, ಜೀವನದಲ್ಲಿ ವೈವಿಧ್ಯ ಅದನ್ನು ಮರೆಮಾಚಿದೆ. ಆದ್ದರಿಂದ ಈ ಪಥವು ಅನಂತಪಥವಾಗಿದೆ. ಆದರೆ ಧ್ಯಾನ ವಿಧಾನದಿಂದ ಅನಂತಪಥವನ್ನು ಅಪಥವನ್ನಾಗಿ ಮಾಡುವ ಸಾಧ್ಯತೆಯಿದೆ. ಧ್ಯಾನವು ಮನಸ್ಸನ್ನು ಮೊದಲು ಸೂಕ್ಷ್ಮಸೃಷ್ಟಿಗೆ, ಅನಂತರ ಸೂಕ್ಷ್ಮತರ, ಆಮೇಲೆ ಸೂಕ್ಷ್ಮತಮ ಸೃಷ್ಟಿಯತ್ತ ಕೊಂಡೊಯ್ದು ಕೊನೆಗೆ ಭಾವಾತೀತ ತಾಣಕ್ಕೆ ತಲುಪಿಸುತ್ತದೆ. ಧ್ಯಾನವು ವಸ್ತುವಿನ ಹೊರಕವಚವನ್ನು ಮೆಚ್ಚದೆ ಅದರ ಒಳತಿರುಳನ್ನು, ಸಾರಸಂಗ್ರಹವನ್ನು ಮೆಚ್ಚುತ್ತದೆ. ಭಾವಾತೀತ ಧ್ಯಾನವು ಏಕಾಗ್ರಚಿತ್ತತೆ, ಅರ್ಥಚಿಂತನೆಯ ವಿಧಾನಗಳಿಂದ ಭಿನ್ನವಾಗಿದೆ. ಏಕಾಗ್ರಚಿತ್ತ ಧ್ಯಾನದಲ್ಲಿ ಮನುಷ್ಯ ಒಂದೆಡೆ ಕೇಂದ್ರೀಕೃತವಾಗುವುದರಿಂದ ಮನುಷ್ಯನ ಸಹಜ ಸ್ವಭಾವದ ವಿರುದ್ಧವಾಗುತ್ತದೆ. ಅರ್ಥಚಿಂತನಪರ ಧ್ಯಾನದಲ್ಲಿ ಮನಸ್ಸು ಒಂದು ವಿಶಿಷ್ಟ ವಿಷಯದ ಅರ್ಥವನ್ನು ಅರಸುವುದರಿಂದ ಜಲಾಶಯದ ಮೇಲೆಯೇ ಈಜಿದಂತಾಗುವದು. ಆದರೆ ಭಾವಾತೀತ ಧ್ಯಾನವು ಮನದಾಳಕ್ಕೆ ಧುಮುಕಿ, ದಿವ್ಯತೆ ಹಾಗೂ ಮಾನವತೆಗೆ ಸೇತುವೆಯಾಗುತ್ತದೆ. ಅಪೂರ್ಣತೆ ಹಾಗೂ ಪರಿಪೂರ್ಣತೆ, ಸೋಲು ಹಾಗೂ ಗೆಲವು, ಚಿಂತೆ ಹಾಗೂ ಶಾಂತಿ, ರೋಗ ಹಾಗೂ ಆರೋಗ್ಯ, ಜ್ಞಾನ ಹಾಗೂ ಅಜ್ಞಾನಗಳ ಮಧ್ಯದ ದಾರಿಯೇ ಈ ಧ್ಯಾನ.

ಭಾವಾತೀತ ಧ್ಯಾನವು ಮನಸ್ಸನ್ನು ಸ್ಥೂಲರೂಪದಿಂದ ಸೂಕ್ಷ್ಮಸ್ವರೂಪದತ್ತ ಸಾಗಿಸುವದು ಬಹು ಸ್ವಾಭಾವಿಕವಾಗಿದೆ. ಅಧಿಕ ಆನಂದದೆಡೆ ಹೋಗುವುದೇ ಮನಸ್ಸಿನ ನಿಲುವು. ಈ ಆನಂದವು ಭೌತಿಕವಲ್ಲ. ಇದು ಪರಮಾನಂದ. ಒಂದು ಹೂವನ್ನು ನೋಡಿದಾಗ ಅದರ ಚಿತ್ರ ನಮ್ಮ ಮನಶ್ಚಕ್ಷುವಿನ ಮೇಲೆ ಮೂಡು

ತ್ತದೆ. ಕಣ್ಣು ಮುಚ್ಚಿದಾಗ ಆ ಚಿತ್ರ ಸೂಕ್ಷ್ಮವಾಗಿ, ಅತ್ಯಂತ ಸೂಕ್ಷ್ಮವಾಗುತ್ತ, ಕೊನೆಗೆ ಒಂದು ಚುಕ್ಕೆ ಮಾತ್ರವಾಗಿ ಆ ಮೇಲೆ ಆ ಚುಕ್ಕೆಯೂ ಇಲ್ಲದಂತಾದಾಗ, ಮನಸ್ಸು ಭಾವಾತೀತ ಬಿಂದುವನ್ನು ತಲುಪಿ, ವಿಷಯ ವಿಷಯೀಯ ಭೇದ ಅಳಿದು ವಿಷಯ ತನ್ನಲ್ಲಿ ತಾನು ರಮಿಸುತ್ತದೆ ಇದೇ ಪರಿಶುದ್ಧ ಪ್ರಜ್ಞೆ, ಪರಮಾನಂದ; ಅವ್ಯಕ್ತ ಅಪ್ರಜ್ಞೆ : ಇದೇ ಎಲ್ಲ ಜ್ಞಾನ ಹಾಗೂ ಚೈತನ್ಯದ ಮೂಲ.

ಈ ಅವಸ್ಥೆ ಪರಮಸತ್ಯ, ಏಕೆಂದರೆ ಮನಸ್ಸು ಸೂಕ್ಷ್ಮತೆಯ ಸೃಷ್ಟಿಯನ್ನೂ ದಾಟಿ, ಪರಿಶುದ್ಧ ಪರತತ್ವದಲ್ಲಿ ಲೀನವಾಗಿದೆ. ಇದೇ ಸಚ್ಚಿದಾನಂದ. ಅಧಿಕ ಹಾಗೂ ಕನಿಷ್ಠ ಸಂತೃಪ್ತಿಗಳಲ್ಲಿ ಮನಸ್ಸು ಅಧಿಕ ಸಂತೃಪ್ತಿಯನ್ನೇ ಬಯಸುತ್ತದೆ. ಆದ್ದರಿಂದ ಭಾವಾತೀತ ಧ್ಯಾನವು ಬಹು ಸುಲಭ. ಮನಸ್ಸು ಒಮ್ಮೆ ಅಂತರ್ಮುಖಗೊಳಿಸಿದರೆ, ಭಾವಾತೀತ ಚೈತನ್ಯದತ್ತ ಹೊರಳಿಸಿದರೆ, ಮನಸ್ಸನ್ನು ಪರಮತತ್ವದತ್ತ ಧಾವಿಸುತ್ತದೆ. ಭಾವಾತೀತ ಧ್ಯಾನವನ್ನು ಆಳವಾಗಿ, ಸಹಜವಾಗಿ, ನಿಧಾನವಾಗಿ ಅಭ್ಯಾಸ ಮಾಡಿದರೆ ವೈಯಕ್ತಿಕ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯೊಡನೆ ಬೆಸೆಯುವುದು ಸಾಧ್ಯ. ಈ ಸ್ಥಿತಿಯೇ ಆತ್ಮಾನಂದ ಇಲ್ಲವೆ ನಿರ್ವಾಣ ಸ್ಥಿತಿ. ಇದು ಸ್ಥಳ ಕಾಲಾತೀತ, ಸ್ವಚ್ಛಂದ, ಆತ್ಮಪ್ರಜ್ಞೆ. ಸೃಜನಶೀಲತೆಗೆ ಮುಖ. ಜೀವನದ ಸರ್ವತೋಮುಖ ಏಳ್ಗೆಗೆ ಆತ್ಮ ಪ್ರಜ್ಞೆ ಸಹಕಾರಿ. ಆತ್ಮಪ್ರಜ್ಞಾ ವಿಕಾಸದಿಂದ ವ್ಯಕ್ತಿ ವಿಕಾಸವಾಗಿ ಚರಮಸಿದ್ಧಿಯು ಪ್ರಾಪ್ತವಾಗುತ್ತದೆ. ಇದೇ ಪ್ರಜ್ಞಾ ವಿಕಾಸ. ಪ್ರಜ್ಞಾ ವಿಕಾಸದಿಂದ ಮನಃಪ್ರವೃತ್ತಿಗಳು ಅರಳುತ್ತವೆ. ಧ್ಯಾನದಿಂದ ಮನಸ್ಸು ನಿರ್ಭಯವಾಗಿ, ನಿರ್ದಿಷ್ಟವಾಗಿ, ನಿಶ್ಚಿತವಾಗುತ್ತದೆ. ಸುಪ್ತವಾಗಿರುವ ಮನಶ್ಶಕ್ತಿಗಳು ಪ್ರಕಟಗೊಳ್ಳುತ್ತವೆ. ಜೀವನದ ಒಳ ಹೊರ ಪದರಗಳು ಬೇರೆ ಬೇರೆಯಾಗಿಲ್ಲ. ಅವು ಮನೆಯಲ್ಲಿಯ ಒಳ ಹೊರ ಕೋಣೆಗಳಿದ್ದಂತೆ. ನಾವು ಎಲ್ಲಿ ಅಂದರೆ ಅಲ್ಲಿ ಇರಬಹುದು. ಹೊರಗಿನ ಶೀತಲ ಹವೆ, ಒಳಗಣ ಬೆಚ್ಚನೆ ಹವೆಯನ್ನು ತನಗೆ ಬೇಕೆನಿಸಿದಾಗ ಅನುಭವಿಸಬಲ್ಲವನೇ ಜಾಣ. ಆಂತರಿಕ ಅಧ್ಯಾತ್ಮದ ಬೆಚ್ಚನೆಯನ್ನು ಬಾಹ್ಯ ಭೌತಿಕ ಶೀತದಲ್ಲಿ ತಂದುಕೊಳ್ಳಬಂದರೆ ಅದುವೇ ಜೀವನ ಸಾಫಲ್ಯ ಧ್ಯಾನದಿಂದ ಇದು ಸಾಧ್ಯ.

ಧ್ಯಾನದ ನಿಯಮಿತ ಅಭ್ಯಾಸದಿಂದ ಮನಸ್ಸು ಸುಪ್ತ ಚೈತನ್ಯ ಹಾಗೂ ಪರಾ ಚೈತನ್ಯವನ್ನು ತಲುಪಿ ಅವುಗಳನ್ನು ಉಜ್ವಲಗೊಳಿಸಿ, ಕಾರ್ಯನಿರತಗೊಳಿಸುತ್ತದೆ. ಜೀವನ ಪುಷ್ಟಿಯಾಗುತ್ತದೆ. ಸೂಕ್ಷ್ಮವನ್ನು ಸೂಕ್ಷ್ಮತೆಯೇ ಅನುಭವಿಸಬಲ್ಲುದು.

ಧ್ಯಾನದಿಂದ ಮಾನಸಿಕ ಹಾಗೂ ದೈಹಿಕ ಆರೋಗ್ಯ ಸಂವರ್ಧವಾಗುತ್ತದೆ. ಮನುಷ್ಯ ಬಯಕೆಗಳು ಈಡೇರದಿದ್ದರೆ ಅವನಿಗೆ ಮಾನಸಿಕ ಅಸ್ವಾಸ್ಥ್ಯ ಉಂಟಾಗುತ್ತದೆ. ಈ ಬಯಕೆಗಳು ಸಂತೋಷ, ಜ್ಞಾನ, ಜಯ, ಪ್ರಾಪ್ತಿಯನ್ನು ಕುರಿತಾಗಿರಬಹುದು. ಇವು ಈಡೇರಿದರೆ ಮಾನವನ ಮಾನಸಿಕ ಕಾಯಿಲೆಗಳು ಅಥವಾ ಜಂಜಡಗಳು ಕಡಿಮೆಯಾಗುವವು. ಧ್ಯಾನದ ಪ್ರಥಮ ಪರಿಣಾಮ ಮಾನಸಿಕ ತೊಳಲಾಟದ ನಿವಾರಣೆ. ಧ್ಯಾನಾವಸ್ಥೆಯಲ್ಲಿ ವ್ಯಕ್ತಿಯು ಮಾನಸಿಕ ಹಾಗೂ ದೈಹಿಕ ವಿಶ್ರಾಂತಿ ಪಡೆದು ಶಾಂತಿಯನ್ನು ಪಡೆಯುತ್ತಾನೆ. ಆದ್ದರಿಂದ ಧ್ಯಾನವು ಮಾನಸಿಕ ಕಾಯಿಲೆ

ಗಳ ಬೇರನ್ನೇ ಕತ್ತರಿಸಿ ಹಾಕುತ್ತದೆ. ಧ್ಯಾನದ ಇನ್ನೊಂದು ವಿಶೇಷ ಪರಿಣಾಮ ವೆಂದರೆ, ಉಸಿರಾಟವು ಸೌಮ್ಯವಾಗುವುದು ಹಾಗೂ ಹಗುರವಾಗುವುದು. ಮನಸ್ಸು ಧ್ಯಾನದಾಳಕ್ಕೆ ಇಳಿದಂತೆ ಉಸಿರಾಟದಲ್ಲಿ ಸ್ವಾಭಾವಿಕವಾಗಿ ಹಾಗೂ ಸಹಜವಾಗಿ ಬದಲಾವಣೆಯಾಗುತ್ತದೆ. ಈ ಪರಿವರ್ತನೆಯನ್ನು ನಾವು ಪ್ರಯತ್ನಪೂರ್ವಕವಾಗಿ ಅಥವಾ ಬುದ್ಧಿಪುರಸ್ಸರವಾಗಿ ಮಾಡುವುದಿಲ್ಲ. ಧ್ಯಾನದಲ್ಲಿ ದೇಹವು ಸಹಜವಾಗಿ ವಿಶ್ರಾಂತಿಯನ್ನು ಪಡೆಯುತ್ತಿರುವಂತೆ ಆಗುವ ಪ್ರತಿಕ್ರಿಯೆಯೇ ಉಸಿರಾಟ ಹಗುರವಾಗುವುದು, ಹೃದಯ ಹಾಗೂ ಶ್ವಾಸಕೋಶಗಳು ಅಪ್ರತ್ಯಕ್ಷವಾಗಿ ವಿಶ್ರಾಂತಿಯನ್ನು ಹೊಂದುತ್ತವೆ. ಇಡೀ ದೇಹವೇ ವಿಶ್ರಾಂತಿ ಪಡೆದು ಸಂಪೂರ್ಣವಾಗಿ ಶಕ್ತಿಸಂವರ್ಧನೆ ಮಾಡಿಕೊಳ್ಳುತ್ತದೆ. ಧ್ಯಾನವು ಮಾನಸಿಕ ಜಾಗರೂಕತೆಯನ್ನು ಒದಗಿಸುವುದಲ್ಲದೆ ದೇಹದಲ್ಲಿ ಹೊಸ ಶಕ್ತಿ, ಉತ್ಸಾಹಗಳನ್ನು ಮೂಡಿಸುತ್ತದೆ. ಧ್ಯಾನದ ಅಭ್ಯಾಸವನ್ನು ನಿಯಮಿತವಾಗಿ ಮುಂದುವರಿಸಿದ್ದಾದರೆ ವಾರ್ಧಕ್ಯದ ಕುರುಹುಗಳಾದ ನೆರಿಗೆ, ಚರ್ಮದ ಒರಟುತನ ಇಲ್ಲದಂತಾಗುತ್ತದೆ. ಧ್ಯಾನಿಯು ತಾರುಣ್ಯ ಹಾಗೂ ಲವಲವಿಕೆಯನ್ನು ಅನುಭವಿಸುವುದಷ್ಟೇ ಅಲ್ಲ, ತರುಣನಂತೆ ಕಾಣಿಸಲೂ ಬಲ್ಲನು. ಪ್ರಾಣ, ಅಂದರೆ ಉಸಿರಾಟ ಸುಧಾರಣೆಯ ಜೊತೆಗೇ ದೇಹದಲ್ಲಿ ರಕ್ತದ ರಾಸಾಯನಿಕ ಕ್ರಿಯೆಗಳೂ ಬದಲಾಗುತ್ತವೆ. ತತ್ಪರಿಣಾಮವಾಗಿ ದೈಹಿಕ ಸವೆತ ಕುಂಠಿತವಾಗುತ್ತದೆ.

ಧ್ಯಾನದಿಂದ ಮನಃಪ್ರವೃತ್ತಿಗಳ ವಿಕಾಸವಾಗಿ, ಜ್ಞಾನ ತೃಷೆಯೂ ಹಿಂಗುತ್ತದೆ. ವಿದ್ಯಾರ್ಥಿಗಳು ಧ್ಯಾನಬಲದಿಂದ ವಿಷಯಗಳನ್ನು ಸಮರ್ಪಕವಾಗಿ ಗ್ರಹಿಸಿ, ನಿಜವಾದ ಅನುಭವ ಪಡೆಯಬಲ್ಲರು. ಇಂದು ವಿಶ್ವದ ಎಲ್ಲ ರಾಷ್ಟ್ರಗಳೂ ಶಾಂತಿ, ಸಮನ್ವಯ ಹಾಗೂ ಅಭಿವೃದ್ಧಿಯನ್ನು ಹೊಂದಬೇಕಾದರೆ, ವಿಶ್ವದಲ್ಲಿ ಜ್ಞಾನ, ಉತ್ತಮಿಕೆ ನೆಲೆಸಬೇಕಾದರೆ, ಪ್ರತಿಯೊಬ್ಬ ಮಾನವನು ಆತ್ಮಸಂವರ್ಧನೆ ಮಾಡಿಕೊಳ್ಳಲೇಬೇಕು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಧ್ಯಾನವನ್ನು ಸೇರಿಸಿದರೆ ಹೊಸ ಜನಾಂಗವೇ ನಿರ್ಮಾಣವಾಗುವುದು. ಧ್ಯಾನದಿಂದ ದೊರಕುವ ಪರಿಪೂರ್ಣತೆಯೇ ಎಲ್ಲ ವಿಜ್ಞಾನ, ತತ್ವಜ್ಞಾನ, ಧರ್ಮಗಳ ಪರಿಪೂರ್ಣತೆ.

ಈ ಭಾವಾತೀತ ಧ್ಯಾನದ ಪರಮಗುರಿ 'ವಿಶ್ವಪ್ರಜ್ಞೆ'. ಮನಸ್ಸನ್ನು ಒಮ್ಮೆ ಭಾವಾತೀತ ತತ್ವಕ್ಕೆ ಒಯ್ದರೆ ಮನಸ್ಸು ವಿಷಯ ಪ್ರಜ್ಞೆಯಿಂದ ದೂರವಾಗಿ ಆತ್ಮ ಪ್ರಜ್ಞೆಯನ್ನು ಸೇರುತ್ತದೆ. ಈ ಪರಿಶುದ್ಧ ಪ್ರಜ್ಞೆಯೇ 'ಸ್ವಾತ್ಮ ಪ್ರಜ್ಞೆ ಇಲ್ಲವೆ ಸ್ವಾತ್ಮದರಿವು.' ಮನಸ್ಸು ಸ್ವಾತ್ಮಪ್ರಜ್ಞೆಯಿಂದ ಹೊರಬರುವಾಗ ತನ್ನೊಡನೆ ಪರಮತತ್ವ ಪ್ರಕಾಶವನ್ನು ಹೊರತಂದು ಬಾಹ್ಯ ಭೌತಿಕ ಚಟುವಟಿಕೆಗಳಲ್ಲಿ ಅದನ್ನು ಪ್ರತಿಬಿಂಬಿಸುತ್ತದೆ. ನಿತ್ಯದ ವೈವಿಧ್ಯಮಯ ವ್ಯಾವಹಾರಿಕ ಜೀವನದಲ್ಲಿ 'ಭಾವಾತೀತ ಪರತತ್ವ'ವನ್ನು ಅನುಭವಿಸುವುದೇ ವಿಶ್ವಪ್ರಜ್ಞೆಯ ಸ್ಥಿತಿ.

ಈ ಸ್ಥಿತಿಯನ್ನು ಹೆಚ್ಚಿಗೆ ವಿವರಿಸುವುದು ಸಾಧ್ಯವಿಲ್ಲ. ಏಕೆಂದರೆ ಅದು ಶಬ್ದಾತೀತ ಪರಸ್ಪರ ವಿರೋಧಿ, ಅಂದರೆ ಸಮನ್ವಯ ಹಾಗೂ ಒಡಕು, ಶಾಂತತೆ ಹಾಗೂ ಚಟುವಟಿಕೆ, ಜಡತೆ ಹಾಗೂ ಲವಲವಿಕೆ ಇವುಗಳನ್ನು ಹೊಂದಿಸುವುದೇ ಇದರ

ಸ್ವಭಾವ. ಅವ್ಯಕ್ತದ ಅಸೀಮ ಶಾಂತಿಯನ್ನು ವ್ಯಕ್ತದ ನಿರಂತರ ಕ್ರಿಯೆಯಲ್ಲಿ ನಿಯಮಿತವಾಗಿ ಅನುಭವಿಸುವುದಾದರೆ ಅದುವೇ ಶಬ್ದಾತೀತವನ್ನು ಅನುಭವಿಸಿದಂತೆ. ಇದನ್ನು ವರ್ಣಿಸುವುದು ಹಾಸ್ಯಾಸ್ಪದ. ಒಂದು ಹೂವನ್ನು ಒಂದೇ ಹೊತ್ತಿಗೆ ನೋಡುತ್ತಿದ್ದೇವೆ, ನೋಡುತ್ತಿಲ್ಲ ಎನ್ನುವುದೇ ವಿಶ್ವಪ್ರಜ್ಞೆಯೆಂದರೆ ಅರ್ಥರಹಿತವಾಗಿ ಕಾಣುವದು. ಈ ಸ್ಥಿತಿ ಮಾತು, ಕೃತಿ ಹಾಗೂ ಯೋಚನೆಯ ಎಲ್ಲೆಯನ್ನು ಮೀರಿದುದು. ಈ ಸ್ಥಿತಿ ವರ್ಣನಾತೀತವಾಗಿದ್ದರೂ, ವ್ಯವಹಾರದಲ್ಲಿ ಹೇಗಾದರೂ ಹೇಳುವ ಪ್ರಯತ್ನ ಮಾಡಲೇಬೇಕು. 'ಸಕ್ಕರೆಯು ಸಿಹಿಯೊಳಗೊ, ಸಿಹಿಯು ಸಕ್ಕರೆಯೊಳಗೊ' ಎಂದಂತೆ, 'ಬಯಲು ಆಲಯದೊಳಗೊ, ಆಲಯವು ಬಯಲೊಳಗೊ' ಎಂದಂತೆ, 'ನೀ ನನ್ನೊಳಗೊ, ನಾ ನಿನ್ನೊಳಗೊ ಕೃಷ್ಣ' ಎಂದಂತೆ. ಹೀಗೆ ಯೋಚನೆ, ಬುದ್ಧಿಗೆ ಗ್ರಾಹ್ಯವಾಗದ ಆದರೆ ಸೂಕ್ಷ್ಮಾನುಭವಕ್ಕೆ ಗ್ರಾಹ್ಯವಾಗುವ ಭಗವದ್ಗೀತೆ ಹೇಳುವಂತೆ 'ಆಶ್ಚರ್ಯವತ್ ಪಶ್ಯತ್ಯೇನಂ', 'ಆಶ್ಚರ್ಯವತ್ ವದತಿ ತಥೈ ವಚಾನ್ಯ'....ಎಂದು ಹೇಳಬಹುದು.

ಧ್ಯಾನದಲ್ಲಿ ಮನಸ್ಸು ಅಂತರ್ಮುಖವಾದಾಗ ಅದು ಆತ್ಮಪ್ರಜ್ಞೆಯನ್ನು ತಲುಪುತ್ತದೆ. ಈ ಆತ್ಮಪ್ರಜ್ಞೆಯನ್ನು ಹೊರತಂದಾಗ ಅದು ಜೀವನದ ಎಲ್ಲ ಕ್ಷೇತ್ರವನ್ನೂ ವ್ಯಾಪಿಸುತ್ತದೆ. ಆಗ ಭಾವಾತೀತ ಶಾಂತಿಜೀವನದ ಎಲ್ಲ ಚಟುವಟಿಕೆಗಳೊಡನೆ ಸಮ್ಮಿಳಿತವಾಗುತ್ತದೆ. ಹೀಗೆ ಶಾಶ್ವತ ಶಾಂತಿಯಲ್ಲಿ ಕ್ರಿಯೆ, ಕ್ರಿಯೆಯಲ್ಲಿ ಶಾಂತಿ ಎರಡೂ ಒಂದಾಗುತ್ತವೆ.

ಈ ಒಂದು ಸ್ಥಿತಿಗೆ ಅಭ್ಯಾಸವಾಗಲಿ, ಮಾರ್ಗದರ್ಶನವಾಗಲಿ ಬೇಕಾಗಿಲ್ಲ. ಅಂತರ್ಮುಖವಾದ ಮನಸ್ಸು ಬಹಿರ್ಮುಖವಾಗಲೇಬೇಕು. ಅಂತರ್ಮುಖ ಮನಸ್ಸು ಬಹಿರ್ಮುಖವಾಗುವ ಕ್ರಮವೇ ವಿಶ್ವಪ್ರಜ್ಞೆಯನ್ನು ದೊರಕಿಸಿಕೊಡುತ್ತದೆ. ಬಹಿರ್ಮುಖತೆ ಸ್ವಾಭಾವಿಕ ಕ್ರಿಯೆ ; ಸಮುದ್ರದಾಳ ತಿಳಿಯಹೋದವನು ಹೊರಗೆ ಬರಲೇಬೇಕು. ಆದ್ದರಿಂದ ಈ ವಿಶಿಷ್ಟ ಧ್ಯಾನಪದ್ಧತಿಯಿಂದ ವಿಶ್ವಪ್ರಜ್ಞೆ, ಮಾನವ ಜೀವನದ ಅತ್ಯುಚ್ಚ ಶಿಖರ–ಯಾವ ಸ್ಥಿತಿಯಲ್ಲಿ ಮಾನವನು ದಿವ್ಯಮಾನವನಾಗುವನೋ ಅದು ಪ್ರಾಪ್ತವಾಗುತ್ತಿದೆ. ಈ ವಿಧಾನ ಕಷ್ಟ, ದುಃಖದಿಂದ ಕೂಡಿರದೆ ಬಹು ಸುಲಭ, ಸುಗಮ ಹಾಗೂ ಖಚಿತವಾಗಿದೆ.

ಸಾಹಿತ್ಯ

ಒಂದು ಕವಿಯ ಕಥೆ

ವಿ.ಡಿ. ಹೆಗಡೆ

ಇದೊಂದು ಹಳೆಯ ಕಥೆ. ಎಂದೆಂದೂ ಹೇಳಿ ಮುಗಿಯದ ಕಥೆ. ಎಂದೆಂದೂ ಕೇಳಿ ಮುಗಿಯದ ಕಥೆ. ಇದೊಂದು ಕವಿಯ ಕಥೆ. ಈ ಕವಿಯ ಕವನ ಗಟ್ಟಿಯಾದ ಮೊಸರಿನಂತೆ, ಸಕ್ಕರೆ ಕುಡಿದ ಹಾಲಿನಂತೆ, ನವಯೌವನದಂತೆ, ಶರತ್ಕಾಲದ ಚಂದ್ರನಂತೆ, ಕೋಮಲ ಬಾಲೆಯಂತೆ....ಹೀಗೆಲ್ಲ ಕೊಂಡಾಡುವವರಿದ್ದಾರೆ. ಈ ಕವಿ ನಾವು ಹೋದಲ್ಲೆಲ್ಲ ಬರುತ್ತಾನೆ. ಮೋಡಗಳಲ್ಲಿ ತುಂಬಿಕೊಳ್ಳುತ್ತಾನೆ. ತಂಗಾಳಿಯಲ್ಲಿ ವಿಹರಿಸುತ್ತಾನೆ. ನಮ್ಮ ಬೆಚ್ಚನೆಯ ಉಸಿರಿನಲ್ಲಿ ಪವಡಿಸುತ್ತಾನೆ. ಒಬ್ಬರಿಂದ ಒಬ್ಬರಿಗೆ ದಾಟಿ ಬಂದ ಕಥೆಯಾಗುತ್ತಾನೆ. ಲಾಲಿಯಲಿ ನಿದ್ದೆ ಬರಿಸುವ ಜೋಗುಳದ ಹಾಡಿನಂತೆ ನಮ್ಮನ್ನು ಇಡಿಯಾಗಿ ಆವರಿಸುತ್ತಾನೆ. ಹಸಿರನ್ನು ತನ್ನೊಳಗೆ ತುಂಬಿಕೊಂಡು ಕಣ್ಣು ಮುಚ್ಚಿಕೊಳ್ಳುತ್ತಾನೆ. ರಮ್ಯವಾದ ಒಂದು ಪುಟ್ಟ ರೇಖೆಯನ್ನೂ ಹಿಡಿಯುತ್ತಾನೆ, ಕುಡಿಯುತ್ತಾನೆ. ಕವನವನ್ನಾಗಿಸುತ್ತಾನೆ. ಮಧುರ ಶಬ್ದವನ್ನು ಕೇಳಿ ನೋವಿನಿಂದ ನರಳುತ್ತಾನೆ. ಸಾನುಗಳನ್ನಾಲಂಗಿಸುವ ಮೇಘವನ್ನು ಕಂಡು ಮೈಮರೆಯುತ್ತಾನೆ. ಆಗಸದಲ್ಲಿ ಮೂಡಿ ಮಾಯವಾಗುವ ಚಿತ್ರಗಳನ್ನು ಮೋಹಿಸುತ್ತಾನೆ. ಕಲಾವಿದನಂತೆ ಬಿಸಿಲಿನಲ್ಲಿ ತನ್ನ ನೆರಳನ್ನೇ ಚಿತ್ರಿಸುತ್ತಾನೆ. ಈತನೇ ಕವಿಕುಲಗುರು ಕಾಳಿದಾಸ. ಕವಿತಾಕಾಮಿನಿಯ ವಾಗ್ವಿಲಾಸ. ಈತ ಈ ನೆಲದ ದಂತಕಥೆಯಾಗಿದ್ದಾನೆ. ವಂಶಪಾರಂಪರ್ಯವಾಗಿ ನಾವೆಲ್ಲರೂ ಕೇಳಿಕೊಂಡು ಬಂದ ಕಥೆಯಾಗಿದ್ದಾನೆ. ವರ್ಷಗಟ್ಟಲೆ ಹೇಳಿದರೂ ಮುಗಿಯದ ಕಥೆಯಾಗಿದ್ದಾನೆ. ಅಜ್ಜನಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಜೀವನ-ಪ್ರವಾಹ ಮುಂದುವರಿದಂತೆ ಈತ ಮುಂದುವರಿಯುತ್ತಾನೆ. ಈತನ ಕಥೆ ಮುಗಿದರೆ ಈ ನೆಲದ ಕಥೆ ಮುಗಿದಂತೆಯೆ. ತಾನು ಹೋದಲ್ಲೆಲ್ಲ ಈತ ಈ ನೆಲವನ್ನು ಒಯ್ಯುತ್ತಾನೆ. ಆದ್ದರಿಂದ ಈ ಕಥೆ, ಈತನ ಕಥೆ, ಈ ನೆಲದ ಕಥೆ ಎಂದೆಂದೂ ಮುಗಿಯುವುದಿಲ್ಲ.

ಈತನೇ ಆ ಕಾಳಿದಾಸ. ಕವಿಯಲ್ಲದವ ಕವಿಯಾಗಿ ಬೆಳೆದವ. ಕೇವಲ ಪ್ರೇಮಿಯಾದವ ಜನಪ್ರೇಮಿಯಾಗಿ ಪರಿಸರ ಪ್ರೇಮಿಯಾಗಿ ತನ್ನ ನೆಲವನ್ನೂ ಜಲವನ್ನೂ ಗುಡ್ಡಗಾಡುಗಳನ್ನೂ ಪ್ರೀತಿಸಿದವ. ಕೃತಿಯಿಂದ ಕೃತಿಗೆ ಬೆಳೆದು ನಾಡನ್ನೆ ಆವರಿಸಿದವ. ಈತನ ಚೊಚ್ಚಲು ಕೃತಿ ಋತುಸಂಹಾರ.

ಋತುಸಂಹಾರದ ಕವಿ ಒಬ್ಬ ಆದರ್ಶ ಪ್ರಣಯಿ. ಆತ ಇನ್ನೂ ನಾಚುತ್ತಿರುವ ತನ್ನ ಪ್ರೇಯಸಿಗೆ ಋತುಚಕ್ರವನ್ನು ಬಣ್ಣಿಸುವ ನೆಪದಲ್ಲಿ ತನ್ನ ಹೃದಯಕೋಶವನ್ನು ಬಿಚ್ಚಿ ಪ್ರಕೃತಿಗೆ ಇಡಿಯಾಗಿ ತೆರೆದುಕೊಳ್ಳುತ್ತಾನೆ. ಪ್ರಕೃತಿಯೇ ಆ ಪ್ರಣಯಿಗೆ ಚಿತ್ರಶಾಲೆ. ಒಂದೊಂದು ಹೂವಿನ ಎಸಳಲ್ಲೂ, ಒಂದೊಂದು

ಹಕ್ಕಿಯ ರೆಕ್ಕೆಯಲ್ಲಿಯೂ, ಜಿಂಕೆಯ ಓಟದಲ್ಲಿಯೂ, ಗರಿಗೆದರಿ ನರ್ತಿಸುತ್ತಿರುವ ನವಿಲಿನ ಕುಣಿತದಲ್ಲಿಯೂ ಆತ ಸೌಂದರ್ಯಲೋಕವನ್ನು ಕಾಣುತ್ತಾನೆ. ಶ್ಯಾಮಲ ವನರಾಜಿ, ಕೋಗಿಲೆಯ ಇಂಚರ, ಗಿರಿಸರಗಳ ನೀರವತೆ, ಭೂದೇವಿ ಧರಿಸಿದ ಹಸಿರಿನ ಹೊಸ ವಸನ, ತಿಳಿಗೊಳಗಳ ಕೆಂದಾವರೆ, ಹಿಂಜಿದ ಅರಳೆಯಂತೆ ಕಂಗೊಳಿಸುತ್ತ ಆಗಸದಲ್ಲಾಡುವ ಬೆಳ್ಮುಗಿಲುಗಳು, ತಂಗಾಳಿಯಲ್ಲಿ ಸಂಭ್ರಮದಿಂದ ಭರ್ರನೆ ಹಾರುವ ಹಕ್ಕಿಗಳು, ನೋಡದ ಗುಡುಗಿಗೆ ಬೆದರಿ ನಲ್ಲನನ್ನು ಬಿಗಿದಪ್ಪುವ ಮುಗುದೆ—ಹೀಗೆ ಋತುಸಂಹಾರ ಕನಸುಗಾರ ಕಾಳಿದಾಸನ ರಮ್ಯಕಾವ್ಯ.

ಋತುಸಂಹಾರದ ಕನಸುಗಾರ ಮಾಲವಿಕಾಗ್ನಿಮಿತ್ರವೆಂಬ ನಾಟಕವನ್ನು ಬರೆಯುತ್ತ ಬೆಳೆಯುತ್ತಾನೆ. "ಹಳತೆಂದ ಮಾತ್ರದೊಳೆ ಎಲ್ಲವೂ ಒಳಿತಲ್ಲ. ಹೊಸತೆಂದ ಮಾತ್ರದೊಳೆ ಕೃತಿ ಕೆಟ್ಟುದಲ್ಲ" ಎಂದು ಘೋಷಿಸುತ್ತಾನೆ. "ಪರಿಕಿಸಿದ ಮೇಲೊಂದನೊಲಿದಪರು ಬುಧಜನರು. ಪರರು ಪೇಳ್ದುದೊಳು ನಡೆದಪರು ಮೂಢ ಜನರು" ಎಂದು ಎಚ್ಚರಿಸುತ್ತ ಕನಸುಗಾರ ಕವಿ ವಿಮರ್ಶಕನಾಗಿ ವಿಜೃಂಭಿಸುತ್ತಾನೆ. ಮಾಲವಿಕಾಗ್ನಿಮಿತ್ರದ ಕವಿ ಚಮತ್ಕಾರಗಳನ್ನು ಯೋಚಿಸುತ್ತಾನೆ. ಪ್ರಯತ್ನಪೂರ್ವಕವಾಗಿ ಮಾತುಗಳನ್ನು ಕಡೆಯುತ್ತಾನೆ. ಹೀಗೆ 'ಮಾಲವಿಕಾಗ್ನಿಮಿತ್ರ' ಹೊಸತನ್ನು ಯೋಚಿಸುವ ಬಿಸಿ ರಕ್ತದ ಕಬ್ಬಿಗನ ಒಂದು ಪ್ರಯೋಗ, (ಎ.ಆರ್. ಕೃಷ್ಣಶಾಸ್ತ್ರಿಗಳ ಮಾತಿನಲ್ಲಿ) "ರೂಪಕಗಳ ಗೊನೆಯಲ್ಲಿ ಇನ್ನೂ ಸ್ವಲ್ಪ ಹಸುರು ಗಾಯಿ, ಬಲಿತು ಬಿರಿದಿರುವ ಹೊಂಬಣ್ಣದ ಹಣ್ಣಲ್ಲ."

ಹೊಸತನ್ನು ಹುಡುಕುವ ಕಬ್ಬಿಗ ಕುಮಾರಸಂಭವವೆಂಬ ಮಹಾಕಾವ್ಯ ರಚಿಸುತ್ತಾನೆ. ಕುಮಾರಸಂಭವದ ಕವಿ ಸಕಲ ಲಾವಣ್ಯವನ್ನು ಇಡಿಯಾಗಿ ಒಂದೆಡೆ ನೋಡಲೆಳಸುವ ನವಯುವಕ; ಬೆಡಗಿಯರ ಕ್ರೀತದಾಸ. ಉಮಾಸುರತವರ್ಣನೆಯಲ್ಲಿ ರಮಿಸುವ ಈ ಕನಸುಗಾರ ಕಬ್ಬಿಗ ಪರಮ ಶೃಂಗಾರಿಯಾಗುತ್ತಾನೆ. ಈತನಿಗೆ ಗುಣಗಳನ್ನು ಕಾಣುವ ಕಣ್ಣಿದೆ. ಗುಣಸಮೂಹದಲ್ಲಿ ಇರುವ ಒಂದು ದೋಷ ಈತನಿಗೆ ದೋಷವಾಗಿಯೇ ಕಾಣಿಸುವುದಿಲ್ಲ.

ಕುಮಾರಸಂಭವದ ಕವಿ ವಿಕ್ರಮೋರ್ವಶೀಯವೆಂಬ ತ್ರೋಟಕವನ್ನು ರಚಿಸುತ್ತಾನೆ. ಮಾಲವಿಕಾಗ್ನಿಮಿತ್ರದಲ್ಲಿ ಭಾಸ, ಸೌಮಿಲ್ಲಕ, ಕವಿಪುತ್ರಾದಿಗಳನ್ನು ಕೊಂಡಾಡಿ ತನ್ನ ಕೃತಿಯನ್ನು ತಾನೇ ಶೋಧಿಸಿಕೊಂಡ ಈತ ವಿಕ್ರಮೋರ್ವಶೀಯದಲ್ಲಿ "ನೋಳ್ಪುದವಹಿತಮನದೊಳಿಂದೀ ಕಾಳಿದಾಸನ ಕೃತಿಯನು" ಎಂದು ಸಭಿಕರಲ್ಲಿ ಶಿರಬಾಗಿ ವಿಜ್ಞಾಪಿಸಿಕೊಳ್ಳುತ್ತಾನೆ. ಪುರೂರವನು ಹೆದರಿ ಮುಚ್ಚಿದ ನೀಳ ಕಂಗಳನ್ನ ಅರಳಿಸುವಂತೆ ಊರ್ವಶಿಗೆ ಹೇಳುತ್ತಾನೆ. ಕವಿ ತನ್ನ ಪ್ರತಿಭಾ–ಸುಂದರಿಯನ್ನು ಕಣ್ತೆರೆದು ನೋಡಲು ವಿನಂತಿಸುತ್ತಾನೆ. ಹೀಗೆ ವಿಕ್ರಮೋರ್ವಶೀಯದಲ್ಲಿ ಕವಿ ಕಮಲದ ಎಸಳುಗಳಂತೆ ಮೆಲ್ಲಮೆಲ್ಲಗೆ ಅರಳುತ್ತಾನೆ. ಊರ್ವಶಿಯ ಬೆಡಗಿಗೆ ಮರುಳಾಗಿ ಚಂದ್ರನನ್ನೂ, ವಸಂತನನ್ನೂ, ಮನ್ಮಥನನ್ನೂ ಕೊಂಡಾಡುತ್ತಾನೆ. ವೇದಾಭ್ಯಾಸದಿಂದ ಜಡನಾದ ಬ್ರಹ್ಮನನ್ನೂ ಶಂಕಿಸುತ್ತಾನೆ. ವೇದಾಭ್ಯಾಸದಿಂದ ಜಡನಾದವನು ಇಹದ ಬದುಕಿಗೆ ತೆರೆದುಕೊಳ್ಳುವದಿಲ್ಲ ಎಂಬುದು ಆತನ ಕೊರಗು.

ಕಾನನದಲ್ಲಿ ತನ್ನ ಪ್ರಿಯತಮೆಯನ್ನು ಹುಡುಕುತ್ತ ನವಿಲುಗಳನ್ನೂ, ಹಂಸಗಳನ್ನೂ, ಚಕ್ರವಾಕವನ್ನೂ, ದುಂಬಿಯನ್ನೂ, ನೀಪವೃಕ್ಷದ ಕೊಂಬೆಯ ಮೇಲೆ ಸೊಂಡಿಲನ್ನಿಟ್ಟುಕೊಂಡು ಹೆಣ್ಣಾನೆಯ ಜೊತೆ ನಿಂತಿರುವ ಗಜರಾಜನನ್ನೂ, ಪರ್ವತರಾಜನನ್ನೂ, ನದಿಯನ್ನೂ, ಸಾರಂಗವನ್ನೂ ವಿಚಾರಿಸುವ ಪುರೂರವನಂತೆ ಕಾಳಿದಾಸನೂ ಎಲ್ಲೆಡೆ ಕವಿತಾಕಾಮಿನಿಯನ್ನರಸುತ್ತಾನೆ. ಆದರೆ ಕಾಳಿದಾಸನ ಕಣ್ಣಿಗೆ ಕವಿತಾಕಾಮಿನಿ ಬರೆದು ಅಳಿಸಿ ಬರೆದು ಸರಿವ ಬೆಳ್ಳಕ್ಕಿಯ ಗೆರೆಯಂತಾಗುತ್ತಾಳೆ. ಸಿಕ್ಕಿದಂತೆ ಸಿಕ್ಕದಂತೆ ಜಿಗಿಯುವ ಜಿಂಕೆಯಂತಾಗುತ್ತಾಳೆ. ಆಗ ಕಾಳಿದಾಸ ವ್ಯೆಯನ್ನು ಕೆರಳಿಸಿ ಕೊರಗಿಸಿ ಒಳಗಿನ ಕಣ್ಣನ್ನು ತೆರೆಸುವ, ತನ್ನೊಳಗಿನ ಪದರ ಪದರಗಳನ್ನು ಸೀಳಿ ಎದ್ದು ಬರುವ ಕವಿತಾಕಾಮಿನಿಗಾಗಿ ಹಂಬಲಿಸುತ್ತಾ ದಾರಿ ಕಾಯುತ್ತಾನೆ. ಆ ಬೆಡಗಿ 'ಮೇಘದೂತ'ನನ್ನು ಕಾಳಿದಾಸನ ಬಳಿ ಕಳಿಸುತ್ತಾಳೆ.

ಮೇಘದೂತದ ಕವಿ ಪರಮ ವಿರಹಿ. ಋತುಸಂಹಾರ ನೂತನ ಪ್ರಣಯಿಗಳ ಪ್ರೇಮಪಂಚಾಂಗವಾದರೆ ಮೇಘದೂತ ವಿರಹಿಗಳ ಭಗವದ್ಗೀತೆ. ಅದು ಆಷಾಢದ ಮೊದಲ ದಿನವಾಗಿತ್ತು. ಒಂದೇ ಸಮನೆ ಮಳೆ ಸುರಿಯುತ್ತಿತ್ತು. ಗುಡ್ಡದ ಇಳಿಜಾರುಗಳು ತೊಯ್ದು ಹೋಗಿದ್ದವು. ಕಾಳಿದಾಸ ಗುಡ್ಡವನ್ನಾಲಂಗಿಸಿದ ಮೋಡವನ್ನು ಕಂಡ; ಯಕ್ಷನಾದ; ಅವನ ವಿರಹ–ವ್ಯಥೆ ಕಟ್ಟೆಯೊಡೆಯಿತು. ಅಗಲಿದ ಪ್ರೇಯಸಿಯನ್ನು ನೆನೆನೆನೆದು ಅವನು ಕಣ್ಣೀರು ಹರಿಸಿದ. ಚಲಿಸುತ್ತಿರುವ ಮೋಡವನ್ನು ಕಾಡುಹೂಗಳಿಂದ ಸ್ವಾಗತಿಸಿ ತನ್ನ ಸಂದೇಶವನ್ನು ಪ್ರೇಯಸಿಗೆ ತಲುಪಿಸೆಂದು ಪ್ರಾರ್ಥಿಸಿದ. ತರುವಾಯ ಯಕ್ಷ ರಾಮಗಿರಿಯಿಂದ ಅಲಕಾಪುರಿಯವರೆಗೆ ಸಿಗುವ ದರ್ಶನೀಯ ಸ್ಥಳಗಳನ್ನು ಬಣ್ಣಿಸುತ್ತಾನೆ. ಇಲ್ಲಿ ಕವಿಯೇ ಯಕ್ಷನಾಗಿ ತನ್ನ ನೆಲವನ್ನೂ ಆ ನೆಲದೊಂದಿಗೆ ತನ್ನನ್ನು ಜೋಡಿಸಿದ ಎಲೆಗಳನ್ನು ಗುರುತಿಸುತ್ತಾನೆ.

ಉತ್ತರ ಮೇಘದಲ್ಲಿ ಕಾಳಿದಾಸನೇ ಯಕ್ಷನಾಗಿ ಅಲಕಾಪುರಿಯನ್ನು ವರ್ಣಿಸುತ್ತಾನೆ. ಅಲ್ಲಿ ದುಃಖವನ್ನು ಕಂಡರಿಯದ ಯಕ್ಷರು, ಪ್ರಣಯಕೋಪವನ್ನಲ್ಲದೆ ಬೇರೆ ಕೋಪವನ್ನರಿಯದ ನಾರಿಯರು ವಾಸಿಸುತ್ತಾರೆ. ಕಟ್ಟಕಡೆಗೆ ಆತ ಉಪಕಾರಿಯಾದ ಮೇಘನಿಗೂ ತನ್ನ ಪ್ರಿಯತಮೆಯಿಂದ ವಿಯೋಗವಾಗದಿರಲಿ ಎಂದು ಹಾರೈಸುತ್ತಾನೆ. ಹೀಗೆ ಮೇಘದೂತ ಯಕ್ಷ-ಯಕ್ಷಿಯರ ಪ್ರೀತಿ-ವಿರಹಗಳ ಕಥೆಯನ್ನು ಸಮಕಾಲೀನ ಭಾರತವಾಸ್ತವದ ವಿಶಿಷ್ಟ ಶಯ್ಯೆಯಲ್ಲಿಟ್ಟು ಆ ಮೂಲಕ ತನ್ನ ಅನುಭವಗಳ ಅಗೋಚರ ಆಳಗಳನ್ನು ತಡಕಿಕೊಳ್ಳುವ ಹೊಸ ಪ್ರಯೋಗ ಮೇಘದೂತದ ನಾಯಕ 'ಕಶ್ಚಿದ್ ಯಕ್ಷ' ಹೆಸರಿಲ್ಲದವ. ಅವನು ಅವತಾರವಲ್ಲ; ಹೀಗೆ ಮೇಘದೂತ ಒಬ್ಬ ಶ್ರೀಸಾಮಾನ್ಯನ ನೋವನ್ನು ಸಾಧಾರಣೀಕರಿಸಿ ವಿಜೃಂಭಿಸುವ ಕಾವ್ಯೋತ್ಸವ.

ಮೇಘದೂತದ ಕವಿ ಮನೆಮಾತಾದ. ಬಹಳಷ್ಟು ಬರೆದಿದ್ದರೂ ಆತ ಬಹು ದೊಡ್ಡ ವ್ಯರ್ಥತೆಯನ್ನು ಅನುಭವಿಸಿದ. ಎಲ್ಲ ಕೃತಿಗಳಲ್ಲಿಯೂ ತನ್ನ ಬದುಕಿನ ಇತಿಹಾಸವೇ ಪುನರಾವರ್ತನೆಗೊಂಡ ಹಾಗೆ ಅವನಿಗೆ ಅನಿಸಿತು. ಆತ ವಿಶಾಲವಾದ ಬದುಕಿನಲ್ಲಿ ಕರಗಿಹೋಗಿದ್ದ. ತನ್ನ ನಿಜವಾದ ನೆಲದಿಂದ ದೂರವಾಗಿ ಹೊಸ ನೆಲವನ್ನು ಸೇರಿದ್ದ. ಆತ ಎಲ್ಲಿಗೆ ಹೋದರೂ ಒಂದು ಸುಂದರವಾದ ಪುಟ್ಟ ರೇಖೆಯೂ

ಅವನ ಮನಸ್ಸನ್ನೂ ಆವರಿಸುತ್ತಿತ್ತು. ಆತ ಹಿಂದಿರುಗಿ ನೋಡಿದಾಗ ಪ್ರಣಯಿಗಳ ಕಾವ್ಯ ಋತುಸಂಹಾರ ಸಪ್ಪೆಯಾಗಿ ಕಂಡಿತು. ಮಾಲವಿಕಾಗ್ನಿಮಿತ್ರ ಇನ್ನೂ ಹಸಿ ಹಸಿಯಾಗಿ ಕಂಡಿತು. ಕುಮಾರಸಂಭವ ಶೃಂಗಾರಿಯ ಆವೇಗದ ಸೃಷ್ಟಿಯೆನಿಸಿತು. ವಿಕ್ರಮೋರ್ವಶೀಯದ ಪ್ರಣಯೋನ್ಮಾದ ಅವನ ಮೈನವಿರೇಳಿಸಲಿಲ್ಲ. ಕೇಶಿದೈತ್ಯ-ನಿಂದ ಊರ್ವಶಿಯನ್ನು ಬಿಡಿಸಿ ತಂದ ಪುರೂರವನಿಂದ ರಥದ ಹೊಯ್ದಾಟದಲ್ಲಿ ಉರ್ವಶಿಯ ಭುಜಕ್ಕೆ ತಿಕ್ಕುತ್ತಿದ್ದ ಈ ಭುಜವೊಂದೇ ನನ್ನ ಮೈಯಲ್ಲಿ ಧನ್ಯ; ಉಳಿದು ದೆಲ್ಲ ಭೂಮಿಗೆ ಭಾರ" ಎಂದು ಹೇಳಿಸಿದ್ದು ನೆನಪಾದಾಗ ಬೆಚ್ಚನೆಯ ಸುಖ ಸಿಗಲಿಲ್ಲ. ಇತ್ತೀಚಿಗೆ ತಾನು ರಚಿಸಿದ ಮೇಘದೂತ ಏಕಾಂತ-ಮಧುರವೆನಿಸಿದರೂ ಬದುಕಿನ ಹರಹಿನ ಮುಂದೆ ಅದು ಅಪ್ರಕೃತವೆನಿಸಿತು. ಅರ್ಥವಾಗದೊಂದು ಕಳವಳ ಹುಟ್ಟಿ ಕೊಂಡು ಅವನಿಗೆ ಏನೂ ಬೇಕೆನಿಸಲಿಲ್ಲ. ತಾನು ಬಹಳಷ್ಟು ಬರೆದಿದ್ದರೂ ಯಾಕೋ ಎಂದೂ ಕಾಡಿರದಿದ್ದ ಅಪೂರ್ಣತೆ ಅವನನ್ನು ಕಾಡಲಾರಂಭಿಸಿತು. ಏನೇ ಆಗಲಿ, ಬದುಕಿನ ಹರಹನ್ನೂ ತನ್ನ ಕಾಣ್ಕೆಯನ್ನೂ ಭಟ್ಟಿ ಇಳಿಸಿ ಇಡೀ ಮನುಕುಲಕ್ಕೆ ಸ್ಪಂದಿಸುವಂತಹ ಕಾವ್ಯವೊಂದನ್ನು ಬರೆಯಬೇಕು ಎಂದು ಆತ ಸಂಕಲ್ಪ ಮಾಡಿದ.

ಕಾಳಿದಾಸನಿಗೆ ತಾನಿನ್ನೂ ತನ್ನ ಬದುಕಿನ ಶ್ರೇಷ್ಠ ಕಾವ್ಯವನ್ನು ಬರೆದಿಲ್ಲವೆನ್ನು ವುದು ಖಾತ್ರಿಯಾಗಿತ್ತು. ತನ್ನ ಶ್ರೇಷ್ಠ ಕಾವ್ಯವನ್ನು ಈ ನೆಲದ ಏಕೈಕ ರಾಷ್ಟ್ರ ಕಾವ್ಯವನ್ನಾಗಿಸುವ ತುಡಿತ ಅವನದಾಗಿತ್ತು. ಶಬ್ದಗಳಲ್ಲಿ ಅರ್ಥವನ್ನು ತುಂಬಿತುಂಬಿ ಅವನು ಸೋತಿದ್ದ. ಅರ್ಥವನ್ನು ಓದುಗನ ಮನಸ್ಸಿಗಿಳಿಸುವ ಸಾಧನವನ್ನು ಅವನು ಅರಸುತ್ತಿದ್ದ. ತಾನು ಈ ತನಕ ಬರೆದದ್ದನ್ನೆಲ್ಲ ಬದಿಗಿಟ್ಟು ಬೇರ್ಪಟ್ಟು ದೂರ ಸರಿದ. ಸಹೃದಯರನ್ನು ಗಾಢವಾಗಿ ಕಲಕುವ, ಮನಸ್ಸಿಗೆ ಗುಂಗುಹಿಡಿಸುವ ಕಾವ್ಯ ಹುಟ್ಟು ವುದು ವಾಗರ್ಥಗಳ ಸಂಪೃಕ್ತಿಯಿಂದ. ಕಾಳಿದಾಸ ವಾಗರ್ಥಪ್ರತಿಪತ್ತಿಯನ್ನೇ ಶಿವ ಪಾರ್ವತಿಯರಿಂದ ಬೇಡಿದ. ತನ್ನನ್ನು ಮಂದಮತಿಯೆಂದೂ ತಾನು ಈ ತನಕ ಕವಿಯೇ ಆಗಿಲ್ಲವೆಂದೂ ಕವಿಯಶಃಪ್ರಾರ್ಥಿಯೆಂದೂ ಘೋಷಿಸಿದ. 'ರಘುವಂಶ' ವೆಂಬ ಮಹಾಕಾವ್ಯ ಬರೆದು ರಘುಕಾರನೆನ್ನಿಸಿಕೊಂಡ! 'ದೀಪಶಿಖಾಕಾಳಿದಾಸ' ಎಂದೂ ಅವನ ಉಪಮೆಗೆ ಮನಸೋತವರು ಕೊಂಡಾಡಿದರು.

ಕಾಳಿದಾಸನ ರಘುವಂಶ ಒಂದು ಸುಸಜ್ಜಿತ ಚಿತ್ರಶಾಲೆ. ಈ ಚಿತ್ರಶಾಲೆಯನ್ನು ಪ್ರವೇಶಿಸುತ್ತಲೇ ವೈವಸ್ವತಮನು ಕುಳಿತಿದ್ದು ಕಾಣುತ್ತೇವೆ. ವೈವಸ್ವತ ಮನು ಮಾನವೇತಿಹಾಸದ ಆದಿಪುರುಷ, ಮನೀಷಿಗಳಿಗೂ ವಂದ್ಯ; ವೇದಗಳ ಓಂಕಾರದ ಹಾಗೆ ಅವನ ಇರವು. ಅನಂತರ ನಾವು ದಿಲೀಪನ ಚಿತ್ರವನ್ನು ಕಾಣುತ್ತೇವೆ. ದಿಲೀಪ ಸೇವಾಪ್ರತಿ. ನಂದಿನಿಯೆಂಬ ಗೋವನ್ನು ರಕ್ಷಿಸಲು ತನ್ನ ಸಾಮ್ರಾಜ್ಯವನ್ನೂ, ನವ ಯೌವನವನ್ನೂ ಸುಂದರವಾದ ಶರೀರವನ್ನೂ ಲೆಕ್ಕಿಸದ ಎಲ್ಲವನ್ನೂ ಧಿಕ್ಕರಿಸುವ ಧೀರ. ಬಳಿಕ ನಾವು ಮಹಾದಾನಿ ರಘುವನ್ನು ಕಾಣುತ್ತೇವೆ. ದಿಲೀಪನ ಮಗ ರಘು ನಂದಿನಿಯ ವರಪ್ರಸಾದದಿಂದ ಜನಿಸಿದವ. ಅನಂತರ ನಾವು ಅಜ, ದಶರಥ, ರಾಮ, ಲಕ್ಷ್ಮಣ, ಭರತ, ಶತ್ರುಘ್ನ, ವಾಲ್ಮೀಕಿ, ಲವ, ಕುಶ, ಅತಿಥಿ, ನಿಷಧ, ನಲ, ನಭ, ಪುಂಡರೀಕ, ಕ್ಷೇಮಧನ್ವಾ, ದೇವಾನೀಕ, ಅಹೀನಗ, ಪಾರಿಯಾತ್ರ, ಶಿಲ, ಉನ್ನಾಭ,

ವಜ್ರನಾಭ, ಶಂಖಣ, ವ್ಯುಷಿತಾಶ್ವ, ವಿಶ್ವಸಹ, ಹಿರಣ್ಯನಾಭ, ಕೌಶಲ್ಯ, ಬ್ರಹ್ಮಿಷ್ಠ, ಪುತ್ರ, ಪುಷ್ಯ, ಧ್ರುವಸಂಧಿ, ಸುದರ್ಶನ–ಹೀಗೆ ರಘುವಂಶ (ಅಥವಾ ಸೂರ್ಯ ವಂಶ)ದ ರಾಜರ ಚಿತ್ರಗಳನ್ನು ಒಂದೊಂದಾಗಿ ನೋಡುತ್ತೇವೆ. ಈ ಚಿತ್ರಶಾಲೆಯ ನಿರ್ಗಮನ–ದ್ವಾರದಲ್ಲಿ ಚಿತ್ರಕಾರ ಕಾಳಿದಾಸ ಅಗ್ನಿವರ್ಣನ ಚಿತ್ರವನ್ನು ತೂಗುಹಾಕಿದ್ದಾನೆ. ಕಾಮುಕ ಅಗ್ನಿವರ್ಣನ ನಿರ್ಲಜ್ಜತೆಯ ಮುಂದೆ ತಲೆ ತಗ್ಗಿಸಿಕೊಂಡು ಚಿತ್ರಶಾಲೆಯಿಂದ ಹೊರಬೀಳುತ್ತೇವೆ.

ಕಾಳಿದಾಸನ ರಘುವಂಶ ಪುರುಷಾರ್ಥಗಳ ಚೌಕಟ್ಟಿನಲ್ಲಿ ಹಿಡಿದಿಟ್ಟ ಕೃತಿ. ದಿಲೀಪ ಧರ್ಮಕ್ಕೆ ಅವಿರುದ್ಧವಾದ ಕಾಮದ ಸಂಕೇತವಾದರೆ ರಘು ಧರ್ಮವಿರುದ್ಧ ಅರ್ಥದ ಸಂಕೇತ. ಅಜ ಧರ್ಮವಿರುದ್ಧ ಪ್ರೇಮದ ಸಂಕೇತವಾದರೆ ರಾಮ ಮೋಕ್ಷ ಸ್ವರೂಪ. ಪ್ರಜಾಹಿತ ವಿರೋಧಿಯಾದ ಅಗ್ನಿವರ್ಣ ಧರ್ಮವಿರುದ್ಧ ಕಾಮದ ಸಂಕೇತ ವಾಗುತ್ತಾನೆ. ಹೀಗೆ ಬದುಕಿನ ರಹಸ್ಯವನ್ನೇ ತನ್ನ ಒಡಲಲ್ಲಿ ಹಿಡಿದಿಟ್ಟ ಈ ಕೃತಿ ಎಂದೆಂದಿಗೂ ಅಪ್ರಸ್ತುತವಾಗದ ಕಾವ್ಯ.

ರಘುವಂಶದಲ್ಲಿ ಮನುಕುಲದ ಸಾಂಸ್ಕೃತಿಕ ಇತಿಹಾಸವನ್ನು ಕವಿ ಬರೆದಿದ್ದಾನೆ. ಸೇವೆ, ದಾನ, ಯಜ್ಞ, ಪ್ರೇಮ, ಶೀಲಗಳೇ ಈ ನೆಲದ ಮೌಲ್ಯಗಳು. ರಘುವಂಶದಲ್ಲಿ ದಿಲೀಪನ ಸೇವೆ, ರಘುವಿನ ಯಜ್ಞ ಮತ್ತು ದಾನ, ಅಜನ ಅಮರ ಪ್ರೇಮ, ರಾಮನ ಶೀಲ–ಸೌಂದರ್ಯ ಚಿತ್ರಿಸಲ್ಪಟ್ಟಿದೆ. ಕೊನೆಯಲ್ಲಿ ಕಾಮುಕ ಅಗ್ನಿವರ್ಣನ ಶೃಂಗಾರ–ಲೀಲೆಯೂ (ಧರ್ಮವಿರುದ್ಧ ಕಾಮ) ವರ್ಣಿಸಲ್ಪಟ್ಟಿದೆ. ಕಾಳಿದಾಸ ರಘುವಿನ ದಿಗ್ವಿಜಯ ಮತ್ತು ದಾನಶೌಂಡೀರ್ಯವನ್ನು ತನ್ನ ಪ್ರತಿಭಾ–ಕುಂಚದಿಂದ ಬರೆದಿದ್ದಾನೆ. ತನ್ನ ಸರ್ವಸ್ವವನ್ನೂ ದಾನಮಾಡಿ ಮಣ್ಣಿನ ಪಾತ್ರೆಯೊಂದನ್ನು ತನ್ನ ಬಳಿ ಉಳಿಸಿಕೊಂಡಿರುವ ರಘು ಭಾರತೀಯ ಸಂಸ್ಕೃತಿಯ ಹೆಗ್ಗುರುತಾದ ಯಜ್ಞ-ದಾನ, ತ್ಯಾಗಗಳ ಪರಾಕಾಷ್ಠೆಯನ್ನು ಮುಟ್ಟುತ್ತಾನೆ. ಕಟ್ಟಕಡೆಗೆ ರಘುವು ತನ್ನ ಮಗನಾದ ಅಜನಿಗೆ ಪಟ್ಟಕಟ್ಟಿ ತಾನು ಕಾಡಿಗೆ ಹೋಗಿ ಯೋಗನಿರತನಾಗುತ್ತಾನೆ. ಅಜನನ್ನು ಸ್ವಯಂವರದಲ್ಲಿ ಇಂದುಮತಿ ವರಿಸುತ್ತಾಳೆ.

ಕಾಳಿದಾಸನು ಚಿತ್ರಿಸಿದ ಇಂದುಮತೀ–ಸ್ವಯಂವರ ಒಂದು ಸುಂದರವಾದ ಚಿತ್ರದ ಹಾಗೆ ನಮ್ಮ ಕಣ್ಣುಗಳಲ್ಲಿ ತುಂಬಿಕೊಳ್ಳುತ್ತದೆ. ರನಿಂಗ್ ಕಾಮೆಂಟರಿಯ ಹಾಗೆ ನಮ್ಮ ಕರ್ಣ–ಕುಹರವನ್ನು ಪ್ರವೇಶಿಸುತ್ತದೆ. ಸ್ವಯಂವರ-ಶಾಲೆಯನ್ನು ಪ್ರವೇಶಿಸಿದ ಕೂಡಲೇ ರಾಜರು ಮಾಡುವ ಶೃಂಗಾರ–ಚೇಷ್ಟೆಗಳನ್ನು ವರ್ಣಿಸುವಾಗ ಕಾಳಿದಾಸನ ಕಾರಯಿತ್ರೀ ಪ್ರತಿಭೆ ಗರಿಗೆದರಿ ನರ್ತಿಸುತ್ತದೆ. ಆಗ ಕಾಳಿದಾಸನ ಪದ ಬಂಧವು ನಳನಳಿಸುವ, ಮುಟ್ಟಿದರೆ ಮಾಸುವ, ಎಳೆಗಾಳಿ ಸೋಕಿದರೆ ನಡುಗುವ ಮಲ್ಲಿಗೆಯ ಮಲರು.

ಸ್ವಯಂವರದಲ್ಲಿ ಇಂದುಮತಿಯನ್ನು ಪಡೆದ ಬಳಿಕ ಅಜ ಉಳಿದೆಲ್ಲ ರಾಜರನ್ನೂ ಏಕಾಕಿಯಾಗಿ ಎದುರಿಸಿ ಸದೆಬಡಿಯುತ್ತಾನೆ. ತರುವಾಯ ಒಂದು ದಿನ ಅಜನು ಇಂದುಮತಿಯೊಂದಿಗೆ ಪುರೋದ್ಯಾನದಲ್ಲಿ ಕುಳಿತಿದ್ದಾಗ ಗಗನದಲ್ಲಿ ಸಂಚರಿಸುತ್ತಿದ್ದ ದೇವರ್ಷಿ ನಾರದರ ವೀಣೆಯಿಂದ ಜಾರಿದ ಪುಷ್ಪಮಾಲೆ ಇಂದುಮತಿಯ

ಎದೆಯ ಮೇಲೆ ಬಂದು ಬೀಳುತ್ತದೆ. ಕೂಡಲೇ ಇಂದುಮತಿ ಸಾವನ್ನಪ್ಪುತ್ತಾಳೆ. ಆಗ ಅಜ ವಿಲಪಿಸುತ್ತಾನೆ. ಅಜವಿಲಾಪ ಸಂಸ್ಕೃತವಾಙ್ಮಯದ ಉಜ್ವಲ ನೀಲಮಣಿ. ಅಜವಿಲಾಪದ ಪ್ರಸಂಗದಲ್ಲಿ ಅಕೃತ್ರಿಮ ಪ್ರೇಮ ಕರುಣೆಯ ಹೊನಲಾಗಿ ಹರಿದ ಬಗೆಯನ್ನು ಕವಿ ಚಿತ್ರಿಸಿದ್ದಾನೆ. ಸೂರ್ಯವಂಶವು ಮರ್ಯಾದಾಪುರುಷೋತ್ತಮ ಶ್ರೀರಾಮನಲ್ಲಿ ಪರಾಕಾಷ್ಠೆಯನ್ನು ತಲುಪುತ್ತದೆ. ಆದರೆ ಕಾಮುಕ ಅಗ್ನಿವರ್ಣನಿಂದ ಸೂರ್ಯವಂಶದ ಅಧಃಪತನವಾಗುತ್ತದೆ. ಅಗ್ನಿವರ್ಣ ನಿತ್ಯಭೋಗಿ, ಕಾಮುಕ, ಸ್ತ್ರೀಲೋಲ, ಉತ್ಸವಪ್ರಿಯ. ಪ್ರಜೆಗಳು ಸಂದರ್ಶನಕ್ಕೆ ಬಂದರೆ ಮಂತ್ರಿಗಳ ಒತ್ತಾಯಕ್ಕೆ ಮಣಿದು ಕೊನೆಯ ಕಿಟಕಿಯಿಂದ ತನ್ನ ಕಾಲನ್ನು ಹೊರಗೆ ಹಾಕಿ ಅಗ್ನಿವರ್ಣ ಪ್ರಜೆಗಳಿಗೆ ತೋರಿಸುತ್ತಿದ್ದ. ಅವನು ಪ್ರಜೆಗಳಿಗೆ ಎಂದೆಂದಿಗೂ ಮುಖ ತೋರಿಸುತ್ತಿರಲಿಲ್ಲ. ವಿಲಾಸಿನಿಯರ ಮೇಲೆ ಕೇಂದ್ರೀಕೃತವಾದ ಕಣ್ಣುಗಳನ್ನು ಆತ ಅಲ್ಲಿಂದ ಎಂದೂ ಕೀಳಲು ಬಯಸುತ್ತಿರಲಿಲ್ಲ. ಅಂತೂ ಸ್ತ್ರೀಲೋಲ ಅಗ್ನಿವರ್ಣನ ರಾಗ ರೋಗವಾಗಿ ಆತ ಕ್ಷಯರೋಗಕ್ಕೆ ತುತ್ತಾದ. ಕೃಶನಾದ. ವೈದ್ಯರ ದಂಡು ಬಂದು ಚಿಕಿತ್ಸೆ ಮಾಡಿದರೂ ಅವನ ರೋಗ ದೂರವಾಗಲಿಲ್ಲ. ರೋಗದಿಂದ ದುರ್ಬಲನಾದ ಅಗ್ನಿವರ್ಣ ಆಭರಣಗಳನ್ನೂ ತೊಡುತ್ತಿರಲಿಲ್ಲ. ಪ್ರಜೆಗಳು ಅನುರಾಗದಿಂದ ರಾಜನ ಯೋಗಕ್ಷೇಮವನ್ನು ವಿಚಾರಿಸಿದಾಗ ಮಂತ್ರಿಗಳು "ಮಹಾರಾಜರು ಸಂತಾನೋತ್ಪತ್ತಿಗಾಗಿ ವ್ರತ ಕೈಕೊಂಡಿದ್ದಾರೆಂದೂ ಆದ್ದರಿಂದ ಕೃಶವಾಗಿದ್ದಾರೆಂದೂ" ಪ್ರಜೆಗಳನ್ನು ಸಂತೈಸಿದರು. ಹೀಗೆ ಅಗ್ನಿವರ್ಣನ ಆಡಳಿತದಲ್ಲಿ ಸುಳ್ಳಿನ ನಾಂದಿಯಾಯಿತು. ಕಟ್ಟಕಡೆಗೆ ಅಗ್ನಿವರ್ಣ ಅಸು ನೀಗಿದಾಗ ಮಂತ್ರಿಗಳು ರಾಜಭವನದ ಉಪವನದಲ್ಲಿ ಪ್ರಜೆಗಳಿಗೆ ತಿಳಿಸದೇ ಶವಸಂಸ್ಕಾರ ನಡೆಸಿದರು. ತರುವಾಯ ಗರ್ಭಿಣಿಯಾದ ಮಹಾರಾಣಿ ಮಂತ್ರಿಗಳ ಸಲಹೆಯ ಮೇರೆಗೆ ಸಿಂಹಾಸನವನ್ನೇರಿದಳು.

ಹೀಗೆ ಸೂರ್ಯವಂಶದ ಆದರ್ಶಗಳು ಅಗ್ನಿವರ್ಣನ ತಲೆಗೆ ಶೂನ್ಯಾವಸ್ಥೆಗೆ ಬಂದಾಗ ಮಂತ್ರಿಗಳ ಬಾಯಿಂದ ಸುಳ್ಳಿನ ನಾಂದಿಯಾದಾಗ ಭಾರತೀಯ ಸಂಸ್ಕೃತಿಯ ರಾಯಭಾರಿ ಕವಿಯಾದ ಕಾಳಿದಾಸ ರಘುವಂಶ ಕಾವ್ಯವನ್ನು ಮುಂದುವರಿಸದೆ ತನ್ನ ಲೇಖನಿಯನ್ನು ಬದಿಗಿಟ್ಟ.

ರಘುಕಾರ ಕಾಳಿದಾಸ ಇತ್ತೀಚೆಗೆ ಏಕಾಂಗಿಯಾದ. ದಿನದಿಂದ ದಿನಕ್ಕೆ ತುಂಡಾಗುತ್ತ ಹೋದ. ತುಂಡು ತುಂಡಾದ ಅವನಿಗೆ ತಾನು ಸಂಪೂರ್ಣವಾಗಿ ಸೋತಿದ್ದೇನೆ ಅನ್ನಿಸಿತು. ಧಾನ್ಯದ ಗದ್ದೆಗಳನ್ನು ರಕ್ಷಿಸುವ ರೈತರ ಸ್ತ್ರೀಯರು ದಟ್ಟವಾಗಿ ಬೆಳೆದ ಕಬ್ಬಿನ ನೆರಳಲ್ಲಿ ವಿಶ್ರಮಿಸುತ್ತ ರಘುಮಹಾರಾಜನ ಬಾಲ್ಯದಿಂದ ಹಿಡಿದು ಆತನಕದ ಯಶೋಗಾನವನ್ನು ಗೀತೆ ಕಟ್ಟಿಕಟ್ಟಿ ಹಾಡುತ್ತಿದ್ದಾಗ ಪ್ರಜಾನುರಾಗಕ್ಕೆ ತಕ್ಕವನಾದ ರಘುವಿನ ಬಗ್ಗೆ ಅವನ ಮುಖದ ಮೇಲೆ ಅಭಿಮಾನದ ಗೆರೆ ಮೂಡಿತ್ತು. ಕುಬೇರನು ಸುರಿಸಿದ ಹೊನ್ನಿನ ರಾಶಿಯನ್ನು ಕೌತ್ಸನಿಗೆ ಪೂರ್ತಿಯಾಗಿ ದಾನಮಾಡುವ ರಘು ಮತ್ತು ತನ್ನ ಅಗತ್ಯಕ್ಕಿಂತಲೂ ಒಂದು ಕೌಡಿಯೂ ಹೆಚ್ಚಿಗೆ ಬೇಡವೆನ್ನುವ ಕೌತ್ಸನ ಪ್ರಸಂಗವನ್ನು ಕಡೆದು ನಿಲ್ಲಿಸಿದಾಗ ತನ್ನ ನಾಡಿನ ಬಗ್ಗೆ ಕಾಳಿದಾಸನ ಪ್ರೀತಿ

ಇವ್ಮೃಡಿಯಾಗಿತ್ತು. ಆದರೆ ಮರ್ಯಾದಾಪುರುಷೋತ್ತಮ ರಾಮನ ಕಾಲಕ್ಕೆ ಬಂದಾಗ ಅರಸನನ್ನು ಕುರಿತು ಪ್ರಜಾನುರಾಗ ಇಳಿಮುಖವಾಗಿತ್ತು. ರಾಕ್ಷಸ-ಭವನ ದಿಂದ ಜಾನಕಿಯನ್ನು ಕರೆತಂದ ಕಾರ್ಯದ ಬಗ್ಗೆ ಮೌನ ವಹಿಸಿ ಇನ್ನೆಲ್ಲ ಚರಿತೆ ಯನು ಜನ ಪೊಗಳಿದಾಗ ರಾಮ ಸೀತಾ-ಪರಿತ್ಯಾಗದ ಏಕಪಕ್ಷೀಯ ನಿರ್ಧಾರ ಕೈ ಗೊಂಡ. ಆಗ ಜಾನಕಿಯ ಸಂದೇಶವನ್ನೂ, ರಾಮ ಹೃದಯದ ವೇದನೆಯ ಇತಿ ಹಾಸವನ್ನೂ ಸೃಜಿಸಿದ ಕಾಳಿದಾಸನ ಲೇಖನಿ ಬಾನೆತ್ತರದಲ್ಲಿ ವಿಜೃಂಭಿಸಿತು.

ಆದರೆ ರಘುವಂಶದ ಅನ್ವಯಖಂಡಕ್ಕೆ ಬಂದಾಗ ರಾಮಲಕ್ಷ್ಮಣ ಭರತ ಶತ್ರು ಘ್ನರ ಏಳು ಜನ ಮಕ್ಕಳು ಸರ್ವಸಮ್ಮತಿಯಿಂದ ಜ್ಯೇಷ್ಠನಾದ ಕುಶನನ್ನು ರಾಜ ನನ್ನಾಗಿ ಆಯ್ಕೆ ಮಾಡಿದಾಗ ವ್ಯಕ್ತಿ ಮರೆಯಾಗಿ ಘಟನೆಗೆ ಮಹತ್ವ ಬಂದಂತಾಗು ತ್ತದೆ. ಪ್ರಭುತ್ವ ಹೋಗಿ ಪರಿಸ್ಥಿತಿಯ ಕೈ ಮೇಲಾದಂತಾಗುತ್ತದೆ. ಭಾರತೀಯ ರಾಜ ಕೀಯದ ಇತಿಹಾಸದಲ್ಲಿ ಆಯ್ಕೆಯ ಪದ್ಧತಿ ಶುರುವಾದಂತಾಗುತ್ತದೆ. ಜ್ಯೇಷ್ಠನಾದ ಕುಶ ಪಟ್ಟವೇರುವುದು ಕುಲೋಚಿತವಾದರೂ ಅದು ಸರ್ವಸಮ್ಮತಿಯ ಆಯ್ಕೆಯಾಗಿ ತ್ತೆಂದು ಕಾಳಿದಾಸ ಉಲ್ಲೇಖಿಸುತ್ತಾನೆ. ಅಂದರೆ ಜ್ಯೇಷ್ಠನಾದ ಕುಶ ಪರಾಕ್ರಮಿಯೂ ಸುಸಮರ್ಥನೂ ಆಗಿರದಿದ್ದರೆ ಅವನ ಆಯ್ಕೆ ಸರ್ವಸಮ್ಮತಿಯಿಂದ ಆಗುತ್ತಿರಲಿಲ್ಲ ವೇನೋ. ಅಂತೂ ತನ್ನ ನಾಡಿನ ರಾಜಕೀಯದ ಈ ನಾಟಕೀಯ ತಿರುವು ಕಾಳಿ ದಾಸನ ಹೃದಯವನ್ನು ಹಿಂಡಿತು.

ಕಟ್ಟಕಡೆಗೆ ಕಾಮಿನಿಯರ ಮೇಲೆ ನೆಟ್ಟ ತನ್ನ ಕಣ್ಣುಗಳನ್ನು ಅಲ್ಲಿಂದ ಕೀಳದೇ ಪ್ರಜಾಹಿತವನ್ನು ಮರೆತ ವಿಲಾಸಿ ಅಗ್ನಿವರ್ಣ ಕಾಳಿದಾಸನ ನೋವನ್ನೂ ಹೆಚ್ಚಿಸಿದ. ಪ್ರಜೆಗಳಿಗೆ ಮುಖ ತೋರಿಸದೆ, ತನ್ನ ಕೊನೆಯ ಕಿಟಕಿಯಿಂದ ಕಾಲನ್ನು ಹೊರಹಾಕಿ ತೋರಿಸುತ್ತಿದ್ದ ಜನವಿರೋಧಿ ಅಗ್ನಿವರ್ಣ, ಅವನ ಭೀಕರ ರೋಗವನ್ನು ಮರೆ ಮಾಚಿ ಅವನನ್ನು ರಕ್ಷಿಸಲು ಪ್ರಜೆಗಳ ಮುಂದೆ ಸುಳ್ಳು ಹೇಳಿದ ಮಂತ್ರಿಗಳು—ಈ ಎಲ್ಲ ಚಿತ್ರ ನೆನಪಾಗಿ ಕಾಳಿದಾಸ ಬದುಕಿನ ಬಹುದೊಡ್ಡ ವ್ಯರ್ಥತೆ ಅನುಭವಿಸಿದ. ತನ್ನ ಪ್ರೀತಿಯ ನೆಲದಲ್ಲಿ ಸ್ತ್ರೀಲೋಲ ಅಗ್ನಿವರ್ಣನ ಮಂತ್ರಿಗಳು ಮೊಟ್ಟಮೊದಲು ಸುಳ್ಳಿನ ಇತಿಹಾಸ ಬರೆದಾಗ ಕಾಳಿದಾಸನ ಹೃದಯಕ್ಕೆ ಆಘಾತವಾಗಿತ್ತು. ಅವನ ಬರೆಯುವ ಕೈ ನಡುಗಿತ್ತು. ಆದರ್ಶಲೋಕವನ್ನು ಸೃಜಿಸಿದ ಲೇಖನಿ ಅವನ ಸಡಿಲಾದ ಬೆರಳುಗಳಿಂದ ತಪ್ಪಿ ಧರೆಗುರುಳಿತ್ತು. ರಘುವಂಶದ ಕಥೆ ಹೇಳುತ್ತಿದ್ದಂತೆಯೇ ಕಾಳಿ ದಾಸ ವಯಸ್ಸು ಏರಿ ಮುದುಕನಾದಂತೆ ಕಂಡ. ತಾನು ಪಡೆದದ್ದನ್ನೆಲ್ಲಾ ಕಳ ಕೊಂಡವನ ಹಾಗೆ ಬಿಕ್ಕಿ ಬಿಕ್ಕಿ ಅತ್ತ.

ದೀಪಶಿಖೆಯ ಲಾವಣ್ಯಕ್ಕೆ ಹೋಲುವ ಇಂದುಮತಿಯನ್ನು ಸೃಜಿಸಿದರೂ ರಘು ಕಾರನೆಂದು ಖ್ಯಾತನಾದರೂ ಕಾಳಿದಾಸನಿಗೆ ಸ್ವಾಂತಸುಖ ಲಭಿಸಲಿಲ್ಲ. ರಘುವಂಶ ವನ್ನು ಬರೆಯುವ ಮುನ್ನ ಅವನಿಗೆ ವಾಗರ್ಥಸಂಪೃಕ್ತಿಯ ಹಂಬಲವಿತ್ತು. ಕವಿಯ ಯಶಸ್ಸನ್ನು ಪಡೆಯುವ ಮಹತ್ವಾಕಾಂಕ್ಷೆಯಿತ್ತು. ಸೂರ್ಯವಂಶದ ಆದರ್ಶಗಳು ರಾಜಕೀಯದ ಇಳಿಜಾರಿನಲ್ಲಿ ಜಾರಿಹೋಗಿ ನೆಲಕ್ಕುರುಳಿದಾಗ ಬದುಕನ್ನು ಇಡಿ ಯಾಗಿ ಹುಚ್ಚನಂತೆ ಪ್ರೀತಿಸುವ ಕಾಳಿದಾಸನಿಗೆ ತಾನು ಬರೆದ 'ರಘುವಂಶ' ತುಚ್ಛ

ವಾಗಿ ಕಂಡಿತು. ಆದ್ದರಿಂದ 'ರಘುವಂಶ'ದ ಕೊನೆ ಹೇಗಾಯಿತೋ ಅವನಿಗೇ ಗೊತ್ತಿರಲಿಲ್ಲ.

ಕಾಳಿದಾಸನ ಕೊನೆಯ ದಿನಗಳು ಎಲ್ಲ ಆವೇಗ, ಉದ್ವೇಗಗಳನ್ನೂ ಕಡಿಮೆ ಮಾಡಿದ್ದವು. ಶೈಶವದಲ್ಲಿ ವಿದ್ಯಾಭ್ಯಾಸವನ್ನೂ, ಯೌವನದಲ್ಲಿ ವಿಷಯ-ಭೋಗವನ್ನೂ ಪ್ರತಿಪಾದಿಸಿದ ಕಾಳಿದಾಸನ ಮನಸ್ಸು ಈಗ ಮುನಿವೃತ್ತಿಯ ಕಡೆಗೆ ವಾಲುತ್ತಿತ್ತು. ಎಲ್ಲ ಉದ್ವೇಗ ಇಳಿದ ಮೇಲೆ ಅನುದ್ವಿಗ್ನನಾದ ಕಾಳಿದಾಸ ತನ್ನ ಸರ್ವಸ್ವವನ್ನೂ ಒಂದು ಕೃತಿಯ ಒಡಲಲ್ಲಿ ಹಿಡಿದಿಟ್ಟು ಅದನ್ನು 'ಅಭಿಜ್ಞಾನ ಶಾಕುಂತಲ'ವೆಂದು ಹೆಸರಿಸಿದ. ವಿಶಾಲಭಾರತದ ಏಕಚ್ಛತ್ರಾಧಿಪತಿ ದುಷ್ಯಂತನನ್ನು ಸೌಂದರ್ಯೋಪಾಸಕನನ್ನಾಗಿ ಕಾಳಿದಾಸ ಚಿತ್ರಿಸಿದ. ಶಕುಂತಲೆಯ ಅನುಪಮ ಲಾವಣ್ಯಕ್ಕೆ ಮನಸೋತು "ಕಿಮೀನ ಹಿ ಮಧುರಾಣಾಂ ಮಂಡನಂ ನಾಕೃತೀನಾಂ" ಎನ್ನುವ ದುಷ್ಯಂತನ ಹರ್ಷೋದ್ಗಾರದಲ್ಲಿ ಕಾಳಿದಾಸ ತನ್ನ ಸೌಂದರ್ಯಶಾಸ್ತ್ರವನ್ನು ತುಂಬಿದ. ಇನ್ನೂ ಉಗುರು ನಾಟದ ಚಿಗುರಿನಂತಿರುವ ಕೋಮಲ ಬಾಲೆ ಶಕುಂತಲೆಯನ್ನು ಆಸ್ವಾದಿಸಲ್ಪಡದ ಸಿಹಿಜೇನಿಗೆ ಹೋಲಿಸುತ್ತ ಆಕೆಯ ಭೋಕ್ತೃವನ್ನು ಹಾರ್ದಿಕವಾಗಿ ಅಭಿನಂದಿಸುವ ವಿಧಿವಾದಿ ದುಷ್ಯಂತನ ಉಕ್ತಿಯಲ್ಲಿ ಚೆಲುವಿಗೆ ಒಲಿದರೂ ತನ್ನ ಅನಾಸಕ್ತಿಯನ್ನು ಉಳಿಸಿಕೊಳ್ಳುವ ಹೊಸ ದರ್ಶನವನ್ನು ಕಾಳಿದಾಸ ಪ್ರತಿಪಾದಿಸಿದ.

ಕಾಳಿದಾಸನ ಶಕುಂತಲೆ ಒಂದು ಅನಾಘ್ರಾತ ಕುಸುಮ ; ನಿಸರ್ಗಕನ್ಯೆ. ಕಾಳಿದಾಸ ಪರಿಸರ-ಪ್ರೇಮಿಯೂ ಹೌದು, ಆಶ್ರಮ-ಪ್ರೇಮಿಯೂ ಹೌದು. ದುಷ್ಯಂತನ ರಥ ಓಡಿದಾಗ ಅದರ ಜೊತೆ ಓಡುವ ಪ್ರಕೃತಿಯ ಲಾವಣ್ಯವನ್ನು ಈ ಪರಿಸರಪ್ರೇಮಿ ಸೆರೆಹಿಡಿಯುತ್ತಾನೆ ; ತನ್ನ ಕಣ್ಣುಗಳಲ್ಲಿ ತುಂಬಿಕೊಳ್ಳುತ್ತಾನೆ. ವಿನೀತರಿಗೆ ಮಾತ್ರ ತಪೋವನದಲ್ಲಿ ಪ್ರವೇಶವೆಂದು ಎಚ್ಚರಿಸುತ್ತಾನೆ. ಶಕುಂತಲೆಯ ಒಂದೆಡೆ ಅನಸೂಯೆ, ಇನ್ನೊಂದೆಡೆ ಪ್ರಿಯಂವದೆ ರಾರಾಜಿಸುತ್ತಾರೆ. ಗಿಡ-ಮರಗಳಿಗೆ ನೀರೆರೆಯುತ್ತಾ ಜಿಂಕೆಯ ಮರಿಗಳನ್ನು ಆಡಿಸಿಕೊಂಡು ''ಅಖಂಡ ಪುಣ್ಯಫಲ"ದಂತೆ ಬೆಳೆದ "ಮೂರ್ತಿವೆತ್ತ ಸತ್ಕ್ರಿಯೆ" ಶಕುಂತಲೆಯನ್ನು ಸಂತಾನಹೀನನಾದ ಕಾಳಿದಾಸ ತನ್ನ ಮಗಳನ್ನಾಗಿ ಸ್ವೀಕರಿಸಿದ. ಕಾವ್ಯಗಳಲ್ಲಿ ನಾಟಕ ರಮ್ಯ, ನಾಟಕಗಳಲ್ಲಿ ಅಭಿಜ್ಞಾನ ಶಕುಂತಲ ರಮ್ಯವಾದದ್ದು. ಅದರಲ್ಲೂ ಚತುರ್ಥ ಅಂಕ, ಅಲ್ಲೂ ನಾಲ್ಕು ಶ್ಲೋಕಗಳು ಪರಮರಮಣೀಯವಾದದ್ದೆಂದು ಕೊಂಡಾಡುವರಿದ್ದಾರೆ. ಈ ನಾಲ್ಕು ಶ್ಲೋಕಗಳಲ್ಲಿ ನಾವು ಕಾಳಿದಾಸನ ಕೊನೆಯ ದಿನಗಳನ್ನು ಹುಡುಕಬೇಕು. ಸಂತತಿಹೀನನಾದ ಕಾಳಿದಾಸ ಕಣ್ವ ಮಹರ್ಷಿಯಲ್ಲಿ ಪರಕಾಯಪ್ರವೇಶ ಮಾಡಿ ಚತುರ್ಥಾಂಕದೊಳಗೆ ಮಾತ್ರ ಬಂದು, ನಾಟಕವನ್ನು ಇಡಿಯಾಗಿ ವ್ಯಾಪಿಸಿ, ಓದುಗರ ಮನಸ್ಸಿನಲ್ಲಿ ಕರಗಿಹೋದ. ಸಾಕುಮಗಳು ಶಕುಂತಲೆಯನ್ನು ಪತಿಗೃಹಕ್ಕೆ ಬೀಳ್ಕೊಡುವಾಗ ಕಣ್ವನಾಗಿ ಆವಿರ್ಭವಿಸಿದ ಕಾಳಿದಾಸ ವೇದನೆಯ ಇತಿಹಾಸವನ್ನೇ ಬರೆದ. ಶಕುಂತಲೆ ಪತಿಗೃಹಕ್ಕೆ ತೆರಳುವಳೆಂಬುದನ್ನು ನೆನೆನೆನೆದು ಕಾಳಿದಾಸನ ಹೃದಯ ತುಂಬಿಬಂತು. ಹೃದಯದ ವೇದನೆ ಕಂಠಗತವಾದಾಗ ಆತ ಎದೆಯಳಲನ್ನು ಕುತ್ತಿಗೆಯಲ್ಲೇ ಬಿಗಿ ಹಿಡಿದ. ಆಗ ಆತನ ದನಿ ಕುಗ್ಗಿತ್ತು. ತರುವಾಯ ಕುತ್ತಿಗೆ

ಯಲ್ಲಿ ಹಿಡಿದಿಟ್ಟ ವೇದನೆ ಮೇಲೇರಿ ಆತನ ಕಣ್ಣುಗಳಲ್ಲಿ ತುಂಬಿಕೊಂಡಿತು. ಕಣ್ಣುಗಳು ಜಡವಾಗಿ ಏನನ್ನೂ ಕಾಣಲಾರದಾದವು. ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ಹೊಸತಾಗಿ ಗಂಡನ ಮನೆಗೆ ಕಳಿಸುವ ಗೃಹಸ್ಥರು ಅದೆಷ್ಟು ತಳಮಳಿಸುವರೋ! ಎನ್ನುತ್ತ ಕಾಳಿದಾಸ ಲೋಕದಲ್ಲಿ ಸಮರಸವಾದ ಪುತ್ರಿವಿಯೋಗದ ಪ್ರಥಮ ಸಂದರ್ಭದಲ್ಲಿ ತನ್ನ ಪಿತೃಹೃದಯವನ್ನೇ ಇಡಿಯಾಗಿ ತೆರೆದು, ಹೃದಯದಲ್ಲಿ ಹುಟ್ಟಿ ಕಂಠವನ್ನು ಆವರಿಸಿ ಕಣ್ಣುಗಳಲ್ಲಿ ತುಂಬಿಕೊಳ್ಳುವ ವೇದನೆಯ ಹೊಸ ಇತಿಹಾಸವನ್ನು ಕಾಳಿದಾಸ ಭಾರತೀಯ ರಂಗಮಂಚದ ಮೇಲೆ ಸೃಜಿಸಿದ. "ನಿಮ್ಮೆಲ್ಲರ ಪರಮ ಸ್ನೇಹಿತೆ ಶಕುಂತಲೆ ಪತಿಗೃಹಕ್ಕೆ ತೆರಳುತ್ತಿದ್ದಾಳೆ. ನೀವೆಲ್ಲ ಹರಸಿ ಬೀಳ್ಕೊಡಿ" ಎಂದು ಪರಿಸರ—ಪ್ರೇಮಿ ಕಾಳಿದಾಸ ಹೇಳಿದಾಗ ತರುಗುಲ್ಮಾದಿಗಳಲ್ಲಿದ್ದ ಹಕ್ಕಿಗಳು ಶುಭಾಶೀರ್ವಾದದ ದನಿಗೆಯ್ದವು. "ಗುರುಹಿರಿಯರನ್ನು ಸೇವಿಸು, ಸವತಿಯರಲ್ಲಿ ಒಳ್ಳೆಯ ಗೆಳತಿಯಾಗು, ಆಳುಕಾಳುಗಳಲ್ಲಿ ದಯೆಯಿರಲಿ, ಸಿರಿವಂತಿಕೆಯಿಂದ ಸೊಕ್ಕಬೇಡ, ಪತಿಗೆ ಇದಿರಾಡಬೇಡ" ಎನ್ನುತ್ತ ತನ್ನ ಸಾಕುಮಗಳು ಶಕುಂತಲೆಗೆ ಗೃಹಿಣೀ ಧರ್ಮದ ಸಾರವನ್ನರುಹುತ್ತ ಕಾಳಿದಾಸ ತನ್ನ ಹೃದಯವಂತಿಕೆಯನ್ನೆಲ್ಲ ಧಾರೆ ಎರೆದ.

ಅಭಿಜ್ಞಾನ ಶಾಕುಂತಲದ ನಾಲ್ಕನೆಯ ಅಂಕವನ್ನೂ ಬರೆದು ಮುಗಿಸಿದಾಗ ಕಾಳಿದಾಸನಿಗೆ ನೆಮ್ಮದಿಯಾಗಿತ್ತು. ಅವನ ಅಂತರಂಗದ ಖಾಲಿ ಪುಟಗಳು ತುಂಬ ತೊಡಕಾಗಿದ್ದವು. "ಅಪ್ಪಾ, ನಿಮ್ಮ ದೇಹ ಈಗಾಗಲೇ ತಪಸ್ಸಿನ ಕ್ಲೇಶದಿಂದ ಸೊರಗಿದೆ. ಆದ್ದರಿಂದ ನೀವು ನನಗಾಗಿ ಹೆಚ್ಚು ಕೊರಗಬಾರದು" ಎಂದು ಶಕುಂತಲೆ ನುಡಿದಾಗ "ಗಚ್ಛ, ಶಿವಾಸ್ತೇ ಪಂಥಾನಃ ಸಂತು" ಎಂದು ಕಣ್ವ ಮರುನುಡಿದಿದ್ದ. ಕನ್ಯೆ ಎಂದಿದ್ದರೂ ಪರಧನ. ಅವಳನ್ನು ಪತಿಗೃಹಕ್ಕೆ ಕಳುಹಿಸಿಕೊಟ್ಟ ಮೇಲೆ ಕಣ್ವನಾಗಿ ವಿಜೃಂಭಿಸಿದ ಕಾಳಿದಾಸ ನೆಮ್ಮದಿಯ ಉಸಿರೆಳೆದ.

ಕಾಳಿದಾಸ ಬರಬರುತ್ತ ಏಕಾಂಗಿಯಾಗತೊಡಗಿದ. ಆದರೂ ಸುಂದರ ವಸ್ತುವನ್ನು ನೋಡಿದಾಗ ಮಧುರಾಲಾಪವನ್ನು ಕೇಳಿದಾಗ ಆತನ ಹೃದಯದಲ್ಲಿ ಅಜ್ಞಾತ ಭಾವತರಂಗಗಳೆದ್ದು ಮನಸ್ಸು ಅರಿತು ಮರೆತ ಏನನ್ನೋ ಚಿಂತಿಸತೊಡಗುತ್ತಿತ್ತು. ಆತ ಕಾಂತೆಯ ಸಂಗಡ ಬಾಳಹೊಸ್ತಿಲಲ್ಲಿ ಕಾಲಿಟ್ಟಾಗ ರಚಿಸಿದ 'ಋತುಸಂಹಾರ' ನೆನಪಾಗಿ ಕಾಡಿತು. ಅನಂತರ ಕಾಂತೆಯ ವಿರಹವನ್ನು ತಾಳಲಾರದೆ ತಾನು ಸೃಜಿಸಿದ 'ಮೇಘದೂತ'ದ ಮೇಲೆ ಅವನ ಕಣ್ಣುಗಳು ನೆಟ್ಟವು.ಕಡೆಗೆ ಪುನಃ ಸಮಾಗಮದಿಂದ ಸಂತುಷ್ಟನಾಗುವಷ್ಟರಲ್ಲಿಯೇ ಕಾಲವಿಪರ್ಯಾಸದಿಂದ ಕಾಂತೆ ಕಾಲಕವಳಿತಳಾದಾಗ ಕಾಳಿದಾಸ ತಾನು ರಚಿಸಿದ 'ಅಜವಿಲಾಪ'ವನ್ನು ನೆನೆಯುತ್ತ ನೋವನ್ನು ಕಾರಿದ. ಅವನ ಕಾಂತೆ ಕೇವಲ ಹೆಂಡತಿಯಾಗಿರಲಿಲ್ಲ.ಆಕೆ ಅವನಿಗೆ ಸಲಹೆ ನೀಡುವ ಮಿತ್ರಳೂ, ಏಕಾಂತ-ಸಖಿಯೂ, ಲಲಿತ ಕಲೆಗಳಲ್ಲಿ ಅಚ್ಚುಮೆಚ್ಚಿನ ಶಿಷ್ಯೆಯೂ ಆಗಿದ್ದಳು. ಕಾಳಿದಾಸ ಒಬ್ಬಳ ಸಾವಿನಿಂದ ನಾಲ್ವರನ್ನೂ ಸೆಳೆದುಕೊಂಡ ದುರ್ವಿಧಿಯನ್ನೂ ಶಪಿಸಿದ. ಸಂತಾನಹೀನನಾದ ಅವನು ಇತ್ತೀಚೆಗೆ ತನ್ನ ಜೀವಿತದ ಕೊನೆಯ ದಿನ

ಗಳನ್ನು ಜೀವಿಸುತ್ತಿದ್ದ ಶಕುಂತಲೆಯನ್ನು ಸೃಜಿಸಿ ತನ್ನ ವೈಧುರ್ಯವನ್ನೂ ಸಂತಾನಹೀನತೆಯನ್ನೂ ಮರೆತಿದ್ದ. ಶಾಕುಂತಲದ ನಾಲ್ಕನೆಯ ಅಂಕವನ್ನು ಬರೆದ ಕಾಲ ಅವನ ಜೀವಿತದ ಶ್ರೇಷ್ಠ ಕಾಲವಾಗಿತ್ತು, ನೆಮ್ಮದಿಯ ಕಾಲವಾಗಿತ್ತು.

ಕಣ್ವ ನಾಲ್ಕನೆಯ ಅಂಕದೊಳಗೆ ಮಾತ್ರ ಬಂದು ಇಡೀ ಅಂಕವನ್ನು ವ್ಯಾಪಿಸಿ ನೆಮ್ಮದಿಯಿಂದ ತೆರೆಯ ಹಿಂದೆ ಸರಿದಂತೆ ಕಾಳಿದಾಸ ಬದುಕಿನ ತೆರೆಯ ಹಿಂದೆ ಸರಿಯ ತೊಡಗಿದ್ದ ಆದರೂ ಕಾಳಿದಾಸ 'ಅಭಿಜ್ಞಾನ ಶಾಕುಂತಲ'ಕ್ಕೆ ಇನ್ನೂ ಮೂರು ಅಂಕಗಳನ್ನು ಜೋಡಿಸಿದ. ನಾಟಕ ಪ್ರಯೋಗಕ್ಕೆ ಸಿದ್ಧವಾದರೂ ತನ್ನ ಶ್ರೇಷ್ಠವಾದ ಸಂದೇಶವನ್ನು ಇನ್ನೂ ನೀಡಿರಲಿಲ್ಲ. ತಾನು ಯಕ್ಷನಾಗಿ ಮೋಡಕ್ಕೆ ನೀಡಿದ ಸಂದೇಶ ದಲ್ಲಿ ಆತ ಶ್ರೇಷ್ಠತೆಯನ್ನು ಕಾಣಲಿಲ್ಲ.

'ಅಭಿಜ್ಞಾನ ಶಾಕುಂತಲ' ಮುಗಿಯುವ ಹೊತ್ತಿಗೆ ಕಾಳಿದಾಸ ಮುಮುಕ್ಷು ವಾಗಿದ್ದರೂ ಆತ ಬದುಕನ್ನು ಗಾಢವಾಗಿ ಪ್ರೀತಿಸುತ್ತಿದ್ದ. ರಾಜಕೀಯದ ಇತಿಹಾಸ ದಲ್ಲಿ ಸತ್ಯ, ದಾನ, ಪ್ರಜಾಹಿತದಂತಹ ಶಾಶ್ವತ ಮೌಲ್ಯಗಳು ಇಳಿಮುಖವಾಗಿ ನಶಿಸ ತೊಡಗಿದಾಗ ಕಾಳಿದಾಸ ಮಮ್ಮಲ ಮರುಗಿದ್ದ. ಸಾಮಾಜಿಕ ಬದುಕು ರಾಜಕೀಯ ಕೇಂದ್ರೀತವಾಗಿರುವುದರಿಂದ ಆತ ತನ್ನ ಕಟ್ಟಕಡೆಯ ಸಂದೇಶವನ್ನು 'ಅಭಿಜ್ಞಾನ ಶಾಕುಂತಲ'ದ ಭರತವಾಕ್ಯವನ್ನಾಗಿ ಪರಿವರ್ತಿಸಿದ "ಪಾರ್ಥಿವರು (ಜನಪ್ರತಿನಿಧಿಗಳು) ಪ್ರಜಾಹಿತದಲ್ಲಿ ತೊಡಗಲಿ" ಇದು ಶಾಸಕರಿಗೆ ಕಾಳಿದಾಸನ ಸಂದೇಶವಾಗಿತ್ತು. "ವಿದ್ವಾಂಸರು ಮನ್ನಣೆ ಪಡೆಯಲಿ" ಇದು ಶಾಸಕರ ಮುಂದೆ ಕಾಳಿದಾಸನ ಹಾರೈಕೆ ಯಾಗಿತ್ತು. ಕಟ್ಟಕಡೆಗೆ ಮುಮುಕ್ಷು ಕಾಳಿದಾಸನ ಮರುಹುಟ್ಟನ್ನು ಬಯಸಲಿಲ್ಲ. ಆದ್ದರಿಂದ ಶಕ್ತಿಸಹಿತನಾದ ಶಿವನನ್ನು ತನಗೆ ಪುನರ್ಜನ್ಮ ಬೇಡವೆಂದು ಪ್ರಾರ್ಥಿಸಿದ.

ಬಳಿಕ ಮುಮುಕ್ಷು ಕಾಳಿದಾಸ ಮುಕ್ತನಾದ. ಮರುಹುಟ್ಟು ಪಡೆಯಲಿಲ್ಲ ಆದರೆ ಕೀರ್ತಿ ಶರೀರಿಯಾದ ಕಥೆಯಾದ, ಅದೂ ಅಂತಿಂಥ ಕಥೆಯಲ್ಲ; ಎಂದೆಂದೂ ಹೇಳಿ ಮುಗಿಯದ ಕಥೆ; ಎಂದೆಂದೂ ಕೇಳಿ ಮುಗಿಯದ ಕಥೆ.

ಮಹಾಕಾವ್ಯದ ಹಿನ್ನೆಲೆಯಲ್ಲಿ ವಿನಾಯಕರ 'ಭಾರತ ಸಿಂಧುರಶ್ಮಿ'-ಒಂದು ಸಮೀಕ್ಷೆ

ಟಿ. ವಿ. ಸುಬ್ರಹ್ಮಣ್ಯಂ

ಮಹಾ ಪುರುಷರನ್ನು ಕಥಾವಸ್ತುವಾಗುಳ್ಳ 'ಮಹಾಕಾವ್ಯ' ಅತಿ ವಿಶಾಲವಾದ ಭೂಮಿಕೆಯುಳ್ಳದ್ದು. ನಿರಂತರವಾಗಿ ಸೌಂದರ್ಯಾಸ್ವಾದ ಉದಯಿಸುವ ಸಂದರ್ಭಗಳನ್ನು ಗರ್ಭೀಕರಿಸಿಕೊಂಡಿರುವ ಇದು ಲೋಕಸ್ವಭಾವದ ಚಿತ್ರಣದ ಜೊತೆಗೆ ಅರ್ಥೋಪದೇಶವನ್ನು ಒಳಗೊಂಡಿರುತ್ತದೆ. ಅಷ್ಟಾದಶ ವರ್ಣನೆಗಳಿಂದೊಡಗೂಡಿ ಅಲಂಕಾರಯುಕ್ತವೂ ನವರಸಭರಿತವೂ ಆಗಿರುವ ಇದು, ಗಾತ್ರದಲ್ಲಿ ಹಿರಿದಾಗಿರುತ್ತದೆ. ಆಬರ್ ಕ್ರೋಂಬಿ "ಯಾವ ಕಲಾಕೃತಿ ಜಟಿಲ ಸಮಗ್ರತೆಯ ಮೂಲಕ ಮಹಾಮೌಲ್ಯಗಳನ್ನು ಪ್ರಕಟಪಡಿಸುತ್ತದೆಯೋ ಅದು ಮಹಾಕೃತಿ ಆಗುತ್ತದೆ" ಎಂದು 'ದಿ ಐಡಿಯಾ ಆಫ್ ಗ್ರೇಟ್ ಪೊಯಟ್ರಿ'ಯಲ್ಲಿ ಹೇಳಿರುವನು. ಮಹಾಕೃತಿಯ ರಚನೆಯಲ್ಲಿ ತೊಡಗುವ ವ್ಯಕ್ತಿ ಪ್ರತಿಭೆ, ಪಾಂಡಿತ್ಯಗಳೊಂದಿಗೆ ಸಮೃದ್ಧವಾದ ಜೀವನದ ಪರಿಪಕ್ವತೆಯ ಅನುಭವವನ್ನೂ ಹೊಂದಿರಬೇಕಾಗುತ್ತದೆ. 'ನಾನೃಷಿಃ ಕುರುತೇ ಕಾವ್ಯಂ' ಎಂಬ ಪ್ರಸಿದ್ಧವಾದ ಹೇಳಿಕೆ. ಕಾವ್ಯಾದರ್ಶವನ್ನು ಹೊಂದಿರುವ ಕವಿ ಋಷಿಯೂ ಆಗಿರುತ್ತಾನೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಮಹಾಕಾವ್ಯವು ಗದ್ಯ, ಪದ್ಯ ಅಥವಾ ಗದ್ಯ-ಪದ್ಯ ಮಿಶ್ರಿತವಾದ ಚಂಪೂವಿನಲ್ಲಿ ರಚಿತವಾಗಬಹುದೆಂದು ಭಾರತೀಯ ಕಾವ್ಯಮೀಮಾಂಸಕರು ಅಭಿಪ್ರಾಯಪಡುತ್ತಾರೆ. ಆಂಗ್ಲ ಭಾಷೆಯಲ್ಲಿನ 'ಎಪಿಕ್' ಎನ್ನುವ ಪದ ನಮ್ಮಲ್ಲಿನ ಮಹಾಕಾವ್ಯದ ಪರ್ಯಾಯ ಪದವಾಗಿ ಕಂಡುಬರುತ್ತದೆ.

ಪಾಶ್ಚಾತ್ಯರಲ್ಲಿ 'ಎಪಿಕ್' ಅನ್ನು ಕುರಿತು ನಡೆದಿರುವ ಆಳವಾದ, ವೈವಿಧ್ಯಪೂರ್ಣವಾದ ಚರ್ಚೆ, 'ಮಹಾಕಾವ್ಯ'ದ ಬಗ್ಗೆ ನಮ್ಮಲ್ಲಿ ನಡೆದಿಲ್ಲ. 'ಎಪಿಕ್'ನ ಬೆಳವಣಿಗೆಗೆ ಅನುಗುಣವಾಗಿ ಪಾಶ್ಚಾತ್ಯರು ಸಾಂಪ್ರದಾಯಿಕ ಅಥವಾ ಪ್ರಾಥಮಿಕ [Primary] ಮಹಾಕಾವ್ಯ ಮತ್ತು ಆನುಷಂಗಿಕ [Secondary] ಮಹಾಕಾವ್ಯವೆಂದು ಎರಡು ಬಗೆಯಾಗಿ ವಿಂಗಡಿಸಿರುವರು. ಇಲಿಯಡ್, ಒಡಿಸ್ಸಿ, ರಾಮಾಯಣ, ಮಹಾಭಾರತಾದಿ ಕಾವ್ಯಗಳು ಮೊದಲ ಗುಂಪಿಗೂ, ಇವುಗಳ ವಸ್ತುವಿನಿಂದ ಪ್ರಚೋದಿತವಾಗಿ ಮೂಡಿ ಬಂದಿರುವ ಉಳಿದೆಲ್ಲ ಮಹಾಕಾವ್ಯಗಳು ಎರಡನೆಯ ಗುಂಪಿಗೂ ಸೇರುತ್ತವೆ. ಸಾಹಿತ್ಯದ ಅತ್ಯುನ್ನತ ಪ್ರಕಾರವಾಗಿರುವ ಮಹಾಕಾವ್ಯವನ್ನು ಪ್ರಧಾನವಾಗಿ ನಾವು ಕಲಾತ್ಮಕವಾದ ಮಹಾಕಾವ್ಯ [Epic of Art] ಮತ್ತು ಬೆಳೆದು ಬಂದ ಮಹಾಕಾವ್ಯ [Epic of Growth] ಎಂದು ಎರಡು ರೀತಿಯಲ್ಲಿ ವಿಂಗಡಿಸುತ್ತೇವೆ.

ಕಲಾತ್ಮಕ ಮಹಾಕಾವ್ಯವಾಗಿ 'ರಾಮಾಯಣ' ಕಂಡು ಬಂದರೆ ಬೆಳೆದು ಬಂದ ಕಾವ್ಯದ ಉತ್ತಮ ಪ್ರತಿನಿಧಿಯಾಗಿ 'ಮಹಾಭಾರತ' ಕಂಡುಬರುತ್ತದೆ. ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ಎಲ್ಲ ಭಾಷೆಯ ಕವಿಗಳ ಕೃತಿರಚನೆಗೆ ಸ್ಫೂರ್ತಿಯ ನೆಲೆಯಾಗಿರುವ ಇವೆರಡೂ ಕವಿಗಳ ಕಾಮಧೇನುವಾಗಿವೆ. ಭರತ ಖಂಡದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸರಗಳ ಸಾಂಸ್ಕೃತಿಕ ಪ್ರತಿನಿಧಿಯಾಗಿರುವ ರಾಮಾಯಣ ಮಹಾಭಾರತಗಳು ಚಿರಕಾಲದ ಸಿಂಹಪೀಠದಲ್ಲಿ ವಿರಾಜಿಸುವ ಎರಡು ಮಹತ್ವದ ಕೃತಿಗಳಾಗಿವೆ. ಕಾಲ ಧರ್ಮಕ್ಕೆ ಅನುಗುಣವಾಗಿ ಉಳಿದ ಇತಿಹಾಸಗಳು ವ್ಯತ್ಯಾಸ ಹೊಂದಬಹುದಾದರೂ, ಚಿರಕಾಲದ ಇತಿಹಾಸ ಕಾವ್ಯಗಳಾಗಿರುವ ಇವುಗಳು ಬದಲಾಗದಂತಹುವು.

ಆಧುನಿಕ ಸಾಹಿತ್ಯ ಯುಗದಲ್ಲಿ ಮಹಾ ಕಾವ್ಯದ ರಚನೆ ಸಾಧ್ಯವೇ ? ಎಂಬ ಅನುಮಾನ ಹಲವರಲ್ಲಿ ಮೂಡಿರುವುದಾದರೂ, ಪರಿಶೀಲಿಸಿದಾಗ ಇದು ಅಸಂಗತವಾದ ಪ್ರಶ್ನೆಯಂತೆ ಕಂಡುಬರುತ್ತದೆ. ಕಾರಣವೇನೆಂದರೆ ಒಂದು ಸತ್ಕೃತಿಯ ಉನ್ನತ ರೂಪದ ನಿರ್ಮಿತಿಯಾಗಿರುವ ಮಹಾಕಾವ್ಯದ ರಚನೆ ಕಾಲ ದೇಶ ಪರಿಸರಗಳಿಂದ ಅತೀತವಾದುದು. ಯಾವ ಪರಂಪರೆಯಿಂದ ಬಂದರೂ, ಆಧುನಿಕ ಕಾಲದಲ್ಲಿ ರಚಿತವಾದರೂ ಒಂದು ಕೃತಿ ತನ್ನ ಅರ್ಹತೆಯಿಂದ ಮಹಾಕಾವ್ಯವಾಗಿ ಅಥವಾ ಮಹಾಕೃತಿಯಾಗಿ ನಿಲ್ಲಬಲ್ಲ ಸಾಮರ್ಥ್ಯವನ್ನು ಹೊಂದಿದೆ.

ಇತಿಹಾಸ ಕಾವ್ಯಗಳಾಗಿರುವ ರಾಮಾಯಣ ಮತ್ತು ಮಹಾಭಾರತಗಳಿಗಿಂತ ಅತಿಪ್ರಾಚೀನವಾಗಿದ್ದು, ಭಾರತೀಯ ಸಂಸ್ಕೃತಿ ಹಾಗೂ ದಾರ್ಶನಿಕ ಜೀವನದ ಉಗಮಸ್ಥಾನವಾಗಿರುವ ವೇದಕಾಲದ ಸಮಗ್ರ ಪರಿಸರವನ್ನು ಚಿತ್ರಿಸುವ ಕೃತಿಗಳು ಅತಿ ವಿರಳ. ಚತುರ್ವೇದಗಳಲ್ಲಿ ಅತಿ ಪ್ರಾಚೀನವಾದ ಋಗ್ವೇದದಲ್ಲಿನ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಪರಿಸರ ಕುತೂಹಲದಾಯಕವಾಗಿದೆ. ಕಾವ್ಯಮಯ ಭಾಷೆಯನ್ನೊಳಗೊಂಡ ಇದರಲ್ಲಿನ ಶಾಶ್ವತ ಧರ್ಮಸ್ವರೂಪದ ವಿವೇಚನೆ, ಅತ್ಯಂತ ನಿಗೂಢವಾದ ಸೃಷ್ಟಿರಹಸ್ಯ, ಸಾಮಾಜಿಕ ವಿಚಾರಗಳ ಮೇಲೆ ಬೆಳಕನ್ನು ಚೆಲ್ಲುವ ವಿವಾಹ ಸೂಕ್ತ, ಅಭಿಚಾರಕ ಸೂಕ್ತ, ಔರ್ಧ್ವದೈಹಿಕ ಸೂಕ್ತ, ದಾನ ಸೂಕ್ತ, ಮಂಡೂಕ ಸೂಕ್ತ- ಮೊದಲಾದುವು ಆಕರ್ಷಣೀಯವಾಗಿವೆ. ಹೀಗಿದ್ದರೂ ಕವಿಗಳು ತಮ್ಮ ಮೇರು ಕೃತಿಗಳ ರಚನೆಯಲ್ಲಿ ವೇದಕಾಲದ ವಸ್ತುವನ್ನು ತೊಡಗಿಸದಿರುವುದು ವಿಸ್ಮಯಕಾರಕವಾಗಿದೆ.

ರಾಮಾಯಣ ಹಾಗೂ ಮಹಾಭಾರತದ ವಸ್ತುವನ್ನು ಹೊರತುಪಡಿಸಿ, ಕಥಾಸರಿತ್ಸಾಗರದ ಮಕರಂದಿಕೋಪಾಖ್ಯಾನದಲ್ಲಿ ಕಂಡುಬರುವ ಕಾದಂಬರೀ ಕಥೆಯ ಮೂಲರೇಖೆಯನ್ನು ಬಳಸಿಕೊಂಡು, ಅದಕ್ಕೆ ಮನೋಹರವಾದ ವರ್ಣಚಿತ್ರವನ್ನು ರಚಿಸಿ, ಜೀವಕಳೆಯನ್ನು ತುಂಬಿ, 'ಕಾದಂಬರೀ' ಗದ್ಯ ಕಾವ್ಯವನ್ನು ಬರೆದ ಶ್ರೀಹರ್ಷನ ಆಸ್ಥಾನ ಕವಿಯಾಗಿದ್ದ ಬಾಣಭಟ್ಟ, ಹೊಸ ವಸ್ತುವಿನ ಆಯ್ಕೆಯ ಮೂಲಕ ಹೊಸ ಆಯಾಮವನ್ನು ನೀಡಿದ ವಿಶಿಷ್ಟ ಕವಿ. ಇವನ ಅನಂತರವೂ ಇಂತಹ ಸಾಹಸಕ್ಕೆ ಕೈ ಹಾಕಿದ ಕವಿಗಳು ನಮಗೆ ಸಿಕ್ಕುವುದು ದುರ್ಲಭ. ಆಧುನಿಕ

ಸಾಹಿತ್ಯ ಯುಗದಲ್ಲಿ ಇಂತಹ ಸಾಹಸಕ್ಕೆ ಕೈ ಹಾಕಿದವರು ವಿನಾಯಕರು. ಇವರು ತಮ್ಮ ಮೇರುಕೃತಿಯಾದ 'ಭಾರತ ಸಿಂಧು ರಶ್ಮಿ'ಯ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡದ್ದು ಋಗ್ವೇದದಿಂದ. ಇವರ ಈ ಕೃತಿ, ವೇದ ಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸರವನ್ನು ರೂಢಿಸಿಕೊಂಡು ಬೆಳೆದಿರುವ ಒಂದು ಸಾಂಸ್ಕೃತಿಕ ಕಾವ್ಯವಾಗಿದೆ. ವಿನಾಯಕರು ವೇದ ಕಾಲದ ವಸ್ತುವನ್ನು ತಮ್ಮ ಮಹಾಕೃತಿಯ ರಚನೆಯಲ್ಲಿ ಬಳಸಿಕೊಂಡು, ಅದರೊಂದಿಗೆ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಸಂಪ್ರದಾಯಗಳೆರಡನ್ನೂ ಅಳವಡಿಸಿಕೊಂಡು, ಸಮಕಾಲೀನ ಜೀವನವನ್ನು ಪ್ರತಿಸ್ಪಂದಿಸಿದ್ದಾರೆ. 'ತ್ರಿಶಂಕುವಿನ ಪ್ರಜ್ಞಾ ಪ್ರಭಾತ'ದ ಮೂಲಕ ಮಹಾಕಾವ್ಯದ ರಚನೆಯತ್ತ ಗಮನಹರಿಸಿದ ವಿನಾಯಕರು ಸಾವಿರದ ಇನ್ನೂರ ಎಪ್ಪತ್ತಾರು ಪುಟಗಳಷ್ಟು ಸುದೀರ್ಘವಾಗಿ ಬೆಳೆದ 'ಭಾರತ ಸಿಂಧುರಶ್ಮಿ' ಎಂಬ ಮಹಾಕಾವ್ಯವನ್ನು ಸಪ್ತ ವರ್ಷಗಳ ಚಿಂತನೆಯ ಫಲವಾಗಿ ರಚಿಸಿ, ಸಹೃದಯರ ಮುಂದೆ ಇಟ್ಟಿದ್ದಾರೆ.

ವೇದಕಾಲದ ಚತುಃ ಸಮುದ್ರಗಳಲ್ಲಿ ಒಂದಾದ ಶರ್ಯಣಾವತ್ ಸಮುದ್ರದ ತೀರಪ್ರದೇಶವನ್ನು, ವಿಶ್ವರಥನು ಭೂ ಸಂಚಾರ ಮಾಡುತ್ತಾ ತನ್ನ ಪರಿವಾರದವರೊಂದಿಗೆ ಸೇರಿಕೊಳ್ಳುತ್ತಾನೆ. ಅಲ್ಲಿನ ಪರ್ವತ ಶ್ರೇಣಿಗಳು, ನಿಸರ್ಗ ಸೌಂದರ್ಯ, ವಿಶ್ವರಥನ ಕಣ್ಮನಗಳನ್ನು ಸೆಳೆಯಲು, ತನ್ನ ಪರಿವಾರವನ್ನು ಪರ್ವತದ ತಪ್ಪಲಲ್ಲಿ ಬೀಡು ಬಿಡಿಸುತ್ತಾನೆ. ಶರ್ಯಣಾವತ್ ಗಿರಿಶೃಂಗದ ಉನ್ನತವಾದ ತುದಿಯನ್ನು ವಿಶ್ವರಥನು ಏಕಾಂಗಿಯಾಗಿ ಏರಿ, ಸುತ್ತಲಿನ ಪರಿಸರವನ್ನು ಗಮನಿಸುತ್ತಾ ಆನಂದಾನುಭೂತಿಯನ್ನು ಹೊಂದಿ ಧ್ಯಾನ ಮಗ್ನನಾಗುವಾಗ, ಅವನ ಬಾಯಿಂದ ಅಗ್ನಿಸೂಕ್ತ ತನ್ನಿಂದ ತಾನೇ ಹೊರಹೊಮ್ಮುತ್ತದೆ. ವಿಶ್ವರಥನ ದಿಗ್ವಿಜಯದ ಹಿನ್ನೆಲೆಯ ಈ ಪ್ರಸಂಗದಿಂದ ಭಾರತ ಸಿಂಧುರಶ್ಮಿಯ ಕಥಾನಕ ಪ್ರಾರಂಭವಾಗುತ್ತದೆ. ವಿನಾಯಕರು, 'ಇಲ್ಲಿನ ಕಥಾವಸ್ತು ಪುರಾತನ ಲಿಪಿಯಂತಿದ್ದು, ವೇದ ಹಾಗೂ ಕಾವ್ಯ ಪರಿಭಾಷೆಯ ಸಮನ್ವಯದ ಸಾರವಾಗಿ, ಸಮಕಾಲೀನ ಯುಗದ ರಂಜಕತೆಯಾಗಿ, ಇತಿಹಾಸ ಮತ್ತು ಕಲ್ಪನೆಯ ನೆಲೆವೀಡಾಗಿ ಕಂಗೊಳಿಸಿ, ಇಂದ್ರಿಯ ಗ್ರಾಹ್ಯವಾದುದು ಅತೀಂದ್ರಿಯ ಗ್ರಾಹ್ಯವಾಗುತ್ತದೆ' ಎಂದಿದ್ದಾರೆ. ವಿಶ್ವಾಮಿತ್ರನ ಹಿರಿಮೆ-ಗರಿಮೆಗಳನ್ನು ಘೋಷಿಸುವ ಈ ಕೃತಿ, ಕಾವ್ಯಾಂಶಗಳ ದೃಷ್ಟಿಯಿಂದ ಅಷ್ಟು ಮಹತ್ವದ ಕೃತಿಯೆನಿಸದಿದ್ದರೂ, ಸಾರ್ವಕಾಲಿಕ ಮೌಲ್ಯವುಳ್ಳ ವೇದಕಾಲದ ವಸ್ತುವನ್ನೊಳಗೊಂಡು, ಮಹಾಕಾವ್ಯದ ಲಕ್ಷಣಗಳನ್ನೊಳಗೊಂಡ ಅಮೂಲ್ಯ ಕೃತಿಯಾಗಿದೆ. ಭರತ ಖಂಡದ ಸಿಂಧೂ ತೀರದ ಸುತ್ತ–ಮುತ್ತಲಿನ ರಾಜರುಗಳ ಏಳು-ಬೀಳಿನ ಕಥೆಯನ್ನು ರೂಪಿಸುವ ಈ ಕೃತಿಯ ಕಿರುಪರಿಚಯ ಈ ಲೇಖನದ ಉದ್ದೇಶ.

'ಭಾರತ ಸಿಂಧು ರಶ್ಮಿ' ಎನ್ನುವ ಹೆಸರಿನಲ್ಲಿ ವಿನಾಯಕರು ಹೊಸ ಅರ್ಥವನ್ನು ಧ್ವನಿಸಿದ್ದಾರೆ. ದುಷ್ಯಂತ-ಶಕುಂತಲೆಯರ ಮಗನಾದ ಭರತನಿಂದ ಆರ್ಯಾವರ್ತ 'ಭಾರತ' ಎಂಬ ಹೆಸರನ್ನು ತಳೆಯಿತು ಎನ್ನುವುದು ಒಂದು ಸಾಂಪ್ರದಾಯಿಕ ಹೇಳಿಕೆ. ಇದನ್ನು ಇಲ್ಲಿ ಅಲ್ಲಗಳೆದು ತೃಷ್ಟುವಂಶದ ಭರತಕುಲಕ್ಕೆ ಸೇರಿದ ಸುದಾಸ

ನಿಂದ ಈ ಹೆಸರು ಬಂತೆಂದು ಹೇಳಿದೆ. ವೇದ ಕಾಲದ ಇತಿಹಾಸ ವಿನಾಯಕರ ಈ ಮಾತನ್ನು ಪುಷ್ಟೀಕರಿಸುತ್ತದೆ.[1] 'ಸಿಂಧು' ಎನ್ನುವುದು ಇಂಡಸ್‌ನ ಸುತ್ತಮುತ್ತಲಿನ ಪ್ರದೇಶಗಳ ಸೂಚಕವಾಗಿದೆ. 'ರಶ್ಮಿ' ಎನ್ನುವುದು ಸಪ್ತ ಪ್ರಜ್ಞಾಸ್ತರಗಳ ಸಂಕೇತ ವಾಗಿದೆ.

ವಿನಾಯಕರ ಈ ಕೃತಿ ಸಪ್ತತೆಯ ಸಂಕೇತವಾಗಿದೆ. ಸಪ್ತ ಮನುಗಳಾದ ಸ್ವಾಯಂಭೂ, ಸ್ವಾರೋಚಿಷ, ಉತ್ತಮ, ರೈವತ, ಚಾಕ್ಷುಷ ಮತ್ತು ವೈವಸ್ವತರ ಕಾಲದ ಪರಿಸರದ ಚಿತ್ರಣ ಇಲ್ಲಿ ಕಂಡುಬರುತ್ತದೆ. ಅತ್ರಿ, ಭೃಗು, ಕಶ್ಯಪ, ಪುಲಹ, ನಾರದ, ದಕ್ಷಬ್ರಹ್ಮ, ಅಂಗಿರಸರೆಂಬ ಸಪ್ತ ಋಷಿಗಳ ದರ್ಶನ ಕಥೆ ಇಲ್ಲಿದೆ. ವಿನಾಯಕರ ಸಪ್ತವರ್ಷಗಳ ಸಾಧನೆಯ ಫಲವಾಗಿ ಮೂಡಿಬಂದಿರುವ ಕೃತಿ ಇದು. ಗೃತ್ಸಮದ, ಅತ್ರಿ, ವಿಶ್ವಾಮಿತ್ರ, ವಾಮದೇವ, ವಶಿಷ್ಠ, ಭಾರದ್ವಾಜ, ಪ್ರಗಾಥ (ಕಣ್ವ) ರೆಂಬ ಸಪ್ತವಂಶೀಯ ಮಂಡಲದ ಕಥೆಯನ್ನು ಸೂಕ್ಷ್ಮವಾಗಿ ಒಳಗೊಂಡಿದೆ. ಈ ಕೃತಿಯಲ್ಲಿ ಕುಲ, ರಾಜ್ಯ, ರೂಪ, ಯೌವನ, ಕಲಾ, ದೋರ್ಬಲ, ದೇವತಾಬಲ ಗಳೆಂಬ ಸಪ್ತಮದಗಳ ವಿಚಾರ; ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮುಕ್ತಿಗಳೆಂಬ ಸಪ್ತ ತತ್ವ ವಿಚಾರ; ಕುಟುಂಬ ವ್ಯವಸ್ಥೆ, ದಾಂಪತ್ಯ ನಿಲುವು, ಸ್ತ್ರೀ–ಪುರುಷ ಸ್ಥಾನ–ಮಾನ, ಮಾನವ ಸ್ವಾತಂತ್ರ್ಯ, ತಪಸ್ಸು–ಸಂಯಮನ, ಮಾನವನ ಅಧಃಪತನ–ಪರಿವರ್ತನೆ, ಪುರುಷಾರ್ಥಗಳ ಸಂಬಂಧ ಎಂಬ ಸಪ್ತ ಜೀವನ ಮೌಲ್ಯಗಳ ವಿಚಾರವೂ ಅಡಗಿದೆ. ಆರ್ಯರು ಸಪ್ತಸಿಂಧೂ ಪ್ರದೇಶಗಳಲ್ಲಿ ನೆಲಸಿ ದವರು. ಈ 'ಸಪ್ತ ಸಿಂಧೂ' ಎನ್ನುವುದು ಸಂಭೂತಿಯ ಏಳು ನದಿಗಳಾಗಿವೆ. ಸಪ್ತ ಲೋಕಗಳ ಸಂಕೀರ್ಣವಾಗಿರುವ ಬ್ರಹ್ಮಾಂಡ, ಸಪ್ತ ತತ್ವಗಳ ಸಂಕೇತವೂ ಆಗಿದೆ. ಜೀವನದ ಸಪ್ತಪ್ರಜ್ಞಾಸ್ತರಗಳಾಗಿ ಇಲ್ಲಿ ಸಪ್ತರಶ್ಮಿಗಳು ಕಾಣಿಸಿಕೊಳ್ಳುತ್ತವೆ. ಬ್ರಹ್ಮನನ್ನು ತಿಳಿಯಲು ಅನುಭಾವ ಹಾಕಿಕೊಟ್ಟಿರುವ ಅನೇಕ ಮಾರ್ಗಗಳಲ್ಲಿ ಪ್ರಜ್ಞಾ ವಿಕಾಸಕ್ಕೆ ಸಂಬಂಧಿಸಿದ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯವೆಂಬ ಕೋಶಗಳು ಮತ್ತು ಸತ್, ಚಿತ್, ಆನಂದಗಳೆಂಬ ವೇದ ಸಂಹಿತೆಯ ಸಪ್ತರಶ್ಮೀ ಮಾರ್ಗವೂ ಒಂದಾಗಿದೆ.

ಮನುಕುಲದ ಕಥೆಗೆ ಪೂರಕವಾಗಿ ಈ ಕೃತಿಯಲ್ಲಿ ಜಲಪ್ಲಾವನದನಂತರ ಒಗೆ ತಂದ ಸೃಷ್ಟಿಯ ಭಾಗವತ ದರ್ಶನವನ್ನು ನಾವು ಕಾಣುತ್ತೇವೆ. ಸೃಷ್ಟಿ ಕಾರ್ಯಕ್ಕೆ ಸಂಬಂಧಿಸಿದ ಅಂಶಗಳನ್ನು ವಿನಾಯಕರು ಬಳಸಿಕೊಳ್ಳುವಾಗ ವೇದಸಂಹಿತೆ, ಮನು ಸ್ಮೃತಿ ಮತ್ತು ಶ್ರೀಮದ್ಭಾಗವತಗಳಲ್ಲಿ ಕಂಡುಬರುವ ರೀತಿಯನ್ನು ಗಮನಿಸಿದ್ದಾರೆ.

---

[1] "The Bharatas, who gave their name to the whole country, are the most important of the Rigvedic Tribes."
Vedic Age, Vol I, ed by R. C. Majumdar : Chapt XIII Aryan settlements in India 2. The tribes in the Rigveda, A. D. Pusalkar, p. 249

ಅನಾದಿಕಾಲದಿಂದ ಒಗೆತಂದ ಸೃಷ್ಟಿಯು ಸರಪಳಿ ಪ್ರಳಯಸಾಗರದಲ್ಲಿ ಮುಳುಗಿತ್ತು. ಅನಂತಶಯನನ ಆತ್ಮಾನಂದದ ಮಹಾಸಮಾಧಿಯಲ್ಲಿ ಕಾಲಕಾಲೇಶ್ವರನ ಪರಾಶಕ್ತಿ ಒಮ್ಮೆ ಸ್ಪಂದಿಸಿ, ಪರಮ ಚೈತನ್ಯರೂಪಿಯಾದ ವಿಶ್ವಕಮಲ ಒಂದು ಪರಾತ್ಪರನ ನಾಭಿಯಲ್ಲಿ ಅರಳಿತು. ಇದರಿಂದ ಉದ್ಭವಿಸಿದ ಸ್ವಯಂಭೂ ಬ್ರಹ್ಮನು ನಾಲ್ಕು ದಿಕ್ಕುಗಳನ್ನು ವೀಕ್ಷಿಸುತ್ತಾ ನಾಲ್ಮೊಗನಾದನು. ಅವನ ಹೃತ್ಪದ್ಮದಲ್ಲಿ ಪರಾತ್ಪರನು ಮೈದೋರಲು, ಅವನಿಗೆ ವಂದಿಸಿ, ಪೂರ್ವಕಲ್ಪದಂತೆ ತಾನು ಸೃಷ್ಟಿಸಲು ಅವನ ಕೃಪೆಯನ್ನು ವಿನಂತಿಸಿ ಅನುಮತಿ ಹೊಂದಿದನು. ಅದಕ್ಕೆ ಮೊದಲು ಪರಾತ್ಪರನ ಆದೇಶಾನುಸಾರಿಯಾಗಿ ದೇವಮಾನವ ಶತಶತಮಾನಗಳವರೆವಿಗೆ ತಪಸ್ಸನ್ನು ಆಚರಿಸಿ, ಶಕ್ತಿಯು ಸೂನುವಾದ. ಬ್ರಹ್ಮನ ವೈಕೃತ ಸೃಷ್ಟಿಯು ಫಲವಾಗಿ ತರು-ಲತಾ-ಗುಲ್ಮಗಳು, ತಿರ್ಯಕ್ ಜಾತಿ, ಪಶು ಪಕ್ಷಿ ಸಂಕುಲ, ರಾಜಸ ಕರ್ಮದಲ್ಲಿ ನಿರತರಾದ ಮಾನವರು, ಅಸುರ, ಗಂಧರ್ವ, ಅಪ್ಸರ, ಯಕ್ಷ, ಸಿದ್ಧ, ಕಿನ್ನರ-ಕಿಂಪುರುಷ, ವಿದ್ಯಾಧರ, ಭೂತ-ಪ್ರೇತ-ಪಿಶಾಚಿಗಳು ನಾನಾ ಯೋನಿಗಳಿಂದ ಒಗೆತಂದರು. ಸ್ಥೂಲ-ಸೂಕ್ಷ್ಮಗಳ ಪೂರ್ಣ ವಿಕಸನಕ್ಕೆ ಮಹಾಕಾರಣ ಸೃಷ್ಟಿಯು ತತ್ವಚಿಂತನೆಯಲ್ಲಿ ತೊಡಗಿದಾಗ ಆತ್ಮಜ್ಞಾನ ತತ್ಪರರೂ, ಪೂರ್ಣ ವಿರಾಗಿಗಳೂ, ಧ್ಯಾನಮಗ್ನರೂ ಆದ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರು ಬ್ರಹ್ಮನ ಮಾನಸಪುತ್ರರಾಗಿ ಒಗೆತಂದರು. ಅನಂತರ ನಾವು ಸಪ್ತರ್ಷಿಗಳ ಜನನ ವರ್ಣನೆಯನ್ನು ಕಾಣುತ್ತೇವೆ. ಈ ವರ್ಣನೆಯಲ್ಲಿ ಋಗ್ವೇದ ಸಂಹಿತೆಯಲ್ಲಿನ ನಾಸದೀಯ ಸೂಕ್ತ ಸೂಕ್ಷ್ಮವಾಗಿ ಕಾಣಿಸಿಕೊಂಡು ಪುರುಷ ಸೂಕ್ತದ ವರ್ಣನೆ ಹಾಗೂ ಶ್ರೀಮದ್ಭಾಗವತದಲ್ಲಿನ ರೀತಿ ವಿಸ್ತೃತವಾಗಿ ಗಮನಿಸಿರುವುದು ನಮ್ಮ ಗಮನಕ್ಕೆ ಬರುತ್ತದೆ. ಬ್ರಹ್ಮ ಸೃಷ್ಟಿ ಹೀಗೆ ನಿರಂತರವಾಗಿ ಸಾಗಿದರೂ, ಪ್ರಜಾಭಿವೃದ್ಧಿಯ ಅವಕಾಶಕ್ಕಾಗಿ ಬ್ರಹ್ಮನು ಧ್ಯಾನ ಮಗ್ನನಾಗುವನು. ಆಗ ಅವನ ಶರೀರ ಬಿಂಬದಿಂದ ಸ್ತ್ರೀ–ಪುರುಷರ ಜೋಡಿಯೊಂದು ಕಣ್ಣು ಕೋರೈಸುವಂತೆ ಉದಯಿಸುತ್ತದೆ. ಮನುಕುಲದ ಆದಿದಂಪತಿಗಳಾದ ಸ್ವಾಯಂಭು-ಶತರೂಪೆಯರು ಹೀಗೆ ಬ್ರಹ್ಮನ ಮಾನಸ ಪುತ್ರ–ಪುತ್ರಿಯರಾಗಿ ಮರ್ತ್ಯಲೋಕದಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ವಿನಾಯಕರು ಮಿಲ್ಟನ್ನನ ಮಹಾಕಾವ್ಯದಲ್ಲಿ ಕಂಡು ಬರುವ ಆದಮ್-ಈವ್ ಎಂಬ ಮನುಕುಲದ ಪ್ರಪ್ರಥಮ ದಂಪತಿಗಳ ಕಥೆಯನ್ನು ಪ್ರಾಸಂಗಿಕವಾಗಿ ಸ್ಮರಿಸಿ, ನಮ್ಮಲ್ಲಿನ ಸ್ವಾಯಂಭು-ಶತರೂಪೆಯರ ಕಥೆ ಅದಕ್ಕಿಂತಲೂ ಹೆಚ್ಚು ಆಕರ್ಷಣೀಯವಾಗಿದೆ ಎಂದು ಹೇಳಿರುವರು.

ಪ್ರಕೃತಿ-ಪುರುಷರ ನೈಜ ಸಮಾಗಮದ ಚಿತ್ರಣವನ್ನು ನಾವು ಸ್ವಾಯಂಭು-ಶತರೂಪೆಯರಲ್ಲಿ ಕಾಣುತ್ತೇವೆ. ಮನುಕುಲದ ಪ್ರಾರಂಭಿಕ ಕಥೆಯನ್ನು ನಾವು ಇಲ್ಲಿ ಕಾಣುವೆವಾದರೂ, ಇವರಿಬ್ಬರೂ ಬ್ರಹ್ಮನ ಮಾನಸ ಪುತ್ರ–ಪುತ್ರಿಯರೇ ಹೊರತು, ಮರ್ತ್ಯಲೋಕದಲ್ಲಿ ಸ್ವಾಭಾವಿಕವಾಗಿ ಜನಿಸಿದವರಲ್ಲ. ಇವರಿಬ್ಬರ ಮಿಲನದ ಪರಿಣಾಮವಾಗಿ ಹುಟ್ಟುವ ಪ್ರಿಯವ್ರತ ಈ ದೃಷ್ಟಿಯಿಂದ ಗಮನಾರ್ಹನಾಗುತ್ತಾನೆ. ಈ ಸಂದರ್ಭದಲ್ಲಿ ಮಾನವನ ಮರ್ತ್ಯ ಪರಿಸರದ ಸ್ಪಂದನವನ್ನು

ವಿನಾಯಕರು ಎಳೆ ಎಳೆಯಾಗಿ ಚಿತ್ರಿಸಿರುವರು. ಮಾನವ ಶಿಶುವನ್ನು ಹೊತ್ತು, ಪ್ರಪ್ರಥಮ ಗರ್ಭಿಣಿಯಾದ ಶತರೂಪೆಯ ಸ್ತ್ರೀ ಸಹಜವಾದ ಬಯಕೆ ಸೌಂದರ್ಯದೊಡನೆ ಇಲ್ಲಿ ಕಾಣಿಸಿಕೊಳ್ಳುತ್ತದೆ. ಮರ್ತ್ಯಲೋಕದ ಬದುಕು ಸುಂದರ ಕನಸುಗಳ ತಾಣವಲ್ಲ. ಬದುಕಿನ ಅನಿವಾರ್ಯದ ಅಂಗ, ಹೋರಾಟ ಎನ್ನುವುದನ್ನು ಸ್ವಾಯಂಭು ಭಲ್ಲೂಕದೊಡನೆ ಹೋರಾಡುವ ಪ್ರಸಂಗದಲ್ಲಿ ವಿನಾಯಕರು ಮನವರಿಕೆ ಮಾಡಿಕೊಟ್ಟಿದ್ದಾರೆ. ಸ್ವಾಯಂಭುವಿನ ರಾಜ್ಯದಲ್ಲಿ ಜನರು ಸರ್ವ ಸುಖ ಶಾಂತಿಗಳಿಂದ ನೆಮ್ಮದಿಯನ್ನು ಹೊಂದಿ, ಸೋಮಪಾನ, ಗಾನಕೂಟ, ನೃತ್ಯ, ಸಮಯಮರಿಯದ ಬೇಟಗಳಲ್ಲಿ ಮಗ್ನರಾಗಿ ಜಡರಾದರು. ಜನರಿಗೆ ನೆಮ್ಮದಿಯು, ಬದುಕು ಮಾರಕವಾದಾಗ, ರಾಜನಾದವನು ಶಾಸನದ ಮೂಲಕ ಅವರನ್ನು ಎಚ್ಚರಿಸಿ, ಕರ್ತವ್ಯನಿಷ್ಠರಾಗುವಂತೆ ಮಾಡುವುದು ಅನಿವಾರ್ಯವಾಗುತ್ತದೆ. ಸ್ವಾಯಂಭು ಆ ಹೊಣೆ ಹೊತ್ತುಕೊಳ್ಳುವನು.

ಮಾನವನ ಸ್ವಧರ್ಮದ ನಾಲ್ಕು ಅವಿಭಾಜ್ಯ ಅಂಗಗಳಾಗಿ ವರ್ಣಾಶ್ರಮ ಧರ್ಮ ರೂಪುಗೊಂಡಿತು. ತತ್ವವೇತ್ತನ ದಾರ್ಶನಿಕ ಬಾಳನ್ನು ಅಪೇಕ್ಷಿಸಿದವರು ಸಪ್ತರ್ಷಿಗಳಿಂದ ಸಂಸ್ಕಾರವನ್ನು ಹೊಂದಿ, ಬ್ರಹ್ಮ ವಿದ್ಯೆಯನ್ನು ಅರಿತು, ಮುಗಿಲಿನಾಚೆಯ ನಿಗೂಢಗಳನ್ನರಿಯಲು ಮಂತ್ರೋಚ್ಚಾರಣೆಯಲ್ಲಿ ಆಸಕ್ತರಾಗಿ, ಗುರುವಿನ ಸ್ಥಾನವನ್ನಲಂಕರಿಸಲು ಅರ್ಹರಾದರು. ಜನರಿಗೆ ಕ್ರೂರಮೃಗಗಳಿಂದ ಆಗುವ ತೊಂದರೆಯನ್ನು ತಪ್ಪಿಸಲು ಕ್ಷಾತ್ರತೇಜದ ಹಂಬಲವಿರುವವರು ಮಲ್ಲಸಾಲೆಗಳನ್ನು ನಿರ್ಮಿಸಿ, ಶಸ್ತ್ರಾಸ್ತ್ರ ಶಿಕ್ಷಣವನ್ನು ಹೊಂದಿ, ರಾಜ್ಯ ನಿರ್ಮಾಣದ ಹಂಬಲವುಳ್ಳವರಾದರು. ಸ್ಥಳ ವೀಕ್ಷಕರಾಗಿ ವಿಶ್ವಪತಿಯ ಸೇವಕರಾದ ವಿಶ್ರರು ಶಿಲ್ಪಿ ಹಾಗೂ ಸ್ಥಾನಿಕರಾಗಿದ್ದು, ವನೌಷಧಿಗಳ ನಿಗೂಢತೆಯನ್ನು ಬಯಲಿಗೆಳೆದು, ವಿಷ-ಅಮೃತಗಳ ಭೇದವರಿತು, ತಮ್ಮ ಬಾಳನ್ನು ಜನರ ಕ್ಷೇಮಕ್ಕಾಗಿ ಮೀಸಲಾಗಿರಿಸಿದರು. ಕಾರ್ಮಿಕ ಗುಂಪೊಂದು ಇವರ ನಡುವೆ ಬೆಳೆದು, ಮಾನವನ ಸ್ವಧರ್ಮ ನಾಲ್ಕು ಬಗೆಯಾಗಿ ರೂಪುಗೊಂಡಿತು. ವೇದ ಕಾಲದಲ್ಲಿ ಸ್ವಾಯಂಭು ಮನುವಿನಿಂದ ಉಂಟಾದ ಈ ವರ್ಗ ವ್ಯವಸ್ಥೆ ಸ್ವಭಾವ-ಸ್ವಗುಣಗಳ ಪ್ರತಿರೂಪವಾಗಿ, ಮೇಲು-ಕೀಳೆಂಬ ಭೇದವಿಲ್ಲದೆ ಮಧ್ಯಕಾಲದವರೆವಿಗೂ ವಿಜೃಂಭಿಸಿತು. ಕ್ರಮೇಣ ಸಮಾಜದ ಈ ವೈಭವ ಮರೆಯಾಗಿ, ಆನುವಂಶಿಕ ಮೇಲ್ಮೆಯಿಂದ ಮೇಲು–ಕೀಳು ಎಂಬ ಭಾವನೆ ಮೊಳೆತು, ಈ ಚತುರ್ವರ್ಣ ವ್ಯವಸ್ಥೆಯಲ್ಲಿ ಪಂಚಮರ ಭಾವ ನೆಲೆಗೊಂಡಿತು. ಮಾನವನ ವಿಕಸನ, ಕೌಟುಂಬಿಕ ವ್ಯವಸ್ಥೆ, ವರ್ಣಾಶ್ರಮಗಳ ಅಗತ್ಯ, ಸಾಮಾಜಿಕ ವ್ಯವಸ್ಥೆ ಮೊದಲಾದವನ್ನು ಸ್ವಾಯಂಭುವಿನ ಕಥೆಯ ಹಿನ್ನೆಲೆಯಲ್ಲಿ ಗಮನಿಸುತ್ತೇವೆ.

ಜಗತ್ತಿನಲ್ಲಿರುವ ಇತರ ಧರ್ಮಗಳನ್ನು ಬೇರೆ ಬೇರೆ ಮಹಾಪುರುಷರು ಸ್ಥಾಪಿಸಿದರೆ, ಅಪೌರುಷೇಯವಾದ ಸನಾತನ ಆರ್ಯಧರ್ಮವನ್ನು ಯಾರೊಬ್ಬರೂ ಸ್ಥಾಪಿಸಿದುದಲ್ಲ. ಆರ್ಯಾವರ್ತದಲ್ಲಿ ಸನಾತನವಾದ ಆರ್ಯಧರ್ಮವನ್ನು ಪಾಲಿಸುತ್ತಿದ್ದ ಹಿಂದೂಗಳು, 'ಆರ್ಯರು'. ಈ ಹಿನ್ನೆಲೆಯಲ್ಲಿ 'ಆರ್ಯ' ಎನ್ನುವುದು ಒಂದು ನಿರ್ದಿಷ್ಟ ಪಂಗಡದ ಹೆಸರಾಗದೆ, ಉತ್ತಮ-ಉದಾತ್ತ ಜೀವನದ ಸೂಚಿಯಾಗಿ ಕಂಡು

ಬರುತ್ತದೆ. "ಆರ್ಯರು ಭಾರತಕ್ಕೆ ಹೊರಗಿನಿಂದ ಬಂದು ನೆಲೆಸಿದವರು—ಎನ್ನುವ ಹೇಳಿಕೆಗೆ ಪೂರಕವಾಗಿ ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಒಂದು ಹೇಳಿಕೆಯೂ ದೊರೆಯುವುದಿಲ್ಲ"ವೆಂದು ಸ್ವಾಮಿ ವಿವೇಕಾನಂದರು ಒಂದೆಡೆ ಹೇಳಿರುವರು.[3] ಶ್ರೇಷ್ಠವಾದ ಸತ್ಯದ ದರ್ಶನ ಸಾಕ್ಷಾತ್ಕಾರದಿಂದ ಉಂಟಾಗುವ ಶಾಂತಿ, ಆನಂದ, ನೆಮ್ಮದಿಗಳನ್ನು ಒದಗಿಸುವ ಆರ್ಯಧರ್ಮವಾಗಿದೆ. ವಿನಾಯಕರ ಭಾರತ ಸಿಂಧುರಶ್ಮಿ ಆರ್ಯ ಜನಾಂಗದ ಸಂಸ್ಕೃತಿಯ ತಿರುಳಾಗಿರುವುದನ್ನು ನಾವು ಗಮನಿಸುತ್ತೇವೆ.

ದೈಹಿಕ, ಬೌದ್ಧಿಕ ಮತ್ತು ಮಾನಸಿಕ ಸಂಕೀರ್ಣತೆಯುಳ್ಳ ಮಾನವನ ಸಮಸ್ಯೆಗಳನ್ನು ಸಮಗ್ರವಾಗಿ ಎದುರಿಸುವ ಹಿನ್ನೆಲೆಯಲ್ಲಿ ಪುರುಷಾರ್ಥಗಳ ಪಾತ್ರ ಮಹತ್ವದ್ದಾಗಿದೆ. 'ಮೋಕ್ಷ' ಈ ಪುರುಷಾರ್ಥಗಳಲ್ಲಿ ಅತ್ಯುನ್ನತವಾದುದಾದರೂ, ಜೀವನ 'ಧರ್ಮದ' ಹಿರಿಮೆ ಪ್ರಧಾನವಾಗಿದ್ದು ಎಲ್ಲಕ್ಕೂ ಮೂಲವಾಗಿದೆ. ವಿಶ್ವದ ಕಟ್ಟುಪಾಡು ಹಾಗೂ ಸಾಮರಸ್ಯಗಳ ಸಂಕೇತವಾಗಿ ಕಾಣಿಸಿಕೊಳ್ಳುವ 'ಧರ್ಮ' ನೈತಿಕ ಮೌಲ್ಯ ಸೂಚಕವಾಗಿ ವಿಶ್ವಪ್ರೇಮದ ಪ್ರತೀಕವಾಗಿ ಕಂಡುಬರುತ್ತದೆ. ಕ್ರಿಯಾತ್ಮಕ ಹಾಗೂ ಸಂಬಂಧಾತ್ಮಕವಾಗಿರುವ 'ಧರ್ಮ'ವನ್ನು ಪ್ರಾಚೀನ ಪ್ರಜ್ಞಾವಂತರು ವರ್ಣಧರ್ಮ, ಆಶ್ರಮ ಧರ್ಮ, ವರ್ಣಾಶ್ರಮ ಧರ್ಮ, ಗುಣಧರ್ಮ, ನೈಮಿತ್ತಿಕ ಧರ್ಮ ಮತ್ತು ಸಾಮಾನ್ಯ ಧರ್ಮ ಎಂದು ಆರು ರೀತಿಯಲ್ಲಿ ವಿಂಗಡಿಸಿರುವರು. ವ್ಯಕ್ತಿಯು ತನ್ನ ಧರ್ಮವನ್ನರಿತು ಮುನ್ನಡೆಯಲು ಇವು ಸಹಕಾರಿಯಾಗುತ್ತವೆ.

ಆರ್ಯ ಸಮಾಜದ ಸ್ಥಾಪನೆಯ ಕಾಲದಲ್ಲಿನ ನಾಲ್ಕು ಪುರುಷಾರ್ಥಗಳಲ್ಲಿ ಒಂದಾದ 'ಅರ್ಥ'ದ ಸಂಕೇತವಾಗಿ ವಿನಾಯಕರ ಭಾರತ ಸಿಂಧುರಶ್ಮಿಯಲ್ಲಿನ ಆದಿಮ–ಆದಿಮೆಯರ ಕಥೆ ಕಂಡು ಬರುತ್ತದೆ. ಈ ಕಥೆ ವೇದ ಸಂಹಿತೆಯಲ್ಲಿ ಕಾಣದಿದ್ದರೂ ವೈದಿಕ ಕಥೆಗಳಲ್ಲಿ ಗಣನೆಯಾಗಿದೆ ಎಂದು ಕವಿ ಹೇಳಿದ್ದಾರೆ. ಎರಡನೆಯ ಮನುವಾದ ಸ್ವಾರೋಚಿಷನ ಕಾಲದಲ್ಲಿ ನಡೆದ ಘಟನೆ ಇದು. ಒಮ್ಮೆ ಶರ್ಯಣಾವತ್ ತೀರ ಪ್ರದೇಶಗಳಲ್ಲಿ ನೆಲಸಿದ್ದ ಕ್ಷಾತ್ರರ ಕಣ್ಮನಗಳನ್ನು ಸೆಳೆಯುವಂತೆ ಬಿಳಿ, ಕರಿ, ಹಳದಿಯ ಬಣ್ಣವುಳ್ಳ ಪಿಷ್ಟರಾಶಿ ಬೆಟ್ಟದೆತ್ತರ ಬಿದ್ದಿರುವುದು ಕಂಡು ಬಂತು. ತಮಗೆ ಒದಗಿಬಂದಿರುವ ಈ ಸಂಪತ್ತಿನಿಂದ ಸಂತೃಪ್ತರಾಗಿ, ಇವರು ಪಂಚಗೌರೀ ಸೀಮೆಗೆ ಬಂದು ಅಲ್ಲಿನ ಜನರಿಗೆ ಈ ಶುಭವಾರ್ತೆ ತಲುಪಿಸಿದರು. ವರುಣದೇವನ ಆಜ್ಞಾನುಸಾರಿಯಾಗಿ ಜನರು ಒಂದು ದಿನಕ್ಕೆ ಅಗತ್ಯವಿರುವಷ್ಟು ಪಿಷ್ಟವನ್ನು ಮಾತ್ರ ಸಂಗ್ರಹಿಸಬಹುದೆಂದೂ, ವಾರಕ್ಕೆ ಐದು ಹವಳ ಮತ್ತು ಎರಡು ಮುತ್ತುಗಳನ್ನು ಪ್ರತಿ ಕುಟುಂಬದವರು ಅಲ್ಲಿಂದ ಸಂಗ್ರಹಿಸಬಹುದೆಂದೂ ನುಡಿದರು. ಪಿಷ್ಟ ಪ್ರಿಯರಾದ ಜನರು ಇದರಿಂದ ಸಂತುಷ್ಟರಾಗಿ, ನೆಮ್ಮದಿಯ ಬದುಕನ್ನು ಹೊಂದಲು ಸಮುದ್ರ

---

[3] "As for the truth of these theories, there is not one word in our scriptures, not one to prove, that Aryans ever come anywhere outside India."

Complete works of Swamy Vivekananda, Vol. III, p. 293

ತೀರದಲ್ಲಿಯೇ ಗ್ರಾಮವೊಂದನ್ನು ನಿರ್ಮಿಸಿ, ನೆಮ್ಮದಿಯ ಬದುಕಿಗೆ ನಾಂದಿ ಹಾಡಿದರು. ಹೀಗೆ ಬಂದು ನೆಲಸಿದವರಲ್ಲಿ ಆದಿಮ ಆದಿಮೆಯರ ಕುಟುಂಬವು ಪ್ರಧಾನವಾಗಿತ್ತು. ನೆಮ್ಮದಿಯ ಬದುಕು ಬಹುತೇಕ ಪ್ರಿಯವಾದರೂ ನಿಯಮೋಲ್ಲಂಘನೆಯಿಂದ ಅದನ್ನು ಕೆಣಕುವ ಹಂಬಲ ಕೆಲವರಿಗೆ ಸ್ವಾಭಾವಿಕವಾಗಿರುತ್ತದೆ. ಆದಿಮೆ ಹಾಗೂ ಆಕೆಯ ಮಕ್ಕಳಾದ ನೋಧಾ, ಘೋರಾ ಇಂತಹ ಸಾಹಸ ಕಾರ್ಯದಲ್ಲಿ ಯಾರಿಗೂ ತಿಳಿಯದಂತೆ ತೊಡಗಿ, ಪಿಷ್ಟ ಮತ್ತು ಮುತ್ತು-ಹವಳಗಳನ್ನು ಸಾಕಷ್ಟು ಸಂಗ್ರಹಿಸಲು ಪ್ರಯತ್ನಿಸಿ ವಿಫಲರಾಗುತ್ತಾರೆ. ತಮ್ಮ ಈ ಸ್ವಾರ್ಥತೆಯ ಫಲವಾಗಿ ಇವರು ತಮ್ಮ ವಿನಾಶದತ್ತ ತಾವು ಹೊರಳುವುದಲ್ಲದೆ, ಗ್ರಾಮದ ಜನರ ನೆಮ್ಮದಿಯನ್ನು ಹಾಳುಮಾಡಿ, ಅವರನ್ನು ಸಂಕಷ್ಟಕ್ಕೆ ಒಳಪಡಿಸುತ್ತಾರೆ. ಇವರ ಅಂತ್ಯವೂ ದುರ್ಭರವಾಗಿಯೇ ಕೊನೆಗೊಳ್ಳುತ್ತದೆ. ಹುಣಸೆಯ ಚಿಗುರಿನ ಆಸೆಯಿಂದ ಒಮ್ಮೆ ಆದಿಮೆ ಹುಣಸೆಯ ಮರವನ್ನು ಹತ್ತುವಳು. ಈಕೆ ಮರವನ್ನೇರಿದ ಮೇಲೆ ಸಮೀಪದ ಕೊಂಬೆಯೊಂದರಲ್ಲಿ ಕಟ್ಟಿರುವ ಜೇನುಗೂಡನ್ನು ಗಮನಿಸುವಳು. ಜೇನು ಬಿಡಿಸುವ ಕಲೆ ತಿಳಿಯದ ಇವಳು ಸಾವು ತನ್ನನ್ನು ಔತಣಿಸಿ ಕರೆಯುತ್ತಿದೆ ಎನ್ನುವುದನ್ನು ಮರೆತು ಜೇನು ಹುಟ್ಟಿಗೆ ಕೈಹಾಕುವಳು. ಇದರಿಂದ ರೊಚ್ಚಿಗೆದ್ದ ಜೇನು ಹುಳುಗಳು ಆಕೆಯನ್ನು ಕಚ್ಚಲು, ನೋವು ತಾಳಲಾರದೆ ಎತ್ತರದ ಕೊಂಬೆಯಿಂದ ನೆಲದ ಮೇಲೆ ಬಿದ್ದು- ದುರ್ಮರಣವನ್ನು ಹೊಂದುವಳು. ಈಕೆಯ ಮಕ್ಕಳಾದ ಘೋರಾ, ನೋಧಾ ಹೊಟ್ಟೆ ಹೊರೆಯಲು ಅಲೆದಾಡುತ್ತಾ, ನದೀ ತೀರದಲ್ಲಿ ಆಮೆಯೊಂದನ್ನು ಗಮನಿಸುತ್ತಾರೆ. ಅದನ್ನು ಸಮನಾಗಿ ಹಂಚಿಕೊಳ್ಳಲು ಇಬ್ಬರೂ ಇಚ್ಛಿಸದೆ, ವಾದ-ಪ್ರತಿವಾದಗಳಲ್ಲಿ ತೊಡಗುವರು. ಇವರ ಪರಿಣಾಮವಾಗಿ ಕೋಪದಿಂದ ಘೋರಾ ಒಗೆದ ಕಲ್ಲು ನೋಧಾನ ಮರ್ಮಾಂಗಕ್ಕೆ ಬಿದ್ದು, ಸಾವನ್ನಪ್ಪುವನು. ಈ ವೇಳೆಗೆ ಆಮೆ ಇವರಿಂದ ತಪ್ಪಿಸಿಕೊಂಡು ನದೀ ತೀರದತ್ತ ಧಾವಿಸುತ್ತಿದ್ದುದು ಘೋರಾನ ಕಣ್ಣಿಗೆ ಬಿದ್ದು, ಅದನ್ನು ಹಿಡಿಯಲು ವೇಗವಾಗಿ ನದಿಯ ಬಳಿಗೆ ಬರುತ್ತಾನೆ. ಆಗ ಅಲ್ಲಿಯೇ ಇದ್ದ ಮೊಸಳೆ ಅವನನ್ನು ಹಿಡಿದು ಆಹುತಿ ತೆಗೆದುಕೊಳ್ಳುತ್ತದೆ. ತನ್ನ ಮಾತನ್ನು ಕೇಳದೆ ದುರ್ಮರಣವನ್ನು ಹೊಂದಿದ ಹೆಂಡತಿ ಮಕ್ಕಳಿಗಾಗಿ ಆದಿಮ ಮನಸ್ಸಿನಲ್ಲಿ ಮರುಗಿದನು. ಗ್ರಾಮದ ಜನರಿಗೆ ನೆಮ್ಮದಿಯ ಬದುಕನ್ನು ಕೊಡಲು ಬಯಸಿದ ಆದಿಮ, ಸಮುದ್ರ ತೀರದ ಪಿಷ್ಟರಾಶಿಯಿದ್ದ ಸ್ಥಳವನ್ನು ಪರಿಶೀಲಿಸಿದಾಗ ಅವನಿಗೆ ಹಲವು ಬಗೆಯ ಪಿಷ್ಟದ ಕಾಳುಗಳು ಕಂಡು ಬರುತ್ತವೆ. ಗ್ರಾಮದ ಜನರೊಡನೆ ಬೆರೆತು, ಆ ಪಿಷ್ಟದ ಕಾಳುಗಳನ್ನು ಉತ್ತಿ, ಬಿತ್ತಿ ಅನ್ನದ ಸಮಸ್ಯೆಯನ್ನು ನೀಗಿಸುತ್ತಾನೆ. ಹೀಗೆ ಆದಿಮ ಪ್ರಥಮ ಕೃಷಿಕನಾಗುವನು.

ಪ್ರೇಮ, ವಿಶ್ವಾಸ, ಸ್ನೇಹ, ಶ್ರದ್ಧೆ, ಸೌಂದರ್ಯ ಹಾಗೂ ಪ್ರಾಮಾಣಿಕತೆಯ ಸಂಕೇತವಾದ ಕಾಮ ಪುರುಷಾರ್ಥಗಳಲ್ಲಿ ಮೂರನೆಯದಾಗಿದ್ದು, ಎಲ್ಲ ಬಗೆಯ ಸುಖ-ಸಂತೋಷಗಳ ಚಿಲುಮೆಯಾಗಿದೆ. ಧರ್ಮ ಮತ್ತು ಶ್ರದ್ಧೆಯ ಮಗುವೆಂದು ಪರಿಗಣಿತವಾಗಿರುವ ಇದು ಧರ್ಮದೂರವಾದಾಗ, ಭಯಾನಕ. ವಿನಾಯಕರ ಭಾರತ ಸಿಂಧುರಶ್ಮಿಯಲ್ಲಿ 'ಕಾಮ'ದ ಸಂಕೇತವಾಗಿ 'ಯಮೀ-ಯಮರ ಅಗ್ನಿದಿವ್ಯ' ಕಂಡು

ಬರುತ್ತದೆ. ಮೂರನೆಯ ಮನುವಾದ 'ಉತ್ತಮ'ನ ಕಾಲದಲ್ಲಿ ನಡೆದ ಈ ಘಟನೆಗೆ ಸಂಬಂಧಿಸಿದ ಪರಿಚಯು ನಮಗೆ ಮೊದಲು ಋಗ್ವೇದ ಸಂಹಿತೆಯ ಹತ್ತನೆಯ ಮಂಡಲದ ಹತ್ತನೆಯ ಸೂಕ್ತದ ಇಪ್ಪತ್ತೆಂಟು ಸಾಲುಗಳಲ್ಲಿ ಯಮೀ-ಯಮರ ಸಂವಾದ ದಲ್ಲಿ ಕಂಡುಬರುತ್ತದೆ.ವೈವಸ್ವತನ ಮಕ್ಕಳಾದ ಯಮೀ-ಯಮರು ಅವಳೀಮಕ್ಕಳು. ಇವರು ಮಂದ ಪ್ರಕಾಶವುಳ್ಳ ದ್ವೀಪವೊಂದರಲ್ಲಿ ನೆಲಸಿರುತ್ತಾರೆ. ಯೌವನ ಪ್ರಾಪ್ತಳಾದ ಯಮೀ ತನ್ನ ಸೋದರನಾದ ಯಮನಲ್ಲಿ ಅನುರಕ್ತಳಾಗಿ, ಗರ್ಭಾವಾಸದಿಂದ ತನ್ನ ಸಖನಾಗಿರುವ ಅವನನ್ನು ಕೂಡಲು ಇಚ್ಛಿಸಿರುವುದಾಗಿಯೂ, ತನಗೆ ವಿಧಾತನು ಶ್ರೇಷ್ಠವಾದ ಸಂತಾನವನ್ನು ಕೊಡಲೆಂದು ಚಿಂತಿಸುತ್ತಿರುವುದಾಗಿಯೂ ನುಡಿಯುತ್ತಾಳೆ. ತಂಗಿಯ ಈ ಮಾತುಗಳಿಗೆ ಬೆಚ್ಚಿದ ಯಮನು ತಾವಿಬ್ಬರೂ ತಾಯಿಯ ಗರ್ಭದಲ್ಲಿ ಒಟ್ಟಿಗೇ ಇದ್ದು, ಸೋದರ–ಸೋದರಿಯರಾಗಿರುವುದರಿಂದ ಈ ಪತಿ-ಪತ್ನೀ ಭಾವ ಸರಿಯಲ್ಲವೆನ್ನುತ್ತಾನೆ. ಆದರೆ ಯಮೀ ಅವನ ಮಾತನ್ನು ಅಲ್ಲಗಳೆದು, ದೇವತೆಗಳು ತಮ್ಮ ಸ್ವಂತ ದುಹಿತೃ, ಭಗಿನಿಯರನ್ನು ಕಾಮಿಸುವರೆಂದೂ ಪ್ರಜಾಪತಿ ತನ್ನ ಮಗಳನ್ನೇ ಪತ್ನಿಯಾಗಿ ಹೊಂದಿರುವುದರಿಂದ ಯಮನ ಮಾತು ಸರಿಯಲ್ಲವೆಂದು ವಾದಿಸುವಳು. ಅದಕ್ಕೆ ಯಮನು ಆದಿತ್ಯ ಶರಣ್ಯಾದೇವಿಯರನ್ನು ತಂದೆ-ತಾಯಿಯರಾಗಿ ಪಡೆದಿರುವ ತಾವು ತಮ್ಮ ಪವಿತ್ರ ಸಂಬಂಧವನ್ನು ಉಳಿಸಿಕೊಳ್ಳಬೇಕೆನ್ನುತ್ತಾನೆ. ಯಮೀ ಅವನ ಮಾತಿಗೆ ಸಮ್ಮತಿಸದೆ, ತಮ್ಮನ್ನು ಗರ್ಭಾವಸ್ಥೆಯಲ್ಲಿಯೇ ಪ್ರಜಾಪತಿ ಪತಿ–ಪತ್ನಿಯರನ್ನಾಗಿ ಮಾಡಿರುವನೆಂದೂ, ದ್ಯಾವಾ-ಪೃಥ್ವಿಯರು ತಮ್ಮ ದಾಂಪತ್ಯವನ್ನು ಅರಿತಿರುವರೆಂದೂ ಮೊದಲ ಮುಂಬೆಳಗಿನಲ್ಲಾಗುವ ತಮ್ಮ ಪ್ರಥಮ ಸಮಾಗಮವನ್ನು ಯಾರು ತಾನೇ ಕಾಣಲು ಸಾಧ್ಯ ? ಎಂದು ನುಡಿದು, ಹಲವು ಬಗೆಯಲ್ಲಿ ಯಮನನ್ನು ತನ್ನ ಸಮಾಗಮಕ್ಕೆ ಒತ್ತಾಯಿಸುವಳು. ಋತದ ಪಾಲನೆಯಲ್ಲಿ ನಿರತನಾದ ಯಮ ಇವಳ ಒತ್ತಾಯಕ್ಕೆ ಮಣಿಯದೇ ಹೋದಾಗ, ರೋಷದಿಂದ ತಪ್ತಳಾಗಿ ಹಲವು ಬಗೆಯಲ್ಲಿ ಅವನನ್ನು ನಿಂದಿಸಿದರೂ, ಯಮೀ ತನ್ನ ಕಾರ್ಯದಲ್ಲಿ ಸಫಲಳಾಗುವುದಿಲ್ಲ. ಯಮನ ಮುಂದೆ ಯಮೀ ಒಡ್ಡಿದ ಪ್ರಲೋಭ ಅತಿ ಪ್ರಬಲವಾದರೂ, ಸರ್ವಾತ್ಮನಾ ಅದನ್ನು ಗೆಲ್ಲುವ ಆಕಾಂಕ್ಷೆ ಯಮನ ದಾದುದರಿಂದ ವಿಜಯಿಯಾಗುವನು.

ಋಗ್ವೇದದಲ್ಲಿ ಕಂಡು ಬರುವ ಈ ಪ್ರಸಂಗ ಭಾರತ ಸಿಂಧುರಶ್ಮಿಯಲ್ಲಿ ನೂರ ಮೂವತ್ತು ಸಾಲುಗಳಷ್ಟು ವಿಸ್ತೃತವಾಗಿ ಕಂಡುಬರುತ್ತದೆ. ಯಮೀ ತನ್ನ ಸೋದರನನ್ನು ಕಾಮಿಸುವುದಕ್ಕೆ ಕಾರಣವಾದ ಹಿನ್ನೆಲೆಯನ್ನು ಸ್ವತಂತ್ರವಾಗಿ ಊಹಿಸಿ, ಕವಿ ನೈಜವಾದ ಚಿತ್ರಣವನ್ನು ಇಲ್ಲಿ ಕೊಟ್ಟಿರುವರು. ಮಾರೀಚ, ಕಶ್ಯಪ ಮತ್ತು ದಾಕ್ಷಾಯಿಣಿಯರಿಗೆ ವಿವಸ್ವತನ ವರದಿಂದ ಜನಿಸಿದ ಅವಳೀ ಮಕ್ಕಳು. ಯಮೀ-ಯಮರು ಶೈಶವದಲ್ಲಿಯೇ ತಾಯ್ತಂದೆಯರನ್ನು ಕಳೆದುಕೊಂಡು ತಬ್ಬಲಿಗಳಾದ ಇವರು ಪಿತ್ರಾರ್ಜಿತವಾದ ತಮ್ಮ ಮನೆಯಲ್ಲಿ ವಾಸಿಸುತ್ತಾ ವಿದ್ಯೆಯನ್ನು ಕಲಿತು ತಾರುಣ್ಯದ ಹೊಸ್ತಿಲಲ್ಲಿ ಕಾಲಿರಿಸಿದರು. ಹಬ್ಬ–ಹುಣ್ಣಿಮೆಯ ದಿನಗಳಲ್ಲಿ

ನೆರೆ–ಹೊರೆಯವರು ಒಂದಾಗಿ, ತಮ್ಮ ಮಕ್ಕಳ ವಿವಾಹ ವಿಚಾರವನ್ನು ಸಂಭ್ರಮ ದಿಂದ ಪ್ರಸ್ತಾಪಿಸುತ್ತಾ ಕಾಲಕಳೆಯುವುದನ್ನು ಯಮೀ ಗಮನಿಸಿ, ತನಗೆ ಆ ಅವ ಕಾಶವಿಲ್ಲದುದರಿಂದ ತನ್ನ ಮದುವೆ ಸುಲಭ ಸಾಧ್ಯವಾದುದಲ್ಲ ಎಂದು ಮನಗಂಡಳು. ಸೌಂದರ್ಯ ಲತೆಯಾದ ತನ್ನ ತಂಗಿಯ ಅಂಗಾಂಗಗಳಲ್ಲಿ ತಾರುಣ್ಯ ಉಕ್ಕುತ್ತಿದ್ದರೂ ಯಮನು ಅದನ್ನು ಗಮನಿಸದೆ ನಿರ್ಲಿಪ್ತ ಭಾವದಿಂದಿದ್ದನು. ಆಕೆಯ ದೈಹಿಕ ಹಂಬಲ ದಿನದಿಂದ ದಿನಕ್ಕೆ ಹೆಚ್ಚುತ್ತಾ, ತನಗರಿವಿಲ್ಲದಂತೆ ತನ್ನ ಅಣ್ಣನನ್ನೇ ಕಾಮಿಸಿದಳು. ಮೂಲದಲ್ಲಿ ಗೋಚರಿಸದ ಪ್ರಾಕೃತಿಕವಾದ ಸಹಜ ಹಂಬಲ ಯಮೀಯಲ್ಲಿ, ಯೌವನದ ಉನ್ಮತ್ತತೆಯಲ್ಲಿ ಕಾಣಿಸಿಕೊಂಡಿದ್ದು ಇಲ್ಲಿ ಅತಿ ಸಹಜವಾಗಿ ಕಾಣಿಸಿ ಕೊಳ್ಳುತ್ತದೆ. ತನ್ನ ಆಸೆಗೆ ಅನುಗುಣವಾದ ಪ್ರತಿಕ್ರಿಯೆಯನ್ನು ತನ್ನ ಅಣ್ಣನಲ್ಲಿ ಯಮೀ ಕಾಣದೇ ಹೋದಾಗ, ಸ್ತ್ರೀ ಸಹಜವಾದ ನಾಚಿಕೆಯನ್ನು ಬದಿಗೊತ್ತಿ, ಸ್ನೇಹ ಹಾಗೂ ಪ್ರೇಮಭರಿತಳಾಗಿ ತನ್ನ ಮನೋಗತವನ್ನು ವ್ಯಕ್ತಗೊಳಿಸಲು ಸಂದರ್ಭವನ್ನು ಕಾಯುತ್ತಿದ್ದಳು. ಒಂದು ಸಂಜೆ ತನ್ನ ಅಣ್ಣನನ್ನು ಸವಿಯಾದ ತಿನಿಸುಗಳಿಂದ ಉಪಚರಿಸಿ, ಹೊರಗೆ ಹೋಗಲು ಸಿದ್ಧನಾದ ಅವನನ್ನು ತಡೆದು, ಬಾಗಿಲನ್ನು ಮುಚ್ಚಿ, ತನ್ನ ಮನೋಗತವನ್ನು ವ್ಯಕ್ತಪಡಿಸಿದಳು. ನಿರ್ಜನವಾದ ಆ ಸ್ಥಳದಲ್ಲಿ ಸಂಗಮೋತ್ಸುಕಳಾಗಿರುವ ತನ್ನೊಡನೆ ಕೂಡಿ, ಗುಣಿಯಾದ ಪೃಥ್ವೀಪತ್ರಿ ಯನ್ನು ಮಗನಾಗಿ ತನಗೆ ಕರುಣಿಸುವಂತೆ ಯಮೀ ನುಡಿದಾಗ ಯಮನು ದಿಗ್ಭ್ರ ಮಿತನಾಗುವನು. ವಿಲಾಸಿನಿಯಂತೆ ನುಡಿದ ತನ್ನ ತಂಗಿಯ ವಿಕೃತ ಕಾಮಕ್ಕೆ ತಡೆಯ ನ್ನೊಡ್ಡುವಂತೆ ಯಮನು ತಮ್ಮ ಈ ಸೋದರ ಸುಬಂಧದಲ್ಲಿ ದಾಂಪತ್ಯದ ಮೊಳಕೆ ಸರಿಯಲ್ಲವೆನ್ನುವನು, ಆದರೆ ಕಾಮತಪ್ತಳಾದ ಯಮೀ ಅವನ ಹಿತನುಡಿಯನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಹಲವಾರು ನಿದರ್ಶನಗಳಿಂದ ತನ್ನ ನಿಲುವನ್ನು ಸಮರ್ಥಿಸಿ ಕೊಳ್ಳಲು ಪ್ರಯತ್ನಿಸಿದರೂ ಯಮನ ಅಚಲ ನಿರ್ಧಾರದ ಮುಂದೆ ಅವು ವಿಫಲ ವಾಗುತ್ತವೆ. ಕಾಮಾವಿಷ್ಟಳಾದ ಅವಳು ಹಲವು ಬಗೆಯಲ್ಲಿ ತನ್ನ ಅಣ್ಣನನ್ನು ನಿಂದಿ ಸುತ್ತಾಳೆ. ಅವಳ ಬಾಳಿನಲ್ಲಿ ಸುಭವ್ರತೆಯೊದಗಲೆಂದು ಹಾರೈಸಿ ಯಮನು ಆ ಸ್ಥಳ ವನ್ನು ಬಿಟ್ಟು ಬೇರೊಂದು ಪರ್ವತ ರಾಜ್ಯದಲ್ಲಿ ನೆಲೆಸಿ, ಧೂಮೋರ್ಣ ಎಂಬು ವಳನ್ನು ವರಿಸಿ, ಹಲವು ಕಾಲ ಅಲ್ಲಿ ರಾಜ್ಯವಾಳಿ ಕೊನೆಯಲ್ಲಿ ಪಿತೃಲೋಕದ ಸ್ವಾಮಿ ಯಾಗಿ ವಿರಾಜಿಸುತ್ತಾನೆ. ಉತ್ಕಟ ಸಂವೇದನೆಯ ಹಿನ್ನೆಲೆಯಲ್ಲಿ ಪರಿವರ್ತಿತವಾಗು ತ್ತಿದ್ದ ಆರ್ಯ ಸಂಸ್ಕೃತಿಯ ಹೊಸ ನೈತಿಕ ಆರಂಭ ಇಲ್ಲಿ ಗೋಚರಿಸುತ್ತದೆ. ಐದನೆಯ ಮನುವಾದ ರೈವತನ ಕಾಲದಲ್ಲಿ ಬ್ರಹ್ಮಾವರ್ತದ ಅಂಚಿನಲ್ಲಿರುವ ನೆರೆಯ ರಾಜ್ಯವೊಂದರಲ್ಲಿ ಧರ್ಮ ಸಮಸ್ಯೆಗೆ ಸಂಬಂಧಿಸಿದ ಘಟನೆ ವಿನಾಯಕರ ಭಾರತ ಸಿಂಧುರಶ್ಮಿಯಲ್ಲಿ ಕಂಡುಬರುವ 'ಭುಜ್ಯುವಿನ ಧರ್ಮ ಸಮಸ್ಯೆ.' ಅಶ್ವಿನೀದೇವತೆಯರ ಕೃಪೆಗೆ ಪಾತ್ರರಾದ ಹಲವು ಭಕ್ತರಲ್ಲಿ ಒಬ್ಬನಾದ ಭುಜ್ಯುವಿನ ಕಥೆ ಋಗ್ವೇದ ಸಂಹಿತೆ ಯಲ್ಲಿ ಸಂಕ್ಷಿಪ್ತವಾಗಿ ಚಿತ್ರಿತವಾಗಿದೆ. ಕವಿ ವಿನಾಯಕರು ಅದನ್ನು ತೀರ ಸ್ವತಂತ್ರ ವಾಗಿ ಇಪ್ಪತ್ತೆಂಟು ಪುಟಗಳಲ್ಲಿ ನಿರೂಪಿಸಿರುವರು. ಋಗ್ವೇದದಲ್ಲಿನ ಪರಿಸರಕ್ಕಿಂತ ಭಿನ್ನವಾದ ಪರಿಸರ ಇಲ್ಲಿ ಕಂಡು ಬರುತ್ತದೆ.

ಬ್ರಹ್ಮಾವರ್ತದ ಅಂಚಿನಲ್ಲಿದ್ದ ರಾಜ್ಯವೊಂದನ್ನು ಇಂದ್ರ ಭಕ್ತರಾದ ತುಗ್ರ ಮತ್ತು ಘೋಷಾರಾಣಿ ಆಳುತ್ತಿದ್ದರು, ಅಶ್ವಿನೀ ದೇವತೆಯರ ಪರಮ ಆರಾಧಕನಾಗಿದ್ದ ಈ ರಾಜ್ಯದ ಯುವರಾಜ 'ಭುಜ್ಯ', ರಥದ ಶರ್ಯತ್ತಿನಲ್ಲಿ, ಅಶ್ವಾರೋಹಣದಲ್ಲಿ, ಮಲ್ಲಯುದ್ಧದಲ್ಲಿ ಅಸಹಾಯಶೂರನಾಗಿ, ತನ್ನ ತಂದೆಯ ಹಾಗೂ ಪ್ರಜೆಗಳ ಕಣ್ಮಣಿಯಾಗಿದ್ದನು. ದೇವತಾ ಸ್ತುತಿಯಲ್ಲಿ ಅವನಿಗೆ ಅವನೇ ಸಾಟಿ. ಅವನ ಮಲತಾಯಿಯಾದ ಘೋಷಾರಾಣಿಗೆ ಅವನ ಬಗ್ಗೆ ಮಾತ್ಸರ್ಯ ಭಾವನೆಯಿತ್ತು. ಕಪೋತವೊಂದರ ಕುತ್ತಿಗೆಯ ಮೇಲೆ ಮಿರಿ ಮಿರಿ ಮಿಂಚುವ ಬಣ್ಣದ ಬಗ್ಗೆ ಒಂದು ದಿನ ಇವರಿಬ್ಬರಲ್ಲಿ ನಡೆದ ಸಂವಾದ ದೈವ ನಿಂದನೆಯವರೆವಿಗೂ ಬೆಳೆಯಿತು. ತಮ್ಮ ಕುಲದೈವವಾದ ಇಂದ್ರನ ನಿಂದೆಯನ್ನು ನಿಲ್ಲಿಸುವಂತೆ ಘೋಷಾರಾಣಿ ಆರ್ಭಟಿಸಿದಳು. ಅದಕ್ಕೆ ಶಾಂತತೆಯಿಂದ ಭುಜ್ಯ ಇಂದ್ರ ತನಗೂ ಪೂಜನೀಯನಾಗಿರುವುದರಿಂದ ಭೇದ ವೆಣಿಸುತ್ತಿಲ್ಲವೆಂದೂ, ಮಾತಿನ ಭರದಲ್ಲಿ ಆಕೆಯ ಪ್ರಶ್ನೆಗೆ ತನ್ನ ತುಟಿ ಅಲುಗಾಡಿತೆಂದು ಹೇಳಿದನು. ಆದರೆ ಇದರಿಂದ ಆಕೆಗೆ ನೆಮ್ಮದಿಯುಂಟಾಗಲಿಲ್ಲ. ತನ್ನ ಪ್ರಿಯ ಪತಿ ಅಂತಃಪುರಕ್ಕೆ ಆಗಮಿಸುವುದನ್ನು ಕಾಯುತ್ತಿದ್ದಳು. ಅವನು ಬಂದಾಗ ತಾನು ಮಾತೃವಿಹೀನನಾದ ಭುಜ್ಯುವನ್ನು ತನ್ನ ಮಗನಂತೆ ಕಾಣುತ್ತಿದ್ದರೂ, ಕುಲದೈವವಾದ ಇಂದ್ರನನ್ನು ನಿಂದಿಸಿ ಅವನು ಮಾತನಾಡಿದುದು ಅಕ್ಷಮ್ಯ ಅಪರಾಧವಾದುದರಿಂದ, ಅವನನ್ನು ನಿರಾಕರಿಸಿ, ತನ್ನ ಮಗ ಮಂದನನಿಗೆ ಪಟ್ಟಗಟ್ಟುವಂತೆ ತಿಳಿಸುವಳು. ತುಗ್ರನು ತನ್ನ ಮಡದಿಯನ್ನು ಸಂತೈಸಿ, ಅನಂತರ ಭುಜ್ಯುವನ್ನು ಕರೆಸಿ ವಿಚಾರ ತಿಳಿಯುತ್ತಾನೆ. ಭುಜ್ಯುವಿನ ಮಾತಿನಲ್ಲಿ ಅವನಿಗೆ ಯಾವ ದೋಷವೂ ಕಾಣುವುದಿಲ್ಲ. ಆದರೆ ಚಂಡಿಯಂತಿರುವ ತನ್ನ ರಾಣಿಯೊಡನೆ ಗುದ್ದಾಡಿದರೂ ನಿಷ್ಪ್ರಯೋಜಕವೆಂದು ಭಾವಿಸಿ ಚಿಂತಾಕ್ರಾಂತನಾಗುವನು. ಅವನ ಸಮಸ್ಯೆಗೆ ಪರಿಹಾರವೆಂಬಂತೆ ಮಾರನೆಯ ದಿನ ದೂತರು ರಾಜನಿಗೆ ಕಾಣಿಸಿಕೊಂಡು, ತಮ್ಮ ಕ್ಷೇತ್ರಕ್ಕೆ ಸೇರಿರುವ ಹೊಲಗದ್ದೆಗಳ ಪೈರನ್ನು ಜಂಬಪ್ರಸ್ಥವಾಸಿಗಳು ಕೊಂಡೊಯ್ದಿರುವರೆಂದು ಹೇಳಿದರು. ಅರಮನೆಯ ವಿರಸವನ್ನು ತಪ್ಪಿಸಲು ಈ ಸುಸಂಧಿಯನ್ನು ಬಳಸಿಕೊಳ್ಳಲು ನಿಶ್ಚೈಸಿ, ತನ್ನ ಮಗನನ್ನು ಕರೆಯಿಸಿ, ವಿಷಯ ತಿಳಿಸಿ, ಜಂಬಪ್ರಸ್ಥವಾಸಿಗಳ ಜಂಬವನ್ನು ಅಣಗಿಸುವಂತೆ ನುಡಿದನು. ತಂದೆಯ ಅನುಜ್ಞೆಯಂತೆ ಪಯಣಕ್ಕೆ ಸಿದ್ಧನಾಗಿ, ತಾಯಿಯ ಆಶೀರ್ವಾದ ಹೊಂದಲು ಅಂತಃಪುರಕ್ಕೆ ಬಂದನು. ಅನಿರೀಕ್ಷಿತವಾದ ಈ ಘಟನೆಯಿಂದ ಘೋಷಾರಾಣಿ ವಿಸ್ಮಿತಳಾದರೂ, ತನ್ನ ಆರ್ಭಟಕ್ಕೆ ತಕ್ಕ ಉತ್ತರ ದೊರೆಯಿತೆಂದು ಮನದಲ್ಲಿ ಸಂತೋಷಿಸಿದರೂ, ತನಗರಿವಿಲ್ಲದೆ ಭುಜ್ಯುನನ್ನು ಮನಃಪೂರ್ವಕವಾಗಿ ಆಶೀರ್ವದಿಸಿದಳು. ಭುಜ್ಯ ಮುನ್ನೂರು ಯೋಧರೊಡನೆ ದಿಗ್ವಿಜಯ ಯಾತ್ರೆ ಕೈಗೊಂಡು, ಜಂಬಪ್ರಸ್ಥದ್ವೀಪದ ಕುರಂಗ ನೃಪನ ಸಖ್ಯತೆ ಬೆಳೆಸಿ, ಅಶ್ವಿನಿಯರ ಕೃಪೆಯಿಂದ ಅವನ ರಾಣಿಯಾದ ವಿಶ್ಪಲೆಯ ಕಾಲುಗಳನ್ನು ಸರಿಪಡಿಸಿ, ತನ್ನ ರಾಜ್ಯಕ್ಕೆ ಹಿಂತಿರುಗುತ್ತಾನೆ. ರೋಗದಿಂದ ನರಳುತ್ತಿದ್ದ ಮಂದನ ಮತ್ತು ಬಿಳಿಯ ಮಚ್ಚೆಗಳಿಂದ ಆವೃತಳಾದ ಘೋಷಾರಾಣಿಯ ರೋಗವನ್ನು ಅಶ್ವಿನಿಯರ ಕೃಪೆಯಿಂದ ಪರಿಹರಿಸಿ, ಅವನ ವಿಶ್ವಾಸಕ್ಕೂ ಪಾತ್ರನಾಗುತ್ತಾನೆ.

ಭುಜ್ಯುವಿನ ತಂದೆ ಇಲ್ಲಿ ಇಂದ್ರಭಕ್ತನಾದರೂ ಇಂಗಿತ ಜ್ಞಾನವುಳ್ಳ ಉನ್ನತ ವ್ಯಕ್ತಿಯಾದುದರಿಂದ, ಮಗನು ಅಶ್ವಿನಿಯರಲ್ಲಿ ಒಲವು ತೋರಿಸಿದಾಗ ಅದನ್ನು ಅಂತ ರಂಗದಲ್ಲಿ ಮೆಚ್ಚಿಕೊಳ್ಳುತ್ತಾನೆ. ಋಗ್ವೇದದಲ್ಲಿ ಇವನು ಅಶ್ವಿನಿಯರಿಗೆ ಪ್ರಿಯನಾದ ರಾಜರ್ಷಿಯಾಗಿ ಕಾಣಿಸಿಕೊಳ್ಳುತ್ತಾನೆ. ವಿನಾಯಕರ ಕಾವ್ಯದಲ್ಲಿ ಕಂಡುಬರುವ ತುಗ್ರ ಉನ್ನತ ವ್ಯಕ್ತಿಯಾಗಿ ಕಾಣಿಸಿಕೊಂಡರೂ, ದೌರ್ಬಲ್ಯದ ಪ್ರತಿನಿಧಿಯಾಗಿ ಆಗಿರುವನು. ತನ್ನ ಮಗನಲ್ಲಿ ಅತಿಶಯವಾದ ಪ್ರೀತಿ–ಅಭಿಮಾನಗಳಿದ್ದರೂ, ಅವನು ಹೇಳುವುದು ಸರಿಯೆಂದು ಕಂಡರೂ, ತನ್ನ ಸತಿಯನ್ನು ದಿಟ್ಟತನದಿಂದ ಎದುರಿಸಿ, ಅದನ್ನು ಹೇಳ ಲಾರದವನಾಗುತ್ತಾನೆ. ಇದೇನೇ ಇದ್ದರೂ, ಭುಜ್ಯುವಿನ ಆಧಿಕ್ಯತೆಯನ್ನು ರೂಪಿಸಲು ಕವಿ ಇಂತಹ ಮಾರ್ಪಾಟುಗಳನ್ನು ಮಾಡಿಕೊಂಡಿರುವಂತೆ ತೋರುತ್ತದೆ

ಧೃವನ ಮೊಮ್ಮಗನೂ ಅರಸೆಯ ಮನುವೂ ಆದ ಚಾಕ್ಷುಷನ ಕಾಲದಲ್ಲಿನ ಘಟನೆ ಪುರುಷಾರ್ಥಗಳಲ್ಲಿ ಕೊನೆಯದಾದ 'ಮೋಕ್ಷ'ಕ್ಕೆ ಸಂಬಂಧಪಟ್ಟ 'ಅಯಾಸ್ಯನ ಅದಿತಿ ಮಂಡಲದ ಸಮಸ್ಯೆ.' ಸಪ್ತರ್ಷಿಗಳ ಜಾಡಿನಲ್ಲಿ ಸಾಗಿ, ಇಂದ್ರಸಮಾನ ತಪಸ್ವಿ ಯಾಗಿ ಸಪ್ತರಶ್ಮಿಯನ್ನು ಮಾನವನು ಕಾಣುವಂತೆ ಮಾಡಿ, ಮನುಕುಲಕ್ಕೆ ಋತಂಬರ ಪ್ರಜ್ಞೆಯನ್ನು ಒದಗಿಸಿದ ಅಯಾಸ್ಯನ ಕಥೆ, ಇದು. ಉತ್ಸರ್ಪಣ ಕಾಂಡದ ತೊಂಬತ್ತು ನಾಲ್ಕು ಪುಟಗಳು ಈ ಕಥನಕ್ಕೆ ಭಾರತ ಸಿಂಧುರಶ್ಮಿಯಲ್ಲಿ ಮೀಸಲಾಗಿದೆ. ಈ ಕಥೆಗೆ ಪ್ರಾಸ್ತಾವಿಕವಾಗಿ ಸೃಷ್ಟಿಯ ವಿಕಸನ, ಅದಿತಿ–ದಿತಿಯರ ಸೃಷ್ಟಿ, ಅದಿತಿ ಮಂಡಲದ ವೈಭವ, ಸಪ್ತಲೋಕ–ಸಪ್ತರಶ್ಮಿಗಳು, ಯಜ್ಞ–ಅಂತರ್ಯಜ್ಞ, ಸಪ್ತರ್ಷಿದರ್ಶನ ಮೊದಲಾದುವು ಸಮಗ್ರವಾಗಿ ಕಂಡುಬರುತ್ತವೆ.

ವಿನಾಯಕರ 'ಭಾರತ ಸಿಂಧುರಶ್ಮಿ'ಯ ಸಮಗ್ರ ಪರಿಚಯವನ್ನೂ ಮಾಡಿ ಕೊಡಲು ಈ ಲೇಖನದ ಪರಿಮಿತಿ ತುಂಬ ಚಿಕ್ಕದು. ಈ ಕೃತಿಯ ವಿಚಾರವಾಗಿ ಒಟ್ಟನಲ್ಲಿ ಇಷ್ಟು ಹೇಳಬಹುದು. ಐತಿಹಾಸಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ, ನೈಸರ್ಗಿಕ ಚೆಲುವಿನ ಭರತ ವರ್ಷದ ರಮ್ಯ ಚಿತ್ರಣವನ್ನು ನಾವು ಇಲ್ಲಿ ಕಾಣುತ್ತೇವೆ. ಪುರಾತನರ ಉದಯಕ್ಕೆ ಮೊದಲು ಭರತ ವರ್ಷದ ಈ ಪುಣ್ಯಭೂಮಿಯಲ್ಲಿ ಗುಂಗುರು ಕೂದಲಿನ ಶ್ಯಾಮಕಾಯರಾದ ಮುಂಡರು ಗೊಂಡಾರಣ್ಯದಲ್ಲಿ ವಾಸಿಸುತ್ತಿದ್ದರು. ದ್ರಾವಿಡರ ಆಗಮನದಿಂದ ವರ್ಣಮಯ ಜನಸಂಕರ ಉಂಟಾಯಿತು. ಆರ್ಯ ಸಂಸ್ಕೃತಿ ಆಗ ಬಂದು ಸಮನ್ವಯಿಸಿತು. ಮಾದ್ರಕ, ವೈತ್ರಿಕ, ನಾಗ, ನಿಷಾಧರು ಅನಂತರ ಈ ನಾಡಿನಲ್ಲಿ ಸೇರಿದರು. ಸೂರ್ಯಾರಾಧಕರು ಕೈವರನ್ನು ಸಂಧಿಸಿದರು. ಆರ್ಯ–ದಸ್ಯು ಜನಾಂಗದ ಹೋರಾಟ, ರಾಜವಂಶಗಳ ಸಂಘಟನೆ, ಮೂಲ ಸಂಸ್ಕೃತಿಯ ಮಥನ, ನಾನಾ ವರ್ಣಗಳ ರೀತಿ ನೀತಿಗಳಿಗೆ ಆಶ್ರಯವಾದ ಸಂಕೀರ್ಣತೆ, ಧೀರ, ಉದಾತ್ತ, ಲಲಿತ, ನೀಚ, ಅಸುರ, ದುಷ್ಟತಮ, ಹಾಸಕಗಳ ಮಿಶ್ರಣ, ಮನುಕುಲದ ಐಕ್ಯತೆ ಮೊದಲಾದವುಗಳ ಚಿತ್ರಣ ಇಲ್ಲಿದೆ. ವೇದ ಕಾಲದ ಕುಟುಂಬ, ಸಾಮಾಜಿಕ ಜೀವನದ ರೀತಿ-ನೀತಿ, ಯಜ್ಞ-ಯಾಗಾದಿಗಳ ಧಾರ್ಮಿಕ ವಿಧಿ-ವಿಧಾನ, ಜಾನಪದ ಜೀವನ, ವೈವಾಹಿಕ ವಿಧಿ, ಕುಟುಂಬ ಹಾಗೂ ಸಮಾಜದಲ್ಲಿ ಸ್ತ್ರೀ

ಪ್ರಾಧಾನ್ಯತೆ, ಸಪ್ತಸಿಂಧುವಿನ ವೈಭವ, ಪ್ರಾಕೃತಿಕ ಹಾಗೂ ಭೌಗೋಳಿಕ ಸಂಪತ್ತು ಮೊದಲಾದುವು ಇಲ್ಲಿ ಮನೋಜ್ಞವಾಗಿ ರೂಪಿತವಾಗಿವೆ. ವೇದಕಾಲದ ಇತಿಹಾಸ, ವಿಶ್ವಾಮಿತ್ರ ಸುದಾಸನ ಕುಲಪುರೋಹಿತನಾಗಿದ್ದು, ವಿಪಾಸಾ, ಶುತದ್ರೀ ತೀರ ಪ್ರದೇಶಗಳಲ್ಲಿ ನಡೆದ ಯುದ್ಧದಲ್ಲಿ ಸಹಾಯಕನಾಗಿದ್ದು, ಅವನು ಜಯಶೀಲನಾಗುವಂತೆ ಮಾಡಿದುದನ್ನು ಹೇಳುತ್ತದೆ. ಅನಂತರ ಸುದಾಸನು ವಿಶ್ವಾಮಿತ್ರನನ್ನು ತಿರಸ್ಕರಿಸಿ, ವಸಿಷ್ಠನನ್ನು ಕುಲಪುರೋಹಿತರನ್ನಾಗಿ ಮಾಡಿಕೊಂಡನು. ಇದರಿಂದ ಕ್ರುದ್ಧನಾದ ವಿಶ್ವಾಮಿತ್ರ ದಶರಾಜರನ್ನು ಕಲೆಹಾಕಿ ಸುದಾಸನ ವಿರುದ್ಧ ಹೋರಾಡುವಂತೆ ಮಾಡಿದರೂ ಸುದಾಸ ಜಯಶೀಲನಾಗುತ್ತಾನೆ. ವೇದಕಾಲದ ಇತಿಹಾಸದಲ್ಲಿನ ಈ ಅಂಶ ಇಲ್ಲಿ ಬದಲಾವಣೆ ಹೊಂದಿರುವುದಲ್ಲದೆ, ಸುದಾಸ–ವಿಶ್ವಾಮಿತ್ರರ ಸಂಬಂಧ ಅನ್ಯೋನ್ಯತೆಯ ಸಂಕೇತವಾಗಿ ಉಳಿಯುತ್ತದೆ.

ಯಶೋಧರ ಚರಿತೆಯಲ್ಲಿ ಧರ್ಮವಿವಕ್ಷೆ

ಕೆ. ಪುಟ್ಟಯ್ಯ

ಜೈನ ಧಾರ್ಮಿಕ ಕಾವ್ಯಗಳಲ್ಲಿ ಸಾಮಾನ್ಯವಾಗಿ ಶೃಂಗಾರ ನಿರೂಪಣೆಯು ವೈರಾಗ್ಯಕ್ಕೆ ಪೋಷಕವಾಗಿ ಬರುತ್ತದೆ. ಜನ್ನನ ಯಶೋಧರ ಚರಿತೆ ಇದಕ್ಕೆ ಹೊರತಲ್ಲ. ಆದರೆ ಜನ್ನನು ಶೃಂಗಾರವನ್ನು ಸಾಂಪ್ರದಾಯಿಕ ಪರಿಕಲ್ಪನೆಯಿಂದ ಬೇರೆಯಾದ ಆಯಾಮ ಒಂದರಲ್ಲಿ ನಿರ್ವಹಿಸಿರುವುದು ಅವನ ವೈಶಿಷ್ಟ್ಯ. ಭವಿಯ ಜೀವಿತಕ್ಕೆ ಸಹಜವಾದ ಪ್ರಣಯ ಪ್ರಸಂಗವೊಂದು ಕಾವ್ಯದ ಕೇಂದ್ರವೆಂಬಂತೆ ಜನ್ನ ನಿರ್ವಹಿಸಿದ್ದರೂ ಅವನ ಗುರಿ ಅಹಿಂಸಾಧರ್ಮವನ್ನು ಪ್ರತಿಪಾದಿಸುವುದೇ ಆಗಿದೆ. "ಪ್ರಣಯ ನಿರೂಪಣೆಯಂತೂ ಕವಿಯ ಇಚ್ಛೆ ಅಲ್ಲವೇ ಅಲ್ಲ. 'ಕಾಮ ವಿಕಾರ ನಿರೂಪಣೆ'ಯೆಂದರೂ ಕಾಮ ವಿಕಾರ ನಿರೂಪಣೆಗಾಗಿಯೇ ನಿರೂಪಣೆಯಲ್ಲ."[1] ಎಂಬ ಕುವೆಂಪುರವರ ಪ್ರತಿಪಾದನೆಯಲ್ಲಿ ಕಾವ್ಯದ ಗುರಿ ಧರ್ಮ ಎಂಬ ನಿಲುವು ಇದೆ. ಕಾಮಕ್ಕೆ ಸಂಬಂಧಿಸಿದ ನಿರೂಪಣೆ ಜನ್ನನ ಕಾವ್ಯದಲ್ಲಿ ಇರುವುದನ್ನು ಒಪ್ಪಿಕೊಂಡದ್ದು ಸ್ಪಷ್ಟವಿದೆ.

ತೀ ನಂ. ಶ್ರೀಯವರು ಪ್ರಣಯ ಜೀವನವನ್ನು ಒಂದು ಸಮಸ್ಯೆಯಾಗಿ ಕವಿ ದರ್ಶಿಸಿರುವುದನ್ನು ಲಕ್ಷಿಸಿದ್ದಾರೆ. ನೀತಿ, ಸಾಮಾಜಿಕ ವ್ಯವಸ್ಥೆ, ಕಾಲ, ಪದವಿ, ಪಾಪ-ಪುಣ್ಯ ವಿವೇಚನೆ ಇತ್ಯಾದಿ ಮರ್ಯಾದಿತ ಬೇಲಿಗಳನ್ನು ಮೀರಿ ವ್ಯಾಪಿಸಿರುವ ಪ್ರಣಯ ಕೋಲಾಹಲಕ್ಕೆ ಕವಿ ಆಶ್ಚರ್ಯಗೊಂಡಿರುವುದನ್ನು ವಿವರಿಸಿ ಜನ್ನ ಒಡ್ಡಿರುವುದು 'ಪ್ರಣಯ ಸಮಸ್ಯೆಯ ವಿಶಿಷ್ಟತೆ'ಯನ್ನು ಎಂದಿದ್ದಾರೆ.[2] ಜನ್ನನು ಯಶೋಧರ ಚರಿತೆಯಲ್ಲಿ "ಅದಮ್ಯವಾದ ಪ್ರಣಯ, ನೀತಿ ಧರ್ಮಗಳ ಎಲ್ಲೆ-ಕಟ್ಟುಗಳನ್ನು ಕೆಡವಿ ಹೇಗೆ ಬದುಕನ್ನು ಬಗ್ಗಡವನ್ನಾಗಿ ಮಾಡಬಹುದೆಂಬುದರ ಜೊತೆಗೆ ಹಾನಿಕಾರಕವೂ ದುರಂತವೂ ಆಗಬಲ್ಲುದೆಂಬುದನ್ನು ತುಂಬ ಪರಿಣಾಮಕಾರಿಯಾದ ರೀತಿಯಲ್ಲಿ ಮನದಟ್ಟು ಮಾಡಿಕೊಡುತ್ತಾನೆ"[3] ಎಂದು ಜಿ. ಎಸ್. ಶಿವರುದ್ರಪ್ಪನವರು ಪ್ರಣಯ ಸಮಸ್ಯೆಯನ್ನೇ ಗುರುತಿಸಿದ್ದಾರೆ.

---

[1] ಕುವೆಂಪು : 'ಯಶೋಧರ ಚರಿತೆಯಲ್ಲಿ ಕಾಮ ವಿಕಾರ ನಿರೂಪಣೆಯ ಉದ್ದೇಶ,' ದ್ರೌಪದಿಯ ಸಿರಿಮುಡಿ, ಪುಟ ೨೧

[2] ಶ್ರೀಕಂಠಯ್ಯ ತೀ ನಂ, 'ಜನ್ನನ ಯಶೋಧರ ಚರಿತೆಯಲ್ಲಿ ಪ್ರಣಯ ಸಮಸ್ಯೆ : ಕಾವ್ಯ ಸಮೀಕ್ಷೆ, ಪುಟ ೫೫-೬೩

[3] ಶಿವರುದ್ರಪ್ಪ ಜಿ. ಎಸ್., ಕನ್ನಡ ಸಾಹಿತ್ಯ ಸಮೀಕ್ಷೆ, ಪುಟ. ೯೧

ಗಿರಡ್ಡಿ ಗೋವಿಂದರಾಜು ಅವರು ಕಾವ್ಯದಲ್ಲಿ ಪ್ರಣಯದ ಸಮಸ್ಯೆಗೆ ಕಾರಣವನ್ನು ಹುಡುಕುವುದು ಸರಿಯಲ್ಲವೆಂದಿದ್ದಾರೆ.... "ಯಶೋಧರ–ಅಮೃತಮತಿಯರ ಪ್ರಣಯ ಪ್ರಸಂಗವೇ ಯಶೋಧರ ಚರಿತೆಯ ತಿರುಳು ಎಂದು ಹೇಳುವುದಾದರೆ ಆ ಕಾವ್ಯದ ಉದ್ದೇಶವನ್ನು ಸರಿಯಾಗಿ ಗ್ರಹಿಸಿದಂತಾಗುವುದಿಲ್ಲ. ಅಮೃತಮತಿಯ ಪಾತ್ರ ವಿಶ್ಲೇಷಣೆಯಲ್ಲಿ ಅನೇಕ ಜನ ವಿಮರ್ಶಕರು ತೋರಿಸಿರುವ ಆಸಕ್ತಿ ಒಂದು ದೃಷ್ಟಿಯಿಂದ ಅಸಾಹಿತ್ಯಕವಾದುದು."[4] ಗಿರಡ್ಡಿಯವರ ನಿಲುವು ಕಾವ್ಯದ ಉದ್ದೇಶವನ್ನು ಮರೆಯಬಾರದೆಂದೇ ಹೊರತು ಅಲ್ಲಿ ಬಂದಿರುವ ಪ್ರಣಯ ಪ್ರಸಂಗದ ನಿರಾಕರಣೆಯಲ್ಲ.

ಯಶೋಧರ–ಅಮೃತಮತಿಯರ ದಾಂಪತ್ಯದಲ್ಲಿ ಬಂದೊದಗಿದ ದುರಂತ ಪೂರ್ಣವಾಗಿ ಆಕಸ್ಮಿಕವೆನ್ನುವಂತಿಲ್ಲ. ಕಾರ್ಯ ಕಾರಣ ಸಂಬಂಧಗಳು ಮೇಲು ನೋಟಕ್ಕೆ ಕಾಣಿಸಿದ ಎಷ್ಟೋ ಘಟನೆಗಳು ಬದುಕಿನ ವಿಸ್ತೃತ ರಂಗದಲ್ಲಿ ಅಸಂಭವನೀಯವೇನೂ ಅಲ್ಲ. "ಯಶೋಧರ ಚರಿತೆಯಲ್ಲಿ ಲೌಕಿಕ ಕಥೆಯೊಂದು ಧಾರ್ಮಿಕ ಉದ್ದೇಶಕ್ಕೆ ಹಿನ್ನಲೆಯಾಗಿ ಮೈದಾಳಿದೆ. ಸಾಂಸಾರಿಕ ದುರಂತ ಒಂದನ್ನು ಚಿತ್ರಿಸುವ ಈ ಕಥೆ ಸಮಗ್ರ ಕಾವ್ಯದ ದೃಷ್ಟಿಯಿಂದ ಪ್ರಾಸಂಗಿಕವಾಗಿ ಕಂಡರೂ ಅದೊಂದು ಕೇಂದ್ರ ಬಿಂದುವಾಗಿರುವುದನ್ನು ಅಲಕ್ಷಿಸುವಂತಿಲ್ಲ."[5] ಈ "ಕೇಂದ್ರ ಬಿಂದು" ವಾಸ್ತವವಾಗಿ ಜೀವಿಗಳ ಏಳು–ಬೀಳುಗಳಿಗೆ ಕಾರಣವಾದ ಅದಮ್ಯ ಕಾಮವಾಗಿದೆ. ಅಷ್ಟೇ ಅಲ್ಲ ಕೃತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಕಾಮದ ಅದಮ್ಯ ಶಕ್ತಿಯು ಇಡೀ ಕಾವ್ಯವನ್ನೇ ವ್ಯಾಪಿಸಿಕೊಂಡಿರುವುದು ಕಂಡುಬರುತ್ತದೆ. ಅದು ಅಮೃತಮತಿಗೆ ಮಾತ್ರ ಜಾರುವ ದಾರಿಯಲ್ಲಿ ಅಡಿ ಇಡಲು ಪ್ರೇರಣೆ ನೀಡಿದ್ದಲ್ಲ; ಯಶೋಧರ ಮತ್ತು ಚಂದ್ರಮತಿಯರೂ ಕೂಡ ಕಾಮದ ಜಟಿಲ ಜಾಲದಲ್ಲಿ ಸಿಕ್ಕಿ ಬಿದ್ದವರೇ ಆಗಿದ್ದಾರೆ. ಈ ದೃಷ್ಟಿಯಿಂದ ಅಮೃತಮತಿಯ ವರ್ತನೆಯಲ್ಲಿ ನಿಶ್ಚಲವಾಗಿ ಕಾಣುವ ರೀತಿಗಿಂತ ಬೇರೆಯಾದ ಗುಪ್ತಕಾಮದ ಪರಿಯನ್ನು ಎ.ಎಸ್. ವೇಣುಗೋಪಾಲ್‌ರಾವ್‌ರವರು ಗುರುತಿಸಿರುವುದು ಸೂಕ್ತವಾಗಿದೆ.[6]

ಸಕಲ ಜೀವಿಗಳಿಗೂ ಸಹಜವಾದ ಈ ಕಾಮದ ಕಂದರದಿಂದ ನಿರ್ಮೋಹ, ನಿರ್ವಿಕಾರ ಸ್ಥಿತಿಗೆ ಏರುವ ಜೀವದ ವಿಕಾಸ ಪಥವನ್ನೇ ಜನ್ನ ಧರ್ಮ ಎಂದು ಪ್ರತಿಪಾದಿಸಿದ್ದು ಅತ್ಯಂತ ಕುತೂಹಲದ ಸಂಗತಿಯಾಗಿದೆ. ಪ್ರಾಣಿ ಪಾತಳಿಯಿಂದ ವಿಕಾಸವಾಗಬೇಕಾದ ಜೀವದ ಹೋರಾಟ ಜನ್ನನ ಕಾವ್ಯದ ಹೃದಯದಂತಿದೆ.

---

[4] ಗಿರಡ್ಡಿ ಗೋವಿಂದರಾಜು : "ಜನ್ನನ ಯಶೋದರ ಚರಿತೆ", ವಿಮರ್ಶೆಯ ದಾರಿ, ಪುಟ. ೮೫

[5] ಕೃಷ್ಣಕುಮಾರ್ ಸಿ. ಪಿ. : ಕನ್ನಡ ಯಶೋಧರ ಚರಿತೆ, ಪೀಠಿಕೆ ಪುಟ XLI

[6] ವೇಣುಗೋಪಾಲ್ ರಾವ್ ಎ. ಎಸ್. : "ಯಶೋಧರನ ಧೃತಿ"— ಪ್ರಬುದ್ಧ ಕರ್ಣಾಟಕ ಸಂ ೬೪ (೩–೪) ಪು. ೧೩೫–೧೪೦

ಕಾಮದ ಸಮಸ್ಯೆ ಜನ್ನನ ಕೃತಿಯಲ್ಲಿ ಎಷ್ಟು ಪ್ರಗಾಢವಾಗಿದೆ ಎಂದರೆ ಯಶೋಧರನ ಜನನ ನಿರೂಪಣೆಯಲ್ಲಿಯೇ ಅವನ್ನು ಸೂಚಿಸಿದ್ದಾನೆ:

......ಚಂದ್ರಮತಿಗಂ
ಜನಪತಿಗಂ ಪುಟ್ಟಿದಂ ಯಶೋಧರನೆಂಬಂ
ಜನಮೋಹನ ಬಾಣಂ ಕ
ರ್ಬಿನ ಬಿಲ್ಗಂ ನನೆಯ ನಾರಿಗಂ ಪುಟ್ಟಿದವೊಲ್ ॥

ಯಶೋಧರ 'ಜನಮೋಹನ ಬಾಣ' ನಾದುದು ಇಲ್ಲಿ ಮುಖ್ಯ. 'ನೋಡುವ ಕಣ್ಗಳ ಸಿರಿ, ಕೂಡುವ ತೋಳ್ಗಳ ಪುಣ್ಯಂ' ಎಂದು ಅವನನ್ನು ಜನ್ನ ವರ್ಣಿಸಿದ್ದಾನೆ. ಎಳೆ ಬೆಳದಿಂಗಳು, ನನೆಗಣೆ, ಮಳಯಾನಿಳದಂತಹ ಅಮೂರ್ತ ವಸ್ತುಗಳಿಗೂ ಆತನ ಚೆಲವನ್ನು ವರ್ಣಿಸುತ್ತಾನೆ. ಇಲ್ಲಿ ಯಶೋಧರ ಒಬ್ಬ ಕಾಮದ ಸಾಕಾರ ಮೂರ್ತಿಯಾಗಿ ನಿರೂಪಿತವಾಗಿರುವುದು ಸ್ಪಷ್ಟ.

ಹೆಚ್ಚಿನ ವಿಮರ್ಶಕರು ಅಮೃತಮತಿಯು ದಾಂಪತ್ಯ ಜೀವನದಲ್ಲಿ ಜಾರುವುದರ ಕಡೆಗೇ ಗಮನ ಹರಿಸಿದ್ದರಿಂದ ಯಶೋಧರನನ್ನು ಧೃತಿಯುಳ್ಳ ವ್ಯಕ್ತಿಯನ್ನಾಗಿ ಪರಿಗಣಿಸಿದ್ದಾರೆ. "ಯಶೋಧರನ ಬಗೆಗೆ ಬಳಸಲಾದ ಧೃತಿ ಎಂಬ ಮಾತನ್ನು ಕವಿಯೇ ಸ್ಪಷ್ಟವಾಗಿ ಆಡಿದ್ದರೂ ಕಥೆಯ ಅಂತರಂಗ ಇದಕ್ಕೆ ವಿರುದ್ಧ ಸಾಕ್ಷ್ಯವನ್ನೇ ಒದಗಿಸುವಂತೆ ತೋರುತ್ತದೆ."[7] ಯಶೋಧರನ ಮೂಲಭೂತವಾದ ದೌರ್ಬಲ್ಯ ಕಾಮಸಂಬಂಧವಾದುದೆಂಬುದನ್ನು ಕಾವ್ಯ ಭಾಗದಲ್ಲಿಯೇ ಗುರುತಿಸಬಹುದು.

ಅಮೃತಮತಿ ಗಡ ಯಶೋಧರ
ನ ಮನಃಪ್ರಿಯೆ ಆಕೆ ದೀವಮಾಗೆ ಪುಳಿಂದಂ ॥
ಸುಮನೋಬಾಣಂ ತದ್ ಭೂ
ರಮಣನನೊಲಿದಂತೆ ಗೋರಿಗೊಳಿಸುತಿರ್ಕುಂ

ಇಲ್ಲಿ ಅಮೃತಮತಿಯು ಪ್ರೇಮದ ಬಗ್ಗೆ ಒಂದೂ ಮಾತೂ ಇಲ್ಲ. ಆವಳ ಅಸ್ತಿತ್ವ ಕಾಮನ "ದೀವ"ವಾಗಿ ಮಾತ್ರ. ಈ ಬೇಡನಿಗೆ (ಕಾಮಕ್ಕೆ) ಬಲಿಯಾಗುವುದು ಯಶೋಧರ. ಯಶೋಧರ 'ದೀವ'ವಾದ ಅಮೃತಮತಿಯನ್ನು ಮನಃಪ್ರಿಯೆ ಎಂದು ತಿಳಿಯುವುದೇ ಮೋಸಹೋಗುವ ರೀತಿ. ಅಮೃತಮತಿಯ ಸಜ್ಜೆಮನೆಗೆ ಆತ ಬರುವುದು "ಚಂದ್ರಮತಿಯ ಸುತ"ನಾಗಿ (ಅಮೃತಮತಿಯ ಪತಿಯಾಗಿ ಅಲ್ಲ) ಅವರು ಸುರತ ನಿರತರಾದದ್ದನ್ನು ಕವಿ "ಮನೋಜ ನಾಡಿಸುವ ಜಂತ್ರದಂತಿದೆ" ಕಾಮ ನಾಡಿಸುವ ಒಂದು ಯಾಂತ್ರಿಕ ಕ್ರಿಯೆ—ಎಂದಿದ್ದಾನೆ.

ಮುಂದಿನ ಕಾವ್ಯ ಭಾಗದಲ್ಲಿ ಅಮೃತಮತಿ, ಯಶೋಧರ ಮತ್ತು ಚಂದ್ರಮತಿಯರನ್ನು ಕಾಮನು ಬೇಟೆಯಾಡುವ ಕಥಾನಕವಿದೆ. ಯಶೋಧರ-ಚಂದ್ರಮತಿಯರಲ್ಲಿ ಈ ಕಾಮ ಇನ್ನು "ಪ್ರಾಣಿ ಪಾತಳಿ"ಯಲ್ಲಿಯೇ ಉಳಿದಿರುವುದೂ, ಮಾನವ ಸಮಾಜದ ವಿಕಾಸ ಪೂರ್ವದ ಕಾಮ ಪ್ರವೃತ್ತಿ ಅವರಿಬ್ಬರನ್ನೂ ಬಿಗಿದಿರುವುದೂ ಕಾವ್ಯದುದ್ದಕ್ಕೂ ಬರುವ ಬೇಟೆಯ ವರ್ಣನೆಯಿಂದ ಧ್ವನಿತವಾಗಿದೆ. ಜನ್ಮಾಂತರ

[7] ವೇಣುಗೋಪಾಲ್‌ರಾವ್ ಎ.ಎಸ್. : ಪೂರ್ವೋಕ್ತ.

ಗಳಲ್ಲಿ ಪ್ರಾಣಿಗಳಾಗಿ ತೊಳಲುವ ಯಶೋಧರ–ಚಂದ್ರಮತಿಯರ ಜೀವಿಗಳು ಕೇವಲ ಧಾರ್ಮಿಕ ಪರಿಕಲ್ಪನೆಗೆ ಅನುಗುಣವಾಗಿ ಬಂದಂತೆ ತೋರುವುದಿಲ್ಲ. ಅದಕ್ಕೂ ಮಿಗಿಲಾಗಿ ಅದು ಆದಿಮಾ ಜೀವನದ ಸಮಷ್ಟಿ ಅನುಭವದ ಪ್ರಣವತೆಯನ್ನು [collective human primordial disposition] ಪ್ರತಿನಿಧಿಸುತ್ತದೆ ಯಶೋಧರ-ಚಂದ್ರಮತಿಯರ 'ಗುಪ್ತರತಿ' ಈ ಆದಿಮಾ ಜೀವನದ ಸ್ಮೃತಿಗಳಾಗಿ ತೋರುತ್ತವೆ, ಈ ಕಾವ್ಯದಲ್ಲಿ ಅಮೃತಮತಿಯ ಕಾಮ ಪ್ರವೃತ್ತಿ ವ್ಯಕ್ತವಾಗಿ ನಿರೂಪಣೆಗೊಂಡಂತೆಯೇ ಚಂದ್ರಮತಿ–ಯಶೋಧರರ ಗುಪ್ತರತಿಯೂ ಬೀಭತ್ಸವಾಗಿ ನಿರೂಪಿತವಾಗಿದೆ.

ಅಮೃತಮತಿ ಜಾರುವ ಬಗೆಯನ್ನು ಕವಿ ನೇರವಾಗಿ ನಿರೂಪಿಸಿದ್ದಾನೆ. ಯಶೋಧರ ಸಜ್ಜೆಯಲ್ಲಿ ಮೈಮರೆತು ಮಲಗಿದ್ದ ಅಮೃತಮತಿಗೆ ಮಾವುತನೊಬ್ಬ ಬಿನದಕ್ಕಾಗಿ ಹಾಡಿಕೊಂಡ ಧ್ವನಿ ಕೇಳಿಸುತ್ತದೆ. ಮಾವುತನ ನುಣ್ದನಿ ಆ ಮೃಗಲೋಚನೆಯ ನಿದ್ರೆಗೆ ಕತಕದ ಬೀಜವಾಗಿಬಿಡುತ್ತದೆ. ಅವಳು ಹಾಡನ್ನು ಕೇಳುವ ಮೊದಲು ರಾಜವೈಭವ, ಧರ್ಮದ ಪರಿಕಲ್ಪನೆ, ದಾಂಪತ್ಯದ ಶಿಷ್ಟಾಚಾರ ಇತ್ಯಾದಿಗಳಿಂದ ಜೊಂಪಿಸುತ್ತಿದ್ದಳು. ಮಾವುತನ ಹಾಡು ಅವಳ ಸಹಜ ಕಾರ್ಯಪ್ರವೃತ್ತಿಯನ್ನು ಬಡಿದೆಬ್ಬಿಸಿತು. ಅದಕ್ಕೆ ಅವಳು ಮುಟ್ಟಿದ ಮನವನ್ನು ಹಾಡುವ ವ್ಯಕ್ತಿಗೆ ಪಸಾಯದಾನವಾಗಿ ಕೊಟ್ಟುಬಿಟ್ಟಳು. ಹಾಡುವ ವ್ಯಕ್ತಿಯನ್ನು "ನೋಡುವ ಕೂಡುವ ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ." ಇಲ್ಲಿಂದ ಮುಂದೆ ಇವಳ ಜೀವನ ಸಮಾಜ–ಕುಟುಂಬಗಳ ನಿಯಂತ್ರಣದಿಂದ ಪೂರ್ಣವಾಗಿ ಮುಕ್ತವಾಗಿಬಿಡುತ್ತದೆ. "ಹಾಡನ್ನು ಮೋಹಿಸಿದ ಅವಳು ಆ ಹಾಡಿನ ಹಿಂದಿರುವ ಮನುಷ್ಯನನ್ನೂ ಕೂಡ ಬಯಸಿ ಇಂದ್ರಿಯಾನುಭವದ ಅಖಂಡತ್ವವನ್ನೂ ಎತ್ತಿ ಹಿಡಿಯುತ್ತಾಳೆ........ರಾಣಿ ಅವನ, ರೂಪು, ಚರ್ಯೆ, ಕುಲಗೋತ್ರ, ಅಂತಸ್ತು, ಯಾವುದನ್ನೂ ಲೆಕ್ಕಿಸದೆ ತನ್ನನ್ನು ಒಪ್ಪಿಸಿಕೊಳ್ಳುತ್ತಾಳೆ. ಮೋಹದ ತೀವ್ರತೆಯಲ್ಲಿ ತನ್ನ ಆವರಣದ ಮೌಲ್ಯಗಳಾದ ಸಂಯಮ, ಶ್ರೇಣೀಕೃತ ವ್ಯವಸ್ಥೆಯ ಮರ್ಯಾದೆ ದಾಂಪತ್ಯನಿಷ್ಠೆ ಇವುಗಳನ್ನು ಧಿಕ್ಕರಿಸುತ್ತಾಳೆ....ತನ್ನ ಸುತ್ತ ಇರುವವರ ಸೌಂದರ್ಯಾನುಭೂತಿಯ ಮಾನದಂಡಗಳನ್ನೂ ಕೂಡ ಆಕೆ ತಿರಸ್ಕರಿಸುತ್ತಾಳೆ."[8] ಆಕೆ ಕಳುಹಿದ ದೂತಿ ಮಾವುತನ ವಿಕಾರ ರೂಪವನ್ನು ಜಿಗುಪ್ಸೆ ಬರುವಂತೆ ವರ್ಣಿಸಿದರೂ 'ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್' ಎಂದುಬಿಡುತ್ತಾಳೆ.

ಯಶೋಧರನಿಗೆ ತಿಳಿಯದಂತೆ ಅವರಿಬ್ಬರ ಕೂಟ ನಡೆಯುತ್ತದೆ. ಅವಳ ನಡೆನುಡಿಯಲ್ಲಾದ ಬದಲಾವಣೆಯನ್ನು ಗಮನಿಸಿದ ಯಶೋಧರ ಒಂದು ರಾತ್ರಿ ನಿದ್ರೆ ಬಂದವರಂತೆ ನಟಿಸುತ್ತಾನೆ. ಅವನ ತೋಳಸೆರೆಯಿಂದ ನುಸುಳಿ ಅಮೃತಮತಿ ಅಷ್ಟಾವಂಕನಲ್ಲಿಗೆ ಬರುತ್ತಾಳೆ ಯಶೋಧರ ಅವಳಿಗೆ ತಿಳಿಯದಂತೆ ಬೆನ್ನ ಹಿಂದೆ ಬರುತ್ತಾನೆ. ತಡವಾಗಿ ಬಂದುದಕ್ಕೆ ಮುಳಿದ ಮಾವುತ ಅರಸಿ ತಂದ ಮಾಲೆ, ತಾಂಬೂ

---

[8] ರಾಜಶೇಖರ ಜಿ. : ರುಜುವಾತು, ೬, ೧೯೭೨, ಪುಟ ೧೬೭

ಲಾದಿಗಳನ್ನು ಚೆಲ್ಲಿ ಅವಳ ಮುಡಿಯನ್ನು ಹಿಡಿದೆಳೆದು ಹಗ್ಗದಿಂದ ಬಡಿದು, ಮೈಯಲ್ಲಿ ಬಾರು ಏಳುವಂತೆ ಬೀಟಿಯ ಕಾಲಿನಿಂದ ಬಡಿಯುತ್ತಾನೆ. ಇಂತಹ ಕ್ರೌರ್ಯಕ್ಕೂ ಅಮೃತಮತಿ ಬೇಸರಿಸದೆ, ಅವನ ಕಾಲಿಗೆರಗಿ, ಕೀರೆ ಹೊರಳುವಂತೆ ಹೊರಳುತ್ತಾಳೆ. 'ನೀನು ಬಿಟ್ಟರೆ ನಾನು ಸಾಯುವವಳು', 'ನನಗೆ ಉಳಿದ ಗಂಡಸರು ಸೋದರ ಸಮಾನರು' ಎಂದು ಹಲುಬುತ್ತಾಳೆ. ಅಮೃತಮತಿಯು ಈ ಮಾತು ಸೋಗಿನದಲ್ಲ, ಆಕೆ ಬದುಕಿನ ಕೊನೆಯ ಗಳಿಗೆಯವರೆಗೆ ಗಜವೆಡಂಗನನ್ನು ತೊರೆಯುವುದಿಲ್ಲ. ತನ್ನ ನಲ್ಲನ ಮೇಲಿನ ನಿಷ್ಠೆಯಿಂದ ಪತಿ ಮತ್ತು ಅತ್ತೆಯರನ್ನು ಕೊಲ್ಲುತ್ತಾಳೆ. ತೊನ್ನಿನಿಂದ ಮೈ ಕೊಳೆತುಹೋಗುತ್ತಿದ್ದರೂ ಅವನ ಕೂಟದಿಂದ ದೂರವಾಗುವುದಿಲ್ಲ. ಅವನ ಅಭಿರುಚಿಗಳಿಗೆ ನಿಷ್ಠೆಯಿಂದ ಹೊಂದಿಕೊಳ್ಳುತ್ತಾಳೆ.

ಅಮೃತಮತಿಯು ಪ್ರಣಯ ಜೀವನದಲ್ಲಿ ಯಾವ ಮುಚ್ಚುಮರೆಯೂ ಇಲ್ಲ, ಆದರೆ ಕಾವ್ಯದ ಇತರ ಮುಖ್ಯ ಪಾತ್ರಗಳನ್ನು ಸಮೀಕ್ಷೆಗೆ ಒಳಪಡಿಸಿದರೆ ಅವುಗಳು ನಿಗೂಢವಾಗಿ ಸಹಜ ಕಾಮದ ಕೋಲಾಹಲಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಕಾಮನೆಂಬ ಪುಳಿಂದನ ಬಾಣಕ್ಕೆ ತುತ್ತಾಗುವುದು ಅಮೃತಮತಿ ಮಾತ್ರವಲ್ಲ; ಚಂದ್ರಮತಿ-ಯಶೋಧರರೂ ಮಾನಸಿಕ ಗುಪ್ತ ಕಾಮಕ್ಕೆ ತುತ್ತಾಗಿದ್ದಾರೆ. ಎ. ಎಸ್. ವೇಣುಗೋಪಾಲ್‌ರವರು ಈ ತಾಯಿ-ಮಗನ ಗಾಢ ಮಾನಸಿಕ ರತಿಯನ್ನು ಗುರುತಿಸಿದ್ದಾರೆ. ಆದರೆ ಸೋಫೋಕ್ಲಸ್‌ನಂತೆ ಮಾನವತ್ವದ ಪಾತಳಿಯಲ್ಲಿಯೇ "ಈಡಿಪಸ್ ಕಾಂಪ್ಲೆಕ್ಸ್"ನ ಮೂರ್ತರೂಪವನ್ನು ತೋರಿಸದೆ ಜನ್ನ ಪ್ರಾಣಿಪಾತಳಿಗೆ ಈ ಜೀವಗಳನ್ನು ನೂಕಿ ಅಲ್ಲಿ ಅದನ್ನು ಮೂರ್ತಗೊಳಿಸುತ್ತಾನೆ.

ಅಮೃತಮತಿ–ಮಾವುತರ ಪ್ರಣಯ ಸನ್ನಿವೇಶವನ್ನು ಕಂಡೂ ಅವರನ್ನು ಕೊಲ್ಲದೆ ಬಿಡುವುದು ಕೊಲೆಗೆ ಹೇಸಿದ ವಿವೇಕದಿಂದಲ್ಲ. ಅದೊಂದು ಬಗೆಯ ಕ್ಷಣಿಕ ವೈರಾಗ್ಯ. ಮರುದಿನ ಮಡದಿಯನ್ನು ಕೆಣಕುತ್ತಾನೆ. 'ಬಗೆ ಕದಡಿ ತಾಯ ಪೊರೆಗೆ' ಹೋಗುತ್ತಾನೆ. ಇದೆಲ್ಲ ಅವನ ಬತ್ತದ ಅನುರಕ್ತಿಯ ಪ್ರತಿತೃಪ್ತಿಯೇ ಆಗಿದೆ.

ಚಂದ್ರಮತಿಯು ಯಶೋಧರನನ್ನು ನಿಟ್ಟಿಸಿ ನೋಡುತ್ತಾಳೆ. ಅವನನ್ನು ಅಮರ್ದಪ್ಪಿ ಜೋತಾಡುವ ಕುರುಳನ್ನು ತಿದ್ದುತ್ತಾಳೆ. ಅವನನ್ನು ಯಶೋಧರ ನೃಪೇಂದ್ರ ಎಂದು ಸಂಬೋಧಿಸುತ್ತಾಳೆ–ಅವನ ಪಿರಿದಾದ ಉರ ನಿತ್ಯವಸಂತವಾಗಿದೆ ಎನ್ನುತ್ತಾಳೆ. 'ಮನುಜ ಮನೋಭವ, ವಿಲಾಸವಸಂತ ಮನಸಿಜನ ಕಲ್ಪಲತಾ ನಂದನ–ಆಗಿರುವ ಯಶೋಧರನ ರೂಪು ಅಬಲಾಜನ ನನೆಕೊನೆಪೋಗಿಸುತ್ತದೆ' ಎನ್ನುತ್ತಾಳೆ. ಇದು ಚಂದ್ರಮತಿ ಯಶೋಧರನನನ್ನು ವರ್ಣಿಸುವ ರೀತಿ! 'ಅಬಲಾಜನ' ಎನ್ನುವಲ್ಲಿ ಆ ಮಾತು ತನ್ನನ್ನೂ ಒಳಗೊಳ್ಳಬಹುದೆಂಬುದನ್ನು ಆಕೆ ಪ್ರಜ್ಞಾಪೂರ್ವಕವಾಗಿ ಗ್ರಹಿಸಿರಲಿಕ್ಕಿಲ್ಲ....ಇಲ್ಲೆಲ್ಲ ಅವರಿಬ್ಬರ ಸಂಬಂಧ ತಾಯಿ-ಮಗನದೆಂಬುದನ್ನು ಮರೆತಲ್ಲಿ ಇದೊಂದು ಪ್ರೇಮಾಲಾಪದಂತೆ ತೋರುತ್ತದೆ.

ಯಶೋಧರನೂ ತನ್ನ ಮನವನ್ನು ತೋರದೆ ತನ್ನ ಮುಖ ಕಾಂತಿಹೀನವಾಗಲು ಕನಸಿನ ಹುಸಿಕಾರಣವನ್ನು ಹೇಳುತ್ತಾನೆ. ಇಲ್ಲಿ ತಾಯಿ-ಮಗ ಇಬ್ಬರೂ ತಮ್ಮನ್ನು ತಾವು ವಂಚಿಸಿಕೊಳ್ಳುತ್ತಾರೆ. ('ವಚನೆಯೆಲ್ಲಿಯುಂ ಮೊಳ್ಪನಾಗ

ಲೀಯದು ಕಡೆಯೊಳ್'') "ಯಶೋಧರನ ಹೃದಯ ಮತಿಗಧೀನವಾಗಿ ವರ್ತಿಸುವ ಪ್ರವೃತ್ತಿಯುಳ್ಳದ್ದಲ್ಲ. ಮತಿಯನ್ನು ಹತ್ತಿಕ್ಕುವ ಮಾತೃವ್ಯಾಮೋಹವು ಪತ್ನೀ ತಿರಸ್ಕಾರದಿಂದ ಪ್ರಜ್ವಲಿತವಾಗಿದ್ದುದರಿಂದ ಅವನ ಹೃದಯವು ಅವನ ಸನ್ಮತಿಯನ್ನು ಮೀರಿ ಹಿಟ್ಟಿನ ಕೋಳಿಯನ್ನು ಕಡಿಯಹೋಗುವಂತೆ ಪ್ರೇರೇಪಿಸಿತು." 'ಸನ್ಮತಿಯನ್ನು ಮೀರಿ ಮಾತೃವ್ಯಾಮೋಹಕ್ಕೆ ಒಳಗಾಗಿರುವುದು ಅವನ ದೌರ್ಬಲ್ಯ. ಈ ದೌರ್ಬಲ್ಯದ ಮೂಲ ಅವನಲ್ಲಿ ಹುದುಗಿದ 'ಗುಪ್ತರತಿ.'

ಅಮೃತಮತಿ ನೀಡಿದ ವಿಷದ ಲಡ್ಡುಗೆ ತಿಂದು ಬಲಿಯಾದ ಯಶೋಧರ-ಚಂದ್ರಮತಿಯರು ನವಿಲು-ನಾಯಿಗಳಾಗಿ ಹುಟ್ಟಿ ತಮ್ಮ ಅರಮನೆಯನ್ನೇ ಸೇರುತ್ತಾರೆ. ಪೂರ್ವಜನ್ಮದಲ್ಲಿ ಪ್ರಣಯ ತಿರಸ್ಕೃತನಾದ ದ್ವೇಷದಿಂದ ನವಿಲು, ಅಮೃತಮತಿಯೊಡನಿದ್ದ ಬಡಗನ ಕಣ್ಣನ್ನು ಕುಕ್ಕುತ್ತದೆ. ನವಿಲು-ನಾಯಿಗಳು ಸತ್ತಾಗ ಯಶೋಮತಿ ತಾಯಿ-ತಂದೆಯರನ್ನು ಕಳೆದುಕೊಂಡವರಂತೆ ಮರುಗುತ್ತಾನೆ. ಇಲ್ಲಿ ಚಂದ್ರಮತಿ-ಯಶೋಧರರ ಪ್ರಾಣಿಪಾತಳಿಯಲ್ಲಿ ಯಶೋಮತಿಗೆ ತಾಯಿ-ತಂದೆ (ಪತ್ನಿ-ಪತಿ)ಯರಂತೆ ಅನಿಸಿದ್ದು ಮಾರ್ಮಿಕವಾಗಿದೆ.

ಪ್ರಾಣಿ ಜನ್ಮಗಳ[೯] ತೊಳಲಾಟದಲ್ಲಿ ಸಹಜ ಕಾಮದ ಪಶುಪ್ರವೃತ್ತಿಗಳನ್ನು ತೆರೆದಿಡುತ್ತ ಜನ್ನ ಅದರ ಪರಮಾವಧಿ ರೌದ್ರವತೆಯನ್ನು ನಾಲ್ಕನೆಯ ಜನ್ಮದಲ್ಲಿ ತೋರಿಸುತ್ತಾನೆ. ಚಂದ್ರಮತಿ ಆಡಾಗಿ ಹುಟ್ಟುತ್ತಾಳೆ. ಅದರ ಗರ್ಭದಲ್ಲಿ ಯಶೋಧರ ಹೋತವಾಗಿ ಹುಟ್ಟುತ್ತಾನೆ. ಬೆಳೆದ ಹೋತ ತಾಯಿ ಆಡನ್ನೇ ರಮಿಸಿಬಿಡುತ್ತದೆ. ಹಾಗೆ ರಮಿಸುತ್ತಿದ್ದ ಹೋತವನ್ನು ಬೇರೊಂದು ಹೋತ ತಿವಿದು ಕೊಲ್ಲುತ್ತದೆ. ಸತ್ತ ಹೋತದ ಜೀವ ಪುನಃ ತಾಯಿ ಆಡಿನ ಗರ್ಭದಲ್ಲಿಯೇ ಹೊರೆಯುತ್ತದೆ. ಎರಡು ಜೀವಗಳ (ತಾಯಿ--ಮಗ) ಗುಪ್ತರತಿ ನಿರ್ಮಿಸಿದ ಜಟಿಲ ಜಾಲದ ಈ ಸಂಕೀರ್ಣ ನಿರೂಪಣೆ ವಿಶ್ವಸಾಹಿತ್ಯದಲ್ಲಿಯೇ ಅಪೂರ್ವವಾದುದೆನಿಸುತ್ತದೆ.

ಇಲ್ಲಿಂದ ಮುಂದೆ ಈ ಎರಡು ಜೀವಗಳು ಸಹಜ ಕಾಮದ ಪಶು-ಪ್ರವೃತ್ತಿಯಿಂದ ಬಿಡುಗಡೆಯನ್ನು ಪಡೆದು ಮಾನವೀಯವಾಗಿ ವಿಕಾಸವಾಗುತ್ತಾ ಹೋಗುತ್ತವೆ.

ಈ ಕಾವ್ಯ ಧರ್ಮಸೂತ್ರಗಳ ನೇರ ನಿರೂಪಣಾ ವರ್ಗಕ್ಕಿಂತ ಪಶುತ್ವದಿಂದ ಮಾನವತ್ವ ಮತ್ತು ಮಹಾಮಾನವತ್ವಕ್ಕೆ ವಿಕಾಸವಾಗುವ ಪರಿಯನ್ನು ಅತ್ಯಂತ ಸಮರ್ಪಕವಾಗಿ ಅಭಿವ್ಯಂಜಿಸುತ್ತದೆ. ಈ ವಿಕಾಸವೆ ನಿಜವಾದ ಧರ್ಮ: ಈ ದೃಷ್ಟಿಯಿಂದ ಯಶೋಧರ ಚರಿತೆ ಧರ್ಮ ಶ್ರವಣಕ್ಕೆ ಅರ್ಹವಾಗಿಯೇ ಆಗಿದೆ.

---

[೯] ಶ್ರೀಧರ ಬಿ. ಎಚ್., ಜನ್ನ (ಕವಿ ಕಾವ್ಯಮಾಲೆ) ಪುಟ ೪೯

'ಅವಧೇಶ್ವರಿ'ಯನ್ನು ಕುರಿತು

ಶ್ರೀದೇಶ ಕುಲಕರ್ಣಿ

ಕನ್ನಡ ಕಾದಂಬರಿಗಳ ಒಟ್ಟು ಹಿನ್ನೆಲೆ ನಾವು ಒಂದು ಸಣ್ಣ ಹರಹಿನಲ್ಲಿ ಹಿಡಿದು ಬಿಡುವಷ್ಟು ಸುಲಭವಾದುದಲ್ಲ; ಅದನ್ನು ಹಿಡಿದೇನೆಂಬ ಧಾರ್ಷ್ಟ್ಯವೂ ನನ್ನಲ್ಲಿಲ್ಲ. ಕಾದಂಬರಿಯ ಲೋಕ ವಿಸ್ತಾರವಾದುದು, ಆಳವಾದುದು ಮತ್ತು ವೈವಿಧ್ಯಮಯವಾದುದು. ಆನುಷಂಗಿಕವಾಗಿ ತೋಚುವುದನ್ನು ಗುರುತಿಸಿಕೊಳ್ಳುವುದು ಈ ಸಂದರ್ಭದಲ್ಲಿ ಸರಿಯಾದ ಉಪಾಯವಾಗಿದೆ.

ಶಂಕರ ಮೊಕಾಶಿ ಪುಣೇಕರರ 'ಅವಧೇಶ್ವರಿ' ಕಾದಂಬರಿಯು ಭೌತಿಕವಾಗಿ ಅಂದರೆ ವಸ್ತುನಿಷ್ಠ ಅರ್ಥದಲ್ಲಿ ದಿಗ್ಭ್ರಮೆಯನ್ನು ಉಂಟುಮಾಡುತ್ತದೆ. ಯಾಕೆಂದರೆ ಇದರ ಪ್ರವೇಶಗಳು ಇಕ್ಕಟ್ಟಿನವು, ಅರ್ಥೈಸುವ ಪರಿಕರಗಳು ತೊಡಕಿನವು. ವೇದಕಾಲೀನ ರಾಜಕೀಯ ಕಾದಂಬರಿ ಎಂದು ಇದನ್ನು ಕರೆದಿದ್ದಾರೆ. ಕಾಲದಲ್ಲಿ ನಾವು ಸತ್ಯಯುಗಕ್ಕೆ ಹೋಗಬೇಕಾಗಿದೆ. ವೇದಕಾಲ ಸತ್ಯಯುಗವೆಂದು ಪ್ರಸಿದ್ಧಿಯಾಗಿದೆ. ಈ ಕಾದಂಬರಿಯಲ್ಲಿನ ಒಂದು ಮುಖ್ಯ ಪಾತ್ರವಾದ ತಾರ್ಕ್ಷ್ಯ ಸತ್ಯಗಳ ಗಹನತೆಯ ಬಗ್ಗೆ ಚಿಂತಿಸುತ್ತ ಇನ್ನೊಬ್ಬರ ಸತ್ಯವನ್ನು ಬಿಚಕಲು ಹೋಗುವವ ಮೂರ್ಖನೇ ಸರಿ ಎಂಬ ತೀರ್ಮಾನಕ್ಕೆ ಬರುತ್ತಾನೆ. ಆದರೆ ಸತ್ಯದ 'ಏಕೈಕ ಗಾಂಭೀರ್ಯವೇ ವೇದಕಾಲೀನ ಬದುಕಿನ ಶಿಸ್ತಾಗಿ, ಇದರ ಮೂಲದಲ್ಲಿ ಆದರ್ಶಮಯವಾದ ನಡತೆಯ ರೀತಿಯಿದೆ. ನಂಬಿಕೆ ಇದರ ಆಧಾರವಲ್ಲ, ನಡತೆಯೇ ಇವರ ಆಧಾರ.

ಗ್ರಂಥಕರ್ತರು ವಸ್ತುವನ್ನು ರಾಜಕೀಯ ಎಂದು ನಿರ್ದೇಶಿಸಿರುವುದರ ಮೂಲಕ ಈ ಕಾದಂಬರಿಯ ಗಡಿಯನ್ನು ಇನ್ನೊಂದು ಬಗೆಯಲ್ಲಿ ಹಿಂದೆ ಸರಿಸಿದ್ದಾರೆ. ರಾಜಕೀಯ ಎನಿಸಲ್ಪಟ್ಟ ಕಾದಂಬರಿಗಳು ಯಾಕೆ ಸಾಹಿತ್ಯಾಸಕ್ತಿಗಳನ್ನು ಕುದುರಿಸಿಕೊಳ್ಳುವುದಿಲ್ಲ ಎನ್ನುವ ಪ್ರಶ್ನೆ ಆಯಾ ಗ್ರಂಥಕರ್ತರನ್ನು ಬಿಟ್ಟು ಮಿಕ್ಕವರನ್ನು ಜಾಸ್ತಿ ಕಾಡುತ್ತದೆ. ಕಾರಂತರ ಗೊಂಡಾರಣ್ಯ ಮತ್ತು ಅನಂತಮೂರ್ತಿಯವರ ಅವಸ್ಥೆ ಕಾದಂಬರಿಗಳನ್ನು ನೆಪಕ್ಕಾಗಿ ನೋಡಬಹುದು. ದುರ್ದೈವದಿಂದ ಎರಡೂ ಅನ್ವರ್ಥವಾಗಿವೆ. ರಾಜಕೀಯ ವ್ಯಕ್ತಿಗಳಿಗೆ ರಾಜಕೀಯವು ಪ್ರಧಾನ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಕಾದಂಬರಿಗೆ ಹಾಗಲ್ಲವಲ್ಲ. ಕಾದಂಬರಿ ಬಿಂಬಿಸುವ ಜೀವನಾಸಕ್ತಿಯಲ್ಲಿ ರಾಜಕೀಯ ಕೇವಲ ಒಂದು ಅಂಗ. ಪತ್ತೇದಾರಿ ಎಂದು ಕರೆಯಿಸಿಕೊಳ್ಳುವ ಥ್ರಿಲ್ಲರುಗಳಲ್ಲಿ ಕೂಡ ಈ ಜೀವನಾಸಕ್ತಿಯ ಅನೇಕ ಧಾರೆಗಳು ಸಿಕ್ಕುತ್ತವೆ.

(ಹೆಸರಿಗೆಂದು ಆದರೆ ಪ್ರಸ್ತುತವೆಂದು ತೋರಿಬಂದ ನಮ್ಮ ಹತ್ತಿರದ ಎರಡು ಕೃತಿಗಳನ್ನು ಮನಸ್ಸಿಗೆ ತಂದುಕೊಳ್ಳಿ) ಸಲ್‌ಮಾನ್ ರಷ್ದಿ ಅವರ ಮಿಡ್‌ನೈಟ್ಸ್ ಚಿಲ್ಡ್ರನ್ ಮತ್ತು ಶೇಮ್ ಕೃತಿಗಳು ನಮ್ಮದೇ ಉಪಖಂಡದ ಎರಡು ರಾಷ್ಟ್ರಗಳ

ರಾಜಕೀಯವನ್ನು ವಿಶದಪಡಿಸುವ ಪರಿಯನ್ನು ನೋಡಿ. ಇಲ್ಲಿಯು ನವಿರು ಬೆರಳುಗಳು ಕಲಾತ್ಮಕತೆಯಿಂದ ಸಾಮಾಜಿಕ, ಆರ್ಥಿಕ, ನೈತಿಕ ಕೇಂದ್ರಗಳನ್ನು ಸ್ಪರ್ಶಿಸುತ್ತಾ ಜನಜೀವನದ ಪದರವನ್ನು ರಾಜಕೀಯದ ಚೌಕಿನೊಳಗೆ ಬಂಧಿಸುತ್ತವೆ. ಇವು ಕನ್ನಡ ಕಾದಂಬರಿಗಳಲ್ಲವಾದ್ದರಿಂದ ಕಂಸದಲ್ಲಿ ಬಂಧಿತವಾಗಿದೆ.)

ಕಾದಂಬರಿಯು ಹರಹನ್ನು ಅರ್ಥೈಸುವದರಲ್ಲಿ ಅದರೊಳಗಿನ ಕರಣಗಳು ನೆರವಾಗುತ್ತವೆ. ಉದಾಹರಣೆಗೆ ಶಿವರಾಮಕಾರಂತರ ಮರಳಿಮಣ್ಣಿಗೆ ಕಾದಂಬರಿಯನ್ನು ಲಕ್ಷಿಸಬಹುದು. ಮೂರು ತಲೆಮಾರುಗಳ ಜೀವನಕ್ರಮವನ್ನು ಇದರಲ್ಲಿ ಚಿತ್ರಿಸುವಾಗ, ಅದರ ಪ್ರತಿನಿಧಿಗಳು ಜೀವಿಸುವ, ನೋಯುವ, ಸುಖಿಸುವ, ತೃಪ್ತಿಪಡುವ, ಒದ್ದಾಡುವ, ಸಾಹಸಗೈಯುವ, ನೀಡುವ, ಸ್ವೀಕರಿಸುವ ಕ್ರಿಯೆಗಳು ಒಂದು ಇಡೀ ಕಾಲಾವಧಿಯ ಬೀಸನ್ನು, ಸಮೃದ್ಧಿಯನ್ನು ನೀಡುತ್ತವೆ. ಈ ಕ್ರಿಯೆಗಳು ನಮ್ಮ ಅನುಭವ ಕೇಂದ್ರಗಳು ತಲುಪುವ ಗ್ರಹಿಕೆ ಈ ಸಾಹಿತ್ಯದ ಉತ್ತಮಿಕೆಯ ಆಧಾರವೆಂದು ನಾನು ಭಾವಿಸಿದ್ದೇನೆ. ಇಲ್ಲಿನ ಸರಸೋತಿ ಪಾರೋತಿಯರು ಬದುಕಿನ ಅಂಗೀಕಾರದ ಸಮರ್ಥ ಪ್ರತೀಕಗಳು. ಯಾಕೆ ಸಮರ್ಥರೆಂದರೆ, ಅವರಿಗೇನೆ ಅದು ಗೊತ್ತಿಲ್ಲವೆಂಬ ಕಾರಣಕ್ಕಾಗಿ.ಜೀವನ ಸಮೃದ್ಧಿಯನ್ನು ಕಾದಂಬರಿಯ ಯಶಸ್ವಿಗೆ ಪರ್ಯಾಯವಾಗಿ ನಾನು ಬಳಸಿಲ್ಲವೆಂದು ಸ್ಪಷ್ಟವಾಗಿದೆ. ಅವಧೇಶ್ವರಿ ಕಾದಂಬರಿಯ ಮುಖ್ಯ ಪಾತ್ರಗಳಾದ ಪುರುಕುತ್ಸ, ಪುರುಕುತ್ಸಾನಿ, ತ್ರಸದಸ್ಯು, ತಾರ್ಕ್ಷ್ಯ, ಕೊನೆಗೆ ವೃಶ ಕೂಡ strategists ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈ strategy ಗಳು ಯಾತರ ಸಲುವಾಗಿ ಎಂಬುದಕ್ಕೆ ಒಂದು ವ್ಯಾಪ್ತಿ ಮೂಡುವುದಿಲ್ಲ ಅಥವಾ ಇವು ಒಂದು ಕೇಂದ್ರಬಿಂದುವಿನಲ್ಲಿ ಸಂಧಿಸುವುದಿಲ್ಲ. ಪ್ರಕೃತಿಗೆ, ಜನಜೀವನಕ್ಕೆ, ಅದರ ಸಂಸ್ಕೃತಿಗೆ, ಅದರ ಸ್ಥಿತಿಗತಿಗೆ, ಅದರ ಶ್ರೇಯ ಪ್ರೇಯಗಳಿಗೆ ಈ strategy ಗಳ ಸಂಪರ್ಕ ತಾಗುವುದಿಲ್ಲ. ಯಾರ ಪ್ರಭಾವವೂ ಯಾರ ಮೇಲೂ ಆಗದಂತೆ, ಪರಸ್ಪರ ಹೊರತಾಗುವದರಿಂದ, ಈ ಮುಖ್ಯ ಪಾತ್ರಗಳ ಬೆಳವಣಿಗೆಯನ್ನು ಬಿಟ್ಟರೆ ಮಿಕ್ಕವೆಲ್ಲ sketchy ಆಗುತ್ತವೆ. ಅಂದರೆ ಪುಷ್ಟವಾಗುವುದಿಲ್ಲ. ಹಾಗೆಂದು ಇದು ಪಾತ್ರ ಪ್ರಧಾನವೇ ?

ಆ ಮಾತಿಗೆ ಈಗ ಬರುತ್ತೇನೆ. Comparisons are odious ಅನ್ನುತ್ತಾರೆ. ಆದರೆ ನನ್ನ ಪಾಲಿಗೆ ಬಂದಿರುವುದು ಅದೇ. ಮಹಾಭಾರತದ ಅನೇಕ ಪಾತ್ರಗಳು ಭೈರಪ್ಪನವರ 'ಪರ್ವ' ಕಾದಂಬರಿಯಲ್ಲಿ ಯಾವ ಬಗೆಯಲ್ಲಿ ನಿರ್ಮಾಣವಾಗಿವೆ ಎಂದು ಗಮನಿಸಬಹುದು. ಆ ಪಾತ್ರಗಳು ಬಾಳಿ ಬದುಕಿದ್ದು, ಅವರ ಜೀವನಧರ್ಮ, ಮರ್ಮ ಪ್ರತಿಕ್ರಿಯೆ, ಆಸೆ–ಆಕಾಂಕ್ಷೆಗಳು ಹೊಸ ಅರ್ಥದಲ್ಲಿ, ಶೋಧನೆಗೆ, ವಿಶ್ಲೇಷಣೆಗೆ ಒಳಗಾಗಿವೆ. ಅವುಗಳ ಜೀವನದ ಉಗಮ–ವಿಕಾಸ–ಶಿಖರಗಳನ್ನು ಒಂದೇ ಹಂತದಲ್ಲಿ ಪರಿಶೀಲಿಸುವಂಥ ಪುನರ್ನಿರ್ಮಾಣ, ಕೃತಿಯಲ್ಲಿ ಸಾಧ್ಯವಾಗಿ ಕತೆಗೆ ಬೇರೆಯೇ ವಿವರಣೆ ಸಿದ್ಧವಾಗುತ್ತದೆ; ಈ ವಿಶಾಲತೆಯಲ್ಲಿ ಬದುಕಿನ ಹೋರಾಟಕ್ಕೆ ಬರುವಷ್ಟು ಪ್ರಾಮುಖ್ಯ ಯುದ್ಧಕ್ಕೆ ಬರುವುದಿಲ್ಲ. ಯುದ್ಧದ ಹೊಲಸು ಭೂಮಿ ಮತ್ತು ಅದರ

ಶೂನ್ಯತೆ ಈ ವೈಶಾಲ್ಯಕ್ಕೆ ಅಸ್ತಮಯ ರೂಪವನ್ನು ಕೊಡುತ್ತಲೇ ಕೃತಿಯ ಸಾರ್ಥಕ್ಯವನ್ನು ತೋರಿಸುತ್ತದೆ.

ಒಂದು ಅರ್ಥಪೂರ್ಣ ಕೃತಿಯಲ್ಲಿ ಪಾತ್ರಸೃಷ್ಟಿ, ನಡೆನುಡಿ, ವಿಕಾಸ, ಪರ್ಯವಸಾನಗಳು Autonomous ರೀತಿಯಲ್ಲಿ ನಡೆಯುವುದು ಸ್ವಾಭಾವಿಕವಾಗಿದೆ. ತನ್ನಲ್ಲಿಯೇ ತಾನು ರೂಪು ಪಡೆದು, ಪ್ರಭಾವಗಳನ್ನು ಉಂಟುಮಾಡುತ್ತ–ಅರಗಿಸಿಕೊಳ್ಳುತ್ತಾ ವಿಕಾಸವಾಗಿ ಹರಡಿಕೊಳ್ಳುವುದು ಯಾವುದೇ ಸೃಷ್ಟಿಗೆ ಸಹಜವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಕೃತಿಯಲ್ಲಿ ಜೀವನಾಂಗ ಮತ್ತು ಕಥಾಂಗ ಭಾಗಗಳಿರುತ್ತವೆಂದು ಒಪ್ಪಬಹುದಾಗಿದೆ. ಜೀವನಾಂಗವು ಸ್ವಾಭಾವಿಕ ಸೃಷ್ಟಿಗೆ ಸೇರಿದ ಭಾಗ. ಕಾದಂಬರಿಕಾರನು ಬಹುಶಃ ತನ್ನ ವ್ಯಾಖ್ಯಾನವನ್ನು ಅಥವಾ ವಿಚಾರವನ್ನು ಅಥವಾ ಮುಂದುವರಿದು ಈಗ ಗೊತ್ತಾಗಿರುವ after thoughts ಇದನ್ನು ಹೇರಿದಾಗ ಕಥಾಂಗ ಭಾಗಗಳು ಹುಟ್ಟುತ್ತವೆ [Creating Fiction].

ಭೈರಪ್ಪನವರ 'ಸಾಕ್ಷಿ' ಕಾದಂಬರಿಯಲ್ಲಿ ಬರುವ ಮಂಜಯ್ಯನ ಪಾತ್ರವನ್ನು ನೋಡೋಣ. ಇವನು evil ನ ಪರಮಾವಧಿ ಪ್ರತಿನಿಧಿ. ಈ ಪಾತ್ರಸೃಷ್ಟಿಯು ಕನ್ನಡ ಕಾದಂಬರಿ ಲೋಕದಲ್ಲಿ ಅತ್ಯಂತ ಸೋಜಿಗದ ಸಂಗತಿ. ಕತೆಯು ಮುಂದುವರಿದಂತೆ, ಹೊಸ ಹೊಸ ಸತ್ಯಗಳು ಶೋಧನೆಯಾಗುತ್ತ, ಇದು ಸಾಧ್ಯವೆ, ಇದು ಕೃತಕವೆ, ಇದು ವಿಜೃಂಭಣೆಯೆ ಎಂಬ ಪ್ರಶ್ನೆಗಳು ಹಿಂದೆ ಉಳಿಯುತ್ತವೆ. ಯಾಕೆಂದರೆ ಬದುಕಿನಲ್ಲಿ ಅವನು ನಂಬಿದ್ದ ಏಕೈಕ ಶಕ್ತಿ—ಲೈಂಗಿಕ ಶಕ್ತಿ—ಎಲ್ಲವನ್ನೂ ಸಾಧಿಸುತ್ತ ಬಂದು ಸರೋಜಾಕ್ಷಿ ಎದುರು ಮುಖಾಮುಖಿಯಾದಾಗ, ಸಾಹಿತ್ಯಾಸಕ್ತಿಯ ಕೇಂದ್ರವಾದ ಸಹಜತೆ ಮೆಲ್ಲಗೆ ಇಳಿಬೀಳುತ್ತದೆ. ಅವಳನ್ನು ಸಾಧಿಸಿಕೊಳ್ಳುವುದು ಎಷ್ಟು ಕಷ್ಟವೆಂದು ಅರಿವಾದಾಗ ಮಂಜಯ್ಯನಂಥ Evil ಪಾತ್ರವೂ ನಮ್ಮ ಕನಿಕರಕ್ಕೆ ಒಳಗಾಗುತ್ತಾನೆ. ಅಂದರೆ ಯಾವುದನ್ನು ತನ್ನ ಸಾಧನೆಯಲ್ಲಿ ಶಿಖರಪ್ರಾಯ ಎಂದು ಆಶಿಸಿದ್ದನೋ, ಅದು ಲಭ್ಯವಾದಾಗ ಅವನು ಅದನ್ನು ಗ್ರಹಿಸದೆ ಹೋಗುತ್ತಾನೆ. ಈ ಸಾಹಿತ್ಯಾಸಕ್ತಿಯ ಕೇಂದ್ರ ಇಷ್ಟೇ ಅಲ್ಲ. ಕೊನೆಗೆ ಸರೋಜಾಕ್ಷಿಯ ಸಾನ್ನಿಧ್ಯವು ನಿಜವಾಗಿ ಲಭ್ಯವಾದಾಗ ಮಂಜಯ್ಯನ ಶಕ್ತಿ ನಿಷ್ಕ್ರಿಯವಾಗುತ್ತದೆ. ತದನಂತರದಲ್ಲಿ ಬೇರೊಂದು ಪಾತ್ರವು ಮಂಜಯ್ಯನ ಶಿಶ್ನವನ್ನು ಕತ್ತರಿಸುವುದು ನಮ್ಮ ದೃಷ್ಟಿಯಲ್ಲಿ redundant ಆಗಿಬಿಡುತ್ತದೆ. ಯಾಕೆಂದರೆ ಅವನ ನಿಷ್ಕ್ರಿಯತೆಗೆ ಈಗಾಗಲೇ ರೂಪಕಧಾರಣ ಶಕ್ತಿ ಬಂದುಬಿಟ್ಟಿದೆ.

'ಅವಧೇಶ್ವರಿ' ಕಾದಂಬರಿಯಲ್ಲಿ ಕಥಾಂಗ ಭಾಗಗಳ ನಿರ್ವಹಣೆ ಜಾಸ್ತಿಯಾಗಿ ಜನಾಂಗ ಹಿಂದೆ ಬಿದ್ದಿದೆ. ಇಲ್ಲಿನ ರಾಜ—ರಾಣಿಯರಿಗೆ, ಸೇವಕರಿಗೆ, ದಂಡನಾಯಕರಿಗೆ ಯುದ್ಧತಂತ್ರಗಳು ಪ್ರಧಾನ. ಪುರುಕುತ್ಸನ ಲೈಂಗಿಕಾಸಕ್ತಿ ವಿಶೇಷದ ಅಪವಾದವನ್ನು ಬಿಟ್ಟರೆ, ಇತರ ಪಾತ್ರಗಳ ಲೈಂಗಿಕಾಸಕ್ತಿ ಕೂಡ Strategy ಗಳಾಗಿಯೇ ಪ್ರಕಟವಾಗುತ್ತದೆ. ಜೀವನ ಸಂಸ್ಕೃತಿಯಿಂದ, ಪ್ರಜಾವರ್ಗದಿಂದ ಇವರು ನಿರ್ಲಿಪ್ತರಾಗಿರುವುದರಿಂದ ತಾನೇ ಸ್ವಾಭಾವಿಕವಾಗಿ ವಿಕಾಸ ಹೊಂದುವುದಿಲ್ಲ. ಅನೇಕ ಬಾರಿ ಜೀವನದ ಗಾಢ ಗೂಢಗಳಿಂದ ಅಥವಾ ತುಮುಲಗಳಿಂದ ವಂಚಿತರಾಗುತ್ತಾರೆ.

ಕಾದಂಬರಿಯ ಒಳಗಿನ autonomy ಇವರ ಪಾಲಿಗೆ ಇಲ್ಲವಾದ್ದರಿಂದ, ಕಾದಂಬರಿಕಾರನ ಸಂಪರ್ಕವನ್ನು ಬಯಸುತ್ತಾರೆ. ಇಂಥದೇ ಅವಕಾಶಕ್ಕೆ ಕಾಯುತ್ತಿದ್ದ ಹಾಗೆ ಆತನ ಪ್ರವೇಶ Explicit ಆಗಿ ಆಗುತ್ತದೆ. ಪರಿಣಾಮವಾಗಿ Fiction ಗಳ ನಿರ್ಮಾಣ.

೧) ಕಾಲಿಯನಿಗೆ ಕಠಿಣ ಯಶಸ್ಸನ್ನು ಬೇಕು ಅನ್ನುವ ಸ್ವಭಾವವನ್ನು ಹೇಳುವಾಗ 'ಯೇಟ್ಸ್'ನ ಉದ್ಧರಣವಿದೆ: Fascination of what is difficult ಅನ್ನುವ ಮಾತನ್ನು ಕಾದಂಬರಿಕಾರರು ಉಲ್ಲೇಖಿಸುತ್ತಾರೆ. ಪಾತ್ರಗಳ ಜೊತೆಯಲ್ಲೇ ಇದ್ದು ನಮ್ಮ ಜೊತೆಯಲ್ಲೇ ಇರುವ ಹಾಗೆ ವ್ಯಾಖ್ಯಾನ ಮಾಡುವ ಗ್ರಂಥಕರ್ತ ಇಲ್ಲಿ ಯಾವ ರಚನಾಪದ್ಧತಿಯನ್ನು ಪ್ರತಿಪಾದಿಸುತ್ತಾರೆ ? (ಪು. ೬೨)

೨) ಪುರುಕುತ್ಸನಿಗೆಂದು ಹೊತ್ತುತಂದ ಕುಮಾರಿ, ಕಾಲಿಯಾನ ತಂಗಿ ಎಂದು ಅನುಮಾನ ಬಂದಾಗ (ನಿಜಕ್ಕೂ ಅವಳು ಕಾಲಿಯಾನ ತಂಗಿಯೇ ಹೌದು), ಮಹಾರಾಜರು ಬಚ್ಚಲಿಗೆ ಹೋಗಿ ವಾಂತಿ ಮಾಡಿಕೊಳ್ಳುತ್ತಾರೆ. ಪುರುಕುತ್ಸಾನಿ ಅಂದರೆ ತಾನೇ ವಿವಾಹವಾಗಿರುವ ತನ್ನ ತಂಗಿಯ ಜತೆ ಸಂಬಂಧ ಸಾರ್ಥಕವಾಗದಿರುವ ಪರಿಸ್ಥಿತಿಯನ್ನು ಗಮನಿಸಿ. ಇಲ್ಲಿ ತಂಗಿ ಶಬ್ದವು word association ಮೂಲಕ Incest ಪರಿಜ್ಞಾನವನ್ನು ಉಂಟುಮಾಡಿ ರಾಜನಲ್ಲಿ ಅಸಹ್ಯ ತರಿಸುತ್ತದೆ. ಆದರೆ ಇಷ್ಟು ಆಧುನಿಕವಾದ ಮನಶ್ಶಾಸ್ತ್ರದ ಸಂಕೀರ್ಣತೆ, ಶಬ್ದಸಂಕೇತದ ಮೂಲಕ ಏಕೆ ಪ್ರಕಟವಾಯಿತು ? ಕಾದಂಬರಿಕಾರನ ಪ್ರವೇಶವು ಇಲ್ಲಿಯ ನಿಗೂಢವನ್ನು ಬಯಲುಮಾಡುತ್ತದೆ. (ಪು. ೪೯).

೩) ನಿಯೋಗದ ಪ್ರಕರಣದಲ್ಲಿ ಹೇಗೆ ಕಥಾಂಗ (Fiction) ಸೃಷ್ಟಿಯಾಗಿದೆಯೆಂದು ಈಗ ನೋಡಬಹುದು. ಈಗ ನಮಗಿರುವ ನಿಯೋಗದ ಜ್ಞಾನದ ಪ್ರಕಾರ, ಇದರ ಉದ್ದೇಶ ಮತ್ತು ಅವಧಿ ಪರಿಮಿತವಾದುದು. ಸಂತಾನಾಪೇಕ್ಷೆ, ಕಾಮಕ್ಕೆ ಮೂಲ ಎನ್ನುವ ಪಾರಂಪರಿಕ ಮನೋಧರ್ಮದಲ್ಲಿ ಇದನ್ನು ಅರ್ಥಮಾಡಿಕೊಳ್ಳಲು ಕಷ್ಟವೇನಲ್ಲ. 'ಪರ್ವ' ಕಾದಂಬರಿಯಲ್ಲಿ ಬರುವ ನಿಯೋಗ ಪ್ರಕರಣಗಳು ಈ ದೃಷ್ಟಿಯಿಂದ ಅತ್ಯಂತ ಕರಾರುವಾಕ್ಕಾಗಿ ಸೂಚಿತವಾಗಿದೆ. ಒಂದು ಅಪವಾದವೆಂದರೆ ಬಹುಶಃ ಯಮನ ಸಂಗವನ್ನು ಅವಧಿಗೂ ಮೀರಿ ವಿಸ್ತರಿಸಿದುದು.

ಅವಧೇಶ್ವರಿಯ ನಿಯೋಗ ಪ್ರಕರಣ ತುಸು ಸಂಕೀರ್ಣ ಬಗೆಯದು. ಪೂರ್ವ ಕತೆಯನ್ನು ಸ್ವಲ್ಪ ನೋಡಬಹುದು. ಎರಡು ಮೂರು ಬಾರಿ ಅಣ್ಣನೂ ಪತಿಯೂ ಆದ ಪುರುಕುತ್ಸನ ಸಂಗದ ಸಲುವಾಗಿ ಪುರುಕುತ್ಸಾನಿ ಮಾಡಿದ ಯತ್ನ ಸಫಲವಾಗಲಿಲ್ಲ. ಮೊದಲು ಅವಳು ತೋರಿದ ಹಟಮಾರಿತನವೂ ಆಟಗಾರಿಕೆಯೂ ಅಂಶಿಕವಾಗಿ ಇದಕ್ಕೆ ಕಾರಣ. ಪುರುಕುತ್ಸಾನಿಯ ಕೌಮಾರ್ಯ ಅವಳ ವ್ಯಕ್ತಿತ್ವದಲ್ಲಿ ಹತಾಶೆ ತರುವ ಅಂಶ. ರಾಜಕಾರಣ ಪಟುವೂ ಯುದ್ಧತಂತ್ರಜ್ಞಳೂ ಆದ ರಾಣಿ, ಪಕ್ಷ್ಮಾದೇವಿ, ತಾರ್ಕ್ಷ್ಯ ಮತ್ತು ಕಾಲಿಯಾ ಇತರರನ್ನೂ ದೇವರಾಜ, ಪ್ರಧಾನಿ, ಮತ್ತು ವಿಧವಿಧ ವೇದಿಗಳನ್ನೂ ಚದುರಂಗದ ಕಾಯಿಗಳ ಹಾಗೆ ನಡೆಸಿ, ಪುರುಕುತ್ಸನನ್ನು

ವಿಾರಿನಿಂತು, ತಾನೇ ರಾಜ್ಯಸೂತ್ರಗಳನ್ನು ಅತ್ಯಂಶ ಸಹಜವಾಗಿ ಕೈವಶ ಮಾಡಿ ಕೊಳ್ಳುತ್ತಾರೆ. ಆದರೆ ಇಷ್ಟೆಲ್ಲ ತಲಕೆಂದಲುಪಟ್ಟರೂ ಕೌಮಾರ್ಯಭಂಗಕ್ಕೆ ಒಂದು ಪುರುಷಶಕ್ತಿಯು ವರ ಬೇಕೆನ್ನುವುದು ಐರನಿಯಾಯಿತು ಎಂದು ಹೇಳುವುದು ಸುಲಭ ವಷ್ಟೆ; ಆದರೆ ಈ ಸ್ತ್ರೀಶಕ್ತಿಗೆ ಮಹರ್ಷಿಗಳು ಸೂಚಿಸುವ ನಿಯೋಗವು Foil ಆಯಿ ತೆಂದು ತಿಳಿಯಬಹುದು.

ಇವರ ಸಂಹಿತೆಯ ಪ್ರಕಾರ, ನಿಯೋಗವನ್ನು ಕರ್ತವ್ಯತಾಭಾವದಿಂದ ಮಾಡ ಬೇಕಾಗಿತ್ತು. ಅಲ್ಲದೆ ಇಲ್ಲಿನ ನಿಯೋಗ ಯಜ್ಞ ಸ್ವರೂಪವನ್ನೂ ಪಡೆಯಿತು. ಇಲ್ಲಿಯವರೆಗಿನ ಕಟ್ಟುನಿಟ್ಟು ನಿಯೋಗಕ್ಕೆ ಆಯ್ಕೆಯಾದ ಸಿಂಹಭಟ್ಟನಲ್ಲಿ ಅಳು ಕನ್ನೂ ನಮ್ರತೆಯನ್ನೂ ಹುಟ್ಟಿಹಾಕಿದ್ದು ಸ್ವಾಭಾವಿಕವೇ ಆಗಿದೆ. ಇಲ್ಲಿಂದ ಆಚೆ ಗಿನ ಪ್ರಕರಣವು, ಕ್ರಮೇಣ ರೋಮಾಂಟಿಕ್ ಆಗುವುದರಿಂದ ನಿಯೋಗದ ಮೂಲ ಪರಿಮಿತಿಯಾದ ಕರ್ತವ್ಯನಿಷ್ಠೆ ಹಿಂದೆ ಬಿದ್ದು fiction ನ ಸೃಷ್ಟಿ ಪ್ರಾರಂಭವಾಗು ತ್ತದೆ.

ಈ ರೋಮಾಂಟಿಸಿಸಂನ ವಿರೂಪ ಮುಂಚೆಯೇ ಹೀಗೆ ಸೂಚಿತವಾಗಿದೆ:

ಸಿಂಹಭಟ್ಟ—ಮಹಾದೇವಿ ಸಾಕ್ಷಾತ್ ದೇವತಾಸ್ವರೂಪಳು....
ಆಕೆಯ ಕಾಲಮೇಲೆ ನಾನು ಹೊರಳಾಡಬೇಕು

ಮಹರ್ಷಿ—ಹಾಗೆಯೇ ಮಾಡಿರಿ. ಸ್ತ್ರೀಯ ಪಾಪಗಳೂ
ಕಾಮಾಂಗಗಳೇ....(ಪುಟ ೧೨೭)

ಈ ಸಂಭಾಷಣೆಯಲ್ಲಿ ಮಹರ್ಷಿಯ ಬದಲು ಬೇರೆ ಯಾರು ಮಾತಾಡುತ್ತಿದ್ದಾ ರೆಂದು ಹೇಳಬೇಕಾಗಿಲ್ಲ.

ಮುಂದೆ ಸಂಸರ್ಗದಲ್ಲಿ ಹೀಗೆ ಒಪ್ಪಂದವಾಗುತ್ತದೆ: ಸಿಂಹಭಟ್ಟ ರಾಣಿಯನ್ನು ಕರೆಯುವಾಗ ಕೃಪಾ ಎಂದು ತನ್ನ ಹೆಂಡತಿಯ ಹೆಸರು ಬಳಸಬೇಕು! ರಾಣಿ, ಸಿಂಹ ಭಟ್ಟನನ್ನು ಕರೆಯುವಾಗ ಮಹಾರಾಜ ಎಂದು ಕರೆಯಬೇಕೆಂದು ಗೊತ್ತಾಗಿರು ತ್ತದೆ. ಇದು ದಾಂಪತ್ಯವನ್ನು ಮಿೀರದೆ ಇರುವ ಹಾಗೆ ನೋಡಿಕೊಳ್ಳುವ ಉಪಾಯ ವೆಂದು ಭಾವಿಸಿದರೆ, ಹೀಗೆ ಕಾಲ್ಪನಿಕವಾಗಿ ಸೃಷ್ಟಿಸಿದ ದಾಂಪತ್ಯ ಮಹಾರಾಜ ಮತ್ತು ಕೃಪಾದೇವಿಯರದಾಗಿ, ಅಮೂರ್ತದಲ್ಲಿ, ಇನ್ನೊಂದು ಉಲ್ಲಂಘನೆ ನಡೆದ ಹಾಗಾಗುತ್ತದೆ. ಕರೆಯುವ ಆಟದಲ್ಲಿ ತಮಗರಿವಿಲ್ಲದೆ ನಿಯೋಗವನ್ನು ರೊಮಾಂಟಿ ಸೈಸ್ ಮಾಡಿಕೊಂಡಿರುವುದು ಹೀಗೆ.

ನಿಯೋಗ ಪ್ರಕರಣದ ಇನ್ನೊಂದು ಅಂಶವೆಂದರೆ ಸಿಂಹಭಟ್ಟನ ಮೇಲೆ ಇದ ರಿಂದ ಆದ ದುಷ್ಪರಿಣಾಮ. ಸಿಂಹಭಟ್ಟ ಭ್ರಮಾಧೀನನೂ ರೋಗಿಷ್ಟನೂ ಆಗಿ, ತನ್ನ ಜೀವನವನ್ನು ಹಾಳುಮಾಡಿಕೊಳ್ಳುತ್ತಾನೆ. ಕೊನೆಯ ಹಂತದಲ್ಲಿ, ಕನಿಕರದಿಂದ, ರಾಣಿಯೇ ಮತ್ತೆ ಅವನ ಕ್ರೌರ್ಯಕ್ಕೂ ಕಾಮಹಿಂಸೆಗೂ ತನ್ನನ್ನು ನಿವೇದಿಸಿ ಕೊಳ್ಳುತ್ತಾಳೆ. ನಿಯೋಗದ ಶುದ್ಧತೆಯನ್ನು ಹೀಗೆ ಕೆಡಿಸಿದ್ದು ಯಾರು?

ನಿಯೋಗ ಪ್ರಕರಣದ ಕೊನೆಯ fiction ಹೀಗಿದೆ: ಈ ಸಂಯೋಗದಿಂದ ಹುಟ್ಟಿದ ತ್ರಸದಸ್ಯುವಿನ ಪಿತೃಮೂಲವನ್ನು ಕುರಿತಾದ ಪಿಸುಮಾತು, ಗೇಲಿ, ತ್ರಸ

ದಸ್ಯುವಿನಲ್ಲಿ ಅನಾಥಭಾವವನ್ನು ಮೂಡಿಸುತ್ತದೆ. ಅಂದರೆ ನಿಯೋಗವು scandalise ಆಗುತ್ತದೆ. ರಾಣಿಯೇ ತೆಗೆದುಕೊಂಡ ಮುನ್ನೆಚ್ಚರಿಕೆ ಕ್ರಮ-ಇದು ಇನ್ನೊಂದು ತಂತ್ರ ಫಲಪ್ರದವಾಗುವುದಿಲ್ಲ.

೪) ಸಮಕಾಲೀನ ರಾಜಕೀಯದ ನಾಯಕ–ನಾಯಕಿಯರ ಉಬ್ಬುಬ್ಬು ಪ್ರಾಚೀನದಲ್ಲಿ ಬಿಂಬಿತವಾಗಿರುವ ಒಂದು ನಿದರ್ಶನವನ್ನು ನೋಡಬಹುದು. ರಾಣಿ, ಅಮರು ಗ್ರಾಮಕ್ಕೆ ಭೇಟಿಕೊಟ್ಟಾಗ ಭಿಲ್ಲ ಕುಟುಂಬಗಳ ಸುವಾಸಿನಿಯರು ಮಣಿ ಮಾಲೆಯನ್ನು ರಾಣಿಯ ಕೊರಳಲ್ಲಿ ಹಾಕುವರು. ಅವರ ಟೋಪಿಯನ್ನು ಧರಿಸಿ ರಾಣಿಯೂ ಕುಣಿದು ಚಪ್ಪಾಳೆ ಹಾಕುವಳು .

ಈ ರೀತಿಯ ಜನಸಂಪರ್ಕ ಕತೆಯ ಹಂದರದಲ್ಲಿ ಇರಲಿಲ್ಲ

೫) ರಥ ಪ್ರಯಾಣದಲ್ಲಿ ಸಂಭವಿಸಿದ ಅಪಘಾತ ಮತ್ತು ವಿಚಾರಣೆ ಜೀವ ನಾಂಗಕ್ಕೆ ಸಂಬಂಧಿಸಿದ ಸಂಗತಿಗಳು. ಆದರೆ ವೃಶಭಟ್ಟ ನ್ಯಾಯಾಲಯದ ಬಗ್ಗೆ ಎತ್ತುವ ಆಕ್ಷೇಪ, ತದನುಸಾರವಾಗಿ, ದೇಶದ ಹೊರಗಿನಿಂದ ನ್ಯಾಯಾಧೀಶನನ್ನು ಕರೆಸುವ ಸಂಗತಿ ಮಾತ್ರ ಆಧುನಿಕ ನ್ಯಾಯಸಂಹಿತೆಗೆ ಸಂಬಂಧಿಸಿದ್ದು.

ವೇದಕಾಲೀನವಾದ ಈ ಕಾದಂಬರಿಯ ಸಂಗತಿಗಳನ್ನು ಹೊಸ ಬೆಳಕಿನಲ್ಲಿ ನೋಡುವ ಆಶಯವೇನೂ ಪ್ರಕಟವಾಗಿಲ್ಲವಾದ್ದರಿಂದ ಈ ಕಥಾಂಗಗಳನ್ನು ಉದಾ ಹರಿಸಬೇಕಾಯಿತು.

ಜೀವನವನ್ನು ಹಾಗೆಯೇ ಅಂದರೆ ಅದು ನೀಡಿರುವಂತೆ ಅಂಗೀಕರಿಸಿ ಅನುಭವಿ ಸುವುದು ವೇದಕಾಲದ ಆಶಯವಾಗಿದೆ. ಕರ್ಮಾಂತರ ನಂಬಿಗೆ ಮೂಡಿದ್ದು ಆಮೇಲೆ. ಈ ದೃಷ್ಟಿಯಲ್ಲಿ EVIL ಮಾಡಿದ ಕರ್ಮವಲ್ಲ! ದೌಷ್ಟ್ಯವನ್ನು ಎದುರಿಸಿ ಹೋರಾಡಿ ಧೀರರಾಗುವುದು ಜೀವನದ ಹಿರಿಮೆ. ಈ ಕಾದಂಬರಿಯಲ್ಲಿ ತಾರ್ಕ್ಷ್ಯನ ಪಾತ್ರ ಮಾತ್ರ ವೇದಗಳ ಆಶಯಕ್ಕೆ ತಕ್ಕ ಹಾಗೆ ಜೀವನ ನಡೆಸುತ್ತದೆ. ತಾರ್ಕ್ಷ್ಯ ಮಹಾರಾಜ, ರಾಣಿಯರನ್ನು ನಿಷ್ಠೆಯಿಂದ ಸೇವಿಸುತ್ತ, ಬಂದ ಜೀವನ ವನ್ನು ಅಂಗೀಕರಿಸುತ್ತಾನೆ. ಈ ಅಂಗೀಕಾರದಲ್ಲಿ ಪಕ್ಷ್ಮಾ ಮತ್ತು ಕಡೆಗೆ ಪುರು ಕುತ್ಸಾನಿಯ ಸಂಗವೂ ಅಯಾಚಿತವಾಗಿ ಸೇರಿಕೊಂಡಿದೆ. ಆದರೆ ಈ ಆಶಯಕ್ಕೆ ವಿರೋಧವಾಗಿ ಬರುವ ಪಾತ್ರ ವೃಶನದಾಗಿದೆ. ಈ ಕುಹಕಿಯು ಜೀವನದಲ್ಲಿ ಒಪ್ಪಿ ಕೊಳ್ಳುವುದಕ್ಕಿಂತ ಪ್ರತಿಭಟಿಸುವುದು ಜಾಸ್ತಿಯಾದುದರಿಂದ ಪಾಡು ಪಡುವುದೂ ಜಾಸ್ತಿಯೇ. ತಾರ್ಕ್ಷ್ಯನ ಧೀರತೆಗೆ ವೃಶನ ಕ್ಷುದ್ರತೆಯನ್ನು ವಿರೋಧವಾಗಿ ಬಳಸುತ್ತ ವೇದಕಾಲದಲ್ಲಿನ ದಾಖಲೆಗಳಲ್ಲಿರುವ ವಿರೋಧಾಭಾಸವನ್ನು ಕಾದಂಬರಿಕಾರರು ಸೂಚಿಸಿದ್ದಾರೆ. ಆದರೆ ವೃಶ ಯಾರಿಗೂ ಬೇಡದವನು ಆಗಿ ಅವನ ದಾಖಲೆ ಅರ್ಥ ಹೀನವಾಗುತ್ತದೆ.

ವೇದಗಳಲ್ಲಿ ಜೀವನ ಜಿಜ್ಞಾಸೆಯಿಲ್ಲ, ಉಪಸಿಸತ್ತುಗಳಲ್ಲಿದೆ. ವೇದಗಳಲ್ಲಿ ಜೀವನದ ಆಶಯಗಳಿವೆ. ತ್ರಸದಸ್ಯುವಿನ Identity crisis ಈ ಕಾರಣಕ್ಕಾಗಿ ಅಪ ರೂಪವೆನಿಸಬಹುದು. ಕೆಲಕಾಲ ಸಂದ ಬಳಿಕ ಈ ಸ್ವೀಕಾರ ಶಾಂತಿ ಅವನಿಗೆ ಲಭಿಸು

ತ್ತದೆ. ಪುರುಕುತ್ಸನ ಗೋಳು ದ್ಯಾವಾಪೃಥೀವಿಗಳಿಗೆ ಸೇರಬಹುದು, ಬಿಡಬಹುದು! ಆದರೆ

ಅಯಂ ಲೋಕಃ ಪ್ರಿಯತಮಃ

ಎಂಬ ಆಥರ್ವಣವೇದದ ನುಡಿಯೊಂದಿಗೆ ದನಿಕೂಡಿಸಿ ಈ ಪ್ರಬಂಧವನ್ನು ಮುಗಿಸಬಹುದು.

ಜ್ಯೋತಿಯ ಬಲದಿಂದ ತಮಂಧದ ಕೇಡು

ಜಗನ್ನಾಥ ಸಾಂ. ದೊಡ್ಡಮನಿ

೧೨ನೇ ಶತಮಾನದ ಕನ್ನಡದ ನೆಲ ಕ್ರಾಂತಿ ಕಂಡ ಕಾಲ. ಅದು ಸಾಮಾಜಿಕ, ರಾಜಕೀಯ, ಆರ್ಥಿಕ, ಆಧ್ಯಾತ್ಮಿಕ, ಭಾಷಿಕವಾಗಿ ಹೊಸದನ್ನು ಉತ್ತಿ ಬಿತ್ತಿ ಬೆಳೆದ ಕಾಲ. ಸಂಪ್ರದಾಯ ಜಡಭರಿತ ಬೇರು ಬಿಟ್ಟ ಹಳೆ ಆಲದ ಮರಕ್ಕೆ ನೀರೆರೆಯದೆ ಹೊಸ ವೃಕ್ಷ ಬೆಳೆಸಿ ಈ ಕರ್ತಾರನ ಕಮ್ಮಟದ ಸರ್ವ ಪಕ್ಷಿಗಳೂ ಅದರ ರೆಂಬೆ ಕೊಂಬೆಗಳಲ್ಲಿ ಕುಳಿತು ಕುಹು ಕುಹೂ ಹಾಡಲು ಸ್ವರ ಕೊಟ್ಟ ಕ್ರಾಂತಿಕಾರಕ ಪ್ರಯೋಗ ನಡೆದುದು ಆ ಕಾಲದ ಶರಣರಿಂದ. ಈ ಶರಣ ಸಮುದಾಯಕ್ಕೆ ಮಹಾ ಮಾನವತಾವಾದಿ ಅಣ್ಣ ಬಸವಣ್ಣ ಮಹಾನಾಯಕ.

ಕಲ್ಯಾಣ ಮಂಟಪದಲ್ಲಿ ಉಚ್ಚ-ನೀಚ, ಸ್ತ್ರೀ-ಪುರುಷರೆಂಬ ಭೇದವಿಲ್ಲದೆ ಕೇವಲ ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸದೆ ಅದು ಸಾಮಾಜಿಕ ಕಾಳಜಿಯಾಗಿ ಗದ್ಯ ಪದ್ಯಾತ್ಮಕ ಲಯಗಳೆರಡನ್ನೂ ಗರ್ಭೀಕರಿಸಿಕೊಂಡು ವಚನ ಸಾಹಿತ್ಯ ಮೈದಳೆದು ನಿಂತಿತು. ಪ್ರಾಸ ಲಯ ಛಂದಸ್ಸುಗಳೆಂಬ ಅಲಂಕಾರಾದಿಗಳಿಂದ ಸಹಜ ಸುಂದರತೆಯನ್ನು ಕಳೆದುಕೊಂಡು ಕವಿ ಕಲ್ಪನೆಯ ಕೂಸಾಗಿ ಬೆಳೆದ ಕನ್ನಡ ಸಾಹಿತ್ಯ ಜನಸಾಮಾನ್ಯರಿಂದ ದೂರವಾಗಿತ್ತೆಂದೇ ಹೇಳಬೇಕು. ಅದಕ್ಕಾಗಿಯೇ ಅಣ್ಣನವರು ಸಾಹಿತ್ಯವನ್ನು ನೊಂದವರ, ಶೋಷಿತರ, ಶಿವಸಾಮೀಪ್ಯದವರ ಉಸಿರಾಗಿ "ಆನು ಒಲಿದಂತೆ ಹಾಡುವೆನಯ್ಯಾ" ಎಂದುದು. ಆವಾಗ ಅಲ್ಲವೇ ಕನ್ನಡವು ಸುಲಿದ ಬಾಳೆಯ ಹಣ್ಣಿನಂದದಿ-ಸಿಪ್ಪೆ ತೆಗೆದ ಕಬ್ಬಿನಂದದಿ ಎನ್ನುವಂತಾದುದು ?

“ಸರ್ವೇಜನಾಃ ಸುಖಿನೋಭವಂತು” ಎಂಬ ವಾಕ್ಯ ಒಂದು ಕಡೆಯಾದರೆ ಶೂದ್ರ-ಅಸ್ಪೃಶ್ಯರಿಗೆ ಕಠೋರವಾದ ಕಟ್ಟಳೆಗಳು ಮತ್ತೊಂದು ಕಡೆಗಿದ್ದವು. ಈ ದ್ವಿಮುಖ ತತ್ವವನ್ನು ಕಂಡ ಬಸವಣ್ಣನವರು ‘ಶಾಸ್ತ್ರಕ್ಕೊಂದು ಬಟ್ಟೆ, ನಿಮಗೊಂದು ಬಟ್ಟೆ ಇದೆಂತಯ್ಯಾ’ ಎಂದು ನಡೆ ನುಡಿಗಳಲ್ಲಿಯ ವಿಪರ್ಯಾಸವನ್ನು ಆಕ್ಷೇಪಿಸಲು ಅಂದಿನ ದೊಡ್ಡ ಹೊಟ್ಟೆಯ ಜನರ ಮುನಿಸು ಮುಗಿಲು ಮುಟ್ಟಿರಬೇಕು. ಆದರೇನು ? ಬಸವಣ್ಣನವರು ಅಂಜಿವರೇ ಅಳುಕಿವರೇ ? ‘ಆರು ಮುನಿದು ನಮ್ಮನೇನು ಮಾಡುವರು, ಊರು ಮುನಿದು ನಮ್ಮನೆಂತು ಮಾಡುವುದು’ ಎಂದು ಅಂದಿನ ಸಂಪ್ರದಾಯಬದ್ಧ ಸಮಾಜವನ್ನೇ ಎದುರು ಹಾಕಿಕೊಂಡು ಸಾಮಾಜಿಕ ಪರಿವರ್ತನೆಯ ಹಾದಿ ಹುಡುಕತೊಡಗಿದರು.

“ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ” ಇದು ಕೇವಲ ಉದರ ಪೋಷಣೆಯ ನಿಮಿತ್ತವಾಗಿ ಆದುದು. ಇದೇ ಆಧಾರದ ಮೇಲೆ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯುವುದು ಶುದ್ಧ ತಪ್ಪು. ‘ಮಡಿವಾಳನೆಂಬೆನೆ ಮಾಚಯ್ಯನ ? ಡೋಹಾರ

ನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚೆನ್ನಯ್ಯನ?' ಈ ರೀತಿ ಕೇವಲ ಹುಟ್ಟು ಮತ್ತು ಉದ್ಯೋಗಗಳೇ ವ್ಯಕ್ತಿಯ ಮತವನ್ನು ನಿರ್ಧರಿಸಲಾರವು. ಅಂತೆಯೇ ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ, ಕುಲವುಂಟೆ ಜಂಗಮವಿದ್ದೆಡೆಯಲ್ಲಿ– ಎಂದು ಅಸ್ಪೃಶ್ಯತೆಯನ್ನು ಬೇರು ಸಹಿತ ಬುಡಮೇಲು ಮಾಡಲು ಹೆಣಗಿದರು. 'ಕುಲವೊಂದೆ ತನ್ನ ತಾನರಿವವಂಗೆ' 'ವಿಪ್ರ-ಮೊದಲು ಅಂತ್ಯಜಕಡೆಯಾಗಿ, ಶಿವ ಭಕ್ತರಾದವರನೊಂದೇ ಎಂಬೆ' ಎಂದು ಸಾರಿದರು. ಪರಿಣಾಮವಾಗಿ, ಕಕ್ಕಯ್ಯ, ಚನ್ನಯ್ಯ, ಚಂದಯ್ಯ, ಮಾಚಯ್ಯ, ಮಾರಿತಂದೆ ಮುಂತಾದವರು 'ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ' ಎಂಬಂತೆ ಬಸವಣ್ಣನವರು ರಚಿಸಿದ ಅನುಭವ ಮಂಟಪದ ಸಹವಾಸದಿಂದ ತಮ್ಮ ಜಾತಿಯ ಕೀಳರಿಮೆಯನ್ನು ಮರೆತು, ಪ್ರಭುದೇವ, ಚನ್ನಬಸವಣ್ಣ, ಸಿದ್ಧರಾಮ ಮುಂತಾದವರ ಸಮನಾಗಿ ಕುಳಿತು ವ್ಯಕ್ತಿ-ಸಮಾಜ ಕುರಿತು ಚಿಂತನೆಗೈದರು. ಸಮಾಜದಲ್ಲಿ ಕೀಳು ಕೆಲಸಗಾರರು ಇರಬಾರದೆಂದಲ್ಲ; ಕೆಲಸಗಾರರನ್ನೇ ಕೀಳೆಂದು ತಿಳಿಯುವುದು ಶುದ್ಧ ತಪ್ಪು, ಸರ್ವಥಾ ಅಕ್ಷಮ್ಯ. ಈ ಕೀಳರಿಮೆಯ ಪ್ರತೀಕವಾದ ಅಸ್ಪೃಶ್ಯತೆಯನ್ನು ಕಿತ್ತೆಸೆದು ಸಮಾನತೆಯ ಸುಂದರ ಸಮಾಜದ ಕನಸು ಕಂಡರು ಭಕ್ತಿಯ ಭಂಡಾರಿ ಬಸವಣ್ಣನವರು. ಅವರ ಪ್ರಯತ್ನ ಬರೀ ಕನಸೆಂದರೆ ತಪ್ಪು. ನುಡಿದಂತೆ ನಡೆದವರು. ಅಂದು ಶ್ರೇಷ್ಠತೆಯ ಪ್ರತೀಕವಾದ ಬ್ರಾಹ್ಮಣ ಕನ್ಯೆಯನ್ನು ಒಬ್ಬ ಹೊಲೆಯನಿಗೆ ಮದುವೆ ಮಾಡಿಸಿದರು. ಮುಂದೆ ಒದಗಬಹುದಾದ ಪರಿಣಾಮವರಿತೂ ಎದೆ-ಮಿಡುಕದೆ ಧೀರ ಹೆಜ್ಜೆಯಿಟ್ಟ ಕಲಿ ಅಣ್ಣನವರು.

"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಎಂದು 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂದು ಅವಳ ಸ್ವಾತಂತ್ರ್ಯಗಳೆಲ್ಲವನ್ನೂ ಅಪಹರಿಸಿದ ವೈದಿಕ ಧರ್ಮ ಅಡ್ಡಗೋಡೆಯ ಮೇಲಿನ ದೀಪವೇ ಸರಿ. ಹೆಚ್ಚಿನ ಸ್ವಾತಂತ್ರ್ಯಗಳಿಂದ ವಂಚಿತಳಾದ ಸ್ತ್ರೀಗೆ ಬಸವಣ್ಣನವರು ಎಲ್ಲ ಹಕ್ಕುಗಳನ್ನು ಕೊಟ್ಟರು. ಎಷ್ಟೆಂದರೆ 'ವೇದಶಾಸ್ತ್ರಗಳನ್ನು ಕುಟ್ಟಿ ಕೇರಿದರೆ ಬರಿ ತೌಡು ಹೊರಡುವುದು' ಎಂದು ಹೇಳುವಷ್ಟರ ಮಟ್ಟಿಗೆ. ಪರಿಣಾಮವಾಗಿ ಅಕ್ಕಮಹಾದೇವಿ, ಅಕ್ಕನಾಗಮ್ಮ, ಲಕ್ಕಮ್ಮ, ಸಾಕವ್ವ, ಮುಂತಾದವರು ಪುರುಷರ ಸಮನಾಗಿ ಕುಳಿತು ದಿವ್ಯಜ್ಞಾನಿ ಪ್ರಭುವಿನೊಂದಿಗೆ ಆಧ್ಯಾತ್ಮಿಕ ಚಿಂತನೆಗಿಳಿದರು.

"ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸಯ್ಯಾ" "ಕೂಡಲ ಸಂಗಮದೇವಯ್ಯನ್ನುಳ್ಳನ್ನಕ್ಕ ಬಿಜ್ಜಳದ ಭಂಡಾರವೆನಗೇಕಯ್ಯಾ" ಬಸವಣ್ಣನವರು ಬಿಜ್ಜಳನಿಗೆ ಜೋಳವಾಳಿಯಾಗಿರಲಿಲ್ಲ, ವೇಳೆವಾಳಿಯಾಗಿದ್ದರು. ರಾಜಾಶ್ರಯವನ್ನೇ ಧಿಕ್ಕರಿಸಿ ಎದುರು ಹಾಕಿಕೊಳ್ಳಬೇಕಾದರೆ ಅಂದಿನ ವ್ಯವಸ್ಥೆಯ ವಿರುದ್ಧ ಬಸವಣ್ಣನವರ ಅಂತರಂಗದ ಕ್ರಾಂತಿಯ ಕಿಡಿ ಎಷ್ಟೊಂದು ಪ್ರಖರತೆಯಿಂದ ಕೂಡಿತ್ತೆಂಬುದು ತಿಳಿಯುತ್ತದೆ. ಬಸವಣ್ಣನವರ ಕ್ರಾಂತಿ ಕೇವಲ ಅಂದಿನ ವ್ಯವಸ್ಥೆಯ ಪ್ರತಿಭಟನೆಗಾಗಿ ಆಗಿರಲಿಲ್ಲ. ರಾಷ್ಟ್ರಕವಿ

ಕುವೆಂಪುರವರು ಹೇಳುವಂತೆ 'ಅದು ಸಮಾಜ ಸುಧಾರಣೆಯಲ್ಲ. ಪರಿಪೂರ್ಣ ಪರಿವರ್ತನೆ'ಗಾಗಿ ಆಗಿತ್ತು.

ಇವತ್ತಿನಂತೆ ಅಂದೂ ಸಹಿತ ಮಠ ಮಂದಿರಗಳು ಸಮಾಜ ಶೋಷಣೆಯ ಕೇಂದ್ರಬಿಂದುಗಳಾಗಿದ್ದವು. ಸಂಪತ್ತು ಬಡವನ ಕೈಗೆಟುಕದೆ ಒಂದೇ ಕಡೆ ಸಂಗ್ರಹವಾಗಿ ಜಡವಾಗಿತ್ತು. ಬಿಜ್ಜಳನಲ್ಲಿರುವ ಭಂಡಾರವು ಬಿಜ್ಜಳನದಲ್ಲ. ಅದು ಸತ್ಪ್ರಜೆಗಳದು. ಅದು ಪ್ರಜೆಗಳಿಗಾಗಿಯೇ ವಿನಿಯೋಗವಾಗಬೇಕು–ಎಂದು ಜಡತ್ವಕ್ಕೆ ಜಂಗಮ ಸ್ವರೂಪವನ್ನು ತೊಡಿಸಿದರು. ಈ ತತ್ವದಿಂದ ಇವತ್ತು ನಾವು ಸಂಪತ್ತು ಸರ್ವ ಪ್ರಜೆಗಳಲ್ಲಿ ಸಮನಾಗಿ ಹಂಚಿಕೆಯಾಗಬೇಕೆಂಬ ಧ್ವನಿಯನ್ನು ಅಂದಿನ ಕಾಲದ ಬಸವಣ್ಣನವರಲ್ಲಿಯೇ ಕಾಣಬಹುದು. ಸ್ಥಾವರ ಲಿಂಗವನ್ನು ಮುಸುಕಿದ ಮಂದಿರಗಳನ್ನು ಧಿಕ್ಕರಿಸಿ 'ಉಳ್ಳವರು ಶಿವಾಲಯವ ಮಾಡುವರಯ್ಯಾ ಆನು ಬಡವನಯ್ಯಾ' ಎನ್ನುತ್ತ 'ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯಾ' ಎಂದು ಇಷ್ಟಲಿಂಗವನ್ನು ಕರಕ್ಕಿಟ್ಟು ಆಧ್ಯಾತ್ಮಿಕ ಕ್ರಾಂತಿಯನ್ನೇ ಮಾಡಿದರು. ಈ ವಚನಗಳ ಧ್ವನಿ ಬಸವಣ್ಣನವರದಲ್ಲ. ದೈವದಿಂದ ವಂಚಿತರಾದವರ, ಬಡವರ ಧ್ವನಿ. 'ಕೆಟ್ಟ ಕುಲದಲ್ಲಿ ಹುಟ್ಟಿದ ಕರ್ಮವ ಕಳೆದು, ಮುಟ್ಟಿ ಪಾವನ ಮಾಡಿಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ' ಎಂದು ಹೇಳುವ ಕಕ್ಕಯ್ಯನವರಿಂದ ತಿಳಿಯಬಹುದು.

"ಅಹೋ ಕಷ್ಟಂ ಸಂಸಾರಂ" ಎಂದು ಸಂಸಾರದಿಂದ ವಿಮುಖರಾದವರಲ್ಲ ಬಸವಣ್ಣನವರು. ಸಂಸಾರದಲ್ಲಿಯೇ ಇದ್ದುಕೊಂಡು ಪಾರಮಾರ್ಥವನ್ನು ಸಾಧಿಸಿ ಭಕ್ತಿಯ ಭಂಡಾರವೇ ಆದರು. ಕೇವಲ ಆಧ್ಯಾತ್ಮದಿಂದಲೇ ಜೀವನಪಥ ಕ್ರಮಿಸಲು ಸಾಧ್ಯವಿಲ್ಲ. ಭಕ್ತಿಯ ಹುಚ್ಚು ಹತ್ತಿದವನು ಸಾಧಿಸುವೆನೆಂದರೆ ಕರುಳು ಒಣಗಿ ಹೊಟ್ಟೆ ಸುಕ್ಕುಗಟ್ಟಿ ಸತ್ತುಹೋಗಬಹುದು. ಆದರೆ ಬಸವಣ್ಣನವರ ಭಕ್ತಿ ಅಂಥತೆಯಿಂದ ಕೂಡಿದುದಲ್ಲ. ಹೊಟ್ಟೆ ಹೊರೆಯಲು ಉದ್ಯೋಗವೊಂದು ಬೇಕೇ ಬೇಕು. ಅದಕ್ಕಾಗಿಯೇ ಅವರು ಕಾಯಕ ತತ್ವವನ್ನು ಪ್ರತಿಪಾದಿಸಿದರು. ಅಷ್ಟೇ ಅಲ್ಲ, 'ಕಾಯಕದಲಿ ನಿರತನಾದೊಡೆ ಗುರುದರ್ಶನವಾದರೂ ಮರೆಯಬೇಕು, ಹರದರ್ಶನವಾದರೂ ಮರೆಯಬೇಕು' ಎಂದರು. ಕಾಯಕದಿಂದ ಬಂದ ಪ್ರತಿಫಲದಲ್ಲಿಯ ಅರ್ಧದಷ್ಟು ಜಂಗಮಕ್ಕೆ ವಿನಿಯೋಗವಾಗಬೇಕು.' ಕಾಗೆ ಒಂದಗಳವ ಕಂಡರೆ ಕರೆಯದೇ ತನ್ನ ಬಳಗವ' ಎಂದು ಹೇಳಿದರು. ಇವತ್ತು ನಾವು ಪ್ರಾಣಿ-ಪಕ್ಷಿಗಳಿಗಿಂತ ಕೀಳಾಗದೇ ಹರಿದು ಹಂಚಿ ತಿನ್ನುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ–ಬಸವಣ್ಣನವರ ದಿವ್ಯ ಸಂದೇಶದಿಂದ.

"ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ" "ಆಚಾರವೇ ಸ್ವರ್ಗ ಅನಾಚಾರವೇ ನರಕ" ಎಂದು ಇಹಲೋಕದ ಸತ್ಯಾಸತ್ಯತೆಯನ್ನು ಸಾರಿದ ಬಸವಣ್ಣನವರನ್ನು ಕುರಿತು ಸು. ೧೨೬೦ರಲ್ಲಿದ್ದ ರಗಳೆ ಕವಿ ಹರಿಹರ ಕಾವ್ಯ ರಚಿಸುತ್ತ ಸ್ವರ್ಗಲೋಕದಿಂದ ಇಹಲೋಕಕ್ಕೆ ಅದೂ ತಪ್ಪಿನ ಅರಿವಿಗಾಗಿ ಇಳಿಸುತ್ತಾನೆ! ಚಾಮರಸನಂತೂ ಪುರಾಣ ರಚಿಸಿ ಪೌರಾಣಿಕ ಪುರುಷನನ್ನಾಗಿ ಮಾಡಿಬಿಟ್ಟ!

ಬಸವಣ್ಣನವರು ದೇವರೆಂದರೆ ನಮ್ಮಿಂದ ದೂರವಾದಾರು. ಅವರ ತತ್ವಗಳು ದೇವಲೋಕದ ಕನಸುಗಳಾದಾವು. ಅಣ್ಣನವರು ಮಾನವರಾಗಿ ಹುಟ್ಟಿ ಮಾನವರ ಮಧ್ಯೆ ಬಾಳಿ ಮಹಾ ಮಾನವರಾದವರು. ಅವರ ತತ್ವಗಳು ಸಿದ್ಧಾಂತಗಳು ದಿವ್ಯ ಪುರುಷನೊಬ್ಬನು ಜೀವನ ಸಮಾಜವನ್ನು ಕುರಿತು ಆಳವಾಗಿ ಚಿಂತಿಸಿದುದರ ಪರಿಣಾಮವಾಗಿ ಪಾಕಗೊಂಡವುಗಳು. ಇವತ್ತು ಅವರ ಸಿದ್ಧಾಂತಗಳನ್ನು ಕೇವಲ ಸಿದ್ಧಾಂತಗಳನ್ನಾಗಿ ಉಳಿಸದೆ ಜೀವನಮಾರ್ಗ ದೀಪ್ತಿಗಳನ್ನಾಗಿ ಮಾಡಿಕೊಂಡರೆ ಮಾತ್ರ ಅಣ್ಣನವರಿಗೆ ಪ್ರಿಯರಾದೇವು.

ಜನಪ್ರಿಯ ಸಾಹಿತ್ಯ ಹಾಗೂ ಗಂಭೀರ ಸಾಹಿತ್ಯ

ಎನ್.ಎಸ್. ಚಿದಂಬರರಾವ್

ಸಾಹಿತ್ಯ ನಿರ್ಮಿತಿ ಕೆಲವು ಮೂಲಭೂತ ಕಲ್ಪನೆಗಳನ್ನು ಒಪ್ಪಿಕೊಳ್ಳುತ್ತದೆ. ಸಾಹಿತ್ಯ ಏಕಾಗಿ ನಿರ್ಮಾಣವಾಗುತ್ತದೆ.-ಎಂಬ ಪ್ರಶ್ನೆಗೆ, ಸಾಹಿತ್ಯವು ನಮ್ಮ ಜೀವನದ ಓರೆಕೋರೆಗಳನ್ನು ಸರಿಪಡಿಸುತ್ತದೆ. ಇದು ಸಾಮಾಜಿಕ ದೋಷಗಳನ್ನು ತಿದ್ದುತ್ತದೆ-ಜನಗಳಿಗೆ ಉತ್ತಮ ನೀತಿಯನ್ನೊದಗಿಸುತ್ತದೆ-ಇತ್ಯಾದಿ ಹತ್ತು ಹಲವು ಬಗೆಯ ಉತ್ತರಗಳು ದೊರೆತಾವು. ಆದರೆ ಈ ಯಾವ ಉತ್ತರವೂ ಸಮರ್ಪಕ ಎನ್ನಿಸುವುದಿಲ್ಲ. ಏಕೆಂದರೆ, ಸಾಹಿತ್ಯ ಎನ್ನುವುದು ಪ್ರಧಾನವಾಗಿ ಒಂದು ಕಲಾ ಪ್ರಕಾರ. ಕಲೆಯು ಯಾವತ್ತೂ ನೀತಿಶಾಸ್ತ್ರವಲ್ಲ-ಸಮಾಜ ಸುಧಾರಣಾ ಕೈಪಿಡಿ ಯಲ್ಲ. ಕಲೆ ಎಂದರೇನು-ಎಂಬ ಮೂಲಭೂತ ಪ್ರಶ್ನೆಯನ್ನು ನಾವು ಎದುರಿಗಿಟ್ಟು ಕೊಳ್ಳಬೇಕಾಗಿದೆ.

ಕಲಾಭಿವ್ಯಕ್ತಿ ಹಲವಾರು ಬಗೆಯಲ್ಲಿ ಆಗಬಹುದು. ಚಿತ್ರ, ಸಂಗೀತ, ನೃತ್ಯ ಹೀಗೆ ಕಲೆಯ ವಿವಿಧ ಮುಖಗಳನ್ನು ಕಾಣುತ್ತೇವೆ. ಈ ಎಲ್ಲ ಮುಖಗಳಿಗೂ, ಸಾಹಿತ್ಯಕ್ಕೂ ಒಂದು ಪ್ರಧಾನ ಅಂತರವಿದೆ. ಚಿತ್ರ, ಸಂಗೀತ, ನೃತ್ಯಗಳನ್ನು ಕಲೆಯಾಗಿಸುವ ಘಟಕಗಳು ಹೆಚ್ಚು ಸಂಕೀರ್ಣವಲ್ಲ. ಕೆಲವಾರು ರೇಖೆಗಳು, ವರ್ಣ ವಿನ್ಯಾಸಗಳಿಂದ ಚಿತ್ರಕಲೆ ಸಾಕಾರಗೊಳ್ಳುತ್ತದೆ. ಶಬ್ದ, ಸ್ಥಾಯಿ, ಲಯ, ಮುಂತಾದ ನಿರ್ದಿಷ್ಟ ಘಟಕಗಳು ಸಂಗೀತವಾಗಿ ಪ್ರಕಟಗೊಳ್ಳುತ್ತವೆ. ನೃತ್ಯವೂ ಹೀಗೆಯೇ. ಆದರೆ ಸಾಹಿತ್ಯವು ಅಭಿವ್ಯಕ್ತಗೊಳ್ಳುವುದು ಭಾಷೆಯ ಮೂಲಕ. ಭಾಷೆಯೇ ಸಾಹಿತ್ಯದ ಘಟಕ. ಇದು ತುಂಬ ಸಂಕೀರ್ಣವಾದುದು–ಇಲ್ಲಿ ವಿಚಾರ, ಭಾವ, ಅನುಭಾವ–ಎಲ್ಲವೂ ಭಾಷೆಯ ಪರಿಧಿಯಲ್ಲೇ ಅಭಿವ್ಯಕ್ತಗೊಳ್ಳುತ್ತವೆ.

ಕಲೆಯು ರಸಿಕನ ಮೇಲೆ ಬೀರುವ ಪ್ರಭಾವದ ದೃಷ್ಟಿಯಿಂದ ನಾವು ಈ ಎಲ್ಲ ಕಲೆಗಳಲ್ಲೂ ಸಾಮ್ಯವನ್ನು ಕಾಣುತ್ತೇವೆ. ಕಲಾ ನಿರ್ಮಿತಿ ಹಾಗೂ ಕಲಾಭಿರುಚಿ ಕಲಾಸ್ವಾದನ–ಇವೆಲ್ಲವೂ ಪರಸ್ಪರ ಪೂರಕ ಕ್ರಿಯೆಗಳಾಗಿರುತ್ತವೆ. ಅಂದ ಮೇಲೆ ಮಾನವನಲ್ಲಿಯೇ ಅಂತರ್ನಿಹಿತವಾಗಿ ಈ ಕಲಾಪ್ರಜ್ಞೆ ಎಲ್ಲ ಮಟ್ಟದ ಜನರಲ್ಲೂ ಕಾರ್ಯಪ್ರವೃತ್ತವಾಗಿರುತ್ತದೆ. ಮೂಲಸಂವೇದನಾರೂಪದಲ್ಲಿ, ನಮ್ಮಲ್ಲಿ ಅಂತ ದೃರ್ಷ್ಟಿಯೊಂದು ಕೆಲಸಮಾಡುತ್ತಿದೆ. ಹಾಗೆಯೇ, ಮತ್ತೆ ಒಂದುಕಡೆ, ಬಾಹ್ಯ ತರ್ಕಪ್ರಜ್ಞೆಯೂ ಕಾರ್ಯಪ್ರವೃತ್ತವಾಗಿದೆ. ಇವೆರಡೂ ರೀತಿಯ ಸಂವೇದನೆಗಳು ಪ್ರತಿಯೋರ್ವನಲ್ಲಿಯೂ ಅಷ್ಟಿಷ್ಟು ಪ್ರಮಾಣದಲ್ಲಿ ಕಂಡುಬರುತ್ತವೆ. ಇವೆರಡೂ ಎರಡು ಅತಿರೇಕ (extremes) ಗಳಾದಾಗ ಒಂದೊಂದು ಶಾಸ್ತ್ರವಿಧಾನವಾಗಿ ರೂಪು ಗೊಳ್ಳುತ್ತವೆ. ಅಂತದೃರ್ಷ್ಟಿಯು ಅತಿರೇಕವಾದಲ್ಲಿ 'ಧರ್ಮ' ರೂಪುಗೊಳ್ಳುತ್ತದೆ.

Religion–ಎನ್ನಿಸುವ ಈ ಮುಖ ಒಂದು ಅತಿರೇಕ. ಇನ್ನು ತರ್ಕಪ್ರಜ್ಞೆ ಹೆಚ್ಚಾದಷ್ಟೂ "ವಿಜ್ಞಾನ" ರೂಪುಗೊಳ್ಳುತ್ತದೆ. ಈ 'ಧರ್ಮ' ಹಾಗೂ 'ವಿಜ್ಞಾನ'ಗಳ ದ್ವಂದ್ವ ಹೀಗೆಯೇ ಮುಂದುವರಿದಿದೆ.

ಈ ದ್ವಂದ್ವಗಳೆರಡೂ, ನಮ್ಮ ಬದುಕಿನ ಸ್ವರೂಪವನ್ನು ಗ್ರಹಿಸುವುದಕ್ಕೆ ಅಸಮರ್ಥವಾಗಿವೆ. ಧರ್ಮ ಎನ್ನುವುದು 'ವ್ಯಕ್ತಿನಿಷ್ಠ'ವಾಗಿ, ಇಲ್ಲಿ ಒಮ್ಮತ ಬರುವುದೇ ಇಲ್ಲ. ನಮ್ಮ ಬದುಕಿನ ಸ್ವರೂಪವೇ ಧರ್ಮ ಎಂದು ತೀರ್ಮಾನಿಸುವುದಕ್ಕೆ ಸಾಧ್ಯವಿಲ್ಲ. ಅತ್ತ 'ವಿಜ್ಞಾನ'ವೂ ನಮ್ಮ ಬದುಕಿನ ಸ್ವರೂಪವನ್ನು ಪತ್ತೆ ಮಾಡಲಾರದು. ಇದು "ವಸ್ತುನಿಷ್ಠ"ವಾದುದು. ಈ ಎರಡೂ ಅತಿರೇಕಗಳಿಂದಲೂ ಬದುಕಿನ ಶೋಧ ಅಸಾಧ್ಯವಾದುದರಿಂದ, ನಮ್ಮಲ್ಲಿ ಕಾರ್ಯಪ್ರವೃತ್ತವಾಗಿರುವ 'ಕಲಾಪ್ರಜ್ಞೆ'ಯನ್ನೇ ಮೊರೆಹೋಗಬೇಕಾಗುತ್ತದೆ.

ಕಲೆ-ಎಂದರೆ, ಮಾನವ ತನ್ನ ಬದುಕಿನ ಸ್ವರೂಪವನ್ನು ಗ್ರಹಿಸುವ ರೀತಿ-ಎನ್ನಬಹುದು. ತನ್ನ ಬಾಳು ತನಗೆ ಯಾವ ರೀತಿ ಕಾಣಿಸುತ್ತದೆಯೋ, ಅದನ್ನು ಕಲಾಸೃಷ್ಟಿಯಲ್ಲಿ ಮಾನವ ಅಭಿವ್ಯಕ್ತಗೊಳಿಸುತ್ತಾನೆ. ಹಾಗೆಂದೇ ಕಲಾಸೃಷ್ಟಿಯು ಒಂದು ಮರುಸೃಷ್ಟಿ-ಮಾನವನ ಸೃಜನಶೀಲ ಮುಖವೇ ಕಲೆಯಾಗಿ ಹೊರಹೊಮ್ಮುತ್ತದೆ. ಮಾನವನ ಅಂತರ್ದೃಷ್ಟಿ 'ಮತಧರ್ಮ'ವಾಗಿ ಹೊರಹೊಮ್ಮುತ್ತದೆ-ಅವನ ತರ್ಕಪ್ರಜ್ಞೆ ವಿಚಾರವಾಗಿ ಒಡಮೂಡುತ್ತದೆ. ಅವನ ಕಲಾಪ್ರಜ್ಞೆ ಸೃಜನಶೀಲತೆಯಲ್ಲಿ ಹುಟ್ಟು ಪಡೆಯುತ್ತದೆ. ಹೀಗೆ ಕಲೆ ಎನ್ನುವುದು 'ಧರ್ಮ' ಹಾಗೂ 'ವಿಜ್ಞಾನ'ಗಳ ನಡುವೆ ಸ್ವರ್ಣಸೇತುವೆಯಂತೆ ಕಾರ್ಯಪ್ರವೃತ್ತವಾಗಿದೆ.

ಸಾಹಿತ್ಯವು ಒಂದು ಕಲೆಯಾದುದರಿಂದ, ಇದು ಮಾನವನ ಸೃಜನಶೀಲ ಮುಖಕ್ಕೆ ಸಂಬಂಧಿಸಿದ ವಿಚಾರ. ಬದುಕನ್ನು ಆಳವಾಗಿ ಶೋಧಿಸಿ, ಅದರ ನೈಜವನ್ನು ಅಭಿವ್ಯಕ್ತಗೊಳಿಸುವ ಸೃಜನಶೀಲ ಪ್ರಯತ್ನವೇ ಸಾಹಿತ್ಯ. ಇದು ಬದುಕಿನ 'ಚಿರಂತನ ಮೌಲ್ಯ'ಗಳನ್ನು ಶೋಧಿಸುವಂಥದ್ದು. ಈ ಮೌಲ್ಯಶೋಧನ ಒಂದು ಗಂಭೀರ ಪ್ರಯತ್ನ. ಲೇಖಕ ಈ ಮೌಲ್ಯಶೋಧನಕ್ಕಾಗಿ ಸೃಜಿಸಿಕೊಳ್ಳುವ ಆವರಣ, ಆ ಮೌಲ್ಯವನ್ನು ಖಚಿತವಾಗಿ ಅಭಿವ್ಯಕ್ತಗೊಳಿಸುವಷ್ಟು ಸಮರ್ಥವಾಗಿರುತ್ತದೆ. 'ಪರಸ್ತ್ರೀವ್ಯಾಮೋಹ'ದಂತಹ ಅವಗುಣ ಹೇಗೆ ಬದುಕಿನ ಎಲ್ಲ ಅರ್ಥಗಳನ್ನೂ ಕಳೆದುಕೊಳ್ಳುತ್ತದೆ-ಎಂಬ ಶೋಧ ಇಡೀ ರಾಮಾಯಣದುದ್ದಕ್ಕೂ ನಡೆಯುತ್ತದೆ. ಈ ಶೋಧ ಹೇಗೆ ನಡೆದಿದೆ ಎಂದರೆ, ಇದು ಇದೇ ಮೌಲ್ಯದ ಶೋಧವೆಂದು ಮೇಲ್ನೋಟಕ್ಕೆ ಯಾರಿಗೂ ಅನ್ನಿಸದಷ್ಟು ಸಹಜವಾಗಿ ನಡೆದಿದೆ.

ರಾಮಾಯಣ, ಮಹಾಭಾರತಗಳು ಪ್ರತ್ಯಕ್ಷ ನಡೆದ ಘಟನೆಗಳು ಎಂದು ನಾವು ಭಾವಿಸಿಬಿಟ್ಟರೆ, ಅವು ಮಹಾಕಾವ್ಯದ ಪಟ್ಟದಿಂದ ಕೆಳಗಿಳಿದು, ಕೇವಲ ಅತಾರ್ಕಿಕ ಗೊಂದಲಮಯ ಘಟನೆಗಳಾಗಿ ಬಿಡಬಹುದು. ಹೀಗೆಂದೇ ನಾವು ಧಾರ್ಮಿಕ ಸತ್ಯ, ವಸ್ತು ಸತ್ಯ ಹಾಗೂ ಕಾವ್ಯಸತ್ಯಗಳನ್ನು ಬೇರೆ ಬೇರೆ ದೃಷ್ಟಿಗಳಿಂದ ಗ್ರಹಿಸಬೇಕು. ಗುಡಿಯೊಂದರಲ್ಲಿ ನಾವು ಕಲ್ಲುವಿಗ್ರಹವನ್ನೇ ದೇವರು ಎಂದು ಭಾವಿಸಿ ಪ್ರಾರ್ಥಿಸುವುದು 'ಧಾರ್ಮಿಕ ಸತ್ಯ.' ಇಲ್ಲಿ 'ಸತ್ಯ'ದ ಅಳತೆಯ ಮಾನದಂಡ ನಮ್ಮ ತರ್ಕವಲ್ಲ,

ಇಲ್ಲಿಯ ಆಳತೆಗೋಲು ನಮ್ಮ ಅಂತರ್‌ದೃಷ್ಟಿಯು ಭಾವನಾಬಲವೇ ಆಗಿದೆ. ಆ ಭಾವನೆಯ ದೃಷ್ಟಿಯಲ್ಲಿ ಗುಡಿಯ ಕಲ್ಲು ವಿಗ್ರಹ ಬರಿಯ ಬೊಂಬೆಯಲ್ಲ. ಸಾಕ್ಷಾತ್ ಪರದೈವ. ವಸ್ತುಸತ್ಯವೆಂದರೆ ಜೀವನದ ಭೌತವಾಸ್ತವವನ್ನು ತರ್ಕದಿಂದ ಗ್ರಹಿಸುತ್ತಾ ಹೋಗುವುದು. ಇದು ಪಂಚೇಂದ್ರಿಯಗಳನ್ನು ಅವಲಂಬಿಸಿದ ಸತ್ಯ ವಾದುದರಿಂದ, ಇಲ್ಲಿ ಎಲ್ಲರೂ ಒಂದಾಗಿಬಿಡುತ್ತಾರೆ. ವಸ್ತುಸತ್ಯವನ್ನು ಅರ್ಥಮಾಡಿ ಕೊಳ್ಳಲು ಮತ್ತಾವ ವಿಶೇಷ ಶಕ್ತಿಯ ನೆರವೂ ಬೇಡ. ಪಂಚೇಂದ್ರಿಯಗಳು ದಿಗ್ದರ್ಶಿ ಸುವ ಸತ್ಯ, ಗುಡಿಯೊಳಗಿನ ಕಲ್ಲುಬೊಂಬೆಯು ವಸ್ತುಸತ್ಯ. ಆದರೆ "ಸರ್ವಾಂತ ರ್ಯಾಮಿ"ಯ ಪ್ರತಿರೂಪ ಎನ್ನಲು 'ಭಾವಶುದ್ಧಿ'ಬೇಕಾಗುತ್ತದೆ. ಒಬ್ಬ ಸಾಮಾನ್ಯ ಪ್ರಾಪಂಚಿಕ ದೇವರ ವಿಗ್ರಹವನ್ನು—"ಬರೀ ಕಲ್ಲು ಬೊಂಬೆ" ಎಂದು ತೀರ್ಮಾನಿಸಿದರೆ ಅದೇನೂ ತಪ್ಪಲ್ಲ. ಖಂಡಿತವಾಗಿಯೂ ಆ ವಸ್ತುಸತ್ಯ ಸರಿ. ಆದರೆ ಅದು ಧಾರ್ಮಿಕ ಸತ್ಯವಾದಾಗ "ಜಗತ್ತಿನ ಆಧಾರಶಕ್ತಿ" ಎಂಬುದೂ ಸರಿ; ದೇವರ ಆ ವಿಗ್ರಹ 'ಸರ್ವಾಂತರ್ಯಾಮಿ'-ಎಂಬುದೂ ಸರಿ, ಕಲ್ಲುಬೊಂಬೆ ಎಂಬುದೂ ಸರಿ; ಎರಡೂ ಸತ್ಯ ಸ್ವರೂಪಗಳೇ.

ಸಾಹಿತ್ಯದಲ್ಲಿ ಬರುವ ಸತ್ಯವೇ 'ಕಾವ್ಯಸತ್ಯ'. ಒಂದು ಕಾವ್ಯದಲ್ಲಿ ಇಡೀ ಒಂದು ದೇಶದ ಜನಜೀವನ 'ಮರುಸೃಷ್ಟಿ' ಪಡೆದಿರುತ್ತದೆ. ರಾಮಾಯಣದ ದಶರಥ ಮಕ್ಕಳಿಗಾಗಿ ಹಂಬಲಿಸುವಂಥ ಇಡೀ ಒಂದು ಸಂಸ್ಕೃತಿಯ ಪ್ರತೀಕವಾಗುತ್ತಾನೆ. ಅಲ್ಲಿ ದಶರಥ, ರಾಮ, ಸೀತೆ—ಇವರೆಲ್ಲ ಭಿನ್ನಭಿನ್ನ ವ್ಯಕ್ತಿಗಳು ಎನ್ನಲಾಗದು. ಇವರು 'ಪ್ರಾತಿನಿಧಿಕ ಪಾತ್ರಗಳು' ನಿಜ ಜೀವನದ ವ್ಯಕ್ತಿಯೇ ಕಾವ್ಯದಲ್ಲಿ "ಪಾತ್ರ" ಎನ್ನಿಸಿ ಕೊಳ್ಳುತ್ತಾನೆ. "ಅನುಕಾರ್ಯ" ಎಂಬ ಶಬ್ದ ಭರತಮಹಾಮುನಿಯಿಂದ ಈ ಪಾತ್ರ ಗಳ ಬಗ್ಗೆ ಉಪಯೋಗಿಸಲ್ಪಟ್ಟಿದೆ. Archetype ಎನ್ನಿಸಿಕೊಳ್ಳುವ ಈ ಪಾತ್ರ ಗಳೇ 'ಚಿರಂತನಪ್ರತಿಮೆ' ಗಳು ಎನ್ನಿಸಿಕೊಳ್ಳುತ್ತವೆ—ಇಂತಹ ಒಂದೊಂದು ಚಿರಂತನ ಪ್ರತಿಮೆಯನ್ನು ಸೃಷ್ಟಿಸಲು, ಕವಿ ತನ್ನ ಕಾಲದ ಸಮಗ್ರ ಬದುಕನ್ನೇ ಶೋಧಿಸ ಬೇಕಾಗುತ್ತದೆ. ಈ ಪ್ರತಿಮೆ, ಪ್ರತೀಕಗಳಿಂದ, ಒಂದು ನಾಡಿನ ಸಮಗ್ರ ಜೀವನದ ಪರಿಚಯ ನಮಗಾಗುತ್ತದೆ.

ಕಾವ್ಯಗಳಲ್ಲಿ ಈ ಬಗೆಯ ಶೋಧ ಆಳವಾಗಿರುವುದರಿಂದಲೇ ಇವುಗಳನ್ನು ಆಳ ವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಇವುಗಳ 'ಓದು' ಬೇಗ ಮುಗಿಯುವುದೇ ಇಲ್ಲ. ಅಥವಾ ಒಂದೇ 'ಓದು' ಸಾಕಾಗುವುದಿಲ್ಲ. ಪದೇ ಪದೇ ಓದಿದಷ್ಟೂ, ಈ ಕಾವ್ಯ ಹೆಚ್ಚು ಹೆಚ್ಚು ಅರ್ಥಪೂರ್ಣವಾಗುತ್ತದೆ. ಒಂದು ಮಹತ್ವಾಕಾಂಕ್ಷೆಯ ಕೃತಿ ಯನ್ನು ರಚಿಸುವಾಗ, ಅದರ ಹಿನ್ನೆಲೆಯಲ್ಲಿ ಆ ಕೃತಿಕಾರನ ಹಲವಾರು ದಿನಗಳ ಅಭ್ಯಾಸ ಹೇಗೆ ಅವಶ್ಯವೋ, ಅದನ್ನು ಓದುವಾತನೂ ಸಹ ಅಷ್ಟೇ ದೀರ್ಘಕಾಲ ಅಭ್ಯಾಸ ನಡೆಸುವುದೂ ಹಾಗೆಯೇ ಅವಶ್ಯಕ. ಒಂದು ಕಾವ್ಯಸತ್ಯ ಗೋಚರವಾಗು ವುದು ನಮ್ಮ ಪಂಚೇಂದ್ರಿಯಗಳಿಗಲ್ಲ. ವಸ್ತುಸತ್ಯವನ್ನು ಕಾಣಲು ತರ್ಕವೊಂದೇ ಸಾಕು. ಆದರೆ ಈ ಕಾವ್ಯಸತ್ಯ ತರ್ಕದಿಂದ ಸಿದ್ಧವಾಗುವುದಿಲ್ಲ. ನಮ್ಮಲ್ಲಿ ಕೆಲವು "ಅತೀ ಬುದ್ಧಿವಂತರು" ನಮ್ಮ ಸಾಂಸ್ಕೃತಿಕ ಕಾವ್ಯಗಳಾದ ರಾಮಾಯಣ, ಮಹಾ

ಭಾರತಗಳನ್ನು ಟೀಕಿಸುವಾಗ, ಧಾರಾಳವಾಗಿ ತಮ್ಮ ತರ್ಕಪ್ರಜ್ಞೆಯನ್ನು ಉಪಯೋಗಿಸುತ್ತಾರೆ. ಇದು ಸರ್ವಥಾ ಸರಿಯಲ್ಲ. ಕಾವ್ಯ ನಮ್ಮ ತರ್ಕಕ್ಕೆ ಹೊಂದುವುದಿಲ್ಲ–ಹೊಂದಬಾರದು. ವಾಸ್ತವ ಜಗತ್ತು ಒಂದೇ ನಮ್ಮ ತರ್ಕಪ್ರಜ್ಞೆಯನ್ನು ಬಯಸುವುದು. ಮಹಾಕಾವ್ಯಗಳೆಂದರೆ, ಪಾಕಶಾಸ್ತ್ರದ ಪುಸ್ತಕಗಳಲ್ಲ. ಅವು ಬೇರೊಂದು ಜಗತ್ತಿನ ಸೃಷಿ ಗಳು. ಚಿರಂತನ ಪ್ರತಿಮೆಗಳ ಮೂಲಕ ಶಾಶ್ವತ ಮೌಲ್ಯಗಳ ಶೋಧನೆಯ ಮಟ್ಟಿಗೆ ಅವು ನಮ್ಮ ವಾಸ್ತವ ಜಗತ್ತಿನೊಡನೆ ಸಂಬಂಧ ಹೊಂದಿವೆ.

ನಾನಿಲ್ಲಿ, ಬರೀ ರಾಮಾಯಣ, ಮಹಾಭಾರತಗಳನ್ನಷ್ಟೇ ಕುರಿತು ಹೇಳುತ್ತಿಲ್ಲ. ಶಾಶ್ವತ ಮೌಲ್ಯಗಳನ್ನು ಶೋಧಿಸುವ ಯಾವುದೇ ಕೃತಿಯಿರಲಿ-ಅದು ಕಲಾಸತ್ಯವೊಂದನ್ನು ದಿಗ್ದರ್ಶಿಸುತ್ತದೆ. ಕನ್ನಡದ ಹಲವಾರು ಕಾದಂಬರಿಗಳು—'ಸ್ವರೂಪ' 'ವಿಕ್ಷೇಪ' 'ಸಂಸ್ಕಾರ' 'ಪರ್ವ' 'ಶಿಕಾರಿ' 'ವೈಶಾಖ' 'ಪುರುಷೋತ್ತಮ' 'ಚಿದಂಬರ ರಹಸ್ಯ'–ಮುಂತಾದ ಕೃತಿಗಳೆಲ್ಲ ಕಲಾಸತ್ಯದ ಅಭಿವ್ಯಕ್ತಿಗಳೇ. ಇವುಗಳನ್ನು ಅಭ್ಯಾಸ ಮಾಡಬೇಕು. ಒಂದೇ ಪಟ್ಟಿಗೆ ಇವುಗಳನ್ನು ಓದಿ ಮುಗಿಸಿದರೂ, ಓದು ಅಪೂರ್ಣವೇ ಆಗಿರುತ್ತದೆ. ಜೀವನದ ಅಮೂರ್ತತ್ವವನ್ನು ನಮ್ಮ ಅನುಭವಕ್ಕೆ ತಂದುಕೊಡುವ ಪ್ರಯತ್ನಗಳು ಈ ಕೃತಿಗಳು.

ಇಂತಹ ಕೃತಿಗಳಿಗೆ ತದ್ವಿರುದ್ಧವಾದ ಸಾಹಿತ್ಯವೂ ಸೃಷ್ಟಿಯಾಗುತ್ತದೆ. ಇಲ್ಲಿ ಬದುಕಿನ ಶೋಧನೆ ಇರುವುದಿಲ್ಲ. ಬದುಕಿನ ಮೇಲ್ಪದರದಲ್ಲಿಯೇ ಕಲೆ ಸೃಷ್ಟಿಯಾಗುವುದರಿಂದ, ಇಲ್ಲಿ ಪದೇ ಪದೇ ಅಭ್ಯಾಸ ಮಾಡುವ ಆವಶ್ಯಕತೆಯಿಲ್ಲ. ಒಮ್ಮೆ ಓದಿ ಮರೆತುಬಿಡಬಹುದಾದ ಕೃತಿಗಳಿವು. ಇಂಥ ಕೃತಿಗಳನ್ನು ತುಂಬ ಜನ ಓದುತ್ತಾರೆ. ಇದಕ್ಕೆ ಸ್ಪಷ್ಟ ಕಾರಣಗಳೂ ಇವೆ. ನಮ್ಮ ಜೀವನದ ಜಂಜಾಟದಲ್ಲಿ ಏನನ್ನಾದರೂ ಓದುವ ಹಂಬಲ ಹುಟ್ಟುವುದೇ ಅಪರೂಪ. ಓದಿದರೂ ಸಹ, ಅದು ಪೆಡಸಾಗಿರಬಾರದು, ಬೇಗ ಅರ್ಥವಾಗುವಂತಿರಬೇಕು ಎಂದು ಬಯಸುತ್ತಾರೆ. ಸುಲಭವಾಗಿ ಅರ್ಥವಾಗುವ–ಎಂದರೇನು ? ಅದು ನಮ್ಮ ತರ್ಕ ಪ್ರಜ್ಞೆಗೆ ಹೊಂದುವಂತೆ ಇರಬೇಕು. ತರ್ಕಾತೀತ ವಿಷಯಗಳನ್ನು ಅರಿಯುವ ವ್ಯವಧಾನವಾದರೂ ಯಾರಿಗಿದೆ ? ತರ್ಕವನ್ನು ಮೀರಿದಂಥ ಅಭಿವ್ಯಕ್ತಿಯನ್ನು ಕೇವಲ ಕೆಲವು ಜನ ಮಾತ್ರ ಬಯಸುತ್ತಾರೆ. ಬಹು ಜನಗಳು ಬಯಸುವ ತರ್ಕಬದ್ಧವಾದ ಸಾಹಿತ್ಯವನ್ನು "ಜನಪ್ರಿಯ ಸಾಹಿತ್ಯ" ಎನ್ನುತ್ತೇವೆ.

ಜನಪ್ರಿಯ ಸಾಹಿತ್ಯವು ನೇರವಾಗಿ ನಮ್ಮ ಭಾವನಾತ್ಮಕ ಸಂವೇದನೆಗಳ ಮೇಲೆ ಪ್ರಭಾವ ಬೀರುತ್ತದೆ. ಹುಂಬ ರಾಷ್ಟ್ರೀಯ ಭಾವ, ಆದರ್ಶಗಳ ವಿಪರೀತ ಕಲ್ಪನೆ, ಅಸಂಭಾವ್ಯ ಉತ್ಪ್ರೇಕ್ಷೆಗಳು–ಮುಂತಾದುವುಗಳನ್ನೇ ದಿಗ್ದರ್ಶಿಸುವ ಈ ಮಾದರಿಯ ಬರಹಗಳು ಬಹು ಜನರ ಮೆಚ್ಚುಗೆಗೆ ಪಾತ್ರವಾಗುತ್ತವೆ. ಜನಪ್ರಿಯ ಸಾಹಿತ್ಯ ಬಿಂಬಿಸುವ ಮತ್ತೊಂದು ರೀತಿಯು ವಸ್ತು-ಪ್ರಣಯ. ಪ್ರೀತಿಯ ಕನಸುಗಳನ್ನು ಲೇಖಕ ನಮ್ಮ ಮುಂದೆ ಹತ್ತಾರು ರೀತಿಗಳಲ್ಲಿ ಇಟ್ಟಾಗ, ಓದುಗರು ಇವುಗಳನ್ನು ತುಂಬಾ ಇಷ್ಟಪಡುತ್ತಾರೆ. ಜೀವನದ ಏಕತಾನತೆಯಿಂದ ಬೇಸತ್ತ ಜನಗಳು

ಸಾಹಸ ಪ್ರಧಾನ ಬರಹಗಳನ್ನು ಇಷ್ಟಪಡುತ್ತಾರೆ. ಬದುಕಿನಿಂದ ಪಲಾಯನ ಮಾಡುವ ಪ್ರವೃತ್ತಿಯುಳ್ಳ ಈ ಬರಹಗಳೂ ಜನಪ್ರಿಯ ಮಾದರಿಗಳು. ಇನ್ನು ಪತ್ತೇದಾರಿ ಕತೆಗಳಲ್ಲಿ ನಮ್ಮ ತರ್ಕ ಪ್ರಜ್ಞೆಯನ್ನು ತೃಪ್ತಿಗೊಳಿಸುವ ಪ್ರಯತ್ನವಿರುತ್ತದೆ. ಹಾಗೆಂದೇ, ಪ್ರತಿಯೊಬ್ಬ ಓದುಗನೂ ಪ್ರಾರಂಭದಲ್ಲಿ ಪತ್ತೇದಾರಿ ಕತೆಗಳಿಂದಲೇ ತನ್ನ ಓದನ್ನು ಪ್ರಾರಂಭಿಸುತ್ತಾನೆ ಅದು ತೀರಾ ಜಡ್ಡುಹಿಡಿದಾಗ, ಓದುಗ ಬೇರೊಂದು ಬಗೆಯನ್ನು ಆಯ್ದುಕೊಳ್ಳುತ್ತಾನೆ. ಬಹುಪಾಲು ಜನ ಈ ಘಟ್ಟದಲ್ಲೇ ನಿಂತುಬಿಡುತ್ತಾರೆ. ಅವರ ಓದು ಹೀಗೆ ನಿಲ್ಲಬಾರದು. ಪತ್ತೇದಾರಿ, ಸಾಹಸ, ಆದರ್ಶ, ಪ್ರಣಯ—ಈ ಎಲ್ಲ ಮಾದರಿಗಳನ್ನು ಬೇಸರವಾಗುವಷ್ಟು ಓದಿ ಮುಗಿಸಿದಾಗ, ಹೆಚ್ಚು ಗಂಭೀರವಾದ ಬರಹದ ಅಗತ್ಯ ಬೀಳುತ್ತದೆ. ಆಗ ತಾನು ಎಷ್ಟು ಓದಿದೆ ಎನ್ನುವುದಕ್ಕಿಂತ, ಎಷ್ಟು ಅಭ್ಯಾಸ ಮಾಡಿದೆ-ಎನ್ನುವುದು ಮುಖ್ಯವಾಗುತ್ತದೆ.

ಇತ್ತೀಚೆಗೆ ಸಾಹಿತ್ಯದಲ್ಲಿ ವಾಸ್ತವತಾವಾದ ತಲೆ ಎತ್ತಿದೆ. ಹಿಂದೆ ಅಭಿಜಾತವಾದ, ರೋಮ್ಯಾಂಟಿಕ್‌ವಾದ, ಅಭಿವ್ಯಕ್ತಿವಾದ, ಆದರ್ಶವಾದಗಳು ತಮ್ಮ ತಮ್ಮ ಕಾಲದಲ್ಲಿ ವಿಜೃಂಭಿಸಿದವು. ಅಭಿಜಾತವಾದದ ಕಟ್ಟುಪಾಡುಗಳು, ಮಹಾಕಾವ್ಯದ ಲಕ್ಷಣಗಳು, ಇವುಗಳನ್ನು ವಾಸ್ತವತಾವಾದ ತಿರಸ್ಕರಿಸಿದೆ. ರೋಮ್ಯಾಂಟಿಕ್ ಯುಗದ ಕಲ್ಪನೆಗಳು, ಕನಸುಗಾರಿಕೆ ಇತ್ಯಾದಿಗಳನ್ನು ಕಡೆಗಣಿಸಲಾಗಿದೆ. ಆದರ್ಶವಾದದ ಉದಾತ್ತೀಕರಣ, ಉತ್ಪ್ರೇಕ್ಷೆಗಳನ್ನೂ ವಿರೋಧಿಸುತ್ತದೆ, ಈ ವಾಸ್ತವತಾವಾದ. ಈ ವಾದದ ಪ್ರಕಾರ, ವಾಸ್ತವದ ವಿವರ ವಿವರಗಳಲ್ಲೂ ನಮ್ಮ ಬದುಕಿನ ಶೋಧ ನಡೆಯುತ್ತದೆ. ರಾಘವೇಂದ್ರ ಪಾಟೀಲರ ಕತೆ "ಕಾಡಜ್ಜ"ದಲ್ಲಿ ಕಾಡಜ್ಜ ತಾನು ಪಯಣಿಸುತ್ತಿದ್ದ ರೈಲಿನ ಸೀಟು ಯಾವ ಮರದಿಂದಾಗಿದೆ ಎಂದು ಪರಿಶೀಲಿಸುತ್ತಾನೆ. ಇಂತಹ ಅತ್ಯಂತ ಸಣ್ಣ ವಿಷಯವೂ ವಿವರವಾಗಿ ಬರುತ್ತದೆ. ಇದು ಒಂದು ಬಗೆಯ ಮೌಲ್ಯ ಶೋಧನೆಯ ಗಂಭೀರ ಯತ್ನ. ಕಲಾಕೃತಿಯು ಕೇವಲ ಕಲಾಕೃತಿ–ಅದು ಸಂದೇಶವೋ ನೀತಿಯೋ ಅಲ್ಲ–ಎಂಬ ವಿಚಾರಧಾರೆ ಈಗ ವಾಸ್ತವತಾವಾದದ ತಿರುಳು.

ಅರಿಸ್ಟಾಟಲ್ ಕುದುರೆಗಳ ಪ್ರತಿಮೆಯ ಬಗ್ಗೆ ಹೇಳುವ ಮಾತು ಗಮನಾರ್ಹ. ಸಾಮಾನ್ಯವಾಗಿ ಕಲಾವಿದರು ಕುದುರೆಯ ವಿಗ್ರಹವನ್ನೋ ಚಿತ್ರವನ್ನೋ ಬಿಡಿಸುವಾಗ ಮುಂಗಾಲುಗಳನ್ನು ಮೇಲೆತ್ತಿ ಹಿಂಗಾಲುಗಳ ಮೇಲೆ ನಿಂತಂತೆ ಚಿತ್ರಿಸುತ್ತಾರೆ. ಏಕೆಂದರೆ ಕುದುರೆಯು ವಾಸ್ತವವಾಗಿ ಹಾಗೇ ನಿಂತಿರುತ್ತದೆ. ಆದರೆ ಒಂದು ವೇಳೆ ಕುದುರೆ ತನ್ನ ಹಿಂಗಾಲುಗಳನ್ನು ಮೇಲೆತ್ತಿ, ಮುಂಗಾಲುಗಳ ಮೇಲೆ ನಿಂತಂತೆ, ಒಬ್ಬ ಕಲಾವಿದ ಚಿತ್ರಿಸಿದ ಎಂದಿಟ್ಟುಕೊಳ್ಳಿ. ಇದು ವಾಸ್ತವಕ್ಕೆ ವಿರೋಧಿ, ಆದರೆ ಕುದುರೆಯು ಯಾವ ಕಾಲುಗಳ ಮೇಲಾದರೂ ನಿಂತಿರಲಿ, ಅದೊಂದು ಕಲಾಕೃತಿಯಾಗಿದ್ದರೆ ಅದು ಶ್ರೇಷ್ಠ. ವಾಸ್ತವದ ಪ್ರತಿರೂಪವೇ ಕಲೆಯಾಗಲಾರದು. ಕಲೆ ತನ್ನ ಗಂಭೀರ ಸ್ಥಿತಿಯಲ್ಲಿ ಅಭಿವ್ಯಕ್ತವಾಗಿರಬೇಕು.

ಜನಪ್ರಿಯ ಸಾಹಿತ್ಯ ಹಾಗೂ ಗಂಭೀರ ಸಾಹಿತ್ಯಗಳು ಎಲ್ಲ ಕಾಲದಲ್ಲೂ ಕಾಣಿಸಿಕೊಂಡಿವೆ. ಇವುಗಳ ಪರಸ್ಪರ ಸಂಬಂಧ ಒಂದು ಕುತೂಹಲಕಾರಿಯಾದ ವಿಷಯ.

ಡಿ. ವಿ. ಜಿ.ಯವರ 'ಜ್ಞಾಪಕ ಚಿತ್ರಶಾಲೆ'

ಟಿ. ಸುಬ್ರಹ್ಮಣ್ಯಂ

ಡಿ. ವಿ. ಜಿ.ಯವರು ತಮ್ಮ ಜೀವನಚರಿತ್ರೆಯನ್ನು ಬರೆಯಲಿಲ್ಲ. ಆದರೆ ತಮ್ಮ ಜೀವಮಾನದಲ್ಲಿ ತಾವು ಕಂಡ ಸುಮಾರು ಇನ್ನೂರು ವ್ಯಕ್ತಿಗಳ ಚಿತ್ರವನ್ನು ತಮ್ಮ "ಜ್ಞಾಪಕ ಚಿತ್ರಶಾಲೆ"ಯಲ್ಲಿ ಚಿತ್ರಿಸಿದ್ದಾರೆ. ಅವರು ಈ ಚಿತ್ರಗಳನ್ನು ಬರೆಯಲು ಪ್ರಾರಂಭಿಸಿದ್ದು ೧೯೫೩ರಲ್ಲಿ. ಆಗ ಅವರಿಗೆ ಅರವತ್ತಾರು ವರ್ಷ ವಯಸ್ಸು. ಜ್ಞಾಪಕ ಚಿತ್ರಶಾಲೆಯ ಮೊದಲ ಸಂಪುಟ "ಕೆಲವು ಸಾಹಿತಿ, ಸಜ್ಜನ ಸಾರ್ವಜನಿಕರು" ಪ್ರಕಟವಾದದ್ದು ಅವರ ೭೦ನೇ ವಯಸ್ಸಿನಲ್ಲಿ. ಅಂದರೆ ೧೯೫೭ರಲ್ಲಿ. ಕೊನೆಯ ಸಂಪುಟವಾದ "ಸಂಕೀರ್ಣ ಸ್ಮೃತಿ ಸಂಪುಟ" ಪ್ರಕಟವಾದಾಗ (೧೯೭೭) ಅವರು ಬದುಕಿದ್ದರೆ, ಅವರಿಗೆ ೯೦ ವರ್ಷ ವಯಸ್ಸಾಗಿರುತ್ತಿತ್ತು. ಇಂಥ ಪರಿಪಕ್ವ ವಯಸ್ಸಿನಲ್ಲಿ ಅವರು ತಮ್ಮ ಧೀಮಂತ ಬದುಕಿನ ಸುದೀರ್ಘ ವೃತ್ತಾಂತವನ್ನು ಬರೆದಿದ್ದರೆ, ಕನ್ನಡ ಸಾರಸ್ವತ ಪ್ರಪಂಚ ಅದನ್ನು ಕೃತಜ್ಞತೆ ಮತ್ತು ಸಂಭ್ರಮ ದಿಂದ ಸ್ವಾಗತಿಸುತ್ತಿತ್ತು. ಆದರೆ ಡಿ ವಿ. ಜಿ. ತಾವು "ಆತ್ಮಚರಿತ್ರೆ ಬರೆಯಲೇ ಬೇಕಾದ ದೊಡ್ಡ ಮನುಷ್ಯ" ಎಂದುಕೊಂಡಿರಲಿಲ್ಲ. ಗಹನವೂ ಅನಂತವೂ ಆದ ಈ ಜಗತ್ತಿನಲ್ಲಿ ತಾವು ವಹಿಸುತ್ತಿರುವುದು ತೀರಾ ಸಣ್ಣ ಪಾತ್ರವೆಂಬ ವಿನಯಾಧಿಕ್ಯತೆ ಅವರಲ್ಲಿ ತುಂಬಿತ್ತು. ಆ ವೇಳೆಗೆ ಕನ್ನಡ ಸಾರಸ್ವತ ಪ್ರಪಂಚದ ಅತ್ಯಂತ ಗೌರವಾರ್ಹ ಹಿರಿಯರಾಗಿದ್ದರೂ, ತಮ್ಮ ತಿಳಿವಳಿಕೆ ಪರಿಪೂರ್ಣವಲ್ಲದಿರಬಹುದು ಎಂಬ ಪ್ರಜ್ಞೆ ಅವರಲ್ಲಿ ಜಾಗೃತವಾಗಿರುತ್ತಿತ್ತು. ಆದ್ದರಿಂದಲೇ ಅವರಲ್ಲಿ ಒಬ್ಬ ಉನ್ನತ ತತ್ವಜ್ಞಾನಿ ಗಿರಬೇಕಾದ ಸಮತೂಕದ ಪೂರ್ವಾಪರ ವಿವೇಚನೆ, ಸದಾ ಆತ್ಮನಿರೀಕ್ಷಣೆ ಮಾಡಿ ಕೊಳ್ಳುವ ವಿವೇಕ ಕ್ರಿಯಾಶೀಲವಾಗಿತ್ತು. ಅವರ ಬರಹಗಳಲ್ಲಿ ಕಿಂಚಿತ್ತೂ ಆತ್ಮ ಪ್ರಶಂಸೆಯ ಸೋಂಕು ಕಂಡುಬರುವುದಿಲ್ಲ. ತಮ್ಮ ಬಗ್ಗೆ ತಾವೇ ಹೇಳಿಕೊಳ್ಳುವುದ ರಲ್ಲಿನ ಸಂಕೋಚನಿಮಿತ್ತವಾಗಿಯೇ ಅವರು ತಮ್ಮ ಜೀವನವೃತ್ತಾಂತ ಬರೆಯಲಿಲ್ಲ. ಈ ವಿನಯಾಧಿಕ್ಯತೆಯಲ್ಲಿ ಅವರು ಸೋಕ್ರಟೀಸನನ್ನು ಹೋಲುತ್ತಾರೆ. ಆದ್ದ ರಿಂದಲೇ, "ವನಸುಮ" ವ್ಯಕ್ತಿತ್ವದ ಅವರು ತಮ್ಮ ಬಗ್ಗೆ ಪ್ರಸ್ತಾಪಿಸಲೇಬೇಕಾಗಿ ಬಂದಾಗಲೂ "ಈ ಘಟನೆ ಹೇಳುವಾಗ ಸ್ವಂತ ವಿಚಾರ ಬರುತ್ತದೆ. ಇಲ್ಲಿ ಸ್ವಪ್ರಶಂಸೆಯ ಛಾಯೆ ಬಂದೀತು, ಕ್ಷಮಿಸಬೇಕು" ಎಂದು ವಿನಯವನ್ನು ಮೆರೆಯು ತ್ತಿದ್ದರು. ಅನ್ಯರ ಬಗ್ಗೆ ಹೇಳುವ ನೆಪದಲ್ಲಿ ನಮ್ಮ ಬಗ್ಗೆ ತಾವೇ ಹೇಳಿಕೊಳ್ಳುವವ ರನ್ನು ಡಿವಿಜಿ ಗೇಲಿ ಮಾಡುವ ಬಗೆ ನೋಡಿ : "ಕೆಲವರು ರಂಗಾಚಾರ್ಯರ ವಿಷಯ ಹೇಳಿ ಎಂದು ಕೇಳಿದರೆ ಅದನ್ನು ನೆಪ ಮಾಡಿಕೊಂಡು ತಮ್ಮ ವಿಷಯವನ್ನೇ ಹೇಳಿ ಕೊಳ್ಳುತ್ತಾರೆ. ರಂಗಾಚಾರ್ಯರಿಗೆ ಬಂದ ಯಾವುದೋ ಒಂದು ಕಷ್ಟ, ಆ ಸಂದರ್ಭ

ದಲ್ಲಿ ಅವರು ಈ ತಿಮ್ಮಣ್ಣಯ್ಯನನ್ನು ಕೇಳಿಕೊಂಡ ರೀತಿ, ಈ ತಿಮ್ಮಣ್ಣಯ್ಯನು ಮಾಡಿದ ಸಾಹಸ, ಈ ತಿಮ್ಮಣ್ಣಯ್ಯನ ಬುದ್ಧಿವಂತಿಕೆಯಿಂದ ಆ ಕಷ್ಟ ನಿವಾರಣೆಯಾದದ್ದು, ಈ ತಿಮ್ಮಣ್ಣಯ್ಯನ ವಿಷಯದಲ್ಲಿ ರಂಗಾಚಾರ್ಯರು ಇಟ್ಟುಕೊಂಡಿದ್ದ ಕೃತಜ್ಞತೆ ಗೌರವಗಳು, ಈ ತಿಮ್ಮಣ್ಣಯನ ಪ್ರತಾಪ ಮಹಿಮೆಗಳು--ಇಂಥವೇ ಆ ಪುಣ್ಯಾತ್ಮನ ಬಾಯಿಂದ ಹರಿದು ಬಂದು ರಂಗಾಚಾರ್ಯರನ್ನು ಅಮುಖ್ಯರನ್ನಾಗಿ ಮಾಡುತ್ತದೆ."

"ವ್ಯಕ್ತಿಚರಿತ್ರೆ ಜನಜೀವನದ ಮೂಲಾಂಕುರಪ್ರಾಯಗಳಾದ ಮಹಾಪುರುಷರ ಪ್ರತಿಬಿಂಬ" ಎಂದುಕೊಂಡಿದ್ದ ಅವರಿಗೆ, ಎಲ್ಲ ಜನರಲ್ಲೂ–ಸಾಮಾನ್ಯರೆಂದು ಕಾಣುವ ಜನರಲ್ಲೂ–ಅಡಗಿದ ವೈಶಿಷ್ಟ್ಯವನ್ನು ಗುರುತಿಸುವ ಕುಶಾಗ್ರತೆಯಿತ್ತು. ಜನರಲ್ಲಿನ ದೊಡ್ಡ ಗುಣಗಳನ್ನು ಕಂಡು ಮೆಚ್ಚುವ ದೊಡ್ಡ ಗುಣ ಅವರದ್ದಾಗಿದ್ದರಿಂದಲೇ ತಾವು ಕಂಡ ವಿಶಿಷ್ಟ ವ್ಯಕ್ತಿಗಳ ಬಗ್ಗೆ ವ್ಯಕ್ತಿಗಳ ವಿಶಿಷ್ಟತೆಯ ಬಗ್ಗೆ, ಎಂಟು ಸಂಪುಟಗಳ ಈ ಜ್ಞಾಪಕ ಚಿತ್ರಶಾಲೆಯನ್ನು ಬರೆಯಲು ಅವರಿಗೆ ಸಾಧ್ಯವಾಯಿತು.

ಜ್ಞಾಪಕ ಚಿತ್ರಶಾಲೆಯನ್ನು ಪ್ರವೇಶಿಸಿದ ತಕ್ಷಣ ನಮ್ಮನ್ನು ದಂಗುಬಡಿಸುವ ಅಂಶವೆಂದರೆ, ಇಲ್ಲಿ ಕಂಡು ಬರುವ ವ್ಯಕ್ತಿಗಳ ವೈವಿಧ್ಯತೆ. ದಿವಾನರುಗಳಿಂದ ಹಿಡಿದು ಕೂಲಿಕಾರರವರೆಗೂ ಸಮಾಜದ ಎಲ್ಲ ಸ್ತರದ ಎಲ್ಲ ವರ್ಗದ ಜನ ಹಾದುಹೋಗುತ್ತಾರೆ. ವಿಮರ್ಶಕರೊಬ್ಬರು ಗುರುತಿಸಿದಂತೆ ಇದು "ಡಿ.ವಿ.ಜಿ.ಯವರ ಪ್ರಪಂಚ." ಈ ಪ್ರಪಂಚದ ವ್ಯಾಪಕತೆಯೇ ಡಿ.ವಿ ಜಿ ಯವರ ದುಡಿಮೆಯ ಕ್ಷೇತ್ರದ ಬಾಹುಳ್ಯತೆ ಮತ್ತು ಅನುಭವ ಶ್ರೀಮಂತಿಕೆಗೆ ನಿದರ್ಶನವಾಗುತ್ತದೆ. ಸಾರ್ವಜನಿಕ ರಂಗದಲ್ಲಿ ಚಿರಪರಿಚಿತರಾದ ವಿಶ್ವೇಶ್ವರಯ್ಯನವರಿಂದ ಹಿಡಿದು ಅವರೇ ಈ ಎಲ್ಲ ವ್ಯಕ್ತಿಗಳಿಗಿಂತ ಅತಿ ಹೆಚ್ಚು ಪುಟಗಳನ್ನು (ಸುಮಾರು ೧೦೦ಪುಟ) ಆಕ್ರಮಿಸಿಕೊಂಡಿದ್ದಾರೆ. ಏನೂ ಅಲ್ಲದ ವ್ಯಕ್ತಿಗಳ ಈ ಸಾಲಿನಲ್ಲಿ "ಇಂಥವರೂ ಇದ್ದರೇ ?" ಎನಿಸುವಂಥವರು ಅನೇಕರು–ಹಲವರು ತಮ್ಮ ಆದರ್ಶ, ಪ್ರಾಮಾಣಿಕತೆ, ದಕ್ಷತೆ, ದುಡಿಮೆ, ಅಧ್ಯಯನ, ಸರಳತೆ, ಹೃದಯವಂತಿಕೆ, ಧೀಮಂತಿಕೆ ಇವುಗಳಿಂದ ನಮ್ಮ ಗಮನ ಸೆಳೆದರೆ, ಇನ್ನು ಕೆಲವರು ತಮ್ಮ ವೈಚಿತ್ರ್ಯದಿಂದ ನಮ್ಮ ನೆನಪಿನಲ್ಲಿ ಉಳಿಯುತ್ತಾರೆ. ತಮಗೆ ಬಂದ ಶಾಲುಗಳನ್ನೆಲ್ಲಾ ತಾವೂ ಧರಿಸದೆ, ಬೇರೆಯವರಿಗೂ ಕೊಡದೆ, "ದೈವರೂಪಿ" ಭಾಗವತ ಗ್ರಂಥಕ್ಕೆ ಸುತ್ತಿಡುತ್ತಿದ್ದ ಭಾಗವತದ ಶೇಷಾಚಾರ್ಯರು;ಪದ್ಯದ ಮುಖೇನ ಅಮಲ್ದಾರರಿಗೆ ಅಹವಾಲು ಹೇಳಿದ ಶೇಷಾಚಾರ್ಯರು; ಭಾಗವತ ಗ್ರಂಥದಲ್ಲಿ ಯಾರೋ ನಾನ್–ವೆಜಿಟೇರಿಯನ್ ಮೆನುಕಾರ್ಡ್ ಇಟ್ಟಿದ್ದರೆಂದು ಉಗ್ರರೂಪತಾಳಿದ ಕಾಶಿ ರಾಘವೇಂದ್ರಾಚಾರ್ಯರು;ತಮ್ಮ ತಿವಿತದ ಕೋಲಿನಿಂದಲೇ ವಿದ್ಯಾದಾನಮಾಡುತ್ತಿದ್ದ ನತ್ತಿ ಶಾಸ್ತ್ರಿಗಳು; "ಪ್ರಿಂಟ್" ಪುಸ್ತಕಗಳನ್ನು ದ್ವೇಷಿಸುವ ವಿರೂಪಾಕ್ಷ ಶಾಸ್ತ್ರಿಗಳು; ಮೈಲಿಗೆಯಾಗುತ್ತದೆಯೆಂದು ಟೇಟ್ ಸಾಹೇಬರ ಕೈಕುಲುಕಲು ನಿರಾಕರಿಸಿದ ರಾಮಶೇಷಶಾಸ್ತ್ರಿಗಳು; ಪ್ರಜಾಪ್ರತಿನಿಧಿ ಸಭೆಯಲ್ಲಿ ಬಾಣನ ಗದ್ಯವನ್ನು ಕಲ್ಯಾಣಿ ಮತ್ತು ಭೈರವಿ ರಾಗದಲ್ಲಿ ಹಾಡಿದ ಅತ್ತಿಕುಪ್ಪೆಕೃಷ್ಣಶಾಸ್ತ್ರಿಗಳು-ಇಂತಹ ಎಷ್ಟೋ ವಿಶಿಷ್ಟ

ವ್ಯಕ್ತಿಗಳು ಡಿ.ವಿ.ಜಿ. ಪ್ರಪಂಚದಲ್ಲಿ ಬಂದು ಹೋಗುತ್ತಾರೆ. ೮೦ ವರ್ಷದ ತುಂಬು ಜೀವನ ಬಾಳಿದ ಕ್ರಿಯಾಶಾಲಿ ವ್ಯಕ್ತಿಯೊಬ್ಬ ತನ್ನ ಜೀವನ ಸಂಧ್ಯೆಯಲ್ಲಿ ಕುಳಿತು, ತನ್ನ ಜೀವನದ ಹಾದಿಯಲ್ಲಿ ಹಾದು ಹೋದವರನ್ನೆಲ್ಲಾ ನೆನಪಿಸಿಕೊಳ್ಳುವ ರಮ್ಯ ಚಿತ್ರಣ ಇಲ್ಲಿದೆ.

ಈ ವಿಶಿಷ್ಟವೂ, ವಿಚಿತ್ರವೂ ಆದ ಚಿತ್ರಗಳ ಸಾಲಿನಲ್ಲಿ, ತನ್ನ ಧೀಮಂತ ವ್ಯಕ್ತಿತ್ವದಿಂದ, ವಿದ್ವತ್ತಿನಿಂದ, ಕ್ರಿಯಾಶೀಲತೆಯಿಂದ, ಸಂಸ್ಕೃತಿಯಿಂದ, ಹೃದಯ ಸಂಪನ್ನತೆಯಿಂದ, ಸಹೃದಯತೆಯಿಂದ–ಇವೆಲ್ಲವನ್ನೂ ಮುಚ್ಚಲೆತ್ನಿಸುವ ವಿನಯಾಧಿಕ್ಯತೆಯಿಂದ, ಹಿಂದೆ ಹಿಂದೆಯೇ ನಿಲ್ಲಲೆತ್ನಿಸುವ, ಸಾಕ್ರಟೀಸ್ ಸದೃಶ ವ್ಯಕ್ತಿತ್ವದ ನಿರೂಪಕನ ಒಂದು ಚಿತ್ರವನ್ನು ನಾವು ಕ್ರಮೇಣ ಗುರುತಿಸತೊಡಗುತ್ತೇವೆ. ಈ ಅಲಿಖಿತ, ಅವ್ಯಕ್ತ ಡಿ.ವಿ.ಜಿಯವರ ಚಿತ್ರವೇ ಈ ಜ್ಞಾಪಕ ಚಿತ್ರಶಾಲೆಯ ಅತಿ ಮುಖ್ಯ ಚಿತ್ರವೆಂದು ನಾನು ಭಾವಿಸುತ್ತೇನೆ. ಅನ್ಯರ ಚಿತ್ರಗಳನ್ನೇ ಬರೆಯತೊಡಗಿದ ಕಲಾವಿದ ತಾನು ಮುಂದೆ ನಿಲ್ಲಬಾರದೆನ್ನುವ ತನ್ನ ಸಂಕೋಚದಿಂದಲೇ ನಮ್ಮ ಗಮನವನ್ನು ವಿಶೇಷವಾಗಿ ಸೆಳೆದು ಬಿಡುತ್ತಾನೆ.

ಡಿ.ವಿ.ಜಿ.ಯವರ ವ್ಯಕ್ತಿತ್ವವೇ ಇಲ್ಲಿ ನಿಚ್ಚಳವಾಗಲು ಮೊದಲ ಕಾರಣವೆಂದರೆ, ಇಲ್ಲಿ ಬರುವ ಬಹುತೇಕ ವ್ಯಕ್ತಿಗಳೊಡನೆ ನಿರೂಪಕ ನೇರ ಸಂಬಂಧವನ್ನು ಪಡೆದಿದ್ದಾನೆ. ಅವನು ಚಿತ್ರಿಸುವುದು "ತನ್ನ ಅನುಭವಕ್ಕೆ ಬಂದ ಅವರ ವ್ಯಕ್ತಿತ್ವ"ವನ್ನು, ಹೀಗೆ ಅವರ ವ್ಯಕ್ತಿತ್ವವನ್ನು ಕುರಿತ ತನ್ನ ಅನುಭವವನ್ನೇ ಹೇಳಿಕೊಳ್ಳುವುದರಿಂದ ಪರೋಕ್ಷವಾಗಿ ತನ್ನ ಬಗ್ಗೆಯೂ ಹೇಳಿಕೊಳ್ಳುವಂತಾಗಿದೆ. ಈ ವ್ಯಕ್ತಿಗಳೆಲ್ಲರೂ ಡಿ.ವಿ.ಜಿ.ಯವರ ಜೀವನದಲ್ಲಿ ಹಾಸುಹೊಕ್ಕಾಗಿರುವುದರಿಂದ, ಅವರನ್ನು ತಮ್ಮ ಜೀವನದಿಂದ ಪ್ರತ್ಯೇಕಿಸುವುದು ಸಾಧ್ಯವೇ ಇಲ್ಲ.

ಎರಡನೆಯದಾಗಿ ವ್ಯಕ್ತಿಗಳ ಗುಣವನ್ನು ಗ್ರಹಿಸುವ ಕ್ರಿಯೆಯಲ್ಲೇ ಡಿ.ವಿ.ಜಿ.ಯವರು ತಮ್ಮ ನೈತಿಕ ಒಲವು-ನಿಲವುಗಳನ್ನು ಪ್ರಕಟಗೊಳಿಸಿಬಿಡುತ್ತಾರೆ. ಈ ವ್ಯಕ್ತಿಚಿತ್ರಗಳಲ್ಲಿ ಮೂಲತಃ ಗುಣೈಕ ದೃಷ್ಟಿಯನ್ನು ಮೆರೆಯುತ್ತಾರೆ ಅವರು ಮೆಚ್ಚುವ ಗುಣವಾದರೂ ಎಂಥದ್ದು ? ಮನುಷ್ಯ ಜೀವನದ ಸರಳತೆ, ಉದಾತ್ತತೆ, ತ್ಯಾಗ, ಔದಾರ್ಯ....ಹೀಗೆ ಈಗಿನ ಸಮಾಜದಲ್ಲಿ ಅಪೂರ್ವವೆನಿಸುವ ಗುಣಗಣವನ್ನೇ ಎತ್ತಿ ತೋರಿಸುತ್ತಿರುತ್ತಾರೆ. ಆದ್ದರಿಂದ ಹಿಂದೆಲ್ಲಾ ಅತ್ಯುನ್ನತವಾಗಿತ್ತು ; ಇಂದು ಅಧಃಪತನದ ತಳದಂಚಿನಲ್ಲಿದೆ ಎಂದು ನಮಗನ್ನಿಸುವಂತೆ ಮಾಡುತ್ತಾರೆ. "ಶ್ರೀಮಂತಿಕೆ" ಮುಂತಾದ ತೋರಿಕೆಯ ಮೌಲ್ಯವನ್ನು ಮೆಚ್ಚಿ ಹಾಡುವ ಮಾತಿನ ಛಾಯೆ ಕೂಡ ಇಲ್ಲಿ ಸಿಕ್ಕುವುದಿಲ್ಲ. ಆದರೆ ಹೃದಯವಂತಿಕೆ ; ಸಂಸ್ಕೃತಿ, ಸಂಪನ್ನತೆಯ ಬಗ್ಗೆ ಒಲವು ಎಲ್ಲಾ ಕಡೆಯಲ್ಲೂ ಕಾಣಬರುತ್ತದೆ. ಡಿ.ವಿ.ಜಿ.ಯವರು ಮೆಚ್ಚುವ ವೆಂಕಣ್ಣಯ್ಯನವರ ಒಂದು ಚಿತ್ರ ನೋಡಿ:

"ಅವರಿಗೆ ಮನೆಯಲ್ಲಿ ಕೂಡುವ ಜಾಗ ವಿಶಾಲವಾಗಿರಬೇಕು, ನಯವಾದ ಕಂಬಳಿ, ಜಮಖಾನೆ ಇರಬೇಕು. ಒಳ್ಳೆಯ ಒರಗು ದಿಂಬು ವಿಶಾಲ ಇರಬೇಕು. ನಾನು ಒಂದು ಸಾರಿಅವರ ಮನೆಗೆ ಹೋದಾಗ ಹೀಗೆಲ್ಲಾ ಅಣಿ ಮಾಡಿಕೊಂಡು ಕುಳಿತಿದ್ದರು. ಅಲ್ಲಿ

ತೀ.ನಂ. ಶ್ರೀಕಂಠಯ್ಯನವರು, ಡಿ. ಎಲ್. ನರಸಿಂಹಾಚಾರ್ಯ ಮೊದಲಾದ ಶಿಷ್ಯರು ನಾಲ್ಕೈದು ಮಂದಿ ಇದ್ದರು. ಮೂವರು-ನಾಲ್ವರ ಮುಂದೆ ಬರೆಯುವ (ಡೆಸ್ಕ್) ಇಳಿಜಾರು ಮೇಜುಗಳಿದ್ದುವು. ಅವರೆಲ್ಲ ಸೇರಿ ಹರಿಹರನ ರಗಳೆಯನ್ನೋ ಬೇರೆ ಯಾವುದೋ ಪ್ರಾಚೀನ ಗ್ರಂಥವನ್ನೋ ಪರಿಷ್ಕಾರಪಡಿಸುವ ಕಾರ್ಯದಲ್ಲಿದ್ದರು. ತಾಳೆಯೋಲೆಯ ಪ್ರತಿಯನ್ನೋದುವುದು, ಪಾಠಾಂತರಗಳನ್ನು ಗುರುತು ಮಾಡಿ ಕೊಳ್ಳುವುದು, ನಾನಾ ಪಾಠಗಳ ತಾರತಮ್ಯಗಳನ್ನು ಚರ್ಚಿಸುವುದು, ಇದು ಅವರು ಆಗ ಮಾಡುತ್ತಿದ್ದ ಕೆಲಸ. ಅದರ ನಡು ನಡುವೆ ದೋಸೆ, ಪೂರಿ, ಕಾಫಿ ಮೊದಲಾದ ವುಗಳ ಸೇವೆಯೂ ಆಗುತ್ತಿತ್ತು. ಅದು ಒಬ್ಬ ಪ್ರಾಮಾಣಿಕನಾದ ಸಾಹಿತ್ಯ ವಿದ್ವಾಂಸನ ವೃತ್ತಿಸನ್ನಿವೇಶದ ಚಿತ್ರ. ಅದನ್ನು ನಾನು ಪದೇ ಪದೇ ನೆನಸಿಕೊಳ್ಳು ತ್ತೇನೆ. ಆ ನೆನಪಿನಿಂದ ಆಗುವ ಸಂತೋಷ ಈ ಬಡಬಾಳಿನಲ್ಲಿ ಒಂದು ದೊಡ್ಡ ಯೋಗ."

ಇಂಥ ಒಂದು ಚಿತ್ರವನ್ನು ಮೆಚ್ಚುತ್ತಾ ನಿಲ್ಲುವ ಡಿ.ವಿ.ಜಿ. ಚಿತ್ರ ಕೂಡ ನಮ್ಮ ಕಣ್ಣ ಮುಂದೆ ಕಟ್ಟುತ್ತದೆ. ಆ ಚಿತ್ರದ ನೆನಪಿನಿಂದಲೇ ಸಂತೋಷಪಡುವ ಡಿ.ವಿ.ಜಿ.ಯವರನ್ನು ಕಂಡು ಹೃದಯ ತುಂಬಿಬರುತ್ತದೆ. ಡಿ.ವಿ.ಜಿ ಯವರು ತಮ್ಮ ಬಾಳಿನಲ್ಲಿ ಎಂಥ ಮೌಲ್ಯಕ್ಕೆ ಮಹತ್ವ ಕೊಟ್ಟಿದ್ದರೆಂಬುದನ್ನು ಇದರಿಂದ ಮತ್ತು ಸಂಕೀರ್ಣ ಸಂಪುಟದ ಕೊನೆಯ ಭಾಗದಲ್ಲಿ ಬರುವ ಬಡದಂಪತಿಗಳ ಚಿತ್ರದಲ್ಲಿ ಕಾಣ ಬಹುದು. ಆ ಅಧ್ಯಾಯಕ್ಕೆ "ಹೃದಯ ಸೌಂದರ್ಯ : ಒಂದು ಮಧುರ ಸ್ಮೃತಿ" ಎಂದೇ ಹೆಸರಿಟ್ಟಿದ್ದಾರೆ ಈ ದಂಪತಿಗಳು ಬಗ್ಗೆ ಡಿ.ವಿ.ಜಿ. ಕೊಡುವ ತೀರ್ಮಾನವೇ ಅವರ ವ್ಯಕ್ತಿತ್ವಕ್ಕೆ ಕೈಗನ್ನಡಿಯಾಗಿದ್ದು ಅವರ ಜೀವನ ದೃಷ್ಟಿಯನ್ನು ನಿರೂಪಿಸು ತ್ತದೆ "ಆನಂದಕ್ಕೆ ಕಾರಣವಾದದ್ದು ಇಲ್ಲಿ ಪ್ರೀತಿ, ಅನ್ಯೋನ್ಯ ಪ್ರೀತಿ ಆ ಮುದುಕ-ಮುದುಕಿಯರ ಬಡತನವನ್ನು ಮರೆಯಿಸಿತ್ತು. ಅವರಿಗೆ ಆಗ ಲಾಟರಿಯಿಂದಲೋ, ಬೇರೆಲ್ಲಿಂದಲೋ ಹಣ ಬಂದಿದ್ದರೆ ಅದರಿಂದ ಅವರಿಗೆ ಆಗ, ಆ ವಯಸ್ಸಿನಲ್ಲಿ, ಏನು ತಾನೆ ಪ್ರಯೋಜನವಾಗುತ್ತಿತ್ತು ? ಹಣ ಪ್ರಯೋಜನಕ್ಕೆ ಬಾರದ ವಯಸ್ಸು ಅದು. ಅದಕ್ಕಿಂತ ಹೆಚ್ಚಾಗಿ ಪ್ರೀತಿ ಅವರ ಮುಪ್ಪನ್ನು ಮರೆಯಿಸಿ ಯೌವನವನ್ನು ತಂದು ಕೊಟ್ಟಿತ್ತು. ಇನ್ನೂ ಹೆಚ್ಚಾಗಿ, ಪ್ರೀತಿಯು ಅವರ ನೊಂದ ಬಡಕಲು, ಕೊಳಕಲು, ವ್ಯೈಗಳಲ್ಲಿ ಅವರ ಪಾಲಿಗೆ ಸೌಂದರ್ಯ ದರ್ಶನ ಮಾಡಿಸಿತು. ಪ್ರೀತಿಯೇ ಸೌಂದರ್ಯ ; ಪ್ರೀತಿ ಸಾಲದೆ ಹೋದಲ್ಲಿ ಆಭರಣ, ಅಲಂಕಾರ, ಐಶ್ವರ್ಯಗಳು ಬರಿಯ ಭಾರ, ಪ್ರೀತಿಯೇ ಸೌಂದರ್ಯ ; ಪ್ರೀತಿಯೇ ಐಶ್ವರ್ಯ. ಪ್ರೀತಿಯೆಂದರೆ ಹೃದಯ ವಿಕಾಸ."

ಡಿ. ವಿ. ಜಿ. ತಮ್ಮ ಬಗ್ಗೆ ತಾವು ಹೇಳಿಕೊಂಡಿರುವುದು ತುಂಬಾ ಕಡಿಮೆ ಯಾದರೂ ಬೇರೆಯವರ ಬಗ್ಗೆ ಹೇಳುವಾಗ ಅನಿವಾರ್ಯವಾಗಿ ಸ್ವಕೀಯಕಥನ ಕೆಲವೆಡೆ ನುಸುಳಿ ಬರುತ್ತದೆ. ಸಂಕೀರ್ಣ ಸ್ಮೃತಿ ಸಂಪುಟದಲ್ಲಿ ಅವರ ಪೂರ್ವಿಕರ ವೃತ್ತಾಂತ ವಿವರವಾಗಿ ಬರುತ್ತದೆ. ಇದನ್ನೇ ಕುರಿತು ಡಾ. ಬಿ. ಜಿ. ಎಲ್. ಸ್ವಾಮಿ

ಯವರು “ಈ ಪುಸ್ತಕದ ಮೊದಲ ಆರು ಅಧ್ಯಾಯವನ್ನು ನನ್ನ ಪೂಜ್ಯ ತಂದೆಯವರ ಆತ್ಮಕಥೆ ಎಂದಿಟ್ಟುಕೊಳ್ಳಬಹುದು ಎಂದಿದ್ದಾರೆ.” ಆದರೆ ಅದು ಪೂರ್ವಿಕರ ವೃತ್ತಾಂತ ಮತ್ತು ಬಾಲ್ಯದ ಕೆಲವು ಪ್ರಸಂಗಗಳನ್ನು ಮಾತ್ರ ಕುರಿತದ್ದಾಗಿದೆ. ಅವರ ಕ್ರಿಯಾಶಾಲಿ ಬದುಕಿನ ಚಿತ್ರಣಗಳು ನಮಗೆ ಆತ್ಮಕಥೆಯ ರೂಪದಲ್ಲಿ ದೊರಕುವುದೇ ಇಲ್ಲವಾದರೂ ತಮ್ಮ ಮನೋಲಹರಿಯನ್ನು ಒಂದೆರಡು ಪ್ರಬಂಧ ಗಳಲ್ಲಿ ಹರಿಸಿದ್ದಾರೆ. ಇಂತಹ ಪ್ರಬಂಧಗಳಲ್ಲಿ “ಹಕ್ಕಿಯ ಪಯಣ”ದ ಪ್ರಾಮುಖ್ಯತೆ ಯನ್ನು ಈಗಾಗಲೇ ವಿಮರ್ಶಕರು ಗುರುತಿಸಿದ್ದಾರೆ. ಅವರ ವ್ಯಕ್ತಿತ್ವದ ಪ್ರಕಾಶನದ ದೃಷ್ಟಿಯಿಂದ ಇದು ತುಂಬಾ ಮುಖ್ಯವಾದದ್ದು.

ಮೊದಲಲ್ಲಿ ಸಾಂಕೇತಿಕವೂ, ಅರ್ಥಪೂರ್ಣವೂ ಆದ “ಹಕ್ಕಿಯ ಪಯಣ” ಪದ್ಯ ಬರುತ್ತದೆ. ‘ಹಕ್ಕಿಯ ಪಯಣ’ವು ಜೀವನದ ಪಯಣಕ್ಕೆ ಸಂಕೇತವಾಗುತ್ತದೆ. ಈ ಪಯಣ “ಹಳ್ಳಿಯಿಂದ ದಿಲ್ಲಿಗೆ”, ಅಷ್ಟೇ ಅಲ್ಲ, “ದಿಲ್ಲಿಯಿಂದ ಹಳ್ಳಿಗೆ” ಕೂಡ ಹೌದು. ಒಟ್ಟಾರೆ, “ಅಲ್ಲಿಗಿಲ್ಲಿಗೆ” ಹೀಗಾಗಿ ಜೀವದ ಪಯಣ ಸದಾ ಪ್ರಗತಿಗಾಮಿ ಎಂಬ ಭ್ರಮೆಯನ್ನು ಕವಿ ನಿವಾರಿಸುತ್ತಾರೆ. ಪಯಣದಲ್ಲಿ ಚಲನೆಯಿದೆ, ಆದರೆ ಮುನ್ನಡೆ ಇದೆಯೆಂದು ಹೇಳಲಾಗದು. ಇನ್ನು ದುಡಿತದ ಫಲ! ಫಲ ಹೇಳಲಾಗದು. ದುಡಿತದ ಆನಂದವೇ ಫಲ. “ಆಟ, ಊಟ, ಸಾಹವು!” ಇವೆಲ್ಲ ‘ಮನವು ಆಡಿ ದಾಟ’, ಇಂಥ ಆನಂದವು ನಶ್ವರವೆಂಬ ಪ್ರಜ್ಞೆ ಇದೆ, ಅದು “ಚಣದ ಆಟ”. ಇಂಥ ಆನಂದದ ಆಟದಲ್ಲೂ ವಿಷಾದವೇ ಸ್ಥಾಯಿಯಾಗಿ ಬಿಡುತ್ತದೆ. ಹಕ್ಕಿ ಕಂಡದ್ದು: “ಸ್ವರ್ಗದಿಂದ ಭೂತಲ, ಶಾಂತಿಯಿಂದ ಗದ್ದಲ ”

“ಸುರರು ಬೆಳೆದ ತೋಟ”, ಈಗ “ಮನುಜರ ಮರುಳಾಟ” ‘ದೇವದೇವನ ಉದ್ಯಾನ’ದ ಪ್ರತಿಯಾಗಿ ನಾವು ಕಾಣುವುದು ‘ಮನಿಸ ಮಾಡಿದ ಹೈರಾಣ’, ಇವೆಲ್ಲ ದರ ಬಗ್ಗೆ ಹಕ್ಕಿ ಹೇಳುತ್ತಿರುವುದಾದರೂ ಏನು? ತನ್ನ ಪಯಣ, ಪಯಣದ ಹಾಡು, ಅದಕ್ಕೊಂದು “ಗೂಢ ”ವಾಗಿದೆ.

“ಕೊರಗನೆವೆಯೊಳಿಡುವರಾರು? ಸ್ವರವ ಕೊರಳೊಳಿಡುವರಾರು? ಕೂಗು ರಾಗವಪ್ಪುದೇನು? ಮಾತು ಗೀತೆಯಪ್ಪುದೇನು?”—ಇಂಥ ಪ್ರಶ್ನೆಗೆ “ಗೂಢ”ವೇ ಉತ್ತರ! “ಅಣಗಿರುವ ಕಡುಮರ್ಮವೇನೋ!” ಎಂಬ ಚಿಂತನಶೀಲ ಪ್ರಶ್ನೆಯಲ್ಲಿ ಕವಿತೆ ಮುಗಿಯುವುದಿಲ್ಲವೆಂಬುದು ಗಮನಾರ್ಹ. “ಬ್ರಹ್ಮ ನಿರ್ಮಿತಿಯರ್ಥವ, ತಿಮ್ಮ ಲಿಂಗನು ತಿಳಿಯುವ” ಎಂಬಲ್ಲಿ ಡಿ.ವಿ.ಜಿ.ಯವರ ಪರಂಪರಾಗತ ಆಶಾವಾದದ ನಂಬಿಕೆ ಕಾಣುತ್ತದೆ.

ಈ ಪ್ರಪಂಚದಲ್ಲೇ ಡಿ.ವಿ ಜಿ.ಯವರು ತಮ್ಮಲ್ಲಿ ಉತ್ಕಟವಾಗಿರುವ ಎರಡು ಪರಸ್ಪರ ವಿರೋಧೀಮನೋಧರ್ಮವನ್ನು ಗುರುತಿಸಿಕೊಳ್ಳುತ್ತಾರೆ. ಅವೇ ತೊಂಡುತನ ಮತ್ತು ಅಂಜುಬುರುಕುತನ. ಸ್ವಚ್ಛಂದವಾದ, ಸ್ವತಂತ್ರವಾದ ಎಲ್ಲ ಕಟ್ಟುಪಾಡು ಗಳನ್ನು ಮೀರಿ ವಿಹರಿಸುವ ಮನಸ್ಸು ಒಂದು ಕಡೆಯಾದರೆ, ಲೌಕಿಕವಾದ ಸಾಮಾ ಜಿಕ ಬಂಧನಗಳನ್ನು ಗೌರವಿಸುತ್ತ ಆ ಪರಿಧಿಯೊಳಗೇ ಕೃತಾರ್ಥತೆಯನ್ನು ಕಾಣ ಬಯಸುವ ಬುದ್ಧಿ ಇನ್ನೊಂದು ಕಡೆ.

ಈ ಕಾರಣದಿಂದಲೇ, ಒಂದು ಕಡೆ ಸಂಸಾರದಲ್ಲಿ ಇದ್ದೂ ಇಲ್ಲದಂತೆ ಇರುವ ಶಿವಪಿಚ್ಚೈ ಮೊದಲಿಯಾರ್ ಅಂಥವರೂ, ಸಾಧು-ಸಂತರೂ ಡಿ.ವಿ.ಜಿ. ಯವರಿಗೆ ಗೌರವಾರ್ಹರಾದರೆ, ಇನ್ನೊಂದೆಡೆ ಗೃಹಸ್ಥರಾಗಿ ತಮ್ಮ ಸೀಮಿತ ಪರಿಧಿಯಲ್ಲಿ ನೆಮ್ಮದಿಯಿಂದ ಜೀವಿಸುವವರೂ ಅವರಿಗೆ ಆಕರ್ಷಣೀಯರೂ, ಆದರಣೀಯರೂ ಆಗುತ್ತಾರೆ. ಈ ರೀತಿಯ ಪರಸ್ಪರ ವಿರೋಧೀಮನೋಧರ್ಮವು ಅವರ ವ್ಯಕ್ತಿತ್ವದ ಪ್ರಧಾನ ಅಂಶವಾಗಿಯೇ ಉಳಿದು ಬಿಟ್ಟಿದೆಯೇನೋ ಎನಿಸುತ್ತದೆ.

ಇಂಥದ್ದೇ ಪರಸ್ಪರ ವಿರೋಧೀ ಪ್ರವೃತ್ತಿಯು ನಿಚ್ಚಳವಾಗುವುದು, "ಮೈಸೂರಿನ ದಿವಾನರುಗಳು" ಎಂಬ ಸಂಪುಟದಲ್ಲಿ. ಡಿ.ವಿ.ಜಿ. ಯವರು ತಾತ್ವಿಕವಾಗಿ ಒಪ್ಪಿರುವುದು ಪ್ರಜಾರಾಜ್ಯದ ಕಲ್ಪನೆ. ಆದರೆ ಅವರ ಅನುಭವ ಸರಿಯೆಂದು ಅವರಿಗೆ ತೋರಿಸಿಕೊಟ್ಟದ್ದು, ರಾಜಪ್ರಭುತ್ವ, ರಾಜಪ್ರಭುತ್ವದಲ್ಲಿನ ಶ್ರೇಷ್ಠಮಟ್ಟದ ಸಂಭಾವಿತ ನೌಕರಶಾಹಿ. ಪ್ರಜಾಪ್ರಭುತ್ವದ ಬಗ್ಗೆ ಅವರು ತುಂಬಾ ಕಹಿಯಾದದ್ದನ್ನು ಇಂಥಕಡೆ ಕಾಣಬಹುದು. ೧೮೮೦ರಿಂದ ೧೯೪೦ರವರೆಗೆ ಮೈಸೂರಿನ ರಾಜಕೀಯವನ್ನು ಸುವರ್ಣಯುಗ ಎಂದು ಅವರು ಗುರ್ತಿಸುತ್ತಾರೆ "ಸ್ವಾತಂತ್ರದಿಂದ ನಮಗೆ ಹಿಂದೆ ಇದ್ದ ಪ್ರಶ್ನೆಗಳು ಯಾವುವೂ ಪರಿಹಾರಕ್ಕೆ ಬಂದಿಲ್ಲ. ಪ್ರತಿಯಾಗಿ ಹೊಸ ಪ್ರಶ್ನೆಗಳು ಎದ್ದಿವೆ." "೧೯೪೦ಕ್ಕೆ ಹಿಂದೆ ದಿವಾನ್ ಅಧಿಕಾರ ನಡೆಸಿದವರೆಲ್ಲರೂ ಅವರವರ ದಾರಿಯಲ್ಲಿ ರಾಜನಿಷ್ಠರು, ಸಮರ್ಥರು"ಎನ್ನುತ್ತಾರೆ. ಇಂದಿನ ರಾಜಕೀಯವನ್ನು ಅವರು ವರ್ಣಿಸುವ ಪರಿ: "ಓಟೇ, ರಾಜಕೀಯದ ಕೇಂದ್ರ ; ಪಕ್ಷ ಘಟನೆಯೇ ಅದಕ್ಕೆ ದಾರಿ ; ರಂಧ್ರಾನ್ವೇಷಣೆಯೇ ಪಕ್ಷದ ಜಯೋಪಾಯ. ಆದುದರಿಂದಲೇ ದಿನದಿನವೂ ಹೊಸ ಹೊಸ ರಂಪ, ಹೊಸ ಹೊಸ ರಗಳೆ, ಹೊಸ ಹೊಸ ಗುಲ್ಲು." ಈ ಬಗ್ಗೆ ಅವರು ನಿರ್ದಿಷ್ಟವಾದ ಪರಿಹಾರ ನೀಡುವುದಿಲ್ಲ. ಹಲವಾರು ಕಡೆ ಅವರ ಮಾತು ಅಸ್ಪಷ್ಟವಾಗುತ್ತದೆ—"ಪ್ರಜೆಗಳ ಮನಸ್ಸು ಆಲೋಚಿಸಬೇಕು, ಚರ್ಚಿಸಬೇಕು, ಸ್ವತಂತ್ರ ಅಭಿಪ್ರಾಯ ಹೇಳಬೇಕು, ಆದರೆ ಪಕ್ಷೋದ್ವೇಗವಿಲ್ಲದೆ, ಪಕ್ಷಕೃತ್ರಿಮ ಇಲ್ಲದೆ ಹೇಳಬೇಕು. ಇಂಥ ಪ್ರಜಾವಿಹಿತರಾಜ್ಯ ನಮಗೆ ಬೇಕಾದದ್ದು." ಅವರು ಖಚಿತವಾಗಿ ಹೇಳಿದ ಹಲವಾರು ಅಭಿಪ್ರಾಯಗಳು ನಮ್ಮ ಪ್ರಜಾಪ್ರಭುತ್ವದ ಮೂಲತತ್ವಗಳಿಗೆ ವಿರುದ್ಧವಾದದ್ದಾಗಿವೆ. ಡಿ.ವಿ.ಜಿ.ಯವರು ಚುನಾಯಿತ ಪ್ರತಿನಿಧಿಗಳಿಗಿಂತಲೂ ನೇಮಕಗೊಂಡ ಅಧಿಕಾರಿಗೆ ಮಹತ್ವಕೊಡುವ ಪ್ರವೃತ್ತಿಯನ್ನು ಗಮನಿಸಿದರೆ ವಸಾಹತುಶಾಹಿ ಆಡಳಿತದ ಧೋರಣೆಯನ್ನು ಉಳಿಸಿಕೊಳ್ಳುವಂತೆ ಅನಿಸುತ್ತ ದೆ.

"ಮಂತ್ರಿಗಳ ಸಂಖ್ಯೆ ಐದು. ಅದರಲ್ಲಿ ಇಬ್ಬರು ಪ್ರಜಾಸಭೆಯಿಂದ ಆರಿಸಿ ಬಂದವರು; ಇಬ್ಬರು ಆಡಳಿತ ವರ್ಗದಿಂದ ಬಂದವರು, ಒಬ್ಬರು ಗವರ್ನರ್‌ರಿಂದ ಆರಿಸಲ್ಪಟ್ಟವರು. ಈ ಐದು ಮಂದಿ ತಮ್ಮಲ್ಲೊಬ್ಬಾತನನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆರಿಸತಕ್ಕದ್ದು ; ಆತನನ್ನು ಗವರ್ನರರು ಮುಖ್ಯಮಂತ್ರಿ ಪದವಿಗೆ ನಿಯಮಿಸುವರು.

"ಈ ಏರ್ಪಾಟಿನಲ್ಲಿ ಪಕ್ಷ ಪ್ರತಿಪಕ್ಷಗಳ ಪ್ರವೇಶವಿಲ್ಲ. ಮಂತ್ರಿಗಳು ಗವರ್ನರರಿಗೆ ಜವಾಬ್ದಾರರು. ಗವರ್ನರರು ಭಾರತಾಧ್ಯಕ್ಷರಿಗೆ ಜವಾಬ್ದಾರರು. ಇಲ್ಲಿ 'ಜವಾಬ್ದಾರಿ' ಎಂದರೆ ದಂಡನಾರ್ಹತೆ—ಅಧಿಕಾರಚ್ಯುತಿಗೆ ಸಿದ್ಧನಾಗಿರುವುದು."

ಸರಳ ಬಹುಮತವನ್ನು ಅವರು ಒಪ್ಪುವುದೇ ಇಲ್ಲ. ಸರ್ಕಾರ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳಬಾರದೆಂದೇ ವಾದಿಸುತ್ತಾರೆ.

ಅವರನ್ನು ಕಾಡುತ್ತಿದ್ದ ಪರಸ್ಪರ ವಿರೋಧಿಯಾದ ಇನ್ನೊಂದು ಮನೋವೃತ್ತಿಯೆಂದರೆ ಸಂಪ್ರದಾಯ ಮತ್ತು ಸುಧಾರಣೆ. ಅವರದು ತೀವ್ರ ಸುಧಾರಣಾ ಮನೋಧರ್ಮ, ಕಂದಾಚಾರ ಮೌಢ್ಯ ವಿರೋಧಿಯಾದ ತಾರ್ಕಿಕ ಚಿಂತನಶೀಲ ಬುದ್ಧಿ. ಇದು ಒಂದು ಕಡೆಯಾದರೆ ಕಂದಾಚಾರ, ಮೌಢ್ಯದಲ್ಲಿ ಮುಳುಗಿದ್ದ ಜೀವನದಲ್ಲೂ ಹೃದಯ ಸೌಂದರ್ಯವನ್ನು ಜೀವನ ಸೌಂದರ್ಯವನ್ನು ಕಂಡು, ಮೆಚ್ಚಿ, ಸಮರ್ಥಿಸುವ ಒಳ ಮನಸ್ಸು. ಈ ಎರಡನೇ ಪ್ರವೃತ್ತಿಯು ಅವರ "ವೈದಿಕ ಧರ್ಮ ಸಂಪ್ರದಾಯಸ್ಥರು" ಸಂಪುಟದಲ್ಲಿ ನಿಚ್ಚಳವಾಗಿ ಕಾಣುತ್ತದೆ. ಅವರ ಆಚಾರ-ವ್ಯವಹಾರಗಳನ್ನು ವರ್ಣಿಸುವಲ್ಲಿ ಹಲವೆಡೆ ಸಮರ್ಥನೆಯ—ಮೆಚ್ಚುಗೆಯ ಧಾಟಿ ಕಂಡುಬರುತ್ತದೆ. ಇನ್ನು ಉಳಿದೆಡೆಗಳಲ್ಲಿ ಸಹಾನುಭೂತಿಯ ನೋಟವೇ ಇದೆ. ಎಲ್ಲೂ ವಿರೋಧಿಸುವ, ಕನಿಷ್ಠ ಅಸಮ್ಮತಿ ಸೂಚಿಸುವ ಧೋರಣೆ ಎದ್ದು ಕಾಣುವುದಿಲ್ಲ. ಅವರೇ ಹೇಳುವಂತೆ ಇದು ವೈದಿಕ ಸಮಾಜದ ಸಮರ್ಥನೆಗೆ ಮಾಡಿದ್ದು : "ವೈದಿಕ ಜನದ ವಿಷಯದಲ್ಲಿ ಇನ್ನೊಂದು ದೃಷ್ಟಿ ಸಾಧ್ಯವಿದೆ, ಅವರಿಂದಲೂ ಸಮಾಜಕ್ಕೆ ಉಪಯೋಗವಾಗಿದೆ—ಎಂಬುದು ಇಲ್ಲಿನ ತಾತ್ಪರ್ಯ." ಆದರೆ ಏನು ಉಪಯೋಗವಾಗಿದೆ, ಹೇಗೆ ಉಪಯೋಗವಾಗಿದೆ ಎನ್ನುವುದನ್ನು ಡಿ. ವಿ. ಜಿ. ಹೇಳುವುದಿಲ್ಲ. ವೈದಿಕ ಧರ್ಮ ಸಂಪ್ರದಾಯಗಳ ಬಗ್ಗೆ ಸಹಾಯಭೂತಿಯುಳ್ಳ ಒಬ್ಬ ಅರೆಮನಸ್ಸಿನ ಸುಧಾರಣಾವಾದಿಯಂತೆ ಡಿ.ವಿ.ಜಿ. ಕಾಣಿಸುತ್ತಾರೆ.

ಸಾಹಿತ್ಯದ ಬಗ್ಗೆ ಅವರಿಗಿರುವ ಧೋರಣೆ ಕೂಡ ಈ ಬಗೆಯ ವಿರುದ್ಧ ಪ್ರವೃತ್ತಿಯಿಂದ ದೂರವಾಗಿಲ್ಲ. ಡಿ.ವಿ.ಜಿ.ಯವರು ಸಾಹಿತ್ಯ ರಚನೆಯನ್ನು ಪ್ರಾರಂಭಿಸಿದ ಕಾಲ, ಕನ್ನಡದ ನವೋದಯದ ಕಾಲ. ಹೊಸ ಪ್ರಯೋಗಗಳು, ಹೊಸ ರಚನೆಗಳು ಮೂಡಿ ಬರುತ್ತಿದ್ದ ಕಾಲ. "ನವೋದಯ ಕಾವ್ಯ ರಚನೆ"ಯಲ್ಲಿ ಡಿ.ವಿ.ಜಿ.ಯವರೂ ಮುಂಚೂಣಿಯಲ್ಲಿದ್ದವರೇ. ಆದರೂ ಅವರ ಒಲವು ಪ್ರಾಚೀನ ಸಾಹಿತ್ಯದ ಕಡೆ ಮತ್ತು ಶಾಸ್ತ್ರಗಳ ಕಡೆ ಹೆಚ್ಚಾಗಿತ್ತೆನ್ನಬಹುದು. ಹೊಸತನದ ಬಗ್ಗೆ ಮೆಚ್ಚುಗೆ, ಪ್ರಯೋಗಗಳ ಬಗ್ಗೆ ಒಲವು ತೋರುತ್ತಿದ್ದರು. ಅವುಗಳನ್ನು ಬೌದ್ಧಿಕವಾಗಿ ಸಮರ್ಥಿಸುತ್ತಿದ್ದರು. ಆದರೂ ಪ್ರಾಚೀನ ಸಾಹಿತ್ಯದಲ್ಲೇ ನೆಲೆನಿಲ್ಲುವ, ವಿರಮಿಸುವ ಮನೋಧರ್ಮ ಅವರದ್ದಾಗಿತ್ತೆನ್ನಬಹುದು. ಹೀಗಾಗಿ, ಅವರು ಆಧುನಿಕ ಸಾಹಿತ್ಯದ ಪರವಾಗಿದ್ದ ಒಬ್ಬ ಸಾಂಪ್ರದಾಯಿಕ ಸಾಹಿತಿ ಎನ್ನಿಸುತ್ತದೆ. ಈ ಅಂಶವನ್ನು "ಸಾಹಿತ್ಯೋಪಾಸಕರು" ಸಂಪುಟದಲ್ಲಿರುವ ಬಿ. ಎಂ. ಶ್ರೀ. ಅವರನ್ನು ಕುರಿತ ವ್ಯಕ್ತಿಚಿತ್ರವನ್ನು ಪರಿಶೀಲಿಸುವುದರ ಮೂಲಕ ಕಾಣಬಹುದು.

ಬಿ. ಎಂ. ಶ್ರೀ. ಅವರನ್ನು ಡಿ. ವಿ. ಜಿ. ಅವರು ಮೆಚ್ಚಿಕೊಳ್ಳುವುದು ಅವರ ಸೃಜನಶೀಲತೆಗಾಗಿ ಅಲ್ಲ, ಸಾಹಿತ್ಯ ಶ್ರದ್ಧೆಗಾಗಿ, ಪಾಂಡಿತ್ಯಕ್ಕಾಗಿ. ಅವರೇ ಉಲ್ಲೇಖಿಸುವ ಒಂದು ಘಟನೆ: "ಒಂದು ದಿನ ಬೆಳಿಗ್ಗೆ ಸುಮಾರು ಏಳು-ಏಳೂವರೆ ಘಂಟೆಯ

ಹೊತ್ತಿಗೆ ಅವರ ಮನೆಗೆ ಹೋದೆ. ಮೊಗಸಾಲೆಯಲ್ಲಿ ನಿಂತು ಅವರ ರೂಮಿನ ಕದವನ್ನು ತಟ್ಟಿದೆ. ಉತ್ತರ ಬರಲಿಲ್ಲ. ಆಲಿಸಿ ಕೇಳಿದೆ. ಏನೋ ಒಂದು ಹಾಡಿನ ಧ್ವನಿ ಕೇಳಿ ಬರುತ್ತಿತ್ತು. ಮತ್ತೊಮ್ಮೆ ಬಾಗಿಲು ತಟ್ಟಿದೆ. ತೆರೆಯಲಿಲ್ಲ. ಮೂರನೆಯ ಸಾರಿ ಗಟ್ಟಿಯಾಗಿ ಡಬಡಬ ಎಂದು ಕಟ್ಟಿಗೆಯಿಂದ ಬಾಗಿಲಮೇಲೆ ಬಾರಿಸಿದೆ. (ನನ್ನ ಇಂಥ ಚೇಷ್ಟೆಗಳು ಅವರಿಗೆ ಅಭ್ಯಾಸವಾಗಿದ್ದವು). ಆಗ ಬಾಗಿಲು ತೆರೆದರು. ನಾನು ಮೊದಲು ಎರಡು ಸಲ ಮಾಡಿದ್ದ ಸದ್ದು ಅವರ ಕಿವಿಗೆ ಸೋಕಿರಲಿಲ್ಲ. ಅವರು ಮಾಡುತ್ತಿದ್ದುದೇನು? ಡಾಂಟೆ [Dante] ಕವಿಯ 'ಡಿವೈನ್ ಕಾಮೆಡಿ' [Divine Comedy] ಕಾವ್ಯವನ್ನು ಸಣ್ಣ ಮೇಜಿನ ಮೇಲೆ ತೆರೆದಿಟ್ಟು ಅದರ ವಾಕ್ಯಗಳನ್ನೋದಿ ಬಾಯಿಗೆ ಗಟ್ಟಿ ಮಾಡಬೇಕೆಂದು ಅದರ ವಾಕ್ಯಗಳನ್ನು ನುಡಿಯುತ್ತಾ ಮುಂದಿನ ಕೋಣೆಯಿಂದ ಅದರ ಹಿಂದಿನ ಕೋಣೆಯ ಗೋಡೆಯವರೆಗೂ ಶತಪಥ ತುಳಿಯುತ್ತಿದ್ದರು. ಆ ವೇಳೆಗೆ ಶ್ರೀಕಂಠಯ್ಯನವರ ವಯಸ್ಸು ಐವತ್ತು ಮೀರಿತ್ತು. ಪೆನ್ಷನ್ ದಿನ ಹತ್ತಿರ ಹತ್ತಿರ ಬಂದಿತ್ತು.

"ಇದು ಹುಟ್ಟು ವಿದ್ವಾಂಸನ ಲಕ್ಷಣ". ಅವರು "ಇಂಗ್ಲೀಷ್ ಗೀತೆ"ಗಳ ಬಗ್ಗೆ ವ್ಯಕ್ತಪಡಿಸುವ ಪ್ರತಿಕ್ರಿಯೆ ಸ್ವಾರಸ್ಯಪೂರ್ಣವಾಗಿದೆ. "ಆ ಕಾಲದಲ್ಲಿ ಬಿ. ಎಂ. ಶ್ರೀಕಂಠಯ್ಯನವರ ಇಂಗ್ಲೀಷ್ ಗೀತೆಗಳ ಪ್ರಭಾವ ಎಷ್ಟು ದೂರ ಹೋದೀತೆಂಬುದರ ಕಲ್ಪನೆ ನನಗೆ ಬಂದಿರಲಿಲ್ಲ. ಅದು ಒಂದು ಒಳ್ಳೆಯ ಎಕ್ಸ್‌ಪರಿಮೆಂಟ್ (ಪ್ರಯೋಗ ಪರೀಕ್ಷೆ) ಎಂದು ಭಾವಿಸಿದ್ದೆ." ಅವರ ಮುಂದಿನ ವ್ಯಾಖ್ಯಾನವೆಲ್ಲವೂ ಆ ಕಾವ್ಯವನ್ನು ಗೇಲಿ ಮಾಡುತ್ತಿದ್ದ ಪ್ರಸಂಗಗಳು, ಅಣಕು ಗೀತೆಗಳು.

"ಊಟಗಾರ ಗುಂಡ ಬಂದ, ಆಹಾ ಏನು ಊಟವೋ!" ಇಂಗ್ಲೀಷ್ ಗೀತೆಗಳ ಬಗ್ಗೆ ಅವರಿಗೆ ಹೇಳಬೇಕೆನ್ನಿಸುವ ಮಾತಿದು: "ಅವರು ಆ ಕವನಗಳನ್ನು ಸಂಗ್ರಹ ಮಾಡಿಟ್ಟು ಅಂದವಾಗಿ ಚಿನ್ನದ ಗಿಲ್ಟ್ ತಲೆಬರಹ ಹಾಕಿಸಿ ಬೈಂಡು ಮಾಡಿಸಿಟ್ಟುಕೊಂಡಿದ್ದರು. ಬೈಂಡಿನ ಮೇಲೆ ಸುಂದರವಾದ ಚಿನ್ನದ ಬಣ್ಣದ ಅಕ್ಷರಗಳಲ್ಲಿ ಹೆಸರು ಬರೆಸಿದ್ದರು. ಅದನ್ನು ನೋಡಿ ನನಗೆ ತುಂಬಾ ಹಿಗ್ಗಾಯಿತು."

ಅವರು 'ಸಾಹಿತ್ಯೋಪಾಸಕ'ರೆಂದು ಚಿತ್ರಿಸಿರುವ ಬಹುಜನ, ವಿದ್ವಾಂಸರು ಅಥವಾ ಪ್ರಾಚೀನ ಪದ್ಧತಿಯ ಸಾಹಿತ್ಯಕಾರರು. ಉಪಸಂಹಾರದ ಒಂದು ಉಪ ಶೀರ್ಷಿಕೆಯೇ "ಪಾಂಡಿತ್ಯವೆ?"! "ನಮ್ಮಲ್ಲಿ ಕಾವ್ಯ, ಸಣ್ಣಕಥೆ, ದೊಡ್ಡ ಕಥೆ, ನಾಟಕ, ವಿಜ್ಞಾನ ಪ್ರಬಂಧಗಳು, ಹರಟೆ ವಿನೋದಗಳ ಸಾಹಿತ್ಯ, ಇವೆಲ್ಲ ಯಥೇಷ್ಟವಾಗಿ ಬೆಳೆಯುತ್ತಿವೆ. ಇದನ್ನೆಲ್ಲ ನೋಡಿ ಸಂತೋಷಿಸುತ್ತಿರುವವರಲ್ಲಿ ನಾನೂ ಒಬ್ಬ. ಆ ಎಲ್ಲ ಸಾಹಿತ್ಯವೂ ಭಾಷೆಯ ನವಚೈತನ್ಯದ ಲಕ್ಷಣಗಳೇ ಆದರೆ ದೇಶದಲ್ಲಿ ಪಾಂಡಿತ್ಯವೆಲ್ಲಿ?".

'ಜ್ಞಾಪಕ ಚಿತ್ರಶಾಲೆ'ಯಲ್ಲಿ ಕಾಣಬರುವ ಡಿ. ವಿ. ಜಿ. ವ್ಯಕ್ತಿತ್ವದಲ್ಲಿ, ಹೀಗೆ ವಿರುದ್ಧವಾದ ಎರಡು ಸೆಳೆತಗಳನ್ನು ಸ್ಪಷ್ಟವಾಗಿ ಕಾಣಬಹುದು. ಆದ್ದರಿಂದಲೇ ಅವರ ಜೀವನವು ಒಂದು ಚಿಂತನ, ಒಂದು ಗುರಿ, ಒಂದು ಕಾರ್ಯಕ್ರಮವನ್ನಿಟ್ಟುಕೊಂಡ ಏಕ ದೃಷ್ಟಿ ಮತ್ತು ಏಕಮುಖದ ಜೀವನವಾಗಲಿಲ್ಲ; ಏಕ ಮುಖದ ಹೋರಾಟ

ವಾಗಲಿಲ್ಲ. ಅವರ ಕ್ರಿಯಾಶೀಲತೆಯೂ ಅನುಭವ-ಚಿಂತನೆಯನ್ನು ಯಾವಾಗಲೂ ಮೇಳವಿಸಿಕೊಂಡು ನಡೆಯುತ್ತಿತ್ತು. ಅವರ ಸುಧಾರಣಾ ಆವೇಶವನ್ನು ಅನುಭವ ಮತ್ತು ಚಿಂತನೆಗಳು ನಿಯಂತ್ರಿಸುತ್ತಿತ್ತು. ಹೀಗಾಗಿ, ಎಲ್ಲ ಅಂಶಗಳನ್ನು ಸಮ ತೋಲನಗೊಳಿಸಲು, ಸಮನ್ವಯಗೊಳಿಸಲು ಯತ್ನಿಸುವ ಒಬ್ಬ ಚಿಂತಕನಂತೆ ಅವರು ಕಾಣುತ್ತಾರೆಯೇ ವಿನಃ ಯಾವುದೇ ಒಂದು ಗುರಿಗೆ-ಕಾರ್ಯಕ್ರಮಕ್ಕೆ, ಆದರ್ಶಕ್ಕೆ ಎಲ್ಲವನ್ನೂ ಮುಡಿಪಿಟ್ಟು ಹೋರಾಡಿದ ಕ್ರಿಯಾಶಾಲಿ ಹೋರಾಟಗಾರನಂತೆ ಕಾಣು ವುದಿಲ್ಲ.

ಈ ಜ್ಞಾಪಕ ಚಿತ್ರಗಳು ಸುಮಾರು ೨೨ ವರ್ಷಗಳ ಅವಧಿಯಲ್ಲಿ, ಹೇಳಿ ಬರೆ ಸಿದ ಬರಹಗಳು· ಆಧಾರ ಸಾಮಗ್ರಿಗಳನ್ನಿಟ್ಟುಕೊಂಡು, ಬರೆದು, ತಿದ್ದಿ, ಪರಿಷ್ಕಾರ ಮಾಡಿದ ಬರಹಗಳಲ್ಲ. ಆದ್ದರಿಂದಲೇ ಈ ಪ್ರಬಂಧಗಳಲ್ಲಿ ಕೆಲವೊಮ್ಮೆ ಬಂಧರಾಹಿತ್ಯ ಬಂಧಶಿಥಿಲತೆ ಕಂಡು ಬಂದರೂ,ಬಹುತೇಕ ಬರಹಗಳಲ್ಲಿ ಒಂದು ರೀತಿಯ ತಾಜಾತನ, ಲವಲವಿಕೆ ಕಂಡು ಬರುತ್ತದೆ. ಕೆಲವೊಮ್ಮೆ ಹರಟೆಯ ಸ್ವರೂಪಕ್ಕೆ ತಿರುಗಿ, ಅನ ಗತ್ಯವಾದ ವಿಚಾರಗಳು ನುಸುಳಿ, ಸ್ವಾರಸ್ಯಭಂಗವಾಗುವುದೂ ಉಂಟೆಂಬುದಕ್ಕೆ ಬಿ. ಎಂ. ಶ್ರೀ ಮೇಲಿನ ಪ್ರಬಂಧದ 'ಪುಂಡಾಮಾಮನ ವೃತ್ತಾಂತ'- "ಸಂಕೀರ್ಣ ಸ್ಮೃತಿ ಸಂಪುಟ"ದ "ಹೃದಯ ಸೌಂದರ್ಯ" ಪ್ರಬಂಧದ 'ಶಾಸ್ತ್ರಿಗಳ ವಾದ' ಎಂಬ ಭಾಗಗಳನ್ನು ಸೂಚಿಸಬಹುದು.

ಈ ವ್ಯಕ್ತಿ ಚಿತ್ರಗಳು ಸಮಗ್ರ ವ್ಯಕ್ತಿತ್ವವನ್ನು ನಿರೂಪಿಸುವ ಪರಿಪೂರ್ಣ ಚಿತ್ರವಲ್ಲ; ಇವು ಪಾರ್ಶ್ವ ನೋಟಗಳು. ವ್ಯಕ್ತಿತ್ವದ ಮುಖ್ಯ ಚಹರೆಯನ್ನು ಸ್ಪಷ್ಟ ಗೊಳಿಸುವ, ಆಳವಾಗಿ ಕೊರೆದ ರೇಖಾಚಿತ್ರಗಳು. ಡಿ.ವಿ.ಜಿ.-ಈ ರೇಖಾಚಿತ್ರಗಳಲ್ಲಿ ವಿವರಗಳನ್ನು ತುಂಬುವುದಿಲ್ಲ. ಈ ಪ್ರಬಂಧಗಳು ವ್ಯಕ್ತಿಗಳ "ಯೋಗ್ಯತಾ ನಿರ್ಣಯ ವಲ್ಲ" ಎಂದು ಲೇಖಕರೇ ಹೇಳಿದ್ದರೂ, ಇಲ್ಲಿ ವ್ಯಕ್ತಿತ್ವದ ಮೌಲ್ಯಮಾಪನೆ ನಡೆದೇ ಇದೆ. "ಆಯಾ ವ್ಯಕ್ತಿಯ ವಿಷಯದಲ್ಲಿ ನನ್ನ ಮನಸ್ಸು ಗ್ರಹಿಸಲಾದಷ್ಟನ್ನು ಅದ ರಲ್ಲಿ ನನ್ನ ನೆನಪು ಉಳಿಸಿಕೊಟ್ಟದ್ದನ್ನು ಲಿಖಿತ ಮಾಡುವುದಷ್ಟೇ ನನ್ನ ಪ್ರಯತ್ನ" ಎಂದಿದ್ದರೂ, ಆ ರೀತಿ ಮಾಡುವಾಗ ಆ ವ್ಯಕ್ತಿಯ ವಿಚಾರದಲ್ಲಿ ಗ್ರಹಿಸಿರಬಹುದಾದ ಅಲ್ಪ ಸ್ವಲ್ಪ ಅಪ್ರಿಯ ವಿಚಾರಗಳನ್ನು ಬಿಟ್ಟು ಬಿಡುತ್ತಾರೆ. "ಸಾಧ್ಯವಿರುವ ಹತ್ತು ದೃಷ್ಟಿಗಳಲ್ಲಿ ನನ್ನ ದೃಷ್ಟಿಯೂ ಒಂದು" ಎನ್ನುತ್ತಾರೆ. "ಪುಣ್ಯ-ಪಾಪ ವಿಮರ್ಶೆಗೆ ನಾನು ಹೋಗತಕ್ಕವನೇ ಅಲ್ಲ. ಯಾವ ಯಾವ ಜೀವಕ್ಕೆ ಎಲ್ಲೆಲ್ಲಿ ನೆಮ್ಮದಿಯೋ ಯಾರು ಕಂಡವರು ? ದೇವರು ಮಾಡಬೇಕಾದ ಕೆಲಸಕ್ಕೆ ನಾನು ಹೇಗೆ ಕೈ ಹಾಕಲಿ?" ಎನ್ನುವ, ತಪ್ಪನ್ನು ಗ್ರಹಿಸದ, ಗುಣಗ್ರಹಣ ಮಾತ್ರದ ದೃಷ್ಟಿ ಇವರದು.

ಇಲ್ಲಿನ ಚಿತ್ರಗಳ ಮುಖ್ಯ ತಂತ್ರವೆಂದರೆ ಶೀಲ ನಿದರ್ಶಕವಾದ (Character-revealing incidents) ಒಂದು ಅಥವಾ ಕೆಲವು ಘಟನೆಗಳ ಮೂಲಕ ವ್ಯಕ್ತಿತ್ವ ವನ್ನು ಪ್ರಕಾಶಗೊಳಿಸುವುದು. ಈ ಘಟನೆಗಳು ಕ್ಷಣಕಾಲ ಬೆಳಕಿನಂತೆ ಹೊಳೆದು ಚಹರೆಯನ್ನು ಸ್ಪಷ್ಟಗೊಳಿಸುತ್ತದೆ. ಬಹುತೇಕ ಚಿತ್ರಗಳು ಇಂಥ ಘಟನೆಗಳಿಂದ ಕೂಡಿವೆ.

ಡಿ. ವಿ. ಜಿ ವ್ಯಕ್ತಿಯ ಭೌತಿಕ ಆಕಾರವನ್ನು ವರ್ಣಿಸುವುದು ಕಡಿಮೆ. ಆದರೆ ವರ್ಣಿಸಿದಾಗ ನುರಿತ ಚಿತ್ರಗಾರನಂತೆ ವಿವರ ವಿವರವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ:

"ತೋಗೆರೆ ನಂಜುಂಡ ಶಾಸ್ತ್ರಿಗಳು ಚರ್ಮ, ಮೂಳೆ, ವಿದ್ವತ್ತು—ಈ ಮೂರರ ಸಮ್ಮೇಳನ. ಮಾಂಸವೇನೂ ಇದ್ದಂತೆ ತೋರುತ್ತಿರಲಿಲ್ಲ".

ರಾ. ರಘುನಾಥರಾಯರು: "ಆಳು ಎತ್ತರ; ಮೈ ಬಣ್ಣ ಶ್ಯಾಮಲ-ಮಸಕೆಂದೇ ಎನ್ನಬಹುದು. ಗಂಡು ಮುಖ, ಕೊಂಚ ಕೋಲಾದದ್ದು; ನೀಳವಾಗಿ ಗುಂಡಾಗಿ ಎದ್ದು ಕಾಣುವ ಮೂಗು; ಹುಲುಸಾದ ತೋರಣದಂಥ ಮೀಸೆ; ಕಣ್ಣುಗಳಾದರೋ ಈ ಕಡೆಯಿಂದಾಕಡೆಗೆ ಸುಳಿಯುತ್ತ ಚುಚ್ಚಿ ಮಾತನಾಡುವಂತೆ ತೋರುವ ಹೊಳಹೊಳವು; ಎರಡಂಗುಲ ಅಗಲದ ರೇಷ್ಮೆಯ ಅಂಚಿನ ಧೋತ್ರ, ಪಂಚೆ ಕಚ್ಚೆ ಹಾಕಿ ಉಟ್ಟದ್ದು; ಆ ಅಂಚೂ ಜರತಾರಿಯ ಸೆರಗೂ ಇಲ್ಲಲ್ಲಿ ಇಡಾಡುತ್ತಿರಬೇಕು; ಮೇಲೆ ಕರಿಯ ನಿಲುವಂಗಿ; ಅದರ ಮೇಲು ಸರಿಗೆಯ ಶಲ್ಯ; ಅಥವಾ ಬಿಳ್ಪನೆಯ ಶರಟು; ಮೊಳಕಾಲ್ಮೂರು ವಿನ ಚೌಕಳಿಯ ರೇಷ್ಮೆವಸ್ತ್ರ; ಮುಂಗೈಯಲ್ಲಿ ದಪ್ಪವಾದ ಚಿನ್ನದ ತಿರುಗು ಸುತ್ತಿನ ಕೈಕಪ್ಪ; ಎರಡು ಕೈಯಲ್ಲೂ ಕೆಂಪು ಪಚ್ಚೆಯ ಥಳಥಳಿಸುವ ಉಂಗುರಗಳು; ಬೆಳ್ಳಿಯ ನಸ್ಯದ ಡಬ್ಬಿ; ಬಣ್ಣದ ರೇಷ್ಮೆ ಕರವಸ್ತ್ರ—ಈ ಲಕ್ಷಣಗಳಿಂದ ಶೋಭಾಯಮಾನವಾಗಿದ್ದದ್ದು ಆ ವ್ಯಕ್ತಿ ಸ್ವರೂಪ. ಅವರನ್ನು ನಿಲುವು ಕಾಮಣ್ಣನೆಂದು ಕರೆಯುತ್ತಿದ್ದದ್ದುಂಟು."

ನಾಟಕೀಯ ಗುಣ ಈ ಚಿತ್ರಗಳ ಇನ್ನೊಂದು ಮುಖ್ಯ ಅಂಶ. ಈ ಕಾರಣದಿಂದಲೇ ಅಂದಿನ ಸನ್ನಿವೇಶ-ಘಟನೆಗಳು ಕಣ್ಣಿಗೆ ಕಟ್ಟಿದಂತಾಗುತ್ತದೆ, ಡಿ.ವಿ.ಜಿ. ಯವರಲ್ಲಿ ಪರೋಕ್ಷ ಕಥನ ವಿರಳ. ಚಿಕ್ಕ ಚಿಕ್ಕ ವಾಕ್ಯದ, ಚುರುಕು ಸಂಭಾಷಣೆಯಿಂದ ಕೂಡಿದ ಸ್ವಾರಸ್ಯಪೂರ್ಣ ನಿರೂಪಣೆಗೆ, ಎ. ಆರ್ ಕೃ ಮತ್ತು ಟಿ.ಎಸ್.ವೆಂ ಅವರು ಡಿ ವಿ ಜಿ ಯವರನ್ನು ಮೊದಲಿಗೆ ಭೇಟಿಮಾಡಿದ ಸನ್ನಿವೇಶ, ಒಂದು ನಿದರ್ಶನ.

ಕೃಷ್ಣಶಾಸ್ತ್ರಿ: ನಾವು ಕಂಟೋನ್ಮೆಂಟಿನಿಂದ ಬಂದಿದ್ದೇವೆ. ಕನ್ನಡದ ವಿಷಯದಲ್ಲಿ ನಮಗೆ ಶ್ರದ್ಧೆಯುಂಟು. ಆ ವಿಚಾರ ಮಾತನಾಡುವುದಕ್ಕಾಗಿ ಬಂದಿದ್ದೇವೆ.... ಸ್ವಾಮಿ, ಪರಿಷತ್ತನ್ನು ಪ್ರಾರಂಭಮಾಡಿದವರು ಎಲ್ಲರೂ ಮುದುಕರು, ಪ್ರತಿಷ್ಠಾವಂತರು. ನೀವು ಹೋಗಿ ಅವರ ಜೊತೆ ಸೇರಿಕೊಂಡಿರಲ್ಲ? ಅವರಿಂದ ಏನು ಕೆಲಸ ನಡೆಯುತ್ತದೆ? ಕೆಲಸಮಾಡುವವರಿಲ್ಲದೆ ಹೋದರೆ ಪರಿಷತ್ತಿನಿಂದ ಯಾರಿಗೇನು ಪ್ರಯೋಜನ?

ಡಿ.ವಿ.ಜಿ: ಯಾವ ದೊಡ್ಡ ಕೆಲಸ ನಡೆಯಬೇಕಾದರೂ ಮೊದಲು ಒಂದಷ್ಟು ಹಣಬೇಕಲ್ಲ? ಸರ್ಕಾರದವರು ಧನ ಒದಗಿಸಲು ಮುಂದೆ ಬಂದಿದ್ದಾರೆ...ಈ ಹಳಬರನ್ನೆಲ್ಲ ಸರಕಾರದ ಮುಖ್ಯ ಮುಖ್ಯ ಜನ ಬಲ್ಲರು. ಮತ್ತು ಈ ಹಳಬರು ಮಹಾಜನರಲ್ಲಿಯೂ ಗಣ್ಯತೆ ಪಡೆದವರು. ಅವರನ್ನು ಯಾಕೆ ಬಿಟ್ಟಿರಬೇಕು?

ಶಾಸ್ತ್ರಿಗಳು: ಅದೆಲ್ಲಾ ಇರಬಹುದು ಸ್ವಾಮಿ, ಕೆಲಸದ ಮಾತು ಹೇಳಿ.

ಅವರಲ್ಲಿ ಕೆಲಸ ಮಾಡುವವರು ಯಾರು? ಅಂಥ ಮುದುಕರಿಂದ ಕೆಲಸ ನಡೆಯುತ್ತದೆಯೆ?

ಡಿ.ವಿ.ಜಿ : ಹಾಗಾದರೆ ನಾನು ಏನು ಮಾಡಬೇಕೆಂದು ನಿಮ್ಮ ಅಭಿಪ್ರಾಯ?

ಶಾಸ್ತ್ರಿಗಳು : ಯುವಕರನ್ನು ಈ ಕೆಲಸಕ್ಕೆ ತರಬೇಕು.

ಡಿ.ವಿ.ಜಿ : ಅದು ನನ್ನಿಂದಾಗುವ ಕೆಲಸವೆ?

ಶಾಸ್ತ್ರಿಗಳು : ನೀವು ಬೆಂಬಲಕೊಟ್ಟರೆ ನಾವು ಆ ಕೆಲಸ ಮಾಡುತ್ತೇವೆ. ನೀವು ನಮ್ಮ ವಯಸ್ಸಿನವರು; ಹೋಗಿ ಆ ವೃದ್ಧರಲ್ಲಿ ತಗಲಿ ಹಾಕಿ ಕೊಂಡಿದ್ದೀರಿ.

ಡಿ.ವಿ.ಜಿ : ನಾನೇನೂ ತಗಲಿ ಹಾಕಿಕೊಂಡಿಲ್ಲ. ಅವರು 'ಒಳ್ಳೆಯ ಕೆಲಸ ಮಾಡೋಣ ಬಾ'-ಎಂದರು, ಹೋದೆ. ಈಗ ನೀವು ಬಾ ಎಂದರೆ ನಿಮ್ಮೊಡನೆಯೂ ಸೇರಲು ಸಿದ್ಧನಿದ್ದೇನೆ.

ಡಿ.ವಿ.ಜಿ.ಯವರ ಬರಹಗಳಲ್ಲಿ ತುಂಬ ಆಕರ್ಷಕವಾದದ್ದು : ಅವರ ಸೂತ್ರಪ್ರಾಯವಾದ, ತಿರುಳಾದ ನಿರ್ಣಾಯಕ ನುಡಿಗಳು. ಇದೇ ಅವರ ಸೂತ್ರಬದ್ಧವಾದ ವ್ಯಾಖ್ಯಾನ ಕೂಡ :

ವಿಶ್ವೇಶ್ವರಯ್ಯ–ನಂಜುಂಡಯ್ಯ : "ವಿಶ್ವೇಶ್ವರಯ್ಯನವರ ಮುಖ್ಯ ಗುಣ ಸಾಹಸ. ನಂಜುಂಡಯ್ಯನವರ ಮುಖ್ಯ ಗುಣ ಅಪಾಯ ಭೀತಿ."

ದೇವಾಲಯದಲ್ಲಿ ದೇವದಾಸಿ ನೃತ್ಯ ನಿಷೇಧ : "ಒಂದು ಒಳ್ಳೆಯ ಸುಧಾರಣೆಯಾಯಿತು; ಆದರೆ ಒಂದು ಒಳ್ಳೆಯ ವಿದ್ಯೆ ಹೋಯಿತು."

ರಾ. ರಘುನಾಥರಾಯರು : "ಅವರು ಸಮಾಜ ಸಂಸ್ಕಾರವಾದಿಗಳಾಗಿದ್ದರೂ, ಅವರ ಜೀವನ ತಳಹದಿ ಮಾತ್ರ ಪೂರ್ವ ಸಂಪ್ರದಾಯದ್ದೇ ಆಗಿತ್ತು."

ಸಂಸ್ಕೃತಿ-ವಿದ್ವತ್ತು : "ವಿದ್ವತ್ತಿಗಿಂತ ಮೇಲಾದ್ದು ಸಂಸ್ಕೃತಿ ವಿದ್ವತ್ತೆಂದರೆ ಪುಸ್ತಕ ಪಾಂಡಿತ್ಯ. ಸಂಸ್ಕೃತಿಯೆಂದರೆ ಜೀವನದ ಅಂತರಂಗದ ಸೊಗಸು.

ವೆಂಕಣ್ಣಯ್ಯ–ಕೃಷ್ಣಶಾಸ್ತ್ರೀ : "ವೆಂಕಣ್ಣಯ್ಯನಿಗೆ ಕಾವ್ಯ ಮೊದಲನೆಯದು, ಶಾಸ್ತ್ರ ಎರಡನೆಯದು. ಕೃಷ್ಣಶಾಸ್ತ್ರಿಗಳಿಗೆ ಎರಡೂ ಸಮ ಸಮ; ಶಾಸ್ತ್ರ ಕೊಂಚ ಮೇಲ್ಗೈಯೆಂದು ಹೇಳಿದರೂ ಹೇಳಬಹುದು."

ಕೆಲವೊಮ್ಮೆ ಈ ವಿಮರ್ಶೆ-ವ್ಯಾಖ್ಯಾನಗಳು ಬರೀ ಹೊಗಳಿಕೆಯಾಗುವುದೂ ಉಂಟು: "ಕನ್ನಡ ಗದ್ಯ ಸಾಹಿತ್ಯದಲ್ಲಿ ಶೈಲಿಯ ಗಂಭೀರತೆಯಲ್ಲಿಯೂ, ಉದಾತ್ತತೆಯಲ್ಲಿಯೂ, ವಿಶದತೆಯಲ್ಲಿಯೂ ವೀರ್ಯದಲ್ಲಿಯೂ ಕೃಷ್ಣರಾಜ ವಾಣೀ ವಿಲಾಸ ಭಾರತಕ್ಕೆ ಸಮಾನವಾದ ಗದ್ಯ ಬೇರೆ ಇಲ್ಲವೆಂದು ಇಂದಿಗೂ ನನ್ನ ಅಭಿಪ್ರಾಯ."

ಡಿವಿಜಿಯವರ ಚಿಂತನಶೀಲತೆಯಷ್ಟೇ ಮುಖ್ಯವೆಂದು ಅನ್ನಿಸುವುದು,ಆಕರ್ಷಕವಾದದ್ದು ಅವರ ವಿನೋದ ಪ್ರವೃತ್ತಿ. ಈ ಗುಣ ಅವರ ವಿಶಿಷ್ಟ ವ್ಯಕ್ತಿತ್ವಕ್ಕೆ ಮೆರಗು ನೀಡುತ್ತದೆ.ಕೆಲವೊಮ್ಮೆ ಅವರ ಹಾಸ್ಯ ಅಷ್ಟು ನವಿರಾದದ್ದಲ್ಲ, ಒರಟು, ಅತಿರೇಕ ಅನ್ನಿಸಬಹುದು. ಆದರೆ, ಒಟ್ಟಾರೆ ಅವರ ಬರವಣಿಗೆ ತುಂಬ ಉಲ್ಲಾಸದಾಯಕವಾಗಿರುವುದು ಈ ಪ್ರವೃತ್ತಿಯಿಂದ. ಇದು ಕೇವಲ ಬರವಣಿಗೆ ರೀತಿ ಮಾತ್ರವಲ್ಲ, ಅವರ ಜೀವನ ಮನೋಧರ್ಮದ ಒಂದು ಅಂಗ ಎಂಬುದನ್ನು ನಾವು ಮರೆಯ

ಬಾರದು. ಅವರ ಬರಹದಲ್ಲಿನ ವಿನೋದದ ಅಂಶಗಳನ್ನು ಮುಖ್ಯವಾಗಿ ಮೂರು ಭಾಗ ಮಾಡಬಹುದು. ಒಂದು,ಹಿಂದಿನ ವಿನೋದ ಪ್ರಸಂಗಗಳನ್ನೇ ಸ್ಮೃತಿಯಲ್ಲಿಟ್ಟು ಕೊಂಡು ಅದನ್ನೇ ಸ್ವಾರಸ್ಯಪೂರ್ಣವಾಗಿ ಬರೆಯುವುದು. ಡಾ॥ ಗುಂಡಣ್ಣನವರಿಗೆ, ಮದುವೆಯಿಡು ಕೃಷ್ಣರಾಯರಿಗೆ ಸಂಬಂಧಿಸಿದ ಪ್ರಸಂಗಗಳನ್ನೂ, 'ಅಪ್ರಸಿದ್ಧ ಕವಿತೆ'ಗೆ ಸಂಬಂಧಿಸಿದ ಬರಹಗಳನ್ನೂ ಈ ಗುಂಪಿಗೆ ಸೇರಿಸಬಹುದು. ನಡೆದ ಘಟನೆಗಳನ್ನು ವಿನೋದದ ದೃಷ್ಟಿಕೋನದಿಂದ-ನೋಡಿ, ಅದಕ್ಕೆ ವಿಶಿಷ್ಟ ಮೆರಗನ್ನು ಒದಗಿಸುವುದು; ಡಿವಿಜಿಯವರ ಮೆಟಲ್ ಷೀಟ್ ಉತ್ಪಾದನೆ ಯೋಜನೆಯನ್ನು, ಕ್ಷೌರದ ಬಟ್ಟಲು ಗಳ ಉತ್ಪಾದನೆಯೆಂದು ಅವರ ತಂದೆ ತಿಳಿದ ಪ್ರಸಂಗ.

ಮೂರನೆಯದು ಶೈಲಿಯಲ್ಲೇ ಮಿಳಿತವಾಗುವ ವಿಶಿಷ್ಟ ಬಗೆಯ ಹಾಸ್ಯೋಕ್ತಿ ಗಳು:

"ರಾವಣ ಬಕಾಸುರ ಕಥೆಗಳನ್ನು ನನ್ನ ಮುತ್ತಜ್ಜನ ವಿಷಯದಲ್ಲಿ ಹೇಳು ತ್ತಿದ್ದರು. ಗ್ರಾಮದೇವತೆಯ ಪ್ರಜೆಯಾದ ನನಗೆ ಈ ಕಥೆಯನ್ನು ಕೇಳಿ ಹೆಮ್ಮೆ ಯುಂಟಾಗುತ್ತದೆ. ನನ್ನ ಮುತ್ತಜ್ಜನಾದರೂ ಚೆನ್ನಾಗಿ ಊಟ ಮಾಡಿದ್ದನಲ್ಲ."

"ನನ್ನ ಇಂಗ್ಲಿಷ್ ಹುಚ್ಚು ಸ್ತಿಮಿತಕ್ಕೆ ಬಂದು ಕೆಲವು ದಿನಗಳಾದ ಮೇಲೆ ಕನ್ನಡದ ಹುಚ್ಚು ಮೊದಲಾಯಿತು."

"ರುಮಾಲು ಹ್ಯಾಟುಗಳನ್ನು ಗೂಟಗಳಿಗೆ ತಗಲಿಸಿ ರಾತ್ರಿ ಮಲಗಿದವರು ಬೆಳಗೆದ್ದು ಗಾಂಧಿ ಟೋಪಿಗಳನ್ನು ಧರಿಸಿದರು."

"ಆಗ ನಾನು ಸುಮಾರು ಇಪ್ಪತ್ತರಲ್ಲಿದ್ದವನು; ಮೆಟ್ರಿಕ್ಯುಲೇಷನ್ ಪರೀಕ್ಷೆ ಯಲ್ಲಿ ಮಣ್ಣು ತಿಂದಿದ್ದೆ."

"ಆಗ ರಾಜರ ಕಾಲ, ಈಗ ಮಂತ್ರಿ, ತಂತ್ರಿಗಳ ಕಾಲ."

"ಆತ ಆಗಾಗ ಕುರುವಿನಿಂದ ಬಾಧೆ ಪಡುತ್ತಿದ್ದರು; ಆದ್ದರಿಂದ ಅವರಿಗೆ ಕುರು ರಾಯ ಎಂದು ಹೆಸರಿಟ್ಟರು."

ಡಿವಿಜಿಯವರ ಈ ಚಿತ್ರಗಳಲ್ಲೆಲ್ಲಾ ಆಪ್ತವಾದ ನಾಟಕೀಯ ನಿರೂಪಣಾಧಾಟಿ ಇದೆ. ಸೂಕ್ಷ್ಮವಾಗಿ ನೋಡಿದರೆ ಇಡೀ ಲೇಖನದ ಉದ್ದಕ್ಕೂ ವರ್ತಮಾನ ಮತ್ತು ಭೂತಕಾಲದ ತುಲನೆ ಕಂಡು ಬರುತ್ತದೆ.

ನಾವು ಹಿಂದೆ ಇದ್ದ ಯಾವುದೋ ಅಮೂಲ್ಯವಾದದ್ದನ್ನು, ಸತ್ವಯುತವಾದ ದನ್ನು ಕಳೆದುಕೊಂಡದ್ದರ ಕೊರಗು ಈ ಬರವಣಿಗೆಯ ಹಿಂದಿನ ಸ್ಥಾಯಿಯಾಗಿದೆ: "Raising the standard of living—ಜೀವನ ಸೌಕರ್ಯದ ಮಟ್ಟವನ್ನು ಏರಿಸು ವುದು ಎಂಬ ಮಹಾಮಂತ್ರದ ಯುಗದಲ್ಲಿ ಹಳೆಯ ನೆಮ್ಮದಿ ಹೋಯಿತು, ಹಳೆಯ ಮನೋನೈರ್ಮಲ್ಯ ಹೋಯಿತು; ಹೊಸ ಸಂಪತ್ತು ಬರಲಿಲ್ಲ. ಆಗ ಅವರು ಮಾಡು ತ್ತಿದ್ದ ಊಟ ಈಗ ಅವರ ಮಕ್ಕಳು ಮೊಮ್ಮಕ್ಕಳಿಗೆ ದುರ್ಲಭವಾಗಿದೆ."

"ನಮ್ಮ ಮೋಟಾರ್ ಆಟಂ ಯುಗದಲ್ಲಿ, ಈಗಿನ ಗಡಿಬಿಡಿಯಲ್ಲಿ, ಇಂದಿನ ಬಾಳಿನ ಹೋರಾಟದಲ್ಲಿ, ಈ ಖಾಲಿ ಗಲಾಟೆಯಲ್ಲಿ, ಈಗಿನ ಫೇಸ್ ಪೌಡರ್, ಟೂತ್

ಪೇಸ್ಟ್‌ಗಳ ಸಂಭ್ರಮದಲ್ಲಿ, ನೆಮ್ಮದಿಯ ಕಾಲ ಒಂದಿತ್ತೆಂಬುದನ್ನು ನಾವು ಮನಸ್ಸಿಗೆ ತಂದು ಕೊಂಡರೆ ಅದರಿಂದ ನೆಮ್ಮದಿಯ ಸ್ವರೂಪ ಕೊಂಚವಾದರೂ ನಮ್ಮ ಮನಸ್ಸಿಗೆ ಬಂದೀತೇನೋ ಎಂದು ನನ್ನ ಚಪಲ."

ಚಿಂತನಶೀಲತೆ ಡಿ ವಿ ಜಿ. ಯವರ ಒಂದು ಪ್ರಧಾನ ಶಕ್ತಿ. ಈ ಬರಹಗಳು ಕೇವಲ ಹಿಂದಿನದರ ಹಂಬಲಿಕೆ ಅಥವಾ ಗೋಣಗಾಟವಾಗದಂತೆ ಈ ಚಿಂತನ ಶೀಲತೆ ನಿಯಂತ್ರಿಸುತ್ತದೆ. ಆದ್ದರಿಂದಲೇ ಇವು ಮೌಲ್ಯ ವಿವೇಚನೆಯನ್ನೊಳಗೊಂಡ ಬರಹಗಳಾಗುತ್ತವೆ. ಡಿ. ವಿ. ಜಿ. ಯವರು ಒತ್ತು ಕೊಡುವ ಎಷ್ಟೋ ಅಂಶಗಳನ್ನು ನಾವು ಒಪ್ಪಬಹುದು ಅಥವಾ ಬಿಡಬಹುದು. ಆದರೆ ಪರಿಶುದ್ಧವಾದ ಅವರ ನೈತಿಕ ದೃಷ್ಟಿಯನ್ನು ಮೆಚ್ಚದೇ ಇರಲು ಸಾಧ್ಯವೇ ಇಲ್ಲ. ತಮ್ಮ 'ಜ್ಞಾಪಕ ಚಿತ್ರಶಾಲೆ'ಯ ಮೊದಲ ಸಂಪುಟದ ಮೊದಲಲ್ಲಿ ಒಂದು ಸುಭಾಷಿತವನ್ನು ಉಲ್ಲೇಖಿಸುತ್ತಾರೆ: "ಸತ್ಪುರುಷರಲ್ಲಿಗೆ ಯಾವಾಗಲೂ ಹೋಗುತ್ತಿರಬೇಕು; ಅವರು ಉಪದೇಶವೆಂದು ಹೇಳಿ ಉಪದೇಶ ಮಾಡದಿದ್ದರೂ ಪರವಾಗಿಲ್ಲ. ತಮ್ಮ ಮನಸ್ಸಿಗೆ ಬಂದಂತೆ ಏನು ಮಾತುಕತೆ ನಡೆಸಿದರೂ ಅದೇ ನಮಗೆ ಉಪದೇಶವಾಗುತ್ತದೆ" ಡಿ ವಿ ಜಿ ಯವರು 'ಜ್ಞಾಪಕ ಚಿತ್ರಶಾಲೆ'ಯ ಈ ಬರಹಗಳಲ್ಲಿ ಗತಕಾಲದಲ್ಲಿ ತಾವು ಕಂಡು–ಕೇಳಿದ ವ್ಯಕ್ತಿಗಳ ಬಗ್ಗೆ ಸ್ವಾರಸ್ಯಪೂರ್ಣವಾಗಿ ಮಾತುಕತೆ ನಡೆಸಿದ್ದಾರೆ. ಈ ಮಾತುಕತೆಗಳಲ್ಲೇ ಅನನ್ಯವಾದ ಮೌಲ್ಯ ನಿರೂಪಣೆ ಅಡಗಿದೆ. ಇಂಥ ಸತ್ಪುರುಷರ ಕಾಂತಾ ಸಮ್ಮಿತಿಯ ಉಪದೇಶ ಕನ್ನಡದಲ್ಲಿ ತೀರಾ ವಿರಳ.

ಮುಮ್ಮಡಿ ಕೃಷ್ಣರಾಜ ಒಡೆಯರ (೧೭೯೪-೧೮೬೮) ಪೋಷಣೆಯ ಮೂವರು ಸಂಸ್ಕೃತ ವಿದ್ವಾಂಸರು

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

೧

ಮುಮ್ಮಡಿ ಕೃಷ್ಣರಾಜ ಒಡೆಯರ್ ಹಿಂದಿನ ಮೈಸೂರು ಅರಸು ಮನೆತನದ ೨೨ನೆಯ ಆಳಿಕೆಯ ಅರಸರೆಂದು ತಿಳಿಯಲಾಗಿದೆ. ಇವರು ೨೧ನೆಯ ಆಳಿಕೆಯ ಅರಸರಾದ ಖಾಸಾ ಚಾಮರಾಜ ಒಡೆಯರ್ (೧೭೭೬-೯೬) ಅವರಿಗೆ, ಅವರ ಪತ್ನಿ ಕೆಂಪನಂಜಮ್ಮಣ್ಣಿ ಅವರ (ಈಕೆ ಸಮ್ಮುಖದ ನಂಜರಾಜಯ್ಯನವರ ಪುತ್ರಿ) ಹೊಟ್ಟೆಯಲ್ಲಿ ಹುಟ್ಟಿದರು. ಹುಟ್ಟಿದ್ದು ೧೭೯೪ರ, ಆಷಾಢ ಬಹುಳ ೨ ಸೋಮವಾರದಲ್ಲಿ. ಖಾಸಾ ಚಾಮರಾಜ ಒಡೆಯರು, ಇಮ್ಮಡಿ ಕೃಷ್ಣರಾಜ ಒಡೆಯರ (೧೭೩೪-೬೬) ಪತ್ನಿ ಲಕ್ಷ್ಮಮ್ಮಣ್ಣಿಯವರಿಗೆ (ಈಕೆ ಕತ್ತಿ ಗೋಪಾಲರಾಜಯ್ಯನವರ ಪುತ್ರಿ), ಅವರ ಪತಿಯ ಕಾಲಾನಂತರದಲ್ಲಿ ಸ್ವೀಕೃತಪುತ್ರರಾಗಿ ಅಧಿಕಾರವಹಿಸಿದವರು ; ಹೀಗೆ ಮುಮ್ಮಡಿ ಕೃಷ್ಣರಾಜರಿಗೆ ಈಕೆ ಪಿತಾಮಹಿ.

ಮುಮ್ಮಡಿಯವರು, ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಮರಣದ ಅನಂತರ ತಮ್ಮ ಆರನೆಯ ವಯಸ್ಸಿನಲ್ಲಿ, ೧೭೯೯ರಲ್ಲಿ ಪಟ್ಟಕ್ಕೆ ಬಂದರು. ಆರಂಭದಲ್ಲಿ ರಾಣಿ ಲಕ್ಷ್ಮಮ್ಮಣ್ಣಿಯವರೂ ಪೂರ್ಣಯ್ಯನವರೂ ಆಡಳಿತ ವ್ಯವಹಾರಗಳನ್ನು ನಿರ್ವಹಿಸಿದರು. ಲಕ್ಷ್ಮಮ್ಮಣ್ಣಿ ದೊರೆಗೆ ಒಂದೆರಡು ಮದುವೆಗಳನ್ನು ಮಾಡಿಸಿ ಆದ ಮೇಲೆ ರಾಜಕೀಯ ವ್ಯವಹಾರಗಳ ಕ್ಲೇಶಗಳ ನಡುವೆಯೇ ೧೮೧೦ರಲ್ಲಿ ಮೃತರಾದರು. ಆಗ್ಗೆ ಅವರಿಗೆ ೬೮ ವರ್ಷ ವಯಸ್ಸಾಗಿತ್ತು. ಚತುರಮತಿಯಾದ ಈಕೆ ಟಿಪ್ಪುವಿನ ಸರ್ವಾಧಿಕಾರದ ಹಿಡಿತದಿಂದ ಮೈಸೂರ ದೊರೆತನವನ್ನು ಹಿಂದಕ್ಕೆ ಪಡೆಯಲು ಈಸ್ಟ್ ಇಂಡಿಯಾ ಕಂಪನಿ ಸರ್ಕಾರದೊಂದಿಗೆ ನಡೆಸಿದ ರಾಜನೈತಿಕ ವ್ಯವಹಾರಗಳು ಆಕೆಯ ಕಾರ್ಯನೈಪುಣ್ಯವನ್ನು ತೋರಿಸತಕ್ಕುವಾಗಿವೆ. ಪೂರ್ಣಯ್ಯನವರು ೧೭೯೯ರಿಂದ ೧೮೧೦ರ ವರೆಗೆ ಸಂಸ್ಥಾನದ ಆಡಳಿತ ನಿರ್ವಹಣೆಯನ್ನು ಸರ್ ಮೊಕ್ತಿಯಾರ್ ಆಗಿಯೂ, ಬಳಿಕ ೧೮೧೦-೧೧ರ ವರೆಗೆ ಐನ್ ದಿವಾನ್ ಆಗಿಯೂ ನೋಡಿಕೊಂಡು, ನಿವೃತ್ತರಾದರು ; ೧೮೧೨ರಲ್ಲಿ ಮೃತರಾದರು. ಇವರ ತರುವಾಯ ಭಕ್ಷಿ ಬಾಳಾಜಿರಾಯ ಮೊದಲುಗೊಂಡು ಹಲವರು ದಿವಾನರಾಗಿ ಕೆಲಸ ಮಾಡಿದರು ; ಬ್ರಿಟಿಷ್ ಆಡಳಿತದ ಪ್ರತಿನಿಧಿಗಳಾಗಿ ರೆಸಿಡೆಂಟರಾಗಿ ಕರ್ನಲ್ ಕ್ಲೋಸ್, ಜೆ. ವೆಬ್ ಮೊದಲಾಗಿ ಹಲವರು ಕಾರ್ಯ ನಿರ್ವಹಿಸಿದರು. ೧೮೧೧ ರಿಂದ ೧೮೩೧ರ ವರೆಗೆ ಮುಮ್ಮಡಿಯವರ ಖುದ್ದು ಆಳಿಕೆ ನಡೆಯಿತಾದರೂ,

ಅನಂತರದಲ್ಲಿ ಎಂದರೆ ೧೮೩೧ರಿಂದ ೧೮೬೮ರ ವರೆಗೆ–ಮುಮ್ಮಡಿಯವರು ಗತಿಸುವ ವರೆಗೆ ಬ್ರಿಟಿಷ್ ಕಮೀಷನರ ಕಾರುಬಾರು ಸಾಗಿತು.

೧೮೧೬-೧೭ರಲ್ಲಿ, ೧೮೨೩-೨೪ರಲ್ಲಿ ದೇಶದಲ್ಲಿ ಬರದ ಗರ ಹೊಡೆಯಿತು ; ಪರಿಹಾರ ಕಾರ್ಯಕ್ಕೆ ಖರ್ಚು ಹೆಚ್ಚಾಯಿತು. ೧೮೩೦ರಲ್ಲಿ ರಾಜ್ಯದ ಹಲವೆಡೆ ದಂಗೆಗಳಾದುವು. ಬಿದನೂರು ಅರಸುಮನೆತನದ ಹಕ್ಕುದಾರನೆಂದು ನಟಿಸುತ್ತಿದ್ದ ಬೂದಿ ಬಸವಯ್ಯನೆಂಬವನು ದಂಗೆಯೆದ್ದು, ಆ ದಂಗೆಯನ್ನು ಅಡಗಿಸಲು ಮೈಸೂರು ಸೇನೆಗೆ ಸಾಧ್ಯವಾಗಲಿಲ್ಲ ; ಬ್ರಿಟಿಷ್ ಸೇನೆಯ ಸಹಾಯ ಬೇಕಾಯಿತು. ಮೈಸೂರು ಸಂಸ್ಥಾನಕ್ಕೆ ಸಂದಾಯವಾಗುತ್ತಿದ್ದ ರಾಜಾದಾಯವಾದ ಕಂದಾಯ ಸರಿಯಾಗಿ ಸಲುವಳಿಯಾಗುತ್ತಿರಲಿಲ್ಲ. ಬ್ರಿಟಿಷರು ಪಿಂಡಾರಿ ಮತ್ತು ಮರಾಠಿಯವರೊಂದಿಗೆ ನಡೆಸುತ್ತಿದ್ದ ಯುದ್ಧಗಳಲ್ಲಿ ಮೈಸೂರು ಸೈನ್ಯ ಪಾಲುಗೊಳ್ಳುವುದು ಅವಶ್ಯವಾಯಿತು. ಇವೆಲ್ಲ ಸೇರಿ ರಾಜ್ಯದ ಅಸ್ಥಿರತೆಯ ಬಗೆಗೆ, ಅಂದಿನ ಬ್ರಿಟಿಷ್ ರೆಸಿಡೆಂಟ್ ಅರಸರ ವಿರುದ್ಧ ಮೇಲಾಳಿಕೆಗೆ ವರದಿ ಕಳಿಸಿದ. ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ ಮೈಸೂರು ಸಂಸ್ಥಾನದ ಆಡಳಿತವನ್ನು ಕಂಪೆನಿ ವಹಿಸಿಕೊಳ್ಳುವುದೆಂದು ಆಜ್ಞೆಮಾಡಿದರು. ಈ ಕಾರ್ಯದ ಸತ್ಯಾಸತ್ಯತೆಯನ್ನು ಸರಿಯಾಗಿ ವಿಮರ್ಶಿಸಲಾಯಿತೇ ಎಂಬ ವಿಚಾರದಲ್ಲಿ ತಕ್ಕ ಶೋಧನೆಗಳು ಇನ್ನೂ ನಡೆಯಬೇಕಾಗಿವೆಯೆಂದು ತೋರುತ್ತದೆ. ಇದು ಹೇಗಿದ್ದರೂ ತಮ್ಮ ಕೈತಪ್ಪಿ ಹೋದ ರಾಜ್ಯದ ಒಡೆತನವನ್ನು ಪಡೆಯಲು ಮುಮ್ಮಡಿಯವರು, ೩೭ ವರ್ಷಗಳ ಕಾಲ, ಎಂದರೆ ತಮ್ಮ ಜೀವಿತಾಂತ್ಯದವರೆಗೆ ಕಂಪನಿ ಸರ್ಕಾರದೊಂದಿಗೆ ವ್ಯವಹಾರ ನಡೆಸುತ್ತಲೇ ಇದ್ದರೆಂಬುದು ವಿದಿತ. ಅದು ಯಶಸ್ವಿಯಾಗಿ, ಜೂನ್ ೧೮, ೧೮೬೭ರಂದು ಕಮೀಷನರ್ ಸ್ಯಾಂಡರ್ಸ್ ಮೂಲಕ ಅವರ ಗಮನಕ್ಕೆ ತರಲ್ಪಟ್ಟಿತು ; ಮುಂದೆ ಮೈಸೂರು ಸಂಸ್ಥಾನವನ್ನು ಅವರ ಸ್ವೀಕೃತಪುತ್ರ ಚಾಮರಾಜ ಒಡೆಯರ್ (X) ಆಳುವುದೆಂದು ವ್ಯವಸ್ಥೆಯಾಯಿತು. ಮುಮ್ಮಡಿಯವರು ಜೂನ್ ೨೭, ೧೮೬೮ರಲ್ಲಿ ಮೃತರಾದರು.

ಧರ್ಮ, ಸಾಹಿತ್ಯ, ಕಲೆಗಳ ಅಭಿವೃದ್ಧಿಗೆ ಮುಮ್ಮಡಿಯವರ ಕೊಡುಗೆ ಅಪಾರವಾದುದು. "ಗುಡಿ, ಗೋಪುರ, ದೇವಾದಾಯ, ಬ್ರಹ್ಮಾದಾಯ, ತಟಾಕ, ಆರಾಮ, ಸಾಲುಮರ, ಕಟ್ಟೆ, ಕಾಲುವೆ, ಸೇತು, ಸೋಪಾನ, ಮಂಟಪ, ಛತ್ರ, ಧರ್ಮಶಾಲೆ" ಮುಂತಾದವು ಪುನರುಜ್ಜೀವನಗೊಂಡವು; ಹೊಸವು ಬಹುಸಂಖ್ಯೆಯಲ್ಲಿ ನಿರ್ಮಾಣಗೊಂಡವು. ಅವರ ಧರ್ಮಕಾರ್ಯಗಳು ನವರತ್ನಗಳೆಂದು ಖ್ಯಾತವಾಗಿವೆ. (ಭೂಷಾ, ದೇಶ, ಸೇವಾ, ದಾನ, ಪ್ರತಿಷ್ಠಾ, ಉಪಕಾರ, ಧರ್ಮ, ಕೀರ್ತಿ, ಸಾರಸ್ವತ).

೧೯ನೆಯ ಶತಮಾನದ ಆದಿಭಾಗದಲ್ಲಿ ಪುಣೆಯ ಪೇಶ್ವೆ ಮನೆತನದವರೂ, ಆ ಮೊದಲಲ್ಲಿಯೇ ತಂಜಾವೂರಿನ ನಾಯಕರೂ ಬ್ರಿಟಿಷ್ ಪ್ರಾಬಲ್ಯದಿಂದ ತಮ್ಮ ಪ್ರಭಾವವನ್ನು ಕಳೆದುಕೊಂಡರು. ವಿದ್ವಾಂಸರು, ಕವಿಗಳು ಮಹಾರಾಷ್ಟ್ರದಿಂದಲೂ ದಕ್ಷಿಣ ದೇಶದಿಂದಲೂ ಮೈಸೂರಿನ ಮುಮ್ಮಡಿ ಕೃಷ್ಣರಾಜರ ಕಲ್ಪವೃಕ್ಷದ ಛಾಯೆ

ಯನ್ನು ಬಯಸಿ ಬರತೊಡಗಿದರು. ಆಗ್ಗೆ ದೊರೆಗಳ ವರಮಾನ ೧೮ಲಕ್ಷದ ವರೆಗೆ ರಾಜ್ಯದ ವರಮಾನವನ್ನು ಹೊಂದಿಕೊಂಡು ಇರುತ್ತಿದ್ದು, ಅನಂತರ ಬ್ರಿಟಿಷ್ ಕಮೀಷನರ ಗೊತ್ತುಪಾಡಿನಂತೆ ಇದ್ದ ಕಾರಣ ದೊರೆಗಳಿಗೆ ಬರಬರುತ್ತ ಆರ್ಥಿಕ ಕ್ಲೇಶಗಳು ಸಹಜವಾಗಿಯೇ ಹೆಚ್ಚುತ್ತಿದ್ದಂತೆ ತೋರುತ್ತದೆ. ಹೀಗಿದ್ದೂ ಅವರ ಕಾಲ ದಲ್ಲಿ ವಿದ್ಯೆಗೆ, ವಿದ್ವಾಂಸರಿಗೆ ದೊರೆತ ಪ್ರೋತ್ಸಾಹ ಮೈಸೂರಿನ ಸಾಹಿತ್ಯೇತಿಹಾಸದಲ್ಲಿ ಒಂದು ಸುವರ್ಣಾಧ್ಯಾಯವನ್ನೇ ಬರೆಯುವ ಮಟ್ಟಿಗೆ ಉತ್ಕೃಷ್ಟವಾದುದಾಗಿದೆ. ಸಂಗೀತ, ಚಿತ್ರ ಮೊದಲಾದ ಲಲಿತ ಕಲೆಗಳಲ್ಲಿಯೂ ಸಂಸ್ಕೃತ, ಕನ್ನಡ ಸಾಹಿತ್ಯ, ಮಂತ್ರಶಾಸ್ತ್ರ, ತರ್ಕ, ವ್ಯಾಕರಣ, ಅಲಂಕಾರ, ವೈದ್ಯ, ವೇದಾಂತ, ಮೊದಲಾದ ಶಾಸ್ತ್ರ ಮತ್ತು ಸಾಹಿತ್ಯ ಭಾಗಗಳಲ್ಲಿಯೂ ಪ್ರಸಿದ್ಧರಾದ ಹಲವರು ಮುಮ್ಮಡಿ ಯವರ ಆಸ್ಥಾನದಲ್ಲಿ ಭೂಷಣಪ್ರಾಯರಾಗಿ ಶೋಭಿಸುತ್ತಿದ್ದರು. ಜೊತೆಗೆ ಮುಮ್ಮಡಿ ಯವರು ಸ್ವತಃ ಐವತ್ತರ ಮೇಲ್ಪಟ್ಟು ಕೃತಿಗಳನ್ನು ರಚಿಸಿರುವುದಾಗಿ ತಿಳಿದಿದೆ; ಇವೆಲ್ಲ ಬಲುಮಟ್ಟಿಗೆ ಅವರ ಆಸ್ಥಾನದ ಇಲ್ಲವೆ ಪ್ರತ್ಯಕ್ಷ ಹಾಗೂ ಪರೋಕ್ಷವಾದ ಆಶ್ರಯದಲ್ಲಿ ಬೆಳೆದ ಕವಿಗಳ, ಪಂಡಿತರ ರಚನೆಗಳಾಗಿದ್ದು, ಅವರಿಗೆ ಅಂಕಿತವಾಗಿರು ವಂತೆ ತೋರುವುದು.

ಮುಮ್ಮಡಿಯವರ ಆಸ್ಥಾನದಲ್ಲಿ, ಕವಿ ವಿದ್ವಾಂಸರ ಯೋಗ್ಯತೆಗೆ ಅನುಸಾರ ವಾಗಿ ಸ್ಥಾನಮಾನಗಳಿದ್ದುವೆಂದೂ, ಮರ್ಯಾದೆಗಳು ಸಲ್ಲುತ್ತಿದ್ದುವೆಂದೂ ತಿಳಿಯು ವುದು. ಆಸ್ಥಾನ ವಿದ್ವಾಂಸರೆಂದು ಖ್ಯಾತರಾದವರಿದ್ದರು; ಅರಮನೆಯ ಪೋಷಣೆ ಯನ್ನು ಪಡೆದವರಾಗಿ ಆಗಾಗ ಅರಮನೆಗೆ ಬಂದು ಹೋಗುವವರಿದ್ದರು; ಬೇರೆ ಸಂಸ್ಥಾನಗಳಿಂದಲೂ ಪರಸ್ಥಳಗಳಿಂದಲೂ ಪ್ರಯಾಣ ಮಾಡಿ ಬಂದು ಪ್ರಭುಗಳ ದರ್ಶನ ಪಡೆದು ತಮ್ಮ ವಿದ್ವತ್ತೆಯನ್ನೂ ಕವಿತ್ವಶಕ್ತಿಯನ್ನೂ ಕಲಾಪ್ರೌಢಿಮೆ ಯನ್ನೂ ಪ್ರದರ್ಶಿಸಿ ಖಿಲ್ಲತ್ತುಗಳನ್ನು ಪಡೆದು ಹಿಂದಿರುತ್ತಿಗುದ್ದವರೂ ಇದ್ದರು. ಹಾಗೆ ಬಂದ ಕೆಲವರು ಮೈಸೂರಿನಲ್ಲಿಯೇ ನೆಲಸಿ, ರಾಜಾಸ್ಥಾನದಲ್ಲಿ ಹೆಚ್ಚಿನ ಅಭ್ಯುದಯವನ್ನು ಪಡೆದುಕೊಳ್ಳುತ್ತಿದ್ದ ನಿದರ್ಶನಗಳೂ ಸಾಕಷ್ಟು ಇವೆ.

ಮಹಾರಾಜರ ಮನ್ನಣೆಗೆ ಪಾತ್ರರಾಗಿದ್ದ ಪ್ರಾರಂಭಕಾಲದ ವಿದ್ವಾಂಸರಲ್ಲಿ ಶ್ರೀ ವೈಷ್ಣವ ಮತದ ಕರೂರು ಶ್ರೀನಿವಾಸಾಚಾರ್ಯರು ಪ್ರಮುಖರು. ಅವರ ಶಿಷ್ಯರಾಗಿದ್ದ ತಿರುಮಲೈ ರಂಗಾಚಾರ್ಯರು ಮುಮ್ಮಡಿಯವರಿಗೆ ಸಂಸ್ಕೃತದ ಉಪಾಧ್ಯಾಯರಾಗಿ ದ್ದರು. ಚತುಃಶಾಸ್ತ್ರಪಂಡಿತರಾಗಿದ್ದ, ಪೇಶ್ವೆಯವರಿಂದ ಸನ್ಮಾನಿತರಾಗಿದ್ದ ತ್ರ್ಯಂಬಕ ಶಾಸ್ತ್ರಿಗಳನ್ನು ದೊರೆಗಳು ತಾವಾಗಿಯೇ ಬರಮಾಡಿಕೊಂಡಿದ್ದರು. ಇವರ ಮಕ್ಕಳೂ ಚತುಃಶಾಸ್ತ್ರ ಪಂಡಿತರೇ ಆಗಿದ್ದರು. ತ್ರ್ಯಂಬಕಶಾಸ್ತ್ರಿಗಳಲ್ಲಿ ಸ್ವಲ್ಪ ಕಾಲ ವಿದ್ಯಾ ಭ್ಯಾಸ ಮಾಡಿ, ಬಳಿಕ ತಿರುಪತಿ ಶ್ರೀನಿವಾಸಾಚಾರ್ಯರಲ್ಲಿ ಕಲಿತು ತರ್ಕ ವೇದಾಂತ ಗಳಲ್ಲಿ ಅತಿಶಯ ಪಾಂಡಿತ್ಯ ಗಳಿಸಿದ್ದ ಕುಣಿಗಲ್ ರಾಮಶಾಸ್ತ್ರಿಗಳು ಆಸ್ಥಾನದ ಮುಖ್ಯ ವಿದ್ವಾಂಸರಾಗಿದ್ದರು. (ಇವರ ಜೀವನ ಚರಿತ್ರೆಯನ್ನು ಎಂ.ಎಸ್. ಪುಟ್ಟಣ್ಣ ನವರು 'ಕುಣಿಗಲ ರಾಮಶಾಸ್ತ್ರಿಗಳ ಚರಿತೆ' ಎಂಬ ಹೆಸರಿನಲ್ಲಿ ಬರೆದು ೧೯೧೦ರಲ್ಲಿ

ಪ್ರಕಟಿಸಿರುತ್ತಾರೆ). ಕಾಶಿ ಶೇಷಶಾಸ್ತ್ರಿಗಳು ವ್ಯಾಕರಣ ಶಾಸ್ತ್ರದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಪಡೆದವರಾಗಿ ಅನಂತರದಲ್ಲಿ ಪ್ರಸಿದ್ಧರಾದ ಮೈಸೂರು ಸಂಸ್ಥಾನದ ವ್ಯಾಕರಣ ಶಾಸ್ತ್ರ ಪಂಡಿತರಿಗೆಲ್ಲ ಆಚಾರ್ಯ ಸ್ಥಾನದಲ್ಲಿದ್ದರು. ಸೋಸಲೆ ಗರಳಪುರಿ ಶಾಸ್ತ್ರಿಗಳು ಸಂಸ್ಕೃತ ಸಾಹಿತ್ಯ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ ನಿಪುಣರಾಗಿದ್ದರು. ಹಲವಾರು ಸಂಸ್ಕೃತ ಗ್ರಂಥಗಳನ್ನು ರಚಿಸಿ ಸಾಹಿತ್ಯಾಚಾರ್ಯನೆಂಬ ಬಿರುದು ಪಡೆದಿದ್ದ ಸಜ್ಜಯಂ ತಾತಾಚಾರ್ಯರು ದೊರೆಗಳಿಗೆ ನಿಕಟವರ್ತಿಯಾಗಿದ್ದರು. ರಾಜೇಶ್ವರ ಶಾಸ್ತ್ರಿಗಳೆಂಬವರು ಮಂತ್ರಶಾಸ್ತ್ರದಲ್ಲಿ ತಜ್ಞತೆ ಸಂಪಾದಿಸಿದ್ದಂತೆ, ವಿಷ್ಣು ಪಾದಾಚಾರ್ಯರು ಜ್ಯೋತಿರ್ವಿಜ್ಞಾನದಲ್ಲಿ ತಜ್ಞತೆ ಪಡೆದಿದ್ದರು. ಕಾಶಿಯಲ್ಲಿ ಅನೇಕ ವರ್ಷ ವ್ಯಾಸಂಗ ಮಾಡಿ ಬಂದಿದ್ದ ದ್ವೈತ ಸಿದ್ಧಾಂತಿ ತಿಮ್ಮಣ್ಣಾಚಾರ್ಯರು ಅನ್ಯಮತಸ್ಥರ ವಾಕ್ಯಾರ್ಥ ಕಾಲದಲ್ಲಿ ತ್ರಯಸ್ಥರಾಗಿರುವ ಮಟ್ಟಿಗೆ ಗೌರವ ಪಡೆದಿದ್ದರು. ಕನ್ನಡ ಕವಿಗಳಲ್ಲಿ ಕೆಂಪುನಾರಾಯಣ, ದೇವಲಾಪುರದ ನಂಜುಂಡ, ಅಳಿಯ ಲಿಂಗರಾಜ, ತಮ್ಮಯ್ಯ ಶಾಸ್ತ್ರಿ, ವೆಂಕಟರಾಮಾಶಾಸ್ತ್ರಿ, ಯಾದವ ಕವಿ, ವೇದಾಂತ ರಾಘವಾಚಾರ್ಯ ಈ ಮೊದಲಾದವರನ್ನು ಹೆಸರಿಸಬಹುದು. ಬಹುಶಃ ಅರಮನೆಯ, ಆಸ್ಥಾನದ ಸಂಪರ್ಕವನ್ನುಳ್ಳ ನೂರು ಮುಂದಿಯಾದರೂ ವೈದಿಕ ಶಿರೋಮಣಿಗಳೂ ವಿದ್ವಾಂಸರೂ ಮುಮ್ಮಡಿಯವರ ಕಾಲದಲ್ಲಿದ್ದರೆಂದು ಭಾವಿಸಲು ಅವಕಾಶವಿದೆ.

ಮಠಗಳು, ವೈದಿಕರು ಮತ್ತು ಲೌಕಿಕರ ಮನೆಗಳು, ಉಪಾಧ್ಯಾಯರ ಮನೆಗಳು ಕಲಿಯುವ ವಿದ್ಯಾರ್ಥಿಗಳಿಗೆ ಪಾಠಶಾಲೆಗಳಾಗಿದ್ದವು ; ಒಬ್ಬೊಬ್ಬ ಘನ ವಿದ್ವಾಂಸನ ಮನೆಯೂ ಒಂದೊಂದು ಶಾಸ್ತ್ರನಿಲಯವೇ ಆಗಿದ್ದಿತು ; ಇಲ್ಲಿಯೇ ಅವರಿಗೆ ಊಟ ವಸತಿಗಳ ಏರ್ಪಾಡೂ ಸಹ ಇರುತ್ತಿದ್ದಿತು ಭಾಗವತ ಸುಬ್ಬರಾಯರು ಮೊದಲಾದ ಸರ್ಕಾರದ ಅಧಿಕಾರಿಗಳು ಇಂತಹ ವಿದ್ಯಾರ್ಥಿಗಳಿಗೆ ಈ ಬಗೆಯ ಏರ್ಪಾಡುಗಳನ್ನು ಮಾಡಿಕೊಟ್ಟದ್ದುದರ ಉಲ್ಲೇಖಗಳುಂಟು.

ಪ್ರಸ್ತುತ, ಮುಮ್ಮಡಿ ಕೃಷ್ಣರಾಜ ಒಡೆಯರ ಪೋಷಣೆಯ ಮೂವರು ಸಂಸ್ಕೃತ ವಿದ್ವಾಂಸರ ಜೀವನದ ಬಗ್ಗೆ ಸ್ವಲ್ಪ ವಿವರವಾಗಿ ಪರಿಶೀಲಿಸೋಣ.

೨

ಕರೂರು ಶ್ರೀನಿವಾಸಾಚಾರ್ಯರು (೧೭೮೫-೧೮೩೦)

ಕರೂರು ಶ್ರೀನಿವಾಸಾಚಾರ್ಯರ ಪೂರ್ವಜರು ತಿರುಚನಾಪಳ್ಳಿಗೆ ಸಮೀಪದ ಕರೂರು ಎಂಬ ಗ್ರಾಮದಲ್ಲಿಯ ಶ್ರೀವೈಷ್ಣವ ಪಂಥಕ್ಕೆ ಸೇರಿದವರು. ಶ್ರೀನಿವಾಸಾಚಾರ್ಯರ ತಂದೆ ತಿರುಮಲಾಚಾರ್ಯ ಸ್ವಾಮಿಗಳು, ತಾತ ಶ್ರೀರಂಗಾಚಾರ್ಯರು ತಂದೆ ತಿರುಮಲಾಚಾರ್ಯರು ಶ್ರೀಶೈಲ ದೇಶಿಕಾಚಾರ್ಯ ಸ್ವಾಮಿಗಳೆಂಬ ಹೆಸರಿನಿಂದ ಪ್ರಸಿದ್ಧರು ; ಇವರೇ ಸಂನ್ಯಾಸಾಶ್ರಮದಲ್ಲಿ ಶ್ರೀಮದ್ರಂಗರಾಮಾನುಜ ಸ್ವಾಮಿಗಳೆನಿಸಿದರು. ಇವರು ಗೃಹಸ್ಥಾಶ್ರಮದಲ್ಲಿದ್ದಾಗ್ಯೂ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಮೇಲೆಯೂ, 'ಶ್ರೀಮನ್ನಿಗಮಾಂತ ಮಹಾದೇಸಿಕ ಸಚ್ಚರಿತ ದಿವ್ಯರತ್ನಾವಲೀ', 'ಶ್ರೀ ಶಬ್ದಾರ್ಥ ವಿವರಣ ಸಂಗ್ರಹ' ಇತ್ಯಾದಿಯಾಗಿ ೩೩ ಗ್ರಂಥಗಳನ್ನು ರಚಿಸಿದರು.

ಇವರಿಗೆ, ಇವರ ಪತ್ನಿ ಅಲಮೇಲ್ಮಂಗೈ ಅಮ್ಮಾಳ್ ಎಂಬವರಲ್ಲಿ ಹುಟ್ಟಿದ ಮೂವರು ಗಂಡು ಮಕ್ಕಳಲ್ಲಿ ಎರಡನೆಯವರೇ ಕರೂರು ಶ್ರೀನಿವಾಸಾಚಾರ್ಯರು.

ಈ ಆಚಾರ್ಯರಿಗೆ ತಂದೆಯವರಿಂದ ಪಂಚಸಂಸ್ಕಾರಾದಿಗಳು ಆದಮೇಲೆ, ಅವರ ಮಾರ್ಗದರ್ಶನದಲ್ಲಿಯೇ ತರ್ಕ ವ್ಯಾಕರಣಾದಿ ಶಾಸ್ತ್ರಗಳ ಪಾಠವೂ ಉಭಯ ವೇದಾಂತ ಗ್ರಂಥಗಳ ಅಧ್ಯಯನವೂ ನಡೆದುವು. ಇವರು ೨೦ನೆಯ ವಯಸ್ಸಿಗೇ ಬಹುಶಾಸ್ತ್ರ ಪಂಡಿತರಾದರು. ಕೆಲ ಕಾಲ ಶ್ರೀರಂಗದ ರಂಗನಾಥ ಸ್ವಾಮಿಗೆ ಕೈಂಕರ್ಯ ಸಲ್ಲಿಸುತ್ತಿದ್ದರು. ಕರೂರಿಗೆ ಸಮೀಪದ ನೆರೂರಿನ ಪಿತ್ರಾರ್ಜಿತ ಸ್ವತ್ತುಗಳ ಮೂಲಕ ವಾಗಿಯೂ ಮದರಾಸಿನಲ್ಲಿದ್ದ ಕೆಲವರು ತ್ರೈವರ್ಣಿಕ ಶ್ರೇಷ್ಠಿಗಳು ಸಲ್ಲಿಸುತ್ತಿದ್ದ ಆಚಾರ್ಯ ಸಂಭಾವನೆಯ ಮೂಲಕವಾಗಿಯೂ ಇವರಿಗೆ ಜೀವನ ನಿರ್ವಹಣವಾಗು ತ್ತಿದ್ದಿತು. ಈ ಉತ್ಪತ್ತಿಯಿಂದಲೇ ಬಹುಸಂಖ್ಯೆಯ ಶಿಷ್ಯರಿಗೆ ಪಾಠಪ್ರವಚನಗಳನ್ನು ನಡೆಸುತ್ತ, ಅವರಿಗೆ ಅಶನವಸನಗಳ ಸೌಕರ್ಯವನ್ನೂ ಏರ್ಪಡಿಸುತ್ತ ಇರುತ್ತಿದ್ದರು. ಇವರ ಪತ್ನಿ ಕುಂಭಕೋಣದ ಸಮೀಪದ ಮಾಂಗುಡಿಯವರು. ಅಣ್ಣ ತಮ್ಮಂದಿರು ಮೊದಲಾಗಿ ಎಲ್ಲಾ ಒಟ್ಟುಕುಟುಂಬದಲ್ಲಿರುತ್ತಿದ್ದರು.

ಶ್ರೀನಿವಾಸಾಚಾರ್ಯರು ಶ್ರೀರಂಗದಿಂದ ಮೈಸೂರಿಗೆ ಬರುವಂತಾದ ಒಂದು ಸಂದರ್ಭವೆಂದರೆ, ತ್ರ್ಯಂಬಕ ಶಾಸ್ತ್ರಿಗಳೊಂದಿಗೆ ವಾಕ್ಯಾರ್ಥ ನಡೆಸಲು ತಕ್ಕವರನ್ನು ಗುರುತಿಸಿ ಕರೆಸಿಕೊಳ್ಳಬೇಕಾಗಿ ಬಂದ ಒಂದು ವಿಶೇಷ ಸಂದರ್ಭವೇ ಆಗಿದೆ. ಮುಮ್ಮಡಿಯವರಿಗೆ ಪಟ್ಟಾಭಿಷೇಕವಾದ ಮೇಲೆ ಅವರ ಸಂಸ್ಕೃತ ವ್ಯಾಸಂಗಕ್ಕೆ ಪೂರ್ಣಯ್ಯನವರು ನಂಜನಗೂಡು ಹತ್ತಿರದ ಕಳಲೆ ಗ್ರಾಮದಲ್ಲಿ ನೆಲೆಸಿದ್ದ ತಿರುಮಲೈ ಶ್ರೀ ರಂಗಾಚಾರ್ಯರನ್ನು ಗೊತ್ತುಮಾಡಿದರು. ಇವರು ಶ್ರೀರಂಗದಲ್ಲಿದ್ದು ಕರೂರು ಶ್ರೀನಿವಾಸಾಚಾರ್ಯರಲ್ಲಿ ವಿದ್ಯಾಭ್ಯಾಸ ಮಾಡಿ ಬಂದವರು. ಇವರಲ್ಲಿಯೇ ಮುಮ್ಮಡಿಯವರು ತಮ್ಮ ೧೫ನೆಯ ವಯಸ್ಸಿನವರೆಗೆ ಕಾವ್ಯ ನಾಟಕ ಅಲಂಕಾರಗಳ ಸಂಸ್ಕೃತ ವ್ಯಾಸಂಗವನ್ನು ನಡೆಸಿದರಂತೆ.

ಚತುಶ್ಶಾಸ್ತ್ರ ಪಂಡಿತರಾದ ತ್ರ್ಯಂಬಕ ಶಾಸ್ತ್ರಿಗಳು ತಮ್ಮ ವಾದನೈಪುಣ್ಯ ದಿಂದ ಅನೇಕ ಸಂಸ್ಥಾನಗಳಲ್ಲಿ ವಿದ್ವಾಂಸರೊಂದಿಗೆ ವಾದಮಾಡಿ ಜಯಿಸಿ ಬಿರುದು ಗಳನ್ನೂ ಖಿಲ್ಲತ್ತುಗಳನ್ನೂ ಸಂಪಾದಿಸಿ ಮೈಸೂರಿಗೆ ಸಹ ಬಂದರು. ಅವರೊಂದಿಗೆ ಯಾರು ವಾದ ಮಾಡಲು ಸಮರ್ಥನೆಂಬ ಮಾತು ಬಂದಿತು. ವಿದ್ವಾನ್ ಶ್ಯಾಮಾ ಚಾರ್ಯರು ಚತುಶ್ಶಾಸ್ತ್ರ ಪಂಡಿತರಾಗಿದ್ದುದರಿಂದ ಸಮರ್ಥರಾಗಿದ್ದರೂ, ಅವರು ಸ್ವಲ್ಪ ಮೊದಲು ಪರಕಾಲಮಠದಲ್ಲಿ ಸ್ವಾಮಿಗಳ ಪಟ್ಟಕ್ಕೆ ಬಂದಿದ್ದುದರಿಂದ ಅವರು ವಾದ ಮಾಡುವಂತಿರಲಿಲ್ಲ (ಇವರೇ ಘಂಟಾವತಾರ ಪರಕಾಲ ಸ್ವಾಮಿಗಳು). ಈ ಸ್ಥಿತಿಯಲ್ಲಿ ಶ್ರೀರಂಗಾಚಾರ್ಯರ ಸಲಹೆಯಂತೆ ಅವರ ನೇತೃತ್ವದಲ್ಲಿ ಒಂದು ಪಂಡಿತಮಂಡಲಿ ಶ್ರೀರಂಗಕ್ಕೆ ತೆರಳಿ ಕರೂರು ಶ್ರೀನಿವಾಸಾಚಾರ್ಯರನ್ನು ಕರೆದುಕೊಂಡು ಬರುವಂತೆ ಮುಮ್ಮಡಿಯವರು ಏರ್ಪಾಡು ಮಾಡಿದರು. ಆದರೆ ಸ್ವಲ್ಪ ಮೊದಲೇ ಈ ವಾರ್ತೆ ಅವರಿಗೆ ಹೇಗೋ ಮುಟ್ಟಿತ್ತು. ಮೊದಲು ಹಾಗೆ ರಾಜಾಸ್ಥಾನದಲ್ಲಿ ವಾದ ಮಾಡು ವುದೂ ದೇಶಾಂತರಕ್ಕೆ ಪ್ರಯಾಣ ಮಾಡುವುದೂ ಅವರಿಗೆ ಸರಿಕಾಣಲಿಲ್ಲ. ಆದರೆ

ಆಪ್ತರಾದ ಹಿರಿಯರು ರಾಜ್ಯಾಭ್ಯರ್ಥವನ್ನು ನಿರಾಕರಿಸಬಾರದೆಂದು ಅವರಿಗೆ ತಿಳಿಯ ಹೇಳಿದ್ದರಿಂದ ಅವರು ಮೈಸೂರಿಗೆ ಹೊರಟುಬಂದರು. ವಿಶಿಷ್ಟಾದ್ವೈತ ಸಿದ್ಧಾಂತ ವನ್ನು ಸಮರ್ಥಿಸುವ ಜವಾಬ್ದಾರಿಯೂ ಅವರನ್ನು ಈ ಪ್ರಯಾಣಕ್ಕೆ ಪ್ರೇರಿಸಿರಬಹು ದೆಂದು ತಿಳಿಯಲವಕಾಶವಿದೆ.

ಪುಣೆಯ ಪಂಡಿತರೊಂದಿಗೆ ತರ್ಕ ವ್ಯಾಕರಣ ಪೂರ್ವ ಮೀಮಾಂಸಾ ಶಾಸ್ತ್ರ ಗಳಲ್ಲಿ ಕರೂರು ಶ್ರೀನಿವಾಸಾಚಾರ್ಯರು ವಾಗ್ವಾದ ನಡೆಸಿದರೆಂದೂ ಸುಮಾರು ೧೫ ದಿನಗಳ ಪರ್ಯಂತ ಅದು ಸಾಗಿತೆಂದೂ ಆಚಾರ್ಯರ ಸಂಬಂಧವಾದ ಚರಿತ್ರೆಯಲ್ಲಿ ಹೇಳಿದೆ. ಮಾಸನೋಡಿ ಮಧ್ವಾಚಾರ್ಯರು, ಗೂಳಿ ಬಾಳಾಚಾರ್ಯರು, ಗೂಳಿ ಕೃಷ್ಣಾಚಾರ್ಯರು ಮಧ್ಯಸ್ಥರಾಗಿ ಕಾರ್ಯನಿರ್ವಹಿಸಿದರಂತೆ. ಸ್ವತಃ ಸಂಸ್ಕೃತಜ್ಞಾನವಿದ್ದ ಅರಸರು ಈ ಚರ್ಚೆಯನ್ನು ತುಂಬ ಕುತೂಹಲದಿಂದ ಗಮನಿಸಿದರೆಂದೂ ಪ್ರತಿದಿನವೂ ವಾದ ಆಚಾರ್ಯರ ಕೋಟೆಯಲ್ಲಿಯೇ ನಿಲ್ಲುತ್ತಿದ್ದಿತೆಂದೂ ಅಲ್ಲಿಯೇ ವಿವರಿಸಲಾಗಿದೆ. ಅನಂತರದ ವೇದಾಂತ ಸಂಬಂಧವಾದ ವಾದದಲ್ಲಿ, ಬ್ರಹ್ಮಾಜ್ಞಾನಜನಿತಸಂಸಾರ ವಿಚಾರ ವಾಗಿ ಮೂರು ದಿನಗಳ ಕಾಲ ವಾದವಾಗಿ ಇಲ್ಲಿಯೂ ಆಚಾರ್ಯರು ಜಯಶೀಲರೇ ಆದರಂತೆ. ಆದರೆ ವೃದ್ಧರಾದ ಪುಣೆಯ ಪಂಡಿತರಿಗೆ ಅಸಮಾಧಾನವಾಗದಿರುವಂತೆ ವಾದ ಸಮಗ್ರೈಯಾಗಿ ನಡೆಯಿತೆಂದು ತೀರ್ಪಿತ್ತು, ಇಬ್ಬರಿಗೂ ಖಿಲ್ಲತ್ತುಗಳನ್ನು ಕೊಡಲಾಯಿತೆಂದು ಹೇಳಲಾಗಿದೆ. ಸಭಾ ಮಧ್ಯದಲ್ಲಿರಿಸಿದ್ದ ಖಿಲ್ಲತ್ತುಗಳ ಹರಿವಾಣ ದಿಂದ ಶಾಸ್ತ್ರಿಗಳೇ ಆಚಾರ್ಯರಿಗೆ ಶಾಲುಜೋಡಿ ಹೊದಿಸಿ ಕಟಕ ಮುಕ್ತಾಹಾರಗಳನ್ನು ಅವರಿಗೆ ಅರ್ಪಿಸಿದರೆಂದು ಆಚಾರ್ಯರ ಚರಿತ್ರೆಯಲ್ಲಿ ಉಕ್ತವಾಗಿದೆ. 1554)

ಮಹಾರಾಜರ ಕೋರಿಕೆಯಂತೆ, ಶ್ರೀರಂಗಾಚಾರ್ಯರ ಪ್ರಾರ್ಥನೆಯಂತೆ ಶ್ರೀನಿವಾಸಾಚಾರ್ಯರು ಮೈಸೂರಿನಲ್ಲಿಯೇ ನೆಲಸಿದರು. ಹಾಗೆ ರಾಜಾಶ್ರಯದಲ್ಲಿದ್ದರೆ, ಕಂಚಿ ಕುಂಭಕೋಣ ಪ್ರಾಂತಗಳಲ್ಲಿ ಶ್ರಮ ಪಡುತ್ತಿರುವ ಆಚಾರ್ಯಪುರುಷರ ಅಶನ ವಸನಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದು ಸಾಧ್ಯವಾಗಬಹುದೆಂಬ ಆಲೋಚನೆಯೂ ಅವರ ನಿರ್ಧಾರಕ್ಕೆ ಕಾರಣವಾಯಿತೆಂದು ಹೇಳಲಾಗಿದೆ. ಮುಮ್ಮಡಿ ಯವರು ಅವರನ್ನು ತಮ್ಮ ಆಸ್ಥಾನದಲ್ಲಿ ಸಮ್ಮುಖದ ಪ್ರಥಮ ಮಹಾ ವಿದ್ವಾಂಸ ರನ್ನಾಗಿ ಮಾಡಿಕೊಂಡು ಅವರಿಗೆ ಪ್ರತಿ ತಿಂಗಳೂ ೬೦ ವರಹ ವಿದ್ವತ್ಸಂಭಾವನೆಯನ್ನು ಗೊತ್ತು ಮಾಡಿದರು. ಆಚಾರ್ಯರೂ ದೊರೆಗಳಲ್ಲಿ ಅರಿಕೆ ಮಾಡಿ ಶ್ರೀರಂಗದಿಂದ ತಮ್ಮ ಬಂಧುಗಳನ್ನೆಲ್ಲ ಮೈಸೂರಿಗೇ ಕರೆಸಿಕೊಂಡರು.

ಮುಮ್ಮಡಿಯವರು ಕಾಲದಿಂದ ಕಾಲಕ್ಕೆ ಶ್ರೀನಿವಾಸಾಚಾರ್ಯರ ಅಪೇಕ್ಷೆಯಂತೆ ಹಾಗೂ ಸ್ವಸಂತೋಷದಿಂದ ಅವರಿಗೂ ಅವರನ್ನು ಆಶ್ರಯಿಸಿದ ಬಾಂಧವರಿಗೂ ಆಪ್ತೇಷ್ಟರಿಗೂ ದಾನದತ್ತಿಗಳನ್ನು ಹಾಕಿಸಿಕೊಟ್ಟರು. ಈ ಸಂಬಂಧದಲ್ಲಿ ದೊರೆಗಳು ದಯೆ ಪಾಲಿಸಿದ ದಾನಶಾಸನಗಳು ಹಲವಾರು ಇವೆ. ಇವುಗಳ ಒಕ್ಕಣೆಯನ್ನು ಗಮನಿಸಿದರೆ, ಕೃಷ್ಣರಾಜ ಒಡೆಯರ ದಾನೋದಾರತೆಗಳು, ವಿನಯ ವಿಶ್ವಾಸಗಳು, ಬ್ರಾಹ್ಮಣರ ಮೇಲಿನ ಗೌರವ, ವಿದ್ವತ್ಪ್ರೀತಿ ತಮ್ಮಿಂದ ತಾವೇ ವ್ಯಕ್ತವಾಗುತ್ತವೆ.

ಕರೂರು ಶ್ರೀನಿವಾಸಾಚಾರ್ಯರಿಗೆ ಬರೆಸಿದ ನಿರೂಪಗಳ ಆಧಾರದಿಂದ ನೋಡಿದರೆ, ಅವರಿಗೆ ಬೆಳಗೊಳ, ಸೋಮನಾಥಪುರ, ಕೃಷ್ಣರಾಜೇಂದ್ರಪುರ ಮುಂತಾದೆಡೆ ಸರ್ವಮಾನ್ಯ ಜೋಡಿ ಭಟ್ಟಮಾನ್ಯಗಳೂ, ಮೈಸೂರು, ಮೇಲುಕೋಟೆ ಮತ್ತು ಸೋಸಲೆ ಈ ಸ್ಥಳಗಳಲ್ಲಿ ವಾಸದ ಮನೆಗಳೂ, ಮಹಾರಾಜರಿಂದ ಸಂದಿದ್ದ ವಿಷಯ ಸ್ಪಷ್ಟವಾಗುವುದು ಸರ್ಕಾರಕ್ಕೆ ದಾಖಲೆಮಾಡಿಕೊಂಡಿದ್ದ ಸೋಸಲೆ ಕೋಟೆಯ ವ್ಯಾಸರಾಯರ ಮನೆಯನ್ನೇ ಆಚಾರ್ಯರ ಸ್ವಾಧೀನಕ್ಕೆ ಕೊಡಲಾಯಿತೆಂದು ೯-೧೦-೧೮೧೮ರ ನಿರೂಪದಿಂದ ವಿದಿತವಾಗುತ್ತದೆ. ತಮಗೆ ದೊರೆತ ದಾನದತ್ತಿಗಳಲ್ಲಿ ಕೆಲವಂಶಗಳನ್ನು ಆಚಾರ್ಯರು ತಮ್ಮ ಇಷ್ಟಮಿತ್ರರಿಗೆ, ತೊಂದರೆಯಲ್ಲಿರುವವರಿಗೆ ನೀಡಿದ ಸಂದರ್ಭಗಳೂ ಕಾಣುತ್ತವೆ.

ಆಚಾರ್ಯರು ಮುಮ್ಮಡಿಯವರ ಆಸ್ಥಾನದ ಪ್ರಭಾವಶಾಲಿ ವಿದ್ವಾಂಸರಲ್ಲಿ ಗಣ್ಯರು. ಅವರು ತ್ರ್ಯಂಬಕಶಾಸ್ತ್ರಿಗಳೊಂದಿಗೆ ನಡೆಸಿದ ವಾದ ಸಂಬಂಧವಾದವೂ ಸೇರಿದಂತೆ ಶ್ರೀವೈಷ್ಣವ ಮತಪರವಾದ ಹಲವು ಗ್ರಂಥಗಳನ್ನು ರಚಿಸಿದರು. ಇವುಗಳಲ್ಲಿ 'ನಲೋಪ ಸೂತ್ರವಾದಃ', 'ಬ್ರಹ್ಮಾಜ್ಞಾನ ನಿರಾಸವಾದಃ', 'ಹರಿಗುಣ ಮೌಕ್ತಿಕಮಾಲಾ', 'ಕಠವಲ್ಲೀ ವಿವರಣಮ್', 'ಣತ್ವ ತತ್ವ ಪರಿತ್ರಾಣಮ್', 'ಶ್ರೀ ವರದರಾಜ ಪಂಚಾಶದ್ವ್ಯಾಖ್ಯಾ', 'ಸಹಸ್ರ ಕಿರಣಃ', 'ನಾಯಕಮಣಿಃ' ಎಂಬ ಸ್ವತಂತ್ರ ಹಾಗೂ ವ್ಯಾಖ್ಯಾನ ಗ್ರಂಥಗಳು ಪ್ರಸಿದ್ಧವಾಗಿವೆ, ಹಾಗೂ ಲಭ್ಯವಾಗಿವೆಯೆಂದು ಹೇಳಲಾಗಿದೆ.

ವ್ಯಾಕರಣ ವಿಚಾರವಾದ 'ನಲೋಪಸೂತ್ರವಾದ'ದ ಆರಂಭದಲ್ಲಿ-

> ಶ್ರೀಮತ್ಕೃಷ್ಣಮಹೀಂದ್ರಸ್ಯ ಸಭಾಯಾಂ ವ್ಯಾಕೃತಾ ಕೃತಾ ।
> ತಮಿಮಂ ಶ್ರೀನಿವಾಸಾರ್ಯೋ ವಾದಂ ವಿಲಿಖತಿ ಸ್ವಯಮ್ ॥

ಎಂಬುದಾಗಿಯೂ 'ಬ್ರಹ್ಮಾಜ್ಞಾನನಿರಾಸವಾದ'ದ ಆರಂಭದಲ್ಲಿ

> ಶ್ರೀಮತ್ಕೃಷ್ಣ ಮಹೀ ಮಹೇಂದ್ರಸದಸಿ ಶ್ರೀ ದೇಶಿಕಾನುಗ್ರಹಾತ್
> ಭಟ್ಟ ತ್ರ್ಯಂಬಕ ಪಂಡಿತೇನ ಮಹತಾವಾದೇ ಸಮುಜ್ಜೃಂಭಿತೇ
> ಬ್ರಹ್ಮಾಜ್ಞಾನ ಮತವ್ಯುದಾಸನಿಪುಣಾಃ ಸ್ವಪ್ರೋಕ್ತತರ್ಕಭಟಾಃ
> ಸಂಗೃಹ್ಣಾತಿ ಮುದೇ ಸಮಸ್ತ ವಿದುಷಾಂ ಶ್ರೀ ಶ್ರೀನಿವಾಸಸ್ಸುಧೀಃ ॥

ಎಂಬುದಾಗಿಯೂ ಇರುವುದು ಗಮನಿಸತಕ್ಕುವು. ಅವು ಹುಟ್ಟಿದ ಸಂದರ್ಭಗಳನ್ನು ಅವು ಸೂಚಿಸುತ್ತವೆ.

ಶ್ರೀನಿವಾಸಾಚಾರ್ಯರು ದೊರೆಗಳ ಉದಾರ ಸಹಾಯದಿಂದ ಮೇಲುಕೋಟೆಯಲ್ಲಿ ಅಗ್ನಿಷ್ಟೋಮ (೧೯.೪.೧೮೧೪), ವಾಜಪೇಯ (೨೦.೮.೧೮೧೫) ಯಜ್ಞಗಳನ್ನು ನಡೆಸಿದರು. ದ್ವಾದಶ ಸಹಸ್ರ ಜನರ ಸಂತರ್ಪಣೆ ನಡೆಸಿದರು. ಮಹಾರಾಜರಿಂದ ೨೨೧೬೧ ಗಜ ಭೂಮಿಯನ್ನು ಸರ್ವಮಾನ್ಯವಾಗಿ ಪಡೆದುಕೊಂಡು (೧೬-೨-೧೮೧೫) ಶ್ರೀರಂಗರಾಜಪುರವೆಂಬ ಬ್ರಾಹ್ಮಣ ಅಗ್ರಹಾರವನ್ನು ಕಟ್ಟಿಸಿದರು. ಅಗ್ರಹಾರವಾಸಿಗಳ ಜೀವನೋಪಾಯಕ್ಕೆ ಸೋಮನಾಥಪುರ, ಬನ್ನೂರು, ಬೆನಕನಹಳ್ಳಿ ಗ್ರಾಮಗಳಲ್ಲಿ ವೃತ್ತಿಗಳನ್ನು ಹಾಕಿಸಿಕೊಟ್ಟರು. ಅಲ್ಲಿಯೇ ವೇಣುಗೋಪಾಲಸ್ವಾಮಿ

ಗುಡಿ ಕಟ್ಟಿಸಿದರು. ತಮಗೆ ದತ್ತವಾದ ಭೂಮಿಯಲ್ಲಿ ಕಂಚಿ ಕುಂಭಕೋಣ ಪ್ರಾಂತ್ಯದಲ್ಲಿ ತೊಂದರೆಯಲ್ಲಿರುವ ೨೨ ಮಂದಿ ಬ್ರಾಹ್ಮಣರಿಗೆ ಇರುವಲ್ಲಿಯೇ ಸೌಕರ್ಯವಾಗುವಂತೆ ವೃತ್ತಿಗಳ ವ್ಯವಸ್ಥೆ ಮಾಡಿಸಿದರು (೨೧-೪-೧೮೧೭). ಉಕ್ಕಲಗೆರೆ ಮತ್ತು ಉಪಗ್ರಾಮಗಳಲ್ಲಿ ನೀರಿನ ಸೌಕರ್ಯಕ್ಕೆ ಕೆರೆ ಕಟ್ಟಿಸಿದರು. ಮೇಲುಕೋಟೆಯಲ್ಲಿ ತಮ್ಮ ತಂದೆ ಅಣ್ಣಂದಿರುಗಳಿಂದ ಅಗ್ನಿಹೋತ್ರಾದಿ ಇಷ್ಟಿ, ದ್ವಾದಶ ಸಹಸ್ರ ಬ್ರಾಹ್ಮಣ ಸಂತರ್ಪಣೆ ಮಾಡಿಸಿದರು. ಶ್ರೀರಂಗದ ದೇವಸ್ಥಾನದಲ್ಲಿ ಅಮ್ಮನವರ ಗುಡಿಯ ಮುಂಭಾಗದ ಮಂಟಪದಲ್ಲಿ ತಮ್ಮ ದೊಡ್ಡ ಮಗನ ನೇತೃತ್ವದಲ್ಲಿ ಪ್ರತಿದಿನವೂ ಬ್ರಾಹ್ಮಣ ಸಮಾರಾಧನೆಯ ಏರ್ಪಾಡು ಮಾಡಿಸಿದರು. ಇದಾದರೂ ಮಹಾರಾಜರ ಔದಾರ್ಯದಿಂದಲೇ ಆದುದು. ಆ ಮಂಟಪವನ್ನು ಮೈಸೂರಕರ್ತರ ಮಂಟಪ ಎನ್ನುವರಂತೆ. ಕೆಲಕಾಲದ ಮೇಲೆ ತಮ್ಮ ಮುಂದೆ ಸಂನ್ಯಾಸವನ್ನು ಸ್ವೀಕರಿಸಿ ಶ್ರೀರಂಗದಲ್ಲಿಯೇ ಇರತೊಡಗಿದ ಮೇಲೆ ಅವರನ್ನು ಒಮ್ಮೆ ಸಾಷ್ಟಾಂಗ ಪ್ರಣಾಮ ಪೂರ್ವಕ ದರ್ಶಿಸಿ ಬರಲು ಅವಕಾಶವನ್ನು ಕಲ್ಪಿಸಿಕೊಂಡು ತಿರುವೀದಿಯಲ್ಲಿ ಅವರು ಬರುವುದನ್ನು ನೋಡಿ ಸೇವಿಸಿ ಹರ್ಷಪಟ್ಟರು. ಆದರೆ ಇನ್ನೊಮ್ಮೆ ಶ್ರೀರಂಗಕ್ಕೆ ಪ್ರಯಾಣ ಮಾಡುವಾಗ ಮಾರ್ಗ ಮಧ್ಯದಲ್ಲಿಯೇ ಏನಾದಿ ಎಂಬ ಅಗ್ರಹಾರದ ಸಮೀಪದಲ್ಲಿ, ಕಾವೇರೀ ತೀರದ ಸ್ನಾನಘಟ್ಟದ ಮಂಟಪದಲ್ಲಿ ತಮ್ಮ ಇಹಲೋಕ ವ್ಯಾಪಾರವನ್ನು ಮುಗಿಸಿದರು. ಆಗ್ಗೆ ಅವರಿಗೆ ೪೫-೪೬ ವರ್ಷ ವಯಸ್ಸು.

ಶ್ರೀನಿವಾಸಾಚಾರ್ಯರ ಆಚಾರನಿಷ್ಠೆ ಉದಾರತೆಗಳನ್ನು ತಿಳಿಸುವ ಎರಡು ಸಂದರ್ಭಗಳನ್ನು ಗುರುತಿಸಲಾಗಿದೆ: ಆಚಾರ್ಯರ ತಾಯಿ ತೀರಿಕೊಂಡಾಗ, ದ್ವಾದಶಾಹ ಕೈಂಕರ್ಯದಲ್ಲಿ ನಿಮಂತ್ರಿತರಾದ ಒಬ್ಬ ಸ್ವಾಮಿಗಳಿಗೆ ಅವರ ಇಂಗಿತವನ್ನು ತಿಳಿದು ಸೋಸಲೆಯಲ್ಲಿ ೬ ಎಕರೆ ವಿಶಾಲವಾದ ಗದ್ದೆಯನ್ನು ದಕ್ಷಿಣೆಯಾಗಿ ನೀಡಿ ದಾನ ಶಾಸನ ಹಾಕಿಸಿದ್ದು ಒಂದು; ತಾಯಿಯವರ ಪ್ರತ್ಯಾಬ್ದಿಕ ಕೈಂಕರ್ಯದಲ್ಲಿ ನಿಮಂತ್ರಿತರ ಅಪೇಕ್ಷೆಯನ್ನು ತಿಳಿದು, ಅಕಾಲವಾಗಿದ್ದರೂ, ಅರಮನೆಯಲ್ಲಿ ಜೇನುತುಪ್ಪದಲ್ಲಿ ಹಾಕಿರಿಸಿದ್ದ ರಾಜಾರ್ಹವಾದ ಮಾವಿನಹಣ್ಣನ್ನು ತರಿಸಿ ತೃಪ್ತಿಪಡಿಸಿದ್ದು ಇನ್ನೊಂದು.

ಆಚಾರ್ಯರು ಮತ್ತು ಮುಮ್ಮಡಿ ಕೃಷ್ಣರಾಜರ ನಡುವಣ ಮಧುರಬಾಂಧವ್ಯವನ್ನು ತಿಳಿಸುವ ನಿರೂಪಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಬಹುದಾಗಿದೆ:

೧) ವೈರಮುಡಿ ಉತ್ಸವಕ್ಕೆ ಹೋಗಿಬರಲು ಏರ್ಪಾಡು: "ವೇದಮೂರ್ತಿ ಶ್ರೀನಿವಾಸಾಚಾರ್ಯರು ಹೆಂಗಸರು ಮಕ್ಕಳು ಸಹ ವೈರಮುಡಿ ಉತ್ಸವಕ್ಕೆ ದೇವರದರ್ಶನಕ್ಕೆ ಬರುತ್ತಾರೆ. ಇವರಿಗೆ ಅನುಕೂಲವಾದ ಮನೆ ಬಿಡಿಸಿ ೩೦ ಜನಕ್ಕೆ ತಕ್ಕ ಲವಾಜಮಾ ಮತ್ತು ಆಳುಗಳಿಗೆ ಅಕ್ಕಿ ಮತ್ತು ಕುದುರೆಗಳಿಗೆ ಹುಲ್ಲು ಹುರಳಿ ಸಹ ಕ್ರಯವಿಲ್ಲದೆ ಸೌದೆ ಕುಂಬಾರ ನಗಗಳನ್ನೂ ಕೊಟ್ಟು, ರಾತ್ರಿ ಕಳ್ಳಕಾಕರ ತೊಂದರೆಯಿಲ್ಲದೆ ಖಬರ್ದಾರಿಯಿಂದ ಇದ್ದು ರಹದಾರಿ ಕೊಟ್ಟು ವಾಪ್ಸು ಕಳುಹಿಸುವದು. ದೇವಸ್ಥಾನದಲ್ಲಿ ಆಚಾರ್ಯ ಪುರುಷಕಟ್ಟಲೆ ಮೇರೆಗೆ ಮರ್ಯಾದೆ ಸಹ ಕ್ರಮವಾಗಿ ನಡೆಸುವದು".

ಇದು ದೇವಸ್ಥಾನದ ಅಮೀಲರಿಗೆ ೯.೩.೧೮೨೩ರಲ್ಲಿ ಕಳಿಸಿದ ನಿರೂಪ.

೨) ಆಚಾರ್ಯರು ವೈರಮುಡಿ ಸೇವೆ ಮಾಡಿಕೊಂಡು ಬರುವುದರೊಳಗೆ ಮೈಸೂರಿನಲ್ಲಿ ಇವರು ಇಳಿದುಕೊಳ್ಳಲು ಮನೆ ಮಾಡಿಕೊಡುವುದು ಕಾರಣಾಂತರಗಳಿಂದ ತಪ್ಪಿಹೋಯಿತು. ಆಗ ಅರಸರು ನಂಜನಗೂಡಿನಿಂದ ಆಚಾರ್ಯರ ಶಿಷ್ಯರಾದ ತಿರುಮಲೈ ಶ್ರೀರಂಗಾಚಾರ್ಯರಿಗೆ ನಂಜನಗೂಡಿನಿಂದ ೨೪ ೩.೧೮೧೩ ರಲ್ಲಿ ಕಳಿಸಿದ ನಿರೂಪವಿದು.

"ಮನೆ ತಪ್ಪಿಹೋದ ಪ್ರಯುಕ್ತ ಶ್ರೀ ಶ್ರೀನಿವಾಸಾಚಾರ್ಯರಿಗೆ ವ್ಯಾಕುಲವಾದೀತು. ಅದು ನನ್ನಿಂದ ಆದುದಲ್ಲ. ನಾಳೆ ದೊಡ್ಡ ಮನೆ ಬಿಡಿಸಿಕೊಡುವಂತೆ ನಿರೂಪ ತೆಗೆದುಕೊಂಡು ಗುಂಡಯ್ಯ ಬರುತ್ತಾನೆ. ಆಗ ನಿಮ್ಮ ಇಬ್ಬರಿಗೂ ಗೊತ್ತಾಗುತ್ತೆ. ಆದುದರಿಂದ ಅವರ ಮನಸ್ಸಿಗೆ ಬೇಸರವಾಗದ ರೀತಿ ಹ್ಯಾಗೆ ಹೇಳಬೇಕೋ ಹಾಗೆ ತಿಳಿಸಿ ಮನಸ್ಸಂತೋಷಪಡಿಸಿ ಆ ವಿದ್ಯಮಾನಕ್ಕೆ ಬರೆದು ಕಳುಹಿಸುವದು."

೩) ಆಚಾರ್ಯರು ತಮಗೆ, ತಮ್ಮ ಕುಟುಂಬದವರಿಗೆ ದೇಹಸ್ಥಿತಿ ಉತ್ತಮವಾಗಿಲ್ಲವೆಂದು ಬರೆಸಿ ತಿಳಿಸಿದ್ದಕ್ಕೆ ಪ್ರತ್ಯುತ್ತರವಾಗಿ ಪ್ರಭುಗಳು ಕಳಿಸಿದ ನಿರೂಪ:

"ತಮಗೆ ಮಾಡಿಸಿರುವಂಥಾ ಅನ್ನಸ್ಥಿತಿಯಲ್ಲಿ ಬಹಳ ಜನ ಬ್ರಾಹ್ಮಣರಿಗೆ ನಿಯಾಮಕ ಮಾಡಿ ಅನ್ನಸ್ಥಿತಿ ಮಾಡಿಕೊಟ್ಟು ಸಂರಕ್ಷಣೆ ಮಾಡುತ್ತಿದ್ದೀರಾದ್ದರಿಂದಲೂ ಇದರ ಮೇಲೆ ಬಹಳ ಸಾತ್ವಿಕ ಪ್ರವೃತ್ತಿಯೂ ಆರ್ತಹೃದಯರೂ ಆದುದರಿಂದ ನಮಗೆ ಒಂದು ಗ್ರಹಚಾರವೂ ತಟ್ಟತಕ್ಕದ್ದಲ್ಲ. ಸರ್ವವೂ ಶುಭಪ್ರದವೇ ದೇವರು ಮಾಡಿಸಿ ಕ್ಷಿಪ್ರಾರೋಗ್ಯವಾಗುವುದರಲ್ಲಿ ಅಂತರವೇನಿದೆ. ಅದೇ ಪ್ರಕಾರ ಸ್ಥಿರವಾರದಲ್ಲಿ ಜಯತಿಥಿಯಲ್ಲೇ ದೇಹಾರೋಗ್ಯ ನೋಡಿಕೊಂಡು ಬರುವಂತೆ ಮಾಡುವದು."

(೪) ಇನ್ನೊಮ್ಮೆ ೧೫-೫-೧೮೨೬ ರಲ್ಲಿ ದೊರೆಗಳು ಆಚಾರ್ಯರು ದೇಹಾರೋಗ್ಯವನ್ನು ವಿಚಾರಿಸಿ ಕಳಿಸಿದ ನಿರೂಪ:

"ಈಗ ದೇಹಸ್ಥಿತಿ ಹೇಗೆ ಇರುವದೆಂದೂ ಯಾವ ಪಂಡಿತರು ಔಷಧವನ್ನು ಕೊಡುತ್ತಿರುವರೆಂದೂ ಈ ವಿಚಾರಗಳಿಗೆಲ್ಲ ಬರೆಸಿ ಕಳುಹಿಸುವುದೆಂದೂ, ನಿಮ್ಮ ಶರೀರ ಸ್ಥಿತಿ ಪರಾಂಬರಿಸಲು ಖಾಸ್ ಸವಾರಿಯೇ ಚಿತ್ತೈಸಬೇಕೆಂಬದಾಗಿತ್ತು. ಇಷ್ಟರಲ್ಲೇ ಮಾತೃಶ್ರೀ ನಂಜಮ್ಮ ಹೆತ್ತಮ್ಮನವರ ಪ್ರಯುಕ್ತ ದಶರಾತ್ರಾಶೌಚಪ್ರಾಪ್ತಿಯಾದುದರಿಂದ ಆಶೌಚ ನಿವೃತ್ತಿಮಾಡಿಕೊಂಡು ಒಂದಾವೃತ್ತಿ ಅಲ್ಲಿಗೆ ಸವಾರಿ ಚಿತ್ತೈಸಿ ಪರಾಂಬರಿಕೆ ತೆಗೆದುಕೊಳ್ಳಲಾದೀತು. ಈ ಬಗ್ಗೆ ಇಷ್ಟರಲ್ಲಿ ಒಂದಾವೃತ್ತಿ ಇಲ್ಲಿಗೆ ನೀವು ಬಂದು ಹುಜೂರಲ್ಲಿ ಭೇಟಿ ತೆಗೆದುಕೊಳ್ಳಬೇಕೆಂಬದಾಗಿ ನೀವು ಬರ ಕೆಲಸವಿಲ್ಲ. ಸದ್ಯದಲ್ಲಿ ಪಂಡಿತರು ಹೇಳಿದ ಮೇರೆ ಇದ್ದು ಆರೋಗ್ಯವನ್ನು ಉಂಟು ಮಾಡಿಕೊಳ್ಳುವದು. ಇದರ ಮೇಲೆ ತಾವು ದೊಡ್ಡವರಾಗಿ ಯೋಗ್ಯರಾದುದರಿಂದ ನಿಮ್ಮಂಥವರಿಗೆ ಏನು ಉಪದ್ರವ ಬಂದಾಗ್ಯೂ ಶೀಘ್ರದಲ್ಲಿ ಪರಿಹಾರವಾಗಿ ಆರೋಗ್ಯವಾಗುತ್ತದೆಯೇ ಹೊರ್ತು ಮತ್ತೇನೂ ಮಾಡಲಾರದು."

[ಕರೂರು ಶ್ರೀನಿವಾಸಾಚಾರ್ಯರ ಜೀವನ ಕಾರ್ಯಗಳ ಬಗೆಗೆ ಹೆಚ್ಚು ತಿಳಿಯ

ಬಯಸುವವರು ಈ ಪುಸ್ತಕವನ್ನು ನೋಡಬಹುದು. ತಿರುಮಲ್ಕೆ ರಂಗಾಚಾರ್ಯ, 'ಕರೂರು ಶ್ರೀ ಶ್ರೀನಿವಾಸಾಚಾರ್ಯ ಚರಿತವು', ಮೈಸೂರು ೧೯೪೪.]

೩

ಕಾಶಿ ಶೇಷಶಾಸ್ತ್ರಿಗಳು (೧೭೯೬--೧೮೬೦)

ಪೇಶ್ವೆ ಇಮ್ಮಡಿ ಬಾಜಿರಾಯನ ಆಶ್ರಯದಲ್ಲಿದ್ದು, ಅನಂತರದಲ್ಲಿ ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯವನ್ನು ಸೇರಿದ ಪ್ರಸಿದ್ಧ ವ್ಯಾಕರಣ ಪಂಡಿತರು. ತಮ್ಮ ಪೂರ್ವಿಕರ ಸ್ಥಳವಾದ ಉತ್ತರ ಆರ್ಕಾಟು ಜಿಲ್ಲೆಯ ಮಂಡಕೊಳ ತೂರಿನಲ್ಲಿ ೧೭೯೦ರ ಆದಿಭಾಗದಲ್ಲಿ ಹುಟ್ಟಿದರು. ಸುಬ್ರಹ್ಮಣ್ಯಶಾಸ್ತ್ರಿ ಮತ್ತು ಕಲ್ಯಾಣಿ ಎಂಬ ದಂಪತಿಗಳಿಗೆ ಎರಡನೆಯ ಮಗ; ಅಣ್ಣ ಯಜ್ಞೇಶ್ವರ ಶಾಸ್ತ್ರಿ, ತಮ್ಮ ಶಂಕರಶಾಸ್ತ್ರಿ ಹಾಗೂ ತಂಗಿ ಪಾರ್ವತಿ. ಇವರಿಗೆ ಸಂಪ್ರದಾಯದಂತೆ ಸಂಸ್ಕೃತ ಮತ್ತು ತಮಿಳು ವ್ಯಾಸಂಗ ಮನೆಯಲ್ಲೇ ಜರುಗಿತು. ಮೊದಲಿನಲ್ಲಿಯೇ ಅವರ ಕೋಶ, ಶಬ್ದರತ್ನಾವಲಿ ಮತ್ತು ಧಾತುರೂಪ ಮುಕ್ತಾವಲಿಗಳ ಪಾಠವಾಯಿತು; ರಘುವಂಶ ಕುಮಾರಸಂಭವಗಳ ಹಾಗೂ ಭರ್ತೃಹರಿ ನೀತಿಶತಕದ ಅಭ್ಯಾಸವೂ ಆಯಿತು. ಏಳನೆಯ ವಯಸ್ಸಿಗೆ ಉಪನಯನವಾಯಿತು. ಅಲ್ಲಿದ್ದ ಕೆಲವು ವರ್ಷ ಗಳಲ್ಲಿಯೇ ವ್ಯಾಕರಣ, ಮೀಮಾಂಸೆ ಮತ್ತು ತರ್ಕಗಳಲ್ಲಿ ಶಿಕ್ಷಣ ದೊರೆಯಿತು. ತಂದೆಯ ಅಧ್ಯಾತ್ಮ ಪ್ರವೃತ್ತಿ ಕಾರಣವಾಗಿ, ಅಣ್ಣನೂ ಅದೇ ದಾರಿ ಹಿಡಿಯಲಾಗಿ, ಸಂಸಾರ ನಿರ್ವಹಣೆಯ ಜವಾಬ್ದಾರಿ ಚಿಕ್ಕಂದಿನಲ್ಲಿಯೇ ಶೇಷಶಾಸ್ತ್ರಿಗಳ ಹೆಗಲೇರಿತು. ಆಗ್ಗೆ ಈ ಸಂಸಾರ ತಂದೆಯ ಅತ್ಯುತ್ಕಟವಾದ ಅಪೇಕ್ಷೆ ಕಾರಣವಾಗಿ,ತಮಿಳುನಾಡನ್ನು ಬಿಟ್ಟು ಹೊರಟು ನೆಲಸಿದ್ದುದು, ಪುಣ್ಯಕ್ಷೇತ್ರವಾದ ಕಾಶಿಯಲ್ಲಿ.

ಹೀಗಿರುವಾಗ, ಪುಣೆಯ ಪೇಶ್ವೆಗಳ ಕೊನೆಯರಸು ಇಮ್ಮಡಿ ಬಾಜಿರಾಯನು ಭಾರತದ ನಾನಾ ಭಾಗಗಳಿಂದ ಸಂಸ್ಕೃತ ವಿದ್ವಾಂಸರ ಸಮಾವೇಶವೊಂದನ್ನು ನಾಸಿಕ ದಲ್ಲಿ ಸೇರಿಸಲು ಉದ್ದೇಶಿಸಿ ಸಂಬಂಧಪಟ್ಟವರಿಗೆಲ್ಲ ಆಹ್ವಾನವನ್ನು ಕಳಿಸಿದ್ದನು. ತಂದೆಯ ಅನುಮತಿ ಪಡೆದು ತರುಣ ಶೇಷಶಾಸ್ತ್ರಿಗಳೂ ಕಾಶಿಯ ಇತರ ಪಂಡಿತ ರೊಂದಿಗೆ, ಅಂದಿನ ಮಹಾರಾಷ್ಟ್ರ ಸೀಮೆಗೆ ಆ ಸಮಾವೇಶದಲ್ಲಿ ಭಾಗವಹಿಸಲೆಂದು ಬಂದರು. ಆ ಮಹಾಸಭೆಯಲ್ಲಿ ಅವರು ಪ್ರಕಟಿಸಿದ ಪ್ರತಿಭೆ ಬಾಜಿರಾಯನನ್ನು ಆಕರ್ಷಿಸಿತು: ಜೊತೆಗೆ ಆತನ ಖಾಸಗಿ ಮತ್ತು ಸಾರ್ವಜನಿಕ ಜೀವನದಲ್ಲಿ ತಕ್ಕ ಸಲಹೆ ಸಮಾಧಾನಗಳನ್ನು ಸೂಚಿಸಲು ಅವರು ಸಮರ್ಥರಾಗಿದ್ದುದು ಸಹ, ಅವರನ್ನು ಪುಣೆಯಲ್ಲಿಯೇ ಉಳಿಸಿಕೊಳ್ಳಬೇಕೆಂಬ ಆತನ ಅಪೇಕ್ಷೆಗೆ ದಾರಿಮಾಡಿತು. ಸ್ವಕೀಯ ಜೀವನ ನಿರ್ವಹಣೆಗೂ ಕಾಶಿಯಲ್ಲಿದ್ದ ಸಂಸಾರದ ನಿರ್ವಹಣೆಗೂ ಒದಗುವಂತೆ ವಾರ್ಷಿಕ ನಾಲ್ಕು ಸಾವಿರ ರೂಪಾಯಿಗಳ ಗೌರವಧನದ ವ್ಯವಸ್ಥೆಯನ್ನು ಪೇಶ್ವೆ ಮಾಡಿ ಕೊಡ ಲಾಗಿ, ಶೇಷಶಾಸ್ತ್ರಿಗಳು ಪುಣೆಯಲ್ಲೇ ನೆಲೆನಿಂತರು.

ಸ್ವಲ್ಪ ಕಾಲ ಹೀಗೆ ಸಾಗಿತು. ಇಷ್ಟರಲ್ಲಿ ಮರಾಠರಿಗೂ ಈಸ್ಟ್ ಇಂಡಿಯಾ ಕಂಪನಿಗೂ ನಡೆದ ಘರ್ಷಣೆಯಲ್ಲಿ ಮುಂದೆ ಹೇಗೋ ಏನೋ ಎಂದು ಪೇಶ್ವೆ ಬಾಜಿ ರಾಯನು ಶೇಷಶಾಸ್ತ್ರಿಗಳನ್ನೂ ಇತರ ಕೆಲವರು ಪಂಡಿತರನ್ನೂ ಪುಣೆಯಿಂದ ಸೊಲ್ಲಾಪುರಕ್ಕೆ ಕಳಿಸಿದ್ದು, ತನ್ನದೇ ಆದ ಅಲ್ಲಿಯ ಬಿಡದಿ ಮನೆಯಲ್ಲಿ ಅವರಿಗೆ ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಟ್ಟಿದ್ದನು. ಆತನ ಅಳುಕು ನಿಜವಾಗಿ, ೧೮೧೮ರ ಜೂನ್ ವೇಳೆಗೆ ಅವನು ಇಂಗ್ಲಿಷರಿಗೆ ಶರಣಾಗತನಾಗಬೇಕಾಯಿತು. ಸೊಲ್ಲಾಪುರದ ಸಮೀಪದ ಅಷ್ಟಿಯ ಕದನದಲ್ಲಿ ಮರಾಠರು ಸೋತು, ಅಲ್ಲಿ ಕಂಪೆನಿಯ ಪರವಾಗಿ ಹೋರಾಡಿದ್ದ ಮೈಸೂರು ಸೇನೆಯ ತುಕಡಿ ಸೊಲ್ಲಾಪುರದಲ್ಲಿ ಬಿಡಾರವಾಗಿದ್ದ ಪೇಶ್ವೆಯ ಕಡೆಯವರನ್ನೂ ಅವರ ಆಸ್ತಿಪಾಸ್ತಿಗಳನ್ನೂ ತನ್ನ ವಶಕ್ಕೆ ತೆಗೆದುಕೊಂಡು ಬಂದಿತು. ಹೀಗೆ ಸೆರೆಯಲ್ಲಿ ಸಿಕ್ಕಿ ಮೈಸೂರಿಗೆ ಬಂದವರು ಶೇಷಶಾಸ್ತ್ರಿಗಳು, ಆಗ್ಗೆ ಅವರಿಗೆ ೨೧ ವರ್ಷ ವಯಸ್ಸು. ಅವರನ್ನು ಮುಮ್ಮಡಿಯವರ ಸೋದರಮಾವ ಚಾಮಪ್ಪಾಜಿ ಅರಸರ ತುಳಸೀ ತೋಟದ ಮನೆಯಲ್ಲಿ ಬಂಧನದಲ್ಲಿರಿಸಲಾಯಿತು.

ಶೇಷಶಾಸ್ತ್ರಿಗಳು ಅಲ್ಲಿ ತಮ್ಮ ದೈನಂದಿನ ಕಾರ್ಯಕ್ರಮಗಳನ್ನು ಎಂದಿನಂತೆಯೇ ನಡಸತೊಡಗಿದರು; ಓದು ಬರಹಗಳು ತಡೆಯಿಲ್ಲದೆ ಸಾಗಿದವು. ಅವರ ಅಮೂಲ್ಯವಾದ ಮೊದಲ ನಾಲ್ಕು ರಚನೆಗಳು ಸಿದ್ಧವಾದುದು ಇಲ್ಲಿಯೇ : ಪರಿಭಾಷೆಂದು ಶೇಖರದ ವ್ಯಾಖ್ಯೆ–'ಸರ್ವಮಂಗಳಾ', 'ಪ್ರಭಾ', 'ವಾದರತ್ನಾವಳಿ' ಮತ್ತು 'ಲಘು ಶಬ್ದ ರತ್ನ ಪಂಚಸಂಧಿ ವ್ಯಾಖ್ಯೆ.' ಇವುಗಳ ಸಲುವಾಗಿ ಸು. ನಾಲ್ಕೈದು ವರ್ಷಗಳಾದರೂ ಹಿಡಿದಂತೆ ತೋರುತ್ತದೆ. ಹೀಗಿರಬೇಕಾದರೆ, ದೈವಕೃಪೆಯಿಂದ 'ಸರ್ವಮಂಗಳಾ' ಪರಿಷ್ಕೃತವಾಗಿ ಪ್ರಕಟಗೊಳ್ಳುವ ಹೊತ್ತಿಗೆ ಸರಿಯಾಗಿ, ಅದೇ ದಿನ, ಮುಮ್ಮಡಿಯವರು ಭಾರತೀಯ ತತ್ತ್ವಶಾಸ್ತ್ರದ ಕೆಲವು ಸಮಸ್ಯೆಗಳ ವಿಚಾರ ವಿಮರ್ಶೆಗಾಗಿ ಶೇಷಶಾಸ್ತ್ರಿಗಳನ್ನು ಬರಮಾಡಿಕೊಳ್ಳುವ ಸಂದರ್ಭ ಬಂದಿತು. ಮಹಾರಾಜರಿಗೆ ಹತ್ತಿರವಾಗಿದ್ದವರು, ಪ್ರಧಾನಿ ರಾಮರಾಯ ಮೊದಲಾದವರು, ಬ್ರಿಟಿಷರ ವಿರುದ್ಧವಾದ ಬಾಜಿರಾಯನ ಚಟುವಟಿಕೆಗಳ ಸಂಬಂಧ ಅದು ರಾಜಕೀಯ, ಸಾಮಾಜಿಕ ಆಥವಾ ಯಾವುದೇ ಇರಲಿ–ಶಾಸ್ತ್ರಿಗಳಿಗೆ ಯಾವ ರೀತಿಯಿಂದಲೂ ಇಲ್ಲವೆಂಬುದರಿಂದಾಗಿ, ಅವರನ್ನು ಬೇಷರತ್ತಾಗಿ ಬಿಡುಗಡೆ ಮಾಡಬಹುದೆಂದು ದೊರೆಗಳಿಗೆ ಸಲಹೆ ಮಾಡಿದರು. ಸಂಸ್ಕೃತ ಸಾಹಿತ್ಯ, ತರ್ಕ ವ್ಯಾಕರಣಗಳಲ್ಲಿ ಮಾತ್ರವೇ ಅವರು ಆಸಕ್ತರೆಂಬುದು ವಿದಿತವೇ ಇತ್ತು. ದೊರೆಗಳ ಪ್ರವೃತ್ತಿಯೂ ಅವುಗಳ ಕಡೆಗಿದ್ದುದರಿಂದ ಶಾಸ್ತ್ರಿಗಳನ್ನು ಈಗ ಸ್ವತಂತ್ರಗೊಳಿಸಲಾಯಿತು. ಅರಮನೆಯಲ್ಲಿಯೇ ಅವರಿಗೆ ಅನುಷ್ಠಾನ ಅಧ್ಯಯನಗಳಿಗೆ ಅನುಕೂಲವಾಗುವಂತೆ ಒಂದು ಕೋಣೆಯನ್ನು ಬಿಡಿಸಿಕೊಡಲಾಯಿತು. ಈ ಅವಕಾಶವನ್ನು ಬಳಸಿಕೊಂಡು, ಶಾಸ್ತ್ರಿಗಳಿಗಿಂತ ಸ್ವಲ್ಪವೇ ದೊಡ್ಡವರಾಗಿದ್ದ ದೊರೆಗಳು ಅವಗೊಂದಿಗೆ ಬ್ರಹ್ಮಸೂತ್ರಗಳ ಶಂಕರಭಾಷ್ಯವನ್ನು ಒಟ್ಟಿಗೆ ಅಭ್ಯಾಸಮಾಡುವ ಪರಿಪಾಠವನ್ನಿಟ್ಟುಕೊಂಡರು ಒಂದು ರೀತಿಯಲ್ಲಿ ದೊರೆಗಳಿಗೆ ಉಪಾಧ್ಯಾಯರೇ ಆದರು ಶಾಸ್ತ್ರಿಗಳು.

ಮುಮ್ಮಡಿಯವರು ವಿದ್ವಾಂಸರ ಪ್ರತಿಭೆ ಪಾಂಡಿತ್ಯಗಳನ್ನು ಬಹುಬೇಗ ಗುರು

ತಿಸುತ್ತಿದ್ದರು. ಫಲವಾಗಿ, ಶೇಷಶಾಸ್ತ್ರಿಗಳಿಗೆ ಸಂಬಳ, ಮನೆ, ವೃತ್ತಿಗಳು ಏರ್ಪಾಡಾದುವು. ಅವರನ್ನು ಪ್ರೀತಿಯಿಂದ 'ಅಣ್ಣಯ್ಯ' ಎಂದು ಕರೆಯುತ್ತಿದ್ದರಂತೆ ಮುಮ್ಮಡಿಯವರು· ಪಾಣಿನ್ಯಾದಿಗಳನ್ನು ಶಾಸ್ತ್ರಿಗಳು ದೊರೆಗಳಿಗೆ ಪರಿಚಯಿಸುವಾಗ, ಹಗಲು ಸಾಲದೆ ಹೋದರೆ ರಾತ್ರಿಯೂ ಅವರ ಅಭ್ಯಾಸ ಸಾಗುತ್ತಿತ್ತಂತೆ. ಇಂತಹ ವಿಶ್ವಾಸದ ಪೋಷಣೆಯಲ್ಲಿ ಶಾಸ್ತ್ರಿಗಳು ತಮ್ಮ ನಾಲ್ಕೂ ಪುಸ್ತಕಗಳನ್ನು ಪ್ರಕಟಿಸಿದರಂತೆ ! ಆಗ್ಗೆ ಅವರ ವಯಸ್ಸು ಸು. ೨೭.

ಪೇಶ್ವೆಗಳ ಪತನದ ಬಳಿಕ ಪುಣೆ, ಜಿಂಜಿ, ತಂಜಾವೂರುಗಳಲ್ಲಿ ಪಾಂಡಿತ್ಯ ಪೋಷಣೆಗೆ ಪ್ರಬಲವಾದ ಪೆಟ್ಟು ಬಿದ್ದಿತು. ವಿದ್ವಾಂಸರು ಮೈಸೂರಿನ ಕಡೆಗೆ ತಿರುಗಿದರು.ಮೈಸೂರಿನಲ್ಲಿ ರಾಜಕೀಯ ಪರಿಸ್ಥಿತಿ ಆಗ ಉತ್ತಮವಾಗಿಲ್ಲದಿದ್ದರೂ ಮುಮ್ಮಡಿ ಕೃಷ್ಣರಾಜರು ಸಾಹಿತ್ಯ, ವ್ಯಾಕರಣ, ತರ್ಕ, ತತ್ತ್ವಶಾಸ್ತ್ರ, ಜ್ಯೋತಿಷ್ಯ, ಖಗೋಳ, ಲಲಿತಕಲೆ, ವೈದ್ಯ, ನಾಟಕ, ಕ್ರೀಡೆ, ಮನೋರಂಜನೆ ಇವುಗಳ ಬೋಧನೆ ಪ್ರಸಾರಗಳಿಗೆ ಉದಾರವಾಗಿ ಆಶ್ರಯ ನೀಡುತ್ತಿದ್ದರು. ಆಗ್ಗೆ ಮೈಸೂರು ದಕ್ಷಿಣದ ಉಜ್ಜಯಿನಿಯಾಯಿತು, ಮುಮ್ಮಡಿ ಕೃಷ್ಣರಾಜರು ಭೋಜರಾಜನಂತೆ ಶೋಭಿಸಿದರು ! ತಾವಾಗಿ ಆಶ್ರಯವನ್ನು ಕೋರಿ ಬಂದವರಿಗಲ್ಲದೆ, ತಾವೇ ಆಹ್ವಾನವಿತ್ತು ಬರಮಾಡಿಕೊಂಡು ಉದಾರಾಶ್ರಯವನ್ನು ನೀಡಿದ್ದು ಅವರ ಪಾಂಡಿತ್ಯ ಪ್ರೀತಿಯ ಫಲವೇ ಆಗಿದೆ. ಈ ವಿಷಯದಲ್ಲಿ ಅವರು ಬ್ರಿಟಿಷ್ ರೆಸಿಡೆಂಟ್ ಕೋಲ್ ಮಹಾಶಯನ ಬಲವಾದ ಎಚ್ಚರಿಕೆಗಳನ್ನು ಅಲಕ್ಷಿಸಿದರು. ಧಾರಾಳವಾಗಿ ಸಭೆ ಸಮಾವೇಶಗಳನ್ನು ನೆರೆಯಿಸಿದರು ; ಕವಿಗಳಿಗೆ ವಿದ್ವಾಂಸರಿಗೆ ವೃತ್ತಿಗಳನ್ನು ಹಾಕಿಸಿದರು ; ಮನೆಗಳನ್ನು ಕಟ್ಟಿಸಿಕೊಟ್ಟರು ; ಸಂಬಳಗಳನ್ನು ಗೊತ್ತುಮಾಡಿದರು ; ವಿಶ್ರಾಂತಿ ವೇತನಗಳನ್ನು ನೀಡಿದರು; ಖಿಲ್ಲತ್ತು ಬಹುಮಾನಗಳನ್ನು ಕೊಟ್ಟು ಸನ್ಮಾನಿಸಿದರು. ಇದಕ್ಕೆ ಸ್ವಸ್ಥಳ–ಪರಸ್ಥಳ ಎಂಬುದಾಗಲಿ, ಜಾತಿಮತಗಳೆಂಬುವಾಗಲಿ, ತನ್ನವರು–ಇತರರು, ಚಿಕ್ಕವರು–ದೊಡ್ಡವರು ಎಂಬುವಾಗಲಿ ಅಡ್ಡಿ ಬರಲಿಲ್ಲ.

ಶೇಷಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಸಂಸ್ಕೃತವ್ಯಾಕರಣದ ಪ್ರೌಢವಾದ ವ್ಯಾಸಂಗ ಮೈಸೂರಿನಲ್ಲಿ ತೊಡಗಿತು. ಅವರಲ್ಲಿ ಅಭ್ಯಾಸಮಾಡಿ ಪ್ರಸಿದ್ಧಿಗೆ ಬಂದವರಲ್ಲಿ ವ್ಯಾಕರಣದ ನರಸಿಂಹಶಾಸ್ತ್ರಿ, ಕುಪ್ಪಶಾಸ್ತ್ರಿ, ಲಕ್ಷ್ಮಣಾಚಾರ್ಯ, ಚಾಮರಾಜನಗರ ಶ್ರೀಕಂಠಶಾಸ್ತ್ರಿ, ಸೋಸಲೆ ಗರಳಪುರಿಶಾಸ್ತ್ರಿ ಮೊದಲಾದವರು ಪ್ರಖ್ಯಾತರು. ಅಲ್ಲದೆ ಧರ್ಮಾಧಿಕಾರಿಗಳಾದ ಚಕ್ರವರ್ತಿ ಅಯ್ಯಂಗಾರ್, ಕುಂಭಕೋಣಂ ಶೇಷಾಚಾರ್ ಅವರುಗಳನ್ನೂ, ವ್ಯಾಸ ಕೃಷ್ಣಾಚಾರ್ ಕಾಂಚೀಪುರಂ ಘಂಟಾವತಾರಂ ವೆಂಕಟಾಚಾರ್, ಮಹದೇವಪುರಂ ಅನಂತಾಚಾರ್, ಅಗರಂ ರಾಮಕೃಷ್ಣ ಕವಿ ಮೊದಲಾದವರನ್ನೂ ಇವರೊಂದಿಗೆ ಹೆಸರಿಸಬಹುದು·

ಶೇಷಶಾಸ್ತ್ರಿಗಳ ಬದುಕಿನ ಕೆಲವು ಘಟನೆಗಳು :

೧) ಪುಣೆಯ ಪಂಡಿತ ತ್ರ್ಯಂಬಕ ಶಾಸ್ತ್ರಿಗಳೊಂದಿಗೆ ವಾಕ್ಯಾರ್ಥ ಮಾಡಿದ್ದು : ಬಳ್ಳಾರಿಯ ಸಮೀಪದ ರಾಯದುರ್ಗದ ಪಂಡಿತ ತ್ರ್ಯಂಬಕಶಾಸ್ತ್ರಿಗಳು ಚತುಶ್ಶಾಸ್ತ್ರ ಪಂಡಿತರು. ತಮ್ಮ ದಕ್ಷಿಣದ ಯಾತ್ರೆಯ ಸಂದರ್ಭದಲ್ಲಿ ಸು. ೧೮೯೯ರಲ್ಲಿ ಶ್ರೀರಂಗ

ಪಟ್ಟಣದ ಹತ್ತಿರ ಪಶ್ಚಿಮವಾಹಿನಿಯಲ್ಲಿ ತಂಗಿದ್ದರು. ತಮ್ಮ ಸರ್ವೋತ್ತಮ ಪಾಂಡಿತ್ಯವನ್ನು ಮನ್ನಿಸುವ ಇಲ್ಲವೆ ತಮ್ಮೊಂದಿಗೆ ವಾಕ್ಯಾರ್ಥ ನಡೆಸುವ ಒಂದು ಆಹ್ವಾನವನ್ನು ಮೈಸೂರಿನ ಪಂಡಿತರಿಗೆ ಕೊಟ್ಟು ಮುಮ್ಮಡಿಯವರಿಗೂ ಈ ವಿಷಯವನ್ನು ಹೇಳಿಕಳಿಸಿದರು. ದೊರೆಗಳು ರಾಜಧಾನಿಗೆ ಬರುವಂತೆ, ವಿದ್ವಾಂಸರೊಂದಿಗೆ ವಾಕ್ಯಾರ್ಥ ನಡೆಸುವಂತೆ ಅವರಿಗೆ ಪ್ರತ್ಯುತ್ತರ ಕಳಿಸಿದರು. ಪುಣೆಯ ಪಂಡಿತರೊಂದಿಗೆ ವಾದದಲ್ಲಿ ಇತರ ಮೈಸೂರು ಪಂಡಿತರು ಸರಿಗಟ್ಟುವುದು ಕಷ್ಟವಾಯಿತು. ಆಗ ತಗಣ ಶೇಷಶಾಸ್ತ್ರಿಗಳಿಗೆ ಹೇಳಿಕಳಿಸುವುದೆಂದು ಅರಸರೂ ಭಕ್ಷಿ ಮಹದೇವಪುರ ರಾಮರಾಯರೂ ತಮ್ಮಲ್ಲಿಯೇ ವಿಚಾರಮಾಡಿ ನಿರ್ಣಯಿಸಿಕೊಂಡರು. ತರ್ಕ ವ್ಯಾಕರಣ ಮತ್ತು ವೇದಾಂತಗಳಲ್ಲಿ ಪ್ರಗಲ್ಭರಾಗಿದ್ದ ಶೇಷಶಾಸ್ತ್ರಿಗಳನ್ನು ಮೇನೆಯಲ್ಲಿ ಬರಮಾಡಿಕೊಳ್ಳಲಾಯಿತು. ಅವರನ್ನು ಪ್ರಭುಗಳು 'ಬೆಂಕಿ ಚೂರು' ಎನ್ನುತ್ತಿದ್ದರಂತೆ! ಆಗ ಅವರ ವಯಸ್ಸು ೨೩.

ಮೈಸೂರು ಅರಮನೆಯ ಹತ್ತಿರದ ತ್ರಿಣಯನೇಶ್ವರಸ್ವಾಮಿ ದೇವಾಲಯದ ರಾಜರಾಜೇಶ್ವರಿ ಅಮ್ಮನವರ ಎದುರಿನಲ್ಲಿ ವಾದಕ್ಕೆ ಏರ್ಪಾಡಾಯಿತು. ಆಗ್ಗೆ ತ್ರಯಸ್ಥರಾಗಿದ್ದವರು ಮಧ್ವಾಚಾರ್ಯ, ತಿಮ್ಮಜ್ಞಾಚಾರ್ಯ ಮತ್ತು ಕುಣಿಗಲ್ ರಾಮಶಾಸ್ತ್ರಿಗಳು. ಪರಸ್ಪರ ಪರಿಚಯವಾದ ಮೇಲೆ, ದೊರೆಯೂ ಅಧಿಕಾರಿಗಳೂ ಸೇರಿಪಂತೆ ಅಲ್ಲಿ ನೆರೆದಿದ್ದ ವಿದ್ವತ್ ಸಭೆಗೆ ಶೇಷಶಾಸ್ತ್ರಿಗಳು ವಂದಿಸಿ ತಮ್ಮ ಪ್ರತಿಕಕ್ಷಿಯನ್ನು ಉದ್ದೇಶಿಸಿ ಹೀಗೆಂದರಂತೆ: "ಹೀಗೆ ನಾಮಧೇಯಗಳನ್ನು ಪರಿಚಯಮಾಡಿಕೊಳ್ಳಲು ಇದು ಸಂದರ್ಭವಲ್ಲ. ನಮ್ಮ ಗಣ್ಯ ಅತಿಥಿಗಳು 'ತ್ರ್ಯಂಬಕ' ಎಂದೋ 'ಅಂಬಕ' ಎಂದೋ 'ಬಕ' ಎಂದೋ ಏನೇ ಹೆಸರಿನವರಿರಲಿ, ಇಲ್ಲಿಗೆ ಬೇಕಾಗಿರುವುದು ವೈಯಕ್ತಿಕ ವಾದ ನೈಪುಣ್ಯ. ಆದ್ದರಿಂದ ನಾವು ಈಗ ವಿಷಯಕ್ಕೆ ಬರೋಣ. ನನ್ನೆದುರಿನ ಗಣ್ಯ ವಾದಿ ಮಹನೀಯರು ಇನ್ನು ಹೆಚ್ಚೇನೂ ಅಬ್ಬರಮಾಡದೆ ಒಂದು ವಿಷಯವನ್ನು ಘೋಷಿಸಿ ವಾಕ್ಯಾರ್ಥವನ್ನು ಆರಂಭಿಸಲಿ." ಅದಕ್ಕೆ ಸಭೆಯ ಒಪ್ಪಿಗೆ ಸಿಕ್ಕಿತು. ಪುಣೆಯ ಪಂಡಿತರು ಚರ್ಚೆಗೆ 'ನಾರಾಯಣ'ಶಬ್ದದ ಅರ್ಥವನ್ನು ಆರಿಸಿಕೊಂಡು ಸಾಧಾರವಾಗಿ ಹರಿ ಹೆಚ್ಚೋ, ಹರ ಹೆಚ್ಚೋ ಎಂಬುದನ್ನು ಅದಕ್ಕೆ ಅನುಗುಣವಾಗಿ ವಾದಿಸಲು ಸಲಹೆ ಮಾಡಿದರು. ವಾದ ಮೂರು ದಿನಗಳ ಕಾಲ ಬೆಳೆಯಿತು. ಶಾಸ್ತ್ರಾಧಾರದ ವಾಕ್ಯಗಳು ಸೂರೆಯಾದವು. ವಾದ ಮುಗಿಯುವ ಲಕ್ಷಣ ಕಾಣಲಿಲ್ಲ. ಅತಿಥಿಗಳ ಕೋರಿಕೆಯಂತೆ, ದೊರೆಗಳ ಅಪ್ಪಣೆಯ ಪ್ರಕಾರ, ಒಂದು ಘಟ್ಟದಲ್ಲಿ ಅದನ್ನು ಮುಗಿಸಲಾಯಿತು. ತ್ರ್ಯಂಬಕ ಶಾಸ್ತ್ರಿಗಳು ವಿದ್ವನ್ಮಂಡಲಿಯನ್ನು ಉದ್ದೇಶಿಸಿ, ಭಾಗವತೋಕ್ತಿ ಬಳಸಿ, ಶೇಷಶಾಸ್ತ್ರಿಗಳಿಗೆ ಅನ್ವಯಿಸುವಂತೆ "ಭವಾನೇಕಃ ಶಿಷ್ಯತೇ ಶೇಷಸಂಜ್ಞಃ", "ಅಯಂ ಶೇಷಏವ" ಎಂದು ಉದ್ಗಾರಮಾಡಿದರು. ಅರಸರು ಇಬ್ಬರನ್ನೂ ಖಿಲ್ಲತ್ತುಗಳೊಂದಿಗೆ ಸನ್ಮಾನಿಸಿದರು.

೨) ಅರಸರ ಸವಾರಿಯಲ್ಲಿ ಒದ್ದೆಬಟ್ಟೆಯಲ್ಲಿ ಪ್ರಯಾಣಮಾಡಿದ್ದು : ಮೈಸೂರಿನ ಸುತ್ತಮುತ್ತಲ ಪ್ರದೇಶಗಳಿಗೆ ಪ್ರಯಾಣಮಾಡುವ ಸಂದರ್ಭ ಬಂದಾಗ, ಶಾಸ್ತ್ರಿಗಳನ್ನು ಪ್ರಭುಗಳು ತಮ್ಮ ಜತೆಗೆ ಕರೆದೊಯ್ಯುವ ರೂಢಿಯಿತ್ತು. ಇಂತಹ ಒಂದ-

ಸಂದರ್ಭದಲ್ಲಿ ಪ್ರಭುಗಳ ಸವಾರಿ ಮಳೆಯನ್ನೂ ಲಕ್ಷಿಸದೆ ಶಾಸ್ತ್ರಿಗಳ ಮನೆಗೆ ಬಂತು. ಪ್ರಭುಗಳ ಅಪೇಕ್ಷೆಯಂತೆ ಶಾಸ್ತ್ರಿಗಳು ಅವರೊಂದಿಗೆ ತೆರಳಿದರು. ಮಾತಾಡುತ್ತ ದಾರಿ ಸಾಗುವಾಗ, ಒಂದು ಸಲ ಉತ್ಸಾಹದಲ್ಲಿ ಪ್ರಭುಗಳು ಶಾಸ್ತ್ರಿಗಳ ತೊಡೆಯನ್ನು ತಟ್ಟಿದರು. ಕೂಡಲೇ ಅವರ ಮುಖ ಗಂಭೀರವಾಯಿತು. ಶಾಸ್ತ್ರಿಗಳತ್ತ ತಿರುಗಿ, "ಇದೇನು ಹೀಗೆ ಒದ್ದೆ ಬಟ್ಟೆ ಉಟ್ಟಿರುವುದು?" ಎಂದು ಪ್ರಶ್ನಿಸಿದರು. ಶಾಸ್ತ್ರಿಗಳು ವಿನಯದಿಂದ, "ಈ ಹೊತ್ತು ನಮ್ಮ ಮನೆಯಲ್ಲಿ ಶ್ರಾದ್ಧವಿತ್ತು. ಪ್ರಭುಗಳ ಸವಾರಿ ಮಳೆಯಲ್ಲಿಯೇ ನಮ್ಮ ಮನೆಗೆ ಚಿತ್ತೈಸಿ, ಪ್ರಯಾಣಕ್ಕೆ ಅಪ್ಪಣೆಯಾಯಿತಲ್ಲ; ಕಲಾಪ ಮುಗಿದು ಇನ್ನೇನು ಬಟ್ಟೆ ಬದಲಾಯಿಸಲಿದ್ದೆ; ಆದರೆ ಕೂಡಲೇ ಹೊರಟು ಬಿಟ್ಟೆ"-ಎಂದರು. ಮಹಾರಾಜರು ತಕ್ಷಣವೇ ಸವಾರಿ ನಿಲ್ಲಿಸಿದರು. ಕುದುರೆಯಾಳನ್ನು ಅರಮನೆಗೆ ಕಳಿಸಿ, ಒಂದು ಜತೆ ಅರಿಸಿನ ಹಚ್ಚಿದ ಪಂಚೆಯನ್ನು ತರಿಸಿ ಶಾಸ್ತ್ರಿಗಳು ಉಟ್ಟುಕೊಳ್ಳುವಂತೆ ಮಾಡಿದರು. ಪ್ರಯಾಣ ಮುಂದೆ ಸಾಗಿತು.

೩) ಒಂದು ಸಲ ಮಹಾರಾಜರು ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಶೇಷಶಾಸ್ತ್ರಿಗಳೊಂದಿಗೆ ಯಾತ್ರೆ ಹೊರಟರು. ಯಾತ್ರೆ ಸಾಂಗವಾಗಿ ಮುಗಿದು ಮೈಸೂರಿಗೆ ವಾಪಸ್ಸಾಗಲಿದ್ದಾಗ, ಒಬ್ಬ ಐರೋಪ್ಯ ಅಧಿಕಾರಿ ದೊರೆಗಳ ಬಿಡಾರಕ್ಕೆ ಇದ್ದಕ್ಕಿದ್ದಂತೆ ಬಂದು ಅವರೊಂದಿಗೆ ಅತಿಥಿಯಾಗಿ ಉಳಿದುಕೊಂಡನು. ಅವರಿಗೆ ಮಂಗಳೂರು ಬಂದರಿನ ಚೆಲುವನ್ನೂ ವಿಶ್ವಖ್ಯಾತಿಯನ್ನೂ ಹಡಗುಗಳ ಸಂಚಾರದ ಬೆಡಗನ್ನೂ ವರ್ಣಿಸಿದನು. ದೊರೆಗಳು ಸಂತೋಷಪಟ್ಟರು. ಆ ಅಧಿಕಾರಿ ಆ ಸ್ಥಳಕ್ಕೆ ಭೇಟಿಕೊಡಬೇಕೆಂದು ಅವರನ್ನು ಆಹ್ವಾನಿಸಿದನು. ದೊರೆಗಳು ಒಪ್ಪಿದರು. ದೊರೆಯೂ ಪರಿವಾರವೂ ಗೊತ್ತಾದ ಕಾಲಕ್ಕೆ ಆ ಸ್ಥಳವನ್ನು ತಲುಪಿದರು. ಬಂದರು ಪ್ರದೇಶದಲ್ಲಿ ಸುತ್ತಾಡಿ ಬಂದರು, ಪ್ರಭುಗಳು. ಈಗ ಮತ್ತೆ ಐರೋಪ್ಯ ಅಧಿಕಾರಿ ದೊರೆಗಳಿಗೆ, ಒಂದು ಸಣ್ಣ ದೋಣಿಗೆ ಹತ್ತಿಕೊಳ್ಳಬೇಕೆಂದೂ ಅಲ್ಲಿಂದ ದೂರದ ಸಂಚಾರ ಮಾರ್ಗದೆಡೆ ನಿಂತಿರುವ ದೊಡ್ಡ ಹಡಗು ನಿಂತಿರುವೆಡೆಗೆ ಹೋದರೆ ಅಲ್ಲಿ ಹಡಗಿನ ಒಳಗೆಲ್ಲಾ ನೋಡಬಹುದೆಂದೂ ನೌಕಾಸಂಚಾರದ ವಿಧಾನವನ್ನು ತಿಳಿಯಬಹುದೆಂದೂ ಹಠಾತ್ತನೆ ಸಲಹೆ ಮಾಡಿದನು. ದೊರೆಗಳು ಶೇಷಶಾಸ್ತ್ರಿಗಳೊಂದಿಗೆ ಸಮಾಲೋಚಿಸಿದರು. ಒಪ್ಪಿಕೊಳ್ಳಬಾರದೆಂದು ಅವರು ಸೂಚಿಸಿದರು. ಶಾಸ್ತ್ರಿಗಳು ಅಲ್ಲಿದ್ದ ಸ್ವಲ್ಪ ಹೊತ್ತಿನಲ್ಲಿಯೇ ಸೂಕ್ಷ್ಮವಾಗಿ ಸುದ್ದಿ ಸಂಗ್ರಹ ಮಾಡಿಕೊಂಡಿದ್ದ ಪ್ರಕಾರ ಕಂಪೆನಿಯವರು ಮಹಾರಾಜರನ್ನು ಭಾರತದಿಂದ ಹೊರಕ್ಕೆ ಸಾಗಿಸಿಬಿಟ್ಟು, ಉಪಾಯದಿಂದ ಮೈಸೂರು ಸೀಮೆಯನ್ನು ಕಂಪೆನಿಯವರ ಆಳಿಕೆಗೆ ಸೇರಿಸಿಕೊಳ್ಳುವುದೆಂದು ಹೊಂಚು ಹಾಕಿದ್ದಾರೆ ಎಂಬುದನ್ನು ಅರ್ಥಮಾಡಿಕೊಂಡಿದ್ದರು. ಹಾಗೆಂದೇ ಆ ವಿದೇಶೀಯರ ಬಲೆಗೆ ತಮ್ಮ ಪ್ರಭುಗಳು ಬೀಳದ ಹಾಗೆ ಮಾಡಲು, ಅವರ ಭಾಗಕ್ಕೆ ಆಗ ನಕ್ಷತ್ರಾನುಕೂಲವಿಲ್ಲವೆಂಬುದಾಗಿ ಹೇಳಿ ಅವರನ್ನು ತಡೆದರು. ಅನಂತರದಲ್ಲಿ, ದೊರೆಗಳು ಆ ಐರೋಪ್ಯ ಅಧಿಕಾರಿಯ ಮಾತಿಗೆ ಒಪ್ಪಿಗೆ ಕೊಟ್ಟಿದ್ದರೆ, ಅವರನ್ನು ಅಪಹರಿಸಲಾಗುತ್ತಿತ್ತು ಎಂಬುದಾಗಿ ಸ್ಪಷ್ಟಪಡಿಸಿದರು. ರಾಜ ಪರಿವಾರ ಈಗ ಶೀಘ್ರವಾಗಿ ರಾಜಧಾನಿಗೆ ಮರಳಿತು. ಅಂದಿನ ಬ್ರಿಟಿಷ್

ಸರ್ಕಾರದ ಕುತಂತ್ರವನ್ನು ತಿಳಿದಂತಾಯಿತು. ಈ ಸಂಗತಿ ಆ ಇಬ್ಬರಿಗೆ ಮಾತ್ರವೇ ತಿಳಿದಿದ್ದುದು. ವೈಯಕ್ತಿಕ ಭದ್ರತೆಗೆ ಮುಂದೇನು ಮಾಡಬೇಕೆಂದು ಯೋಚಿಸಿ, ಆತ್ಮರಕ್ಷಣೆಗೆ ಅಗತ್ಯ ಏರ್ಪಾಡುಗಳನ್ನು ಮಾಡಲು, ಅರಮನೆಯ ಆಭರಣ ಆಸ್ತಿ ಪಾಸ್ತಿಗಳನ್ನು ಜೋಕೆ ಮಾಡಲು ಬಂದೋಬಸ್ತು ಮಾಡಬೇಕೆಂದು ಭಕ್ಷಿ ನರಸಪ್ಪ ನವರಿಗೆ ಸೂಚಿಸಲಾಯಿತು.

೪) ಎಂ. ಎಸ್. ಪುಟ್ಟಣ್ಣನವರ 'ಕುಣಿಗಲ್ ರಾಮಶಾಸ್ತ್ರಿಗಳ ಚರಿತ್ರೆ' ಎಂಬ ಪುಸ್ತಕದಲ್ಲಿ ದಾಖಲಾಗಿರುವ ಕೆಲವು ಘಟನೆಗಳ ಸಂಗ್ರಹ:

i) ಒಂದು ಸಲ ಶೇಷಶಾಸ್ತ್ರಿಗಳು ಹಸುವಿಗಾಗಿ ಒಂದು ಹೊರೆ ಹುಲ್ಲು ಕೊಂಡುಕೊಂಡು, ಕೈಯಲ್ಲಿ ಹತ್ತು ಸೇರು ತೊಗರಿಬೇಳೆ ಗಂಟು ಹಿಡಿದು ಎದುರಿಗೆ ಸಿಕ್ಕ ಪಂಡಿತ ಆನವಟ್ಟಿ ಶ್ರೀನಿವಾಸಾಚಾರ್ಯರೊಂದಿಗೆ ಶಾಸ್ತ್ರಾರ್ಥ ವಿಚಾರದಲ್ಲಿ ತೊಡಗಿದರು. ಮಾತಾಡುತ್ತ ಆಡುತ್ತ ವ್ಯೆಮರೆತು, ಬೆಳಿಗ್ಗೆ ೯ ರಿಂದ ಸಂಜೆ ೪ ಘಂಟೆಯವರೆಗೆ ಇಬ್ಬರೂ ಶಾಸ್ತ್ರ ವಿಚಾರದಲ್ಲಿಯೇ ಮಗ್ನರಾಗಿದ್ದರು. ಅರಮನೆಯ ಐದನೆಯ ಉಪ್ಪರಿಗೆಯಿಂದ ದುರ್ಬಿನು ಹಾಕಿಕೊಂಡು ಅರಸರು ಇದನ್ನು ನೋಡುತ್ತಿದ್ದರು. ಕೊನೆಗೆ ಕಟ್ಟೆಗೆಯವರ ಮೂಲಕ "ಬಹಳ ಹೊತ್ತು ನಿಂತಿದ್ದೀರಿ, ಕಾಲು ನೋಯುವುದಿಲ್ಲವೇ" ಎಂದು ಇಬ್ಬರಿಗೂ ಹೇಳಿ ಕಳಿಸಿದರಂತೆ.

ii) ದೊರೆಗಳ ವರ್ಧಂತಿಯ ದಿನ ದೊರೆಗಳಿಗೆ ಸಲ್ಲಿಸಲಿದ್ದ ಫಲಮಂತ್ರಾಕ್ಷತೆಯನ್ನೂ ಹೂಹಾರವನ್ನೂ, ಸ್ವಲ್ಪ ತಡವಾಗಿ ಅರಮನೆಗೆ ತಾವು ಬರುವಂತಾದ ಕಾರಣದಿಂದ, ಅಷ್ಟರಲ್ಲಿ ದೊರೆಗಳು ಅಂಬಾವಿಲಾಸ ತೊಟ್ಟಿಗೆ ದಯೆ ಮಾಡಿಸಿದ್ದುದರಿಂದ, ಪಹರೆಯ ಸಿಪಾಯಿಗೇ ಸಲ್ಲಿಸಿ, ಮುಂದೆ ಚಾತುರ್ಯದಿಂದ ದೊರೆಗಳಲ್ಲಿ ಅದನ್ನು ಸಮರ್ಥಿಸಿಕೊಂಡರು. ಪ್ರಭುಗಳ ಬಿರುದು ಅಧಿಕಾರಲಾಂಛನಗಳನ್ನು ಪಹರೆಯವನು ಹೊಂದಿದ್ದ ಕಾರಣ ಪ್ರಭುವಿನ ಪ್ರತಿನಿಧಿಯಾದ ಅವನಿಗೆ ಮರ್ಯಾದೆ ಮಾಡಿದರೆ, ಪ್ರಭುವಿಗೇ ಮಾಡಿದಂತೆ-ಎಂಬುದು ಶಾಸ್ತ್ರಿಗಳು ನೀಡಿದ ಸಮರ್ಥನೆಯಾಗಿತ್ತು.

iii) ಒಮ್ಮೆ ಶಾಸ್ತ್ರಿಗಳು ಅಂಬಾವಿಲಾಸದ ತೊಟ್ಟಿಯಿಂದ ಹೊರಬರುವಾಗ ಬಿಚ್ಚುಕತ್ತಿಯ ಕಾವಲುಗಾರನು ಅವರನ್ನು ನೋಡಿ" ನನ್ನ ಹೆಸರು ಬಲಕ್ಕೆ ಹೇಗೆಇದೆ" ಎಂಬುದಾಗಿ ಪ್ರಶ್ನಿಸಿದನು. ಅಷ್ಟು ಸಣ್ಣ ವಿಷಯಕ್ಕೆ ತನ್ನಲ್ಲಿ ಪ್ರಶ್ನಿಸಿದನೆಂದು ಅವನನ್ನು ಆಕ್ಷೇಪಿಸಿದ್ದಲ್ಲದೆ, ಅವನಿಗೆ ಬುದ್ಧಿ ಕಲಿಸಬೇಕೆಂದು ಇನ್ನೊಂದು ಸಲ ತಾವೇ ತಲೆಗೆ ಬಹಿರ್ವಾಸವನ್ನು ಕಿವಿಗೆ ಜನಿವಾರವನ್ನೂ ಸುತ್ತಿ ಬಿಸಿನೀರು ತಂಬಿಗೆಯೊಂದಿಗೆ ಅವನೆದುರು ಕುಳಿತು ತಮಗೆ ಕ್ಷೌರ ಮಾಡುವಂತೆ ಅವನಿಗೆ ಹೇಳಿ ಗೊಂದಲವುಂಟು ಮಾಡಿದರು. ದೊರೆಗಳಿಗೆ ವಿಷಯ ತಿಳಿದು ಅವನನ್ನು ದಂಡಿಸಿದರು.

iv) ಪ್ರಭುಗಳ ರಾಣಿವಾಸದಲ್ಲಿ ಒಮ್ಮೆ ಒಬ್ಬ ಹೆಂಡತಿ ಬಹಿಷ್ಠೆಯಾದಾಗ, ಪ್ರಭುಗಳಿಗೆ ತಾವು ಔಪಾಸನೆ ಮಾಡಬಹುದೇ ಎಂಬ ಸಂಶಯ ಹುಟ್ಟಿತು. ಸಂಶಯದ ಪರಿಹಾರಕ್ಕೆ ಅವರು ಶಾಸ್ತ್ರಿಗಳಲ್ಲಿಗೆ ಹರಿಕಾರನ ಮೂಲಕ ಸುದ್ದಿ ಕಳಿಸಿದರು. ಶಾಸ್ತ್ರಿಗಳು ಊಟದೆಲೆ ಹಚ್ಚುತ್ತ, ಬಿಸಿಲು ಕಾಯಿಸುತ್ತ ಮನೆಯಲ್ಲಿ ಕುಳಿತಿದ್ದರು. ಏನೂ ಮಾತಾಡದೆ ಸುಮ್ಮನಿದ್ದರು. ತಡವಾಗಲು, ಹಿಂದೆಯೇ ಇನ್ನೊಬ್ಬ ಹರಿಕಾರನೂ

ಆ ಬಳಿಕ ಬೇರೆ ಬೇರೆಯಾಗಿ ಇಬ್ಬರು ಕಟ್ಟೆಗೆಯವರೂ ಶಾಸ್ತ್ರಿಗಳ ಮನೆಗೆ ಬಂದರು. "ಆರೋಗಣೆಗೆ ಹೊತ್ತಾಯಿತು, ಉತ್ತರವೇನು ?" ಎಂದು ಅವರು ಪ್ರಶ್ನಿಸಲಾಗಿ, ಶಾಸ್ತ್ರಿಗಳು "ಈ ದೊರೆಯ ಹೆಂಡತಿ ಮುಟ್ಟಾಗದಿದ್ದಾಗ್ಯೂ ಔಪಾಸನ ಮಾಡ ಬಹುದೆಂದು ಎಲ್ಲಿ ಹೇಳಿದೆಯೋ ಮುಟ್ಟಾದರೂ ಮಾಡಬಹುದೆಂದು ಅಲ್ಲಿಯೇ ಹೇಳಿದೆ. ಮಾಡಿದರೂ ಒಂದೇ, ಮಾಡದೇ ಇದ್ದರೂ ಒಂದೇ" ಎಂದು ಕೋಪದಿಂದ ಗಟ್ಟಿಯಾಗಿ ಕೂಗಿ ಹೇಳಿದರಂತೆ. ಪ್ರಭುವಿಗೆ ಇದರ ಆಶಯ ತಿಳಿದು, ಅವರು ಔಪಾಸನ ಮಾಡುವುದನ್ನು ನಿಲ್ಲಿಸಿದರಂತೆ.

V) ಶಾಸ್ತ್ರಿಗಳ ಏಕಸಂಧಿಗ್ರಾಹಿತ್ವದ ಒಂದು ನಿದರ್ಶನ: ಶಾಸ್ತ್ರಿಗಳು ಒಂದು ಸಾರಿ ತಿರುಚನಾಪಳ್ಳಿಗೆ ಹೋಗಿದ್ದರು. ಅವರು ಒಂದು ದಿನ ಕಾವೇರಿ ನದಿಯ ಒಂದು ಕಡುವಿನಲ್ಲಿ ಸ್ನಾನಮಾಡಿ ಜಪ ಮಾಡುತ್ತಿದ್ದರು. ಆ ಪೂರಿನಲ್ಲಿಯೇ ಠಾಣ್ಯವಾಗಿದ್ದ ಕಂಪೆನಿ ಸರ್ಕಾರದ ಕಡೆಯ ಒಂದು ಸೇನಾ ತುಕಡಿಯ ಇಬ್ಬರು ಸಿಪಾಯಿಗಳು ಅದೇ ಕಡುವಿಗೆ ಬಂದು ಈಜಾಡುತ್ತ ಇದ್ದು, ಯಾವುದೋ ಕಾರಣದಿಂದ ತಮ್ಮ ತಮ್ಮಲ್ಲಿಯೇ ಜಗಳವಾಡಿ, ಹೊಡೆದಾಡಿದರು. ಕರ್ನಲ್ ಹತ್ತಿರ ದೂರು ತಂದರು. ಆತ ಸಾಕ್ಷಿ ಯಾರೆಂದು ಕೇಳಿದನು. ಆ ಸಿಪಾಯಿಗಳು ಶಾಸ್ತ್ರಿಗಳನ್ನು ಸಾಕ್ಷಿಯಾಗಿ ತಿಳಿಸಿದರು. ಕರ್ನಲ್ ಶಾಸ್ತ್ರಿಗಳನ್ನು ಬರಮಾಡಿ ಪ್ರಶ್ನಿಸಲಾಗಿ ಅವರು, "ನಾನು ಒಂದನ್ನೂ ಅರಿಯೆ, ಈ ಇಬ್ಬರು ಸೋಲ್ಜರುಗಳೂ ಕೋಪದಿಂದ ಕೂಗಾಡುತ್ತಾ ಇದ್ದರು. ನನಗೆ ಅವರ ಮಾತು ಬಾರದು ; ಇವರಿವರು ಆಡಿದ ಮಾತಿನ ಶಬ್ದವನ್ನು ನಾನು ಉಚ್ಚರಿಸಬಲ್ಲೆ" ಎಂಬುದಾಗಿ ತಿಳಿಸಿ, ಹಾಗೆಯೇ ಅವರೆದುರು ಅದನ್ನು ನಿರೂಪಿಸಿದರು. ಆ ಅಧಿಕಾರಿಗೆ ಆಶ್ಚರ್ಯವಾಯಿತು. ಇವರಿಗೆ ಇಂಗ್ಲಿಷ್ ಭಾಷೆ ಬಾರದು ಎಂಬುದನ್ನು ಅವನಿಂದ ನಂಬಲಾಗಲಿಲ್ಲ. ಇವರನ್ನು ಪರೀಕ್ಷಿಸಲು ಒಂದು ಚಿಕ್ಕ ಸಭೆ ಸೇರಿತು. ಹೇಳಿದ್ದೆಲ್ಲವನ್ನೂ ಯಥಾವತ್ತಾಗಿ ಉಚ್ಚರಿಸಲು ಪಂಡಿತರು ಒಪ್ಪಿದರು. ಜಿಲ್ಲಾ ಕಲೆಕ್ಟರು ತನ್ನ ಮನೆಯಲ್ಲಿದ್ದ ಒಂದು ಹಳೆಯ ಇಂಗ್ಲಿಷ್ ಪುಸ್ತಕ, ಒಂದು ಲ್ಯಾಟಿನ್ ಪುಸ್ತಕ ಎರಡರಿಂದಲೂ ಒಂದೊಂದು ಪುಟ ಓದಿ ನಿಲ್ಲಿಸಿದನು. ಕೂಡಲೇ ಶಾಸ್ತ್ರಿಗಳು ಓದಿದ ಹಾಗೆಯೇ ಉಚ್ಚರಿಸಿ ಹೇಳಿದರು. ಸಭೆ ಆಶ್ಚರ್ಯದಲ್ಲಿ ಮುಳುಗಿ ಹೋಯಿತು.

[ಕಾಶಿ ಶೇಷಶಾಸ್ತ್ರಿಗಳ ಕುಟುಂಬದ ವಿವರಗಳು, ಬದುಕಿನ ಘಟನೆಗಳು, ಅವರ ಮೊದಲ ಪೋಷಕನಾದ ಇಮ್ಮಡಿ ಬಾಜಿರಾಯನೊಂದಿಗೆ, ಅನಂತರದ ಪೋಷಕರಾದ ಮುಮ್ಮಡಿ ಕೃಷ್ಣರಾಜ ಒಡೆಯರೊಂದಿಗೆ ಇಟ್ಟುಕೊಂಡಿದ್ದ ವ್ಯಾವಹಾರಿಕ ಮತ್ತು ರಾಜನೈತಿಕ ಸಂಬಂಧಗಳು ಇವುಗಳ ಬಗೆಗೆ ಹೆಚ್ಚು ತಿಳಿಯಲಪೇಕ್ಷಿಸುವವರು ಈ ಪುಸ್ತಕವನ್ನು ನೋಡಬಹುದು : N. Lakshminarasimhaiya, K.N V. Sastri, K Sreenivasan: Kashi Sesha Sastri and his Descendants, Madras 1970.]

೪

ಸೋಸಲೆ ಗರಳಪುರೀ ಶಾಸ್ತ್ರಿಗಳು (ಜ. ೧೮೨೨)

ಸೋಸಲೆ ಗರಳಪುರೀ ಶಾಸ್ತ್ರಿಗಳು ಹೊಯಿಸಳ ಕರ್ಣಾಟಕ ಬ್ರಾಹ್ಮಣ ಪಂಗಡದ ಸೋಸಲೆ ಅಣ್ಣಯ್ಯ ಶಾಸ್ತ್ರಿಗಳ ಮಗ; ನಾಲ್ವರು ಗಂಡುಮಕ್ಕಳಲ್ಲಿ ಮೂರನೆಯವರಾಗಿ ೧೮೨೨ರ ಚಿತ್ರಭಾನು ಸಂವತ್ಸರದಲ್ಲಿ ಹುಟ್ಟಿದರು. ಅಣ್ಣಯ್ಯ ಶಾಸ್ತ್ರಿಗಳು ಲೌಕಿಕ ವ್ಯವಹಾರದಲ್ಲಿ ನಿಷ್ಣಾತರು, ಆಚಾರನಿಷ್ಠರು. ಸೋಸಲೆಯಲ್ಲಿ ವಿಸ್ತಾರವಾದ ಅಗ್ರಹಾರವನ್ನು ಕಟ್ಟಿಸಿ ಅನೇಕ ಜನ ಬ್ರಾಹ್ಮಣರಿಗೆ ವಾಸಕ್ಕೆ ಕೊಟ್ಟಿದ್ದರು. ಈ ಅಗ್ರಹಾರಕ್ಕೆ ಅಣ್ಣಯ್ಯ ಶಾಸ್ತ್ರಿಗಳ ಅಗ್ರಹಾರವೆಂದೇ ಹೆಸರಿತ್ತು. ಶಾಸ್ತ್ರಿಗಳು ಗರಳಪುರಿಯವರಿಗೆ ೮ ವರ್ಷ ವಯಸ್ಸಾಗುವುದರೊಳಗೆ ಉಪನಯನ ಮಾಡಿ ಕಾವ್ಯಪಾಠಗಳನ್ನೆಲ್ಲಾ ಪೂರೈಸಿದ್ದರು. ಅನಂತರ ಅವರಿಗೆ ಒಳ್ಳೆಯ ಶಿಕ್ಷಣ ದೊರೆಯಲೆಂದು ತಿರುಮಕೂಡ್ಲು ವಾಸಸ್ಥರಾದ, ಸಾಹಿತ್ಯ ವ್ಯಾಕರಣಗಳಲ್ಲಿ ಘನಪಂಡಿತರಾಗಿದ್ದ ರಾಮಾಶಾಸ್ತ್ರಿಗಳಲ್ಲಿ ಮಗನ ವ್ಯಾಸಂಗದ ವ್ಯವಸ್ಥೆಯನ್ನು ಮಾಡಿದರು. ಸೋಸಲೆಯಿಂದ ತಿರುಮಕೂಡ್ಲಿಗೆ ಪ್ರತಿದಿನವೂ ಅಣ್ಣ ತಿಮ್ಮಪ್ಪಶಾಸ್ತ್ರಿಗಳ ಜತೆಗೆ ಪಾಠಕ್ಕಾಗಿ ಹೋಗಿ ಬಂದು ಮಾಡುತ್ತಿದ್ದರು; ಪ್ರವಾಹ ಕಾಲದಲ್ಲಿ ದೋಣಿಯ ಸಂಚಾರವೂ ಇತ್ತು. ಹೀಗೆ ೧೬ ವರ್ಷ ತುಂಬುವ ವೇಳೆಗೆ ಚಂಪೂ, ನಾಟಕ, ಅಲಂಕಾರ ಹಾಗೂ ವ್ಯಾಕರಣ ಪಾಠವೆಲ್ಲ ಮುಗಿಯಿತು. ಆ ಕಾಲದ ಪದ್ಧತಿಯಂತೆ ಆ ಸುಮಾರಿಗೆ ಅವರಿಗೆ ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿಯಲ್ಲಿದ್ದ ವೆಂಕಟಸುಬ್ಬಯ್ಯನವರ ಪುತ್ರಿ ಸುಬ್ಬಮ್ಮ ಎಂಬ ಕನ್ಯೆಯೊಂದಿಗೆ ಮದುವೆಯಾಯಿತು.

ಗರಳಪುರಿ ಶಾಸ್ತ್ರಿಗಳು ಮದುವೆಯ ಬಳಿಕವೂ ಸೋಸಲೆಯಲ್ಲಿಯೇ ಕೆಲಕಾಲ ವಿದ್ದರು, ಅಲ್ಲಿಯ ವ್ಯಾಸರಾಯರ ಮಠದ ತರ್ಕಶಾಸ್ತ್ರ ಪಂಡಿತರಾದ ತಮ್ಮಯ್ಯಾಚಾರ್ಯರಲ್ಲಿ ತರ್ಕಶಾಸ್ತ್ರವನ್ನು ವ್ಯಾಸಂಗ ಮಾಡಿದರು. ಚಿಕ್ಕ ವಯಸ್ಸಿನಲ್ಲಿಯೇ ಸರಸವಾದ ಆಶುಕವಿತ್ವದ ರಚನೆಯಲ್ಲಿ ಅವರು ನಿಪುಣರಾಗಿದ್ದುದರಿಂದ ಅಂತಹ ರಚನೆಗಳಿಂದ ತಮ್ಮ ಬಂಧುಗಳನ್ನೂ ಸೋಸಲೆ ಮಠದ ಸ್ವಾಮಿಗಳನ್ನೂ ಮೆಚ್ಚಿಸಿದರು. ಅಂತಹ ಎರಡು ಪ್ರಸಂಗಗಳು ದಾಖಲಾಗಿವೆ.

ಶಾಸ್ತ್ರಿಗಳಿಗೆ ಕನ್ನಡ ತೆಲುಗು ಗ್ರಂಥ ಮತ್ತು ದೇವನಾಗರಿ ಲಿಪಿಗಳ ಬರವಣಿಗೆಯ ಪರಿಚಯವಿತ್ತು. ಬರವಣಿಗೆ ಸುಂದರವಾಗಿತ್ತು. ತಾವು ಓದುತ್ತಿದ್ದ ಪಾಠ ಪುಸ್ತಕಗಳಲ್ಲಿ ಒಂದೊಂದನ್ನೂ ಒಂದೊಂದು ಲಿಪಿಯಲ್ಲಿ ಬರೆದುಕೊಂಡು ಓದುತ್ತಿದ್ದರು. ಅವರ ವ್ಯಾಸಂಗಶೀಲತೆ ನಿರಂತರವಾಗಿ ನಡೆಯುತ್ತಲೇ ಇದ್ದಿತು.

ಆಗಾಗ ಮಠದ ಕೆಲಸದ ನಿಮಿತ್ತ ಮಹಾರಾಜರಾದ ಮುಮ್ಮಡಿ ಕೃಷ್ಣರಾಜರನ್ನು ಕಾಣಲು ಶಾಸ್ತ್ರಿಗಳ ಗುರುಗಳಾದ ತಮ್ಮಯ್ಯಾಚಾರ್ಯರು ಹೋಗಿ ಬರುವ ರೂಢಿಯಿತ್ತು. ಒಂದು ಸಲ ಅವರು ಶಾಸ್ತ್ರಿಗಳನ್ನೂ ತಮ್ಮೊಂದಿಗೆ ಕರೆದುಕೊಂಡು ಹೋಗಿದ್ದರು. ಹಾಗೆ ಹೋಗಿದ್ದಾಗ ಅಲ್ಲಿ ಆಸ್ಥಾನದಲ್ಲಿ ಸೇರುತ್ತಿದ್ದ ಪಂಡಿತರನ್ನೂ

ಅವರನ್ನು ಆದರಿಸುವ ವಿಷಯದಲ್ಲಿ ಅರಸರು ತೋರಿಸುವ ವಿದ್ವತ್ಪಕ್ಷಪಾತವನ್ನೂ ಗಮನಿಸಿ ಶಾಸ್ತ್ರಿಗಳು ತಾವೂ ಮೈಸೂರಿನಲ್ಲಿಯೇ ವಾಸಮಾಡುವುದಕ್ಕೆ ಆಸೆಪಟ್ಟರು. ಇದಕ್ಕೆ ಅನುಕೂಲವಾಗುವ ಹಾಗೆ ಅಲ್ಲಿ ಇವರ ತಂಗಿಯ ಮಾವಂದಿರು ಕೆಂಪು ರಾಮಾಶಾಸ್ತ್ರಿಗಳು (ಇವರು 'ಮುದ್ರಾಮಂಜೂಷ' ಎಂಬ ಪ್ರಸಿದ್ಧ ಕನ್ನಡ ಗದ್ಯ ಗ್ರಂಥದ ಕರ್ತೃ ಕೆಂಪು ನಾರಾಯಣ ಕವಿಯ ಮಗ) ಆಸ್ಥಾನ ವೈದ್ಯರಾಗಿದ್ದರು. ಗರಳಪುರೀ ಶಾಸ್ತ್ರಿಗಳು ಮೈಸೂರಿಗೆ ಹೊರಟುಬಂದು ಇವರ ಮನೆಯಲ್ಲೇ ಇಳಿದುಕೊಂಡರು. ಕೆಂಪು ರಾಮಾಶಾಸ್ತ್ರಿಗಳೂ ಈ ಅವಕಾಶವನ್ನು ಬಳಸಿಕೊಂಡು ತಮ್ಮ ಜ್ಯೇಷ್ಠಪುತ್ರರಾದ ಸುಬ್ಬಣ್ಣನವರಿಗೆ ಗರಳಪುರೀ ಶಾಸ್ತ್ರಿಗಳಿಂದ ವೈದ್ಯಶಾಸ್ತ್ರದ ವಾಗ್ಭಟವೆಂಬ ನಿದಾನ ಗ್ರಂಥವನ್ನು ಪಾಠ ಹೇಳಿಸಿದರು. ಹೀಗೆಯೇ ಕೆಲವು ದಿನಗಳು ಕಳೆದುವು. ತಮಗಾಗಿ ಬೇರೆ ಮನೆ ಮಾಡಿಕೊಳ್ಳುವ ಯೋಚನೆ ಹುಟ್ಟಿತು. ಕೆಂಪು ರಾಮಾಶಾಸ್ತ್ರಿಗಳ ಮನೆಯ ಹತ್ತಿರದಲ್ಲಿಯೇ ವೀಣೆ ವೆಂಕಟಸುಬ್ಬಯ್ಯನವರ (ಇವರು ಪ್ರಸಿದ್ಧ ವೈಣಿಕರಾದ ವೀಣೆಸುಬ್ಬಣ್ಣನವರ ತಾತನವರು) ಬಂಗಲೆಮನೆಯ ವಠಾರದಲ್ಲಿ ವಾಸವಾಗಿದ್ದ ತಮ್ಮ ಮಿತ್ರರು ಆಸ್ಥಾನ ಪೌರಾಣಿಕ ಕಾನಕಾನಹಳ್ಳಿ ಸುಬ್ರಹ್ಮಣ್ಯಾಚಾರ್ಯರಿಗೂ ತಮ್ಮ ಆಲೋಚನೆಯನ್ನು ತಿಳಿಸಿದರು. ಅವರು ವೀಣೆ ವೆಂಕಟಸುಬ್ಬಯ್ಯನವರ ಮಕ್ಕಳೂ ಅರಮನೆ ಭಕ್ಷಿಯವರೂ ಆಗಿದ್ದ ವೀಣೆ ಶೇಷಣ್ಣನವರ (ಇವರು ವೀಣೆ ಮತ್ತು ಸಂಗೀತದಲ್ಲಿ ಪ್ರವೀಣರಾಗಿದ್ದ ದೊಡ್ಡ ಶೇಷಣ್ಣನವರು) ಆಶ್ರಯವನ್ನು ಮಾಡಿಸಿ, ತಮ್ಮ ವಠಾರದಲ್ಲಿಯೇ ಬಿಡತಿಯಾಗಿದ್ದ ಒಂದು ಮನೆಯನ್ನು ವಾಸಕ್ಕೆ ಬಿಡಿಸಿಕೊಟ್ಟರು. ಶಾಸ್ತ್ರಿಗಳು ಪತ್ನೀ ಪುತ್ರ ಸಹಿತವಾಗಿ ಮೈಸೂರಿನ ಹಳೇ ಅಗ್ರಹಾರದ ಈ ಮನೆಗೆ ಬಂದು ಸೇರಿದರು.

ಶಾಸ್ತ್ರಿಗಳ ಮನೆಯೇ ಪಾಠಶಾಲೆಯಾಯಿತು. ಸ್ಥಳ ಹಾಗೂ ಪರಸ್ಥಳದ ೧೦-೧೨ ಮಂದಿ ವಿದ್ಯಾರ್ಥಿಗಳು ಅಲ್ಲಿಗೆ ಸೇರಿದರು. ಒಂದು ವರ್ಷದ ಹೊತ್ತಿಗೆ ಸು. ೨೦ ಮಂದಿಯಾದರು, ಆಮೇಲೆ ಸಂಖ್ಯೆ ೩೦–೩೫ಕ್ಕೆ ಹೆಚ್ಚಿತು. ಕಾವ್ಯ, ಚಂಪೂ, ನಾಟಕಾಲಂಕಾರಗಳ ವ್ಯಾಸಂಗ ಇಲ್ಲಿ ನಡೆಯುತ್ತಿತ್ತು. ಹೀಗೆ ಶಾಸ್ತ್ರಿಗಳಲ್ಲಿ ಪಾಠ ಕಲಿತವರಲ್ಲಿ ಮೈಸೂರು ಸದ್ವಿದ್ಯಾಶಾಲೆಯ ಸ್ಥಾಪಕರೂ ಅಧ್ಯಕ್ಷರೂ ಆಗಿದ್ದ ಪೆರಿಯಸ್ವಾಮಿ ತಿರುಮಲಾಚಾರ್ಯರು, ಮಹದೇವಪುರದ ನರಸಿಂಹಶಾಸ್ತ್ರಿಗಳು, ನಾರಾಯಣ ಸೋಮಯಾಜಿಗಳು, ಕೂಡಲಿ ಸುಬ್ರಾಯಶಾಸ್ತ್ರಿಗಳು ಮೊದಲಾದವರು ಸೇರಿದ್ದಾರೆ.

ಬರುಬರುತ್ತ ಗರಳಪುರೀ ಶಾಸ್ತ್ರಿಗಳ ಕವಿತಾಶಕ್ತಿ, ಪಾಂಡಿತ್ಯ, ವಿದ್ಯಾದಾನದ ಉತ್ಸಾಹ ಮತ್ತು ಸಜ್ಜನಿಕೆಗಳು ಮುಮ್ಮಡಿ ಕೃಷ್ಣರಾಜರ ಕಿವಿಗೆ ಬಿದ್ದಿತು. ಅವರು ಭಕ್ಷಿ ನರಸಪ್ಪನವರ ಮೂಲಕ ಇವರನ್ನು ಕರಸಿಕೊಂಡು ಆಸ್ಥಾನ ವಿದ್ವನ್ಮಂಡಲದಲ್ಲಿ ಪ್ರಶಂಸೆಗೆ ಬಂದ ಇವರ ಪಾಂಡಿತ್ಯವನ್ನು ನೋಡಿ ಹರ್ಷಿಸಿದರು. ಆಗಾಗ ಅರಮನೆಗೆ ಬರುತ್ತಿರುವಂತೆ ಅಪ್ಪಣೆ ಮಾಡಿದರು. ಶಾಸ್ತ್ರಿಗಳು ಹಾಗೆಯೇ ಮಾಡುತ್ತಿದ್ದರು. ದೊರೆಗಳ ಆಸ್ಥಾನದಲ್ಲಿ ವಿದ್ಯೆಗೆ ದೊರೆಯುತ್ತಿದ್ದ ಪ್ರೋತ್ಸಾಹವನ್ನು ಗಮನಿಸಿ ಉತ್ಸಾಹಿತರಾಗಿ ಲಕ್ಷಣ–ಲಕ್ಷ್ಯಗಳಿಂದ ಕೂಡಿದ 'ಕೃಷ್ಣಭೂಪಾಲೀಯ' ಎಂಬ ಅಲಂಕಾರ ಶಾಸ್ತ್ರ ಕೃತಿಯೊಂದನ್ನು ರಚಿಸಿದರು. ಅದು ದೊರೆಗಳ ಲಕ್ಷ್ಯಕ್ಕೆ ಬಂದು, ಅವರು

ಪ್ರೋತ್ಸಾಹಕವಾಗಿ ಮೂವತ್ತು ಹಣ ಸಂಬಳವನ್ನು ಶಾಸ್ತ್ರಿಗಳಿಗೆ ಗೊತ್ತುಮಾಡಿದರು; ಆಸ್ಥಾನ ವಿದ್ವಾಂಸರ ಮಂಡಲದಲ್ಲಿ ಸೇರಿಸಿಕೊಂಡರು.

ಗರಳಪುರೀ ಶಾಸ್ತ್ರಿಗಳಿಗೆ ಅರಮನೆಯ ಸಂಬಂಧ ಹೆಚ್ಚಿದ ಮೇಲೆ, ಮಹಾರಾಜರ ಅಳಿಯಂದಿರಾದ ಲಿಂಗರಾಜೇ ಅರಸಿನವರು (೧೮೨೩-೭೪) ತಮಗಿದ್ದ ಕನ್ನಡ ಸಾಹಿತ್ಯದ ಪ್ರೌಢಿಮೆಯನ್ನು ಹೆಚ್ಚಿಸಿಕೊಳ್ಳಲು ಶಾಸ್ತ್ರಿಗಳಲ್ಲಿ ಸಂಸ್ಕೃತದ ಪ್ರೌಢ ವ್ಯಾಸಂಗ ಮಾಡಬೇಕೆಂದು ಅಪೇಕ್ಷಿಸಿದರು. ಶಾಸ್ತ್ರಿಗಳು ಒಪ್ಪಿಗೆ ನೀಡಿ, ಪ್ರತಿದಿನ ಸಂಜೆಯ ವೇಳೆ ಅವರ ಮನೆಗೆ ಹೋಗಿ ಅವರಿಗೆ ಒಂದೊಂದಾಗಿ ಸಂಸ್ಕೃತ ಚಂಪೂ ಕಾವ್ಯನನ್ನು ಪಾಠ ಹೇಳಿದರು. ಆಗ್ಗೆ ಅವರ ಆಶ್ರಯದಲ್ಲಿಯೇ ಇದ್ದ ಬಸಪ್ಪ ಶಾಸ್ತ್ರಿಗಳು (೧೮೪೩-೯೧) ('ಕರ್ಣಾಟಕ ಶಾಕುಂತಲ ನಾಟಕ' ಇತ್ಯಾದಿ ಕೃತಿಗಳ ಕರ್ತೃವಾದ ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳು) ಅವರ ಜೊತೆಯಲ್ಲಿಯೇ ಇದ್ದುಕೊಂಡು ಉತ್ತಮ ಕವಿಗಳೂ ವಿದ್ವಾಂಸರೂ ಆದರು. ಬಹು ಗ್ರಂಥಕರ್ತೃಗಳಾದ ಲಿಂಗರಾಜೇ ಅರಸಿನವರು ಶಾಸ್ತ್ರಿಗಳನ್ನು ಗೌರವದಿಂದ ನಡಸಿಕೊಂಡುದಲ್ಲದೆ ಅವರು ದ್ರವ್ಯಚಿಂತೆಯಿಲ್ಲದೆ ವಿದ್ಯಾದಾನದಲ್ಲಿ ನಿರತರಾಗಿರುವಂತೆ ನೋಡಿಕೊಂಡರು. ಲಿಂಗರಾಜರ ಕವಿತ್ವವನ್ನು ಪರಿಷ್ಕರಿಸುವಲ್ಲಿ ಗರಳಪುರೀ ಶಾಸ್ತ್ರಿಗಳೂ ಬಸವಪ್ಪ ಶಾಸ್ತ್ರಿಗಳೂ ಸಹಾಯವಾಗುತ್ತಿದ್ದರೆಂದು ತಿಳಿಯುತ್ತದೆ. ಅಲ್ಲದೆ ಗರಳಪುರೀ ಶಾಸ್ತ್ರಿಗಳಿಗೆ ಲಿಂಗರಾಜೇ ಅರಸಿನವರ ಸಾಹಚರ್ಯದಿಂದ ಹಳೆಯ, ಹೊಸ ಕನ್ನಡ ಭಾಷಾ ಸಾಹಿತ್ಯಗಳ ಪರಿಚಯವೂ ಪಾಂಡಿತ್ಯವೂ ಬೆಳೆಯುವುದಕ್ಕೆ ಅವಕಾಶವಾಯಿತು. ಹೀಗೆ ಅರಸರೊಂದಿಗೆ ಬೆಳೆದ ವಿಶ್ವಾಸದಿಂದ, ಶಾಸ್ತ್ರಿಗಳು, ವಾಸಕ್ಕೆ ಇದ್ದ ಮನೆ ಸಾಕಾಗದೆ, ಸ್ವಂತಕ್ಕೆ ದೊಡ್ಡಮನೆ ಮಾಡಿಕೊಳ್ಳಬೇಕೆಂಬ ಅಪೇಕ್ಷೆಯುಂಟಾಗಿ, ಸ್ವಾರಸ್ಯವಾದ ಒಂದು ಚಮತ್ಕಾರ ಕವಿತೆಯ ಮೂಲಕ ಅವರಿಗೆ ಅದನ್ನು ಶ್ರುತಪಡಿಸಿದರು. ಆ ಚಮತ್ಕಾರವನ್ನು ಗ್ರಹಿಸಿದ ಲಿಂಗರಾಜೇ ಅರಸಿನವರು "ಶಾಸ್ತ್ರಿಗಳೆ, ಈ ಕವಿತ್ವಕ್ಕೆ ಒಂದು ಮನೆಯನ್ನು ಕೊಡಿಸುವುದೆ? ದೇವರು ಕೊಟ್ಟಿದ್ದರೆ ಒಂದು ರಾಜ್ಯವನ್ನೇ ಕೊಡಿಸಬೇಕು" ಎಂಬುದಾಗಿ ತಿಳಿಸಿ ತಮ್ಮ ಮನೆವಾರ್ತೆಯವರಿಗೆ ಅಪ್ಪಣೆಮಾಡಿ ತಕ್ಕ ಸಹಾಯ ಸಂಪತ್ತಿಯನ್ನು ಕೊಡಿಸಿಕೊಟ್ಟರು; ಶಾಸ್ತ್ರಿಗಳು, ಕತ್ವಾಡಿಪುರ ಅಗ್ರಹಾರದಲ್ಲಿ ತಾವು ಕ್ರಯಕ್ಕೆ ಕೊಂಡಿದ್ದ ನಿವೇಶನದಲ್ಲಿ ತಮಗೆ ಬೇಕಾದ ಹಾಗೆ ಒಂದು ಮನೆಯನ್ನು ಕಟ್ಟಿಸಿಕೊಂಡರು.

ಹೀಗಿರುವಾಗ, ಮುಮ್ಮಡಿಯವರು ಮೈಸೂರಿನಲ್ಲಿ ಸಂಸ್ಕೃತ ವಿದ್ಯಾಭ್ಯಾಸದ ಸಲುವಾಗಿ ಸಂಜೀವರಾಜೇ ಅರಸಿನವರ ಲಾಯದಲ್ಲಿ ಭಕ್ಷಿ ನರಸಪ್ಪನವರ ಮುಖೇನ ಒಂದು ಪಾಠಶಾಲೆಯನ್ನು ಸ್ಥಾಪಿಸಿದರು (ಇದೇ ಬಹುಶಃ ಈಗಿನ ಸಂಸ್ಕೃತ ಮಹಾಪಾಠಶಾಲೆ). ಭಕ್ಷಿಯವರು ಇಲ್ಲಿ ನಾಟಕಾಲಂಕಾರ ಗ್ರಂಥಗಳ ಪಾಠಕ್ಕೆ ಗರಳಪುರಿಯವರನ್ನೇ ನೇಮಿಸಿದರು. ಈಗ ಶಾಸ್ತ್ರಿಗಳ ಖಾಸಗಿ ವಿದ್ಯಾರ್ಥಿಗಳೂ ಇಲ್ಲಿಯೇ ಕಲಿಯುವಂತಾಯಿತು.

ಮುಮ್ಮಡಿಯವರು ಚಾಮರಾಜೇಂದ್ರ ಒಡೆಯರವರನ್ನು ಪುತ್ರಸ್ವೀಕಾರ

ಮಾಡಿಕೊಂಡ ಮೇಲೆ ಅವರ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಶಾಸ್ತ್ರಿಗಳನ್ನೇ ನೇಮಿಸಿದರು. ಶಾಸ್ತ್ರಿಗಳು ಬೆಳಗಿನ ವೇಳೆ ಪಾಠಶಾಲೆಯ ಕೆಲಸವನ್ನು ನಿರ್ವಹಿಸಿ, ಮಧ್ಯಾಹ್ನಾತ್ಪರ ಈ ಚಿಕ್ಕ ಮಹಾರಾಜರ ಪಾಠಕ್ಕೆ, ಸಂಜೆಯ ವೇಳೆ ಲಿಂಗರಾಜೇ ಅರಸಿನವರ ಮನೆಗೆ ಹೋಗಿ ಬರುತ್ತಿದ್ದರು. ಬರುಬರುತ್ತ ಅವರು ಪ್ರೌಢವಿದ್ಯಾರ್ಥಿಗಳಿಗೆ ನಾಟಕಾಲಂಕಾರಾದಿ ಪ್ರೌಢಪಾಠಗಳನ್ನು ಹೇಳುತ್ತಿದ್ದರಲ್ಲದೆ ಯಾರಿಗೂ ಬಾಲ್ಯಪಾಠವನ್ನು ಹೇಳುತ್ತಿರಲಿಲ್ಲ. ತಮ್ಮ ಮಕ್ಕಳಿಗೆ ಸಹ ತಮ್ಮ ಶಿಷ್ಯರಿಂದಲೇ ಬಾಲ್ಯಪಾಠಗಳನ್ನು ಹೇಳಿಸುತ್ತಿದ್ದರು. ಶಾಸ್ತ್ರಿಗಳ ಪಾಠಕ್ರಮ ಸರಸವೂ ವಿನೋದಯುಕ್ತವೂ ಹೃದಯಂಗಮವೂ ಆಗಿದ್ದುದರಿಂದ ಎಲ್ಲ ವಿದ್ಯಾರ್ಥಿಗಳೂ ಅವರಲ್ಲಿ ಅಭ್ಯಾಸಮಾಡಲು ಕುತೂಹಲಿಗಳಾಗಿರುತ್ತಿದ್ದರು. ಖ್ಯಾತ ಗಾಯಕ ಮೂಗೂರು ಸುಬ್ಬಣ್ಣ ಯಾವ ಕೀರ್ತನೆ ಹಾಡಬೇಕಾದರೂ ಮೊದಲು ಇವರ ಬಳಿ ಸಾಹಿತ್ಯದ ಅರ್ಥ ತಿಳಿದುಕೊಂಡು ಬಳಿಕ ಹಾಡುತ್ತಿದ್ದರೆಂದು ವಾಸುದೇವಾಚಾರ್ಯರು ನೆನೆದಿದ್ದಾರೆ.

ಗರಳಪುರೀ ಶಾಸ್ತ್ರಿಗಳ ಸಾಹಿತ್ಯ ಸೇವೆಯ ಲಿಖಿತ ಸಾಕ್ಷ್ಯಗಳೂ ಗಮನಾರ್ಹವಾಗಿವೆ. ವಾಗ್ಭಟಕೃತ 'ಅಷ್ಟಾಂಗ ಹೃದಯ' ಎಂಬ ವೈದ್ಯಗ್ರಂಥವನ್ನು ಶಾಸ್ತ್ರಿಗಳು ಹುಲ್ಲಹಳ್ಳಿ ನಲ್ಲಾನ್ ಗೋಪಾಲಕೃಷ್ಣಾಚಾರ್ಯರೊಂದಿಗೆ ಪರಿಶೋಧಿಸಿದರು. ಅದನ್ನು ಆಗ ಅರಮನೆಯ ಕಂಟ್ರೋಲರ್ ಆಗಿದ್ದ ರಂಗಾಚಾರ್ಲು ಅವರು ಮೈಸೂರು ಸಂಸ್ಥಾನದ ಮುಖ್ಯ ಕಮೀಷನರ್ ಆಗಿದ್ದ ಬೌರಿಂಗ್ ಸಾಹೇಬರ ಅಪ್ಪಣೆ ಪಡೆದು ಅರಮನೆಯ ಶಿಲಾಯಂತ್ರ ಮುದ್ರಾಶಾಲೆಯಲ್ಲಿ (೧೨-೮-೧೮೭೯) ಅಚ್ಚುಹಾಕಿಸಿದರು. ಈ ಪರಿಶೋಧಿತ ಗ್ರಂಥವನ್ನು ಆಧಾರವಾಗಿಟ್ಟುಕೊಂಡೇ ತಮ್ಮ ಅಳಿಯಂದಿರಾದ ಕೆಂಪು ರಾಮಾಪಂಡಿತನಿಗೂ ಪುಟ್ಟಶ್ಯಾಮ ಪಂಡಿತರೆಂಬವರಿಗೂ ಶಾಸ್ತ್ರಿಗಳು ಪಾಠ ಮಾಡಿದರು. ಈ ಇಬ್ಬರೂ ಸ್ವಲ್ಪಕಾಲ ಸಂಸ್ಕೃತ ಕಾಲೇಜಿನಲ್ಲಿ ವೈದ್ಯಶಾಸ್ತ್ರದ ಉಪಾಧ್ಯಾಯರಾಗಿದ್ದರು; ಕೆಲವು ಕಾಲದ ಮೇಲೆ ಕೆಂಪು ರಾಮಾಪಂಡಿತರು (ಇವರು ಕೆಂಪುನಾರಾಯಣ ಕವಿಯ ಪ್ರಪೌತ್ರರು) ಆಯುರ್ವೇದ ಕಾಲೇಜಿನ ಅಧ್ಯಕ್ಷರಾದರು. ಶಾಸ್ತ್ರಿಗಳ ಇನ್ನೊಂದು ರಚನೆಯೆಂದರೆ, ಭೋಜರಾಜನ ಚಂಪೂರಾಮಾಯಣದ ಯುದ್ಧಕಾಂಡದ ಭಾಗವನ್ನು ಭೋಜರಾಜನ ಸರಣಿಗೆ ಅನುಸಾರವಾಗಿ ರಚಿಸಿ ಪೂರ್ಣಗೊಳಿಸಿದ್ದು. ವಿದ್ಯಾರ್ಥಿಗಳ ಕೋರಿಕೆಯಂತೆ ಶಾಸ್ತ್ರಿಗಳು ಈ ಕೆಲಸಕ್ಕೆ ತೊಡಗಿ, ಒಂದು ವರ್ಷದಲ್ಲಿ ಮುಗಿಸಿದರು; ಇದಕ್ಕೆ ಶಿಷ್ಯರಾದ ಪೆರಿಸ್ವಾಮಿ ತಿರುಮಲಾಚಾರ್ಯರು 'ಮಧುಮಂಜರಿ' ಎಂದ ವ್ಯಾಖ್ಯಾನವನ್ನು ಕೆಲಕಾಲದ ಮೇಲೆ ರಚಿಸಿ ಶಾಸ್ತ್ರಿಗಳಿಗೆ ತೋರಿಸಿದಾಗ, ಅವರು ಅದನ್ನು ತಿರುಮಲಾಚಾರ್ಯರಿಂದಲೇ ಓದಿಸಿ ಕೇಳಿ ಸಂತೋಷಪಟ್ಟರು. ಆ ಬಳಿಕ ಮೂಲದೊಂದಿಗೆ ವ್ಯಾಖ್ಯಾನವನ್ನು ಶಾಸ್ತ್ರಿಗಳ ಪುತ್ರರಾದ ಸೋಸಲೆ ಅಯ್ಯಾಶಾಸ್ತ್ರಿಗಳು ಮುದ್ರಣಪಡಿಸಿ ಪ್ರಚುರಪಡಿಸಿದರು. ಮುಮ್ಮಡಿಯವರು ಗತಿಸಿದ ಮೇಲೆ ಕತ್ವಾಡಿಪುರ ಅಗ್ರಹಾರದ ಮನೆಯಲ್ಲಿ ವಾಸಮಾಡುತ್ತಿದ್ದಾಗ, ಚಾಮರಾಜೇಂದ್ರ ಒಡೆಯರ ಸಂಸ್ಕೃತ ಪಾಠಕ್ಕೆ ಹೋಗಿ ಬರುವ ಮೂಲಕ ಕಂಟ್ರೋಲರ್ ರಂಗಾಚಾರ್ಲು ಅವರ ಅತಿಶಯ ವಿಶ್ವಾಸವನ್ನು ಗಳಿಸಿ, ಶಾಸ್ತ್ರಿಗಳು 'ಹರಿಹರಾಷ್ಟೋತ್ತರ'ವೆಂಬ ಒಂದು

ಗ್ರಂಥವನ್ನು ರಚಿಸಿದರು. ಇದು ಈಶ್ವರನ ಪರವಾಗಿ ಒಂದರ್ಥವನ್ನೂ ವಿಷ್ಣುವಿನ ಪರವಾಗಿ ಒಂದರ್ಥವನ್ನೂ ಉಳ್ಳುದು. ರಂಗಾಚಾರ್ಲು ಅವರು ಈ ಗ್ರಂಥವನ್ನೂ ಶಾಸ್ತ್ರಿಗಳ ಇತರ ಗ್ರಂಥಗಳನ್ನೂ ಮೆಚ್ಚಿಕೊಂಡು, ಅವರನ್ನು ಆಸ್ಥಾನ ಮಹಾ ವಿದ್ವಾಂಸರೆಂದು ಗಣ್ಯತೆಗೆ ತಂದರು.

ಮಹಾರಾಷ್ಟ್ರದ ಕಡೆ ಯಾವುದೋ ಸಂಸ್ಥಾನದ ಇಬ್ಬರು ಮಂತ್ರಿಗಳು ಮೈಸೂರು ಅರಮನೆಯ ಮಹಾವಿದ್ವಾಂಸರಿಗೆ ರಂಗಾಚಾರ್ಲು ಅವರ ಮೂಲಕವಾಗಿ ತಾವು ನಡಸಲಿದ್ದ ಭಾಗವತ ಸಪ್ತಾಹಕ್ಕೆ ಆಹ್ವಾನ ಕಳಿಸಿದ್ದರು. ಆಹ್ವಾನಪತ್ರಿಕೆ ಆರ್ಯಾವೃತ್ತಗಳ ರೂಪವಾಗಿತ್ತು. ಇದನ್ನು ರಂಗಾಚಾರ್ಲು ಅವರು ಪರಕಾಲ ಮಠದ ಸ್ವಾಮಿಗಳಿಗೆ ಕಳಿಸಿದರು. ಸ್ವಾಮಿಗಳು ಆಸ್ಥಾನ ವಿದ್ವಾಂಸರನ್ನು ಬರಮಾಡಿ ಕೊಂಡು, ವಿಷಯವನ್ನು ಶ್ರುತಪಡಿಸಿದರು. ತತ್ಕಾಲಕ್ಕೆ ದೇಶಾಂತರ ಹೊರಡಲು ಮೈಸೂರು ವಿದ್ವಾಂಸರಿಗೆ ಶಕ್ಯವಿಲ್ಲವೆಂಬ ವಾರ್ತೆಯನ್ನು ತಿಳಿಸುವ ಉತ್ತರಪತ್ರಿಕೆ ಯನ್ನು ವಿಸ್ತಾರವಾಗಿ ಸಿದ್ಧಪಡಿಸಿದವರು ಗರಳಪುರೀ ಶಾಸ್ತ್ರಿಗಳು. ಶಿಷ್ಯರಾದ ಹೆರೀ ಸ್ವಾಮಿ ತಿರುಮಲಾಚಾರ್ಯರು ಮಾಡಿಕೊಂಡ ಪ್ರಾರ್ಥನೆಯಂತೆ 'ನೀಲಕಂಠ ವಿಜಯ'ಕ್ಕೆ ವ್ಯಾಖ್ಯಾನ ಬರೆಯಲು ಶಾಸ್ತ್ರಿಗಳು ಆರಂಭಿಸಿದ್ದರಾದರೂ, ಶಾಸ್ತ್ರಿಗಳು ತೀರಿಹೋದುದರಿಂದ ಪ್ರಥಮಾಶ್ವಾಸದ ಅರ್ಧಭಾಗಕ್ಕೇ ಅದು ನಿಂತುಹೋಯಿತು.

ಅಳಿಯ ಲಿಂಗರಾಜೇ ಅರಸಿನವರು ಕಾಲಧರ್ಮವನ್ನು ಹೊಂದಿದ ಮೇಲೆ ಶಾಸ್ತ್ರಿಗಳು ಅನ್ಯ ಆಶ್ರಯವನ್ನು ಇಷ್ಟಪಡದೆ ತಮ್ಮ ಪಾಡಿಗೆ ವಿದ್ಯಾರ್ಥಿಗಳ ಪಾಠ ಪ್ರವಚನದಲ್ಲಿಯೂ ಬಂಧುಮಿತ್ರರೊಡಗೂಡಿ ಆಶುಕವಿತ್ವರಚನೆ ಸತ್ಕಥಾ ಕಾಲ ಕ್ಷೇಪಗಳಲ್ಲಿ ಇರುತ್ತಿದ್ದರು. ಅವರ ಆಪ್ತೇಷ್ಟರ ಪರಿವಾರ ವಿಸ್ತಾರವಾದುದಾಗಿತ್ತು. ಮುಂದೆ ಆಸ್ಥಾನ ಮಹಾವಿದ್ವಾಂಸರಾಗಿ, 'ಕವಿತಿಲಕ' ಬಿರುದು ಪಡೆದ ಸೋಸಲೆ ಅಯ್ಯಾಶಾಸ್ತ್ರಿಗಳ ಎರಡನೆಯ ಮಗ. ಅವರಿಗೆ ಆಸ್ಥಾನ ಧರ್ಮಾಧಿಕಾರಿಗಳಾಗಿದ್ದ ಪ್ರಖ್ಯಾತ ವ್ಯಾಕರಣ ಪಂಡಿತ ಚಾಮರಾಜನಗರದ ಶ್ರೀಕಂಠಶಾಸ್ತ್ರಿಗಳ ಮಗಳನ್ನು ಕೊಟ್ಟು ಮದುವೆಯಾಗಿತ್ತು. ಶ್ರೀಕಂಠಶಾಸ್ತ್ರಿಗಳ ತಮ್ಮಂದಿರು ಆಸ್ಥಾನ ಮಹಾ ವಿದ್ವಾಂಸರೂ ಮಹಾರಾಜ ಸಂಸ್ಕೃತ ಕಾಲೇಜು ಪಂಡಿತರೂ ಆಗಿದ್ದ ಚಾಮರಾಜ ನಗರದ ರಾಮಶಾಸ್ತ್ರಿಗಳು (ಇವರು 'ಸೀತಾರಾವಣ ಸಂವಾದ ಝರೀ' ಎಂಬ ಚಮತ್ಕಾರ ಕಾವ್ಯದ ಕರ್ತೃಗಳು). ಈ ಇಬ್ಬರೊಂದಿಗೆ ಶಾಸ್ತ್ರಿಗಳು ಆಗಾಗ್ಗೆ ಶಾಸ್ತ್ರಾರ್ಥವಿಚಾರ ಮಾಡುತ್ತಲೂ ಆಶುಕವಿತೆಗಳನ್ನು ರಚಿಸುತ್ತಲೂ ಇರುವುದು ಸಾಮಾನ್ಯವಾಗಿತ್ತು. ರಾಮಶಾಸ್ತ್ರಿಗಳೂ ಗರಳಪುರೀ ಶಾಸ್ತ್ರಿಗಳೂ ಅಹಮಹಮಿಕೆ ಯಿಂದ ರಚಿಸಿದ್ದ ಶ್ಲೇಷ ಯಮಕ ಚಮತ್ಕಾರದ ಗತಚಿತ್ರ ಪ್ರಶ್ನೋತ್ತರಗಳ ಕೆಲವು ಪದ್ಯಗಳು ಈಗ ದೊರೆತಿವೆ. ಗರಳಪುರೀ ಶಾಸ್ತ್ರಿಗಳ ಮೊಮ್ಮಗ ಎಸ್. ಜಿ. ಶಾಸ್ತ್ರಿಗಳು (ಇವರು ಎಂ. ಎಸ್‌ಸಿ., ಪದವೀಧರರಾಗಿ, ಮೈಸೂರು ಸರ್ಕಾರದ ಸಾಬೂನು ಕಾರ ಖಾನೆಯ ವ್ಯವಸ್ಥಾಪಕರಾಗಿ ಕೆಲಸ ಮಾಡಿದರು ; 'ಆರ್ಯಕ', 'ಮೊನ್ನ ವನ್ನ', 'ಸಾಕ್ರೆಟೀಸನ ಮರಣ' ಮೊದಲಾದ ಪಾಶ್ಚಾತ್ಯ ನಾಟಕಗಳ ಕನ್ನಡ ಅನುವಾದಕ ರಾಗಿ ಪ್ರಸಿದ್ಧರು). ತಮ್ಮ ತಂದೆ ಅಯ್ಯಾಶಾಸ್ತ್ರಿಗಳು ಬಸವಪ್ಪಶಾಸ್ತ್ರಿಗಳಲ್ಲಿ ಕನ್ನಡ

ಕಲಿತು ಕವಿತ್ವಕ್ಕೆ ಆರಂಭ ಮಾಡಿದ್ದು ತಮ್ಮ ತಾತನವರ ಸೂಚನೆಯಂತೆ ಎಂದೂ ಕನಿಷ್ಠಪಕ್ಷ ಹತ್ತು ಸಾವಿರ ಶ್ಲೋಕಗಳನ್ನು ಕಂಠಪಾಠ ಮಾಡಿಯೇ ಕವಿತ್ವಕ್ಕೆ ತೊಡಗಬೇಕೆಂದು ಅವರು ಮಗನಿಗೆ ಬುದ್ಧಿವಾದ ಹೇಳುತ್ತಿದ್ದರೆಂದೂ ಒಂದು ಸಂದರ್ಭದಲ್ಲಿ ಜ್ಞಾಪಕ ಮಾಡಿಕೊಂಡಿದ್ದಾರೆ (ಬಸವಪ್ಪಶಾಸ್ತ್ರಿಗಳ ಶತಮಾನೋತ್ಸವ ದಲ್ಲಿ ಮಾಡಿದ ಭಾಷಣ).

ಗರಳಪುರೀ ಶಾಸ್ತ್ರಿಗಳಲ್ಲಿ ಪಾಂಡಿತ್ಯ ನಿರಹಂಕಾರತೆಗಳು ಮೈಗೂಡಿದ್ದುವು. ಅನ್ಯ ವಿದ್ವಾಂಸರಲ್ಲಿ ಗೌರವ, ವಿದ್ಯಾರ್ಥಿಗಳಲ್ಲಿ ಪ್ರೀತಿ ಎಂಬುದು ಸಾಮಾನ್ಯ ವಾಗಿತ್ತು. ಸ್ವಭಾವತಃ ಅಜಾತಶತ್ರುಗಳಾಗಿದ್ದರು ; ದ್ರವ್ಯಸಂಪಾದನೆಯ ವಿಷಯ ದಲ್ಲಿ ಅಲ್ಪತೃಪ್ತರಾಗಿ ಸಂತೋಷದಿಂದಿರುತ್ತಿದ್ದರು. ನಿತ್ಯನೈಮಿತ್ತಿಕ ಕರ್ಮಗಳಿಗೆ ಬೇಕಾಗುವಷ್ಟು ಸಾಮವೇದವನ್ನು ಅಧ್ಯಯನ ಮಾಡಿ ಜೀವಿತದ ಬಹುಭಾಗವನ್ನು ಸಾಹಿತ್ಯ ವ್ಯಾಸಂಗದಲ್ಲಿ ತೊಡಗಿದ್ದರು. ವೇದಾಂತ, ವೈದ್ಯ ಹಾಗೂ ಜ್ಯೋತಿಷ್ಯ ದಲ್ಲಿಯೂ ಅವರಿಗೆ ಸಾಕಷ್ಟು ಪರಿಚಯವಿತ್ತು. ಅವರಿಗೆ ಚದುರಂಗದಾಟದಲ್ಲಿ ಪ್ರವೇಶವಿತ್ತೆಂದೂ ಸಂಗೀತದಲ್ಲಿ ಪರಿಶ್ರಮವಿತ್ತೆಂದೂ ಹೇಳಲಾಗಿದೆ. ಮನಸ್ಸಿಗೆ ಬೇಸರವಾದಾಗ, ವಿರಾಮ ದೊರೆತಾಗ, ಮಿತ್ರರೊಂದಿಗೆ ಚದುರಂಗದಲ್ಲಿ ವಿನೋದ ದಿಂದ ಹೊತ್ತು ಕಳೆಯುತ್ತಿದ್ದರಂತೆ. ಪ್ರತಿದಿನದ ರಾಮಾಯಣ ಪಾರಾಯಣವನ್ನು ವಿಶೇಷ ಸಂದರ್ಭಗಳ ಶ್ಲೋಕಪಠನವನ್ನು ರಾಗರಚನೆಯಿಂದ ಮಾಡುತ್ತಿದ್ದರಂತೆ.

ಒಳ್ಳೆಯ ಜ್ಞಾಪಕಶಕ್ತಿಯಿದ್ದ ಶಾಸ್ತ್ರಿಗಳು ಗುರುಮುಖದಿಂದ ಮಾಡಿದ ವ್ಯಾಸಂಗವೆಲ್ಲ ವಾಚೋವಿಧೇಯವಾಗಿತ್ತು. ಒಮ್ಮೆ ಪಾಠ ಮಾಡಿದ ಪಠ್ಯವನ್ನು ಮತ್ತೆ ಕೈಯ್ಯಲ್ಲಿ ಹಿಡಿಯಬೇಕಾಗಿರಲಿಲ್ಲ ; ನೆನಪಿನಿಂದ ಪಾಠ ಮಾಡುವ ಸಾಮರ್ಥ್ಯ ವಿತ್ತು. ಅವರು ರಚಿಸಿದ ಬಹುಸಂಖ್ಯೆಯ ಬಿಡಿ ಪದ್ಯಗಳೂ ಚೂರ್ಣಿಕೆಗಳೂ ಮುಖ್ಯಸ್ಥವಾಗಿದ್ದು ಅವರೊಂದಿಗೇ ನಷ್ಟವಾಗಿಹೋದವು. ಪ್ರಾಚೀನ ಕಾವ್ಯಗಳನ್ನು ಪಾಠ ಮಾಡುವಾಗ ಪ್ರತ್ಯಂತರಗಳ ತಪ್ಪು ಪಾಠಗಳನ್ನು ಕವಿಹೃದಯದಿಂದ ತಿದ್ದ ಬಲ್ಲವರಾಗಿದ್ದವರು, ವ್ಯಾಖ್ಯಾನವಿಟ್ಟುಕೊಂಡು ಮೂಲಶ್ಲೋಕಗಳನ್ನು ಪುನರ್‌ರಚಿಸ ಬಲ್ಲವರಾಗಿದ್ದರು–ಎನ್ನುವುದಕ್ಕೆ ನಿದರ್ಶನಗಳು ದಾಖಲಾಗಿವೆ.

ಶಾಸ್ತ್ರಿಗಳು ನೀಲಕಂಠವಿಜಯದ ವ್ಯಾಖ್ಯಾನವನ್ನು ರಚಿಸುತ್ತಿದ್ದ ಅವಸರದಲ್ಲಿ, ವಿಧಿಯೋಗದಿಂದ ಎಡಕಪಾಲದಲ್ಲಿ ಒಂದು ಬೊಕ್ಕೆಯೆದ್ದು, ಎಂತಹ ಚಿಕಿತ್ಸೆಗೂ ಅದು ಜಗ್ಗದೆ, ಅವರ ಸಾವಿಗೆ ಅದೇ ಕಾರಣವಾಯಿತು. ನೋವು ಅನುಭವಿಸು ವಾಗಲೂ ಅವರು ವೇಣೀಸಂಹಾರವನ್ನೋ ಭಗವದ್ಗೀತೆಯನ್ನೋ ಶಿಷ್ಯರಿಂದ ಓದಿಸುತ್ತ ಹರ್ಷಚಿತ್ತರಾಗಿಯೇ ಇರುತ್ತಿದ್ದರಂತೆ. ಆ ಸಂದರ್ಭದ ನಿರೂಪಣೆ ಹೀಗಿದೆ : "ಈಶ್ವರ ಸಂವತ್ಸರದ ಚೈತ್ರ ಬಹುಳ ದಶಮಿಯ ಪ್ರಾತಃಕಾಲದಲ್ಲಿ ತಮ್ಮ ಅವಸಾನವನ್ನು ತಾವೇ ತಿಳಿದು ಪತ್ನೀಪುತ್ರರನ್ನೂ ಪ್ರಮುಖರಾದ ಕೆಲವು ಮಂದಿ ಶಿಷ್ಯರನ್ನೂ ಕರೆದು ಸಮೀಪದಲ್ಲಿ ಕುಳ್ಳಿರಿಸಿಕೊಂಡು, ತಕ್ಕ ಬುದ್ಧಿವಾದಗಳನ್ನು ಹೇಳಿ, ಈ ದಿನ ನನಗೆ ಪಂಚಗವ್ಯ ಪ್ರಾಯಶ್ಚಿತ್ತವನ್ನು ಮಾಡಿಸಿರಿ ಎಂದು ಹೇಳಿ,

ಸ್ನಾನ ಮಾಡಿ ಮಡಿಯುಟ್ಟು ವಿಭೂತಿಧಾರಣೆ ಮಾಡಿ ಮಣೆಯ ಮೇಲೆ ಕುಳ್ಳಿರ್ದು, ಪುರೋಹಿತರನ್ನು ಸಮೀಪದಲ್ಲಿ ಕುಳ್ಳಿರಿಸಿಕೊಂಡು ಯಥೋಕ್ತವಾಗಿ ಪಂಚಗವ್ಯ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಗೋದಾನಾದಿ ಅನೇಕ ದಾನಗಳನ್ನು ಮಾಡಿ, ಇನ್ನು ನಾನು ಮಡಿಯಿಂದಲೇ ಇರತಕ್ಕವನೆಂದು ಹೇಳಿ ದರ್ಭೆಯನ್ನು ಹಾಸಿ ಮೇಲೆ ಹಾಕಿದ ಮಂದಲಿಗೆಯ ಮೇಲೆ ಮಡಿಯಾದ ವಸ್ತ್ರಗಳನ್ನೇ ಉಪಯೋಗಿಸಿಕೊಂಡು ಆಮೇಲೆ ತಮ್ಮನ್ನು ನೋಡುವುದಕ್ಕೆ ಬಂದ ಅನೇಕರು ದೊಡ್ಡ ಮನುಷ್ಯರ ಸಂಗಡ ನಾಳೇ ದಿನ ನಾನು ಹೋಗಿಬರುತ್ತೇನೆಯೆಂದು ಆ ದಿನವೆಲ್ಲಾ ಹೇಳುತ್ತಿದ್ದು ಮರು ದಿನ ಪ್ರಾತಃಕಾಲದಲ್ಲಿ ತಮ್ಮ ಎರಡನೆಯ ಮಗನನ್ನು ಕರೆದು ದೇವತಾರ್ಚನೆ ಮಾಡೆಂದು ಹೇಳಿ ದೇವತಾರ್ಚನೆ ಮಾಡಿಸಿ ದೇವರ ತೀರ್ಥವನ್ನು ತರಿಸಿಕೊಂಡು ಸ್ವೀಕರಿಸಿ ಅಷ್ಟು ಹೊತ್ತಿಗೆ ಮಾತಾಡುವ ಶಕ್ತಿ ಹೋಗಿಬಿಟ್ಟುದರಿಂದ ಕಯ್ಯಿಂದ ಬಲದ ಕಿವಿಯನ್ನು ಮೆಲ್ಲಗೆ ತೋರಿಸಿದರು. ಆ ಸಂಜ್ಞೆಯನ್ನು ತಿಳಿದು ಆ ಎರಡ ನೆಯ ಮಗನು ಬೇಗ ದೇವರ ಪ್ರಸಾದವಾದ ತುಳಸಿಯ ದಳವನ್ನು ಅವರ ಕಿವಿಗೆ ಸೆಕ್ಕಿದನು. ಆ ಒಡನೆ ೨-೩ ನಿಮಿಷಗಳಲ್ಲೇ ಶಾಸ್ತ್ರಿಗಳು ಶ್ರೀ ವೆಂಕಟಾಚಲಪತಿಯ ಪಾದಾರವಿಂದದಲ್ಲಿ ಭ್ರಮರವಾಗಿ ಸೇರಿಬಿಟ್ಟರು."

ಗರಳಪುರೀ ಶಾಸ್ತ್ರಿಗಳ ಬದುಕಿನ ಒಂದೆರಡು ಪ್ರಸಂಗಗಳು:

೧) ಆಸ್ಥಾನದ ವ್ಯಾಕರಣ ನರಸಿಂಹಶಾಸ್ತ್ರಿಗಳು ಒಮ್ಮೆ ಮುಮ್ಮಡಿಯವರ ವಿಷಯವಾಗಿ ಒಂದು ಅಪರಿಚಿತ ವರ್ಣಸಮವೃತ್ತವನ್ನು ರಚಿಸಿ ದೊರೆಗಳಿದುರು ಶ್ರುತಪಡಿಸಿದರು. ಅದು ಪ್ರಸಿದ್ಧವೃತ್ತವಲ್ಲ, ಯಾವುದೇ ಛಂದಸ್ಸಿಗೆ ಸೇರಿಲ್ಲ ಎಂದು ಕವಿ ವರದಾಚಾರ್ಯರು ಅದನ್ನು ಆಕ್ಷೇಪಿಸಿದರು. ಆಗ ಅರಸರು ಗರಳಪುರೀ ಶಾಸ್ತ್ರಿಗಳಲ್ಲಿ ಅದಕ್ಕೆ ಸಮಾಧಾನವನ್ನು ಪ್ರಶ್ನಿಸಿದರು. ಶಾಸ್ತ್ರಿಗಳು ಅದು ಯಾವ ಛಂದೋ ವರ್ಗದ ಎಷ್ಟನೆಯ ವೃತ್ತವಾಗಿದೆ ಎಂದು ಪ್ರಸ್ತಾಪಿಸಿ ತಿಳಿದು, ಒಂದು ಪತ್ರಿಕೆಯಲ್ಲಿ ಅದನ್ನು ಬರೆದು ದೊರೆಗಳಿಗೆ ಒಪ್ಪಿಸಿದರು. ಪಂಡಿತರು ಅದನ್ನು ಒಪ್ಪಿಕೊಂಡರು. ಆಗ ವ್ಯಾಕರಣದ ನರಸಿಂಹಶಾಸ್ತ್ರಿಗಳು:

> ನೃಸಿಂಹಾಖ್ಯೇ ಗಂಡಶೈಲೇ ವರದಾಖ್ಯೋ ಮಹಾಮಣಿಃ
> ನಿಪತ್ಯ ಖಲು ತತ್ರೈವ ವ್ಯಶೀರ್ಯತ ಸಹಸ್ರಧಾ ॥

ಎಂದು (ವರದಾಚಾರ್ಯರೆಂಬ ಒಂದು ದೊಡ್ಡ ರತ್ನವು ನರಸಿಂಹ ಶಾಸ್ತ್ರಿಗಳೆಂಬ ಕಲ್ಲು ಬಂಡೆಯ ಮೇಲೆ ಬಿದ್ದು ಚೂರು ಚೂರಾಗಿ ಒಡೆದು ಹೋಯಿತು.) ಶ್ಲೋಕ ರಚಿಸಿ ಎದ್ದು ಜಯಘೋಷ ಮಾಡುವಂತೆ ತಿಳಿಸಿದರಂತೆ! ಆಗ ಮಹಾರಾಜರು ಸಮ ಬುದ್ಧಿಯಿಂದ "ಪ್ರಸಿದ್ಧವಲ್ಲದ ಯಾವುದೋ ಒಂದು ವೃತ್ತಭೇದದಲ್ಲಿ ರಚಿಸಿದ ಶ್ಲೋಕವನ್ನು ವಿಚಾರ ಮಾಡುವುದಕ್ಕಾಗಿ ವರದಾಚಾರ್ಯರು ಆಕ್ಷೇಪಿಸಿದುದೂ ಸರಿಯೇ. ಆ ಶ್ಲೋಕವು ಸರಿಯಾದ ವೃತ್ತಭೇದಕ್ಕೆ ಸೇರಿದುದೆಂದು ಗರಳಪುರೀ ಶಾಸ್ತ್ರಿಗಳು ಶೋಧಿಸಿ ತಿಳಿದು ಹೇಳಿದುದೂ ಸರಿಯೇ. ತಾವು ರಚಿಸಿದ ಶ್ಲೋಕವು ಸರಿಯಾದುದೆಂದು ಸಮಾಧಾನ ಬಂತಲ್ಲಾ ಎಂದು ಸಂತೋಷದಿಂದ ನರಸಿಂಹ ಶಾಸ್ತ್ರಿ

ಗಳು ಶ್ಲೋಕಮಾಡಿ ಹೇಳಿದುದೂ ಸರಿಯೇ"-ಎಂದು ಹೇಳಿ ಮೂವರಿಗೂ ಶಾಲು ಜೋಡಿಗಳನ್ನು ಬಹುಮಾನ ಮಾಡಿ ಸಂತೋಷಪಡಿಸಿದರಂತೆ.

೨) ಶಾಸ್ತ್ರಿಗಳು ಹಳೇ ಅಗ್ರಹಾರದ ವೀಣೆ ವೆಂಕಟಸುಬ್ಬಯ್ಯನವರ ಬಂಗಲೆ ಮಠಾರದ ಒಂದು ಮನೆಯಲ್ಲಿದ್ದಾಗ ಸಂಜೆ ಹೊರಗೆ ಹೋಗಿದ್ದವರು ತಮ್ಮ ರೂಢಿಯಂತೆ ರಾತ್ರಿ ಒಂಬತ್ತೂವರೆ ಗಂಟೆಗೆ ಮನೆಗೆ ಹಿಂದಿರುಗಿದರು. ತಲೆಬಾಗಿಲು ಹಾಕಿತ್ತು. 'ಬಾಗಿಲೂ' ಎಂದು ಗಟ್ಟಿಯಾಗಿ ಕೂಗಿದರು. ಮಠಾರದ ಇನ್ನೊಂದು ಭಾಗದಲ್ಲಿದ್ದ ಕಾನಕಾನಹಳ್ಳಿ ಸುಬ್ರಹ್ಮಣ್ಯಾಚಾರ್ಯರು ತಮ್ಮ ಮನೆಗೆ ಹಸುಗಳನ್ನು ಕರೆಯಲು ಬರುವ ಆಳು ಜವರನ ಹೆಸರು ಹೇಳಿ ಶಾಸ್ತ್ರಿಗಳನ್ನು ಕೊಂಚ ತಮಾಷೆ ಮಾಡೋಣ ಎಂದು ಯೋಚಿಸಿ, ಕೂಡಲೇ "ಯಾರೋ ? ಜವರನೇನೋ ?" ಎಂದು ತಾವೂ ಗಟ್ಟಿಯಾಗಿ ಪ್ರಶ್ನಿಸಿದರು. ತಕ್ಷಣವೇ ಶಾಸ್ತ್ರಿಗಳು "ಅಲ್ಲ ಕಣೋ ! ದ್ವಿಜವರ" ಎಂದು ತಕ್ಷಣ ಉತ್ತರ ಕೊಟ್ಟರಂತೆ !

೩) ಶಾಸ್ತ್ರಿಗಳ ಎರಡನೆಯ ಮಗ, ಹುಡುಗನಾದ ಅಯ್ಯಾಶಾಸ್ತ್ರಿಗಳು ಮನೆಯ ಹತ್ತಿರದ ನರಸೇ ಅರಸಿನವರ ತೋಟಕ್ಕೆ ಅಕ್ಷತೆಗಾಗಿ ಬಾಳೆಯ ಹೂವಿನಕರಿ ತರುವುದಕ್ಕೆ ಹೋಗಿದ್ದು, ಕರಿಯನ್ನು ಸಂಗ್ರಹಿಸಿಕೊಂಡು ಬಂದರು. ಶಾಸ್ತ್ರಿಗಳು ಮಗನನ್ನು "ಎಲ್ಲಿಗೆ ಹೋಗಿದ್ದೆಯೋ ?!" ಎಂದು ಪ್ರಶ್ನಿಸಿದರು. ಮಗ "ಕರಿ ತರುವುದಕ್ಕೆ" ಎಂದ. ವಿನೋದಕ್ಕೆ ಶಾಸ್ತ್ರಿಗಳು "ಅದನ್ನು ಎಲ್ಲಿ ಕಟ್ಟಿಹಾಕುತ್ತೀಯೆ ?" ಎಂದರು. ಮಗ "ಬಿಸಿಲಲ್ಲಿ ಕಟ್ಟಿಹಾಕುತ್ತೇನೆ" ಎಂದ. ಶಾಸ್ತ್ರಿಗಳು "ಬಿಸಿಲಲ್ಲಿ ಕಟ್ಟಿಹಾಕುವುದುಂಟೇ ?" ಎಂದು ಮತ್ತೆ ಪ್ರಶ್ನಿಸಿದರು. ಮಗ "ಹಾಗಾದರೆ, ನೆರಳಲ್ಲೇ ಎಲ್ಲಾದರೂ ಕಟ್ಟಿಹಾಕುತ್ತೇನೆ" ಎಂದ. ಶಾಸ್ತ್ರಿಗಳು ನಗುತ್ತ "ಅದನ್ನು ಹೇಗೆ ಸಂರಕ್ಷಣೆ ಮಾಡುತ್ತೀಯೆ ?" ಎಂದು ತಿರುಗಿ ಕೇಳಿದರು. ಆಗ ಅಯ್ಯಾಶಾಸ್ತ್ರಿಗಳಿಗೆ "ಕುಂಜರೋ ವಾರಣಃ ಕರೀ" ಎಂಬ ನಿಘಂಟುವಿನ ಶ್ಲೋಕಭಾಗ ನೆನಪಿಗೆ ಬಂದು, ಅವರು ತಂದೆಗೆ, "ನಾನು ತಂದುದನ್ನು ಹೇಗಾದರೂ ಮಾಡಿ ಸಂರಕ್ಷಣೆ ಮಾಡೇ ಮಾಡುತ್ತೇನೆ"–ಎಂದರಂತೆ.

೪) ಗರಳಪುರೀ ಶಾಸ್ತ್ರಿಗಳು ಮೈಸೂರಿಗೆ ಬರುವ ಮೊದಲು ಇನ್ನೂ ಸೋಸಲೆಯಲ್ಲೇ ಇರುತ್ತಿದ್ದ ದಿನಗಳ ಒಂದು ಘಟನೆಯಿದು : ಅಲ್ಲಿಯ ಮಠಕ್ಕೆ ಒಬ್ಬ ಪಂಡಿತರು ಒಂದು ಸಲ ಬಂದು ಸ್ವಾಮಿಗಳ ಎದುರಿನಲ್ಲಿ ತಮ್ಮ ಕವಿತ್ವವನ್ನು ಶ್ರುತಪಡಿಸಿದರು. ಅದು ಸಾಮಾನ್ಯವಾದ ರಚನೆ ಶಾಸ್ತ್ರಿಗಳೂ ಅವರ ಗುರುಗಳೂ ಇತರ ಪಂಡಿತರೂ ದಾಕ್ಷಿಣ್ಯದಿಂದ ಸುಮ್ಮನಿದ್ದುಬಿಟ್ಟರು ಸ್ವಾಮಿಗಳಿಗೆ ಸುಳಿವು ಸಿಕ್ಕಿತಾದರೂ ವಿದ್ವತ್ಪಕ್ಷಪಾತದಿಂದ ಆ ಪಂಡಿತರಿಗೆ ಮರ್ಯಾದೆ ಮಾಡಿ ಕಳಿಸಿಕೊಟ್ಟರು. ಆದರೆ ಶಾಸ್ತ್ರಿಗಳಿಗೆ ದುಃಖವೂ ಬೇಸರವೂ ಇದ್ದುದರಿಂದ ರಾತ್ರಿ ನಿದ್ದೆ ಸರಿಯಾಗಿ ಬರಲಿಲ್ಲ. ಬೆಳಗ್ಗೆ ಹೊಳೆಗೆ ಹೋಗಿ ಬರುವಾಗ ಹೊಳೆಗೂ ಮಠಕ್ಕೂ ನಡುವೆ ಇರುವ ಕಲ್ಲುಮಂಟಪದ ಗೋಡೆಯ ಮೇಲೆ ದೇವನಾಗರೀ ಲಿಪಿಯಲ್ಲಿ ಹೀಗೆ ಬರೆದರಂತೆ :

ಅನಾಘ್ರಾತವ್ಯಂಗ್ಯೈರಪರಿಚಿತ ಶಬ್ದಾರ್ಥರಚನೈ ।
ರಬುದ್ಧಾಲಂಕಾರೈರನವಗತ ಭಾವೋಜ್ವಲರಸೈಃ ॥
ಯಶೋಮಾತ್ರಾಂ ಕೂರನ್ನ-ನವದುನಾಶ್ಯೈಃ ಕುಕವಿಭಿ
ರ್ದುರರ್ಥೈರ್ವ್ಯಾಕೃಷ್ಟಾ ಭಗವತಿ ವಿಪನ್ನಾಸಿ ಕವಿತೇ ॥

ನದಿಗೆ ಸ್ನಾನಕ್ಕೆ ತೆರಳಿದ ಸ್ವಾಮಿಗಳು ಸ್ನಾನಾನಂತರ ಜಪಕ್ಕೆಂದು ಅದೇ ಮಂಟಪದಲ್ಲಿ ಕುಳಿತಾಗ ಇದು ಅವರ ಕಣ್ಣಿಗೆ ಬಿದ್ದಿತು. ಆ ಕವಿತ್ವದ ಕರ್ತೃ ಯಾರೆಂಬ ಸಂದೇಹ ಹುಟ್ಟಿತು. ಯಾರೋ ಪ್ರಾಚೀನ ಕವಿ ಇರಬೇಕು ಎನಿಸಿತು. ಬಳಿಕ ಶಾಸ್ತ್ರಿಗಳ ಸಹಪಾಠಿಗಳು ಅದು ಶಾಸ್ತ್ರಿಗಳೇ ಮಾಡಿರಬಹುದು ಎಂದು ಸ್ವಾಮಿಗಳಿಗೆ ತಿಳಿಸಿದರು. ಸ್ವಾಮಿಗಳೂ ತಮ್ಮ ನ್ಯಾಯಾಚಾರ್ಯರೂ ಶಾಸ್ತ್ರಿಗಳನ್ನು ಬರಮಾಡಿಕೊಂಡು ನಯವಾಗಿ ಪ್ರಶ್ನಿಸಿದಾಗ, ಗುರು ಸನ್ನಿಧಿಯಲ್ಲಿ ಅನೃತವನಾಡಬಾರದು ಎಂದು, ತಾವೇ ಮಾಡಿದ ಕವಿತ್ವವೆಂದು ಅರಿಕೆ ಮಾಡಿದರು. ಸ್ವಾಮಿಗಳು ಶಾಸ್ತ್ರಿಗಳನ್ನು ಮನಸಾರೆ ಹರಸಿದರಂತೆ!

[ಸೋಸಲೆ ಗರಳಪುರೀ ಶಾಸ್ತ್ರಿಗಳ ವಿಚಾರವಾಗಿ ಹೆಚ್ಚು ತಿಳಿಯಬಯಸುವವರು ಈ ಪುಸ್ತಕವನ್ನು ನೋಡಬಹುದು: ಸಿ. ವೆಂಕಟರಮಣಶಾಸ್ತ್ರೀ, 'ಸೋಸಲೆಗರಳಪುರೀ ಶಾಸ್ತ್ರಿಗಳ ಚರಿತ್ರೆ', ಕಾದಂಬರೀ ಸಂಗ್ರಹ ಗ್ರಂಥಮಾಲಾ, ಸಂಖ್ಯೆ ೪೩, ಮೈಸೂರು ೧೯೧೯.] *

---

* ಅಖಿಲಕರ್ಣಾಟಕ ಸಂಸ್ಕೃತ ಪರಿಷತ್, ಬೆಂಗಳೂರು ಶಾಖೆ—ಇದರ ಆಶ್ರಯದಲ್ಲಿ ನಡೆದ ಶ್ರೀರಂಗ ಸ್ಮಾರಕ ಉಪನ್ಯಾಸ (೧೪-೧೧-೧೯೯೦).

ಕಾಳಿದಾಸನ ಜೀವನದರ್ಶನ

ಟಿ. ಎಸ್. ವೆಂಕಣ್ಣಯ್ಯ

ಕವಿಕುಲಾಲಂಕಾರ, ಕವಿತಾಕಾಮಿನೀವಿಲಾಸ, ರಸೇಶ್ವರ, ಕವಿಕುಲಲಲಾಮ ಎಂಬೆಲ್ಲ ಹೆಗ್ಗಳಿಕೆಯನ್ನು ಪಡೆದಿರುವ ಕವಿಸಾರ್ವಭೌಮ ಕಾಳಿದಾಸ ಭರತಭೂಮಿಯಲ್ಲಿ ಮಹತ್ತರವಾದ, ಅಲೌಕಿಕವಾದ ಮೇಧಾಸಂಪನ್ನತೆಯಿಂದ ಆವಿರ್ಭವಿಸಿದ. ಆತ ಗತಿಸಿ ಎರಡು ಸಹಸ್ರ ವರ್ಷಗಳೇ ಕಳೆದುಹೋಗಿದ್ದರೂ ಯಾವ ಪ್ರಜ್ಞಾಜ್ಯೋತಿಯನ್ನು ಆತ ಭೂಮಂಡಲದಲ್ಲಿ ಬೆಳಗಿದ್ದನೋ ಆ ಜ್ಯೋತಿ ಇಂದಿಗೂ ಪ್ರಜ್ವಲಿಸುತ್ತಲೇ ಇದೆ. ಈ ಮಹಾಕವಿಯ ದೃಷ್ಟಿ ಹಿಮವತ್ಪರ್ವತಕ್ಕಿಂತಲೂ ಉನ್ನತವೂ, ಸಮುದ್ರಕ್ಕಿಂತಲೂ ಹೆಚ್ಚು ಆಳವಾದುದೂ ಆಗಿತ್ತು. ಆ ದೃಷ್ಟಿಯಲ್ಲಿ ಅಖಿಲಶಾಸ್ತ್ರಗಳ ಪ್ರಭೆ ಅತ್ಯಂತ ದೀಪ್ತಿಯುತವಾಗಿ ಬೆಳಗಿದಂತೆಯೇ ಸಕಲ ಲಲಿತಕಲೆಗಳ ಕಮನೀಯ ಕಾಂತಿಯೂ ಬೆಳಗುತ್ತಿತ್ತು. ಆತನ ಕವಿತ್ವದಲ್ಲಿ ಅರ್ಥವಿತ್ತ್ವ, ವ್ಯವಹಾರಪಟುತ್ವಗಳ ಕಾಂತಿಯೂ ಗೋಚರಿಸುತ್ತದೆ. ಆತ ಬಾಯಿಮಾತಿನ ಆದರ್ಶಕ್ಕಿಂತಲೂ ವ್ಯಾವಹಾರಿಕವಾದ ಆದರ್ಶವನ್ನೇ ನಂಬಿದವನು. ಆತನ ವಿದ್ವತ್ತು ಕೇವಲ ವಿಚಕ್ಷಣರಾದ ವಿದ್ವಾಂಸರ ಹಿತಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಭೂಮಂಡಲದ ಎಲ್ಲ ಮಾನವರ ಹಿತವನ್ನು ದೃಷ್ಟಿಯಲ್ಲಿರಿಸಿತ್ತು. ಆತನ ಜ್ಞಾನ ನೀರಸವಾಗಿರಲಿಲ್ಲ, ಅಲ್ಲಿ ಸಕಲ ಜೀವಿಗಳ ಮನಸ್ಸನ್ನು ಆನಂದಗೊಳಿಸಲು ಸಮರ್ಥವಾದ ದಟ್ಟವಾದ ಸ್ನೇಹಶೀಲತೆ ಪ್ರವಹಿಸುತ್ತಿತ್ತು. ಆತನ ಕವಿತೆ ಭುವಿಯನ್ನೇ ಸ್ವರ್ಗವನ್ನಾಗಿ ಪರಿವರ್ತಿಸುವ ಪ್ರಯಾಸದಲ್ಲಿ ತೊಡಗಿದ್ದಿತೇ ಹೊರತು ಭೂಮಿಯನ್ನು ಸ್ವರ್ಗಕ್ಕೆ ಕೊಂಡೊಯ್ಯುವ ಪ್ರಯತ್ನವಾಗಿರಲಿಲ್ಲ. ಮಾನವ ತನ್ನ ಕರ್ತವ್ಯಗಳನ್ನು ಹಾಗೂ ಧರ್ಮವನ್ನು ಕಾಪಾಡಿಕೊಳ್ಳುತ್ತ, ಭೂಮಂಡಲದ ಸಕಲವಿಧವಾದ ಐಶ್ವರ್ಯವನ್ನೂ ಹಾಗೂ ಸಮಸ್ತ ಕೊಡುಗೆಗಳನ್ನೂ ವಿವೇಕದೊಡನೆ ಬಳಸುತ್ತ ಭೂಮಂಡಲವನ್ನು ಉನ್ನತಗೊಳಿಸುವ ಪ್ರಯತ್ನದಲ್ಲಿ ತೊಡಗಬೇಕೆಂಬುದೇ ಆತನ ರಚನೆಗಳ ಮಹದಾಶಯವಾಗಿತ್ತು. ಆತ ಸಾಂಸಾರಿಕವಾದ ಸೌಂದರ್ಯಗಳಲ್ಲಿ ಪಾರಮಾರ್ಥಿಕ ಸೌಂದರ್ಯವನ್ನು ಕಂಡ ದ್ರಷ್ಟಾರ. ಆತ ಪ್ರಕೃತಿಯ ಮಡಿಲಲ್ಲಿಯೇ ಸತತವಾಗಿ ಜೀವನವನ್ನು ಕಳೆದವನಂತೆ ಗೋಚರಿಸಿದರೂ, ಸಂಪತ್ಸಮೃದ್ಧವಾದ, ವೈಭವ–ವಿಲಾಸಗಳಿಂದ ಜಗಮಗಿಸುತ್ತಿದ್ದ ನಗರಗಳಲ್ಲಿ ವಾಸ ಮಾಡುತ್ತಲಿದ್ದಂತೆ ಕಂಡು ಬರುತ್ತದೆ. ಆತನ ಬುದ್ಧಿ ದೈವಶ್ರದ್ಧೆಯುಳ್ಳದ್ದಾಗಿದ್ದರೂ ತನ್ನ ಅಭಿರುಚಿಯನ್ನು ಮಾನವಭಾವದಲ್ಲಿ ಬದ್ಧಗೊಳಿಸಿಕೊಂಡಿತ್ತು. ಮಾನವನಾರು ? ಆತ ವಾಸಿಸುವುದು ಎಲ್ಲಿ ? ನಗುವುದೆಲ್ಲಿ ? ಮಾತನಾಡುವುದೆಲ್ಲಿ ? ಕುಳಿತುಕೊಳ್ಳುವುದೆಲ್ಲಿ ? ನಿಲ್ಲುವುದೆಲ್ಲಿ ? ಸಂತೋಷಪಡುವುದೆಲ್ಲಿ ? ಪ್ರೀತಿಸುವುದೆಲ್ಲಿ? ವಿರಕ್ತನಾಗುವುದೆಲ್ಲಿ ? ನಿದ್ರಿಸು

ವುದೆಲ್ಲಿ? ಎಚ್ಚರಗೊಳ್ಳುವುದೆಲ್ಲಿ? ಈ ಎಲ್ಲವನ್ನು ಆತನ ಬುದ್ಧಿ ಕಂಡರಿಸಿತ್ತು. ಇಂದ್ರಿಯಮೋಹಕವಾದ ಪದಾರ್ಥಗಳಿಂದ ಮಾನವನು ಆಕರ್ಷಿತನಾಗುವುದಕ್ಕಿಂತಲೂ ನಿರಂತರವಾಗಿ ತ್ಯಾಗ, ತಪಸ್ಸು, ಯಜ್ಞಗಳಲ್ಲಿ ಆತ ತೊಡಗಿರಬೇಕೆಂಬುದೇ ಆತನ ಅಭಿಲಾಷೆಯಾಗಿತ್ತು. ಆತ್ಮದ ಅಸೀಮತೆಯಿಂದಲಾಗಿ ಮಾನವನು ತನ್ನ ಮಹನೀಯತೆಯನ್ನೂ ತನ್ನ ವ್ಯಕ್ತಿತ್ವವನ್ನೂ ಹಾಗೂ ತನ್ನ ಅಸೀಮಶಕ್ತಿಯನ್ನೂ ಅರಿತಿರಬೇಕೆಂಬುದು ಆತನ ಬಯಕೆಯಾಗಿತ್ತು. ಮಾನವ ಯಾವುದೋ ಒಂದು ಕ್ಷೇತ್ರಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡಿರಬಾರದು, ಆತ ಎಲ್ಲೆಡೆಯೂ ವಿಹರಿಸಬೇಕು, ಎಲ್ಲೆಡೆಯಲ್ಲಿಯೂ ತನ್ನ ಆಸಕ್ತಿಯನ್ನು ತೋರಬೇಕು, ಎಲ್ಲ ಭೋಗಗಳನ್ನೂ ಅನುಭವಿಸಬೇಕು, ಆದರೆ ಹಾಗೆ ಮಾಡುವಾಗ ತನ್ನ ವಿವೇಕವನ್ನು ಮರೆಯಬಾರದು ಎಂಬುದೇ ಆತನ ಆಶಯವಾಗಿತ್ತು. ಮಹಾಕವಿ ಕಾಳಿದಾಸನ ಈ ಪ್ರಶಂಸನೀಯವಾದ ದೃಷ್ಟಿ, ಜೀವನವನ್ನು ಕುರಿತಂತೆ ಆತನ ಈ ಉದಾರಬುದ್ಧಿ ಆತನ ಆಯಾಯ ರಚನೆಗಳ ಮಾಧ್ಯಮದಿಂದ ಮಾನವರಿಗೆ ಮಾರ್ಗದರ್ಶಕವಾಗಿದೆ. ಆದ್ದರಿಂದಲೇ ಆತನ ಉಕ್ತಿಗಳನ್ನು ಕುರಿತ ಚಿಂತನೆ, ಉದಾಹರಣೆ ಉಪಯುಕ್ತವೆನಿಸುತ್ತದೆ.

ಕಾಳಿದಾಸನು ಜೀವನದ ಸೌಂದರ್ಯ, ಸಾರ್ಥಕ್ಯ ಹಾಗೂ ಸಮುತ್ಕರ್ಷಗಳನ್ನು ಎಲ್ಲೆಲ್ಲಿ ಗಮನಿಸಿರುವನೋ ಅವುಗಳನ್ನೆಲ್ಲ ತನ್ನ ಕಾವ್ಯಗಳಲ್ಲಿ ಅತ್ಯಂತ ಮೋಹಕವಾದ, ವಕ್ರೋಕ್ತಿಬಂಧುರವಾದ ಮಾರ್ಗದಿಂದ ಅಭಿವ್ಯಕ್ತಗೊಳಿಸಿದ್ದಾನೆ. ಆತ ಜೀವನದ ಚೆಲುವು ಹಾಗೂ ವೇದನಾನಿವಾರಕತೆಯನ್ನು ಬಲ್ಲವನಾಗಿದ್ದ. ಆದ್ದರಿಂದಲೇ ಆತ 'ಆಪನ್ನಾರ್ತಿಪ್ರಶಮನಫಲಾಃ ಸಂಪದೋಹ್ಯುತ್ತಮಾನಾಂ' (ಸಂಕಷ್ಟದಲ್ಲಿರುವವರ ಆಪತ್ತನ್ನು ಉಪಶಮನಗೊಳಿಸುವುದೇ ಉತ್ತಮನ ಸಂಪತ್ತಿಗೆ ಉಚಿತ ಫಲ) ಎಂದಿದ್ದಾನೆ (ಮೇ. ಪೂ. ೫೩). ತ್ಯಾಗಕ್ಕಾಗಿ ಬಳಸಲ್ಪಡುವ ಹಣದ ಸಂಗ್ರಹವನ್ನು ಮಾತ್ರವೇ ಆತ ಪ್ರಶಂಸಿಸುತ್ತಾನೆ-'ಆದಾನಂ ಹಿ ವಿಸರ್ಗಾಯ ಸತಾಂ ವಾರಿಮುಚಾಮಿವ' (ರಘು ೪.೮೬) 'ಸಜ್ಜನರ ಗಳಿಕೆ ಮೋಡಗಳಂತೆ ಮರಳಿ ಕೊಡುವುದಕ್ಕಾಗಿಯೇ' ಎಂಬುದು ಆತನ ಉಕ್ತಿ. 'ತಪಸ್ಸಿನಿಂದ ಪವಿತ್ರಗೊಂಡ ಜೀವನವನ್ನೇ ಆತ ಧನ್ಯವಾದುದೆಂದು ಭಾವಿಸಿದ್ದ ತಪಸ್ಸಿನಿಂದಲ್ಲದೇ ಯಾವುದೇ ಸಿದ್ಧಿ ಅಸಂಭವವೆಂಬುದು ಆತನ ದೃಢವಿಶ್ವಾಸವಾಗಿತ್ತು. ಹೀಗಾಗಿ ಅನೇಕ ಸಂದರ್ಭಗಳಲ್ಲಿ ತಪೋಮಹಿಮೆಯನ್ನು ಆತ ಹಾಡಿಹೊಗಳುವುದನ್ನು ನಾವು ಕಾಣುತ್ತೇವೆ. ಶಾಕುಂತಲದಲ್ಲಿ 'ವಲ್ಮೀಕಾರ್ಧನಿಮಗ್ನಮೂರ್ತಿರುರಸಾ ಸಂದಷ್ಟಸರ್ಪತ್ವಚಾ' (೭.೧೧) (ಅರ್ಧದೇಹವನ್ನು ಹುತ್ತ ಆವರಿಸಿರುವ, ಎದೆಯ ಮೇಲೆ ಸರ್ಪದ ಪೊರೆಯಿರುವ) ಎಂಬ ಮಾತುಗಳಿಂದಲೂ, ಅದೇ ನಾಟಕದ 'ಯತ್ಕಾಂಕ್ಷಂತಿ ತಪೋಭಿರನ್ಯಮುನಯಸ್ತಸ್ಮಿಂಸ್ತಪಸ್ಯಂತ್ಯಮೀ' (೭.೧೩) (ತಪಸ್ಸಿನಿಂದ ಇತರ ಮುನಿಗಳು ಅವುದನ್ನು ಬಯಸುವರೋ ಅಲ್ಲಿಯೇ ಇವರು ತಪವನ್ನಾಚರಿಸುತ್ತಿದ್ದಾರೆ) ಎಂಬ ಮಾತುಗಳಿಂದಲೂ, 'ಕೃತಾಭಿಷೇಕಾಂ ಹುತಜಾತವೇದಸಂ ತ್ವಗುತ್ತರಾಸಂಗವತೀ

ಮಧೀತಿನೀಂ । ದಿದೃಕ್ಷವಸ್ತಾಮೃಷಯೋಽಭ್ಯುಪಾಗಮನ್ ನ ಧರ್ಮವೃದ್ಧೇಷು ವಯಃ ಸಮೀಕ್ಷ್ಯತೆ’ (ಕ. ಸ. ೫.೧೬) (ಸ್ನಾನ ಮಾಡಿರುವ, ಅಗ್ನಿಯಲ್ಲಿ ಹೋಮ ಮಾಡಿರುವ, ನಾರುಮುಡಿಯೇ ಮೇಲುಹೊದಿಕೆಯಾಗಿರುವ, ಶಾಸ್ತ್ರಾಧ್ಯಯನಾದಿ ಗಳನ್ನು ಮಾಡಿರುವ ಪಾರ್ವತಿಯನ್ನು ನೋಡಬಯಸಿ ಮುನಿಗಳು ಬಂದರು. ಧರ್ಮ ವೃದ್ಧರಲ್ಲಿ ವಯಸ್ಸು ಪರಿಗಣನೆಗೆ ಬರುವುದಿಲ್ಲ) ಎಂಬ ಮಾತುಗಳಿಂದಲೂ ಕವಿ ತಪೋನಿಯಮಬದ್ಧ ಜೀವನದಲ್ಲಿ ತನ್ನ ಸ್ವಾಭಾವಿಕ ಭಾವಾನುಬಂಧವಿರುವುದನ್ನು ಸ್ಪಷ್ಟೀಕರಿಸಿದ್ದಾನೆ. ಮಾನವರ ಶ್ರೇಯಸ್ಸು ಪೂಜ್ಯರನ್ನು ಗೌರವಿಸುವುದರಲ್ಲಿಯೇ ಅಡಗಿದೆ ಎಂಬ ತನ್ನ ವಿಶ್ವಾಸವನ್ನು ಸಧೃಡವಾಗಿ ನಿರೂಪಿಸುತ್ತ ಆತ ‘ಪ್ರತಿ ಬಧ್ನಾತಿಹಿ ಶ್ರೇಯಃ ಪೂಜ್ಯಪೂಜಾವ್ಯತಿಕ್ರಮಃ’ (ರಘು. ೧.೭೯) (ಪೂಜ್ಯರನ್ನು ಗೌರವಿಸದಿರುವುದು ಏಳಿಗೆಗೆ ಪ್ರತಿಬಂಧಕವಾಗುತ್ತದೆ) ಎನ್ನುತ್ತಾನೆ.

ಕವಿ ಕಾಳಿದಾಸ ಯಶೋರಹಿತವಾದ ಜೀವನವನ್ನು ಎಂದೂ ಒಪ್ಪಿದವನಲ್ಲ. ಆ ಬಗೆಯ ಜೀವನಕ್ಕಿಂತ ಮರಣವೇ ಒಳಿತು ಎಂದೇ ಭಾವಿಸಿದ ಆತ ರಘುವಂಶದಲ್ಲಿ- ‘ಕಿಮಪ್ಯಹಿಂಸ್ಯಸ್ತವ ಚೇನ್ಮತೋಽಹಂ ಯಶಃ ಶರೀರೇ ಭವ ಮೇ ದಯಾಳುಃ । ಏಕಾಂತವಿಧ್ವಂಸಿಷು ಮದ್ವಿಧಾನಾಂ ಪಿಂಡೇಷ್ವನಾಸ್ಥಾ ಖಲು ಭೌತಿಕೇಷು’ (೨.೫೭) (ನಾನು ವಧಾರ್ಹನಲ್ಲವೆಂದು ನೀನು ತಿಳಿಯುವುದಾದರೆ ನನ್ನೀ ಯಶಃ ಶರೀರದಲ್ಲಿ ದಯೆ ತೋರು. ನನ್ನಂತಹವರಿಗೆ ನಶ್ವರವಾದ ಮೃಣ್ಮಯ ದೇಹದಲ್ಲಿ ಯಾವುದೇ ಆಸ್ಥೆಯಿಲ್ಲ) ಎಂದು ದಿಲೀಪನಿಂದ ನುಡಿಸಿದ್ದಾನೆ. ಸದ್ಗುಣಭರಿತವಾದ ಜೀವನವೇ ನಿಜವಾದ ಜೀವನವೆಂದು ಭಾವಿಸಿರುವ ಕವಿ ಗುಣರಹಿತವಾದ ಜೀವನದ ಬಗ್ಗೆ ಜುಗುಪ್ಸಾಭಾವ ತಳೆಯುತ್ತಾನೆ. ಆತನ ದೃಷ್ಟಿಯಲ್ಲಿ ಗುಣಗಳಿಂದ ಕೂಡಿರುವುದೇ ಜೀವನದ ಅರ್ಥ. ಅದ್ದರಿಂದಲೇ ಆತ ‘ಪದಂಹಿ ಸರ್ವತ್ರ ಗುಣೈರ್ನಿಧೀಯತೆ’ (ರಘು- ೩.೬೨) (ಎಲ್ಲೆಡೆ ಪೂಜೆಗೊಳಗಾಗುವುದು ಗುಣವೇ) ಎಂದಿದ್ದಾನೆ. ಜೀವನದ ಸಾರ್ಥಕ್ಯವಿರುವುದು ಉಪಕಾರ ಮಾಡುವುದರಲ್ಲಿ, ಪರಹಿತಕ್ಕಾಗಿ ತೊಡಗಿದ ಜೀವ ನವೇ ಪ್ರಶಂಸಾರ್ಹವಾದುದೆಂಬುದು ಕವಿಯ ಅಭಿಪ್ರಾಯ—‘ಪರ್ಯಾಯಪೀತಸ್ಯ ಸುರೈರ್ಹಿಮಾಂಶೋಃ ಕಲಾಕ್ಷಯಃ ಶ್ಲಾಘ್ಯತರೋ ಹಿ ವೃದ್ಧೇಃ’ (ರಘು. ೫.೧೬) (ದೇವತೆಗಳಿಂದ ಕ್ರಮವಾಗಿ ಪಾನಮಾಡಿದ ಚಂದ್ರನ ಕಲೆಗಳ ಕ್ಷೀಣಾವಸ್ಥೆ ಕಲಾಭಿ ವೃದ್ಧಿಯ ಅವಸ್ಥೆಗಿಂತಲೂ ಅತ್ಯುತ್ತಮವಷ್ಟೆ) ಎಂಬ ಮಾತಿನಿಂದ ತನ್ನ ಈ ಅಭಿ ಪ್ರಾಯವನ್ನು ವ್ಯಕ್ತಪಡಿಸಿದ್ದಾನೆ ಕವಿ.

ಮಾನವ ಸ್ವಾಭಾವಿಕವಾಗಿ ಶ್ರೇಯಸ್ಸನ್ನೇ ಬಯಸುವವನು. ಆದರೂ ಕೆಲ ವೊಮ್ಮೆ ದೋಷಪೂರ್ಣದರಿಂದ ಪ್ರೇರಿತನಾಗಿ ಅಶ್ರೇಯಸ್ಸಿನ ಮಾರ್ಗದಲ್ಲಿ ತೊಡಗು ವುದೂ ಉಂಟು. ಮೂಲತಃ ಶ್ರೇಯಃಪ್ರಿಯನಾದ ಆತ ಅನುಚಿತ ರೀತಿಯ ಆಚ ರಣೆಗೆ ತೊಡಗುವುದು ಕಂಡುಬಂದಲ್ಲಿ ಅದು ಉಪಾಧಿದೋಷದಿಂದಲೇ ಎಂಬುದು ಶತಸ್ಸಿದ್ಧ. ಈ ಅಭಿಪ್ರಾಯವನ್ನೇ ಅಪ್ರಸ್ತುತ ವಿಧಾನಾತ್ಮಕ ರೀತಿಯಿಂದ ಕವಿ ಹೀಗೆ ನುಡಿದಿದ್ದಾನೆ—‘ಉಷ್ಣತ್ವಮಗ್ನ್ಯಾತ ಸಂಪ್ರಯೋಗಾತ್ ಶೈತ್ಯಂ ಹಿ ಯತ್ಸಾ

ಪ್ರಕೃತಿರ್ಜಲಸ್ಯ' (ರಘು. ೫.೫೪) (ನೀರಿನ ಬಿಸಿಯು ಸ್ವಭಾವ ಬೆಂಕಿ ಬಿಸಿಲುಗಳ ಸಂಪರ್ಕದಿಂದ, ಆದರೆ ಶೀತಲತೆ ಅದರ ನಿಜಸ್ವಭಾವ) ಉಪಕಾರಕ್ಕೆ ಪ್ರತ್ಯುಪಕಾರ ಮಾಡದಿರುವ ಜೀವನವನ್ನು ಕವಿ ಜೀವನವೆಂದೇ ಪರಿಗಣಿಸುವುದಿಲ್ಲ. ಅಂತೆಯೇ—'ಪ್ರತಿಪ್ರಿಯಂ ಚೇದ್ಭವತೋ ನ ಕುರ್ಯಾಂ ವೃಥಾ ಹಿ ಮೇ ಸ್ಯಾತ್ ಸ್ವಪದೋಪಲಬ್ಧಿಃ' (ರಘು ೫ ೫೬) (ನಿನಗೆ ಪ್ರತ್ಯುಪಕಾರವನ್ನು ನಾನು ಮಾಡದಿದ್ದಲ್ಲಿ ನನ್ನ ಸ್ಥಾನಪ್ರಾಪ್ತಿಯೂ ವ್ಯರ್ಥವಾದೀತು) ಎಂದು ನುಡಿದಿದ್ದಾನೆ. ಯಾವ ವ್ಯಕ್ತಿ ತನ್ನ ಉದಾತ್ತ ಜೀವನದಿಂದ ಇತರ ಎಲ್ಲರ ಜೀವನವನ್ನೂ ಮೀರಿ ಅಂತಹವನದೇ ಸಾರ್ಥಕ ಜೀವನವೆಂದು ಭಾವಿಸುವ ಕವಿ ಅದನ್ನು ವ್ಯಕ್ತಪಡಿಸುವ ಭಂಗಿ ರಮಣೀಯವಾಗಿದೆ—'ನಕ್ಷತ್ರ ತಾರಾಗ್ರಹ ಸಂಕುಲಾಪಿ ಜ್ಯೋತಿಷ್ಮತೀ ಚಂದ್ರಮಸೈವ ರಾತ್ರಿಃ' (ರಘು ೬.೨೨) (ಅಸಂಖ್ಯಾತ ತಾರಾನೀಹಾರಿಕೆಗಳಿದ್ದರೂ ರಾತ್ರಿ ಚಂದ್ರನಿಂದಲೇ ಜ್ಯೋತಿಷ್ಮತೀ ಎನಿಸುತ್ತದೆ).

ಸಂಕಷ್ಟಕ್ಕೆ ಸಿಲುಕಿದ ಮಾನವ ಅಧೈರ್ಯದ ಆಶ್ರಯ ಪಡೆಯುವುದು ಆಶ್ಚರ್ಯದ ಸಂಗತಿಯೂ ಅಲ್ಲ, ನಿಂದನೀಯವೂ ಅಲ್ಲ. ಸುಖ ಬಂದಾಗ ವಿಷಾದ ಮಾನವ ಮನಸ್ಸಿನ ಧರ್ಮ. ಆದ್ದರಿಂದ ವೈಚಾರಿಕ ಪ್ರಜ್ಞೆಯುಳ್ಳ ಜನ ಆ ಸ್ಥಿತಿಯಲ್ಲಿರುವ ವ್ಯಕ್ತಿಯನ್ನು ಕಂಡು ತಿರಸ್ಕರಿಸುವುದಿಲ್ಲ. ಕಾಳಿದಾಸನ ಹೃದಯವಂತೂ ವಿಪಥ್ರಸ್ತ ವ್ಯಕ್ತಿಗಳ ವಿಷಯದಲ್ಲಿ ಅಪಾರ ಸಂವೇದನಾಶೀಲವಾದದ್ದು. ಆದ್ದರಿಂದಲೇ ಆತ 'ಅಭಿತಪ್ತಮಯೋಽಪಿ ಮಾರ್ದವಂ ಭಜತೇ ಕೈವ ಕಥಾ ಶರೀರಿಷು' (ರಘು. ೮೪೩) (ಕಾಯಿಸಿದ ಕಬ್ಬಿಣವೂ ಕರಗುತ್ತದೆ ಎಂದಾಗ ನರರ ಪಾಡೇನು ?) ಎನ್ನುತ್ತಾನೆ. ಜೀವನವನ್ನು ಕುರಿತಂತೆ ಕವಿದೃಷ್ಟಿ ಪರಮೋತ್ಕೃಷ್ಟವಾದುದು. ಗುರುಭಕ್ತಿನಿಷ್ಠವೂ, ಗುರುಜನಾದೇಶಪಾಲಕವೂ ಆದ ಜೀವನ ಅಭಿನಂದನೀಯವಾದುದು ಎಂಬುದು ಆತನ ದೃಷ್ಟಿ. ಗುರುವಿಗಿಂತಲೂ ಶ್ರೇಷ್ಠವಾದುದು ಬೇರಾವುದೂ ಇಲ್ಲವೆಂಬ ದೃಷ್ಟಿಯುಳ್ಳ ಆತನಿಗೆ ಗುರ್ವಾಜ್ಞೆ ಸರ್ವಥಾ ಅವಿಚಾರಣೀಯವಾದುದೆಂದೇ ಭಾವನೆ. ಈ ಮುಂದಿನ ಮಾತು ಗುರುಗಳ ವಿಷಯದಲ್ಲಿ ಆತನಿಗಿದ್ದ ಶ್ರದ್ಧೆಯ ಪ್ರತೀಕವಾಗಿದೆ—'ಸ ಶುಶ್ರುವಾನ್ ಮಾತರಿ ಭಾರ್ಗವೇಣ ಪಿತುರ್ನಿಯೋಗಾತ್ಪ್ರಹೃತಂ ದ್ವಿಷದ್ವತ್ । ಪ್ರತ್ಯಗ್ರಹೀದಗ್ರಜಶಾಸನಂ ತದಾಜ್ಞಾ ಗುರುಣಾಂ ಹ್ಯವಿಚಾರಣೀಯಾ' (ರಘು. ೧೪.೪೬) (ತಂದೆಯ ಆಜ್ಞೆಯಂತೆ ಅಂದು ಪರಶುರಾಮನು ತಾಯಿಯನ್ನು ಶತ್ರುವೆಂಬಂತೆ ಕೊಂದ ಕಥೆಯನ್ನು ಕೇಳಿದ್ದ ಲಕ್ಷ್ಮಣ ಅಣ್ಣನ ಅಪ್ಪಣೆಯನ್ನು ಅಂಗೀಕರಿಸಿದನು. ಏಕೆಂದರೆ ಗುರ್ವಾಜ್ಞೆ ಅವಿಚಾರಣೀಯವಾದುದಲ್ಲವೆ ?)

ಕವಿ ಕಾಳಿದಾಸ ಮಾನವನ ಯಥಾರ್ಥ ಜೀವನದ ಚಿತ್ರಣವನ್ನೇ ನೀಡುವ ಪ್ರಯತ್ನ ಮಾಡಿರುವುದನ್ನು ನಾವು ಕಾಣಬಹುದು. ಆದರೆ, ಆತ ಮಾನವ ಜೀವನ ಭವ್ಯವೂ, ಶ್ರೇಷ್ಠವೂ, ಒಳಿತಿನತ್ತ ದೃಷ್ಟಿಯುಳ್ಳದ್ದೂ ಆಗಿರಬೇಕು. ಮಾನವ ಪ್ರಯತ್ನವೂ ಈ ದಿಸೆಯತ್ತ ಕೇಂದ್ರೀಕೃತವಾಗಿರಬೇಕೆಂದು ಸದಾ ಬಯಸುತ್ತಾನೆ. ಜೀವನದ ಸೌಂದರ್ಯವಿರುವುದು ಒಳಿತಿನಲ್ಲಿ ದೃಢನಿಶ್ಚಯ ಹೊಂದಿರುವುದರಲ್ಲಿ. ಆದ್ದರಿಂದಲೇ ಆತ ಮಾನವನನ್ನು ಶ್ರೇಷ್ಠತರವಾದ ಜೀವನದತ್ತ ಕೊಂಡೊಯ್ಯಲು ಬಯ

ಸಿದವನಾಗಿ ಮಾನವ ಜೀವನದ ಪ್ರವೃತ್ತಿ ಎಲ್ಲಿದೆಯೆಂಬುದನ್ನು ಸೂಚಿಸಲು ಅಗ್ನಿವರ್ಣನ ಚರಿತ್ರೆಯ ನೆಪದಿಂದ ತಿಳಿಸುವ ಈ ಮಾತು ಗಮನಾರ್ಹ—'ದುಷ್ಟದೋಷಮಪಿ ತನ್ನ ಸೋಽತ್ಯಜಿತ್ ಸಂಗವಸ್ತುಭಿಷಜಾಮನಾಶ್ರವಃ । ಸಾಧುಭಿಸ್ತು ವಿಷಯೈರ್ಹೃತಸ್ತತೋ ದುಃಖಮಿಂದ್ರಿಯಗಣೋ ನಿವಾರ್ಯತೆ ॥' (ರಘು. ೧೯.೪೯) (ದೋಷಯುತವೆಂದು ತಿಳಿದೂ ಮದ್ಯಾದಿಗಳನ್ನು ಬಿಡನು, ವೈದ್ಯರ ಮಾತುಗಳನ್ನೂ ಕೇಳನು. ಪ್ರಿಯವಿಷಯಸುಖಗಳಿಂದ ಇಂದ್ರಿಯಗಣಗಳನ್ನು ಬೇರತ್ತ ತಿರುಗಿಸುವುದು ಕಷ್ಟವಲ್ಲವೆ?) ಈ ಬಗೆಯ ಜೀವನ ಬೇಡವೆಂಬುದೇ ಲೋಕಕ್ಕೆ ಕವಿಯ ಎಚ್ಚರಿಕೆ.

ಕವಿ ಮಾನವ ಜೀವನದ ಅಂತರಾಳದಲ್ಲಿ ತಾನೇನನ್ನು ಕಾಣುವನೋ ಅದನ್ನೇ ನುಡಿಯುತ್ತಾನೆ. ಮಾನವ ಜೀವನ ಪ್ರವೃತ್ತಿಯ ಬಗ್ಗೆ ಜುಗುಪ್ಸೆಯಾಗಲಿ ಅಥವಾ ವ್ಯಂಗ್ಯನುಡಿಯಾಗಲಿ ಕವಿಯ ಉದ್ದೇಶವಲ್ಲ. ಆತನ ಗುರಿಯೆಲ್ಲ ಮಾನವ ಜೀವನ ಧರ್ಮದ ವಿಶ್ಲೇಷಣೆ ಮಾತ್ರ. ಆತ ಕೇವಲ ಮಾನವ ಜೀವನವನ್ನು ನಮ್ಮ ಮುಂದಿರಿಸುತ್ತಾನೆ. ಅದನ್ನು ಹೊಗಳಲಾಗಲಿ, ನಿಂದಿಸಲಾಗಲಿ ಆತ ಬಯಸುವುದಿಲ್ಲ. ಆದರೆ ಆತ ಯಾವಾಗಲೂ ಮಾನವ ಜೀವನವನ್ನು ತನ್ನ ಕೃತಿ ನಿರ್ಮಾಣದಿಂದ ಸಂಸ್ಕರಿಸಲು, ಮೇಲಕ್ಕೊಯ್ಯಲು ಬಯಸುತ್ತಾನೆ. ಜೊತೆಗೆ ಯಾವ ಬಗೆಯ ಜೀವನ ತನಗೆ ಪ್ರಿಯವೆಂಬುದನ್ನು ಉಚಿತ ಸನ್ನಿವೇಶಗಳಲ್ಲಿ ಪ್ರದರ್ಶಿಸಬಯಸುತ್ತಾನೆ. ಆದರೆ ಈ ವಿಷಯವನ್ನು ಕುರಿತ ಆತನ ಅಭಿಪ್ರಾಯ ಯಾವಾಗಲೂ ಪರೋಕ್ಷ ರೀತಿಯಲ್ಲಿಯೇ ಅಭಿವ್ಯಕ್ತವಾಗಿರುತ್ತದೆ—'ಅಪಥೇ ಪದಮರ್ಪಯಂತಿ ಹಿ ಶ್ರುತವಂತೋಽಪಿ ರಜೋನಿಮೀಲಿತಾಃ' (ರಘು. ೯. ೭೪) (ವಿದ್ಯಾವಂತರೂ ರಜೋಗುಣಯುತರಾದಾಗ ದುರ್ಮಾರ್ಗದಲ್ಲಿ ಹೆಜ್ಜೆಯಿರಿಸುತ್ತಾರೆ).

ಪ್ರಿಯವಾದ ಪದಾರ್ಥ ಎಲ್ಲಿ ದೊರೆಯುವುದೋ ಜೀವನ ಅಲ್ಲಿಯೇ ರಮಣೀಯವೆನಿಸುತ್ತದೆ ಎಂದು ನುಡಿಯಹೊರಟ ಕವಿ, ಅಲ್ಲಿ ತನ್ನ ಪಕ್ಷಪಾತವನ್ನೂ ಪ್ರಕಟಿಸುತ್ತ—'ತಂ ಪ್ರಾಪ್ಯ ಸರ್ವಾವಯವಾನವದ್ಯಂ ವ್ಯಾವರ್ತತಾನ್ಯೋಪಗಮತ್ಕುಮಾರೀ । ನ ಹಿ ಪ್ರಫುಲ್ಲಂ ಸಹಕಾರಮೇತ್ಯ ವೃಕ್ಷಾಂತರಂ ಕಾಂಕ್ಷತಿ ಷಟ್ಪದಾಲಿಃ ॥' (ರಘು. ೬.೬೯) (ಸರ್ವಾಂಗ ಸುಂದರನಾದ ಅಜನ ಬಳಿ ಸಾರಿದ ರಾಜಕುವರಿ ಅನ್ಯನ ಬಳಿಗೆ ಹೋಗುವುದನ್ನು ತಡೆದಳು. ಚಿಗುರಿದ ಮಾವಿನಮರವನ್ನು ಸೇರಿದ ದುಂಬಿಗಳ ಹಿಂಡು ಬೇರೊಂದು ಮರವನ್ನು ಬಯಸುವುದೇ?)

ಭೂಮಿಯಲ್ಲಿ ಜನಿಸಿದ ಮಾನವ ಸಮಾಜದಲ್ಲಿ ಭಾಗಿಯಾಗಬೇಕು, ಗುಣಶಾಲಿಗಳೊಡನೆ ಸಮಯ ಕಳೆಯಬೇಕು. ತನ್ನ ಅಭಿಪ್ರಾಯಗಳನ್ನು ಪ್ರಕಟಪಡಿಸುತ್ತ, ತನ್ನ ಗುಣಗಳನ್ನು ತೋರ್ಪಡಿಸುತ್ತ ತನ್ನ ಸ್ಥಾನವನ್ನು ನಿರ್ಮಿಸಿಕೊಳ್ಳಬೇಕು. ಸಮಾಜದಲ್ಲಿ ಪರಿಗಣನೆಗೆ ಬರುವಂತಹ ಜೀವನವೇ ವಂದನಿಯ ಜೀವನವೆನಿಸಿಕೊಳ್ಳುತ್ತದೆ. ಈ ಅಭಿಪ್ರಾಯವನ್ನು ಮನಸ್ಸಿನಲ್ಲಿರಿಸಿಯೇ ಕವಿ–"ಸಂಬಂಧಮಾಭಾಷಣಪೂರ್ವಮಾಹುಃ ವೃತ್ತಃ ಸ ನೌ ಸಂಗತಯೋರ್ವನಾಂತೇ । ತದ್ಭೂತನಾಥಾನುಗನಾರ್ಹಸಿ ತ್ವಂ ಸಂಬಂಧಿನೋ ಮೇ ಪ್ರಣಯಂ ವಿಹಂತುಮ್" (ರಘು.

೨.೫೮) (ಮಾತುಕಥೆಯಿಂದ ಗೆಳೆತನ ಬೆಳೆವುದೆನ್ನುತ್ತಾರೆ. ಕಾಡಿನಲ್ಲಿ ಒಂದು ಗೂಡಿದ ನಮ್ಮಲ್ಲಿ ಗೆಳೆತನ ಬೆಳೆದಿದೆ. ಆದ್ದರಿಂದ, ಶಿವನ ಸೇವಕನೆ! ನಿನ್ನ ಬಂಧು ವಾದ ನನ್ನ ಕೂಡಿಕೆಯನ್ನು ಕಡೆಗಣಿಸದಿರು.)

ಜೀವನ ಜೀವಂತವಾಗಿರುವುದು ಪ್ರೇಮದಿಂದ. ಪ್ರೇಮ ಜೀವನದಲ್ಲಿ ಪ್ರಾಣದಾಯಕ ಶಕ್ತಿಯನ್ನು ಸಂಚಾರಗೊಳಿಸುತ್ತದೆ. ಜೀವನದ ಉಸಿರು, ವೃದ್ಧಿ ಪ್ರೇಮದಿಂದಲೇ ಜೀವನದ ಮೂಲಭೂತ ಗುರಿಯೇ ಹೀಗೆ ಜೀವನದ ಪ್ರೇಮ. ಸ್ತ್ರೀಪುರುಷರೀರ್ವರೂ ಅದನ್ನು ಅಪೇಕ್ಷಿಸುವವರೇ. ಪ್ರಧಾನತತ್ವ ವಾಗಿರುವ ಈ ಪ್ರೇಮವನ್ನು ಕುರಿತಂತೆ ಕಾಳಿದಾಸ ಸಾಕಷ್ಟು ವಿಶ್ಲೇಷಿಸಿ ದ್ದಾನೆ. ಜೀವನವು ಪ್ರೇಮದಿಂದ ಪಾವನಗೊಳ್ಳಬೇಕು, ಪ್ರೇಮದ ಅನುಗ್ರಹ ದಿಂದ ಅನುಗೃಹೀತವಾಗಬೇಕು ಎಂಬುದು ಆತನ ಇಚ್ಛೆ. ಭೌತಿಕಸ್ತರದಿಂದ, ದೈಹಿಕ ಸ್ತರದಿಂದ ಸೀಮಿತಗೊಳ್ಳದ,ಎರಡು ಚೇತನಗಳನ್ನು ಉದಾತ್ತಗೊಳಿಸುವ ಪ್ರೇಮದಲ್ಲಿ ಕಾಳಿದಾಸನ ಒಲವು. ಕಾಲ, ದೇಶಗಳ ಸೀಮೆಯನ್ನು ದಾಟಿದ, ವಯೋಮಾನದ ಪರಿವರ್ತನೆಯಿಂದ ಕುಗ್ಗದ, ಸತ್ಸಂತಾನದ ಅಮೃತಫಲವನ್ನೀಯುವ ದೈವೀಪ್ರೇಮ ಕವಿಯ ಆಶಯ. ಇಂತಹ ಪ್ರೇಮದ ಒರೆಗಲ್ಲು ವಿರಹವೆಂಬುದು ಆತನ ಅಭಿಪ್ರಾಯ. ನಾಟಕಗಳ ಪಾತ್ರಗಳಾದಮಾಳವಿಕಾ-ಅಗ್ನಿಮಿತ್ರರಾಗಲಿ,ಊರ್ವಶಿ-ಪುರೂರವರಾಗಲಿ, ಶಕುಂತಲಾ–ದುಷ್ಯಂತರಾಗಲಿ ಅಥವಾ ಶ್ರವ್ಯಕಾವ್ಯಗಳಾದ ಮೇಘದೂತ, ರಘುವಂಶ, ಕುಮಾರಸಂಭವದ ಯಕ್ಷ-ಯಕ್ಷಿ, ರಾಮ-ಸೀತೆ, ಪಾರ್ವತಿ-ಪರಮೇಶ್ವರ ಈ ಎಲ್ಲ ಪಾತ್ರಗಳೂ ವಿರಹದ ಅಗ್ನಿಪರೀಕ್ಷೆಯಲ್ಲಿ ಸಾಗಿ ಬಂದವರೇ. ಪ್ರೇಮದ ನೈಜಾರ್ಥವನ್ನು ಸಾಬೀತುಪಡಿಸಿದವರೇ, ದೈವೀಪ್ರೇಮದ ಗೆಲುವನ್ನು ಸಾರಿದವರೇ, 'ನಿನಿಂದ ರೂಪಂ ಹೃದಯೇನ ಪಾರ್ವತೀ' (೫.೧) ಎಂದು ಕುಮಾರಸಂಭವದಲ್ಲಿ ಉದ್ಗರಿಸಿರುವ ಕಾಳಿ ದಾಸ ದೈಹಿಕ ಆಕರ್ಷಣೆಯ ಸೀಮಿತತೆಯನ್ನೇ ಸಾರುತ್ತಿರುವಂತೆ ತೋರುತ್ತದೆ. ಇದು ಪ್ರೇಮದ ಒಂದು ಮುಖ. ಕವಿಗೆ ಪ್ರೇಮದ ನಿಸ್ವಾರ್ಥತೆ ಬಹು ಮುಖ್ಯ. ಆತನ ದೃಷ್ಟಿಯಲ್ಲಿ ಅನಾಚಾರದಿಂದ ಕಲುಷಿತಗೊಂಡ, ಸ್ವಾರ್ಥವಿಷಪೂರಿತವಾದ ಪ್ರೇಮ, 'ಪ್ರೇಮ'ವೆಂಬ ಪವಿತ್ರವಾದ ಹೆಸರಿನಿಂದ ವ್ಯವಹರಿಸಲರ್ಹವಲ್ಲ. ಪ್ರೇಮ ವನ್ನು ವ್ರತವೆಂದು ಆಚರಿಸುವ ಜೀವನವನ್ನೇ ಅತಿಶ್ರೇಷ್ಠವೆಂದು ಭಾವಿಸಿದ್ದಾನೆ. 'ಸಾಗರಮುಜ್ಝಿತ್ವಾ ಕುತ್ರ ವಾ ಮಹಾನದ್ಯವತರತಿ ? ಕಿಮತ್ರ ಯದಿ ವಿಶಾಖೇ ಶಶಾಂಕಲೇಖಾ ಮನುವರ್ತೇತೇ ?' (ಶಾಕು. ಅಂಕ ೩) (ಮಹಾನದಿ ಸಮುದ್ರವನ್ನು ಬಿಟ್ಟು ಬೇರೆಲ್ಲಿ ಹರಿದೀತು? ವಿಶಾಖಾ ನಕ್ಷತ್ರಗಳೆರಡೂ ಚಂದ್ರ ಲೇಖೆಯನ್ನು ಅನುಸರಿಸಿದಲ್ಲಿ ಆಶ್ಚರ್ಯವೇನಿದೆ?) ಇತ್ಯಾದಿ ಶಕುಂತಲೆಯ ಸಖಿಯರಿಗೆ ಸಂಬಂಧಿಸಿದ ಮಾತುಗಳಿಂದ ಅವ್ಯಾಜವಾದ ಪ್ರೇಮಕ್ಕೆ ತನ್ನ ಪ್ರಾಣಗಳನ್ನೇ ಅರ್ಪಿಸುತ್ತಿರುವನೋ ಎಂಬಂತೆ ಕಾಣುತ್ತದೆ.

ಮಕ್ಕಳಿಲ್ಲದ ಜೀವನದ ಊಹೆಯೂ ಸಾಧ್ಯವಿಲ್ಲ. ಜಂಜಡದ ಮಾನವ ಬದುಕಿ ನಲ್ಲಿ ಅಪತ್ಯಸ್ನೇಹ ಮಲಯಮಾರುತದಂತೆ ತಂಪನ್ನೀಯುವಂತಹುದು. ಯಾವ

ಮಾನವನ ಮನಸ್ಸು ತಾನೆ ಮಕ್ಕಳ ಮುಖವನ್ನು ಕಾಣಲು ಉತ್ಸುಕತೆಯುಳ್ಳದ್ದಾಗಿರುವುದಿಲ್ಲ? ಮಗುವಿನ ನಗೆಮೊಗವನ್ನು ಕಂಡು ಪ್ರಸನ್ನಗೊಳ್ಳದವನಾಗಲಿ, ಅಳುವನ್ನು ಕಂಡು ವಿಷಾದಗೊಳ್ಳದವನಾಗಲಿ ಯಾರು? ಮಕ್ಕಳ ಸುಖದುಃಖಗಳಲ್ಲಿ ಜೀವನದ ಸುಖದುಃಖಗಳಿರುತ್ತವೆ ಎಂದು ಕಂಡು ಪ್ರಾಯಃ ತಾನೂ ಅನುಭವಿಸಿ ಕವಿ ಕಾಳಿದಾಸ ಜೀವನದ ಅತ್ಯಂತ ಪ್ರಿಯವಸ್ತುವಾದ ಮಕ್ಕಳನ್ನು ಕುರಿತು ಅತ್ಯಂತ ಸಹಜವಾದ ಉದ್ಗಾರಗಳನ್ನು ಮಾಡಿರುವಂತೆ ಕಾಣುತ್ತದೆ. 'ಆಲಕ್ಷ್ಯದಂತ ಮುಕುಲಾನನಿಮಿತ್ತಹಾಸೈರ ವ್ಯಕ್ತವರ್ಣ ರಮಣೀಯವಚಃ ಪ್ರವೃತ್ತೀನ್। ಅಂಕಾಶ್ರಯಪ್ರಣಯಿನಸ್ತನಯಾನ್ ವಹಂತೋ ಧನ್ಯಾಸ್ತದಂಗರಜಸಾಮಲಿನೀಭವಂತಿ॥' (ಶಾಕು. ೭.೯) (ಅಕಾರಣವಾಗಿ ನಗುವಾಗ ಸ್ವಲ್ಪ ಮಾತ್ರ ಕಾಣುವ ಮೊಗ್ಗುಗಳಂತಿರುವ ಹಲ್ಲುಗಳು: ಅಸ್ಪಷ್ಟವಾದ ಅಕ್ಷರಗಳಿಂದ ರಮಣೀಯವಾದ ಮಾತುಗಳು, ಇಂತಹ ಮಕ್ಕಳನ್ನು ಪ್ರೀತಿಯಿಂದ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವರ ಮೈಯಿನ ಕೊಳೆಯಿಂದ ಮಲಿನತೆಯನ್ನು ಪಡೆಯುವವರೇ ಧನ್ಯರು!) ಮುಗ್ಧ, ಮುದ್ದು ಕೂಸಿನ, ಅದು ಮಾತಾಪಿತೃಗಳಿಗೆ ನೀಡುವ ಪರಮಾನಂದ ಅದೆಂತಹ ಮೋಹಕ ಚಿತ್ರಣವಿದು! ಆದರೆ ಮಕ್ಕಳಿಲ್ಲದ ಬಾಳು ಎಷ್ಟು ದುಃಖದಾಯಕವೆಂಬುದು ದುಷ್ಯಂತನ 'ಕಷ್ಟಂ ಖಲು ಅನಪತ್ಯತಾ' (ಶಾಕು.೬) ಎಂಬ ಮಾತಿನಿಂದ ಧ್ವನಿತವಾಗುತ್ತದೆ. ಒಳ್ಳೆಯ ಮಗ ಇಹಪರಸಾಧಕನೆಂದೂ, ಪೈತೃಕ ಋಣ ಪರಿಹಾರಕನೆಂದೂ ಭಾವಿಸುವ ಕವಿಯ ಈ ನುಡಿಗಳದೆಷ್ಟು ಅರ್ಥಪೂರ್ಣ! 'ಸಂತತಿ! ಶುದ್ಧವಂಶ್ಯಾ ಹಿ ಪರತ್ರೇಹ ಚ ಶರ್ಮಣೇ' (ರಘು ೧.೬೯) (ಶುದ್ಧವಂಶದಲ್ಲಿ ಜನಿಸಿದ ಸಂತತಿಯಿಂದ ಇಹಪರಗಳೆರಡರಲ್ಲೂ ಸುಖದೊರೆಯುತ್ತದೆ) 'ಅಸಹ್ಯಪೀಡಂ ಭಗವನ್ ಋಣಮಂತ್ಯಮವೇಹಿಮೇ'(ರಘು ೧.೭೧)(ಭಗವನ್, ಪಿತೃಋಣವಿಂದೆನಗೆ ಅಸಹ್ಯ ನೋವನ್ನುಂಟುಮಾಡುತ್ತಿದೆ, ತಿಳಿಯಿರಿ). ಶಾಕುಂತಲದಲ್ಲೂ ದುಷ್ಯಂತನಿಂದ ಇದೇ ಬಗೆಯ ಉದ್ಗಾರ ಹೊರಟಿರುವುದನ್ನು ಕಾಣಬಹುದು. ಈ ಎಲ್ಲ ಭಾವನೆಗಳನ್ನು ಹೊಂದಿದ್ದರೂ ಕವಿಗೆ ಸಂತತಿ ವೇದಮಾರ್ಗಾನುಸಾರಿಯಾಗಿರಬೇಕೆಂದೂ, ಶಕ್ತಿಶಾಲಿಯಾಗಿರಬೇಕೆಂದೂ, ದೃಢ ಶರೀರ ಹಾಗೂ ವಿನಯಶಾಲಿಯಾಗಿರಬೇಕೆಂದೂ ಭಾವನೆಯಿತ್ತು. ಈ ಭಾವನೆಯಿಂದಲೇ ಆತ 'ಶ್ರುತಸ್ಯಯಾದಯಮಂತಮರ್ಭಕಃ ತಥಾ ಪರೇಷಾಂ ಯುಧಿ ಚೇತಿ' (ರಘು. ೩.೨೧) 'ವೇದಾದಿ ಶಾಸ್ತ್ರಗಳಲ್ಲಿ ಈ ನನ್ನ ಪುತ್ರನು ಪಾರಂಗತನಾಗುವನು ಹಾಗೂ ಶತ್ರುಗಳೊಡನೆ ಯುದ್ಧದಲ್ಲಿ ಶಸ್ತ್ರಪಾರಂಗತನೂ ಆಗುವನು' ಎಂದೂ, 'ಯುವಾ ಯುಗವ್ಯಾಯತಬಾಹುರಂಸಲಃ ಕಪಾಟವಕ್ಷಾಃ ಪರಿಣದ್ಧಕಂಧರಃ । ವಪುಃ ಪ್ರಕರ್ಷಾದಜಯದ್ಗುರುಂ ರಘುಃ ತಥಾಪಿ ನೀಚೈಃ ವಿನಯಾದದೃಶ್ಯತ॥' (ರಘು. ೩.೩೪) (ರಘು ಚೆಲುವಾದ ಹರೆಯ, ವಿಶಾಲಬಾಹು, ದ್ವಾರಸಮಾನ ಎದೆ, ಹರವಾದ ಹೆಗಲು, ಉನ್ನತವಾದ ಕೊರಳನ್ನು ಹೊಂದಿ ತನ್ನ ತಂದೆಯನ್ನು ಮೀರಿಸಿದನು. ಆದರೂ ವಿನಯದಿಂದ ತಲೆಬಾಗಿದವನಾಗಿದ್ದ)ಎಂದೂ ಅಭಿಪ್ರಾಯ ವ್ಯಕ್ತಪಡಿಸುತ್ತ ರಘುವಿನಲ್ಲಿ ಸತ್ಪುತ್ರನ ಲಕ್ಷಣಗಳನ್ನು ನಿರೂಪಿಸಿದ್ದಾನೆ.

ಕವಿಯ ದೃಷ್ಟಿಯಲ್ಲಿ ಗುರು ಅಥವಾ ಆಚಾರ್ಯ ಎನಿಸಿಕೊಳ್ಳುವ ವ್ಯಕ್ತಿಯು ಅರ್ಹತೆ ಮೇಲ್ಮಟ್ಟದ್ದಾಗಿರಬೇಕು. ಗುರು ಕೇವಲ ತಾನು ಪಂಡಿತನಾಗಿರುವುದು ಮಾತ್ರವೇ ಅಲ್ಲ, ತನ್ನ ಪಾಂಡಿತ್ಯವನ್ನು ಶಿಷ್ಯರಿಗೆ ಧಾರೆಯೆರೆಯುವ ಸಾಮರ್ಥ್ಯವನ್ನೂ ಹೊಂದಿರಬೇಕು,ತನ್ನ ಈ ಅಭಿಪ್ರಾಯವನ್ನು ಮಾಳವಿಕಾಗ್ನಿಮಿತ್ರ ನಾಟಕದ ಪರಿವ್ರಾಜಿಕೆಯ ಬಾಯಲ್ಲಿ ಆಡಿಸಿರುವ ಪರಿ ಮಾರ್ಮಿಕವಾಗಿದೆ-'ಶ್ಲಿಷ್ಟಾಕ್ರಿಯಾಕಸ್ಯ ಚಿದಾತ್ಮ ಸಂಸಾಥಿ ಸಂಕ್ರಾಂತಿರನ್ಯಸ್ಯ ವಿಶೇಷಯುಕ್ತಾ । ಯಸ್ಯೋಭಯಂ ಸಾಧು ಸ ಶಿಕ್ಷಕಾಣಾಂ ಧುರಿ ಪ್ರತಿಷ್ಠಾಪಯಿತ್ಯನ್ಯ ಏವ॥ (ಅಂಕ. ೧.೧೫) (ಕೆಲವರು ತಮ್ಮ ಶರೀರದಲ್ಲಿ ಅಭಿನಯಗಳನ್ನು ಸುಂದರವಾಗಿ ತೋರ್ಪಡಿಸುತ್ತಾರೆ. ಮತ್ತೆ ಕೆಲವರು ಬೇರೆಯವರಿಗೆ ಕಲಿಸುವುದರಲ್ಲಿ ವಿಶೇಷ ಕೌಶಲವುಳ್ಳವರಾಗಿರುತ್ತಾರೆ. ಯಾರು ಈ ಎರಡರಲ್ಲಿಯೂ ಶ್ರೇಷ್ಠರಾಗಿರುವರೋ ಅವರೇ ಆಚಾರ್ಯಶ್ರೇಷ್ಠರೆನಿಸಬಲ್ಲರು.) ಅಲ್ಲದೆ ವಿದ್ಯೆಯನ್ನು ಹೊಟ್ಟೆಹೊರೆಯುವುದಕ್ಕಾಗಿಯೇ ಯಾರು ಬಳಸುವರೋ ಅವರು ವಿದ್ಯೆಯ ವ್ಯಾಪಾರಿಗಳು ಎಂದು ನುಡಿಯುವ ಕವಿ ವಿದ್ಯೆಯ ಸದುಪಯೋಗವಾಗಬೇಕೆಂದು ಬಯಸುತ್ತ–'ಯಸ್ಯಾಗಮಃ ಕೇವಲ ಜೀವಿಕಾಯೈತಃ ಜ್ಞಾನಪಣ್ಯಂ ವಣಿಜಂ ವದಂತಿ' (ಮಾ.ವಿ. ಅಂಕ. ೧:೧೭) ಎನ್ನುತ್ತಾನೆ. ವಿದ್ಯೆ ಕಲಿಸುವ ಗುರು ಯೋಗ್ಯನಾಗಿರಬೇಕಾಗಿರುವಂತೆಯೇ ಕಲಿಯುವ ಶಿಷ್ಯನೂ ಯೋಗ್ಯನಾಗಿರಬೇಕೆಂಬುದು ಕವಿಯ ಸ್ಪಷ್ಟೋಕ್ತಿ. ಶಕುಂತಲೆಯು ದುಷ್ಯಂತನೊಡನೆ ಗಾಂಧರ್ವ ವಿವಾಹವಾಗಿರುವುದನ್ನು ಅರಿತು ಆಕೆಯನ್ನು ಅಭಿನಂದಿಸುವ ಸಂದರ್ಭದಲ್ಲಿ ಕಣ್ವರು ನುಡಿಯುವ 'ವತ್ಸೆ, ಸುಶಿಷ್ಯಪರಿದತ್ತಾ ವಿದ್ಯೇವಾಶೋಚನೀಯಾಸಿ ಸಂವೃತ್ತಾ' (ಶಾ. ಅಂ.೪) (ಮಗಳೆ, ಯೋಗ್ಯವಾದ ಶಿಷ್ಯನಿಗೆ ನೀಡಿದ ವಿದ್ಯೆಯಂತೆ ನೀನು ಶೋಕಕ್ಕೆ ಕಾರಣಳಾಗಿಲ್ಲ) ಮಾತು ಗಮನಾರ್ಹ.

ಕವಿ ಮಹಾನುಭಾವ ಕಾಳಿದಾಸ ಅದೃಷ್ಟದಲ್ಲಿ ನಂಬಿಕೆಯುಳ್ಳವನು. ಆದರೆ ಪುರುಷಾರ್ಥಪ್ರಾಪ್ತಿಗಾಗಿ ಶ್ರಮಿಸದ, ಜಡವ್ಯಕ್ತಿಗಳು ನುಡಿಯುವ ಅದೃಷ್ಟವಾದ ಆತನಿಗೆ ಸಮ್ಮತವಲ್ಲ. ಅದೃಷ್ಟ ಅಥವಾ 'ಭವಿತವ್ಯತಾ' ಎಂಬುದು ಹಿಂದಣ ಜನ್ಮಗಳಲ್ಲಿ ಮಾಡಿದ ಕರ್ಮಗಳ ಪರಿಣಾಮ ಮಾತ್ರ, ಕವಿ ಭವಿತವ್ಯತೆಯನ್ನು ಗುರುತಿಸುವುದು ಹೀಗೆಯೇ. ಪ್ರಯತ್ನ ಕೈಕೊಂಡ ಬಳಿಕವೂ ನಡೆಯುವುದನ್ನು ತಪ್ಪಿಸಲಾಗದಿರುವುದು, ಯಾವುದೇ ಪ್ರಯತ್ನವಿಲ್ಲದೆಯೂ ಕಾರ್ಯಕೈಗೂಡುವುದೂ 'ಭವಿತವ್ಯತೆ'ಯ ಮೂಲಕವೇ.ಶಾಕುಂತಲದ ಎರಡು ಸನ್ನಿವೇಶಗಳು.ಇಲ್ಲಿ ಪರೀಕ್ಷಾರ್ಹವಾಗಿವೆ. ಪತ್ನಿಯ ಸ್ಮೃತಿ, ಆಕಸ್ಮಿಕವಾಗಿ ದೊರೆತ ಉಂಗುರದಿಂದ ಮರುಕಳಿಸಿದಾಗ ದುಷ್ಯಂತ ವಿದೂಷಕನನ್ನು ಮರೆಗುಳಿ ಎಂದು ಆಕ್ಷೇಪಿಸಿದಾಗ 'ನ ವಿಸ್ಮರಾಮಿ ಕಿಂತು ಸರ್ವಂ ಕಥಯಿತ್ವಾ ಅವಸಾನೇ ತ್ವಯಾ ಪರಿಹಾಸವಿಜಲ್ಪ ಏಷಃ ನ ಭೂತಾರ್ಥ ಇತ್ಯಾಖ್ಯಾತಂ । ಮಯಾಪಿ ಮೃತ್ಪಿಂಡ ಬುದ್ಧಿನಾ ತಥೈವ ಗೃಹೀತಂ । ಅಥವಾ ಭವಿತವ್ಯತಾ ಖಲು ಬಲವತೀ' (ಶಾ. ಅಂ.೬)('ನಾನು ಮರೆಯಲಿಲ್ಲ. ಆದರೆ ಎಲ್ಲವನ್ನೂ ಹೇಳಿ ಕೊನೆಗೆ ನೀನು ಇದು ಹಾಸ್ಯಕ್ಕಾಗಿ ಆಡಿದ ಮಾತು, ನಿಜವಲ್ಲ ಎಂದೆ. ಮಣ್ಣುಮುದ್ದೆ ತುಂಬಿದ ಮೆದುಳಿನ ನಾನು ಹಾಗೆಂದೇ ತಿಳಿದೆ. ಅಥವಾ

ಭವಿತವ್ಯತೆಯೆ ಬಲವತ್ತರವಲ್ಲವೆ?). ಎರಡನೆಯ ಪ್ರಸಂಗ ದುಷ್ಯಂತ ಕಣ್ವಾಶ್ರಮವನ್ನು ಪ್ರವೇಶಿಸಿದಾಗಿನದು. ಆತನ ಬಲಭುಜ ಅದುರಲಾರಂಭಿಸಿದಾಗ ಆತ 'ಶಾಂತಮಿದಮಾಶ್ರಮಪದಂ ಸ್ಫುರತಿ ಚ ಬಾಹುಃ ಕುತಃ ಫಲಮಿಹಾಸ್ಯ। ಅಥವಾ ಭವಿತವ್ಯಾನಾಂ ದ್ವಾರಾಣಿ ಭವಂತಿ ಸರ್ವತ. (೧.೧೪)(ಈ ಆಶ್ರಮ ಶಾಂತವಾದುದು ತೋಳಾದರೋ ಅದುರುತ್ತಿದೆ ಇದರ ಫಲ ಇಲ್ಲೆಲ್ಲಿ? ಅಥವಾ ಅದೃಷ್ಟದ ಘಟನೆಗಳಿಗೆ ಎಲ್ಲೆಲ್ಲೂ ಬಾಗಿಲುಗಳು ತೆರೆದೇ ಇರುತ್ತವೆ.)

ವಿಮರ್ಶಿಸದೆ, ಪರೀಕ್ಷಿಸದೆ ಕಾರ್ಯಕ್ಕೆ ಕೈಕೊಳ್ಳುವುದು ದುಃಖದಾಯಕವೆಂದು ಭಾವಿಸುವ ಕವಿ ವಿಮರ್ಶಿಸಿಯೇ ಕಾರ್ಯಕ್ಕೆ ಕೈಕೊಳ್ಳುವುದು ಶ್ರೇಷ್ಠವೆಂದು ಭಾವಿಸುತ್ತಾನೆ. ಅದರಲ್ಲಿಯೂ ರಹಸ್ಯ ಸವಾಗಮದಂತಹ ವಿಷಯಗಳಲ್ಲಿಯಂತೂ ಪರೀಕ್ಷಿಸಿ ಕಾರ್ಯಕ್ಕೆ ಕೈಕೊಳ್ಳುವುದು ಅತ್ಯಂತ ಉಚಿತವಾದುದೆಂದು ಕವಿಯ ಉಪದೇಶ. ದುಷ್ಯಂತನಿಂದ ತಿರಸ್ಕೃತಳಾದ ಶಕುಂತಲೆಯನ್ನು ಕುರಿತು ಕಣ್ವಶಿಷ್ಯ ಶಾರ್ಙ್ಗರವ ನಾಡುವ 'ಅತಃ ಪರೀಕ್ಷ್ಯ ಕರ್ತವ್ಯಂ ವಿಶೇಷಾತ್ಸಂಗತಂ ರಹಃ। ಅಜ್ಞಾತ ಹೃದಯೇಷ್ವೇವಂ ವೈರೀಭವತಿ ಸೌಹೃದಮ್' (ಶಾ. ಅಂ. ೫-೨೪) (ಆದ್ದರಿಂದಲೇ ಒಂದು ಮೈತ್ರಿ ಅದರಲ್ಲಿಯೂ ಯಾವುದು ರಹಸ್ಯದ್ದೋ ವಿಶೇಷವಾಗಿ ಅದು ಪರೀಕ್ಷೆಯ ನಂತರವೇ ಬೆಳೆಸಲು ತಕ್ಕದ್ದು; ಪರಸ್ಪರ ಹೃದಯಗಳನ್ನರಿಯದವರಲ್ಲಿ ಸೌಹಾರ್ದ ಹೀಗೆ ವೈರವಾಗುತ್ತದೆ.)

ಲೋಕದಲ್ಲಿ ವ್ಯಕ್ತಿಯೊಬ್ಬ ಗಳಿಸಿದ ಪದವಿ, ಪ್ರತಿಷ್ಠೆಗಳು ಸಾರ್ಥಕವಾಗುವುದು ಅವು ಪರರ ಕಷ್ಟನಿವಾರಕವಾದಾಗ ಮಾತ್ರ, ಸ್ವಾರ್ಥದೂರ ಹಾಗೂ ಲೋಕಸೇವಾದೃಷ್ಟಿಯುಳ್ಳವಾದಾಗ ಮಾತ್ರ ಎಂಬುದು ಕವಿಯ ದೃಷ್ಟಿ. ದುಷ್ಯಂತನ ಪ್ರಜಾಪಾಲನಾ ವೈಖರಿಯ ವರ್ಣನೆಯ ನೆಪದಿಂದ ಕವಿ ನುಡಿದಿರುವ ಮಾತುಗಳು ಈ ದೃಷ್ಟಿಯ ನಿರೂಪಕವಾಗಿವೆ. 'ಸ್ವಸುಖನಿರಭಿಲಾಷಃ ಖಿದ್ಯಸೇ ಲೋಕಹೇತೋಃ ಪ್ರತಿದಿನಮಥವಾ ತೇ ವೃತ್ತಿರೇವಂವಿಧೈವ। ಅನುಭವತಿ ಹಿ ಮೂರ್ಧ್ನಾ ಪಾದಪಸ್ತೀವ್ರಮುಷ್ಣಂ ಶಮಯತಿ ಪರಿತಾಪಂ ಛಾಯಯಾ ಸಂಶ್ರಿತಾನಾಮ್॥" (ಶಾ ಅಂ. ೫.೭) (ಸ್ವಸುಖದಲ್ಲಿ ಉಪೇಕ್ಷೆಯಿಂದ ನೀನು ಲೋಕಕ್ಕೋಸ್ಕರ ಶ್ರಮಿಸುತ್ತೀಯೆ, ಆದರೆ ಆದು ನಿನ್ನ ಕರ್ತವ್ಯದ ಲಕ್ಷಣ. ವೃಕ್ಷವು ತನ್ನ ತಲೆಯ ಮೇಲೆ ತೀವ್ರ ಉಷ್ಣವನ್ನನುಭವಿಸುತ್ತದೆ, ಆದರೆ ನೆರಳಿನಿಂದ ಆಶ್ರಿತರ ಪರಿತಾಪವನ್ನು ಹೋಗಲಾಡಿಸುತ್ತದೆ)

ಕಾಳಿದಾಸ ಉತ್ಕೃಷ್ಟ ವಿಚಾರ ಸಂಪತ್ತುಳ್ಳ ಕವಿ. ಕಲಾಕುಶಲವಾದ ಜೀವನವನ್ನೇ ಕಾಣಬಯಸಿದವನು, ಆತ. ಕಲೆಯಿಂದ ವಿಲಸಿತವಾದ ಜೀವನವೇ ಆತನಿಗೆ ಪ್ರಿಯವಾಗಿತ್ತು. ಆತನ ಕೃತಿಗಳಲ್ಲಿ ಅಲ್ಲಲ್ಲಿ ಕಾಣಬರುವ ಅನೇಕ ಮಾತುಗಳು, ವರ್ಣನೆಗಳು ಆತನ ಕಲಾಪ್ರಿಯತೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತವೆ. 'ಕಾರ್ಯಾ ಸೈಕತಲೀನಹಂಸಮಿಥುನಾ ಸ್ರೋತೋವಹಾಮಾಲಿನೀ....' (ಶಾ. ಅಂ. ೬.೧೭),'ಪಾದಾನ್ಯಾಸಕ್ವಣಿತರಶನಾಸ್ತತ್ರ ಲೀಲಾವಧೂತ್ಯೈಃ....' (ಮೇ. ಪೂ. ೩೫), 'ಅಹೋರಾಗ ಪರಿವಾಹಿಣೀ ಗೀತಿಃ....' (ಶಾ. ಅಂಕ. ೬), 'ತವಾಸ್ಮಿ ಗೀತರಾಗೇಣ

ಹಾರಿಣಾ ಪ್ರಸಭಂ ಹೃತಃ' (ಶಾ. ಅಂ. ೧.೫) ಇತ್ಯಾದಿ ಮಾತುಗಳು ಕ್ರಮವಾಗಿ ಕವಿಯ ಚಿತ್ರಕಲೆ, ನೃತ್ಯ ಹಾಗೂ ಸಂಗೀತದಲ್ಲಿನ ಅಭಿರುಚಿಯನ್ನು ನಿರೂಪಿಸುತ್ತಿವೆ.

ಭಾರತೀಯ ದಾರ್ಶನಿಕ ಪರಂಪರೆ ಕಾಳಿದಾಸನ ಮೇಲೆ ಅಪಾರ ಪ್ರಭಾವ ಬೀರಿದೆ. ಆದ್ದರಿಂದಲೇ ಆತ ಯಾವುದೇ ಸನ್ನಿವೇಶದಲ್ಲಿಯೂ ತನ್ನ ಸ್ವಾಭಾವಿಕ ಪ್ರಸನ್ನತೆಯನ್ನು ತೊರೆಯಬಯಸುವುದಿಲ್ಲ. ಆತ್ಮ ಆನಂದಮಯವಾದುದೆಂದು ಬಲ್ಲ ಆತ ಅಳುಬುರುಕು ಜೀವನವನ್ನು ಜೀವನವೆಂದೇ ಪರಿಗಣಿಸುವುದಿಲ್ಲ. ಆತ ಜೀವನದಲ್ಲಿ ವಿನೋದ, ನಗೆ, ವಿವಿಧ ಕಲೆ, ಕ್ರೀಡೆಗಳ ವಿಲಾಸವನ್ನೇ ಕಾಣಬಯಸುತ್ತಾನೆ. ಜೀವನದ ಉದ್ದೇಶ ಖಿನ್ನತೆಯಾಗಲಿ, ಉದಾಸೀನತೆಯಾಗಲಿ ಅಲ್ಲವೆಂಬುದು ಆತನ ದೃಷ್ಟಿಕೋನ. ಆದರೆ ಹೀಗೆಂದ ಮಾತ್ರಕ್ಕೆ ಆತ ಜೀವನದ ವಾಸ್ತವಿಕ ಸತ್ಯಗಳಿಂದ ದೂರವಿರಲು ಬಯಸಿದನೆಂದು ತಿಳಿಯಬೇಕಾಗಿಲ್ಲ. ಆತ ಮಾನವಜೀವನದ ಅಸಾರತೆಯನ್ನೂ ಚೆನ್ನಾಗಿ ಬಲ್ಲವನಾಗಿದ್ದ 'ಮರಣಂ ಪ್ರಕೃತಿಃ ಶರೀರಿಣಾಂ ವಿಕೃತಿರ್ಜೀವಿತಂ ಮುಚ್ಯತೇ ಬುಧೈಃ' (ರಘು. ೮.೮೭) (ಜೀವಿಗೆ ಸಾವು ಪ್ರಕೃತಿ ಬದುಕೇ ವಿಕೃತಿ ಎಂದು ವಿದ್ವಾಂಸರು ನುಡಿದಿದ್ದಾರೆ) ಎಂಬುದು ಆತನಿಗೆ ತಿಳಿದಿತ್ತು. ಜೀವನದಲ್ಲಿ ಶಾಶ್ವತ ಸುಖವಾಗಲಿ, ಶಾಶ್ವತ ದುಃಖವಾಗಲಿ ಎಂದಿಗೂ ಇರಲು ಸಾಧ್ಯವಿಲ್ಲ ಎಂಬ ಸತ್ಯವನ್ನೂ ಆತ ಚೆನ್ನಾಗಿ ಬಲ್ಲವನಾಗಿದ್ದ-'ಕಸ್ಯಾತ್ಯಂತಂ ಸುಖಮುಪನತಂ ದುಃಖಮೇಕಾಂತತೋವಾ ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರನೇಮಿಕ್ರಮೇಣ' (ಉ. ಮೇ ೪೯) (ಈ ಲೋಕದಲ್ಲಿ ಶಾಶ್ವತ ಸುಖವಾಗಲಿ, ದುಃಖವಾಗಲಿ ಯಾರಿಗಿದೆ? ಚಕ್ರದ ಅರೆಕೋಲುಗಳಂತೆ ಸುಖದುಃಖಗಳು ಒಂದಾದ ಮೇಲೊಂದು ಬರುತ್ತಿರುತ್ತವೆ) ಎಂಬ ಮಾತು ಇದಕ್ಕೆ ಸಾಕ್ಷಿ. ಆದರೆ ದುಃಖದ ಸ್ವರೂಪವನ್ನೂ, ಅದರ ನಿವಾರಣೋಪಾಯವನ್ನೂ ಕಾಳಿದಾಸ ಕಂಡುಕೊಂಡಿದ್ದ. ದುಃಖಕ್ಕೆ ತನ್ನದೇ ಆದ ಸ್ಥಿತಿಯೆಂಬುದಿಲ್ಲ. ವಿವೇಕ-ಜ್ಞಾನಗಳೆಂಬ ಜ್ಯೋತಿಗಳೆದುರಿಗೆ ದುಃಖವೆಂಬ ಕತ್ತಲೆ ಕ್ಷಣಮಾತ್ರವೂ ನಿಲ್ಲಲಾರದು ಎಂಬ ಸತ್ಯವನ್ನು ಮನಗಂಡಿದ್ದ ಆತ ಜ್ಞಾನಜ್ಯೋತಿಯಿಂದ ಬೆಳಗುವ ಆನಂದಮಯವಾದ, ಸದ್ಗುಣಗಳಿಂದ ಶೋಭಿಸುವ, ಪರಿಶುದ್ಧ ವಿದ್ಯಾ ಸಂಪನ್ನವಾದ, ಕಲೆಗಳಿಂದ ಪರಿಪೂರ್ಣಗೊಂಡ ತುಂಬು ಜೀವನದಲ್ಲಿಯೇ ನಿಷ್ಠೆಯಿರಿಸಿದ್ದ.

ಜೀವನದಲ್ಲಿ ಅರ್ಥಕಾಮಗಳ ಉಪಾದೇಯತೆ ಅನಿವಾರ್ಯ, ಏಕೆಂದರೆ ಜೀವನದ ಅಸ್ತಿತ್ವ ಅರ್ಥಕಾಮಗಳನ್ನವಲಂಬಿಸಿದೆ. ಆದರೆ ಇವೆರಡೂ ಧರ್ಮಾನುಸಾರಿಯಾಗಿರಬೇಕೆಂಬುದು ಕಾಳಿದಾಸನ ಅಭಿಮತ- 'ಅಪ್ಯರ್ಥಕಾಮೌ ತಸ್ಯಾಸ್ತಾಂ ಧರ್ಮಏವ ಮನೀಷಿಣಃ' (ರಘು. ೧.೨೫) (ಧೀಮಂತನಾದ ಆತನಲ್ಲಿ ಧರ್ಮಪುರುಷಾರ್ಥಕ್ಕಾಗಿಯೇ ಅರ್ಥಕಾಮಗಳಿದ್ದುವು). ಕಾಮುಕತೆಯ ಜೀವನ ಆತನಿಗೆ ಅಪ್ರಿಯವಾಗಿತ್ತು. ಶಾಕುಂತಲದಲ್ಲಿ ಶಕುಂತಲೆಯನ್ನು ದೂರ್ವಾಸನಿಂದಲೂ, ಮೇಘದೂತದಲ್ಲಿ ಯಕ್ಷನನ್ನೂ ಕುಬೇರನಿಂದಲೂ ಶಾಪಗ್ರಸ್ತರನ್ನಾಗಿಸುವಲ್ಲಿಯೂ, ಕುಮಾರಸಂಭವದಲ್ಲಿ ಕಾಮದೇವನನ್ನು ಈಶ್ವರನಿಂದ ಸುಡಿಸುವುದರಲ್ಲಿಯೂ ಕವಿಯ

ಈ ಮನೋಭಾವ ಸ್ಪಷ್ಟವಾಗಿ ಅಭಿವ್ಯಕ್ತವಾಗಿದೆ. ಧರ್ಮವಿರುದ್ಧವಾದ ಕಾಮವನ್ನು ಮಾನವರಲ್ಲಿಯಾಗಲಿ, ಯಕ್ಷಾದಿ ದೇವಯೋನಿ ವಿಶೇಷಗಳಲ್ಲಾಗಲಿ ಅಥವಾ ದೇವತೆಗಳಲ್ಲಿಯೇ ಆಗಲಿ ಆತ ಸಹಿಸುವವನಲ್ಲ.

ಜೀವನವನ್ನು ಕುರಿತಂತೆ ಕವಿಯ ದೃಷ್ಟಿ ಯಾವುದು? ಯಾವ ಬಗೆಯ ಜೀವನ ಆತನಿಗೆ ಪ್ರಿಯ? ಜೀವನವನ್ನು ಕುರಿತಂತೆ ಆತನ ಭಾವನೆಯೇನು? ಈ ಎಲ್ಲ ಪ್ರಶ್ನೆಗಳಿಗೂ ಉತ್ತರವೋ ಎಂಬಂತೆ ಆತ ರಘುವಂಶಮಹಾಕಾವ್ಯದ ಆರಂಭದಲ್ಲಿ ಸಂಕ್ಷಿಪ್ತವಾಗಿ, ಆದರೆ ಸಾರಪೂರ್ಣವಾಗಿ 'ಸೋಽಹಮಾಜನ್ಮ ಶುದ್ಧಾನಾಂ,' 'ಯಥಾವಿಧಿಹುತಾಗ್ನೀನಾಂ', 'ತ್ಯಾಗಾಯ ಸಂಭೃತಾರ್ಥಾನಾಂ', 'ಶೈಶವೇಽಭ್ಯಸ್ತ ವಿದ್ಯಾನಾಂ', 'ಜುಗೋಪಾತ್ಮಾನಮತ್ರಸ್ತೋ ಭೇಜೇ ಧರ್ಮಮನಾತುರಃ', 'ಜ್ಞಾನೇ ಮೌನಂ ಕ್ಷಮಾಶಕ್ತೌ' ಎಂಬ ಮಾತುಗಳಲ್ಲಿ ನುಡಿದಿದ್ದಾನೆ.

ನಿದ್ರಾಹಾರಮೈಥುನಾದಿಗಳೇ ಪ್ರಮುಖವಾದ ಮಾನವ ಜೀವನ ಪಶುಜೀವನಕ್ಕಿಂತ ಖಂಡಿತ ಭಿನ್ನವಲ್ಲ, ಮಾನವ ಜೀವನದ ಕೃತಾರ್ಥತೆ ಇಷ್ಟರಿಂದಲೇ ಸಾಧಿತವಾಗುವುದೂ ಇಲ್ಲ. ಕವಿ ಬಯಸುವುದು ಮಾನವ ಮಾನವೀಯ ಜೀವನ ನಡೆಸುವುದನ್ನು, ಮಾನವ ಜೀವನ ಅಪೇಕ್ಷಿಸುವುದು ಮನಸ್ಸಿನ ಪವಿತ್ರತೆ, ಪುರುಷಾರ್ಥಗಳ ಈಡೇರಿಕೆ, ಲೋಕ ಸೇವೆ, ವಿದ್ಯಾರ್ಜನೆ, ಶಾಸ್ತ್ರಾನುಸಾರಿಯಾದ ಧೀಮಂತಿಕೆ, ಕರ್ತವ್ಯಪರತೆ, ಇಂದ್ರಿಯ ಸುಖಗಳಲ್ಲಿ ಅನಾಸಕ್ತಿ, ಗುಣಗ್ರಾಹಿತ್ವ ಮುಂತಾದವುಗಳನ್ನು. ಇಂತಹ ಜೀವನವನ್ನೇ ಕಾಳಿದಾಸ ಜೀವನವೆಂದು ಪರಿಗಣಿಸುತ್ತಾನೆ. ಕವಿ ತನ್ನ ಕಾವ್ಯಗಳಲ್ಲಿ ಪ್ರತಿಪಾದಿಸಿರುವ ಜೀವನ ಆದರ್ಶಜೀವನವೆಂದೂ, ಸಾಮಾನ್ಯ ಜೀವನವಲ್ಲವೆಂದೂ ಹಲವರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಅಭಿಪ್ರಾಯ ಅನುಚಿತವಾದುದು. ಸಮಾಜದ ಒಳಿತಿಗೆ, ರಾಷ್ಟ್ರದ ಅಭ್ಯುತ್ಥಾನಕ್ಕೆ, ಇಡೀ ವಿಶ್ವದ ಸಂಸ್ಕಾರಕ್ಕೆ ಬೇಕಾದುದು ಆದರ್ಶಜೀವನವೇ ಹೊರತು ಬೇರೆಯದಲ್ಲ. ದೈನ್ಯ, ದಾರಿದ್ರ್ಯ, ಪರಾಧೀನತೆ, ವಿಪತ್ಪರಂಪರೆಯನ್ನೊಳಗೊಂಡುದು ಸಾಮಾನ್ಯ ಜೀವನ. ಅಲ್ಲಿ ಅಧಿಕಾರ ಮಾನವನನ್ನು ದುರ್ಬಲಗೊಳಿಸುವ ಶಕ್ತಿಗಳದ್ದು. ಈ ಬಗೆಯ ಜೀವನ ಪಶುಗಳಿಗೆ ಹಿತಕರವಾಗಬಹುದೇ ಹೊರತು ಬುದ್ಧಿಜೀವಿ, ಧೀಮಂತ ಮಾನವರಿಗಲ್ಲ. ಮಾನವಶರೀರವನ್ನು ಪಡೆದೂ ಆಹಾರ-ನಿದ್ರೆ-ಭಯ-ಮೈಥುನಗಳಲ್ಲಿಯೇ ಆತನ ಜೀವನ ಕಳೆಯುವುದಾದರೆ ಅಂತಹ ಜೀವನದಿಂದ ಲಾಭವೇನು? ಆದ್ದರಿಂದಲೇ ಕಾಳಿದಾಸ ಮಾನವ ಚೇತನವನ್ನು ಊರ್ಧ್ವಗಾಮಿಯಾಗಿಸಬಲ್ಲ ಆದರ್ಶ ಜೀವನವನ್ನೇ ಜೀವನವೆಂದು ಪರಿಗಣಿಸಿದ್ದಾನೆ.

ನಡೆದಾಗಲೆ ನುಡಿಗೆ ಬೆಲೆ

ಪ್ರೊ. ಕೆ. ಬಿ. ಪ್ರಭುಪ್ರಸಾದ್

"ಮೃದುವಚನವೇ ಸಕಲ ಜಪಂಗಳಯ್ಯ, ಮೃದುವಚನವೇ ಸಕಲ ತಪಂಗಳಯ್ಯಾ" ಎಂದು ಬಸವಣ್ಣನವರು ಮಾತಿನ ಲೌಕಿಕಸಾರ್ಥಕತೆ, ಅಲೌಕಿಕ ಮಹತ್ವ ಎರಡನ್ನೂ ಸಮನ್ವಯಗೊಳಿಸಿ ಹೇಳಿದ್ದಾರೆ. ಈ ಮಾತುಗಳನ್ನು ಹೇಳಿದ ಬಸವಣ್ಣನವರನ್ನು ನೆನೆದರೆ, ಮೇಲುಜಾತಿ, ಕೀಳುಜಾತಿ, ಸಿರಿವಂತ–ಬಡವ, ಮಡಿವಂತ, ಅಸ್ಪೃಶ್ಯ ಎಂಬಿತ್ಯಾದಿ ಧಾರ್ಮಿಕ, ಆರ್ಥಿಕ, ಸಾಮಾಜಿಕ ಅಸಮತೆಗಳ ಹಲವಾರು ಹೀನ ಪದ್ಧತಿಗಳ ಭದ್ರ ವ್ಯವಸ್ಥೆಯನ್ನೇ ಅಲುಗಾಡಿಸಿದ ಕ್ರಾಂತಿಯನ್ನುಂಟುಮಾಡಿದ ಯುಗ ಪ್ರವರ್ತಕರು ಇವರೇಯೋ ಎಂದು ಆಶ್ಚರ್ಯವಾಗುತ್ತವೆ. ಆದರೆ ನಿಜ. ಅವರ ಮೃದು ನುಡಿಯಲ್ಲಿ ಕ್ರಾಂತಿಯ ಸಿಡಿಲೂ ಅಡಗಿತ್ತು. ಬರಿದೆ ಆಡಿ ಆಡಿ ಸವೆದ ಮಾತು ಅವರಿಂದ, ಅವರ ನಡೆಯಿಂದಾಗಿ, ಹೊಸ ಅರ್ಥವನ್ನು ಪಡೆದುಕೊಂಡಿತು. ಅರ್ಥವನ್ನು ಕಳೆದುಕೊಂಡು ಸತ್ವಹೀನವಾಗಿದ್ದ ಮಾತು ನವಚೈತನ್ಯವನ್ನು ಪಡೆದು ಶಕ್ತಿಶಾಲಿಯಾಯಿತು.

ಎಲ್ಲ ಅನ್ಯಾಯದ ವಿರುದ್ಧ, ಅಸತ್ಯ, ಅಧರ್ಮಗಳ ವಿರುದ್ಧ, ವ್ಯಕ್ತಿ ಜೀವನ, ಸಮಾಜ ಜೀವನಗಳಲ್ಲಿ ವಿಷವರ್ತುಲವಾಗಿ ಬಿಟ್ಟಿದ್ದ ಎಲ್ಲ ದೋಷಗಳ ವಿರುದ್ಧ ಹೋರಾಡಲು ಸಾತ್ವಿಕ ಚೇತನಗಳ ಸಂಘಟನೆ ಮಾಡಿತು ಬಸವಣ್ಣನವರ ಮಾತು. ಅಂದಿನ ಕಾಲಕ್ಕೆ ಮಾತ್ರವಲ್ಲ, ಎಲ್ಲ ಕಾಲಕ್ಕೂ ಮಾನವಧರ್ಮ ಯಾವುದು, ವ್ಯಕ್ತಿ ಹೇಗೆ ನಡೆದುಕೊಂಡರೆ ಇಹ–ಪರ ಎರಡನ್ನೂ ಸಾಧಿಸಬಹುದು, ಸಮಾಜದ ವ್ಯವಸ್ಥೆ ಹೇಗಿದ್ದರೆ ಸರ್ವಜನರ ಹಿತವೂ, ವ್ಯಕ್ತಿಯ ಆತ್ಮೋದ್ಧಾರವೂ ಪರಸ್ಪರ ವಿರೋಧವಿಲ್ಲದೆ ಸಾಧಿತವಾಗುತ್ತದೆ ಎಂಬ ವಿವೇಕವನ್ನು ಎಚ್ಚರಿಸುವುದೇ ಅಣ್ಣನವರ ಎಲ್ಲ ಮಾತುಗಳ ಗುರಿ.

ಆಡುವ ಮಾತು ಸತ್ಯವಾಗಿರಲಿ. ಧರ್ಮದಲ್ಲಿ ನಿರತವಾದ ನಡೆ ದೃಢವಾಗಿರಲಿ. ಆಕ್ರೋಶ ಏಕೆ? ಉದ್ವೇಗ ಏಕೆ? ತಪ್ಪು ಮಾಡಿದವರ ಬಗೆಗೆ ಕೋಪ ಬೇಡ. ವೈರ ಬೇಡ. ಸಮಾಧಾನಚಿತ್ತದಿಂದ ತಪ್ಪನ್ನು ಅಂದರೆ ಮೊದಲು ತನ್ನೊಳಗಿರುವ ದೋಷವನ್ನು ಅರಿತು ತಿದ್ದಿಕೊಂಡರಾಯಿತು.

ಮೃದು ವಚನ, ಸದು ವಿನಯಗಳಿಂದ ಸದಾಶಿವನ ಒಲುಮೆಯನ್ನೇ ಪಡೆದ ಭಕ್ತಿ ಭಂಡಾರಿ ಬಸವಣ್ಣನವರು ಜ್ಞಾನ–ಭಕ್ತಿ–ವೈರಾಗ್ಯಗಳಲ್ಲಿ ಅಪ್ರತಿಮರೆನಿಸಿದ ಮಹಾಮಹಾ ಶರಣ ಶರಣೆಯರ ನಡುವೆ ನಾಯಕಮಣಿಯಾಗಿ ರಾರಾಜಿಸಿದರು. ಅವರ ನಡೆ, ನುಡಿ, ಭಕ್ತಿ, ಸದಾ ಎಚ್ಚರಿಕೆಯಿಂದ ಪಾಲಿಸುತ್ತಿದ್ದ ಸದಾಚಾರಗಳನ್ನು ಎಲ್ಲ ಶಿವಶರಣರೂ ಮುಕ್ತ ಕಂಠದಿಂದ ಹೊಗಳಿ ಕೊಂಡಾಡಿದರು.

"ಎನ್ನವರೊಲಿದು ಹೊನ್ನ ಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ!
........ಕೂಡಲ ಸಂಗಮದೇವಾ ನೀನೆನಗೊಳ್ಳಿದನಾದರೆ
ಎನ್ನ ಹೊಗಳತೆಗಡ್ಡ ಬಾರಾ, ಧರ್ಮಿ."

—ವಿನಯಶೀಲ ಬಸವಣ್ಣನವರ ಪ್ರತಿಕ್ರಿಯೆ ಇದು.

"ಎನಗಿಂತ ಕಿರಿಯರಿಲ್ಲ. ಶಿವಭಕ್ತರಿಗಿಂತ ಹಿರಿಯರಿಲ್ಲ."
"ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ
ಅನುಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದರೆ ನಿಮಗಾನು ದ್ರೋಹಿ."
"ಮಾಡುವಂತಿರಬೇಕು, ಮಾಡದಂತಿರಬೇಕು
ಮಾಡುವ ಮಾಟದೊಳಗೆ ತಾನಿಲ್ಲದಿರಬೇಕು
ಕೂಡಲಸಂಗಮದೇವರ ನೋಡುತ್ತ ನೋಡುತ್ತ ನೋಡದಂತಿರಬೇಕು."

ಬಸವಣ್ಣನವರಾಡಿದ ಇಂತಹ ಮಾತು ಒಂದೇ, ಎರಡೇ! ಅದೊಂದು ರತ್ನರಾಶಿ! ಅವರ ಒಂದೊಂದು ಮಾತೂ ಎಲ್ಲರಿಗೂ ಎಲ್ಲ ಕಾಲಕ್ಕೂ ದಾರಿ ಬೆಳಕು.

"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ...."

ಎಂದು ಈ ಲೋಕದ ಬದುಕು ಮೊದಲು ಹಸನಾಗಲಿ. ಆಗ ಇದೇ ಪರತತ್ವದ ಅರಿವನ್ನು ಪಡೆಯಬೇಕೆಂಬ ಪರಮಾರ್ಥ ಸಾಧನೆಗೆ ಮೆಟ್ಟಿಲೂ ಆಗುವುದೆಂದು ವರ್ತಮಾನದ ಸಾಮಾಜಿಕ ಜೀವನದ ಪರಿಶುದ್ಧಿಯ ಕಡೆ ಮೊದಲು ಗಮನ ಸೆಳೆದರು. "ಕಾಯಕವೇ ಕೈಲಾಸ," ಎಂಬ ದಿವ್ಯವಾದ ದುಡಿಮೆಯ ಮಂತ್ರದ ಅನುಷ್ಠಾನವನ್ನು ಕೈಕೊಂಡರು. "ದಯವೇ ಧರ್ಮದ ಮೂಲ", ಎಂದು ನಡವಳಿಕೆಯನ್ನು ನಿರ್ದೇಶಿಸಿ, ನಂಬಿ ಕರೆದೊಡೆ "ಓ ಎನ್ನನೇ ಶಿವನು?" ಎಂದು ಭಗವದ್ಭಕ್ತಿ-ಶ್ರದ್ಧೆಗಳಿಗೆ ಧೈರ್ಯದ ಚೇತನವನ್ನಿತ್ತರು.

"ಏನು ಬಂದಿರಿ, ಹದುಳವಿದ್ದಿರೇ? ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೇ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೇ?
ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೇ?........"

ಎಂದು ಸಾಧಾರಣ ಸುಸಂಸ್ಕೃತ ಶಿಷ್ಟಾಚಾರದ ಪ್ರಥಮ ಪಾಠದಿಂದ ಹಿಡಿದು, ಶಬ್ದ ಸೋಪಾನವ ಕಟ್ಟಿ, ದೇವಲೋಕಕ್ಕೆ ಬಟ್ಟೆಯನ್ನು ನಿರ್ಮಿಸುವ, ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯುವ ಮಾತೆಂಬ ಜ್ಯೋತಿಯವರೆಗೆ ಬಸವಣ್ಣನವರ ನುಡಿಗಳು ಹಬ್ಬಿವೆ.

ಅಣ್ಣನವರ ಮಾತಿನಲ್ಲಿ, ಎಂತಹ ಮಾರ್ದವತೆ, ಎಂತಹ ಲೋಕಾನುಕಂಪೆ, ಎಂತಹ ನಿರ್ಮಲವಾದ ಅಂತಃಕರಣ! ಅವರ ಭಕ್ತಿ, ನಿರಂತರವೂ ತಮ್ಮ ಭಾವಶುದ್ಧಿಯನ್ನು ಕಾಯ್ದುಕೊಳ್ಳಬೇಕೆಂಬ ಸೂಕ್ಷ್ಮವಾದ, ಚಿರಜಾಗ್ರತವಾದ ಸಂಕಲ್ಪವೂ, ಮಾತುಮಾತಿನಲ್ಲಿ ಅಭಿವ್ಯಕ್ತವಾದುದರಿಂದಲೇ ಅವರ ನುಡಿ ಮುತ್ತಿನಹಾರವಾಯಿತು.

ಸಮಾಜದಲ್ಲಿ ಕಾಣುವ ಸ್ವಾರ್ಥ, ಅಸಮತೆ, ನಿಷ್ಕರುಣೆ, ಅಸಂಸ್ಕೃತ ನಡೆ-

ನುಡಿಗಳನ್ನು ಎತ್ತಿ ತೋರಿಸುವಾಗ ಮಾತು ಕೊಂಚ ಹರಿತವಾಗುತ್ತದೆ. ನಿಷ್ಠುರವಾಗುತ್ತದೆ. ಆದರೆ ಒರಟಾಗುವುದಿಲ್ಲ.

"ನ್ಯಾಯ ನಿಷ್ಠುರಿ; ದಾಕ್ಷಿಣ್ಯಪರನು ನಾನಲ್ಲ;
ಲೋಕಪಿರೋಧಿ; ಶರಣನಾರಿಗಂಜುವನಲ್ಲ,
ಕೂಡಲ ಸಂಗಮದೇವರ ರಾಜತೇಜದಲ್ಲಿಪ್ಪನಾಗಿ".

ಅನ್ಯಾಯ, ಅಧರ್ಮಗಳೊಂದಿಗೆ ರಾಜಿ ಮಾಡಿಕೊಳ್ಳುವ ದಾಕ್ಷಿಣ್ಯ ಅವರಿಗೆ ಸೇರದು. ನಿಷ್ಠುರವಾಗಲಿ, ಲೋಕವೇ ವಿರೋಧಿಯಾಗಲಿ, ಅಂಜಿಕೆಯಿಲ್ಲ. "ಸಕಲ ಜೀವಾತ್ಮರಿಗೆ ಲೇಸನೇ ಬಯಸುವ" ಕೂಡಲ ಸಂಗನ ಶರಣರೆಂದ ಮೇಲೆ ಯಾರ ಭಯ? ಆಗ ಮಾತು ಕಟು ಆಗಬಹುದು. ಆದರೆ ಅದರಲ್ಲಿ ನಂಜಿಲ್ಲ. ಅಧರಕ್ಕೆ ಕಹಿ, ಉದರಕ್ಕೆ ಸಿಹಿ. ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ.

ಬೇವ ಸವಿದವರು ನಿರೋಗಿಗಳಾಗಿ ವಜ್ರಕಾಯರಾಗುವಂತೆ ಶರಣರ ವಚನ ಸವಿದವರು ಭವರೋಗದಿಂದ ಮುಕ್ತರಾಗಿ ಪರಮಾನಂದವನ್ನು ಪಡೆವರು.

ಕೇವಲ ಶಬ್ದಸೌಂದರ್ಯಕ್ಕಾಗಿ, ಉಕ್ತಿ ಚಮತ್ಕಾರಕ್ಕಾಗಿ ನುಡಿಯುವವರಲ್ಲ ಬಸವಣ್ಣನವರು.

"ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯಾ"

ಎಂಬ ಸುಂದರ, ಅರ್ಥಗರ್ಭಿತ ವಚನವನ್ನೆ ಪರಿಭಾವಿಸಿ ನೋಡಬಹುದು. ವಿದ್ಯಾವಿನಯ ಸದ್ಗುಣ ಸಂಪನ್ನನಾದ ಸುಸಂಸ್ಕೃತನ ನುಡಿ ಮುತ್ತಿನ ಹಾರವಾಗುತ್ತದೆ. ಆಗ ಮಾತು ವ್ಯಾವಹಾರಿಕ ಪ್ರಯೋಜನ ಸ್ತರದಿಂದ ಕಾವ್ಯದ ನಿಲುವಿಗೇರುತ್ತದೆ. ಒಳಗೆ ವಿಚಾರದ ಬೆಳಕು ಸಹಜವಾಗಿ ಸ್ವಯಂಪ್ರಕಾಶವಾಗಿ ಮೂಡಿದಾಗ ಮಾಣಿಕ್ಯದ ದೀಪ್ತಿಯಾಗುತ್ತದೆ. ಸತ್ಯದರಿವಿನ ನಿಲುವಿನಲ್ಲಿ ಮಾತು ಅಸಂದಿಗ್ಧವಾಗುತ್ತದೆ. ಸ್ಫಟಿಕದ ಶಲಾಕೆಯಂತೆ ಪಾರದರ್ಶಕವಾಗುತ್ತದೆ. ಈ ಎರಡು ಹಂತಗಳಿಗೂ ಮೀರಿದುದು ಲಿಂಗ ಮೆಚ್ಚಿ ಅಹುದಹುದೆನ್ನುವ ಶರಣರ ಅನುಭಾವಿನುಡಿ. ನುಡಿದ ಮಾತನ್ನು ಪಂಡಿತರಿರಲಿ, ಕವಿಗಳಿರಲಿ, ಲೋಕವೇ ಮೆಚ್ಚಿದರೂ ಸಾಲದು. ಅಂತಸ್ಸಾಕ್ಷಿ, ಪರಮ ಜ್ಞಾನ, ಪರವಸ್ತು ಎಂದು ಕರೆಯಲ್ಪಡುವ ಲಿಂಗ ಮೆಚ್ಚಬೇಕು. ಅಹುದಹುದೆಂದು ತಲೆದೂಗಬೇಕು. ಅಷ್ಟಕ್ಕೇ ಅದು ನಿಲ್ಲುವುದಿಲ್ಲ. ನುಡಿಯನ್ನು ಲಿಂಗವೇ ಮೆಚ್ಚಿ ತಲೆದೂಗಿದರೂ ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮದೇವರು ಹೇಗೆ ತಾನೆ ಒಲಿಯುತ್ತಾನೆ, ಎಂಬ ಕಡೆಯ ಸಾಲು ಇಡೀವಚನದ ಅರ್ಥಕ್ಕೆ ಜಗ್ಗೆಂದು ಬೆಳಕನ್ನು ಚೆಲ್ಲುತ್ತದೆ. ಮಾತು, ಎಷ್ಟು ಚೆಂದವಾದರೇನು, ಎಷ್ಟು ವಿಚಾರಪೂರ್ಣವಾದರೇನು, ಅದಕ್ಕೆ ಬೆಲೆ ಬರುವುದು ನಡೆಯಲ್ಲಿ ಅದು ಮೂಡಿದಾಗಲೆ.

ನುಡಿಗೆ ಮಹತ್ವ, ಮನ್ನಣೆ ಬರುವುದು ಅದರ ತಿರುಳನ್ನು ನಡೆಯಲ್ಲಿ ಅನುಷ್ಠಾನ ಮಾಡಿದಾಗಲೆ.

ಬಸವಣ್ಣನವರು ಮೊದಲು ತಮಗೆ ತಾವೇ ಹೀಗೆ ಹೇಳಿಕೊಂಡಿರಬೇಕು. ತಮ್ಮಿಂದ ಪಡೆದ ಸ್ಫೂರ್ತಿ, ಪ್ರಭಾವಗಳಲ್ಲಿ ಉತ್ಸಾಹದಿಂದ ಬರೆಯಲಾರಂಭಿಸಿದ ಇತರ ವಚನಕಾರರನ್ನೂ ಲಕ್ಷ್ಯದಲ್ಲಿಟ್ಟುಕೊಂಡಿರಲೂಬಹುದು. ಈಗಂತೂ ಗಂಭೀರ ವಾಗಿ ಚಿಂತನ ಮಾಡಿ ಬರೆಯುವ ಎಲ್ಲರಿಗೂ ಇದು ಮಾರ್ಗಸೂಚಿಯಾಗಬಲ್ಲುದು. ಬಸವಣ್ಣನವರಂತೂ ಹೀಗೆ ನುಡಿದು, ನುಡಿದಂತೆಯೇ ನಡೆದು ಸಂಗನ ಒಲವನ್ನು ಪಡೆದರು.

ಸೂಕ್ಷ್ಮವಾದ ಭಾವಗಳನ್ನು, ವಿಚಾರಗಳನ್ನು ಅಭಿವ್ಯಕ್ತಿಸಲು ಮಾತು ಬೆಳೆಯಬೇಕಾಗುತ್ತದೆ. ಇದು ಬೌದ್ಧಿಕ ಮಟ್ಟದಲ್ಲಿ. ಶರಣರಿಗೆ ಇಷ್ಟು ಭಾಷಾ ಸಾಧನೆಯೂ ಸಾಕಾಗದು. ಗುಹೇಶ್ವರನ ನಿಲವು ಮಾತಿನ ಮಾಲೆಗೆ ಸಿಲುಕುವುದೇ, ಎಂದು ಎಚ್ಚರಿಸಿದರು ಅಲ್ಲಮಪ್ರಭು.

ಇದೇ ಮಾತನ್ನು ಒಂದು ಸಂದರ್ಭದಲ್ಲಿ ಶರಣೆ ಮುಕ್ತಾಯಕ್ಕ ಪ್ರಭುದೇವ ರಿಗೆ, "ಶಬ್ದ ಮುಗ್ಧವಾಗಬೇಕಲ್ಲದೆ ಶಬ್ದ ಸಂದಣಿಯ ಮಾತು ಸಯವಲ್ಲ" ಎಂಬ ನುಡಿಗಳಲ್ಲಿ ಹೇಳುತ್ತಾಳೆ. ಅದಕ್ಕೆ ಪ್ರಭು ಕೊಟ್ಟ ಉತ್ತರ ಅರ್ಥಗರ್ಭಿತವಾಗಿದೆ. "ಅರಿತು ಆಡಿದ ಮಾತು ಪರತತ್ವ (ಮಾಯೆಯಲ್ಲ, ಅಜ್ಞಾನವಲ್ಲ)" ಜ್ಯೋತಿರ್ಲಿಂಗ. ಮಾತಿನ ಅತ್ಯುನ್ನತ ಸ್ಥಿತಿ, ಶಕ್ತಿಗಳನ್ನೂ ಮಹತ್ವವನ್ನೂ ಇಷ್ಟು ಅಡಕವಾಗಿ, ದೃಢವಾಗಿ ತಿಳಿಸುವ ಮತ್ತೊಂದು ಮಾತು ಲೋಕದ ಸಾಹಿತ್ಯದಲ್ಲಿ ಎಲ್ಲೂ ಇಲ್ಲ. ಇದಕ್ಕಿಂತ ಹೆಚ್ಚು ಹೇಳುವುದು ಸಾಧ್ಯವಿಲ್ಲ.

ಶರಣರ ಅನುಭಾವ ಸಾಹಿತ್ಯವೆಲ್ಲ ಈ ಬಗೆಯದು. ಅರಿತು ಆಡಿದ ಮಾತು. ಪಾಂಡಿತ್ಯದ ಪ್ರದರ್ಶನಕ್ಕಾಗಿಯೊ ಶಾಸ್ತ್ರಸಿದ್ಧಾಂತಗಳನ್ನು ಮಂಡಿಸುವುದಕ್ಕಾಗಿಯೊ, ಸಾಹಿತ್ಯದ ಸೊಬಗಿಗಾಗಿಯೊ ಬಸವಣ್ಣನವರಾಗಲಿ, ಇತರ ಶರಣರಾಗಲಿ ವಚನ ಗಳನ್ನು ರಚಿಸಲಿಲ್ಲ. ಪರದ ಸತ್ಯದ ಜ್ಯೋತಿಯನ್ನು ಇಹದ ಮಾನವಧರ್ಮದ ಬೆಳಕನ್ನೂ ಬದುಕಿನಲ್ಲಿ ಸಾಧಿಸಿದ ತಮ್ಮ ಅನುಭಾವವನ್ನು ಲೋಕ ಕಲ್ಯಾಣಕ್ಕಾಗಿ ಧಾರೆಯೆರೆಯಲೆಂದೇ ವಚನಗಳನ್ನು ಬರೆದರು.

ವಚನಗಳು ಅನುಭಾವಪ್ರಧಾನವಾದವು. ನಿಜ ಆದರೆ ಅನುಭಾವದ ಪರಮ ಸ್ಥಿತಿಯಂತೂ ಮಾತಿಗೆ ಮೀರಿದುದು. ಅಲ್ಲಿ ಶಬ್ದವಡಗುತ್ತವೆ. ಆ ಪರಮ ಆನಂದ ಸ್ಥಿತಿಯನ್ನು ಮುಟ್ಟುವ ಕೊಂಚ ಮೊದಲು ಬರುವ ಬಸವಣ್ಣನವರ ಮಾತೇ ಹೀಗಿದೆ :

"ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ
ಶಬ್ದ ಮುಗ್ಧವಾದುದೇನೆಂಬೆನಯ್ಯಾ"

"ಲಿಂಗ ಸೋಂಕಿದ ಸುಖದೊಳಗೆ
ಕೂಡಲಸಂಗಮದೇವಯ್ಯಾ
ಅಂಬುಧಿಯೊಳಗೆ ಬಿದ್ದ ಆಲಿಕಲ್ಲಂತೆ

ಭಿನ್ನ ಭಾವವರಿಯದೆ 'ಶಿವ, ಶಿವಾ' ಎನುತಿರ್ದೆನು ನಾನು"

"....ಕರಣಂಗಳ ಲಿಂಗದ ಕಿರಣಂಗಳು ನುಂಗಿದುವಯ್ಯಾ ..."

"... ಜೇನಮಳೆಗಳು ಕರೆದವು ;
ಅಮೃತದ ಕಳೆಗಳು ಸುರಿದವು !—"

ಮಾತು ಜ್ಯೋತಿರ್ಲಿಂಗವಾದಾಗ ಮಾತ್ರ ಇಂತಹ ದಿವ್ಯಾನುಭವದ ಅಭಿವ್ಯಕ್ತಿ ಸಾಧ್ಯ. ಈ ಅತ್ಯುನ್ನತ ಸ್ಥಿತಿಯ ಮಾತು ಒಂದು ಕಡೆ ಇರಲಿ.

ಲೋಕವ್ಯವಹಾರದಲ್ಲಿ ಬರುವ ಮಾತೂ ಹೃದಯಾಂತರಾಳದಿಂದ ಅಂತಃಕರಣ ಪೂರ್ವಕವಾಗಿ ಹೊಮ್ಮಬೇಕು. ಆಗ ಅದು ನಿಜದ ಮಾತು. ನಿಜದ ನಿಲುವಿಗೆ ದಾರಿಯಾಗುವ ಮಾತು. ನಿಜ ಎಂದರೆ ಕೇವಲ ಹೊರಗೆ ತೋರುವ ಘಾಂಬಿಕವಾದ ಮಾತಲ್ಲ. ಲಿಂಗ-ಅಥವಾ- ಅಂತಸ್ಸಾಕ್ಷಿ ಒಪ್ಪುವಂತಹ ಮಾತು. ಅದು ಒಪ್ಪುವು ದಾದರೂ ಸಾಂದರ್ಭಿಕ ವಾಸ್ತವ ಸತ್ಯವನ್ನಷ್ಟೇ ಅಲ್ಲ. ಇಡೀ ವಿಶ್ವವನ್ನು ವಿಕಾಸದ ಪಥದಲ್ಲಿ ಮುನ್ನಡೆಸುತ್ತಿರುವ ನಿತ್ಯವಾದ ಸತ್ಯವನ್ನು ಋತ ಎಂಬುದನ್ನು.

ತಂದೆ ಮಗನಿಗೆ ಬುದ್ಧಿ ಹೇಳುವ ಮಾತಾಗಿ ಷೇಕ್ಸ್‌ಪಿಯರ್ ಹ್ಯಾಮ್ಲೆಟ್ ನಾಟಕದ ಪೋಲೋನಿಯಸ್‌ನ ಬಾಯಲ್ಲಿ, "This above all ; to thine own self be true" (ಇದೆಲ್ಲಕ್ಕಿಂತ ಮೇಲಾಗಿ ; ನಿನ್ನನ್ನು ನೀನೇ ವಂಚಿಸದೆ ಸತ್ಯವಾಗಿ ನಡೆದುಕೊ), ಎಂದು ಹೇಳಿಸಿದ್ದಾನೆ. ಅದರ ಅರ್ಥ : ನಿನ್ನ ಅಂತಸ್ಸಾಕ್ಷಿ ಒಪ್ಪುವ ಹಾಗೆ ಇರು. ಅದೇ ಎಲ್ಲಕ್ಕಿಂತ ಮುಖ್ಯವಾದುದು.

ಈ ಮಾತು ಲೋಕವ್ಯವಹಾರ ಕುಶಲತೆಗೆ, ಜಾಣನಾದವನ ಜೀವನ ಕಲೆಗೆ ಸೀಮಿತವಾದರೆ ಬಸವಣ್ಣನವರ ಮಾತು ಲೋಕಾತೀತಸ್ತರವನ್ನು ಮುಟ್ಟುತ್ತದೆ. ಈ ಎರಡು ಸ್ತರಗಳಲ್ಲೂ ಮಾತಿಗಿಂತ ಮುಖ್ಯವಾದುದು, ಮಹತ್ವಪೂರ್ಣವಾದುದು ಮಾತಿನಂತೆ ನಡೆಯುವುದು.

"ನುಡಿಗೆ ತಕ್ಕ ನಡೆಯು ಕಂಡೊಡೆ
ಕೂಡಲಸಂಗಮದೇವನೊಳಗಿರ್ಪನಯ್ಯ !
ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗವು ಘಟಸರ್ಪನಂತೆ"

'ದಿಟವ ನುಡಿವುದು, ನುಡಿದಂತೆ ನಡೆವುದು' ಹೀಗೆ ಇರುವ ಭಕ್ತರ ನುಡಿಯ ನಡುವೆ ಕೂಡಲಸಂಗಮದೇವನು ರಾಶಿಯಾಗಿರ್ಪನು. ನುಡಿ ಚೆಂದ ಇರಲಿ, ಕಾವ್ಯಮಯ ವಾಗಿರಲಿ, ವಿಚಾರಪೂರ್ಣವಾಗಿರಲಿ, ಬೇಡ ಎನ್ನುವುದಿಲ್ಲ. ಆದರೆ ಅದರ ಮೌಲ್ಯವೆಲ್ಲ ಅಡಗಿರುವುದು ನಡೆಯಲ್ಲಿ ಅಭಿವ್ಯಕ್ತವಾದಾಗಲೆ ಎಂದ ಬಸವಣ್ಣನವರು

"ಭಕ್ತಿಸುಭಾಷೆಯ ನುಡಿಯ ನುಡಿವೆ
ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ ;
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ ;
ಒಂದು ಜವೆ ಕೊರತೆಯಾದರೆ ಎನ್ನನೊದ್ದು ಹೋಗು
ಕೂಡಲಸಂಗಮದೇವಾ"

ಎಂದು ಶಪಥ ಮಾಡುತ್ತಾರೆ. ಇಂತಹ ಛಲ, ಇಂತಹ ಆತ್ಮವಿಶ್ವಾಸ ನಿಜ ಶರಣನಲ್ಲಿ ಅಲ್ಲದೆ ಬೇರೆ ಯಾರಲ್ಲಿ ತಾನೆ ಇರಲು ಸಾಧ್ಯ. ಈ ಧೈರ್ಯ, ಈ ಆತ್ಮವಿಶ್ವಾಸ ಬಸವಣ್ಣನವರಲ್ಲಿ ಹೇಗೆ ಬಂದೀತು ? ತನ್ನ ನುಡಿ ಚೆನ್ನವಾಗಿರಬೇಕು, ನುಡಿಯಂತೆ ನಡೆಯೂ ಚೆನ್ನವಾಗಿರಬೇಕು ಎಂದು ಅವರು ಬದುಕಿನುದ್ದಕ್ಕೂ ವಹಿಸಿದ ಎಚ್ಚರದಿಂದ ; ಅವರ ಮಾತೆ ನಾವು ಅನುಷ್ಠಾನ ಮಾಡಬೇಕಾದ ಮಂತ್ರ ; ಭಕ್ತಿ ಸುಭಾಷೆ ನುಡಿದಂತೆ ನಡೆ.

ಬಸವಣ್ಣನವರಂತೆ ನಿಜಶರಣರಾಗುವುದೇ ಮಾನವ ಜೀವಿತದ ಪರಮ ಗುರಿ, ಎಲ್ಲ ಧರ್ಮಗಳ ಸಾರ. ಹೃದಯದಲ್ಲಿ ಈ ಹಂಬಲ, ಮನದಲ್ಲಿ ಈ ಧ್ಯೇಯ, ಕಾರ್ಯಸಾಧನೆಯಲ್ಲಿ ಶ್ರದ್ಧಾಯುಕ್ತ ಪ್ರಯತ್ನ ಇದ್ದರೆ ಬೆಳಕುದೋರಿ, ಶಕ್ತಿ-ಚೈತನ್ಯಗಳನ್ನು ನೀಡಿ ಮುನ್ನಡೆಸಲು ನಮ್ಮೊಳಗಿನ ಗುರುವೇ ಎಚ್ಚೆತ್ತು ಮುಂದೆ ಬರುತ್ತಾನೆ. ಕಾಲ ಕಾಲಕ್ಕೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ನಾಮ ರೂಪಗಳನ್ನು ಧರಿಸಿ ಮಾನವಕುಲವನ್ನು ಬೆಳಕಿನೆಡೆ, ಸತ್ಯದೆಡೆ, ಅಮೃತತ್ವದೆಡೆ ನಡೆಸಲು ಬರುವ ಸದ್ಗುರುವೂ ಅವನೇ ಅವನೊಬ್ಬನೇ.

ಕನ್ನಡ ಸಾಹಿತ್ಯ ಹಾಗೂ ಮತಧರ್ಮ

ಡಾ|| ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಜಗತ್ತಿನ ಎಲ್ಲ ಸಾಹಿತ್ಯವಾಹಿನಿಗಳೂ ಮತಧರ್ಮಗಳ ಜೊತೆ ಮೈಬೆರೆಸಿ ಹರಿದಿವೆ. ಈ ದೇಶದಲ್ಲಂತೂ ಸಾಹಿತ್ಯಕ್ಕೆ ಮತಧರ್ಮಗಳ ಜೊತೆ ಇರುವ ಸಂಬಂಧ ತೀರ ಗಾಢವಾದದ್ದು. ಆರಂಭದ ದೆಸೆಯಲ್ಲಿ ಅದು ಧರ್ಮದೇವತೆಗೆತ್ತಿದ ಆರತಿಯಂತಿದೆ. ಆದ್ದರಿಂದಲೇ ನಮ್ಮ ಜನರ ಪಾಲಿಗೆ ಅದು ಬರಿಯ ಬೆಳಕಾಗದೆ ಪವಿತ್ರವಾದ ಜ್ಯೋತಿಯೆನಿಸಿಕೊಂಡಿತು. ನಮ್ಮ ಹಿರಿಯ ಕಾವ್ಯಗಳು ಧರ್ಮಗ್ರಂಥಗಳೂ ಆಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ರಾಮ, ಕೃಷ್ಣ, ಸೀತೆಯರಂಥ ಪಾತ್ರಗಳು ಕಾವ್ಯದ ಅಂಗಳದಿಂದ ನಡೆದು ಬಂದು ದೇವರ ಮನೆಯಲ್ಲಿ ಹಸೆಯೇರಿ ಕುಳಿತದ್ದಾಗಲೀ ಭಗವದ್ಗೀತೆಯಂಥ ದಾರ್ಶನಿಕ ಗ್ರಂಥ ಮಹಾಭಾರತದಲ್ಲಿ ಬರುವ ಎರಡು ಪಾತ್ರಗಳ ನಡುವಿನ ಕೇವಲ ಸಂವಾದವಾಗಿರುವುದಾಗಲೀ ಸಾಮಾನ್ಯ ಸಂಗತಿಯಲ್ಲ. ಧರ್ಮ ಮತ್ತು ಕಾವ್ಯಗಳ ಸಂಬಂಧ ಇಲ್ಲಿ ಎಷ್ಟು ಅನ್ಯೋನ್ಯವಾಗಿತ್ತು, ಹೇಗೆ ಹೆಣೆದುಕೊಂಡಿತ್ತು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಈ ಸಂಬಂಧ ಸಾಹಿತ್ಯಕ್ಕೆ ಹೊಸ ತೇಜಸ್ಸು ಉದ್ದೀಪನಗಳನ್ನು ನೀಡಿರುವುದೂ ಉಂಟು; ಕೆಲವು ಸಲ ತನ್ನ ಭೀಮಾಲಿಂಗನದಲ್ಲಿ ಅದನ್ನು ಹಿಂಡಿ ಹಿಪ್ಪೆ ಮಾಡಿರುವುದೂ ಉಂಟು.

ಭಾರತೀಯ ಸಾಹಿತ್ಯಕ್ಕೆಲ್ಲ ಅನ್ವಯವಾಗುವ ಈ ಮಾತು ಕನ್ನಡ ಸಾಹಿತ್ಯಕ್ಕೆ ನೂರಕ್ಕೆ ನೂರರಷ್ಟು ಸಲ್ಲುತ್ತದೆ. ಕನ್ನಡ ಸಾಹಿತ್ಯ ಹಬ್ಬಿ ಬೆಳೆದದ್ದು ಮತಧರ್ಮಗಳ ಹಂಬಿನ ಮೇಲೆಯೇ. ಕ್ರಿ. ಶ. ಹತ್ತರಿಂದ ಇಪ್ಪತ್ತನೆಯ ಶತಮಾನದವರೆಗೂ ಅದು ಬಹುಮಟ್ಟಿಗೆ ಜೈನ, ವೀರಶೈವ ಮತ್ತು ಬ್ರಾಹ್ಮಣ ಧರ್ಮಗಳ ಸ್ವರೂಪ, ತತ್ವಗಳನ್ನು ಅಳವಡಿಸಿಕೊಂಡ ಮತೀಯ ಕೃತಿಗಳ ಮೂಲಕ ಬೆಳೆದು ಬಂತು. ಈ ಕೃತಿಗಳು ಆಳದಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ಮೌಲ್ಯಗಳ ಸಾಂಗತ್ಯವಾಗಿದ್ದು ವಿಶ್ವಸಾಮಾನ್ಯವಾದ ಧರ್ಮವೇ ಆಗಿದೆ ನಿಜ. ಆದರೆ ಅದು ತೊಟ್ಟ ಕವಚ ಮತೀಯವಾದದ್ದು. ಎಂದರೆ ಮತೀಯವಾದ ಪಾತ್ರದ ಮೂಲಕ ಹರಿದ ಜೀವನ ಧರ್ಮದ ಜಲವಾಗಿದೆ ಅದು. ಅಲ್ಲದೆ ಇಪ್ಪತ್ತನೆಯ ಶತಮಾನದವರೆಗೆ ಕನ್ನಡ ಸಾಹಿತ್ಯದಲ್ಲಿ ಹೊಸ ತಿರುವುಗಳು ಮೂಡಿದ್ದೇ ಮತಧರ್ಮಗಳ ಕಾರಣದಿಂದಾಗಿ ಎನ್ನಬಹುದು

ಆದಿಕಾವ್ಯವಾದ ಪಂಪಭಾರತಕ್ಕೂ ಮುಂಚಿನ ಶಾಸನ ಪದ್ಯಗಳಲ್ಲಿಯೇ ಈ ಮಾತಿಗೆ ನಿದರ್ಶನ ಸಿಗುತ್ತದೆ. ಶ್ರವಣಬೆಳಗೊಳದಲ್ಲಿ ದೊರೆತ ಕ್ರಿ. ಶ. ೭೦೦ರ ಶಾಸನಗಳಲ್ಲಿ ಜೈನಮುನಿಗಳ, ಕಂತಿಯರ ಪ್ರಸ್ತಾಪವಿದೆ. ಅವರ ವೈರಾಗ್ಯ ತಪೋಮಹಿಮೆಗಳನ್ನು ಕುರಿತ ಚಿತ್ರಣ ಅಲ್ಲಿ ಕಾವ್ಯಾತ್ಮಕವಾಗಿ ಬಂದಿದೆ. ನಂದಿಸೇನ ಎಂಬ

ಮುನಿ ಸಮಾಧಿ ಮರಣ ಪಡೆದುದನ್ನು ವರ್ಣಿಸುವ ಪದ್ಯ ಇಂಥದ್ದು. 'ಸುರ ಚಾಪಂಬೋಲೆ ವಿದ್ಯುಲ್ಲತೆಗಳ ತೆರೋಳ್ ಬೇಗಂ ಪಿರಿಗುಂ ಶ್ರೀರೂಪ ಲೀಲಾ ಧನವಿಭವ ಮಹಾರಾಶಿಗಳ್ ನಿಲ್ಲವಾರ್ಗಂ' (ರೂಪ-ವಿಲಾಸ-ಐಶ್ವರ್ಯಗಳು ಸ್ಥಿರವಲ್ಲ. ಅವು ಕಾಮನಬಿಲ್ಲಿನಂತೆ, ಕಾರ್ಗಾಲದ ಮಿಂಚಿನಂತೆ, ಬೆಳಗಿನ ಹಿಮದಂತೆ ಕ್ಷಣಕಾಲ ಹೊಳೆದು ಹಾಗೇ ಕರಗಿಬಿಡುತ್ತವೆ). ಹೀಗೆಂದು ನಿಶ್ಚಯಿಸಿ ನಂದಿಸೇನ ಧ್ಯಾನದಲ್ಲಿ ನಿಂತು ಸ್ವರ್ಗಸ್ಥನಾದನಂತೆ. ಧಾರ್ಮಿಕ ವ್ಯಕ್ತಿಯೊಬ್ಬನ ಮರಣದ ಸುದ್ದಿ, ಹೇಳಲು ಹೊರಟ ಪದ್ಯ ಇದು. ಆದರೆ ಅದು ಬರೀ ವರದಿಯಾಗದೆ ಜಲಕ್ಕನೆ ಕವಿತೆಯ ಬೆಡಗಾಗಿ ಅರಳಿದೆ.

ಪಂಪಭಾರತಕ್ಕಿಂತ ಮುಂಚಿನದೆಂದು ಕರೆಸಿಕೊಂಡಿರುವ ವಡ್ಡಾರಾಧನೆ ಕನ್ನಡ ಸಾಹಿತ್ಯದ ಪ್ರಥಮ ಗದ್ಯಕೃತಿ. ಇದರ ಕಾಲ ಕ್ರಿ. ಶ. ೯೨೦ ಎಂದು ಸದ್ಯಕ್ಕೆ ತಿಳಿಯ ಲಾಗಿದೆ. ವೃದ್ಧರ ಆರಾಧನೆ (ಹಿರಿಯರ ಶ್ರೇಷ್ಠ ಆಚರಣೆ) ಎಂಬ ಅರ್ಥ ಕೊಡುವ ಈ ಗ್ರಂಥದಲ್ಲಿ ಹತ್ತೊಂಬತ್ತು ಕಥೆಗಳಿವೆ. ಸುಕುಮಾರ ಸ್ವಾಮಿ, ವಿದ್ಯುಚ್ಚೋರ ಋಷಿ, ಕಾರ್ತಿಕ ಋಷಿ ಮೊದಲಾದ ಹತ್ತೊಂಬತ್ತು ಜನ ಜೈನ ಮುನಿಗಳು ಆ ಧರ್ಮದ ಆದರ್ಶಗಳನ್ನು ಆಚರಿಸಿ ಮರಣಕ್ಕೆ ಸಂದುದನ್ನು ಹೇಳುವ ಈ ಕಥೆಗಳ ದೃಷ್ಟಿ, ಧಾರ್ಮಿಕವಾದದ್ದೇ. ಆದರೆ ವಿಷಯ ಸಾಂಪ್ರದಾಯಿಕವಾಗಿದ್ದೂ ಅವು ಗಳನ್ನು ಹೇಳಿರುವ ರೀತಿ, ಬಳಸಿದ ದೇಸಿ ಬಹಳ ಮನೋಹರವಾಗಿವೆ. ದೇಸಿ ಕನ್ನಡದ ಪಡೆನುಡಿಗಳನ್ನು, ಮಾತಿನ ನಾಟಕೀಯ ಧಾಟಿಗಳನ್ನು ವಡ್ಡಾರಾಧನೆ ಬೆರಗುಕವಿಸುವಂತೆ ಬಳಸಿದೆ. ವಿದ್ಯುಚ್ಚೋರನೆಂಬ ಕಳ್ಳ ಯಮದಂಡನೆಂಬ ದಂಡಾಧಿ ಕಾರಿಯನ್ನು ಹಣ್ಣುಗಾಯಿ ನೀರುಗಾಯಿ ಮಾಡಿ, ಅವನು ಶೂಲಕ್ಕೇರುತ್ತಿರುವ ಸಂದರ್ಭದಲ್ಲಿ 'ಯಮದಂಡಾ, ಮತ್ತೀಗಳ್ ನೀನೇನ್ ಸತ್ತೆಯೋ ಸಾಯೇಯೋ ಮತ್ತೇನೋ' ಎನ್ನಲು ಆತ 'ದೇವಾ ನೀಂ ಗೆಲ್ದೆ, ಆಂ ಸೋತನುಂ ಸತ್ತೆನುಂ' ಎಂದನಂತೆ. ಎಲ್ಲೆಲ್ಲೂ ಚಲ್ಲುವರಿದ ಇಂಥ ದೇಸಿ ಮಾತು, ನಾಟಕೀಯ ಸಂವಾದ, ದಡದಡನೆ ಹರಿಯುವ ಕಥೆ ಇವುಗಳಿಂದ ವಡ್ಡಾರಾಧನೆ ಮತನಿಷ್ಠರಿಗೆ ಧಾರ್ಮಿಕ ಗ್ರಂಥವಾಗಿರುತ್ತಲೇ ಸಾಹಿತ್ಯ ರಸಿಕರಿಗೆ ಕನ್ನಡ ಗದ್ಯದ ಕಸುವನ್ನು ತೋರಿಕೊಡುವ ಮೊದಲ ಕಥಾಗ್ರಂಥವಾಗಿದೆ.

ಕ್ರಿ. ಶ. ೯೪೧ರಲ್ಲಿ ತನ್ನ ಮೊದಲ ಕೃತಿಯನ್ನು ರಚಿಸಿದ ಪಂಪ ಕನ್ನಡದ ಆದಿಕವಿ ಮತ್ತು ಮೊದಲ ಮಹಾಕವಿ. ವಿಕ್ರಮಾರ್ಜುನ ವಿಜಯ (ಪಂಪ ಭಾರತ) ಮತ್ತು ಆದಿಪುರಾಣ ಇವೆರಡೂ ಅವನು ಕನ್ನಡಕ್ಕೆ ಕೊಟ್ಟ ಅಮೂಲ್ಯ ಕೊಡುಗೆ ಗಳು. ಇವುಗಳಲ್ಲಿ ಪಂಪಭಾರತ ಲೌಕಿಕ ಕಾವ್ಯವಾದರೆ, ಆದಿಪುರಾಣ ಧಾರ್ಮಿಕ ಕಾವ್ಯ. ಆದಿಪುರಾಣ ಮೊದಲನೆಯ ತೀರ್ಥಂಕರನಾದ ಪುರುದೇವನ ಕಥೆ, ಅದರ ಜೊತೆಗೇ ಅವನ ಮಕ್ಕಳಾದ ಭರತ, ಬಾಹುಬಲಿಗಳ ಕಥೆಯೂ ಅದರಲ್ಲಿ ಬಂದಿದೆ. ಪುರುದೇವ ಮುಂಚೆ ಅನೇಕ ಜನ್ಮಗಳನ್ನು ಎತ್ತಿ ಭೋಗದ ತುತ್ತ ತುದಿಗೂ ತಲುಪಿ ಅದರ ನಿರಾಸವನ್ನು ಕಂಡು ಹೇಸುತ್ತಾನೆ; ವೈರಾಗ್ಯಕ್ಕೆ ಮನಸ್ಸು ಕೊಡುತ್ತಾನೆ; ತಪಸ್ಸಿಗೆ ನಿಂತು ತೀರ್ಥಂಕರತ್ವಕ್ಕೆ ಏರುತ್ತಾನೆ. ಹೀಗೆ ಜನ್ಮದಿಂದ ಜನ್ಮಕ್ಕೆ ಸಹಜ

ವಾಗಿ ಬೆಳೆಯುತ್ತ, ಧರ್ಮಕ್ಕೆ ಒಲಿಯುತ್ತ ಬಂದ ಮಹಾಚೇತನವೊಂದರ ಕಥೆ ಇದು. ಕಥೆ ವಸ್ತುವಿನ್ಯಾಸ ಧಾರ್ಮಿಕವಾದದ್ದಾದರೂ ಅದರ ನಿರ್ವಹಣೆಯಲ್ಲಿ ಪಂಪನ ಕವಿತಾಶಕ್ತಿ ಅದ್ಭುತವಾಗಿ ಕೆಲಸ ಮಾಡಿದೆ. ಲಲಿತಾಂಗ ಸ್ವಯಂಪ್ರಭೆಯರ ಅತೃಪ್ತಭೋಗ, ವಜ್ರಜಂಘ-ಶ್ರೀಮತಿಯರ ಭೋಗ ಮತ್ತು ಸಹಮರಣ, ನೀಲಾಂಜನೆಯ ನೃತ್ಯ ಪ್ರಸಂಗ, ಭರತ-ಬಾಹುಬಲಿಗಳ ಮುಖಾಮುಖಿ–ಇಂಥ ಪ್ರಸಂಗಗಳ ಸೃಷ್ಟಿಯಲ್ಲಂತೂ ಧರ್ಮ ಕವಿತೆಯನ್ನು ಪೀಠವಲ್ಲಿ ಕೂರಿಸಿ ತಾನೂ ಬದಿಗೆ ನಿಂತು ಚಾಮರ ಬೀಸಿದೆ. ಧರ್ಮದ ವಿವರ ನಿರೂಪಣೆಗೆ ಭಂಗ ತರದೆಯೂ ಒಂದು ಕೃತಿಯನ್ನು ಎಂಥ ಉತ್ಕಟ ರಸಚಿತ್ರವಾಗಿ ಕಡೆಯಬಹುದೆಂಬುದನ್ನು ಪಂಪ ಮಾಡಿ ತೋರಿಸಿದ್ದಾನೆ. ಆದಿನಾಥನ ಕಥೆಯಲ್ಲಿನ ಕಾಮತ್ಯಾಗ, ಭರತನ ಕಥೆಯಲ್ಲಿನ ಅಹಂಕಾರ–ತ್ಯಾಗಗಳು ಮೂಲಭೂತವಾಗಿ ಧಾರ್ಮಿಕ ಸಂಗತಿಗಳಾದರೂ ಮುಳ್ಳುಗಳ ನಡುವೆ ಗುಲಾಬಿ ಅರಳಿದಂತೆ ರಸಾತ್ಮಕವಾಗಿ ಚಿತ್ರಣಗೊಂಡಿವೆ ; ಪಂಪನು ಕನ್ನಡದ ಕಾಳಿದಾಸ ಎಂಬ ತೀನಂಶ್ರೀಯವರ ಹೇಳಿಕೆಯನ್ನು ಸಹಸಾ ಸಮರ್ಥಿಸುವಂತಿದೆ.

ಪಂಪ ಹಾಕಿಕೊಟ್ಟ ಮಾರ್ಗದಲ್ಲೇ ಹೊರಟ ಮುಂದಿನ ಕೆಲವರು ಕವಿಗಳು ಅವನಂತೆಯೇ ಒಂದು ಲೌಕಿಕ ಕಾವ್ಯವನ್ನೂ ಧಾರ್ಮಿಕ ಕಾವ್ಯವನ್ನೂ ಬರೆದರು. ಪೊನ್ನನ ಶಾಂತಿ ಪುರಾಣ, ರನ್ನನ ಅಜಿತನಾಥ ಪುರಾಣ ಮತ್ತು ನಾಗಚಂದ್ರನ ಮಲ್ಲಿನಾಥ ಪುರಾಣ ತೀರ್ಥಂಕರರನ್ನು ಕುರಿತ ಇಂಥ ಧಾರ್ಮಿಕ ಕಾವ್ಯಗಳು. ಇವುಗಳಲ್ಲಿ ಯಾವುದೂ ಕಲಾದೃಷ್ಟಿಯಿಂದ ಪಂಪನ ಆದಿಪುರಾಣದ ಎತ್ತರಕ್ಕೆ ಏರುವುದಿಲ್ಲವಾದರೂ ಅಜಿತಪುರಾಣವು ಕೆಲವು ಪ್ರಸಂಗಗಳ ನಿರೂಪಣೆಯಲ್ಲಿ ಉಳಿದವಕ್ಕಿಂತ ಹೆಚ್ಚು ಕಾವ್ಯಾತ್ಮಕವಾಗಿದೆ. ಗಂಗದೊರೆ ರಾಚಮಲ್ಲನ ಮಂತ್ರಿಯಾಗಿದ್ದ (ಶ್ರವಣ ಬೆಳಗೊಳದಲ್ಲಿ ಗೊಮ್ಮಟೇಶ್ವರನ ವಿಗ್ರಹ ಕಡೆಸಿದ) ಚಾವುಂಡರಾಯನ ಚಾಮುಂಡರಾಯ ಪುರಾಣವು ಒಂದು ಗದ್ಯಗ್ರಂಥವಾಗಿದ್ದು ಅದರಲ್ಲಿ ಅರುವತ್ತಮೂರು ಜನ ಜೈನ ಶಲಾಕಾಪುರುಷರ ಕಥೆಯಿದೆ. ಸ್ವವಿಶಿಷ್ಟವಾದ ಗದ್ಯಶೈಲಿಯಿಂದ ಕೂಡಿದ್ದರೂ ಇದು ಸಾಹಿತ್ಯಗುಣದಲ್ಲಿ ವಡ್ಡಾರಾಧನೆಯ ಎತ್ತರಕ್ಕೆ ಹತ್ತುವುದಿಲ್ಲ.

ಮೇಲೆ ಹೇಳಿದ ಗ್ರಂಥಗಳೇ ಅಲ್ಲದೆ ಮುಂದೆ ಶಾಂತಿನಾಥನ ಸುಕುಮಾರ ಚರಿತೆ, ನಯಸೇನನ ಧರ್ಮಾಮೃತ, ಬ್ರಹ್ಮಶಿವನ ಸಮಯ ಪರೀಕ್ಷೆ, ಕರ್ಣಪಾರ್ಯನ ನೇಮಿನಾಥ ಪುರಾಣ ಮೊದಲಾದ ಜೈನ ಧಾರ್ಮಿಕ ಕಾವ್ಯಗಳು ಹೊರಬಂದವು. ಸುಕುಮಾರ ಚರಿತದಲ್ಲಿ ಸಹಜ ಪ್ರಸನ್ನವಾದ ಮಾತುಗಾರಿಕೆ ಇದ್ದು ಪಂಡಿತರ ಕಡೆಗೇ ಅದರ ದೃಷ್ಟಿ ಇದೆ. ಧರ್ಮಾಮೃತದ ದೃಷ್ಟಿ ಧೋರಣೆಗಳು ಮಾತ್ರ ಜನಸಾಮಾನ್ಯರ ಕಡೆ ತಿರುಗಿದ್ದಾಗಿದೆ. ಧರ್ಮಾಮೃತ ಹದಿನಾಲ್ಕು ಆಶ್ವಾಸಗಳ ಗ್ರಂಥ. ಇದರಲ್ಲಿ ಹದಿನಾಲ್ಕು ಜನ ಜೈನ ಮಹಾಪುರುಷರ ಚರಿತೆಯಿದೆ. ನಯಸೇನನ ಬರಹದಲ್ಲಿ ಜಾನಪದ ಕತೆಗಾರಿಕೆ, ಶುದ್ಧ ವಿಡಂಬನೆ, ಜನಜೀವನದ ಗಾಢವಾದ ಅರಿವು ಕಾಣುತ್ತದೆ. ನಯಸೇನ ಆವರೆಗಿನ ಚಂಪೂ ಕವಿಗಳು ತೋರಿಸಿದ್ದ ರೂಢಿಯ ಪ್ರೌಢಿಮೆಯನ್ನು ಬಳಸಿ

ಬರೆದ. ಮಾಲೆ ಮಾಲೆಯಾಗಿ ಹೋಲಿಕೆಗಳನ್ನು ಕೊಡುವುದು ನಯಸೇನನ ಇನ್ನೊಂದು ವೈಶಿಷ್ಟ್ಯ. ಕಾವ್ಯವನ್ನು ಜನಕ್ಕೆ ಅಭಿಮುಖವಾಗಿರಿಸುವ ಪ್ರಯತ್ನ ಮಾಡಿದ ನಯಸೇನನನ್ನು ಜನಮುಖನಾದ ಮೊದಲ ಕವಿ ಎನ್ನಬಹುದು ಬ್ರಹ್ಮಶಿವನ ಸಮಯ ಪರೀಕ್ಷೆ ಎಂಬ ಗ್ರಂಥ ಜೈನಮತದ ಘನತೆಯನ್ನು ಎತ್ತಿ ಹಿಡಿದು ಶೈವ ಮತ್ತು ವೈದಿಕ ಮತಗಳನ್ನು ಬಗ್ಗು ಬಡಿಯಲು ಹೊರಟ ಗ್ರಂಥ. ಅನ್ಯಮತಗಳ ಕೊರತೆ ದೋಷಗಳನ್ನು ಹೆಕ್ಕಿ ನೋಡುತ್ತ, ಗಟ್ಟಿ ದನಿಯಲ್ಲಿ ಸಾರುತ್ತ ಚಪ್ಪಾಳೆ ಹಾಕುವ ಲೇವಡಿ ಬುದ್ಧಿ ಈ ಕವಿಯಲ್ಲಿ ಎಲ್ಲರಿಗಿಂತ ಹೆಚ್ಚಾಗಿದೆ. ಅದು ಶುದ್ಧ ವಿಮರ್ಶೆಯಿಂದ ಕುಹಕ ಮೂದಲಿಕೆಯವರೆಗೆ ಎಲ್ಲ ಬಗೆಗಳನ್ನೂ ಒಳಗೊಂಡಿದೆ. ಸಾಹಿತ್ಯ ಗುಣದ ದೃಷ್ಟಿಯಿಂದ ಇವನ್ನು ಕನ್ನಡದ ಮೊದಲ ವಿಡಂಬನ ಕಾವ್ಯವೆಂದು ಹೇಳಬಹುದು.

ಜೈನ ಧರ್ಮದ ಸ್ವರೂಪ-ತತ್ವಗಳನ್ನು ಪ್ರಚಾರಿಸುವ ದೃಷ್ಟಿಯುಳ್ಳ ಇನ್ನೂ ಕೆಲವು ಸಾಹಿತ್ಯ ಕೃತಿಗಳು ಮುಂದಿನ ಶತಮಾನಗಳಲ್ಲಿಯೂ ಬಂದವು. ನೇಮಿಚಂದ್ರ, ಅಗ್ಗಳ, ಪಾರ್ಶ್ವಪಂಡಿತ, ಜನ್ನ, ಎರಡನೆಯ ಗುಣವರ್ಮ, ಕಮಲಭವ, ನಾಗರಾಜ, ಮಧುರ ಮೊದಲಾದ ಅನೇಕ ಕವಿಗಳು ಈ ದಿಕ್ಕಿನಲ್ಲಿಯೇ ಹಾದು ಹೋದವರು. ಮುಂದೆ ಹದಿನಾಲ್ಕು ಹದಿನೈದನೆಯ ಶತಮಾನಗಳಲ್ಲಿ ವಿಜಯಣ್ಣ, ಬೊಮ್ಮರಸ, ಶಿಶುಮಾಯಣ ಮೊದಲಾದವರು ಜೈನಧರ್ಮದ ಉದಾತ್ತ ತತ್ವಗಳಿಗೆ ಅನುಗುಣವಾಗಿ ಬಾಳಿಹೋದ ಧೀರ ಚೇತನಗಳ ಕಥೆಗಳನ್ನು ವಸ್ತುವಾಗಿ ಮಾಡಿಕೊಂಡು ಕೃತಿ ರಚನೆ ಮಾಡಿದರು. ಹದಿನಾರನೆಯ ಶತಮಾನದಲ್ಲಿ ಬಂದ ರತ್ನಾಕರವರ್ಣಿ ಭರತೇಶ ವೈಭವ ಎಂಬ ದೀರ್ಘ ಕಾವ್ಯವನ್ನು ರಚಿಸಿದ. ಇವರಲ್ಲೆಲ್ಲ ಬಹಳ ಮುಖ್ಯರಾದವರೆಂದರೆ ಜನ್ನ ಮತ್ತು ರತ್ನಾಕರವರ್ಣಿ.

ಜನ್ನನ ಯಶೋಧರ ಚರಿತೆ ಜೀವದಯಾಷ್ಟಮಿಯ ಧಾರ್ಮಿಕ ಉತ್ಸವದಲ್ಲಿ ಪಠಿಸಲೆಂದು ಬರೆದ ಕೃತಿಯಾಗಿದ್ದು ತನ್ನ ಕಾವ್ಯಗುಣಕ್ಕೆ ಹೆಸರಾದ ಕೃತಿಯಾಗಿದೆ. ವಾಸ್ತವವಾಗಿ ಅದು ವಾದಿರಾಜನೆಂಬ ಕವಿ ಸಂಸ್ಕೃತದಲ್ಲಿ ಬರೆದ ಯಶೋಧರ ಚರಿತದ ಸಮೀಪಾನುವಾದವಾಗಿದ್ದರೂ ಒಂದು ಸ್ವತಂತ್ರ ಕೃತಿ ಎನಿಸುವಷ್ಟರ ಮಟ್ಟಿನ ಘನತೆ ಅದಕ್ಕಿದೆ. ಸೂಕ್ಷ್ಮವಾದ ಪಾತ್ರ-ಚಿತ್ರಣ, ನಾಟಕೀಯ ಮಾತುಗಾರಿಕೆ ಮತ್ತು ಅಸಾಮಾನ್ಯ ಚಿತ್ರಕ ಶಕ್ತಿಯ ಮೂಲಕ ಜನ್ನ ತನ್ನ ಈ ಕೃತಿಯನ್ನು ಕನ್ನಡಕ್ಕೆ ಬೆಲೆಯುಳ್ಳ ಕೊಡುಗೆಯಾಗುವಂತೆ ಮಾಡಿದ್ದಾನೆ. ಹಿಂಸೆ ಒಂದು ಜೀವಕ್ಕೆ ಎಂಥ ಸೂಕ್ಷ್ಮನೆಲೆಯಲ್ಲಿ ಅಂಟಿಕೊಳ್ಳಬಹುದು. ಆ ಜೀವವನ್ನು ಎಂಥೆಂಥ ಭೀಕರಾವಸ್ಥೆಗಳಿಗೆ ತಳ್ಳಬಹುದು ಎನ್ನುವುದನ್ನು ಜನ್ನ ಸೊಗಸಾಗಿ ಚಿತ್ರಿಸಿದ್ದಾನೆ. 'ಅಹಿಂಸಾ ಪರಮೋಧರ್ಮಃ' ಎಂಬ ತತ್ವದ ಘನತೆಯನ್ನು ಸುಂದರವಾದ ಕಥಾತ್ಮಕ ಅಭಿವ್ಯಕ್ತಿಯ ಮೂಲಕ ಮನವರಿಕೆ ಮಾಡಿ ಕೊಟ್ಟಿದ್ದಾನೆ. ಮಾರಿಯ ಬನದಲ್ಲಿ ಕಾಣಿಸಿಕೊಳ್ಳುವ ವಸಂತದ ವರ್ಣನೆ ಆ ಭೀಕರ ವಾತಾವರಣಕ್ಕಿಟ್ಟ ರುದ್ರ ಮನೋಹರನಾದ ತಿಲಕದಂತಿದೆ. ಅಮೃತಮತಿ ಮತ್ತು ಅವಳ ದೂತಿಯ ನಡುವಿನ ಸಂವಾದದಂಥ

ಭಾಗಗಳು ಜನ್ನದ ಕಥನ ಕೌಶಲಕ್ಕೆ ಸಾಕ್ಷಿ ನುಡಿಯುತ್ತವೆ. ಅವನ ಸ್ವತಂತ್ರ ಕೃತಿಯಾದ ಅನಂತನಾಥ ಪುರಾಣವೇ (ಅದರಲ್ಲಿ ಬರುವ ಚಂಡಶಾಸನನ ಕಥೆಯನ್ನು ಬಿಟ್ಟರೆ) ಈ ಅನುವಾದದ ಎದುರು ಸಪ್ಪೆಯೆನಿಸುತ್ತದೆ. ತತ್ವಪ್ರಚಾರವನ್ನೇ ಗುರಿಯಾಗಿ ಮಾಡಿಕೊಂಡು ಎಂಥ ಮೇಲುನೆಲೆಯ ಕಾವ್ಯವನ್ನು ರಚಿಸಬಹುದೆನ್ನಲು ಯಶೋಧರ ಚರಿತೆ ಉತ್ತಮ ನಿದರ್ಶನ.

ಹದಿನಾರನೆಯ ಶತಮಾನದಲ್ಲಿ ರಚಿತವಾದ ರತ್ನಾಕರವರ್ಣಿಯ ಭರತೇಶ ವೈಭವ ಕನ್ನಡ ಸಾಹಿತ್ಯದ ಬೆರಳೆಣಿಕೆಯ ಶ್ರೇಷ್ಠ ಕೃತಿಗಳಲ್ಲಿ ಒಂದು. ಸುಮಾರು ಹತ್ತು ಸಾವಿರ ಪದ್ಯಗಳಿಂದ ಕೂಡಿರುವ ಈ ಸಾಂಗತ್ಯ ಛಂದಸ್ಸಿನ ಗ್ರಂಥದಲ್ಲಿ ಆದಿ ತೀರ್ಥಂಕರನ ಮಗನಾದ ಭರತೇಶ ಚಕ್ರವರ್ತಿಯ ಕಥೆಯಿದೆ. ರತ್ನಾಕರವರ್ಣಿಯ ಶೈಲಿ ಚಿತ್ರಸಂಪತ್ತಿನಿಂದ ಕೂಡಿದ್ದು ಅತ್ಯಂತ ಆತ್ಮೀಯವಾಗಿದೆ. ಅನನ್ಯವೆನಿಸುವ ತಲ್ಲೀನತೆಯಲ್ಲಿ ಕವಿ ಕಥೆ ಹೇಳುತ್ತ ಹೋಗುತ್ತಾನೆ. ಭರತೇಶನ ಬಾಳಿನಲ್ಲಿ ಕವಿ ತ್ಯಾಗ ಭೋಗಗಳ ಸಮನ್ವಯವನ್ನು ತೋರಿಸಿದ್ದಾನೆ ಎಂದು ಕೆಲವರು ವಿಮರ್ಶಕರ ಅಭಿಪ್ರಾಯವಾಗಿದ್ದರೆ, ಈ ಸಮನ್ವಯ ತುಂಬ ಸರಳೀಕೃತವಾಗಿದ್ದು ಅಸಹಜವಾಗಿದೆ ಎಂದು ಹಲವರ ಅಭಿಪ್ರಾಯವಿದೆ. ಏನೇ ಇದ್ದರೂ ರತ್ನಾಕರವರ್ಣಿಯ ಕಾವ್ಯ ಪ್ರತಿಭೆ ಈ ಕೃತಿಯಲ್ಲಿ ನಿಚ್ಚಳವಾಗಿ ಕಾಣುತ್ತದೆ. ಶೃಂಗಾರ ಇಲ್ಲಿ ಹೊಲಬುಗೆಡದೆ ತನ್ನ ತುತ್ತತುದಿಗೆ ಏರಿದೆ ಎನ್ನಿಸುತ್ತದೆ. ಭರತ, ಬಾಹುಬಲಿಗಳ ಕಥೆಯನ್ನು ಭರತೇಶನ ವ್ಯಕ್ತಿತ್ವಕ್ಕೆ ಹೊಳಪು ಕೊಡುವ ರೀತಿಯಲ್ಲಿ ಕವಿ ಕೊಂಚ ಬದಲಿಸಿಕೊಂಡಿರುವುದೂ ಉಂಟು. ಆದಿಪುರಾಣದಲ್ಲಿ ಕಾಣುವ ಭರತ ಒಂದು ಹಂತದಲ್ಲಿ ರಾಜಮದದಿಂದ ಕೊಬ್ಬಿದ ಅಹಂಕಾರಿ. ಇಲ್ಲಿಯ ಭರತೇಶ ತಲೆತಿರುಗಿಸುವ ಭೋಗದ ಮಧ್ಯದಲ್ಲಿಯೂ ಹದಗೆಡದೆ ನಿಂತ ಸ್ಥಿತಪ್ರಜ್ಞ ; "ಮುಂಡೆ ಬೆಳೆದು ಮನೆ ಬೋಳಾದ ತಪಸಿ" ಈ ಕಥೆಯನ್ನು ಹೇಳಹೇಳುತ್ತಲೇ ಕವಿ ಜೈನ ಧರ್ಮದ ತಾತ್ವಿಕ ಕಲ್ಪನೆಗಳನ್ನು ಅದರ ಒಡಲಲ್ಲಿ ಅಸಹಜವೆನಿಸದಂತೆ ಹೆಣದಿದ್ದಾನೆ.

ಹತ್ತನೆಯ ಶತಮಾನ ಸಾಹಿತ್ಯ ದೃಷ್ಟಿಯಿಂದ ಎಷ್ಟು ಉಜ್ವಲವಾಗಿತ್ತೋ ಹನ್ನೊಂದನೆಯ ಶತಮಾನ ಅಷ್ಟು ಕಳಪೆ ಎನ್ನಬಹುದು. ಇದಕ್ಕೆ ಪರಿಹಾರವೆನ್ನುವಂತೆ ಹನ್ನೆರಡನೆಯ ಶತಮಾನ ಧರ್ಮಮೂಲವಾದ ಸಾಹಿತ್ಯಕ್ರಾಂತಿಯೊಂದಕ್ಕೆ ದಾರಿ ಸಮೆಯಿತು. ದೇವರದಾಸಿಮಯ್ಯ ಮತ್ತು ಶಂಕರ ದಾಸಿಮಯ್ಯರಂಥ ಆದ್ಯ ವಚನಕಾರರು ಈ ಕ್ರಾಂತಿಯ ಮುಂಬೆಳಗಿನಲ್ಲಿದ್ದು ಬಸವಣ್ಣ, ಅಲ್ಲಮರಂಥ ವಚನಕಾರರು ಹೊಸಮಾರ್ಗಕ್ಕೆ ತಳಹದಿ ಹಾಕಿದ್ದರೆನ್ನಬಹುದು. ಜ್ವರವಿಡಿದ ಬಾಯಿಗೆ ನೊರೆಹಾಲು ಒಲಿವುದೇ ? ಬರುಶಠಗನ ಭಕ್ತಿ ದಿಟವೆಂದು ನಂಬಲುಬೇಡ, ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು, ಇತ್ಯಾದಿ ವಚನಗಳ ತೇಜಸ್ಸನ್ನು ನೋಡಿದರೆ ಈ ತಳಹದಿ ಎಷ್ಟು ಬಲವಾದದ್ದು ಎನ್ನುವುದು ತಿಳಿಯುತ್ತದೆ. ಗಮನಿಸಬೇಕಾದ ಮಾತೆಂದರೆ ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ ಮೊದಲಾದ ವಚನಕಾರರು ಹೊಸ ಧರ್ಮವೊಂದರ ಪ್ರಚಾರದ ಸಾಧನೆಗಾಗಿ ಮತ್ತು

ತಮ್ಮ ಧಾರ್ಮಿಕ, ಸಾಮಾಜಿಕ ಚಿಂತನೆ-ಸಂವೇದನೆಗಳ ಅಭಿವ್ಯಕ್ತಿಗಾಗಿ ವಚನಗಳನ್ನು ರಚಿಸಿದರೇ ಹೊರತು ಸಾಹಿತ್ಯಸೃಷ್ಟಿ ಮಾಡುವ ಸ್ಪಷ್ಟ ಉದ್ದೇಶದಿಂದ ಅಲ್ಲ. ಆದ್ದರಿಂದಲೇ ಅವುಗಳಿಗೆ ಸಾಹಿತ್ಯಿಕ ಪ್ರಭೆ ಇರುವುದರ ಜೊತೆಗೆ ಅಂದಿನ ಸಾಮಾಜಿಕ, ಧಾರ್ಮಿಕ ಚಳವಳಿ ಒದಗಿಸಿದ ತೀವ್ರತೆ, ಆವೇಗಗಳೂ ಪ್ರಾಪ್ತವಾದುವು. ಅಷ್ಟೇ ಅಲ್ಲ ಜೀವನದಲ್ಲಿ ಎಲ್ಲ ಬಗೆಯ ಅನುಭವಗಳು ಹುರಿಗೊಂಡು ಮೂಡಿದ, ಬಿರುಕಿಲ್ಲದ ಅಖಂಡ ಸಂವೇದನೆಗಳಿಗೆ ಒಡಲಾದುವು.

ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಕಾಳವ್ವ, ನೀಲಮ್ಮ ಮೊದಲಾದ ಶರಣಶರಣೆಯರು ಸೇರಿ ತಾತ್ವಿಕ ಜಿಜ್ಞಾಸೆ ನಡೆಸುತ್ತಿದ್ದ ಅನುಭವ-ಮಂಟಪ ಈ ಎಲ್ಲ ವಚನಸಾಹಿತ್ಯದ ಸ್ಫೂರ್ತಿ ಕೇಂದ್ರವಾಯಿತು. ಪರಮಜ್ಞಾನಿ ಎನಿಸಿದ್ದ ಎಣೆಯಿಲ್ಲದ ಅನುಭಾವೀ ವಚನಗಳನ್ನು ಸೃಷ್ಟಿಸಿದ ಅಲ್ಲಮಪ್ರಭು ಈ ಅನುಭವ-ಮಂಟಪದ ಶೂನ್ಯಸಿಂಹಾಸನದ ಪ್ರಭುವೆನಿಸಿಕೊಂಡ. 'ಬೆಟ್ಟಕ್ಕೆ ಚಳಿಯಾದೊಡೆ ಏನ ಹೊದ್ದಿಸುವರಯ್ಯಾ?' ಬಯಲು ಬೆತ್ತಲೆ ಇರ್ದೊಡೆ ಏನ ನುಡಿಸುವಿರಯ್ಯ ? 'ಹಿಂದಣ ಅನಂತವನು ಒಂದೇ ದಿನ ಒಳಕೊಂಡಿತ್ತು ನೋಡಾ' 'ಉಳಿ ಮುಟ್ಟದ ಲಿಂಗವನು ಮನ ಮುಟ್ಟಬಲ್ಲುದೆ' 'ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ' ಮೊದಲಾದ ಮಾತುಗಳು, ಅವನ ವಚನಗಳು ತಾತ್ವಿಕವಾಗಿ ಮಾತ್ರವಲ್ಲದೆ ಸಾಹಿತ್ಯಕವಾಗಿಯೂ ಎಂಥ ಎತ್ತರದ ನೆಲೆಯವು ಎನ್ನುವುದನ್ನು ಸೂಚಿಸುತ್ತವೆ. ಅಲ್ಲಮನ ವಚನಗಳು ಜ್ಞಾನದ ಸಂಪತ್ತಿನಿಂದ ಬೆಳಗಿದರೆ ಬಸವಣ್ಣ, ಅಕ್ಕಮಹಾದೇವಿಯವರ ವಚನಗಳು ಭಕ್ತಿಭಾವದ ತೀವ್ರತೆಯಿಂದ ಜ್ವಲಿಸುತ್ತವೆ. ಹಾಗೆಯೇ ನಿಷ್ಠುರ, ಆತ್ಮಾವಲೋಕನ, ಸಮಾಜ ವಿಮರ್ಶೆಗಳನ್ನೂ ಅವು ಒಳಗೊಂಡಿವೆ. 'ಕುಂಬಳದ ಕಾಯಿಗೆ ಕಬ್ಬುನದ ಕುಟ್ಟುಕೊಟ್ಟರೆ ಬಲುಹಾಗಬಲ್ಲುದೆ', 'ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಗಂಜಳ ಬಿಡದು', 'ಕರಿ ಘನ, ಅಂಕುಶ ಕಿರಿದೆನ್ನಬಹುದೆ? ಗಿರಿ ಘನ ವಜ್ರ ಕಿರಿದೆನ್ನಬಹುದೇ?' ಮೊದಲಾದ ರೂಪಕಾತ್ಮಕ ವಚನಗಳಲ್ಲಿ ಆ ಸಾಹಿತ್ಯ ಸಾಧಿಸಿದ ಕಲೆಯ ಉನ್ನತಿಯೂ ಕಾಣುತ್ತದೆ. 'ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆಬಾವಿಗಳುಂಟು', 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯಾ' ಮೊದಲಾದ ಅಕ್ಕನ ವಚನಗಳು ಅವಳ ಪ್ರತಿಭೆಗೆ ಹೇಗೋ ಹಾಗೆ ಹೆಣ್ಣು ಜೀವವೊಂದರ ಕೆಚ್ಚುಸ್ಥೈರ್ಯಗಳಿಗೆ ನಿದರ್ಶನಗಳಾಗಿವೆ.

ಈ ಸಾಹಿತ್ಯ ಕ್ರಾಂತಿಯ ಬೆನ್ನು ಹಿಡಿದೇ ಹರಿಹರ ರಾಘವಾಂಕರಂಥ ಇಬ್ಬರು ಶ್ರೇಷ್ಠ ಕವಿಗಳು ಬಂದರು. ಹರಿಹರನು ಚಂಪೂ ಮತ್ತು ವಚನ ಮಾರ್ಗ ಎರಡನ್ನೂ ಬಿಟ್ಟು ರಗಳೆ ಎಂಬ ಹೊಸ ಛಂದೋಮಾರ್ಗವನ್ನು ಬಳಸಿ ಕಥನಕಾವ್ಯಗಳನ್ನು ಬರೆದ. ವಸ್ತು, ಛಂದಸ್ಸು, ಧೋರಣೆ ಎಲ್ಲದರಲ್ಲೂ ಸ್ವತಂತ್ರಮಾರ್ಗ ಹಿಡಿದ. ಹರಿಹರ ತನ್ನ ರಗಳೆಗಳಲ್ಲಿ ಪುರಾತನ ಮತ್ತು ನೂತನ ಶಿವಶರಣರ ಚರಿತೆಗಳನ್ನು

ಅಪೂರ್ವ ತನ್ಮಯತೆಯಿಂದ ನಿರೂಪಿಸಿದ್ದಾನೆ. ಈ ಕೃತಿಗಳ ಮೂಲಕ ಭಕ್ತಿಯ ಮತ್ತೊಂದು ಮಹಾಪೂರವೇ ಹರಿಯಿತೆನ್ನಬಹುದು. ನಂಬಿಯಣ್ಣನ ರಗಳೆ, ಬಸವರಾಜ ದೇವರ ರಗಳೆ, ಕುಂಬಾರ ಗುಂಡಯ್ಯನ ರಗಳೆ, ಮಹಾದೇವಿಯಕ್ಕನ ರಗಳೆ, ತಿರುನೀಲಕಂಠರ ರಗಳೆ ಮೊದಲಾದುವು ಅವನ ಭಕ್ತಿ, ಉತ್ಸಾಹ, ಭಾವ ನಿರ್ಭರತೆಗಳಿಗೆ ಸೊಗಸಾದ ನಿದರ್ಶನಗಳು. ಬಸವಣ್ಣನನ್ನು ಕುರಿತ ಕೃತಿಯಲ್ಲಿ ಅವನ ಭಕ್ತಿಜೀವನದ ರಸಚಿತ್ರವನ್ನೇ ಹರಿಹರ ಸೃಷ್ಟಿಸಿದ್ದಾನೆ. ಸತ್ವದಲ್ಲಿ ಪ್ರಥಮ ವರ್ಗದ್ದೆನ್ನಬಹುದಾದ ಗಿರಿಜಾಕಲ್ಯಾಣ ಎಂಬ ಚಂಪೂ ಗ್ರಂಥವನ್ನು ತನ್ನ ಶಿವನಿಷ್ಠೆಯ ಪ್ರತೀಕವೆನ್ನಬಹುದಾದ ಪಂಪಾಶತಕ, ರಕ್ಷಾಶತಕಗಳನ್ನೂ ಹರಿಹರ ರಚಿಸಿದ.

ಹರಿಹರನ ಸೋದರಳಿಯನಾದ ರಾಘವಾಂಕ ಮಾವನನ್ನೇ ಗುರುವಾಗಿ ಮಾಡಿಕೊಂಡು ಅವನಂತೆಯೇ ಹೊಸ ಮಾರ್ಗವೊಂದನ್ನು ಆರಂಭಿಸಿದವನು. ಅವನು ಷಟ್ಪದೀ ಮಾರ್ಗದ ಪ್ರವರ್ತಕ ಎನ್ನಬಹುದು. ಹರಿಶ್ಚಂದ್ರಕಾವ್ಯ, ಸಿದ್ಧರಾಮ ಪುರಾಣ, ಸೋಮನಾಥ ಚರಿತೆಗಳು ಅವನ ಮಹತ್ವದ ಕೃತಿಗಳು. ಇವುಗಳಲ್ಲಿ ಕಡೆಯ ಎರಡು ಕೃತಿಗಳು ವೀರಶೈವ ಧರ್ಮದ ಘನವ್ಯಕ್ತಿಗಳೆರಡನ್ನು ಕೀರ್ತಿಸುವಂಥ ಕೃತಿಗಳು. ಆ ಮತದ ಮೇಲ್ಮೆಯನ್ನು ಸಾರುವುದೂ ಅವುಗಳ ಉದ್ದೇಶ. ಹರಿಶ್ಚಂದ್ರಕಾವ್ಯ ಸತ್ಯಚರಿತ್ರನೊಬ್ಬನ ಕಥೆಯನ್ನು ಅನುಪಮವೆಂಬಂತೆ ಸೃಷ್ಟಿಸಿದ ಕಥೆಯಾಗಿದ್ದು ನಿಜವಾದ ಅರ್ಥದ ಧಾರ್ಮಿಕ ಕೃತಿ ಇದೇ ಆಗಿದೆ.

ಈ ಶಿವಭಕ್ತಿಯಿಂದ ಉದ್ದೀಪನಗೊಂಡು ಮುಂದಿನ ಶತಮಾನಗಳಲ್ಲಿ ಹಲವು ಸತ್ವಪೂರ್ಣ ಕೃತಿಗಳು ಬಂದುವು. ಚಾಮರಸ ಕವಿಯ ಪ್ರಭುಲಿಂಗಲೀಲೆ, ಷಡಕ್ಷರಿಯ ರಾಜಶೇಖರ ವಿಳಾಸ, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮೊದಲಾದವರು ಬರೆದ ಶಿವಗೀತೆಗಳು ಇವುಗಳಲ್ಲಿ ಮುಖ್ಯವಾದುವು. ತೋಂಟದ ಸಿದ್ಧಲಿಂಗಯತಿಯ ನೇತೃತ್ವದಲ್ಲಿ ನಡೆದ ವಚನ ಸಾಹಿತ್ಯದ ಪುನರುಜ್ಜೀವನದ ಕೆಲಸ ಗಮನಾರ್ಹವಾದದ್ದು. ಇದರ ಫಲವಾಗಿ ಎಂಬಂತೆ ಮುಂದೆ ಘನಲಿಂಗ, ನಿರಾಲಂಬ ಶರಣ ಮೊದಲಾದವರ ಸಾಹಿತ್ಯಗುಣವುಳ್ಳ ವಚನಗಳು ಸೃಷ್ಟಿಯಾದುವು. ಚಾಮರಸನ ಪ್ರಭುಲಿಂಗಲೀಲೆ ಒಂದು ವೀರಶೈವ ಪುರಾಣ. ಈ ಧಾರ್ಮಿಕ ಕೃತಿ ಶ್ರೇಷ್ಠವಾದ ಕಾವ್ಯವೂ ಆಗಿದೆ. ಹರಿಹರನ ರಗಳೆಯಲ್ಲಿ ಬರುವ ಅಲ್ಲಮನಿಗಿಂತ ತುಂಬ ಭಿನ್ನವಾದ ನೆಲೆಯಲ್ಲಿ ಅವನನ್ನು ಚಿತ್ರಿಸುವ ಯತ್ನ ಇಲ್ಲಿದೆ. ಹರಿಹರನಲ್ಲಿ ಅವನು ದೈವಿಕತೆಯ ಕಡೆಗೆ ಸಾಗಿದ ಒಬ್ಬ ಶ್ರೇಷ್ಠ ಮಾನವನಾಗಿದ್ದರೆ, ಇಲ್ಲಿ ಅವನು ಆರಂಭದಿಂದಲೇ ಒಬ್ಬ ಸಿದ್ಧನಾಗಿದ್ದಾನೆ, ಮರೆಯ ದೈವವಾಗಿದ್ದಾನೆ. ಹಾಗಿದ್ದೂ ಮಾಯೆಯ ಚೆಲುವಿನ ವರ್ಣನೆ, ಶೃಂಗಾರ ವರ್ಣನೆ, ಮಾಯೆ ಅಲ್ಲಮರು ಸೆಜ್ಜೆಮನೆಯಲ್ಲಿ ಸೇರುವ ಸಂದರ್ಭದ ವರ್ಣನೆ ಇಲ್ಲೆಲ್ಲ ಚಾಮರಸ ಹಿರಿಯ ಕವಿಯೊಬ್ಬನ ಶಕ್ತಿ ಸಾಮರ್ಥ್ಯಗಳನ್ನು ಉಜ್ವಲವಾಗಿ ಮೆರೆದಿದ್ದಾನೆ. ಅಚ್ಚಗನ್ನಡ ದೇಸಿ, ರೂಪಕ ಸಂಪತ್ತು ಭಾಮಿನಿ ಷಟ್ಪದಿಯ ಮೇಲಿನ ಪ್ರಭುತ್ವ—ಇವೆಲ್ಲ ಒಟ್ಟಾಗಿ ಕೊಟ್ಟಿರುವ ಸತ್ವದಿಂದ ಪ್ರಭುಲಿಂಗಲೀಲೆ ಕನ್ನಡದ ಶ್ರೇಷ್ಠ ಚರಿತ್ರ ಕಾವ್ಯಗಳಲ್ಲಿ ಒಂದೆನಿಸಿದೆ.

ನಿಜಗುಣ ಶಿವಯೋಗಿ ಮತ್ತು ಮುಪ್ಪಿನ ಷಡಕ್ಷರಿಗಳು ಇತರ ಕೃತಿಗಳ ಜೊತೆಗೆ ಶಿವಭಕ್ತಿಯ ತೀವ್ರತೆಯಿಂದ ಬೆಳಗುವ ಕೆಲವು ಹಾಡುಗಳನ್ನು ಬರೆದರು. ನಿಜಗುಣರ ಗೀತೆಗಳು ಜ್ಞಾನಪ್ರಧಾನವಾಗಿದ್ದರೆ ಮುಪ್ಪಿನ ಷಡಕ್ಷರಿಯ ಗೀತೆಗಳು ಭಾವಪ್ರಧಾನವಾಗಿವೆ. ಮುಪ್ಪಿನ ಷಡಕ್ಷರಿಯ 'ಸಕಲಕೆಲ್ಲಕು ನೀನೆ', 'ಹೆಮ್ಮೆಗಳು ನಾ ನಿಮ್ಮ ಕರೆಯ ಬನ್ನಿ' ಎಂಬಂಥ ಗೀತೆಗಳು ಮನಕರಗಿಸುವಂಥ ಆತ್ಮಭಕ್ತಿಯಿಂದ ಶೋಭಿಸುತ್ತವೆ. ಮುಂದೆ ಸರ್ಪಭೂಷಣ ಶಿವಯೋಗಿಗಳಂಥವರಿಂದ ಈ ಪರಂಪರೆ ಮುಂದುವರಿಯಿತು. ಹರಿಹರಾದಿ ಕವಿಗಳು ಹೊತ್ತಿಸಿದ ಶಿವಭಕ್ತಿ ಷಡಕ್ಷರದೇವನಂಥ ಪ್ರೌಢ ಕವಿಗಳಲ್ಲಿಯೂ ಕ್ರಿಯಾಶೀಲವಾದದ್ದಲ್ಲದೆ ಅವನ ರಾಜಶೇಖರ ವಿಳಾಸದಂಥ ಕೃತಿಗಳ ಮೇಲೆ ಪ್ರಭಾವ ಬೀರಿತು. ರಾಜಶೇಖರ ವಿಳಾಸದಲ್ಲಿ ಬರುವ ತಿರುಕೊಳವಿ ನಾಚಿಯ ಪ್ರಸಂಗ ಅತ್ಯಂತ ಹೃದ್ಯವಾದ, ಕರುಣಾರಸಪೂರ್ಣವಾದ ಕಾವ್ಯಭಾಗ ವಾಗಿದ್ದು ಹರಿಹರನಂಥವರ ಶಿವಭಕ್ತಿಯ ಪ್ರಭಾವ ಯಾವ ದೂರದವರೆಗೆ ಹರಿ ಯಿತು ಎನ್ನುವುದನ್ನು ಸೂಚಿಸುತ್ತವೆ.

ಹನ್ನೆರಡನೆಯ ಶತಮಾನದ ಕಡೆಗೆ ಸೃಷ್ಟಿಯಾಗಿರಬಹುದಾದ ರುದ್ರಭಟ್ಟನ ಜಗನ್ನಾಥ ವಿಜಯ ವೈಷ್ಣವ ಭಕ್ತಿಯನ್ನು ಪ್ರಸಾರಿಸ ಹೊರಟ ಒಂದು ಪ್ರೌಢ ಚಂಪೂಕಾವ್ಯ. ಮುಂದೆ ಕುಮಾರವ್ಯಾಸ, ಚಾಟುವಿಠಲನಾಥ, ಲಕ್ಷ್ಮೀಶ ಮೊದಲಾದ ಕವಿಗಳ ಮೂಲಕ ಹರಿದ ಕೃಷ್ಣ ಭಕ್ತಿಯ ಮಹಾಪೂರಕ್ಕೆ ಮೂಲವೆಂದು ಹೇಳಬಹು ದಾದ ಕರೆ ಇಲ್ಲಿ ಕಾಣಿಸಿಕೊಂಡಿದೆ. ರುದ್ರಭಟ್ಟ ಕೃಷ್ಣನ ಕಥೆಯನ್ನು ಪಾಂಡಿತ್ಯ ಪೂರ್ಣವಾದ ಶೈಲಿಯಲ್ಲಿ ಹೇಳುತ್ತಲೇ ನಡುನಡುವೆ ಅನೇಕ ರಸದ ಮಡುವುಗಳನ್ನು ಸೃಷ್ಟಿಸಿದ್ದಾನೆ. ಅಕ್ರೂರ ಪ್ರಸಂಗ, ಕಂಸವಧ ಪ್ರಸಂಗ ಮೊದಲಾದ ಕಡೆ ಅವನ ಪ್ರತಿಭೆ, ಕಲ್ಪನೆಗಳು ಹುರಿಗೊಂಡು ಕೆಲಸ ಮಾಡಿವೆ. ವಿಷ್ಣುಭಕ್ತಿಯಿಂದ ಜ್ವಲಿಸುತ್ತಿ ದ್ದರೂ ಹರಿಹರರ ಅಭೇದವನ್ನು ಸಾರುವ ಈ ಕೃತಿಯು ಧಾರ್ಮಿಕವಾಗಿರುತ್ತಲೇ ಮೌಲಿಕವಾದ ಕಲಾಕೃತಿಯೂ ಆಗಿದೆ.

ಪಂಪ ಆಗಿಹೋದ ನಾಲ್ಕು ಶತಮಾನಗಳಿಗೆ ಬಂದ ಕುಮಾರವ್ಯಾಸನಲ್ಲಿ ಕನ್ನಡ ಕಾವ್ಯ ಪ್ರತಿಭೆ ಮತ್ತೊಮ್ಮೆ ಅಷ್ಟೇ ಉಜ್ವಲವಾಗಿ ಬೆಳಗಿತು. ಗದುಗಿನ ಭಾರತ ವೆಂದೂ ಕುಮಾರವ್ಯಾಸ ಭಾರತವೆಂದೂ ಜನಪ್ರಿಯವಾದ ಅವನ ಕರ್ಣಾಟಕ ಭಾರತ ಕಥಾಮಂಜರಿ ಕನ್ನಡದ ಇನ್ನೊಂದು ಮಹಾಕಾವ್ಯ. ಕುಮಾರವ್ಯಾಸ ಎಷ್ಟು ದೊಡ್ಡ ಕವಿಯೋ ಅಷ್ಟೇ ದೊಡ್ಡ ಭಕ್ತ. ಕೃತಿಯನ್ನು ರಚಿಸಿದವನು ವೀರನಾರಾಯಣನೇ, ತಾನೇನಿದ್ದರೂ ಕೇವಲ ಒಬ್ಬ ಲಿಪಿಕಾರ ಎನ್ನುವವರೆಗೆ ಅವನ ಭಕ್ತಿ. ತನ್ನ ಕೃತಿಯ ಬಗೆ ಹೇಳುತ್ತ ಅವನು 'ಇದು ವಿಚಾರಿಸೆ ಬರಿಯ ತೊಳಸಿಯ ಉದಕ' ಎನ್ನುತ್ತಾನೆ ತುಳಸಿಯ ನೀರು ರುಚಿಯಿದೆಯೋ ಇಲ್ಲವೋ ಪವಿತ್ರವಂತೂ ಹೌದು. ಈ ಕಾವ್ಯ ಕೂಡ ಜನರನ್ನು ರಂಜಿಸೀತೋ ಇಲ್ಲವೋ ಆದರೆ ಕೃಷ್ಣನ ಮಹಿಮೆ ಘನತೆಗಳನ್ನು ಮಾತ್ರ ಖಂಡಿತ ಚಿತ್ರಿಸುತ್ತದೆ ಎಂದು ಕವಿಯ ಅಭಿಪ್ರಾಯ. ಕವಿಯ ವಿನಯದ ಮಾತು ಏನೇ ಇರಲಿ, ಈ ಕೃತಿಯಲ್ಲಿ ಕುಮಾರವ್ಯಾಸನ ಕಲಾಪ್ರತಿಭೆ ಹೆಮ್ಮರವಾಗಿ ಬೆಳೆದು ಫಲಿಸಿದೆ. ಅವನ ಅದ್ಭುತ ರೂಪಕ ಸಂಪತ್ತನ್ನು, ಕನ್ನಡದ ದೇಸಿಯ ಕಸು

ವನ್ನು, ಬಣ್ಣನೆಯ ನಾಟಕೀಯ ಗತಿಯನ್ನು ಅದ್ಭುತವಾಗಿ ತೆರೆದಿಟ್ಟಿದೆ; ಕವಿಯೊಬ್ಬನ ನಿಜಲಕ್ಷಣವೆನ್ನಬಹುದಾದ ರೂಪಕ ಶಕ್ತಿ ಅವನ ಅಪೇಕ್ಷೆಗೆ ಬಾಗಿ ಇಲ್ಲಿ ದಾಸಿಯಂತೆ ದುಡಿದಿದೆ. 'ಕಾಲ ಕೂಟದ ತೆರೆಗಳಲ್ಲಿ ಬಾಲಕೇಳಿಯೇ?' 'ಸಿಡಿಲ ಪೊಟ್ಟಣ ಕಟ್ಟಿ ಶಾಖವ ಕುಡುವರೇ?' 'ಕಾರಿರುಳ ಪಟ್ಟಣಕೆ ಚಂದ್ರನ ತೋರಣವ ಬಿಗಿದಂತೆ' 'ಮುಗಿಲ ಬೆನಕಗೆ ಲಡುಗೆಗಳಾದುವು ಸಮಸ್ತ ಗ್ರಹ ಸುತಾರೆಗಳು'–ಇಂಥ ಶಕ್ತಿಯುತ ರೂಪಕಗಳು ಅವನ ಮುಖದಿಂದ ಅನಾಯಾಸವಾಗಿ ಚಿಮ್ಮುತ್ತವೆ. "ಕುಮಾರವ್ಯಾಸನ ರೂಪಕ ಶಕ್ತಿಯ ಆಶ್ಚರ್ಯಕರವಾದ ಮೂಲವು ಅವನ ಮಾಗಿದ ಪ್ರಜ್ಞೆಯಲ್ಲಿದೆ. ಋಷಿತುಲ್ಯವಾದ ಜೀವನ ಸಿದ್ಧಿಯಿಂದ ಸಂತುಷ್ಟಳಾದ ಸರಸ್ವತಿ ಅವನಿಗೆ ಒಲಿದಿದ್ದಾಳೆ" ಎಂಬ ಡಾ|| ಮುಗಳಿಯವರ ಮಾತು ಕೃತಿ ಕವಿಸಿದ ಬೆರಗಿನಲ್ಲಿ ಹೊರಟ ಸಹಜ ಉದ್ಗಾರವಾಗಿದೆ.

ವೈಷ್ಣವ ಭಕ್ತಿಯ ಈ ಮಹಾಪ್ರವಾಹ ತನ್ನ ದಂಡೆಗುಂಟ ಬೇಕಾದಷ್ಟು ಹುಲುಸು ಫಸಲು ತೆಗೆಯಿತು ತೊರವೆಯ ನರಹರಿ ತನ್ನನ್ನು ಕುಮಾರ ವಾಲ್ಮೀಕಿ ಎಂದು ಕರೆದುಕೊಂಡು ಭಾಮಿನಿ ಷಟ್ಪದಿಯಲ್ಲಿ ಇಡಿಯ ರಾಮಾಯಣವನ್ನು ಬರೆದ. ಶ್ರೀಪಾದರಾಯ, ವ್ಯಾಸರಾಯ, ಪುರಂದರ, ಕನಕ, ವಾದಿರಾಜ ಮೊದಲಾದ ಹರಿದಾಸರು ಈ ಭಕ್ತಿಯನ್ನು ತಮ್ಮ ಕೀರ್ತನೆಗಳಲ್ಲಿ ಹೊಸ ಬಣ್ಣವಿತ್ತು ಬೆಳಗಿದರು. ಹರಿಭಕ್ತಿಯ ಭಾವಾವೇಶಕ್ಕೆ ತನ್ನನ್ನು ಒಪ್ಪಿಸಿಕೊಂಡು, ಶ್ರೀಮಂತ ಜೀವನವನ್ನೂ ತೊರೆದು, ಹಾಡುತ್ತ ಹೊರಟ ಪುರಂದರದಾಸನ ಹಲವು ನೂರು ಕೀರ್ತನೆಗಳು ಲಭ್ಯವಾಗಿವೆ. ಸರಳವಾದ ಭಾಷೆ, ಗೀತ ಸಹಚರಿಯಾದ ಲಯ, ದೃಷ್ಟಾಂತಪೂರ್ವಕವಾದ ಮಾತುಗಾರಿಕೆ, ಭಕ್ತಿಯ ಕೆಚ್ಚುಗಳಿಂದ ತುಂಬಿರುವ ಅವನ ಕೀರ್ತನೆಗಳು ಮನೆಮನೆಯ ಬಾಗಿಲು ತಟ್ಟಿದುವು. ಭಕ್ತಿಯೇ ಸ್ಥಾಯಿಯಾಗಿರುವ ವಿಡಂಬಕ ಹಾಸ್ಯದ ಗೀತೆಗಳನ್ನೂ ಅವನು ಬರೆದಿದ್ದಾನೆ ಮುಚ್ಚುಮರೆಯಿಲ್ಲದ ಸಮಾಜ ವಿಮರ್ಶೆ ಅವನ ಹಾಡುಗಳಲ್ಲಿದೆ. ಈತನಂತೆಯೇ ವ್ಯಾಸರಾಯರ ಮತ್ತೊಬ್ಬ ಶಿಷ್ಯನಾದ ಕನಕದಾಸ ಕೂಡ ಈ ಕೀರ್ತನ ಪ್ರಕಾರವನ್ನು ತನ್ನ ಸತ್ವಶಾಲೀ ರಚನೆಗಳಿಂದ ಇನ್ನಷ್ಟು ಶ್ರೀಮಂತವಾಗಿಸಿದವನು. ಹುಟ್ಟಿನಿಂದ ಬೇಡನಾದರೂ ಹರಿದಾಸರ ರಚನೆಗಳಿಗೆ ಕಡಿಮೆಯೆನಿಸದ ಕೀರ್ತನೆಗಳನ್ನು ಬರೆದದ್ದೇ ಅಲ್ಲದೆ ಈತ ಬೇರೆ ಕೆಲವು ಕಾವ್ಯಗಳನ್ನೂ ಬರೆದ. ಅವುಗಳಲ್ಲಿ ಹರಿಭಕ್ತಿಸಾರ ಭಕ್ತಿಭಾವದೀಪ್ತವಾದ ಒಂದು ಸತ್ವಪೂರ್ಣ ಕೃತಿ. ಪುರಂದರದಾಸನ 'ಬಿನ್ನ ಹಕೆ ಬಾಯಿಲ್ಲವಯ್ಯಾ', 'ಆದದ್ದೆಲ್ಲ ಒಳಿತೇ ಆಯಿತು', 'ನಾ ನಿನ್ನ ಧ್ಯಾನದೊಳಿರಲು' ಮೊದಲಾದುವು ಅವನ ಭಕ್ತಿಯ ತೀವ್ರತೆಯನ್ನು ಹೇಳುವಂತೆ 'ಮಡಿ ಮಡಿ ಮಡಿಯೆಂದಡಿಗಡಿಗ್ಹಾರುವಿ', 'ಬೇವುಬೆಲ್ಲದೊಳಿಡಲೇನು ಫಲ', 'ತನುವ ನೀರೊಳಗದ್ದಿ ಫಲವೇನು' ಮೊದಲಾದುವು ಅವನ ನಿರ್ದಾಕ್ಷಿಣ್ಯ ವಿಮರ್ಶಕ ದೃಷ್ಟಿಯನ್ನೂ ಹೇಳುತ್ತವೆ. ಕೀರ್ತನೆಗಳಲ್ಲದೆ ಸುಳಾದಿ, ಉಗಾಭೋಗಗಳನ್ನೂ ರಚಿಸಿದ ಪುರಂದರದಾಸ ಕರ್ನಾಟಕ ಸಂಗೀತವೆಂಬ ಹಿರಿಯ ಸಂಗೀತ ಪ್ರಕಾರಕ್ಕೇ ತಳಹದಿ ಹಾಕಿದ ಸೃಷ್ಟಿಶೀಲ ಕನಕದಾಸನ ಕೀರ್ತನೆಗಳು ಭಾವಗೀತಾತ್ಮಕವಾದ ಚೆಲುವಿನಿಂದ ಕಂಗೊಳಿಸುತ್ತವೆ. 'ತನು ನಿನ್ನದು ಜೀವನ ನಿನ್ನದು',

'ತಲ್ಲಣಿಸದಿರು ಕಂಡ್ಯ', 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ', 'ಕುಲ ಕುಲ ಕುಲವೆನ್ನುತಿಹರು' ಈ ಮಾತಿನ ನಿದರ್ಶನವಾಗಿವೆ. ಮುಂದೆ ಈ ಪಂಥವನ್ನು ಜಗನ್ನಾಥದಾಸ, ಮಹಿಪತಿದಾಸ, ವಿಜಯದಾಸ, ಪ್ರಸನ್ನ ವೆಂಕಟದಾಸ ಮೊದಲಾದವರು ಬೆಳಸಿಕೊಂಡು ಹೋದರು.

ಹೀಗೆ ಹರಿದು ಬಂದ ಹರಿಭಕ್ತಿಯ ಸ್ಫೂರ್ತಿಯಲ್ಲಿ ಚಾಟುವಿಠಲನಾಥ, ಲಕ್ಷ್ಮೀಶ ಮೊದಲಾದ ಕವಿಗಳು ಭಾಗವತ ಮತ್ತು ಜೈಮಿನಿ ಭಾರತಗಳಂಥ ಕೃತಿಗಳನ್ನು ರಚಿಸಿದರು. ಜೈಮಿನಿಭಾರತ ಅನೇಕ ಕೃಷ್ಣಭಕ್ತರ ಕಥೆಗಳ ಮಾಲಿಕೆಯಾಗಿದ್ದು ಗದುಗಿನ ಭಾರತಕ್ಕೆ ಸರಿಮಿಗಿಲಾಗಿ ಜನಪ್ರಿಯವೆನಿಸಿತು; ಹಳ್ಳಿ ಹಳ್ಳಿಗೂ ಕಾಲಿಟ್ಟಿತು. ನಾದಭರಿತವಾದ ಶೈಲಿಯಿಂದ ಕೂಡಿದ ಇದರ ವಾಚನ ಎಷ್ಟು ಜನಪ್ರಿಯವಾಯಿತೆಂದರೆ ಗ್ರಾಮಗಳ ಕಡೆ ಇದು ಒಬ್ಬನ ವಿದ್ಯೆಯನ್ನು ನಿರ್ಧರಿಸುವ ಮಾನದಂಡವಾಯಿತು. ಇದರಲ್ಲಿ ಬರುವ ಚಂದ್ರಹಾಸನ ಕಥೆ ಪರಮಭಾಗವತನೊಬ್ಬನ ಕಥೆಯಾಗಿರುತ್ತ ಕವಿಯ ಕೃಷ್ಣಭಕ್ತಿ, ಕಾವ್ಯಪ್ರತಿಭೆ ಎರಡಕ್ಕೂ ಚೊಕ್ಕ ನಿದರ್ಶನವಾಗಿದೆ.

ಮೈಸೂರೊಡೆಯರ ಕಾಲದಲ್ಲಿ ಶ್ರೀ ವೈಷ್ಣವ ಮತಪರವಾದ ಭಕ್ತಿಪ್ರಧಾನ ಸಾಹಿತ್ಯ ಕಾಣಿಸಿಕೊಳ್ಳಲಾರಂಭಿಸಿತು. ಅರಸನಾದ ಚಿಕದೇವರಾಜ ಸ್ವತಃ ಚಿಕದೇವರಾಜ ಬಿನ್ನಪ ಮತ್ತು ಗೀತಗೋಪಾಲದಂಥ ಕೃತಿಗಳಿಗೆ ಕಾರಣನಾದ. ಚಿಕದೇವರಾಜ ಬಿನ್ನಪದ ಮೂವತ್ತು ಬಿನ್ನಪಗಳೂ ಶ್ರೀವೈಷ್ಣವ ಮತದ ತತ್ವಸಾರವನ್ನು ಒಳಗೊಂಡಿದ್ದರೂ ಆದರ್ಶ ಭಕ್ತಿಯ ಕಾವಿನಿಂದ ಪ್ರಾಪ್ತವಾಗುವ ಚೆಲುವು ಅದರಲ್ಲಿದೆ. ಅದನ್ನು ಸೃಜನಾತ್ಮಕವಾದ 'ಉದಾರ ಗದ್ಯ'ವೆಂದು ಕರೆಯಬಹುದು. ಗೀತಗೋಪಾಲ ಕೂಡ ಇದೇ ಆಶಯದಿಂದ ಕೂಡಿದ ಗೀತ ಸಂಗ್ರಹ. ಸುಮಾರು ೧೭೫೦ ರಲ್ಲಿ ಇದ್ದ ಹೆಳವನಕಟ್ಟೆ ಗಿರಿಯಮ್ಮ ಚಂದ್ರಹಾಸನ ಕಥೆಯನ್ನು ಸಾಂಗತ್ಯದಲ್ಲಿ ರಚಿಸಿದ್ದಲ್ಲದೆ ಕೆಲವು ಹಾಡುಗಳನ್ನೂ ಬರೆದಳು. ಅವಳಿಗಿಂತ ಸ್ವಲ್ಪ ಮುಂಚೆ ಆಗಿಹೋದ ರಂಗನಾಥ ಕವಿ ಮಹಲಿಂಗರಂಗನೆಂಬ ಹೆಸರಿನಲ್ಲಿ ಅನುಭವಾಮೃತ ಎಂಬ ಗಮನಾರ್ಹ ಕೃತಿಯೊಂದನ್ನು ರಚಿಸಿದ. ಅದ್ವೈತ ಸಿದ್ಧಾಂತವನ್ನು ಅತ್ಯಂತ ಸೊಗಸಾಗಿ ವಿವರಿಸುವ ಈ ತಾತ್ವಿಕ ಕೃತಿ ರಂಗನಾಥನಲ್ಲಿರುವ ಕವಿಶಕ್ತಿಯೇ ಕಾರಣವಾಗಿ ಅತ್ಯಂತ ಹೃದ್ಯವಾಗಿದೆ. ಹಿರಿಯ ಕವಿಗಳಲ್ಲಿಷ್ಟೇ ಕಾಣದೊರೆಯಬಹುದಾದ ಲಯಗಾರಿಕೆ ಮತ್ತು ಸಾದೃಶ್ಯ ಸಂಪತ್ತು ಈ ಕೃತಿಯಲ್ಲಿ ಕಾಣುತ್ತದೆ. ಅದ್ವೈತ ತತ್ವದಂಥ ಕ್ಲಿಷ್ಟ ವಿಷಯವನ್ನೂ ಸಹ ಅವನು ಅತ್ಯಂತ ಸರಳವಾದ ಕನ್ನಡದಲ್ಲಿ ಹೇಳಿದ್ದು ಆಶ್ಚರ್ಯಕರವಾಗಿದೆ. 'ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ, ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪಲಲಿತವಹ ಕನ್ನಡದ ನುಡಿಯೊಳು' ಏನನ್ನೂ ಸಹ ಸಮರ್ಥವಾಗಿ ಹೇಳಲು ಸಾಧ್ಯವೆಂದು ಸಾರಿದ ಕವಿ ಇವನೇ. ಚಿದಾನಂದಾವಧೂತನೆಂಬ ಇನ್ನೊಬ್ಬ ಕವಿ ಇವನ ದಾರಿಯಲ್ಲೇ ಸಾಗಿ ಜ್ಞಾನಸಿಂಧು ಎಂಬ ಉದ್ಗ್ರಂಥವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದ. ಇವನ ಮೇಲೆ ಮಹಲಿಂಗರಂಗನ ಪ್ರಭಾವವಿರುವುದು ಸ್ಪಷ್ಟವಾಗಿದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ಅನೇಕ ಅನುಭಾವಿಗಳು ಆಗಿಹೋದರು. ಅದರಲ್ಲಿ ಕೆಲವರು ಸೊಗಸಾದ ತತ್ವಪದಗಳನ್ನು ರಚಿಸಿರುವುದುಂಟು. ಬಾಲಲೀಲಾ ಮಹಾಂತ ಶಿವಯೋಗಿ, ಗರಗದ ಮಡಿವಾಳಪ್ಪ ಕೂಡಲ ಬಸವಲಿಂಗ ಮೊದಲಾದವರು ಇವರಲ್ಲಿ ಗಮನಿಸಬೇಕಾದವರು. ಶರೀಫ ಸಾಹೇಬನ ತತ್ವಪದಗಳು ಪಾರಮಾರ್ಥಿಕ ದೃಷ್ಟಿಯವಾಗಿರುತ್ತಲೇ ಸೊಗಸಾದ ಸಾಹಿತ್ಯಿಕ ಅಭಿವ್ಯಕ್ತಿ ಪಡೆದಿವೆ. 'ಬಿದ್ದೀಯಬೇ ಮುದುಕಿ', 'ಕೋಡಗನ ಕೋಳಿ ನುಂಗಿತ್ತ', 'ಅಳ ಬೇಡಿ ತಂಗಿ', 'ತರವಲ್ಲ ತಂಗಿ ನಿನ್ನ ತಂಬೂರಿ', 'ಸೋರುತಿಹುದು ಮನೆಯ ಮಾಳಿಗಿ' ಮೊದಲಾದವು ಕಾವ್ಯಸತ್ವದಿಂದ ಕೂಡಿದ ಕವಿತೆಗಳಾಗಿದ್ದು ಉತ್ತರ ಕರ್ನಾಟಕದ ದೇಸಿಯ ಸತ್ವಗತ್ತುಗಳನ್ನು ತಳತನಕ ದುಡಿಸಿಕೊಂಡ ರಚನೆಗಳಾಗಿವೆ. ಶರೀಫ ಸಾಹೇಬನಲ್ಲಿ ಬರುವ ಚಿತ್ರ ಸಾಮಗ್ರಿಗಳ ವೈವಿಧ್ಯ ಬೆರಗುಗೊಳಿಸುವಂಥದು. ಕಪ್ಪೆ, ಕೋಳಿ, ಕುದುರೆ, ಕೋಡಗ, ಸರ್ಪ, ಪಾರಿವಾಳ, ಹುಚ್ಚು ನಾಯಿ, ಗಿರಣಿ, ಶಾಲೆ ಸೂಚಿ—ಹೀಗೆ ಸುತ್ತಲ ಜಗತ್ತೆಲ್ಲ ಅವನ ಪದ್ಯಗಳಲ್ಲಿ ಸಹಜವಾಗಿ ತಲೆಹಾಕಿದೆ. ವಿಶೇಷವಾದ ರೂಪಕ ಸಂಪತ್ತಿನಿಂದ ಮತ್ತು ಆ ಮೂಲಕ ಧ್ವನಿಶಕ್ತಿಯಿಂದ ಬೆಳಗುವ ಈ ಪದ್ಯಗಳು ಹೊಸಗನ್ನಡ ಸಾಹಿತ್ಯದ ಮುಂಬೆಳಗಿನಲ್ಲಿ ಬಂದ ಪ್ರಭಾತ ಗೀತೆಗಳಾಗಿವೆ.

ಕನ್ನಡ ಕಾವ್ಯದ ಇತ್ತೀಚಿನ ಒಲವುಗಳು

ಎಚ್. ಎಸ್. ರಾಘವೇಂದ್ರರಾವ್

ಇತ್ತೀಚಿನ ಕನ್ನಡ ಕಾವ್ಯದ ಸ್ವರೂಪವನ್ನು ಪರಿಶೀಲಿಸಲೆತ್ನಿಸುವ ಮುಖ್ಯ ಲೇಖನಗಳಲ್ಲಿ ನಿರಾಶೆಯ ಧ್ವನಿ ಸ್ಪಷ್ಟವಾಗಿದೆ. ಸಾಹಿತ್ಯದ ಇತರ ಪ್ರಕಾರಗಳೊಂದಿಗೆ ಹೋಲಿಸಿದಾಗ ಕೂಡ ಕಾವ್ಯದ ಸಾಧನೆಯು ಕಡಿಮೆಯೆಂಬ ಆಕ್ಷೇಪಣೆ ಕೇಳಿ ಬಂದಿದೆ. ಆದರೆ ಇದು ಬಂಡಾಯ ಕಾವ್ಯದ ಮುಖ್ಯ ಮಾದರಿಗಳು, ಸಮಕಾಲೀನ ಕನ್ನಡ ಕಾವ್ಯದ ಒಟ್ಟು ಸನ್ನಿವೇಶವನ್ನೇ ಪ್ರತಿನಿಧಿಸುತ್ತವೆಂಬ ತಪ್ಪು ತಿಳುವಳಿಕೆಯಿಂದ ಹುಟ್ಟಿದ ತೀರ್ಮಾನವೆಂದು ನನ್ನ ಅಭಿಪ್ರಾಯ. ೧೯೭೫ರಲ್ಲಿ ಪ್ರಕಟವಾದ ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರ 'ತೆರೆದ ಬಾಗಿಲು' ಸಂಕಲನದಿಂದ ಹಿಡಿದು, ಈಚೆಗೆ ಬರೆಯುತ್ತಿರುವ ಅಬ್ದುಲ್ ರಶೀದ್, ಎಲ್. ಸಿ. ನಾಗರಾಜ್ ಮುಂತಾದವರ ಕವಿತೆಗಳವರೆಗೆ ಮೂಡಿಬಂದಿರುವ ಹಲವು ಬಗೆಯ ಕಾವ್ಯಾಭಿವ್ಯಕ್ತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ನಿರಾಶೆಗೆ ಕಾರಣವೇ ಇಲ್ಲವೆಂಬ ಸತ್ಯವು ಗೊತ್ತಾಗುತ್ತದೆ. ಈ ದಶಕದಲ್ಲಿ ರೂಪಿತವಾದ ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳು ಸಾಹಿತಿಯ ಸೃಜನಶೀಲತೆಗೆ ಒಡ್ಡಿದ ಸವಾಲನ್ನು ವಿಭಿನ್ನ ಹಿನ್ನೆಲೆ ಹಾಗೂ ಮನೋಧರ್ಮಗಳನ್ನು ಹೊಂದಿರುವ ಕವಿಗಳು ಸ್ವೀಕರಿಸಿರುವ ರೀತಿಯು ಕಾವ್ಯದ ಹಲವು ಬಗೆಗಳಿಗೆ ಕಾರಣವಾಗಿವೆ. ಆದ್ದರಿಂದಲೇ ಪ್ರಯೋಗಶೀಲತೆ ಮತ್ತು ಸ್ಥಿತ್ಯಂತರಗಳ ನೆಲೆಯಲ್ಲಿ ಚಲಿಸುತ್ತಿರುವ ಇಂದಿನ ಕಾವ್ಯವು ಹಳಬರ ಸಾಧನೆಗಳೊಂದಿಗೆ ಹೊಸಬರ ಸಾಧ್ಯತೆಗಳನ್ನೂ ತನ್ನೊಳಗೆ ಹುದುಗಿಸಿಕೊಂಡಿದೆ. ಕವಿತೆಯೆಂಬ ಪರಿಕಲ್ಪನೆಯ ಪರಿಧಿಯನ್ನೇ ವಿಸ್ತರಿಸುವ ಪ್ರಯತ್ನಗಳು ಸತತವಾಗಿ ನಡೆಯುತ್ತ ಬಂದಿವೆ ಇತಿಹಾಸವನ್ನು ವ್ಯಾಖ್ಯಾನಿಸುವ ವೈಚಾರಿಕ ಪ್ರತಿಭೆ, ಸಮಕಾಲೀನ ಬದುಕಿನ ದಟ್ಟವಾದ ಅರಿವು ಮತ್ತು ಭಾಷೆಯ ಕಾವ್ಯಾತ್ಮಕ ಉಪಯೋಗವನ್ನು ಕುರಿತ ಖಚಿತ ತಿಳುವಳಿಕೆಗಳು ಮುಪ್ಪುರಿಗೊಂಡಿರುವ ಮನಸ್ಸುಗಳು ಕೆಲವಾದರೂ ಕಾವ್ಯರಚನೆಯಲ್ಲಿ ತೊಡಗಿವೆ ಮೊದಲಬಾರಿಗೆ ಅಕ್ಷರ ವಿದ್ಯೆಯ ಸೌಲಭ್ಯವನ್ನು ಪಡೆದ ಮೂಕಸಮುದಾಯದ ಪ್ರತಿನಿಧಿಗಳು ಮೊದಲು ಘೋಷಣಾಪರವಾದ ಕಾವ್ಯಕ್ಕೆ ಮಾರುಹೋದರೂ, ಕ್ರಮೇಣ ತಮ್ಮದೇ ಆದ ಅಭಿವ್ಯಕ್ತಿ, ಪರಿಕರಗಳನ್ನು ಕಂಡುಕೊಳ್ಳುತ್ತಿದ್ದಾರೆ. ಹೀಗೆ ಬಂಡಾಯದ ಒಡಲಿನಿಂದಲೇ ಅದಕ್ಕಿಂತ ಭಿನ್ನವೂ, ಸಂಕೀರ್ಣವೂ ಆದ ಕಾವ್ಯವು ಮೂಡುತ್ತಿರುವುದನ್ನು ಕನ್ನಡ ಕಾವ್ಯದ ಇತ್ತೀಚಿನ ಪ್ರಮುಖ ಹೆಜ್ಜೆಯೆಂದು ನಾನು ತಿಳಿಯುತ್ತೇನೆ ಇಂದಿನ ಕಾವ್ಯ ಸನ್ನಿವೇಶದ ಹಲವು ಕವಲುಗಳನ್ನು ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶ.

೧. ಮೊದಲನೆಯದಾಗಿ ಬರವಣಿಗೆಯ ಪ್ರಮಾಣ ಮತ್ತು ಪಡೆಯುತ್ತಿರುವ ಪ್ರಚಾರದ ದೃಷ್ಟಿಯಿಂದ, ಪ್ರಧಾನವೆನಿಸಿಕೊಂಡಿರುವ ಬಂಡಾಯ ಕಾವ್ಯವನ್ನು ಕುರಿತು ಕೆಲವು ಮಾತುಗಳು. ಕಾವ್ಯವು, ಭಾಷೆಯ ಕಲಾತ್ಮಕ ಉಪಯೋಗದ ಮೂಲಕವಾಗಿ ಮಾತ್ರ ಸಂಭವಿಸಬೇಕಾದ ಸಂಗತಿಯೆಂಬ ಪ್ರಾಥಮಿಕ ಸತ್ಯದ ಬಗೆಗಿನ ಸಂಪೂರ್ಣ ಅನಾದರ ಬಹುಪಾಲು ಬಂಡಾಯ ಕಾವ್ಯದ ಮುಖ್ಯ ಕೊರತೆ ಸಾಹಿತ್ಯವನ್ನು ಅದರಿಂದ ಸಾಧ್ಯವಿಲ್ಲದ ಉದ್ದೇಶಗಳ ಪೂರೈಕೆಗಾಗಿ ಬಳಸಿಕೊಳ್ಳ ಹೋದಾಗ, ಅದು ತನ್ನಿಂದ, ಕೇವಲ ತನ್ನಿಂದ ಸಾಧ್ಯವಾಗಬಹುದಾದ ಸಾಧನೆಗಳಿಗೂ ಎರವಾಗಬೇಕಾಗಿ ಬರುತ್ತದೆ. ಕಾವ್ಯರಚನೆಗೆ ಸಮಾನಾಂತರವಾಗಿಯೇ ನಡೆಯುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಚಳುವಳಿಗಳ ವಕ್ತಾರರು ಇಂತಹ ಕಾವ್ಯವನ್ನು ಸಾಹಿತ್ಯೇತರ, ಪ್ರಚಾರಪರ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು. ಆದರೆ ಕಥೆ–ಕಾದಂಬರಿಗಳ ಹಾಗೆ ಭೌತಿಕ ವಿವರಗಳನ್ನು ಕೊಡುವುದರ ಮೂಲಕವಾದರೂ ಹೊಸ ಅನುಭವಜಗತ್ತನ್ನು ಮೂಡಿಸುವ ಅವಕಾಶ ಕೂಡ ಇಲ್ಲದ ಕಾವ್ಯವು ಭಾಷೆಯನ್ನು ಇನ್ನಷ್ಟು ಎಚ್ಚರಿಕೆಯಿಂದ ಬಳಸಿಕೊಳ್ಳಬೇಕಾಗುತ್ತದೆ. ಪ್ರತಿಯೊಬ್ಬ ಕವಿಯೂ ತನ್ನದೇ ಆದ ನಿರೂಪಣಾ ವಿಧಾನಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಲ್ಲದೆ ಹೋದರೆ ತಮ್ಮ 'ಹೊಲೆ ಮಾದಿಗರ ಹಾಡು' ಸಂಕಲನದಲ್ಲಿ ಕನ್ನಡಕ್ಕೆ ಹೊಸ ಅಲೆಯೊಂದನ್ನು ತಂದುಕೊಟ್ಟ ಸಿದ್ದಲಿಂಗಯ್ಯನವರು ನಂತರದ ಸಂಕಲನಗಳಲ್ಲಿ ಪುನರುಕ್ತಿಯ ಜಾಡನ್ನು ಹಿಡಿದು, ಕ್ರಮೇಣ ಚಲನ ಚಿತ್ರಗೀತೆಗಳ ರಚನೆಯ ಕಡೆಗೆ ತಿರುಗಿದಂತೆ ಆಗುತ್ತದೆ. ನಿಯತ ನಿಲಯಗಳ, ಶಿಷ್ಟ ಕನ್ನಡದ ಅವರ ಈಚಿನ ಕವನಗಳು ಕನ್ನಡ ಕಾವ್ಯಪರಂಪರೆಯ ಮುಂದುವರಿಕೆ ಹಾಗಿರಲಿ, ಸಮರ್ಥ ಪುನರಾವರ್ತನೆ ಕೂಡ ಆಗುವುದಿಲ್ಲ. ಆರು ಜನ ನವ್ಯಕವಿಗಳ ಕವನಗಳನ್ನು ಓದಿದಾಗ ಯಾವುದನ್ನು ಯಾರು ಬರೆದರೆಂದು ಖಚಿತವಾಗೇ ಹೇಳಬಹುದು. ಆದರೆ ಅದೇ ಆರು ಬಂಡಾಯ ಕವನಗಳು ಸಮುದಾಯದ ಅನುಭವವನ್ನು ಕುರಿತು ಸಾಮಾನ್ಯೀಕೃತ ಹೇಳಿಕೆಗಳೋ ಘೋಷಣೆಗಳೋ ಆಗಿ ಮುಖಹೀನತೆಯ ದೋಷದಿಂದ ನರಳುತ್ತವೆ. ಆದರೆ ಸಿದ್ದಲಿಂಗಯ್ಯನವರ ಕಾವ್ಯವು ಮೂಡಿಸಿದ ಎಚ್ಚರದ ಅಲೆಗಳನ್ನ ನಂತರ 'ಬೆಳೆದ' ಕವಿಗಳಲ್ಲಿ ಪ್ರಬುದ್ಧತೆಯನ್ನು ಕಂಡುಕೊಂಡರೆ, ಕನ್ನಡದ ಎಲ್ಲ ಕವಿಗಳೂ ತಮ್ಮ ಕಾವ್ಯದ ಸ್ವರೂಪದ ಬಗ್ಗೆ ಪುನರಾಲೋಚನೆ, ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಕಾರಣವಾದವು. ನವ್ಯಕಾವ್ಯದ ಬಂಧ ಹಾಗೂ ವಿಧಾನಗಳನ್ನು ತಪ್ಪಾಗಿ ಅರ್ಥ ಮಾಡಿಕೊಂಡುದರ ಪರಿಣಾಮವಾಗಿ ಅನೇಕ ಬಂಡಾಯ ಕವಿತೆಗಳು ಜಾಳುಜಾಳಾದ, ಬಂಧವೇ ಇಲ್ಲದೆ ಮಾತುಗಳಾದವು.

೨. ಈಗಾಗಲೇ ಹೇಳಿದಂತೆ ಬಂಡಾಯ, ದಲಿತ, ಒಕ್ಕೂಟ ಮುಂತಾದ ಚಳವಳಿಗಳು ನಮ್ಮ ಕಾಲದ ಸಾಹಿತಿಗಳ ಮೇಲೆ ತಂದ ಸಾಂಸ್ಕೃತಿಕ ಒತ್ತಡ ಎಷ್ಟೊಂದು ಪ್ರಬಲವಾಗಿತ್ತೆಂದರೆ ಆ ವೇಳೆಗಾಗಲೇ ಒಂದಲ್ಲ ಒಂದು ಬಗೆಯಲ್ಲಿ ಮೌಲಿಕ ಸಾಧನೆಗಳನ್ನು ಮಾಡಿದವರೂ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸಬೇಕಾಗಿ ಬಂತು. ಪ್ರಮುಖರಾದ ನವ್ಯಕವಿಗಳ ನಂತರದ ಪೀಳಿಗೆಯ, ಮಧ್ಯಮ ವರ್ಗಕ್ಕೆ ಸೇರಿದ ಕವಿ

ಗಳಿಗಂತೂ ಅನೇಕ ಸವಾಲುಗಳು ಒದಗಿದವು. ಅವರ ಅನುಭವ ಲೋಕವನ್ನು ಅವರ ಹಿರಿಯರೇ ಸಮರ್ಥವಾಗಿ ಮಂಡಿಸಿದ್ದರು, ಅವರದಲ್ಲದ ಲೋಕದ ಬಗ್ಗೆ ಬರೆಯುವುದು ಅಸಾಧ್ಯ ಮತ್ತು ಅಪ್ರಾಮಾಣಿಕ. ಆದ್ದರಿಂದಲೇ ಇಂತಹ ಕವಿಗಳು ಪಟ್ಟ ಪಡಿಪಾಟಲು ಕೆಲವಾದರೂ ಉಪಯುಕ್ತ ಪರ್ಯಾಯಗಳನ್ನು ರೂಪಿಸುವುದರಲ್ಲಿ ಯಶಸ್ವಿಯಾಯಿತು. ಇಂತಹ ಬದಲು ದಾರಿಗಳು ಕಾವ್ಯಪರಂಪರೆಯನ್ನೇ ಮುಂದುವರಿಸುವಷ್ಟು ಚಲನಶೀಲತೆಯನ್ನು ಪಡೆದುಕೊಂಡಿರದಿದ್ದರೂ, ಕವಿತೆಯ ಆಳ, ಅಗಲ ಮತ್ತು ವೈವಿಧ್ಯಗಳನ್ನು ಹೆಚ್ಚಿಸುತ್ತವೆ. ಇಂತಹ ಕೆಲವು ಪರ್ಯಾಯಗಳ ಗುಣ ಹಾಗೂ ಪರಿಮಿತಿಗಳನ್ನು ಇನ್ನು ಮುಂದೆ ಸಂಕ್ಷಿಪ್ತವಾಗಿ ಹೇಳುತ್ತೇನೆ.

ಅ) ಸಮಕಾಲೀನವಲ್ಲದ, ಪೌರಾಣಿಕ ವಸ್ತುವನ್ನು ಮತ್ತು ನವೋದಯದ ಕಾಲದಲ್ಲೇ ಕೈಬಿಡಲಾಗಿದ್ದ ಛಂದೋಪ್ರಕಾರಗಳನ್ನು ಬಳಸುವುದರ ಮೂಲಕ ವಿಭಿನ್ನತೆಯನ್ನು ಸಾಧಿಸುವ ದಾರಿಯನ್ನು ವೆಂಕಟೇಶಮೂರ್ತಿಯವರು ಹಿಡಿದರು. ಆದರೆ ಪುರಾಣದ ಮೂಲಕ ವರ್ತಮಾನವನ್ನು ವ್ಯಾಖ್ಯಾನ ಮಾಡಲು ಅಗತ್ಯವಾದ ವೈಚಾರಿಕ ಪ್ರತಿಭೆಯ ಕೊರತೆ, ಇವರ ಕವಿತೆಗಳನ್ನು ಸುಂದರವಾದ ರಂಜಕಸಾಮಗ್ರಿಗಳಾಗಿಸಿದವು. ಬದುಕಿನಲ್ಲಿ, ಭಾಷೆಯಲ್ಲಿ ಇರುವ ಚೆಲುವನ್ನು ಶೋಧಿಸಿ ತೆಗೆಯುವುದರಲ್ಲಿ ಇವರಿಗಿರುವ ಶಕ್ತಿಯು, ಕಾವ್ಯವನ್ನು ಆಟವಾಗಿ, ಭಾಷೆಯನ್ನು ಆಟದ ಸಾಮಾನಾಗಿ ಪರಿಗಣಿಸುವ ಲಘುತನದಲ್ಲಿ ಮುಗಿದುಹೋಗುವುದೇನೋ ಎಂಬ ಸಂಶಯ ನನಗಿದೆ. ಇವರು ಮತ್ತು ಇಂತಹ ಹಲವು ಕವಿಗಳು ಗೀತರಚನೆಯ ಕಡೆಗೆ ತೋರಿಸುತ್ತಿರುವ ಆಸಕ್ತಿ ನನ್ನ ಮಾತಿಗೆ ಪುಷ್ಟಿ ಕೊಡುತ್ತವೆ. ಈ ಹಾಡುಗಳು ಬಹಳ ಅಪರೂಪವಾಗಿ ಕವಿತೆಯಾಗುತ್ತವೆ. ಹಾಡುಗಳಾಗಿ ಕೂಡ ಅವು ನವೋದಯ ಕವಿಗಳ ಶ್ರೇಷ್ಠ ಭಾವಗೀತೆಗಳಿಗಿಂತ ಕಡಿಮೆ ದರ್ಜೆಯವು. ಆದ್ದರಿಂದಲೇ ಇವರ ಕವಿತೆಗಳು "ಸುಂದರ ನಡುಗಡ್ಡೆ" "ಅಲ್ಪತೃಪ್ತ" ಮುಂತಾದ ವಿಮರ್ಶೆಗೆ ಸಹಜವಾಗಿಯೇ ಗುರಿಯಾಗುತ್ತವೆ. ನವ್ಯಕಾವ್ಯವು ಆವಿಷ್ಕರಿಸಿದ ಹಲವು ವಿಧಾನ ಮತ್ತು ಪರಿಕರಗಳನ್ನು ತಾನಾಗಿಯೇ ಬಿಟ್ಟುಕೊಡುವ ಈ ಕಾವ್ಯವು ಸಾಹಿತ್ಯದ ಗಂಭೀರ ವಿದ್ಯಾರ್ಥಿಗೆ ಹಿಡಿಸುವ ಸಂಭವ ಬಹಳ ಕಡಿಮೆ.

ಆ) ತಮ್ಮ ತೀರ ಈಚಿನ ಕವನಸಂಕಲನವಾದ 'ಅವಧ'ದಲ್ಲಿ ಕೆ. ವಿ. ತಿರುಮಲೇಶ್ ಮತ್ತು ಇನ್ನೇನು ಪ್ರಕಟವಾಗಲಿರುವ 'ಹಕ್ಕಿಪಲ್ಟಿ' ಸಂಕಲನದಲ್ಲಿ ಎಸ್. ಮಂಜುನಾಥ ಅವರು ಕಂಡುಕೊಂಡಿರುವುದು ಇನ್ನೊಂದು ಬದಲು ದಾರಿ. ನಮ್ಮ ದೈನಂದಿನ ಅನುಭವದ ಪರಿಧಿಯೊಳಗೆ ಬಂದರೂ ನಮ್ಮ ಗ್ರಹಿಕೆಗೆ ಸಿಕ್ಕದೆ ಜಾರಿಹೋಗುವ ವಾಸ್ತವಗಳನ್ನು ಕಾವ್ಯವಾಗಿಸುವುದು ತಿರುಮಲೇಶ ಅವರ ಸಾಧನೆ. ಇಲ್ಲಿ ಯಾವುದೇ ಬಗೆಯ ವಾಚಾಳಿತನಕ್ಕಾಗಲೀ, ತಾತ್ವಿಕನಿಲುವುಗಳ ಮಂಡನೆಗಾಗಲೀ ಅವಕಾಶವಿಲ್ಲ. ಇಂತಹ ಕವಿತೆಗಳು 'ಸಾರ್ಥಕ'ವಾಗುವುದು ಓದುಗನ ಮನಸ್ಸಿನಲ್ಲಿ ಮುಕ್ತಾಯವಾಗುವ Circuitದಲ್ಲಿ ಮಾತ್ರ. ಹೀಗೆ ಮುಕ್ತವಾಗುವುದರಿಂದಲೇ. ಇಂತಹ ಕವಿತೆಗಳು ಕವಿಗೆ ವಿಶಿಷ್ಟವಾದುದರ ಹೇಳುವಿಕೆಯಲ್ಲಿ ಮಗ್ನವಾಗದೆ, ಓದುಗನೂ ಕಾವ್ಯರಚನೆಯ ಪ್ರಕ್ರಿಯೆಯಲ್ಲಿ ಭಾಗಿಯಾಗುವಂತೆ ಮಾಡುತ್ತವೆ.

ಇಂತಹ ಬಗೆಯ ಅನುಭವಕ್ಕೆ ಶಿಖರವಾಗಿ ಬರುವ ತೀರ್ಮಾನಗಳನ್ನು ಹೇಳ ಹೋಗದೆ, ಅನುಭವದ ಭೌತಿಕ ವಿವರಗಳನ್ನು ದಾಖಲು ಮಾಡುವುದರಲ್ಲಿ ಕಥಾ ಸಾಹಿತ್ಯದಷ್ಟೇ ಆಸಕ್ತಿಯನ್ನು ತೋರಿಸುತ್ತದೆ. ವಿವರಗಳ ಆಯ್ಕೆ ಮತ್ತು ಮಂಡನೆ ಯನ್ನಷ್ಟೇ ಮಾಡಿ ಹಿಂದೆ ಸರಿಯುವ ಕವಿಯು ಯಾವುದೇ ನಿಲುವುಗಳನ್ನು ತಳೆಯು ಬಾರದು ಎನ್ನಬಹುದು. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ತಟಸ್ಥ ಮೌನವೂ ಒಂದು ನಿಲುವೇ ಆಗುವುದಿಲ್ಲವೆ ? ಹಲವು ಪಾಶ್ಚಾತ್ಯ ಕವಿಗಳಲ್ಲಿ ಇಂತಹ ಮಾದರಿಗಳು ದೊರೆಯಬಹುದಾದರೂ ಕನ್ನಡಕ್ಕಂತೂ ಈ ಬಗೆ ಹೊಚ್ಚಹೊಸತು. ಅಲ್ಲದೇ ನವ್ಯ ಕಾವ್ಯದ ಉತ್ಕರ್ಷದ ದಿನಗಳಲ್ಲಿ ತ್ಯಾಜ್ಯವೆನಿಸಿದ್ದ, ಹುಬ್ಬುಗಂಟು ಬೇರಿಲ್ಲದ ಹಲವು ಭಾವವಲಯಗಳನ್ನು ಇವರು ಮತ್ತೆ ಕವಿತೆಯ ಲೋಕದೊಳಗೆ ತಂದಿದ್ದಾರೆ.

ತಮ್ಮ ಬರವಣಿಗೆಯ ಗಾತ್ರದ ಮೇಲೆ ಹಿಡಿತವಿಟ್ಟುಕೊಂಡಿರುವ ಎಸ್. ಮಂಜುನಾಥ ನಿಲುವಿನಲ್ಲಿ ಹೀಗೆ ನಿರ್ಲಿಪ್ತರಲ್ಲ. ಆದರೆ ಅವರು ವಿವರಗಳ ಪ್ರತೀ ಕಾತ್ಮಕತೆಯನ್ನು ಬಳಸಿಕೊಳ್ಳುತ್ತಾರೆ. ಸಾಮಾಜಿಕ ಸತ್ಯಗಳನ್ನು ಗ್ರಹಿಸಿಯೂ ಕೂಡ, ಅದನ್ನು ಪರಿವರ್ತಿಸುವುದರಲ್ಲಿ ಕಾವ್ಯವು ಅಸಮರ್ಥವೆಂಬ ತಿಳಿವಳಿಕೆ ಇವ ರಿಬ್ಬರ ಕವಿತೆಗೂ ಸಮಾನವಾದ ವಿಷಾದದ ಧ್ವನಿಗೆ ಕಾರಣವಾಗುತ್ತದೆ. ಕಾವ್ಯಕ್ಕೆ ಯಾವುದು ಸಾಧ್ಯವಿಲ್ಲ ಎಂಬುದರ ಈ ಅರಿವು, ಇವರ ಕವಿತೆಯ ಆರೋಗ್ಯವನ್ನು ಕಾಪಾಡಿದೆ.

ಇ) ನವ್ಯ ಮಾರ್ಗದ ಪ್ರಮುಖ ಪರಿಕರಗಳನ್ನು ಬಿಟ್ಟುಕೊಡದೆ, ನಮ್ಮ ವೈಯಕ್ತಿಕ ಅನುಭವದ ಪರಿಧಿಯೊಳಗೆ ಬರುವುದಕ್ಕೆ ಮಾತ್ರ ನಿಷ್ಠರಾಗಿ, ಕಿರಿದಗಲದ ಆದರೂ ಮಹತ್ವಪೂರ್ಣವಾದ ಒಳನೋಟಗಳನ್ನು ಕೊಡುತ್ತಿರುವ ಜಯಂತ ಕಾಯ್ಕಿಣಿ, ಜಯ ಸುದರ್ಶನ, ಲಕ್ಷ್ಮಣರಾವ್ ಮುಂತಾದ ಕೆಲವರದು ಅನಿ ವಾರ್ಯವಾದ ಕಿರುದಾರಿ. ಒಟ್ಟು ಕಾವ್ಯಾಸ್ವಾದ ಮತ್ತು ಕಾವ್ಯವಿಮರ್ಶೆಯ ಪರಿಸರ ದಲ್ಲೇ ಮಧ್ಯಮ ವರ್ಗದ ನಗರಜೀವಿಗಳಲ್ಲಿ ಅನುಭವಲೋಕದ ಬಗ್ಗೆ ಕಂಡುಬರು ತ್ತಿರುವ ಸಂಪೂರ್ಣ ಅನಾಸಕ್ತಿಯ ಫಲವಾಗಿ ಇಂತಹ ಕವಿಗಳಿಗೆ ಸಿಗಬೇಕಾದಷ್ಟು ಮಹತ್ವ ಕೂಡ ದೊರೆಯುತ್ತಿಲ್ಲ. ಇಂತಹ ಅನುಭವದ ವಿವರಗಳು ಕೂಡ ನಮ್ಮ ಕಾಲದ ಬದುಕಿನ ಬಗ್ಗೆ ಬೆಲೆ ಬಾಳುವಂತಹುದನ್ನು ಹೇಳಬಲ್ಲದೆಂಬುದನ್ನು ವಿಸ್ಮಯ ಕಾರಿಯಾಗಿ ಮರೆಯಲಾಗುತ್ತದೆ. ಸರ್ವ–ಕಾಲ–ದೇಶಗಳಿಗೂ ಅನ್ವಯಿಸಬಹುದಾದ ಸತ್ಯಗಳನ್ನು ಕಂಡುಕೊಳ್ಳಲು ಎಲ್ಲ ಬಗೆಯ ಜೀವನ ವಿಧಾನಗಳೂ ಮಾಧ್ಯಮವಾಗ ಬಹುದೆನ್ನುವುದನ್ನು ಕೆ. ಎಸ್. ನರಸಿಂಹಸ್ವಾಮಿ ಮತ್ತು ಗಂಗಾಧರ ಚಿತ್ತಾಲ ಅವರ ಕಾವ್ಯದ ಅಗಾಧ ಯಶಸ್ಸಿನ ನಂತರವೂ ಕಂಡುಕೊಳ್ಳದೇ ಹೋಗಿರುವುದು ಆಶ್ಚರ್ಯಕರ.

ಆದರೆ ತನ್ನ ಕಾಲದ ಒಟ್ಟು ಬದುಕನ್ನು ಗ್ರಹಿಸಲು, ಕವಿಯು ಪರಕಾಯ ಪ್ರವೇಶವನ್ನು ಮಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗುತ್ತದೆ. ವೈಯಕ್ತಿಕ ಅನುಭವ ಮತ್ತು ಸಮುದಾಯದ ಅನುಭವಗಳ ನಡುವಿನ ಪರಸ್ಪರ

ಸಂಬಂಧವನ್ನು ಟಾಲ್‌ಸ್ಟ್ಯಾಯ್ ತನ್ನ ಕಥಾ ಸಾಹಿತ್ಯದಲ್ಲಿ ಅಧ್ಯಯನ ಮಾಡಿದ ಬಗೆಯು ಈ ಗುಂಪಿನ ಕವಿಗಳ ಮಹತ್ವಾಕಾಂಕ್ಷೆಯನ್ನು ಪೋಷಿಸಬೇಕು. ಆದರೆ ತನ್ನ ವರ್ಗದ ಸೀಮಿತಗಳಾಚೆಯ ಸತ್ಯಗಳನ್ನು ಗ್ರಹಿಸುವುದೆಂದರೆ ಕವಿಯು ಬದುಕುವ ರೀತಿಯಲ್ಲೇ ಆಗುವ ಸಮಗ್ರ ಪರಿವರ್ತನೆಯೇ ಆಗಿರುತ್ತದೆ. ಸಾಮಾನ್ಯವಾಗಿ ಮಧ್ಯಮವರ್ಗದವರ ಚಲನೆಯು ತಮಗಿಂತ ಮೇಲಿನ ಹಂತಗಳ ಕಡೆಗೇ ಇರುವುದರಿಂದ ಈ ಕವಿಗಳು ಬದುಕಿನೊಂದಿಗೇ Risk ತೆಗೆದುಕೊಂಡು ನಿಜಕ್ಕೂ Major ಆದ ಕಾವ್ಯವನ್ನು ಸೃಷ್ಟಿಸುವ ಸಂಭವ ಕಡಿಮೆ.

ಈ) ಸು. ರಂ. ಎಕ್ಕುಂಡಿಯವರು ಈಚೆಗೆ ಪ್ರಕಟಿಸಿರುವ ಕೆಲವು ಕವಿತೆಗಳು ಮತ್ತು ಅಷ್ಟೇ ಮುಖ್ಯವಾಗಿ ಚೆನ್ನವೀರಕಣವಿಯವರ ಹಲವು ಕವಿತೆಗಳು ಇನ್ನೊಂದು ಹೊಸದಾರಿಯನ್ನು ತೋರಿಸುತ್ತವೆ ಸಮಾಜಪರತೆ, ಮಾನವತಾವಾದ ಮತ್ತು ಭಾವಗೀತಾತ್ಮಕತೆಗಳನ್ನು ಒಟ್ಟಾಗಿ ಸೇರಿಸುವುದು ಇಂತಹ ಕವಿತೆಗಳ ಮಾರ್ಗ. ಇಲ್ಲಿ ಹೇಳುವ ಸಂಗತಿ ಮತ್ತು ತಳೆಯುವ ನಿಲುವುಗಳು ಸಾಕಷ್ಟು ಸ್ಪಷ್ಟವಾಗಿಯೇ ಇರುವುದರಿಂದ, ಸನ್ನಿವೇಶದ ಸಂಕೀರ್ಣತೆಗಾಗಲೀ, ಸಂವಹನದ ಕ್ಲಿಷ್ಟತೆಗಾಗಲಿ ಇಲ್ಲ ಅವಕಾಶವೇ ಇಲ್ಲ. ಎಕ್ಕುಂಡಿಯವರ ಕಾವ್ಯದ, ಮೇಲುನೋಟಕ್ಕೆ ಪರಸ್ಪರ ವಿರೋಧವೆಂದು ತೋರುವ ಎಳೆಗಳನ್ನು ಮಾನವೀಯವಾದ ದೃಷ್ಟಿಕೋನದ ಹಿನ್ನೆಲೆಯಲ್ಲಿ ಮಾತ್ರ ಒಗ್ಗೂಡಿಸಲು ಸಾಧ್ಯ. ಗಂಗಾಧರ ಚಿತ್ತಾಲರ ಹಾಗೇ ಈ ಕವಿಗಳೂ ಕೂಡ ವಾಸ್ತವದ ದಾರುಣತೆಯನ್ನು ಅರಿತೂ ಕೂಡ ಆದರ್ಶವಾದದ ಸೆಲೆಗಳನ್ನು ಸಂಪೂರ್ಣವಾಗಿ ಜೀವಂತವಾಗಿಟ್ಟುಕೊಂಡವರು. ಮನುಷ್ಯನ ಪರಿಮಿತಿಗಳ ಅರಿವು ಇವರಿಗೆ ಅವನ ಬಗ್ಗೆ ಕನಿಕರವನ್ನೇ ಮೂಡಿಸುವುದರಿಂದ ಇವರಲ್ಲಿ ವಿಡಂಬನೆಯು ಇಂದಿಗೂ dominant mode ಆಗುವುದಿಲ್ಲ. ಆದರೆ ಕೇವಲ ಮಾನವತಾವಾದವು, ಸನ್ನಿವೇಶದೊಳಗಿನ ವೈರುಧ್ಯಗಳನ್ನು ಗುರುತಿಸದೆ ಹೋಗಿ, ಕ್ರೂರವಾಗಬೇಕಾದುದರ ಬಗ್ಗೆ ಕೂಡ ಉದಾರವಾದೀ ನಿಲುವನ್ನೇ ತಳೆಯುತ್ತದೆ. ಈ ನಿಲುವು ಇಂತಹ ಕವಿತೆಯ ಪರಿಮಿತಿಗೂ ಕಾರಣವಾಗುತ್ತದೆ.

ಉ) ಅನುಭವಗಳ ಮತ್ತು ಭಾಷೆಯ ಕಾವ್ಯಾತ್ಮಕತೆಯ ಹಂಗನ್ನು ತೊರೆದು ಕೇವಲ ತಾತ್ವಿಕವಾದ ಸೂತ್ರಗಳನ್ನು ಮುಂಡಿಸುವ ಮತ್ತೊಂದು ಮಾದರಿಯೂ ಕನ್ನಡದ ಇತ್ತೀಚಿನ ಬೆಳವಣಿಗೆಗಳಲ್ಲಿ ಒಂದು. ದ. ರಾ. ಬೇಂದ್ರೆಯವರ 'ಬಾಲಬೋಧೆ' ವಿ. ಜಿ. ಭಟ್ಟರ ಧ್ಯಾನಪೀಠ ಮುಂತಾದ ಪುಸ್ತಕಗಳು ನನ್ನ ಮನಸ್ಸಿನಲ್ಲಿವೆ. ಇಂತಹ ಕವಿತೆಗಳ ಹಿಂದೆ ಅನುಭಾವ ಇರಬಹುದು ಅಥವಾ ಅನುಭವಗಳ ಚಿಂತನೆ ಇರಬಹುದು. ಏನೇ ಆದರೂ ಕನ್ನಡದಲ್ಲಿ ಇಂತಹ ಬರವಣಿಗೆಗೆ ತನ್ನದೇ ಆದ ಒಂದು ಪರಂಪರೆಯಿರುವುದನ್ನು ಮರೆಯಬಾರದು. ಇಂತಹ ಪ್ರಯತ್ನಗಳು ಕವಿತೆಯ ಗೆರೆಯ ಆಚೆಈಚೆ ಚಲಿಸುತ್ತಿರುವವೆನ್ನುವ ಮಾತು ನಿಜ. ಇಂದಿನ ಕಾವ್ಯಾಸಕ್ತರ ತತ್‌ಕ್ಷಣದ ಕಾಳಜಿಗಳನ್ನು ತಲುಪದ ಈ ತಾತ್ವಿಕ ನಿರೂಪಣೆಯು ನಿರ್ಲಕ್ಷ್ಯಕ್ಕೆ ಗುರಿಯಾಗುವುದು ಅನಿವಾರ್ಯ.

ಊ) ಇಂದಿನ ಸನ್ನಿವೇಶದಲ್ಲಂತೂ ಅಡಿಗರದು ಒಂಟಿದನಿ. ಇಂದಿನ ಪ್ರಜಾಪ್ರಭುತ್ವ ಮತ್ತು ವೈಯಕ್ತಿಕ ಶ್ರೀಮಂತಿಕೆಗಳು ಪರಸ್ಪರ ವಿರೋಧವೆನ್ನುವ ಅವರ ಮಾತು ಮೇಲುನೋಟಕ್ಕೆ ಸರಿಯೆನಿಸಬಹುದಾದರೂ, ಅನಂತ ಅವಕಾಶಗಳನ್ನು ಕೊಡುವುದರಿಂದ ಮಾತ್ರವೇ ಸರ್ವರಲ್ಲೂ ಇರಬಹುದಾದ ಸಾಧ್ಯತೆಗಳು ನಿಜವಾಗಬಹುದೆಂಬುದನ್ನು ಅವರು ಗಮನಿಸುವುದಿಲ್ಲ. ಸ್ಥಿತ್ಯಂತರದ ಸನ್ನಿವೇಶವನ್ನೇ ಶಾಶ್ವತವೆಂದೋ, ಅಧಃಪತನವೆಂದೋ, ಬಗೆದಿರುವುದು ಅವರ ಆಕ್ರೋಶಕ್ಕೆ ಮೂಲ ಕಾರಣ. ಕವಿತೆಯು ಒಡಲಿನೊಳಗೇ ಅರ್ಥವನ್ನು ಬೆಳೆಸುತ್ತಾ ಹೋಗುವ ಅವರ ಮುಖ್ಯಗುಣಕ್ಕೆ ಅವರು ಎರವಾಗಿ, ಪೂರ್ವನಿರ್ಧಾರಿತ ಅನಿಸಿಕೆಗಳ ಲಯಬದ್ಧ ಮಂಡನೆಯಲ್ಲಿ ತೊಡಗಿರುವರೆನ್ನಿಸುತ್ತದೆ. ಯಾವುದೇ ಮಹಾ ಕವಿತೆಗೂ ತನ್ನ ಕಾವ್ಯ ಸೃಷ್ಟಿಯ ಕೊನೆ ದಿನಗಳಲ್ಲಿ ಇಂತಹ ಸ್ಥಿತಿಗೆ ತಲುಪುವುದು ಸಹಜವೆಂದು ಒಪ್ಪಿಕೊಂಡಾಗ, ಅಡಿಗರು ನಮ್ಮ ಕಾಲದ ಅತಿ ಮುಖ್ಯ ಕವಿಯೆಂಬ ಸಂಗತಿಯು ಪ್ರಶ್ನಾತೀತವಾಗಿಯೇ ಉಳಿಯುತ್ತದೆ.

ಋ) ಮಧ್ಯಮವರ್ಗದ ಕವಿಗಳು ಕಂಡುಕೊಂಡಿರುವ ಮತ್ತು ಅನೇಕರನ್ನು ಆಕರ್ಷಿಸಿರುವ ಮತ್ತೊಂದು ಲಘು ಸಾಧ್ಯತೆಯೆಂದರೆ ಹನಿಗವನ-ಮಿನಿಗವನಗಳ ನಿರರ್ಥಕಜಗತ್ತು. ಸಮಸ್ತವನ್ನು ಸರಳವಾಗಿ, pre-digested form ನಲ್ಲಿ ಓದುಗರಿಗೆ ಕೊಡಬಯಸುವ ಪತ್ರಿಕೆಗಳು ಇಂತಹ ಕವಿತಾಭಾಸಗಳಿಗೆ ಬೇಡಿಕೆ ಮೂಡಿಸಿವೆ. ಬದುಕಿನ ಉಲ್ಲಾಸದ, ವಿಷಾದದ, ಆಕ್ರೋಶದ ಕ್ಷಣಗಳನ್ನು, ಹಾಗೂ ಹೀಗೂ ಕತ್ತರಿಸಿದ ವಾಕ್ಯಗಳಲ್ಲಿ, ಶಬ್ದಚಿತ್ರಗಳಲ್ಲಿ ಬರೆದಿಟ್ಟ ಮಾತ್ರಕ್ಕೆ ಕಾವ್ಯವಾಗುವುದೆನ್ನುವ ತಿಳಿವಳಿಕೆಯು ಬಾಲಿಶವೇ ಸರಿ. ಈ ಮಾತಿಗೆ ಕೊಂಚಮಟ್ಟಿಗೆ ಅಪವಾದವೆನ್ನಬಹುದಾದ 'ನೀಲುಕವಿತೆ'ಗಳು ಸಮುದಾಯದ ಬಹುಪಾಲು ಜನರ ಗ್ರಹಿಕೆಗೆ ಬಾರದೇ ಉಳಿಯಬಹುದಾದ ವಿಚಾರಗಳ ಕಡೆಗೆ ಓದುಗರ ಗಮನವನ್ನು ತಾತ್ಕಾಲಿಕವಾಗಿಯಾದರೂ ಸೆಳೆಯುವ ಮೂಲಕ ಅರ್ಥಪೂರ್ಣವಾಗುತ್ತವೆ.

ಹೀಗೆ ಸಾಂಸ್ಕೃತಿಕ ಒತ್ತಡಗಳು ತಲ್ಲಣಗಳಿಗೆ ಆ ವೇಳೆಗಾಗಲೇ ಬರವಣಿಗೆಗೆ ತೊಡಗಿದ್ದ ಹಲವು ಕವಿಗಳು ಪ್ರತಿಕ್ರಿಯಿಸಿದ ರೀತಿಯನ್ನು ಇದುವರೆಗೆ ನೋಡಿಯಾಯಿತು. ಇನ್ನು ಮುಂದೆ ಈ ದಶಕದ, ನಿಜವಾಗಿಯೂ ಮಹತ್ವಪೂರ್ಣ ಒಲವುಗಳೆಂದು ನಾನು ತಿಳಿದಿರುವ ಒಂದೆರಡು ಸಂಗತಿಗಳ ಕಡೆಗೆ ನಿಮ್ಮ ಗಮನ ಸೆಳೆಯ ಬಯಸುತ್ತೇನೆ.

ಭಾಗ ೨

೧. ಇಂದು ಬರೆಯುತ್ತಿರುವ ನನ್ನ ಪೀಳಿಗೆಯ ಅತ್ಯಂತ ಮಹತ್ವದ ಕವಿಯೆಂದರೆ ಶ್ರೀ ಎಚ್. ಎಸ್. ಶಿವಪ್ರಕಾಶ್ ಅವರು. ನಾನು ಈ ತೀರ್ಮಾನಕ್ಕೆ ಬರಲು ಹಲವು ಕಾರಣಗಳಿವೆ. ಈಗಾಗಲೇ ಹೇಳಿರುವಂತೆ ಚರಿತ್ರೆ–ಸಮಕಾಲೀನತೆ–ಕಾವ್ಯಶಕ್ತಿ ಮತ್ತು ಕನ್ನಡದ ಕಾವ್ಯಪರಂಪರೆಯ ದಟ್ಟವಾದ ತಿಳುವಳಿಕೆಗಳು ಒಂದು ಕಡೆ ಮಿಳಿತವಾಗಿರುವುದು ಈ ಮಹತ್ತಿಗೆ ಮುಖ್ಯ ಕಾರಣ. ಇತರ ಅನೇಕರ ಹಾಗೇ

ತನ್ನದೂ ಆದ ಮಧ್ಯಮವರ್ಗದ ಸೀಮಿತಗಳನ್ನು ದಾಟಲು, ತನ್ನ ಜೀವನ ಕ್ರಮದಲ್ಲೇ ಲಂಘನ ನಡೆಸುವ ಈ ಕವಿ, ಹೆಗಲಿಗೆ ಜೋಳಿಗೆ ಏರಿಸಿಕೊಂಡು, "ಊರಿನ ಕಿಚ್ಚು ಹೊತ್ತಿದ ನಾಡುಗಳಲ್ಲಿ, ನಾಡಿನ ಕಿಚ್ಚು ಹೊತ್ತ ಕಾಡುಗಳಲ್ಲಿ" ಅವಧೂತನ ಹಾಗೆ ತಿರುಗುತ್ತಾರೆ. ಅಲ್ಲಮನಿಂದ ಹಿಡಿದು ಶಿಶುನಾಳ ಶರೀಫರವರೆಗೆ ಅನುಭಾವದ ಗುಂಗು ಹಿಡಿದವರನ್ನು ಹಿಂಬಾಲಿಸುತ್ತಾರೆ. ಎಲ್ಲದರ ಗುರಿ ಒಂದೇ. ವರ್ತಮಾನವನ್ನು ಅರ್ಥಮಾಡಿಕೊಳ್ಳಲು, ಮೂಡಿಸಲು ಏನೆಲ್ಲವನ್ನು ದುಡಿಸಿಕೊಳ್ಳುವುದು. ಇಂತಹ ಕವಿಗೆ, ಕವಿತೆಗೆ ಬರೆಯುವುದು ಭಾಷೆಯೊಡನೆ ನಡೆಸುವ ಆಟವಾಗಿ ಉಳಿಯದೆ, ಬದುಕಿನ ಅರ್ಥವನ್ನು ಕಾವ್ಯವೆಂಬ ಅನನ್ಯಮಾಧ್ಯಮದ ಮೂಲಕ ಶೋಧಿಸುವ ಪ್ರಕ್ರಿಯೆಯಾಗುತ್ತದೆ. ಕವಿಯ ವಿಶಿಷ್ಟ ಗುಣಗಳನ್ನು ಶ್ರೀ ಕೆ. ವಿ. ನಾರಾಯಣ ಅವರು ಬಹಳ ಸಮರ್ಥವಾಗಿ ಸಂಗ್ರಹಿಸಿದ್ದಾರೆ:

"ಈ ಕವಿಗೆ ಬರೆಯುವುದು ಬಿಡುಹೊತ್ತಿನ ಕೆಲಸವಲ್ಲ, ಹಾಗೂ ಹೊರ ತುರ್ತುಗಳಿಗೆ ಮಣಿದು ಬರೆಯುವವರೂ ಅಲ್ಲ...ಈಗ ನುಡಿವ ಕವಿಯ ದನಿಯು ಕೇಳುವವರಿಗೆ ಕವಿಯದೇ ಎನಿಸಿದರೂ ಈ ಕವಿ ಹಾಗೇ ತಿಳಿದಿಲ್ಲ. ಈ ಇಲ್ಲಿ ನೆಲಕೆ ಯೊಡೆದಂತೆ ತೋರುವ ಸಸಿಯ ಬೇರುಗಳು ಎಲ್ಲೋ ನೆಲದೊಳಗೆ ಇವೆಯಾಗಿ ಈ ಕವಿ ತನ್ನ ಕವಿತೆಗಳಲ್ಲಿ ಎಲ್ಲ ಕಾಲದೇಶಗಳನ್ನು ತನಗೆ ತನ್ನ ಓದುಗರಿಗೆ ತಿಳಿದಿರುವ ನುಡಿಗಟ್ಟುಗಳಲ್ಲಿ, ಲಯಗಳಲ್ಲಿ ನುಡಿಯಬಯಸುವರು.

"ಕವಿತೆ ಮಾತುಗಾರಿಕೆಗಳ ನಡುವಣ ಗೆರೆ ತೆಳುವಾಗುತ್ತಾ ನಡೆದಿರುವಾಗ ಈ ಕವಿ, ಕನ್ನಡ ಕವಿತೆಯ ಸಾಟಿಯಿಲ್ಲದ ಒಳದನಿಗಳನ್ನು ಕೇಳಿಸಿಕೊಂಡು, ಹಿಡಿದಿಟ್ಟು ಬಲ್ಲವರಿಗೆ ಕೇಳಿಸುವ ಹಾದಿಯಲ್ಲಿ ನಡೆವಿದ್ದಾರೆ."

ಮೇಲಿನ ಮಾತುಗಳಿಗೆ ವಿವರಣೆಯು ಅನಗತ್ಯ.

೨. ಬಂಡಾಯದ ಹಿನ್ನೆಲೆಯಲ್ಲೇ ಕಾವ್ಯರಚನೆಗೆ ತೊಡಗಿದರೂ ಕೂಡ, ಬಹುಬೇಗ ಕಾವ್ಯಮಾಧ್ಯಮದ ಅನನ್ಯತೆಗಳನ್ನು ಕಂಡುಕೊಂಡು, ಗಂಭೀರವಾದ ಸೃಜನಶೀಲಕ್ರಿಯೆದಲ್ಲಿ ತೊಡಗಿರುವ, ಗ್ರಾಮೀಣ ಹಿನ್ನೆಲೆಯ, ಶೋಷಿತವರ್ಗದ ಕವಿಗಳ ಗುಂಪೊಂದನ್ನು ನಾನು ನಾಳಿನ ಕನ್ನಡ ಕಾವ್ಯದ ನಿರ್ಮಾಪಕರೆಂದು ಗ್ರಹಿಸುತ್ತೇನೆ.

ಇದರಲ್ಲಿ ಪ್ರತಿಯೊಬ್ಬರೂ ಕೂಡ ಬೆರಳೆಣಿಕೆಯಷ್ಟು ಕವಿತೆಗಳನ್ನು ಮಾತ್ರ ಪ್ರಕಟಿಸಿದ್ದಾರೆ. ಆದರೆ ಎಲ್ಲರಿಗೂ ದಟ್ಟವಾದ, ವಿಭಿನ್ನವಾದ ಅನುಭವ ಪ್ರಪಂಚವಿದೆ. ಅದು ಹೇಗೋ ತಿಳಿಯದು, ಇವರು ಸಂಕೀರ್ಣವಾದರೂ, ಭಾವಗೀತಾತ್ಮಕವಾದ, ನೋವು ತುಂಬಿದರೂ ಬೀರುದನಿಯ ಘೋಷಣೆಯಿಲ್ಲದ ನಿರೂಪಣಾ ವಿಧಾನಗಳನ್ನು ರೂಪಿಸಿಕೊಂಡಿದ್ದಾರೆ. ನವ್ಯಕಾವ್ಯದಿಂದ ಕಲಿಯಬೇಕಾದ್ದನ್ನು ಕಲಿತು ಅದರ ಹೊರಗೆ ಕಲಿಯಬಹುದಾದ್ದನ್ನು ಹೊರಗೇ ಕಲಿತಿದ್ದಾರೆ. ತಮಗೆ ನಿತ್ಯಪರಿಚಿತವಾದ ಜಾನಪದ ಪ್ರಪಂಚದಿಂದ ಹಲವು ತಂತ್ರಗಳನ್ನು ರೂಢಿಸಿಕೊಂಡಿದ್ದಾರೆ. ಅಬ್ದುಲ್ ರಶೀದ್, ಎಲ್. ಸಿ. ನಾಗರಾಜ, ಜಿ. ಎನ್. ಮೋಹನ್, ಟಿ. ಎನ್

ಗುರುದತ್, ಬಸವರಾಜ ವಕ್ಕುಂದ ಮತ್ತು ಇವರೆಲ್ಲರಿಗಿಂತ ತುಸು ಹಿರಿಯರಾದ ಗೋವಿಂದಯ್ಯ ಈ ಗುಂಪಿಗೆ ಸೇರುತ್ತಾರೆ. ಇವರ ಕವಿತೆಯು ಯೌವನದಲ್ಲಿ ಹುಚ್ಚು ಹೊಳೆಯಾಗಿ ಹರಿದು ನಂತರ ಕ್ಷೀಣಿಸದೆ ಹೋದರೆ, ಇವರು ಮುಂದಿನ ದಶಕದ ಪ್ರಮುಖ ಕವಿಗಳಾಗುವರೆಂದು ನನ್ನ ಅನಿಸಿಕೆ.

೩) ಈ ದಶಕದ ಮತ್ತೊಂದು ಮುಖ್ಯ ಲಕ್ಷಣನೆಂದರೆ, ಶೋಷಿತರಲ್ಲಿಯೂ ಶೋಷಿತರಾದ ಮಹಿಳೆಯರು ಕಾವ್ಯರಚನೆಯ ಕೆಲಸದಲ್ಲಿ ಉತ್ಸುಕತೆಯಿಂದ ತೊಡಗಿರುವುದು. ಕಥಾಸಾಹಿತ್ಯದ ಪ್ರಬಲ ಆಕರ್ಷಣೆಗೆ ಬಲಿಯಾಗದಿರುವ ಎನ್. ವಿ. ಭಾಗ್ಯಲಕ್ಷ್ಮಿ, ಡಿ. ವಿಜಯ, ಪ್ರತಿಭಾನಂದಕುಮಾರ್, ಹೇಮಾ ಮುಂತಾದ ಕವಿಯತ್ರಿಯರು ಮಹಿಳಾವರ್ಗದ ವಿಶಿಷ್ಟ ನೋವುಗಳನ್ನು ಕಾವ್ಯಾತ್ಮಕವಾಗಿ ಪ್ರತಿನಿಧಿಸಿರುವುದರ ಜೊತೆಗೆ, ಯಾವ ರಿಯಾಯಿತಿಯನ್ನೂ ಬಯಸದೆ, ಅನನ್ಯವಾಗುವ ಕೃತಿ ರಚನೆ ಮಾಡಿದ್ದಾರೆ. ಇವರ ಬರುವಣಿಗೆಯು ಮಾದರಿಯಾಗಿ ಹಲವು ಮಹಿಳೆಯರು ಬರೆದಾಗ ಕನ್ನಡ ಕಾವ್ಯಕ್ಕೆ ಹೊಸದೊಂದು ಆಯಾಮ ಪ್ರಾಪ್ತವಾಗಬಹುದು.

ಇದುವರೆಗೆ ನಾನು ಮಂಡಿಸಿರುವ ಕೆಲವು ವಿಚಾರಗಳು, ಸಮಕಾಲೀನ ಕನ್ನಡ ಕಾವ್ಯಸನ್ನಿವೇಶದಲ್ಲಿ ಸಕ್ರಿಯವಾಗಿರುವ ಹಲವು ವಿಭಿನ್ನ ಮಾದರಿಗಳನ್ನು ಗುರುತಿಸುತ್ತವೆಂದು ತಿಳಿದಿದ್ದೇನೆ. ಇಂದಿನ ಪ್ರಮುಖ ಸಂಘರ್ಷವಿರುವುದು ಕಾವ್ಯವನ್ನು, ಪ್ರಚಾರಸಾಧನವಾಗಿ ಪರಿವರ್ತಿಸಿಕೊಂಡು, ಅಸಾಹಿತ್ಯಕವಾದ ಉದ್ದೇಶಗಳಿಗಾಗಿ ಅದನ್ನು ದುಡಿಸಿಕೊಳ್ಳುವುದು ಮತ್ತು ಕಾವ್ಯಮಾಧ್ಯಮದ ಅನನ್ಯತೆಯನ್ನು ಗುರುತಿಸಿಕೊಂಡು ಅದರಿಂದ ಮಾತ್ರವೇ ಸಾಧ್ಯವಾಗುವ ರೀತಿಯಲ್ಲಿ ಬದುಕನ್ನು ಅರ್ಥ ಮಾಡಿಕೊಳ್ಳುವುದು. ಎರಡನೆಯ ಸಾಧ್ಯತೆಯೇ ಮೇಲುಗೈ ಪಡೆಯಲೆಂಬ ಹಂಬಲದೊಂದಿಗೆ ಈ ಲೇಖನವನ್ನು ಮುಗಿಸುತ್ತೇನೆ.

ಕನ್ನಡ ಪ್ರವಾಸ ಸಾಹಿತ್ಯ

ನರಹಳ್ಳಿ ಬಾಲಸುಬ್ರಹ್ಮಣ್ಯ

ಯಾವುದೇ ಭಾಷೆಯಲ್ಲಾದರೂ ಪ್ರವಾಸ ಸಾಹಿತ್ಯ ಮಾತುಗಳ ರೂಪದಲ್ಲಿ ಸಮೃದ್ಧವಾಗಿರುತ್ತದೆಯೇ ಹೊರತು, ಬರವಣಿಗೆಯಲ್ಲಿ ಕಡಿಮೆಯೇ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ಬಂದವರು ತಮ್ಮ ಅನುಭವಗಳನ್ನು ಹತ್ತಿರದವರ ಬಳಿ ಹಂಚಿಕೊಳ್ಳುವುದು ತೀರ ಸಹಜ. ತೋಂಡೀ ಸಂಪ್ರದಾಯದಲ್ಲಿ ಇಂಥ ಪ್ರವಾಸ ಕಥನಗಳು ಅನೇಕ ಬಗೆಯಾಗಿದ್ದು, ವೈವಿಧ್ಯಮಯವಾಗಿರುತ್ತವೆ. ಇತ್ತೀಚಿಗೆ ಅಮೇರಿಕಾ ಪ್ರವಾಸ ಮುಗಿಸಿ ಬಂದ ನನ್ನ ಗೆಳೆಯನೊಬ್ಬ ನಮ್ಮಲ್ಲಿ ಕೆಲವರೊಡನೆ ಹಂಚಿಕೊಂಡ ಅನುಭವಗಳು, ಆತ ಅದನ್ನು ನಿರೂಪಿಸಿದ ಧಾಟಿ-ನಾನು ಓದಿದ ಅನೇಕ ಪ್ರವಾಸ ಕಥನಗಳಿಗಿಂತ ಉತ್ತಮವಾಗಿತ್ತು. ಆದರೆ ಅಂಥವು ಬರವಣಿಗೆಯ ರೂಪ ತಾಳುವುದಿಲ್ಲ.

ಪ್ರವಾಸ ಸಾಹಿತ್ಯ ಒಂದು ಸೃಜನಶೀಲ ರೂಪವಾಗಿ ಕನ್ನಡದಲ್ಲಿ ಕಾಣಿಸಿಕೊಂಡದ್ದು ಈ ಶತಮಾನದಲ್ಲಿ. ಆದರೆ ಪ್ರವಾಸ ಕಥನದ ಹೊಳಹುಗಳು ನಮ್ಮ ಪ್ರಾಚೀನ ಸಾಹಿತ್ಯದಲ್ಲೇ ಇದ್ದುವೆಂಬುದನ್ನು ನಾವು ಮರೆಯುವಂತಿಲ್ಲ. ಸಾವಿರ ವರ್ಷಗಳ ಹಿಂದಿನ ಮಹಾಕವಿ ಪಂಪನ ವಿಕ್ರಮಾರ್ಜುನವಿಜಯದ ಒಂದು ಪ್ರಸಂಗವನ್ನೇ ನಿದರ್ಶನವಾಗಿ ಉಲ್ಲೇಖಿಸಬಹುದು. ವಿಕ್ರಮಾರ್ಜುನವಿಜಯದ ಅತ್ಯಂತ ಜನಪ್ರಿಯವಾದ ಈ ಕಾವ್ಯಭಾಗ ‘ಬನವಾಸಿಯ ವರ್ಣನೆ’ಯನ್ನು ಕುರಿತದ್ದು. ಅರ್ಜುನ ಬನವಾಸಿ ನಾಡಿಗೆ ಒಬ್ಬ ಯಾತ್ರಿಯಾಗಿ ಬಂದಾಗ ಅವನು ಕಂಡ ನೋಟಗಳ ವರ್ಣನೆ ಈ ಭಾಗದಲ್ಲಿದೆ. ಬನವಾಸಿ ನಾಡಿನ ಪ್ರಾಕೃತಿಕ ಚೆಲುವನ್ನು, ಜನಜೀವನದ ಸೊಬಗನ್ನು ವಿವರವಾಗಿ ಚಿತ್ರಿಸುವ ಈ ಭಾಗ ಪ್ರವಾಸ ಕಥನದ ಒಂದು ಮಾದರಿಯೇ ಆಗಿದೆ.

೧೮೮೦ರಲ್ಲಿ ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿಯವರು ಬರೆದ ‘ದಕ್ಷಿಣ ಭಾರತ ಯಾತ್ರೆ’ ಅಧಿಕೃತವಾಗಿ ಕನ್ನಡದ ಮೊದಲ ಪ್ರವಾಸ ಕಥನ ಕೃತಿ ಎನ್ನಬಹುದು. ಆದರೆ ಪ್ರವಾಸ ಸಾಹಿತ್ಯವನ್ನು ಅದರ ಉತ್ಕೃಷ್ಟ ಚೆಲುವಿನಲ್ಲಿ ಸಾಹಿತ್ಯರೂಪಕ್ಕೆ ತಂದವರು ವಿ. ಸೀತಾರಾಮಯ್ಯನವರು. ನವೋದಯದ ಹಿರಿಯ ಲೇಖಕರಲ್ಲೊಬ್ಬರಾದ ವಿ.ಸೀ. ಅವರ ‘ಪಂಪಾಯಾತ್ರೆ’(೧೯೨೫) ಈ ಪ್ರಕಾರದಒಂದು ಚಿಕ್ಕ ಚೊಕ್ಕ ಕೃತಿ. ಪಂಪಾಯಾತ್ರೆ’ಯಲ್ಲಿ ಲೇಖಕರು ತಮ್ಮ ಕೆಲವರು ಗೆಳೆಯರೊಂದಿಗೆ ಹಾಳುಹಂಪೆಯ ಸಂದರ್ಶನಕ್ಕಾಗಿ ಹೋಗಿ ಅಲ್ಲಿ ಪಡೆದ ಅನುಭವದ ಹೃದಯಂಗಮ ಚಿತ್ರಣವಿದೆ. ‘ಪಂಪಾಯಾತ್ರೆ’ಯಲ್ಲಿ ಹಂಪೆಯ ಗತವೈಭವವನ್ನು ನೆನಪಿಸಿಕೊಳ್ಳುತ್ತ ಸಧ್ಯದ ಅದರ ದಾರುಣಸ್ಥಿತಿಯನ್ನು ಮತ್ತಷ್ಟು ತೀವ್ರಗೊಳಿಸಿ ಕಾವ್ಯಾತ್ಮಕ ಹದದಲ್ಲಿ ಬರವಣಿಗೆ

ಗಿಳಿಸಲಾಗಿದೆ. ಜೊತೆಗೆ ಯಾತ್ರೆಗೆ ಹೋದ ಪ್ರವಾಸಿಗರ ಜೀವಂತ ಚಿತ್ರಗಳು ಇಲ್ಲಿವೆ. ಈ ಚಿತ್ರಗಳು ಛಾಸರನ ಕ್ಯಾಂಟರ್‌ಬರಿ ಟೇಲ್ಸ್‌ನ ಪಾತ್ರ ನಿರ್ಮಿತಿಯನ್ನು ನೆನಪಿಸು ವಷ್ಟು ದಟ್ಟವಾಗಿವೆ. ನವುರಾದ, ರುಚಿಯಾದ ಹಾಸ್ಯವೂ ಹದವಾಗಿ ಬೆರೆತು ಬರ ವಣಿಗೆಯ ವಿಶಿಷ್ಟ ಪಾಕವೊಂದು ಇಲ್ಲಿ ಸಿದ್ಧವಾಗಿದೆ.

ವಿ. ಸೀ. ಅವರ ಬಳಿಕ ನವೋದಯ ಸಂದರ್ಭದ ಅನೇಕ ಪ್ರಮುಖ ಲೇಖಕರು ತಮ್ಮದೇ ಆದ ವಿಶಿಷ್ಟ ಧಾಟಿಯಲ್ಲಿ ಅನೇಕ ಸೊಗಸಾದ ಪ್ರವಾಸ ಕೃತಿಗಳನ್ನು ರಚಿಸಿ ದ್ದಾರೆ. ಶಿವರಾಮ ಕಾರಂತರ 'ಅಬೂವಿನಿಂದ ಬರಾಮಕ್ಕೆ' 'ಅಪೂರ್ವ ಪಶ್ಚಿಮ' ಮತ್ತು 'ಪಾತಾಳಕ್ಕೆ ಪಯಣ' ಮೊದಲಾದವು, ಇಲ್ಲಿ ಮೊದಲಿಗೆ ನೆನೆಯಬೇಕಾದ ಕೃತಿಗಳು. ಕಾರಂತರ ಪ್ರವಾಸ ಕೃತಿಗಳಲ್ಲಿ ಪ್ರವಾಸವು ರಂಜನೆಯ ಒಂದು ಹವ್ಯಾಸ ವಾಗದೆ ಬೇರೆ ಬೇರೆ ದೇಶ ಸಂಸ್ಕೃತಿಗಳ ಸೂಕ್ಷ್ಮ ಅಧ್ಯಯನದ ಸ್ವರೂಪವನ್ನು ಪಡೆಯುತ್ತದೆ.

ವಿ.ಕೆ. ಗೋಕಾಕ್ ಅವರು ಬರೆದಿರುವ 'ಸಮುದ್ರದಾಚೆಯಿಂದ' 'ಸಮುದ್ರ ದೀಚೆಯಿಂದ' ಮತ್ತು 'ಇಂದಲ್ಲ ನಾಳೆ'—ಮೊದಲಾದವು ಪ್ರವಾಸ ಸಾಹಿತ್ಯಕ್ಕೆ ತಮ್ಮ ವಿಶೇಷ ಸ್ವರೂಪದಿಂದ ಹೊಸತನ ನೀಡಿದ ಕೃತಿಗಳು. ಗೋಕಾಕರ ಬರವಣಿಗೆ ಯಲ್ಲಿ ಪ್ರವಾಸದ ವಿವರಗಳು ಸಾಹಿತ್ಯಕ ನೆಲೆಯಲ್ಲಿ ಶೋಧನೆಗೆ ಒಳಪಡುವುದು ಗಮ ನಿಸಬೇಕಾದ ಅಂಶ. ಪದ್ಯರೂಪದಲ್ಲಿ, ಚಂಪೂರೂಪದಲ್ಲಿ ಅವರು ಪ್ರವಾಸ ಕಥನವನ್ನು ನಿರ್ವಹಿಸುವಾಗ ಹೊಸ ಬಗೆಯ ಸಾಹಿತ್ಯರೂಪಗಳ ಅನ್ವೇಷಣೆಯೊಂದಿಗೆ, ಅನುಭವ ಶೋಧನೆಯ ಪ್ರಕ್ರಿಯೆಯನ್ನು ಸಂಯೋಜಿಸುವುದನ್ನು ನಾವು ಕಾಣಬಹುದು.

ಪ್ರವಾಸ ಸಾಹಿತ್ಯಕ್ಕೆ ಸೊಗಸಾದ ಹಾಸ್ಯದ ಲೇಪವನ್ನು ನೀಡಿದ ಲೇಖಕರೆಂದರೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಜಿ. ಜಿ. ಎಲ್. ಸ್ವಾಮಿಯವರು. ಇವರ ಬರವಣಿಗೆಯಲ್ಲಿ ಹೊರದೇಶದಲ್ಲಿ ತಾವು ಪಡೆದ ಅನುಭವ, ಆ ದೇಶದ ವೈಭ ವದ ಪ್ರಖರತೆಯಲ್ಲಿ ಆರಾಧನೆಯ ಸ್ವರೂಪಕ್ಕೆ ಇಳಿಯದಂತೆ ಭಾರತೀಯ ನೆಲೆಯಲ್ಲಿ ಅವುಗಳನ್ನು ದಕ್ಕಿಸಿಕೊಳ್ಳುವುದಕ್ಕಾಗಿ ಹಾಸ್ಯದ ಮೂಲಕ ಅದನ್ನು ತಿಗುಚಿನೋಡುವ ಕ್ರಮವನ್ನು ಕಾಣುತ್ತೇವೆ. ಗೊರೂರರ 'ಅಮೇರಿಕಾದಲ್ಲಿ ಗೊರೂರು', ಬಿ.ಜಿ.ಎಲ್ ಸ್ವಾಮಿಯವರ 'ಅಮೆರಿಕಾದಲ್ಲಿ ನಾನು' ಈ ಬಗೆಯ ಬರವಣಿಗೆಯ ಅತ್ಯುತ್ತಮ ಮಾದರಿಗಳಾಗಿವೆ ಸಾಮಾನ್ಯವಾಗಿ ಭಾರತೀಯ ಪ್ರವಾಸಿ ಪಾಶ್ಚಾತ್ಯ ದೇಶಗಳಿಗೆ ಹೋದಾಗ ಒಂದು ರೀತಿಯ ಕೀಳರಿಮೆಯ ನೆಲೆಯಲ್ಲಿ ಅನುಭವಗಳನ್ನು ಸ್ವೀಕರಿಸು ವುದನ್ನು ಕಾಣುತ್ತೇವೆ. ಗೊರೂರು, ಬಿ.ಜಿ.ಎಲ್. ಅವರಂಥ ಲೇಖಕರಲ್ಲಿ ಅಂಥ ಕೀಳರಿಮೆಯ ಭಾವ ಎಲ್ಲೂ ಕಾಣುವುದಿಲ್ಲ. ಅಲ್ಲಿ ಅತಿಯಾದ ಸ್ವಾಭಿಮಾನವೂ ಇಲ್ಲ. ಅನಗತ್ಯವಾದ ಆರಾಧನೆಯೂ ಇಲ್ಲ. ಎಲ್ಲಿದ್ದರೂ ಮನುಷ್ಯರು ಮನುಷ್ಯರೇ ಎಂಬಂಥ ಮನೋಭಾವವಿದ್ದು, ಬದುಕಿನ ಅಂತರ್ಯವನ್ನು ಅವರು ತಮ್ಮ ಬರವಣಿಗೆಯ ಸಹಜ ಕ್ರಮದಲ್ಲಿಯೇ ಅನಾಯಾಸವಾಗಿ ಸ್ಪರ್ಶಿಸುವುದನ್ನು ನಾವು ಕಾಣುತ್ತೇವೆ.

ತಮ್ಮ ಪ್ರಬಂಧಗಳಿಂದ ಕನ್ನಡದ ಅಗ್ರಮಾನ್ಯ ಲೇಖಕರಾಗಿರುವ ಎ. ಎನ್. ಮೂರ್ತಿರಾವ್ ಪ್ರವಾಸ ಸಾಹಿತ್ಯಕ್ಕೆ ಲಲಿತ ಪ್ರಬಂಧದ ಚೆಲುವನ್ನು ತಮ್ಮ

ಉತ್ಕೃಷ್ಟ ಕೃತಿ 'ಅಪರ ವಯಸ್ಸಿನ ಅಮೆರಿಕಾ ಯಾತ್ರೆ'ಯಲ್ಲಿ ನೀಡಿದ್ದಾರೆ. ಮೂರ್ತಿರಾಯರು ತಮ್ಮ ಇಡೀ ವ್ಯಕ್ತಿತ್ವವನ್ನು ಅಖಂಡವಾಗಿ ತೊಡಗಿಸಿ ಬರೆಯುವ ಲೇಖಕ. ಅವರ ಅಪಾರವಾದ ಓದು, ವಿಸ್ತಾರವಾದ ಅನುಭವ, ಆರೋಗ್ಯಪೂರ್ಣವಾದ ನಿಲುವು, ಧ್ಯಾನಶೀಲವೆನ್ನಿಸುವ ಬರವಣಿಗೆ—ಎಲ್ಲವೂ ಹದವಾಗಿ ಕೂಡಿ 'ಅಪರ ವಯಸ್ಸಿನ ಅಮೆರಿಕಾ ಯಾತ್ರೆ' ಯಂತಹ ಉತ್ತಮ ಕೃತಿ ಸಿದ್ಧವಾಗಿದೆ. ಮೂರ್ತಿರಾಯರು ಆರ್. ಎಂ. ಬ್ಯಾಲೆಂಟೈನ್‌ನ ಪ್ರವಾಸ ಕೃತಿ Coral Island ಎಂಬುದನ್ನು 'ಹವಳ ದ್ವೀಪ' ಎಂಬ ಹೆಸರಲ್ಲಿ ಅನುವಾದಿಸಿದ್ದಾರೆಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು.

ನಮ್ಮ ಮುಖ್ಯ ಕವಿಗಳಲ್ಲಿ ಒಬ್ಬರಾದ ಜಿ. ಎಸ್. ಶಿವರುದ್ರಪ್ಪನವರು ಈಚೆಗೆ ಬರೆದ ತಮ್ಮ ಮೂರು ಪ್ರವಾಸ ಕೃತಿಗಳಿಂದ ಈ ಸಾಹಿತ್ಯ ಪ್ರಕಾರದಲ್ಲೂ ಅವರು ಬೆಲೆಯುಳ್ಳ ಕಾಣಿಕೆಯನ್ನು ನೀಡಿದ್ದಾರೆ. 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು' 'ಗಂಗೆಯ ಶಿಖರಗಳಲ್ಲಿ' ಮತ್ತು 'ಅಮೇರಿಕಾದಲ್ಲಿ ಕನ್ನಡಿಗ'–ಜಿ. ಎಸ್. ಎಸ್. ಅವರ ಬಹು ಚರ್ಚಿತ ಪ್ರವಾಸ ಕೃತಿಗಳು. ಕವಿಯೊಬ್ಬ ಬರೆದಾಗ ಮಾತ್ರ ಕಾಣುವ ಭಾವಲಾಲಿತ್ಯ, ಸೂಕ್ಷ್ಮ ಸೌಂದರ್ಯ ಪ್ರಜ್ಞೆ ಮತ್ತು ಮನೋಹರ ಕಲ್ಪನಾಶೀಲತೆ–ಜಿ. ಎಸ್. ಎಸ್. ಕೃತಿಗಳ ಪ್ರಧಾನ ಲಕ್ಷಣಗಳು. ಹೊರ ಕಣ್ಣಿಗೆ ತಪ್ಪಿಹೋಗುವ, ಲೌಕಿಕ ದೃಷ್ಟಿಗೆ ಮುಖ್ಯವೆನ್ನಿಸದ ಅನೇಕ ಸೂಕ್ಷ್ಮಗಳನ್ನು ಜಿ.ಎಸ್.ಎಸ್. ಅವರು ಈ ಕಾರಣಗಳಿಂದಾಗಿಯೇ ತಮ್ಮ ಕೃತಿಗಳಲ್ಲಿ ತರಲು ಸಾಧ್ಯವಾಗಿದೆ. ವಿವರಗಳು ಎಲ್ಲೂ ಭಾರವಾಗದಂತೆ, ಕತೆಯ ರೀತಿ ಸುಲಲಿತವಾಗಿ ಓದಿಸಿಕೊಂಡು ಹೋಗುವಂಥ ಸೊಗಸಾದ ಬರವಣಿಗೆಯನ್ನು ಇವರ ಕೃತಿಗಳಲ್ಲಿ ನಾವು ಕಾಣಬಹುದು.

ವಿಭಿನ್ನ ಆಸಕ್ತಿಯ ಲೇಖಕರು ಹೊರದೇಶಗಳಿಗೆ ಹೋಗಿ ಆ ಬಗ್ಗೆ ತಮ್ಮ ಪ್ರವಾಸ ಕೃತಿಗಳನ್ನು ರಚಿಸಿದಾಗ ಅವರ ಆಸಕ್ತಿಗಳೇ ಕೃತಿಯ ಸ್ವರೂಪದಲ್ಲಿ ನಿರ್ಧರಿಸುತ್ತವೆ. ಶ್ರೀರಂಗರು ತಮ್ಮ ಯುರೋಪಿನ ಪ್ರವಾಸವನ್ನು ಕುರಿತು ಬರೆದ 'ಶ್ರೀರಂಗ ಯಾತ್ರೆ', ಚಂದ್ರಭಾಗಾದೇವಿಯವರ 'ಗೆಜ್ಜೆಯ ಹೆಜ್ಜೆ ನುಡಿ' ಈ ಬಗೆಯ ಕೃತಿಗಳು. ನಾಟಕಕಾರ, ನಟ, ನಿರ್ದೇಶಕನೊಬ್ಬ ಯುರೋಪಿನ ರಂಗಭೂಮಿಯನ್ನು ಕುರಿತು ಸೂಕ್ಷ್ಮ ಒಳನೋಟಗಳೊಂದಿಗೆ ವ್ಯಕ್ತಪಡಿಸಿರುವ ಖಚಿತವಾದ ಮತ್ತು ನಿಷ್ಠುರವಾದ ದಾಖಲೆಯಾಗಿ 'ಶ್ರೀರಂಗ ಯಾತ್ರೆ'ಯನ್ನು ನಾವು ಗಮನಿಸಬಹುದು. ಇದೇ ಸಂದರ್ಭದಲ್ಲಿ ಗಿರಡ್ಡಿ ಗೋವಿಂದರಾಜ ಅವರ 'ಇಂಗ್ಲೆಂಡಿನ ರಂಗಭೂಮಿ' ಕೃತಿ ನೆನಪಾಗುತ್ತದೆ.

ಪ್ರವಾಸ ಕೃತಿಗಳಿಂದಲೇ ಕನ್ನಡದ ಪ್ರಮುಖ ಲೇಖಕರೆಂದು ಪ್ರಸಿದ್ಧರಾಗಿರುವವರು ಕೃಷ್ಣಾನಂದ ಕಾಮತರು. ಅವರ 'ವಂಗ ದರ್ಶನ' 'ನಾನೂ ಅಮೆರಿಕೆಗೆ ಹೋಗಿದ್ದೆ' ಮತ್ತು 'ನಾ ರಾಜಸ್ಥಾನದಲ್ಲಿ'—ಕನ್ನಡ ಪ್ರವಾಸ ಸಾಹಿತ್ಯ ಸಂದರ್ಭದಲ್ಲಿ ಬಹು ಮುಖ್ಯ ಕೃತಿಗಳು. ವಿಚಕ್ಷಣಮತಿಯಾದ ಮತ್ತು ಪ್ರಖರವಾದ ವಿವೇಚನಾ ಶಕ್ತಿಯುಳ್ಳ ಲೇಖಕನೊಬ್ಬ ಜೀವನದ ವಿವರಗಳನ್ನಿಟ್ಟುಕೊಂಡು ಅದರ ಅಂತಃಸೂತ್ರಗಳನ್ನು ಹುಡುಕಾಡುವ ರೀತಿ ಕಾಮತರ ಕೃತಿಗಳಲ್ಲಿ ಕಂಡುಬರುತ್ತದೆ.

ನವುರಾದ ಹಾಸ್ಯಸ್ಪರ್ಶದಿಂದ ಇಡೀ ಬರವಣಿಗೆ ಸುಲಲಿತವಾಗಿ ಓದಿಸಿಕೊಳ್ಳುತ್ತದೆ. ಕೃಷ್ಣಾನಂದ ಕಾಮತರಂತೆ ಕನ್ನಡದಲ್ಲಿ ಪ್ರವಾಸ ಸಾಹಿತ್ಯವನ್ನೇ ತಮ್ಮ ಪ್ರಧಾನ ಅಭಿವ್ಯಕ್ತಿ ಮಾಧ್ಯಮವಾಗಿ ರೂಪಿಸಿಕೊಂಡ ಇನ್ನೊಬ್ಬ ಲೇಖಕರಿಲ್ಲ.

ಸೂಕ್ಷ್ಮ ಒಳನೋಟಗಳಿಂದ, ಆಕರ್ಷಕ ಶೈಲಿಯಿಂದ ನಮ್ಮ ಗಮನ ಸೆಳೆಯುವ ಪ್ರವಾಸ ಕೃತಿಗಳೆಂದರೆ ಕು. ಶಿ. ಹರಿದಾಸಭಟ್ಟರ 'ನಾ ಕಂಡ ಇಟಾಲಿಯಾ' ಪ್ರಭುಶಂಕರರ 'ಅಮೆರಿಕಾದಲ್ಲಿ ಶಾಂತಿ, ನಾನು.'

ಇತ್ತೀಚೆಗೆ ಪ್ರವಾಸ ಸಾಹಿತ್ಯದಲ್ಲಿ ಅನೇಕ ವೈವಿಧ್ಯಮಯ ಕೃತಿಗಳು ಬರುತ್ತಿದ್ದು ಆ ಪ್ರಕಾರದ ಬೆಳವಣಿಗೆ ಉತ್ತಮವಾಗಿದೆ ಪ್ರವಾಸ ಹೋಗಿ ಬಂದ ಕನ್ನಡ ಲೇಖಕರು ತಮ್ಮ ಪ್ರವಾಸದ ಅನುಭವಗಳನ್ನು ಕುರಿತು ಬರೆಯುವ ಒಂದು ಸತ್ಸಂಪ್ರದಾಯ ನಮ್ಮಲ್ಲಿ ಆರಂಭವಾಗಿದೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ದೇಜಗೌ ಅವರ 'ವಿದೇಶಗಳಲ್ಲಿ ನಾಲ್ಕು ವಾರಗಳು', ನವರತ್ನರಾಮ್ ಅವರ 'ಪ್ಯಾರಿಸ್ಸಿನಿಂದ ಪ್ರೇಯಸಿಗೆ', ಎಚ್. ವಿ. ಶ್ರೀರಂಗರಾಜ್ ಅವರ 'ಸೋವಿಯತ್ ದಿನಚರಿ', ಕೆ. ಆರ್. ಕಾರಂತರ 'ಪ್ರವಾಸಿಯ ಪತ್ರಗಳು', ದಿನಕರ ದೇಸಾಯಿಯವರ 'ನಾ ಕಂಡ ಪಡುವಣ', ಟಿ. ಕೆ. ರಾಮರಾಯರ 'ಗೋಳದ ಮೇಲೊಂದು ಸುತ್ತು', ಹೊ. ಶ್ರೀನಿವಾಸಯ್ಯ ಅವರ 'ನಾ ಕಂಡ ಜರ್ಮನಿ', ಪ್ರಭುಪ್ರಸಾದರ 'ದೇಗುಲಗಳ ದಾರಿಯಲ್ಲಿ', ನಾಡಿಗ ಕೃಷ್ಣಮೂರ್ತಿ ಅವರ 'ಸಾಗರ ಯಾತ್ರೆ', ಪದ್ಮ-ಉಮಾಪತಿ ಅವರ 'ನಾವು ಕಂಡ ಅಮೆರಿಕಾ', ರಾ. ಯ. ಧಾರವಾಡಕರ್ ಅವರ 'ಅಮೆರಿಕಾ ಸಂಸ್ಕೃತಿ', ವಿ. ಶೆಟ್ಟಿ ಪೆಂಡಕೂರು ಅವರ 'ಕೆನಡಾದಲ್ಲಿ ಕನ್ನಡಿಗ', ಅನುಪಮಾ ನಿರಂಜನ ಅವರ 'ಅಂಗೈಯಲ್ಲಿ ಯೂರೋ ಅಮೆರಿಕಾ', ಲಲಿತಾ ಸುಬ್ಬರಾವ್ ಅವರ 'ನಾನು ಮತ್ತು ಅಮೆರಿಕಾ', ಕೆ. ಗಣೇಶ್ ಮಲ್ಯರ 'ಅಮೆರಿಕಾದಲ್ಲಿ ೬೦ ದಿನಗಳು', ವೈ. ಎಸ್. ಲೂಯಿಸ್ ಅವರ 'ಕೊಲಂಬಿಯಾ ಯಾತ್ರೆ', ಸಿದ್ದವ್ವನ ಹಳ್ಳಿ ಕೃಷ್ಣಶರ್ಮ ಅವರ 'ವಾರ್ಧಾಯಾತ್ರೆ', ಹಿರೇಮಲ್ಲೂರು ಈಶ್ವರನ್ ಅವರ 'ಕವಿ ಕಂಡ ನಾಡು', ದೇನಾಶ್ರೀ ಅವರ 'ಕಾಲಾತೀತರ ದ್ವೀಪಗಳಲ್ಲಿ', ಆರಯ್ಯನವರ 'ನಾ ಕಂಡ ಕರ್ನಾಟಕ'–ಮೊದಲಾದವು ಹೆಸರಿಸಬೇಕಾದ ಕೃತಿಗಳು. ಡಾ|| ಡಿ. ವಿ. ರಾವ್ ತಾವು ಮಾಡಿದ ಪ್ರಪಂಚ ಪರ್ಯಟನವನ್ನೆಲ್ಲ ಫೋಟೊ–ಪ್ರವಾಸ ಲೇಖನಗಳಾಗಿ ಬರೆದು ಪ್ರಕಟಿಸಿದ್ದಾರೆ. ಇತ್ತೀಚೆಗೆ ಪ್ರಕಟವಾದ ಪೂರ್ಣಚಂದ್ರ ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್' ಒಂದು ವಿಶಿಷ್ಟ ರೀತಿಯ ಪ್ರವಾಸ ಕಥನ.

ಪ್ರವಾಸ ಸಾಹಿತ್ಯದ ವೈಶಿಷ್ಟ್ಯವೆಂದರೆ ಸೃಜನಶೀಲ ಲೇಖಕರಲ್ಲದವರೂ ಹಸ ಬರೆಯಬಹುದಾದಂಥದು. ವಿಜ್ಞಾನಿಗಳು, ತಂತ್ರಜ್ಞಾನಿಗಳು, ಕಲಾವಿದರು, ಶಿಕ್ಷಣವೇತ್ತರು–ಹೀಗೆ ಬದುಕಿನ ವಿವಿಧ ರಂಗಗಳಲ್ಲಿ ಕೆಲಸ ಮಾಡುವವರು ಬರೆಯಬಹುದಾದ ಸಾಹಿತ್ಯ ಪ್ರಕಾರವೆಂದರೆ, ಆತ್ಮಕಥೆಯನ್ನು ಬಿಟ್ಟರೆ ಪ್ರಾಯಶಃ ಪ್ರವಾಸ ಕಥನವೇ ಎನ್ನಬಹುದು. ಇದು ಈ ಮಾಧ್ಯಮದ ಮುಕ್ತಸ್ವರೂಪವನ್ನು ತೋರಿಸು

ತ್ತದೆ. ಸಾಹಿತಿಗಳೆಂದು ಹೆಸರು ಮಾಡದ ಅನೇಕರು ಪ್ರವಾಸ ಕಥನಗಳನ್ನು ಬರೆದಿರುವುದನ್ನು ನಾವು ನೋಡಬಹುದು.

ಪ್ರವಾಸ ವ್ಯಕ್ತಿಯ ಅನುಭವವನ್ನು ವಿಸ್ತರಿಸುವ ಅತ್ಯಂತ ಸೂಕ್ತವಾದ ಮಾರ್ಗವೆಂಬುದು ಸರ್ವಸಮ್ಮತ. "ದೇಶ ತಿರುಗಿ ನೋಡು, ಕೋಶ ಓದಿ ನೋಡು" ಎಂಬ ನಾಣ್ಣುಡಿ ಇಂಥ ಒಂದು ನೆಲೆಯಲ್ಲೇ ಮೂಡಿರಬೇಕು. ತೀರ ಸರಳವಾದ, ಪ್ರವಾಸಿಯೊಬ್ಬನಿಗೆ ಸಾಹಿತ್ಯ ರೂಪದ ಗೈಡ್‌ಗಳಾಗುವ ಬರವಣಿಗೆಯಿಂದ ಹಿಡಿದು, ಅತ್ಯಂತ ಆಳವಾಗಿ ಆಯಾ ದೇಶಗಳ ಸಾಂಸ್ಕೃತಿಕ ಶೋಧಕ್ಕೆ ತೊಡಗುವವರೆಗೆ ಪ್ರವಾಸ ಕೃತಿಗಳಲ್ಲಿ ಹಲವು ನೆಲೆಗಳಿವೆ. 'ಡಿವೈನ್ ಕಾಮೆಡಿ'ಯಲ್ಲಿ ವರ್ಜಿಲ್ ಮಾಡುವಂತೆ ಓದುಗನ ಕೈಹಿಡಿದು ಅವನು ಕಂಡರಿಯದ ಹೊಸ ಅನುಭವ ಲೋಕವೊಂದಕ್ಕೆ ಅವನನ್ನು ಸಾವಧಾನವಾಗಿ ಒಯ್ಯುವ ಮಾರ್ಗವಾಗುತ್ತದೆ. ಜಪಾನಿನಲ್ಲಿ ಇಕ್ಕು ಜಪ್ಪೆನಶಾ ೭೦ ವರ್ಷಗಳ ಸುದೀರ್ಘ ಕಾಲಾವಧಿಯಲ್ಲಿ ಬರೆದಿರುವ ಮಹಾಕೃತಿ. 'ಇಬ್ಬರು ಅಲೆಮಾರಿಗಳು' ಈ ಬಗೆಯ ಕೃತಿ ಎನ್ನಬಹುದು. ಭಾರತೀಯ ಲೇಖಕರಲ್ಲಿ ಇಂಗ್ಲಿಷನ್ನು ಬರೆಯುವ ವೇದ್‌ಮೆಹ್ತಾ, ವಿ. ಎಸ್. ನೈಪಾಲ್, ಡಾ. ಮೊರೇಸ್ ಅವರ ಕೃತಿಗಳನ್ನು ಈ ಸಂದರ್ಭದಲ್ಲಿ ನಾವಿಲ್ಲಿ ನೆನಪಿಸಿಕೊಳ್ಳಬಹುದು. ನಮ್ಮಲ್ಲಿ ಶಿವರಾಮ ಕಾರಂತರ, ಮೂರ್ತಿರಾಯರ ಕೃತಿಗಳು ಈ ಬಗೆಯ ಕೃತಿಗಳಾಗಿವೆ. ಕಾರಂತರ ಪ್ರವಾಸ ಕೃತಿಗಳಿರಲಿ, ಅವರ ಕಾದಂಬರಿಗಳಲ್ಲೂ 'ಪ್ರಯಾಣ' ಒಂದು ಪ್ರಧಾನ ಪ್ರತಿಮೆಯಾಗುವುದು ಈ ದೃಷ್ಟಿಯಿಂದ ಗಮನಿಸಬೇಕಾದ ಅಂಶ. ಕಾರಂತರ ಬಹಳಷ್ಟು ನಾಯಕರು ಅವರಂತೆಯೇ 'ಅಲೆಮಾರಿ'ಗಳಾಗಿದ್ದಾರೆ. ಪ್ರವಾಸ ಅವರಿಗೆ ಜೀವನಶೋಧನೆಯ ಒಂದು ಮುಖ್ಯ ಪ್ರಕ್ರಿಯೆಯಾಗಿ ಪರಿಣಮಿಸಿದೆ. ಕಾರಂತರಂತೆ-ಆದರೆ ಬೇರೆಹದಗಳಲ್ಲಿ-ಪ್ರವಾಸವನ್ನು ಅಥವಾ ಅಲೆಮಾರಿತನವನ್ನು ಸೃಜನಾತ್ಮಕ ಶೋಧನೆಯ ಪ್ರಕ್ರಿಯೆಗೆ ಒಳಪಡಿಸಿಕೊಂಡ ಅನೇಕ ಲೇಖಕರು ನಮ್ಮಲ್ಲಿದ್ದಾರೆ. ಈ ಹಿಂದೆ ಉಲ್ಲೇಖಿಸಿದ ಗೋಕಾಕರ ಕೃತಿಗಳಲ್ಲಿ ಕಾವ್ಯದ ನೆಲೆಯಲ್ಲಿ ಈ ಶೋಧನೆಯು ಕಂಡುಬಂದರೆ, ಭೈರಪ್ಪನವರ ನಿರಾಕರಣ, ಅನ್ವೇಷಣದಂತಹ ಕಾದಂಬರಿಗಳಲ್ಲಿ ಅಲೆಮಾರಿತನವು ಕಾದಂಬರಿ ಪ್ರಕಾರದಲ್ಲಿ ಅನುಭವ ಶೋಧನೆಯ ಮಾರ್ಗವಾಗಿ ಪರಿಣಮಿಸಿದೆ. ಈ ದೃಷ್ಟಿಯಿಂದ ರಾಮಚಂದ್ರಶರ್ಮ, ಅನಂತಮೂರ್ತಿ, ಶಾಂತಿನಾಥದೇಸಾಯಿ ಮೊದಲಾದವರ ಸಣ್ಣಕಥೆಗಳ ಅಭ್ಯಾಸ ಸಹ ಕುತೂಹಲಕಾರಿಯಾದುದು.

ಪ್ರವಾಸ ಸಾಹಿತ್ಯವನ್ನು ಕುರಿತು ಮಾತನಾಡುವಾಗ ಸಹಜವಾಗಿ ಫಾಹಿಯಾನ್, ಹ್ಯೂಯೆನ್‌ತ್ಸಾಂಗ್, ನಿಕೋಲೋಕಾಂಟಿ ಮೊದಲಾದ ಹೆಸರುಗಳು ನೆನಪಾಗುತ್ತವೆ. ಮಾರ್ಕೋಪೋಲೋ ಪ್ರವಾಸಕಥನ-ಅತ್ಯಂತ ಪ್ರಸಿದ್ಧವಾದದ್ದು. ಮಾರ್ಕ್‌ಟ್ವೇನ್, ಆರ್. ಎಲ್. ಸ್ಟೀವನ್‌ಸನ್‌ರನ್ನೂ ನಾವಿಲ್ಲಿ ನೆನಪಿಸಿಕೊಳ್ಳಬಹುದು. ಈ ಮೊದಲು ಉಲ್ಲೇಖಿಸಿದ ಬ್ಯಾಲೆಂಟೈನ್‌ನ Coral Island ಒಂದು ಸೊಗಸಾದ ಕೃತಿ. ಕನ್ನಡದಲ್ಲಿ ಎಚ್. ಎಸ್. ವೆಂಕಟೇಶಮೂರ್ತಿಯವರು 'ಅಮಾನುಷರು', 'ಕಟಿರನ ಕೋಟೆ'-ಮೊದಲಾದ ಕೃತಿಗಳಲ್ಲಿ ಇಂಥ ಪ್ರಯತ್ನ

ಮಾಡಿದ್ದಾರೆ. ಜೋನಥಾನ್ ಸ್ವಿಫ್ಟ್‌ನ ಗಲಿವರನ ಪ್ರವಾಸಗಳು, ಸರ್ವಾಂಟೆಸ್‌ನ 'ಡಾನ್ ಕ್ವಿಕ್ಸೋಟ್' ಸಹ ಪ್ರವಾಸ ಸಾಹಿತ್ಯದ ಬಗೆಗಳೇ ಆಗಿವೆ-ವಿಭಿನ್ನ ನೆಲೆಯಲ್ಲಿ. ಥಾಮಸ್ ಕೊರ್ಯಟ್, ಸ್ಯಾಮ್ಯುಯಲ್ ಪುರ್ಚಾಸ್, ಸರ್ ಜಾನ್ ಹಾಕ್, ವಾಲ್ಟರ್ ಕ್ಯಾಲೆ-ಮೊದಲಾದವರ ಪುಸ್ತಕಗಳೂ ಈ ಪ್ರಕಾರದಲ್ಲಿ ಪ್ರಸಿದ್ಧವಾಗಿವೆ.

ಪ್ರವಾಸ ಸಾಹಿತ್ಯ ಪ್ರಕಾರದಲ್ಲಿ ವೈವಿಧ್ಯಮಯವಾದ ಅನೇಕ ಕೃತಿಗಳು ಪ್ರಕಟವಾಗುತ್ತಿದ್ದರೂ ಸಾಹಿತ್ಯದ ಇತರ ಪ್ರಕಾರಗಳಲ್ಲಿ ಕಾಣಿಸುವಷ್ಟು ಪ್ರಮಾಣ ದಲ್ಲಿ ಪ್ರವಾಸ ಸಾಹಿತ್ಯ ಸೃಷ್ಟಿಯಾಗುತ್ತಿಲ್ಲವೆನ್ನುವುದು ನಿಜ. ಅದಕ್ಕೆ ಕಾರಣ-ನಮ್ಮಲ್ಲಿ ಪ್ರವಾಸ ಮಾಡುವವರೂ ಕಡಿಮೆ; ಮಾಡಿದವರಲ್ಲಿ ಬರೆಯಬಲ್ಲ ಆಸಕ್ತಿ ಇರುವವರು ಇನ್ನೂ ಕಡಿಮೆ. ಹೊರದೇಶಗಳಲ್ಲಿಯಂತೆ ಪ್ರವಾಸ ನಮ್ಮಲ್ಲಿ ಜೀವನಾ ಸಕ್ತಿಯ ಒಂದು ಭಾಗವಾಗಿ ಬೆಳೆದು ಬಂದಿಲ್ಲ. ನಮ್ಮಲ್ಲಿ ನೂರಕ್ಕೆ ಎಂಬತ್ತು ಮಂದಿ ಐವತ್ತು ಕಿ. ಮಿ. ಪರಿಧಿಯಲ್ಲೇ ತಮ್ಮ ಇಡೀ ಬದುಕನ್ನೇ ಕಳೆದು ಕಾಲವಾಗುವ ಪರಿಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮ ಬಹಳಷ್ಟು ಮುಖ್ಯ ಲೇಖಕರೂ ಕೂಡ ಹೊರ ದೇಶಗಳಿಗೆ ಹೋಗಿಬಂದದ್ದು ಕಡಿಮೆಯೆ. ಭಾರತ ಯಾತ್ರೆ ಕೂಡ ಹಳೆಯ ಮೌಲ್ಯಗಳು ಬಂದೊದಗಿರುವ ಇಂದಿನ ಸಂದರ್ಭದಲ್ಲಿ—ಎಂದರೆ ತೀರ್ಥಯಾತ್ರಾ ಸ್ವರೂಪದ ಧಾರ್ಮಿಕ ವಿಧಿಗಳು ಮೊದಲಿನ ಪ್ರಭಾವವನ್ನು ಕಳೆದುಕೊಂಡಿರುವ ಸಂದರ್ಭದಲ್ಲಿ—ಪ್ರಧಾನವಾದ ಬೇರೆ ಸಾಂಸ್ಕೃತಿಕ ಮೌಲ್ಯಗಳು ಮಾತ್ರ ಅಖಂಡ ಭಾರತದ ಜೀವಾಣು ಪರಿಚಲನೆಯನ್ನು ಸಾಧಿಸಬಲ್ಲುವು. ಅಂಥ ಆಕರ್ಷಣೆಯನ್ನು ನಮ್ಮ ದೇಶವಿನ್ನೂ ಕಂಡುಕೊಳ್ಳಬೇಕಾಗಿದೆ. ಪ್ರಾಕೃತಿಕ ಸೌಂದರ್ಯ ತಾಣಗಳು, ಕಲಾಕೇಂದ್ರಗಳು, ಸಾಹಸ ಯಾತ್ರೆಗಳು ಧಾರ್ಮಿಕ ಕ್ಷೇತ್ರಗಳಿಗೆ ಪರ್ಯಾಯವಾಗಿ ಸಲ್ಲಬಲ್ಲುವೇ ಎಂಬುದನ್ನು ಕಾಲವೇ ನಿರ್ಧರಿಸಬೇಕಾಗಿದೆ.

ಈ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ತನ್ನ ಸೀಮಿತ ನೆಲೆಯಲ್ಲಿ ಹಾಕಿಕೊಂಡಿರುವ ಸೂಕ್ತವಾದ ಯೋಜನೆಯೊಂದರ ಬಗ್ಗೆ ಉಲ್ಲೇಖಿಸ ಬಹುದು. ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಪ್ರವಾಸ ಮಾಡಲು ಇಚ್ಛಿಸುವ ಕನ್ನಡದ ಕೆಲವು ಲೇಖಕರಿಗೆ ಸಹಾಯಧನ ನೀಡಿ, ಅವರನ್ನು ಬೇರೆ ಬೇರೆ ಪ್ರಾಂತ್ಯ ಗಳಿಗೆ ಕಳುಹಿಸಿಕೊಡುವುದು ಆ ಯೋಜನೆ. ಪ್ರವಾಸದ ಅನಂತರ ಆ ಲೇಖಕರು ತಮ್ಮ ಪ್ರವಾಸದ ಅನುಭವಗಳನ್ನು ಪುಸ್ತಕ ರೂಪದಲ್ಲಿ ಬರೆದುಕೊಡಬೇಕೆಂಬ ನಿಬಂಧನೆಯೂ ಇದೆ. ಈ ಯೋಜನೆಯಡಿ ಈಗಾಗಲೇ ಅನೇಕ ಲೇಖಕರು ಪರ ಪ್ರಾಂತ್ಯಗಳಲ್ಲಿ ಪ್ರವಾಸ ಮಾಡಿದ್ದು, ಅವರಲ್ಲಿ ಕೆಲವರ ಕೃತಿಗಳೂ ಪ್ರಕಟವಾಗಿವೆ. ನಮ್ಮ ಲೇಖಕರ ಅನುಭವ ಜಗತ್ತನ್ನು ವಿಸ್ತರಿಸುವ ದೃಷ್ಟಿಯಿಂದ ಮಾತ್ರವಲ್ಲ, ಸಾಂಸ್ಕೃತಿಕ ಕೊಡು-ಕೊಳ್ಳುವಿಕೆಯ ದೃಷ್ಟಿಯಿಂದಲೂ, ಪ್ರವಾಸ ಸಾಹಿತ್ಯವನ್ನು ಸಮೃದ್ಧಗೊಳಿಸುವ ದೃಷ್ಟಿಯಿಂದಲೂ ಇದೊಂದು ಉಪಯುಕ್ತವಾದ ಉಪಕ್ರಮ ವಾಗಿದೆ.

ಬೇರೆ ಬೇರೆ ದೇಶಗಳ ಬಗ್ಗೆ, ಆ ಜನರ ಬಗ್ಗೆ ನಮಗೆ ಕುತೂಹಲ ಸಹಜ. ಅನೇಕ ಕಾರಣಗಳಿಂದಾಗಿ ವಿದೇಶ ಪ್ರವಾಸ ಕಷ್ಟ. ಬೇರೆ ದೇಶಗಳಿಗೆ ಹೋಗು

ವಂಥದು, ಅಲ್ಲಿಯ ಬದುಕನ್ನು ಹತ್ತಿರದಿಂದ ನೋಡುವಂಥದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಆದರೆ ಬೇರೆ ಬೇರೆ ಮಾಧ್ಯಮಗಳ ಮೂಲಕ ನಾವು ಒಂದು ದೇಶದ ಪರಿಚಯವನ್ನು ಮಾಡಿಕೊಳ್ಳಬಹುದು. ಅಂಥ ಮಾಧ್ಯಮಗಳಲ್ಲಿ ಒಂದು ದೇಶದ ಆತ್ಮದರ್ಶನ ಮಾಡಲು ಇರುವ ಅತ್ಯಂತ ಸೂಕ್ತವಾದ ಮಾಧ್ಯಮವೆಂದರೆ ಸಾಹಿತ್ಯವೇ ಎನ್ನಬಹುದು. ಸಾಹಿತ್ಯದಲ್ಲೂ ಪ್ರವಾಸ ಸಾಹಿತ್ಯ ನೇರ ವಿವರಗಳ ರೂಪದಲ್ಲಿರುವುದರಿಂದ ನಾವು ಆ ದೇಶಕ್ಕೆ ಹೆಚ್ಚು ಹತ್ತಿರದವರಾಗುವುದು ಸಾಧ್ಯ. ಹೀಗಾಗಿ ಪ್ರವಾಸ ಸಾಹಿತ್ಯ ಸಮೃದ್ಧವಾದಂತೆ, ನಮ್ಮ ಅನುಭವ ಜಗತ್ತು ವಿಸ್ತಾರವಾಗುತ್ತಾ ಹೋಗುತ್ತದೆ. ಬದುಕಿಗೆ ಹೊಸ ಆಯಾಮಗಳು ಸೇರಿಕೊಳ್ಳುತ್ತವೆ.

ವ್ಯಾಸರು ಕಂಡಂತೆ ಕರ್ಣ

ಡಾ. ಕೆ. ಸುಬ್ರಹ್ಮಣ್ಯ

ಮಹಾಭಾರತ ಗ್ರಂಥವು ವೇದವ್ಯಾಸರಿಂದ ರಚಿತವಾಗಿ 'ಪಂಚಮವೇದ' ಎಂದು ಹೆಸರುಗೊಂಡಿದೆ. ಇದರಲ್ಲಿ ಹಲವು ತರಹದ ವ್ಯಕ್ತಿಗಳು, ಹಲವು ನಮೂನೆಯ ಪ್ರಾಣಿಪಕ್ಷಿಗಳು, ಹಲವು ಬಗೆಯ ನಡತೆಗಳು, ಹಲವು ವಿವಿಧ ಸಮಸ್ಯೆಗಳು, ಹಲವು ಸ್ಥಳಗಳ ವರ್ಣನೆಗಳು, ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ. 'ಮಹತ್ವ ಹಾಗೂ ಭಾರವತ್ವ' ಇರುವ ಕೃತಿಯಾದ್ದರಿಂದ 'ಮಹಾಭಾರತ'ವೆಂದು ಹೆಸರು ಗೊಂಡಿದೆ. 'ಯದಿ ಹಾಸ್ತಿ ತದನ್ಯತ್ರ ಯನ್ನೇ ಹಾಸ್ತಿ ನ ಕು ತ್ರಚಿತ್' ಎಂಬಷ್ಟು ಹೊಗಳಿಕೆಗೆ ಪಾತ್ರವಾಗಿದೆ.

'ನಾರಾಯಣಂ ನಮಸ್ಕೃತ್ಯ ನಚೈವ ನರೋತ್ತಮಂ ದೇವೀಂ ಸ್ವರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್' ಎಂಬಂತೆ ಈ ಗ್ರಂಥಕ್ಕೆ ಮೊದಲು 'ಜಯ' ವೆಂದು ಹೆಸರಿತ್ತೆಂದೂ, ಆ ಬಳಿಕ ಭಾರತವೀರರ ಕಥೆಯಾದ್ದರಿಂದ 'ಭಾರತ'ವೆಂದು ಹೆಸರು ಬಂದಿರಬೇಕೆಂದೂ, ಅದೂ ವಿಸ್ತಾರವಾಗಿ ರೂಪುಗೊಂಡು 'ಮಹಾಭಾರತ' ವೆಂಬ ಹೆಸರಾಯಿತೆಂದೂ ಹೇಳುವರು. 'ಭಾರತ ಮಹಾಭಾರತ ಧರ್ಮಚಾರ್ಯಃ' ಎಂದು ಹೇಳುವ ಮಾತೂ ಇದನ್ನು ಸೂಚಿಸುತ್ತದೆ. ಇದರ ಮೂಲನಾಮವಾದ 'ಜಯ' ವೆಂಬುದೇ ಯುಧಿಷ್ಠಿರನ ಅಜ್ಞಾತವಾಸದ ಹೆಸರಾಗಿದೆ. ಅಂದರೆ, ಇದರಲ್ಲಿ 'ಶಾಂತರಸವೇ' ಪ್ರತಿಪಾದಿತವಾಗಿದೆ ಎಂದು ಹೇಳುವಂತೆ, ಧರ್ಮರಾಯನೇ ಪ್ರಧಾನ ನಾಯಕನೆನ್ನುವುದು ತಪ್ಪಾಗಲಾರದು. ಆದಾಗಿ 'ಜಯ' ಎಂಬ ಶಬ್ದದಲ್ಲಿ ೧೮ ಅಂಕೆಯು ಸೂಚಿತವಾಗುತ್ತದೆ, ಈ ಹದಿನೆಂಟರ ಪ್ರಸ್ತಾವ ಇಲ್ಲಿ ಹಲವು ಬಾರಿ ಬಂದಿದೆ. ಈ ಗ್ರಂಥವು ೧೮ ಪರ್ವಗಳಿಂದ ಕೂಡಿದೆ. ಕೌರವ ಪಾಂಡವರ ಕಡೆಯಲ್ಲಿ ಒಟ್ಟು ಸೇರಿದ ಸೇನೆ ಎಂದರೇ ಹದಿನೆಂಟು ಅಕ್ಷೋಹಿಣಿಸೇನೆ. ಅವರೊಳಗೆ ನಡೆದ ಯುದ್ಧವಾದರೂ ಹದಿನೆಂಟು ದಿನಗಳೆಂದು ಸ್ಪಷ್ಟವಾಗಿ, ಭಗವಂತನಾದ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ಗೀತೆಯು ಹದಿನೆಂಟು ಅಧ್ಯಾಯದ್ದಾಗಿದೆ. ಅರ್ಥಾತ್ ಕವಿ ಚಮತ್ಕೃತಿಯ ಮಾದರಿಯು ಮಾತ್ರವಲ್ಲದೆ, ಅದೊಂದು ಅರ್ಥವತ್ತಾದ ನುಡಿ ಎಂದು ಹೇಳಲು ಅಡ್ಡಿಯಿಲ್ಲ!

ಮಹಾಭಾರತದ ನಾಯಕನಾಗಿ ಧರ್ಮರಾಯನೇ ವರ್ಣಿತನಾಗಿರಬೇಕೆಂಬುದಕ್ಕೆ ಅನುವಾಗಿ ಅವನ ಪಟ್ಟಾಭಿಷೇಕವೇ ಕೊನೆಗೆ ಹೇಳಲಾಗಿದೆ. ಇಲ್ಲಿ ಪ್ರತಿನಾಯಕನು ಯಾರೆಂಬ ಪ್ರಶ್ನೆ ಏಳುತ್ತದೆ. ದುರ್ಯೋಧನನೇ ಪ್ರತಿನಾಯಕನೆಂದು ಹೇಳುವುದ ಕ್ಕೇನು ಅಭ್ಯಂತರವಿಲ್ಲ. ಪರಂತು, ಅವರೊಳಗೆ ಮಾತಿನಿಂದಾಗಲಿ, ಮೈಯಿಂದಾಲಿ, ಆಯುಧದಿಂದಾಗಲಿ ಹೆಚ್ಚಿನ ಹೋರಾಟವಾಗಿಲ್ಲವೆಂದು ಅವರು ಮುಖ್ಯಸ್ಥರಾಗಲಿಕ್ಕಿಲ್ಲ

ವೆನ್ನ ಬರುವುದಿಲ್ಲ. ಕೌರವನ ಕುಹಕವನ್ನು ಯುಧಿಷ್ಠಿರನು ಶಾಂತನಾಗಿ ಪ್ರತಿಭಟಿಸು ತ್ತಿದ್ದರಿಂದಲೇ ಈ ಕಥೆಯು ಹರಹು ಹಾಗೂ ಇತರ ಕಥಾನಕಗಳ ಒಳವುಗಳಾದವು. ಧರ್ಮ ಹಾಗೂ ಅಧರ್ಮಗಳ ಪ್ರತೀಕವಾದ ಅವರು ನಿಮಿತ್ತ ಮಾತ್ರರೆಂದೂ,ಧರ್ಮಾಧರ್ಮ ಗಳ ಹೋರಾಟವೇ ಇಲ್ಲಿನ ಅಂತರಾರ್ಥವೆಂದು ಹೇಳುವುದನ್ನು ಇಲ್ಲಿ ಗಮನಿಸಬೇಕು. ಇಲ್ಲಿ ಉಪನಾಯಕ ವರ್ಗವು ಒಬ್ಬನಲ್ಲಿ ಪೂರೈಸಿಲ್ಲ, ಒಂದೆಡೆ ಭೀಮನು ಪ್ರಧಾನ ಉಪ ನಾಯಕನಾದರೆ ಇನ್ನೊಂದೆಡೆ ಇದಿರಾಳಿಯಾಗಿ ದುಃಶಾಸನನು ಕಾಣಿಸಿಕೊಳ್ಳುತ್ತಾನೆ ಹಾಗೆಯೇ ಒಂದೆಡೆ ಅರ್ಜುನನು ಉಪನಾಯಕನಾದರೆ ಕರ್ಣನು ಅವನ ಪ್ರತಿಭಟ ನಾಗಿ ಮೆರೆದಿದ್ದಾನೆ. ಭೀಮ ದುರ್ಯೋಧನರು ಅಥವಾ ಭೀಮ ದುಃಶಾಸನರು ಹೋರಾಡಿ ಹೆಣಗಾಡಿದಕ್ಕಿಂತ ಬಲು ಮೇಲಾಗಿಯು ಬಹಳ ವಿಸ್ತಾರವಾಗಿಯೂ 'ಕರ್ಣಾರ್ಜುನರ'ಸಂಗ್ರಾಮ ವರ್ಣಿತವಾಗಿದೆಯೆಂದು ಮಹಾಭಾರತವನ್ನು ಪರಿಶೀಲಿಸಿ ದರೆ ತಿಳಿಯುತ್ತದೆ.

ದ್ವಾಪರಯುಗದ ಮಹಾಪುರುಷರಲ್ಲಿ ತನ್ನದೇ ಆದ ತೇಜಸ್ಸಿನಿಂದ ಕಂಗೊಳಿ ಸುವ ವ್ಯಕ್ತಿಯೆಂದರೆ ಕರ್ಣ. ಇತರ ಪಾತ್ರಗಳು ಬೇರೆ ಬೇರೆ ದೃಷ್ಟಿಗಳಿಂದ ಇವನನ್ನೂ ಮೀರಿಸಿದ್ದರೂ ಇವನ ಕ್ಷೇತ್ರದಲ್ಲಿ ಅವರು ಯಾರೂ ಇವನನ್ನು ಮೀರಿಸುವಂತಿಲ್ಲ. ಇತರರಲ್ಲಿ ಕಾಣಲಾಗದ ವಿಶಿಷ್ಟ ಮಹಿಮೆ ಕರ್ಣನಲ್ಲಿ ಮೈಗೊಂಡು ಬೆಳೆದಿದೆ. ಕೃಷ್ಣ, ಭೀಷ್ಮ, ದ್ರೋಣ, ವಿದುರಾದಿ ಮಹಾಪುರುಷರು ಜ್ಞಾನದಲ್ಲಾಗಲಿ, ಪರಾಕ್ರಮ ದಲ್ಲಾಗಲಿ, ಆತ್ಮೋನ್ನತಿಯಲ್ಲಾಗಲಿ ಕರ್ಣನಿಗಿಂತ ಮೇಲಾದ ವ್ಯಕ್ತಿಗಳಾಗಿರ ಬಹುದು. ಆದರೆ ಕರ್ಣನ ಮಾನವೀಯತೆಯ ಎದುರಿಗೆ ಆ ಪಾತ್ರಗಳ ಪ್ರಭೆ ಮಸುಕಾಗಿ ತೋರುತ್ತದೆ. ಕರ್ಣನಿಗೆ ಒದಗಿದ ಸಮಸ್ಯೆಗಳು, ಧರ್ಮ ಸಂಕಟಗಳು ಅವರ ಬಾಳ್ವೆಯಲ್ಲಿ ಸುಳಿದಾಡಲಿಲ್ಲ. ಅಂಥ ಸಂದರ್ಭಗಳಲ್ಲಿ ಅವರು ಯಾವ ರೀತಿ ಯಲ್ಲಿ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಊಹಿಸಲು ಕೂಡ ಅವಕಾಶ ಸಾಲದು. ಕರ್ಣನಲ್ಲಿ ಕಾಣುವಷ್ಟು ಸತ್ಯಪ್ರಿಯತೆಯಾಗಲಿ, ಸ್ವಾಮಿಭಕ್ತಿಯಾಗಲೀ ಸ್ನೇಹರಸವಾಗಲಿ, ಅಂತಿಮವಿರಕ್ತಿಯಾಗಲಿ ಅವರಲ್ಲಿ ಕಾಣದಿರುವುದರಿಂದ ಅವನಿಗೆ ಬಂದಂತಹ ಧರ್ಮ ಸಮಸ್ಯೆಗಳಿಗೆ ಸದೃಶವಾದ ಸಂದರ್ಭಗಳು ಅವರಿಗೇನಾದರೂ ಒದಗಿ ದ್ದರೆ, ಅವರ ನಡತೆ ಇವನ ನಡತೆಗಿಂತ ಏನು ಉತ್ತಮವಾಗುತ್ತಿರಲಿಲ್ಲವೆಂದು ಹೇಳ ಬಹುದು. ಈ ದೃಷ್ಟಿಯಿಂದಲೂ ಕರುಳನ್ನು ಹಿಂಡುವ ಜೀವಿತದ ಕರುಣ ಕಥೆ ಯಿಂದಲೂ ಕರ್ಣನ ಪಾತ್ರ ಭವ್ಯತೆಯ ತುತ್ತತುದಿಗೇರಿದೆ.

ಕರ್ಣೋತ್ಪತ್ತಿಗೆ ಕಾರಣ

ಅಸುರಾಃ ಜಜ್ಞಿರೇ ಕ್ಷೇತ್ರ ರಾಜ್ಞಾಂತು ಮನುಜೇಶ್ವರಃ ।
ಆದಿತ್ಯಃ ಸದಾ ದೈತ್ಯಃ ಬಹುಶೋ ನಿರ್ಜಿತಾಯುಧಿ ।
ಇಹ ದೇವತ್ವಮಿಜ್ಛಂತೋ ಮಾನುಷೇಷು ಮನಸ್ವಿನಃ ।
ಜಜ್ಞಿರೆ ಭುವಿ ಭೂತೇಷು ತೇಷು ತೇಷು ಸೇ ಶಾ ವಿಭ್॥ (ಆದಿಪರ್ವ ೬೪-೨೮)

ಸಮುದ್ರ ಮಥನ ಕಾಲದಲ್ಲಿ ಅಮೃತೋದಯವಾಗಲು ದೇವತೆಗಳು ಅಮೃತ

ಪಾನಮಾಡಿ, ಅಜರಾಮರಣವುಳ್ಳವರಾಗಲು ಅದುವರೆಗೆ ಸ್ವರ್ಗಕ್ಕೋಸ್ಕರ ಹಂಬಲಿ ಸುತ್ತಿದ್ದ ರಾಕ್ಷಸರು ಹಂಬಲವನ್ನು ತ್ಯಜಿಸಿ ಭೂಲೋಕದಲ್ಲಿ ವಿವಿಧ ರೂಪದಿಂದ ಜನಿಸಿ ಸಾಧುಸಂತರನ್ನು ಪೀಡಿಸಲು ತೊಡಗಿದರು. ಆಗ ದೇವತೆಗಳೆಲ್ಲರು ಯೋಚಿಸಿ ಏಕಕಾಲದಲ್ಲಿಯೇ ಆ ದುಷ್ಟಶಕ್ತಿಯು ನಾಶವಾಗಬೇಕೆಂದು ಸೂರ್ಯದೇವನನ್ನು ಪ್ರಾರ್ಥಿಸಲು ಅಂತೆಯೇ ಅವನು ಕುಂತಿ ಗರ್ಭದಲ್ಲಿ ಓರ್ವ ಕುಮಾರನು ಉದಯಿಸು ತ್ತಾನೆ ಎಂದು ಅನುಗ್ರಹಿಸಿದನು.

ಕರ್ಣಜನ್ಮ ವೃತ್ತಾಂತ

ಕುಂತಿ ಬಾಲ್ಯದಲ್ಲಿ ದೂರ್ವಾಸರನ್ನು ಭಕ್ತಿಯಿಂದ ಸೇವಿಸಿದ್ದಳು. ದೂರ್ವಾ ಸರು ಪೃಥೆಗೆ ಮುಂದೊದಗಬಹುದಾದ ಕಷ್ಟಗಳನ್ನು ಅರಿತುಕೊಂಡು, ಆಕೆಯ ಧರ್ಮ ರಕ್ಷಣೆಗೋಸ್ಕರ 'ವಶೀಕರಣ ಮಂತ್ರ'ವನ್ನು ಉಪದೇಶಿಸಿ, ಅದರ ಪ್ರಯೋಗ ಹಾಗೂ ಪ್ರಭಾವವನ್ನು ಸಹಾ ತಿಳಿಸಿದ್ದರು.

> ತಸ್ಯೈ ಸಪ್ರದದಾ ಮಂತ್ರಮಾಪ ಧರ್ಮಾನ್‌ನವೇಕ್ಷಯಾ
> ಅಭಿಚಾರಭಿ ಸಂಯುಕ್ತ ಮಭ್ರವೀಚ್ಛೈವ ತೋ ಮುನಿಃ॥ (ಆದಿಪರ್ವ)

ಹೆಂಗಸಿಗೆ ಮಂತ್ರೋಪದೇಶ ಸಲ್ಲದೆಂದು ಎಲ್ಲರು ಹೇಳುತ್ತಿರಲಾಗಿ ಆ ದಿವ್ಯ ಜ್ಞಾನಿ ಆ ಚಿಕ್ಕ ಬಾಲಿಕೆಗೆ ಒಟ್ಟಿಗೆ ಐದು ಮಂತ್ರಗಳನ್ನು ಅದೇಕೆ ಉಪದೇಶಿಸಿದನೋ! ಕುಂತಿ ಬಾಲ್ಯ ಸಹಜವಾದ ಚಾಪಲ್ಯದಿಂದ ಸೂರ್ಯಮಂತ್ರವನ್ನೇ (ಸಂಶ್ರೋಣಿ) ಪರೀ ಕ್ಷೆಗೆ ಗುರಿಮಾಡಿದಳು. ಸೂರ್ಯನ ಸಮಾಗಮದಿಂದ ಆಕೆಯಲ್ಲಿ ಸದ್ಯೋಗರ್ಭ ಉಂಟಾಗಿ ಸಮತೇಜನಾದ ಮಗನನ್ನು ಹೆತ್ತಳು. ಮಂತ್ರವನ್ನು ಪರೀಕ್ಷಿಸಲು ಹೋಗಿ ತಾನೇ ಕಡುಕ್ರೂರವಾದ ಪರೀಕ್ಷೆಗೆ ಒಳಗಾದಳು. ಅನಪೇಕ್ಷಿತವಾದ ಆ ಶಿಶು ವನ್ನು ಅವಳು ಮನೆಗೆ ತೆಗೆದುಕೊಂಡುಹೋಗಲಾರಳು. ಪರಿತ್ಯಜಿಸುವುದಕ್ಕೂ ಮನಸ್ಸು ಒಪ್ಪದು. ಸಹಜ ಕವಚ ಕುಂಡಲಗಳಿಂದ ಕೂಡಿದ ಆ ದಿವ್ಯಶಿಶುವನ್ನು ನೋಡಿ ಅವಳಿಗೆ ಮೋಹವೇ ಉಂಟಾಯಿತು. ಅವಿವಾಹಿತೆಯಾದ ಕುಂತಿ ಅಪವಾದ ಭಯದಿಂದ ಆ ಕೂಸನ್ನು ಚಿನ್ನದೊಂದಿಗೆ ಪೆಟ್ಟಿಗೆಯಲ್ಲಿರಿಸಿ ಗಂಗೆಯಲ್ಲಿ ತೇಲಿಸಿದಳು. ವಿಧಿಯ ಭವಿಷ್ಯತ್ಸಂಕಲ್ಪದಿಂದ ದಿವ್ಯಕವಚ ಕುಂಡಲಯುಕ್ತನಾದ್ದರಿಂದ ಆ ಮಗು ವಿನ ಆ ಪೆಟ್ಟಿಗೆ ಗಂಗೆಯಲ್ಲಿ ಮುಳುಗಲಿಲ್ಲ.

ಇಲ್ಲಿ ವಿವೇಚಿಸತಕ್ಕ ವಿಷಯವೆಂದರೆ ಕರ್ಣನ ಜನನ ಹಾಗೂ ಪರಿತ್ಯಾಗಗಳಲ್ಲಿ ಯಾರದ್ದು ಹೆಚ್ಚು ತಪ್ಪು ? ಅವಿವಾಹಿತೆ~ಅಸ್ವಾತಂತ್ರ್ಯಯಾದ ಬಾಲಕಿಗೆ ಮಂತ್ರ ಗಳನ್ನು ಹೇಳಿದ ದೂರ್ವಾಸ ಭವಿಷ್ಯವನ್ನು ಅರಿಯುವ ಸಾಮರ್ಥ್ಯ ಉಳ್ಳವನಿದ್ದು ನಿಸ್ಸಂತತಿವೊದಗಿದಾಗ ಈ ಮಂತ್ರಗಳು ಫಲಿಸಲೆಂದು ಹೇಳಿದುದು ತಪ್ಪಾಗುವುದೇ ? ಕುಂತಿ ಬಾಲ್ಯ ಚಾಪಲ್ಯದಿಂದ ಮಂತ್ರದ ಪರೀಕ್ಷೆಗೈದಳು. ತನ್ನ ತಪ್ಪನ್ನು ಕ್ಷಮಿಸು ವಂತೆ ಸೂರ್ಯನಲ್ಲಿ ಕೇಳಿಕೊಂಡಳು. ಈ ಬಗೆಯಲ್ಲಿ ಕುಂತಿ ತಪ್ಪುಗಾರಳೇ ? ಕರ್ಣನು ಸುಖವಾಗಿ ಬಾಳುವಂತೆ ಆಗಾಗ ಎಚ್ಚರಿಕೆಯನ್ನು ಹೇಳಿದ ಕವಚಕುಂಡಲಗಳ ದಾನ ದಲ್ಲಿ, ಕುಂತಿ–ಕರ್ಣ ಸಂವಾದದಲ್ಲಿ ಮುಂದಾಗಿ ಎಚ್ಚರಿಸಿದ, ಸೂರ್ಯ ಕರ್ಣನ

ಸಂರಕ್ಷಣೆಗೆ ಬೇರೆಡೆಯನ್ನು ಮಾಡಬಹುದಿತ್ತಲ್ಲವೇ ? ಗಂಗೆಯಲ್ಲಿ ಆ ಪೆಟ್ಟಿಗೆಯನ್ನು ಬೇರೆಡೆಯಲ್ಲಿ ಒಯ್ಯಬಹುದಿತ್ತಲ್ಲವೇ ? ಇವರು ಯಾರೂ ತಪ್ಪುಗಾರರಲ್ಲ ಇವರೆಲ್ಲ ರನ್ನು ಕಣ್ಣುಕಟ್ಟಿಸಿದ 'ವಿಧಿ'ಯ ವಿಲಾಸವೇ ಇದಕ್ಕೆ ಸಪ್ರಧಾನ ಕಾರಣ. ಇವರೆಲ್ಲರು ಕೇವಲ ನಿಮಿತ್ತ ಮಾತ್ರರು. ವಿಧಿಯ ದುರಂತ ವಿಕಟ ನೃತ್ಯಕ್ಕೆ ಕರ್ಣ ರಂಗಭೂಮಿ ಯಾಗಿದ್ದಾನೆ ಎನ್ನಬಹುದು.

ಧೃತರಾಷ್ಟ್ರನ ಸೂತನಾದ ಅತಿರಥನು ಗಂಗೆಯಲ್ಲಿ ತನ್ನ ಭಾಗ್ಯದ ನಿಧಿಯೋ ಎಂಬಂತೆ ತೇಲಿಬರುತ್ತಿರುವ ಪೆಟ್ಟಿಗೆಯನ್ನು ಪಡೆದು ಅದರ ಕದವನ್ನು ತೆರೆಯಲು ಅನುಪಮ ತೇಜಸ್ವಿಯಾದ ಮಗುವನ್ನು ಕಂಡು ಸಂತೋಷಾಧಿಕ್ಯದಿಂದ ಅದನ್ನು ಪತ್ನಿಯಾದ ರಾಧೆಯ ಕೈಗೊಪ್ಪಿಸಿದನು.

ಕರ್ಣನ ನಾಮಾಂತರಗಳು

ಆದಿತ್ಯತನಯ, ಅದಿರಥಿ, ಅರ್ಕಪುತ್ರ, ಆದಿತ್ಯನಂದನ, ರವಿಸೂನು, ಸೌತಿ, ಸೂರ್ಯಜ, ಪೂಷಾತ್ಮಜ ಇತ್ಯಾದಿ ಹೆಸರುಗಳನ್ನು ಸೂರ್ಯನ ಮಗನಾಗಿ ಕರ್ಣ ಪಡೆದ. ಕಾನೀನ ಕನ್ಯೆಯ ಮಗನಾಗಿಯೂ, ಕುಂತಿಸುತ, ಕೌಂತೇಯ ~ ಕುಂತಿಯ ಮಗನಾಗಿಯೂ, ಪಾರ್ಥೇಯ ಪೃಥೆಯನಾಗಿಯೂ ಸೂತ, ಸೂತನಂದನ, ಸೂತ ಪುತ್ರ, ಸೂತತನಯ, ಸೂತಸೂನು, ಸೂತಾತ್ಮಜ ~ ಸೂತನ ಸಾಕುಮಗನಾಗಿಯೂ, ರಾಧೇಯ ~ ರಾಧೇಯಮಗನಾಗಿಯೂ, ಕರ್ಣ-ವೈಕರ್ತನ ~ ಇಂದ್ರನಿಗೆ ತನ್ನ ಸಹಜ ವಾದ ಕವಚವನ್ನು ಬಗೆದುಕೊಟ್ಟದ್ದರಿಂದ ಮತ್ತು ಕರ್ಣಕುಂಡಲಗಳನ್ನು ಹರಿದು ಕೊಟ್ಟದ್ದರಿಂದ ಕರ್ಣ ವೈಕರ್ತನನಾಗಿಯೂ, ಅಂಗೇಶ್ವರ, ಅಂಗರಾಜ ~ ಅಂಗದೇಶದ ಅಧಿಪತಿಯಾಗಿಯೂ, ವಸುನಿಮಿತ್ತದಿಂದ ವಸುಷೇಣನಾಗಿಯೂ, ವಸುನಾಂ ಸಹಜಾತೋಯಂ ವಸುಷೇಣೋ ಭವತ್ವಿತಿ। (ಆದಿಪರ್ವ) ವಸುವರ್ಮಧರಂ ಧೃಷ್ಟ್ವಾ ತಂ ಬಾಲಂ ಹೇಮಕುಂಡಲಂ, ನಾಮಾಸ್ಯ ವಸುಷೇಣೇತಿ ತತಶ್ಚಕ್ರುರ್ದ್ವಿಜಾತಯಃ ವಸುಷೋಣ ಇತಿಖ್ಯಾತೋ ವೃಷ ಇತ್ಯೇವ ಚ ಪ್ರಭು (ವನಪರ್ವ-ಕುಂಡಲಾ ಹರಣ) ವೃಷಹೆಸರಿನ ಮಹತ್ವವನ್ನು ಸ್ವತಃ ಕೃಷ್ಣನೇ ಹೇಳಿದ್ದಾನೆ. ಯಾರು ವೇದ ವನ್ನು ಬಲ್ಲವನೋ, ಸತ್ಯವಾದಿಯೊ, ತಪಸ್ವಿಯೊ, ದಯಾಶೀಲನೋ ಹಾಗೂ ಶತ್ರು ಗಳ ಮೇಲೆ ದಯೆತೋರಿಸುವನೋ ಆತ 'ವೃಷ' ಎಂಬ ಹೆಸರನ್ನು ಹೊಂದುವನು.

> ಬ್ರಹ್ಮಣ್ಯಃ ಸತ್ಯವಾದಿಚ ತಪಸ್ವಿನಿಯತವ್ರತಃ
> ರಿಪುಶ್ವಾಪಿ ದಯಾವಾಂಶ್ಚ ತಸ್ಮಾತ್ ಕರ್ಣೋ ವೃಷಸ್ಮೃತಃ ॥

ಬೃಹಸ್ಪತಿಗೆ ಸಮಾನನಾಗಿ ಬುದ್ಧಿವಂತನು ಹಾಗೂ ಶಾಸ್ತ್ರಪಾರಂಗತನೂ ಆದ ಕಾರಣ ಆತನಿಗೆ 'ಜೀವ' ಅನ್ನುವ ಹೆಸರಿತ್ತು. ಉದ್ಯೋಗ ಪರ್ವದಲ್ಲಿ ಸ್ವತಃ ಕೃಷ್ಣನು ಕರ್ಣನೊಡನೆ ಹೇಳಿದ್ದಾನೆ.

> ತ್ವಮೇವ ಕರ್ಣ ಜಾನಾಸಿ ವೇದವಾದನ್ ಸನಾತನಾಮ್
> ತ್ವಮೇವ ಧರ್ಮಶಾಸ್ತ್ರೇಷು ಸೂಕ್ಷ್ಮೇಷು ಪರಿನಿಷ್ಠಿತಃ॥

ಕರ್ಣನು ಸೂರ್ಯನ ಮಗನಾಗಿ 'ಸೂರ್ಯಪುತ್ರ' ನೆಂದು ಪ್ರಸಿದ್ಧನಾಗಿದ್ದ. ಕರ್ಣನು ತನ್ನ ತೇಜಸ್ಸಿನ ಕಾರಣದಿಂದ 'ಸೂರ್ಯಪುತ್ರ'ಅನ್ನುವ ಹೆಸರನ್ನು ಹೊಂದಿರಬಹುದು. ಇದಕ್ಕೆ ಶಾಸ್ತ್ರಾಧಾರವೇ ಇದೆ. ಅಥರ್ವವೇದದಲ್ಲಿ 'ದೇವಾಃ ಪುರುಷಂ ಆವಿಶಾನ್' ದೇವತೆಗಳು ಪುರುಷನಲ್ಲಿ ಸೇರಿರುತ್ತಾರೆ ಎಂದು. ಕುಂತಿಪುತ್ರನಾಗಿದ್ದರು ಕೂಡ ಸೂತಪುತ್ರ, ರಾಧೇಯ, ಸಾರಥಿಪುತ್ರ ಎಂದು ಪ್ರಸಿದ್ಧನಾಗಿದ್ದ.

ಜ್ಞಾನ ಸಾಧನೆಯಲ್ಲಿ ಕರ್ಣ

ಬಾಲಕನಾದ ಕರ್ಣನು ಪ್ರಾಪ್ತವಯಸ್ಕನಾಗುತ್ತಿದ್ದಂತೆಯೇ ಸಾಕುತಂದೆಯಾದ ಅಧಿರಥನು ದ್ರೋಣರಿಂದ ಅಸ್ತ್ರವಿದ್ಯೆಯನ್ನು ಕಲಿಯುವಂತೆ ವ್ಯವಸ್ಥೆ ಮಾಡಿದನು. ದ್ರೋಣರಿಂದ ಬ್ರಹ್ಮಾಸ್ತ್ರಪಡೆಯಲು ಅಸಮರ್ಥನಾದ ಕರ್ಣ. ನಂತರ ಪರಶುರಾಮರಲ್ಲಿಗೆ ತೆರಳಿ ಬ್ರಹ್ಮಾಸ್ತ್ರವನ್ನು ಉಪದೇಶಿಸುವಂತೆ ಭಿನ್ನವಿಸಿಕೊಂಡನು. ಕರ್ಣನ ಗುಣನಡತೆಗಳಿಂದ ಮುಗ್ಧರಾದ ಭಾರ್ಗವರಾಮರು ಸಂತೋಷಚಿತ್ತರಾಗಿ, ಶಿಷ್ಯನಾಗಿ ಪರಿಗ್ರಹಿಸಿ ಕ್ರಮೇಣ ಬ್ರಹ್ಮಾಸ್ತ್ರವನ್ನು ಉಪದೇಶಿಸುವರು. ಆತ ಮಾಡಿದ ಕ್ಷುಲ್ಲಕ ತಪ್ಪಿಗೆ ಸಮಯದಲ್ಲಿ ಭಾರ್ಗವರಾಮರು ಕಲಿಸಿದ ವಿದ್ಯೆ ಮರೆತುಹೋಗುವಂತೆ ಶಾಪ ಹೊಂದುತ್ತಾನೆ. ಆದರ ವಿಮೋಚನೆ ಮದ್ರಾಧಿಪತಿ ಶಲ್ಯನ ಸಾರಥ್ಯವಿರುವವರೆಗೆ ಕರ್ಣ ಕುರುಕ್ಷೇತ್ರರಣಕ್ಷೇತ್ರದಲ್ಲಿ ಅಜೇಯನಾಗುತ್ತಾನೆ ಎಂದು. ನಂತರ ಕರ್ಣ ಪರಶುರಾಮರ ಆಶ್ರಮದಿಂದದಿಂದ ಹಿಂತಿರುಗುವಾಗ ಅರಿವಾಗದೇ ಮಾರ್ಗಮಧ್ಯದಲ್ಲಿ ಬ್ರಾಹ್ಮಣನೋರ್ವನ ಧೇನುವೊಂದನ್ನು ಕೊಂದ, ತತ್‌ಪರಿಣಾಮವಾಗಿ ಆತನ ರಥಚಕ್ರ ಕುರುಕ್ಷೇತ್ರದಲ್ಲಿ ಹೂತು ಹೋಗುವಂತೆ ಶಾಪಗ್ರಸ್ತನಾದ.

ರಂಗಭೂಮಿ ಪ್ರಸಂಗದಲ್ಲಿ ಕರ್ಣ

ಕರ್ಣ ಕೌರವರ ಕೆಳೆತನದ ಶಿಲ್ಪ ರಮ್ಯವಾಗಿಯೇ ಕೊರೆಯಲ್ಪಟ್ಟಿದೆ, ವ್ಯಾಸ ಭಾರತದಲ್ಲಿ. ರಾಜಪುತ್ರರು ತಾವು ಗಳಿಸಿದ ಶಸ್ತ್ರಾಸ್ತ್ರ ವಿದ್ಯೆಯನ್ನು ತೋರಿಸುವ ಸಂದರ್ಭದಲ್ಲಿ ರಾಧೇಯನ ಗಮನೀಯ ಪ್ರವೇಶ ಜರುಗುತ್ತದೆ. ಕೇವಲ ಪ್ರದರ್ಶನ ರಂಗದ ಮಧ್ಯಕ್ಕೆ ಅವನು ಬಂದು ಪಾರ್ಥ ಪ್ರಕಟಿಸಿದ ನೈಪುಣ್ಯಶತವನ್ನು ತಾನು ತೋರಬಲ್ಲೆನೆಂದು ಸ್ಫುಟವಾಗಿ ಉಚ್ಚರಿಸಿದಕೂಡಲೇ ದುರ್ಯೋಧನನಲ್ಲಿ ಅನ್ಯಾದೃಶವಾದ ಪ್ರೀತಿ ಮೂಡುತ್ತದೆ. ಅವನಿಂದ ಕರ್ಣ ಅಪೇಕ್ಷಿಸುವುದು ಎರಡೇ. ದುರ್ಯೋಧನನೊಡನೆ ಸಖ್ಯ ಹಾಗೂ ಅರ್ಜುನನೊಡನೆ ದ್ವಂದ್ವಯುದ್ಧ. ದ್ವಂದ್ವಯುದ್ಧಕ್ಕೆ ಆಗಮಾಚಾರ್ಯ ಕೃಪನ ಆಕ್ಷೇಪ ಎದ್ದಾಗ, ಕೌರವ ತಕ್ಷಣವೇ ಮೂರ್ಧಾಭಿಷೇಚನೆ ನಡೆಸಿ ಅಂಗರಾಜ್ಯದ ಪಟ್ಟ ಕಟ್ಟುತ್ತಾನೆ.

ತೇಜಸ್ವಿ ಹಾಗೂ ಪರಾಕ್ರಮಿ ಕರ್ಣ

ಸೂರ್ಯಾಂಶದಿಂದ ಹುಟ್ಟಿದ ಕರ್ಣ ಮಹಾಧನುರ್ಧರನು, ತೇಜಸ್ವಿಯೂ

ಆಗಿದ್ದ (ಆದಿಪರ್ವ ೬೩-೯೮) ಸ್ವಪಕ್ಷೀಯ ವೀರರೊಡನೆ ಶತ್ರುಪಕ್ಷದ ಕೃಷ್ಣ, ಅರ್ಜುನ, ಯುಧಿಷ್ಠಿರನೇ ಮೊದಲಾದ ರಥಮಹಾರಥರು ಕೂಡ ಕರ್ಣನ ಕ್ಷಾತ್ರ ತೇಜ ಹಾಗೂ ಶೌರ್ಯ ಪರಾಕ್ರಮವನ್ನು ಮನಸಾರೆ ಹೊಗಳಿದ್ದಾರೆ. ಕೌರವ ಪಕ್ಷದ ಧೃತರಾಷ್ಟ್ರ, ಮಹಾತ್ಮರಾದ ಭೀಷ್ಮಾಚಾರ್ಯರೇ ಮೊದಲಾದ ಪ್ರಮುಖ ಪಾತ್ರಗಳು ಆತನ ಅಲೌಕಿಕವಾದ ರಣಶೂರತೆಯ ವರ್ಣನೆಯನ್ನು ಮಾಡಿದ್ದಾರೆ. "ಕರ್ಣನಿಗೆ ಸಮಾನವಾದ ಧನುರ್ಧರ ಬೇರೋರ್ವನಿಲ್ಲ" ಎನ್ನುವ ಅಭಿಪ್ರಾಯ ಧರ್ಮರಾಯನ ಜೀವನದ ಕೊನೆಯುವರೆಗೂ ಇತ್ತು (ಕರ್ಣಪರ್ವ ೬೬-೨,೪) 'ದನುರ್ಧರರ ಅಗ್ರಣಿ' ಎಂಬುದಾಗಿ ಧರ್ಮರಾಯ ಒಪ್ಪಿಕೊಂಡಿದ್ದ (ಕರ್ಣಪರ್ವ ೪೬-೨೧,೨೨,೨೬) ಕರ್ಣ ವಧೆಯನ್ನೇ ಸರ್ವಶ್ರೇಷ್ಠ ಕರ್ತವ್ಯವೆಂದು ಒಪ್ಪಿಕೊಂಡ. ಕೃಷ್ಣನು ಕೂಡ ಅರ್ಜುನನ ಎದುರಿನಲ್ಲಿ 'ಕರ್ಣಸುದುರ್ಜಯನು' ಎಂದು ಒಪ್ಪಿಕೊಂಡಿದ್ದಾನೆ. (ಕರ್ಣಪರ್ವ ೫೦-೭). ಹಾಗೆಯೇ ಅರ್ಜುನನು ಕೂಡ ಕರ್ಣನ ಪರಾಕ್ರಮವನ್ನು ಧರ್ಮರಾಯನ ಎದುರಿನಲ್ಲಿ ಒಪ್ಪಿಕೊಂಡಿದ್ದಾನೆ (ಕರ್ಣಪರ್ವ ೫೦-೫೮). ಸ್ವತಃ ಮಹಾಭಾರತ ರಚನಾಕಾರರಾದ ವ್ಯಾಸರೇ ಕರ್ಣನ ಶೌರ್ಯ, ಸಾಮರ್ಥ್ಯ, ಸಾಹಸ ಮೊದಲಾದ ಕ್ಷತ್ರಿಯೋಚಿತ ಗುಣಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

ವೀರಯುಗದ ಪ್ರತಿನಿಧಿ ಕರ್ಣ

ಕರ್ಣನು ಶೂರನಾಗಿದ್ದ, ಯುದ್ಧಕುಶಲನೂ ಆಗಿದ್ದ. ಜರಾಸಂಧನನ್ನು ಸೋಲಿಸಿ ಆತನು ಅದ್ಭುತ ಸಾಮರ್ಥ್ಯವನ್ನು ಪ್ರಕಟಪಡಿಸಿದ್ದ. ಓರ್ವನೇ ದಿಗ್ವಿಜಯವನ್ನು ಮಾಡಿ ತನ್ನ ಶೌರ್ಯ ಹಾಗೂ ತೇಜಸ್ಸಿನ ಶಕ್ತಿ ಸಾಮರ್ಥ್ಯದ ನಿಕರವಾದ ಪರಿಚಯವನ್ನು ನೀಡಿದ್ದ. ಮಹಾಭಾರತ ಸಮರದಲ್ಲಿ ದ್ರೋಣರ ಸೇನಾಧಿಪತ್ಯದಲ್ಲಿ ಹಾಗೂ ಸ್ವತಃ ತಾನು ಸೇನಾಧಿಪತಿಯಾಗಿಯೂ ಎರಡು ದಿನಗಳವರೆಗೆ ಉಪಮಾತೀತವಾದ ಪರಾಕ್ರಮವನ್ನು ತೋರಿದ್ದನು. ಕವಚ ಕುಂಡಲ ಹೀನನಾಗಿ ಶಾಪಗ್ರಸ್ತನಾದರೂ ಕೂಡ ಪೌರುಷ ಹಾಗೂ ಆತ್ಮವಿಶ್ವಾಸದ ಸಹಾಯದಿಂದ ಹೋರಾಟವೆಸಗುತ್ತಲೇ ಇದ್ದನು. ಆ ಅದ್ಭುತ ಪರಾಕ್ರಮವು ಆತನ ಪರಾಕ್ರಮದ ದ್ಯೋತಕವೇ ಆಗಿದೆ.

ರಂಗಭೂಮಿ ಪ್ರಸಂಗದಲ್ಲಿ ಅರ್ಜುನನಿಗೆ ಸಮಾನವಾಗಿ ಶಸ್ತ್ರನಿಪುಣತೆಯನ್ನು ಪ್ರದರ್ಶಿಸುವಲ್ಲಿ ಹಾಗೂ ಮಹಾಸಮರದಲ್ಲಿ ಮಕರವ್ಯೂಹರಚನೆ ಅದ್ಭುತರಣ ಕೌಶಲ ತೋರುವಲ್ಲಿ ಆತನ ತೀವ್ರತಮ ಬುದ್ಧಿ ಹಾಗೂ ಪರಾಕ್ರಮ ಸ್ಫುಟವಾಗಿ ವ್ಯಕ್ತವಾಗುತ್ತದೆ.

ದಾನಶೂರಕರ್ಣ ಹಾಗೂ ಆತನ ಸೂರ್ಯೋಪಾಸನೆ

ಭಗವಾನ್ ಸೂರ್ಯನ ಉಪಾಸನೆಯು ಕರ್ಣನ ಜೀವನದ ಪ್ರಧಾನ ಅಂಗವಾಗಿತ್ತು. ಆತನು ಪ್ರಾತಃಕಾಲದಿಂದ ಮಧ್ಯಾಹ್ನದವರೆಗೆ ಗಂಗಾನದಿಯಲ್ಲಿ ಸೂರ್ಯೋಪಾಸನೆಯಲ್ಲಿ ನಿರತನಾಗಿರುತ್ತಿದ್ದನು. ಪ್ರಾಯಶಃ ಸೂರ್ಯಾಂಶದಿಂದ ಹುಟ್ಟಿದ ಕಾರಣ

ಸೂರ್ಯೋಪಾಸನೆಯಲ್ಲಿ ಅಧಿಕ ತಲ್ಲೀನತೆಯನ್ನು, ಆಕರ್ಷಣೆಯನ್ನು ಹೊಂದಿದ್ದ. ಆತನ ಸೂರ್ಯಭಕ್ತಿಯು ಅನನ್ಯವೂ, ಅನ್ಯಾದೃಶವೂ ಆದುದು.

ಸೂತ ಜಾತಿಯಲ್ಲಿ ಸೂರ್ಯೋಪಾಸನೆ ಪ್ರಚಲಿತವಾಗಿತ್ತು. ಸೂತಕುಲದ ಜನರು ಕುಲದೇವತೆಯ ರೂಪದಲ್ಲಿ ಸೂರ್ಯನನ್ನು ಆರಾಧಿಸುತ್ತಿದ್ದರು. ಕರ್ಣನು ಕ್ಷತ್ರಿಯ ಕುಲಾಂಶ ಸಂಭೂತನಾಗಿದ್ದರೂ ಕೂಡ ಸೂತನ ಮೂಲಕ ಪಾಲಿಸಲ್ಪಟ್ಟವನಾಗಿದ್ದನು. ಸೂತಸಂಸ್ಕಾರವನ್ನು ಹೊಂದಿದವನಾಗಿದ್ದ. ಆದ್ದರಿಂದಲೇ ಕರ್ಣ ಸೂತಕುಲ ಧರ್ಮ ಸಂಸ್ಕಾರಕ್ಕನುಗುಣವಾಗಿ ಸೂರ್ಯೋಪಾಸನೆಯನ್ನು ಆದ್ಯ ಕರ್ತವ್ಯವಾಗಿರಿಸಿ ಕೊಂಡಿದ್ದನು. ಕರ್ಣನ ಸೂರ್ಯೋಪಾಸನೆಯು ಅನೇಕ ಸಂದರ್ಭಗಳಲ್ಲಿ ನಿರ್ದೇಶಿಸಲ್ಪಡುತ್ತದೆ.

ಸೂರ್ಯೋಪಾಸನೆಯ ನಂತರ ಆತ ದಾನ ಮಾಡುತ್ತಿದ್ದನು. ಯಾರನ್ನೂ ನಿರಾಶೆಗೊಳಿಸಿ ಹಿಂದಕ್ಕೆ ಕಳುಹಿಸುತ್ತಿರಲಿಲ್ಲ. ಜನರು ಕೇಳಿದ ದಾನ ನೀಡಿದ್ದರಿಂದ 'ದಾನಶೂರ ಕರ್ಣ' ಎಂಬ ಲೋಕೋತ್ತರವಾದ ಕೀರ್ತಿಯನ್ನು ಹೊಂದಿದನು. ಬ್ರಾಹ್ಮಣರನ್ನು ಎಂದೂ ಕೂಡ ಬರಿಗೈಯಲ್ಲಿ ಹಿಂದಕ್ಕೆ ಕಳುಹಿಸುತ್ತಿರಲಿಲ್ಲ (ಆದಿ ಪರ್ವ, ೬೭-೧೪೩).

ದಿಗ್ವಿಜಯದ ನಂತರ ವೈಷ್ಣವಯಾನದ ಸಂದರ್ಭದಲ್ಲಿ ಆತನು ದಾನಕರ್ಮದ ಕಠಿಣ ಪ್ರತಿಜ್ಞೆಯನ್ನೇ ಕೈಗೊಂಡನು. 'ದಾನವೇ ಸಂಸಾರ ಸಾಧನ'~'ದಾನದಿಂ ಕಡೆಯೊಳ್ ಅಚ್ಯುತ ಪದವಿ' ಎಂಬ ಏಕೈಕ ತತ್ವವನ್ನು ಭಾರತದಲ್ಲಿ ಅನುಷ್ಠಾನಗೊಳಿಸಿದ ಏಕೈಕ ವ್ಯಕ್ತಿ ಎಂದರೆ ಕರ್ಣ. ಅವನು ಕೇವಲ ಭೌತಿಕ ಸಂಪತ್ತಿನ ಹಂಚಿಕೆಯಿಂದಲೇ ತೃಪ್ತನಾಗುವುದಿಲ್ಲ. ತನಗಾಗುವ ನಷ್ಟವನ್ನು ಹಸ ಲಕ್ಷಿಸವೇ ಸರ್ವಶಕ್ತಿಗಳನ್ನು ಧಾರೆಯೆರೆಯುತ್ತಾನೆ. ಸಕಲ ಲೋಭ ಮೋಹಗಳನ್ನು ಗೆದ್ದು ನಿರ್ಲಿಪ್ತತೆಯನ್ನು ಸಾಧಿಸಿದ ವ್ಯಕ್ತಿಗೆ ಮಾತ್ರ ಅಂಥ ಸಾಹಸ ಸಾಧ್ಯ. ಮನುಷ್ಯ ಆರ್ಜಿಸಬಹುದಾದ ಯಾವುದೇ ಸಂಪತ್ತಾಗಲಿ, ಬೌದ್ಧಿಕವೋ, ಆರ್ಥಿಕವೋ ಆಧ್ಯಾತ್ಮಿಕವೋ, ಬೇರೆಯವರಿಗೆ ಹಂಚಿಕೆಯಾದಾಗ ಮಾತ್ರ ಶ್ರೇಯಸ್ಸುಂಟಾಗುತ್ತದೆ.

ಆತ್ಮವಿಶ್ವಾಸಪೂರ್ಣ ವೀರತ್ವ

ಕರ್ಣನ ಪಾತ್ರದ ಪ್ರಮುಖ ಗುಣ ಆತ್ಮವಿಶ್ವಾಸಪೂರ್ಣವಾದ ವೀರತ್ವ. ಪ್ರಾರಂಭದಿಂದಲೂ ಕರ್ಣನಿಗೆ ತನ್ನ ಬಲದ ಮೇಲೆ ಪೂರ್ಣ ವಿಶ್ವಾಸವಿದೆ. ರಂಗ ಭೂಮಿ ಪ್ರಸಂಗದಲ್ಲಿ ಅರ್ಜುನನನ್ನು ಎದುರಿಸುವಲ್ಲಿ ಆತನ ವೀರತ್ವವು ವ್ಯಕ್ತವಾಗುತ್ತದೆ. ವ್ಯಾಸರು ಕರ್ಣನ ವ್ಯಕ್ತಿತ್ವವನ್ನು ಈ ರೀತಿ ಬಣ್ಣಿಸಿದ್ದಾರೆ:

ಸಿಂಹರ್ಷಭ ಗಜೇಂದ್ರಾಣಾಂ ಬಲವೀರ್ಯ ಪರಾಕ್ರಮಃ ।
ದೀಪ್ತಿ ಕಾಂತಿ ದ್ಯುತಿಃ ಗುಣೈಃ ಸೂರ್ಯೇಂದು ಜ್ವಲನೋಪಮಃ ॥

(ಆದಿಪರ್ವ ೧೩೫-೪)

ಜಾಗತಿಕ ಸಂಘರ್ಷ

ಅನೇಕ ಮನೋವೈಜ್ಞಾನಿಕ ಕಾರಣಗಳ ನೆಲೆಯಲ್ಲಿ ಮಹಾಭಾರತದ ಕರ್ಣನ ಪಾತ್ರವು ವಿಕಾಸವನ್ನು ಹೊಂದಿದೆ. ರಂಗಭೂಮಿಗೆ ಮೊದಲ ಬಾರಿಗೆ ವೀರತ್ವ ಪ್ರದರ್ಶನಕ್ಕೋಸ್ಕರ ಕರ್ಣ ಬರುತ್ತಾನೆ. ಕರ್ಣನು ವೀರನೂ, ತೇಜಸ್ವಿಯೂ ಹುಟ್ಟಿನಿಂದಲೇ ಕವಚ ಕುಂಡಲ ಹೊಂದಿದವನೂ ಆಗಿದ್ದಾನೆ. ಅಸಮಾನ ಶಕ್ತಿಶಾಲಿ ಯಾಗಿದ್ದರೂ ಕೂಡ ಜಾತಿಹೀನತೆಯ ಕಾರಣ ಕರ್ಣ ತಿರಸ್ಕೃತನಾಗಿದ್ದಾನೆ ಜಾತಿಯ ಕುರಿತ ತಿರಸ್ಕಾರದ ಕಾರಣ ಆತ ಪಾಂಡವರ ಬದ್ಧವೈರಿಯಾದ. ದುರ್ಯೋಧನನ ಅನನ್ಯ ಮಿತ್ರನೂ ಆದನು. ಜಾತಿ ಹಾಗೂ ಕರ್ಮದ ಸಂಘರ್ಷವೇ ಕರ್ಣನ ಮಾನ ಸಿಕ ಸಂಘರ್ಷಕ್ಕೆ ಮೂಲವಾಗಿದೆ.

ಸತ್ಯವಾದಿಯಾದ ಕರ್ಣ

ವ್ಯಾಸರು ಕರ್ಣನನ್ನು ಸತ್ಯಸಾಗರ (ಆದಿಪರ್ವ ೧೦೪-೧೭), ಸತ್ಯಸಂಧೀ (ಉದ್ಯೋಗ ಪರ್ವ ೧೪೨-೨೭), ಸತ್ಯಧೃತಿ (ಉದ್ಯೋಗ ಪರ್ವ ೧೪೪-೩) ಮೊದ ಲಾದ ಶಬ್ದಗಳ ಮೂಲಕ ಹೊಗಳಿದ್ದಾರೆ. ಧೃತರಾಷ್ಟ್ರನು ಆತನನ್ನು 'ಯುಧಿಸತ್ಯ ಪರಾಕ್ರಮಃ' ಎಂದು ಪ್ರಶಂಸಿಸಿದ್ದಾನೆ. ಭೀಷ್ಮ ಕೃಷ್ಣರು 'ಸತ್ಯವಾದಿ', 'ತಪಸ್ವಿ', 'ನಿಯತವ್ರತ' ಮೊದಲಾದ ಶಬ್ದಗಳ ಮೂಲಕ ಗುಣಗಾನ ಮಾಡಿದ್ದಾರೆ (ದ್ರೋಣ ಪರ್ವ, ೧೪೪-೭).

ಮಿತ್ರತ್ವ ಹಾಗೂ ಕೃತಜ್ಞತೆ

ಕರ್ಣನು ತನ್ನ ಸೂತ ಮಾತಾಪಿತೃಗಳ ಬಗ್ಗೆ ಕೃತಜ್ಞನಾಗಿದ್ದಾನೆ. ಅವರನ್ನು ಬಹಳಷ್ಟು ಗೌರವದಿಂದ ಕಂಡಿದ್ದಾನೆ. ತನ್ನ ಜನ್ಮರಹಸ್ಯ ಅರಿವಾದ ಮೇಲೂ ಅತಿರಥ ರಾಧೇಯರ ಕುರಿತಾದ ಭಕ್ತಿ ಗೌರವ ಕಡಿಮೆಯಾಗಲಿಲ್ಲ.

ಶಸ್ತ್ರಾಸ್ತ್ರಕುಶಲತೆ ಹಾಗೂ ಆತ್ಮವಿಶ್ವಾಸ

ಕರ್ಣನು ಶಸ್ತ್ರಾಸ್ತ್ರ ಕುಶಲನಾಗಿದ್ದನು. ಕೌರವ ಪಕ್ಷದಲ್ಲಿ ಧನುರ್ಧರಶ್ರೇಷ್ಠ ನಾಗಿದ್ದನು. ಆತನು ಸಂಪೂರ್ಣವಾಗಿ ವೇದಾಂಗಗಳನ್ನು ಅಧ್ಯಯನ ಮಾಡಿದ್ದನು (ಆದಿಪರ್ವ, ೭೮-೧೪೨). ಕರ್ಣನ ಶಸ್ತ್ರಾಸ್ತ್ರ ಕುಶಲತೆಯು ಅನೇಕ ಪ್ರಸಂಗಗಳಲ್ಲಿ ವ್ಯಕ್ತವಾಗಿದೆ. ಆದ್ದರಿಂದಲೇ ರಾಜ ಯುಧಿಷ್ಠಿರನು ೧೩ ವರ್ಷಗಳವರೆಗೆ ಹಗಲು ರಾತ್ರಿ ಕರ್ಣನ ಕುರಿತಾಗಿ ಚಿಂತಾಕ್ರಾಂತನಾಗಿದ್ದನು. ರಂಗಭೂಮಿಯಲ್ಲಿ ಕರ್ಣನ ಶಸ್ತ್ರಕೌಶಲವನ್ನು ನೋಡಿ ದೂರದೃಷ್ಟಿಯನ್ನಿಟ್ಟುಕೊಂಡ ದುರ್ಯೋಧನ ಆತನನ್ನು ತನ್ನ ಮಿತ್ರನಾಗಿ ಆಯ್ದುಕೊಂಡ ಹಾಗೂ ಅಂಗರಾಜನಾಗಿ ಮಾಡಿದ.

ಕರ್ಣನು ಕಲಿಂಗ ಯುದ್ಧದಲ್ಲಿ ಎಲ್ಲಾ ರಾಜರನ್ನು ಗೆದ್ದು ದುರ್ಯೋಧನನಿಗೆ ಜಯ ಒದಗಿಸಿಕೊಟ್ಟಿದ್ದ. ಮಹಾಬಲಶಾಲಿ ಜರಾಸಂಧನನ್ನು ಕರ್ಣನು ಮಲ್ಲ ಯುದ್ಧದಲ್ಲಿ ಪರಾಜಯಗೊಳಿಸಿದ್ದ. ಜರಾಸಂಧನು ಆತ್ಮಸಂತೋಷದಿಂದ 'ಶ್ರೀಯ

ಸಾನಿರ್ಜಿತವರಂ' 'ಉತ್ತಮರಿಂದ ಸೋಲೇ ಶ್ರೇಯಸ್ಕರವು' ಎಂದು ಕರ್ಣನಿಂದ ಸೋಲೊಪ್ಪಿಕೊಂಡಿದ್ದ.

ಯುಧಿಷ್ಠಿರನು ರಾಜಸೂಯಯಜ್ಞದಲ್ಲಿ ಅಗ್ರಪೂಜೆಗೆ ಕೃಷ್ಣನ ಸ್ಥಾನದಲ್ಲಿ ಕರ್ಣನನ್ನು ಆಯ್ಕೆ ಮಾಡಬೇಕೆಂದು ಚೇದಿರಾಜ ಶಿಶುಪಾಲ ಆಗ್ರಹಪಡಿಸುತ್ತಾನೆ.

ಅಯಂಚ ಸರ್ವರಾಜ್ಞಾಂ ವೈ ಬಲಶ್ಲಾಘೀ ಮಹಾಬಲಃ
ತಯೋನಾತ್ಮಬಲಮಾಶ್ರಿತ್ಯ ರಾಜನೋ ಯುಧಿನಿರ್ಜಿತಾಃ
ತಂಚ ಕರ್ಣಂ ಅತಿಕ್ರಮ್ಯ ಕಥಂ ಕೃಷ್ಣಂ ತ್ವಯಾರ್ಚಿತಃ

ಇಂದ್ರನಿಗೆ ಸಮಬಲನಾದ ಜರಾಸಂಧನನ್ನು ಯುದ್ಧದಲ್ಲಿ ಕೊಂದ ಕರ್ಣನನ್ನು ಸ್ಮರಿಸುವಂತೆ ಭೀಷ್ಮರಿಗೆ ಹೀಗೆ ಹೇಳಿದ :

ಸ್ತುಹಿ ಕರ್ಣಮಿಮಂ ಭೀಷ್ಮ ಮಹಾಚಾಪ ವಿಕರ್ಷಣಾಮ್ ।
ವಾಸವ ಪ್ರತಿಮೋಚೇನ ಜರಾಸಂಧೋ ಅತಿ ದುರ್ಜಯಃ ।
ವಿಜಿತೋ ಬಾಹುಯುದ್ಧೇನ ದೇಹಭೇದಂಚ ಲಕ್ಷಿತಃ ।

ದ್ರೌಪದೀ ಸ್ವಯಂವರದಲ್ಲಿ ಕರ್ಣ

ಭಂಡಾರ್‌ಕರ್ ಸಂಶೋಧಿತ ಮಹಾಭಾರತದಲ್ಲಿ ಕರ್ಣ ಮತ್ಸ್ಯಯಂತ್ರವನ್ನು ಭೇದಿಸುವ ಪ್ರಯತ್ನವನ್ನು ಮಾಡಲಿಲ್ಲವೆಂದು ಇದೆ. ದ್ರೌಪದಿಯು 'ನವರಯಾಮಿ ಸೂತಪುತ್ರಂ' ಎಂದು ನುಡಿದಾಗ ತಾನು ಬಾಣಪ್ರಯೋಗಮಾಡಿ ಮತ್ಸ್ಯಯಂತ್ರವನ್ನು ಭೇದಿಸಿದರೂ ದ್ರೌಪದಿ ತನಗೆ ದಕ್ಕುವುದಿಲ್ಲವೆಂದು ತಿಳಿದು ಸುಮ್ಮನಾಗಿ ಇರಬೇಕು ಎನ್ನುವುದಾಗಿ 'ಚಿತ್ರಶಾಲಾ ಪ್ರೆಸ್‌ನಿಂದ' ಪ್ರಕಾಶಿತವಾದ ಮಹಾಭಾರತದ ಆದಿಪರ್ವ ಅಧ್ಯಾಯ ೧೮೭ ಶ್ಲೋಕ ೨೩ರಲ್ಲಿ ಉಲ್ಲೇಖಿತವಾಗಿದೆ.

ದ್ಯೂತ ಪ್ರಸಂಗದಲ್ಲಿ ಕರ್ಣ

ಭೀಷ್ಮ, ದ್ರೋಣ, ಅಶ್ವತ್ಥಾಮ, ಕೃಪ, ಧೃತರಾಷ್ಟ್ರ, ವಿದುರ, ಗಾಂಧಾರಿ ಇವರೆಲ್ಲ ಇದ್ದ ಸಭೆಯಲ್ಲಿ ದ್ರೌಪದಿಯ ವಸ್ತ್ರಾಪಹರಣ ಹೇಗೆ ಸಾಧ್ಯವಾಯಿತು? ಇದು ನಡೆದಿರಲಾರದು ಎಂಬುದು ಒಂದು ಮತ. ಮೊದಲ ಬಾರಿ ದ್ಯೂತ ನಡೆಯಲೇ ಇಲ್ಲ. ಎರಡನೆಯ ಬಾರಿ ನಡೆದುದು ಎಂಬುದು ಮತ್ತೊಂದು ಮತ. ಕೃಷ್ಣನು ದ್ರೌಪದಿಗೆ ಸೀರೆ ಒದಗಿಸಿದ ಎಂಬುದು ಪವಾಡ, ನಂಬಲರ್ಹವಲ್ಲ–ಎಂಬುದು ಒಂದು ಮತ. ಒಂದು ವೇಳೆ ದ್ರೌಪದಿ ವಸ್ತ್ರಾಪಹರಣ ಜರುಗಿದ್ದರೆ ದುರ್ಯೋಧನನ ಸುಖ ದುಃಖಗಳಲ್ಲಿ ಸಹಭಾಗಿತ್ವವನ್ನು ಹೊಂದುವ ಕರ್ಣ 'ನವರಯಾಮಿ ಸೂತಪುತ್ರಂ' ಎಂದು ಸ್ವಯಂವರ ಕಾಲದಲ್ಲಿ ತಿರಸ್ಕಾರ ಮಾಡಿದ ವಿಚಾರದ ನೆಲೆಯಲ್ಲಿ ಸೇಡಿಗೋಸ್ಕರ ಹಾಗೇ ವರ್ತಿಸಿರಬಹುದು.

ಕವಚ ಕುಂಡಲ ದಾನಪ್ರಸಂಗ

ಪಾಂಡವರ ಹಿತೈಷಿ ದೇವೇಂದ್ರ ಅಜ್ಞಾತವಾಸದ ಅವಧಿಯಲ್ಲಿ ತನ್ನ ಮಗ

ಅರ್ಜುನನ ಅಭ್ಯುದಯಕ್ಕೋಸ್ಕರವಾಗಿ ಕರ್ಣನಿಂದ ಕವಚ ಕುಂಡಲಗಳನ್ನು ದಾನ ರೂಪವಲ್ಲಿ ಪಡೆದುಕೊಂಡ (ಅರಣ್ಯಕ, ೨೮೪-೫). ಕರ್ಣನ ತಂದೆ ಸೂರ್ಯನು ದಾನ ಕೊಡದಿರುವ ಬಗ್ಗೆ ಎಚ್ಚರಿಸಿದ್ದ. ಎಲ್ಲವನ್ನು ಬಲ್ಲವನಾದ ಕರ್ಣ ತನ್ನ ದಾನ ಶೂರತೆಗೆ ಕಳಂಕ ಬರಬಾರದೆಂಬ ಉದ್ದೇಶದಿಂದ ದಾನದ ನಿರ್ಧಾರ ಮಾಡಿದ (ಅರಣ್ಯಕ, ೨೮೪-೧೦-೨೭). ಆದ್ದರಿಂದಲೇ ಸೂರ್ಯೋಪಾಸನೆಯ ನಂತರ ಬ್ರಾಹ್ಮಣ ವೇಷಧಾರಿಯಾದ ಇಂದ್ರನಿಗೆ ತನ್ನ ಕವಚ ಕುಂಡಲಗಳನ್ನು ದಾನಮಾಡಿದ. ಇದ ರಿಂದ ಸಂತುಷ್ಟನಾದ ಇಂದ್ರ ಆತನಿಗೆ 'ಶಕ್ತಿ' ಎನ್ನುವ ಆಯುಧ ನೀಡಿದ. ಈ ದಾನದಿಂದಲೇ ಕರ್ಣ 'ದಾನಶೂರ ಕರ್ಣ' ಅನ್ನುವ ಲೋಕೋತ್ತರವಾದ ಕೀರ್ತಿ ಯನ್ನು ಪಡೆದ.

ಕೃಷ್ಣ-ಕರ್ಣ ಭೇಟಿ ಪ್ರಸಂಗ

ಶ್ರೀಕೃಷ್ಣನು ಕೌರವನ ಆಸ್ಥಾನವನ್ನು ಪ್ರವೇಶಿಸಿ ವಿಶ್ವರೂಪದರ್ಶನಗೈದು ಹಿಂದೇ ಬರುತ್ತಿರಲು ಕರ್ಣನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಅವನು ಕುಂತಿ ಪುತ್ರ ಎಂದು ತಿಳಿಸಿ ಪಾಂಡವರ ಕಡೆ ಸೇರುವಂತೆ ಹೇಳುವನು. ಆಗ ಕರ್ಣ–

ಸೂತೋಹಿ ಮಾಮಧಿರಥೋ ದೃಷ್ಟ್ವೈವಾಭ್ಯಾನಯದ್ಗೃಹಾನ್
ರಾಧಾಯಾಶ್ಚೈವ ಮಾಂ ಪ್ರಾದಾತ್ ಸೌಹಾರ್ದಾನ್ ಮಧುಸೂದನ ।
ತಾಸು ಪುತ್ರಾಶ್ಚ ಪೌತ್ರಾಶ್ಚ ಮಮಜಾತ ಜನಾರ್ಧನ ।
ತಾಸು ಮೇ ಹೃದಯಂ ಕೃಷ ಸಂಜಾತಂ ಕಾಮಬಂಧನಮ್
ನ ಪೃಥಿವ್ಯಾ ಸಕಲಯಾನಸುವರ್ಣಸ್ಯ ರಾಶಿಭಿಃ।
ಹರ್ಷಾತ್ ಭಯಾದ್ವಾಗೋವಿಂದ ಮಿಥ್ಯಾಕರ್ತುಂ ತದುತ್ಸಹೇ ॥

(ಉದ್ಯೋಗಪರ್ವ, ೧೪೪-೫-೬)

ನೀನು, ನನ್ನ ಬಗೆಗಿನ ಪ್ರೀತಿಯಿಂದ ಎಲ್ಲವನ್ನು ಹೇಳುತ್ತಿರುವೆ. ನಾನು ಪಾಂಡುಪುತ್ರ, ಮದುವೆಯ ಮೊದಲು ಕುಂತಿಯು ಸೂರ್ಯನಿಂದ ನನ್ನನ್ನು ಪಡೆದಳು. ಅಧಿರಥನೆಂಬ ಸೂತನು ನನ್ನನ್ನು ಎತ್ತಿಕೊಂಡೊಯ್ದು ಹೆಂಡತಿ ರಾಧೆಗೆ ಇತ್ತನು. ಅವಳೇ ನನಗೆ ತಾಯಿ. ಅಂತಹವಳಿಗೆ ನಾನು ಹೇಗೆ ಕೃತಘ್ನನಾಗಲಿ ?

ನನಗೆ ಸೂತಕುಲದಲ್ಲಿ ಮದುವೆಯಾಗಿ ಮೊಮ್ಮಕ್ಕಳು ಆಗಿದ್ದಾರೆ. ಅವರಲ್ಲಿ ನನ್ನ ಅಂತಃಕರಣ ತುಂಬಿಕೊಂಡಿದೆ. ಇದನ್ನು ಕಡಿದು ಕೊಂಡು ಬರಲಾರೆ. ಎಲ್ಲಾ ಲೋಕದ ಒಡೆತನವನ್ನು ಕೊಟ್ಟರೂ ಬೇಡ. ಸುವರ್ಣರಾಶಿಯನ್ನು ಮುಂದೊಡ್ಡಿದರೂ ನನಗೆ ಆಸೆ ಇಲ್ಲ. ಲೋಭದಿಂದ ಅಥವಾ ಮೋಹದಿಂದ ಇಲ್ಲವೇ ಹೆದರಿಕೆಯಿಂದ ಅಲ್ಲ ದ್ದನ್ನು ಮಾಡಲು ನನಗೆ ಮನಸ್ಸಿಲ್ಲ. ದುರ್ಯೋಧನನಿಗೆ ಕೇಡನ್ನು ಬಗೆಯಲಾರೆ. ಈ ಬಗೆಯ ನಿರ್ಧಾರದ ನುಡಿಗಳೊಂದಿಗೆ ಕೊನೆಗೆ ಕರ್ಣನ ಬಾಯಲ್ಲಿ ಇನ್ನು ಕೆಲವು ಮಾತುಗಳು ಬಂದಿವೆ.

ಯದಿಜಾನಾತಿ ಮಾಂ ರಾಜಾ ಧರ್ಮಾತ್ಮಾ ಸಂಯತೇಂದ್ರಿಯಃ
ಕುಂತ್ಯಾ ಪ್ರಥಮಜಂ ಪುತ್ರಂ ನಸ ರಾಜ್ಯಂ ಗೃಹಿಷ್ಯತಿ ॥
ಪ್ರಾಪ್ಯಚಾಪಿ ಮಹದ್ರಾಜ್ಯಂ ತದಹಂ ಮಧುಸೂದನ ।

ಸ್ಥಿತಂ ದುರ್ಯೋಧನಾಯೈವ ಶಾಶ್ವತೋಽಸ್ತು ಯುಧಿಷ್ಠಿರಃ।
ನೇತಿ ರಾಜ ಧರ್ಮಾತ್ಮ ಶಾಶ್ವತೋಽಸ್ತು ಯುಧಿಷ್ಠಿರಃ।
ನೇತಿ ಯಸ್ಯ ಹೃಷಿಕೇಶೋ ಯೋದ್ಧಾಯಸ್ಯ ಧನಂಜಯಃ॥
(ಉದ್ಯೋಗಪರ್ವ, ೧೪೧–೨೧–೨೨)

ನಾನು ಅಣ್ಣನೆಂದು ಧರ್ಮರಾಯನಿಗೆ ಗೊತ್ತಾದರೆ ಅವನು ತನ್ನ ರಾಜ್ಯವನ್ನು ನನಗೆ ಕೊಡದೇ ಇರಲಾರನು. ಆ ರಾಜ್ಯವು ನನಗೆ ಬಂದರೂ ನಾನು ಅದನ್ನು ದುರ್ಯೋಧನನಿಗೆ ಒಪ್ಪಿಸುವೆನು. ಆದರೆ ಧರ್ಮಾತ್ಮನಾದ ಯುಧಿಷ್ಠಿರನೇ ಶಾಶ್ವತವಾಗಿ ಆಳಲಿ, ಎಲ್ಲಿ ಹೃಷಿಕೇಶ ಕೃಷ್ಣನು ನೇತಾರನಾಗಿರುವನೋ ಅಲ್ಲಿ ನಿಶ್ಚಿತವಾಗಿ ಗೆಲವು ಅವರಿಗೇ.

ಕರ್ಣ ಕುಂತಿ ಭೇಟಿ ಪ್ರಸಂಗ

ಕುಂತಿ ಭೀಷ್ಮ, ದ್ರೋಣರಿಗಿಂತ ಕರ್ಣನ ಮೂಲಕ ತನ್ನ ಮಕ್ಕಳಿಗೆ ಹಾನಿ ಹೆಚ್ಚು ಎಂದು ತಿಳಿದುಕೊಂಡಳು. ಕೃಷ್ಣನ ಆದೇಶದಂತೆ ಹಾಗೂ ಸಲಹೆಯ ಮೇರೆಗೆ ಆತನ ಜನ್ಮಕಥೆಯನ್ನು ಮತ್ತೊಮ್ಮೆ ನೆನೆದುಕೊಂಡು ಕರ್ಣನನ್ನು ಭೇಟಿ ಮಾಡಲು ಭಾಗೀರಥಿಯ ತೀರಕ್ಕೆ ಬಂದಳು. ಕುಂತಿ ಕರ್ಣನನ್ನು ಎದುರಿಗೆ ಹೋಗಿ, ಸಮ್ಮುಖದಲ್ಲಿ ಹೋಗಿ ಭೇಟಿಯಾಗದೆ, ಆತನ ಹಿಂಬದಿಯಲ್ಲಿಯೇ ನಿಂತು ಕಾಲ ನಿರೀಕ್ಷಣೆಯನ್ನು ಮಾಡುತ್ತಿದ್ದಳು. ಗಂಗಾ ತೀರದಲ್ಲಿ ಕರ್ಣನು ಜಪ ಮಾಡುತ್ತಿದ್ದನು. ಕುಂತಿಯು ಆತನ ಹಿಂಬದಿಯಲ್ಲಿ ಹೋಗಿ ನಿಂತಳು. ರಾಜಮಹಿಷಿಯಾದ ಕುಂತಿಯು ಆ ಬಿಸಿಲಿನ ಬೇಗೆಯಿಂದ ಬೆಂದು ಬೆಂಡಾದಳು ಆದರೂ ಅವಳಿಗೆ ತನ್ನ ಕಾರ್ಯ ಸಾಧನೆಗಾಗಿ ಹಾಗೇ ಕಾಯುತ್ತ ಕರ್ಣನು ತನ್ನನ್ನು ಯಾವಾಗ ಹಿಂತಿರುಗಿ ನೋಡುವನೋ ನೋಡಲಿ ಎಂದು ನಿಲ್ಲಲೆ ಬೇಕಿತ್ತು. ಆದರೆ, ಆ ಬಿಸಿಲನ್ನು ಸಹಿಸಲು ಆಗದೆ ಕರ್ಣನು ಹೊದ್ದ ಬಟ್ಟೆಯ ನೆಳಲಲ್ಲಿ ನಿಂತಳು. (ಅತಿಷ್ಠತ್ ಸೂರ್ಯ ತಾಪಾರ್ತ ಕರ್ಣಸ್ಯೋತ್ತರ ವಾಸಸಿ) ಕರ್ಣನು ತನ್ನ ಜಪವು ಮುಗಿದ ಬಳಿಕ ಬಳಿಯೇ ನಿಂತ ಕುಂತಿಯನ್ನು ಕಂಡು ಸೋಜಿಗಗೊಂಡನು. ಅವಳಿಗೆ ಕೈಜೋಡಿಸಿ ನಮಸ್ಕರಿಸಿ ಹೀಗೆಂದನು.

ರಾಧೇಯೋಽಹಮಾಧಿರಥಿ ಕರ್ಣ ತ್ವಮಾಭಿವಾದಯೇ।
ಪ್ರಾಪ್ತಾ ಕಿಮರ್ಥಂ ಭವತಿ ಬ್ರೂಹಿ ಕಿಂ ಕರವಾಣಿತೇ॥
(ಉದ್ಯೋಗಪರ್ವ, ೧೪೫-೧)

ಆಗ ಕುಂತಿ

ಕೌಂತೇಯಃ ತ್ವಂ ನರಾಧೇಯಃ ನತವ ಅಧಿರಥಃ ಪಿತಾ।
ನ ಅಪಿ ಸೂತಕುಲೇ ಜಾತಃ ಕರ್ಣತತ್ ವಿದ್ಧಿ ಮೇವಚ।
ಕಾನೀನ ತ್ವಂ ಮಯಾ ಜಾತಃ – (ಉದ್ಯೋಗಪರ್ವ, ೧೪೫–೨,೫,೬,೧೧,೧೨)

ಆದಕ್ಕೆ ಕರ್ಣನ ಉತ್ತರ

ಧರ್ಮದ್ವಾರಂ ಮಮ ಏತಸ್ಮಾತ್ ನಿಯೋಗಕರಣಾಂ ತವ।
ಅಕರೋತ್ ಮಯಿಯತ್ ಪಾಪಂ ಭವತಿ ಸುಮಹಾತ್ಯಯಂ

ಅಪಾಕೀರ್ಣಃ ಅಸ್ಮಿಯತ್ ಮಾತಃ ತದ್ಯತಃ ಕೀರ್ತಿನಾಶನಮ್
ಅಹಂಚೇತ್ ಕ್ಷತ್ರಿಯಃ ಜಾತಃ ಸಪ್ರಾಪ್ತಃ ಕ್ಷತ್ರಸತ್ಕ್ರಿಯಾಂ—
ಸಮಾಂ ಸಂಭೋದಯಸಿ ಅದ್ಯ ಕೇವಲ ಆತ್ಮಹಿತೈಷಿಣಿ
(ಉದ್ಯೋಗಪರ್ವ, ೧೪೬-೪-೮)

– ಎಲ್ಕೆ ಕ್ಷತ್ರಿಯ ಮಹಿಳೆಯೇ' ನೀನು ಹೇಳಿದಂತೆ ನುಡಿಯುವುದು ನನಗೆ ಧರ್ಮದ ಹಾದಿಯೆಂದು ನಾನು ಬಗೆಯುವುದಿಲ್ಲ. ನಾನು ಹುಟ್ಟುತ್ತಲೇ ನನ್ನನ್ನು ಬಿಸುಟು ನೀನು ಪಾಪವನ್ನು ಮಾಡಿರುವೆ. ತಾಯಿ, ನೀನು ಹಾಗೇ ಎಸೆದು ಬಿಟ್ಟಿರುವುದರಿಂದ ನನ್ನ ಪ್ರಾಣಕ್ಕೂ ಅಪಾಯವಿತ್ತು. ನಿನ್ನ ಆ ಕೃತಿಯು ನನ್ನ ಯಶಸ್ಸು ಕೀರ್ತಿಗಳನ್ನೆಲ್ಲ ಹಾಳು ಮಾಡಿತು. ನಾನು ನಿಜವಾಗಿಯೂ ಕ್ಷತ್ರಿಯನೆ ಇದ್ದರೂ ಕ್ಷತ್ರಿಯರಿಗೆ ಉಚಿತವಾದ ಸಂಸ್ಕಾರಗಳು ನನಗೆ ಲಭಿಸಲಿಲ್ಲ. ಇದಕ್ಕಿಂತಲೂ ಹೆಚ್ಚಿನ ಹಾನಿಯನ್ನು ಯಾವ ಹಗೆಯು ಮಾಡಬಲ್ಲನು ? ಯಾವಾಗ ನೀನು ಕರುಣೆಯನ್ನು ತೋರಬೇಕಾಗಿದ್ದಿತೊ ಆಗ ನೀನು ತೋರಲಿಲ್ಲ. ನಾನು ಸಂಸ್ಕಾರಹೀನನಾಗಬೇಕಾಯಿತು. ಹೀಗಿರುವಾಗ ನೀನು ನನಗೆ ಆಜ್ಞಾಪಿಸುವೆಯೋ ? ಈ ಮೊದಲು ಒಮ್ಮೆಯಾದರೂ ನೀನು ನನ್ನೊಡನೆ ತಾಯಿಯಂತೆ ನಡೆದುಕೊಂಡಿರುವೆಯೋ ಈಗ ಕೇವಲ "ಆತ್ಮಹಿತೈಷಿಣಿ' ಆಗಿ ನನ್ನನ್ನು ಮಾತನಾಡಿಸಲು ಬಂದಿರುವೆ ?

ಕೃಷ್ಣನು ನೇತಾರನಾಗಿರುವಾಗ ಅರ್ಜುನನ ಕೂದಲೆಳೆಯನ್ನು ಕೊಂಕಿಸುವುದಕ್ಕೂ ಯಾರಿಂದಲೂ ಸಾಧ್ಯವಿಲ್ಲ. ಇವರಿಬ್ಬರೂ ಇರುವಲ್ಲಿ ಅಂಜದಗಂಡುಗಲಿಗಳಾರು ? ಇಂತಹ ಹೊತ್ತಿನಲ್ಲಿ ನಿಮ್ಮ ಪಕ್ಷಕ್ಕೆ ಬಂದರೆ ನನ್ನನ್ನು 'ಜೀವಗಳ್ಳ' ಎಂದು ಲೋಕ ನಗದೆ ? ನನಗೆ 'ವೀರ' ಎಂದು ಯಾರು ತಾನೆ ಹೇಳಬಹುದು ? ಅಲ್ಲದೆ ನನ್ನನ್ನು ಆದರ ಸತ್ಕಾರಗಳಿಂದ ನಡೆಸಿಕೊಂಡು ಎಲ್ಲ ಬಗೆಯ ಸುಖದಲ್ಲಿ ಇರಿಸಿದ ಒಡೆಯನ ಜೋಳಕ್ಕೆ ಹೇಗೆ ತಾನೇ ತಿರುಗಿ ಬೀಳಲಿ ? ಭತ್ಯಪಿಂಡಾಹಾರಿಯಾಗಲು ನನಗೆ ಹೇಳಬೇಡ. ನಿನ್ನನ್ನು ನೋಸಗೊಳಿಸಲಾರೆ. ಪಾಂಡವರೊಡನೆ ನನ್ನ ಶಕ್ತಿ ಇದ್ದಷ್ಟು ಹೋರಾಡುವುದು ನನ್ನ ಕರ್ತವ್ಯವಾಗಿದೆ. ನಾನು ನಿನ್ನ ಮಾತನ್ನು ಕೇಳಲಾರೆ. ಆದರೂ ನಿನ್ನ ಕೇಳಿಕೆ ತೀರ ವ್ಯರ್ಥವಾಗಲಾರದು.

ಅರ್ಜುನನನ್ನು ಉಳಿದ ನಾಲ್ವರನ್ನು ನಾನು ಕಾಳಗದಲ್ಲಿ ಎದುರಿಸಿ ಸಹಜಕೊಲ್ಲಬಹುದಾದ್ದರೂ, ಅವರ ಗೋಜಿಗೆ ಹೋಗುವುದಿಲ್ಲ. ನಾನು ಅರ್ಜುನನೊಬ್ಬನೊಡನೆ ಕಾದುವೆನು. ಅರ್ಜುನನನ್ನು ಕೊಂದರೆ ಅಥವಾ ಅವನಿಂದ ಕೊಲ್ಲಲ್ಪಟ್ಟರೆ ಅದರಲ್ಲಿ ಶ್ರೇಯಸ್ಸಿದೆ. ಕೀರ್ತಿಯಿದೆ. ಕುಂತಿಯೇ ! ಅರ್ಜುನನು ಮಡಿದರೆ ನಾನು ಸಹಿತ ನಿನಗೆ ಐವರು, ನಾನು ಸತ್ತು ಅರ್ಜುನ ಉಳಿದರೆ ಆ ಐವರು. ಅಂತು ಐವರು ಮಕ್ಕಳು ಉಂಟೇ ಉಂಟು. (ನಿರರ್ಜುನಾಃ ಸಕರ್ಣವಾ ಸಾರ್ಜುನಾ ವಾ ಹತೇ ಮಯಿ)

ಘಟೋತ್ಕಚವಧ ಪ್ರಸಂಗದಲ್ಲಿ ಕರ್ಣ

ದ್ರೋಣರ ಸೇನಾಪತಿತ್ವದಲ್ಲಿ ಕರ್ಣ ಸಕ್ರಿಯವಾಗಿ ಪಾಲ್ಗೊಂಡ. ಆತನು

ಅದ್ಭುತ ಪರಾಕ್ರಮವನ್ನು ಮೆರೆದನು. ಕರ್ಣನ ಪರಾಕ್ರಮವನ್ನು ಕೃಷ್ಣ, ಅರ್ಜುನ, ಯುಧಿಷ್ಠಿರನೇ ಮೊದಲಾದವರು ಪ್ರಶಂಸಿಸಿದ್ದಾರೆ.ಆದ್ದರಿಂದ ಘಟೋತ್ಕಚನನ್ನು ರಾತ್ರಿಯ ಯುದ್ಧದಲ್ಲಿ ಕರ್ಣನನ್ನು ಎದುರಿಸುವಂತೆ ಪ್ರೇರೇಪಿಸಿದ. ಕರ್ಣ ಇಂದ್ರದತ್ತವಾದ ಶಕ್ತ್ಯಾಯುಧದಿಂದ ಆತನನ್ನು ವಧಿಸಿ ಕೌರವನ ಆತಂಕವನ್ನು ದೂರಮಾಡಿದ.

ಸೇನಾಪತಿ ಕರ್ಣ

ಕುರುಸೇನೆಯ ಸೇನಾಧಿಪತಿಯಾದ ಚಾಪವಿದ್ಯಾಗುರುಗಳಾದ ದ್ರೋಣರು ಮಡಿಯಲಾಗಿ ದುರ್ಯೋಧನನು ಕರ್ಣನಿಗೆ ವೀರಪಟ್ಟವನ್ನು ಕಟ್ಟುವನು. ಕರ್ಣನು ಕೌರವನಿಗೆ ಗೆಲವು ತರಬೇಕೆಂದು ಆವೇಶದಿಂದ ಹೋರಾಡುವನು. ಆ ಆವೇಶದಲ್ಲಿ ತನ್ನೊಡನೆ ಹೋರಾಡಲು ತಕ್ಕವರಲ್ಲವೆಂದು ಬಗೆದ ಯುಧಿಷ್ಠಿರ, ಭೀಮ, ನಕುಲ ಹಾಗೂ ಸಹದೇವರೊಡನೆಯೂ ಕರುಣೆ ತೋರದೆ ಕಾದಿ, ಅವರನ್ನು ಕೊಲ್ಲುವುದರಲ್ಲಿದ್ದನು. ಆಗ ತಾಯಿಗೆ ಕೊಟ್ಟ ಭಾಷೆಯೂ ನೆನಪಿನಲ್ಲಿ ಇದ್ದ ದೆಸೆಯಿಂದಲಾಗಿ ಯುಧಿಷ್ಠಿರ, ಭೀಮ, ನಕುಲ ಹಾಗೂ ಸಹದೇವರನ್ನೂ ಘಾಸಿಗೊಳಿಸಿದನೇ ಹೊರತು ಕೊಲ್ಲಲಿಲ್ಲ. (ಕರ್ಣಪರ್ವ, ೬೬–೧೫–೩೧)

ಕರ್ಣಾರ್ಜುನ ಕಾಳಗ

ಅವಾರ್ಯವೀರ, ಅನಿವಾರಿತ ಪರಾಕ್ರಮಿಯಾದ ಕರ್ಣ ಒಂದು ಉಗ್ರಶರವನ್ನೂ ಅರ್ಜುನನ ಕೊರಳಿಗೆ ಹೂಡುವನು. ಆದರೆ ಶಲ್ಯನು ಆತನಿಗೆ ಎಚ್ಚರಿಸಿ ಎದೆಗೆ ಹೂಡಲು ಹೇಳುವನು. ಒಮ್ಮೆ ಹೂಡಿದ ಬಾಣವನ್ನು ಬದಲಿಸಿ ಹೊಡೆವ ಅಧರ್ಮಯುದ್ಧವನ್ನು ತನ್ನಂತಹವರು ಮಾಡಲಾರರು ಎಂದು ಶಲ್ಯನ ಮಾತನ್ನು ಕರ್ಣನು ತಿರಸ್ಕರಿಸುವನು. ಕೃಷ್ಣನು ಅರ್ಜುನನ ತೇರನ್ನು ಐದು ಬೆರಳು ಕೆಳಗೆ ಒತ್ತಿ ಕರ್ಣನ ಆ ಉಗ್ರಶರದ ಗುರಿಯನ್ನು ತಪ್ಪಿಸುವನು. ಆ ಬಾಣವು ಕಿರೀಟಕ್ಕೆ ಮಾತ್ರ ತಾಗುವುದು.ಆಗ ಆ ನಾಗಬಾಣವು (ಅಶ್ವಸೇನೆ) ಕರ್ಣನಲ್ಲಿ ಮರಳಿ ಬಂದು ಬೇಡಿಕೊಳ್ಳುವುದು; "ಕರ್ಣನೇ ನೀನು ನನ್ನನ್ನು ಇನ್ನೊಮ್ಮೆ ತೊಡು" ಎಂದು. ಆಗ ಕರ್ಣನು ನುಡಿದ "ಎಲೈ ನಾಗನೇ! ರಣರಂಗದಲ್ಲಿ ಕರ್ಣನು ಹೆರವರ ಬಲದಿಂದ ಗೆಲ್ಲಲು ನಿಂತಿಲ್ಲ. ಒಬ್ಬ ಅರ್ಜುನನ ಮಾತೇಕೆ? ನೂರು ಅರ್ಜುನರನ್ನು ಕೊಲ್ಲಬಹುದಾಗಿದ್ದರೂ ಕರ್ಣನು ಎರಡುಬಾರಿ ಹೂಡಲಾರನು. ನನ್ನ ಬೇರೆ ಉಗ್ರ ಬಾಣಗಳಿವೆ. ಮೇಲ್ತರಗತಿಯ ಯತ್ನವಿದೆ! ಸಾಕಷ್ಟು ರೊಚ್ಚಿದೆ."

ಮುಂದೆ ಸ್ವಲ್ಪ ಕಾಲದಲ್ಲಿ ಕರ್ಣನ ತೇರು ನೆಲದಲ್ಲಿ ಸಿಕ್ಕಿಬೀಳುವುದು. ಕರ್ಣನು ದುಃಖಿತನಾಗಿ ಅರ್ಜುನನಿಗೆ ಕ್ಷಣಕಾಲ ತಡೆಯ ಹೇಳುವನು. ಅಶಸ್ತ್ರರು, ಸಾಧನ ರಹಿತರಾದವರ ಮೇಲೆ ಬಾಣಗಳನ್ನು ಎಸೆಯುವುದು ಧರ್ಮವಲ್ಲವೆಂದು ತಿಳಿಸುವನು.

> ತ್ವ ಶೂರತಮೋ ಲೋಕೇ ಸಾಧುವೃತ್ತಶ್ಚ ಪಾಂಡವ ।
> ಅಭಿಜ್ಞೋ ಯುದ್ಧಧರ್ಮಾಣಾಂ ತಸ್ಮಾತ್ ಕ್ಷಣ ಮುಹೂರ್ತಕಮ್ ॥

ಆಗ ಕೃಷ್ಣನು ಅರ್ಜುನನಿಗೆ ‘ಅಭಿಮನ್ಯುವಧಾವೃತ್ತಾಂತ’ವನ್ನು ನೆನಪಿಸಿ ಕರ್ಣನನ್ನು ಕೊಲ್ಲುವಂತೆ ಆದೇಶಿಸುವನು. ಕೆರಳಿದ ಅರ್ಜುನ ಅಂಜಲಿಕಾಸ್ತ್ರವನ್ನು ಪ್ರಯೋಗಿಸಿ ಕರ್ಣನನ್ನು ಸಂಹರಿಸುವನು.

ಕರ್ಣನ ಉತ್ತರ ಕ್ರಿಯೆ

ಪಾಂಡವರು ಎಲ್ಲಾ ಮಡಿದ ಯೋಧರೊಡನೆ ಕರ್ಣನ ದಹನ ಸಂಸ್ಕಾರವನ್ನು ನಿರ್ವಹಿಸಿದರು. ಮುಂದೆ ಪಾಂಡವರು ಮಡಿದವರಿಗೆ ತಿಲಾಂಜಲಿ ನೀಡಲು ನದಿಯನ್ನು ಸಮೀಪಿಸಲಾಗಿ ಕುಂತಿ ಕರ್ಣನ ಜನ್ಮರಹಸ್ಯದ ವಿಚಾರವನ್ನು ಅರುಹಿದಳು. ಶೋಕಾಕುಲನಾದ ಯುಧಿಷ್ಠಿರನು ಕುಂತಿಯನ್ನು ದೋಷಿ ಎಂದು ಆರೋಪಿಸಿದು (ಸ್ತ್ರೀಪರ್ವ ೨೭-೭ ರಿಂದ ೨೦). ಆದರೆ ಭೀಮನು ಕರ್ಣನ ಶ್ರಾದ್ಧ ಮಾಡುವುದಕ್ಕೆ ಸಿದ್ಧನಾಗಿ ಇರಲಿಲ್ಲ. ಕುಂತಿಯೇ ಸ್ವತಃ ಕರ್ಣನ ಶ್ರಾದ್ಧ ಮಾಡಬೇಕೆಂದು ಭೀಮ ಆಗ್ರಹ ಪಡಿಸಿದ. (ಶಾಂತಿ ಪರ್ವ ಅಧ್ಯಾಯ, ೭–೧೭).

ಎರಡು ಅಪ್ರಕಟಿತ ಶತಕಗಳು

ಎಸ್. ಶಿವಣ್ಣ

೧. ನಂಜುಂಡೇಶ್ವರ ಶತಕ

ನಂಜುಂಡೇಶ್ವರ ಶತಕದ ಕರ್ತೃ ಅಜ್ಞಾತ. ಇದರಲ್ಲಿ ೧೦೫ ಕಂದಗಳಿವೆ. ಮೈಸೂರು ಜಿಲ್ಲೆ ನಂಜನಗೂಡಿನ ಅಧಿದೈವ ನಂಜುಂಡೇಶ್ವರನ ಸ್ತುತಿ ಕೃತಿಯ ವಸ್ತು. ಕವಿ ಕೃತಿಯ ಆದಿ ಅಂತ್ಯಗಳಲ್ಲಿ ತನ್ನ ಬಗೆಗೆ ಏನನ್ನೂ ತಿಳಿಸಿಲ್ಲ. ಪ್ರತಿ ಕಂದವೂ 'ಶಿವನಂಜುಂಡಾ' ಅಥವಾ 'ಸಾಂಬಶಿವ ನಂಜುಂಡಾ' ಎಂಬ ಅಂಕಿತದೊಡನೆ ಮುಗಿಯುತ್ತದೆ. ಕೃತಿ ರಚನಾ ಕಾಲ ಸುಮಾರು ಹದಿನೇಳು/ಹದಿನೆಂಟನೆಯ ಶತಮಾನಗಳಿರಬಹುದೆಂದೆನಿಸುತ್ತದೆ. ಈ ಬಗೆಗೆ ಖಚಿತವಾಗಿ ತಿಳಿಸಲು ಆಧಾರಗಳಿಲ್ಲ. ಕೃತಿ ಓಲೆಪ್ರತಿಯಲ್ಲಿದ್ದು ಗರಿಗಳು ತ್ರುಟಿತವಾಗಿದೆ. ಇದರ ಪ್ರತಿಯೊಂದು ಬೆಂಗಳೂರು ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ ಕೇಂದ್ರ'ದ ಸಂಗ್ರಹದಲ್ಲಿದೆ.

ಇಲ್ಲಿನ ಕೆಲವು ಕಂದಗಳು:

ಶ್ರೀಕಂಠ ಶಿವಮಹದೇಶ್ವರ
××ಪಾರ್ವತಿರಮಣ ಅಷ್ಟ×××
××ಶ್ರಿತಜನರಕ್ಷ ಈಶ
××ಬರವನು ಕೊ×ಸಲಹೊ ಶಿವನಂಜುಂಡಾ ॥ (೧)

ಸರ್ವೋತ್ತಮ ಸರ್ವೇಶ್ವರ
ಸರ್ವಗುಣಾತೀ[ತ]×××ಸುರೇಶ
ಸರ್ವ ಲೋಕೇಶ ಶುಭಕರ
ಸರ್ವಾಂ[ತರ್ಯಾ]ಮಿ ಸಾಂಬಶಿವ ನಂಜುಂಡಾ (೪)

ಗರಳಪುರದೊಳಗೆ ನೆಲಸಿ[ಯೆ]
ನರರಿಗೆಯಿಷ್ಟಾರ್ಥ ಸಿದ್ಧಿ ನಡೆಸುವ ನೀನೆಂ
ದರ ಸುರರ ಪೊರೆವೆ ದಯದಲಿ
ಸುರವ [ಂದ್ಯವ] ರೇಣ್ಯ ಸಾಂಬಶಿವ ನಂಜುಂಡಾ ॥ (೧೬)

ಭವರೋಗ ವೈದ್ಯ ಭಕ್ತರ
ಭವವನು ಪರಿಹರಿ[ಸಿ] ಭೋಗ ಭಾಗ್ಯವ ನೀವೆಯೊ
ನಿಗಮ ಸಂಚಾರ ನೀನೈ
ಸುಗುಣಾಕರ ಸಾಂಬಮೂರ್ತಿ ಶಿವ[ನಂ]ಜುಂಡಾ ॥ (೧೭)

ಸಿರಿವುಂಟಾದರೆ ನಂಟರು
ಪರಿಪರಿಯಲಿ ಬಂಧುಬಳಗ ಬರುತಲೆ ಇಹರೈ

ಸಿರಿ ತಪ್ಪಿದಾಗ ನೋಡರು
ಪರಮೇಶನೆ ಸಾಂಬಮೂರ್ತಿ ಶಿವನಂಜುಂಡಾ ॥ (೯೦)
ವಿಶ್ವಮಯ ವಿಶ್ವದೂರನೆ
ವಿಶ್ವಾತ್ಮನೆ ವಿಶ್ವಭವನೆ ವಿಶ್ವಾಧಾರಾ
ವಿಶ್ವದೊಳಹೊರಗು ನೀನೇ
ಶಾಶ್ವತ ಸಿದ್ಧಾಂತ ಸಾಂಬ ಶಿವನಂಜುಂಡಾ ॥ (೯೭)
ಪರಮಾನಂದ ಸಪೂಜ್ಯನೆ
ಪರಮಾತ್ಮ ಪರೇಶ ಪರಮಪಾವನ ಚರಿತಾ
ದುರಿತವಿನಾಶನ ಹರನೇ
ಸಿರಿ ಸಂಪದ[ವಿ]ತ್ತು ಸಲಹೊ ಸಿರಿನಂಜುಂಡಾ ॥ (೯೯)
ಆಗಜೆಯ ಅರಸನೆ ಸದ್ಗುರು
ಭಗನೇತ್ರನೆ ಭಕ್ತವರದ ಭಾಗವತಪ್ರಿಯ
ದುರಿತ ವಿನಾಶಕ ಹರನೇ
ಸುಗುಣಾಕರ ಸಾಂಬಮೂರ್ತಿ ಶಿವನಂಜುಂಡಾ ॥ (೧೦೦)
ಗಂಗಾಧರ ಗೌರೀವರ
ಅಂಗಜಮದ ಭಂಗ ವೃಷಭ ತುರಂಗ ಶುಭಾಂ[ಗ]
ಭೃಂಗೀಶನರ್ತನಪ್ರಿಯ
ಸಂಗೀತ ವಿಲೋಲ ಸಾಂಬಶಿವ ನಂಜುಂಡಾ ॥ (೧೦೫)

೨. ಗಂಗಾಧರ ಶತಕ

'ಗಂಗಾಧರ ಶತಕ'ದ ಕರ್ತೃ ಅಜ್ಞಾತ. ೧೦೦ ಕಂದಗಳಲ್ಲಿದ್ದು ಪ್ರತಿಕಂದವೂ 'ಶಿವಗಂಗೇಶಾ' ಎಂದು ಮುಗಿದಿದೆ. ಕೃತಿವಸ್ತು ಶಿವಗಂಗೆಯ ಬೆಟ್ಟದ ಮೇಲಿನ ಗಂಗಾಧರೇಶ್ವರ ಸ್ತುತಿ. ಕೃತಿಯ ಆದ್ಯಂತ್ಯಗಳಲ್ಲಿ ಕೃತಿಕಾರ ತನ್ನ ಬಗೆಗೆ ಏನನ್ನೂ ತಿಳಿಸಿಲ್ಲ. ಈ ಶತಕದ ರಚನಾಕಾಲ ಸುಮಾರು ಹದಿನೇಳು/ಹದಿನೆಂಟನೆಯ ಶತಮಾನಗಳಿರಬಹುದಾಗಿದೆ.

ಕೃತಿಯಲ್ಲಿನ ಕೆಲವು ಕಂದಗಳು:

ಗಂಗಾಧರ ಗೌರೀವರ
ಮಂಗಳಮಯಮೂರ್ತಿಲಿಂಗ ಕರುಣಾಕರ ಜಯ
ಗಂಗೇಶ ನಿನ್ನ ನಂಬಿದೆ
ಗಂಗಾಧರ ನೋಡಿ ಸಲಹು ಶಿವಗಂಗೇಶಾ ॥ (೧)
ಶ್ರೀರಮಣನಣ್ಣನಯ್ಯನ
ಕಾರುಣ್ಯದ ಸುತೆಯ ಸುತನ ಪಿತಸಿಗೆಪ್ರೊಲಿದನೆ
ಧೀರನೆ ರಕ್ಷಿಸು ಜಗವನು
ವಾರಿಜಸಖನೇತ್ರ ಈಶ ಶಿವಗಂಗೇಶಾ ॥ (೨)

ಕಮಲಾರಿ ವೈರಿವೈರಿಯ
ಕ್ರಮದಿಂದಲಿ ಏರಿಬಸಪ್ಪನಾತನ ಪಡೆದನ
ರಮಣಿಗೆ ವಂದಿಸಿ ಶತಕವ
ಸುಮನಸದಿಂ ಪೇಳ್ವೆನೀಶ ಶಿವಗಂಗೇಶಾ ॥ (೬)
ಠಣಠಣನೆ ಹೊಳೆವ ಮಣಿಯನು
ಪ್ರಣುತರದಿಂ ಕದ್ದನೆಂದು ಕಪಟವ ತಾಳ್ದಿರೆ
ರಣದೊಳು ಕಾದಿಯೆ ರತ್ನವ
ಗುಣದೊಳು ತಂದಿತ್ತೆ ಈಶ ಶಿವಗಂಗೇಶಾ ॥ (೧೭)
ಢಮರುಗವ ಧರಿಸಿದಾತನ
ರಮಣಿಯ ನಂದನನ ಏರಿಬಪ್ಪನ ಅಶನನ
ಕ್ರಮದಿಂದ ಶಯನ ಮಾಳ್ಪಗೆ
ಉಮೆಯರಸನೆ ಒಲಿದೆ ಈಶ ಶಿವಗಂಗೇಶಾ ॥ (೧೯)
ಕಡಲಸುತೆಯೊಡನೆ ಜನಿಸಿದ
ಕಡುಚಲುವನ ಮಡದಿಯರ ಸ್ತನ್ಯಪಾನವ ಮಾಡಿಯೆ
ಷಣ್ಮುಖನೆ ಆದ ದೇವನ
ಪಡೆದನೆ ಸಲಹೆನ್ನನೀಶ ಶಿವಗಂಗೇಶಾ ॥ (೯೨)
ಸುರಪತಿಯ ವೈರಿವೈರಿಯ
ನೆರೆ ಚೆಲ್ವ ಕಂಡು ಕಾಮಿಸಿ ಕರ್ನವ ಪೀವಿದ
ತರುಣಿಯ ತಂದೆಯ ಸುತನಿಗೆ
ವರಮಿತ್ರನು ಆದೆ ಈಶ ಶಿವಗಂಗೇಶಾ ॥ (೯೬)
ಪುರದಹ[ನ] ಮಾಡಿದೈಯ್ಯನ
ವರಸಖನೊಳು ಜನಿಸಿದವನ ಅಣ್ಣನ ಜನನಿಯ
ನೆರೆತಪಕೆ ಅರ್ಧದೇಹವ
ಕರುಣದಿವೊಲಿದಿತ್ತೆ ಈಶ ಶಿವಗಂಗೇಶಾ ॥ (೯೮)
ಶ್ರುತಿಕರ್ತರ ಪಿತನ ರಮಣಿಯ
ಅತಿಶಯದಿಂ ಪಡೆವನಾತ್ಮಜನರಿಯ ಸಖನ
ಖತಿಯಿಂದಲಿ ನುಂಗಿದಾತನ
ಹಿತದಿಂದಲಿ ಧರಿಸಿದೀಶ ಶಿವಗಂಗೇಶಾ ॥ (೯೯)
ಯುಕ್ತಿಯ ಹೆಚ್ಚಿನ ಶಕ್ತಿಯ
ಭಕ್ತಿಯಲಿಂ ನಿಮ್ಮ ಪದ[ವ] ಪೂಜೆಯಮಾಡಲು
ಪೂಜೆಗೆ ಮೆಚ್ಚಿಯೆ ನಿಜ[ದಿಂ]
ಮುಕ್ತಿಯು[ನುಂ] ಕೊಡುವೆ ಈಶ ಶಿವಗಂಗೇಶಾ ॥ (೧೦೦)

ಕನಕದಾಸರ ಭಾಷಾಪ್ರಯೋಗ

ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ

"ದಾಸರೆಂದರೆ ಪುರಂದರ ದಾಸರಯ್ಯ" ಎಂದು ವ್ಯಾಸರಾಯರೇ ಘೋಷಿಸಿದ್ದರೂ ಕನಕದಾಸರ ಮೌಲಿಕತೆಯೇನೂ ಕಡಿಮೆಯಾಗುವುದಿಲ್ಲ. ಬಹುಶಃ ಪುರಂದರ ದಾಸ ಪರವಾದ ಸ್ತುತಿಯೆಂದು ಅದನ್ನು ಗಮನಿಸುವುದು ಸೂಕ್ತ. ಏಕೆಂದರೆ ದಾಸ ಸಾಹಿತ್ಯದ ಎರಡು ಕಣ್ಣುಗಳು ಎಂದರೆ ಪುರಂದರದಾಸರು ಹಾಗೂ ಕನಕದಾಸರು ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಕನಕದಾಸರು ದಾಸ ಪರಂಪರೆಯೇ ಅಲ್ಲದೆ ಅದರ ಹೊರಗೂ ವ್ಯಾಪಿಸಿಕೊಳ್ಳಬಲ್ಲ ಪ್ರತಿಭೆಯುಳ್ಳವರು. ಅದಕ್ಕೆ ಕಾರಣ ಕನಕದಾಸರು ಕೀರ್ತನೆಗಳನ್ನಷ್ಟೇ ಬರೆಯದೆ ಇತರ ಸಾಹಿತ್ಯ ಪ್ರಕಾರಗಳಲ್ಲೂ ಕೈಯಾಡಿಸಿದ ಪ್ರತಿಭಾನ್ವಿತರು. ಮೋಹನ ತರಂಗಿಣಿ ಮಹಾಕಾವ್ಯವನ್ನು, ರಾಮಧಾನ್ಯ ಚರಿತೆ ಎಂಬ ಅತ್ಯಂತ ಸ್ವತಂತ್ರ ಜಾನಪದೀಯ ಕಥಾವಸ್ತುವನ್ನೊಳಗೊಂಡ ಕಿರು ಕಾವ್ಯವನ್ನೂ, ನಳಚರಿತೆ ಎಂಬ ಕಥನಾತ್ಮಕ ಕಾವ್ಯವನ್ನೂ, ಹರಿಭಕ್ತಿಸಾರ ಎಂಬ ಕೃತಿಯನ್ನೂ ರಚಿಸಿದ್ದಾರೆ. ಈ ಎಲ್ಲ ಕೃತಿಗಳು ಕನ್ನಡ ಭಾಷೆಯ ಪ್ರಯೋಗದ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾದುವೂ ಆಗಿವೆ.

ಯಾವನೇ ಕವಿ ನಮಗೆ ದಕ್ಕುವುದು ಭಾಷೆಯ ಮೂಲಕವಾಗಿಯೇ. ಹಾಗೆ ದಕ್ಕುವಾಗ ಪ್ರಮುಖವಾಗಿ ಎರಡು ಬಗೆಯ ಸಾಧನೆಗಳು ಸಾಧ್ಯ. ಒಂದು, ಭಾಷೆಯ ಮಹಾಪ್ರವಾಹವನ್ನು ತನ್ನ ಕಾಲದ ಭಾಷಾದ್ರವ್ಯದಿಂದ ಸಮೃದ್ಧಗೊಳಿಸುತ್ತ ಆ ಭಾಷೆಯ ಅನಂತ ಸ್ಮೃತಿಗಳನ್ನು ಬಳಸಿಕೊಂಡು ಶ್ರೀಮಂತಗೊಳಿಸುವುದು. ಹೀಗೆ ಮಾಡುವಾಗ ತನ್ನ ಕಾಲಕ್ಕಾಗಲೇ ಒಂದು ಕವಿ ಸಮುದಾಯ ಹಾಗೂ ಜನಾಂಗ ಬಳಸಿ ಬೆಳೆಸಿದ್ದ ಭಾಷಾ ಸಾಧನೆಗಳನ್ನೆಲ್ಲಾ ಬಳಸಿಕೊಳ್ಳುತ್ತಾ ಅದಕ್ಕೆ ತನ್ನ ಕಾಲದ ಭಾಷಾದ್ರವ್ಯದಿಂದ ಜೀವಂತಿಕೆಯನ್ನು ತುಂಬಿ ಒಂದು ಭಾಷೆಯ ಸಾಹಿತ್ಯವನ್ನು ಅದರ ಜೀವಂತಿಕೆಯೊಡನೆ ಸಮೃದ್ಧಗೊಳಿಸುವುದು. ಇನ್ನೊಂದು ಬದುಕಿನ ಅನುಭವಗಳು ಹಾಗೂ ಅನಂತ ಸಾಧ್ಯತೆಗಳನ್ನು ತನ್ನ ಕೃತಿಗಳಲ್ಲಿ ಕಾವ್ಯಗೊಳಿಸುತ್ತಾ ಹೋಗುವುದು. ಇದನ್ನೇ ಎಲಿಯಟ್ಟನಂಥವರು 'a raid on the inarticulate' ಎಂದು ಹೇಳಹೊರಡುವುದು.

ಈ ಎರಡೂ ದೃಷ್ಟಿಗಳಿಂದ ಗಮನಿಸಿದಾಗ ಕನಕದಾಸರ ಭಾಷಾ ಪ್ರಯೋಗ ಅತ್ಯಂತ ಗಮನಾರ್ಹವಾಗಿ ಕಾಣುತ್ತದೆ.

ಕನಕದಾಸರ ಮಹಾಕಾವ್ಯವಾದ ಮೋಹನ ತರಂಗಿಣೀ ಅಷ್ಟಾದಶವರ್ಣನೆಗಳ ಸಂಪ್ರದಾಯದಲ್ಲಿ ತೊಡರಿಕೊಂಡಿದೆ. ಜಾನಪದವೃತ್ತವಾದ ಸಾಂಗತ್ಯವನ್ನೇ ಬಳಸಿ

ದ್ದರೂ ಹಳಗನ್ನಡ ರೂಪಗಳಿಗೇ ಮೊರೆಹೋಗುತ್ತದೆ. ಇಷ್ಟಾದರೂ ಆ ಕಾವ್ಯದಲ್ಲಿ ಬರುವ ವ್ಯಾಕರಣ ದೃಷ್ಟಿಯಿಂದ ಅಶುದ್ಧವೆನಿಸುವ, ಆದರೆ ಗ್ರಾಮ್ಯವೆನಿಸುವಂಥ ಪ್ರಯೋಗ ಹಾಗೂ ಶಬ್ದ ರೂಪಗಳು ಕನಕದಾಸರ ಭಾಷೆಯ ಪ್ರಯೋಗದ ದೃಷ್ಟಿಯಿಂದ ಗಮನಾರ್ಹ ಎಂಬಂತೆ ಎದ್ದು ಕಾಣುತ್ತವೆ. ಇಂಥ ಕಡೆಗಳಲ್ಲಿ ಕನಕದಾಸರ ಭಾಷೆ ಶಿಷ್ಟಭಾಷೆಗಿಂತ ಹೆಚ್ಚಾಗಿ ಜನಭಾಷೆಗೆ ಹತ್ತಿರವಾಗುವುದನ್ನು ಗಮನಿಸಬಹುದು. ಮಹಾಕಾವ್ಯದ ಗಾಂಭೀರ್ಯವನ್ನೂ ಮರೆಯಿಸುವ ಈ ಗ್ರಾಮ್ಯರೂಪಗಳು ಕನಕದಾಸರ ಸಹಜ ಭಾಷಾ ಪ್ರವೃತ್ತಿಯನ್ನು ಸೂಚಿಸುವಂತೆ ತೋರುತ್ತವೆ. ಕಾವ್ಯವಸ್ತುವಿನ ನಿರ್ವಹಣೆ ದೃಷ್ಟಿಯಿಂದ ಈ ಕೃತಿ ಅಷ್ಟೊಂದು ಮಹತ್ವದ್ದಲ್ಲವೆನ್ನಿಸಿದ್ದರೂ ಭಾಷೆಯ ದೃಷ್ಟಿಯಿಂದ ಕನಕದಾಸರನ್ನು ಅರ್ಥಮಾಡಿಕೊಳ್ಳಲು ಕೆಲವು ಎಳೆಗಳನ್ನು ಸೂಚಿಸುವಂತೆ ಕಾಣುತ್ತದೆ.

ಹರಿಭಕ್ತಿಸಾರ ಅವರ ಭಕ್ತಿಯ ಒರತೆಯನ್ನು ಷಟ್ಪದಿಯಲ್ಲಿ ಅಭಿವ್ಯಕ್ತಿಗೊಳಿಸಿದ ಕೃತಿ. ಕೀರ್ತನ ಸಾಹಿತ್ಯಕ್ಕೆ ತೀರ ಹತ್ತಿರವಾದ ಷಟ್ಪದಿ ರೂಪದ ಕೃತಿ ಇದಾಗಿದೆ. ನಳಚರಿತ್ರೆಯಾದರೋ ಬಿಲ್ಲಿನಿಂದ ಹೊರಟ ಬಾಣದ ಹಾಗೆ ನಳನ ಕಥೆಯನ್ನು ಸಾಂಗವಾಗಿ ಹೇಳಿಕೊಂಡು ಹೋಗುವ ಭಾಮಿನೀಷಟ್ಪದಿಯ ಕೃತಿ. ಈ ಕೃತಿಯಲ್ಲೂ ವ್ಯಾಕರಣ ದೃಷ್ಟಿಯಿಂದ ಅಶುದ್ಧವೆನಿಸಬಲ್ಲಂಥ ಪ್ರಯೋಗಗಳು ಮಿಕ್ಕ ಕೃತಿಗಳಂತೆಯೇ ಧಾರಾಳವಾಗಿ ದೊರೆಯುತ್ತವೆ.

ರಾಮಧಾನ್ಯ ಚರಿತ್ರೆ ಕೂಡ ಭಾಮಿನಿ ಷಟ್ಪದಿಯಲ್ಲಿಯೇ ರಚಿತವಾಗಿದ್ದರೂ, ಭಾಷಾ ಪ್ರಯೋಗದಲ್ಲಿ ಕನಕದಾಸರ ಇತರ ಕಾವ್ಯಗಳಂತೆಯೇ ಇದ್ದು ವಸ್ತುವಿನ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗುತ್ತದೆ. ಇಲ್ಲಿನ ಕಥೆ ಮೂಲದಲ್ಲಿ ರಾಮಾಯಣದ ಉತ್ತರ ಕಾಂಡದ ಕಥೆಯನ್ನು ಆಧಾರವಾಗಿಟ್ಟುಕೊಂಡಿದ್ದರೂ ವಸ್ತುವಿನ ದೃಷ್ಟಿಯಿಂದ ಅಪೂರ್ವವೂ, ಜಾನಪದೀಯವೂ ಆಗಿರುವುದಲ್ಲದೆ ಕ್ರಾಂತಿಕಾರಕವೆನಿಸಿದೆ. ಹಿಂದಿನ ಕನ್ನಡ ಕಾವ್ಯಗಳ ವಸ್ತು ರಾಮಾಯಣ ಭಾರತ ಹಾಗೂ ಭಾಗವತಗಳಿಂದಲೇ ಇಡಿಯಾಗಿ ಜೀವಂತಗೊಳ್ಳುತ್ತಿದ್ದುವು. ಈ ದೃಷ್ಟಿಯಿಂದ ನೋಡಿದರೆ ಸ್ವತಂತ್ರ ವಸ್ತುವನ್ನು ಆಧರಿಸಿದ ವಿಶಿಷ್ಟ ಕನ್ನಡ ಸಾಹಿತ್ಯದ ರೂಪಗಳನ್ನು ಕಾಣಬೇಕಾದರೆ ಜಾನಪದ ಮುಕ್ತಕಗಳು, ವಚನ ಸಾಹಿತ್ಯದ ಸಮುದಾಯ ಹಾಗೂ ಕೀರ್ತನ ಸಾಹಿತ್ಯಗಳನ್ನೇ ಪ್ರಮುಖವಾಗಿ ಗಮನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಮಧಾನ್ಯಚರಿತೆಯ ವಸ್ತು ನಿಜವಾಗಿಯೂ ಕ್ರಾಂತಿಕಾರಕವಾದುದು. ರಾಗಿಯ ವೈಶಿಷ್ಟ್ಯವನ್ನು ಮೆರೆಯುವ ಈ ಕಿರುಕಾವ್ಯ ಜನಪರ ವಸ್ತುವನ್ನೊಳಗೊಂಡು ಜಾನಪದೀಯವಾಗಿಯೂ ರಸವತ್ತಾಗಿಯೂ ಮೂಡಿದ್ದು, ಕನಕದಾಸರ ಪ್ರತಿಭೆಯ ವಿಶಿಷ್ಟತೆಗೆ ದ್ಯೋತಕವಾಗಿದೆ.

ಇಷ್ಟೆಲ್ಲ ಹಿನ್ನೆಲೆಯಾಗಿ ಹೇಳುವುದಕ್ಕೆ ಕಾರಣವಿಷ್ಟೆ. ಕನಕದಾಸರು ಮಹಾಕಾವ್ಯ ರಚಿಸಲಿ, ಕಿರುಕಾವ್ಯ ರಚಿಸಲಿ, ಹರಿಭಕ್ತಿಸಾರವನ್ನೇ ಹರಿಯಿಸಲಿ ಮೂಲದಲ್ಲಿ ಅವರ ಭಾಷೆ ತನ್ನ ಗ್ರಾಮ್ಯತೆಯಿಂದ ದೂರವಾಗುವುದಿಲ್ಲ; ವಿಶಿಷ್ಟವಾಗುತ್ತ ಬರುತ್ತದೆ, ಶಕ್ತಗೊಳ್ಳುತ್ತದೆ. ಈ ಅರ್ಥದಲ್ಲಿ ನೋಡಿದರೆ ಬಾಡ ಗ್ರಾಮದ

ಸುತ್ತಲಿನ ತನ್ನ ಜನರ ಭಾಷೆಯು ಸ್ಮೃತಿಗಳಿಂದಬನಿಗೊಳ್ಳುತ್ತಲೇ ಹೋಗುತ್ತದೆ. ಜೊತೆಗೆ ಜಾನಪದೀಯ ಅಂಶಗಳಿಂದ ಶ್ರೀಮಂತವೂ ಆಗುತ್ತ ಹೋಗುತ್ತದೆ. ಇಂಥ ಒಂದು ಹಂತವನ್ನು ರಾಮಧಾನ್ಯ ಚರಿತೆಯಲ್ಲಿ ಬಹು ಖಚಿತವಾಗಿ ನಾವು ಗುರುತಿಸಬಹುದೋ ಏನೋ.

ಇನ್ನು ಕೀರ್ತನೆಗಳ ಭಾಷೆಗೆ ಬಂದರೆ ಇದ್ದಕ್ಕಿದ್ದಂತೆ ಇಲ್ಲಿಯ ಭಾಷೆ ಹಾಗೂ ಲಯಗಳು ಬೇರಾವ ಕೀರ್ತನಕಾರನಿಗಿಂತಲೂ ಹೆಚ್ಚಾದ ರೀತಿಯಲ್ಲಿ ಜಾನಪದ ಪರಂಪರೆಯಲ್ಲಿ ಮುಂದುವರಿದ ಸಮೃದ್ಧಿಯನ್ನು ಒಳಗೊಳ್ಳುತ್ತವೆ.

'ಗೆಜ್ಜೆ ಕಟ್ಟಿ ಆಡೊ
ಲಜ್ಜೆಯ ಬಿಟ್ಟು ಆಡೊ
ಮುಜ್ಜಗನ ಕೊಂಡಾಡೊ'

ಎನ್ನುವ ಕನಕರ ನುಡಿಗಳು ಅವರ ಭಾಷೆಯ ಸಹಜತೆಯನ್ನೂ ಧ್ವನಿಸುತ್ತವೆಯೇನೊ ಅನ್ನಿಸುತ್ತವೆ. ಇವರ ಕೀರ್ತನೆಗಳಲ್ಲಿ ಬರುವ ಈ ಕೆಲವು ಉದಾಹರಣೆಗಳನ್ನು ಗಮನಿಸಿ :

೧) 'ಹ್ಯಾಂಗೇ ನೀದಾಸನಾದಿ ಪ್ರಾಣಿ'
೨) 'ಊರ ಹೊರಗೆ ಹೋಗಿ ಬ್ಯಾರೆ ಬ್ಯಾರೆ ಕುಳಿತು
ತಿಂಬುವುದು ಹ್ಯಾಂಗೆನುತ ವ್ಯಾಸರಾಯರ ಕೇಳೆ'
೩) 'ಕೊಕೊಕೊ ಎನ್ನಿರೊ ಕುಂಭಿಣಿಯವರೆಲ್ಲ'
'ದೇಶಧಾರಿ ಕಳ್ಳ ಕೊಕೊಕೊ ಎನ್ನಿರೊ'
೪) 'ತಾಳಲಲ್ಲಲ್ಲಲ್ಲಲ್ಯೋ
ಮೈಸುತ್ತಳಲಲ್ಲಲ್ಲಲ್ಯೋ'
೫) 'ಏನೆಂದಳೇನೆಂದಳೊ
ನಿನ್ನೊಳು ಸೀತೆ ಹನುಮಯ್ಯ'
೬) 'ಎನ್ನ ಕಂದ ಹಳ್ಳಿಯ ಹನುಮ
ಚೆನ್ನಾಗಿದ್ದಾರೆ ಲಕ್ಷ್ಮಣ ದೇವರು'
೭) 'ರಂಗನೆಂಥವನೆಂಥವನೆಲೆ ತಂಗಿ
ರಂಗನೆಂಥವ ಅವನಂಗ ತಿಳಿಯದು ಬ್ರಹ್ಮಾದಿಗಳಿಗೆ'
೮) 'ಕಣಿಯ ಹೇಳಬಂದೆ ನಾರಾಯಣನಲ್ಲದಿಲ್ಲವೆಂದು'
೯) 'ಊರಿಗೆ ಬಂದರೆ ದಾಸಯ್ಯ ನಮ್ಮ
ಕೇರಿಗೆ ಬಾ ಕಂದ್ಯ ದಾಸಯ್ಯ'
೧೦) 'ಬೈ ಬೈ ತನಕ ಊಟದ ಕೆಲಸ ಉಂಡ ಮೇಲೆ ಶಯನ
ಬೈಲಾಗಿತು ಈ ಬಗೆತನವೆಲ್ಲ ರಕ್ಷಿಸಯ್ಯ ರಘುಕುಲ ತಿಲಕ
ಪುರಾಣವಿಲ್ಲ ಪುಣ್ಯ ಕಥೆಯಿಲ್ಲ ಪಾರಾಯಣದಿ ಮನಸಿಲ್ಲ
ಶರೋಣ ಬರೋಣ ತಿಂದೋಗೋಣ ಮಲಗೋಣ ಮತ್ತೇಳೋಣ'

೧೧) ಬೆಳ್ಳಿ ಬಂಗಾರಿಟ್ಟುಕೊಂಡು ಒಳ್ಳೆ ವಸ್ತ್ರ ಹೊತ್ತುಕೊಂಡು
ಚಳ್ಳಪಿಳ್ಳೆಗೊಂಬೆಯಂತೆ ಆಡಿಹೋಯಿತು
ಹಳ್ಳಹರಿದು ಹೋಗುವಾಗ ಗುಳ್ಳೆ ಬಂದು ಒಡೆಯುವಂತೆ
ಉಳ್ಳೇ ಪೊರೆಯಂತೆ ಕಾಣಲೊ ಸಂಸಾರದಾಟವು||

ಈ ಮೇಲಿನ ಹನ್ನೊಂದು ಉದಾಹರಣೆಗಳು ಭಾಷೆಯ ನಿಸ್ಸಂಕೋಚ ಅಭಿವ್ಯಕ್ತಿ, ಸಹಜತೆ, ಜಾನಪದೀಯವಾದ ರೂಢಿಗಳನ್ನು ಕಣ್ಣೆದುರು ನಿಲ್ಲಿಸಬಲ್ಲ ಆತ್ಮೀಯತೆ, ನಾಟಕೀಯತೆ, ಒರಟುತನ ಇವುಗಳ ಜೊತೆಗೆ ಜಾನಪದೀಯ ಲಯಗಳನ್ನು ಇನ್ನಾವ ಕೀರ್ತನಕಾರನಲ್ಲೂ ಇರದಷ್ಟು ಹೆಚ್ಚು ದಟ್ಟವಾಗಿ ಒಳಗೊಳ್ಳುತ್ತ ಕನಕನ ಭಾಷೆಯ ವಿಶಿಷ್ಟತೆಯನ್ನು ಮನಗಾಣಿಸುತ್ತದೆ. ಹೇಳುವುದನ್ನು ಕಣ್ಣಿಗೆ ಕಟ್ಟುವಂತೆ, ಮನಸ್ಸಿಗೆ ಮುಟ್ಟುವಂತೆ, ಮಾಡುವ ಈ ಭಾಷೆ ಕನಕದಾಸ ಊರಿನ ಸುತ್ತಲ ಭಾಷೆಯ ಕಾಕಾಲಯಗಳ ಸ್ಮೃತಿಗಳಿಂದ ಸಮೃದ್ಧವಾಗುತ್ತದೆ. ಈ ಮಾತು ಇನ್ನೂ ವಿಶದವಾಗಬೇಕಾದರೆ ಕನಕದಾಸರ ಈ ಕೀರ್ತನೆಯನ್ನು ಇಡಿಯಾಗಿಯೇ ಗಮನಿಸಬೇಕು :

ದೇವಿ ನಮ್ಮ ದ್ಯಾವರು ಬಂದರು ಬನ್ನಿರೆ ನೋಡಬನ್ನಿರೆ ||ಪ||
ಗಂಗಣ್ಣ ಮೀನನಾಗಿ । ನಮರಂಗ
ಗುಂಗಾಡಿ ಸೋಮನ ಕೊಂದಾನಮ್ಮಯ್ಯ
ಗುಂಗಾಡಿ ಸೋಮನ ಕೊಂದು ವೇದವ
ಭಂಗಾರದೊಡಲಿಗಿತ್ತಾನಮ್ಮಯ್ಯ
ದೊಡ್ಡ ಮಡುವಿನೊಳಗೇ ನಮ್ಮ ರಂಗ
ಗುಡ್ಡವ ಹೊತ್ತುಕೊಂಡು ನಿಂತಾನಮ್ಮಯ್ಯ
ಗುಡ್ಡವ ಹೊತ್ತುಕೊಂಡು ನಿಂತು ಸುರರನು
ದೊಡ್ಡವರನ್ನು ಮಾಡಾನಮ್ಮಯ್ಯ
ಚನ್ನ ಕಾಡಿನ ಹಂದಿಯಾಗಿ । ನಮರಂಗ
ಚಿನ್ನದ ಕಣ್ಣನ ಕೊಂದಾನಮ್ಮಯ್ಯ
ಚಿನ್ನದ ಕಣ್ಣನ ಕೊಂದು ಭೂಮಿಯ
ವನಜ ಸಂಭವನಿಗಿತ್ತಾನಮ್ಮಯ್ಯ
ಸಿಟ್ಟಲಿ ಸಿಂಹನಾಗಿ । ನಮರಂಗ
ಹೊಟ್ಟೆಯ ಕರುಳ ಬಗಿದಾನಮ್ಮಯ್ಯ
ಹೊಟ್ಟೆಯ ಕರುಳ ಹಾರವ ಮಾಡಿ
ಪುಟ್ಟಗೆ ವರವ ಕೊಟ್ಟಾನಮ್ಮಯ್ಯ
ಹುಡುಗ ಹಾರುವನಾಗಿ । ನಮರಂಗ
ಬೆಡಗಲಿ ಮುಗಿಲಿಗೆ ಬೆಳೆದಾನಮ್ಮಯ್ಯ
ಬೆಡಗಲಿ ಮುಗಿಲಿಗೆ ಬೆಳೆದು ಬಲಿಯನ್ನು

ಅಡಿಯಿಂದ ಪಾತಾಳಕೊತ್ತ್ಯಾನಾ್ರ್ಯ
ತಾಯಿಯು ಮಾತನು ಕೇಳಿ । ಸಾಸಿರ ತೋಳಿನ
ಆವಿನ ಕಳ್ಳನ ಕೊಂದಾನಾ್ರ್ಯ
ಆವಿನ ಕಳ್ಳನ ಕೊಂದು ಭೂಮಿಯು
ಅವನಿಸುರರಿಗೆ ಇತ್ತ್ಯಾನಾ್ರ್ಯ
ಕೆಂಗ್ಯಾಳೆ ಕಣ್ಣಿನ ಕೊಂಗಗಳ ಕೂಡಿ
ಜಂಘೇಲಿ ಲಂಕೆಗೆ ಪೋದಾನಾ್ರ್ಯ
ಜಂಘೇಲಿ ಲಂಕೆಗೆ ಪೋಗಿ । ನಮರಂಗ
ಹೆಂಗಸು ಕಳ್ಳನ ಕೊಂದಾನಾ್ರ್ಯ
ಕರಿಯು ಹೊಳೆಯಲಿ ತುರುಗಳ ಕಾಯುತ
ಉರಗನ ಮಡುವ ಧುಮುಕ್ಯಾನಾ್ರ್ಯ
ಉರಗನ ಹೆಡೆಮೇಲೆ ಹಾರ್‍ಯಾರಿ ಕುಣಿವ್ಯಾಗ
ಯಾರ್‍ಯಾರಿಗೇನೇನು ಇತ್ತ್ಯಾನಾ್ರ್ಯ
ಬಿಂಕದ ಗೋವಲನಾಗಿ । ನಮರಂಗ
ಡೊಂಕಾದ ಮುದುಕಿಯು ಕೂಡ್ಯಾನಾ್ರ್ಯ
ಡೊಂಕಾದ ಮುದುಕಿಯು ಕೂಡಿ ಮಾನವ
ಬಿಂಕವ ಮುರಿದು ಕುಣಿದಾನಾ್ರ್ಯ
ಭಂಡನಂದದಿ ಪುಂಡರೀಕಾಕ್ಷನು
ಕಂಡಕಂಡಲ್ಲಿಗೆ ತಿರುಗ್ಯಾನಾ್ರ್ಯ
ಕಂಡಕಂಡಲ್ಲಿಗೆ ತಿರುಗಿ ತ್ರಿಪುರದ
ಹೆಂಡಿರನೆಲ್ಲ ಕೆಡಿಸ್ಯಾನಾ್ರ್ಯ
ಚೆಲುವ ಹೆಂಡತಿ ಕುದುರೆಯು ಮಾಡಿ
ಒಳ್ಳೆ ರಾವುತನಾದಾನಾ್ರ್ಯ
ಒಳ್ಳೆ ರಾವುತನಾಗಿ ನಮರಂಗ
ಡೊಳ್ಳುಹೊಟ್ಟೆಯು ಮೇಲೊದ್ದಾನಾ್ರ್ಯ
ಡೋಳಿನ ಮೇಲೆ ಕೈ ಬರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ತಟ್ಯಾನಾ್ರ್ಯ
ಒಳ್ಳೊಳ್ಳೆ ಪದಗಳು ಹನುಮಪ್ಪ ಹಾಡ್ಯಾನು
ಚೆಲುವ ಕನಕಪ್ಪ ಕುಣಿದಾನಾ್ರ್ಯ

ತ್ರಿಪದಿಯ ಛಂದದಿಂದ ಬೆಳೆದು ನಿಂತಿರುವ ಈ ಕೀರ್ತನೆ ಡೊಳ್ಳಿನ ಹಾಡಾಗುವುದು ಇಲ್ಲಿನ ಒಂದು ವೈಶಿಷ್ಟ್ಯ. ಕೀರ್ತನೆ ಮುಗಿತಾಯಕ್ಕೆ ಬರುವುದು ಕೃಷ್ಣ ಡೊಳ್ಳು ಹೊಟ್ಟೆಯು ಮೇಲೆ ಒದೆಯುವುದರೊಂದಿಗೆ. ತಟ್ಟನೆ ಡೊಳ್ಳಿನ ಮ್ಯಾಲೆ ಕೈ ಭರಮಪ್ಪ ಹಾಕ್ಯಾನು ಎಂದು ಪಡೆಯುವ ತಿರುವು ಕೂಡ ಗಮನಾರ್ಹ.

ವಾದದ್ದು. ಗುಡ್ಡವ ಹೊತ್ತುಕೊಂಡು, ಚಿನ್ನದ ಕಣ್ಣ, ಚನ್ನ ಕಾಡಿನ ಹಂದಿ, ಆವಿನ ಕಳ್ಳ, ಕರಿಯ ಹೊಳೆ, ಹುಡುಗ ಹಾರುವ, ಬಿಂಕದ ಗೋವಳ ಎಂಬಂಥ ಕನ್ನಡದ ಪದಗುಚ್ಛಗಳು ಗುಂಗಾಡಿ ಬಗಿ, ಕೆಂಗಾಳಿ, ಭರಮಪ್ಪ ಇಂಥ ಪದಗಳಿಂದಲೇ ಅಲ್ಲದೆ ಎರಡೆರಡು ಸಾಲುಗಳ ಕೊನೆಗೆ ತಾಳದಂತೆ ಬರುವ ಕೊಂದಾನ್ಯಾರೈ, ಇತ್ತಾನ್ಯಾರೈ, ಕುಣಿದಾನ್ಯಾರೈ, ನಿಂತಾನ್ಯಾರೈ, ಮಾಡಾನ್ಯಾರೈ, ಬೆಳೆದಾನ್ಯಾರೈ, ಮೋದಾನ್ಯಾರೈ, ಧುಮುಕ್ಯಾನ್ಯಾರೈ, ಕೂಡಾನ್ಯಾರೈ, ತಿರುಗ್ಯಾನ್ಯಾರೈ, ಕೆಡಿಸ್ಯಾನ್ಯಾರೈ, ಆದಾನ್ಯಾರೈ, ಒದ್ದಾನ್ಯಾರೈ, ತಟ್ಯಾನ್ಯಾರೈ ರೂಪಗಳಿಂದ ಪ್ರಾದೇಶಿಕ ಭಾಷೆಯ ಗತ್ತುಗಮ್ಮತ್ತುಗಳನ್ನು ಮೆರೆಯುತ್ತಿದೆ. ಡೊಳ್ಳಿನ ಹಾಡೂ ಆಗಿರುವ ಈ ಕೀರ್ತನೆಯ ಭಾಷೆಯ ಲವಲವಿಕೆ ಚೇತೋಹಾರಿಯಾದುದು. ವಿಷ್ಣುವಿನ ಒಂದೊಂದೇ ಅವತಾರ ಹಾಗೂ ಪ್ರಮುಖ ಘಟನೆಗಳನ್ನು ಕಾವ್ಯವಾಗಿ ವರ್ಣಿಸುತ್ತಾ ಹೋಗುವ ಈ ಜಾನಪದ ಕೃತಿಯ 'ಉರುಗನ ಹೆಡೆಮೇಲೆ ಹಾರ್‍ಯಾರಿ ಕುಣಿವಾಗ' ಎನ್ನುವಾಗ ಪ್ರಾಪ್ತವಾಗುವ ಭಾವಾಭಿನಯವನ್ನು ಅನುಭವಿಸಿಯೇ ತಿಳಿಯಬೇಕು. 'ಯಾರ್‍ಯಾರಿಗೇನೇನು ಇತ್ತಾನ್ಯಾರೈ' ಮಾತಿನ ಗತ್ತು ಅಷ್ಟೇ ಸೊಗಸಾದುದು. ಈ ಕೀರ್ತನೆಯ ತಿಖರ ಬ್ರಹ್ಮ ಬರಮಪ್ಪನಾಗಿ ಡೊಳ್ಳಿನ ಮೇಲೆ ಕೈ ಹಾಕುವುದು, ಶಿವ ಶಿವನಪ್ಪನಾಗಿ ತಾಳ ಹಾಕುವುದು, ಅದಕ್ಕೆ ಹನುಮಪ್ಪ ಹಿಮ್ಮೇಳವಾಗಿ ಹಾಡುವುದು—ಈ ಎಲ್ಲ ಭವ್ಯ ಘಟನೆಗಳನ್ನು ಕಂಡು ಕನಕಪ್ಪ ಕುಣಿದಾಡುವುದು—ಈ ಚಿತ್ರಗಳು ಇದನ್ನು ಒಂದು ಅದ್ಭುತ ಭವ್ಯ ಕೃತಿಯಾಗಿಸಿದೆ. ಇಡೀ ಈ ಭವ್ಯ ನರ್ತನ ಗ್ರಾಮದ ಡೊಳ್ಳಿನ ಕುಣಿತವಾಗಿ ಅದರಲ್ಲಿ ಬ್ರಹ್ಮ, ವಿಷ್ಣು, ಶಿವರು ಪಾಲ್ಗೊಂಡಿರುವುದರಿಂದಲೇ ಕೀರ್ತನೆಯು ಅತ್ಯಂತ ಅಕ್ಕರೆಯ ದೇವಿ ಬನ್ನಿರೆ, ನೋಡಬನ್ನಿರೆ ಎಂಬ ಕರೆಯೊಂದಿಗೆ ಆರಂಭವಾಗುತ್ತಿದೆ. ಈ ಕೀರ್ತನೆಯ ಜಾನ ದ ಲಯ ಭಾಷೆಯ ಜಾನಪದೀಯ ಹಾಗೂ ಆಡುಮಾತಿನ ಸೊಗಡು ಸಹಜತೆಗಳು ಈ ಕೀರ್ತನೆಯ ಭವ್ಯತೆಗೆ ಕಾರಣವಾಗುವುದು ಇಲ್ಲಿನ ಮಹತ್ವ.

ಒಟ್ಟಾರೆ ಕೀರ್ತನೆಗಳ ಭಾಷೆಯಲ್ಲಿ ಬಾಡದ ಸುತ್ತಮುತ್ತ ಆ ಕಾಲದಲ್ಲಿ ಬಳಕೆಯಲ್ಲಿದ್ದ ಗ್ರಾಮೀಣ ಭಾಷಾರೂಪಗಳು, ಜಾನಪದ ನಂಬಿಕೆಗಳು ಹಾಗೂ ರೂಢಿಗಳು ಮತ್ತು ಜಾನಪದ ಹಾಡಿನ ಧಾಟಿಗಳು ತಮ್ಮ ವಿಶಿಷ್ಟತೆಯಿಂದ ತುಂಬಿಕೊಂಡಿರುವುದು ಮನಕ್ಕೆ ಬಾರದೆ ಇರದು. ಒಂದು ಕಡೆ ತನ್ನ ಕಾಲದ ಜಾನಪದ ಧಾಟಿಗಳು ಹಾಗೂ ಗೇಯ ಸಮೃದ್ಧಿಗೆ ಶ್ರೀ ಪುರಂದರದಾಸರು ಕರ್ನಾಟಕ ಸಂಗೀತ ಪದ್ಧತಿಯ ಸಂಸ್ಕಾರ ಕೊಟ್ಟು ಹೊಸರೂಪ ಕೊಟ್ಟಿದ್ದರೆ, ಕನಕದಾಸರಾದರೂ ಆ ಜಾನಪದ ಗೇಯ ಗುಣಗಳನ್ನು ಅವುಗಳ ವಿಶಿಷ್ಟ ಮಾಧುರ್ಯದೊಂದಿಗೇ ಕೀರ್ತನೆಗಳಿಗೆ ಬಳಸಿಕೊಂಡು, ಜಾನಪದ ಸೊತ್ತಾಗಿಯೇ ಉಳಿಸಿ ಜಾನಪದ ಪರಂಪರೆಗೆ ಚಾಲನೆ ನೀಡಿದ್ದಾರೆ. ಕನಕದಾಸರ ಬಾಡದ ಸುತ್ತಮುತ್ತಲ ಪ್ರದೇಶಗಳಲ್ಲಿ ಇವುಗಳನ್ನು ಹಾಡುವ ದಾಟಿಗಳನ್ನು ಟೇಪುಗಳಲ್ಲಿ ದಾಖಲಿಸಿ ಅಧ್ಯಯನ ನಡೆಸಿದರೆ ಇವುಗಳ ಮಹತ್ವವು ಇನ್ನೂ ಹೆಚ್ಚಾಗಿ ಮನವರಿಕೆಯಾದೀತು. ಕನಕದಾಸರು ಜಾನಪದೀಯ

ಗುಣಸಮೃದ್ಧಿಯಿಂದ ಕೀರ್ತನೆಗಳನ್ನು ತುಂಬಿದ ಕಾರಣದಿಂದಾಗಿಯೇ ಅವರ ಕೀರ್ತನೆಗಳಲ್ಲಿ ಇನ್ನೂ ನಿಸ್ಸಂಕೋಚ ನಿರ್ವಜ್ಞವಾದ ಭಾಷೆಯ ಶಕ್ತ ಬಳಕೆ-ಅಭಿವ್ಯಕ್ತಿ ಸಾಧ್ಯವಾಗಿದೆ. ಇಂಥ ನಿಸ್ಸಂಕೋಚ ನಿರ್ವಜ್ಞ ಗುಣಗಳಿಗೆ ಈ ಕೆಲವು ಉದಾಹರಣೆಗಳು ಸಾಕೆಂದು ತೋರುತ್ತದೆ. ಮೊಲೆಬಿದ್ದ ಹೆಣ್ಣ ಸೊಳು ಮೋಹಕ್ಕೆ ಸೊಗಸಹುದೆ, ಮುಟ್ಟಾದ ಮೇಲಿಸ್ನು ಮೋಹಿಸಿ ಕೆಡಬೇಡ, ಸರಸವಿಲ್ಲದ ಸತಿಯ ಭೋಗ ತನುರೋಗ, ಮಾಗಿಯಲಿ ಸತಿಯನಗಲಿದ ಕಾಂತನ ಭ್ರಾಂತ ಶರೀರ ಸೌಖ್ಯ, ಶಯನಕ್ಕಾಗದ ಹೆಣ್ಣು ಊರಲ್ಲಿದ್ದರೇನು–ಈ ಕೆಲವು ಉದಾಹರಣೆಗಳ ನಿರ್ಲಜ್ಜ ಅಭಿವ್ಯಕ್ತಿ ಗುರುತಿಸುವಾಗ ಕನಕದಾಸರು ಭಾಷೆಯ ಬಳಕೆಯಲ್ಲಿ ತೋರಿದ ನಿಸ್ಸಂಕೋಚ ಗುಣದ ಅರಿವಾಗುತ್ತದೆ. ಇಂಥ ಅನಿವಾರ್ಯತೆ ಇದ್ದುದರಿಂದಲೇ ಇವರ ಭಾಷೆ ಗ್ರಾಮೀಣರೂಪಗಳಿಂದ ಇಡಿಕಿರಿದು ತನ್ನತನವನ್ನು ಉಳಿಸಿಕೊಳ್ಳುವಲ್ಲಿ ಜಾನಪದೀಯವೇ ಆಗುವಲ್ಲಿ ಸಾಧ್ಯವಾಗಿದೆ. ಹೀಗಾಗಿಯೇ ಇವರ ಕೀರ್ತನೆಗಳಲ್ಲಿ ಬೇರಾವ ಕೀರ್ತನಕಾರರಿಗಿಂತ ಮಿಗಿಲಾದ ರೀತಿಯಲ್ಲಿ ಜಾನಪದ ಧಾಟಿಗಳು, ಛಂದಗಳು, ಭಾಷಾರೂಪಗಳು, ಗ್ರಾಮ್ಯರೂಪಗಳು ಸಮೃದ್ಧವಾಗಿ ಅವರ ಜಾನಪದೀಯ ಪ್ರತಿಭೆಯ ಪ್ರಖರತೆಯನ್ನು ವ್ಯಂಜಿಸುತ್ತವೆ.*

---

* ಈ ಲೇಖನಕ್ಕೆ ಪೂರಕವಾಗಿ ಇದೇ ಲೇಖಕರ ಕನಕನ "ಭಾಷೆಯ ವಿಶಿಷ್ಟತೆ"–ಸಾಧನೆ–ಸಂ ೧೪, ಸಂಚಿಕೆ ೪–ಅಕ್ಟೋಬರ್ ಡಿಸೆಂಬರ್ ೧–೯–೮೫ ನೋಡಬಹುದು

ಸಂಸ್ಕೃತ ಸಾಹಿತ್ಯದಲ್ಲಿ ಲೇಖನಸಾಮಗ್ರಿ ಉಲ್ಲೇಖನಗಳು

ಡಾ. ಆರ್. ಎಸ್. ಶಿವಗಣೇಶಮೂರ್ತಿ — ಡಾ. ಜಿ. ಬಿ. ವತ್ಸಲಾ

ಸಂಸ್ಕೃತ ಸಾಹಿತ್ಯ ಇಂದಿಗೆ ಕನಿಷ್ಠ ೫೦೦೦ ವರ್ಷಗಳ ಚರಿತ್ರೆಯನ್ನು ಹೊಂದಿದೆ. ಪ್ರಾಚೀನತಮ ಉಪಲಬ್ಧ ಗ್ರಂಥಗಳೆಂದರೆ ವೇದಗಳು. ಶ್ರುತಿ ಎಂದರೆ ವೇದ ಎನ್ನುವಷ್ಟರ ಮಟ್ಟಿಗೆ ಇವು ಶ್ರುತಿ ಪರಂಪರೆಯಲ್ಲಿ ಉಳಿದು ಬಂದಿವೆ. ಆ ಕಾಲದಲ್ಲಿ ಲೇಖನ ಕಲೆ ಇತ್ತೇ ಎಂಬುದು ನಿಶ್ಚಿತವಾಗಿಲ್ಲ. ಲೇಖನಕಲೆಗೆ ಭಾರತದಲ್ಲಿ ಪ್ರಾಚೀನ ತಮ ಖಚಿತ ದಾಖಲೆಗಳೆಂದರೆ ಅಶೋಕನ ಶಾಸನಗಳು. ಈ ಶಾಸನಗಳು ಹೆಚ್ಚು ಕಡಿಮೆ ಭಾರತಾದ್ಯಂತ ದೊರೆಯುತ್ತವೆಯಾದರೂ, ಎಲ್ಲ ಭಾಗದ ಜನರಿಗೂ ಲಿಪಿ(ಬ್ರಾಹ್ಮೀ)ಯನ್ನು ಓದಲು ಬರುತ್ತಿತ್ತೇ ಎಂದು ವಿದ್ವಾಂಸರು ಚರ್ಚಿಸು ತ್ತಿದ್ದಾರೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಲೇಖನಸಾಮಗ್ರಿಗಳ ಉಲ್ಲೇಖವಿದೆ. ಆದರೆ ಆ ಕೃತಿ ಗುಪ್ತರ ಕಾಲದಲ್ಲಿ ಬರೆದಿದ್ದಿರಬಹುದೇ ಎಂದು ಪ್ರಶ್ನಿಸಲಾಗಿದೆ.

ನಮ್ಮ ಪೂರ್ವಿಕರು ಬಳಸುತ್ತಿದ್ದ ಸಾಮಗ್ರಿಗಳ—ತಾಳಪತ್ರ ಹಾಗೂ ಭೂರ್ಜ ಪತ್ರ–ಸುಲಭವಾಗಿ ನಶಿಸುವಂತಹವು ಆಗಿವೆಯಾಗಿ ಆ ಕಾಲದ ಪುಸ್ತಕಗಳು ಉಪಲಬ್ಧ ವಾಗಿರುವ ಸಂದರ್ಭಗಳು ಇಲ್ಲವೇ ಇಲ್ಲ ಎನ್ನಬಹುದು. ಸುಮಾರು ೧೦೦೦ ವರ್ಷಗಳ ಹಿಂದಿನ ಪುಸ್ತಕಗಳು ಒಂದೆರಡು ದೊರೆಯುತ್ತವೆ. ಉದಾಹರಣೆಗೆ: ದಕ್ಷಿಣ ಕನ್ನಡ ಜಿಲ್ಲೆ ಮೂಡಬಿದ್ರಿಯ ಜೈನ ಭಂಡಾರದಲ್ಲಿರುವ 'ಧವಲ'ದ ಹಸ್ತಪ್ರತಿ. ಇದ ಸು. ೯ನೇ ಶತಮಾನದ ಕನ್ನಡಲಿಪಿಯಲ್ಲಿ ತಾಳಪತ್ರದ ಮೇಲೆ ಬರೆದ ಪ್ರಾಕೃತ ಭಾಷಾ ಗ್ರಂಥ. ಈ ಸಂದರ್ಭದಲ್ಲಿ ಲೇಖನಸಾಮಗ್ರಿಗಳ ಸೂಚನೆಗೆ ಸಾಹಿತ್ಯದ ಸಾಕ್ಷ್ಯ ವನ್ನು ಹುಡುಕಬೇಕಾಗಿದೆ. ಅಂಥ ಪ್ರಯತ್ನ ಈಚೆಗೆ ಆರಂಭವಾಗಿದೆ. ಈ ಲೇಖನವೂ ಆ ದಿಕ್ಕಿನಲ್ಲಿ ನಡೆದುದಾಗಿದೆ.

ಸಂಸ್ಕೃತ ಲೌಕಿಕಸಾಹಿತ್ಯದಲ್ಲಿ ನಮ್ಮ ಗಮನಕ್ಕೆ ಬಂದ ಕೆಲವು ಉಲ್ಲೇಖ ಗಳನ್ನು ಇಲ್ಲಿ ಕೊಡಲಾಗಿದೆ. ಧರ್ಮಶಾಸ್ತ್ರ-ತಂತ್ರಶಾಸ್ತ್ರ ಗ್ರಂಥಗಳಲ್ಲಿಯೂ ಪಾಲಿ-ಪ್ರಾಕೃತ ಭಾಷಾ ಗ್ರಂಥಗಳಲ್ಲಿಯೂ ಉಲ್ಲೇಖಗಳು ದೊರೆಯುತ್ತವೆ. ಆದರೆ ಇಲ್ಲಿ ಕೆಲವು ಸಂಸ್ಕೃತ ಕಾವ್ಯಗಳನ್ನು ಮಾತ್ರ ಆಯ್ಕೆಮಾಡಿಕೊಳ್ಳಲಾಗಿದೆ. ಈ ಅವತರಣಿಕೆ ಗಳು ಸ್ವತಃ ಸ್ಪಷ್ಟವಾಗಿದೆಯಾದುದರಿಂದ ಅನುವಾದ ಮಾತ್ರ ಕೊಡಲಾಗಿದೆ.

೧. **ಅಭಿನವಗುಪ್ತ (ಅಭಿನವಭಾರತೀ ೨೧.೧೪೧).**

ಚೀರಂ । ಇತಿ. । ಅವಿತತಾ । ಸ್ಥೂಲಾ । ಚ । ವೃಕ್ಷತ್ವಕ್ ; । ವಲ್ಕಲಂ ಚ ತದ್ವಿಪರೀತಂ । ಯಥಾ । ಭೂರ್ಜತ್ವಕ್.

(ಚೀರ-ಹೆಚ್ಚು ಅಗಲವಿಲ್ಲದ ದಪ್ಪನಾದ ಮರದ ತೊಗಟೆ. ವಲ್ಕಲ-ಅದಕ್ಕೆ ಭಿನ್ನ ವಾದುದು, ಉದಾ. ಭೂರ್ಜ ಪತ್ರ)

೨. ಕಾಲಿದಾಸ (ಅಭಿಜ್ಞಾನ-ಶಾಕುಂತಲಂ ೩.೧೩ರ ಮೇಲೆ ೬.೧೮ರ ಮೇಲೆ, ೬.೨೧ರ ಮೇಲೆ)

ಲೇಖನಸಾಧನಾನಿ....
ಏತಸ್ಮಿನ್ । ಶುಕೋದರ-ಸುಕುಮಾರೇ । ನಲೀನಿಪತ್ರೇ । ಪತ್ರಚ್ಛೇದ-ಭಕ್ತ್ಯಾ । ನಖೈಃ । ನಿಕ್ಷಿಪ್ತ ವರ್ಣಂ । ಕುರು.
ಲೇಖನಸಾಧನಗಳು....
(ಗಿಣಿಯ ಎದೆಯಂತೆ ಮೆತ್ತಗಿರುವ ಈ ತಾವರೆಯೆಲೆಯ ಮೇಲೆ ಎಲೆಯ ಅಲಂಕಾರ ದಂತೆ ಉಗುರಿನಿಂದ ಅಕ್ಷರಗಳ ಗುರುತು ಮಾಡು).
ವರ್ತಿಕಾ-ಕರಂಡ. (ಬಣ್ಣ ಕುಂಚಗಳ ಪೆಟ್ಟಿಗೆ).
ತದ್ದೇವೋ । ಪತ್ರಾರೋಪಿತಂ । ಪ್ರತ್ಯಕ್ಷೀ ಕರೋತು
(ಆದ ಕಾರಣ ಪತ್ರದಲ್ಲಿ ಬರೆದದ್ದನ್ನು ಮಹಾಸ್ವಾಮಿಯವರು ಅವಲೋಕಿಸ ಬೇಕು.)

—(ಕುಮಾರಸಂಭವ ೧.೧೭,೩.೨)

ನ್ಯಸ್ತಾಕ್ಷರಾ । ಧಾತುರಸೇನ । ಯತ್ರ ।
ಭೂರ್ಜತ್ವಚಃ । ಕುಂಜರಬಿಂದು ಶೋಣಾಃ ।
ವ್ರಜಂತಿ । ವಿದ್ಯಾಧರಸುಂದರೀಣಾಂ ।
ಅನಂಗ ಲೇಖಕ್ರಿಯೋಪಯೋಗಂ ॥
(ಯಾವ ಹಿಮಾಲಯದಲ್ಲಿ ಧಾತುರಸದಿಂದ ಬರೆಯಲ್ಪಟ್ಟ ಮತ್ತು ಆನೆಯ ಕೆಂಪು ಚರ್ಮದಂತಿರುವ ಭೂರ್ಜದ ಒಳಪದರಗಳು ವಿದ್ಯಾಧರ ಸುಂದರಿಯರಿಗೆ ಪ್ರೇಮ ಪತ್ರಗಳಾಗಿ ಉಪಯೋಗವಾಗುತ್ತಿದ್ದವು.)
ಉನ್ಮೀಲಿತಂ । ತೂಲಿಕಯೇವ । ಚಿತ್ರಂ ।
(ತೂಲಿಕಾ—ಕುಂಚ—ದಿಂದ ಬಿಡಿಸಿದ ಚಿತ್ರದಂತೆ).

—(ರಘುವಂಶ ೩.೨೮)

ಲಿ ಪೇರ್ಯಥಾವದ್ ಗ್ರಹಣೇನ । ವಾಙ್ಮಯಂ ।
ನದೀ ಮುಖೇನೇವ । ಸಮುದ್ರಮಾವಿಶತ್ ।
(ನದಿಯ ಮೂಲಕ ಸಮುದ್ರವನ್ನು ಪ್ರವೇಶಿಸುವಂತೆ ಲಿಪಿಯನ್ನು ಯಥಾವತ್ತಾಗಿ ಕಲಿತು ವಾಙ್ಮಯವನ್ನು ಪ್ರವೇಶಿಸಿದನು.)

ವಿಕ್ರಮೋರ್ವಶೀಯ ೧.೧೧ರ ಮೇಲೆ

ಭುಜಂಗ ನಿರ್ಮೋಕ । ಇವ । ಭೂರ್ಜಪತ್ರಗತೋsಯಂ । ಅಕ್ಷರ ವಿನ್ಯಾಸಃ ।
(ಹಾವಿನ ಪೊರೆಯಂತೆ ಇರುವ ಇದು ಅಕ್ಷರಗಳನ್ನು ಬರೆದ ಭೂರ್ಜಪತ್ರ)

೩) ಚಂದ್ರಪ್ರಭಸೂರಿ (ಪ್ರಭಾವಕ ಚರಿತಂ ಪು.೩೩೮)

ತಾಡಪತ್ರತ್ರುಟಿರ್ । ಜಜ್ಞೇ । ಶಲಭೇಭ್ಯಃ ।

(ಜೀರುಂಡೆಗಳಿಂದ ತಾಡಪತ್ರಗಳಿಗೆ ಕ್ಷತಿಯುಂಟಾಯಿತು)

೪) ಜೋನರಾಜ (ರಾಜತರಂಗಿಣೀ ಪದ್ಯ ೮೦೪ ಇ.)

ವಿಕ್ರೀತಂ । ಪ್ರಸ್ಥದಶಕಂ । ಇತಿ । ವರ್ಣಾನ್ ಅಲೇಖಯತ್ ॥
ತಸ್ಮಿನ್ । ರಾಜ್ಞಿ । ವಿಚಾರಜ್ಞೇ । ಸೋನರಾಜಸ್ಯ । ನಂದನಃ ॥
ಬಲಾದ್ । ಹೃತಂ । ಭುವಂ ರಾಜಸಭಾಯಾಂ । ಅಹವಾಕ್ಷಿಪಂ ॥
ಪ್ರತ್ಯರ್ಥಿಭಿರಥಾನೀತಂ । ಭೂರ್ಜಂ । ರಾಜಾಜ್ಞಯಾ । ನೃಪಃ ॥
ಯುಕ್ತಿಜ್ಞಃ । ಸಲಿಲಸ್ಯಾಂತಃ ವಾಚಯಿತ್ವಾಕ್ಷಿಪತ್ । ತತಃ ॥
ನಷ್ಟೇಷು । ನವವರ್ಣೇಷು । ಪುರಾಣೇಷು । ಸ್ಥಿರೇಷ್ವಥ ।
ಭೂ ಪ್ರಸ್ಥಮೇಕಂ । ವಿಕ್ರೀತಮಿತಿ । ಸಭ್ಯಾನವಾಚಯತ್ ।॥

(ಹುಡುಗ ಜೋನರಾಜನ ತಂದೆ ಮೃತಿ ಹೊಂದಿದ. ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದು ವಯಸ್ಕನಾದಾಗ ತನ್ನ ತಂದೆಯ ಆಸ್ತಿಯನ್ನು ತನಗೆ ವಹಿಸಲು ಕೇಳಿದ. ಇದ್ದ ಹತ್ತೂ ಎಕರೆಗಳನ್ನು ತನಗೆ ಮಾರಲಾಗಿದೆ ಎಂದು ಅವನು ಹೇಳಿದ ಮೇಲೆ, ಜೋನ ರಾಜ ನ್ಯಾಯಕ್ಕಾಗಿ ರಾಜನನ್ನು ಮರೆಹೊಕ್ಕ. ಪ್ರತಿವಾದಿಗಳಿಂದ ಭೂರ್ಜಪತ್ರದ ದಾಖಲೆಯನ್ನು ರಾಜನು ತರಿಸಿ, ಓದಿಸಿ, ನೀರಿಗೆ ಹಾಕಿದ. ಸ್ವಲ್ಪ ಹೊತ್ತು ಆದ ಮೇಲೆ ಮತ್ತೆ ಓದಿಸಿದಾಗ 'ಹತ್ತು' ಎಂಬಲ್ಲಿ 'ಒಂದು' ಎಂದಿತ್ತು.–ಅಳಿಸಿ ಹೋಗದ ಮಸಿಯಲ್ಲಿ ಮೊದಲು ಬರೆದಿತ್ತು. ಅನಂತರ ತಿದ್ದುಪಡಿ ಅಳಿಸಿಹೋಗುವ ಮಸಿಯಲ್ಲಿತ್ತು.)

೫ ದಂಡೀ (ದಶಕುಮಾರ ಚರಿತಂ ಉ. ೭, ಪು. ೧೩೨)

....ನಾಗದಂತ-ನಿರ್ಯಾಸ-ಕಲ್ಪ-ವರ್ಣಿತಂ । ಫಲಕಂ । ಆದಾಯ ।
ಮಣಿಸಮುದ್ಗಾತ್ । ವರ್ಣವರ್ತಿಕಾಂ । ಉದ್ಧೃತ್ಯ । ತಾಂ । .... ಆಲಿಖಂ।

(ಆನೆ ದಂತದಿಂದ ಮಾಡಿದ ಕಲ್ಕ ಬಳಿದಿದ್ದ ಫಲಕ [ಹಲಗೆ] ತೆಗೆದುಕೊಂಡು, ಮಣಿ ಪೆಟ್ಟಿಗೆಯಿಂದ ಬಣ್ಣದಕುಂಚ ಎತ್ತಿಕೊಂಡು ಆ [ರಾಜಕುಮಾರಿಯನ್ನು] ಬರೆದೆನು-(ಅಪಹಾರವರ್ಮ)

೬ ಪುಷ್ಪದಂತ (ಮಹಿಮ್ನ ಸ್ತವಃ ೩೨)

ಅಸಿತಗಿರಿಸಮಂ । ಸ್ಯಾತ್ । ಕಜ್ಜಲಂ । ಸಿಂಧು । ಪಾತ್ರಂ ।
ಸುರತರುವರಶಾಖಾ । ಲೇಖನೀ । ಪತ್ರ ಮುರ್ವೀ ।
ಲಿಖತಿ । ಯದಿ । ಗೃಹೀತ್ವಾ । ಶಾರದಾ । ಸರ್ವಕಾಲಂ ।
ತದಪಿ । ತವ । ಗುಣಾನಾಂ । ಈಶ । ಪಾರಂ । ನ । ಯಾತಿ ॥

(ಈಶ, ಬೆಟ್ಟದಷ್ಟು ಕಾಡಿಗೆಯನ್ನು ಸಮುದ್ರವೆಂಬ ಪಾತ್ರೆಯಲ್ಲಿ ಕದರಿಟ್ಟು ಕಲ್ಪ ವೃಕ್ಷದ ಕೊಂಬೆಯನ್ನೇ ಲೇಖನಿಯಾಗಿ ಬಳಸಿ ಭೂಮಿ ಎಂಬ ಪತ್ರದ ಮೇಲೆ

ಕಾರಸೆಯೇ ಸದಾಕಾಲ ಬರೆದರೂ, ನಿನ್ನ ಗುಣಗಳನ್ನು ಬರೆದು ಮುಗಿಸಲಾಗದು.)

೭ ಬಾಣ (ಕಾದಂಬರೀ ಪು. ೨೩೬, ೩೩೮)

....ತಮಾಲ ಪಾದಪಾತ್ । ಪಲ್ಲವಮಾದಾಯ । ನಿಷ್ಪೀಡ್ಯ । ಶಿಲಾತಲೇ ।
ತೇನ । .... ರಸೇನ । ಉತ್ತರೀಯ–ವಲ್ಕಲೈಕದೇಶಾದ್ ವಿಪಾಟ್ಯ । ಪಟ್ಟಿಕಾಂ ।
ಸ್ವಹಸ್ತ-ಕಮಲ-ಕನಿಷ್ಠಿಕಾ-ನಖ-ಶಿಖರೇಣ । ಅಭಿಲಿಖ್ಯ ।
'ಇಯಂ । ಪತ್ರಿಕಾ....' ।

(....ಹೊಂಗೆ ಮರದ ಚಿಗುರನ್ನು ಕಲ್ಲಿನ ಮೇಲೆ ತೀಡಿದನು. ಹೊದೆದಿದ್ದ ನಾರು ಬಟ್ಟೆ ಅಂಚಿನಲ್ಲಿ ಒಂದು ತುಂಡು ಹರಿದು, ಅದರ ಮೇಲೆ ತನ್ನ ಕಿರು ಬೆರಳ ಉಗುರು ತುದಿಯಿಂದ ಆ [ಹೊಂಗೆ] ರಸದಲ್ಲಿ ಬರೆದು 'ಈ ಪತ್ರವನ್ನು....')

....ಧೂಮರಕ್ತಾಲಕ್ತಕಾಕ್ಷರ–ತಾಲಪತ್ರ–ಕುಹಕ ತಂತ್ರ ಮಂತ್ರ ಪುಸ್ತಿಕಾ–
ಸಂಗ್ರಾಹಿಣಾ। .... । ಪಟ್ಟಿಕಾಲಿಖಿತ-ದುರ್ಗಾಸ್ತೋತ್ರೇಣ । ....

[ಹೊಗೆ ಹಿಡಿದು, ಅಲಕರಸದಿಂದ ತಾಳಪತ್ರದಲ್ಲಿ ಬರೆದ ಕುಹಕತಂತ್ರ-ಮಂತ್ರಗಳ ಪುಸ್ತಿಕೆಗಳನ್ನು ಸಂಗ್ರಹಿಸಿದ್ದ, ದುರ್ಗಾಸ್ತೋತ್ರವನ್ನು ಬಟ್ಟೆಯ ತುಂಡಿನ ಮೇಲೆ ಬರೆದಿಟ್ಟುಕೊಂಡಿದ್ದ....)

— (**ಹರ್ಷಚರಿತಂ** ಪು. ೮೫, ೧೫೧, ೨೧೬, ೨೪೧, ೨೫೨)

ತತ್‌ಕಾಲಾನೀತ-ಸೂತ್ರವೇಷ್ಟನಮಪಿ । ನಖಕಿರಣ-ಮೃದು ಮೃಣಾಲ-
ಸೂತ್ರೈರಿವ । ಆವೇಷ್ಟಿತಂ । ಪುಸ್ತಕಂ । ಪುರೋನಿಹಿತ-ಶರಶಿಲಾಕಾ-
ಯಂತ್ರಕೇ। ನಿಧಾಯ ।....। ಪ್ರಾಭಾತಿಕ ಪ್ರಪಾಠಕಚ್ಛೇದಚಿಹ್ನಿತಂ।ಅಂತರಂ।
ಪತ್ರಂ। ಉತ್‌ಕ್ಷಿಪ್ಯ। ಗೃಹೀತ್ವಾ। ಚ। ಕತಿಪಯ ಪತ್ರಲಘ್ವೀಂ। ಕಪಾಟಿಕಾಂ।
ಕ್ಷಾಲಯನ್ನಿವ । ಮಸಿಮಲಿನಾನ್ಯಕ್ಷರಾಣಿ । ದಂತ ಕಾಂತಿಭಿಃ । __ಪುರಾಣಂ।
ಪಪಾಠ ।

(ಕಟ್ಟದ ದಾರವನ್ನು ಆಗ ತಾನೇ ಬಿಚ್ಚಿದ್ದರೂ ಉಗುರುಕಾಂತಿಯೆಂಬ ತಾವರೆದಂಟಿನ ಸೂತ್ರಗಳಿಂದ ಸುತ್ತಿದಂತಿದ್ದ ಪುಸ್ತಕವನ್ನು ಎದುರಾಗಿದ್ದ ಶರಶಲಾಕಾಯಂತ್ರ [ವ್ಯಾಸ ಪೀಠ?] ದ ಮೇಲಿಟ್ಟು ಬೆಳಗ್ಗೆ ಓದಿದ್ದರ ಭಾಗದಿಂದ ಗುರುತಿನ ಪತ್ರವನ್ನು ಎತ್ತಿಟ್ಟು ಕೆಲವು ಪತ್ರಗಳನ್ನಷ್ಟು ಕೈಗೆತ್ತಿಕೊಂಡು ಮಸಿಮಲಿನವಾದ ಅಕ್ಷರಗಳನ್ನು ಹಲ್ಲಿನ ಕಾಂತಿಯಿಂದ ತೊಳೆಯುವಂತೆ.... ಪುರಾಣವನ್ನು ಓದಿದನು).

....ಲೇಖಗರ್ಭಯಾ । ನೀಲೀ ರಾಗ ಮೇಚಕರುಚಾ । ಚೀರ ಚೀರಿಕಯಾ ।
ರಚಿತ ಮುಂಡಮಾಲಕಂ । ....

(....ಲೇಖವನ್ನು ಒಳಸೇರಿಸಿಕೊಂಡು ನೀಲಿ ಬಣ್ಣದಿಂದ ಹೊಳೆಯುತ್ತಿದ್ದ ನಾರು ಬಟ್ಟೆಯನ್ನು ತಲೆಗೆ ಸುತ್ತಿಕೊಂಡಿದ್ದ....)

....ಅಗುರುವಲ್ಕಲಕಲ್ಪಿತಸಂಚಯಾನಿ। ಚ। ಸುಭಾಷಿತಭಾಂಜಿ।ಪುಸ್ತಕಾನಿ....
(ಅಗುರು ತೊಗಟೆಯಿಂದ ರಚಿಸಿದ ಸುಭಾಷಿತ ಪುಸ್ತಕಗಳನ್ನು...)

....ಕುಶಲ ಶಿಲ್ಪಿ ಲೋಕೋಲ್ಲಿಖಿತಾನಾಂ । ಚ । ಶುಕ್ತಿ-ಶಂಖ-ಗಲ್ಲರ್ಕ-ಪ್ರಮುಖಾನಾಂ । ಪಾನಭಾಜನಾನಾಂ । ನಿಚಯಾನ್....
(ಕುಶಲ ಶಿಲ್ಪಿಗಳಿಂದ ಬರೆಯಲ್ಪಟ್ಟ [ಅಕ್ಷರ ಚಿತ್ರಗಳನ್ನುಳ್ಳ] ಶಂಖ-ಚಿಪ್ಪು ಮೊದಲಾದವುಗಳಿಂದ ಆದ ಪಾನಪಾತ್ರಗಳ ಸಮೂಹವನ್ನು ....)
....ಲಿಖಿತಾನೇಕ-ಲೇಖ್ಯ-ಫಲಕ ಸಂಪುಟಾನ್....
(ಬರೆಯಲ್ಪಟ್ಟ ಅನೇಕ ಹಲಗೆಗಳನ್ನು ....)
ವ್ರಣವ್ಯಥಿತ-ಗುಲ್ಫಬದ್ಧ ಭೂರ್ಜತ್ವಚಾ....
[....ವ್ರಣವಿದ್ಧ ಗುಲ್ಫಕ್ಕೆ[(ಪಾದದ ಹರಡಿಗೆ) ಕಟ್ಟಿದ ಭೂರ್ಜಪತ್ರವುಳ್ಳ)]

೮. ಭವ ಭೂತಿ (ಮಹಾವೀರ ಚರಿತಂ ಪು. ೫೦)

ಯಃ । ಪರಶುರಾಮಸ್ಯ । ಯುಷ್ಮಾಭಿಃ । ವಾರ್ತಾಹರಃ । ಪ್ರೇಷಿತಃ । ತೇನೈತತ್ । ತಮಾಲ ರಸ-ವಿನ್ಯಸ್ತಾಕ್ಷರಂ । ತಾಲ ಪತ್ರಂ । ಉಪಾನೀತಂ।
(ಪರಶುರಾಮನಲ್ಲಿಗೆ ಯಾವ ಸಂದೇಹವಾಹಕವನ್ನು ನೀವು ಕಳುಹಿಸಿದ್ದಿರೋ ಅವನೇ ತಮಾಲ ರಸದಲ್ಲಿ ಬರೆದ ಅಕ್ಷರಗಳುಳ್ಳ ಈ ತಾಳಪತ್ರವನ್ನು ತಂದುಕೊಟ್ಟನು.)
....ಅರುಣಧಾತು ವರ್ತಿ ಫಲಕೇಷು । ಲಿಖಂತೀಂ....
(ಅರುಣ ವರ್ಣದ ಹಲಗೆಗಳ ಮೇಲೆ ಬರೆಯುತ್ತಿರುವ....)

೯. ಭಾಸ (ಅಭಿಷೇಕನಾಟಕಂ ೪.೧೮ರ ಮೇಲೆ)

....ಪುಸ್ತಕ ಪ್ರಾಮಾಣ್ಯಾತ್....ಗೃಹೀತಾ ।....
(....ಪುಸ್ತಕದ ಆಧಾರದ ಮೇಲೆ .... ಬಂಧಿಸಲಾಯಿತು.)

—ಅವಿಮಾರಕಂ (೨. ಸಾ. ೪೮-೫೨)

ಚೇಟಿ—ತೇನ । ಹಿ । ಭಣಾಹಿ । ಕಿಂ । ಣಾಮ । ಏದಂ । ಅಕ್ಖರಂ ।
(ನಾಮ ಮುದ್ರಿಕಂ । ದರ್ಶಯತಿ)
ವಿದೂಷಕಃ– ....ಭೋದಿ, । ಏವಂ । ಅಕ್ಖರಂ । ಮಮ ಪುತ್ತಏ । ಣತ್ಥಿ ।
(ಭೇ....ಹಾಗಾದರೆ, ಇದು ಯಾವ ಅಕ್ಷರವೆಂದು ಹೇಳು.)
(ಹೆಸರಿನ ಉಂಗುರವನ್ನು ತೋರುತ್ತಾಳೆ)
ವಿ.- ....ತಾಯಿ ಈ ಅಕ್ಷರ ನನ್ನ ಪುಸ್ತಕದಲ್ಲಿ ಇಲ್ಲ.)

—ಪಂಚರಾತ್ರಂ ೨.೨೭ ರ ಮೇಲೆ)

....ಕರ್ಮಾಣಿ । ಪುಸ್ತಕಮಾರೋಪಯತಿ । ಕುಮಾರಃ ।
(ರಾಜಕುಮಾರನು [ಯೋಧರ ಸಾಹಸ] ಕೃತ್ಯಗಳನ್ನು ಪುಸ್ತಕದಲ್ಲಿ ಬರೆಯುತ್ತಿದ್ದಾನೆ.)

೧೦. ಮಂಖ (ಶ್ರೀಕಂಠಚರಿತಂ ೬.೧೫)

ಹಿರಣ್ಮಯಂ । ಶಾಸನ ಲೇಖಹೇತೋಃ । ಸಜ್ಜಂ । ಮಸೀಭಾಂಡಮಿವ । ಸ್ಮರಸ್ಯ ।

(ಮನ್ಮಥನ ಶಾಸನ ಬರೆಯುವುದಕ್ಕೆ ಸಿದ್ಧಗೊಳಿಸಿದ ಚಿನ್ನದ ಮಸೀ ಕುಡಿಕೆಯಂತೆ-)

೧೧ **ವಾಲ್ಮೀಕಿ ರಾಮಾಯಣ** (ಸುಂದರ-೩೬.೨)

ರಾಮನಾಮಾಂಕಿತಂ । ಚೇದಂ । ಪಶ್ಯ । ದೇವ್ಯಂಗುಲೀಯಕಂ ।
(ದೇವಿ, ರಾಮನ ಹೆಸರಿರುವ ಈ ಉಂಗುರವನ್ನು ನೋಡು.)

೨. **ವಿಶಾಖದತ್ತ** (**ಮುದ್ರಾರಾಕ್ಷಸ** ೧.೧೯ರ ಮೇಲೆ)

ಕಾಯಸ್ಥ । ಇತಿ । ಲಘ್ವೀ । ಮಾತ್ರಾ । ತಥಾಪಿ । ನ । ಯುಕ್ತಂ । ಪ್ರಾಕೃತಂ।
ರೂಪಂ । ಅವಜ್ಞಾತುಂ । ।.... ಮಸೀಭಾಜನಂ । ಪತ್ರಂ । ಚ । ಉಪನಯ.
....ಶ್ರೋತ್ರಿಯಾಕ್ಷರಾಣಿ । ಪ್ರಯತ್ನ-ಲಿಖಿತಾನ್ಯಪಿ । ನಿಯತಂ ।
ಅಸ್ಫುಟಾನಿ । ಭವಂತಿ ....ಅದತ್ತ–ಬಾಹ್ಯ ನಾಮಾನಂ । ಲೇಖಂ
ಶಕಟದಾಸೇನ । ಲೇಖಯಿತ್ವಾ । ಮಾಂ। ಉಪತಿಷ್ಠಸ್ವ ।
(ಕಾಯಸ್ಥ ಎಂಬುದು ಬಹಳ ಸಾಮಾನ್ಯವಾದುದು. ಆದರೂ ಆತನನ್ನು ಕಡೆಗಣಿಸಬಾರದು....ಮಸಿಕುಡಿಕೆ-ಪತ್ರಗಳನ್ನು ತಾ.-ಶ್ರೋತ್ರಿಯನ ಅಕ್ಷರಗಳು ನಿಧಾನವಾಗಿ ಬರೆದರೂ ಸ್ಪಷ್ಟವಾಗಿರುವುದಿಲ್ಲ. ಶಕಟದಾಸನಿಂದ ಲೇಖವನ್ನೂ ಹೊರವಿಳಾಸವನ್ನು ಬಿಟ್ಟು ಬರೆಯಿಸಿ ತೆಗೆದುಕೊಂಡು ಬಾ.)

೧೩. **ಶ್ರೀಹರ್ಷ** (**ನೈಷಧೀಯ ಚರಿತಂ** ೬-೬೩, ೧-೮೭)

ದಲೋದರೇ । ಕಾಂಚನಕೇತಕಸ್ಯ । ಕ್ಷಣಾನ್ಮಸೀ ಭಾವುಕ–ವರ್ಣರೇಖಾಂ ।
ತಸ್ಯೈವ । ಯತ್ರ । ಸ್ವಮಸಂಗಲೇಖಂ । ಲಿಲೇಖ । ಭೈಮೀ । ನಖಲೇಖನೀ ಭಿಃ॥
(ಚಿನ್ನದಂತಿರುವ ಕೇದಗೆಯ ದಳದಲ್ಲಿ ಉಗುರುಗಳೆಂಬ ಲೇಖನಿಗಳಿಂದ ಪ್ರೇಮಪತ್ರವನ್ನು ದಮಯಂತಿಯು ಬರೆದಳು).
ದ್ವಿಕುಂಡಲೀ । ವೃತ್ತಸಮಾಪ್ತಿಲಿಪ್ಯಾಃ । ಕರಾಂಗುಲೀ । ಕಾಂಚನ ಲೇಖನೀನಾಂ ।
ಕೈಶ್ಯಂ । ಮಶೀನಾಂ । ಸ್ಮಿತಭಾಃ । ಕರಿನ್ಯಾಃ । ಕಾಯೇ । ಯದೀಯೇ ।
ನಿರಮಾಯಿ । ಸಾರೈಃ ।
(ವೃತ್ತ ಸಮಾಪ್ತಿ ಲಿಪಿಯ ಸಾರದಿಂದ ಅವಳ ಎರಡು ಕುಂಡಲಗಳೂ, ಚಿನ್ನದ ಲೆಕ್ಕಣಿಕೆಯ ಸಾರದಿಂದ ಬೆರಳುಗಳೂ, ಮಸಿಯ ಸಾರದಿಂದ ತಲೆಗೂದಲೂ, ಬಳಪದ ಸಾರದಿಂದ ಬೆಳ್ನನೆ ನಗುವೂ ನಿರ್ಮಿತವಾದಂತೆ ಇದ್ದವು.)

೧೪. **ಸುಬಂಧು** (**ವಾಸವದತ್ತ**)

....ವಿಶ್ವಂ । ಗಣಯತೋ । ಧಾತುಃ ಶಶಿಕಠಿನೀಖಂಡೇನ ।
ತಮೋಮಶೀಶ್ಯಾಮೇ । ಅಜಿನ । ಇವ । ವಿಯತಿ । ಸಂಸಾರಸ್ಯ ।
ಅತಿ ಶೂನ್ಯತ್ವಾತ್ । ಶೂನ್ಯ-ಬಿಂದವ । ಇವ ವಿಲಿಖಿತಾಃ....
ತಾರಾ । ವ್ಯರಾಜಂತ ।
(....ವಿಶ್ವದ ವಸ್ತುಗಳ ಬೆಲೆ ಕಟ್ಟಹೊರಟ ಬ್ರಹ್ಮನು ಚಂದ್ರನೆಂಬ ಬಳಪದ ತುಂಡಿ

ನಿಂದ ಕತ್ತಲೆಂಬ ಮಸಿಯಿಂದ ಕಪ್ಪಾದ ಚರ್ಮವೆಂಬ ಆಕಾಶದಲ್ಲಿ ಬರೆದಂಥ. ಸಂಸಾರವೆಲ್ಲ ಶೂನ್ಯವಾದ್ದರಿಂದ ಸೊನ್ನೆಯ ಗುರುತುಗಳಂತೆ ಇದ್ದ....ತಾರೆಗಳು ಪ್ರಕಾಶಿಸಿದವು.)

೧೫. (ಅಜ್ಞಾತ ಕರ್ತೃಕ–ಕಾವ್ಯಪ್ರಕಾಶ ಉದಾ ೪-೫೦)

ನಿರುಪಾದಾನಸಂಭಾತಂ । ಅಭಿತ್ರಾವೇವ ತನ್ವತೇ ।
ಜಗಚ್ಚಿತ್ರಂ । ನಮಸ್ತಸ್ಮೈ । ಕಲಾಶ್ಲಾಘ್ಯಾಯ । ಶೂಲಿನೇ ॥

(ಬಣ್ಣ ಮೊದಲಾದ ಸಲಕರಣೆಗಳಿಲ್ಲದೆ ಭಿತ್ತಿ [ಗೋಡೆ, ಹಲಗೆ ಇ.] ಇಲ್ಲದೆ ಜಗತ್ತಿನ ಚಿತ್ರವನ್ನು ಬರೆಯುವ ಶ್ರೇಷ್ಠಕಲಾವಿದನಾದ ಆ ಶೂಲಿಗೆ [ಶಿವನಿಗೆ] ನಮಸ್ಕಾರ.)

ಆದಿಪುರಾಣದೊಳರಿವುದು....

ಡಾ. ಸಾ. ಶಿ. ಮರುಳಯ್ಯ

೧

ಮೈಮನಸ್ಸುಗಳಿಗಿದ್ದಂತೆ ಆತ್ಮಕ್ಕೂ ಹಸಿವೆ ಎಂಬುದಿದೆ. ಮೈನ ಹಸಿವೆ ಅನ್ನ, ನಿದ್ರೆ, ಮೈಥುನಗಳಿಂದ ಇಂಗಿದರೆ, ಮನಸ್ಸಿನ ಹಸಿವೆ ಚಿತ್ರ, ಶಿಲ್ಪ, ನೃತ್ಯ, ಸಂಗೀತ, ಸಾಹಿತ್ಯಾದಿ ಲಲಿತಕಲೆಗಳ (Fine Arts) ಮೂಲಕ ತೃಪ್ತವಾಗುತ್ತದೆ. ಅದೇ ರೀತಿ ಆತ್ಮದ ಹಸಿವೆಯನ್ನು ಆಧ್ಯಾತ್ಮದ ಪೂರೈಕೆಯಿಂದಲೇ ತಣಿಸಬೇಕಾಗುತ್ತದೆ. ಆದರೆ ಉತ್ಕೃಷ್ಟತ ಪ್ರಾಣಿ, ಇಲ್ಲವೇ ಪತಿತ ದೇವತೆ ಎಂದೆನಿಸಿಕೊಂಡ ಮಾನವ ಅಷ್ಟರಿಂದಲೇ ತೃಪ್ತನಾಗಲಾರ. ಅವನಿಗೆ ಲೋಕವನ್ನು ಅನುಭವಿಸುವ ಹೃದಯವಿದೆ, ತನ್ನ ಪರಿಸರದೊಡನೆ ಸ್ಪಂದಿಸುವ ಚೇತನವಿದೆ, ತನ್ನ ಅನುಭವದ ಕಕ್ಷೆಯಲ್ಲಿ ಅಳವಟ್ಟಿದ್ದನ್ನು ಕಲೆಯ ಮೂಲಕ ಅಭಿವ್ಯಕ್ತಪಡಿಸುವ ಸಾಮರ್ಥ್ಯವಿದೆ. ಮರಳಿನಲ್ಲಿ ಎಣ್ಣೆ ತೆಗೆವ, ಕಲ್ಲಲ್ಲಿ ನಾರೆತ್ತುವ, ಶೂನ್ಯದಲ್ಲಿ ಸೃಷ್ಟಿ ಮಾಡುವ ಗಾರುಡಿಗತನ ಇದೆ. ಕವಿಚೇತನದ ಸೌಂದರ್ಯಾನುಭೂತಿಯು ಕಾವ್ಯಾಭಿವ್ಯಕ್ತಿ ಪಡೆದಾಗ ಸಹೃದಯ ಚೇತನ ಅದನ್ನು ಆಸ್ವಾದಿಸಿ ಆನಂದಿಸುತ್ತದೆ. ಆ ಆನಂದವನ್ನು ಕಾವ್ಯಾನಂದ ಅಥವಾ ರಸ ಎಂದು ಕರೆದಿದ್ದಾರೆ, ನಮ್ಮ ಭಾರತೀಯ ಕಾವ್ಯಮೀಮಾಂಸಕರು.

ಮಾನವನ ವಿಕಾಸಶೀಲ ಮನಸ್ಸು ಸದಾ ನವನವೋನ್ಮೇಷಶಾಲಿನಿಯಾದಂತೆ, ಸದಾ ಊರ್ಧ್ವಗಾಮಿಯೂ ನಕ್ಷತ್ರಯಾತ್ರಿಯೂ ಆಗಿದೆ. ಭೂಮಿಯಿಂದ ಭೂಮದವರೆಗೂ ವ್ಯಾಪಿತವಾಗಿ, ವಿಶ್ವದಾಚೆಗೂ ನಾಲ್ವೆರಳು ಎತ್ತರದಲ್ಲಿ ನಿಲ್ಲುವ, ನಿಂತು ನೋಡುವ ಅನ್ಯಾದೃಶ ದಕ್ಷತೆ ಇದೆ ಅದಕ್ಕೆ. ನಿರ್ಗುಣ ನಿರಾಕಾರ ಶಕ್ತಿಯನ್ನು ಸಗುಣ ಸಾಕಾರಗೊಳಿಸುವ, ಅಚಿಂತ್ಯ ಅನೂಹ್ಯ ಅಗೋಚರ ಎನ್ನಿಸಿದ್ದನ್ನು ಸಚಿತ್ರ, ಸದ್ರೂಪ, ಸಗೋಚರಗೊಳಿಸುವ ಸಾಮರ್ಥ್ಯವೂ, ಅಗ್ರಾಹ್ಯವೆನಿಸಿದ್ದನ್ನು ಕಣ್ಣಾರೆ ಕಂಡು, ಕೈಯಾರ ಕಂಡರಿಸುವ ಚಾತುರ್ಯವೂ ಅದಕ್ಕಿದೆ. ಕಾವ್ಯಾನುಭೂತಿಗಿಂತಲೂ ಮಿಗಿಲಾದ ಆತ್ಮಾನುಭೂತಿ ಅದರದು. ಅದೇ ಮನುಕುಲ ಪ್ರಜ್ಞೆಯ ತುರೀಯಸ್ತರ. ಕವಿ ಚೇತನ ಸೌಂದರ್ಯದ ಸೀಮೆಯಲ್ಲಿ ವಸಂತ ವಿಹಾರ ಕೈಗೊಂಡಂತೆ, ಋಷಿ ಚೇತನ ಸತ್ಯ ಶಾಶ್ವತ ನಿತ್ಯ ಪರಿಪೂರ್ಣವಾದ ಆಧ್ಯಾತ್ಮ ವಲಯದಲ್ಲಿ ವಿಹರಿಸಿ ವಿಶ್ರಾಂತಿ ಪಡೆಯುತ್ತದೆ. ಆಧ್ಯಾತ್ಮ ಲೋಕದ ಆತ್ಮಾನಂದ ಅಥವಾ ಬ್ರಹ್ಮಾನಂದವು ಕಲಾಲೋಕದ ಕಾವ್ಯಾನಂದಕ್ಕಿಂತಲೂ ಮಿಗಿಲಾದದ್ದು ; ಬಹುಮೌಲ್ಯವುಳ್ಳದು. ಕವಿ ಬೇಂದ್ರೆಯವರು ಹೇಳುವಂತೆ ಅದು 'ಓಂಕಾರ ಶಂಖನಾದಕ್ಕಿಂತ ಕಿಂಚಿದೂನ' ವಾದದ್ದು. ಇದು ಶಬ್ದಾರ್ಥ ಸಂಜನಿತ, ಅದು ನಾದಬಿಂದು ಕಳಾತೀತ. ಇದು

ಸಹೃದಯ ಹೃದಯಾಹ್ಲಾದಕಾರಿಣಿ, ಅದು ಅಪರೋಕ್ಷಜ್ಞಾನಿಗಳ ಆತ್ಮಾನಂದ ಬೋಧಿನಿ. ಕಾವ್ಯಾನಂದವನ್ನು 'ಸಕಲ ಪ್ರಯೋಜನ ಮೌಲಿ ಭೂತಾಮ್' ಎಂತಲೂ, 'ಬ್ರಹ್ಮಾನಂದ ಸಹೋದರ' ಎಂತಲೂ ಕರೆದರು ; ನಿಜ. ಕಾವ್ಯಾನಂದ ಬ್ರಹ್ಮಾನಂದ ಸಹೋದರ ನಿಜ ; ಆದರೆ ಬ್ರಹ್ಮಾನಂದ ಅಲ್ಲ. ಬ್ರಹ್ಮಾನಂದವೇ ಬೇರೆ. ಅದು ಕಾವ್ಯಾನಂದದ ಹಿರಿಯ ಅಣ್ಣ. ಅದರದು ಅನುಭೂತಿಯ ಮೊದಲ ದರ್ಜೆ, ಅಭಿವ್ಯಕ್ತಿಯ ತುರೀಯಸ್ತರ, ಆನಂದದ ಮಹಾಮಜಲು. ಆ ಮಜಲಿಗೇರಲು ಸಮೆದ ಸೋಪಾನವೇ ಆಧ್ಯಾತ್ಮ ಸಾಹಿತ್ಯ.

೨

ಪಂಪನ ಆದಿಪುರಾಣ ಅಂತಹ ಅತ್ಯಮೂಲ್ಯ ಆಧ್ಯಾತ್ಮ ಸಾಹಿತ್ಯ ಕೃತಿ. ಅದೊಂದು ಅಲೌಕಿಕ ಕಾವ್ಯ. ಲೋಕೋತ್ತರ ವಸ್ತುವಿನ್ಯಾಸವೇ ಅದರ ಜೀವದ್ರವ್ಯ. ಇಹದ ಬದುಕು ಪೂರ್ಣಗೊಂಡ ಮೇಲೆ ಪರದ ಚಿಂತನೆ. ಆ ಚಿಂತನೆಯಲ್ಲೇ ಅನವರತವೂ ಸಾಗುತ್ತದೆ, ಆತ್ಮನ ಅನಂತ ಯಾತ್ರೆ. ಅದು ತೀರ್ಥಯಾತ್ರೆ, ತೀರ್ಥಂಕರ ಯಾತ್ರೆ ! ಜೀವ ದೇವನಾಗುವ, ನರ ಹರನಾಗುವ, ಮಾನವ ಮಾಧವನಾಗುವ, ಅಲ್ಪತ್ವವನ್ನು ಕಳೆದು ಕಲ್ಪತ್ವವನ್ನು ಸಾಧಿಸುವ ಜೀವಾತ್ಮ–ಪರಮಾತ್ಮರ ಸಂಬಂಧ ಸೂಚಕ ತತ್ತ್ವಗಳನ್ನು ವೈದಿಕಾದಿ ಧರ್ಮಗಳು ಬೋಧಿಸಿದರೆ, ದೇವತ್ವಕ್ಕೂ ಮೀರಿದ, ಕಲ್ಪದಾಚೆಗೂ ವ್ಯಾಪಕವಾದ ಸಮವಸರಣದ ಮಹಾಮಂಟಪದಲ್ಲಿ, ಗಂಧ ಕುಟಿಯ ಸಹಸ್ರದಲ ಪದ್ಮಪೀಠದ ಮೇಲೆ ನಾಲ್ವೆರಳೆತ್ತರದಲ್ಲಿ ಮಂಡಿಸುವ ತಪೋ ಮುದ್ರಿತ ಮಹಾಮೂರ್ತಿ ಜಿನಸ್ವಾಮಿಯ ಆದಿಬ್ರಹ್ಮತ್ವವನ್ನು ಸಿದ್ಧಿಸಿಕೊಳ್ಳುವ ಮಹದ್ದರ್ಶನವನ್ನು ಬೆಳಗುತ್ತದೆ ಜೈನಧರ್ಮ. ಜೀವ ಅಜೀವದ ಹಲವಾರು ಆವರಣಗಳಲ್ಲಿ ಅಥವಾ ಸಂಸಾರದ ಮಿಥ್ಯಾಜ್ಞಾನ ಮೊದಲಾದ ಸುವರ್ಣ ಸಂಕೋಲೆಗಳಲ್ಲಿ ಸಿಕ್ಕಿಬಿದ್ದು, ನಾಯಾಗಿ, ನರಿಯಾಗಿ, ಹುಳುವಾಗಿ, ಹುಲ್ಲೆಯಾಗಿ, ಮಾನವನೋ, ದಾನವನೋ, ದೇವನೋ, ನಾರಕಿಯೋ, ಯಾವುದೋ ಒಂದುಭವ, ಮತ್ತಾವುದೋ ಒಂದು ಕಲ್ಪ–ಹೀಗೆಲ್ಲಾ ಅಲೆದಲೆದು ಅವತರಿಸಿದಂತೆಲ್ಲಾ ಕ್ರಮೇಣ ತನ್ನಲ್ಲಿನ ಕಾಮದ ಕಾಳಿಕೆಯ ಆವರಣವನ್ನು ಕಳಚಿಕೊಳ್ಳುತ್ತಾ ಪರಿಶುದ್ಧ ಪರಮಾತ್ಮನಾಗಿ ಪರತತ್ತ್ವವನ್ನು ಪ್ರಚುರಪಡಿಸುತ್ತಾ ಮುಕ್ತಿದಾಯಿಯೂ ಮಹಾಶಕ್ತಿಯೂ, ದಿವ್ಯವಿಭೂತಿಯೂ, ಪರಂಜ್ಯೋತಿಯೂ ತಾನಾಗುತ್ತದೆ. ಜ್ಯೋತಿಗೆ ಎಣ್ಣೆ ಬತ್ತಿಗಳ ಅಗತ್ಯ ಇದೆ, ಆದರೆ ಈ ಪರಂಜ್ಯೋತಿಗೆ ಅವುಗಳ ನೆರವೇ ಬೇಕಾಗಿಲ್ಲ ; ತಾನೇ ತಾನಾಗಿ ಬೆಳಗುತ್ತದೆ ವಿಶ್ವದಾದ್ಯಂತ.

ಹೀಗಾಗುವ ಆತ್ಮಕ್ಕೆ ಪಾಪ ಪುಣ್ಯಗಳ ಲೇಪವಿರಕೂಡದು. ಇವೆರಡರಲ್ಲಿ ಯಾವುದಿದ್ದರೂ ಆತ್ಮನಿಗೆ ಮುಕ್ತಿ ಲಭಿಸುವುದಿಲ್ಲ. ಪಾಪದಿಂದ ಆತ್ಮ ಆವೃತವಾಗಿದ್ದರೆ ನಾರಕಿಯೊ ತಿರ್ಯಕ್ ಜಂತುವೊ ಆಗಿ ಹುಟ್ಟಬೇಕಾಗುತ್ತದೆ ಅಥವಾ ಪುಣ್ಯ ಪೋಷಿತವಾಗಿದ್ದರೆ ಮಾನುಷನೋ ದೇವನೋ ಆಗಿ ಜನ್ಮ ತಳೆಯಬೇಕಾಗುತ್ತದೆ ; ಅಷ್ಟೆ. ಅವೆರಡನ್ನೂ ನೀಗಿಕೊಳ್ಳುವವರೆಗೆ ಮೋಕ್ಷವಂತೂ ಇಲ್ಲ. ಆದ್ದರಿಂದ

ಮೋಕ್ಷದ ಮಹಾಫಲ ಪ್ರಾಪ್ತವಾಗಬೇಕೆಂದಿದ್ದರೆ ಇವೆರಡರಿಂದಲೂ ಆತ್ಮಮುಕ್ತವಾಗಿ, ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರವೆಂಬ ರತ್ನತ್ರಯಂಗಳನ್ನು ಸಾಧಿಸಿಕೊಂಡು, ಶುಕ್ಲಧ್ಯಾನದಲ್ಲಿ ಪರಿಣಾಮಿಸಬೇಕು. ಕಾಲಲಬ್ಧಿ ದೊರೆತಾಗ, ಪಕ್ವವಾದ ಹಣ್ಣು ತಾನಾಗಿಯೇ ತೊಟ್ಟು ಕಳಚಿ ಬೀಳುವಂತೆ ಆ ಭವ್ಯಾತ್ಮ ತನ್ನ ಸಹಜ ಸ್ವರೂಪವನ್ನು ಪಡೆದು ಅನಂತ ಜ್ಞಾನಾದಿಗಳಿಂದ ಬೆಳಗುತ್ತಾ ಶಾಶ್ವತನಾದ ಮೋಕ್ಷ ಸುಖದಲ್ಲಿ ಲೋಕಾಗ್ರದಲ್ಲಿ ನೆಲೆಗೊಳ್ಳುತ್ತದೆ.

ಇದು ಜೈನ ಧರ್ಮದ ರೂಪುರೇಷೆ. ಇದನ್ನು ಸರಳವಾಗಿ ಅರ್ಥೈಸಬೇಕೆಂದರೆ ಈರುಳ್ಳಿ ಗಡ್ಡೆಯನ್ನು ಪ್ರತಿಮೆಯಾಗಿ ಸ್ವೀಕರಿಸಬಹುದು : ಈರುಳ್ಳಿ ಗೆಡ್ಡೆಯನ್ನು ತೆಗೆದುಕೊಂಡು ಅದರ ಪದರಗಳನ್ನು ಒಂದಾದ ಮೇಲೊಂದರಂತೆ ಬಿಚ್ಚುತ್ತಾ ಹೋದರೆ ಕಡೆಗೇನೂ ಉಳಿಯುವುದಿಲ್ಲ ; ಸಂಪೂರ್ಣ ಶೂನ್ಯವಾಗುತ್ತದೆ. ಅದೇ ಜೈನ ಧರ್ಮದ ಶುದ್ಧ ಸ್ವರೂಪ. ಆದಿಯಲ್ಲಿ ಚೈತನ್ಯ ಸ್ವರೂಪವಾದ ಚಿರಂತನವಾದ ಆತ್ಮ ಅನಂತಜ್ಞಾನ, ಅನಂತ ದರ್ಶನ, ಅನಂತ ವೀರ್ಯ, ಅನಂತ ಸುಖಗಳಿಂದ ಕೂಡಿದ್ದು ವಿಶ್ವದಲ್ಲಿ ತಾನೆಲ್ಲವಾಗಿದ್ದು, ಅಜೀವದ ಸಂಪರ್ಕದಿಂದ ಕರ್ಮಶೃಂಖಲೆಗಳಲ್ಲಿ ಸಿಕ್ಕಿದ್ದು ಮತ್ತೆ ಭವಭವಗಳಲ್ಲಿ ಬಿಡುಗಡೆ ಹೊಂದುತ್ತಾ ಕಡೆಯಲ್ಲಿ ತನ್ನ ಮೊದಲಿನ ನಿರ್ವಿಕಾರ ಸ್ವರೂಪದಿಂದ ಅರ್ಹತ್ ಪದವಿಯನ್ನು ಗಳಿಸಿ, ಜಿನನಾಗುತ್ತದೆ. ಚತುರ್ಗತಿಗಳಲ್ಲಿ ತೊಳಲುವ ಜೀವ ಜನ್ಮ ಜನ್ಮಕ್ಕೂ ತನ್ನನ್ನಾವರಿಸಿರುವ ಕಾಳಿಕೆಯನ್ನು ನೀಗಿಕೊಂಡು ಪರಿಶುದ್ಧವಾಗುತ್ತಾ, ಆಸನ್ನಭವ್ಯ ಅಂದರೆ ಭವ್ಯತೆಗೆ ಸಮೀಪಗತವಾದ ಕೂಡಲೆ, ಹೇಗೆ ಚಂದ್ರಮಂಡಲದೆಡೆಗೆ ಉಡಾಯಿಸಿದ ಸ್ಪೂಟ್ನಿಕ್ ಭೂಮಿಯ ಪಥವನ್ನು ದಾಟಿದ ಕೂಡಲೆ ಚಂದ್ರಗ್ರಹದ ಆಕರ್ಷಣೆಗೆ ಒಳಗಾಗಿ ಭೂಮಿಯ ಸಂಪರ್ಕವನ್ನು ಸಂಪೂರ್ಣವಾಗಿ ಕಳಚಿಕೊಳ್ಳುತ್ತದೋ ಹಾಗೆ ಮೋಕ್ಷದ ಸೆಳೆವಿಗೆ ಸಿಕ್ಕು ಅತ್ತ ಧಾವಿಸುತ್ತದೆ. ಆಗ ಅದಕ್ಕೆ ಕಾಮಭ್ರಮೆ ಕಡಿಮೆಯಾಗಿ ಮೋಕ್ಷದ ಹಂಬಲ ಪ್ರಬಲವಾಗುತ್ತಾ ಹೋಗುತ್ತದೆ.

ಹೀಗೆ ಜೀವ ಜಿನವಾಗುವ ಆತ್ಮದ ಅದ್ಭುತ ವಿಕಾಸ (The Evolution o the Soul) ವನ್ನು ಪ್ರತಿಪಾದಿಸಿ ತೋರುವುದೇ ಜೈನ ಪುರಾಣಗಳ ಘನೋದ್ದೇಶ. ಇಂತಹ ಮಹದ್ದರ್ಶನವನ್ನೇ ತನ್ನ ಕಾವ್ಯವಸ್ತುವನ್ನಾಗಿ ಆರಿಸಿಕೊಂಡಿದ್ದಾನೆ ಪಂಪ. 'ಧರ್ಮ ದೃಷ್ಟಿ, ಭಗವದ್ ಭಕ್ತಿ, ಋಷಿದರ್ಶನಗಳಿಂದ ಕೂಡಿದ ಒಂದು ದರ್ಶನ ಕಾವ್ಯ ಆದಿಪುರಾಣ. ಜೈನದರ್ಶನ ಕನ್ನಡ ಕಾವ್ಯವಾಗಿ ಇಲ್ಲಿ ರೂಪು ತಳೆದಿದೆ. ಮಹಾಮಹಿಮನಾದ ಪ್ರಥಮ ಜಿನೇಶ್ವರನ ದಿವ್ಯಕಥೆ ಇದರ ವಸ್ತು. ಧರ್ಮಬೋಧನೆಯಿಂದ ಆಕರ್ಷಿತರಾಗುವವರು ಕೆಲವರಾದರೆ ಕಲಾಸೌಂದರ್ಯದಿಂದ ಆಕರ್ಷಿತರಾಗುವವರು ಹಲವರಿದ್ದಾರೆ. ಪಂಪನಿಗೆ ಇದು ಗೊತ್ತಿಲ್ಲದಿಲ್ಲ. ಆದುದರಿಂದ ಕವಣೆಯೊಂದರಿಂದಲೇ ಹಕ್ಕಿಯೂ ಹಣ್ಣೂ ಬುಟ್ಟಿಗೆ ಒಟ್ಟಿಗೆ ಬೀಳುವ ಚಮತ್ಕಾರವನ್ನೂ ಸಾಧಿಸಿದ್ದಾನೆ ಇಲ್ಲಿ ಕಾವ್ಯಧರ್ಮವನ್ನೂ ಧರ್ಮವನ್ನೂ ಕೂಡಿಸಿ. ಇದರಿಂದ ಈ ಕಾವ್ಯ ಯಾರು ಯಾರು ಯಾವ ಯಾವ ನೋಟದಿಂದ ನೋಡಿದರೂ ಎಂತೆಂತಹ ಸಂಸ್ಕಾರ

ಸೋಪಾನದಲ್ಲಿ ನಿಂತು ಈಕ್ಷಿಸಿದರೂ ಅವರವರಿಗೆ ಆಯಾಯ ರೀತಿಯಿಂದಲೇ ದರ್ಶನ ವಿತ್ತು ಉದ್ಧಾರಗೈವ ಪವಾಡ ಕೃತಿಯಾಗಿ ಪರಿಣಮಿಸಿದೆ. ಆಗಮ ಫಲ ರಸಾಸ್ವಾದ ದಿಂದ ಸಂತೃಪ್ತವಾದ ಕಾವ್ಯಪಕ್ಷಿ ಸಹೃದಯರ ಹೃದಾಯಾರಾಮವನ್ನು ಹೊಕ್ಕು ಬ್ರಹ್ಮಾನಂದದ ಬೃಹದ್ ಗಾನವನ್ನು ಸಲಸಲಕ್ಕೆ ಉಣ್ಣಿಸುತ್ತದೆ. ಇಲ್ಲಿ ಕೇಳುವವರು ಕಿವಿಗೊಟ್ಟಲ್ಲಿ !'

೩

ಕಾವ್ಯಾನಂದಕ್ಕೆ ಬೇಕಾಗುವ ಪರಿಕರಗಳೇ ಬೇರೆ, ಬ್ರಹ್ಮಾನಂದ ಬಯಸುವ ಸಿದ್ಧತೆಗಳೇ ಬೇರೆ. ಅದಕ್ಕೆ 'ಅಲಂಕಾರ' ಅನಿವಾರ್ಯ, ಇದಕ್ಕೆ ತನ್ನನ್ನು ತಾನು ಅನಾವರಣಗೊಳಿಸಿಕೊಳ್ಳುವ ಹಂತಗಳು ಮುಖ್ಯ. 'ಅಲಂಕಾರ'ದ ಅರ್ಥ ಕೇವಲ ಯಮಕಾದಿ ಶಬ್ದಾಲಂಕಾರಗಳಲ್ಲಾಗಲಿ, ಉಪಮಾ ರೂಪಕ ದೀಪಕ ಅರ್ಥಾಂತರ ನ್ಯಾಸ ಮೊದಲಾದ ನೂರಿಪ್ಪತ್ತು ಅರ್ಥಾಲಂಕಾರಗಳಲ್ಲಾಗಲಿ ಸೀಮಿತವಾಗಿಲ್ಲ. ಅವನ್ನೂ ಒಳಕೊಂಡು ಕಾವ್ಯ ವ್ಯಂಜಿಸುವ ಧ್ವನಿ, ರಂಜನೀಯ ವಕ್ರೋಕ್ತಿ, ಆನಂದಾನುಭೂತಿ ಯನ್ನೀವ ರಸ, ಔಚಿತ್ಯಮರಿತ ಪದ-ಪದಪುಂಜ, ಅರ್ಥಪೂರ್ಣ ಸರಳ ಅಥವಾ ಶ್ರೀಮಂತ ಶೈಲಿ, ಮಧುರ ಮಂಜುಳವೆನಿಸುವ ನಾದಮೋದ, ಅನುಭವೈಕವೇದ್ಯವಾಗುವ ದರ್ಶನ- ಇವೆಲ್ಲವನ್ನೂ ಗರ್ಭೀಕರಿಸಿಕೊಂಡು ರೀತಿಯೇ ಕಾವ್ಯದ ಆತ್ಮವೆಂದು ಘೋಷಿಸಿ ಕೊಳ್ಳುವ 'ಕಾವ್ಯ ಶೋಭಾಕರಾನ್ ಧರ್ಮಾನ್' ಅಂದರೆ ಕಾವ್ಯದ ಕಳೆ-ಕಾಂತಿ ಗಳನ್ನು ಹೆಚ್ಚಿಸುವ ಎಲ್ಲ ಎಲ್ಲ ಅಂಶಗಳು, ಅವುಗಳೇ ಕಾವ್ಯ ಧರ್ಮಗಳು. ಪ್ರತಿಭೆಯೇ ಕಾವ್ಯ ಜನನಿಯಾದ್ದರಿಂದ, ಕವಿ ಪ್ರತಿಭೆಯಿಂದ ದೀಪ್ತವಾಗಿ, ವ್ಯುತ್ಪತ್ತಿ ಅಂದರೆ ಕಾವ್ಯಾನುಭವ ಮತ್ತು ಜೀವನಾನುಭವದಿಂದ ಗಟ್ಟಿಗೊಂಡು, ಕವಿಯ ಸಹಜಸ್ಫೂರ್ತಿ ಯಿಂದ ಉತ್ತೇಜಿತವಾಗಿ ಪ್ರಕಟಗೊಳ್ಳುವ ಪ್ರತಿಮೆಗಳೇ ಕಾವ್ಯದ ಅಂಗ-ಆತ್ಮಗಳು. ಸಂಸೃತಿಯ ಆಕರ್ಷಣೆಗೆ ಮನಸೋಲದ ವೀರ ವೈರಾಗ್ಯ, ಘೋರ ತಪಸ್ಸು, ಅನುಪಮ ನಿಷ್ಠೆ—ಇವು ಧರ್ಮದ ದೇಹಾತ್ಮಗಳು. ಅಹಿಂಸೆ, ಅಸ್ತೇಯ, ಅಪರಿಗ್ರಹ ....ಈ ಪಂಚಾಣುವ್ರತಗಳೇ ಅದರ ಅನುಷ್ಠಾನ ಯುಕ್ತ ಅಂಗಾಂಗಗಳು. 'ಜೀವ ದಯೆ' ಜೈನ ಧರ್ಮದ ಜೀವದ್ರವ್ಯ. ರಸ ನಿಷ್ಪತ್ತಿ, ಕಾವ್ಯದ ಪರಮಗುರಿ. ಮೋಕ್ಷಪ್ರಾಪ್ತಿ ಧರ್ಮದ ಚರಮ ಸಿದ್ಧಿ. ಅಲಂಕಾರ, ರೀತಿ, ಧ್ವನಿ, ರಸ ಮತ್ತು ಔಚಿತ್ಯಗಳೆಂಬ ಪ್ರಸ್ಥಾನ ಪಂಚಕಗಳು ಕಾವ್ಯದ ಪಂಚ ಪ್ರಾಣಗಳಾದರೆ, ದಯೆ, ದಮ, ದಾನ, ತಪ, ಶೀಲಗಳೆಂಬ ಸಿದ್ಧಶಿಲಾ ಶುದ್ಧೀ ದ್ರವ್ಯಗಳು ಇದರ ಆತ್ಮದಾತೃ ಗಳು. ಸರಳವಾಗಿ ವ್ಯಾಖ್ಯಾನಿಸುವುದಾದರೆ ಧರ್ಮ ಎನ್ನುವುದು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ವ್ಯವಸ್ಥೆ. ಕಾವ್ಯ ಎನ್ನುವುದು ಆ ಮೌಲ್ಯ ಗಳನ್ನು ಪ್ರಚುರ ಪಡಿಸುವ ಸಾಧನ. ಎಲ್ಲಿ ಕಾವ್ಯ ಮೌಲ್ಯ ಕಥಾವಸ್ತುವನ್ನು ಆಲಿಂಗಿಸಿಕೊಂಡಿರುತ್ತದೋ ಅಲ್ಲಿ ಧರ್ಮ ಅನುಷ್ಠಾನ ಯೋಗ್ಯವೆನಿಸುತ್ತದೆ; ಎಲ್ಲಿ

ಶ್ರೀ ಕುವೆಂಪು, ಆದಿಪುರಾಣ ಸಂಗ್ರಹದ ಮುನ್ನುಡಿ

ಆಧ್ಯಾತ್ಮ ಭೂಯಿಷ್ಠತೆ ಒದಗುತ್ತದೊ ಅಲ್ಲಿ ಕಾವ್ಯ ಮಹೋನ್ನತಿ [Sublimity] ಗೇರುತ್ತದೆ. ಅಲ್ಲಿ ಋಷಿ ದರ್ಶನ ಕವಿಕಾಣ್ಕೆಯಾಗಿ ಮಾರ್ಪಟ್ಟು ಕಮನೀಯ ಕಾವ್ಯ ಕುಂಜದಲ್ಲಿ ರಂಜನೆಯುನ್ನೊದಗಿಸಿ, ಆನಂದದ ಜೊತೆಯಲ್ಲಿ ಅನುಭೂತಿಯನ್ನು ದಯಪಾಲಿಸುತ್ತದೆ. ಆದ್ದರಿಂದ ಕಾವ್ಯದ ಉದ್ದೇಶ ಧರ್ಮದ ಉದ್ದೇಶದಿಂದ ಭಿನ್ನ ವಾದುದಲ್ಲ. ಉಲ್ಲಾಸ ಅದರ ಒಂದು ಮುಖ, ವಿಕಾಸ ಅದರ ಮತ್ತೊಂದು ಮುಖ. ಅದು ಮನೋಲ್ಲಾಸದ ಜೊತೆಯಲ್ಲೇ ಆತ್ಮವಿಕಾಸವನ್ನೂ ಸಾಧಿಸುತ್ತದೆ; ಆತ್ಮ ಸಾಕ್ಷಾತ್ಕಾರವನ್ನೂ ಮಾಡಿಸುತ್ತದೆ. ಮತತತ್ತ್ವ ಅಥವಾ ಧರ್ಮ ಸಿದ್ಧಾಂತಗಳೆಂಬ ಕ್ವಿನೀನನ್ನು ಜನಮನದ ಕೋಶಕ್ಕಿಳಿಸುವಲ್ಲಿ ಕಾವ್ಯವೆಂಬ ಸಕ್ಕರೆಯ ಅಂಗಿ ಬೇಕೇ ಬೇಕು. ಕಾವ್ಯದಿಂದ ಧರ್ಮಕ್ಕೆ ಪ್ರಚಾರ, ಜನಪ್ರಿಯತೆ ದೊರೆತರೆ, ಧರ್ಮದಿಂದ ಕಾವ್ಯಕ್ಕೆ ಘನತೆ ಗೌರವಗಳು ಲಭಿಸುತ್ತವೆ. ಈ ರೀತಿ ಪರಸ್ಪರ ಪೂರಕ ಪೋಷಕ ಶಕ್ತಿಗಳಾದ ಕಾವ್ಯಧರ್ಮ ಮತ್ತು ಧರ್ಮಗಳ ಸಮೀಕರಣವೇ ಕಾವ್ಯಸಿದ್ಧಿಯಾದ್ದರಿಂದ ಸವ್ಯಸಾಚಿ ಪಂಪ ಅವೆರಡನ್ನೂ ಏಕಕಾಲದಲ್ಲಿ ಏಕತ್ರ ಪ್ರಯೋಗಿಸಿ ಯಶಸ್ವಿಯಾಗಿದ್ದಾನೆ.

ಇದುವೆ ಸುಕವಿ ಪ್ರಮುದ
ಪ್ರದವಿದುವೆ ಸಮಸ್ತ ಭವ್ಯಲೋಕ ಪ್ರಮುದ–
ಪ್ರದಮೆನೆ ನೆಗಱ್ದ ದಿಬ್ಯರಾ–
ಣದೊಳಱಿವುದು ಕಾವ್ಯಧರ್ಮಮುಂ ಧರ್ಮಮುಮಂ ॥ (೧-೩೮)

ಎಂದು ಹಾಡಿ ಸುಕವಿಗಳನ್ನೂ ಸಮಸ್ತ ಭವ್ಯಲೋಕದವರನ್ನೂ ಸಂತುಷ್ಟಿಪಡಿಸಿ ಧನ್ಯನಾಗಿದ್ದಾನೆ.

ಕಾವ್ಯತೀರ್ಥ

ಆದಿಪುರಾಣದಂತಹ ಕಾವ್ಯತೀರ್ಥಕ್ಕೆ ಸಮೆದ ಸೋಪಾನಗಳು ಮೂರು: ಒಂದು, ಪುರುದೇವನ ಪೂರ್ವಭವಾವಳಿ; ಎರಡು, ವೃಷಭ ತೀರ್ಥಂಕರನ ಪಂಚ ಕಲ್ಯಾಣಗಳು; ಮೂರು, ಭರತ-ಬಾಹುಬಲಿಯರ ಪ್ರಸಂಗ. ಈ ಮೂರೂ ಘಟ್ಟಗಳ ಪ್ರಕಾಶನ ಸಂದರ್ಭದಲ್ಲಿ ಕಾವ್ಯವು ಧರ್ಮದೊಡನೆ ತೆಕ್ಕೆಬಿದ್ದು, ಇಲ್ಲವೇ ಧರ್ಮವನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡು ಅದನ್ನು ಬೆಳಗಿಸಿ, ತಾನೂ ಬೆಳಗಿದೆ. ಈ ಮೂರೂ ಸ್ತರಗಳಲ್ಲಿ ಕಾವ್ಯ ಕೆನೆಗಟ್ಟಿದೆ, ಧರ್ಮ ಹರಳುಗೊಂಡಿದೆ. ಧರ್ಮಕ್ಕೆ ಕಾವ್ಯತ್ವದ ಮೆರಗುಕೊಟ್ಟಿದ್ದಾನೆ ಋಷಿಕವಿ! ತನ್ನದಾದ ಮಾರ್ಗ-ದೇಸಿ ಶೈಲಿಗಳಲ್ಲಿ ಭೋಗವನ್ನು ಭವ್ಯವಾಗಿಸಿದ್ದಾನೆ, ಯೋಗವನ್ನು ವೈಭವೀಕರಿಸಿದ್ದಾನೆ. ಭೋಗ ಅಲ್ಲಿ ತಿರಸ್ಕೃತ ಅಲ್ಲ; ಅದೂ ಧ್ಯಾನಶೀಲ!

ಅಕ್ಕರಂ॥
ಭೋಗಾಕಾಂಕ್ಷೆಯೊಳ್ ಜಯವರ್ಮಂ ಬೞಿಕೀ ಮಹಾಬಲಂ ಲಲಿತಾಂಗಂ ವಜ್ರಜಂಘಂ
ಭೋಗಭೂಮಿಜಂ ಶ್ರೀಧರದೇವಂ ಸುವಿಧಿನರಾಧಿತನಚ್ಯುತೇಂದ್ರಂ ।
ಸಾಗರಾಂತಂ ನೆಲನನಿತುಮಂ ಚಕ್ರದಿಂ ಬೆಸಕೈಸಿದ ವಜ್ರನಾಭಿ
ಯಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿ ಬಂದಲ್ಲಿ ತಾನಾದಿದೇವನಾದಂ ॥
(ಆದಿಪು-೧೬-೫೮)

ಆದಿದೇವನ ಜನನದ ಹಿನ್ನೆಲೆಯಲ್ಲಿ ಹತ್ತು ಭವಗಳ ಕಲ್ಪನೆ ಇದೆ. ಒಂದೊಂದೂ ಒಂದೊಂದು ಮಹತ್ವದ ಮಜಲೆಂದೇ ಹೇಳಬೇಕಾಗುತ್ತದೆ. ಆ ಮಜಲುಗಳಲ್ಲಿ ಹಂತಹಂತವಾಗಿ ಹತ್ತಿದ ಆದಿನಾಥನ ಭವ್ಯಾತ್ಮ ಹನ್ನೊಂದನೆಯ ಭವದಲ್ಲಿ ತೀರ್ಥಂಕರತ್ವವನ್ನು ಪಡೆದಿದೆ. ಅದು ಮೊದಲ ಭವದಲ್ಲಿ ಜಯವರ್ಮ ನಾಗಿ, ಸಿಂಹಪುರದ ಅರಸು ಶ್ರೀಷೇಣನಿಗೂ ಅರಸಿ ಸೌಂದರಿಗೂ ಮಗನಾಗಿ ಹುಟ್ಟಿತ್ತು.

ಜಯವರ್ಮನ ತಮ್ಮ ಶ್ರೀವರ್ಮ. ಇವನು ತುಂಬಾ ಜನಪ್ರಿಯ ವ್ಯಕ್ತಿಯಾದ್ದ ರಿಂದ ಶ್ರೀಷೇಣನು ಕಿರಿಯನಿಗೇ ಪಟ್ಟಕಟ್ಟಿ, ಜಿನದೀಕ್ಷೆ ಸ್ವೀಕರಿಸಿ, ತಪೋನಿರತನಾದ. ತಾನು ಜ್ಯೇಷ್ಠಪುತ್ರನಾದರೂ ತನಗೆ ತನ್ನ ಸಿಂಹಾಸನ ದೊರಕಲಿಲ್ಲವಲ್ಲಾ ಎಂಬ ನೋವು ಜಯವರ್ಮನನ್ನು ಕಾಡಿತು. ಮುಂದಿನ ಜನ್ಮದಲ್ಲಾದರೂ ರಾಜ್ಯಾಡಳಿ ತದ ಒಡೆತನವನ್ನು ಪಡೆಯಬೇಕೆಂಬ ಆರ್ತಧ್ಯಾನವುಳ್ಳವನಾಗಿ, ಜಿನದೀಕ್ಷೆವಹಿಸಿ, ತನ್ನ ತರಿದ ಕೂದಲುಗಳನ್ನು ಇಡಲೆಂದು ಹುತ್ತದಲ್ಲಿ ಕೈಯಿಟ್ಟ. ಅಲ್ಲಿದ್ದ ಹಾವು ಕಚ್ಚಿತು. ಅದೇ ಸಮಯದಲ್ಲಿ ಅಂತರಿಕ್ಷದಲ್ಲಿ ತನ್ನ ಪತ್ನಿಯೊಡನೆ ವಿಮಾನದಲ್ಲಿ ಹೋಗುತ್ತಿದ್ದ ಓರ್ವ ಖೇಚರನನ್ನು ನೋಡಿ, ತಾನೂ ಅಂತಹ ಖೇಚರನಾಗಬೇಕೆಂಬ ಬಯಕೆಯಿಂದ ಸತ್ತು ಮರುಭವನದಲ್ಲಿ ಮಹಾಬಳನೆಂಬ ವಿದ್ಯಾಧರನಾಗಿ ಹುಟ್ಟಿದ.

ವಿದ್ಯಾಧರ ಚಕ್ರವರ್ತಿ ಮಹಾಬಳನ ಒಡ್ಡೋಲಗದಲ್ಲಿ ಒಮ್ಮೆ ಧರ್ಮದ ಬಗೆಗೆ ವಿವಾದವೆದ್ದು ಧರ್ಮಗೆದ್ದು ಅಧರ್ಮ ಸೋಲುತ್ತದೆ. ಮಹಾಪ್ರಾಜ್ಞನಾದ ಸ್ವಯಂಬುದ್ಧನೆಂಬ ಮಂತ್ರಿ :

> ಭವವಾರಾಶಿ ನಿಮಗ್ನರಂ ದಯೆ ದಮಂ ದಾನಂ ತಪಂ ಶೀಲಮೆಂ
> ಬಿವೆ ಮೇಯ್ಯಾಗಿರೆ ಸಂದ ಧರ್ಮಮ ವಲಂ ಪೊತ್ತೆತ್ತುಗುಂ ಮುಕ್ತಿಪ-
> ರ್ಯವಸಾನಂಬರಮಾನುಷಂಗಿಕ ಫಲಂ ಭೂಪೇಂದ್ರ ದೇವೇಂದ್ರ ರಾ-
> ಜ್ಯ ವಿಲಾಸಂ ಪೆಱತಲ್ತು ನಂಬು ಖಚರಕ್ಷ್ಮಾಪಾಲ ಚೂಡಾಮಣೀ ॥ (೨–೭)

ಎಂದು ವಾದಿಸಿ ಬೋಧಿಸಿದರೆ, ಮಿಥ್ಯಾವಾದಿಗಳಾದ ಮಹಾಮತಿ, ಸಂಭಿನ್ನಮತಿ, ಶತಮತಿಗಳು ಸ್ವಯಂಬುದ್ಧನ ಧರ್ಮೋಪದೇಶವನ್ನು ಪರಿಹಾಸ್ಯ ಮಾಡುತ್ತಾರೆ, 'ವಿಯಚ್ಚರೇಶ್ವರಾ, ತಲೆ ಕೂದಲನ್ನು ತರಿದುಕೊಂಡು, ಉಟ್ಟ ಬಟ್ಟೆಯನ್ನೂ ಬಿಚ್ಚಿ ಬಿಸಾಟು ಬೆತ್ತಲೆ ನಿಂದು, ಉಣ್ಣದೆ ತಿನ್ನದೆ ಸುರಲೋಕದಲ್ಲಿ ಸುಖಕಾಣಬಹುದೆಂದು ಹೇಳುವ ಬತ್ತಲಿಗರ ಮಾತು ಕೇಳಬೇಡ, ಪುನರ್ಜನ್ಮವಿದೆಯೊ ಇಲ್ಲವೊ ಕಂಡವ ರಾರು. ವಸಂತದಲ್ಲಿ ಕಲಿಕಗರ್ಚಿದ ಕೋಗಿಲೆಯಂತೆ ಆನಂದದಿಂದಿದ್ದು, ಭೋಗ ವನ್ನು' ಅನುಭವಿಸು.

> ಒಡಲೊಳೆ ಜೀವಮಿರ್ದ ಗಡ ಸಂಚಿಸುತಿರ್ಪುದು ಪುಣ್ಯಪಾಪಮಂ
> ಗಡ ಬಱಿಕತ್ತ ಬೇಱೆ ಪೆಱತೊಂದೊಡಲೊಳ್ ಗಡ ತಾನ ನಿಂದೊಡಂ
> ಬಡಿಪುದು ಧರ್ಮಕರ್ಮಫಲಮಂ ಗಡ ಸತ್ತನೆ ಮತ್ತೆ ಪುಟ್ಟುವಂ
> ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ ॥ (೨–೮)

ಎಂದು ನುಡಿದು ತಮ್ಮ ಚಾರ್ವಾಕ ತತ್ವವನ್ನು ಪ್ರತಿಪಾದಿಸುತ್ತಾರೆ. ಆದರೆ ಮಹಾ

ಬಳ ಚೇತನ ದ್ವೈವ ಧರ್ಮಗಳನ್ನು ಆಯ್ಕೆಮಾಡಿಕೊಳ್ಳುತ್ತದೆ. ಆಯುರಂತ್ಯದಲ್ಲಿ ಮಹಾಬಳ ಶರೀರ ತೊರೆದು ಈಶಾನ ಕಲ್ಪದಲ್ಲಿ ಲಲಿತಾಂಗದೇವನಾಗಿ ಹುಟ್ಟುತ್ತದೆ.

ಜಿನಧರ್ಮ ಪಾರಮ್ಯವನ್ನು ಸಾರುವ ಈ ಸಂದರ್ಭದಲ್ಲಿ ಪ್ರಯೋಗಗೊಂಡಿರುವ ಗಡ ಗಡ ಎಂಬ ಕಸುವುಳ್ಳ ಕಾವ್ಯಶೈಲಿ ಮೆಚ್ಚುವಂಥದು. ನಾಟಕೀಯತೆಯಲ್ಲಿ ತನ್ನ ಸೋಲೊಪ್ಪಿಕೊಂಡ ಪಂಪ ಇಂಥೆಡೆಗಳಲ್ಲಿ ಕಿಂಚಿತ್ ಮಿಂಚಿದ್ದಾನೆ.

ಲಲಿತಾಂಗ-ಸ್ವಯಂಪ್ರಭೆ

'ಇದು ಸುಖದೊಂದು ತುತ್ತತುದಿ ರಾಗದ ಮೊತ್ತಮೊದಲ್' ಎಂಬ ಈಶಾನ ಕಲ್ಪದಲ್ಲಿ ಲಲಿತಾಂಗನು, ಪೂತ ಜಂಗಮಲತೆಗಳಂತೆ ತನ್ನ ಮುಂದೆ ಬಂದಾಡುವ ಅಚ್ಚರಸಿಯರ ಮಧ್ಯದಲ್ಲಿ, ನಾಲ್ಕು ಸಾವಿರ ಸುಂದರಿಯರ ಹಾಗೂ ಸ್ವಯಂಪ್ರಭೆ, ಕನಕಲತೆ, ಕನಕಮಾಳೆ, ವಿದ್ಯುಲ್ಲತೆಯೆಂಬ ನಾಲ್ವರು ಮಹಾದೇವಿಯರ ಕೂಡೆ ಸುರಲೋಕ ಸೌಖ್ಯವನ್ನನುಭವಿಸುತ್ತಾನೆ. ಸ್ವಯಂಪ್ರಭೆ ಅವನ ಅಚ್ಚುಮೆಚ್ಚಿನ ಮಡದಿ. ಅವಳ ಬಣ್ಣನೆಗೆ ಮಾತು ಸೋತಾವು. 'ಅದು ಸುಖದೊಂದು ಪಿಂಡಮ್ ಅದು ಪುಣ್ಯದ ಪುಂಜಂ, ಅದು ಅಂಗಜಂಗೆ ಬಾಳ್ದೊಕ್ಕಿದಲ್, ಅದು ಚಿತ್ತಜಂಗೆ ಲಕುದೈವಂ, ಅದು ಅಂಗಜ ಚಕ್ರವರ್ತಿಗೆ ಎತ್ತಿದ ಪೊಸವಟ್ಟಂ. ಅಂತದು ಮನೋಜನ ಕೈಪಿಡಿ'-ಇಂತಹ ಅಪೂರ್ವಸೃಷ್ಟಿ ಸ್ವಯಂಪ್ರಭೆಯು ಬಡಭೋಗವಾದರೂ ಎಷ್ಟು ದಿನ? ಹಾ ಹಾ! ಎನ್ನುವಷ್ಟರಲ್ಲಿ ಲಲಿತಾಂಗ ದೇವನಿಗೂ ಆಯುಸ್ಸು ತುಂಬಿಬಂತು. ಪರಿಯವಸಾನಕ್ಕೆ ಆರುತಿಂಗಳುಗಳಿದ್ದಂತೆಯೇ ಅವನ ಕೊರಳ ಹಾರ ಬತ್ತಿತು. ಅವನ ಆಯುಸ್ಸು ತುಂಬಿತು. ಆದರೆ ಹಸಿವು, ಹಂಬಲಗಳು ತುಂಬಲಿಲ್ಲ. ಸುರಭೋಗದ ಸವಿ ಮಾಸಿರದಾಗ, ಕಾಮವಿನ್ನೂ ಆರಿರದಾಗ ಬಿಟ್ಟುಹೋಗುವುದಾದರೂ ಎಂತು? ಚಿಂತೆ ಕಡಲಾಗಿ ಲಲಿತಾಂಗನಿಗೆ ಹುಚ್ಚೇ ಹಿಡಿಯುತ್ತದೆ. ಸಂರಕ್ಷಣೆಗಾಗಿ ಸರ್ವರಿಗೂ ಕರೆಕೊಡುತ್ತಾನೆ ;

> ಸುರತರು ನಂದನಂಗಳಿರ ರತ್ನಪಿನದ್ಧವಿಮಾನ ಕುಟ್ಯಮಾಂ-
> ತರಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತ ಸೌಂ-
> ದರಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ
> ರ್ನೆರಮೊಱೆಮುಯ್ಯ ಚಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪರೇ ॥
>
> (೩-೪)

ಎಂದು.

ಈ ರೀತಿ ಮತಿವಿಕಳನಾಗಿ ಪ್ರಲಾಪಗೈಯ್ಯುವ ಲಲಿತಾಂಗನನ್ನು ಸಂತೈಸಲು ಸ್ವಯಂಪ್ರಭೆಯಿಂದಲೂ ಸಾಧ್ಯವಾಗುವುದಿಲ್ಲ. ಸಾಮಾನಿಕ ದೇವನೇ ಬರಬೇಕಾಗುತ್ತದೆ. ಆತ, 'ನಿನಗೊರ್ವಂಗಲ್ಲ ಅವಸ್ಥಾಂತರಮ್ ಅಮರ ಜನಕ್ಕೆಲ್ಲಮಿೀ ಪಾಂಗೆ' ಎಂದು ಹೇಳಿ, 'ಜನನ ಮೃತಿ ಜರಾಂತಕ ಶೋಕಾಗ್ನಿಯಿಂದಾವನುಮೀ ಸಂಸಾರದೊಳ ಬೇಯದನೊಳನೆ?' ಎಂಬ ಸಾಮಾನ್ಯತತ್ವವನ್ನು ನಿರೂಪಿಸಿ, 'ಶರಣ ಧರ್ಮದಿಂದೊಂದುಮುಂಟೇ?' ಎಂದು ಧರ್ಮಕ್ಕೆ ಶರಣುಹೋಗುವಂತೆ ಬೋಧಿಸುತ್ತಾನೆ.

ಭೋಗದ ತುದಿ ಯೋಗ, ವೈಭವದ ಕೊನೆ ವೈರಾಗ್ಯ-ಈ ಗುಟ್ಟರಿತ ಗಾರುಡಿಗ ಕವಿ ಪಂಪ ಅದನ್ನು ಬಹಿರಂಗಪಡಿಸುತ್ತಾನೆ. ಲಲಿತಾಂಗ ಸ್ವಯಂಪ್ರಭೆಯರ ಸೌಂದರ್ಯ ವೈಭವಾದಿ ಭೋಗಗಳನ್ನು ಚಿತ್ತರಿಸಿ, ಮರುಕ್ಷಣದಲ್ಲೇ ಅದರ ನಶ್ವರತೆಯನ್ನೂ ಚಿತ್ರಿಸಿ, ಧರ್ಮದ ಕಡೆ ಮನ ಸರಿಯುವಂತೆ ಮಾಡಿದ್ದಾನೆ. ಇದೇ ಮಹಾಕವಿಯ ಕಾವ್ಯಾಶಯ. ಸೂಜಿಯ ಹಿಂದೆ ದಾರವು ಸಲೀಸಾಗಿ ಸಾಗುವಂತೆ ಸುಂದರ ಕಥಾನಕದಲ್ಲಿ, ಉತ್ತಮ ಭಾವಗೀತೆಗಳ ಸೊಬಗನ್ನು ಸವಿಯುತ್ತಿರುವಾಗಲೇ ಜೈನಧರ್ಮದ ವಲಯಕ್ಕೆ ನಮಗರಿವಿಲ್ಲದಂತೆಯೇ ನಮ್ಮನ್ನು ಕೊಂಡೊಯ್ದುಬಿಡುತ್ತಾನೆ. ಕಾವ್ಯಧರ್ಮವನ್ನೂ, ಧರ್ಮವನ್ನೂ ಜೊತೆ ಜೊತೆಯಲ್ಲೆ ನಮ್ಮೆದೆಗೆ ತುಂಬುತ್ತಾನೆ-'ಜಿನಚೈತ್ಯಚೈತ್ಯಬ್ರಾತನುಂ ಬಂದಿಸು, ಜಿನಪದ ಪದ್ಮಂಗಳಂ ಭಕ್ತಿಯಿಂದರ್ಚಿಸು'ಎಂದು. ಅದನ್ನು ಮನಗಂಡ ಲಲಿತಾಂಗನ ಭವ್ಯಜೀವ ದಿವ್ಯ ತೇಜೋರೂಪದಿಂದ ಅದೃಶ್ಯವಾಗಿ ಉತ್ಪಳಖೇಟದ ವಜ್ರಬಾಹು ವಸುಂಧರೆಯರಿಗೆ ವಜ್ರಜಂಘನಾಗಿ ಹುಟ್ಟುತ್ತದೆ.

ಲಲಿತಾಂಗನ ಅವಸಾನಾಂತರದಲ್ಲಿ ಸ್ವಯಂಪ್ರಭೆಗುಂಟಾದ ಅವಸ್ಥೆಯನ್ನು ಪಂಪ ಪ್ರತಿಭೆ ಅತ್ಯಂತ ಮನೋಜ್ಞವಾಗಿ ಚಿತ್ರಿಸಿದೆ. ಕಾವ್ಯದ ಕಸ್ತೂರಿ, ಧರ್ಮದ ಶ್ರೀಗಂಧಗಳು ಮೇಳವಿಸಿ ಒಂದಪೂರ್ವಸೌರಭವನ್ನು ಸೂಸುತ್ತವೆ—ಈ ಭಾಗದಲ್ಲಿ. ಒಬ್ಬೊಂಟಿಗಳಾದ ಸ್ವಯಂಪ್ರಭೆಯ ತೇಜೋಹೀನತೆ, ಮನ, ಮನೆ, ಜಗತ್ತೇ ಶೂನ್ಯವಾದ ಅವಳ ಅಂತರಂಗದ ಶೂನ್ಯತೆಗಳನ್ನು ಮಹಾಸ್ರಗ್ಧರಾವೃತ್ತವೊಂದರಲ್ಲಿ ಚಿತ್ತರಿಸಿದ್ದಾನೆ :

> ಅಲಕಂ ಮಂದಾರ ಶೂನ್ಯಂ ಕದಪು ಮಕರಿಕಾಪತ್ರಶೂನ್ಯಂ ಲಲಾಟಂ
> ತಿಲಕಾಲಂಕಾರ ಶೂನ್ಯಂ ಘನಕುಚಯುಗಲಂ ಹಾರಶೂನ್ಯಂ ನಿತಂಬಂ
> ಕಲಕಾಂಚೀದಾಮ ಶೂನ್ಯಂ ಚರಣ ಯುಗಲಮುಂ ನೂಪುರಾಲಾಪ ಶೂನ್ಯಂ
> ಲಲಿತಾಂಗಂ ಪೋದೊಡೆಯಾಕೆಗೆ ದಿನಮನಿತುಂ ನಿರ್ಜನಾರಣ್ಯ ಶೂನ್ಯಂ ॥
>
> —(೩-೧೩)

ಪಂಪನ ಕವಿತಾಸಾಮರ್ಥ್ಯಕ್ಕೆ ಇದೊಂದು ವೃತ್ತ ಸಾಕು ! 'ರೀತಿರಾತ್ಮಾ ಕಾವ್ಯಸ್ಯ' ಎಂಬ ಸಿದ್ಧಾಂತಕ್ಕೆ ಈ ವೃತ್ತ ನಿಂತ ನಿದರ್ಶನ. ಬರಿದಾದ ಮನಸ್ಸಿನ ಚಿತ್ರಣ ಇಲ್ಲಿದೆ: ಇದನ್ನು ಓದುತ್ತಾ ಅಥವಾ ಹಾಡುತ್ತಾ ಹೋದಂತೆ ಓದುಗನ ಹಾಗೂ ಶ್ರೋತೃಗಳ ಹೃದಯಗಳೂ ಶೂನ್ಯವಾಗುತ್ತಾ ಹೋಗುತ್ತವೆ. ಸ್ವಯಂಪ್ರಭೆಯ ಎದೆ ಬರಿದಾದಂತೆ 'ಶೂನ್ಯ ಶೂನ್ಯ' ಎಂಬುದು ಇಲ್ಲಿ ಪುನರುಕ್ತಿದೋಷವಾಗಿ ಉಂಡಿಲ್ಲ. ಭಾವಸ್ಪಷ್ಟತೆಯ ಗುಣವೇ ಆಗಿ ಪರಿಣಮಿಸಿದೆ. ಮತ್ತೆ ಮುಂದಿನ ಪದ್ಯ ನಿಜ ಪ್ರಾಣವಲ್ಲಭನ ವಿಯೋಗ ವಿಧುರೆಯಾದ ಸ್ವಯಂಪ್ರಭೆಯ ಪ್ರಲಾಪವನ್ನೂ ಹೇಳುತ್ತದೆ.

> ಮದನನ ಕೈದುವೆಲ್ಲಿದನನಂಗನ ಕೈಪಿಡಿಯೆಲ್ಲಿದಂ ವಿಳಾ-
> ಸದ ಕಣಿಯೆಲ್ಲಿದಂ ಚದುರ ಪುಟ್ಟಿದವಲ್ಲಿವೆಲ್ಲಿದಂ ವಿನೋ-
> ದದ ಮೊದಲೆಲ್ಲಿದಂ ಸೊಬಗಿನಾಗರವೆಲ್ಲಿದನಿಚ್ಚೆಯಾಣ್ಮನೆ
> ಲ್ಲಿದನೆರ್ದೆಯಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ ॥ (೩-೧೫)

ಕವಿಯ ಹೃದಯಪಾತ್ರೆ ಭಾವದಿಂದ ತುಂಬಿ ಹೊರಸೂಸಿದ್ದೇ ಕಾವ್ಯ. ಮಿಡಿದ ಭಾವ ಹೃದಯ ಸಂಪುಟದಿಂದ ಪುಟಿದೆದ್ದು ಚಿಲುಮೆಯಾಗಿ ಚಿಮ್ಮಿ, ಅನುಭೂತಿಯ ಆಶ್ರಯ ಪಡೆದು ಭಾಷೆಯ ಮೂಲಕ ಪ್ರಕಟವಾಗುತ್ತದೆ. ಅಲ್ಲಿ ಭಾವಕ್ಕೆ ಭಾಷೆ ದಾಸನಾಗಿ ದುಡಿಯುತ್ತದೆ. ಅಂತಹ ಕ್ರಿಯೆ ಪಂಪನ ಈ ಭಾವಕವನದಲ್ಲಿದೆ. ವಿಪ್ರಲಂಬ ಶೃಂಗಾರ ಸಂದರ್ಭದ ವಿರಹಿಣಿಯ ನೋವಿನ ಭಾವತೀವ್ರತೆ ಹೊನಹೊಳೆಯಾಗಿ ಹೊಮ್ಮಿದಾಗ 'ಮದನನ ಕೈದು, ಅನಂಗನ ಕೈ ಪಿಡಿ, ವಿಳಾಸದ ಕಣಿ, ಚದುರಪುಟ್ಟು, ವಿನೋದದ ಮೊದಲು, ಸೊಬಗಿನಾಗರನಾಗಿದ್ದ, ಎನ್ನಿಚ್ಛೆಯಾಣ್ಮ, ಎನ್ನೆರ್ದೆಯಾಣ್ಮ, ಎನ್ನ ರಸ' ಎಂಬ ಹಲವು ಸಂಬೋಧನೆಗಳ ಮೂಲಕ ಹಲುಬಿದೆ, ಅವನಿಗಾಗಿ ಹಂಬಲಿಸಿ ಕಾತರಿಸಿದೆ. ಈ ಕಾತರತೆಯು ಕಾರಂಜಿಗೆ ಕವಿಪ್ರತಿಭೆ ಎಂತಹ ಒಂದು ಬಂಧುರ ಪಾತಳಿ ನಿರ್ಮಿಸಿದೆ! ಆ ಕಾರಂಜಿಯು ಬಳಿ ಸ್ವಯಂಪ್ರಭೆಯನ್ನು ನೋಡುತ್ತಾ, ಮೂಕವಿಸ್ಮಿತರಾಗಿ ನಾವು ನಿಂತಿರುವಾಗಲೇ ಮಹತ್ತರ ದೇವಿಯರು ಬಂದು, 'ಬಗೆಗೊಂಡು ಜಿನಪತಿಯಂ ಪೂಜಿಸು ಪಡೆವೆಯಿನಿಯನಂ ಮಱುಭವದೊಳ್' ಎಂದು ಧರ್ಮಬೋಧೆ ಮಾಡುತ್ತಾರೆ. ಕಾವ್ಯಧರ್ಮ ಧರ್ಮಗಳನ್ನು ಬೆಸೆಯುವ ಕವಿಪ್ರತಿಜ್ಞೆ ಇಲ್ಲಿ ಪೂರ್ಣವಾಗಿದೆ.

ಶ್ರೀಮತಿ-ವಜ್ರಜಂಘ

ಶ್ರೀಮತಿ ವಜ್ರಜಂಘರ ಪ್ರಣಯ ಪ್ರಕರಣ ಆದಿನಾಥನ ಭವಾವಳಿ ನಾಟಕದಲ್ಲಿ ಒಂದು ಹೊಸ ದೃಶ್ಯ. ಈಶಾನಕಲ್ಪದ ಲಲಿತಾಂಗ ಸತ್ತು ಭೂಲೋಕದಲ್ಲಿ ವಜ್ರಜಂಘನಾಗಿ ಹುಟ್ಟಿದಂತೆ, ಅವನ ಮೋಹದ ಮಡದಿಯಾಗಿದ್ದ ಸ್ವಯಂಪ್ರಭೆ ಮಡಿದು ಪುಂಡರೀಕಿಣಿಯ ರಾಜ ವಜ್ರದಂತ ಮತ್ತು ರಾಣಿ ಲಕ್ಷ್ಮೀಮತಿ ಮಹಾದೇವಿಯರಿಗೆ ಶ್ರೀಮತಿ ಎಂಬ ಹೆಸರಿನ ಮಗಳಾಗಿ ಹುಟ್ಟುತ್ತಾಳೆ. ಪ್ರಾಪ್ತ ವಯಸ್ಕಳಾದಾಗ ತನ್ನ ಪೂರ್ವಜನ್ಮದ ಪತಿ ಲಲಿತಾಂಗನನ್ನೇ ಈ ಜನ್ಮದಲ್ಲೂ ಪತಿಯಾಗಿ ಪಡೆಯಲಿಚ್ಛಿಸಿ, ಅವನು ಎಲ್ಲಿ ಯಾರಾಗಿ ಹುಟ್ಟಿದ್ದಾನೆಂಬುದನ್ನು ಹಲವು ಉಪಾಯಗಳನ್ನು ಹೂಡಿ ಪತ್ತೆ ಹಚ್ಚುತ್ತಾಳೆ ಪಂಡಿತೆಯ ನೆರವಿನಿಂದ. ಇಬ್ಬರ ವಿವಾಹ ರಾಜವೈಭವದಿಂದ ನೆರವೇರುತ್ತದೆ. ಲಲಿತಾಂಗನಾಗಿದ್ದ ವಜ್ರಜಂಘನಿಗೂ ಅವರಿಂದ ಮಹದಾನಂದವಾಗುತ್ತದೆ. ಅಂದು ಅಪೂರ್ಣಗೊಂಡಿದ್ದ ಕಾಮ ಇಂದು ಪೂರ್ಣಗೊಳ್ಳಬಹುದೆಂಬ ನಂಬಿಕೆ. ಅವರಿಬ್ಬರೂ ಭೋಗಿಸಿದ ಭೋಗಕ್ಕೆ ಕೊನೆ ಮೊದಲಿಲ್ಲವಾಗುತ್ತದೆ. ಆದರೂ ಪೂರ್ಣ ತೃಪ್ತಿಸಿಗಲಿಲ್ಲ. ಸಾವಂತೂ ತಪ್ಪಲಿಲ್ಲ.

'ಒಂದು ದಿವಸಂ ರಜನಿಸಮಯದೊಳ್....ಶಯ್ಯಾತಲದೊಳ್........ಆ ದಂಪತಿಗಳ್ ...ನಿದ್ರಾರಸವಶಗತರಾದವರನ್ನೆಗಮಲ್ಲಿ ಮುಚ್ಚಿರ್ದ ಹರಿನೀಲ ಗವಾಕ್ಷಜಾಲ ಕವಾಟಸಂಪುಟಗಳಂ ತೆಱೆಯಲ್ ಮಱೆದು ಸೂರ್ಯಕಾಂತದ ಧೂಪಗುಂಡಿಗೆಯೊಳಗವಱೆಯದೆ ಸಜ್ಜೆವಳಸಿಕ್ಕಿದ ಕೇಶ ಸಂಸ್ಕಾರ ಕಾಲಾಗರುಧೂಪಂ,' ಮೊದಲು ಉದ್ಧನಾಗಿ ಮೇಲೆದ್ದು, ಶಯ್ಯಾಗಾರದಲ್ಲೆಲ್ಲಾ ವ್ಯಾಪಿಸಿಕೊಂಡು, ಹೊರ

ಹೋಗಲು ದಾರಿಯಿಲ್ಲದೆ ಒಳಗೇ ಹರಡಿ, ದಟ್ಟವಾಗಿ ದಿಟ್ಟತನದಿಂದ ಎಲ್ಲೆಡೆಯಲ್ಲೂ ತುಂಬಿ, ಕಾಂಚನ ಮಂಚದ ಮೇಲೆ ಪವಡಿಸಿದ್ದ ಪ್ರಿಯ ಪ್ರೇಯಸಿಯರ ಉಸಿರಾಟವನ್ನು ಹಿಡಿದು ಕಟ್ಟಿ, ಇಬ್ಬರನ್ನೂ ಏಕಕಾಲದಲ್ಲಿ ಕೊಲೆ ಮಾಡಿತು. ಓಹ್! ಇದೆಂತಹ ವಿಪರ್ಯಾಸ! ಶೃಂಗಾರಪೋಷಕವಾದ ಕೃಷ್ಣಾಗರು ಧೂಪಧೂಮವು ಆಮರಣಾಂತಕ ಪಾಶವಾಗಬೇಕೆ? ಅಂತೂ —

ಬಿಡದೆ ಪೊಗೆ ಸುತ್ತೆ ತೋಳಂ
ಸಡಲಿಸದಾ ಪ್ರಾಣವಲ್ಲಭರ್ ಪ್ರಾಣಮನಂ–
ದೊಡೆಗಳೆದರೋಪರೋಪರೊ
ಳೊಡೆ ಸಾಯಲ್ ಪಡೆದರಿನ್ನವೇಂ ಸೈಪೊಳವೇ ೨ (೫–೨೪)

ಇಂತಹ ಅನಿರೀಕ್ಷಿತ ಮರಣ ಚಿತ್ರಣದ ಬದಿಯಲ್ಲಿ ಸಂಸಾರದ ಅನಿತ್ಯತೆಯ ನಗ್ನ ಚಿತ್ರಣವನ್ನು ಬರೆದು, ನಲ್ಲ ನಲ್ಲೆಯರು ಒಟ್ಟಿಗೇ ಸಾಯುವುದಕ್ಕಿಂತ ಮಿಗಿಲಾದ ಪುಣ್ಯ ಮತ್ತೊಂದಿಲ್ಲ ಎಂಬ ಜೀವನ ದರ್ಶನವನ್ನು ಸಾರಿ ತೋರಿ ತನ್ನ ಮನೋಭೀಷ್ಟವನ್ನು ನೆರವೇರಿಸಿಕೊಂಡಿದ್ದಾನೆ ಮಹಾಕವಿ.

ಶ್ರೀಮತಿ ವಜ್ರಜಂಘರು ಮತ್ತೆ ಸತಿಪತಿಗಳಾಗಿ ಜನ್ಮವೆತ್ತುತ್ತಾರೆ ಭೋಗಭೂಮಿಯಲ್ಲಿ. ಆ ಮುಂದೆ ತಮ್ಮಲ್ಲಿನ ಕಾಮಲಾಲಸೆ ಕರಗಿ ಧರ್ಮ ದೊರಕೊಳ್ಳುತ್ತಾ ಹೋಗುತ್ತದೆ. ತಾವಿಬ್ಬರೂ ಸಮ್ಯಕ್ತ್ವವನ್ನು ಸ್ವೀಕರಿಸುತ್ತಾರೆ. ಆ ಪುಣ್ಯದ ಫಲದಿಂದ ಮುಂದಿನ ಭವದಲ್ಲಿ ಈ ಭೋಗಭೂಮಿಜರು ಶ್ರೀಪ್ರಭ ವಿಮಾನದಲ್ಲಿ ಜನಿಸುತ್ತಾರೆ ಶ್ರೀಧರದೇವ ಮತ್ತು ಸಾಮಾನಿಕ ದೇವರಾಗಿ. ತದನಂತರ ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ, ಅಹಮಿಂದ್ರಾದಿ ಭವಗಳಲ್ಲಿ ತೊಳಲುತ್ತದೆ ಪುರುದೇವನಾಗಲಿರುವ ಭವ್ಯಾತ್ಮ. ಕಡೆಯಲ್ಲಿ ಕರ್ಮದ ಎಲ್ಲ ಆವರಣಗಳನ್ನೂ ಕಳಚಿಟ್ಟು, ಧರ್ಮಾನುರಕ್ತಿ ಹೊಂದಿ, ತನ್ನ ಹನ್ನೊಂದನೆಯ ಭವದಲ್ಲಿ ಹದಿನಾಲ್ಕನೆಯ ಮನು ನಾಭಿರಾಜನ ಪತ್ನಿ ಮರುದೇವಿಯ ಗರ್ಭದಲ್ಲಿ ಆದಿದೇವನಾಗಿ ಅವತರಿಸುತ್ತದೆ.

ಪಂಚಕಲ್ಯಾಣಗಳು

ಪಂಚಕಲ್ಯಾಣಗಳ ಪ್ರತಿಷ್ಠಾಪನೆ ಜೈನಪುರಾಣದ ದ್ವಿತೀಯ, ಆದರೆ ಅತಿ ಪ್ರಮುಖಘಟ್ಟ ಇವುಗಳಲ್ಲಿ ಜೈನಧಾರ್ಮಿಕ ಪ್ರಕ್ರಿಯೆಯ ಪ್ರಾಬಲ್ಯವಿದ್ದರೂ ಕವಿಯ ಕಲ್ಪನಾ ಕುಂಚನಾಡಲು ಎಡೆಯಿಲ್ಲದಿಲ್ಲ. ಇದ್ದರೂ ಯಾವ ಪುರಾಣಕವಿಯೂ ಹೆಚ್ಚು ಸ್ವಾತಂತ್ರ್ಯ ವಹಿಸಲಾರ. ಅದಕ್ಕೆ ಕಾರಣಗಳು ಎರಡು: ಒಂದು, ಎಲ್ಲಿ ಧರ್ಮಕ್ಕೆ ಅಪಚಾರವಾಗುತ್ತದೋ ಎಂಬ ಭೀತಿ; ಎರಡು, ಜೈನ ಪುರಾಣಗಳಲ್ಲಿ ಮೂರನೆಯದಾದ ಪರಿನಿಷ್ಕ್ರಮಣ ಕಲ್ಯಾಣವನ್ನು ಬಿಟ್ಟರೆ, ಉಳಿದ ನಾಲ್ಕು ಕಲ್ಯಾಣಗಳ ಕಲ್ಪನೆ ಇಪ್ಪತ್ತನಾಲ್ಕು ಜನ ತೀರ್ಥಂಕರರ ಭವ್ಯಜೀವನ ಸಂದರ್ಭದಲ್ಲೂ ಒಂದೇ ಸಾಮಾನ್ಯ ಸ್ವರೂಪ. ಒಂದರ ಪಡಿಯಚ್ಚು ಮತ್ತೊಂದು*

*ಎರಡನೆಯ ಜನ್ಮಾಭಿಷೇಕ ಕಲ್ಯಾಣದಲ್ಲೂ ಕವಿಯ ಕಲಾಕೈವಾಡಕ್ಕೆ ಅವಕಾಶವಿದೆ. ಅದನ್ನು ಶ್ರೀ ಕುವೆಂಪುರವರು ಒಂದೆಡೆ ಗುರುತಿಸಿ ಪ್ರಕಟಿಸಿದ್ದಾರೆ. ನೋಡಿ: ಪಂಪನಲ್ಲಿ ಭವ್ಯತೆ, ತಪೋನಂದನ.

ತೀರ್ಥಂಕರನಾಗಲಿರುವ ಜೀವದ ಹೆಸರು ಮಾತ್ರ ಬೇರೆ ಧಾರ್ಮಿಕ ಪ್ರಕ್ರಿಯೆ ಪರಿಣಾಮಗಳಲ್ಲೂ ಒಂದೇ. ಅವುಗಳನ್ನು ಚಾಚೂ ತಪ್ಪದೆ ಪಾಲಿಸಬೇಕು ಕವಿಶ್ರಾವಕ. ಆದರೆ ಮೂರನೆಯ ಕಲ್ಯಾಣ ಸಂದರ್ಭದಲ್ಲಿ ಕವಿ ತುಸು ಸ್ವಾತಂತ್ರ್ಯವಹಿಸುವ ಅವಕಾಶವುಂಟು ಅದರಲ್ಲೂ ಆದಿಪುರಾಣದ ನೀಲಾಂಜನೆಯ ನೃತ್ಯ ಸಂದರ್ಭ ಬೇರೆಲ್ಲೂ ಕಾಣಸಿಗದ ಅಪೂರ್ವ ಘಟನೆ. ಅದನ್ನು ಮಹಾಕವಿ ಪಂಪ ಚೆನ್ನಾಗಿ ಬಳಸಿಕೊಂಡಿದ್ದಾನೆ. ಅಲ್ಲಿ ತನ್ನನ್ನು ಮೆರೆದಿದ್ದಾನೆ.

ನೀಲಾಜಂನೆ!
ಚೆಲುವಿನ ಚಿಲುಮೆ ನೀಲಾಂಜನೆ!!
ಅಮರ ಗಣಿಕಾ ತಿಲಕ ನೀಲಾಂಜನೆ!
ದೇವೇಂದ್ರನ ಕೈಯೊಳ್ ಪಚ್ಚಂ ಮೆಚ್ಚುಗೊಳ್ವ ನಾಟ್ಯಕಲಾ ಪ್ರವೀಣೆ ನೀಲಾಜಂನೆ!
ಅವಳು ಹೆಣ್ಣಲ್ಲ, ಅಸಂಗ ಜಂಗಮಲತೆ!
ಮದನನಿಗೇ ಮತ್ತೇರಿಸುವಂತಹ ಮೋಹಮದಿರೆ!!

ಅವಳು ದೇವೇಂದ್ರನಿಂದ ಆಜ್ಞಪ್ತಳಾಗಿ ಪರಮನನೋಲಗಿಸಲೆಂದು ಸಭಾಸ್ಥಳದಲ್ಲಿ ಬಂದು ನಿಂತಿದ್ದಾಳೆ ನರ್ತನಕ್ಕೆ. ಅತ್ಯುನ್ನತ ಸಿಂಹವಿಷ್ಟರದ ಮೇಲೆ ಪುರುದೇವನು ಮಂಡಿಸಿದ್ದಾನೆ. ವಿಸ್ತೃತ ಸಭಾಂಗಣದಲ್ಲಿ ದೇವಗಣ ನೆರೆದಿದೆ. ಸ್ವಯಂ ದೇವೇಂದ್ರನೇ ನಿರ್ದೇಶಕನಾಗಿ ನಿಂತು ಎಲ್ಲ ಏರ್ಪಾಡುಗಳನ್ನು ಮಾಡಿ ಮುಗಿಸಿದ್ದಾನೆ. ಸಂಗೀತ ಸುಧಾಗರ್ಭಿತ ಮಹಾಸ್ಥಾನದ ಒಂದೆಡೆಯಲ್ಲಿ ನರ್ತನಕ್ಕಾಗಿ ರಂಗಸಜ್ಜಿಕೆ ನಡೆದಿದೆ ತೆರೆಯ ಮರೆಯ ನರ್ತಕಿ 'ಮುಗಿಲ ಮರೆಯ ವಿದ್ಯುಲ್ಲತೆಯಂತೆ' ಹೊಳೆಯುತ್ತಿದ್ದಾಳೆ. ನಾಟ್ಯನಿರ್ದೇಶಕನ ಸಂಜ್ಞೆಯಂತೆ ತೆರೆ ಸರಿಯುತ್ತದೆ. ರಂಗಮಧ್ಯದಲ್ಲಿ ಸ್ವರ್ಣಪುತ್ಥಳಿಯಂತೆ ನಿಂತಿದ್ದ ನರ್ತಕಿ ನೀಲಾಂಜನೆ ಪುಷ್ಪಾಂಜಲಿಯನ್ನು ಸಮರ್ಪಿಸುತ್ತಾಳೆ. ಅವು ಸಾಕ್ಷಾತ್ ಮನ್ಮಥನ ಪುಷ್ಪ ಬಾಣಗಳೋ ಎನ್ನುವಂತೆ ರಸಿಕರ ಹೃದಯಗಳಲ್ಲಿ ನಾಟಿಕೊಂಡವು! ನರ್ತನ ಆರಂಭವಾಯಿತು. ನರ್ತಕಿ ನಿಂತ ಭಂಗಿ, ಅದರಲ್ಲೂ 'ಅವಯವದಿಂದಮೆ ದೇವಾಂಗವಸ್ತ್ರದುಳ್ಳುಡೆಯ ನಾಕೆಯೋಸರಿಸುವ, ಸೂಸುವ' ಹಾರಲತೆಯನಳವಡಿಸುವ ಭಂಗಿ ಮನ್ಮಥನ ರಾಜ್ಯವಿಲಾಸವೆ ಬೆಡಗುವೆತ್ತು ನಿಂತಂತಿತ್ತು! ಹಾವಭಾವ ವಿಲಾಸಗಳಿಂದ ಕೂಡಿದ ಅವಳ ಅಭಿನಯ, ಅದರಲ್ಲೂ 'ಕರಣದ ಚಾರಿಯ ಚಲ್ಲಿಯ ಪರಿಕ್ರಮ ಕ್ರಮ ಅಮೋಘ ಅದ್ವಿತೀಯ!' 'ಹೋಹೋ' ಎನ್ನುವ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗುತ್ತಿತ್ತು. ಅದು ನಯನಮನೋಹರ, ವರ್ಣನಾತೀತ! ಅದರ ಬಣ್ಣನೆಗೆ ಪಂಪನನ್ನು ಬಿಟ್ಟರೆ ಸಾಮಾನ್ಯನಲ್ಲಿ ಬಣ್ಣವೂ ಇಲ್ಲ, ಭಿತ್ತಿ ನೆಲೆಯೇ ಇಲ್ಲ. ಆದರೆ ಪಂಪ ವೈಚಿತ್ರ್ಯ ಪ್ರತಿಭೆಯುಳ್ಳವನು. ಬಿತ್ತಿದ ಬೆಳೆವ ಅದ್ಭುತ ಆನುವ ಆಶ್ಚರ್ಯಕರವಾದ ಅನ್ಯಾದೃಶ ಕಲಾವೃಕ್ಷವನ್ನು, ಕೇವಲ ಕಂದದ ಭುವನದಲ್ಲೇ ರಮ್ಯೋಜ್ವಲ ಕಲಾಪ್ರತಿಮೆಯನ್ನು ಕಡೆದು ನಿಲ್ಲಿಸಿ

ಜನ್ಮಾಭಿಷೇಕ ಕಲ್ಯಾಣ ಧನ್ಯತೆಗೆ ಸಾಕ್ಷಿಯಾಗಿದ್ದಾರೆ, ಪರಿನಿಷ್ಕ್ರಮಣ ಕಲ್ಯಾಣ ಲಾಲಿತ್ಯಕ್ಕೆ, ವೀರವೈರಾಗ್ಯಕ್ಕೆ ಹೇತುವಾಗಿದೆ. ಇವೆರಡನ್ನೂ ಕುರಿತ ತೌಲನಿಕ ವಿಶ್ಲೇಷಣೆ ವಿವೇಚನೆ ಮತ್ತೊಂದು ಲೇಖನದಲ್ಲಿದೆ.

ದ್ದಾನೆ. ನಾಟ್ಯ ವ್ಯಾಕರಣ, ನಾಟ್ಯ ಛಂದಸ್ಸು ಪಂಪನಿಗೆ ಚೆನ್ನಾಗಿ ಗೊತ್ತಿದೆ. ಕೇವಲ ನಾಟ್ಯಶಾಸ್ತ್ರವನ್ನೋದಿದ ಪುಸ್ತಕದ ಬದನೆಕಾಯಿ ಅಲ್ಲ. ಸ್ವಯಂ ಕಲಾವಿದ, ಕಲಾ ಕೋವಿದ. ಲಾಸ್ಯ-ತಾಂಡವ, ಕಥಕ್-ಕಥಕ್ಕಳಿ, ಅಲರಿಪು-ತಿಲ್ಲಾನ ಇವೇ ಮೊದಲಾದ ನಾಟ್ಯ ವೈವಿಧ್ಯಗಳನ್ನು ಕೇವಲ ಮಾತಿನ ಮೂಲಕವೇ ಪ್ರಕಟಿಸಿ, ಪ್ರದರ್ಶಿಸಿದ್ದಾನೆ. ನರ್ತಕಿಯ ಪಾದಗಳ ಜೊತೆಯಲ್ಲಿ ಕವಿ ಕಂಠದಿಂದ ಹೊರಬಂದ ಪದ-ಪದಪುಂಜಗಳೂ ಕುಣಿಯುತ್ತವೆ.

> ತಾಳದ ಲಯಮುಮಂ ನಿಜಾಶಿ ನೀ-
> ಳಾಳಕ ಹಾರದ ಪೊಸಟ್ಟಿ ಮುತ್ತೆಂಬವು ಮುಂ
> ಮೇಳಿಸಿ ಕೈಕೊಂಡುವು ಲಳಿ-
> ತಾಳಕಿ ಕೈಕೊಂಡಳೆಂಬುದೊಂದಚ್ಚರಿಯೆ ॥ (೯-೨೪)

ಇಲ್ಲಿನ ನೃತ್ಯಲಯ, ಕಾವ್ಯಲಯ, ಉಭಯ ಲಯಗಳಲ್ಲಿನ ತಾಳ, ಪೆಟ್ಟು, ಹುಸಿಗಳ ಸಹಯೋಗ, ಮಾತು ಧಾತುಗಳ ಮಧುರಬಂಧನ, ಥಕಥೈ ಕುಣಿಯುವ, ತಾಂಡವದ ಶಬ್ದ ಚಮತ್ಕಾರ ಅದ್ವಿತೀಯ. ಮತ್ತೆ,

> ರಸಭಾವ ಭಿನಯಂಗಳ್
> ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ
> ಪೊಸವೆ ಕರಣಂಗಳುಂ ನಿ–
> ಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಗಮುಮಂ ॥ (೯-೨೫)

ಇಲ್ಲಿನ 'ಪೊಸವೆ ಪೊಸವೆ' ಎಂಬ ಪದ ಪ್ರಯೋಗವು ಲಾಸ್ಯ ನೃತ್ಯ ಪ್ರಭೇದವನ್ನು ವ್ಯಂಜಿಸಿದೆ.

> ಕುಡು ಪುಂಕೆಯ್ಯುಂ ಜತಿಯೊಳ್
> ತಡತಡವರೆ ವಾದಕಂಗೆ ವುರ್ವಿಂ ಜತಿಯಂ
> ತೊಡರದೆ ನಡೆಯಿಸಿ ವುರ್ಮದೆ
> ಕುಡುಪೆಸೆ ನರ್ತಕಿಯೆ ಸಭೆಗೆ ವಾದಕಿಯಾದಳ್ ॥ (೯-೩೨)

ನರ್ತಕಿಯ ಪದಗತಿಗೆ ತಕ್ಕಂತೆ ತಾಳ ಮದ್ದಲೆಗಳು ಧ್ವನಿಗೈದಂತೆ, ಪ್ರತಿಭಾಶಾಲಿ ಕವಿಯ ಕಂಠದಿಂದ ಪದಗಳೇ ತಾಳ ಹಿಡಿದು ನಾದಗೈದಿವೆ. ಮೂರ್ತಿ ಮೂಲಕವೇ ಅಭಿವ್ಯಕ್ತಗೊಂಡ ನೃತ್ಯವೈಖರಿ ಅನುಭವೈಕವೇದ್ಯವಾದುದು. ಅಲ್ಲಿ ಕಲಾಸರಸ್ವತಿಯೇ ನಾಟ್ಯಪ್ರೌಢೆಯಾಗಿ ನರ್ತಿಸುತ್ತಿದ್ದಾಳೆ. ಅವಳ ಮೋಹನಾಕಾರ, ಭಾವ, ಭಂಗಿ, ಭ್ರೂ ವಿನ್ಯಾಸ, ಪದಗತಿ, ಬಾಹುವಿಭ್ರಮಣ-ಎಲ್ಲವೂ ಮೋಹಕವೇ! ಎಲ್ಲವೂ ರಮ್ಯವೆ! ಎಲ್ಲವೂ ಕಾಮಪ್ರಚೋದಕವೆ! ಸೇರಿದ್ದ ಸಭೆಯ ಹೃದಯವೇ ಕುಣಿಯುತ್ತದೆ ಆ ಸುರನರ್ತಕಿಯ ಕೂಡೆ ಅಂತೆಯೇ ಮಹಾಕವಿಯ ಮೋಡಿಗೆ ಸಿಕ್ಕ ಸಹೃದಯ ಚೇತನವೂ ನರ್ತಿಸದಿರುವುದಿಲ್ಲ.

ಈ ವಿಲಾಸ ವಿಭ್ರಮಗಳಾದರೂ ಎಷ್ಟು ಹೊತ್ತು! ಚಣ ಕಾಲ ಮಾತ್ರ. ಹಾ ಹಾ ಎನ್ನುವಷ್ಟರಲ್ಲಿ ನರ್ತಕಿಯ ಆಯುಸ್ಸು ಮುಗಿದು,

ಆ ಮಧುರಾಕಾರೆ ಲತಾ-
ಕೋಮಳೆ ತನಗಾಗಳಾಯುರಂತಂ ಬರೆ ಸೌ-
ದಾಮಿನಿವೊಲ್ ಭೋಂಕನೆ ಸುರ-
ಕಾಮಿನಿ ರಂಗದೊಳದೃಶ್ಯೆಯಪ್ಪುದುಮಾಗಳ್ -(೯–೪೧)

ಏನಾಶ್ಚರ್ಯ! ಎಂತಹ ಅನಿರೀಕ್ಷಿತ ಘಟನೆ!!

ಇಲ್ಲಿ ಕವಿಯ ಭಾವ ಗಂಭೀರವಾಗಿ, ಅವನ ಭಾಷೆಯೂ ಗಂಭೀರವಾಗುವುದನ್ನು ಕಾಣಬಹುದು. ಅಲ್ಲಿ ಕುಣಿದು ಕುಪ್ಪಳಿಸುವ ನರ್ತನ ಶೈಲಿಗೂ, ಇಲ್ಲಿ ತುಂಬು ಮೌನದ ಗಂಭೀರ ಶೈಲಿಗೂ ಇರುವ ವ್ಯತ್ಯಾಸವನ್ನು ಗುರುತಿಸಬಹುದು. ಎರಡೂ ಸಂದರ್ಭಗಳಲ್ಲಿ ಕಂದಪದ್ಯವೇ ಸಂವಹನ ಸಾಧನವಾಗಿದ್ದರೂ, ಭಾವದ ಉನ್ಮಾದ ಉಲ್ಲಾಸಗಳಿಗೆ ಅದರ ವಿಸ್ಮಯಾಂಶಸಂಭೂತ ವಿಷಾದಾಂತ ರುದ್ರ ಗಾಂಭೀರ್ಯಕ್ಕೆ ತಕ್ಕಂತೆ ಭಾಷಾಶೈಲಿ ರೂಪಿತವಾಗಿರುವುದನ್ನು ಅರಿಯಬಹುದು.

ನೀಲಾಂಜನೆ ರಂಗದಿಂದ ಕಾಣೆಯಾದ ಕೂಡಲೇ ರಸಭಂಗವಾದೀತೆಂದು ಭಾವಿಸಿದ ದೇವೇಂದ್ರನು ಮತ್ತೋರ್ವ ಮಾಯಾ ನೀಲಾಂಜನೆಯನ್ನು ರಂಗದ ಮೇಲೆ ತಂದಿರಿಸುತ್ತಾನೆ. ಇದು ಯಾರ ಅರಿವಿಗೂ ಬರುವುದಿಲ್ಲ–ಆದರೆ ಸಮಸ್ತ ವಿದ್ಯಾನಿಲಯನಾದ ಪುರುದೇವನನ್ನು ವಂಚಿಸಲು ಸಾಧ್ಯವೆ? ಅಥವಾ ಆ ಸರ್ವಜ್ಞನ ಜ್ಞಾನ ದೃಷ್ಟಿ ಸವಿಯದ ವಸ್ತುವುಂಟೆ? ಇಂದ್ರನು ನಿಯೋಜಿಸಿದ ಪಾತ್ರಾಂತರದ ಗುಟ್ಟು ಆದಿದೇವನಿಗೆ ತಿಳಿದು ಹೋಗುತ್ತದೆ. ನಾಟ್ಯ ವೈಭವವನ್ನು ನೋಡಿ ಆನಂದಿಸಿದ್ದ ಜಗತ್‌ಸ್ವಾಮಿ, 'ದೇಹಾನಿತ್ಯತೆಗೆ ನಾಡೆ ಚೋದ್ಯಂ' ಬಡುತ್ತಾನೆ. ಅವನಲ್ಲಿ ವೈರಾಗ್ಯವಂಕುರಿಸುತ್ತದೆ. ಮೌನವನ್ನು ಮುರಿದು, ತನ್ನೊಳಗನ್ನು ಕುರಿತು ಮಾತನಾಡುತ್ತಾನೆ:

ನಾರೀರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀ ಸಂ–
ಸಾರದನಿತ್ಯತೆ ಮನದೊಳ್
ಬೇರೂಱಿದುದೀಗಳಿಂತಿದಂ ಕಡೆಗಣಿಪೆಂ ॥ –(೯-೪೪)

ಎಂದು ನಿಶ್ಚಯಿಸಿ,

ಎನಿತಾನುಮಂಬುನಿಧಿಗಳ-
ನನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತು-
ಲ್ಲೆನಗೆ ನರಭೋಗಮೆಂಬೀ-
ಪನಿವುಲ್ಲಂ ನಕ್ಕೆ ತೃಷ್ಣೆ ಪೆಱ್ ಪೋಪುದೇ ॥ (೯-೫೭)

ಎಂದು ತನ್ನನ್ನೇ ಪ್ರಶ್ನಿಸಿಕೊಂಡು, 'ಸಂಸಾರ ಶರೀರ ಭೋಗ ವಿರಕ್ತಾಂತರಂಗನೂ ಮುಕ್ತಿಕಾಂತಾನುರಕ್ತ ಚಿತ್ತನೂ ಆಗಿ,' ಸುದರ್ಶನ ಶಿಬಿಕೆಯನ್ನೇರಿ, ತಪೋನಿರತನಾಗಿ, ಕೇವಲ ಜ್ಞಾನೋದಯದಿಂದ ಕೇವಲಿಯಾಗಿ, ಪರಿನಿರ್ವಾಣ ಕಲ್ಯಾಣಾಂತರದಲ್ಲಿ ಜಿನನಾಗಿ ಸಮವಸರಣ ಮಂಟಪವನ್ನೇರಿ, ಅದರ ಮಧ್ಯದ ಗಂಧಕುಟಿಯ ಸಹಸ್ರದಲಪದ್ಮಪೀಠದ ಮೇಲೆ ನಾಲ್ಬೆರಳೆತ್ತರದಲ್ಲಿ ಮಂಡಿತನಾಗಿ, ಲೋಕಸಂಗ್ರಹ

ಕಾರ್ಯದಲ್ಲಿ ತೊಡಗಿ, ಆದರೆ ನಿಸ್ಪೃಹ ನಿರಂಜನನಾಗಿ, ಆದಿತೀರ್ಥಂಕರ ಸ್ವಾಮಿಯೆ ನಿಸಿ ನಿತ್ಯ ನಿರ್ಮಲ ಸತ್ಯ ಶಾಶ್ವತನಾಗುತ್ತಾನೆ.

ಹೀಗೆ ಕಾವ್ಯ ಧರ್ಮ ಮತ್ತು ಧರ್ಮಗಳೆರಡನ್ನೂ ಸಮನ್ವಯಗೊಳಿಸುವ ಪಂಪನ ಘನೋದ್ದೇಶ ಸಾಧನೆಗೆ ನೀಲಾಂಜನೆಯ ನೃತ್ಯ ವಿಭಾಗ ಒಂದು ಅತ್ಯುತ್ತಮ ಕಲಾರಂಗವಾಗಿದೆ. ಸಂಸಾರದ ಸಾರಾಸಾರತೆಯನ್ನರಿತು ಸಹಜವಾಗಿಯೇ ಮೂಡಿ ಬಂದ ವೈರಾಗ್ಯದಿಂದ, ಸರ್ವಸಂಗ ಪರಿತ್ಯಾಗಿಯಾಗಿ, ಅರ್ಹತ್ ಪದವಿಯನ್ನೂ ತೀರ್ಥಂಕರತ್ವವನ್ನೂ ಸಂಪಾದಿಸುವ ಮಹೋನ್ನತ ದರ್ಶನವನು ಜಗತ್ತಿಗೆ ತಯುಕ್ಕೆ ಪ್ರಕಟಿಸಿ ತೋರಿಸಿದ್ದಾನೆ ಮಹಾಕವಿ ಗುರಿಮುಟ್ಟಿದ ಕೂಡಲೆ ರಂಗದಿಂದ ಮೌನ ವಾಗಿ ನಿಷ್ಕ್ರಮಿಸಿ, ಚೈತ್ಯಾಲಯದ ವ್ಯಾಸಪೀಠದ ಮೇಲೆ ಕುಳಿತು ಶ್ರಾವಕ ಜನರಿಗೆ ಶ್ರೇಷ್ಠಬೋಧೆ ನೀಡತೊಡಗುತ್ತಾನೆ ಜಿನಸ್ವಾಮಿಯಂತೆ !

ಭರತ-ಬಾಹುಬಲಿ

ಪುರುಪರಮೇಶ್ವರನ ದಿವ್ಯಕಥೆಯಷ್ಟೇ ಪ್ರಾಂಜಲವಾದದ್ದು ಆತನ ಕುಮಾರ ರೀರ್ವರ ಪುಣ್ಯ ಕಥೆ. ಪುರಾಣಕವಿ ಪಂಪ ತೀರ್ಥಂಕರನ ಅಮೃತ ಕಥಾನಕದಲ್ಲಿ ಜೈನ ಪುರಾಣದ ನಿಬಂಧನೆಯಂತೆ ಪ್ರಥಮ ಚಕ್ರವರ್ತಿಯ ವೈಭವಪೂರ್ಣವಾದ ಕಥೆ ಯನ್ನು ಬೆಸೆದಿದ್ದಾನೆ. ಆದರೆ ಇಲ್ಲೂ ವೈಭವದ ಅನಿತ್ಯತೆ, ವೈರಾಗ್ಯದ ಮಹೋನ್ನತಿ ಗಳನ್ನು ಸಾರಿ ತೋರಿದ್ದಾನೆ ಜೈನರಿಗೂ ಜೈನೇತರ ಧರ್ಮೀಯರಿಗೂ ಪ್ರಿಯವಾಗು ವಂತೆ.

ತನ್ನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟಿದ ಕೂಡಲೆ ದಿಗ್ವಿಜಯವನ್ನು ಕೈಗೊಳ್ಳುತ್ತಾನೆ ಭರತೇಶ. ಅಯೋಧ್ಯೆಯನ್ನು ಬಿಟ್ಟು ಹೊರಟು ದಕ್ಷಿಣಾಪಥ ವನ್ನೆಲ್ಲಾ ಒಳಗು ಮಾಡಿಕೊಳ್ಳುತ್ತಾನೆ, ಷಟ್ಖಂಡ ಮಂಡಲಕ್ಕೆಲ್ಲಾ ಏಕೈಕ ಚಕ್ರ ವರ್ತಿ ತಾನಾಗುತ್ತಾನೆ. ಆದರೂ ಆ ಆತ್ಮಕ್ಕೆ ತೃಪ್ತಿಯಿಲ್ಲ! ರಾಜ್ಯದಾಹಕ್ಕೆ ಕೊನೆ ಯಿಲ್ಲ! ದಕ್ಷಿಣಾಪಥದ ವೃಷಭಾಚಲದಲ್ಲಿ ತನ್ನ ವಿಜಯ ಪ್ರಶಸ್ತಿಯನ್ನು ಕೆತ್ತುವಂತೆ ಆಜ್ಞಾಪಿಸುತ್ತಾನೆ ಷಟ್ಖಂಡ ಮಂಡಲಾಧಿಪತಿ, ಆದರೆ ವೃಷಭಾಚಲದಲ್ಲಿ ಒಂದು ಸೂಜಿ ಮೊನೆಯಷ್ಟೂ ಜಾಗವಿರುವುದಿಲ್ಲ. ಭರತ ತಿಳಿದಂತೆ ಭರತನೊಬ್ಬನೇ ಷಟ್ಖಂಡ ಮಂಡಲವನ್ನು ಗೆದ್ದವನೇನಲ್ಲ! ಹಿಂದಿನ ಕಲ್ಪಕೋಟಿಗಳಲ್ಲಿ ಚಕ್ರವರ್ತಿಗಳು ಅದೆಷ್ಟೋ ಮಂದಿ ತಮ್ಮ ವಿಜಯಕ್ಕೆ ಸಾಕ್ಷಿಯಾಗಿ ವೃಷಭಾಚಲದ ತುಂಬ ತಮ್ಮ ಪ್ರಶಸ್ತಿಗಳನ್ನು ಕೊರೆಸಿರುತ್ತಾರೆ ಭರತನ ಹೆಸರು ಕೆತ್ತಲು ಎಳ್ಳಷ್ಟೂ ಎಡೆಯಿಲ್ಲ. ಅದನ್ನು ತಿಳಿದ ಕೂಡಲೇ ಅದುವರೆಗೂ ಮಡುಗಟ್ಟಿದ್ದ ಅವನ ಗರ್ವರಸ ಸೋರಿ ಹೋಗುತ್ತದೆ. ಆದರೂ ಸುಮ್ಮನಿರಲಾಗಲಿಲ್ಲ ಭರತನಿಗೆ ಯಾವನಾದರೂ ರಾಜನ ಹೆಸರು ಅಳಿಸಿ ತನ್ನ ಹೆಸರನ್ನು ಕೆತ್ತುವಂತೆ ಹೇಳುತ್ತಾನೆ ಎಂತಹ ಅವಿವೇಕ! ಎಂತಹ ದುರ್ಮೋಹ! ಎಂತಹ ಅಲ್ಪತ್ವ ಪ್ರಕಟಣ! ಎಂತಹ ಅಹಂಕಾರ ಪ್ರದರ್ಶನ! ಇದಕ್ಕೆ ಪ್ರಬಲವಾದ ಮತ್ತೊಂದು ಪೆಟ್ಟು ಬಿದ್ದದ್ದು ಚಕ್ರರತ್ನ ನಗರದಲ್ಲಿ ನಿಂತಾಗ. ಜ್ಯೋತಿಷ್ಕರಿಂದ ಅವನ ತಮ್ಮಂದಿರೇ ಅವನ ವಶವರ್ತಿಗಳಲ್ಲವೆಂದು ತಿಳಿದಾಗ ಅವರ

ಮನಸ್ಸೋಲಿಸಲು ಪ್ರಯತ್ನಿಸಿ ವಿಫಲನಾಗುತ್ತಾನೆ. ಬಾಹುಬಲಿ ಹೊರತು ಮಿಕ್ಕ ನೂರು ಮಂದಿ ಸೋದರರೂ ಜಿನದೀಕ್ಷೆ ಪಡೆದು ತಮ್ಮ ತಂದೆ ವೃಷಭ ತೀರ್ಥಂಕರ ಸ್ವಾಮಿ ಇದ್ದ ಸಮವಸರಣಕ್ಕೆ ಹೊರಟು ಹೋಗುತ್ತಾರೆ. ಬಾಹುಬಲಿಯೊಬ್ಬನೇ ಅಣ್ಣನನ್ನು ಪ್ರತಿಭಟಿಸಿ ನಿಲ್ಲುತ್ತಾನೆ. ಪೂರ್ವ ನಿಬಂಧನೆಯಂತೆ ಇಬ್ಬರಿಗೂ ದೃಷ್ಟಿ ಯುದ್ಧ, ಜಲಯುದ್ಧ ಮತ್ತು ಮಲ್ಲಯುದ್ಧಗಳಾಗಿ ಮೂರರಲ್ಲೂ ಭರತ ಪರಾಜಯ ವನ್ನಪ್ಪುತ್ತಾನೆ. ಅಷ್ಟೇ ಅಲ್ಲ, ಮಲ್ಲಯುದ್ಧ ಸಂದರ್ಭದಲ್ಲಿ ಬಾಹುಬಲಿಯಿಂದ ಜೀವ ದಾನ ಪಡೆಯುತ್ತಾನೆ. ಭುಜಬಲಿ ಭರತನನ್ನು ಒಂದು ಕುಲಪರ್ವತ ಮತ್ತೊಂದು ಕುಲಪರ್ವತವನ್ನು ಮೇಲೆತ್ತಿ ಹಿಡಿದು ನಿಂತಂತೆ ನಿಲ್ಲುತ್ತಾನೆ. ಅವನನ್ನು ನೆಲಕ್ಕೆ ಎತ್ತಿ ಕುಕ್ಕಿ ಬಿಡಬಹುದಾಗಿತ್ತು. ಆದರೆ 'ಭರತಾವನೀಶ್ವರಂ ಗುರು, ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರನ್' ಇಂತಹ ಮಹಾನುಭಾವನಿಗೆ ಅವನ ತಮ್ಮನಾದ ನಾನು ಭಂಗವುಂಟುಮಾಡುವುದೇ? ಛೀ ಯುಕ್ತವಲ್ಲ, ನೆರೆರಕ್ತವನ್ನು ಹಂಚಿಕೊಂಡು ಹುಟ್ಟಿದ ಸೋದರರಾದ ನಮ್ಮ ನಮ್ಮಲ್ಲಿ ವಿದ್ರೋಹ ಬೇಡ ಎಂದಾಲೋಚಿಸಿ, ನಿಧಾನವಾಗಿ ನೆಲಕ್ಕಿಳಿಸುತ್ತಾನೆ ತನ್ನಣ್ಣನನ್ನು. ಸೋತುಸಿಗ್ಗಾದ ಭರತ ತಮ್ಮನ ಮೇಲೆ ಚಕ್ರರತ್ನವನ್ನು ಪ್ರಯೋಗಿಸುತ್ತಾನೆ. ಆದರೆ ಧರ್ಮಚಕ್ರವೆನಿಸಿದ ಆ ಚಕ್ರ ರತ್ನ ಬಾಹುಬಲಿಯನ್ನು ಬಲಿತೆಗೆದುಕೊಳ್ಳದೆ, ಆತನ ಬಲಭುಜದ ಮೇಲೆ ಬಂದು ನಿಲುತ್ತದೆ. ಅದು ಬಾಹುಬಲಿಯ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡುತ್ತದೆ. ಹೊನ್ನು ವಂಚನೆಯ ವಸ್ತು, ದ್ರೋಹ ಚಿಂತನೆಯನ್ನು ಪ್ರಚೋದಿ ಸುವ ಶಕ್ತಿ! 'ತಂದೆಯೆಡೆಯೊಳ್ ಸುತನಂ, ಸೋದರರೊಳ್ ಸೋದರರಂ ಕಾದಿಸುವ ವಂಚಕಿ ರಾಜ್ಯಲಕ್ಷ್ಮಿಗೆ ಹೇಸಿ' ಅಣ್ಣನನ್ನುದ್ದೇಶಿಸಿ ನುಡಿಯುತ್ತಾನೆ:

> ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀ ಭಟ ಖಡ್ಗಮಂಡಲೋ
> ತ್ಪಲವನಭ ಪುಭ್ರ ಪುರಿಂಬಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ–
> ವಲಯಮನಯ್ಯ ನಿತ್ತುದುಮನಾಂ ನಿನಗಿತ್ತೆ ನಿನೀವುದಣ್ಣ ನೀ-
> ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಲ್ತ ಮಾಸದೇ ॥ –(೧೪-೧೩೦)

ಎಂದು!

ಬಾಹುಬಲಿ ಸ್ವಾಮಿಯ ದಯಾಪೂರ್ಣ ನುಡಿಗಳನ್ನು ಜೀರ್ಣಿಸಿಕೊಳ್ಳುವ ಶಕ್ತಿ ಭರತನಿಗಿರಲಿಲ್ಲ. ಆಗ ಅಣ್ಣನಿಗೆಲ್ಲವನ್ನೂ ಒಪ್ಪಿಸಿ, ತಪವಾಚರಿಸಿ, ಕಡೆಯಲ್ಲಿ ಕೇವಲಿಯಾಗುತ್ತಾನೆ.

ಭೋಗದ ನಿಸ್ಸಾರವನ್ನೂ, ತ್ಯಾಗದ ಹಿರಿಮೆಯನ್ನೂ ಎತ್ತಿ ಹಿಡಿದಿರುವ ಪಂಪನ ಕಾವ್ಯಸಿದ್ಧಿ ಅಡಗಿರುವುದು ಮೇಲಿನ ಚಂಪಕಮಾಲಾವೃತ್ತದಲ್ಲಿ. ಸರಳ ಶೈಲಿಗೆ ಹೆಸರಾದ ಚಂಪಕ, ಇಲ್ಲಿ ಸುದೀರ್ಘ ಸಮಾಸಗಳನ್ನು ಗರ್ಭೀಕರಿಸಿಕೊಂಡು ತುಂಬು ತೊರೆಯಾಗಿ ಹರಿದಿದೆ. ಆದರೆ ಬಾಹುಬಲಿ ಸ್ವಾಮಿಯಂತಹ ಭೂಮವ್ಯಕ್ತಿತ್ವದ ಉದಾತ್ತತೆಯನ್ನು ಅಭಿವ್ಯಕ್ತಿಸುವೆಡೆಯಲ್ಲಿ ಇದೇ ಚಂಪಕ ವೃತ್ತ ಪ್ರಸಾದ ಗುಣ ವನ್ನೂ ವೈದರ್ಭೀ ಶೈಲಿಯ ವೈಶಿಷ್ಟ್ಯವನ್ನೂ ಪ್ರಕಟಿಸಿರುವುದುಂಟು. ವಿಕ್ರ ಮಾರ್ಜುನ ವಿಜಯದಲ್ಲಿ ಬರುವ ಸೇನಾಪತಿ ಪಟ್ಟಗಟ್ಟುವ ಸಂದರ್ಭದಲ್ಲಿ ಕರ್ಣನನ್ನು

ಕುರಿತು ಹೇಳುವ 'ಕಲಿತನದುರ್ಕುಂ ಜವ್ವನದ ಸೊರ್ಕುಂ' ಎಂದು ಆರಂಭವಾಗುವ ಭೀಷ್ಮರ ಭೂಮಿ ತೂಕದ ಮಾತುಗಳನ್ನು ಇಲ್ಲಿ ನೆನೆಯಬಹುದು. ಭೂಮಿ ಆಕಾಶ ವನ್ನು ತುಂಬಿ ನಿಲ್ಲಬಲ್ಲ ಬಾಹುಬಲಿಸ್ವಾಮಿ ಮತ್ತು ಪಿತಾಮಹ ಭೀಷ್ಮರ ಭೂಮ ವ್ಯಕ್ತಿತ್ವಕ್ಕೆ ಇದು ಪಂಪನ ಅನುಪಮವಾದ ಅಭಿವ್ಯಕ್ತಿ !

೫

ಸಾಮಾನ್ಯವಾಗಿ ಪುರಾಣಕಾವ್ಯ [Epic Poetry], ವೀರಚರಿತ ಕಾವ್ಯ [Heroic poetry] ಅಥವಾ ಎಲ್ಲ ಬಗೆಯ ಮಹಾಕಾವ್ಯ [Great Poetry] ಗಳು, ಖಂಡಕಾವ್ಯ [Fragments] ಗಳು, ಕಥನಕವನ [Narrative verse] ಗಳು ವಸ್ತು ನಿಷ್ಠ [Objective] ರಚನೆಗಳು. ಭಾವಗೀತ ಮತ್ತು ಭಕ್ತಿಗೀತಗಳು ವ್ಯಕ್ತಿನಿಷ್ಠ [Subjective] ರಚನೆಗಳು. ಆದರೆ ಅಕ್ಷರಶಃ ಇವು ಏಕಮುಖಿಗಳಲ್ಲ. ಒಂದು ಮತ್ತೊಂದರ ಕ್ಷೇತ್ರ ಪ್ರವೇಶ ಮಾಡುವುದುಂಟು. ಭಾವಗೀತೆಗಳಲ್ಲಿ ಕವಿಯು ನಿರ್ಲಿಪ್ತ ಸಂದರ್ಭದ ಯಾವುದೇ ಒಂದು ತುರೀಯ ಸ್ತರದಲ್ಲಿ ವಸ್ತುನಿಷ್ಠತೆ ಮೈದೋರಬಹುದು. ಮತ್ತಾವುದೋ ಮಹಾಕಾವ್ಯ ಕಂಡರಣೆಯ ಸಂದರ್ಭದಲ್ಲಿ ಕವಿಯ ವೈಯಕ್ತಿಕ ಅನಿಸಿಕೆಗಳು ತಲೆದೋರಿ ಭಾವಗೀತದ ರಸವಾಹಿನಿಯಾಗಿ ಹರಿಯಬಹುದು ಇವೆರಡೂ ಸಾಧ್ಯತೆಗಳಿರುವುದರಿಂದಲೇ ಮಹತ್ತು ಬೃಹತ್ತಿನ ಭವ್ಯ ಮಹಾಕಾವ್ಯಗಳಲ್ಲೂ ಭಾವ ಗೀತದ ಚೆಲುವು ಚಿದುರುಗಳು ಕಾಣಸಿಗುವುದು.

ಪಂಪ ಮಹಾಕವಿಯ ಕೃತಿರತ್ನಗಳೆರಡರಲ್ಲೂ ಭಾವಗೀತಗಳಿವೆ. ಎರಡೂ ವಸ್ತುಕ ಕಾವ್ಯ [Classical] ಗಳಲ್ಲಿ ವರ್ಣಕ ವೈಖರಿ [Romantic Beautv] ವಿಜೃಂಭಿ ಸಿವೆ. ವಿಕ್ರಮಾರ್ಜುನ ವಿಜಯದಲ್ಲಿನ ನಾರದಾಗಮನದ ಚಿತ್ರಣ, ಹಸ್ತಿನಾವತಿಯ ವರ್ಣನೆ, ಬನವಾಸಿ ವರ್ಣನೆ, ವೇಶ್ಯಾವಾಟ, ವಸಂತೋತ್ಸವ ಇವೇ ಮೊದಲಾದ ವರ್ಣನೆಗಳಲ್ಲಿ, ಆದಿಪುರಾಣದ ವಿದೇಹದ ವರ್ಣನೆ, ಶ್ರೀಮತಿಯ ಬೀಳ್ಕೊಡಿಗೆ ಸಂದರ್ಭ, ಭರತೇಶನ ಪತ್ನಿಯರು ಕೈಕೊಂಡ ವನವಿಹಾರ, ಸೂರ್ಯಾಸ್ತವರ್ಣನೆ, ಚಂದ್ರೋದಯ ವರ್ಣನೆ ಮೊದಲಾದವು ಪುರಾಣಕಾವ್ಯದಲ್ಲಿ ಕಮನೀಯವಾಗಿ ಕಂಗೊಳಿಸಿವೆ.

ಕೊಂಕಿದ ಕೊಂಕು ತದ್ವಿಷಯ ಕಾಂತೆಯ ಪುರ್ಬಿನ ಕೊಂಕಿನಂತೆ ಚೆ-
ಲ್ವಂ ಕುಡೆ ತಳ್ತೆರಲ್ ತಡೆಯ ಪೂಮರತಂ ಕಟಿಪೂಗಳತ್ತಮಿ-
ತ್ತಂ ಕವಿದಲ್ಲಿ ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ
ನೂಂಕುವುವೂರ್ಮಿಮಾಲಿನಿಯ ತುಂಗತರತ್ತರಲೋರ್ಮಿ ಮಾಲೆಗಳ್ ॥

(೧-೬೧)

ವಿದೇಹ ಕ್ಷೇತ್ರದ ಪಡುವಣ ತಡಿವಿಡಿದು ನಡೆವ ಸೀತೋದಾನದಿಯ ಬಣ್ಣನೆ ಇದು. ಇದೊಂದು ಭಾವಗೀತವಲ್ಲದೆ ಬೇರಲ್ಲ. ತಿರುವುಗೊಂಡ ತೊರೆಯ ವಕ್ರವಿನ್ಯಾಸ ಆ ದೇಶಾಧಿದೇವತೆಯ ಹುಬ್ಬಿನ ಕೊಂಕೋ ಎನ್ನುವಂತಿತ್ತಂತೆ! ಇಲ್ಲಿನ ದೇಶದೇವತೆಯ ರೂಪಕ, ಹುಬ್ಬುಕೊಂಕಿನ ಉಪಮೆ ಅತಿರಮ್ಯ, ಅತಿಮನೋಹರ! ಅಂತೆಯೇ ಆ

ನದಿಯ ಇಕ್ಕೆಲದಲ್ಲೂ ಬೆಳೆದ ವೃಕ್ಷಗಳಿಂದ ತೊಟ್ಟು ಕಳಚಿ ಬೀಳುವ ಅರಳಿದ ಹೂವುಗಳು ಅಲೆಯ ಆಲಿಂಗನದಿಂದ ಪರಸ್ಪರ ಸಮಾವೇಶಗೊಂಡು ದುಂಡು ದಂತೆಗಳಾಗಿ ಮುಂದೆ ತೇಂಕಿ ತೇಂಕಿ ನಡೆಯುತ್ತಿವೆಯಂತೆ. ತೆರೆಯೆದೆಯ ಮೇಲೆ ತೇಲುವ ಹೂವಿನ ತೇರು ಅದೆಷ್ಟು ನಯನ ಮನೋಹರ! ಹರಿವ ನದಿಯ ವಿಲಾಸ ವೈಭವಗಳನ್ನು ಕಂಡು ಅನುಭೂತನಾದ ಕವಿ ಶ್ರೋತೃಗಳ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ನನೆಯನೆ ಪೇೞ್ ಕೆಂದಳಿರೊಳೆಯ್ದೆ ಬೞಿದ್ದಿಳಮಾವು, ಬಂದ ಮಾ-
ವನೆ ಮುಱಿಗೊಂಡು ಬಗ್ಗಿಸುವ ಕೋಗಿಲೆ, ಕೋಗಿಲೆಯಿಕ್ಕೆದಾಣದೊಳ್
ಜಿನುಗುವ ದುಂಬಿ ದುಂಬಿಯೊಳರಲ್ತೆರಂಬಸಱಿಂ ಬಸಂತರಾ-
ಜನ ಮನೆಯಂತೆ ಕಣ್ಗೆಸೆದು ತೋಱುವುವಲ್ಲಿಯ ನಂದನಾಳಿಗಳ್ ॥

-(೧-೬೫)

ನಿಸರ್ಗದ ಚೆಲುವನ್ನು ಬಣ್ಣಿಸುವಲ್ಲಿ ಕವಿಯು ಯಶಸ್ವಿದೆ. ಜೊತೆಗೆ ಅವನು ಬಳಸಿದ ಅಲಂಕಾರದ ಔಚಿತ್ಯವೂ ಅಡಗಿದೆ.

ಪೊಸನನೆಯೊಳ್ ಪಸುರ್ಪಲರೊಳಂ ಚಿರಮಲ್ಲದ ಬೆಳ್ಪು ಪಲ್ಲವ-
ಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆವಂದೊಪ್ಪು ಕೆಂಪು ತುಂಬಿಯೊಳ್
ಮಿಸುಗುವ ಕರ್ಪು ಬರ್ಪಿಸಿದವೋಲ್ ಬಗೆಗೊಳ್ವಿನೆಗಂ ಬಸಂತದೊಳ್
ಬಸದಿಯ ಬಾಗಿಲಂ ತೆಱೆದ ಮಾಱ್ಕೆಯೊಳಿರ್ದುವು ಬಂದ ಮಾವುಗಳ್॥

-(೧-೬೬)

ಮಾವು ಮಲ್ಲಿಗೆಗಳ ಹೆಸರು ಹೇಳಿದರೆ ಸಾಕು ಪಂಪನ ಬಾಯಲ್ಲಿ ನೀರೂರುತ್ತದೆ! ಹೊಸಮೊಗ್ಗೆಯ ತುಸು ಬಿಳುಪು, ಹೊಸ ಚಿಗುರಿನ ನಸುಗೆಂಪು, ಮಿನುಗುವ ದುಂಬಿಯ ಕಪ್ಪು–ಈ ಮೂರು ಬಣ್ಣಗಳಿಂದ ಬಸದಿಯ ಬಾಗಿಲಿಗೆ ಬಣ್ಣ ಬಳಿದು ದ್ವಾರಗಳನ್ನು ತೆರೆದಿಡೆಯೊ ಎನ್ನುವಂತಿತ್ತಂತೆ ಚಿಗುರಿ ಚೆಲುವಾದ ಮಾವು. ಬಸದಿ ಭಾವನೆಯ ಪಾವಿತ್ರ್ಯಕ್ಕೆ ಭಾವುಕತೆಯ ಬಣ್ಣನೆ ಕಲ್ಪನೆಗಳು ಮುಪ್ಪುರಿಗೊಂಡು ಕಾವ್ಯದ ಕಾಂತಿಯನ್ನು ಹೆಚ್ಚಿಸಿವೆ.

ತೌರಿನಿಂದ ಮಗಳನ್ನು ಮೊದಲ ಬಾರಿಗೆ ಅವಳ ಗಂಡನ ಮನೆಗೆ ಕಳುಹಿಸುವ ಸಂದರ್ಭ ಕರುಳು ಹಿಂಡುವಂಥದು. ಅದೊಂದು ಬಗೆಯ ಮಧುರಯಾತನೆ. ಶ್ರೀಮತಿಯ ಬೀಳ್ಕೊಡಿಗೆಯನ್ನು ಬಣ್ಣಿಸುತ್ತಾ ಪಂಪ,

ಪೊಡವಡುವಪ್ಪಿಕೊಳ್ವ ನೆನೆಯುತ್ತಿರಿಮೆಂಬ ಸಮಸ್ತವಸ್ತುವಂ
ಕುಡುವ ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ ಬುದ್ಧಿವೇೞ್ವ ಕೈ-
ಯೆಡೆ ನಿಮಗೆಂದೊಡಂಬಡಿಪ ನಲ್ಲರಗಳ್ಕೆಗೆ ಕಣ್ಣ ನೀರ್ಗಳಂ
ಮಿಡಿವ ಬಹು ಪ್ರಕಾರಜನಸಂಕಟಮೊಪ್ಪಿದುದಾ ಪ್ರಯಾಣದೊಳ್ ॥

-(೪-೧೬)

ಇಲ್ಲಿ ಅಗಲಿಕೆಯ ಸಂದರ್ಭದ ಕಾರ್ಯ ಚಟುವಟಿಕೆಗಳ ಪಟ್ಟಿ ಕೊಟ್ಟಿದ್ದಾನೆ ಪಂಪ. ಆ ಆಚರಣೆಗಳ ಜೊತೆಯಲ್ಲೆ ಭಾವ ಅರಳುತ್ತಾ ಕಾವ್ಯ ಬೆಳಗುತ್ತಾ ಹೋಗುತ್ತದೆ. ಆದರೆ ಕವಿ ಎಲ್ಲೂ ತನ್ನ ತಿಳಿವಿನ ತೀರ್ಪು ಕೊಡಲು ಹೊರಡದೆ, ಕಂಡದ್ದನ್ನು ಕಂಡ

ಹಾಗೆಯೇ ತೆರೆದಿಡುತ್ತಾ ಹೋಗುತ್ತಾನೆ. ಅದು ನಿಜವಾದ ಕಾವ್ಯಗುಣ, ಕವಿಯ ಕರ್ತವ್ಯ. ಏಕೆಂದರೆ ಕಾವ್ಯ ಎನ್ನುವುದು ಎಂದಿಗೂ ಕವಿಯ ಸಿದ್ಧಾಂತ ಅಲ್ಲ ; ಅದು ಅವನ ಅನುಭವದ ಅನಾವರಣ.

ರಸಿಕ ಚಕ್ರಿ ಭರತೇಶ ದಿಗ್ವಿಜಯಕ್ಕೆ ಹೊರಟಾಗ ಚತುರಂಗ ಸೇನೆಯನ್ನಷ್ಟೆ ಕರೆದೊಯ್ಯಲಿಲ್ಲ, ಜೊತೆಯಲ್ಲಿ ತನ್ನ ಅಂತಃಪುರದ ಸ್ತ್ರೀಯರನ್ನೂ ಪರಿವಾರವಹಿಳೆಯರನ್ನೂ ಕರೆದುಕೊಂಡು ಹೋಗುತ್ತಾನೆ. ಸಹಸ್ರ ಸಹಸ್ರ ಸಂಖ್ಯೆಯ ಅವರೆಲ್ಲರೂ ಪಯಣ ಬೆಳಸಿ, ಶರತ್ಕಾಲಕ್ಕೆ ಸರಿಯಾಗಿ ಗಂಗಾ ನದೀ ತೀರಕ್ಕೆ ಬರುತ್ತಾರೆ. ಬಿಸಿಲಿನ ಬೇಗೆ ನಿವಾರಣೆಗಾಗಿ ಅಲ್ಲಿದ್ದ ಪುಷ್ಪೋದ್ಯಾನವನ್ನು ಪ್ರವೇಶಿಸಿ, ಲತಾಭವನಗಳಲ್ಲಿ ವಿಶ್ರಾಂತಿ ಪಡೆದು, ಪುಷ್ಪವಾಟಿಯಲ್ಲಿ ವಿಹರಿಸುವಾಗ ಅಲ್ಲಿದ್ದ ಮಾವು-ಹೂವುಗಳನ್ನು ಮೆಚ್ಚುತ್ತಾರೆ. ಮಾವನ್ನು ಒಲಿದ ಒಬ್ಬಳು :

ತಳಿರೊಳ್ ನೀನೇ ಬೆಡಂಗನೈ ನನೆಯೊಳ್ ನೀಂ ನೀಟನೈ ಪುಷ್ಪಸಂ
ಕುಳದೊಳ್ ನೀನೇ ವಿಲಾಸಿಯೈ ಮಿಡಿಗಳೊಳ್ ನೀಂ ಚೆಲ್ವನೈ ಪಣ್ತಪ-
ಣ್ಗಳಿನೋವೋ ಪೆಟಿತೇನೊ ನೀನೆ ಭುವನಕ್ಕಾರಾಧ್ಯನೈ ಭೃಂಗ ಕೋ
ಕಿಳಕೀರಪ್ರಿಯಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ ॥

-(೧೧-೯೬)

ಎಂದು ಅಭಿಮುಖೀ ವಸ್ತುವಿನ ಪ್ರಶಂಸೆಗೈದರೆ, ಮತ್ತೊಬ್ಬಳು ಅಭಿನವ ಸುರಭಿ ಕುಸುಮ ಸೌರಭೆ ಆಣಿ ಮುತ್ತಿಗೆ ಶಸ್ತ್ರ ಚಿಕಿತ್ಸೆ ಮಾಡಿ ಅದರೊಡಲಲ್ಲಿ ಸುರಹೊನ್ನೆ ಹೂ ಅರಳಿಸುತ್ತಾಳೆ !

ಎಸಳ್ಗಳನೆಯ್ದೆ ಕಂಡರಿಸಿ ಮುತ್ತಿನೊಳಲ್ಲಿ ಸುವರ್ಣ ಚೂರ್ಣಮಂ
ಪಸರಿಸಿ ಕೇಸರಾಕೃತಿಯೊಳಲ್ಲಿಗೆ ಕರ್ಣಿಕೆಯಂದಮಾಗೆ ಕೀ
ಲಿಸಿ ಪೊಸತಪ್ಪ ಮಾಣಿಕದ ನುಣ್ಚರಲಂ ಮಧು ಮನ್ಮಥಂಗೆ ಬ-
ಣ್ಣಿಸಿ ಸಮೆದಂತೆ ತೋಱುವುದು ಪೂಗಳೊಳೇಂ ಸುರಹೊನ್ನೆ ಚೆನ್ನನೋ ॥

-(೧೧-೧೧೨)

ಅಂದರೆ, ಮುತ್ತೊಂದನ್ನೆತ್ತಿಕೊಂಡು ಅದರಲ್ಲಿ ದಳಗಳನ್ನು ಬಿಡಿಸಿ, ಅದರೊಡಲ ತುಂಬ ಬಂಗಾರದ ಹುಡಿ ತುಂಬಿ, ಅದರ ಮಧ್ಯದಲ್ಲೊಂದು ಸುವರ್ಣ ಕೇಸರವನ್ನು ಕೀಲಿಸಿ, ಮಧುಮನ್ಮಥನಿಗಾಗಿ ಸಿದ್ಧಪಡಿಸಿದ ಪುಷ್ಪಬಾಣವೋ ಎನ್ನುವಂತೆ ಕಾಣಿಸುವ ಸುರಹೊನ್ನೆ ಅದೇನು ಚೆಲುವುಳ್ಳುದೋ ! ಎಂದು.

ಇಂಥವೆನಿತೋ ಭಾವಕುಸುಮಗಳ ಸುಗ್ಗಿ ಸೂರೆ ಪಂಪನ ಕಾವ್ಯ ನಂದನದಲ್ಲಿ ! ಮತ್ತೊಂದು ಚಂದ್ರೋದಯದ ವರ್ಣನೆ.

ಅದೊಂದಿನಿಸು ಬೇಗದಿಂ ನವ ಜಪಾ ಪ್ರಸೂನಾಭ್ರಮಾ-
ಯ್ತದೊಂದಿನಿಸು ಬೇಗದಿಂ ಕನಕಕುಂಭದಂತಾಯ್ತು ಮ-
ತ್ತದೊಂದಿನಿಸು ಬೇಗದಿಂ ಮೃದು ಮೃಣಾಳ ಸಂಕಾಶ ಮಾ-
ಯ್ತದೇಂ ಬಟಱಿಕೆ ಬಿಂಬದುಜ್ಜಳಿಕೆಯೋ ಸುಧಾಸೂತಿಯಾ ॥

(೧೨-೭)

ಷೋಡಶಕಳಾಪೂರ್ಣನಾಗಿ ಮೂಡಿ ಮೇಲೇರುವ ಪೂರ್ಣ ಚಂದ್ರಮನ ಬಿಂಬವು ಮೊದಲು ದಾಸವಾಳದ ಬಣ್ಣವಡೆದು, ಮರುಕ್ಷಣದಲ್ಲಿ ಬಂಗಾರದ ಬಣ್ಣಕ್ಕೆ ತಿರುಗಿ, ತದನಂತರ ತಾವರೆದಂಟಿನ ಛಾಯೆ ತಳೆದು ಕಡೆಗೆ ಬೆಳ್ಳಂಬೆಳಗಾಗಿ ಬೆಳಗುತ್ತದೆ. ಆ ಅನುಭವ ಚಂದ್ರೋದಯದ ಪ್ರತಿಕ್ಷಣವನ್ನೂ ಬಿಡದೆ ವೀಕ್ಷಿಸಿದ ಸೂಕ್ಷ್ಮಗ್ರಾಹಿಗೆ ಮಾತ್ರ ವೇದ್ಯವಾಗುವಂಥದು.

ಇಂಥವೆನಿತೋ ಗೀತಕಾರಂಜಿ [Musical Fountains] ಗಳಿವೆ ಪಂಪನ ಕಾವ್ಯೋದ್ಯಾನದಲ್ಲಿ. ರುಚಿ ಕಚ್ಚಿಸುವ ಇಂತಹ ಸೌಂದರ್ಯಶ್ರೀಕಾವ್ಯವು ಧರ್ಮಭೂಯಿಷ್ಠವಿದ್ದರೂ ಸರ್ವಜನಪ್ರಿಯವೂ ಸರ್ವಮಾನ್ಯವೂ ಆಗಿರುವುದು.

ಕವಿಯ ಸದಾಶಯವೆ ಭರತವಾಕ್ಯವಾಗಿಸುವುದರಿಂದ ಅದನ್ನಿಲ್ಲಿ ಹಾಡಿ ಮುಗಿಸಬಹುದು :

> ರಸಭಾವೋಪೇತ ಧರ್ಮಾಂಮೃತರಸಸಮುದಯದೊಳ್ ಘೋರಸಂಸಾರ ನಾನಾ
> ವ್ಯಸನವ್ಯುಚ್ಛಿತ್ತಿಯೊಳ್ ಧಾರ್ಮಿಕ ಜನಜನಿತಾನಂದದೊಳ್ ಹೃದ್ಯವಿದ್ಯಾ
> ರಸದೊಳ್ ಸಂಸಾರಸಾರೋದಯ ವಿಚಾರದೊಳ್ ವಾಗ್ವಧೂಮುದ್ರೆಯೊಳ್ ಮು
> ದ್ರಿಸಿ ನಿಂದತ್ತಾದಿ ತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ ॥

-(೧೬-೭೯)

ಡಾ. ಬಿ. ಜಿ. ಎಲ್. ಸ್ವಾಮಿಯವರ ಕಾಲೇಜು ರಂಗ

ಕೆ. ಎಸ್. ಮಧುಸೂದನ

ತಮ್ಮ ಕೃತಿ 'ಕಾಲೇಜು ರಂಗ'ದಲ್ಲಿ ಹತ್ತಾರು ವರ್ಷಗಳ ಕಾಲ ತಾವು ಕಾಲೇಜನ್ನು ಒಳಗಿನಿಂದಲೂ ಹೊರಗಿನಿಂದಲೂ ಕಂಡ ಕಾಲದಲ್ಲಿ ಜರುಗಿದ ಹಲವಾರು ಅನುಭವಗಳನ್ನು ನಿರೂಪಿಸಿದ್ದಾರೆ ಈ ಕೃತಿಯನ್ನು ಲೇಖಕರು ಒಂದು 'ವ್ಯಂಗ್ಯ ದೃಷ್ಟಿಯ ಅನುಭವ ಕಥನ' ಎಂದು ಕರೆದಿದ್ದಾರೆ.

ತಾವು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಪ್ರಾಧ್ಯಾಪಕರಾಗಿದ್ದಾಗ ತಮ್ಮ ಅಧ್ಯಾಪನ [Teaching] ಅಧ್ಯಯನ [Study] ಗಳಿಗೆ ಭಂಗಬರಬಹುದೆಂಬ ಅನುಮಾನದಿಂದ ಲೇಖಕರು ತಮಗೆ ಪ್ರಿನ್ಸಿಪಾಲರ ಪದವಿ ಬೇಡವೆಂದೂ, ಪ್ರಾಧ್ಯಾಪಕನ ಹುದ್ದೆಯಲ್ಲೇ ತನ್ನನ್ನಿರಿಸಬೇಕೆಂದೂ ಸರ್ಕಾರಕ್ಕೆ ಅಹವಾಲನ್ನು ಬರೆದುಕೊಂಡಾಗ ಒಬ್ಬ ಮೇಲಧಿಕಾರಿಯು 'ಸರ್ಕಾರದ ಶಾಸನವನ್ನು ಪಾಲಿಸದೆ ಹೋದರೆ ಏನಾಗುತ್ತೆ ಗೊತ್ತೆ ? ನೀನು ಜವಾಬ್ದಾರಿ ತರಲು ಅಯೋಗ್ಯನೆಂದೂ ಬೇಜವಾಬ್ದಾರಿಯವನೆಂದೂ ಕಾನ್ಫಿಡೆನ್ಷಿಯಲ್ ರಿಪೋರ್ಟ್ ಬರೆದುಬಿಡುತ್ತೇನೆ, ಹುಷಾರ್ ! ನಿನ್ನ ಪ್ರಾಧ್ಯಾಪಕ ವೃತ್ತಿಗೂ ಸೊನ್ನೆ ಸುತ್ತಿಬಿಡುತ್ತೇನೆ' ಎಂದು ಹೆದರಿಸುತ್ತಾನೆ. ಆಗ ಹಲಸಿನ ಕಾಯಿಯಂತಹ ಮುಳ್ಳುಮಯವಾದ ಪ್ರಿನ್ಸಿಪಾಲನ ಮೆತ್ತೆಯನ್ನು ಬಲವಂತದಿಂದ ಲೇಖಕರು ಹತ್ತುತ್ತಾರೆ. ಆ ಸಂದರ್ಭದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ಅಧಿಕಾರಿಗಳು—ಅವರ ರಾಜಕೀಯ, ಅಜ್ಞಾನ, ಬುದ್ಧಿವಂತಿಕೆ, ಅತಿಬುದ್ಧಿವಂತಿಕೆಗಳಿಂದುಂಟಾಗುವ ಅನಾಹುತ, ಅನರ್ಥ, ಕೋಲಾಹಲ, ದಾಂಧಲೆಗಳು ಇಲ್ಲಿ ಪ್ರಕಟಗೊಂಡಿವೆ.

ಈ ಕೃತಿಯಲ್ಲಿ ಬರುವ ತ್ರಿಕೋನಗಳು : ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಶಿಕ್ಷಣ ಅಧಿಕಾರಿಗಳು ನಡುನಡುವೆ ಎಂ.ಎಲ್.ಎ ಮಹಾಶಯರೂ ಮಂತ್ರಿ ಮಹೋದಯರುಗಳೂ ಹಾದು ಹೋಗಿರುವುದುಂಟು. ಲೇಖಕರೊಂದಿಗೆ ಈ ಮೂರೂ ಕೋನಗಳ [Angles] ಸಂಬಂಧ, ನಡೆವಳಿಕೆಗಳು ಅತ್ಯಂತ ಮಾರ್ಮಿಕವಾದ ರೀತಿಯಲ್ಲಿ ನಿರೂಪಣೆಗೊಂಡಿದೆ. ಪ್ರಿನ್ಸಿಪಾಲರ ಕೊಠಡಿಗೆ ಸೇರಿದ ಹಾಗೆ ಇಟ್ಟುಕೊಂಡಿದ್ದ ಪ್ರಯೋಗಾಲಯದಲ್ಲಿದ್ದ ಆಲ್ಕೋಹಾಲನ್ನು ಸೇವಿಸಿ ದಾಂಧಲೆ ಎಬ್ಬಿಸಿದ ಕರಟಕ ದಮನಕರು, ತುರ್ತುಪರಿಸ್ಥಿತಿಯ ಕಾಲದಲ್ಲಿ ಕಾಲೇಜಿನ ಪ್ರಥಮ ಚಿಕಿತ್ಸಾ ತರಬೇತಿ ಸಂದರ್ಭದಲ್ಲಿ ಮೇಲಧಿಕಾರಿಯ ಎದುರು ಹುಡುಗರು ನಡೆಸಿದ ಚೇಷ್ಟೆಗಳು, ಅಧ್ಯಾಪಕರುಗಳ ಆಯ್ಕೆ, ವರ್ಗಾವಣೆ, ಕಾಲೇಜಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ

ಸಂದರ್ಭ—ಮುಂತಾದ ಪ್ರಸಂಗಗಳಲ್ಲಿ ಅಧಿಕಾರಿಗಳು ತೋರುವ ದರ್ಪ, ತರುವ ಒತ್ತಡ ಇತ್ಯಾದಿಗಳನ್ನು ಇಲ್ಲಿ ಗಮನಿಸಬಹುದು.

ನಾನು ಈ ಕೃತಿಯನ್ನು ಮೆಚ್ಚಲು ಮುಖ್ಯ ಕಾರಣ ಈ ಕೃತಿಯಲ್ಲಿ ಅಡಗಿರುವ ಶಿಕ್ಷಣವನ್ನು ಕುರಿತ ಲೇಖಕರ ಕಾಳಜಿ, ಆತ್ಮೀಯವಾದ, ಹೃದಯಂಗಮವಾದ, ನಿರೂಪಣಾ ಶೈಲಿ. ವಿಜ್ಞಾನಿಯೊಬ್ಬ ಸಾಹಿತಿಯಾದಾಗ ಉಂಟಾಗುವ ಪೂರ್ಣ ಪ್ರಮಾಣದ ಪ್ರಯೋಜನ 'ಕಾಲೇಜು ರಂಗ'ಕ್ಕೆ ದೊರಕಿದೆ. ತಾವೇ ಸ್ವತಃ ಭಾಗವಹಿಸಿದ್ದ, ದರ್ಶಿಯಾಗಿದ್ದ ಘಟನೆಗಳನ್ನು ನಿರೂಪಿಸುವಾಗ ಲೇಖಕ ಎಷ್ಟೊಂದು ಸಂಯಮಿಯಾಗಿರಬೇಕೆಂಬುದನ್ನು ಇಲ್ಲಿ ಸ್ವಾಮಿಯವರು ತೋರಿಸಿದ್ದಾರೆ. ಲೇಖಕರು ಯಾವುದೇ ಘಟನೆಗಳನ್ನು ನಿರೂಪಿಸಿದ್ದಾರೆಯೇ ಹೊರತು ಅದರ ಬಗ್ಗೆ ಆತುರಾತುರವಾಗಿ ತಕ್ಷಣದ ತೀರ್ಮಾನಗಳನ್ನು ತೆಗೆದುಕೊಂಡಿಲ್ಲ. ನಿರ್ಲಿಪ್ತ ಮನೋಧರ್ಮ ತೋರುತ್ತಾರೆ. ಕೆಲವು ಕಡೆ ಲೇಖಕರು ತಮ್ಮ ಸ್ವಯಂಪ್ರತಿಷ್ಠೆಯನ್ನು ತೋರಿಸುತ್ತಿದ್ದಾರೇನೋ ಎನ್ನಿಸಿದರೂ ಅದು ಕೃತಿಯ ಅನಿವಾರ್ಯ ಅಂಗವಾಗಿ ಬಂದಿದೆ.

ಇಲ್ಲಿ ಕಂಡುಬರುವ ಹಾಸ್ಯ ಅತ್ಯಂತ ಪರಿಣಾಮಕಾರಿಯಾದದ್ದು. ನಗೆಯ ಲಹರಿಗಳಿದ್ದು, ಹಗುರವಾಗಿ ಘಟನೆಗಳನ್ನು ಮರೆಯುವಂತಹುವಲ್ಲ. ವಿಷಯಗಳ ಬಗ್ಗೆ ವಾಚಕರು ಚಿಂತನ ಮಂಥನ ನಡೆಸುವಂತೆ ಮಾಡುತ್ತದೆ. ಇಂದಿನ ಶಿಕ್ಷಣ ಪದ್ಧತಿ ಹೇಗೆ ಎಲ್ಲ ಕಡೆಗಳಿಂದಲೂ ತಿರುಳನ್ನೆಸೆದು ಚಿಪ್ಪನ್ನು ಹಿಡಿದುಕೊಂಡಿರುವ ಒಂದು ನಿಯಮಗಳ ಕಗ್ಗಂಟಾಗಿದೆ ಎಂಬುದನ್ನೂ, ಶಿಕ್ಷಣದ ಉದ್ದೇಶವೇ ಈ ನಿಯಮಗಳ ಅತಿಭಾರದಿಂದ ಹೂತು ಹೋಗಿದೆ ಎನ್ನುವುದನ್ನೂ ಸ್ವಾಮಿಯವರು ತೋರಿಸಿಕೊಟ್ಟಿದ್ದಾರೆ.

ವಿದ್ಯಾರ್ಥಿಗಳ ಕೊಂಟಿಚೇಷ್ಟೆಗಳು, ತಾವೇ ಬೃಹಸ್ಪತಿಗಳೆಂಬ ಅಧ್ಯಾಪಕರುಗಳ ಅಪಾರ ಭ್ರಮೆ, ತಮ್ಮಿಂದಲೇ ಶಿಕ್ಷಣದ ಸೃಷ್ಟಿ, ಸ್ಥಿತಿ, ಲಯ ಎಂಬ ಶಿಕ್ಷಣಾಧಿಕಾರಿಗಳ ಉದ್ಧಟತನ, ಇವುಗಳ ಜೊತೆಗೆ ವಿದ್ಯಾಕ್ಷೇತ್ರಮಂತಹ ಗೌರವಯುತವಾಗಿರಬೇಕಾದ ಕ್ಷೇತ್ರದಲ್ಲಿಯೂ ತಾಂಡವವಾಡುವ ಜಾತೀಯತೆ, ಗುಂಪುಗಾರಿಕೆ, ರಾಜಕೀಯಗಳು—ಪ್ರಸ್ತುತಕಾಲದ ನಮ್ಮ ಸಮಾಜದ ಈ ಸಮಸ್ಯೆಗಳಿಗೆ ಈ ಕೃತಿ ಕನ್ನಡಿಯನ್ನು ಹಿಡಿದಿದೆ.

ಇಲ್ಲಿ ನಡೆಯುವ ಘಟನೆಗಳು ಇವತ್ತೂ ಯಾವುದೇ ಕಾಲೇಜುಗಳಲ್ಲಿ ನಡೆಯಬಹುದಾದ, ನಡೆಯುತ್ತಿರುವ ಘಟನೆಗಳೇ; ವಿದ್ಯಾರ್ಥಿಗಳಲ್ಲಿರುವ ಭಾಷಾದುರಭಿಮಾನ, ಅಧ್ಯಾಪಕರ ಪ್ರೈವೇಟ್—ಇವರೀರ್ವರಲ್ಲೂ ತಮ್ಮ ಜವಾಬ್ದಾರಿಗಿಂತಲೂ ಹಕ್ಕುಬಾಧ್ಯತೆಗಳನ್ನು ಕುರಿತು ಮಾತ್ರ ಇರುವ ಗಮನ ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುವಂತಹುದೇ ಆಗಿದೆ. ನಮ್ಮ ಕಾಲೇಜು ಶಿಕ್ಷಣದ ವೈಖರಿಗೆ 'ಕಾಲೇಜುರಂಗ' ಕೃತಿಯಲ್ಲಿ ಬರುವ ಚರಿತ್ರೆಯ ಅಧ್ಯಾಪಕನೊಬ್ಬನ ಪಾಠದ ಮಾದರಿಯಾದ :

"When Ashoka came to be throwned, he made Kalingas warred. He gaved up thrown. This edicts spreaded all over world.

There was a garden dug by Asoka in Ceylon. Our Kamban say Sita sat on the garden under Asoka tree.

Asoka very great King. Not compared to our Raja Raja. Asoka not reached Kaveri. Raja Raja reached Ganga. Asoka Sanskrit, Raja Raja Tamil."

ಎಂಬುದಾಗಲೀ ಅಥವಾ Physics lecturer ಒಬ್ಬನ

"Last class I was done Heat, this class I am being done light.

You all know light is light, Bulb light, flame light, sun light. Don't you confused heat, light etc and weight light etc. Heat is expanded objects. Light expand nothing. It give lights. It give shadows..."

ಪಾಠದ ರೀತಿಯಲ್ಲಿ ಶಿಕ್ಷಣ ಅಧ್ವಾನವಾಗಿರುವುದನ್ನು ಲೇಖಕರು ಗುರುತಿಸಿದ್ದಾರೆ.

ಕಥೆ ಕಾದಂಬರಿಗಳಲ್ಲಿನ ಮನರಂಜನೆ ಹಾಗೂ ಸೃಜನಶೀಲತೆ, ನಾಟಕಗಳಲ್ಲಿನ ಅದ್ಭುತ ನಾಟ್ಯಶಕ್ತಿ, ಕಾವ್ಯದ ರಮಣೀಯ ಪರಿಣಾಮ ಮತ್ತು ಕಮನೀಯತೆ, ಪ್ರಬಂಧಗಳ ಚಿತ್ತಾಹ್ಲಾದಕತೆ ಆತ್ಮಚರಿತ್ರೆಯ ಅನುಭವ ನಿರೂಪಣೆ, ವಿಮರ್ಶೆಯಲ್ಲಿನ ವಿಶ್ಲೇಷಣೆ—ಒಟ್ಟಿನಲ್ಲಿ ಉತ್ತಮ ಬರವಣಿಗೆಯಲ್ಲಿನ ಎಲ್ಲ ಒಳ್ಳೆಯ ಲಕ್ಷಣಗಳೂ ಈ ಕೃತಿಯಲ್ಲಿದ್ದು ಇದೊಂದು ಅಪೂರ್ವ ರೀತಿಯ ಅನನ್ಯ ಕೃತಿಯಾಗಿದೆ.

ವಿಜಯದಶಮಿ

ಜಿ. ಜಿ. ಮಂಜುನಾಥನ್

ಶ್ರೀಮದ್ರಾಮಾಯಣದಲ್ಲಿ ವಾಲ್ಮೀಕಿ ಮಹರ್ಷಿಗಳು ಶರದೃತುವಿನ ವರ್ಣನೆಯನ್ನು ಮಾಡಿದ್ದಾರೆ. ಆ ವರ್ಣನೆ ಒಂದು ಸರ್ಗಪೂರ್ತಿ ಮನೋರಮಣೀಯವಾಗಿ ವರ್ಣಿತವಾಗಿದೆ ಶರದೃತುವಿನ ಚಾಕ್ಷುಷ, ಮಾನಸಿಕ ವರ್ಣನೆಗಳು ಅಲ್ಲಿ ತೆಕ್ಕೆತೆಕ್ಕೆಯಾಗಿ ಚಿತ್ರಿತವಾಗಿವೆ. ಆ ಸಂದರ್ಭವಾದರೋ ಸುಗ್ರೀವ ಪಟ್ಟಾಭಿಷೇಕಾನಂತರದ್ದು. ಸೀತಾವಿರಹದಗ್ಧನಾದ ಶ್ರೀರಾಮನಿಗೆ ಶರತ್ಕಾಲದ ಆಕಾಶವನ್ನು ನೋಡಿದಾಗ ಬಂದ ಭಾವನೆಗಳು ಹೀಗಿವೆ—

ಪಾಂಡುರಂ ಗಗನಂ ದೃಷ್ಟ್ವಾ ವಿಮಲಂ ಚಂದ್ರಮಂಡಲಮ್
ಶಾರದೀಂ ರಜನೀಂ ಚೈವ ದೃಷ್ಟ್ವಾ ಜ್ಯೋತ್ಸ್ನಾನುಲೇಪನಮ್ ॥

ಈ ಶ್ಲೋಕದ ಅರ್ಥ ಹೀಗಿದೆ-

ಶುಭ್ರವಾದ ಗಗನ ತಳ, ನಿರ್ಮಲವಾದ ಚಂದ್ರಮಂಡಲ ಬೆಳದಿಂಗಳು ತುಂಬಿದ ಶರತ್ಕಾಲದ ರಜನಿ, ಇವನ್ನು ಶ್ರೀರಾಮನು ನೋಡಿದನು. ಹಾಗೆ ನೋಡಿ ಲಕ್ಷ್ಮಣನಿಗೆ ಹೇಳಿದನು—

"ಸೂರ್ಯಾತಪಕ್ರಾಮಣ ನಷ್ಟಪಂಕಾ
ಭೂಮಿಶ್ಚಿರೋದ್ಘಾಟಿತ ಸಾಂದ್ರರೇಣುಃ
ಅನ್ಯೋನ್ಯವೈರೇಣ ಸಮಾಯುತಾನಾ
ಮುದ್ಯೋಗಕಾಲೋದ್ಯ ನರಾಧಿಪಾನಾಮ್"

ಎಂದರೆ, ಬಿಸಿಲು ಕಾಯುವುದರಿಂದ ಕೆಸರು ಒಣಗಿದೆ. ಬಹುದಿನಗಳಾದ ಮೇಲೆ ಪುನಃ ನೆಲದಿಂದ ಧೂಳು ಏಳುತ್ತಿದೆ. ಅನ್ಯೋನ್ಯ ವೈರದಿಂದ ಸಮಯವನ್ನು ಕಾಯುತ್ತಿರುವ ರಾಜರಿಗೆ, ಲಕ್ಷ್ಮಣಾ! ಈಗ ಉದ್ಯೋಗ ಕಾಲವು ಅಂದರೆ ಕಾರ್ಯ ಪ್ರವೃತ್ತರಾಗುವ ಕಾಲವು ಬಂದಿದೆ.

ಇನ್ನೂ ಮುಂದುವರಿದು ಶ್ರೀರಾಮನು—

ಅನ್ಯೋನ್ಯ ಬದ್ಧವೈರಾಣಾಂ ಜಿಗೀಷೂಣಾಂ ನೃಪಾತ್ಮಜ
ಉದ್ಯೋಗ ಸಮಯಃ ಸೌಮ್ಯ ಪಾರ್ಥಿವಾನಾಮುಪಸ್ಥಿತಃ
ಇಯಂ ಸಾಪ್ರಥಮಾಯಾತ್ರಾ ಪಾರ್ಥಿವಾನಾಂ ನೃಪಾತ್ಮಜ ॥

ಎಂದು ಲಕ್ಷ್ಮಣನಿಗೆ ಹೇಳುತ್ತಾನೆ. ಇದರ ಅರ್ಥವೇನೆಂದರೆ ಪರಸ್ಪರ ವೈರವನ್ನು ಬೆಳೆಸಿ ಒಬ್ಬರನ್ನೊಬ್ಬರು ಜಯಿಸಬೇಕೆಂದು ಹಾತೊರೆಯುವ ಕ್ಷತ್ರಿಯ ವೀರರಿಗೆ, ರಾಜಪುತ್ರ! ಇದು ಯುದ್ಧ ಸನ್ನದ್ಧರಾಗುವ ಸಮಯ. ರಾಜಪುತ್ರ! ಯುದ್ಧಕ್ಕಾಗಿ ಪ್ರಥಮ ಪ್ರಯಾಣ ಮಾಡಲು ಇದೇ ತಕ್ಕ ಸಮಯ.

ಭಾರತೀಯ ಸಂಸ್ಕೃತಿಯನ್ನು ಅನ್ವರ್ಥವಾಗಿ ಪ್ರತಿಬಿಂಬಿಸುವ ಆದಿಕಾವ್ಯ ರಾಮಾಯಣದಲ್ಲಿಯೇ ಶರದೃತುವಿನ ಹಿರಿಮೆ-ಗರಿಮೆಗಳು ಹೀಗೆ ವ್ಯಕ್ತಪಟ್ಟಿವೆ.

ಇದೇ ಸಂಪ್ರದಾಯ ಕನ್ನಡದ ಆದಿಕಾವ್ಯವಾದ 'ಆದಿಪುರಾಣ'ದಲ್ಲಿಯೂ ಮುಂದುವರೆದಿದೆ. ಕ್ರಿ. ಶ. ೯ಳ೧ ರಲ್ಲಿದ್ದ ಮಹಾಕವಿ ಪಂಪ ಆದಿಪುರಾಣದ ಭರತ ಚಕ್ರಿಯ ವಿಜಯಯಾತ್ರಾ ಸಂದರ್ಭದಲ್ಲಿ ಶರದೃತು ವರ್ಣನೆಯನ್ನು ಮಾಡಿದ್ದಾನೆ. ಸ್ವಲ್ಪದರಲ್ಲಿ ಹೇಳುವುದಾದರೆ ಭರತ ಚಕ್ರವರ್ತಿ ಕಂಡ ಶರದ ಹೀಗಿದೆ—

ಪೊಸಜಾಂದಯ ಬೆಳೆದೆಱಗಿದ
ಪೊಸಗಳವೆಯ ಪೊಸತಲರ್ದ ತಾವರೆಗಳ ಕಂ
ಪಸದಳಮಸೆದಿರೆ ದೆಸೆದೆಸೆ
ಗೊಸಗೆಯೆ ಬರ್ಪಂತೆ ಕಣ್ಗೆವಂದುದು ಶರದಂ || ೧೧-೬

ಹೀಗೆ ತನ್ನ ದಿಗ್ವಿಜಯೋದ್ಯೋಗಕ್ಕೆ ಉಪಯೋಗ್ಯವಾಗಿ ಬಂದ ಶಾರದ ಲಕ್ಷ್ಮಿಯನ್ನು ಭರತಚಕ್ರವರ್ತಿ ಇದಿರುಗೊಂಡು ಜ್ಯೋತಿಷಿಗಳು ನಿಗದಿ ಮಾಡಿದ ಶುಭದಿನ ಶುಭ ಮುಹೂರ್ತದಲ್ಲಿ ದಿಗ್ವಿಜಯಭೇರಿಯನ್ನು ಹೊಯಿಸುತ್ತಾನೆ.

ಇದೇ ಭರತ ಚಕ್ರವರ್ತಿ ಶರತ್ಕಾಲದಲ್ಲಿ ಹೊರಟ ದಿಗ್ವಿಜಯ ಯಾತ್ರೆಯನ್ನು ರತ್ನಾಕರವರ್ಣಿ 'ಭರತೇಶ ವೈಭವ'ದಲ್ಲಿ ಬಣ್ಣಿಸಿದ್ದಾನೆ ಅವನ ವರ್ಣನೆ :

ಮಳೆಗಾಲ ಹೋದುದು ಬೆಳುಗಾಲ ಬಂದುದು
ದಳಂಡೆವುವಕಿನ್ನು ಚಿನ್ನು
ಅಲಸಿಕೆ ಪರಿಹಾರವಾಗಿ ದಿಗ್ವಿಜಯಕಿ
ನ್ನೆಳಸುವುದೊಳ್ಳಿತು ನೃಪತಿ ||

ಎಂದು ಹೇಳಿ, ದ್ವೀಪದ್ವೀಪಗಳಲ್ಲಿ ಸೊಕ್ಕಿದ ದಿಂಡೆಯ ಭೂಪತಿಗಳ ಹಿಂಡನ್ನು ನಿನ್ನ ಪಾದಕ್ಕೆರಗಿಸಿಕೊಳ್ಳಲು ಇದೇ ಸಮಯ. ಆದುದರಿಂದ ನವರಾತ್ರಿ ಜಿನಮಹಿಮೆಯನ್ನು ಮಾಡಿ ದಶಮಿಯ ದಿವಸ ಪ್ರಯಾಣ ಮಾಡಲು ಅಣಿ ಮಾಡುತ್ತೇನೆ ಎಂದು ಭರತ ಚಕ್ರವರ್ತಿಯ ಮಂತ್ರಿ ಬೀಳ್ಕೊಂಡನು.

ಹೀಗೆ ರಾಮಾಯಣದ ಕಾಲದಿಂದಲೂ ಪ್ರಶಂಸೆಗೆ ಪಾತ್ರವಾದ ಶರದೃತುವು ಚಾಂದ್ರಮಾನದ ಆಶ್ವಿಜಮಾಸದಲ್ಲಿ ಪ್ರಾರಂಭವಾಗುತ್ತದೆ. ಮಳೆಗಾಲ ಕಳೆದು, ಹೊಸಬೆಳೆ ಹೊಲದಲ್ಲಿ ಬೆಳೆದು ನಿಂತಾಗ ನಾಡಿನ ಜನತೆಗೆ ಅದರಲ್ಲೂ ಯುವಕರಿಗೆ ಕ್ಷಾತ್ರ ಪ್ರವೃತ್ತಿ ತಲೆದೋರುವುದು ತೀರ ಸಹಜ. ಅದರ ಅಂಗವಾಗಿ ಆಶ್ವೀಜ ಶುದ್ಧ ಪಾಡ್ಯದಿಂದ ನವಮಿಯವರೆಗೆ ಶಕ್ತಿ ಪೂಜೆ ವಿವಿಧ ರೂಪದಲ್ಲಿ ನಡೆಯುತ್ತದೆ.

ಈ ಉತ್ಸವವನ್ನು ಕೆಲವರು ತೃತೀಯೆಯಿಂದ ಆರಂಭಿಸಿ ಸಪ್ತರಾತ್ರ್ಯುತ್ಸವವನ್ನು, ಪಂಚಮಿಯಿಂದ ಆರಂಭಿಸಿ ಪಂಚರಾತ್ರ್ಯುತ್ಸವವನ್ನು, ಸಪ್ತಮಿಯಿಂದ ಆರಂಭಿಸಿ ತ್ರಿರಾತ್ರ್ಯುತ್ಸವವನ್ನು ಆಚರಿಸುತ್ತಾರೆ. ಸರಸ್ವತಿ, ದುರ್ಗಾ, ಲಕ್ಷ್ಮಿಯರ ರೂಪದಲ್ಲಿ ಶಕ್ತಿದೇವತೆಗಳ ಆರಾಧನೆ ನಡೆಯುತ್ತದೆ. ಕುಮಾರೀಪೂಜೆ ನಡೆಯುತ್ತದೆ. ಮನೆ ಮನೆಗಳಲ್ಲಿ ಗೊಂಬೆಯನ್ನು ಕೂಡಿಸಿ ಪ್ರತಿಮಾ ಪೂಜೆಯನ್ನು ನಡೆಸುತ್ತಾರೆ.

ಇದೇ ಸಮಯದಲ್ಲಿ ವೈಷ್ಣವರ ಮನೆಗಳಲ್ಲಿ ವೆಂಕಟೇಶನ ನವರಾತ್ರಿ ಉತ್ಸವಗಳೂ ನಡೆಯುತ್ತವೆ. ತಿರುಪತಿ ಮತ್ತು ಇತರ ಕಡೆಗಳ ವೆಂಕಟೇಶ ದೇವಾಲಯಗಳಲ್ಲಿ ನವ ರಾತ್ರಿಉತ್ಸವ ನಡೆದು ದಶಮಿಯಂದು ರಥೋತ್ಸವಗಳು ನಡೆಯುತ್ತವೆ. ಈ ಸಮಯ ದಲ್ಲಿಯೇ ಕೆಲವು ಕಡೆ ಘಟ ಸ್ಥಾಪನೆಯನ್ನು ಮಾಡಿ ಅದರ ಕೆಳಗಿನ ಚೌಕಾಕಾರದ ಎರೆಮಣ್ಣಿನ ವೇದಿಕೆಯಲ್ಲಿ ನವಧಾನ್ಯಗಳನ್ನು ಬಿತ್ತುತ್ತಾರೆ. ವಿಜಯದಶಮಿಯ ದಿವಸ ಬನ್ನಿಯ ಜೊತೆಯಲ್ಲಿ ಆ ಗಿಡಗಳನ್ನು ಬೆರಸಿ ಹಂಚುತ್ತಾರೆ.

ಹೀಗೆ ಆಶ್ವೀಜ ಶುದ್ಧ ಪ್ರಥಮೆಯಿಂದ ಪ್ರಾರಂಭವಾದ ಉತ್ಸವವಾಲೆ ಮಹಾ ನವಮಿಯಂದು ಶಕ್ತಿದೇವತೆಗಳ ಪೂಜೆಯಿಂದ, ಆಯುಧಗಳ ಅರ್ಚನೆಯಿಂದ ಒಂದು ಮಹತ್ವದ ಘಟ್ಟವನ್ನು ಮುಟ್ಟುತ್ತದೆ.

ಆ ಮಹಾನವಮಿಯಾದ ಮಾರನೆಯ ದಿನ ಎಂದರೆ ಆಶ್ವಯುಜ ಶುದ್ಧ ದಶಮಿಯೆಂದು ವಿಜಯದಶಮಿ ಆಚರಣೆಯಲ್ಲಿದೆ. ಅಂದು ಹಗಲಿನಲ್ಲಿ ಇಷ್ಟದೇವತಾ ಪೂಜೆಯನ್ನು ಮಾಡುತ್ತಾರೆ. ಆ ಸಂಜೆ ನಡೆಸಬೇಕಾದ ಕರ್ತವ್ಯಗಳೆಂದರೆ

ಅಪರಾಜಿತಾ ಪೂಜೆ–ಸೀಮೋಲ್ಲಂಘನೆ–ಶಮೀಪೂಜೆ

ದೇಶಾಂತರ ಗಮನವನ್ನು ಇಚ್ಛಿಸುವವರ ಪ್ರಯಾಣೋದ್ಯೋಗಗಳು. ಈ ಸಂದರ್ಭವನ್ನು ಕುರಿತು ಧರ್ಮಸಿಂಧುವಿನಲ್ಲಿ ದೊರೆಯುವ ಆಧಾರ ವಾಕ್ಯ ಹೀಗಿದೆ—

"ಅತ್ರಾಪರಾಜಿತಾ ಪೂಜನಂ। ಸೀಮೋಲ್ಲಂಘನಂ। ಶಮೀಪೂಜನಂ। ದೇಶಾಂತರ ಯಾತ್ರಾರ್ಥಿನಾಂ। ಪ್ರಸ್ಥಾನಂ ಚ ಹಿತಂ। ತತ್ಪೂಜಾ ಪ್ರಕಾರ ಸ್ತ್ವಪರಾಹ್ಣೇ। ಗ್ರಾಮಾದೀಶಾನ್ಯಾಂ ದಿಶಿಗತ್ವಾ। ಶುಚಿದೇಶೇ। ಭುವಮುಪಲಿಪ್ಯ। ಚಂದನಾದಿನಾಷ್ಟದಳ ಮಾಲಿಖ್ಯ....ಪೂಜಾ ನಮಸ್ಕಾರಾಂತೇ .... ತತಸ್ಸರ್ವೇಜನಾಃ ಗ್ರಾಮಾದ್ಬಹಿರೀಶಾನ। ದಿಗವಸ್ಥಿತಾಂ ಶಮೀಂ ಗತ್ವಾ ಪೂಜಯೇಯುಃ। ಸೀಮೋಲ್ಲಂಘನಂತು। ಶಮೀಪೂಜನಾತ್ಪೂರ್ವಂ। ಪಶ್ಚಾದ್ವಾ ಕರ್ತವ್ಯಂ। ರಾಜಾತ್ವಶ್ವಮಾರುಹ್ಯ। ಸ ಪುರೋಹಿತಃ ಸಾಮಾತ್ಯಃ। ಶಮೀಮೂಲಂ। ಗತ್ವಾ। ವಹನಾದವರುಹ್ಯ। ಸ್ವಸ್ತಿವಾಚನ ಪೂರ್ವಕಂ। ಶಮಿ ಸಂಪೂಜ್ಯ....ಪ್ರದಕ್ಷಿಣಂ ಕುರ್ಯಾತ್ ಶಮ್ಯಲಾಭೇ। ಅಶ್ಮಂತಕ ಪೂಜಾ॥

ಎಂದರೆ ಅಪರಾಜಿತಾ ಪೂಜೆಯನ್ನು ಮಾಡುವವರು ಅಪರಾಹ್ಣ ಅಂದರೆ ಸಂಜೆಯ ಹೊತ್ತು ಈಶಾನ್ಯ ದಿಕ್ಕಿಗೆ ಹೋಗಿ ಅಲ್ಲಿ ಶುಚಿ ಪ್ರದೇಶದಲ್ಲಿ ಭೂಮಿಯನ್ನು ತೊಳೆದು ಚಂದನ-ಕುಂಕುಮದಲ್ಲಿ ಅಷ್ಟದಳ ಪದ್ಮವನ್ನು ರಚಿಸಿ "ಮಮ। ಸಕುಟುಂಬಸ್ಯ ಕ್ಷೇಮಸಿದ್ಧ್ಯರ್ಥಂ। ಅಪರಾಜಿತಾ ಪೂಜನಂಕರಿಷ್ಯೇ" ಎಂದರೆ ನನ್ನ ಕುಟುಂಬದ ಕ್ಷೇಮ ಸಿದ್ಧ್ಯರ್ಥವಾಗಿ ಅಪರಾಜಿತಾ ಪೂಜೆಯನ್ನು ಮಾಡುತ್ತೇನೆ ಎಂದು ಸಂಕಲ್ಪ ಮಾಡಬೇಕು. ಮಧ್ಯದಲ್ಲಿ "ಅಪರಾಜಿತಾಯೈನಮಃ" ಎಂದು ಅಪರಾಜಿತೆಯನ್ನು ಆಹ್ವಾನಿಸಬೇಕು. ಬಲಗಡೆಯಲ್ಲಿ ಕ್ರಿಯಾಶಕ್ತ್ಯೈ ನಮಃ ಎಂದು ವಿಜಯಾದೇವಿಯನ್ನು ಆವಾಹಿಸಿ ಅಪರಾಜಿತಾಯೈ ನಮಃ। ಜಯಾಯೈನಮಃ। ವಿಜ

ಯಾಯ್ಯೈ ನಮಃ। ಎಂದು ನಾಮ ಮಂತ್ರಗಳಿಂದ ಷೋಡಶೋಪಚಾರ ಪೂಜೆಯನ್ನು ಮಾಡಬೇಕು. ಅನಂತರ

ಇಮಾಂ ಪೂಜಾಂ ಮಯಾದೇವೀ ಯಥಾಶಕ್ತಿ ನಿವೇದಿತಾಂ
ರಕ್ಷಾರ್ಥಂತು ಸಮಾದಾಯ ವ್ರಜ ಸ್ವಸ್ಥಾನಮುತ್ತಮಂ ॥ ಎಂದು ಪ್ರಾರ್ಥಿಸ

ಬೇಕು. ರಾಜರು "ಯಾತ್ರಾಯಾಂ। ವಿಜಯಸಿದ್ಧ್ಯರ್ಥಂ॥" ಎಂದು ಸೇರಿಸಿ ಕೊಂಡು ಪ್ರಾರ್ಥಿಸಬೇಕು.

ಅಪರಾಜಿತಾ ಪೂಜೆಯ ನಂತರ 'ಶಮೀ ವೃಕ್ಷ'ವನ್ನು ಎಂದರೆ ಬನ್ನಿಯ ಮರ ವನ್ನು ಪೂಜಿಸಬೇಕು. ರಾಜನಾದವನು ಕುದುರೆಯನ್ನು ಏರಿ ಅಮಾತ್ಯ, ಪುರೋ ಹಿತರೊಡನೆ ಸ್ವಸ್ತಿವಾಚನಪೂರ್ವಕವಾಗಿ ಪೂಜಿಸಿ ಅಲ್ಲಿ

ಶಮೀ ಶಮಯತೇ ಪಾಪಂ ಶಮೀ ಲೋಹಿತ ಕಂಟಕಾ
ಧರಿತ್ರ್ಯರ್ಜುನ ಬಾಣಾನಾಂ ರಾಮಸ್ಯ ಪ್ರಿಯವಾದಿನೀ
ಕರಿಷ್ಯಮಾಣ ಯಾತ್ರಾಯಾಂ ಯಥಾಕಾಲಂ ಸುಖಂ ಮಯಾ
ತತ್ರ ನಿರ್ವಿಘ್ನ ಕರ್ತ್ರೀತ್ವಂ ಭವ ಶ್ರೀರಾಮ ಪೂಜಿತೇ ॥

ಎಂದು ಧ್ಯಾನ ಮಾಡಬೇಕು. ಇದಕ್ಕೆ ಅರ್ಥ ಹೀಗಿದೆ—

ಶಮೀ ನೀನು ಪಾಪವನ್ನು ಹೋಗಲಾಡಿಸುತ್ತೀಯೆ ಕೆಂಪು ಮುಳ್ಳುಗಳಿಂದ ಕೂಡಿದ್ದೀಯೆ. ಅರ್ಜುನನ ಬಾಣವನ್ನು ಧರಿಸಿದ್ದೀಯೆ. ರಾಮನಿಗೆ ಪ್ರಿಯ ವಚನ ವನ್ನು ನುಡಿದಿದ್ದೀಯೆ. ಶ್ರೀರಾಮಪೂಜಿತೆಯೆ, ನಾನು ನಡೆಸುವ ಯಾತ್ರೆ ನಿರ್ವಿಘ್ನವಾಗಿರುವಂತೆ ಮಾಡು. ಅನುಗ್ರಹಿಸು.

ಬನ್ನಿಯ ಮರ ದೊರೆಯದಿದ್ದರೆ ಅಶ್ಮಂತಕ ಅಂದರೆ ಕೆಂಗಂಚಾಳ ವೃಕ್ಷವನ್ನು ಪೂಜಿಸಬೇಕು. ಇದರ ಎಲೆಗಳು ಕಾಸಿನಷ್ಟು ಅಗಲವಿರುತ್ತವೆ. ಈ ಅಶ್ಮಂತಕವನ್ನು–

ಅಶ್ಮಂತಕ ಮಹಾವೃಕ್ಷ ಮಹಾದೋಷ ನಿವಾರಣ
ಇಷ್ಟಾನಾಂ ದರ್ಶನಂ ದೇಹಿ ಶತ್ರೂಣಾಂ ಚ ವಿನಾಶನಂ ॥

ಎಂದು ಪ್ರಾರ್ಥಿಸಬೇಕು. ಸೀಮೋಲ್ಲಂಘನವನ್ನು ಅಪರಾಜಿತಾ ಪೂಜೆಯ ನಂತರ ಅಥವಾ ಮೊದಲೇ ಮಾಡಬಹುದು.

ದೇಶಾಂತರ ಗಮನ ಮಾಡಬೇಕಾದವರು ಚಂದ್ರಾದಿ ಗ್ರಹಾನುಕೂಲವಿಲ್ಲ ದಿದ್ದರೂ ಅಂದು ಪ್ರಯಾಣ ಮಾಡಬಹುದೆಂದು ಸ್ಮೃತಿಕಾರರು ಹೇಳಿದ್ದಾರೆ. ಆ ಶ್ಲೋಕ ಹೀಗಿದೆ—

ಆಶ್ವಯುಕ್ ಶುಕ್ಲದಶಮೀ ವಿಜಯಾಖ್ಯಾಖಿಲೇ ಶುಭಾ
ಪ್ರಯಾಣೇತು ವಿಶೇಷೇಣ ಕಿಂ ಪುನಃ ಶ್ರವಣಾನ್ವಿತಾ ॥

ಈ ದಶಮಿಯಂದು ವಿಜಯ ಯಾತ್ರೆಯನ್ನು ತಪ್ಪದೆ ಮಾಡಬೇಕೆಂದು ಭೃಗು ಹೇಳಿದ್ದಾನೆ. ಸ್ಕಾಂದ ಪುರಾಣದಲ್ಲಿ ದಶಮಿಯನ್ನು ದಾಟಿದ ಯಾವ ರಾಜನ ಪ್ರಸ್ಥಾನವೂ ಆ ವರ್ಷದಲ್ಲಿ ವಿಜಯವನ್ನು ಕೊಡುವುದಿಲ್ಲ ಎಂದು ಹೇಳಿದೆ. ಶ್ರವಣ ನಕ್ಷತ್ರಯುಕ್ತ ದಶಮಿಯಂದು ಶ್ರೀರಾಮನು ವಿಜಯಯಾತ್ರೆಗಾಗಿ ಹೊರಟದ್ದು

ಕೆಳಗಿನ ಶ್ಲೋಕದಿಂದ ತಿಳಿದುಬರುತ್ತದೆ.

ಶ್ರವಣರ್ಕ್ಷೇ ಯದಾಕಾಲೇ ಸಾತಿಥಿರ್ವಿಜಯಾಭಿಧಾ
ಶ್ರವಣರ್ಕ್ಷೇತು ಪೂರ್ಣಾಯಾಂ ಕಾಕುತ್ಸ್ಥಃ ಪ್ರಸ್ಥಿತೋಯತಃ
ಉಲ್ಲಂಘಯೇಯುಸ್ಸೀಮಾನಂ ತದ್ದಿನರ್ಕ್ಷೇ ತತೋ ನರಾಃ ||

ಇದೇ ಸಂದರ್ಭದಲ್ಲಿ ರಾಜನು ಬಲ ನೀರಾಜನವನ್ನು ನಡೆಸಬೇಕು. ಬಲ ನೀರಾಜನ ಎಂದರೆ ಸೈನ್ಯದ ಪೂಜೆ. ಆ ಸಂದರ್ಭದಲ್ಲಿ ಸುರೇಶ್ವರಿಯನ್ನು ಕುರಿತು ಈ ಮಂತ್ರವನ್ನು ಹೇಳಬೇಕು ಎಂದು 'ಕಲ್ಪರತ್ನ' ತಿಳಿಸುತ್ತದೆ—

ಚತುರಂಗ ಬಲಂಮಹ್ಯಂ ನಿರನಿಷ್ಟಂ ಪ್ರಜತ್ವಿಹ
ಸರ್ವತ್ರ ವಿಜಯೋ ಮೇ ಅಸ್ತುತ್ವತ್ಪ್ರಸಾದ ತ್ ಸುರೇಶ್ವರೀ ||

ಈ ಎಲ್ಲ ಪರಿವೀಕ್ಷಣೆಯಿಂದ ವಿಜಯದಶಮಿಗಿರುವ ಪ್ರಾಚೀನ ಪರಂಪರೆ ಮತ್ತು ಮಹತ್ವದ ಸಂಗತಿ ವಿಶದಪಡುತ್ತದೆ. ಮುಂದೆ ವಿಜಯದಶಮಿಗೆ ಸಂಬಂಧಿಸಿದಂತೆ ಇರುವ ಐತಿಹ್ಯಗಳನ್ನು ಗಮನಿಸೋಣ.

ಶಮೀಮಂತ್ರದಲ್ಲಿ ಬರುವ—"ಧರಿತ್ರ್ಯರ್ಜುನಬಾಣಾನಾಂ | ರಾಮಸ್ಯಪ್ರಿಯ ವಾದಿನೀ" ಎನ್ನುವ ಮಾತಿನಲ್ಲಿ ವಿಜಯದಶಮಿಗೆ ಭಾರತ-ರಾಮಾಯಣಗಳ ಹಿನ್ನೆಲೆ ಇರುವುದು ತಿಳಿದು ಬರುತ್ತದೆ.

ಈಗಾಗಲೇ ನೋಡಿರುವಂತೆ "ಇಯಂ ಸಾ ಪ್ರಥಮ ಯಾತ್ರಾ ಪಾರ್ಥಿವಾನಾಂ" ಎನ್ನುವ ಕಿಷ್ಕಿಂಧಾ ಕಾಂಡದ ವಾಕ್ಯದಿಂದ ಶ್ರೀರಾಮನು ರಾವಣವಧಾರ್ಥವಾಗಿ ವಿಜಯದಶಮಿಯಂದು ಪ್ರಯಾಣ ಹೊರಟನೆಂದು ತಿಳಿದುಬರುತ್ತದೆ. ಆದರೆ ಬೃಹದ್ಧರ್ಮ ಪುರಾಣದಲ್ಲಿ ಹೀಗೆ ಹೇಳಿದೆ—ಆಷಾಢ ಶುದ್ಧ ಏಕಾದಶಿಯಂದು ವಿಷ್ಣುವು ಶೇಷ ಶಯನನಾಗಿ ನಿದ್ರಿಸುತ್ತಾನೆ. ಅಂದಿನಿಂದ ದಕ್ಷಿಣಾಯನ ಪ್ರಾರಂಭವಾಗುತ್ತದೆ. ದೇವತೆಗಳೆಲ್ಲರೂ ದಕ್ಷಿಣಾಯನದಲ್ಲಿ ನಿದ್ರಿಸುತ್ತಾರೆ. ಶರತ್ಕಾಲವು ದಕ್ಷಿಣಾಯನದಲ್ಲಿ ಬರುವುದರಿಂದ ದೇವಿಯೂ ಕೂಡ ಆಗ ನಿದ್ರಿಸುತ್ತಿರುತ್ತಾಳೆ. ರಾಮ-ರಾವಣರ ಯುದ್ಧ ನಡೆಯುತ್ತಿರುವಾಗ ರಾವಣನ ಬಲ ಪರಾಕ್ರಮವನ್ನು ನೋಡಿ ದೇವತೆಗಳು ಬೆರಗಾದರು. ಈ ಸಂದರ್ಭದಲ್ಲಿ ಅವರೆಲ್ಲರೂ ರಾಮಚಂದ್ರನಿಗೆ ವಿಜಯವನ್ನುಂಟು ಮಾಡು ಎಂದು ಪ್ರಾರ್ಥಿಸಿದರು. ದೇವಿಯು ಕುಮಾರೀ ರೂಪದಿಂದ ಪ್ರತ್ಯಕ್ಷಳಾಗಿ ಎರಡನೆಯ ದಿವಸ ಬಿಲ್ವವೃಕ್ಷದ ಮೇಲೆ ನಿದ್ರಿಸುತ್ತಿರುವ ದೇವಿಯನ್ನು ಎಬ್ಬಿಸಿ ಎಂದು ಆದೇಶಿಸಿ ಅದೃಶ್ಯಳಾದಳು—

ರಾವಣಸ್ಯ ವಧಾರ್ಥಾಯ| ರಾಮಸ್ಯಾನುಗ್ರಹಾಯಚ| ಅಕಾಲೇ ಬ್ರಹ್ಮಣಾ ಬೋಧೋದೇವ್ಯಾ

ಆ ಸಮಯದಿಂದ ಬ್ರಹ್ಮನು ಆಶ್ವಯುಜ ಶುಕ್ಲ ನವಮಿಯಿಂದ ರಾವಣ ವಧೆಯವರೆವಿಗೆ ದೇವಿಯನ್ನು ಪೂಜಿಸಿದನು. ದಶಮಿಯಂದು ರಾಮಚಂದ್ರನ ವಿಜಯೋತ್ಸವ ನಡೆಯಿತು. ಅದೇ ವಿಜಯದಶಮಿ. ಈ ಆಧಾರದ ಮೇಲೆಯೇ ಉತ್ತರ ಭಾರತದಲ್ಲಿ ರಾಮಲೀಲಾ ಉತ್ಸವವನ್ನು ಆಚರಿಸುತ್ತಾರೆ.

ಮುಂದೆ ಮಹಾಭಾರತಕ್ಕೂ ವಿಜಯದಶಮಿಗೂ ಇರುವ ಸಂಬಂಧವನ್ನು

ನೋಡೋಣ. ಶಮೀ ಪೂಜಾ ಮಂತ್ರದಲ್ಲಿ ಬರುವ "ಅರ್ಜುನಸ್ಯ ಧನುರ್ಧಾರೀ" ಅಥವಾ "ಧರಿತ್ರ್ಯರ್ಜುನ ಬಾಣಾನಾಂ" ಎನ್ನುವ ಮಾತಿನಿಂದ ವಿಜಯದಶಮಿಗೂ ಭಾರತಕ್ಕೂ ಸಂಬಂಧವಿದೆ ಎಂದು ಹಲವರು ಭಾವಿಸುತ್ತಾರೆ. ಪಾಂಡವರು ಅಜ್ಞಾತ ವಾಸಕ್ಕೆ ಹೋಗುವಾಗ ತಮ್ಮ ಧನುರ್ಬಾಣಾದಿಗಳನ್ನು ಬನ್ನಿಯ ಮರದ ಮೇಲಿಟ್ಟಿದ್ದರು. ಉತ್ತರ ಗೋಗ್ರಹಣ ಕಾಲದಲ್ಲಿ ಅರ್ಜುನನು ಶಮೀವೃಕ್ಷವನ್ನು ವಿಜಯದಶಮಿಯಂದು ಪೂಜಿಸಿ ಆಯುಧಗಳನ್ನು ಪಡೆದು ಶತ್ರುವನ್ನು ಗೆದ್ದನು. ವಿಜಯವನ್ನು ಪಡೆದನು ಎನ್ನುವ ನಂಬಿಕೆ ಜನರಿಗಿದೆ.

ಈ ಸಂದರ್ಭವನ್ನು ನಮ್ಮ ಜನಪದರೂ ಒಪ್ಪಿಕೊಂಡಿದ್ದಾರೆ. ಕಾಡುಗೊಲ್ಲ ಜನಾಂಗದವರ ಹಾಡಿನಲ್ಲಿಯೂ ಕೂಡ ಈ ಭಾವ ವ್ಯಕ್ತವಾಗಿದೆ :

ಮಡಗದಿರು ಮಡಗದಿರು ಮಡಗುವ ಜೂಜಲ್ಲ
ಈಗಲೆ ಸತ್ತೇವು ಕೆಡವೋದು
ಬನ್ನಿಯ ಮರದಡಿಯೆ ಕುಂತವ್ರೆ । ಧರುಮಾರು
ಅಂಜೇನಂಬೋ ದೇವಿ ಕರಿಸ್ಯಾರೇ
ಅಂಜೇನಂಬೋ ದೇವಿ ತಂಗಾಳಿದ್ದಾರೆ
ನಿನ್ನಿಂದಲೆ ನಮ್ಗೆ ವನಾದೇಸ ॥

ಇದೇ ಅಭಿಪ್ರಾಯ ಕೊಡವರ ಸಂಪ್ರದಾಯದಲ್ಲಿಯೂ ವ್ಯಕ್ತವಾಗಿದೆ. ಪಾಂಡವರು ಅಜ್ಞಾತವಾಸಕ್ಕೆ ಹೋಗುವಾಗ ಅರ್ಜುನನು ಬನ್ನಿಯ ಮರಕ್ಕೆ ಆಯುಧಗಳನ್ನು ಕಟ್ಟಿದ್ದು, ಅದನ್ನು ತೆಗೆದುಕೊಂಡು ಆಯುಧ ಪೂಜೆ ಮಾಡಿದ್ದು, ಚಂದ್ರವಂಶದ ಕ್ಷತ್ರಿಯರಾದ ಕೊಡವರಲ್ಲಿಯೂ ಮುಂದುವರಿದಿದೆ.

ಉತ್ತರ ಕರ್ನಾಟಕದ ಜನಪದ ಗೀತೆಯೊಂದರಲ್ಲಿ—

ಬನ್ನಿ ಮುಡಿಯೋಣ ಬಾರ ಕೋಲು ಕೋಲು
ಚಿನ್ನ ತರುವೋಣು ಬಾರ ಕೋಲು ಕೋಲು ॥

ಎನ್ನುವ ಮಾತು ಬರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ರಘು ಮಹಾರಾಜನಿಗೆ ಸೇರಿದ ಕಥೆ ಹೀಗಿದೆ :

ರಘು ಮಹಾರಾಜನು ಯಾಗವೊಂದನ್ನು ಮಾಡಿ ಬ್ರಾಹ್ಮಣರಿಗೆ, ದೀನದಲಿತರಿಗೆ, ಯಾಚಕರಿಗೆ ಎಲ್ಲವನ್ನೂ ಕೊಟ್ಟು ಬರಿಗೈಯಾದನು. ಆ ಸಂದರ್ಭದಲ್ಲಿ ವರತಂತು ಎನ್ನುವವನ ಶಿಷ್ಯನಾದ ಕೌತ್ಸ ಎನ್ನುವವನು ಗುರುದಕ್ಷಿಣೆಗಾಗಿ ಹದಿನಾಲ್ಕು ಕೋಟಿ ಚಿನ್ನದ ವರಹಗಳನ್ನು ರಘುವಿನಿಂದ ಪಡೆಯಲು ಬಂದನು. ರಘು ರಿಕ್ತಹಸ್ತನಾಗಿದ್ದನ್ನು ಅರಿತು ಕೌತ್ಸ ಆತನನ್ನು ಹರಸಿಹೋಗುವವನಿದ್ದನು. ಅಷ್ಟರಲ್ಲಿ ವಿಷಯವನ್ನು ತಿಳಿದ ರಘು ಮಹಾರಾಜ ಅದುವರೆವಿಗೂ ಇಂದ್ರನಿಂದ ಬರಬೇಕಾದ ಬಾಕಿಗಾಗಿ ಸ್ವರ್ಗದ ಮೇಲೆ ದಂಡೆತ್ತಿಹೋಗಿ ಆ ಹಣವನ್ನು ತಂದುಕೊಡಬೇಕೆಂದು ಆಲೋಚಿಸಿದನು. ಇದನ್ನು ತಿಳಿದ ಕುಬೇರ ತಾನಾಗಿಯೇ ರಘುವಿನ ಧನಾಗಾರದ ಮೇಲೆ ಚಿನ್ನದ ಮಳೆಯನ್ನು ಸುರಿಸಿದನು. ಆಗ ಕೌತ್ಸನು ರಘುವಿನಿಂದ ತನಗೆ ಬೇಕಾ

ದಷ್ಟನ್ನು ಮಾತ್ರ ಪಡೆದನು. ಉಳಿದುದನ್ನೆಲ್ಲ ರಘು ಪ್ರಜೆಗಳಿಗೆ ಹಂಚಿದನು. ಹಾಗೆ ಹಂಚಿದುದು ಆಶ್ವೀಜ ಶುದ್ಧ ದಶಮಿಯಂದು. ಅದೇ ವಿಜಯದಶಮಿ. ಹಾಗಾಗಿ ಬನ್ನಿ–ಬಂಗಾರಗಳು ಒಂದಾಗಿವೆ.

ಚಾಮುಂಡಿಯು ಮಹಿಷಾಸುರನನ್ನು ಕೊಂದದ್ದು ವಿಜಯದಶಮಿಯಂದು ಎಂದು ಕಾಲಿಕಾ ಪುರಾಣದಿಂದ ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ಐತಿಹಾಸಿಕವಾಗಿ ವಿಜಯದಶಮಿಯ ಆಚರಣೆ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿದೆ. ಮುಸ್ಲಿಮರ ಧಾಳಿಯಿಂದ ದಕ್ಷಿಣಾಪಥವನ್ನು ಕಾಪಾಡಲು ವಿಜಯನಗರ ಸಾಮ್ರಾಜ್ಯ ವಿಜಯದಶಮಿಯಂದು ಉದಯವಾಯಿತು.

ಬನ್ನೀಯ ಗಿಡಹುಟ್ಟಿ ಹೊನ್ನೀನ ಮಳೆಗರೆದು
ಚೆನ್ನಪಟ್ಟಣಕ ಹೊಳೆ ಹರಿದು ಹಂಪ್ಯಾಗ
ಬನ್ನಾಣವೀರ ಗುಟ್ಯಾಗಿ ||

ಎಂದು ಹಂತಿ ಹೊಡೆಯುವಾಗ ಜನಪದ ಗಾಯಕ ಹಾಡುತ್ತಾನೆ.

ಹಾಗಾಗಿ ವಿಜಯನಗರದಲ್ಲಿ ಮಹಾನವಮಿ ಮತ್ತು ವಿಜಯದಶಮಿಗಳು ಅತ್ಯಂತ ವೈಭವದಿಂದ ನಡೆದುವು. ಈ ಉತ್ಸವವನ್ನು ಕುರಿತು ಅಬ್ದುಲ್ ರಜಾಕ್ ವಿಸ್ತಾರವಾಗಿ ಹೇಳಿದ್ದಾನೆ. ಆ ಹಬ್ಬವನ್ನು ಕಣ್ಣಾರೆ ಕಂಡ ಪೋರ್ಚುಗೀಸ್ ಯಾತ್ರಿಕ ಪೇಜ್ ಎನ್ನುವವನು "ಇದು ಸ್ವಪ್ನವೇ, ಮಿಥ್ಯಾಕಲ್ಪನೆಯೋ, ಮೃಣ್ಮಯವಾದ ಈ ಭೂಮಿಯಲ್ಲಿ ಇಂತಹ ಅನವದ್ಯ ಸೌಂದರ್ಯ ಎಲ್ಲಿಂದ ಬಂದಿತು" ಎಂದು ಆಶ್ಚರ್ಯ ಪಟ್ಟಿದ್ದಾನೆ. ವಿಜಯನಗರದ ಪತನಾನಂತರ ಅದೇ ಸಂಪ್ರದಾಯವನ್ನು ಮೈಸೂರು ಅರಸರು ಮುಂದವರಿಸಿಕೊಂಡು ಬಂದರು. ಮೈಸೂರು ರಾಜ ಮನೆತನದಲ್ಲಿ ರಾಜ ಒಡೆಯರ ಕಾಲದಿಂದ ಆಚರಣೆಗೆ ಬಂದ ದಸರಾ ಉತ್ಸವ ಕಂಠೀರವ ನರಸರಾಜನ ಕಾಲದಲ್ಲಿ ಒಂದು ನಿರ್ದಿಷ್ಟ ಸ್ವರೂಪವನ್ನು ತಾಳಿತು. ಅದನ್ನು ಕುರಿತು ಗೋವಿಂದ ವೈದ್ಯ ಎನ್ನುವ ಕಂಠೀರವ ನರಸರಾಜನ ಆಸ್ಥಾನ ಕವಿ 'ಕಂಠೀರವ ನರಸರಾಜ ವಿಜಯ' ದಲ್ಲಿ "ಪುರ ಶೃಂಗಾರ, ಮಹರ್ನವಮಿ ಒಡ್ಡೋಲಗ, ಜಂಬೀ ಸವಾರಿ" ಎನ್ನುವ ಮೂರು ಅಧ್ಯಾಯಗಳಲ್ಲಿ ವರ್ಣಿಸಿದ್ದಾನೆ. ಅವು ಹೀಗಿವೆ: ಕಂಠೀರವ ನರಸ ರಾಜೇಂದ್ರನ ಆದೇಶದಂತೆ ಶ್ರೀರಂಗಪಟ್ಟಣದ ಶೃಂಗಾರ ನಡೆಯಿತು. ದಿಕ್ಕು ದಿಕ್ಕು ಗಳಿಂದ ರಾಜರು ಮನ್ನೆಯರು ಮಾಂಡಲಿಕರು ಅಲ್ಲಿ ನೆರೆದರು. ಸಂಗೀತ, ನೃತ್ಯ, ಜಟ್ಟಿ ಕಾಳಗ, ಪ್ರಾಣಿಗಳ ಕಾಳಗ ಮುಂತಾದುವು ಒಂಭತ್ತು ದಿವಸಗಳು ನಡೆದುವು. ಆಯುಧಪೂಜೆ ನಡೆಯಿತು. ಚಂಡಿಕಾ ದೇವಿಗೆ ಅನೇಕ ಬಗೆಯ ನೈವೇದ್ಯವನ್ನು ಅರ್ಪಿಸಿದರು. ಗಜಲಕ್ಷ್ಮಿ, ಹಯಲಕ್ಷ್ಮಿ, ಆಯುಧ ಲಕ್ಷ್ಮಿ, ದಾನಲಕ್ಷ್ಮಿ, ಭುಜ ಲಕ್ಷ್ಮಿ, ಸೌಭಾಗ್ಯ ಸಿರಿ ಕೀರ್ತಿಲಕ್ಷ್ಮಿ, ಶಾರದ ಲಕ್ಷ್ಮಿ, ಸಾಮ್ರಾಜ್ಯ ಲಕ್ಷ್ಮಿಯರು ಆತನನ್ನು ಸೇರಿದರು.

ವಿಜಯದಶಮಿಯಂದು ಕಂಠೀರವ ನರಸರಾಜನು ಪ್ರಾತರ್ವಿಧಿಗಳನ್ನು ತೀರಿಸಿ ದನು. ಸರ್ವಾಲಂಕಾರ ಭೂಷಿತನಾಗಿ ಪೂಜೆ ಮಾಡಿ ನರಸಿಂಹನ ತೀರ್ಥಪ್ರಸಾದ ವನ್ನು ಸೇವಿಸಿದನು. ಬ್ರಾಹ್ಮಣರಿಗೆ ನಿತ್ಯದಾನವನ್ನು ಮಾಡಿ ಸಂತೋಷಗೊಂಡನು.

ದಳಪತಿ ಮನ್ನೆಯರು ಮಾಂಡಲಿಕರನ್ನು ಸವಾರಿಗೆ ಬರಹೇಳಿ ಅರಮನೆಗೆ ತೆರಳಿದನು. ಅಂದು ಮಧ್ಯಾಹ್ನ ಜಂಬೂಸವಾರಿ, ಶಮೀಪೂಜೆ ಇತ್ಯಾದಿ ಸಾಂಪ್ರದಾಯಿಕ ವಿಧಿಗಳು.

ಪಟ್ಟಣದ ಲಿಂಗೇಗೌಡ ಊರ ಹೊರ ಭಾಗದಲ್ಲಿ ಶಮೀಮಂಟಪವನ್ನು ಶೃಂಗರಿಸಿದ್ದಾನೆ. ಅರಮನೆಯ ಬಾಗಿಲಿನಿಂದ ಜಂಬೂಸವಾರಿ ಮಂಟಪ ಪರಿಯಂತ ರತ್ನ ತೋರಣಗಳನ್ನು ಕಟ್ಟಿದೆ. ಬೀದಿಯ ತುಂಬ ಪನ್ನೀರ ಚಳೆಯ ಮುತ್ತಿನ ರಂಗವಾಲಿ ಒಪ್ಪಿದೆ. ಶುಭಮುಹೂರ್ತದಲ್ಲಿ ದೇವರುಗಳಾದ ಶ್ರೀರಂಗನಾಥ ಮತ್ತು ನರಸಿಂಹರು ಜಂಬೂಸವಾರಿ ಮಂಪಟವನ್ನು ಸೇರಿದ್ದಾರೆ.

ದೊರೆಯ ನೇಮದಿಂದ ದಳವಾಯಿಲಿಂಗರಾಜೇಂದ್ರ ಶೃಂಗರಿಸಿಕೊಂಡು ಅಲ್ಲಿಗೆ ಬಂದನು. ಮನ್ನೆಯ ವಿಸರ ಅಲ್ಲಿ ನೆರೆಯಿತು. ರಾಯಭೇರಿಯರವ ಆಕಾಶವನ್ನು ಪೂರೈಸಿತು. ಶ್ರೇಷ್ಠ ತುರಗಗಳು ಬಿರುದಿನ ಆನೆಗಳು ಅಲ್ಲಿ ನೆರೆದುವು.

ಪಾಠಕಾಳಿ ಬಿರುದನ್ನು ಉಗ್ಘಡಿಸುತ್ತಿರಲು ಕಂಠೀರವ ನರಸರಾಜನು ಉತ್ತಮವಾದ ಅಶ್ವವನ್ನು ಏರಿದನು. ಮುತ್ತಿನ ಸತ್ತಿಗೆ, ಮಕರತೆಕ್ಕೆಯ, ಚಿನ್ನದ ಛತ್ರಿಗಳ ನೆಳಲಿನಲ್ಲಿ ನಡೆದನು. ಚಿನ್ನದ ಹಡಪ, ಚಾಮರ, ಕುಂಚ, ಕಾಳಾಂಜಿಗಳ ಮಧ್ಯೆ ನಡೆದನು. ಆನೆಯ ಮೇಲೆ ರಾಜಿಸುವ ಢಮಾಮಿಗಳಿದ್ದುವು. ಮನ್ನೆಯರ ಸಮೂಹದೊಡನೆ ಕುದುರೆ ಏರಿ ನಡೆದನು. ಚಾಮರಗಳನ್ನು ಹೆಂಗಸರು ಬೀಸಿದರು. ಕುದುರೆ ಏರಿದ ನರಸಿರಾಜ ಸಿಂಹದ ನೆಗೆತವನ್ನು ಗರುಡನ ವೇಗವನ್ನು ಸವಾರಿಯಲ್ಲಿ ತೋರಿಸಿದ.

ವಂದಿಸಂದೋಹ ಬಿರುದುಗಳನ್ನು ಹಾಡುತ್ತಿರಲು ಕುದುರೆಯನ್ನಿಳಿದು ಆನೆಯನ್ನೇರಿದನು. ಆನೆಯ ಮೇಲೆ ಹೋಗುವಾಗ ಬಿಲ್ಲಿಗೆ ಬಾಣವನ್ನು ಹೂಡಿ ಆಕಾಶದಲ್ಲಿ ಹಾರುವಹಕ್ಕಿಯನ್ನು ಹೊಡೆದು ತನ್ನ ಗುರಿಯನ್ನು ತೋರಿದನು. ತಗರಕಾಳಗ, ಜಟ್ಟಿ ಕಾಳಗಗಳ ಮಧ್ಯೆ ವಿನೋದಗೊಂಡು ಶಮಿಯನ್ನು ಅರ್ಚಿಸಿ ವರವನ್ನು ಪಡೆದು ವಿನೋದದಿಂದ ನಡೆತಂದನು.

ಕಂಠೀರವನು ಸವಾರಿಗೆ ಹೋಗಿ ಬರುವ ವಿಲಾಸವನ್ನು ಊರಿನ ಹೆಂಗಸರು ಮನೆಯ ಮೇಲ್ಛಾವಣಿಯ ಮೇಲೆ ನಿಂತು ನೋಡಿದರು. ಚಂದ್ರಜ್ಯೋತಿ ದೀವಟಿಗೆಗಳ ಬೆಳಕಿನಲ್ಲಿ ದೊರೆ ಪುರವನ್ನು ಹೊಕ್ಕನು. ಬಾಣ, ಬಿರುಸು, ಸುರಹೂಗಳು ಆಕಾಶವನ್ನು ತುಂಬಿದುವು. ಎಡಬಲದಲ್ಲಿ ಥಾಳಿಸುವ ಸೀಗುರಿಗಳ ಬೆಡಗಿನಲ್ಲಿ ಕಂಠೀರವ ಅರಮನೆಯನ್ನು ಹೊಕ್ಕನು. ದೊರೆಯ ಎದುರಿನಲ್ಲಿ ಆರತಿ ಮುತ್ತಿನ ಸೇಸೆಗಳು ಸುಳಿದುವು. ದೊರೆ ಆನೆಯನ್ನಿಳಿದು ಅರಮನೆಗೆ ಬಂದನು. ದಳವಾಯಿ ದೊರೆಯ ಅಪ್ಪಣೆಯನ್ನು ಪಡೆದು ಪಡೆಯನ್ನು ಬೀಳ್ಕೊಟ್ಟು ತನ್ನ ಅರಮನೆಗೆ ಬಂದನು.

ಆ ಮಾರನೆಯ ದಿವಸ ದೊರೆಯ ನೇಮದಂತೆ ದಳಪತಿ ಮತ್ತು ಕರಣಿಕರು ಯಾಚಕರಿಗೆ ಹೊನ್ನಿನ ಉಡುಗೊರೆಗಳನ್ನು ಇತ್ತು ಉಪಚರಿಸಿದರು. ಮಲ್ಲರು, ಸಂಗೀತಗಾರರು, ವಿದ್ವಾಂಸರು, ಪರಿಹಾಸಕರು, ಪರಿಣತರು ಉಡುಗೊರೆಗಳಿಂದ, ಭೂಷಣಾದಿಗಳಿಂದ ತೃಪ್ತಿ ಹೊಂದಿದರು. ಬ್ರಾಹ್ಮಣರನ್ನು ಮನ್ನಿಸಿ, ಧರ್ಮವನ್ನು ಕೈಕೊಂಡು ಸಂತೋಷದಿಂದ ನರಸರಾಜನು ಸ್ಥಿರ ಸಾಮ್ರಾಜ್ಯವನ್ನು ಹೊಂದಿದನು.

ಇದು ಆ ಕಾಲದ ಮಹಾನವಮಿ ಮತ್ತು ವಿಜಯದಶಮಿ ಉತ್ಸವಗಳ ನೀಲ ನಕಾಸೆ (Blue Print) ಅಷ್ಟೆ. ಅದರ ಸೊಬಗನ್ನು, ವಿಸ್ತಾರ, ವೈವಿಧ್ಯವನ್ನು, ಆ ಕಾಲದ ರಂಗುರಂಗಿನ ಪ್ರಪಂಚವನ್ನು ಕಾಣಲು ಕಂಠೀರವ ನರಸರಾಜಕ್ಕೇ ಶರಣರಾಗಬೇಕು. ಇದೇ ಬಗೆಯ ವರ್ಣನೆಗಳನ್ನು ಪಂಪನ ಆದಿಪುರಾಣ, ಅಗ್ಗಳನ ಚಂದ್ರಪ್ರಭ ಪುರಾಣ, ಪಿರಿಯಪಟ್ಟಣದ ದೊಡ್ಡಯ್ಯನ ಚಂದ್ರಪ್ರಭಸಾಂಗತ್ಯ, ರತ್ನಾಕರವರ್ಣಿಯ ಭರತೇಶವೈಭವ ಮುಂತಾದ ಕೃತಿಗಳಲ್ಲಿ ಕಾಣಬಹುದು.

ಹೀಗೆ ಪರಂಪರಾಗತವಾಗಿ ನಡೆದುಬಂದ ದಸರ ಮೈಸೂರು ರಾಜ ಮನೆತನದ ಕಡೆಯ ಅರಸ ಜಯಚಾಮರಾಜ ಒಡೆಯರ ಕಾಲದವರೆಗೂ ನಡೆದು ಬಂದಿತು.

ಈಗ್ಗೆ ಕೆಲವು ದಶಕಗಳ ಹಿಂದಿನವರೆಗೂ 'ಕೂಲಿಮಠ'ದ ಅಯ್ಯಗಳು ತಾವು ಮರಳ ಮೇಲೆ ಓನಾಮ ತಿದ್ದಿಸಿದ ಹುಡುಗರಿಗೆ "ಆಶ್ವೀಜ ಶುದ್ಧ ಮಾನವಮಿ ಬರಲೆಂದು ಹರಸುವೆವು ಬಾಲಕರು ಬಂದು" ಗುರು, ಕಲಿತ ಶಿಷ್ಯ ಎಲ್ಲರಿಗೂ ಮುದವನ್ನು ಈ ದಿನಗಳು ನೀಡುತ್ತಿದ್ದುವು.

ಸ್ವಾತಂತ್ರ್ಯ ಚಳವಳಿಯ ಪರಿಣಾಮವಾಗಿ ರಾಷ್ಟ್ರೀಯತೆ, ನಾಡ ಅಭಿಮಾನಗಳು ನಮ್ಮ ಯುವ ಜನತೆಯಲ್ಲಿ ಚಿಗುರಿದುವು. ಬಂಗಾಳಿಗಳು ದುರ್ಗಾಷ್ಟಮಿಯನ್ನು, ಮಹಾರಾಷ್ಟ್ರೀಯರು ಗಣೇಶ ಜಯಂತಿಯನ್ನು ಸಾರ್ವಜನಿಕ ಸಮಾರಂಭಗಳನ್ನಾಗಿ ಮಾಡಿದರು. ಅದರಂತೆಯೇ ಕನ್ನಡಿಗರೂ ತಮ್ಮ ಪರಂಪರೆಗೆ ಒಗ್ಗಿ ಬಂದ ದಸರೆಯನ್ನು ತಮ್ಮ ನಾಡಹಬ್ಬವನ್ನಾಗಿ ೧೯೩೫ ರಿಂದ ಆಚರಿಸ ತೊಡಗಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಆನಂತರವೂ ಕೂಡ ಹರಿದು ಹಂಚಿಹೋಗಿದ್ದ ಕನ್ನಡಿಗರ ಭಾವೈಕ್ಯತೆಯ ಮಾಧ್ಯಮವಾಗಿ ವಿಜಯದಶಮಿ ಮೆರೆಯಿತು. ರಾಜಮಹಾರಾಜರ ಮೆರವಣಿಗೆ ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿ ಕನ್ನಡಾಂಬೆಯ ಮೆರವಣಿಗೆಯಾಗಿ ಭುವನೇಶ್ವರಿಯ ಮೆರವಣಿಗೆಯಾಗಿ ಪರಿವರ್ತನೆಗೊಂಡಿತು.

ಕಾಕಾಕಾಲೇಲ್ಕರ್‌ರವರು ವಿಜಯದಶಮಿಯ ಹಬ್ಬದ ಬಗ್ಗೆ ಆಡಿರುವ ಮಾತುಗಳು ಗಮನಾರ್ಹವಾಗಿವೆ : "ವಿಜಯದಶಮಿಯಲ್ಲಿ ಚಾತುರ್ವರ್ಣ್ಯಗಳ ಸಮಾವೇಶವಿದೆ.... ಬ್ರಾಹ್ಮಣರ ಸರಸ್ವತೀ ಪೂಜೆ ವಿದ್ಯಾರಂಭ, ಕ್ಷತ್ರಿಯರ ಶಸ್ತ್ರಪೂಜೆ, ಅಶ್ವಗಜಾದಿ ನೀರಾಜನ, ಸೀಮೋಲ್ಲಂಘನೆ, ವೈಶ್ಯರಕೃಷಿ, ಇತರರ ಸೇವೆ–ಈ ಹಬ್ಬಗಳಲ್ಲಿ ವ್ಯಕ್ತವಾಗುತ್ತದೆ. ಕ್ಷತ್ರಿಯರ ಕರ್ತವ್ಯ ಸ್ವದೇಶ ರಕ್ಷಣ. ಅದನ್ನು ಸೀಮೋಲ್ಲಂಘನದಲ್ಲಿ ಕಾಣಬಹುದು" ಎಂದಿದ್ದಾರೆ.

ಇಂದು ಸ್ವದೇಶ ರಕ್ಷಣೆ ಕ್ಷತ್ರಿಯರ ಕರ್ತವ್ಯ ಮಾತ್ರ ಆಗಿ ಉಳಿದಿಲ್ಲ. ಜನಾಂಗದ ಎಲ್ಲರ ಅದರಲ್ಲಿಯೂ ಯುವಕರ ಆದ್ಯ ಕರ್ತವ್ಯವಾಗಿದೆ. ದೇಶದ ಹೊರಗಿನ ಶತ್ರುಗಳಿಗಿಂತ ಮುಖ್ಯವಾಗಿ ಒಳಶತ್ರುಗಳಾದ ವಂಚಕರ, ಕಾಳಸಂತೆಕೋರರ, ಸಮಾಜದ್ರೋಹಿಗಳ ವಿರುದ್ಧ ಹೋರಾಡಬೇಕಿದೆ. ಆ ಹೋರಾಟದ ವಿರುದ್ಧ ಮೊದಲ ಹೆಜ್ಜೆಯಾಗಿ ಪ್ರಥಮಯಾತ್ರೆಯಾಗಿ ವಿಜಯದಶಮಿಯ ಶುಭ ಮುಹೂರ್ತದಲ್ಲಿ ನಾಡ ಜನತೆ ಪ್ರಯತ್ನ ಶೀಲರಾಗಲಿ.

ಇತರೆ

ಮೈಸೂರಿನ ಸರಸ್ವತಿ-ವೀಣೆ

ರಾ. ಸತ್ಯನಾರಾಯಣ

ಮೈಸೂರು ಈರನಗೆರೆ ಮೊಗರಿನಲ್ಲಿ ಮಾಡಿದ ವಾಂಗೀಭಾತು, ತುಪ್ಪ ಜಿನುಗುವ ಕೇಸರಿಭಾತು, ಬೋಂಡಗಳನ್ನು ಮೆದ್ದು, ಮೆಲ್ಲನೆ ತೇಗಿ, ಮೈಸೂರು ಮಲ್ಲಿಗೆ, ಮೈಸೂರು ಅಗರಬತ್ತಿಗಳ ಪೈಪೋಟಿಗೆ ಮೂಗರಳಿಸಿ, ರತ್ನಗಂಬಳಿಯ ಮೇಲೆ ಲೋಡಿಗೆ ಮೈಯೊಡ್ಡಿ ಕುಳಿತು, ಮೈಸೂರು ಬುತ್ತಿಚಿಗುರನ್ನು ಮೆಲ್ಲುತ್ತಾ ಮೈಸೂರು ವೀಣೆಗೆ ಕಿವಿಯೊಡ್ಡಿ ಎಂದಾದರೂ ಮೈಮರೆತಿದ್ದೀರೇನು? ಇದನ್ನು ಅನುಭವಿಸಿದ್ದರೆ ನೀವು ಪುಣ್ಯಶಾಲಿಗಳು: ಈ ಸ್ವರ್ಗವೇ ಇರಲಿ, ಆ ಸ್ವರ್ಗಕ್ಕೆ ಕಿಚ್ಚು ಹಚ್ಚು ಎಂದು ಸರ್ವಜ್ಞನೊಡನೆ ದನಿಗೂಡಿಸಿರುತ್ತೀರಿ. ಇಲ್ಲವಾದರೆ-ಬಾಯಲ್ಲಿ ನೀರೂರುತ್ತದೆ, ಅಲ್ಲವೆ?

ಹೀಗೆ ಮೈಸೂರು ಮಾಯೆಯಾಗಿ ಕಾಡಿತ್ತು ರಸಿಕರಿಗೆ: ಬಹು ಪ್ರಿಯವಾದ, ಮಧುರವಾದ ಮಾಯೆಯಾಗಿ ರಸಿಕನ ಕಿವಿಕಣ್ಣುಮೂಗು ಮನಸ್ಸುಗಳನ್ನು ಇಲ್ಲಿಯ ನೆನಹುಗಳು ಅವನ ಬೆಂಬತ್ತಿ ಬಹುಕಾಲ ಕಾಡುತ್ತವೆ; ಕೈಬೀಸಿ ಕರೆದು, ಎಳೆದು ತರುತ್ತವೆ. ಇವುಗಳಲ್ಲಿ ಬಹುಕಾಲದಿಂದ ಬಂದದ್ದು, ಬಹುಕಾಲ ಉಳಿಯುವುದು —"ಮೈಸೂರು ವೀಣೆ."

* * *

ಮೈಸೂರು ವೀಣೆ ಎಂದರೆ ಮೈಸೂರಿನಲ್ಲಿ ನುಡಿಸುವಂತಹುದು ಮಾತ್ರ ಎಂದಲ್ಲ; ಅದರ ವಾದನ ಸಂಪ್ರದಾದಾಯದಲ್ಲಿ-ಅರಮನೆ ಗುರುಮನೆ ಜನಮನಗಳಲ್ಲಿ-ಮಿಡಿದು ಮಿಡಿಸುತ್ತಿರುವ ವೀಣೆ. ಅದು ಹಿಂದಿನ ಪೀಳಿಗೆಗಳಲ್ಲಿ ಹೇಗಿತ್ತು, ಇಂದಿನ ಪೀಳಿಗೆಯಲ್ಲಿ ಹೇಗೆ ಉಳಿದುಕೊಂಡಿದೆ,ಮುಂದಿನ ಪೀಳಿಗೆಗಳಲ್ಲಿ ಯಾವ ರೂಪ ತಾಳಬಹುದು ಎಂಬುದನ್ನು ಅಭ್ಯಾಸ ಮಾಡುವ ಆವಶ್ಯಕತೆ ಇದೆ ಎಂದು ತೋರಿತು. ಅಭ್ಯಾಸ ಸಾಮಗ್ರಿ ಜೀವಂತವಾದುದು, ಪುಸ್ತಕದ ಪುಟಗಳಲ್ಲಿ, ವಾದವಿವಾದಗಳಲ್ಲಿ ಕಳೆದು ಹೋಗಿರುವಂತಹದಲ್ಲ; ನಾವು ಎಚ್ಚರ ತಪ್ಪಿದರೆ ಶೀಘ್ರವಾಗಿಯೇ ಹಾಗೆ ಆಗಿಬಿಡುವಂತಹ ಸಂಭವವಿರುವಂತಹುದು; ಆದುದರಿಂದ ಮೈಸೂರು ವೀಣಾಶೈಲಿಯ ವಿವಿಧ ಸ್ರೋತಗಳಲ್ಲಿ ಹರಿದು ಬಂದಿರುವ ವಯೋವಿದ್ಯಾವೃದ್ಧರನ್ನೂ ಮಧ್ಯಮರನ್ನೂ ಯುವಜನವನ್ನೂ ಸಂದರ್ಶಿಸಿ. ಹೆಚ್ಚು ಕಡಿಮೆ ಒಂದೇ ರೀತಿಯ–ಹೊಸರೀತಿಯ ಪ್ರಶ್ನೆಗಳಿಗೆ ಅವರನ್ನು ಒಡ್ಡಿದರೆ ಅವರ ಪ್ರತಿಕ್ರಿಯೆಗಳನ್ನು ತಿಳಿದರೆ ಈ ಪ್ರಶ್ನೆಗಳಿಗೆ ಅಷ್ಟಿಷ್ಟಾದರೂ ಸಮಂಜಸವಾದ ಉತ್ತರವು ದೊರೆಯಬಹುದು ಎನ್ನಿಸಿತು.

ಪ್ರಶ್ನೆ-ವಿಮರ್ಶೆಗಳನ್ನು ಬುದ್ಧಿಯಲ್ಲಿ, ಗೌರವ-ಸಮ್ಮಭಾವಗಳನ್ನು ಮನಸ್ಸಿನಲ್ಲಿ ಪ್ರೀತಿ-ಭರವಸೆಗಳನ್ನು ಹೃದಯದಲ್ಲಿ ತುಂಬಿಕೊಂಡು ಹೊರಟೆ.

* * *

ಸಂದರ್ಶನಗಳನ್ನೆಲ್ಲ ಮುಗಿಸಿ ಮೇಜಿನ ಮೇಲೆ ಉಸ್ಸಪ್ಪ ಎಂದು ಕುಳಿತು ಒಂದು ಗಳಿಗೆ ಕಣ್ಣುಮುಚ್ಚಿದೆ. ಕೂಡಲೇ ನನ್ನ ಪ್ರತಿಕೃತಿ ಮೂರ್ತಿ ನನ್ನಿಂದ ಹೊರಗೆ ಸಿಡಿದೆದ್ದು ನಿಂತಿತು. ಒಂದೇ ಉಸಿರಿನಲ್ಲಿ ಕೇಳಿತು.

'ಇಷ್ಟೆಲ್ಲ ಸಂದರ್ಶನಗಳನ್ನು ಮುಗಿಸಿದೆಯಲ್ಲ, ನಿನ್ನ ಉದ್ದೇಶ ನೆರವೇರಿತೆ? ಇದರ ಫಲಶ್ರುತಿ ಏನು? ಮಾಡಬೇಕಾದ್ದನೆಲ್ಲಾ ಈ ಸಂದರ್ಶನಗಳಲ್ಲಿ ಮಾಡಿದ್ದೀಯ? ಅಂದು-ಇಂದು ಎಂದು ಪ್ರಾರಂಭ ಮಾಡಿದೆಯಲ್ಲ ಒಟ್ಟನಲ್ಲಿ, ಚಿತ್ರ ಹೇಗೆ ಕಾಣುತ್ತದೆ?'

'ಹೋ! ತಾಳು ಪುಣ್ಯಾತ್ಮ; ನೀನೂ ಮಧ್ಯೆ ಉಸಿರು ತೆಗೆದುಕೊಂಡು ನನಗೂ ಉಸಿರಾಡಲು ಅವಕಾಶಕೊಡು. ಈಗ ತಾನೇ ಸುಸ್ತಾಗಿ ಬಂದು ಕುಳಿತಿದ್ದೇನೆ. ಒಂದೊಂದಾಗಿ ಕೇಳು, ಹೇಳುತ್ತೇನೆ' ಎಂದು ಅಂಗಲಾಚಿದೆ.

'ಮಾಡಬೇಕಾದುದೆಲ್ಲ ಎಲ್ಲಿ ಮಾಡಲಾಗಿದೆ? ಇಲ್ಲಿ ಕೇವಲ ಹತ್ತು ಜನರನ್ನು ಸಂದರ್ಶಿಸಿದ್ದೇನೆ ಇವರುಗಳ ವಯಸ್ಸು, ಸಾಧನೆಗಳ ಮಟ್ಟದಲ್ಲಿಯೇ ಇರುವ ಅದೆಷ್ಟೋ ಮಂದಿ ಇದ್ದಾರೆ. ನನಗೆ ತಿಳಿದ ಹಾಗೆಯೇ. ಸ್ಥಾಲೀಪುಲಾಕನ್ಯಾಯದಿಂದ ಕೆಲವರನ್ನು ಆರಿಸಿಕೊಂಡಿದ್ದೇನೆ, ಅಷ್ಟೆ ಬೇರೆಯವರನ್ನು ಸಂದರ್ಶನ ಮಾಡಿದ್ದರೆ ಫಲಶ್ರುತಿ ಬೇರೆಯೇ ಆಗುತ್ತಿತ್ತೇನೋ! ಆದರೂ ಮುಖ್ಯ ಪರಂಪರೆಗಳಲ್ಲಿ ಯಾವುದನ್ನೂ ಬಿಡದಂತೆ ಅವುಗಳಲ್ಲಿ ಪ್ರಮುಖರಾದವರನ್ನು ಆರಿಸಿಕೊಂಡಿದ್ದೇನೆ. ನನಗೆ ತಿಳಿದ ವಿದ್ವಾಂಸರಲ್ಲಿ ಕೆಲವರನ್ನು ಕೆಲವು ಕಾರಣಗಳಿಗಾಗಿ ಕೈಬಿಡಬೇಕಾಯಿತು. ನನಗೆ ತಿಳಿಯದೆ ಇನ್ನೆಷ್ಟು ಮಹಾನುಭಾವರಿದ್ದಾರೋ,— ಎಂದರೋ ಮಹಾನುಭಾವುಲು, ಅಂದರಿಕಿ ವಂದನಮುಲು—ಅಲ್ಲದೆ ಈ ದಿಕ್ಕಿನಲ್ಲಿ ಮಾಡಬೇಕಾದುದು ಬೆಟ್ಟದಷ್ಟಿದೆ ಎಂದು ಈ ಲೇಖನವನ್ನೂ ಸಂದರ್ಶನಗಳನ್ನೂ ಕೈಕೊಂಡಾಗಲೇ ತಿಳಿದುದು. ಇಂತಹದೇ ಕೆಲಸ, ಆದರೆ ಇನ್ನೂ ಉತ್ತಮವಾಗಿ, ಉದಯೋನ್ಮುಖ ತರುಣ ವೈಣಿಕರನ್ನು ಕುರಿತು ನಡೆಯಬೇಕು. ಕಲಾಹವ್ಯಾಸಿಗಳಾದ ಹಲವು ಪ್ರೌಢವೈಣಿಕರು ನಮ್ಮಲ್ಲಿದ್ದಾರೆ. ಅಜ್ಞಾತವಾಸದಿಂದ ಅವರನ್ನು ಹೊರಗೆಳೆದು ತರಬೇಕು. ಕೇವಲ ಒಂದೆರಡು ತಲೆಮಾರುಗಳಷ್ಟು ಹಿಂದಿನ ಕಾಲಕ್ಕೂ ನಾವು ದಂತಕಥೆಗಳನ್ನೇ ಅವಲಂಬಿಸಬೇಕಾಗಿದೆ. ಈಗಲೇ ಹೀಗಿದ್ದರೆ ಇನ್ನೆರಡು ತಲೆಮಾರುಗಳ ನಂತರ ಹೇಗಿರಬಹುದು! ಈಗಲಾದರೂ ಸ್ವಲ್ಪ ಸಂಶೋಧನೆ ಮಾಡಿ ನಮ್ಮ ಪೂರ್ವಿಕರ ಸತ್ಯನಿಷ್ಠ ಜೀವನ ಚರಿತ್ರೆಗಳನ್ನು ನಿರ್ಮಿಸಿಡುವುದು ಒಳ್ಳೆಯದು. ಆಯಾ ಪರಂಪರೆಗೆ ಸೇರಿದವರಾದರೂ ಈ ಕೆಲಸವನ್ನು ಪ್ರಾಮಾಣಿಕ ದೃಷ್ಟಿಯಿಂದ ಕೈಗೊಳ್ಳಬೇಕು. ನಮ್ಮ ಸಮಸಾಮಯಿಕ ವಿದ್ವಾಂಸರ ಜೀವನ ಸಾಧನೆಗಳನ್ನು ಕುರಿತು ಅಂಕಿಅಂಶಗಳನ್ನೊಳ

ಗೊಂಡ, ಅನಾಂತರಿಕ ಮೌಲ್ಯಮಾಪನವನ್ನೊಳಗೊಂಡ ಪುಸ್ತಕ ಹೊರಬೀಳಬೇಕು.'

'ಹಾಗಾದರೆ ಈ ಸಂದರ್ಶನಗಳಲ್ಲಿ ನೀನು ಮಾಡಿದ್ದೇನು?'

'ಈ ಬಗೆಯ ಸಾಹಿತ್ಯಕ್ಕೆ ಇಂದು ಹೊಸದೃಷ್ಟಿಕೋನ ಬೇಕೆನ್ನಿಸಿತ್ತು. ಬಹು ಕಾಲದಿಂದ ಅಷ್ಟನ್ನು ಮಾತ್ರ ಇಲ್ಲಿ ಮಾಡಿದ್ದೇನೆ. ಅಲ್ಲದೆ ನಮ್ಮ ವಿದ್ವಾಂಸ ಸ್ನೇಹಿತರು ಹೊಸ ಬಗೆಯ ಪ್ರಶ್ನೆಗಳನ್ನು ಎದುರಿಸಿದಾಗ ಹೇಗೆ ಪ್ರತಿಕ್ರಿಯೆ ತೋರಿಸುತ್ತಾರೋ ಎಂಬ ಕುತೂಹಲವೂ ಇತ್ತು. ಫಲಿತಾಂಶ ಒಟ್ಟಿನಲ್ಲಿ ಆಶಾದಾಯಕವಾಗಿದೆ. ಅಪ್ಪ ಹಾಕಿದ ಆಲದ ಮರಕ್ಕೇ ಜೋತುಬೀಳುವ, ಪಾಠ ಪ್ರವಚನಗಳ, ದಿನಚರಿಯ ಇಕ್ಕಟ್ಟು ಹಾದಿಯಲ್ಲೇ ನಡೆಯಲೆಳೆಸುವ ಪ್ರವೃತ್ತಿ ನಮ್ಮ ಸಂಗೀತ ವಿದ್ವಾಂಸರಲ್ಲಿ ಹೋಗಿ ಆಲೋಚನಾಪರರಾಗುವ ಕಾಲ ಈಗ ಬಂದಿದೆ. ಈ ಲೇಖನದಿಂದ ಆಲೋಚನೆಗೆ ಸಾಮಗ್ರಿ ದೊರೆಯಬಹುದು ಎನ್ನಿಸುತ್ತದೆ.'

'ವಿದ್ವಾಂಸರಲ್ಲಿ ಹೊಸ ಪ್ರವೃತ್ತಿ ಬೆಳೆಯಬೇಕು ಎಂದೆಯಲ್ಲ, ಯಾವ ಪ್ರವೃತ್ತಿ?'

'ಒಂದು ಉದಾಹರಣೆ: ನಾನು ಸಂದರ್ಶಿಸಿದ ಎಲ್ಲ ವಿದ್ವಾಂಸರೂ ಹೆಚ್ಚು ಕಡಿಮೆ ಒಂದೇ ಮಾತು ಹೇಳಿದರು: ನಮ್ಮ ವೀಣೆ ಈಗಾಗಲೇ ಪರಿಪೂರ್ಣವಾಗಿದೆ; ಅದಕ್ಕೆ ನಾವೇನನ್ನು ಸೇರಿಸಬಲ್ಲೆವು? ನಮ್ಮ ಹಿಂದಿನವರು ತಂತ್ರ ಶೈಲಿಗಳಲ್ಲಿ ಮಾಡಬೇಕಾದುದನ್ನೆಲ್ಲ ಮಾಡಿಬಿಟ್ಟಿದ್ದಾರೆ; ಈಗ ನಾವೇನನ್ನೂ ಸೇರಿಸಲಾಗಲಿಲ್ಲ, ಸೇರಿಸಲಾಗುವುದಿಲ್ಲ, ಎಂದುಬಿಟ್ಟರು. ನನಗೆ ಇದು ಸೋಲುವ ಮನೋವೃತ್ತಿಯಾಗಿ ಕಾಣುತ್ತದೆ. ನಮ್ಮ ಹಿರಿಯರು ಮಹತ್ತನ್ನು ಸಾಧಿಸಿದರು ನಿಜ; ಆದರೆ ಅವರು ಹಿಂದಿನಿಂದ ಬಂದಿದ್ದನ್ನು ಉತ್ತಮಪಡಿಸಿಕೊಳ್ಳಲಿಲ್ಲವೆ? ಅವರೂ ಹೀಗೇ ಅಸಹಾಯಕರಾಗಿ ಕೈಕಟ್ಟಿ ಕುಳಿತಿದ್ದರೆ ವೀಣೆ ಹೇಗೆ ಬೆಳೆಯುತ್ತಿತ್ತು, ವೀಣೆಯ ಮಾತು ಹಾಗಿರಲಿ ಜಗತ್ತಿನಲ್ಲಿ- ಆ ಪರಮೇಶ್ವರನೊಬ್ಬನನ್ನು ಬಿಟ್ಟರೆ- ಇನ್ನು ಯಾವುದೂ ಪರಿಪೂರ್ಣವಲ್ಲ. ಯಾರೂ-ನಮ್ಮ ಹಿರಿಯರನ್ನೂ, ಸೇರಿಸಿ-ಸರ್ವಜ್ಞರಿಲ್ಲ. ಪ್ರತಿಯೊಂದರಲ್ಲಿಯೂ ಉತ್ತಮ ಪಡಿಸಬೇಕಾದುದು, ಹೊಸದಾಗಿ ತಿಳಿಯುವಂತಹುದು ಇದ್ದೇ ಇದೆ. ಅದೇಕೆ ನಮ್ಮ ಜನ ಸಾಹಸಿಗಳಾಗಿ ಪ್ರಯೋಗಶೀಲರಾಗುವುದಿಲ್ಲ? ವೀಣೆಯೊಂದನ್ನೇ ತೆಗೆದುಕೊಳ್ಳೋಣ. ಅದರ ನಾದಗುಣದ ಬಗ್ಗೆ ವೈಜ್ಞಾನಿಕವಾಗಿ ಏನನ್ನು ಕಂಡು ಹಿಡಿದಿದ್ದೇವೆ? ಅದರ ರಚನೆಯ ಬಗ್ಗೆ ನಾದ ವಿಜ್ಞಾನದಲ್ಲಿ ಏನು ಪ್ರಯೋಗ ನಡೆದಿದೆ? ಒಬ್ಬೊಬ್ಬ ವೀಣೆ ತಯಾರಕನೂ ಒಂದೊಂದು ರೀತಿ ಅಂಧಶ್ರದ್ಧೆಯಿಂದ ತುಂಬಿದ ವಿಧಾನಗಳನ್ನು ಬಳಸುತ್ತಾನೆ. ಒಬ್ಬನೇ ತಯಾರಿಸಿದ ಎರಡು ವೀಣೆಗಳಲ್ಲಿ ಸಹ ಒಂದೇ ಗುಣವಿರುತ್ತದೆಂದೂ ಹೇಳಲಾಗುವುದಿಲ್ಲ ಇದನ್ನೆಲ್ಲ ವೈಜ್ಞಾನಿಕ ಕ್ರಮಗಳಿಂದ ಸರಿಪಡಿಸಬಹುದು, ಸರಿಪಡಿಸಬೇಕು. ಇನ್ನು ವಾದಕನ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬಹುದಾದ ಸಣ್ಣಪುಟ್ಟ ಬದಲಾವಣೆಗಳೆಷ್ಟೋ ಇವೆ. ವೀಣಾವಾದನ ತಂತ್ರದಲ್ಲಿ ಹೊಸತನ್ನು ಏಕೆ ಕಂಡು ಹಿಡಿಯಬಾರದು? ವೀಣೆಯಲ್ಲಿ ಹೊಸತನ್ನು ಏನನ್ನೂ ಇನ್ನು ನುಡಿಸಲು ಸಾಧ್ಯವಿಲ್ಲ ಎಂದು ನಾನಂತೂ ನಂಬಲಾರೆ.'

'ಸಾಮಾನ್ಯವಾಗಿ ದಕ್ಷಿಣದೇಶದಲ್ಲಿ ಮೈಸೂರು ವೀಣೆ, ತಂಜಾವೂರು ವೀಣೆ ಎಂದು ಎರಡೇ ರೀತಿ ಪ್ರಸಿದ್ಧವಾಗಿರುವುದು. ತಂಜಾವೂರು ಎಂದರೂ ಅದು ಮದ್ರಾಸು, ಮಲೆಯಾಳಗಳಲ್ಲೂ ರೂಢಿಯಲ್ಲಿರುವಂತಹುದೇ. ಈ ಎರಡಕ್ಕೂ ರಚನೆಯಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದುವು. ಅವರ ವೀಣೆಯಲ್ಲಿ ಕುದುರೆಯ ಮೇಲಿನ ರೇಕನ್ನು ಹಿತ್ತಾಳೆ ಅಥವಾ ಕಂಚಿನಿಂದ ಮಾಡಿ ನಾಲ್ಕು ತಂತಿಗಳಿಗೂ ಅದನ್ನೇ ಉಪಯೋಗಿಸಿದರೆ ನಮ್ಮ ವೀಣೆಯಲ್ಲಿ ಹಿತ್ತಾಳೆ ಅಥವಾ ಕಂಚನ್ನು ಮೊದಲಿನ ಮೂರು ತಂತಿಗಳಿಗೆ ಮಾತ್ರ ಉಪಯೋಗಿಸಿ ಸಾರಣೆ ತಂತಿಗೆ ಬೇರೆಯಾಗಿ ಉಕ್ಕಿನ ರೇಕನ್ನಿಡುತ್ತೇವೆ. ಇದು ಮುಖ್ಯವಾಗಿ ಜೀವಾಳವನ್ನು ಸಂಬಂಧಿಸಿದ ವಿಷಯ, ರೇಕಿನ ಉಬ್ಬು ಎಲ್ಲಕ್ಕಿಂತ ತೆಳುವೂ, ಬಿಗಿಯೂ ಆದ ಸಾರಣೆಗೆ ಬೇರೆ ರೀತಿ ಬೇಕಾಗುತ್ತದೆ; ಅಲ್ಲದೆ ಒಂದೇ ಲೋಹದ ಸಂಘರ್ಷದಿಂದ ಜೀವಾಳಕ್ಕೆ ಇಲ್ಲಿ ವಿಶಿಷ್ಟವಾದ ಗುಣ ಬರುತ್ತದೆ. ಆದುದರಿಂದ ನಾದವಿಜ್ಞಾನದ ಪ್ರಕಾರ ಸಾರಣೆಯ ನಾದ ಹೆಚ್ಚು ಪುಷ್ಟ, ಹೆಚ್ಚು ಪ್ರಸನ್ನ. ಎರಡನೆಯದಾಗಿ ತಂಜಾವೂರು ವೀಣೆಯ ಕತ್ತು ನಮ್ಮದಕ್ಕಿಂತ ಸಣ್ಣದು. ನಮ್ಮ ವೀಣೆಯಲ್ಲಿ ಮೆಟ್ಟುಗಳು ಮೇರುವಿನಿಂದ ಕುದುರೆಯ ಕಡೆಗೆ ಕ್ರಮವಾಗಿ ಉದ್ದದಲ್ಲಿ ಹೆಚ್ಚಾಗುತ್ತಾ ಬರುತ್ತವೆ. ಅವರದಲ್ಲಿ ಎಲ್ಲ ಒಂದೇ ಉದ್ದಕ್ಕಿರುತ್ತವೆ. ನಮ್ಮ ವೀಣೆಯಲ್ಲಿ ದೋಣಿಯನ್ನು ಅಖಂಡವಾಗಿ, ಪ್ರತ್ಯೇಕವಾಗಿ, ಏಕಾಂಡವಾಗಿ ಮಾಡುತ್ತಾರೆ. ಅವರು ದಂಡಿಯನ್ನು ಹಲಗೆಯಿಂದ ಮುಚ್ಚಿ ಎರಡೂ ಕಡೆ ಗೋಡೆಯೆಬ್ಬಿಸುತ್ತಾರೆ. ನಮ್ಮ ವೀಣೆಗಳಲ್ಲಿ ತಲೆಗೆ ಸಿಂಹ ಮುಖವು ಸಾಮಾನ್ಯ, ವ್ಯಾಳಿಯೂ ಉಂಟು. ಅವರ ವೀಣೆಗಳಲ್ಲಿ ವ್ಯಾಳಿಮುಖವೊಂದೇ ಇರುತ್ತದೆ. ಇನ್ನು ಕಾಯಿಯ ಗಾತ್ರ, ಆಕಾರ, ದಂತದ ಕೆಲಸದ ಶೃಂಗಾರ ಇವುಗಳಲ್ಲಿ ಎರಡು ಕಡೆಯೂ ಹೀಗೆಯೇ ಎಂದು ನಿರ್ಣಯಿಸಿ ಹೇಳಲು ಬರುವಂತಹ ವ್ಯತ್ಯಾಸಗಳೇನೂ ಇಲ್ಲ. ಇರುವ ವ್ಯತ್ಯಾಸಗಳೂ ಈಗ ಮಾಯವಾಗುತ್ತಿವೆ. ಅಲ್ಲಿಯೂ ಪ್ರಯೋಗಶೀಲರು ರೇಕಿಗೆ ಸ್ಟೇನ್‌ಲೆಸ್ ಉಕ್ಕನ್ನು ಬಳಸುತ್ತಿದ್ದಾರಷ್ಟೆ. ತಂತಿಯ ಸಾಮಗ್ರಿ, ರಚನೆಗಳಲ್ಲಿಯೂ ಎರಡು ವೀಣೆಗಳಲ್ಲಿಯೂ ಪ್ರಯೋಗಗಳು ನಡೆಯುತ್ತಿವೆ.'

'ಮೈಸೂರು ವೀಣಾ ಶೈಲಿ ಎಂದರೇನು, ಅದರ ವೈಶಿಷ್ಟ್ಯವೇನು ಎಂದು ಎಲ್ಲರನ್ನೂ ಕೇಳಿ ಬಂದೆಯಲ್ಲ, ಅದರ ಬಗೆಗೆ ನೀನೇ ಏನು ಹೇಳುತ್ತೀ?'

'ಮೈಸೂರು ವೀಣಾಶೈಲಿ ಎಂಬುದೊಂದು ಇದ್ದುದು ನಿಜ; ಮೂರು ತಲೆಮಾರುಗಳ ಹಿಂದೆ ಅದರ ವೈಶಿಷ್ಟ್ಯ ಸ್ಪಷ್ಟವಾಗಿಯೇ ಇದ್ದಿರಬೇಕು. ಆದರೆ ಅದೇನೆಂದು ಈಗ ತಿಳಿಯುವ ಹಾಗಿಲ್ಲ. ಧ್ವನಿಮುದ್ರಣ ತಂತ್ರ ಆಗ ಇದ್ದು ನಮ್ಮ ಪೂರ್ವಿಕರ ವೀಣಾವಾದನಗಳನ್ನು ಧ್ವನಿಮುದ್ರಿಸಿಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು, ಎಂದೆನ್ನಿಸುತ್ತದೆ. ನಮ್ಮ ಹಿಂದಿನ ತಲೆಮಾರಿಗೇ ಇದರ ಚಿತ್ರ ಅಸ್ಪಷ್ಟವಾಗುತ್ತ ಬಂದಿರಬೇಕು. ಈಗಂತೂ ಮೈಸೂರು ಶೈಲಿ ಎಂಬುದು ಯಾವುದೂ ಇಲ್ಲದಿರುವುದು ನಿಜ. ಆದರೂ ಅಂತಹದೊಂದು ಶೈಲಿ ನಮ್ಮ ಪ್ರತಿಷ್ಠೆಯ ದೃಷ್ಟಿಯಿಂದ, ಕಲಾವಿಕಾಸದ ದೃಷ್ಟಿಯಿಂದ ಒಳ್ಳೆಯದು ಎಂದೆನಿಸುತ್ತದೆ. ಹಿಂದಿನದು

ಸಿಗದಿದ್ದರೆ ಹೋಗಲಿ, ಈಗಿನ ನಮ್ಮ ಖ್ಯಾತನಾಮರಾದರೂ ತಮ್ಮ ತಮ್ಮ ಶಿಷ್ಯ ಪರಂಪರೆಯನ್ನು ನಿರ್ದಿಷ್ಟ ಮಾರ್ಗದಲ್ಲಿ ನಿರ್ಮಿಸಬಹುದಲ್ಲ; ಹಾಗೆ ಮಾಡಿದರೆ ಇನ್ನೆರಡು ತಲೆಮಾರುಗಳಲ್ಲಿ ಮೈಸೂರಿನ ವೈಶಿಷ್ಟ್ಯವೊಂದನ್ನು ಸ್ಥಾಪಿಸಲು ಸಾಧ್ಯ. ಸಾಮುದಾಯಿಕ ದೃಷ್ಟಿಯಿಂದ ನೋಡಿದಾಗ ಇದರ ಅಗತ್ಯ ಕಾಣುತ್ತದೆ. ಆದರೆ ಇಂತಹ ಪ್ರಯತ್ನಗಳಾಗಲಿ ಶಿಷ್ಯ ಪರಂಪರೆಗಳಾಗಲಿ ಎಲ್ಲಿಯೂ ಕಣ್ಣಿಗೆ ಬೀಳುತ್ತಿಲ್ಲ.'

'ಅಂದು-ಇಂದು : ಈ ಚಿತ್ರದಲ್ಲಿ ಯಾವ ವ್ಯತ್ಯಾಸವಿದೆಯೆಂದು ನಿನಗೆನ್ನಿಸುತ್ತದೆ?'

'ನನಗೇನೋ ತುಂಬ ವ್ಯತ್ಯಾಸಗಳು ಕಾಣುತ್ತವೆ. ವೀಣಾ ಇತಿಹಾಸದ ಜಮಾ ಲೆಕ್ಕದ ಪುಸ್ತಕದ ಹಾಳೆಗಳನ್ನು ತಿರುವಿಹಾಕಿದಾಗ ಎರಡೂ ಕಡೆಯೂ ಪ್ರವೇಶಗಳು ಕಂಡುಬರುತ್ತವೆ. ಮೊದಲನೆಯದಾಗಿ, ಒಂದು ತಲೆಮಾರಿನ ಹಿಂದಿನವರೆಗೂ ಮೈಸೂರಿನಲ್ಲಿ ವೈಣಿಕನು ಗಾಯಕನೂ ಆಗಿರುತ್ತಿದ್ದನು. ಹೀಗಾಗದೆ ಇದ್ದುದು ಅಪರೂಪವಾಗಿ. ಆದುದರಿಂದ ವೀಣಾಶೈಲಿಯು ಗಾಯನ ಶೈಲಿಯಿಂದ ಪ್ರಭಾವಿತವಾಗಿತ್ತೆನ್ನಬಹುದು. ತಮಿಳು ದೇಶದಲ್ಲಿಯೂ ಒಂದು ಕಾಲಕ್ಕೆ ಹೀಗಿದ್ದಿರಬಹುದು. ನಾದಜ್ಯೋತಿ ಮುದ್ದುಸ್ವಾಮಿ ದೀಕ್ಷಿತರೇ, ಇದಕ್ಕೆ ಉದಾಹರಣೆ. ಆದರೆ ತಂಜಾವೂರಿನಲ್ಲಿ ನಂತರ ಇವೆರಡೂ ಬೇರ್ಪಟ್ಟ ಹಾಗೆ ಕಾಣುತ್ತದೆ. ಮೈಸೂರಿನ ವೀಣಾ ಶೈಲಿಯು ಗಾಯನ ಶೈಲಿಯನ್ನು ಅನುಸರಿಸಲು ತಮಿಳುನಾಡು, ಆಂಧ್ರಗಳ ಪ್ರಭಾವವೂ ಇತ್ತೆನ್ನುವವರು ನಮ್ಮಲ್ಲಿದ್ದಾರೆ. ಆದರೆ ಇದಕ್ಕೆ ಆಧಾರವಿದ್ದಹಾಗೆ ಕಾಣುವುದಿಲ್ಲ.

'ಎರಡನೆಯದಾಗಿ, ವೀಣೆಯ ರಚನೆಯನ್ನೇ ನೋಡು. ತಂಜಾವೂರಿನಲ್ಲಿ ಮಾಡುತ್ತಿದ್ದುದ್ದಕ್ಕೂ ಮೈಸೂರಿನಲ್ಲಿ ಮಾಡುತ್ತಿದ್ದುದಕ್ಕೂ ವ್ಯತ್ಯಾಸಗಳು ಕೆಲವು ಇದ್ದವಷ್ಟೆ. ಈ ವ್ಯತ್ಯಾಸಗಳಲ್ಲಿ ನಾದಗುಣವನ್ನು ಮಾರ್ಪಡಿಸುತ್ತಿದ್ದುದು ಮುಖ್ಯವಾಗಿ ಎರಡೇ. ರೇಕು ಮತ್ತು ಉಬ್ಬುಮೇಳ ಅಥವಾ ತಗ್ಗುಮೇಳ. ಈ ಎರಡನೆಯದರಲ್ಲಿಯೂ ಮೈಸೂರಿನಲ್ಲಿ ಇಂತಹದೇ ತಂಜಾವೂರಿನಲ್ಲಿ ಇಂತಹದೇ ಎಂದು ಖಚಿತವಾಗಿ ಬೇರ್ಪಡಿಸಿ ಹೇಳುವ ಸ್ಥಿತಿಯೇನೂ ಇಲ್ಲ. ತಂಜಾವೂರು ಎಂದರೆ ಮದ್ರಾಸು, ಕೇರಳ ಎಲ್ಲ ಸೇರಿದೆ ಇಲ್ಲಿ. ಉಳಿದ ವ್ಯತ್ಯಾಸಗಳೆಲ್ಲ ಗೌಣವಾದುವು. ಪ್ರಾದೇಶಿಕ ರುಚಿ, ಅಭ್ಯಾಸ, ಪದ್ಧತಿ ಮುಂತಾದವುಗಳಿಗೆ ಸಂಬಂಧಿಸಿದಂತಹವು ಆದರೆ ಈಗ ಅಂತಹ ವ್ಯತ್ಯಾಸಗಳೂ ಉಳಿದುಬರುತ್ತಿಲ್ಲ. ಇದಕ್ಕೆ ಎರಡು ಕಾರಣವೆನ್ನಿಸುತ್ತದೆ. ಒಂದು ಪ್ರಯಾಣ ಸುಲಭವಾಗಿದೆ. ಒಂದು ಕಡೆಯ ಜನ ಇನ್ನೊಂದು ಕಡೆಗೆ ಹೋಗಿಬರುವುದೂ ನೆಲೆಸುವುದೂ ಸರ್ವೇಸಾಮಾನ್ಯವಾಗಿ ಹೋಗಿದೆ. ವೀಣೆಯೂ ಹೀಗೆಯೇ ಆಗಿದೆ. ಎರಡು, ವೀಣೆಯನ್ನು ತಯಾರಿಸುವವರ ಪೀಳಿಗೆಗಳು ಮುಂದುವರಿಯುತ್ತಿಲ್ಲ. ಅವರಿಗೆ ತಮ್ಮ ಪರಂಪರಾಗತ ಕಲೆಯನ್ನು-ಕಸುಬು ಎಂದು ಬೇಕಾದರೂ ಎನ್ನು-ಶುದ್ಧವಾಗಿ ಉಳಿಸಿಕೊಳ್ಳಲು ಸಾಕಷ್ಟು ಪ್ರೋತ್ಸಾಹ, ಉತ್ತೇಜನ,ಪ್ರಚೋದನೆಗಳಿಲ್ಲ.

ಅಥವಾ ಆಯಾ ಪರಂಪರೆಯವರು ಈಗಲೂ ಉಳಿದುಕೊಂಡಿದ್ದರೆ ಅವರಿಗೆ ಆಧುನಿಕ ರುಚಿ, ಫ್ಯಾಷನ್‌ಗಳ ಮೇಲೆ ಮೋಹ.

'ಆದರೆ ಒಂದು ಭೌತಿಕ ವ್ಯತ್ಯಾಸವಂತೂ ನಿಜ. ಮೈಸೂರುವೀಣೆ ತಂಜಾವೂರು ವೀಣೆಗಳ ಸ್ವರ ಸ್ಥಾನಗಳಲ್ಲಿಯೂ ಸೂಕ್ಷ್ಮವಾದ ವ್ಯತ್ಯಾಸಗಳಿವೆ: ಇವು ನಾದ ವಿಜ್ಞಾನ ಗೋಚರ; ಪ್ರಾಚೀನ ವೀಣಾ ಮೇಳಗಳು ಷಡ್ಜ-ಶುದ್ಧಮಧ್ಯಮಭಾವ ಷಡ್ಜ-ಪಂಚಮಭಾವಗಳಿಂದ ಏರ್ಪಟ್ಟಿವೆ. ಆದರೆ ಇವೆರಡರ ಮೇಳಗಳೂ ಷಡ್ಜ-ಅಂತರಗಾಂಧಾರದ ಅಧಿಕಭಾವವೂ ನಿರ್ಣಾಯಕವಾಗಿದೆ; ಇದರ ಫಲವಾಗಿ, ಪ್ರಾಚೀನ-ಉದಾಹರಣೆಗೆ ರಾಮಾಮಾತ್ಯನ ವೀಣಾಮೇಳದಲ್ಲಿ (೪೦೮ ಸೆಂಟ್‌ಗಳ) ಅಂತರಗಾಂಧಾರ ಭಾವವು ರ, ಗ, ಗಿ, ಮ, ಪ, ಧ ಮತ್ತು ನ ಗಳಲ್ಲಿ ಉಂಟು. ಗು ನು ಗಳಲ್ಲಿ ಇಲ್ಲ. ತಂಜಾವೂರು ವೀಣಾಮೇಳದಲ್ಲಿ ಈ ಅಂತರ ಗಾಂಧಾರ ಭಾವವು ರ, ಮ, ಪ, ಧ ಮತ್ತು ನಿ ಗಳಲ್ಲಿ ಮಾತ್ರ ದೊರೆಯುತ್ತದೆ; ಮೈಸೂರು ವೀಣೆಯಲ್ಲಾದರೆ ಈ ಭಾವವು ರ, ಗ, ಗಿ, ಮ, ಧ ಮತ್ತು ನಿ ಗಳಲ್ಲಿ ಇದೆ. ೩೮೬ ಸೆಂಟ್ ಹಾಗೂ ೪೦೮ ಸೆಂಟ್‌ಗಳ ಮೌಲ್ಯಗಳ ನಡುವೆ ಸಾರಸಗಟಾಗಿ ತೂಗಾಡುತ್ತ ಈ ಭಾವಗಳು ಇರುತ್ತವೆ.

'ಮೂರನೆಯದಾಗಿ ವೀಣೆಯನ್ನಿಟ್ಟುಕೊಂಡು ನುಡಿಸುವ ಕ್ರಮವನ್ನು ಗಮನಿಸೋಣ. ದಕ್ಷಿಣಭಾರತದಲ್ಲಾಗಲಿ, ಉತ್ತರಭಾರತದಲ್ಲಾಗಲಿ, ವೀಣಾದ ತಂತಿ ವಾದ್ಯಗಳನ್ನು ನುಡಿಸುವ ಶಿಲ್ಪ ಹೇಗಿದೆ - ಕಾಯಿ ಬಲತೊಡೆಯ ಬಳಿ. ಅಲ್ಲವೆ ? ವೈಣಿಕನು ಕುಳಿತಿದ್ದರೂ ನಿಂತಿದ್ದರೂ ವೀಣೆಯ ನಿಲುವು ಹೀಗೆಯೇ; ಇತ್ತು. ಸಂಗೀತಶಾಸ್ತ್ರಗಳಲ್ಲಿ ವರ್ಣಿಸಿರುವುದು ಹೀಗೆಯೇ; ಕನ್ನಡ ಕಾವ್ಯಗಳಲ್ಲಿ ವರ್ಣಿಸಿರುವುದೂ ಅಷ್ಟೆ. ಈಚೀಚಿನವರೆಗೂ ಇದು ಹೀಗೆಯೇ ಇತ್ತು. ಸುಮಾರು ಎರಡು ತಲೆಮಾರಿನ ಹಿಂದೆ ವಿಜಯನಗರ ಸಂಸ್ಥಾನ ವಿದ್ವಾಂಸರಾಗಿದ್ದ ಗುರುರಾಯಾಚಾರ್ಯರೂ ಅವರ ಪ್ರಸಿದ್ಧ ಶಿಷ್ಯರಾಗಿದ್ದ ವೆಂಕಟರಮಣದಾಸರೂ ವೀಣೆಯನ್ನು ಇದೇ ರೀತಿಯಲ್ಲಿ ನುಡಿಸುತ್ತಿದ್ದರು. ಏಕೆ, ಕೇವಲ ಒಂದು ತಲೆಮಾರಿನಷ್ಟು ಎಂದರೆ ಹುಲಗೂರು ಕೃಷ್ಣಾಚಾರ್ಯರು ಕಿನ್ನರಿಯನ್ನು ಹೀಗೆ ನುಡಿಸುತ್ತಿದ್ದರಷ್ಟೆ. ಹಿಂದೂಸ್ಥಾನೀ ಸಂಗೀತದ ಸಿತ್ತಾರ್‌ವಾದಕರೂ ಇದೇ ನಿಲುವನ್ನು ಬಳಸುತ್ತಾರಷ್ಟೆ. ಈ ಕ್ರಮವು ತಪ್ಪಿ ಹೋಗಿ ವೈಣಿಕನು ಪದ್ಮಾಸನದಲ್ಲಿ ಕುಳಿತಾಗ ಬಲ ಮೊಣಕಾಲಿನ ಬಳಿ ಕಾಯಿ, ಎಡತೊಡೆಯ ಮೇಲೆ ಬುರುಡೆ, ದಂಡಿಯನ್ನು ಬಳಸಿ ಮೆಟ್ಟಿನ ಮೇಲೆ ಎಡಗೈ-ಈ ನಿಲುವು ಸಾರ್ವತ್ರಿಕವಾಗಿದೆ. ಈ ವ್ಯತ್ಯಾಸ ಯಾವಾಗ ಬಂದಿತು ? ವೀಣೆಯ ರಚನೆ, ಆಕಾರ ಮುಂತಾದವುಗಳಲ್ಲಿ ಮುಖ್ಯವ್ಯತ್ಯಾಸಗಳಾದಾಗ ಇದು ರೂಢಿಗೆ ಬಂದಿರಬೇಕೆಂಬುದು ಸ್ಪಷ್ಟ. ಇದಾದುದು ತಂಜಾವೂರಿನ ದೊರೆ ತುಳಜೇಂದ್ರನಿಂದ, ಸು. ೧೭೩೦ರಲ್ಲಿ. ಇದಾದ ಕೇವಲ ೫೦–೬೦ ವರ್ಷಗಳಲ್ಲಿ ವೀಣೆಯ ಈ ನಿಲುವು ಸರ್ವೇಸಾಮಾನ್ಯವಾಯಿತು. ಇದಕ್ಕೆ ಮೊದಲನೆಯ ಸೂಚನೆ ಮುದ್ದುಸ್ವಾಮಿ ದೀಕ್ಷಿತರ ಚಿತ್ರಗಳನ್ನು ವೀಣೆಯೊಡನೆ ಪರಂಪರಾಗತವಾಗಿ ಬಿಡಿಸಿಕೊಂಡು ಬರುತ್ತಿರುವ ರೀತಿ. ಹೀಗೆ ವೀಣೆಯ ಆಧುನಿಕ ನಿಲುವಿಗೆ ತಂಜಾವೂರು ತುಳಜನ

ಆಸ್ಥಾನ ಮೊದಲನೆಯ ಸ್ಥಾನವಾಗಿರಬಹುದು; ಮುದ್ದುಸ್ವಾಮಿ ದೀಕ್ಷಿತರಿಂದ ಹಾಗೂ ಅವರ ಶಿಷ್ಯ ಪರಂಪರೆಯಿಂದ ತಮಿಳುನಾಡಿನಲ್ಲಿ ರೂಢಿವಡೆದಿರಬೇಕು. ಮೈಸೂರಿನಲ್ಲಿ ಇದರ ಮೊದಲು ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿ ಆಗಿರಬೇಕು. ಇದಕ್ಕೆ ಹಿಂದೆ ಹದಿನೆಂಟನೆಯ ಶತಮಾನದಲ್ಲಿ ವೀಣೆಯ ನಿಲುವು ಹೇಗಿತ್ತು ಎಂದು ಹೇಳಲು ಯಾವ ಆಧಾರವೂ ನನಗೆ ಸಿಕ್ಕಿಲ್ಲ. ಈ ಕ್ರಮ ಮೈಸೂರಿನಲ್ಲಿ ಶೇಷಣ್ಣ ನವರ ಕಾಲದಿಂದ ಪ್ರಾರಂಭವಾಯಿತು, ಎನ್ನುವವರಿದ್ದಾರೆ. ಅದಕ್ಕಿಂತಲೂ ಎರಡು ತಲೆಮಾರುಗಳಷ್ಟಾದರೂ, ಬಹುಶಃ ವೀಣಾಭಕ್ಷಿ ವೆಂಕಟಸುಬ್ಬಯ್ಯನವರ ಕಾಲದಿಂದ ಸಾಂಬಯ್ಯನವರ, ಶಾಮಣ್ಣನವರ ಕಾಲದಿಂದ ಬಂದುದಿರಬೇಕು, ಎನ್ನಿಸುತ್ತದೆ.

'ನಾಲ್ಕನೆಯದಾಗಿ ವೀಣಾವಾದನದ ಶೈಲಿ. ನಾನು ಸಂದರ್ಶಿಸಿದವರಲ್ಲಿ ಎಲ್ಲರೂ ವೀಣಾಶೈಲಿ ಗಾಯನದ ಹಾಗಿರಬೇಕು, ನನ್ನದು ಹಾಗಿದೆ ಎಂದರು. ಒಬ್ಬರು ಮಾತ್ರ ವೀಣಾಶೈಲಿ ಸ್ವತಂತ್ರಾಭಿವ್ಯಕ್ತಿ ಶಕ್ತಿಯುಳ್ಳದ್ದು, ಬೇರೆಯದನ್ನು ಅದೇಕೆ ಅನುಕರಿಸ ಬೇಕು, ಎಂದರು. ಇವರ ಉತ್ತರಗಳಿಂದ ಗಾಯನ ಶೈಲಿಯ ಬಗೆಗೆ ಇವರೆಲ್ಲ ಬೇರೆ ಬೇರೆ ಅಭಿಪ್ರಾಯಗಳನ್ನಿಟ್ಟುಕೊಂಡಿದ್ದಾರೆ, ಎಂಬುದು ಸ್ಪಷ್ಟವಾಯಿತು. ಏಕೆಂದರೆ ಇವರೆಲ್ಲರದೂ ಹೆಚ್ಚು ಕಡಿಮೆ ಬೇರೆ ಬೇರೆಯದೇ ವೀಣಾವಾದನ ಶೈಲಿಗಳು, ವಾದನ ತಂತ್ರಗಳು! ಗಾಯನವು ವೀಣಾವಾದನಕ್ಕಿಂತ ಉತ್ತಮ ಎಂದು ಇವರೆಲ್ಲರೂ ಒಪ್ಪಿ ಕೊಂಡ ಹಾಗೆ ಕಾಣುತ್ತದೆ. ಇದು ಸರಿಯೋ ತಪ್ಪೋ ಹೇಳಲಾರೆ. ಆದರೆ ಇಷ್ಟು ನಿಜ; ಎರಡರಲ್ಲೂ ಗುಣ, ವಿಶಿಷ್ಟತೆ, ಸಾಧ್ಯತೆ, ಅದರದರದೇ ಇವೆ. ಅದರದು ಅದಕ್ಕೆ, ಇದ ರದು ಇದಕ್ಕೆ. ಒಂದು ಮಟ್ಟದವರೆಗೆ ಅನುಕರಣೆ, ಅನುಸರಣೆ, ಆಕರ್ಷಕವೂ ಹೌದು, ಉಚಿತವೂ ಹೌದು. ಆದರೆ ಇವುಗಳ ಲಕ್ಷ್ಮಣ ರೇಖೆಯನ್ನು ಎರಡೂ ಮೀರಬಾರದು. ಮೀರಿದರೆ ಒಂದೊಂದು ತನ್ನತನವನ್ನು ಕಳೆದುಕೊಳ್ಳುತ್ತವೆ. ಒಂದು ಮಾತು ಆಲೋ ಚನೆಗೆ ಅದ್ಯವಾಗಿದೆ: ಗಾಯನವೇ ಎಲ್ಲವನ್ನೂ ಒಳಗೊಳ್ಳುವ ಹಾಗಿದ್ದರೆ ವೀಣೆಗೆ ಏಕೆ ಇಂತಹ ಪ್ರಾಮುಖ್ಯ ದೊರೆಯುತ್ತಿತ್ತು? ಅದರ ಸಾಧ್ಯತೆಗಳನ್ನು, ಆಳವನ್ನು, ವೈವಿಧ್ಯವನ್ನು, ವೈಶಿಷ್ಟ್ಯವನ್ನು ಎತ್ತಿತೋರಿಸುವ ಚೌಕಟ್ಟಿನಲ್ಲಿ ಗಾಯನಶೈಲಿ ಬರಲಿ, ಅದು ಚೆನ್ನಾಗಿದ್ದೀತು. ಅದು ಬಿಟ್ಟು ಗಾಯನದ ಶೈಲಿಯ ಹೆಚ್ಚುಳಿಕೆಯ ಸಂಭ್ರಮದಲ್ಲಿ ವೀಣೆಗೆ ವೈಣಿಕನೇ ಅನ್ಯಾಯ ಮಾಡುವುದು ಬೇಡ. ನಿನಗೆ ಏನೆನ್ನಿಸು ತ್ತದೆ?'

'ಈಗ ಪ್ರಶ್ನೆಗಳನ್ನು ಕೇಳುವವ ನಾನು; ನಾನೇ ಸಂದರ್ಶಕ—ನೀನು ಸಂದ ರ್ಶಿತ. ಐದನೆಯ ಅಂಶ ಅಪ್ಪಣೆಯಾಗಲಿ.'

'ಹೌದು, ಹೌದು ಮರೆತಿದ್ದೆ! ಐದನೆಯ ಅಂಶ ನಾಲ್ಕನೆಯದಕ್ಕೆ ಸಂಬಂಧಿಸಿ ದುದೇ: ಹಾಡಿಕೆ–ವೀಣಾಶೈಲಿಗಳ ಸಂಬಂಧ, ಸಮಸ್ಯೆ ತುಂಬ ಹಳೆಯದೆ. ಮೈಸೂರಿ ನಲ್ಲೂ ವೈಣಿಕರಲ್ಲಿ ಕೋಟೆಯ ಗುಂಪು ಅಗ್ರಹಾರದ ಗುಂಪು ಎಂಬ ಎರಡು ಇದ್ದದ್ದೇ. ತಾಳ-ಲಯ ಪ್ರಾಧಾನ್ಯಗಳ ಜೊತೆಗೆ ಈ ಪ್ರಶ್ನೆಯೂ ಅವರ ವರ್ಗೀಕರಣಕ್ಕೆ ಸಂಬಂಧಿ ಸಿತ್ತು. ಈಗ ಈ ಬಗೆಯ ವರ್ಗೀಕರಣವೇನೂ ಇಲ್ಲ; ಅದರ ಬದಲು ಗಾಯನ ಶೈಲಿಯ ಕಡೆಗೇ ನಮ್ಮ ವೈಣಿಕರ ಮನ ಒಲಿದಿರುವಂತೆ ಕಾಣುತ್ತದೆ. ಇದೇನು

ಒಂದು ರೀತಿಯ ಫ್ಯಾಷನ್ನೋ ಸ್ಥಿರಪ್ರವೃತ್ತಿಯೋ ಹೇಳಲಾರೆ; ಕಾಲವೇ ಇದಕೆ ಉತ್ತರ ಹೇಳಬೇಕು.

'ಇನ್ನು ಆರನೆಯ ಅಂಶ. ಅಂದು-ಇಂದುಗಳಲ್ಲಿನ ವ್ಯತ್ಯಾಸದ ಸಾರ ನನಗೆ ಕಾಣುವುದೇ ಇಲ್ಲ. ಹಿಂದಿನ ಕಾಲದ ವೀಣಾವಾದನ ಈ ಕಾಲಕ್ಕಿಂತ ತುಂಬಾ ಚೆನ್ನಾಗಿತ್ತು ಎಂದು ಒಬ್ಬಿಬ್ಬರನ್ನು ಬಿಟ್ಟರೆ ಎಲ್ಲ ಸಂದರ್ಶಿತರೂ ಹೇಳಿದರು. ಈ ಮಾತು ಅರ್ಥ ಸರಿಯಾಗಿ ಕಾಣುತ್ತದೆ. ಏಕೆಂದರೆ ಹಿಂದಿನ ತಲೆಮಾರುಗಳ ಸಂಗೀತದಲ್ಲಿ ಒಂದು ವೈಶಿಷ್ಟ್ಯವಿತ್ತು; ನಮ್ಮ ಹಿರಿಯರಿಗೆ ಸಂಗೀತೋಪಾಸನೆಯಲ್ಲಿ ಒಂದು ಸಮರ್ಪಣಭಾವವಿರುತ್ತಿತ್ತು. ತನ್ಮಯತೆ, ತಾದಾತ್ಮ್ಯಗಳು ಇರುತ್ತಿದ್ದವು. ಕಲೆ ಕೇವಲ ಜೀವನೋಪಾಯವಾಗಿರಲಿಲ್ಲ. ಗುರುಪರಂಪರೆಯ ಭದ್ರವಾದ, ಕಟ್ಟುನಿಟ್ಟಾದ ಚೌಕಟ್ಟಿನಲ್ಲಿ ಕಲೆಯೂ ಕಲೆಗಾರರೂ ಬೆಳೆಯುತ್ತಿದ್ದರು. ಗುರುಶಿಷ್ಯರಲ್ಲಿ ಆತ್ಮೀಯತೆ, ನಿಕಟಸಂಪರ್ಕಗಳಿರುತ್ತಿದ್ದವು; ಇಬ್ಬರನ್ನೂ ಒಟ್ಟುಗೂಡಿಸುತ್ತಿದುದು ವೀಣೆಯೇ ಆಗಿದ್ದರೂ ಗುರುಶಿಷ್ಯರ ಸಂಬಂಧ ಸಾಮಾನ್ಯವಾಗಿ ಇದನ್ನು ಮೀರಿ ಶಿಷ್ಯನಲ್ಲಿ ಗುರುವಿನ ಆದರ್ಶದ ಮೂಲಕ ಜೀವನದ, ಕಲೆಯ ವಿಷಯದಲ್ಲಿ ಕೆಲವು ಮೌಲ್ಯಗಳೂ ಮನೋವೃತ್ತಿಯ ಧೋರಣೆ ದೃಷ್ಟಿಕೋನಗಳೂ ಬೆಳೆಯುತ್ತಿದ್ದವು. ಗುರುವಿಗೆ ಶಿಷ್ಯನೊಡನೆ ಸೇರಿ ಮಾಡಿದ ವಿದ್ಯಾನ್ವೇಷಣೆಯು ಪರಸ್ಪರ ಸಹಕಾರ ಸ್ಫೂರ್ತಿಗಳಿಂದ ಸಾಕ್ಷಾತ್ಕರಿಸಿಕೊಳ್ಳುವ ಒಂದು ಸಾಹಸಮಯ ಅನುಭವವಾಗಿತ್ತು. ಶಿಷ್ಯನಿಗೆ ಗುರುವು ಪ್ರತ್ಯಕ್ಷ ದೈವ; ವೈದಳೆದ ಕಲೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ ಪ್ರಾಚೀನ ಗುರುಕುಲ ಪದ್ಧತಿಯ ಪೂರ್ಣ ಪ್ರಯೋಜನವು ವೀಣಾ ಶಿಕ್ಷಣದಲ್ಲಿ, ಅದರ ಅಭ್ಯಾಸದಲ್ಲಿ ಕಂಡುಬರುತ್ತಿತ್ತು. ಸಂಗೀತವನ್ನು ಕೇಳುವವರಲ್ಲಿಯಾದರೂ ಅಷ್ಟೆ. ಸಂಗೀತವನ್ನು ಸವಿಯುವುದಕ್ಕೆ ಅಗತ್ಯವಾದ ವ್ಯವಧಾನ, ಸಮಾಧಾನಚಿತ್ತ, ಪ್ರಶಾಂತ ವಾತಾವರಣ, ಧಾರ್ಮಿಕ ಅಥವಾ ಆಧ್ಯಾತ್ಮಿಕ ಹಿನ್ನೆಲೆ ಹಾಗೂ ಸಂದರ್ಭ ಮುಂತಾದುವುಗಳು ಇರುತ್ತಿದ್ದವು. ಧ್ವನಿವರ್ಧನ ಸೌಕರ್ಯವಿಲ್ಲದುದರಿಂದ ಕೇಳುವವರ ಸಂಖ್ಯೆ ಮಿತವಾಗಿರುತ್ತಿತ್ತು. ಇದರಿಂದಾಗಿ ಗಾಯಕವಾದಕರಿಗೂ ಶ್ರೋತೃಗಳಿಗೂ ಒಂದು ಬಗೆಯ ವೈಯಕ್ತಿಕ ಸಾನಿಧ್ಯ, ನೈಕಟ್ಯ ಇರುತ್ತಿತ್ತು. ಇದರಿಂದಾಗಿ ವೈಯಕ್ತಿಕ ಪಾಲುಗೊಳ್ಳುವಿಕೆ ಹೆಚ್ಚಾಗಿ ಸಂಗೀತ ಕಚೇರಿಗಳನ್ನು ಟಿಕೇಟುಕೊಂಡು ಹೋಗಿ ಕೇಳುವ, ವಿದ್ವಾಂಸನು ತನ್ನ 'ಟಿಕೀಟು'ಗಳನ್ನು ಒತ್ತಾಯಪಡಿಸಿ ಕೇಳುವ ವ್ಯಾಪಾರೀ ಮನೋಧರ್ಮ ಇರಲಿಲ್ಲ. ವಿದ್ವಾಂಸರಲ್ಲಿ ಆರೋಗ್ಯಕರವಾದ ಪೈಪೋಟಿ ಇತ್ತು. ಇದರಿಂದಾಗಿ ಸಾಧನೆಯ ತೀವ್ರತೆ, ವ್ಯಾಪ್ತಿ ಮತ್ತು ಆಳ ಹೆಚ್ಚಾಗಲು ಸಾಧ್ಯವಾಗಿತ್ತು.

'ಆದರೆ ಇಂದಿನ ಚಿತ್ರ ಅನೇಕ ರೀತಿಯಲ್ಲಿ ಬೇರೆಯಾಗಿದೆ. ಸಂಗೀತದ ಗಾತ್ರವು ಊಹೆಗೂ ನಿಲುಕದಷ್ಟು ಬೆಳೆದಿದೆ. ಬಾನುಲಿ, ಧ್ವನಿವರ್ಧನ ಮುಂತಾದ ಪ್ರಸಾರ ಸಾಧನಗಳಿಂದಾಗಿ, ಒಮ್ಮೆ ಶ್ರೀಮಂತನ ಸೊತ್ತಾಗಿದ್ದ ಸಂಗೀತಭಾಗಿರಥಿ ಶ್ರೀಸಾಮಾನ್ಯನ ಮನೆ ಬಾಗಿಲಿಗೆ ಹರಿದು ಬರುತ್ತಾಳೆ. ಪ್ರಯಾಣ ಸೌಲಭ್ಯದಿಂದ ದೇಶದ ಮೂಲೆಮೂಲೆಗಳಲ್ಲಿರುವ ಪ್ರಖ್ಯಾತ ವಿದ್ವಾಂಸರು ಎಲ್ಲಿಂದರಲ್ಲಿಗೆ ಹೋಗಿ ತಮ್ಮ ಸಂಗೀತದಿಂದ ಸಾಮಾನ್ಯ ಜನರನ್ನು ತಣಿಸಬಹುದು. ಈ ಬಹು ಶ್ರುತಿಯಿಂದ,

ವೈವಿಧ್ಯದಿಂದ ಶ್ರೀಸಾಮಾನ್ಯನ ಸಂಗೀತದಿಗಂತವು ಬಹು ವಿಸ್ತರಿಸಿದೆ, ದೃಷ್ಟಿಯು ವಿಶಾಲಗೊಂಡಿದೆ, ತುಲನಾತ್ಮಕ, ವಿಮರ್ಶಾತ್ಮಕ ಶಕ್ತಿಯು ಹೆಚ್ಚಾಗಿದೆ; ಇದರಿಂದಾಗಿ ಸಂಗೀತದ ಗುಣವನ್ನು ಕಾಯ್ದುಕೊಳ್ಳುವ ಸಾಧ್ಯತೆ ಎಂದಿಗಿಂತ ಹೆಚ್ಚಾಗಿದೆ. ಸಂಗೀತ ಕಛೇರಿಗಳ ವಿಮರ್ಶೆಗಳು, ಸಂಗೀತಶಾಸ್ತ್ರ ಪ್ರವೇಶ ಮುಂತಾದ ಸಾಧನಗಳಿಂದ ಶ್ರೀಸಾಮಾನ್ಯನ ಶ್ರವಣಾಭಿರುಚಿಯು ಬೌದ್ಧಿಕ ಪ್ರಯತ್ನಪೂರ್ವಕವಾಗಿ ಸಮೃದ್ಧವಾಗಿದೆ, ಆಳವಾಗಿದೆ.

'ಸಂಗೀತದಲ್ಲಿ ಇನ್ನೂ ಒಂದು ಬಗೆಯ ಬೆಳವಣಿಗೆಯಾಗಿದೆ. ಪ್ರಯೋಗದ ಗಾತ್ರವ್ಯಾಪ್ತಿಗಳು ಬೃಹದಾಕಾರದಲ್ಲಿ ಬೆಳೆದುದರಿಂದ ಅದರಲ್ಲಿ ರಚನಾಸಾಮಗ್ರಿ ಹೇರಳವಾಗುತ್ತಾ ನಡೆದಿದೆ; ಧ್ವನಿಮುದ್ರಣ ಸಾಧನಗಳಿಂದ ಸಂಗೀತವನ್ನು ಉಳಿಸಿ ಇಡುವ ಶಕ್ತಿಯೂ ನಮಗೆ ಬಂದಿದೆ. ತಂತ್ರ, ಪರಿಭಾಷೆಗಳು, ಬಹು ಪ್ರೌಢವಾಗಿ ಸಂಕೀರ್ಣವಾಗಿ ಬೆಳೆದಿವೆ. ಅಪರೂಪವಾಗಿಯಾದರೂ ಪ್ರಯೋಗಶೀಲತೆ ಅಲ್ಲಲ್ಲಿ ಕಂಡು ಬರುತ್ತದೆ.

'ಇದು ನಮ್ಮ ಸಂಗೀತದ ಪುಸ್ತಕದಲ್ಲಿ ಬಂದುದರ ಲೆಕ್ಕ; ಹೋಗಿರುವುದೂ ಬೇಕಾದಷ್ಟಿದೆ. ಪ್ರಸಾರ ಸಾಧನಗಳಿಂದ ಉತ್ತಮ ಸಂಗೀತದ ಜೊತೆಗೆ ಕೆಳಮಟ್ಟದ ಸಂಗೀತಕ್ಕೂ ಪ್ರಸಾರವು ದೊರೆತಿದೆ. ಧ್ವನಿವರ್ಧನವು ಗಾಯಕವಾದಕರಲ್ಲಿಯೂ ಕೇಳುವವರಲ್ಲಿಯೂ ಸೂಕ್ಷ್ಮ ಶ್ರವಣ ಶಕ್ತಿಯನ್ನೂ ಅದಕ್ಕೆ ಬೇಕಾದ ಅವಧಾನ, ಸಿದ್ಧತೆ, ಮನೋವೃತ್ತಿಗಳನ್ನು ಇದರ ಫಲವಾದ ಸೂಕ್ಷ್ಮರಸಾಭಿಜ್ಞತೆಯನ್ನೂ ಕಡಿಮೆಮಾಡಿದೆ. ಇಂದಿನ ಸಾಮಾಜಿಕ ಮೌಲ್ಯಗಳೂ ಸಾಂಸ್ಕೃತಿಕ ವಾತಾವರಣವೂ ಜೀವನಕ್ರಮವೂ ಬಹುವಾಗಿ ಮಾರ್ಪಟ್ಟಿವೆ. ಸಂಗೀತ ಶಿಕ್ಷಣಕ್ಕೂ ಗುರುಕುಲ ಪದ್ಧತಿಗೂ ಏನು ಸಂಬಂಧವೂ ಉಳಿದಿಲ್ಲ. ಸಂಗೀತವು ಈಗ ಧಾರ್ಮಿಕ ಅಥವಾ ಆಧ್ಯಾತ್ಮಿಕ ಹಿನ್ನೆಲೆಯ ಬದಲು ಸಾಮಾಜಿಕ ಮತ್ತು ಆರ್ಥಿಕ ಮೌಲ್ಯಗಳ ಪ್ರೇರಣೆಯಿಂದ ರೂಪುಗೊಳ್ಳುತ್ತಿದೆ ಹೀಗೆ ಪ್ರತಿಭೆಗೆ ಚೌಕಟ್ಟು ಬದಲಾಯಿಸಿತ್ತು; ಪ್ರತಿಭೆಯೇನೂ ಬದಲಾಯಿಸಲಿಲ್ಲ. ಆದರೆ ಚಿತ್ರವು ಬದಲಾಗುವುದು ಅನಿವಾರ್ಯವಾಯಿತಷ್ಟೆ. ಈಗಿನ ಸಂಗೀತದಲ್ಲಿ ಆಧುನಿಕ ಜೀವನದ ಉಳಿದೆಲ್ಲ ಮುಖಗಳಲ್ಲಿರುವಂತೆ–ತಾತ್ಕಾಲಿಕ ಭೋಗವೇ ಬೇಕು, ಸಾಕು. ಇದನ್ನು ವಿಮರ್ಶೆಯೆಂದು ಹೇಳುತ್ತಿಲ್ಲ, ಸಂಗತಿಯೆಂದು ಹೇಳುತ್ತಿದ್ದೇನೆ.'

'ಆಗಲಿ ಇದೆಲ್ಲದರ ಫಲಶ್ರುತಿ ಏನು? ಮೈಸೂರಿನಲ್ಲಿ ವೀಣೆಯ ಭವಿಷ್ಯದ ಬಗ್ಗೆ ಏನೆನಿಸುತ್ತದೆ?

'ಭವಿಷ್ಯಕ್ಕೇನೂ ಬಾಧೆಯಿಲ್ಲ. ಇಂದನ್ನು ನಾವು ನೋಡಿಕೊಂಡರೆ ನಾಳೆ ತನ್ನನ್ನು ನೋಡಿಕೊಳ್ಳುತ್ತದೆ. ನಮ್ಮ ತರುಣರ ಪೀಳಿಗೆಯಲ್ಲಿ ಉತ್ತಮವಾದ ಸರಕೇನೋ ಇದೆ; ರಾಷ್ಟ್ರೀಯ ಮಟ್ಟದಲ್ಲಿ ಎದ್ದು ನಿಲ್ಲಬಲ್ಲ ಚೇತನವಿರುವವರು ನಮ್ಮಲ್ಲಿದ್ದಾರೆ ಆದರೆ ಅವರು ತೋರಿಸುತ್ತಿರುವ ಶ್ರದ್ಧೆ, ಶ್ರಮ ಸಾಲದು ಎನ್ನಿಸುತ್ತದೆ. ಇದೊಂದು ತಪಸ್ಸಲ್ಲವೆ? ಪ್ರಯತ್ನ ಸಾಕಷ್ಟು ನಡೆದರೆ ಅನತಿ ದೂರದಲ್ಲಿಯೇ ಮೈಸೂರು ವೀಣೆ ಈ ಕ್ಷೇತ್ರದಲ್ಲಿ ಮುಂದಾಳಾಗಬಹುದು, ಎನ್ನಿಸುತ್ತದೆ.

ಭಾರತೀಯ ಚಿಂತನ

ಡಾ. ಹೆಚ್. ರಾಮಚಂದ್ರಸ್ವಾಮಿ

ಮಾನವನ ಇಂದಿನ ಸಂಸ್ಕೃತಿಗೂ ಅಂತಃಪ್ರಜ್ಞೆಗೂ ಭಾರತೀಯ ಚಿಂತನೆಯ ಕೊಡುಗೆ ಎನ್ನಬಹುದಾದ ಸಂಗತಿಗಳೆಂದರೆ ೧) ಅನುಭವದ ತಾತ್ವಿಕ ವಿಶ್ಲೇಷಣೆ ೨) ಜೀವನದ ಮೌಲ್ಯಗಳು ೩) ಸಮಾಜರಚನೆಯ ವಿಶೇಷ ರೀತಿ, ಹಾಗೂ ೪) ವೈಯಕ್ತಿಕ ಜೀವನದಲ್ಲಿನ ಶಿಸ್ತು, ಸ್ವರೂಪ. ಇವುಗಳಲ್ಲದೆ ತರ್ಕಬದ್ಧ ಚಿಂತನೆಯ ವಿಶೇಷ ಸ್ವೋಪಕರಣ, ವೈಜ್ಞಾನಿಕ ವಾಸ್ತವಿಕತೆಗಳು ಕೆಲವು, ಭೌತಜಗತ್ತಿನ ಸ್ವರೂಪ ಚಿಂತನೆ ಮತ್ತು ಸತ್–ಸಂಪ್ರಜ್ಞೆಯ ತಾತ್ವಿಕ ತಳಹದಿ ಇತ್ಯಾದಿ ಇತರ ಸಂಗತಿಗಳನ್ನೂ ಭಾರತೀಯ ಕೊಡುಗೆಗಳೆನ್ನಬಹುದು.

ಅನುಭವವನ್ನು ನಾವು ಏಕವಾಗಿಯೂ ಅವಿಚ್ಛಿನ್ನವಾಗಿಯೂ ಗ್ರಹಿಸುತ್ತೇವೆ. ನಂತರ ಅದನ್ನು ಸ್ವತಃ ಪ್ರಮಾಣ–ಪರತಃ ಪ್ರಮಾಣವೆಂದೋ ವಸ್ತು–ಸ್ವರೂಪವೆಂದೋ ವಿಭಾಗಿಸಿಕೊಂಡು, ಮನಸ್ಸು-ದೇಹ ಕಾಲ-ದೇಶ ಇತ್ಯಾದಿ ಭಿನ್ನತೆಗಳನ್ನು ಗುರ್ತಿಸಿ, ಅನುಗುಣವಾಗಿ ಅದರ ತಾತ್ವಿಕ ನೆಲೆಯನ್ನು ಕಂಡುಕೊಳ್ಳುತ್ತೇವೆ. ಸತ್ಯಸಂಶೋಧನೆಯನ್ನು ಬಗೆಬಗೆಯ ರೀತಿಗಳಲ್ಲಿ ನಾವು ಭಾರತೀಯರು ನಿರ್ವಹಿಸಿದರೂ ಹಾಗೆ ಹುಟ್ಟಿದ ಚಿಂತನ ಚಿಲುಮೆಗಳನ್ನೇ ಪೂರ್ಣಸತ್ಯವೆಂದು ತಿಳಿಯುವುದಿಲ್ಲ. ಈ ಸಮಗ್ರತೆ ಹಾಗೂ ಸಂಶ್ಲೇಷಣಾತ್ಮಕ ಮನೋಭಾವ, ಪಾಶ್ಚಾತ್ಯರ ಇದಮಿತ್ಥಂ ಎಂಬ ವಸ್ತುತಂತ್ರಜ್ಞಾನ ಹಾಗೂ ಸರ್ವ ವಿಶ್ಲೇಷಣಾತ್ಮಕ ಮನೋಭಾವಕ್ಕಿಂತ ಭಿನ್ನವಾದದ್ದು. ಹೀಗಾಗಿ ನಾವು 'ವಸ್ತು'ವಿನಲ್ಲಿ 'ತತ್ವ'ವನ್ನೂ ತತ್ವದಲ್ಲಿ ವಸ್ತುವನ್ನೂ ಕಾಣಬಲ್ಲೆವು. ವ್ಯಷ್ಟಿಯಲ್ಲಿ ಸಮಷ್ಟಿಯನ್ನೂ ಸಮಷ್ಟಿಯಲ್ಲಿ ವ್ಯಷ್ಟಿಯನ್ನೂ ಕಾಣಬಲ್ಲೆವು. ಆದರ್ಶದಲ್ಲಿ ವಾಸ್ತವವನ್ನೂ ವಾಸ್ತವದಲ್ಲಿ ಆದರ್ಶವನ್ನೂ ಗ್ರಹಿಸಬಲ್ಲೆವು. ಈ ನಮ್ಮ 'ವೈಶ್ವದೇವ'ದ ಅನುಷ್ಠಾನಕ್ಕೆ ನಾವು ಇಟ್ಟುಕೊಂಡಿರುವ ಮಾಧ್ಯಮ 'ಜಾತವೇದ'.

ಐತಿಹಾಸಿಕವಾಗಿ, ಭಾರತೀಯನ 'ಅನುಭವ'ವನ್ನು ವೇದಾಂತ, ಬೌದ್ಧ ಮತ್ತು ವೈಷ್ಣವ ಎಂಬ ಮೂರು ನೆಲೆಗಳಲ್ಲಿ ಗುರ್ತಿಸೋಣ.

ಕಾಲದಲ್ಲಿ ವಿಶ್ವಕ್ರಿಯೆ ನಡೆದು ಬಂದ ದಾರಿ ವೈಯಕ್ತಿಕ ಅನುಭವಕ್ಕೆ ಸಿಕ್ಕುವುದಾದರೂ ಹೇಗೆ? ಅನಾದಿಯಾದ ಇದು ಅಪ್ರಜ್ಞೆಯಿಂದ ಹುಟ್ಟಿ, ಅಂತಃಪ್ರಜ್ಞೆಯಿಂದ ಬೆಳೆದು, ಕೊನೆಗೆ ಅನಂತದಲ್ಲಿ ನ್ಯಸ್ತವಾಗುವುದು—ಇದು ವೈಯಕ್ತಿಕ ಅನುಭವ. ಕಾಲಡಿಯಲ್ಲಿ ಪೂರ್ಣಾನದಿಯ ದಂಡೆಯಮೇಲೆ ನಿಂತು, ಸ್ನಾನಮಾಡುತ್ತಿದ್ದ ಬಾಲಶಂಕರರ ಕಾಲನ್ನು ಮೊಸಳೆ ಹಿಡಿದೆಳೆದ ಪ್ರಸಂಗವನ್ನು ಕುರಿತು ಯೋಚಿಸಿದಾಗ ನನಗೆ ಈ ಸಂಗತಿ ಹೊಳೆಯಿತು. 'ಸಂನ್ಯಸ್ತ'ವಾದ ಶರೀರ ಮೊಸಳೆಯ ರೂಪದ

ಕಾಲಕ್ಕೆ ಬೇಡವಂತೆ! ಅಂತೆಯೇ ಶಂಕರರು ತತ್ತ್ವಾನುಭವಕ್ಕಾಗಿ ತಮ್ಮನ್ನು ತಾವು ಮುಡಿಪಾಗಿಟ್ಟರು. 'ಸಂನ್ಯಾಸಿ'ಗಳಾದರು, ಕಾಲಾತೀತರಾದರು!

ಶಂಕರಾಚಾರ್ಯರ 'ವೇದಾಂತದ' ಪ್ರಕಾರ, ಕಾಲಾತೀತವಾದರೂ ವಿಶ್ವಕಾರಣವಾದ ಬ್ರಹ್ಮವು, ಪಾದರಸದ ಹನಿಯು ಒಂದಕ್ಕೆ ನೂರಾಗಿ ಒಡೆಯುವಂತೆ ಮತ್ತು ಕೂಡುವಂತೆ, ಕಾಲ-ದೇಶಗಳಿಗೆ ಒಳಪಟ್ಟು 'ಅನುಭವ'ವಾಗುವಾಗ, ಆತ್ಮವಾಗಿ ವ್ಯಕ್ತವಾಗುತ್ತದೆ. ಇಂತಹ 'ವ್ಯಕ್ತಿ'ಗಳು ಕಾಲ–ದೇಶಗಳ ಚೌಕಟ್ಟಿನಲ್ಲಿ ಪರಸ್ಪರರಿಗೆ ಭಿನ್ನವಾಗಿ ಕಾಣುತ್ತಾರೆ. ಹೀಗೆ ಅನುಭವವು ಎರಡು ಸ್ತರಗಳದ್ದು : 'ಏಕಂಸತ್' ಹಾಗೂ 'ವ್ಯಾವಹಾರಿಕ ಸತ್ಯ'ವಾದ ಪ್ರಪಂಚ. ಮೊದಲನೆಯದು ಈಶ್ವರ ಹಾಗೂ ಎರಡನೆಯದು ಮಾಯೆ. ಪರಮಾತ್ಮನು ಜೀವಾತ್ಮನಾದಾಗ ಭಿನ್ನತೆಯೂ, ಜೀವಾತ್ಮನು ಪರಮಾತ್ಮನಾದಾಗ ಐಕ್ಯತೆಯೂ ಮಾಯೆಯ ಮೂಲಕವೇ ಅನುಭವಕ್ಕೆ ಬರುತ್ತದೆ—ಕಾಲ-ದೇಶಗಳ ಚೌಕಟ್ಟಿನೊಳಗೆ. ಕಾಲ–ದೇಶಗಳಿಗೆ ಅತೀತವಾದ ಬ್ರಹ್ಮವು ಈ ಭಿನ್ನತೆ–ಏಕತೆಗಳೆರಡರ ಅನುಭವವನ್ನೂ ಮೀರಿದ್ದು, ಅನಿರ್ವಚನೀಯವಾದದ್ದು. ಜೀವಾತ್ಮನ 'ಭಿನ್ನತೆ' ಸ್ತರದಲ್ಲಿ 'ಅಹಂ'ಕಾರವು ಪಂಚಮಹಾಭೇದಗಳ[1] ಅನುಭವವನ್ನು ಉಂಟುಮಾಡುತ್ತದೆ; ಕರ್ಮಗಳಲ್ಲಿ ತೊಡಗಿಸುತ್ತದೆ; ಕರ್ತನನ್ನಾಗಿಸಿ ಕರ್ಮಫಲರೂಪವಾದ ಸುಖದುಃಖಗಳ ಭೋಕ್ತೃವನ್ನಾಗಿಸುತ್ತದೆ. ದೇಹಾನುಭವ, ಹುಟ್ಟು-ಸಾವು, ಸಂಸ್ಕಾರಗಳ ರೂಪವಾದ ಸಂಸಾರ ಚಕ್ರದಲ್ಲಿ ಸುತ್ತುವಂತೆ ಮಾಡುತ್ತದೆ. ಹೀಗೆ ಜೀವನು ತಾನು ಬಂಧಿತನಾಗಿರುವ ಭ್ರಮೆಗೆ ಒಳಪಟ್ಟು ತನ್ನ ಮುಕ್ತಿಗಾಗಿ ಆಶಿಸಿ ಪ್ರಯತ್ನಿಸುತ್ತಾನೆ. ತರ್ಕ,ಶ್ರದ್ಧೆ,ನಿದಿಧ್ಯಾಸನ ಅಥವಾ ನಿಷ್ಕಾಮ ಕರ್ಮದ ಮೂಲಕ ಭ್ರಮೆಯನ್ನು ಕಳೆದುಕೊಂಡು 'ಮುಕ್ತ'ನಾಗಿ ಸ್ವಾತ್ಮ ಸ್ವರೂಪದ ಅನುಭವವನ್ನೂ ಪಡೆಯುತ್ತಾನೆ. ಹೀಗೆ ಕೆಲವೊಮ್ಮೆ ರಂಗರಾಟಣೆಯಲ್ಲಿ ಸುತ್ತಿಬರುತ್ತ, ಕೆಲವೊಮ್ಮೆ ದೂರ ನಿಂತು ನೋಡುತ್ತ ಬ್ರಹ್ಮವು ಜೀವಾತ್ಮನಾಗಿ ಅನುಭವಪಡುವುದೇ 'ಲೀಲೆ'.

ಅಹಂಕಾರವು ಜೀವಾತ್ಮನನ್ನು ಆವರಿಸಿ ಭೇದಗಳ ಮಿತಿಗೆ ಒಳಪಡಿಸಿದಾಗ ಮನಸ್ಸು' ಹಾಗೂ ಅದರ ಸತ್ತ್ವ-ರಜಸ್-ತಮಸ್ ಎಂಬ ಅವಸ್ಥೆಗಳೂ ಉಂಟಾಗುತ್ತವೆ. ದೇಹವೇ ನಾನೆಂಬ ಭಾವ, ಇತರ ಎಲ್ಲದರ ಬಗ್ಗೆ ಉದಾಸೀನತೆ ಇವು ತಮಸ್, ಚೈತನ್ಯ ನಾನೆಂಬ ಭಾವ, ಎಲ್ಲವೂ ನನ್ನದೆಂಬ ಆಕರಾಸ್ತೆ, ಆ ಮೂಲಕ ಹುಟ್ಟುವ ರಾಗದ್ವೇಷಗಳು ಇವು ರಜಸ್; ವಿಶ್ವವೇ ನಾನೆಂಬ ಭಾವ, ಲೋಕಸಂಗ್ರಹ (ನಿಷ್ಕಾಮ ಕರ್ಮ), ಅದರಿಂದುಂಟಾಗುವ ಶಾಂತಿ, ನೈರ್ಮಲ್ಯ ಇವು ಸತ್ತ್ವ. ಈ ಮೂರೂ ಆತ್ಮನ ಬಂಧಿತ ಸ್ಥಿತಿಗಳೇ ಆದರೂ ಸತ್ತ್ವ ಬಂಧನವನ್ನು ಸಡಿಲಗೊಳಿಸಿ ಮುಕ್ತಿಯ ಕಡೆಗೆ ಒಯ್ಯುತ್ತದೆ; ರಜಸ್ಸು ತಮಸ್ಸುಗಳು ಅದನ್ನು ಬಿಗಿಗೊಳಿಸಿ ಸಂಸಾರಚಕ್ರದಲ್ಲೇ ಸ್ಥಿರಪಡಿಸುತ್ತವೆ. ಸಾಧನಸಂಪತ್ತಿನ ಮೂಲಕ ಜೀವಾತ್ಮನು ಸತ್ತ್ವವನ್ನು

1 ಜೀವ–ಜೀವ, ಜೀವ–ನಿರ್ಜೀವ, ಜೀವ–ದೇವ (ಶ್ರೀಹರಿ) ಹಾಗೂ ನಿರ್ಜೀವ–ಜೀವ ಇವೇ ಪಂಚಮಹಾಭೇದಗಳು

ಹೆಚ್ಚಿಸಿಕೊಂಡು ರಜಸ್ಸು ತಮಸ್ಸುಗಳನ್ನು ಕಳೆದುಕೊಳ್ಳಬಹುದಾಗಿದೆ ; ಕೊನೆಗೆ ಸತ್ತ್ವವನ್ನೂ ಕಳೆದುಕೊಂಡು ಕಾಲ–ದೇಶಗಳ ಚೌಕಟ್ಟಿನಿಂದ ಹೊರಬಂದು 'ತಾನೇ ಬ್ರಹ್ಮ'ವೆಂಬ ಅನುಭವದಲ್ಲಿ ಕರಗಿಹೋಗುತ್ತಾನೆ.ಅಲ್ಲಿಗೆ 'ಲೀಲಾನಾಟಕ' ಮುಗಿಯುತ್ತದೆ.

ಬೌದ್ಧ ಚಿಂತನೆಯಲ್ಲಿ ಬ್ರಹ್ಮವೂ ಇಲ್ಲ, ಜೀವಾತ್ಮವೂ ಇಲ್ಲ. ಬದಲಿಗೆ ವಿಧಿಯನ್ನೂ ಮೀರುವ, ವೈಯಕ್ತಿಕ ಇಚ್ಛೆಯನ್ನು ರೂಪಿಸಬಲ್ಲ, ನೈತಿಕ ಅವಶ್ಯಕತೆಯಾದ ಕರ್ಮದ ಪ್ರಸ್ತಾಪವಿದೆ. ಧರ್ಮ ಎಂದರೆ ನಾವು ಬದುಕುವ ರೀತಿಯೇ ಹೊರತು ಬ್ರಹ್ಮ ಸತ್ಯ ಜಗನ್ಮಿಥ್ಯಾ ಇತ್ಯಾದಿಗಳನ್ನು ಕುರಿತಾದ ಚರ್ಚೆಯಲ್ಲ. ಧರ್ಮವೆಂದರೆ ನಾವು ಏನೆಂದುಕೊಳ್ಳುತ್ತೇವೆಯೋ ಅದು ನಮ್ಮ ಜೀವನದ ಭಾಗವಾಗಬೇಕು, ನಮ್ಮ ಸ್ವಭಾವವಾಗಬೇಕು. ಈ ಮಾತು ಬುದ್ಧನ ಬೋಧನೆಯ ಮೊದಲಲ್ಲೇ ಬರುತ್ತದೆ (ಧರ್ಮಚಕ್ರ ಪ್ರವರ್ತನ ಸೂತ್ರ). ದುಃಖವು ಎಲ್ಲರ ಅನುಭವ; ಅದನ್ನು ಮುಚ್ಚಿಟ್ಟು ಫಲವೇನು ? ದುಃಖವು ಹುಟ್ಟುವುದು ಆಸೆಯಿಂದ. (ಸಾಧನೆಯ) ಮಾರ್ಗವನ್ನು ಕ್ರಮಿಸುವುದರಿಂದ ನಿರೋಧಿಸುವುದು ಸಾಧ್ಯವಾಗುತ್ತದೆ. ಈ ಮಾರ್ಗವು ನಾವು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಎಂಟು ಅಂಗಗಳಿಂದ ಕೂಡಿದೆ: ೧. ಸರಿಯಾದ ಜೀವನದೃಷ್ಟಿ–ಜೀವನದ ಮೌಲ್ಯಗಳನ್ನು ಸರಿಯಾಗಿ ಅರ್ಥಮಾಡಿಕೊಂಡು, ವಿಚಾರ ವಿಮರ್ಶೆಯಿಂದ ಅಶಾಶ್ವತವಾದ ಪ್ರಪಂಚವನ್ನು ತ್ಯಜಿಸಿ ಶಾಶ್ವತ ಸತ್ಯದ ಅನ್ವೇಷಣೆಗಾಗಿ ಬದುಕನ್ನು ಮೀಸಲಾಗಿಡಬೇಕು ; ೨. ಸರಿಯಾದ ಸಂಕಲ್ಪ–ಹೀಗೆ ಬದುಕಲು ಅಗತ್ಯವಾದ ಇಚ್ಛಾಶಕ್ತಿಯನ್ನು ಸಂಕಲ್ಪದ ಮೂಲಕ ಹೊಂದಬೇಕು ; ೩. ಸರಿಯಾದ ಮಾತು–ನಾವು ಆಡುವ ಮಾತು ನಾವು ಆರಿಸಿಕೊಂಡ ಬದುಕಿಗೆ ಅವಿರೋಧವಾಗಿರಬೇಕು ; ೪. ಸರಿಯಾದ ಕೆಲಸ–ನಮ್ಮ ಅನುದಿನದ ಕೆಲಸಗಳು ನಮ್ಮ ನಂಬಿಕೆಗಳನ್ನು ಪ್ರತಿಬಿಂಬಿಸುವಂತಿರಬೇಕು ; ೫. ಸರಿಯಾದ ಬದುಕು–ಜೀವಿತಕ್ಕಾಗಿ ಕೈಕೊಳ್ಳುವ ವೃತ್ತಿ ನಮ್ಮ ನಡತೆಯ ತಳಹದಿಯಾಗುವುದರಿಂದ ಇದು ನಮ್ಮನ್ನು ಧರ್ಮಮಾರ್ಗದಲ್ಲಿ ನಡೆಸುವಂತಿರಬೇಕು ; ೬. ಸರಿಯಾದ ಪ್ರಯತ್ನ–ನಮ್ಮ ನಂಬಿಕೆಗಳು ಕೇವಲ ಹೇಳಿಕೆಗಳಾಗಿ ಉಳಿಯದೆ ನಡತೆಯಲ್ಲಿ ಹಾಸುಹೊಕ್ಕಾಗುವಂತೆ ನಿರಂತರ ಅಭ್ಯಾಸ ; ೭. ಸರಿಯಾದ ಸ್ಮೃತಿ–ನೈತಿಕ ಮೌಲ್ಯಗಳನ್ನು ಬೌದ್ಧಿಕವಾಗಿ ಒಪ್ಪಿಕೊಂಡು ಮರೆತುಬಿಡದೆ, ನಿತ್ಯಜೀವನದ ಕರ್ತವ್ಯಕರ್ಮಗಳಲ್ಲಿ ಅವು ಅನುಷ್ಠಾನವಾಗುವಂತೆ ಎಚ್ಚರವಾಗಿರುವುದು ; ಈ ಎಲ್ಲವುಗಳ ನಿರಂತರ ಅಭ್ಯಾಸದಿಂದ ಉಂಟಾಗುವುದು; ೮. ಸರಿಯಾದ ಸಮಾಧಿ–ಎಂದರೆ ಶೀಲಶುದ್ಧಿಯಿಂದ ಮಾತ್ರ ಬರಬಹುದಾದ ಚಿತ್ತಶುದ್ಧಿ.

ಪುನರ್ಜನ್ಮವಿಚ್ಛಿತ್ತಿರೂಪವಾದ 'ನಿರ್ವಾಣ'ದೆಡೆಗೊಯ್ಯುವ ಈ 'ಮಾರ್ಗ'ವನ್ನು 'ಯಾನ'ವೆಂತಲೂ ಕರೆಯುವರು. ಮೊದಮೊದಲಿನ ಬೌದ್ಧಧರ್ಮದಲ್ಲಿ ಅಷ್ಟಾಂಗರೂಪವಾದ ಈ ಸಾಧನೆಯ ಮಾರ್ಗದಲ್ಲಿ ನಡೆದು ನಿರ್ವಾಣವನ್ನು ಪಡೆದು 'ಅರ್ಹಂತ'ನಾಗುವ ಹಂತದವರೆಗೂ ಯಾರಿಗೆ ಯಾರೂ ಸಹಾಯ ಮಾಡಲಾರರು, ಪ್ರತಿಯೊಬ್ಬನೂ ತನ್ನ ಸ್ವಂತ ಕರ್ಮದಿಂದಲೇ ತಾನು ಮುನ್ನಡೆಯಬೇಕು ಎಂಬ

ಭಾವನೆ ಇದ್ದಿತು. ಇತರರಿಗೆ ಪ್ರಯೋಜನಕ್ಕೆ ಬಾರದ ಇಂತಹ 'ಅರ್ಹಂತ'ರುಗಳಿಂದೇನು? ಕಾಲಕ್ರಮದಲ್ಲಿ ಈ ಆದರ್ಶವು ಕರುಣಾಮಯರಾದ 'ಬುದ್ಧ'ರ್, ಅಥವಾ 'ಬೋಧಿಸತ್ವ'ರ ಆದರ್ಶವಾಗಿ ಬದಲಾವಣೆ ಹೊಂದಿತು. ಈ ಬೋಧಿಸತ್ತ್ವರುಗಳು ಕರುಣೆ-ಪ್ರೇಮಗಳಿಂದಾಗಿ ಇತರ ಸಾಧಕರ ಕಷ್ಟ ಕಡಿಮೆಯಾಯಿತು; ನಿರ್ವಾಣ ಸಾಧ್ಯವೆನಿಸಿತು, ಮಾರ್ಗ ಸಹ್ಯವೆನಿಸಿತು. ಹಿಂದೂಧರ್ಮದ ಭಕ್ತಿಮಾರ್ಗವನ್ನು ಒಳಗೊಂಡ ಈ ಹೊಸ ಬಗೆಯ ಬೌದ್ಧಧರ್ಮ ಎಲ್ಲರಿಗೂ ಪ್ರಿಯವಾಯಿತು. ದೇಶ ವಿದೇಶಗಳಿಗೆ ಹರಡಿತು; ಜನಸಾಮಾನ್ಯರು ಬುದ್ಧನ ವಿಗ್ರಹಾರಾಧನೆಗೆ ತೊಡಗಿದರು. ಹೊಸ ಪ್ರೇಮಪೂರ್ಣ ಬೌದ್ಧಧರ್ಮ 'ಮಹಾಯಾನ'ವೆನಿಸಿಕೊಂಡಿತು; ಹಳೆಯದು 'ಹೀನಯಾನ'ವೆನ್ನಿಸಿಕೊಂಡಿತು. ಮಹಾಯಾನ ಪಂಥಕ್ಕೆ ಸೇರಿದ ಪ್ರತಿಯೊಬ್ಬರೂ ಲೋಕಹಿತಕ್ಕಾಗಿ ಜೀವನವನ್ನು ಮುಡಿಪಾಗಿಟ್ಟು ಬದುಕಿದರು; ತಾವು ಬೋಧಿಸತ್ತ್ವನಾಗುವಂತಾದರೂ ಸಹ ಇತರರ ದುಃಖಪರಿಹಾರಾರ್ಥವಾಗಿಯೆ ಜೀವಿಸುತ್ತ ನಿರ್ವಾಣವನ್ನು ಒಲ್ಲೆನೆಂದವರು; ವೈಯಕ್ತಿಕ ನಿರ್ವಾಣದ ಬದಲಾಗಿ ಇಡೀ ಸಮುದಾಯದ ನಿರ್ವಾಣಕ್ಕೆ ಶ್ರಮಿಸಿದವರು, 'ಪರಿವ್ರತ'ರಾದವರು. ನಿರ್ವಾಣವೆಂದರೆ ಜೀವನ; ವಿಮುಖತೆಯಲ್ಲ, ಆತ್ಮಾನಂದವಲ್ಲ; ಬದಲಾಗಿ ಜೀವಕಾರುಣ್ಯವೇ ನಿರ್ವಾಣ' ಮಾನವಸೇವೆಯೇ ದೇವನ ಸೇವೆ!

ವೈಷ್ಣವ ಚಿಂತನೆಯಲ್ಲಿ ಜಗತ್ತೇನೂ ಮಿಥ್ಯವಲ್ಲ. ಪೂರ್ಣವು ಪೂರ್ಣವಲ್ಲದುದಕ್ಕೆ ತನ್ನನ್ನೇ ತಾನು ಕೊಟ್ಟುಕೊಳ್ಳುತ್ತದೆ, ಮಹತ್ತಾದುದು ಅಲ್ಪವಾಗುತ್ತದೆ. ಪ್ರೇಮವನ್ನು ಮೆರೆಯುವುದಕ್ಕಾಗಿಯೆ ಪರಮಾತ್ಮನು ತನ್ನ ಲೀಲೆಯ ಮೂಲಕ ಅನಂತರೂಪಗಳನ್ನು ತಳೆಯುತ್ತಾನೆ, ಅವತಾರವೆತ್ತುತ್ತಾನೆ. ಹೀಗಾಗಿ ಜೀವರುಗಳು ಭ್ರಮೆಯಾಗುವ ಬದಲು ಪರಮಾತ್ಮನ ಅಂಶರಾಗುತ್ತಾರೆ. ಬ್ರಹ್ಮವು ಕೇವಲ ನಿರಪೇಕ್ಷ 'ಸತ್' ಆಗಿರದೆ ಪರಾಪ್ರಜ್ಞೆ (ಚಿತ್) ಹಾಗೂ ಆನಂದ ಸಹ ಹೌದು! ಜೀವನು ಈ ಎಲ್ಲವನ್ನೂ ಗ್ರಹಿಸಿ ಆಹಾ! ಎಂದು ಆಶ್ಚರ್ಯಪಡುತ್ತಾನೆ, ಸಂತೋಷಪಡುತ್ತಾನೆ. ಈ ಒಂದನ್ನು ಇನ್ನೊಂದು ಗ್ರಹಿಸುವ ಕ್ರಿಯೆಯಲ್ಲಿಯೇ ವ್ಯಕ್ತಿತ್ವ ಹಾಗೂ ಪ್ರೇಮಕ್ಕೆ ಅನುವುಮಾಡಿಕೊಟ್ಟಂತಾಗುತ್ತದೆ. ಎಂದ ಮೇಲೆ ಪರಬ್ರಹ್ಮವು ಅನುಭವಗಳೆಲ್ಲವುಗಳ ಸಮಷ್ಟಿಸ್ವರೂಪವಾಗುತ್ತದೆ. ಏಕವಾದ ಬ್ರಹ್ಮವು ಲೀಲೆಯಿಂದ ಅನೇಕವಾಗಿ ತೋರುವುದೆಂದು ತರ್ಕಮಾಡುವ ಬದಲು, ಅನೇಕಗಳ ಹಿನ್ನೆಲೆಯಲ್ಲಿದ್ದು ಅವುಗಳನ್ನು ಒಂದಾಗಿಸುವ 'ಅನುಭವ'ವೇ ಬ್ರಹ ಎಂದು ತಿಳಿಯುವಂತಾಗುತ್ತದೆ.

ವೈಷ್ಣವದೃಷ್ಟಿಯಲ್ಲಿ ವ್ಯಕ್ತಿ ಬಂಧಿತನಾಗುವುದು ಅಜ್ಞಾನದಿಂದಲೂ ಅಲ್ಲ, ಭ್ರಮೆಯಿಂದಲೂ ಅಲ್ಲ; ವಿಮುಖತೆಯಿಂದ. ತನ್ನ ಸುತ್ತಲೂ ಎಲ್ಲೆಡೆ ನಿರಂತರವಾಗಿ ತಾನೇ ತಾನಾಗಿರುವ ಭಗವತ್ಪ್ರೇಮವನ್ನು ಗ್ರಹಿಸುವ ಬದಲು ವಿಷಯಲೋಲುಪನಾಗಿ ಮೃಣ್ಮಯ ಐಶ್ವರ್ಯದೆಡೆ ಸೆಳೆಯಲ್ಪಟ್ಟು ವಿಮುಖನಾಗುವ ಜೀವಾತ್ಮನನ್ನು ಪರಮಾತ್ಮನು ಕರುಣೆಯಿಂದ, ಪ್ರೀತಿಯಿಂದ ಉದ್ಧರಿಸುತ್ತಾನೆ. ಪ್ರಕೃತಿಯಲ್ಲಿ ರಾಧಾ-ಕೃಷ್ಣರ ದಿವ್ಯಪ್ರೇಮವೇ ತುಂಬಿ ಹೋಗಿದೆ-ಒಂದೊಂದು

ಪರಮಾಣುವೂ ಇತರ ಪರಮಾಣುಗಳ ಜೊತೆ ಸಹಸ್ಪಂದಿಸುತ್ತದೆ; ಮೋಡ ನದಿಯನ್ನು ಕೃಶವಾಗಲೂ ಬಿಡುವುದಿಲ್ಲ; ಚಂದ್ರಸೂರ್ಯರು ಪುಷ್ಪಗಳನ್ನು ಅರಳಿಸುತ್ತಾರೆ; ಪತಂಗ ಜ್ವಾಲೆಯಲ್ಲಿ ಹೋಗಿ ಬೀಳುತ್ತದೆ—ಇತ್ಯಾದಿ, ಇತ್ಯಾದಿ. ಇಡೀ ವಿಶ್ವವೇ ಹೀಗೆ ಸೌಂದರ್ಯಾರಾಧನೆಯಲ್ಲಿ, ಪ್ರೇಮಾರಾಧನೆಯಲ್ಲಿ ತೊಡಗಿದೆ; ಎಲ್ಲ ಜೀವಿಗಳೂ ವಸ್ತುಗಳೂ ಭಗವಂತನನ್ನು ಆರಾಧಿಸುತ್ತಿವೆ. ಪ್ರಕೃತಿಯ ಬಗ್ಗೆ ಹಿಂದೂಧರ್ಮದ ದೃಷ್ಟಿ ಗೌರವಪೂರ್ಣವಾದದ್ದು. ಪ್ರಕೃತಿಯನ್ನು ತನಗಾಗಿ ಇರುವ ರಂಗಸ್ಥಳವೆಂದು ಅವನು ಭಾವಿಸುವುದಿಲ್ಲ. ಮೌನವಾಂತ, ಸರಳ, ಶಾಂತ, ಎಣೆಯಿಲ್ಲದ ವೈವಿಧ್ಯತೆ ಫಲವತ್ತತೆಗಳನ್ನುಳ್ಳ ಪ್ರಕೃತಿಯನ್ನು ಭಗವಂತನ ಅಭಿವ್ಯಕ್ತಿಯೆಂದೇ ತಿಳಿಯುತ್ತಾನೆ. ಹಿಂದೂ ಯಾತ್ರಾಸ್ಥಳಗಳೆಲ್ಲ ಹಿಮಾಚ್ಛಾದಿತ ಪರ್ವತಶಿಖರಗಳು, ತಾಳೆ–ತೆಂಗುಗಳಿಂದ ತುಂಬಿದ ಸಮುದ್ರ ತೀರಗಳು, ದ್ವೀಪಗಳು, ಹಸುರುಹೊನ್ನಿನಿಂದ ಹಾಸುಹೊಕ್ಕಾದ ದಟ್ಟ ಅರಣ್ಯಗಳು—ಇಂಥಲ್ಲಿಯೇ ಇವೆ.

ಇಡೀ ಪ್ರಕೃತಿಯು ಬ್ರಹ್ಮನ ಸಮಷ್ಟಿರೂಪದ ಅಭಿವ್ಯಕ್ತಿಯೆಂದು ತಿಳಿಯುವಾಗ ಪ್ರತಿಯೊಂದು ಜಡವಸ್ತು, ಸಸ್ಯ, ಪ್ರಾಣಿ, ಮನುಷ್ಯ ಎಲ್ಲವೂ ಭಗವದಂಶವಳ್ಳ ಅವತಾರವೇ ಎಂದಾಗುತ್ತದೆ. ವಿಭಿನ್ನತೆ ಅಭಿವ್ಯಕ್ತಿ ಸ್ವರೂಪದಲ್ಲಿ ಮಾತ್ರ ಉಳಿಯುತ್ತದೆ. ವಿಕಾಸವು ತನ್ನನ್ನು ತಾನು ತಿಳಿಯುವುದರಲ್ಲಿ, ಪ್ರಕೃತಿಯನ್ನು ತಿಳಿಯುವುದರ ಮೂಲಕ ಬ್ರಹ್ಮಸಾಕ್ಷಾತ್ಕಾರದಲ್ಲಿ ಎಂದಾಗುತ್ತದೆ. ಬುದ್ಧಿವಂತನು ತಾನು ಹೇಗೆ ತಂದೆತಾಯಿಗಳಿಂದ ಹುಟ್ಟಿದೆ,ಅನುವಂಶೀಯವಾಗಿ ತನ್ನ ಭೌತಗುಣಗಳು ನಿರ್ಧರಿಸಲ್ಪಟ್ಟವು ಇತ್ಯಾದಿಯಾಗಿ ಜೀವವಿಜ್ಞಾನವನ್ನು ತಿಳಿದುಕೊಳ್ಳುವಂತೆ ಹೃದಯವಂತನು ಹೇಗೆ ಪ್ರಕೃತಿಯಲ್ಲಿ ಲೀಲಾಮಯವಾಗಿ ತುಂಬಿರುವ ಭಗವತ್ಪ್ರೇಮವು ತನ್ನಲ್ಲೂ ಹಾಸುಹೊಕ್ಕಾಗಿದೆ, ಹೇಗೆ ಅದು ಇತರ ಜೀವಿಗಳ ಬಗ್ಗೆ ತನ್ನ ಸಹಜ ನಡತೆಯನ್ನೂ ಕರ್ತವ್ಯಗಳನ್ನೂ ನಿರ್ಧರಿಸುತ್ತದೆ ಎಂಬುದನ್ನು ತಿಳಿದುಕೊಳ್ಳುತ್ತಾನೆ. ಸೃಷ್ಟಿಯಲ್ಲಿ ತನಗಿರುವ ವಿಶೇಷ ಸ್ಥಾನವನ್ನು ಗುರ್ತಿಸಿ, ತನ್ನ ಮೂಲಕ ವಿಶೇಷವಾಗಿ ಅಭಿವ್ಯಕ್ತಗೊಳ್ಳುತ್ತಿರುವ 'ಚಿತ್' ಹಾಗೂ 'ಆನಂದ'ಗಳನ್ನು ಪ್ರಜ್ಞಾಪೂರ್ವಕವಾಗಿ ಅನುಭವಿಸಿ, ಬುದ್ಧಿಯನ್ನು ದುಡಿಸಿ ವಿಜ್ಞಾನವಿದ್ಯೆಯ ಮೂಲಕ ಸತ್ಯಾನ್ವೇಷಣೆ ಮಾಡುತ್ತ, ಅಂತರಂಗದಲ್ಲಿ ಹೃದಯವನ್ನು ದುಡಿಸಿ ಜೀವಕಾರುಣ್ಯದ ಮೂಲಕ ಆತನನ್ನು ಅರಿತು, ಈ ಎಲ್ಲ ಚಿತ್ತಗಳ ನೆಲೆಯಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಮಾನವನ ಕರ್ತವ್ಯವಾಗುತ್ತದೆ. ಪ್ರಾಣಿಸಹಜವಾದ ಅಲ್ಪತನ ಹಾಗೂ ಲೋಕವಿಮುಖತೆಗಳನ್ನು ಮೀರಿ ಮೇಲೇರುತ್ತ ವಿಶ್ವಾತ್ಮನಾಗುವುದೇ ಮಾನವನಿಗಿರುವ ಮಹಾಸಾಧ್ಯತೆ.

ಈ ವೈಷ್ಣವ ಚಿಂತನೆ ಭಾರತದಲ್ಲಿ ಪ್ರಧಾನವಾಗಿ ಶಾಂತಿ–ಸಂತೃಪ್ತಿಗಳನ್ನುಳ್ಳ ಸಮಾಜ ವ್ಯವಸ್ಥೆಯನ್ನು ಸೃಷ್ಟಿಸಿತು. ಈ ಸಮಾಜದಲ್ಲಿ ಮೌಲ್ಯಗಳು ಆಧ್ಯಾತ್ಮಿಕವಾಗಿದ್ದುದರಿಂದ ಮೇಲು–ಕೀಳುಗಳು ಐಶ್ವರ್ಯದ ಅಥವಾ ದಂಡಶಕ್ತಿಯ ಮೇಲೆ ನಿರ್ಧಾರಿತವಾಗದೆ ಆಧ್ಯಾತ್ಮಿಕ ಸಾಧನೆಯ ಮೇಲೆಯೇ ಗುರ್ತಿಸಲ್ಪಡುತ್ತಿದ್ದವು.

ಸಮಾಜದ ಉನ್ನತ ಗೌರವವನ್ನು ಪಡೆದಇಂಥ ಋಷಿಸದೃಶರು ಸಿರಿಯ ಅಥವಾ ಅಧಿಕಾರದ ಮೋಹಕ್ಕೆ ಒಳಗಾಗಿ ಪತನಹೊಂದದಂತೆ ತಮ್ಮ ಆವಶ್ಯಕತೆಗಳನ್ನು ಅತ್ಯಂತ ಮಿತಿಗೊಳಿಸಿಕೊಂಡು ಕೇವಲ ಭಿಕ್ಷಾಟನೆಯಿಂದ ಬದುಕುತ್ತ ಅರಣ್ಯವಾಸಿಗಳಾಗಿದ್ದರು; ನೈತಿಕ ಶುದ್ಧತೆಯೇ ಅವರ ರಕ್ಷಣೆಯಾಗಿದ್ದಿತು. ಬಡತನವು ಪಾಪವೆನಿಸದೆ, ಸಾಧಕರ ಮುಖ್ಯಲಕ್ಷಣವಾದ ಅಪರಿಗ್ರಹವು ಗೌರವಾನ್ವಿತವಾಗಿದ್ದಿತು. ತೀರ ಇತ್ತೀಚಿನ (ಮಹಾತ್ಮ ಗಾಂಧಿಯವರೆಗಿನ) ಭಾರತೀಯ ಮಹನೀಯರುಗಳಲ್ಲಿಯೂ ಈ ವೈಷ್ಣವ ಲಕ್ಷಣಗಳನ್ನು ನಾವು ಕಾಣಬಹುದು. ಸ್ವಾರ್ಥತ್ಯಾಗಪ್ರಧಾನವಾದ ಈ ಧೋರಣೆ ವ್ಯಕ್ತಿಗತ ಶೀಲ–ಸಂಪತ್ತನ್ನು ರೂಪಿಸುವುದರ ಜೊತೆಗೆ ಸಮಾನತೆಯನ್ನು ಮೈಗೂಡಿಸಿಕೊಂಡ ಸಾಮಾಜಿಕ ರಚನೆಗಳನ್ನೂ ಹುಟ್ಟಿಹಾಕಿತು. ಉದಾಹರಣೆಗೆ ಪರಸ್ಪರ ಸಹಕಾರದ ತಳಹದಿಯನ್ನುಳ್ಳ ಕೂಡುಕುಟುಂಬ ವ್ಯವಸ್ಥೆ. ಇಲ್ಲಿ ವ್ಯಕ್ತಿಯ ಹಕ್ಕುಬಾಧ್ಯತೆಗಳಿಗಿಂತ ಮನೆತನದ ಮರ್ಯಾದೆಗೇ ಆದ್ಯತೆ. ಆರ್ಥಿಕವಾಗಿ ಬಡಕುಟುಂಬಗಳಾದರೂ ಪರಸ್ಪರ ಪ್ರೀತಿ–ವಿಶ್ವಾಸಗಳಲ್ಲಿ, ಮಾನವೀಯತೆಯಲ್ಲಿ ಸಿರಿತನ ಧಾರಾಳವಾಗಿದ್ದಿತು. ಇದರಂತೆಯೇ ಗ್ರಾಮಜೀವನವೂ ಸಹ ಹಿರಿಯರಾದ ಪಂಚರ ಮಾರ್ಗದರ್ಶನದಲ್ಲಿ ಗ್ರಾಮದ ಗೌರವಕ್ಕೆ ಧಕ್ಕೆಬಾರದಂತೆ, ಸ್ವಂತ ಹಿತಾಸಕ್ತಿಗಳನ್ನು ಗೌಣವಾಗಿಸಿಕೊಂಡು, ಸಮುದಾಯದ ಒರೆಗಲ್ಲಿಗೆ ತಮ್ಮ ನಡತೆಯನು ನಿರಂತರವಾಗಿ ಒಡ್ಡಿಕೊಳ್ಳುತ್ತ ಜನರು ಬದುಕುತ್ತಿದ್ದರು. ಪರಹಿತಕ್ಕಾಗಿ ಬದುಕುವ ಈ ಮೌಲ್ಯಗಳು ಕೇವಲ ಗಣ್ಯವ್ಯಕ್ತಿಗಳೆನ್ನಿಸಿಕೊಂಡವರಲ್ಲಿ ಮಾತ್ರವಲ್ಲದೆ ಸಮಾಜದ 'ಹಿಂದುಳಿದ' ಬಡವರಲ್ಲಿಯೂ ಹೇಗೆ ಅರಳಿದ್ದವೆಂಬುದಕ್ಕೆ ಜಿಮ್ ಕಾರ್ಬೆಟ್ ಬರೆದ 'ನನ್ನ ಪ್ರೀತಿಯ ಭಾರತ' ಎಂಬ ಗ್ರಂಥದಲ್ಲಿನ ಒಂದು ಪ್ರಸಂಗವನ್ನು ಉದಾಹರಿಸಬಹುದು. ಚಾದಿ ಎಂಬಾತನ ಹೆಂಡತಿ ತಿಲ್ನಿಯನ್ನು ಕಾಳು ಎಂಬುವನು ಅಪಹರಿಸಿದ ಪ್ರಸಂಗ, ನ್ಯಾಯತೀರ್ಮಾನಕ್ಕಾಗಿ ಬ್ರಿಟಿಷ್ ಅಧಿಕಾರಿ ಆಂಡರ್‌ಸನ್ ಮುಂದೆ ಬಂದಿತು. ಚಾದಿ ತನಗೆ ಬೇಕಾದ ಬಟ್ಟೆಬರೆ, ಒಡವೆವಸ್ತು ಯಾವುದನ್ನೂ ಮಾಡಿಸಿಕೊಟ್ಟಿಲ್ಲವೆಂದೂ ಅವನನ್ನು ಬಿಟ್ಟು ಸ್ವಂತ ಇಚ್ಛೆಯಿಂದಲೇ ಕಾಳುವಿನ ಬಳಿಗೆ ತಾನು ಬಂದುದಾಗಿಯೂ ತಿಲ್ನಿ ಹೇಳಿದಳು. ತಿಲ್ನಿಗೆ ಇಷ್ಟವಿಲ್ಲದಿದ್ದರೆ ತನ್ನ ಬಳಿಗೆ ವಾಪಸಾಗುವುದೇನೂ, ಬೇಡ, ಆದರೆ ತಾನು ಅವಳನ್ನು ಮದುವೆಯಾಗುವಾಗ ತೆತ್ತ ಧನ ತನಗೆ ಪರಿಹಾರವಾಗಿ ವಾಪಸು ದೊರಯಲಿ ಎಂದು ಚಾದಿ ಹೇಳಿದ. ಕಾಳುವೂ ಅವನ ಸ್ನೇಹಿತರೂ ಸೇರಿ ಆ ಹಣವನ್ನು ಚಾದಿಗೆ ಕೊಟ್ಟರು. ಆಗ, ರೋಗಿಯಾಗಿ ಮೈ ಎಲ್ಲಾ ಬಿಳಿಚಿಕೊಂಡು ತತ್ತರಿಸುತ್ತಿದ್ದ ಕಾಳುವಿನ ಹೆಂಡತಿ, ಕಾಳು ಈಗ ಬೇರೆ ಹೆಂಡತಿಯನ್ನು ಕೂಡಿಕೊಂಡಿರುವುದರಿಂದ ಅಸಹಾಯಳಾದ ತನ್ನ ಗತಿಯೇನು? ಎಂದು ಕೇಳಿದಳು. ಆಂಡರ್‌ಸನ್‌ಗೆ ಈ ತೊಡಕನ್ನು ಬಗೆಹರಿಸುವುದು ಹೇಗೆಂದು ದೊಡ್ಡ ಸಮಸ್ಯೆಯಾಯಿತು. ಇದ್ದಕ್ಕಿದ್ದಂತೆ ತಿಲ್ನಿ ಆ ಹೆಂಗಸನ್ನು ಅಪ್ಪಿಕೊಂಡು ಸಂತೈಸುತ್ತ, 'ಅಕ್ಕ, ನಿನ್ನನ್ನು ನಾನು ಸಾಕುತ್ತೇನೆ. ನನ್ನದೆಲ್ಲವನ್ನೂ ನಿನ್ನೊಡನೆ ಹಂಚಿಕೊಳ್ಳುತ್ತೇನೆ. ನಿನ್ನ ಆರೈಕೆ ನನಗೆ ಸೇರಿದ್ದು. ಬಾ, ಮನೆಗೆ ಹೋಗೋಣ' ಎಂದು ಅವಳನ್ನು ಕರೆದೊಯ್ದಳು! ಪಂಚಾಯಿತಿ ಮುಗಿದು ಆಂಡರ್‌ಸನ್ ಮೇಲೆದ್ದ ನಂತರ

ಚಾದಿ ಬಂದು ತನ್ನ ಅರ್ಜಿಯನ್ನು ವಾಪಸು ಕೇಳಿ ಪಡೆದ. ಅದನ್ನು ಚರಚರನೆ ಹರಿದುಹಾಕಿ, ತಾನು ಪರಿಹಾರ ಪಡೆದ ಹಣವನ್ನು ಅವರ ಮುಂದಿಟ್ಟು, 'ದೊರೆಯೆ, ಕಾಳು ಮತ್ತು ನಾನು ಒಂದೇ ಹಳ್ಳಿಯವರು. ಅವನು ಈಗ ಇಬ್ಬರಿಗೆ ಅನ್ನ ಹಾಕ ಬೇಕು. ಅದರಲ್ಲಿ ಒಬ್ಬರಿಗೆ ವಿಶೇಷ ಆರೈಕೆ ಆಗಬೇಕು ಕಾಳು ಬಡವ. ಅವನಿಗೆ ಹಣ ಅಗತ್ಯ. ಆದ್ದರಿಂದ ಈ ಹಣವನ್ನು ಕಾಳುವಿಗೆ ಹಿಂದಿರುಗಿಸಲು ನನಗೆ ಅಪ್ಪಣೆ ಕೊಡಿ' ಎಂದು ಬೇಡಿದ! ಈ ಎಲ್ಲರೂ ನಿರಕ್ಷರಕುಕ್ಷಿಗಳು, ಬಡವರು, 'ಕೀಳು' ಜಾತಿಯು ವರು!

ಭಗವಂತನಲ್ಲಿ ನಂಬಿಕೆ ಹಾಗೂ ಭದ್ರವಾದ ನೈತಿಕ ಅಡಿಪಾಯದ ಮೇಲೆ ನಿಂತಿ ರುವ ಇಂಥ ಕೂಡು ಜೀವನವಲ್ಲಿ ತಂದೆತಾಯಿಗಳು-ಮಕ್ಕಳು, ಗಂಡ-ಹೆಂಡತಿ, ಅತಿಥಿ–ಆತಿಥೇಯ, ಗುರು–ಶಿಷ್ಯ, ಯಜಮಾನ-ಸೇವಕ, ಭೂಮಾಲೀಕ–ರೈತ, ರಾಜ–ಪ್ರಜೆ ಇತ್ಯಾದಿ ವಿವಿಧ ಬಗೆಯ ಮಾನವ–ಮಾನವ ಸಂಬಂಧಗಳು ಶುದ್ಧವಾಗಿ ರುತ್ತವೆ ಅಲ್ಲಿ ಮೋಸ, ವಂಚನೆಗಳಿಗೆ ಅವಕಾಶವಿರುವುದಿಲ್ಲ. ಇದನ್ನೇ ಸಮ್ರಾಟ ಅಶೋಕ ತನ್ನ ಶಾಸನಗಳಲ್ಲಿ 'ಸಂಪ್ರತಿಪತ್ತಿ' ಎಂದು ವರ್ಣಿಸಿರುವುದು. ಯಾರೊ ಬ್ಬರೂ ತಮ್ಮ ಸ್ಥಾನದಲ್ಲಿ ಅಮರ್ಯಾದೆಯಿಂದ ನಡೆದು ಕರ್ತವ್ಯಭ್ರಷ್ಟರಾಗದ ಇಂತಹ ಸುಸಂಸ್ಕೃತ ಸಮಾಜ ಹಾಗೂ ಕುಟುಂಬ ವ್ಯವಸ್ಥೆಯನ್ನೇ ರಾಮಾಯಣ ದಂತಹ ಮಹಾಕಾವ್ಯ ವರ್ಣಿಸಿರುವುದು ಮುಖ್ಯವಾದ ಈ ಸಾಮಾಜಿಕ ಬಾಧ್ಯತೆ ಗಳನ್ನೇ ನಮ್ಮ ಧರ್ಮದಲ್ಲಿ ದೇವಯಜ್ಞ, ಪಿತೃಯಜ್ಞ, ಋಷಿಯಜ್ಞ, ನರಯಜ್ಞ, ಭೂತಯಜ್ಞಗಳೆಂಬ ಐದು ರೀತಿಯ ಕರ್ತವ್ಯಕರ್ಮಗಳೆಂದು ಕರೆದಿರುವುದು. ಮಾನ ವನ ಸಾಮಾಜಿಕ ಜೀವನ ಇಂತಹ ಪ್ರಾಥಮಿಕ, ರಚನಾತ್ಮಕ ಬಾಂಧವ್ಯಗಳ ಮೇಲೆಯೇ ಅವಲಂಬಿತವಾಗಿದೆ. ಮೊಟ್ಟ ಮೊದಲು ಗುರುಶಿಷ್ಯನಿಗೆ ಕಲಿಸುವುದು 'ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯ ದೇವೋ ಭವ, ಅತಿಥಿ ದೇವೋ ಭವ' ಎಂಬ ಮಾತನ್ನೇ ಇಲ್ಲಿ ದೈವೀಕರಿಸಿದ್ದು ಮಾನವ ಜೀವಿ ಹಾಗೂ ಪರಮಾತ್ಮನ ನಡುವಣ ಸಂಬಂಧದ ಪ್ರತೀಕವನ್ನೇ ಎಂಬುದನ್ನು ಮರೆಯಲಾಗದು.

ಕುಟುಂಬ ಜೀವನದಲ್ಲಿ ಗಂಡಹೆಂಡಿರ ಬಾಂಧವ್ಯವು ಹಿಂದೂ ಧರ್ಮದಲ್ಲಿ ಕೇವಲ ಭೋಗಕ್ಕಾಗಿ ಅಲ್ಲ. ದಂಪತಿಗಳ ದೇಹಗಳು ಒಂದಾಗುವುದರೊಂದಿಗೆ ಅವರ ವ್ಯಕ್ತಿತ್ವಗಳೂ ಪರಸ್ಪರ ಬೆರೆಯಬೇಕು, ಒಬ್ಬರಿಗಾಗಿ ಇನ್ನೊಬ್ಬರು ಬದುಕು ವಂತಾಗಬೇಕು. ಸಾಮಾಜಿಕವಾಗಿಯಾಗಲಿ ಆಧ್ಯಾತ್ಮಿಕವಾಗಿಯಾಗಲಿ ಗಂಡ ಹೆಂಡತಿ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಪರಿಪೂರ್ಣರೆನ್ನುವಂತಿಲ್ಲ. ಗಂಡನು 'ಪುರುಷ'ನ ಹಾಗೂ ಹೆಂಡತಿಯು 'ಪ್ರಕೃತಿ'ಯ ದ್ಯೋತಕ. ಹೊಸಹುಟ್ಟು ಪಡೆಯುವ ಸಂತಾನ ದಿಂದಾಗಿ ಇವರಿಬ್ಬರ ಮಿಲನವೂ ಒಂದು ಸಾಮಾಜಿಕ ಮೌಲ್ಯವುಳ್ಳ ಸಂಸ್ಕಾರ, ಒಂದು ಪವಿತ್ರ ಕರ್ಮ. ಹೀಗೆ ಭೋಗದ ಜೊತೆಗೇ ಸಾಮಾಜಿಕ ಜವಾಬ್ದಾರಿ, ತ್ಯಾಗ ಮತ್ತು ಸೇವೆಗಳೂ ಹಿಂದೂ ವಿವಾಹದ ಅವಿಭಾಜ್ಯ ಅಂಗಗಳಾಗುತ್ತವೆ. ಹೊಸ ದಂಪತಿಗಳು ಲಕ್ಷ್ಮೀನಾರಾಯಣಸ್ವರೂಪವೆಂದು ಆದರಿಸಲ್ಪಡುವಂತೆಯೇ ಹುಟ್ಟುವ ಮಗುವು ಕೃಷ್ಣನ ಅವತಾರವೆಂದು ಭಾವಿಸಲ್ಪಡುತ್ತಾರೆ. ಭೋಗಪಡುವುದಕ್ಕಾಗಿಯೇ

ಪಡೆಯುವ ಸಾಮಾಜಿಕ ಮನ್ನಣೆಯೆ ಮದುವೆ ಎಂಬ ಪಾಶ್ಚಾತ್ಯ ಅಭಿಪ್ರಾಯವನ್ನು ಹಿಂದೂಧರ್ಮ ಒಪ್ಪುವುದಿಲ್ಲ. ಒಂದು ಸಲ ನಡೆದ ವಿವಾಹ ಜನ್ಮವಿಡೀ ಸಿಂಧುವಾಗಿರ ಬೇಕೆಂದು ನಿರೀಕ್ಷಿಸಲಾಗುತ್ತದೆ. ಗೋತ್ರವನ್ನು ಬದಲಾಯಿಸಿಕೊಂಡು ಪತಿಗೃಹಕ್ಕೆ ಬರುವ ಹೆಣ್ಣನ್ನು ಆಧ್ಯಾತ್ಮಿಕವಾಗಿ ಸಹ ಒಪ್ಪಿಕೊಂಡು ಪತಿಯು ಧರ್ಮಕರ್ಮಗಳೆರಡರಲ್ಲಿಯೂ ಪಾಲುದಾರಳನ್ನಾಗಿ ತೆಗೆದುಕೊಳ್ಳುವುದರಿಂದ ವಿಧವೆಯನ್ನು ಕನ್ಯೆಯಂತೆ ಇನ್ನೊಮ್ಮೆ ಮದುವೆ ಮಾಡಿಕೊಡಲು ಹಿಂದೂಧರ್ಮ ಒಪ್ಪುವುದಿಲ್ಲ. ಮದುವೆಯಾದ ಪತ್ನಿಗೆ ಪತಿಯ ಎಲ್ಲ ಜವಾಬ್ದಾರಿಯೂ ಆತನ ವ್ಯಕ್ತಿತ್ವದಲ್ಲಿ ಸಮಾನಭಾಗವೂ ದೊರೆಯುವುದೇ ಇದಕ್ಕೆ ಕಾರಣ. ಇಂದಿನ ಕಾನೂನಿನಲ್ಲಿ ವಿವಾಹ ಭಂಗ ಹಾಗೂ ಪುನರ್ವಿವಾಹಗಳಿಗೆ ಅವಕಾಶ ಕಲ್ಪಿಸಲಾಗಿದ್ದರೂ, ಯಾವ ತಪ್ಪನ್ನೂ ಮಾಡದ ಮಕ್ಕಳಿಗೆ-ಕಾನೂನಿನಲ್ಲಿ ಮಾತ್ರವೇ ಆಗಲಿ–ತಂದೆತಾಯಿಗಳ ಬದಲಾವಣೆಯಂಥ ಭಾವನಾತ್ಮಕ ಆಘಾತ ಮತ್ತು ಹಿಂಸೆಯ ಬಗ್ಗೆ ಯಾವ ಪರಿಹಾರವೂ ಇಲ್ಲ. ಇನ್ನು ಆಧ್ಯಾತ್ಮಿಕವಾಗಿಯಂತೂ ಇಂಥ ಬದಲಾವಣೆ ಅಸಾಧ್ಯವಷ್ಟೇ ಅಲ್ಲ, ಅಚಿಂತ್ಯ ಕೂಡ. ಸ್ತ್ರೀಯ ಬಗೆಗಿನ ಇಂಥ ಕಟ್ಟುಪಾಡುಗಳು ಹಿಂದೂಸಮಾಜದಲ್ಲಿ ಅವಳ ಔನ್ನತ್ಯದ, ಪಾವಿತ್ರ್ಯದ, ಸುಸಂಸ್ಕೃತಿಯ ರಕ್ಷಣೆಗಾಗಿ, ಅವಳ ಮೇಲಣ ಪ್ರೀತಿಗೌರವಗಳ ದ್ಯೋತಕವಾಗಿ ಇವೆಯಲ್ಲದೆ ಈಚೆಗೆ ತಿಳಿಯಲಾಗಿರುವಂತೆ ಪುರುಷಪ್ರಧಾನ ಸಮಾಜವು ಸ್ತ್ರೀಯ ಮೇಲೆ ನಡೆಸಿದ ದೌರ್ಜನ್ಯದ, ಶೋಷಣೆಯ ಕುರುಹಾಗಿ ಅಲ್ಲ.

ವ್ಯಕ್ತಿಸ್ವಾತಂತ್ರ್ಯ–ವೈಯಕ್ತಿಕ ಹಕ್ಕುಬಾಧ್ಯತೆಗಳ ಪದವಾದ ಪಾಶ್ಚಿಮಾತ್ಯ ಧೋರಣೆಯನ್ನು ತಳೆಯುವವರು ಇಂದು ಮಾನವೀಯ ಮೌಲ್ಯವುಳ್ಳ ಹಿಂದೂ ವೈಷ್ಣವ (ಭಕ್ತಿಪರ) ಚಿಂತನೆಯನ್ನೂ, ಬೌದ್ಧ ಚಿಂತನೆಯನ್ನೂ ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗದೆ,ಅವುಗಳಲ್ಲಿನ ಖಿಲವಾಗುತ್ತಿರುವ ಕೆಲವು ಅಂಶಗಳನ್ನೇ ಆರಿಸಿ ಉದಾಹರಿಸುತ್ತ (negative) ವೆಂದು ಹಳಿಯುತ್ತಾರೆ. ಹತ್ತು-ಹನ್ನೆರಡು ಶತಮಾನಗಳ ಕಾಲ ಸಮಾಜವನ್ನು ಸಮರ್ಥವಾಗಿ ರಕ್ಷಿಸಿ ಮುನ್ನಡೆಸಿದ ಮೌಲ್ಯಗಳು ಕೇವಲ ಅರ್ಧ ಶತಮಾನದ ವಿಜ್ಞಾನ-ವಾಸ್ತವತೆಗಳ ಪ್ರಭಾವಕ್ಕೆ ಸಿಕ್ಕಿ ಅಪ್ರಯೋಜಕವೆನ್ನಿಸಿಬಿಟ್ಟಿರುವುದು ತಮಾಷೆಯಾಗಿದೆ. ಆಧ್ಯಾತ್ಮಿಕ ಪ್ರಧಾನವಾದ ಭಾರತೀಯ ಚಿಂತನೆ ನಿಜವಾಗಿ ನೇತ್ಯಾತ್ಮಕವೆ? ತ್ಯಾಜ್ಯವೆ? ಇದರಲ್ಲಿ ಈ ವಿಜ್ಞಾನಯುಗಕ್ಕೆ ಅರ್ಥವತ್ತಾಗಬಹುದಾದ, ಉಪಯುಕ್ತವಾಗಬಹುದಾದ ಇತ್ಯಾತ್ಮಕ (positive) ಅಂಶಗಳಿಲ್ಲವೆ? ಈ ಪ್ರಶ್ನೆ ಇಂದು ಅಸಂತವೇನಿಲ್ಲ. ಸ್ವತಂತ್ರಭಾರತ ಸಂವಿಧಾನವು ರಾಷ್ಟ್ರವನ್ನು (secular) ವನ್ನಾಗಿ ರೂಪಿಸಿರುವುದು ಪಾಶ್ಚಾತ್ಯಪ್ರಭಾವದಿಂದೇನಲ್ಲ. ಎಲ್ಲ ಧರ್ಮಗಳೂ ಹೇಳುವುದು ಒಂದನ್ನೇ ಎಂಬುದು ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾದ ಸಂಗತಿ. ಏಕೆಂದರೆ ಅಪೌರುಷೇಯವಾದ, ಸನಾತನವಾದ, ಶುದ್ಧ ಜೀವನದ ನೈತಿಕ ತಳಹದಿಯ ಮೇಲೆ ನಿಂತಿರುವ ಹಿಂದೂಧರ್ಮದಲ್ಲಿ ಇಲ್ಲದ್ದು ಬೇರೆ ಯಾವ ಪೌರುಷೇಯವಾದ ಧರ್ಮದಲ್ಲಿ ಇರಬಲ್ಲುದು? ಪರಮತಸಹಿಷ್ಣುತೆ ಭಾರತೀಯ ಸಂಸ್ಕೃತಿಯ ಒಂದು ಮುಖ್ಯಲಕ್ಷಣವೇ ಆಗಿದೆ. ಎಲ್ಲರೂ ನನ್ನವರು, ಇಡೀ ವಿಶ್ವವೇ ನನ್ನ ಕುಟುಂಬ ಎಂಬ ಹಿಂದೂ ಭಾವನೆಗಿಂತ ಇತ್ಯಾತ್ಮಕವಾದದ್ದು, ಮಾನವೀಯವಾದದ್ದು ಬೇರೆ ಏನಿದೆ?

ವೇದ ಮತ್ತು ವೇದಾಂಗಗಳು

ಎ. ಎಸ್. ವೆಂಕಟನಾಥನ್

ರಂಗನಾಥಂ ಪ್ರಣಮ್ಯಾದೌ ಪ್ರಾಚಾರ್ಯಂ ಯೋಗಿಪುಂಗವಮ್ ।
ಶ್ರೀ ವಾಸರಾಘವಂ ತಾತಂ ಆಚಾರ್ಯಂ ವೇದಯೋಗಿನಮ್ ॥
ವೇದ–ವೇದಾಂಗ-ತತ್ತ್ವಸ್ಯ ಸ್ಪಾರ್ಶಭೂಮಿ ಪ್ರಕಾಶಕಮ್ ।
ತನೋತಿ ವೇಂಕಟೋನಾಥಃ ಸಮಾಸಾತ್ ಹೃದಯಂ ಪರಮ್ ॥

ಶುದ್ಧಜ್ಞಾನ ಸ್ವರೂಪವಾದ ವೇದವೇ ಸೃಷ್ಟಿ-ಸ್ಥಿತಿ-ಲಯಗಳಿಗೂ, ವಿಧಿ-ನಿಷೇಧಗಳಿಗೂ,ಪ್ರವೃತ್ತಿ-ನಿವೃತ್ತಿಗಳಿಗೂ,ಸರ್ವವಿಧ ವ್ಯವಹಾರಗಳಿಗೂ ಅತ್ಯುತ್ತಮವಾದ ತಳಹದಿ ಆಗಿದೆ. ಈ ರೀತಿಯಾದ ವೇದದ ಬಾಹ್ಯವಿಕಾಸವೇ ಜಗತ್ತು ಮತ್ತು ಅದರ ಸ್ಥಿತಿಗತಿಗಳೂ ಆಗಿರುತ್ತವೆ. ಈ ಪ್ರಕಾರವಾಗಿ ವೇದಮಯವಾಗಿರುವ ಪರಾಶಕ್ತಿಯೂ, ಸೂಕ್ಷ್ಮಶಕ್ತಿಯೂ, ಸ್ಥೂಲಶಕ್ತಿಯೂ ಜಗತ್ತಿನ ಪ್ರತಿಯೊಂದು ಹೆಜ್ಜೆಯೂ ಆಗಿದೆ. ಈ ಹೆಜ್ಜೆಗಳ ಆಮೂಲಾಗ್ರ ಸಂಬಂಧವೇ ಜೀವನದಲ್ಲಿ ಹಾಸುಹೊಕ್ಕಾಗಿದ್ದು ಜೀವಗತಿಯನ್ನು ಸಮಸ್ಥಿತಿಯಲ್ಲಿರಿಸುತ್ತದೆ. ಆದಕಾರಣ ಋಷಿಗಳ ಜೀವನ ಸಂವಿಧಾನವು ಸ್ವತಸ್ಸಿದ್ಧವಾಗಿ, ಸಹಜಸಿದ್ಧವಾಗಿ, ಆತ್ಮಸಿದ್ಧವಾಗಿ ಆಧ್ಯಾತ್ಮಿಕ ಆಧಿದೈವಿಕ, ಆಧಿಭೌತಿಕದ ಹೆಜ್ಜೆಗಳನ್ನು ಸ್ಪಷ್ಟ ಡಿಸುತ್ತಾ ದ್ಯಾವಾಪೃಥಿವೀವೃತ್ತದ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಆಗ "ಸ್ವದೇಶೋ ಭವನತ್ರಯಮ್" ಎಂದು ಮೂರು ಲೋಕಗಳೂ ನಮ್ಮ ದೇಶವೇ ಆಗಿರುತ್ತದೆ. ಈ ಸ್ಥಿತಿಯಲ್ಲಿ ಜೀವಗತಿಯನ್ನು ಪ್ರತಿಯೊಂದು ಹಂತದಲ್ಲಿಯೂ ಮೂಲ-ಸ್ಥೂಲ-ಸೋಪಾನಗಳಲ್ಲಿ ಅಳವಡಿಸಲ್ಪಟ್ಟು ಸದ್ವೃತ್ತಮಯವಾಗಿರಿಸಿ, ಸನಾತನಾರ್ಯ ಭಾರತ ಮಹರ್ಷಿಗಳು ಜೀವನ ಸಂವಿಧಾನವನ್ನು ವ್ಯವಸ್ಥಿತವಾಗಿ ರೂಪುಗೊಳಿಸಿದರು. ಈ ಹಂತದಲ್ಲಿ ಜೀವನವೇ ವೇದಮಯವಾಗಿದ್ದು ಅಂತರ್ಬಾಹ್ಯಗಳಲ್ಲಿ ಏಕರೂಪತೆಯನ್ನುಂಟು ಮಾಡುತ್ತದೆ. ಆಗ ಜೀವನದ ಸೋಪಾನಗಳು ಸ್ತುತಿ, ಕ್ರಿಯಾ, ಗಾನ, ಅಂತರ್ಮುಖ ಅನುಭವ ಎಂದು ವ್ಯಕ್ತವಾಗುತ್ತವೆ. ಇವುಗಳ ಪೈಕಿ ಸ್ತುತಿಯು ಅಂತರ್ಧರ್ಮವನ್ನೂ, ಕ್ರಿಯೆಯು ಅದರ ವಿಕಾಸವನ್ನೂ, ಗಾನ ಇದರ ಆಮೂಲಾಗ್ರದ ವ್ಯಾಪ್ತಿಯನ್ನೂ, ಅನುಭವ ಇವುಗಳಿಗೆ ಅನುಗುಣವಾಗಿರುವಿಕೆಯನ್ನೂ ಸ್ಪಷ್ಟಪಡಿಸುತ್ತದೆ. ಆದ್ದರಿಂದ ಈ ಹೆಜ್ಜೆಗಳೇ ಋಗ್ವೇದ, ಯಜುರ್ವೇದ, ಸಾಮದೇವ, ಅಥರ್ವವೇದ ಎಂದು ಸೃಷ್ಟಿಸಿದ್ಧವಾಗಿರುತ್ತವೆ. ಈ ಸ್ಥಿತಿಗಳು ಮಾನವ ಜೀವನದ್ದೇ ಆಗಿರುತ್ತವೆ.

ಆರ್ಷ ಜೀವನದ ಸಂವಿಧಾನದಲ್ಲಿ ಮೊಟ್ಟಮೊದಲ ಅಂತರ್ಧರ್ಮದ ವಿಕಾಸ, ಅದಕ್ಕೆ ತಕ್ಕ ಬಾಹ್ಯಧರ್ಮದ ಸ್ಥಿತಿ, ಇವೆರಡೂ ಅಂಗಾಂಗಿಭಾವರೂಪದಲ್ಲಿದ್ದು ಅದಕ್ಕೆ ತಕ್ಕ ದೇವಪೂಜಾತ್ಮಕವಾದ ಅಂತಃಕ್ರಿಯೆಯೂ, ಅದನ್ನು ಪ್ರತಿನಿಧಿಸುವ ಬಾಹ್ಯ

ಕ್ರಿಯೆಯೂ, ಅಂತೆಯೇ ವಿಕಾಸದ ಅಂತರ್ಧರ್ಮಕ್ಕೂ ಅದಕ್ಕೆ ಅನುಗುಣವಾದ ಅಂತಃಕ್ರಿಯೆಗೂ ವ್ಯಾಪ್ತಿಯುಳ್ಳ ಪ್ರಣವನಾದದ ವಿಕಾಸಸ್ಥಿತಿಯೂ, ಅನಂತರ ಪರಾಸ್ಥಿತಿಯಲ್ಲಿಯೇ ವೃತ್ತಪರಿಪೂರ್ಣತೆಯನ್ನುಂಟು ಮಾಡುವ ಅಂತರ್ಲಯಾತ್ಮಕವಾದ ಉಪಸಂಹಾರದ ಸ್ಥಿತಿಯೂ ಹಾಸು ಹೊಕ್ಕಾಗಿ ವ್ಯವಸ್ಥಿತವಾಗಿರುವುದೂ ಸ್ಪಷ್ಟವಾಗಿದೆ, ಸಿದ್ಧವಾಗಿದೆ. ಈ ಹಂತಗಳು ವೇದದ ಸೋಪಾನಗಳಾಗಿರುವುದರಿಂದ ವಿಕಾಸಪಥದಲ್ಲಿ ಋಗ್ಯಜುಸ್ಸಾಮಾಥರ್ವಗಳಾಗಿ ವ್ಯಕ್ತವಾಗಿವೆ. ಆದ್ದರಿಂದ ದೇವಸ್ತುತಿಯು ಋಕ್ಕಾಗಿದೆ. ದೇವಪೂಜಾತ್ಮಕ ಕ್ರಿಯೆಯು ಯಜುಸ್ಸಾಗಿದೆ. ಋಗ್ಯಜುಸ್ಸುಗಳ ವೃತ್ತದಲ್ಲಿ ಪ್ರಣವನಾದಾನುಸಂಧಾನವಾದ ಗಾನವು ಸಾಮವಾಗಿದೆ ಇದರ ಉಪಸಂಹಾರವು ಅಥರ್ವವಾಗಿದೆ. ಈ ಹಂತಗಳು ಆರ್ಷಮಯ ಜೀವನದಲ್ಲಿ ಓತಪ್ರೋತವಾಗಿ ಅನುಭವ ಗೋಚರವಾಗುತ್ತವೆ ಆದರೆ ಸೃಷ್ಟಿ-ಸ್ಥಿತಿ-ಲಯ-ಕಾಲಚಕ್ರ-ಗತಿ-ವೃತ್ತದಲ್ಲಿ ಅವ್ಯಕ್ತವಾಗಿರುವುದೂ ಮರೆಯಾಗಿರುವುದೂ ಅಸಮಸ್ಥಿತಿಯಲ್ಲಿ ಪ್ರಕೃತಿಯ ಪ್ರಭಾವವಿರುವುದರಿಂದ ಸಹಜವಾಗಿದೆ. ಪರಾಶಕ್ತಿಯ ಸಂಬಂಧವಿರುವವರಿಗೆ ಸ್ಥೂಲ ಸೂಕ್ಷ್ಮ ಪ್ರಕೃತಿ ಶಕ್ತಿ ಪ್ರಭಾವವೂ ಸ್ವರೂಪಕ್ಕೆ ಪೋಷಕವಾಗಿಯೇ ಇರುತ್ತದೆ. ಅದಿಲ್ಲದಿದ್ದಾಗ ಆವರಣವಾಗಿರುತ್ತದೆ. ಆಗ ಪುನಃ ಸದ್ವೃತ್ತದ ಅನುಭವಕ್ಕಾಗಿ ಹಿಂದಿನ ಹೆಜ್ಜೆಗಳು ಅತ್ಯಗತ್ಯ. ಈ ಕ್ರಮದಲ್ಲಿ ನಮ್ಮಲ್ಲಿಯೇ ಅವು ಅವಿಭಕ್ತವಾಗಿಯೂ, ವಿಭಕ್ತವಾಗಿಯೂ, ಕ್ರಮಬದ್ಧವಾಗಿಯೂ ಇದ್ದರೂ ಅವುಗಳ ಅವಿಚ್ಛಿನ್ನ ಸಂಬಂಧವು ಅನುಭೂತವಾಗುವುದಿಲ್ಲ. ಆಗ ವಿಭಕ್ತತೆಯಿಂದಲೇ ಅವಿಭಕ್ತತೆಗೆ ಹೋಗಬೇಕು. ಆದ್ದರಿಂದಲೇ ಇದರ ರಹಸ್ಯಜ್ಞರಾದ ವ್ಯಾಸರು (ಸೃಷ್ಟಿನಿಪ್ಪಶಕ್ತಿ ಸ್ವರೂಪರು) ಆ ಹೆಜ್ಜೆಗಳನ್ನು ವಿಭಾಗಿಸಿದರು. ಅಂದಿನಿಂದ ವಿಭಕ್ತ ವ್ಯವಹಾರವು ಅವಿಭಕ್ತತೆಯ ಅನುಭವಕ್ಕಾಗಿ ಪ್ರಾರಂಭವಾಗಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂದು ಪ್ರಸಿದ್ಧವಾಯಿತು.

ಪ್ರಾರಂಭದಲ್ಲಿ ಈ ವಿಭಕ್ತ ನಾಲ್ಕು ಸೋಪಾನಗಳೂ ಜೀವನದಲ್ಲಿ ಸಮನ್ವಿತವಾಗಿ ಕ್ರಿಯಾಶೀಲತೆಯನ್ನು ಬಾಹ್ಯಾಭ್ಯಂತರಗಳಲ್ಲಿ ಅಂಗಾಂಗಿಭಾವದಿಂದ ಉಂಟುಮಾಡುತ್ತಿದ್ದುದೂ ಸಹಜವಾಗಿದೆ.

ಕಾಲಪರಿವರ್ತನೆಯಿಂದ ಜೀವಗತಿಯಲ್ಲಿ, ತತ್ತ್ವಗತಿಯಲ್ಲಿ ಅನೇಕ ಪದರಗಳುಂಟಾಗಿರುವುದರಿಂದ ಸಮಸ್ಥಿತಿಗಾಗಿ ಹಲವಾರು ಸೋಪಾನಗಳು ಋಷಿಗಳಿಂದ ಗುರ್ತಿಸಲ್ಪಟ್ಟವು. ಇದೇ ಶಾಖೋಪಶಾಖೆಗಳಾಗಿರುವ ವೇದವಾಗಿದೆ.

ಯಾವಾಗ ಈ ರೀತಿ ವಿಭಿನ್ನ ಸೋಪಾನಗಳೇರ್ಪಟ್ಟವೋ ಆಗ ಜೀವನದಲ್ಲಿ ವೇದದ ಅವರೋಹಣಕ್ರಮವು ಮರೆಯಾಗಿ ಆರೋಹಣ ಕ್ರಮವು ರೂಢಮೂಲವಾಯಿತು. ಆಗ ಗುಣಿರೂಪವಾದ ವೇದಧರ್ಮವಿಕಾಸವು ಇಪ್ಪತ್ತೊಂದು ಸೋಪಾನಗಳಲ್ಲಿ ವಿಭಕ್ತವಾಯಿತು. ಇದನ್ನು ಕಂಡ ಋಷಿಗಳು ತಮ್ಮ ತಮ್ಮ ಮುದ್ರೆಗಳನ್ನು ಹೆಸರಿನ ಮೂಲಕ ಒತ್ತಿ ಋಗ್ವೇದ ಶಾಖೆಗಳ ರೂಪದಲ್ಲಿ ವ್ಯಕ್ತಪಡಿಸಿದರು. ಅವರೋಹಣ ಕ್ರಮದಲ್ಲಿ ಇಪ್ಪತ್ತೊಂದು ಹೆಜ್ಜೆಗಳಿಂದ ವೇದಧರ್ಮವಿಕಾಸದ ಅನುಭವವೂ ಪರಧರ್ಮವಿಕಾಸದ ಅನುಭವವೂ, ಉಂಟಾಗಿ ಅದರ ವೃತ್ತವನ್ನು ಹೊಂದಲು ಸುಲಭ

ವಾಗುತ್ತಿತ್ತು. ಇವುಗಳ ಪೈಕಿ ಮೊದಲನೆಯ ಹೆಜ್ಜೆಯು ದೃಢವಾಗಿರಬೇಕು. ಈ ರೀತಿಯ ದೃಢಹೆಜ್ಜೆಯೇ ಸ್ವಶಾಖೆಯಾಗಿ ಪರಿಣಮಿಸಿತು ಆದ್ದರಿಂದ ಸ್ವಶಾಖೆಯನ್ನು ಅಭ್ಯಸಿಸಿ ಮತ್ತೊಂದು ಶಾಖೆಯನ್ನು ಅಭ್ಯಸಿಸಬೇಕೆಂದು ಸತ್ಸಂಪ್ರದಾಯ ಶಿಷ್ಟಾಚಾರಗಳು ರೂಢಮೂಲವಾದುವು.

ಅಂತೆಯೇ ಕ್ರಿಯಾವಸ್ಥೆಯು ಪರಿಪೂರ್ಣತೆಯನ್ನು ಅದರ ಕೊನೆಯಲ್ಲಿಯೇ ವಿಕಾಸಗೊಳಿಸುತ್ತದೆ. ಆದ್ದರಿಂದ ಅದರ ವೃತ್ತವು ಶತಸಂಖ್ಯೆಯವರೆಗೂ ವ್ಯಾಪಿಸಿರುವುದರಿಂದಲೂ, ಏಕಶತಸಂಖ್ಯೆಯು ಪರಿಪೂರ್ಣತಾ ವಿಕಾಸದ್ಯೋತಕವಾಗಿರುವುದರಿಂದಲೂ ಕ್ರಿಯಾತ್ಮಕವಾದ ಯಜುರ್ವೇದವು ನೂರೊಂದು ಶಾಖೆಗಳಾಗಿ ಬೆಳಗಿತು.

ಅಂತೆಯೇ ಋಗ್ಯಜುರ್ವೃತ್ತಗಳ ವಿಸ್ತಾರವನ್ನುಂಟುಮಾಡುವ ಪ್ರಣವವಾದ ಗಾನಾತ್ಮಕವಿಸ್ತಾರವೂ ಯಜುಸ್ಸಿಗಿಂತಲೂ ವ್ಯಾಪಕವಾಗಿ ಸಹಸ್ರಸೋಪಾನಗಳುಳ್ಳದ್ದಾಗಿದೆ. ಅಂದರೆ ಗಾನವ್ಯಾಪ್ತಿಯು ಸಹಸ್ರಾರದವರೆಗೂ ವ್ಯಾಪ್ತವಾಗಿರುವುದರಿಂದ ಸಹಸ್ರಸಂಖ್ಯೆಯು ಯುಕ್ತಿಯುಕ್ತವಾಗಿದೆ ಆದ್ದರಿಂದ ಸಹಸ್ರಶಾಖೆಗಳಾಗಿ ಸಾಮದ ವಿಸ್ತಾರವಾಯಿತು.

ಅಂತೆಯೇ ಉಪಸಂಹಾರದ ಸ್ಥಿತಿಯು ಆರೋಹಣ ಕ್ರಮದಲ್ಲಿ ನವಸೋಪಾನಗಳಲ್ಲಿ ಪರಿಪೂರ್ಣತೆಯನ್ನು ಹೊಂದುತ್ತದೆ. ಅಂದರೆ ಮೂಲಾಧಾರದಿಂದ ಹಿಡಿದು ಸಹಸಾ ರದವರೆಗೆ ಏಳುಹೆಜ್ಜೆಗಳು, ಅನಂತರ ಪ್ರಣವನಾದವೃತ್ತ, ಅನಂತರ ಪರವೃತ್ತ ಒಟ್ಟು ಒಂಭತ್ತು ಸೋಪಾನಗಳಾಗಿರುವುದರಿಂದ ಒಂಭತ್ತು ಶಾಖೆಗಳಾಗಿ ಅಥರ್ವವೇದವು ವ್ಯಕ್ತವಾಯಿತು.

ಈ ಪ್ರಕಾರವಾಗಿ ವೇದವು ಅನೇಕ ಹಂತಗಳಲ್ಲಿ ತನ್ನ ಸ್ವರೂಪವನ್ನು ಮಹರ್ಷಿಗಳ ಮೂಲಕ ವ್ಯಕ್ತಪಡಿಸಿಕೊಂಡಿತು. ಮಹರ್ಷಿಗಳೂ ಕೂಡ ತಮ್ಮ ತಪಸ್ಯಾಭೂಮಿಕೆಯಿಂದ ಇವುಗಳನ್ನು ವ್ಯಕ್ತಪಡಿಸಿದರೂ, ಪ್ರಕೃತಿ ಭೇದದಿಂದ ಒಂದೊಂದು ಹೆಜ್ಜೆಯೇ ಒಂದೊಂದು ಕಡೆ ಮೊಟ್ಟಮೊದಲು ಅಳವಡಿಸಲ್ಪಟ್ಟು ಅನಂತರ ಇತರ ಹೆಜ್ಜೆಗಳೂ ಅಳವಡಿಸಲ್ಪಟ್ಟವು. ಈ ರೀತಿ ಶಾಖೆಗಳಾಗಿಯೂ ಮತ್ತು ನಾಲ್ಕು ಸೋಪಾನಗಳಾಗಿಯೂ ವಿಭಕ್ತವಾಗಿರುವ ವೇದದ ಅಧ್ಯಯನವು ತಮ್ಮ ತಮ್ಮ ಶಾಖೆಗೆ ಅನುಗುಣವಾಗಿ ಪ್ರಾರಂಭವಾಗಿ ನಾಲ್ಕು ವೇದಗಳನ್ನೂ ವ್ಯಾಪಿಸಿಕೊಂಡಿರುವುದು ಸತ್ಸಂಪ್ರದಾಯಸಿದ್ಧವಾಯಿತು. ಆದರೆ ಈ ರೀತಿಯ ಅಧ್ಯಯನವು ಲುಪ್ತವಾಗುತ್ತಿರಲು ತಮ್ಮ ತಮ್ಮ ಶಾಖೆಯ ಅಧ್ಯಯನ ಕ್ರಮವು ಮಾತ್ರ ಪ್ರತಿಷ್ಠಿತವಾಯಿತು.

ಈ ಪ್ರಕಾರ ಅಭಿವೃದ್ಧಿಗೊಂಡ ವೇದದ ಅಧ್ಯಯನದ ಅನುಭವ ಪರ್ಯವಸಾಯಿಯಾಗಿ ಆರೋಹಣ ಕ್ರಮದಲ್ಲಿ ಏರ್ಪಟ್ಟಾಗ ಆಯಾ ವೇದವನ್ನು ಅಧ್ಯಯನ ಮಾಡಿದವನೆಂದು ವ್ಯವಹಾರವು ಆರ್ಷಸಂಪ್ರದಾಯ ಸಿದ್ಧವಾಯಿತು. ಆದ್ದರಿಂದ ಯಜ್ಞ ಕ್ರಿಯೆಯು ಋಗ್ಯಜುಸ್ಸಾಮಾಥರ್ವಗಳಿಂದಲೇ ಪರಿಪೂರ್ಣವಾಗುವುದರಿಂದ "ಋಗ್ವೇದೇನ ಹೋತಾಕರೋತಿ, ಯಜುರ್ವೇದೇನಾಧ್ವರ್ಯುಃ, ಸಾಮವೇದೇನೋದ್ಗಾತಾ, ಸರ್ವೈರ್ಬ್ರಹ್ಮಾ" ಎಂಬ ಆರ್ಷ ಸಾಹಿತ್ಯವೂ ಪ್ರಕಾಶಿತವಾಯಿತು.

ಈ ಪ್ರಕಾರ ವಿಭಕ್ತ ಶಾಖೆಗಳ ಪೈಕಿ ಒಂದೊಂದು ಶಾಖೆಯ ಅಧ್ಯಯನ ದಿಂದಲೂ ಶಾಖಾಧ್ಯಕ್ಷನಾಗಿಯೂ, ವೇದಪುರುಷನಾಗಿಯೂ ಇರುವ ಪರಮಾತ್ಮನ ಅನುಭವವನ್ನು ಪಡೆಯುವುದೂ ಸ್ವತಸ್ಸಿದ್ಧವಾಗಿರುತ್ತದೆ ಮತ್ತು ಸೃಷ್ಟಿ ನಿಯತವೂ ಆಗಿರುತ್ತದೆ.

ಈ ಪ್ರಕಾರವಾಗಿ ವೇದದ ಅಧ್ಯಯನ ಕ್ರಮವು ಪ್ರಕೃತಿ ವಿಕೃತಿಗಳ ರೂಪ ಗಳಲ್ಲಿಯೂ, ಲಕ್ಷಣಗಳ ರೂಪದಲ್ಲಿಯೂ ವಿಸ್ತಾರಗೊಂಡು ಸ್ವರ ಸಂವಿಧಾನದ ಸ್ವತ್ತ್ವ ವನ್ನು ದೃಢಪಡಿಸುತ್ತಾ ಆಯಾ ಸ್ವರಾಧಿಷ್ಠಾನ ದೇವತಾತತ್ತ್ವಾನುಭೂತಿಯ ನ್ನುಂಟುಮಾಡಿ ತನ್ನದೇ ಆದ ಕ್ರಮದಲ್ಲಿ ತಾನಾಗಿಯೇ ಬೆಳಗುವುದು ಮತ್ತು ಚೇತನವನ್ನು ಬೆಳಗಿಸುವುದು. ಈ ವೇದಬೀಜವು ವೃಕ್ಷವಾಗಿ ವಿಕಾಸಗೊಂಡು ಪುನಃ ಬೀಜಭಾರದಲ್ಲಿ ಪ್ರತಿಷ್ಠಿತವಾಗುವುದು.

ವೇದದ ಅಧ್ಯಯನ ಕ್ರಮವು ಆರ್ಷಸಂಪ್ರದಾಯಗತಿ ವಿಸ್ತಾರವನ್ನುಂಟು ಮಾಡುತ್ತಾ ಅಧ್ಯೇತೃವಿನ ಪರಿಪೂರ್ಣತೆಯನ್ನೂ ಪ್ರಕಾಶಪಡಿಸುತ್ತಾ ಅವನಲ್ಲಿ ಸಮಸ್ತ ದೇವತಾ ಶಕ್ತಿಗಳ ಕ್ಷೇತ್ರಗಳನ್ನು ಉದ್ಬೋಧಗೊಳಿಸುತ್ತದೆ. ಉದ್ಬೋಧನೆ ಯಿಂದ ಸೃಷ್ಟಿನಿಷ್ಠ ಸಮಸ್ತ ವೈಷಮ್ಯಗಳೂ ನಿರ್ಮೂಲವಾಗುವುವು.

ಈ ರೀತಿಯಾಗಿರುವ ಅಂಗಿರೂಪದಲ್ಲಿ ಬೆಳಗುತ್ತಿರುವ, ವೇದದ ಅಧ್ಯಯನ ಜಂ೦ಂ ಕ್ರಮವು ಸರ್ವತೋಮುಖವಾಗಿ ವಿಕಾಸಗೊಳ್ಳಲು ಅಂಗಗಳು ಸಾಕ್ಷಾತ್ಕೃತ ಧರ್ಮರಾದ ಮಹರ್ಷಿಗಳಿಂದ ವೇದನಿಷ್ಠನಾಗಿಯೇ ಪ್ರಕಾಶಗೊಂಡವು. ಅಗ್ನ್ಯಭಿಲಿ ಷಿತ ಅರ್ಥಪ್ರಾಪಕವೇ ಅಂಗವಾಗಿರುತ್ತದೆ. ಇದರ ನಿಯತ-ವ್ಯವಸ್ಥಿತ-ಮುಖಗಳು ಆರು ಪ್ರಸಿದ್ಧವಾಗಿವೆ: ಇವೇ-ಶಿಕ್ಷಾ-ವ್ಯಾಕರಣ-ಛಂದಸ್ಸು-ನಿರುಕ್ತ-ಜ್ಯೋತಿಷ- ಕಲ್ಪವಾಗಿವೆ. ಅಂದರೆ ಮೂಲವಸ್ತುವು ತನ್ನನ್ನು ಆಮೂಲಾಗ್ರವಾಗಿ ಪರಿಚಯ ಮಾಡಿಕೊಡುವ ಮಾರ್ಗವೇ ಅಂಗವಾಗಿರುತ್ತದೆ.

ಈ ದಿಶೆಯಲ್ಲಿ ಶುದ್ಧ ಜ್ಞಾನ ವಿಸ್ತಾರಕವಾದ ಪ್ರಣವ ಸ್ವರೂಪವು ವಿಕಾಸ ಕ್ಷೇತ್ರದಲ್ಲಿ ಮುಂದುವರೆದಾಗ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಸ್ವರ, ವರ್ಣ, ಮಾತ್ರಾ, ಬಲ, ಸಾಮ, ಸಂತಾನ-ರೂಪಗಳಲ್ಲಿ ಗತಿಶೀಲವಾಗಿರುತ್ತದೆ. ಇವುಗಳೊಂ ದಿಗೆ ತನ್ನ ಸ್ವರೂಪವಾದ ವಿದ್ಯೆಯನ್ನು ಗ್ರಹಿಸುವ, ಗ್ರಹಿಸುವಂತೆ ಮಾಡುವ ಪದವೇ "ಶಿಕ್ಷಾ" ಎಂದಾಗಿರುತ್ತದೆ. ಆದ್ದರಿಂದಲೇ ಮಹರ್ಷಿಗಳಾದ ಪಾಣಿನಿಗಳು "ಶಿಕ್ಷ" ಧಾತುವಿನ ವಿವರಣೆಯನ್ನು "ವಿದ್ಯೋಪಾದಾನೇ" ಎಂದು ನೀಡಿದ್ದಾರೆ.

ವಿದ್ಯಾಯಾಃ ಪ್ರಣವಸ್ವರೂಪಾಯಾಃ ತದ್ವಿಕಾಸಭೂತಾಯಾಃ ತತ್ಸಾಧನ ಭೂತಾಯಾಶ್ಚ ಜ್ಞಾನಾನುಭೂತಿ ಪ್ರಾಪಕಸತ್ತಾಯಾಃ ಉಪಾದಾನಮ್ ಆಮೂಲಾಗ್ರಂ ಸ್ವಾನುಭೂತ್ಯಾಸ್ವಾದನಮ್ (ಪ್ರಣವಸ್ವರೂಪವಾದ, ಅದರ ವಿಕಾಸ ಸ್ವರೂಪವಾದ, ಅದರ ಸಾಧನಸ್ವರೂಪವಾದ, ಜ್ಞಾನದ ಅನುಭೂತಿಯನ್ನುಂಟು ಮಾಡುವ ವಿದ್ಯೆಯ ಅಡಿಯಿಂದ ಮುಡಿಯವರೆಗೆ ಅನುಭವದ ಮೂಲಕ ಆಸ್ವಾದನೆಯು) ಎಂಬ ಆರ್ಷ ವಿವರಣೆಯು ಹೃದಯಂಗಮವಾಗಿದೆ.

ಈ ವಿದ್ಯೆಯ ಉಪಾದಾನವಾಗಬೇಕಾದರೆ ಅದರ ವಿಭಾಗದ ಅರಿವೂ ಅತ್ಯಗತ್ಯ.

ಈ ಅರಿವು ಅವರ ವಿಭಾಜಕವಾದ ಪದ-ಮತ್ತು-ಅರ್ಥಗಳನ್ನು= ಅವುಗಳ-ವಿಕಾಸದ ಹಂತಗಳನ್ನು ತಿಳಿಸಿಕೊಡುವುದು ವ್ಯಾಕರಣವಾಗಿದೆ. "ವಿ" "ಆಜ್" ಎಂಬ ಉಪಸರ್ಗಗಳಿಂದ ಕೂಡಿರುವ "ಕೃ" ಧಾತುವು ಈ ರೀತಿಯ ವಿಭಾಗವನ್ನು ನಿರೂಪಿಸುತ್ತದೆ. ಈ ವಿಭಾಗವು ಆಭ್ಯಂತರವಾಗಿಯೂ, ಬಾಹ್ಯವಾಗಿಯೂ ಇರುವುದರಿಂದ ಆರ್ಥಿಕ-ಶಾಬ್ದಿಕ ಎಂದಾಗುತ್ತದೆ. ಪ್ರಣವ ಬಿಂದುವಿನಿಂದ ನಾದದ ವಿಸ್ತಾರಕವಾದ ಈ ಎರಡು ಹಂತಗಳು "ಆರ್ಥೀವ್ಯಾಕ್ರಿಯಾ" ಮತ್ತು "ಶಾಬ್ದೀವ್ಯಾಕ್ರಿಯಾ" ಎಂದು ಸಿದ್ಧವಾಗುತ್ತವೆ. ಆರ್ಥೀವ್ಯಾಕ್ರಿಯೆಯು ಮೂಲದಿಂದ ವಿಕಾಸಗೊಳ್ಳುತ್ತಿರುವ ಅರ್ಥಸ್ವರೂಪವನ್ನೂ, ಶಾಬ್ದೀವ್ಯಾಕ್ರಿಯೆಯು ಅದನ್ನು ದೊರಕಿಸಿಕೊಡುವ ಮತ್ತು ಅದರ ವಿಕಾಸಾಶ್ರಯವಾದ ಬಾಹ್ಯ ಸ್ಥಿತಿಯಲ್ಲಿರುವ ಪದದವಿಕಾಸವನ್ನೂ ಸ್ಪಷ್ಟಪಡಿಸುತ್ತದೆ. ಆದ್ದರಿಂದಲೇ ಪದ-ಪದಾರ್ಥ-ಸಂಬಂಧವು ನಿತ್ಯ= ತನ್ನ ತನ್ನ ಹೆಜ್ಜೆಯಲ್ಲಿಯೇ ಇರುವುದೆಂದು ಅದನ್ನು ತತ್ತ್ವ ಭೂಮಿಕೆಯಲ್ಲಿ ವಿವಿಧ ಮಹರ್ಷಿಗಳು ನಿತ್ಯವೆಂದು ತಿಳಿಸಿದರು. "ಔತ್ಪತ್ತಿಕಸ್ತು ಶಬ್ದಸ್ಯಾರ್ಥೇನ ಸಂಬಂಧಃ" ಎಂದು. ಈ ವ್ಯಾಕ್ರಿಯೆಯಿಂದ ಮೂಲದಿಂದ ವಿಕಾಸಕ್ಕೂ ವಿಕಾಸದಿಂದ ಮೂಲಕ್ಕೂ ಹೋಗುವ ದೃಢ ಹೆಜ್ಜೆಗಳೇರ್ಪಡುತ್ತವೆ. ಆಗ ಪ್ರಕೃತಿ= ಮೂಲ; ಪ್ರತ್ಯಯ= ಅದನ್ನು ವಿಕಾಸಗೊಳಿಸುವ ಹೆಜ್ಜೆ ಎಂದು ಇದರ ಪರಿಚಯವನ್ನು ವ್ಯಾಕರಣವು ಮಾಡಿಕೊಡುತ್ತದೆ. ಈ ವಿಭಾಗದಿಂದ ವಿದ್ಯೆಯು ಸ್ವರೂಪತಃ ವಿಕಾಸತಃ ಉಪಾತ್ತವಾಗುತ್ತದೆ.

ಈ ರೀತಿ ವ್ಯಾಕ್ರಿಯೆಯು ಉಂಟಾದಾಗ ಅದರ ವಿಶಿಷ್ಟ ಮಟ್ಟುಗಳೇರ್ಪಡುತ್ತವೆ ಅವು ವಿದ್ಯೆಯ ವಿಕಾಸ ಹಂತಗಳನ್ನು ಪರಿಚಯ ಮಾಡಿಕೊಡುವ ಸೋಪಾನವಾಗಿರುತ್ತವೆ. ಇವು ವ್ಯವಸ್ಥಿತವೂ ನಿಯತವೂ ಆಗಿರುತ್ತವೆ. ಇವೇ ಛಂದಸ್ಸು.

ವಿದ್ಯೆಯು ವಿಕಾಸಗೊಳ್ಳುವಾಗ ಸ್ವರೂಪತಃ ವಿಕಾಸಗೊಂಡರೂ ಆವರಣದಿಂದ ಕೂಡಿರುತ್ತದೆ. ಅದು ಮೂಲಾಸ್ವಾದಕವಾಗಿರುತ್ತದೆ. ಈ ಆವರಣ ಭಂಗವಾದಾಗ ಮಾತ್ರ ಮೂಲಾನುಭವವಾಗುತ್ತದೆ. ಇದರ ಬಾಹ್ಯ ಹೊದಿಕೆಯೇ ಛಂದಸ್ಸು. ಈ ದೃಷ್ಟಿಯಿಂದಲೇ–ಪಾಣಿನಿಗಳು-"ಛದಿರ್= ಆವರಣೇ" ಎಂದು ಅದರ ಪರಿಚಯವನ್ನು ಕೊಡುತ್ತಾರೆ. ಇದರ ಮೂಲಕ ಮುಂದೆ ಸಾಗಿದಾಗ ವಿದ್ಯೆಯ-ಸ್ವರೂಪವು ಅರಳಿ ನಮ್ಮಲ್ಲಿ ತುಂಬಿಕೊಂಡು ಪರಿಪೂರ್ಣತೆಯನ್ನುಂಟುಮಾಡುತ್ತದೆ. ಈ ಪರಿಪೂರ್ಣತೆಯೇ "ಆಹ್ಲಾದ"ವಾಗಿರುತ್ತದೆ. ಇದನ್ನೇ "ಚದಿ= ಆಹ್ಲಾದನೇ" ಎಂದು ಪಾಣಿನಿಗಳು ಹೇಳಿರುತ್ತಾರೆ.

ಈ ಕ್ರಮದಲ್ಲಿ ಸ್ವರೂಪದ ಪರಿಚಯವನ್ನು ತನ್ನದೇ ಆದ ಸ್ವರ ಮೊದಲಾದ ಸಂವಿಧಾನದಿಂದಲೂ, ವಿಭಾಗದಿಂದಲೂ, ಮಟ್ಟುಗಳಿಂದಲೂ ಮಾಡಿಕೊಡುವ ಹೆಜ್ಜೆಯು, ಅದರ ಕ್ಷೇತ್ರವು ಸ್ವತಸಿದ್ಧವಾಗಿರುತ್ತದೆ. ಈ ವಿಶಿಷ್ಟ ಸ್ಥಿತಿಯಿಂದ ಇರುವ ಪದಾರ್ಥ ನಿಶ್ಚಿತ ಸ್ವರೂಪವನ್ನು ಆರ್ಷಮನೋಧರ್ಮದೊಂದಿಗೆ ಸವಿಸುವ ಹೆಜ್ಜೆಯೂ ವ್ಯಕ್ತವಾಗಿರುತ್ತದೆ. ಈ ಅಭಿವ್ಯಕ್ತತೆಯೇ ನಿರುಕ್ತವಾಗುತ್ತದೆ. ಇದು ಮಂತ್ರದ ಹೃದಯವನ್ನು ಪ್ರಕಾಶಪಡಿಸಲು ಪದಾರ್ಥಕ್ಷೇತ್ರವ್ಯಾಪ್ತಿಯನ್ನು ಆರ್ಷ ಭೂಮಿಕೆಯಲ್ಲಿ ಸ್ಪಷ್ಟಪಡಿಸುತ್ತದೆ. ಇದರ ಹೆಜ್ಜೆಯು ಇಲ್ಲದೇ ವೇದವು ತನ್ನ ಪ್ರಕಾಶ

ವನ್ನು ಸ್ಥೂಲದಲ್ಲಿ ಮಾಡಲಾಗುವುದಿಲ್ಲ. ಅದಕ್ಕಾಗಿ ವಿಶಿಷ್ಟ ಸಾಧನ ಸಂಪತ್ತು ಬೇಕು. ಇದು ಮಂತ್ರದ ಮತ್ತು ಅದರ ತಾತ್ತ್ವಿಕ ಭೂಮಿಕೆಯ ಹೃದಯವನ್ನು ಪ್ರಕಾಶಪಡಿಸಲು ಕೇಂದ್ರಸ್ಥಾನಗಳಲ್ಲಿರುವ ಆರ್ಷಪದಾರ್ಥಗಳ ವಿವರಣೆಗಳನ್ನು ಕೊಡುತ್ತಾ ನಿಶ್ಚಿತ ಅನುಭವವನ್ನು ಆಸ್ವಾದನೆಯೊಂದಿಗೆ ಉಂಟುಮಾಡುತ್ತದೆ. ಇದೇ ನಿರುಕ್ತ.

ಈ ರೀತಿಯಾಗಿ ವೇದಾರ್ಥತತ್ತ್ವವನ್ನು ಆಸ್ವಾದಿಸಬೇಕಾದರೆ ಅದಕ್ಕೆ ತಕ್ಕ ಕಾಲ ದೇಶಗಳ ಆಶ್ರಯವೂ ಸ್ವತಸಿದ್ಧವಾಗಿ ಬೇಕಾಗಿರುತ್ತದೆ. ಸಹಜ ಕಾಲ ದೇಶ ವ್ಯಾಪ್ತಿಗೆ ಅಳವಡಿಸಲ್ಪಟ್ಟ ಸ್ಥಿತಿಯೇ ಮೂಲಾಸ್ವಾದನೆಯನ್ನು ಮತ್ತು ಅದರ ಅಸ್ತಿತ್ವವನ್ನು ಸ್ಥಿರಪಡಿಸುತ್ತದೆ. ಈ ಅಂತರ್ಧರ್ಮವು ಬಾಹ್ಯದಲ್ಲಿ ವಿಕಾಸವಾಗ ಬೇಕಾದರೆ ಕಾಲ ದೇಶ ವೃತ್ತದ ಅಭಿನ್ನತೆಯು ಆತ್ಮಸಿದ್ಧವಾಗಿರುತ್ತದೆ. ಈ ಅಭಿನ್ನ ಸ್ಥಿತಿಯೇ ಜ್ಯೋತಿಷವಾಗಿರುತ್ತದೆ. ಇದರ ಮೂಲಕ ಪದಾರ್ಥತತ್ತ್ವದ ಸೋಪಾನ ಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪರಿಪೂರ್ಣತೆ ಅನುಭವ ಜನ್ಯ ಸಂತುಷ್ಟಿ ಯನ್ನು ಹೊಂದಿ, ಪದಾರ್ಥವಿಭಾಗಗಳನ್ನು ಆಸ್ವಾದಿಸಿ ಅನಂತರ ಗುಣಿಯಲ್ಲಿರುವ ಗುಣಗಳೊಂದಿಗೆ ಚೇತನನು ಹಾಸುಹೊಕ್ಕಾಗಿ ಒಂದಾಗಿರುತ್ತಾನೆ. ಇದಿಲ್ಲದಿದ್ದರೆ ಯಾವುದೂ ಪೂರ್ಣತೆಯಲ್ಲಿ ನಿಲ್ಲುವುದಿಲ್ಲ. ದೇಶಕಾಲ ಅಂದರೆ "ದಿಶ =ಅತಿಸರ್ಜನೇ" "ಕಲ = ಸಂಖ್ಯಾನೇ", ಎಂಬ ಮಹರ್ಷಿಗಳ ವಿವರಣೆಯಿಂದ ಪ್ರಾಕೃತ ಸ್ಥಿತಿಯಲ್ಲಿ ದ್ದರೂ ಅಧರ್ಮಗಳ ಸೋಂಕಿಲ್ಲದೇ ಊರ್ಧ್ವಗತಿಯುಳ್ಳವನಾಗಿ ಚೇತನನು ತನ್ನ ಪೂರ್ಣತಾ ಅನುಭೂತಿ ಕಡೆಗೆ ಸಾಗುತ್ತಾ ತನ್ನತನವನ್ನು ಬಿಟ್ಟು ಅವತನದೊಂದಿಗೆ ತಾದಾತ್ಮ್ಯ ಅನುಭವವನ್ನು ಪಡೆಯುತ್ತಾನೆ. ಈ ಸ್ಥಿತಿಯು ಬಾಹ್ಯವೃತ್ತದಲ್ಲಿ ದೇಶ ಕಾಲಗಳ ಮೂಲಕವೇ ಉಂಟಾಗುತ್ತದೆ. ಇದೇ ಜ್ಯೋತಿಷ.

ಈ ಸ್ಥಿತಿಯಿಂದ ತನ್ನ ಜೀವನದಲ್ಲಿಯೇ ಹಿಂದಿನ ಸೋಪಾನಗಳನ್ನು ಪಡೆದು ಆಸ್ವಾದಿಸುತ್ತಾ ಸಕ್ರಿಯನಾಗಿ ಅಂದರೆ ಪ್ರಯೋಗಬದ್ಧನಾಗುತ್ತಾನೆ. ಪ್ರಯೋಗಬದ್ಧ ತೆಯು ಚೇತನದಲ್ಲಿಯೇ ಅರವಗತಿಯೊಂದಿಗೇ ಇರುತ್ತದೆ. ಇದರ ಅಭಿವ್ಯಕ್ತತೆಗಾಗಿ ಇರುವಸ್ಪಷ್ಟ, ನಿಶ್ಚಿತ ಮತ್ತು ಪರಿಪೂರ್ಣತಾದ್ಯೋತಕ ಸ್ಥಿತಿಯು ಪರಸೂಕ್ಷ್ಮ, ಸ್ಥೂಲ ಗಳಲ್ಲಿ ಏಕಸೂತ್ರತೆಯಿಂದ ಸತ್ಯ ನಿಷ್ಠವಾಗಿದ್ದು ಶಿಕ್ಷೆಯ ಹಂತವನ್ನು ಹೊಂದಿ ಆತ್ಮಾ ರಾಮತೆಯಲ್ಲಿ ಪರ್ಯವಸಾನಗೊಳಿಸುವುದೇ ಕಲ್ಪ. ಈ ಕ್ರಮದಲ್ಲಿ ಒಂದು ಅಂಗಿಯು ತನ್ನ ಹೆಜ್ಜೆಗಳನ್ನು ತನ್ನದೇ ಆದ ವಿಶಿಷ್ಟ ಸಾಧನ ಸಂಪತ್ತುಗಳೊಂದಿಗೆ ಮುಂದುವರಿ ಸುತ್ತಾ ದಿವಿ ಭುವಿಗಳ ವೃತ್ತದ ಅನುಭವವನ್ನುಂಟುಮಾಡುತ್ತಾ ಆಮೂಲಾಗ್ರ ಪರಿ ಪೂರ್ಣಸ್ಥಿತಿಯಲ್ಲಿಯೇ ಅನುಭವಿಗಳನ್ನು ಪ್ರತಿಷ್ಠಿಸುತ್ತದೆ. ಒಟ್ಟಿನಲ್ಲಿ ಅಂಗಿಯ ಪರಿ ಪೂರ್ಣಾನುಭವ ದಿವ್ಯಹೆಜ್ಜೆಗಳೇ ಅಂಗವೆಂದು ಸಿದ್ಧವಾಗುತ್ತದೆ. ಈ ಅಂಗಗಳ ಹೆಜ್ಜೆಗ ಳೆಲ್ಲವೂ ಅಂಗಿಯಾದ ವೇದದಲ್ಲಿಯೇ ಆತ್ಮಸಿದ್ಧವಾಗಿ ನಿಲ್ಲುತ್ತವೆ, ಲಯವಾಗುತ್ತವೆ.

ಈ ಪ್ರಕಾರ ವೇದವು ಪರಾತ್ಪರನ ಪರಿಪೂರ್ಣ ಅನುಭವರೂಪವಾದ ಸ್ತುತಿಯು ವಿಕಾಸಪಥದಲ್ಲಿ ಕ್ರಿಯಾವೃತ್ತದಲ್ಲಿ ಗತಿಶೀಲವಾದಾಗ ತನ್ನದೇ ಆದ ವಿಸ್ತಾರದ ಹೆಜ್ಜೆ

ಗಳು ವ್ಯಕ್ತವಾಗುತ್ತವೆ. ಇವೇ ಅಂಗಗಳು. ಇವು ಅಂಗಿಯ ಅಭಿನ್ನ ಸೋಪಾನಗಳು. ಈ ಸೋಪಾನಗಳ ಆಶ್ರಯದಲ್ಲಿ ಕ್ರಿಯಾನಿಷ್ಠನಾಗಿ ಚೇತನನು ಅವನ ದಿವ್ಯ ಸಂಪತ್ತಿಯ ಅನುಭವವನ್ನು ಪ್ರತಿಕ್ಷಣದಲ್ಲಿ ಸವಿಯುತ್ತಾ ಆತ್ಮಕ್ರೀಡನೂ, ಆತ್ಮ ಪ್ರತಿಷ್ಠಿತನೂ ಆಗುತ್ತಾನೆ.

ಈ ರೀತಿ ಇರುವ ಅಂಗಗಳ ಹೆಜ್ಜೆಗಳೆಲ್ಲವೂ ಅಂಗಿಯೊಂದಿಗೇ ಹಾಸುಹೊಕ್ಕಾಗಿ ಒಂದಾಗಿದ್ದು, ತನ್ನಲ್ಲಿಯೇ ಅಂದರೆ ತನ್ನ ಅನುಭವ ಮಾತ್ರದಿಂದಲೇ ಪರಿಪೂರ್ಣತೆಯು ಉಂಟಾಗುವ ಸ್ಥಿತಿಯೂ ಸೃಷ್ಟಿಸಿದ್ಧವಾಗಿರುವುದು. ಈ ಸ್ಥಿತಿಯೇ "ಸಂಹಿತಾ" ಸ್ಥಿತಿ, ಅಂದರೆ ಅವಿಭಕ್ತತೆಯಲ್ಲಿ ವಿಭಕ್ತತೆಯ ಹೆಜ್ಜೆಗಳಿದ್ದರೂ ಅವಿಭಕ್ತತೆಯಿಂದಲೇ ಇರುವುದರಿಂದ ಒಟ್ಟುಗೂಡಿರುವ ಸ್ಥಿತಿ ಎಂದಾಗುತ್ತದೆ. ಅನಂತರ ಕ್ರಿಯಾವೃತ್ತಿ ವೇರ್ಪಟ್ಟಾಗ ಆ ಹೆಜ್ಜೆಗಳು ವ್ಯಕ್ತತೆಯನ್ನು ಪ್ರಕಟಿಸುತ್ತವೆ. ಇವು ಆ ಕ್ರಿಯೆಗಳ ವಿಸ್ತಾರ ಕ್ಷೇತ್ರಗಳ ರೂಪದಲ್ಲಿ ಅನುಭೂತವಾದಾಗ ಬ್ರಾಹ್ಮಣಗಳಾಗುತ್ತವೆ. ಈ ಸೋಪಾನಗಳು ಏಕಾಂತದಲ್ಲಿ ಮನನ-ಆಸ್ವಾದನೆಗಳ ಹಂತಗಳು ನಾನಾ ರೂಪದಲ್ಲಿ = ಸಮಷ್ಟಿರೂಪದಲ್ಲಿ ಸ್ವತಃ ಅಳವಡಿಸಲ್ಪಟ್ಟಿವೆ. ಇವೇ ಆರಣ್ಯಕ. ಇದು ಸ್ವರೂಪದ ಅನುಭವಕ್ಕೆ ಅನುಕೂಲವಾದ ಗತಿಯನ್ನು ನಿರೂಪಿಸುತ್ತಾ ಅದರ ಸತ್ತೆಯ ಪ್ರಮೇಯನ್ನುಂಟುಮಾಡುವ ದಿವ್ಯ ಸೋಪಾನವಾಗಿದೆ. ಈ ರೀತಿ ಅವ್ಯಕ್ತ ಸ್ಥಿತಿಯು ಕ್ರಿಯಾತ್ಮಕವಾಗಿ ಏಕಾಂತ ಸ್ಥಿತಿಯಲ್ಲಿ ಆಸ್ವಾದನೆಯನ್ನುಂಟುಮಾಡುತ್ತಾ ವೃತ್ತಿ ಪರಿಪೂರ್ಣತೆಗೆ ದ್ವಾರವಾಗಿರುತ್ತದೆ. ಈ ದ್ವಾರವೇ ಉಪನಿಷತ್ತಾಗಿದೆ. ಹಿಂದಿನ ಸೋಪಾನಗಳೆಲ್ಲವೂ ಅವ್ಯಕ್ತ ಸ್ಥಿತಿಯ ಸಾಮೀಪ್ಯವನ್ನುಂಟುಮಾಡುತ್ತವೆ. ಮತ್ತು ಅಲ್ಲಿಯೇ ಚೇತನಗತಿಯನ್ನು ಪ್ರತಿಷ್ಠಾಪಿಸುತ್ತವೆ. ಈ ರೀತಿಯ ಪ್ರತಿಷ್ಠೆಯೇ ಉಪನಿಷತ್ತಾಗಿದೆ.

ಉಪ + ನಿ + ಸದ್ ಎಂಬ ವಿಭಾಗವು ಈ ಪದದಲ್ಲಿರುವುದು. "ಸದ್" ಧಾತುವಿನ ವ್ಯಾಖ್ಯಾನವು ವಿಸರಣ—ಗತಿ—ಅವಸಾದನ—ಎಂದು ಮಹರ್ಷಿಪ್ರಕಾಶಿತವಾಗಿದೆ. ಪರತತ್ತ್ವದ ಸಾಮೀಪ್ಯವನ್ನು ಪಡೆದ ನಂತರ ಪ್ರಾಕೃತ ಧರ್ಮಗಳ ವಿಸರಣ = ಸಡಿಲತೆ, ಅಂದರೆ ಅವುಗಳೊಂದಿಗೆ ಅಂಟಿಕೊಳ್ಳದಿರುವುದು, ಅನಂತರ ಅದಕ್ಕೆ ತಕ್ಕಂತೆ ತನ್ನ ಹೆಜ್ಜೆಗಳಲ್ಲಿ-ಊರ್ಧ್ವರೇತಸ್ಕನಾಗಿ ಮುಂದೆ ಸಾಗುವುದು, ಅನಂತರ ಅವಸಾದನ = ಯಾವ ರೀತಿಯ ಬಂಧನದ ಸೋಂಕಿಲ್ಲದೇ ಅನವತನದಲ್ಲೇ ಸ್ಥಿರವಾಗಿರುವುದು. ಇದರ ಸ್ಥಿತಿಯಲ್ಲಿಯೇ ಸದ್ವೃತ್ತಮಯನಾಗಿ ವ್ಯವಹಾರವನ್ನುಂಟುಮಾಡುವುದು, ಈ ರೀತಿ ಉಪನಿಷದ್ಯೋಗಿಯಾಗಿ ಸಹಜಸಮಾಧಿ-ಸಿಂಹಾಸನಾಧಿರೂಢನಾಗಿ ತನ್ನ ಜೀವನಯಾತ್ರೆಯನ್ನು ಮಹರ್ಷಿಗಳ ಹೃದಯದ ಸವಿಯನ್ನು ಸವಿಯುತ್ತಾ ನಿರ್ವಹಿಸುತ್ತಿರುತ್ತಾನೆ.

ಒಟ್ಟಿನಲ್ಲಿ ಜಗತ್ತನ್ನೇ ಬೆಳಗುತ್ತಿರುವ ವೇದದ ಮಹಾಜ್ಯೋತಿಸ್ತಂಭದ ಪ್ರಕಾಶದಲ್ಲಿದ್ದು, ತತ್ತ್ವಮಯವಾದ, ಜ್ಯೋತಿರ್ಮಯವಾದ ಜೀವನದಲ್ಲಿ ಆ ತತ್ತ್ವದ ಮನನ-ಪ್ರಯೋಗ-ವ್ಯಾಪ್ತಿ-ಉಪಸಂಹಾರಗಳಿಂದ ಮತ್ತು ಅವುಗಳ ಹಂತ ಹಂತಗಳ ಸ್ಥಿತಿಗಳಿಂದ ಪರತತ್ತ್ವದ ಸ್ವರೂಪವನ್ನೇ ಆಸ್ವಾದಿಸುತ್ತಾ ಅಜರತ್ವ,

ಅಮರತ್ವ, ಅಮೃತತತ್ತ್ವಗಳನ್ನು ಪಡೆದು ಪರಮಯೋಗಿಯಾಗಿ, ವೇದಪರಬ್ರಹ್ಮ ಯೋಗಿಯಾಗಿ, ಸಚ್ಚಿದಾನಂದಮಯನಾಗಿ, ಚರಾಚರಾತ್ಮಕ ವಿಶ್ವವನ್ನೇ ಸಚ್ಚಿದಾನಂದಮಯವಾದ ವೇದದ ಸ್ವರೂಪದಲ್ಲಿ ಅನುಭವಿಸುತ್ತಾ ಅವನ ಸ್ವರೂಪಧರ್ಮ ವಿಸ್ತಾರ ಕ್ಷೇತ್ರವಾದ ಪ್ರಕೃತಿಯಮಡಲಿನಲ್ಲಿದ್ದರೂ, ನಿರ್ಬಂಧನಾಗಿ, ನಿರ್ವಿಕಾರನಾಗಿ,ಶಾಂತಮನಸ್ಕನಾಗಿ ಪ್ರಸನ್ನಾತ್ಮೇಂದ್ರಿಯಮನಸ್ಸುಗಳಿಂದ ಪ್ರಸನ್ನತೆಯುಳ್ಳವನಾಗಿ ವ್ಯವಹಾರಶೀಲನಾಗಿರುತ್ತಾನೆ. ಆದ್ದರಿಂದಲೇ ಮಾನವ ಜೀವನ ಸರ್ವದಾ ವೇದಮಯವೂ, ವೇದಾಂಗಮಯವೂ, ವೇದಾಂತಮಯವೂ ಆಗಿರುತ್ತವೆ.

ಒಂದು ಬೀಜದ ಅವಸ್ಥೆಯಲ್ಲಿ ಯಾವ ರೀತಿ ಅವ್ಯಕ್ತ ಮನನದ ಸ್ವರೂಪವೂ, ಪ್ರಯೋಗಸ್ವರೂಪವೂ, ವ್ಯಾಪ್ತಿಯಸ್ವರೂಪವೂ ಉಪಸಂಹಾರಸ್ವರೂಪವೂ ಸಹಜವಾಗಿ ಅವ್ಯಕ್ತವಾಗಿರುವುದರಿಂದ ಅವುಗಳ ಹೆಜ್ಜೆಗಳ ವ್ಯಕ್ತತೆಯು ಇರುವುದಿಲ್ಲವಾದರೂ ವಿಕಾಸದ ಸ್ಥಿತಿಯಲ್ಲಿ ವ್ಯಕ್ತತೆಯು ಸ್ವತಸಿದ್ಧವಾಗಿರುತ್ತದೆ. ಈ ಸ್ಥಿತಿಯಲ್ಲಿಯೇ ಮನನದ ಹಂತ ಋಕ್ಕಾಗಿಯೂ, ಅದರ ಪ್ರಯೋಗದ ಹಂತ ಯಜುಸ್ಸಾಗಿಯೂ, ಅವೆರಡರ ವ್ಯಾಪ್ತಿಯ ಹಂತ ಸಾಮವಾಗಿಯೂ, ಇವುಗಳ ಉಪಸಂಹಾರದ ಹಂತ ಅಥರ್ವವಾಗಿಯೂ ವ್ಯಕ್ತವಾಯಿತು. ಉಪಸಂಹಾರದ ಸ್ಥಿತಿಯಲ್ಲಿ ನಿರ್ವಿಕಾರತೆಯಿಂದ ಮುಂದೆ ಸಾಗಲು ಅದಕ್ಕೆ ಪ್ರತಿಬಂಧಕವಾಗಿರುವ ಸ್ಥಿತಿಗತಿಗಳನ್ನು ನಿರ್ಮೂಲ ಮಾಡುವ ಹೆಜ್ಜೆಗಳೂ ತನ್ನದೇ ಆಗಿರುತ್ತವೆ. ಇವುಗಳ ಪರಿಚಯವು ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳಿಗೆ ಸಂಬಂಧಿಸಿರುವ ಹೆಜ್ಜೆಗಳೊಂದಿಗೆ ಅಥರ್ವವೇದದಲ್ಲಿ ಉಂಟಾಗುತ್ತದೆ. ಈ ಕ್ರಮದಲ್ಲಿ ಉಪಕ್ರಮ ಮತ್ತು ಉಪಸಂಹಾರಗಳಿಗೆ ಇರುವ ಏಕಸೂತ್ರತೆಯನ್ನೂ, ಸಮಸ್ಥಿತಿಯನ್ನೂ ಪ್ರಯೋಗಾತ್ಮಕವಾಗಿ ಕಲ್ಪವು ಸ್ಪಷ್ಟಪಡಿಸುತ್ತದೆ.

ಇದರ ಹಿನ್ನೆಲೆಯಲ್ಲಿ ನಾಲ್ಕೂ ಸೋಪಾನಗಳ ಪೈಕಿ ಅದರ ಅಭಿವ್ಯಕ್ತಿ ಸ್ಥಾನದಲ್ಲಿ ಇವುಗಳ ಋಷಿ, ಛಂದಸ್ಸು, ದೇವತಾ ನೆನಪು, ಸವಿಯು ಅನಿವಾರ್ಯ. ವೇದದ ಮತ್ತು ಅದರ ಆಯಾ ಸೋಪಾನಗಳನ್ನು ನಿಶ್ಚಿತರೂಪದಲ್ಲಿ ಆಯಾ ಋಷಿಯು ಅನುಭವಿಸಿ ಅಭಿವ್ಯಕ್ತಪಡಿಸಿರುತ್ತಾನೆ. ಅಂತೆಯೇ ಅವುಗಳ ಗತಿವಿಕಾಸವನ್ನೂ ಅನುಭವಿಸುತ್ತಾ ಪರಿಪೂರ್ಣ ಸಂತುಷ್ಟಿಯನ್ನು ಪಡೆಯುವುದರಿಂದ ಸಂತುಷ್ಟಿಯ ಮಟ್ಟಗಳೂ ವ್ಯಕ್ತವಾಗುವುದೂ ಸಹಜವಾಗಿದೆ. ಅಂತೆಯೇ ಇವುಗಳ ವಿಭಿನ್ನ ರೂಪದಲ್ಲಿ ವಿಕಾಸಕ್ಷೇತ್ರವೂ ಸ್ವತಸಿದ್ಧವಾಗಿ ದಿವ್ಯಭಾರ, ದೈವಭಾರಗಳನ್ನು ಪ್ರಕಾಶಪಡಿಸುತ್ತದೆ. ಆದ್ದರಿಂದ ಕ್ರಮವಾಗಿ ಇವುಗಳ ಅನುಭೂತಿ, ಸ್ಮರಣೆಗಳಿಂದ ಅನುಭವಿಗಳಿಗೆ ಆಯಾ ಹಂತದ ದರ್ಶನವೂ ಆಗುವುದಲ್ಲದೇ ಅಲ್ಲಲ್ಲಿ ಪ್ರತಿಷ್ಠಿತನಾಗಿ ಸವಿಯನ್ನು ಸವಿಯುತ್ತಾ ಋಷಿಯ ಸಾಕ್ಷಾತ್ಕಾರ, ಛಂದಸ್ಸಿನ ಸಾಕ್ಷಾತ್ಕಾರ, ದೇವತೆಯ ಸಾಕ್ಷಾತ್ಕಾರ–ಆನಂದವನ್ನು ಅನುಭವಿಸುತ್ತಾ ಪರತತ್ತ್ವದ ದಿವ್ಯವೇದ-ವಿಭೂತಿಯ ಸವಿಯನ್ನು ಸವಿಯುತ್ತಾ ಆತ್ಮಾರಾಮನೂ, ಆತ್ಮಕ್ರೀಡನೂ, ಆತ್ಮವ್ಯವಹಾರಶೀಲನೂ ಆಗುತ್ತಾನೆ. ಆದ್ದರಿಂದ ಈ ಹಂತಗಳ ನೆನಪಿಲ್ಲದೇ ಅಧ್ಯಯನ ಮಾರ್ಗದಲ್ಲಿ ಮುಂದೆ ಸಾಗುವುದರಿಂದ ಒಂದು ಆವರಣವು ಉಂಟಾಗುತ್ತದೆ. ಆಗ ಅಂಥ

ಕಾರವೇ ಎಲ್ಲಿಡೆಯಲ್ಲಯೂ ತುಂಬಿರುತ್ತದೆ. ಈ ದೃಷ್ಟಿಕೋನದಿಂದ ಸನಾತನಾರ್ಯ ಭಾರತ ಮಹರ್ಷಿಗಳ ಸತ್ಸಂಪ್ರದಾಯಪರಂಪರೆಯು ಹೆಜ್ಜೆಗಳನ್ನು ಅನುಭವಿಸಿದ ಆರ್ಯರು = ವೇದ ಪರಮಾರ್ಥತತ್ತ್ವಜ್ಞರು ; ಶಿಷ್ಯರು, ಋಷಿ, ಛಂದಸ್ಸು, ದೇವತಾ–ಇವುಗಳ ಮಧುರಾನುಭೂತಿಯ ಸವಿಯ ನೆನಪುಗಳಿಂದ ಅಧ್ಯಯನ-ಅಧ್ಯಾಪನ ಪರಂಪರೆಯನ್ನು ಲೋಕದಲ್ಲಿ ಬೆಳಗಿಸಿದರು. ಈ ಪರಂಪರೆಯು ಸ್ವಸಿದ್ಧವೂ, ಆತ್ಮಸಿದ್ಧವೂ ಆಗಿರುವುದರಿಂದ ಆರ್ಷ ಅನುಭೂತಿಯ-ಸಂಸ್ಕೃತಿಯ ಸವಿಯನ್ನು ಸಹಜವಾಗಿಯೇ ಉಂಟುಮಾಡುತ್ತದೆ.

ಈ ಪ್ರಕಾರ ಸೃಷ್ಟಿಯ ಮೂಲವೂ, ಸೃಷ್ಟಿಯೂ, ಸ್ಥಿತಿಯೂ, ಲಯವೂ, ವೇದ-ವೇದಾಂಗ-ರೂಪರೇಖೆಗಳನ್ನೊಳಗೊಂಡು ಪ್ರತಿಯೊಂದೂ ಹೆಜ್ಜೆಯಲ್ಲಿಯೂ ಅವುಗಳ ವ್ಯಕ್ತಿತ್ವವನ್ನು ಪ್ರಕಾಶಪಡಿಸುತ್ತವೆ. ಬ್ರಹ್ಮಾಂಡ ಪಿಂಡಾಂಡಗಳು ವೇದಮಯವಾಗಿರುವುದರಿಂದ ಚೇತನನೂ ಸಹ ತನ್ಮಯಾಭಾವದಿಂದ ತತ್ಸ್ಥ ತದಂಜನತಾ ಶಕ್ತಿಯುಳ್ಳವನಾಗುತ್ತಾನೆ.

ಏವಂಚ ವೇದ ಮತ್ತು ವೇದಾಂಗಗಳು ಆತ್ಮ ಸಂಸ್ಥೆಗಳಾಗಿರುವುದರಿಂದ ಅದರ ಪರಿಣಾಮ ಕ್ರಿಯೆಯು ಅವುಗಳ ಅಭಿವ್ಯಕ್ತಿಯನ್ನೂ ತಾನು-ತಾನಾಗಿಯೇ ಯಾವ ಪ್ರಯತ್ನವೂ ಇಲ್ಲದೇ ಮಾಡುವುದರಿಂದ ಆರ್ಷ ಚಿನ್ಮಯ ಮುದ್ರೆಗಳನ್ನು ಪ್ರತಿಯೊಂದು ಹೆಜ್ಜೆಯಲ್ಲಿಯೂ ಪ್ರತಿಷ್ಠಾಪಿಸುವುದರ ಮೂಲಕ ಎಂದೆಂದಿಗೂ ಆರಿಹೋಗದ ದಿವ್ಯ-ಜ್ಞಾನಾನಂದಾನುಭೂತಿಯನ್ನುಂಟುಮಾಡುವ ಆರ್ಷಭೂಮಿಕೆಯನ್ನು ಪ್ರಕಾಶಪಡಿಸುವ ನಂದಾ ದೀಪಗಳಾಗಿ ಆ ಸೃಷ್ಟಿಲಯಪರ್ಯಂತವ್ಯಕ್ತವಾಗಿಯೂ, ಅನಂತರ ಅವ್ಯಕ್ತವಾಗಿಯೂ ಬೆಳಗುತ್ತವೆ.

ಇವು ಸಮಷ್ಟಿ-ವ್ಯಷ್ಟಿಗಳ-ದಿವ್ಯ-ವೃತ್ತದ ಅಲೌಕಿಕ ಮಧುರಾಸ್ವಾದನೆಯ ಸವಿಯನ್ನು ಎಂದೆಂದಿಗೂ ಉಂಟುಮಾಡುತ್ತವೆ. ಇದರ ಆಸ್ವಾದನೆಯಿಂದ ವೇದಗೃಹಾರಾಮ ಸ್ವಪ್ರತಿಷ್ಠಿತನಾಗುತ್ತಾನೆ.

ವೇದ-ವೇದಾಂಗ-ತತ್ತ್ವಸ್ಥ
ಪರಾಂ ಭೂಮಿಂ ಯಥಾಯಥಮ್ ।
ರಂಗ–ಶ್ರೀಮಾಸಧರ್ಮಾಧ್ಯೋ
ವ್ಯಾಖ್ಯದ್ವೇಙ್ಕಟ ಬಾಲಕಃ ॥

ಹುಡುಕಾಟ

ರಾಘವೇಂದ್ರ ಪಾಟೀಲ

ಎಲ್ಲ ಸಸ್ತನಿಗಳಲ್ಲಿಯೂ ಹುಡುಕಾಟದ, ಆವಿಷ್ಕಾರದ ತುರ್ತನ್ನು ಕಾಣು ತ್ತೇವೆ. ಇಂಥ ತುರ್ತು ಕೆಲವು ಸಸ್ತನಿಗಳಲ್ಲಿ ಅತಿ ತೀವ್ರವಾಗಿರುತ್ತದೆ. ಜೀವವಿಕಾಸದ ಸಂದರ್ಭದಲ್ಲಿ ಆಯಾ ಪ್ರಾಣಿಗಳು ಎಷ್ಟರಮಟ್ಟಿಗೆ ವಿಶಿಷ್ಟ ನೈಪುಣ್ಯತೆಯನ್ನು (Specialization) ಸಾಧಿಸಿಕೊಂಡಿವೆ ಎನ್ನುವ ವಾಸ್ತವದೊಂದಿಗೆ ಈ ಹುಡುಕಾಟದ ತುರ್ತು ನಿಕಟ ಸಂಬಂಧವನ್ನು ಹೊಂದಿರುತ್ತದೆ. ಒಂದುವೇಳೆ, ವಿಕಾಸದ ಸಂದರ್ಭ ದಲ್ಲಿನ ಅವುಗಳ ಪ್ರಯತ್ನಗಳೆಲ್ಲವೂ ಯಾವುದೋ ಒಂದು ನಿರ್ದಿಷ್ಟ, ಬದುಕುಳಿಯುವ ಯೋಜನೆಯ (Survival trick) ಸಾಧನೆಗಾಗಿಯೇ ವಿನಿಯೋಗವಾಗಿದ್ದರೆ, ಅಂಥ ಪ್ರಾಣಿಗಳು ತಮ್ಮ ಸುತ್ತಮುತ್ತಲಿನ ಪ್ರಪಂಚದ ಸಂಕೀರ್ಣತೆಗಳ ಬಗ್ಗೆ ತಲೆಕೆಡಿಸಿ ಕೊಳ್ಳಬೇಕಾಗುವುದಿಲ್ಲ. ಉದಾಹರಣೆಗಾಗಿ: ಪ್ಯಾಂಗೋಲಿನ್ ಎಂಬ ಪ್ರಾಣಿ ವಿಕಾಸದ ಸಂದರ್ಭದಲ್ಲಿ ಇರುವೆಗಳನ್ನು ತಿನ್ನುವ ತನ್ನ ಆಹಾರಾಭ್ಯಾಸದ ನೈಪುಣ್ಯತೆಗಾಗಿ, ಕೋಲಾ ಕರಡಿಯು ಗಮ್ ಮರದ ಎಲೆಗಳನ್ನು ತಿನ್ನುವ ವಿಶಿಷ್ಟ ಆಹಾರಾಭ್ಯಾಸದ ತಜ್ಞೀಕರಣ ಗಳಿಸುವಲ್ಲಿ ಪ್ರಯತ್ನ ನಡೆಸಿದವು. ಇರುವೆಗಳಿರುವಷ್ಟು ಕಾಲ ಪ್ಯಾಂಗೋಲಿನ್‌ನ ಜೀವನ ನಿರುಂಬಳವಾದದ್ದು. ಹಾಗೆಯೇ ಕೋಲಾ ಕರಡಿಯದು ಕೂಡ. ಸುತ್ತಲಿನ ವಿಚಿತ್ರ, ಸಂಕೀರ್ಣ ಸಂಬಂಧಗಳ ಬಗ್ಗೆ ನಿರಾಸಕ್ತವಾದ ಇವುಗಳ ಜೀವನ ತೃಪ್ತವಾದದ್ದು.

ಇಂಥ ಜೀವನದ ರೀತಿಗೆ ವಿರುದ್ಧವಾದದ್ದು–ವೈಶಿಷ್ಟ್ಯವನ್ನು ಸಾಧಿಸಿಕೊಳ್ಳದ ಪ್ರಾಣಿಗಳ ರೀತಿ. ಇಂಥ ಪ್ರಾಣಿಗಳು ಒಂದು ಕ್ಷಣ ಕೂಡ ನಿರುಂಬಳವಾಗಿರಲಾರವು. ಇವು ಸಮಯಸಾಧಕ ಪ್ರಾಣಿಗಳು. ಸದಾ ಎಚ್ಚರಾಗಿ ಕಾಯ್ದು ಸಮಯ ಸಾಧಿಸು ತ್ತವೆ. ಇಂಥ ಪ್ರಾಣಿಗಳಿಗೆ ತಮ್ಮ ಮುಂದಿನ ಊಟ ಎಲ್ಲಿ, ಹೇಗೆ ದೊರೆಯುತ್ತದೆ ನ್ನುವ ಬಗ್ಗೆ ಖಾತ್ರಿ ಇರುವುದಿಲ್ಲ. ಅದಕ್ಕಾಗಿಯೇ ಎಲ್ಲ ಸಂದಿಗೊಂದಿಗಳನ್ನು ಅವು ತಿಳಿದಿರಬೇಕು; ಎಲ್ಲ ಸಾಧ್ಯತೆಗಳನ್ನು ಪರೀಕ್ಷಿಸಬೇಕು ಮತ್ತು ಒದಗಬಹುದಾದ ಒಂದೊಂದು ಅವಕಾಶಕ್ಕಾಗಿಯೂ ಅವು ಕಣ್ಣು ಬಿಟ್ಟುಕೊಂಡು ಕುಳಿತಿರಬೇಕು. ಇಂಥ ಪ್ರಾಣಿಗಳು ಹುಡುಕಾಡಬೇಕಾಗುತ್ತದೆ. ಆವಿಷ್ಕಾರವು ಇವುಗಳ ನಿತ್ಯದ ಬದು ಕಾಗುತ್ತದೆ. ಆದ್ದರಿಂದಲೇ ಇಂಥ ಪ್ರಾಣಿಗಳು ಹೆಚ್ಚಿನ ಆಸಕ್ತಿಯನ್ನು ರೂಢಿಸಿ ಕೊಂಡಿರಬೇಕಾಗುತ್ತದೆ.

ಇಲ್ಲಿ ಕೇವಲ ಆಹಾರಾಭ್ಯಾಸ ಕುರಿತ ವೈಶಿಷ್ಟೀಕರಣದ ಕ್ರಿಯೆಯನ್ನು ಗಮ ನಿಸಿದೆವು. ಆತ್ಮರಕ್ಷಣೆಯ ಅವಶ್ಯಕತೆಯೂ ಪ್ರಾಣಿಗಳ ಮೇಲೆ ಇದೇ ರೀತಿಯ ಒತ್ತಡ ಗಳನ್ನು ಹೇರುತ್ತದೆ. ಮುಳ್ಳುಹಂದಿಗಳಾಗಲೀ, ಹೆಡ್ಜ್‌ಹಾಗ್‌ಗಳಾಗಲೀ ಸುತ್ತಲಿನ

ಪ್ರಾಣಿ ಪರಿಸರವನ್ನು ಗಮನಿಸದೇ ನಿಷ್ಕಾಳಜಿಯಿಂದ ಸರಭರಸದ್ದು ಮಾಡುತ್ತ ಅಲೆದಾಡಬಹುದು. ನಿರ್ಭಯವಾಗಿ ವಿಶ್ರಮಿಸಬಹುದು. ಇವು ರಕ್ಷಣೆಯ ವಿಷಯದಲ್ಲಿ ತಜ್ಞೀಕರಣ ಸಾಧಿಸಿರುವುದರಿಂದ ಇದು ಸಾಧ್ಯವಾಗುತ್ತದೆ. ಆದರೆ ನಿರಾಯುಧವಾದ ನಿಸ್ಸಹಾಯಕ ಸಸ್ತನಿ ಪ್ರಾಣಿಗಳು ಹೀಗೆ ಇರಲಾರವು. ಅವು ಎಚ್ಚರವಾಗಿರಬೇಕಾಗುತ್ತದೆ. ಹುಲಿಯ ವಾಸನೆಯನ್ನು ದೂರದಿಂದ ಗ್ರಹಿಸಿಯೇ ಜಿಂಕೆಗಳು ತಾವು ತಿನ್ನುವ ಎಳೆಗರಿಕೆಯನ್ನು ಅಲ್ಲಿಯೇ ಬಿಟ್ಟುಕೊಟ್ಟು ಓಟಹೊಡೆಯಬೇಕಾಗುವಂತೆ ಈ ಪ್ರಾಣಿಗಳು ಅಪಾಯದ ಬಗೆಗಿನ ಸೂಚನೆಗಳನ್ನು ಮತ್ತು ಬದುಕುಳಿಯಲು ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಇಂಥ ಪ್ರಾಣಿಗಳು ಮನೆಬಿಟ್ಟು ಹೊರಗೆ ಬಂದೊಡನೆ ಒಂದೊಂದು ಕ್ಷಣದಲ್ಲಿಯೂ ಮನೆಯಿಂದ ತಾನು ಇರುವ ದಿಕ್ಕು ದೆಸೆಗಳನ್ನು, ಮನೆಯನ್ನು ತಲುಪಲು ಇರುವ ವಿವಿಧ ದಾರಿಗಳನ್ನು ಲೆಕ್ಕಾಚಾರ ಮಾಡುತ್ತಿರಬೇಕಾಗುತ್ತದೆ.

ಹೀಗೆ ಯೋಚನೆ ಮಾಡಿದರೆ, ನಮಗೆಲ್ಲ, ತಜ್ಞೀಕರಣ-ನೈಪುಣ್ಯತೆ–ವೈಶಿಷ್ಟ್ಯತೆಯನ್ನು ಸಾಧಿಸಿಕೊಳ್ಳದಿರುವದು ದುರ್ಬಲವೆನ್ನಿಸಬಹುದು. ಅಂದಮೇಲೆ ಹೀಗೆ ವೈಶಿಷ್ಟ್ಯತೆಯನ್ನು ಸಾಧಿಸಿಕೊಳ್ಳದ ಸಸ್ತನಿಗಳು ಉಳಿದವಾದರೂ ಹೇಗೆ? ಇದಕ್ಕೆ ಉತ್ತರವೆಂದರೆ ಅತಿ ವೈಶಿಷ್ಟ್ಯದ ಜೀವನದ ರೀತಿಯು ತೀವ್ರವಾದ ಅಪಾಯಕ್ಕೆ ಸಿಕ್ಕಿಹಾಕಿಕೊಳ್ಳುವ ಅವಕಾಶವಿರುತ್ತದೆ. ಒಂದು ನಿರ್ದಿಷ್ಟ ಪರಿಸರದಲ್ಲಿ ಬದುಕಲು ರೂಢಿಸಿಕೊಂಡಿರುವ ಅತಿ ವೈಶಿಷ್ಟ್ಯತೆಯಿಂದ ಕೂಡಿದ ಒಂದು ಪ್ರಾಣಿಯು ಆ ಪರಿಸರ ಇರುವವರೆಗೆ ಆರಾಮವಾಗಿ ಬದುಕಬಹುದು. ಆದರೆ ಆ ಪರಿಸರದಲ್ಲಿ ಸ್ವಲ್ಪ ಪಲ್ಲಟವಾದರೂ ಸಾಕು, ಅದು ಸಾಧಿಸಿದ ವೈಶಿಷ್ಟ್ಯತೆ ನಿರುಪಯುಕ್ತವಾಗಿ ಆ ಪ್ರಾಣಿ ಅಸಹಾಯಕವಾಗಿಬಿಡುತ್ತದೆ. ತಮ್ಮ ಸ್ಪರ್ಧಿಗಳನ್ನೆಲ್ಲ ಹಿಂದಕ್ಕೆ ಹಾಕಲು ನೈಪುಣ್ಯತೆಯ ಕೊನೆತುದಿಯನ್ನು ಮುಟ್ಟಿದ ಪ್ರಾಣಿಗಳು ಇಂಥ ಸಂದರ್ಭದಲ್ಲಿ ಮತ್ತೆ ಹಿಂದಕ್ಕೆ ಬರಲಾಗದೇ ಒಮ್ಮೆಲೇ ನಿರಾಯುಧವಾಗುತ್ತ ಅಪಾಯದ ಅಂಚಿಗೆ ಬಂದು ನಿಲ್ಲುತ್ತವೆ. ಗಮ್ ಮರಗಳ ಕಾಡು ನಾಶವಾದರೆ ಆ ಮರಗಳ ಎಲೆಗಳನ್ನಷ್ಟೇ ತಿನ್ನುವ ವೈಶಿಷ್ಟ್ಯದ ಕೋಲಾ ಕರಡಿಯ ಕೊನೆ ಆದಂತೆಯೇ. ಕೇವಲ ಮೈಮೇಲೆ ಮುಳ್ಳುಗಳನ್ನು ಹೊಂದಿ, ಓಟದಲ್ಲಿ ವೇಗ, ಮುಚ್ಚುಮರೆ ಸಾಧಿಸದ ಮುಳ್ಳುಹಂದಿ ಬಿರುಸು ಬಾಯಿನ ಬೇಟೆಗಾರ ಪ್ರಾಣಿಯ ಮುಂದೆ ತಲೆಬಾಗಬೇಕಾಗುತ್ತದೆ. ವೈಶಿಷ್ಟ್ಯತೆಯಿಲ್ಲದ ಸಮಯಕಾಯುವ ಪ್ರಾಣಿಗಳ ಜೀವನ ಯಾವಾಗಲೂ ಕಷ್ಟಸಾಧ್ಯವಾದುದಾದರೂ ಇಂಥ ಪ್ರಾಣಿಗಳು ಬಹುಬೇಗನೇ ತಮ್ಮ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳಿಗೆ ಹೊಂದಿಕೊಳ್ಳುತ್ತವೆ. ಇಲಿ, ಹೆಗ್ಗಣಗಳನ್ನು ತಿಂದು ಬದುಕುವ ಮುಂಗುಸಿಯ ಈ ಆಹಾರವನ್ನು ಕಸಿದುಕೊಂಡುಬಿಡಿ. ಮುಂಗುಸಿಗಳು ಉಪವಾಸದಿಂದ ಸಾಯುವುದಿಲ್ಲ. ಅವು ಆ ಈ ಪ್ರಾಣಿಗಳ ಮೊಟ್ಟೆಗಳನ್ನು ಇಲ್ಲವೇ ಕೊನೆಗೆ ಬಸವನ ಹುಳುಗಳನ್ನಾದರೂ ತಿಂದು ಬದುಕುತ್ತವೆ. ಮಂಗಗಳ ಕೈಗಳಲ್ಲಿನ ಹಣ್ಣುಗಳನ್ನು ಕಿತ್ತುಕೊಂಡರೆ ಅವು ಮರದ ಎಲೆ, ರೆಂಬೆ, ಬೇರುಗಳನ್ನಾದರೂ ತಿಂದು ಬದುಕುತ್ತವೆ.

ವೈಶಿಷ್ಟ್ಯತೆ ಸಾಧಿಸಿಕೊಳ್ಳದ ಸಸ್ತನಿಗಳಲ್ಲೆಲ್ಲ ಮಂಗ ಮತ್ತು ವಾ-ನರಗಳ (Primates) ಗುಂಪು ಅತ್ಯಂತ ಸಮಯಸಾಧಕವಾದವುಗಳು. ಈ ಇಡೀ ಗುಂಪೇ ವೈಶಿಷ್ಟ್ಯರಾಹಿತ್ಯದ ವೈಶಿಷ್ಟ್ಯ ಸಾಧಿಸಿದಂಥವುಗಳದ್ದು. ಈ ಮಂಗ, ವಾ-ನರಗಳಲ್ಲಿಯೂ, 'ನಗ್ನ ವಾನರ' ಎನ್ನಿಸಿಕೊಳ್ಳುವ ಮನುಷ್ಯ (Naked Ape) ಅತ್ಯಂತ ಸಮಯಸಾಧಕ ಪ್ರಾಣಿ. ಕಪಿಗಳ ಮರಿಗಳು ಅತ್ಯಂತ ಕುತೂಹಲಿಗಳಾಗಿದ್ದು ಅವು ಸುತ್ತಮುತ್ತಲಿನದರಲ್ಲೆಲ್ಲ ಇಣುಕುತ್ತವೆ. ಆದರೆ ಅವುಗಳ ಆಸಕ್ತಿಯು ಕ್ರಮೇಣ ಕುಂದುತ್ತ ಬರುತ್ತದೆ. ಮನುಷ್ಯರಲ್ಲಿ ಎಳೆತನದ ಕುತೂಹಲವು ಸಾಮಾನ್ಯವಾಗಿ ಬಲಗೊಳ್ಳುತ್ತ ಪ್ರೌಢ ವಯಸ್ಸಿಗೂ ಅದು ಚಾಚುತ್ತದೆ. ನಾವು ಹುಡುಕುವುದನ್ನು ಎಂದೂ ಬಿಡುವುದಿಲ್ಲ. ಬದುಕಲು ಇಷ್ಟು ತಿಳಿದದ್ದು ಸಾಕು ಎನ್ನುವ ತೃಪ್ತಿ ನಮಗಿಲ್ಲ. ಪ್ರತಿಯೊಂದು ಪ್ರಶ್ನೆಗೆ ನಾವು ಕಂಡುಕೊಳ್ಳುವ ಉತ್ತರವು ನಮ್ಮಲ್ಲಿ ಇನ್ನೊಂದು ಪ್ರಶ್ನೆಯನ್ನು ಮೂಡಿಸಿರುತ್ತದೆ. ಈ ಹುಡುಕಾಟದ ಗುಣವೇ ಮನುಷ್ಯ ಪ್ರಭೇದದ ಬದುಕುಳಿಯುವ ಪ್ರಯತ್ನಕ್ಕೆ ಒಂದು ಒಳನೋಟವಾಗಿ ಒದಗಿಬಂದಿದೆ.

ಹೊಸದರ ಬಗ್ಗೆ ಮೂಡುವ ಕುತೂಹಲ ಅಂದರೆ, ನಾವೀನ್ಯತೆಯ ಬಗೆಗಿನ ಆಕರ್ಷಣೆ (Neophilia) ಮತ್ತು ಹೊಸದರ ಬಗೆಗಿನ ವಿಕರ್ಷಣೆ (Neophobia) ಇವೆರಡೂ ಮನುಷ್ಯನನ್ನು ಎರಡು ವಿರುದ್ಧ ದಿಕ್ಕಿನಲ್ಲಿ ಸೆಳೆಯುವ ಬಲಗಳಾಗಿವೆ. ಹೊಸದು, ಅಪರಿಚಿತವಾದದ್ದು. ಅಪರಿಚಿತವಾದದ್ದು ಬಹುಶಃ ಅಪಾಯಕಾರಿಯಾದದ್ದು. ಆದ್ದರಿಂದ ಅದರ ಸಮೀಪ ಹೋಗದಿರುವದೇ ಕ್ಷೇಮವೇನೋ ?.... ಆದರೆ ಅದನ್ನು ತಪ್ಪಿಸಿ ನಡೆದುಬಿಟ್ಟರೆ ಅದರ ಬಗ್ಗೆ ತಿಳಿಯುವದೆಂತು ? ನಾವೀನ್ಯಾಕರ್ಷಣೆಯ ತುಡಿತವು ನಮ್ಮನ್ನು ಹೊಸದರತ್ತ ತಳ್ಳುತ್ತದೆ. ಅಪರಿಚಿತವಾದದ್ದು ಕ್ರಮೇಣ ಪರಿಚಿತವಾದ್ದಾಗುತ್ತದೆ. ಪರಿಚಿತವಾದದ್ದು ಕ್ರಮೇಣ ನಮಗೆ ಹಳೆಯದಾಗುವ ತನಕ ಈ ಆಕರ್ಷಣೆ ಇದ್ದೇ ಇರುತ್ತದೆ. ಇಷ್ಟೆಲ್ಲ ಕುತೂಹಲದ ಸಾಗುವಿಕೆಯಿಂದ ನಮಗೆ ದೊರೆಯುವ ಅಮೂಲ್ಯವಾದ ಅನುಭವವು ನಮ್ಮ ಪ್ರಜ್ಞೆಗೆ ದಕ್ಕುತ್ತದೆ ಮತ್ತು ಇದು ಮುಂದಿನ ಜೀವನದ ಅನುಕೂಲತೆಗೆ ಒದಗಿ ಬರುತ್ತದೆ. ಬಾಲ್ಯಕಾಲದಲ್ಲಿ ನಡೆಯುವ ಪ್ರಕ್ರಿಯೆ ಇಂಥದು. ಬಾಲ್ಯಕಾಲದಲ್ಲಿ ಇಂಥ ಕುತೂಹಲ ಎಷ್ಟು ಪ್ರಬಲವಾಗಿರುತ್ತದೆಂದರೆ, ಇದನ್ನು ತಂದೆ ತಾಯಂದಿರು ನಿಗ್ರಹಿಸಬೇಕಾಗುತ್ತದೆ. ಆದರೆ ಪೋಷಕರ ನಿಗ್ರಹ, ನಿರ್ದೇಶನಗಳು ಮಕ್ಕಳಲ್ಲಿಯ ಕುತೂಹಲವನ್ನು ಪೂರ್ಣವಾಗಿ ತುಳಿದು ಹಾಕಲಾರವು. ಮಗುವು ಬೆಳೆಯುತ್ತ ಬಂದಂತೆ ಅವನಲ್ಲಿಯ ಹುಡುಕಾಟ-ಆವಿಷ್ಕಾರದ ತುಡಿತಗಳು ಕೆಲವು ಸಲ ಮಿತಿಮೀರಿ ಬೆಳೆದು ಇಂಥ ಬಾಲಕರ ಗುಂಪಿಗೆ ಹಿರಿಯರು 'ಪುಂಡ ಪ್ರಾಣಿಗಳ ಗುಂಪು' ಎಂದು ಬೈಯ್ಯುವದೂ ಉಂಟು. ಆದರೆ ನಿಜದಲ್ಲಿ ಹಿರಿಯರ ನಡವಳಿಕೆಯೇ ಕಾಡು ಪ್ರಾಣಿಗಳ ರೀತಿಯದಾಗಿರುತ್ತದೆ. ಹಿರಿಯ ಕಾಡುಪ್ರಾಣಿಗಳು ತಮ್ಮ ಮರಿಗಳ ಹುಡುಕಾಟದ ಆವಿಷ್ಕಾರದ ತುಡಿತಗಳನ್ನು ಮಿತಗೊಳಿಸುವ ಎಲ್ಲ ಪ್ರಯತ್ನಗಳನ್ನೂ ಮಾಡುವಂತೆ ಹಿರಿಯರೂ ಕೂಡ ಮಕ್ಕಳ ಹುಡುಕಾಟದ ಭಾವನೆಗೆ ಕಡಿವಾಣ ಹಾಕುವ ಕೆಲಸ

ಮಾಡುತ್ತಿರುತ್ತಾರೆ. ಪುಣ್ಯವಶಾತ್ ಮನುಷ್ಯ ಪ್ರಭೇದದ ಅನೇಕ ಹಿರಿಯರು ತಮ್ಮ ಬಾಲ್ಯಕಾಲದ ಹುಡುಕಾಟದ ಬುದ್ಧಿ ಮತ್ತು ಕುತೂಹಲಗಳನ್ನು ಕಾಯ್ದುಕೊಂಡು ಬಂದಿರುವದರಿಂದ ಮಾನವ ಜನಾಂಗದ ವಿಸ್ತಾರ ಮತ್ತು ಪ್ರಗತಿ ಸಾಧ್ಯವಾಗುತ್ತ ಬಂದಿದೆ.

* * *

ಮನುಷ್ಯನ ವಿಶೇಷ ಮತ್ತು ಸಂಕೀರ್ಣಶಕ್ತಿಗಳಾದ ಚಿತ್ರಕಲೆ, ಶಿಲ್ಪಕಲೆ, ಸಂಗೀತ, ಹಾಡುಗಾರಿಕೆ, ನೃತ್ಯ, ಜಿಮ್ನಾಸ್ಟಿಕ್ಸ್, ಆಟಗಳು, ಬರವಣಿಗೆ ಮತ್ತು ಮಾತುಗಾರಿಕೆ ಇವೆಲ್ಲವುಗಳು ಆವಿಷ್ಕಾರ ಮತ್ತು ಪ್ರಯೋಗಶೀಲತೆಯ ಮೂಲಕ ಬೆಳೆದು ಬಂದವುಗಳು. ವಿಶೇಷ ತರಬೇತಿಯ ಮೂಲಕ ಕಲಾವಿದ ಅಥವಾ ಸಹೃದಯ ನಾಗಿ ರೂಪುಗೊಳ್ಳಬಹುದಾದ ನಾವು ಮನುಷ್ಯನ ಇಂಥ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳಬಹುದು. ಈ ಚಟುವಟಿಕೆಗಳ ಅನ್ವಯಿಕ ಉದ್ದೇಶಗಳನ್ನು (ಹಣ ಗಳಿಸುವದು, ಸ್ಥಾನಮಾನಗಳಿಸುವುದು ಇತ್ಯಾದಿಗಳು) ಆಚೆಗಿಟ್ಟು ನೋಡಿದರೆ ಈ ಚಟುವಟಿಕೆಗಳೆಲ್ಲ ಮನುಷ್ಯನ ಜೈವಿಕ ಚಟುವಟಿಕೆಗಳಂತೆ ಬಾಲ್ಯಕಾಲದ ತುಂಟಾಟ ಗಳ ಮುಂಚಾಚುವಿನಂತೆ ಮೂಡಿಬಂದವುಗಳಾಗಿ ತೋರುತ್ತವೆ. ಇಲ್ಲವೇ, ಪ್ರೌಢರ ತಿಳುವಳಿಕೆ ಮತ್ತು ಪರಸ್ಪರ ಸಂಪರ್ಕ ವ್ಯವಸ್ಥೆಯ ಮೇಲೆ ಬಾಲ್ಯಕಾಲದ 'ಆಟದ ನಿಯಮ'ಗಳ (Play rules) ಪ್ರಭಾವದಿಂದ ಮೂಡಿ ಬಂದವುಗಳಂತೆ ತೋರುತ್ತವೆ. ಈ ಬಾಲ್ಯಕಾಲದ ಆಟದ ನಿಯಮಗಳನ್ನು ಲಿಸ್ಟು ಮಾಡಿ ಹೇಳುವುದಾದರೆ—

i) ಅಪರಿಚಿತವಾದದ್ದು ಪರಿಚಿತವಾಗುವವರೆಗೆ ಅದನ್ನು ಶೋಧಿಸು,
ii) ಪರಿಚಿತವಾದದ್ದರ ಲಯಬದ್ಧ ಪುನರಾವರ್ತನೆಯನ್ನು ಸಾಧಿಸು,
iii) ಈ ಪುನರಾವರ್ತನೆಯ ಭಿನ್ನ ಭಿನ್ನ ರೀತಿಗಳನ್ನು ಪ್ರಯತ್ನಿಸು,
iv) ಈ ವಿಭಿನ್ನ ರೀತಿಗಳಲ್ಲಿ ಅತ್ಯಂತ ತೃಪ್ತಿಕರವಾದದ್ದನ್ನು ಆಯ್ದು ಉಳಿದವುಗಳನ್ನು ಬಿಟ್ಟುಕೊಟ್ಟು, ಅದೊಂದನ್ನೇ ಬೆಳೆಸಲು ಪ್ರಯತ್ನಿಸು.
v) ಆ ಭಿನ್ನ ಭಿನ್ನ ರೀತಿಗಳನ್ನು ವಿವಿಧ ರೀತಿಯಲ್ಲಿ ಬೇರೆ ಬೇರೆ ಕ್ರಮದಲ್ಲಿ ಪ್ರಯತ್ನಿಸು, ಮತ್ತು
vi) ಇಷ್ಟೆಲ್ಲವನ್ನೂ ನಿನ್ನ ಸಲುವಾಗಿ, ಇಷ್ಟೆಲ್ಲವನ್ನು ಮಾಡುವ ಸಲುವಾಗಿಯೇ ಮಾಡು.

ಒಬ್ಬ ಹುಡುಗ ಮರಳಿನಲ್ಲಿ ಗೀಚುವುದಕ್ಕೆ ಅಥವಾ ಒಬ್ಬ ಪ್ರೌಢ ಸಂಗೀತಾಗಾರ ಒಂದು ಸಂಗೀತ ಕೃತಿಯ ರಚನೆಯಲ್ಲಿ ತೊಡಗುವುದಕ್ಕೆ ಹೀಗೆ ಒಟ್ಟು ಜೀವನ ದಲ್ಲಿನ ಎಲ್ಲ ಆವಿಷ್ಕಾರಗಳಿಗೂ ಈ ಆಟದ ನಿಯಮಗಳು ಅನ್ವಯವಾಗುತ್ತವೆ.

ಇವುಗಳಲ್ಲೆಲ್ಲ ಕೊನೆಯ ನಿಯಮವು ತುಂಬ ಮುಖ್ಯವಾದದ್ದು. ಆವಿಷ್ಕಾರದ ಈ ನಡಾವಳಿಕೆಗಳೆಲ್ಲ ಬದುಕುಳಿಯುವ ಮೂಲಭೂತ ರೀತಿಗಳಾದ ಆಹಾರಾಭ್ಯಾಸ ಸಂಘರ್ಷ ಮತ್ತು ಲೈಂಗಿಕ ಜೊತೆಯ ಆಯ್ಕೆ ಮುಂತಾದವುಗಳ ವಿಷಯದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಆದರೆ ಇಂಥಲ್ಲಿ ಈ ನಡಾವಳಿಕೆಗಳು ಕೇವಲ ದೈಹಿಕ

ಉದ್ದೇಶಗಳಿಗೆ ಮಿತಗೊಂಡಿರುತ್ತವೆ. ಅನೇಕ ಪ್ರಭೇದಗಳಲ್ಲಿ ಇಂಥ ದೈಹಿಕ ಉದ್ದೇಶಗಳಿಗೆ ಮಿತಗೊಳ್ಳುವಲ್ಲಿ ಇವುಗಳ ಕೊನೆಯಾಗುತ್ತದೆ. ಇದು ಆವಿಷ್ಕಾರದ ಉದ್ದೇಶಕ್ಕಾಗಿನ ಆವಿಷ್ಕಾರವಲ್ಲ. ಆದರೆ ಅನೇಕ ವಿಕಾಸಗೊಂಡ ಪ್ರಾಣಿಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ ಮನುಷ್ಯನಲ್ಲಿ ಈ ನಡವಳಿಕೆಗಳು ದೈಹಿಕ ಉದ್ದೇಶದ ಮಿತಿಗಳಿಂದ ಬಿಡುಗಡೆ ಹೊಂದಿ ಇನ್ನೊಂದು ವಿಶಿಷ್ಟ ದಿಕ್ಕಿನಲ್ಲಿನ ತುಡಿತಗಳಾಗಿ ಬೆಳೆಯುವದನ್ನು ಕಾಣುತ್ತೇವೆ. ಇಂಥ ತುಡಿತಗಳ ಉದ್ದೇಶ ನಮ್ಮ ಸುತ್ತಲಿನ ಪ್ರಪಂಚದ ಬಗ್ಗೆ ಸಂಕೀರ್ಣವಾದ ಸುಸೂಕ್ಷ್ಮ ಅನುಭವಗಳನ್ನು ಒದಗಿಸುತ್ತ ಇವುಗಳ ಹಿನ್ನೆಲೆಯಲ್ಲಿ ನಮ್ಮ ಸಾಧ್ಯತೆಗಳ ಅರಿವನ್ನು ನೀಡುವುದು. ಈ ಅರಿವು ಬರೀ ಬದುಕುಳಿಯುವ ಬಗೆಗಿನ ನೋಟವಾಗಿಲ್ಲ. ಹೀಗೆ ಪಡೆದ ಅರಿವು ನಮ್ಮ ಬದುಕಿಗೆ ಯಾವುದೇ ದೇಶ, ಕಾಲ ಸಂದರ್ಭಗಳಿಗೆ ಒದಗಿ ಬರುವಂಥ ನಿರಪೇಕ್ಷವಾದದ್ದು.

ಈ ಎಲ್ಲ ವಿಶ್ಲೇಷಣೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯನ್ನು ಪರಿಗಣಿಸದಿರುವದಕ್ಕೆ ಮುಖ್ಯ ಕಾರಣವೆಂದರೆ, ಬದುಕುಳಿಯುವದಕ್ಕಾಗಿ ಮೂಲಭೂತ ರೀತಿಗಳಾದ ಹೋರಾಟ (ಆಯುಧಗಳು), ಆಹಾರ ಪಡೆಯುವಿಕೆ (ಬೇಸಾಯ), ಗೂಡುಕಟ್ಟುವಿಕೆ (ವಾಸ್ತುಶಿಲ್ಪ) ಮತ್ತು ಸ್ವಾಸ್ಥ್ಯ (ಔಷಧಿಗಳು) ಇವುಗಳ ಬಗೆಗೇ ಮೂಲಭೂತವಾಗಿ ಅವು ತೊಡಗಿರುವುದರಿಂದ. ಆದರೆ ಕಾಲವು ಗತಿಸುತ್ತ ಬಂದಂತೆ ತಾಂತ್ರಿಕ ಬೆಳವಣಿಗೆಗಳು ಒಂದಕ್ಕೊಂದು ಪರಸ್ಪರ ತಳುಕು ಹಾಕಿಕೊಳ್ಳುವುದಲ್ಲದೇ ನಿರಪೇಕ್ಷ ಅನ್ವೇಷಣೆಯ ತುಡಿತಗಳು ವೈಜ್ಞಾನಿಕ ಕ್ಷೇತ್ರದೊಳಕ್ಕೂ ಚಾಚಿಕೊಳ್ಳುತ್ತಿವೆ. ವೈಜ್ಞಾನಿಕ ಸಂಶೋಧನೆಯು (re-search) ಎನ್ನುವ ಶಬ್ದ ಸೂಚಿಸುವಂತೆ–ಲೀಲೆಯ ಮನೋವೃತ್ತಿಯನ್ನು ಅವಲಂಬಿಸಿದ್ದಾಗಿದೆ. ಅದು ಬಾಲ್ಯಕಾಲದ ಆಟದ ನಿಯಮಗಳಂತೆ ನಡೆಯುವಂಥದ್ದಾಗತೊಡಗಿದೆ. ಶುದ್ಧ ವೈಜ್ಞಾನಿಕ ಸಂಶೋಧನೆಗಳ ಸಂದರ್ಭದಲ್ಲಿ ವಿಜ್ಞಾನಿಯು ಒಬ್ಬ ಕಲಾವಿದನ ರೀತಿಯಲ್ಲಿಯೇ ತನ್ನ ಕಲ್ಪನಾ ಶಕ್ತಿಯನ್ನು ಬಳಸಿಕೊಳ್ಳುತ್ತಿರುತ್ತಾನೆ. ಅವನು ಮಾತಾಡುವುದು ಸುಂದರ ಪ್ರಯೋಗದ ಬಗ್ಗೆಯೇ ಹೊರತು ತತ್ಕಾಲಬಂಧಿತ ಪ್ರಯೋಜನಶೀಲತೆಯ ಬಗೆಗಲ್ಲ. ಕಲಾವಿದನಂತೆ, ಇವನೂ ಅನ್ವೇಷಣೆಯ ಉದ್ದೇಶಕ್ಕಾಗಿಯೇ ಅನ್ವೇಷಣೆಗೆ ಬದ್ಧನಾಗುವನು. ಒಂದು ವೇಳೆ ಅವನ ಪ್ರಯೋಗದ ನಿರ್ಣಯಗಳು ಬದುಕುಳಿಯುವ ನಿರ್ದಿಷ್ಟ ರೀತಿಗೆ ಉಪಯುಕ್ತವೆಂದು ಕಂಡುಬಂದರೆ ಒಳ್ಳೆಯದೇ ಆಯಿತು. ಸರ್ವೋದಯವಾಗಲಿ, ಆದರೆ ಈ ಪರಿಣಾಮಗಳು ಆನುಷಂಗಿಕವಾದವುಗಳು ಮಾತ್ರ. ಮೂಲೋದ್ದೇಶ ಇದಲ್ಲವೇ ಅಲ್ಲ.

ಇಂಥ ಅನ್ವೇಷಣೆಯ ನಡವಳಿಕೆಯಲ್ಲಿ, ಅದು ಕಲೆಗೆ ಸಂಬಂಧಿಸಿದ್ದಾಗಲೀ ಇಲ್ಲವೇ ವೈಜ್ಞಾನಿಕ ರೀತಿಯದಾಗಲಿ, ಇದರ ದಾರಿಯಲ್ಲಿ ನಿಯೊಫಿಲಿಯ (ನಾವೀನ್ಯಾಕರ್ಷಣೆ) ಮತ್ತು ನಿಯೋಫೋಬಿಯ (ನಾವೀನ್ಯ ವಿಕರ್ಷಣೆ) ಇವುಗಳ ತುಡಿತಗಳ ಸತತ ಯುದ್ಧ ನಡೆದಿರುತ್ತದೆ ನಾವೀನ್ಯಾಕರ್ಷಣೆ ನಮ್ಮನ್ನು ಹೊಸ ಅನುಭವಗಳತ್ತ ನೂಕುತ್ತ ನವೀನವಾದದ್ದನ್ನು ಬಯಸಲು ಪ್ರೇರೇಪಿಸುತ್ತದೆ. ನಾವೀನ್ಯ ವಿಕ

ರ್ಷಣೆಯು ನಮ್ಮನ್ನು ತಡೆದು ನಿಲ್ಲಿಸುತ್ತದೆ ಹಳೆಯ, ಪರಿಚಿತವಾದದ್ದರಲ್ಲಿ ಆಶ್ರಯ ಪಡೆಯುವಂತೆ ಪ್ರೇರೇಪಿಸುತ್ತದೆ. ಈ ಎರಡೂ ಎಳೆತಗಳು ನಮ್ಮನ್ನು ಸತತವಾಗಿ ಎಳೆಯುತ್ತ ಲಂಬನದ ಗುಂಡಿನ ಸ್ಥಿತಿಗೆ ದೂಡುತ್ತವೆ. ಒಂದು-ಪ್ರಚೋದನಾತ್ಮಕ ಹೊಸ ಅನುಭವಗಳ ಆಮಿಷ ಒಡ್ಡಿದರೆ, ಇನ್ನೊಂದು ಸ್ನೇಹದ, ಬೆಚ್ಚನೆಯ ಹಳೆಯ ಪರಿಚಿತ ಪರಿಸ್ಥಿತಿಯ ಆಸೆ ತೋರಿಸುತ್ತದೆ. ನಾವು ಒಂದು ವೇಳೆ ನಾವೀನ್ಯಾಕರ್ಷಣೆಯನ್ನು ಕಳೆದುಕೊಂಡರೆ ದರಿಗಟ್ಟುತ್ತೇವೆ, ಕೊಳೆಯುತ್ತೇವೆ. ಇನ್ನು ಒಂದು ವೇಳೆ ನಾವೀನ್ಯದ ವಿಕರ್ಷಣೆ ಕೈತಪ್ಪಿದರೆ ನಾವು ಕಂದಕದ ಆಳ ಅರಿತುಕೊಳ್ಳಲು ನೆಗೆಯುವಂತೆ–ವಿನಾಶದ ಕಂದರಕ್ಕೆ ನುಗ್ಗುತ್ತೇವೆ. ಈ ವಿರುದ್ಧ ಸೆಳೆತಗಳು ನಮ್ಮ ನಿತ್ಯ ಜೀವನದಲ್ಲಿನ ಫ್ಯಾಶನ್ನುಗಳ ಬದಲಾವಣೆಗೆ, ಬಟ್ಟೆ ಮತ್ತು ಕೇಶಶೈಲಿಯಲ್ಲಿನ ವ್ಯತ್ಯಾಸಗಳಿಗೆ, ಪೀಠೋಪಕರಣಗಳು ಮತ್ತು ಕಾರುಗಳ ವಿನ್ಯಾಸದ ಬದಲಾವಣೆಗೆ ಮಾತ್ರ ಕಾರಣವಾಗದೇ, ಅತ್ಯಂತ ಆಳವಾಗಿ, ಇಡೀ ಸಂಸ್ಕೃತಿಯಲ್ಲಿನ ಪಲ್ಲಟಗಳಿಗೆ, ಸಾಂಸ್ಕೃತಿಕ ವಿಕಾಸದ ಪ್ರವಾಹಕ್ಕೆ ಕಾರಣವಾಗುತ್ತವೆ. ನಾವು ಅನ್ವೇಷಿಸುತ್ತೇವೆ. ಹಿಮ್ಮೆಟ್ಟುತ್ತೇವೆ. ನಾವು ಹುಡುಕಾಡುತ್ತಲೇ ನೆಲೆಗೊಳ್ಳುತ್ತೇವೆ. ಹಂತ ಹಂತವಾಗಿ ನಾವು ನಮ್ಮ 'ಸ್ವ'ತ್ವದ ಬಗೆಗೆ, ನಾವು ಬದುಕುವ ಸಂಕೀರ್ಣ ಪರಿಸರದ ಬಗೆಗಿನ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುತ್ತ ಹೋಗುತ್ತೇವೆ.

* * *

ಡೆಸ್ಮಂಡ್ ಮೊರಿಸ್‌ನು ಈ ಎಲ್ಲ ವಿಶ್ಲೇಷಣೆಯ ಹಿನ್ನೆಲೆಗೆ ಮಂಗ, ಚಿಂಪಾಂಜಿ ಮತ್ತು ಮಾನವ ಶಿಶುಗಳ ಮಾನಸಿಕ ಬೆಳವಣಿಗೆಯ ತುಲನಾತ್ಮಕ ಅಧ್ಯಯನ ನೀಡುತ್ತಾನೆ. ಈ ಎಲ್ಲ ಪ್ರಾಣಿಗಳಲ್ಲಿರುವ ಆವಿಷ್ಕಾರದ ತುಡಿತ ಮತ್ತು ಅದು ಸಾಧಿತವಾಗುವ ಮಾರ್ಗದಲ್ಲಿ ಅವು ನಿಯೋಫಿಲಿಯ–ನಿಯೋಫ್ಫೋಬಿಯಗಳ ಒತ್ತಡಕ್ಕೆ ಸಿಕ್ಕಿಹಾಕಿಕೊಳ್ಳುವ ಅನುಭವದ ಬಗ್ಗೆ, ಅವುಗಳ ಸಮತೋಲನದಲ್ಲಿ ಸಾಧಿತವಾಗುವ ಮಾನವ ಸ್ವಾಸ್ಥ್ಯದ ಬಗ್ಗೆ ಚರ್ಚಿಸುವ ಮೊರಿಸ್‌ನ ಈ ಚರ್ಚೆ ನಮ್ಮ ಸದ್ಯದ ಸಾಂಸ್ಕೃತಿಕ ಸಂದರ್ಭಕ್ಕೆ ಒಂದು ವೈಜ್ಞಾನಿಕ ಹಿನ್ನೆಲೆಯನ್ನು ಒದಗಿಸಬಲ್ಲದೆಂದುಕೊಳ್ಳುತ್ತೇನೆ.

ಈ ಡೆಸ್ಮಂಡ್ ವಿವರಿಸುವ ನಾವೀನ್ಯದ ಬಗೆಗಿನ ಆಕರ್ಷಣೆ–ವಿಕರ್ಷಣೆಗಳ (ನಿಯೋಫಿಲಿಯ–ನಿಯೋಫೋಬಿಯ) ಡಯಲೆಕ್ಟಿಕ್ಸ್ ಸಹಜವಾದದ್ದು. ಇದು ಬೆಳವಣಿಗೆಯ, ವಿಕಾಸದ ಒಂದು ಭಾಗವಾಗಿ ಸಾಧ್ಯವಾಗುವಂತಹದು. ಇದು ಜೀವಿಗಳ ಅಂತರಂಗದ ತುಡಿತದಂತೆ ಹೊರಹೊಮ್ಮುವಂಥದು. ಈ ಸಂಘರ್ಷ ಸಾಗಿಬರುವ ದಾರಿಯ ಅನುಭವಗಳಿಂದ ಜೀವಿಗಳ ಪ್ರಜ್ಞೆಗೆ ಹೊಸತು ಸೇರುತ್ತ ಹೋಗುತ್ತದೆ. ಆದರೆ ನಮ್ಮ ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿನ ಹಳೆ–ಹೊಸತುಗಳ ಸಂಘರ್ಷ ಇಷ್ಟು ಸರಳ, ಸಹಜವಾದದ್ದಲ್ಲ. ಏಕೆಂದರೆ, ಬೆಳವಣಿಗೆಯ ಸಂದರ್ಭದಲ್ಲಿ ಶಿಶುಗಳಾಗಲೀ, ವಿಕಾಸದ ಸಂದರ್ಭದಲ್ಲಿ ಮನುಷ್ಯ ಮತ್ತು ಪ್ರಾಣಿಗಳಾಗಲೀ ಈ ಸಂಘರ್ಷದಲ್ಲಿ ನಿರಪೇಕ್ಷವಾಗಿ ಪಾಲುಗೊಳ್ಳಲು ಸಾಧ್ಯವಾದಂತೆ ಇಂದಿನ ನಮಗೆ ಸಾಧ್ಯವಾಗ

ಲಾರದು. ನಾಗರಿಕತೆ ನಮ್ಮ ಮೇಲೆ ವಿಪರೀತವಾದ ಪರಿಣಾಮ ಬೀರಿದೆ. ಸೃಷ್ಟಿಯ ಸಹಜ ಲಯದೊಂದಿಗೆ ತಾದಾತ್ಮ್ಯ ಹೊಂದಿದ್ದ ಮನುಷ್ಯ ಇಂದು ಆ ಮೂಲಸ್ಥಿತಿಯಿಂದ ಬಹುದೂರ ಸಾಗಿಬಂದಿದ್ದಾನೆ. ಕಾಡು, ಮರ, ನದಿಗಳ ಸಹಜ ಸ್ವಾತಂತ್ರ್ಯ ಅಪಹರಿಸಿದ ಮನುಷ್ಯ ಅಹಂಕಾರಪೀಡಿತನಾಗಿದ್ದಾನೆ–ಹೆಚ್ಚು ಹೆಚ್ಚು ಸಾಮ್ರಾಜ್ಯಶಾಹಿಯಾಗುತ್ತಿದ್ದಾನೆ. ಕ್ರೂರಿಯಾಗಿದ್ದಾನೆ. ಆರಂಭದಲ್ಲಿದ್ದ ಅವನ ಸ್ನಿಗ್ಧ ಮನಸ್ಸು ಇಂದು ಪೆಡುಸಾಗಿದೆ. ಇದರೊಂದಿಗೇ, ತನ್ನ ಸುತ್ತಲಿನದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತ ಬೆಳೆಸಿಕೊಂಡ ತಾತ್ವಿಕ ನಿಲುವುಗಳು ಇಂದು ತಮ್ಮ ಮೂಲ ಉದ್ದೇಶಗಳಾಚೆಗೆ ಬೆಳೆದು ಒಂದೊಂದೂ ಬದ್ಧತೆಯ ಗುಂಪುಗಳನ್ನು ಬೆಳೆಸಿವೆ. ಅದಕ್ಕೆ ಹಳೆ-ಹೊಸತುಗಳ ಸಂಘರ್ಷಕ್ಕೆ ಎರಡಕ್ಕಿಂತ ಹೆಚ್ಚಿನ ಆಯಾಮಗಳು ಸೇರುತ್ತ ಅದು ಸಂಕೀರ್ಣ ಬಲೆಯಾಗುತ್ತದೆ.

ಹಳೆ ಹೊಸತುಗಳ ಸಂಘರ್ಷದ ಇಂದಿನ ಸ್ಥಿತಿ 'ಹೊಸಚಿಗುರು-ಹಳೆ ಬೇರು' ಸೇರುವ ಕ್ರಿಯೆಯಲ್ಲ. ಇದು ಹುತ್ತುಗಟ್ಟುತ್ತ ಕಟ್ಟಿಕೊಳ್ಳುವ ಕ್ರಿಯೆ. ಇದು ಭೂತದ ಭಾಷ್ಪೀಭವನ ಕ್ರಿಯೆ. ಮೋಡಗಟ್ಟಿ ಮಳೆಗರೆಯುವ ನೃತ್ಯಯಜ್ಞ. ಭೂತಕಾಲಕ್ಕೆ ಒದಗಿಬರುವ ಮಳೆಯು ವರ್ತಮಾನ. ಹಳೆಯದರ ನೆಲೆಗಟ್ಟನ್ನು ಸೀಳಿಕೊಂಡು ಹುಟ್ಟಿಬರುವ ಹೊಸಸೃಷ್ಟಿಗಾಗಿನ ಈ ಸಂಕೀರ್ಣ ಸಂಘರ್ಷ ನಮ್ಮಿಂದ ಅತ್ಯಂತ ಎಚ್ಚರದ ಪಾಲುಗೊಳ್ಳುವಿಕೆಯನ್ನು ಬಯಸುತ್ತದೆ.

ಟಾಗೂರರ ಶ್ರೀನಿಕೇತನ: ರಚನಾತ್ಮಕ ಕಾರ್ಯಕ್ರಮಗಳ ಕ್ಷೇತ್ರ

ಜಿ. ಎ. ಕಾಮಪಾಲರಾವ್

'೫೦ ರ ದಶಕದ ಮಧ್ಯಭಾಗ ಸಮಾಜ ಶಿಕ್ಷಣ ವ್ಯವಸ್ಥಾಪಕನಾಗಿ ಸೇರಿಕೊಂಡ ನಂತರ ನಾನು ಶಿರಾಳಕೊಪ್ಪದ ಗ್ರಾಮಾಂತರ ಸಾಮಾಜಿಕ ಯೋಜನಾ ಕ್ಷೇತ್ರದಲ್ಲಿ ವಾರದ ಪೂರ್ವಭಾವೀ ತರಬೇತಿಯನ್ನೂ ಪಡೆಯುತ್ತಿದ್ದೆ. ಅಲ್ಲಿಂದ ವಾಪಸಾಗುವ ವೇಳೆಗೆಶ್ರೀನಿಕೇತನದಲ್ಲಿ ಸಮಾಜ ಶಿಕ್ಷಣ ವ್ಯವಸ್ಥಾಪಕರುಗಳ ತರಬೇತಿ ಕೇಂದ್ರಕ್ಕೆ ೫ ತಿಂಗಳ ವೃತ್ತಿತರಬೇತಿಗೆ ಕಳುಹಿಸಲು ಸರಕಾರದ ಆದೇಶವಾಗಿತ್ತು. ವಿವಿಧ ಕ್ಷೇತ್ರಗಳಿಂದ ಹೊರಟದ್ವರೂ, ನಾವೆಲ್ಲ ಒಂದೇ ದಿನ ತರಬೇತಿಗೆ ಹಾಜರಾದೆವು.

ಟಾಗೋರರ ರಚನಾತ್ಮಕ ಕಾರ್ಯಕ್ಷೇತ್ರ : ವಿಶ್ವಕವಿ ರವೀಂದ್ರನಾಥ ಟಾಗೋರರು ಶಾಂತಿನಿಕೇತನ ಸ್ಥಾಪಿಸಿದ ಕೆಲವೇ ವರ್ಷಗಳಲ್ಲಿ ಗ್ರಾಮೀಣ ಅಭಿವೃದ್ಧಿಗೆ ತಮ್ಮದೇ ಆದ ಕಾರ್ಯಕ್ರಮಗಳನ್ನು ಆರಂಭಿಸಿದರು. ೧೯೨೦ರ ವೇಳೆಗೆ ಈ ಕಾರ್ಯಕ ಮಗಳು ಒಂದು ವ್ಯವಸ್ಥಿತ ರೂಪಕ್ಕೆ ಬಂದು, ಕ್ಷೇತ್ರದ ಮೊದಲನೆಯ ನಿರ್ದೇಶಕರು ಟಾಗೋರರ ಗೆಳೆಯ ಡಾ. ಎನ್. ಕೆ. ಎಲ್ಮ್ಹರ್ಸ್ಟ್‌ರವರಾಗಿದ್ದರು. ಇವರು ಜೀವನದ ಬಹು ಭಾಗವನ್ನು ಕವಿ ರವೀಂದ್ರರ ಜತೆಯಲ್ಲಿ ಕಳೆದು, ನಂತರ ತಮ್ಮ ದೇಶವಾದ ಇಂಗ್ಲೆಂಡಿಗೆ ವಾಪಸಾದರು ನಂತರ ಭಾರತೀಯರೇ ಆದ ಶ್ರೀ ಕಾಲಿಮೋಹನ್ ಘೋಷ್‌ರವರು ನಿರ್ದೇಶಕರಾಗಿ, ಅನೇಕ ವರ್ಷಗಳ ಸೇವೆ ಸಲ್ಲಿಸಿ ತಮ್ಮ ಜೀವನವನ್ನೇ ಶ್ರೀನಿಕೇತನದಲ್ಲಿ ಕಳೆದು ವಿವಿಧ ವಿಭಾಗಗಳನ್ನು ಸಂಘಟಿಸಲು ಕಾರಣರಾದರು. ಈ ಅನುಭವದ ಹಿನ್ನೆಲೆಯಲ್ಲಿ, ಶ್ರೀನಿಕೇತನವನ್ನು ಸಮಾಜ ಶಿಕ್ಷಣ ವ್ಯವಸ್ಥಾಪಕರ ತರಬೇತಿಗೆ ಒಂದು ಶಿಕ್ಷಣ ಕೇಂದ್ರವನ್ನಾಗಿ ಆಯ್ಕೆ ಮಾಡಿಕೊಂಡರು. ೩೩ ವರ್ಷಗಳ ನಂತರ, ಭಾರತದಲ್ಲಿ ಗ್ರಾಮೀಣ ವಿಶ್ವವಿದ್ಯಾನಿಲಯಗಳ ಸ್ಥಾಪನೆಗೆ ರಚನೆಯಾದ ಸಮಿತಿಯಲ್ಲಿ ಡಾ|| ಎನ್. ಎಲ್ಮ್ಹರ್ಸ್ಟ್‌ರವರು, ಸದಸ್ಯರಾಗಿದ್ದು, ಆ ಅವಧಿಯಲ್ಲಿ ತಮ್ಮ ನೆಚ್ಚಿನ ಕಾರ್ಯಕ್ಷೇತ್ರಕ್ಕೂ ಭೇಟಿ ಇತ್ತಿದ್ದರು. ಶಾಂತಿನಿಕೇತನವು, ವಿಶ್ವಭಾರತಿ ವಿಶ್ವವಿದ್ಯಾನಿಲಯದ ವಿವಿಧ ಶಾಲೆ, ಕಾಲೇಜು, ಉನ್ನತ ವ್ಯಾಸಂಗದ ತರಗತಿಗಳನ್ನು ಹೊಂದಿದ್ದರೆ, ಶ್ರೀನಿಕೇತನವು, ರಚನಾತ್ಮಕ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಅನುಕೂಲಿಸುವ, ವ್ಯವಸಾಯಕ್ಷೇತ್ರ, ಪಶುಪಾಲನಾ ಕ್ಷೇತ್ರ, ವಯಸ್ಕರ ಶಿಕ್ಷಣ ತರಬೇತಿ ಕೇಂದ್ರ, ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಆರೋಗ್ಯ ಕೇಂದ್ರಗಳನ್ನು ಒಳಗೊಂಡು, ಆರೋಗ್ಯ ಸೇವಾಕೇಂದ್ರಗಳನ್ನು ಹೊಂದಿದೆ.

ರವೀಂದ್ರನಾಥ ಟಾಗೂರರು, ತಮ್ಮದೇ ಆದ ವಿದ್ಯಾಭ್ಯಾಸದ ತತ್ವಗಳನ್ನು, ಒಳ

ಗೊಂಡ, ವಿದ್ಯಾಪದ್ಧತಿಯಲ್ಲಿ ಶಿಕ್ಷಣ ನೀಡುವುದಕ್ಕಾಗಿ, ಉಪಾಧ್ಯಾಯ ವೃತ್ತಿ ತರಬೇತಿ ಕೇಂದ್ರವನ್ನು (ಪದವೀಧರರಿಗೆ, ಹಾಗೂ ಪದವೀಧರರಲ್ಲದವರಿಗೆ) ಸ್ಥಾಪಿಸಿದ್ದಾರೆ. ಈ ಕೇಂದ್ರವನ್ನು "ವಿನಯ ಭವನ" ಎಂದು ಹೆಸರಿಸಲಾಗಿದೆ. ಹೀಗೆ ಈ ಮೂರೂ ಸಂಸ್ಥೆಗಳು ಸೇರಿ ವಿಶ್ವಭಾರತಿ ಕೇಂದ್ರ ವಿಶ್ವವಿದ್ಯಾನಿಲಯವಾಗಿದ್ದು, ರಾಷ್ಟ್ರದ ಪ್ರಧಾನ ಮಂತ್ರಿಗಳು ಈ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿರುತ್ತಾರೆ. ದಿವಂಗತ ಪ್ರಧಾನಿ ಜವಹರಲಾಲ್‌ರವರು ಈ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿದ್ದರು. ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಬಾಲ್ಯದಲ್ಲಿ ಇಲ್ಲಿ ಸ್ವಲ್ಪಕಾಲ ವ್ಯಾಸಂಗ ಮಾಡಿರುತ್ತಾರೆ. ಶ್ರೀ ಟಾಗೂರರು ಶಾಂತಿನಿಕೇತನ ಶಾಲೆ ಆರಂಭಿಸಿದ ಮೇಲೆ, ಸುತ್ತಮುತ್ತಣ ಪ್ರದೇಶದ ಜನತೆಯ ಪರಿಸ್ಥಿತಿಗಳ ಪರಿಚಯವಾದ ಮೇಲೆ, ಗ್ರಾಮೀಣ ಅಭಿವೃದ್ಧಿಯ ಬಗೆಗೆ ಆಳವಾಗಿ ಚಿಂತನೆ ಮಾಡಿದ ನಂತರ ಆರಂಭಿಸಿದ ಸಂಸ್ಥೆಯೇ ಶ್ರೀನಿಕೇತನ. ಈ ಸಂಸ್ಥೆಯ ಕಾರ್ಯಕ್ಷೇತ್ರಗಳ ಪರಿಚಯ ಮಾಡಿಕೊಡುವುದೇ ಈ ಲೇಖನದ ಪ್ರಯತ್ನ.

ಶ್ರೀನಿಕೇತನದಲ್ಲಿ ವ್ಯವಸಾಯ ಕ್ಷೇತ್ರ ಸ್ಥಾಪನೆಯಾಗಿದ್ದು, ಇಲ್ಲಿ ಉತ್ತಮ ತಳಿಗಳ ಪ್ರಯೋಗ, ಹಾಗೂ ಪ್ರಮಾಣಿತ ಬೀಜಗಳ ಸರಬರಾಜು. ಜತೆಗೆ ರಸಗೊಬ್ಬರಗಳ ಉಪಯೋಗದ ಬಗೆಗೆ ವಿಸ್ತೃತ ಮಾಹಿತಿಯ ಜತೆಗೆ, ರಸಗೊಬ್ಬರಗಳನ್ನು ಬೆಳೆಗಳಿಗೆ ಹಾಕುವ ವಿಧಾನದ ಪರಿಚಯ ಮಾಡಿ ಕೊಡುತ್ತಿದ್ದಾರೆ. ಬೆಳೆಗಳ ಪ್ರಾತ್ಯಕ್ಷಿಕೆಗಳನ್ನು ನೋಡಿ ಆಯಾ ಬೆಳೆಗಳ ಬಗೆಗೆ ಹೆಚ್ಚು ಮಾಹಿತಿ ಪಡೆಯುವ ಅವಕಾಶವನ್ನೂ ಎಲ್ಲ ರೈತರಿಗೂ ಮಾಡಿಕೊಡಲಾಗುತ್ತದೆ. ಗ್ರಾಮಾಂತರಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತರ ಮುಖಾಂತರ ಈ ತಿಳುವಳಿಕೆ ನೀಡಲಾಗುತ್ತಿದೆ. ಹಾಗೆಯೇ ಉತ್ತಮ ಪಶುಪಾಲನಾ ಕ್ರಮಗಳು, ಕೋಳಿ ಸಾಕಣೆ ಬಗೆಗೆ ಮಾಹಿತಿ ಪೂರೈಸಲಾಗುತ್ತದೆ ಇಲ್ಲಿ ಒಂದು ಮುಖ್ಯ ಗ್ರಾಮ ಕೇಂದ್ರವೂ (Key Village Scheme). ಇದೆ. ಇದರ ಸೇವೆಯು ಶ್ರೀನಿಕೇತನದ ವ್ಯಾಪ್ತಿಯ ಎಲ್ಲಾ ಹಳ್ಳಿಗಳಿಗೂ ದೊರೆಯುವುದು. ಆರೋಗ್ಯ ಕಾರ್ಯಕರ್ತರು ಹಳ್ಳಿಗಳಿಗೆ ಭೇಟಿ ಇತ್ತು, ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳ ಬಗೆಗೆ ತಿಳುವಳಿಕೆ ನೀಡುವರು. ಶ್ರೀನಿಕೇತನದ ವೈಶಿಷ್ಟ್ಯವೆಂದರೆ, ಅಲ್ಲಿನ ಆರೋಗ್ಯ ಸಹಕಾರಿ ಸಂಘಗಳೂ ಆಯಾ ಹಳ್ಳಿಯ ಎಲ್ಲಾ ಜನರೂ ಸಹಕಾರ ಸಂಘಕ್ಕೆ ಸದಸ್ಯರಾಗಬಹುದು. ಪ್ರತಿಯೊಬ್ಬ ಸದಸ್ಯನೂ, ತನ್ನ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿ, ಸಹಕಾರ ಸಂಘಕ್ಕೆ ಮನ್ನಣೆ ನೀಡಬೇಕು. ಸರಕಾರದಿಂದ ದೊರೆಯುವ, ಮಲೇರಿಯ ನಿವಾರಣೆ, ಕುಷ್ಠ, ಕ್ಷಯ ರೋಗ ನಿವಾರಣೆ ಕಾರ್ಯಕ್ರಮಗಳಲ್ಲಿ ದೊರೆಯುವ ಉಚಿತ ಔಷಧಿಗಳನ್ನು, ಹಂಚುವ ಜೊತೆಗೆ, ತಮ್ಮ ಖಾಯಿಲೆಗಳಿಗೆ ಔಷಧಿಗಳು ಅಲ್ಪ ಬೆಲೆಗೆ ಎಲ್ಲ ಸದಸ್ಯ ಕುಟುಂಬಗಳಿಗೂ ದೊರೆಯುವುದು. ಮನೆಗಳಿಗೆ ಭೇಟಿ ನೀಡಲು ಪ್ರತ್ಯೇಕವಾಗಿ ಹಣ ಕೊಡಬೇಕಾಗುವುದು. ಶಾಂತಿನಿಕೇತನದಲ್ಲಿರುವ ಆಸ್ಪತ್ರೆ ಸೌಲಭ್ಯಗಳಿಗೂ ಸಂಘದ ಸದಸ್ಯರಿಗೆ ಅರ್ಹತೆ ಇರುವುದು. ಇಂತಹ ಸಂಘಗಳು ತಮ್ಮ ಕ್ಷೇತ್ರದ ಆಡಳಿತವನ್ನು ಸಂಪೂರ್ಣವಾಗಿ ನೋಡಿಕೊಳ್ಳು

ತ್ತವೆ. ಇಂತಹ ಒಂದು ಸಹಕಾರ ಸಂಘವು ಪಡೆದ ಲಾಭದಿಂದ ಆ ಗ್ರಾಮದ ಶಾಲಾ ಕಟ್ಟಡವನ್ನು ಕಟ್ಟಿರುತ್ತಾರೆ.

ವ್ಯವಸಾಯದ ಜತೆಗೆ ಮನೆಗಳಲ್ಲೇ ನಡೆಸುವ ಗುಡಿ ಕೈಗಾರಿಕೆ, ಗ್ರಾಮ ಕೈಗಾರಿಕೆಗಳ ಬಗೆಗೆ, ಕುಶಲ ಕರ್ಮಿಗಳಿಗೆ, ಶ್ರೀನಿಕೇತನದಲ್ಲಿರುವ ಶಿಲ್ಪ ಸದನದಲ್ಲಿ, ಕಮ್ಮಾರಿಕೆ, ಮರಗೆಲಸ, ಕುಂಬಾರಿಕೆ, ನೇಯ್ಗೆ, ಚರ್ಮದ ಕೆಲಸ ಮೊದಲಾದುವುಗಳಲ್ಲಿ ತರಬೇತಿ ಕಾರ್ಯಕ್ರಮಗಳಿವೆ. ಶ್ರೀನಿಕೇತನದಿಂದ ಪರಿಣತರು, ಕ್ರಮವಾಗಿ ಕುಶಲಕರ್ಮಿಗಳನ್ನು ಅವರ ಗ್ರಾಮಗಳಲ್ಲಿಯೇ ಭೇಟಿಯಾಗಿ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡುವರು. ಕೆಲವು ಸಂದರ್ಭಗಳಲ್ಲಿ ಕುಶಲಕರ್ಮಿಗಳಿಗೆ ಮಾರಾಟ ಸೇವೆಯ ಸೌಲಭ್ಯವನ್ನು ಕೊಡುತ್ತಾರೆ. ಶಿಲ್ಪಸದನದ ಕೆಲಸಗಳನ್ನು ಮಾಡಿದರೆ ಸೂಕ್ತವಾದ ಕೂಲಿ ಪಡೆಯುವ ಅವಕಾಶಗಳು ಇವೆ. ವಿವಿಧ ಕಸಬುಗಳಲ್ಲಿ ತರಬೇತಿ ಪಡೆಯಲು ಶ್ರೀನಿಕೇತನ ಕ್ಷೇತ್ರದ ಜನರೇ ಅಲ್ಲದೆ, ವಿವಿಧ ರಾಜ್ಯಗಳಿಂದಲೂ ಜನರು ತರಬೇತಿಗೆ ಬರುತ್ತಾರೆ. ಇಂತಹವರಿಗೆಲ್ಲಾ ಊಟ ವಸತಿಗಳನ್ನು ಏರ್ಪಡಿಸಿ, ಈ ವೆಚ್ಚವನ್ನು ಅವರಿಗೆ ದೊರೆಯುವ ಮಿತವೇತನದಿಂದ, ಮುರಿದುಕೊಳ್ಳಲಾಗುತ್ತದೆ. ಶ್ರೀನಿಕೇತನದ ವ್ಯಾಪ್ತಿಯಲ್ಲಿ ಈ ಕೈಗಾರಿಕೆಗಳನ್ನು ಮಾಡಬಯಸುವವನಿಗೆ ಸಾಲ, ಮಾರ್ಗದರ್ಶನ, ತಾಂತ್ರಿಕ ಸೇವೆಗಳನ್ನು ಒದಗಿಸಲಾಗುವುದು. ಶಿಲ್ಪಸದನದ ಸಂಚಾರಿ ಸೇವಾ ಘಟಕವು ಈ ಕಾರ್ಯಕ್ರಮದ ಜವಾಬ್ದಾರಿಯನ್ನು ಪಡೆದಿದೆ. ಈ ಕೇಂದ್ರದಲ್ಲಿ ತಯಾರಿಸಲ್ಪಟ್ಟ ವಸ್ತುಗಳಿಗೆ, ರಾಜ್ಯ ಹಾಗೂ ಹೊರ ರಾಜ್ಯಗಳಿಂದ, ಉತ್ತಮ ಬೇಡಿಕೆಯಿದೆ. ಎಲ್ಲ ತಯಾರಿಕೆಗಳ ಗುಣಮಟ್ಟ ಉತ್ತಮವಾಗಿರುವುದೇ ಇದಕ್ಕೆ ಕಾರಣ.

ಯುವಕಾರ್ಯಕ್ರಮಗಳಲ್ಲಿ ಗ್ರಾಮಾಂತರ ಯುವಕರ ಸಂಘಟನೆಗೆ, "ಬ್ರತಿಚಾರಿ" ಕಾರ್ಯಕ್ರಮವಿದೆ. ವ್ರತವನ್ನು ನಡೆಸಿಕೊಂಡು ಹೋಗುವ ಪ್ರತಿಜ್ಞೆ ಮಾಡಿ, ಗ್ರಾಮಾಂತರದ ಎಲ್ಲಾ ಯುವಕರೂ, ತಮ್ಮ ತಮ್ಮ ಸಂಘಗಳಲ್ಲಿ ಕಾರ್ಯಕ್ರಮ ನಡೆಸುವುದರ ಜತೆಗೆ, ವರ್ಷಕ್ಕೊಮ್ಮೆ ನಡೆಯುವ ಶ್ರೀನಿಕೇತನ ಮೇಳದಲ್ಲಿ, ಯುವ ಸ್ಪರ್ಧೆಗಳಲ್ಲಿ ಭಾಗವಹಿಸುವರು. ಸ್ಪರ್ಧೆಗಳ ವಿಜಯಿಗಳಿಗೆ, ಬಹುಮಾನಗಳನ್ನು ನೀಡಲಾಗುವುದು. ಯುವಜನರಲ್ಲಿ ಶಿಸ್ತು-ಸಂಯಮ, ಸೇವೆ ಇವುಗಳ ಬಗೆಗೆ ಉತ್ತಮ ತರಬೇತಿ ನೀಡಲಾಗುವುದು.

ರಚನಾತ್ಮಕ ಕಾರ್ಯಕ್ರಮಗಳಲ್ಲಿ ಮುಖ್ಯವಾದ ವಿದ್ಯಾಭ್ಯಾಸಕ್ಕೆ ಗ್ರಾಮಾಂತರಗಳಲ್ಲಿ ಶಾಲಾ ಕಟ್ಟಡಗಳ ನಿರ್ಮಾಣ, ರಂಗಸ್ಥಳ ನಿರ್ಮಾಣ ಮೊದಲಾದ ಕಾರ್ಯಕ್ರಮಗಳಿವೆ. ವಯಸ್ಕರ ಶಿಕ್ಷಣಕ್ಕೆ "ಲೋಕ ಶಿಕ್ಷಣ" ಕಾರ್ಯಕ್ರಮವಿದೆ. ಅಕ್ಷರ ಕಲಿತವರಿಗೆ ವಾಚನಾಲಯಗಳನ್ನು ಸ್ಥಾಪಿಸಲಾಗಿದೆ. ಶ್ರೀನಿಕೇತನದಲ್ಲಿರುವ ಕೇಂದ್ರ ಗ್ರಂಥಾಲಯದಿಂದ, ಹೊಸ ಪುಸ್ತಕಗಳನ್ನು ಒದಗಿಸಿ ನಂತರ ಅವನ್ನು ಪಡೆದು ನಂತರ ಹೊಸ ಪುಸ್ತಕಗಳನ್ನು ಪೂರೈಸುವ ಕಾರ್ಯಕ್ರಮವೂ ಇದೆ. ಕೇಂದ್ರ ಗ್ರಂಥಾಲಯದಲ್ಲಿ ಎಲ್ಲಾ ಅಭಿರುಚಿಗಳಿಗೆ ಅನುಗುಣವಾದ ಬೃಹತ್ ಗ್ರಂಥಭಂಡಾರವಿದೆ.

ವರ್ಷಕ್ಕೊಮ್ಮೆ ಮಹಾತ್ಮ ಗಾಂಧೀಜಿಯವರು, ಶಾಂತಿನಿಕೇತನಕ್ಕೆ ಭೇಟಿ ಇತ್ತು, ಕೆಲವುಕಾಲ ತಂಗಿದ್ದುದರ ನೆನಪಿನಲ್ಲಿ ಮಾರ್ಚ್ ತಿಂಗಳಿನ ೧೦ನೇ ತಾರೀಖನ್ನು "ಗಾಂಧಿ ದಿನ"ವನ್ನಾಗಿ ಆಚರಿಸುತ್ತಾರೆ. ಶಾಂತಿನಿಕೇತನದ ಎಲ್ಲ ವಿದ್ಯಾರ್ಥಿಗಳೂ ಯಾವುದಾದರೊಂದು ಗ್ರಾಮವನ್ನು ಆರಿಸಿಕೊಂಡು, ಅಲ್ಲಿ ಆದಿನ ಸ್ವಚ್ಛತಾಕಾರ್ಯಕ್ರಮ, ಗ್ರಾಮ ನಿರ್ಮಲೀಕರಣ, ಗೃಹಾಲಂಕರಣ ಹಾಗೂ ಮನರಂಜನಾ ಕಾರ್ಯಗಳನ್ನು ನಡೆಸುವರು. ಆ ದಿನ ಎಲ್ಲಾ ವಿದ್ಯಾರ್ಥಿಗಳೂ ಮತ್ತೊಬ್ಬರಿಗೆ ಅನುಕೂಲವಾಗುವ ಯಾವುದಾದರೊಂದು ಕಾರ್ಯವನ್ನು ಮಾಡುವ ಪರಿಪಾಠ ಬೆಳೆದು ಬಂದಿದೆ.

ಈ ಎಲ್ಲಾ ಕಾರ್ಯಕ್ರಮಗಳನ್ನು ಕಾರ್ಯಾಚರಣೆಗೆ ತರುವುದಕ್ಕೆ ಶ್ರೀನಿಕೇತನದ ಪ್ರತಿನಿಧಿಯಾಗಿ, ಒಬ್ಬ ಗ್ರಾಮಸೇವಕನಿರುತ್ತಾನೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬಹುಉದ್ದೇಶಗಳ ಕಾರ್ಯಕರ್ತನಿಗೆ, ಇಡಲಾದ "ಗ್ರಾಮ ಸೇವಕ" ಎಂಬ ಹೆಸರು ಈ ಕ್ಷೇತ್ರದಿಂದಲೇ ಬಂದಿದ್ದು ಎಂದರೆ, ಅತಿಶಯದ ಮಾತಲ್ಲ. ಈ ಕಾರ್ಯಕರ್ತರು, ಅತ್ಯಲ್ಪ ಸಂಭಾವನೆಗೆ, ಗ್ರಾಮಾಂತರಗಳಲ್ಲಿ ನೆಲಸಿ ಉತ್ತಮ ಕಾರ್ಯ ನಿರ್ವಹಿಸಿದರು. ಇವರುಗಳೊಂದಿಗೆ, ಟಾಗೋರರು ತುಂಬಾ ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದುದೇ ಅಲ್ಲದೆ, ಪ್ರತಿಯೊಬ್ಬ ಗ್ರಾಮ ಸೇವಕನ ಪತ್ರಕ್ಕೂ ಸೂಕ್ತವಾದ ಉತ್ತರ ನೀಡಿ, ಮಾರ್ಗದರ್ಶನದ ಜತೆಗೆ ಸಮಸ್ಯೆಗಳ ಪರಿಹಾರಕ್ಕೆ ತಕ್ಕ ಸಲಹೆಗಳನ್ನು ನೀಡುತ್ತಿದ್ದರು. ಅವರ ಪತ್ರಸಂಗ್ರಹದಲ್ಲಿ ಈ ಬಗೆಗೆ ಅನೇಕ ಮಾಹಿತಿಗಳನ್ನು ನಾವು ಈಗಲೂ ನೋಡಬಹುದಾಗಿದೆ. ಕಾರ್ಯಕರ್ತರ ಬಗೆಗೆ ಸಿಟ್ಟಾಗಿ ಬರೆದ ಒಂದು ಪತ್ರವೂ ಸಿಗಲಿಕ್ಕಿಲ್ಲ. ಬದಲಾಗಿ ಸಾಂತ್ವನಗೊಳಿಸುವ, ಅವರನ್ನೂ ಕೆಲ ಕಾಲ ಶ್ರೀನಿಕೇತನಕ್ಕೆ ಭೇಟಿ ನೀಡಿ, ಅಲ್ಲಿಯೇ ಉಳಿಯುವ, ಸಲಹೆ (ದುರ್ಗಾಪೂಜಾ, ಹೋಲಿ, ಮೊದಲಾದ ಸಂದರ್ಭಗಳಲ್ಲಿ) ನೀಡಿದ ಅನೇಕ ಪತ್ರಗಳನ್ನು ಕಾಣಬಹುದು ಅವರಲ್ಲಿ ಕೆಲ ಕಾರ್ಯಕರ್ತರ ಪರಿಚಯವೂ ನಮಗೆ ಆಯಿತು. ಅವೇ ನಮಗೆ ಸ್ಮರಣೀಯ ಅನುಭವಗಳು.

ನಮ್ಮ ತರಬೇತಿ ಅವಧಿಯಲ್ಲಿಯೇ, ಆ ಕ್ಷೇತ್ರಕ್ಕೆ ಒಂದು ರಾಷ್ಟ್ರೀಯ ವಿಸ್ತರಣಾ ಕೇಂದ್ರವೂ ಮಂಜೂರಾಗಿ, ತರಬೇತಿ ನೀಡಲು ಅನುಕೂಲಿಸಲೂ, ಸರಕಾರದಿಂದ ಪೂರಕ ವ್ಯವಸ್ಥೆಯಾಯಿತು. ಆದರೆ ದುರ್ದೈವದ ಸಂಗತಿ ಎಂದರೆ, ಈ ಕ್ಷೇತ್ರದಲ್ಲಿ ಮಾಡುತ್ತಿದ್ದ ಯಾವ ಕಾರ್ಯಕರ್ತನಿಗೂ ಈ ವ್ಯವಸ್ಥೆಯಲ್ಲಿ ಕೆಲಸ ಮಾಡಲು ಅವಕಾಶವಿಲ್ಲ. ಏಕೆಂದರೆ ಸರ್ಕಾರ ನಿಗದಿ ಮಾಡಿದ ಅರ್ಹತೆಗಳು ಅವರಿಗೆ ಇರಲಿಲ್ಲ. ಆದರೆ, ಅವರೆಲ್ಲರೂ ಹಿರಿಯ ಮಟ್ಟದ ಕಾರ್ಯಕರ್ತರಾಗಿದ್ದರು. ಅವರ ಪರಿಶ್ರಮದ ಫಲವಾಗಿಯೇ ಆ ಕ್ಷೇತ್ರದ ಹಳ್ಳಿಗಳಲ್ಲಿ ಹೊಸ ಚೈತನ್ಯ ಬಂದಿತ್ತು. ನಾವು ಭೇಟಿ ಮಾಡಿದ ಹಳ್ಳಿಯಲ್ಲಿನ ಸಾಂಸ್ಕೃತಿಕ ಮಂದಿರ (ಸಮುದಾಯ ಭವನ) ಮೂರು ಬಾರಿ ಬೆಂಕಿಯ ಅನಾಹುತಕ್ಕೆ ಸಿಕ್ಕಿ ಸುಟ್ಟು ಹೋಗಿದ್ದರೂ, ಮತ್ತೆ ಮತ್ತೆ ಸ್ವಪ್ರಯತ್ನದಿಂದಲೆ ಕಟ್ಟಿ, ಕೊನೆಗೆ ತಗಡಿನ ಚಾವಣಿ ಹಾಕಿ, ಬೆಂಕಿ ಅಪಘಾತಕ್ಕೆ ಈಡಾಗದಂತೆ ಖಾಯಂ ಕಟ್ಟಡ ಕಟ್ಟಿದ್ದರು. ಆ ಹಳ್ಳಿಯಲ್ಲಿ ಏಳನೇ ತರಗತಿಯವರೆಗಿನ

ಪ್ರಾಥಮಿಕ ಶಾಲೆ, ಕುಶಲ ಕರ್ಮಿ ತರಬೇತಿ ಕೇಂದ್ರ, ಗ್ರಂಥಾಲಯ, ಲೋಕಶಿಕ್ಷಣ (ವಯಸ್ಕರ ಶಿಕ್ಷಣ), ಆರೋಗ್ಯ ಸಹಕಾರಿ ಸಂಘ, ಉಳಿತಾಯ ಧಾನ್ಯಸಂಗ್ರಹಾಗಾರ, ಬ್ರಹ್ಮಚಾರಿ ಸಂಘ (ಯುವಕ ಸಂಘ) ಹೀಗೆ ಅನೇಕ ಕಾರ್ಯಗಳ ಸಮ್ಮಿಳನವಾಗಿತ್ತು. ಆ ಊರಿನ ಆರೋಗ್ಯ ಸಹಕಾರ ಸಂಘದ ನೂತನ ಕಟ್ಟಡವನ್ನು ಆಗಿನ ಗವರ್ನರ್ ಜನರಲ್‌ರವರಾದ ಶ್ರೀ ಚಕ್ರವರ್ತಿ ರಾಜ್‌ಗೋಪಾಲಾಚಾರಿಯವರು ಉದ್ಘಾಟನೆ ಮಾಡಿದ್ದರು.

ಶ್ರೀನಿಕೇತನ ಮೇಳ : ವರ್ಷಕ್ಕೊಮ್ಮೆ ಫೆಬ್ರವರಿ ಸುಮಾರಿಗೆ ಶ್ರೀನಿಕೇತನ ಮೇಳ ನಡೆಯುವುದು. ಇದು ಮೂರು ದಿನಗಳ ಕಾರ್ಯಕ್ರಮ. ವ್ಯವಸಾಯ ಮತ್ತು ಗ್ರಾಮ ಕೈಗಾರಿಕಾ ಪ್ರದರ್ಶನ ನಡೆಯುವುದು. ಇದರಲ್ಲಿ ರಾಜ್ಯದ ಅನೇಕ ಇಲಾಖೆಗಳು ಭಾಗವಹಿಸುವುದರ ಜತೆಗೆ, ನೆರೆ ರಾಜ್ಯದ ಸರ್ಕಾರಗಳೇ ತಮ್ಮ ತಮ್ಮ ಮಳಿಗೆಗಳಲ್ಲಿ, ಆಯಾ ರಾಜ್ಯದ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಪ್ರದರ್ಶಿಸುವುದರ ಜತೆಗೆ, ತಮ್ಮ ಕೈಗಾರಿಕಾ ವಸ್ತುಗಳ ಮಾರಾಟ ಮಳಿಗೆಗಳನ್ನೂ ತೆರೆದಿರುತ್ತಾರೆ. ಭಾಷಣಗಳು, ಗ್ರಾಮಕಲೆಗಳು, ನಾಟಕ, ಗ್ರಾಮಕಲೆಗಳ ಪ್ರದರ್ಶನ ಹೀಗೆ ಮೂರು ದಿನಗಳ ಕಾಲ ಬಿಡುವಿಲ್ಲದ ಕಾರ್ಯಕ್ರಮಗಳಿರುತ್ತವೆ. ಬ್ರಹ್ಮಚಾರಿಗಳಿಗೇ(ವ್ರತಧಾರಿ) ಒಂದು ದಿನದ ಕಾರ್ಯಕ್ರಮ, ಹಳದಿ, ಹಸಿರು ಸಮವಸ್ತ್ರದಲ್ಲಿ ಭಾಗಿಯಾಗಿಸುವ, ಇವರ ನೋಟ, ತುಂಬ ರಂಜನೀಯವಾಗಿಸುವುದು. ಆದಿವಾಸಿಗಳಿಗೂ (ಅಲ್ಲಿನ ಸಂತಾಲ ಯುವಕರಿಗೆ) ಅವರದೇ ಆದ ಸ್ಪರ್ಧೆಗಳಿರುತ್ತವೆ. ಶ್ರೀನಿಕೇತನದ ಎಲಾ ವಿಭಾಗಗಳಿಗೂ ಮೇಳಕ್ಕೆ ಬಂದ ಸದಸ್ಯರು ಭೇಟಿ ನೀಡಿ ತಮಗೆ ಬೇಕಾದ ವಿಷಯಗಳ ಬಗೆಗೆ ಮಾಹಿತಿ ಪಡೆಯಬಹುದು. ರಾತ್ರಿ ವೇಳೆ, ಜಾನಪದ ಕತೆಗಳ, ನಾಟಕಗಳ ಪ್ರದರ್ಶನವಿರುತ್ತದೆ. ಇಲ್ಲಿಯ ಪ್ರದರ್ಶನ ನಮ್ಮ ಭಾಗದ ಪ್ರದರ್ಶನಕ್ಕಿಂತ ವಿಭಿನ್ನವಾದುದು. ಆ ವರುಷ, ಆ ಭಾಗದಲ್ಲಿ ತುಂಬಾ ಜನಪ್ರಿಯವಾದ "ಪ್ಲಾಸೀಕದನ" ನಾಟಕವಿತ್ತು. ಸಾವಿರಾರು ಜನ ನಿಶ್ಶಬ್ದವಾಗಿ ರಾತ್ರಿಯೆಲ್ಲಾ ತಲ್ಲೀನರಾಗಿ ನಾಟಕ ನೋಡಿದರು.

ನಾವುಗಳು ಶಿಕ್ಷಣ ಪಡೆದ ಅವಧಿಯಲ್ಲಿ ಬಂದ ಸರಸ್ವತಿ ಪೂಜಾ, ಟಾಗೋರ್‌ರವರ ಜಯಂತಿ, ಗಾಂಧೀಜಿಯವರ ದಿನ ಮೊದಲಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಹೋಲಿ ಹಬ್ಬವನ್ನು 'ವಸಂತ ಪೂಜೆ' ಎಂದು ಇಲ್ಲಿ ಆಚರಿಸುತ್ತಾರೆ. ಪಕ್ಕದ ಊರಾದ, ಬೋಲ್‌ಪುರದಲ್ಲಿ ನಡೆಯುವ ಆಚರಣೆಯೇ ಬೇರೆ. ಈ ಉತ್ಸವವನ್ನು ನೋಡಲು ದೂರದ ಕಲ್ಕತ್ತೆಯಿಂದಲೂ ಪ್ರಪಂಚದ ವಿವಿಧ ಭಾಗಗಳಿಂದಲೂ ಜನರು ಬರುತ್ತಾರೆ. ವಿಶ್ವದ ಎಲ್ಲಾ ಭಾಷೆಗಳ ವಸಂತ ಋತುವಿನ ಬಗೆಗೆ ಇರುವ ಕಾವ್ಯಗಳ ವಾಚನ ಕುಲಪತಿಗಳಿಂದ ವಸಂತಪೂಜೆ, ಪ್ರಕೃತಿ ಪೂಜೆ, ಎಲ್ಲ ವಿದ್ಯಾರ್ಥಿಗಳ ಹಳದಿ, ಹಸುರಿನ ಸಮವಸ್ತ್ರ (ಆ ದಿನಕ್ಕೆ ಮಾತ್ರ), ಸಂಜೆಗೆ ಉಪಾಧ್ಯಾಯ ವರ್ಗದವರಿಂದ ನೃತ್ಯ, ನಾಟಕ, ಸಂಗೀತ ಎಲ್ಲವೂ ವಸಂತಋತುವಿನ ಗುಣಗಾನದ್ದೇ ನಡೆಯುವುದು.

ಶ್ರೀನಿಕೇತನದ ಮುಖ್ಯ ಕೇಂದ್ರದಲ್ಲಿ "ಪಲ್ಲಿ ಮಂಗಳ ಕೇಂದ್ರ" ಎಂಬ ಹೆಸರಿನಿಂದ, ಗ್ರಾಮಾಂತರಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ, ಒಕ್ಕೂಟವಿದೆ. ಇದು ಎಲ್ಲಾ ಕಾರ್ಯಕ್ರಮಗಳ ಉಸ್ತುವಾರಿ ನೋಡಿಕೊಳ್ಳುತ್ತದೆ ಸಂಸ್ಥೆಗಳಿಗೆ ಬೇಕಾದ ಮಾರ್ಗದರ್ಶನ, ಆರ್ಥಿಕ ಸಹಾಯ ಹಾಗೂ ಇನ್ನಿತರ ಸೌಲಭ್ಯಗಳು ಈ ಕೇಂದ್ರದ ಮುಖಾಂತರ ದೊರೆಯುವುದು. ಈ ಕೇಂದ್ರ ಕಛೇರಿಯಲ್ಲಿ ಬೇರೆ ಬೇರೆ ವಿಭಾಗಗಳಿದ್ದು, ಪ್ರತಿಯೊಂದರ ಮೇಲ್ವಿಚಾರಣೆಗೂ ಸೂಕ್ತ ವ್ಯವಸ್ಥೆ ಇದೆ. ಇದಕ್ಕೆ ವಿಶ್ವಭಾರತಿ ಸಂಸ್ಥೆಗೆ ಸೇರಿದ, ಒಬ್ಬ ನಿರ್ದೇಶಕರಿದ್ದು ಅವರ ನೇತೃತ್ವದಲ್ಲಿ ಎಲ್ಲಾ ಕಾರ್ಯಕ್ರಮಗಳೂ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ.

ಅಲ್ಲಿಯೇ ಹಲವಾರು ವರ್ಷಗಳು ನೆಲಸಿದ್ದ ಕನ್ನಡಿಗರೊಡನೆ ಪರಿಚಯವಾದ ಮೇಲೆ, ಈ ಸಂಸ್ಥೆಯ ಪೂರ್ಣ ಪರಿಚಯ ನನಗೆ ಆಯಿತು. ಶ್ರೀ ರವೀಂದ್ರನಾಥ ಟಾಗೂರ್‌ರವರಿಗೆ ವಿಶ್ವಮಾನ್ಯತೆ ದೊರೆತರೂ, ನಮ್ಮಲ್ಲಿದ್ದ ಬ್ರಿಟಿಷ್ ಸರ್ಕಾರ ಅವರೊಡನೆಯೂ ಬಿಗುವಾಗಿಯೇ ವರ್ತಿಸಿತು. ಇವರು ನಡೆಸಿದ ಶಾಂತಿನಿಕೇತನಕ್ಕೇ ಮಾನ್ಯತೆ ನೀಡಲಿಲ್ಲ. ಹೀಗೆಯೇ ಇತರೇ ಕಾರ್ಯಕ್ರಮಗಳಿಗೂ ಪ್ರೋತ್ಸಾಹ ನೀಡಲಿಲ್ಲ. ಆದರೆ ಶ್ರೀ ಟಾಗೂರ್‌ರವರ ಮೇಲಿದ್ದ ಅಭಿಮಾನ ಗೌರವಗಳಿಂದ, ಈ ಪರಿಸ್ಥಿತಿಗೆ ಸಾಕಷ್ಟು ಧನಸಹಾಯ ಬರುತ್ತಿದ್ದವು. ಅನೇಕ ಶ್ರೀಮಂತರ ದೇಣಿಗೆಗಳಲ್ಲಿರುವ ಕಾರ್ಯಕ್ರಮಗಳು ನಡೆಯುತ್ತಿದ್ದುವಾದುದರಿಂದ, ತಮ್ಮ ಅವಧಿಯಲ್ಲಿ ರವೀಂದ್ರನಾಥ ಟಾಗೋರ್‌ರವರೂ, ಈ ವರ್ಗಗಳಲ್ಲಿ ಸಾಮರಸ್ಯ ಭಾವನೆಗಳನ್ನು ಬೆಳಸಿದ್ದರು. ಹೀಗಾಗಿ, ಈ ಭಾಗದ ಶ್ರೀಮಂತ ಹಾಗೂ ಕಡುಬಡತನಗಳಲ್ಲಿ ಎಂದೂ ಘರ್ಷಣೆ ಕಂಡು ಬಂದಿರಲಿಲ್ಲ. ಜಮೀನುದಾರಿ ಪದ್ಧತಿಯನ್ನು ತೆಗೆದು ಹಾಕಿದ್ದರೂ, ವಾಸ್ತವವಾಗಿ ಆಗ ಜಮೀನುದಾರರೇ ಮೇಲುಗೈ ಪಡೆದಿದ್ದರು. ಆದರೂ ಈ ಕಾರ್ಯಕ್ರಮಗಳಿಗೆ ಯಾವ ತೊಂದರೆಯೂ ಯಾವ ವರ್ಗದಿಂದಲೂ ಬಂದಿರಲಿಲ್ಲ.

ಶ್ರೀನೀಕೆತನವೆಂದರೆ, "ಲಕ್ಷ್ಮಿ ಇರುವ ಸ್ಥಳ" ತುಂಬಾ ಸೂಕ್ತವಾದ ಹೆಸರನ್ನು ವಿಶ್ವಕವಿಗಳೇ ಸೂಚಿಸಿದ್ದರು. ಅದರ ಸಾರ್ಥಕತೆಗಾಗಿ, ಅವರು ಇದ್ದಷ್ಟು ದಿನವೂ ಇದಕ್ಕಾಗಿ ಶ್ರಮಿಸಿದರು. ತಮ್ಮ ಮಗನನ್ನು ಅಮೆರಿಕಾ ದೇಶದ ವಿಸ್ತರಣ ಸೇವಾ ಕಾರ್ಯಕ್ರಮಗಳ ಅನುಭವ ಪಡೆಯಲು ಕಳಿಸಿ, ಅನಂತರ, ಅವುಗಳೆಲ್ಲವುಗಳ ಪ್ರಯೋಗ ಈ ಕ್ಷೇತ್ರದಲ್ಲಿ ಮಾಡಿದರು. ಕೇವಲ ಪ್ರಚಾರ ಮಾಡದೆ, ಪ್ರಯೋಗಗಳ ಮುಖಾಂತರ, ಆ ಕ್ಷೇತ್ರದ ೧೦೦ ಹಳ್ಳಿಗಳ ಜನತೆಯ ಸುಖ ಶಾಂತಿಗಳಿಗಾಗಿ ಶ್ರಮಿಸಿದರು. ಮಹಾತ್ಮ ಗಾಂಧಿಯವರೂ ಆರು ತಿಂಗಳ ಕಾಲ ಇಲ್ಲಿ ತಂಗಿದ್ದು, ಈ ಕಾರ್ಯಕ್ರಮಗಳ ಪರಿಚಯವನ್ನು ಪಡೆದರೆಂದು ಹೇಳಲಾಗಿದೆ. ಅವರು ವಾಸಮಾಡಿದ ಕುಟೀರವನ್ನೂ, ವೈಭವೋಪೇತವಾದ, ಟಾಗೂರ್‌ರ ನಿವಾಸ ಉತ್ತರಾಯಣದ ಎದುರಿಗೆ, ಅದೇ ರೀತಿಯಲ್ಲಿ ಕಾಪಾಡಿಕೊಂಡು ಬರಲಾಗಿದೆ. ಸಮಾನ ಚಿಂತನೆಯುಳ್ಳ ಇಬ್ಬರ ಭಾವನೆಗಳಿಗೆ ಪ್ರತೀಕವಾಗಿ ಶ್ರೀನಿಕೇತನ ಸಂಸ್ಥೆಯು ತನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುಂದುವರೆಸುತ್ತಿದೆ.

ಶಾಲಾ ಕಾಲೇಜುಗಳಲ್ಲಿ ಯೋಗ ಶಿಕ್ಷಣದ ಅಗತ್ಯ

ಕೆ. ಕೇಶವಮೂರ್ತಿ

"ಯೋಗೇನ ಚಿತ್ತಸ್ಯ ಪದೇನ ವಾಚಾಂ ಮಲಂ ಶರೀರಸ್ಯತು ವೈದ್ಯಕೇನ ।
ಯೋಽಪಾಕರೋತ್ತಂ ಪ್ರವರಂ ಮುನೀನಾಂ ಪತಂಜಲಿಂ ಪ್ರಾಂಜಲಿರಾನ ತೋಽಸ್ಮಿ॥

["ಯೋಗಸೂತ್ರಗಳನ್ನು ರಚಿಸುವುದರ ಮೂಲಕ ಚಿತ್ತದ ಮಲವನ್ನು ಮಾತಿನ ಅಶುದ್ಧತೆಯನ್ನು ವ್ಯಾಕರಣ ಭಾಷ್ಯದ ಮೂಲಕವೂ, ದೇಹದ ತ್ರಿಮಲಗಳನ್ನು ಆಯುರ್ವೇದ ಗ್ರಂಥದ ರಚನೆಯಿಂದಲೂ ನೀಗಿದ ಭಗವತ್ಪತಂಜಲಿಗಳಿಗೆ ಅಂಜಲಿಬದ್ಧನಾಗಿ ನಮಸ್ಕರಿಸುತ್ತೇನೆ]

ಯೋಗವೆಂದ ಕೂಡಲೇ ಶ್ರೀ ಸಾಮಾನ್ಯನ ಮನದಲ್ಲಿ ಮೂಡುವ ಭಾವನೆಯೆಂದರೆ—ಜಟಾವಲ್ಕಲಧಾರಿಗಳಾಗಿ ತಪೋವನಗಳಲ್ಲಿ ತಪಶ್ಚರ್ಯೆಯಲ್ಲಿರುವ ಋಷಿಮುನಿಗಳು ಅಥವಾ ಸಭೆ ಸಮಾರಂಭಗಳಲ್ಲಿ ತಮ್ಮ ಮೈಮೂಳೆಗಳನ್ನು ಬಗ್ಗಿಸಿ ಕೆಲ ನಿಮಿಷ ಸಾರ್ವಜನಿಕರಿಗೆ ವಿಸ್ಮಯ ಮನೋರಂಜನೆಯನ್ನೊದಗಿಸುವವು.

‘ಯೋಗಾಸನ ಪ್ರದರ್ಶಕ’- ತಾತ್ಪರ್ಯವೇನೆಂದರೆ ಅದು ತನಗೆ ಸಂಬಂಧಿಸಿದ್ದಲ್ಲವೆಂಬ ನಿರಾಸಕ್ತಿ ಅಥವಾ ತನಗದು ಅಸಾಧ್ಯವೆಂಬ ನಿರಾಶಾಭಾವನೆ.

ಆದರೆ ಇದು ತಪ್ಪು ಕಲ್ಪನೆ ಎನ್ನದೆ ವಿಧಿಯಿಲ್ಲ. ‘ಯೋಗ’ ನಮಗೆ ನೇರವಾಗಿ ಹಾಗೂ ನಿಕಟವಾಗಿ ಸಂಬಂಧಿಸಿದ್ದು. ಇವಕ್ಕೆ ಲಿಂಗಭೇದ, ವಯೋಭೇದ ಜಾತಿಭೇದವೇ ಮೊದಲಾದ ಯಾವ ಉಪದ್ರವಗಳೂ ಇಲ್ಲ. ಎಲ್ಲರಿಗೂ ‘ಯೋಗಶಿಕ್ಷಣ’ ಅಪೇಕ್ಷಣೀಯ ಮಾತ್ರವಲ್ಲ; ಅತ್ಯಗತ್ಯ.

ಇಂದು ಶಾಲಾಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ನಮ್ಮ ಯುವ–ಜನಾಂಗದ ಅಶಿಸ್ತು, ಅಶಾಂತಿ ಮತ್ತು ಅದರ ಭೀಕರ ಪರಿಣಾಮಗಳು ಊಹೆಗೂ ನಿಲುಕದ ವಿಷಯವಾಗಿವೆ. ನೈತಿಕ ಪ್ರಜ್ಞೆಯಂತೂ ಅವರಲ್ಲಿ ಅಧಃಪತನವಾಗಿದೆ. ಚಾಕು, ಚೂರಿ, ಬ್ಲೇಡು, ಸೈಕಲ್‌ಚೈನು, ಸೋಡಾಸೀಸೆಗಳು ಅವರ ಹೋರಾಟದ ಆಯುಧಗಳಾಗಿವೆ. ‘ರ್‍ಯಾಗಿಂಗ್’ ಎಂಬ ಅನಿಷ್ಟವೊಂದು ತಲೆದೋರಿ ವಿದ್ಯಾರ್ಥಿಗಳ ಆತ್ಮಹತ್ಯೆಗೂ ಕಾರಣವಾಗುತ್ತಿದೆ. ವ್ಯಾಸಂಗದಲ್ಲಿ ಮನಸ್ಸನ್ನು ಕೇಂದ್ರೀಕರಿಸುವಶಕ್ತಿ ಅವರಲ್ಲಿ ಲುಪ್ತವಾಗುತ್ತಿದೆ. ಮೇಧಾಶಕ್ತಿ ಹಾಗೂ ಪ್ರಜ್ಞಾಶಕ್ತಿಗಳು ಕುಂಠಿತವಾಗುತ್ತಿವೆ. ಅಧ್ಯಯನದಲ್ಲಿ ಆಸಕ್ತಿ, ಗುರು, ಹಿರಿಯರಲ್ಲಿ ಭಕ್ತಿಗೌರವ, ರಾಷ್ಟ್ರಪ್ರೇಮ, ಸಾಮಾಜಿಕ ಹೊಣೆಗಾರಿಕೆ ಮುಂತಾದ ಆದರ್ಶ ವಿದಾರ್ಥಿಯಲ್ಲಿರಬೇಕಾದ ಒಂದೊಂದು ಸದ್ಗುಣವೂ ಶೀಘ್ರಗತಿಯಲ್ಲಿ ಹಿಮ್ಮೆಟ್ಟುತ್ತಿವೆ.

ಇಂತಹ ಕ್ಲಿಷ್ಟಪರಿಸ್ಥಿತಿಯಲ್ಲಿ ಅವರನ್ನು ತಿದ್ದಿ ಅವರಲ್ಲಿ ನೈತಿಕ ಜಾಗೃತಿಯನ್ನು ಮೂಡಿಸಲು ಸಾಧ್ಯವಿಲ್ಲವೇ ? ಅವರು ಸಮಾಜ ಹೊಣೆಯನ್ನರಿತು, ಶಿಸ್ತಿನಿಂದ ವರ್ತಿಸಿ, ತಾವು ಕಲಿತ ಶಾಲೆಗೂ, ತಮಗೆ ಕಲಿಸಿದ ಗುರುಗಳಿಗೂ ಗೌರವ ತರುವಂತೆ ಅವರನ್ನು ಪರಿವರ್ತಿಸಲು ಸಾಧ್ಯವಿಲ್ಲವೇ ? ಅವರು ವ್ಯಾಸಂಗದಲ್ಲಿ ತಮ್ಮ ಮನಸ್ಸನ್ನು ಕೇಂದ್ರೀಕರಿಸಿ, ಪ್ರಜ್ಞಾಶಕ್ತಿಯನ್ನು ಬೆಳೆಸಿಕೊಳ್ಳುವಂತೆ ಮಾಡಲು ಸಾಧ್ಯವಿಲ್ಲವೇ ? ಇತ್ಯಾದಿ ಪ್ರಶ್ನೆಗಳು ಈ ದಿಶೆಯಲ್ಲಿ ಉದ್ಭವಿಸುವುದು ಸಹಜವೇ ಆಗಿದೆ.

'ಶಿಕ್ಷಣದ ನಿಘಂಟಿ'ನಲ್ಲಿ 'ಸಾಧ್ಯವಿಲ್ಲ' ಎಂಬ ಪದವೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಎಂತಹ ದುರ್ಮಾರ್ಗಿಯನ್ನಾದರೂ ತಿದ್ದಿ ಸನ್ಮಾರ್ಗ ಪ್ರವರ್ತಕನನ್ನಾಗಿ ಮಾಡುವ ಒಂದು ವಿಶಿಷ್ಟ ಶಕ್ತಿಯೇನಾದರೂ ಇದ್ದರೆ ಅದು 'ಶಿಕ್ಷಣ' ವಲ್ಲದೆ ಬೇರಾವುದೂ ಅಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಭಗವಂತನು ಭಗವದ್ಗೀತೆಯಲ್ಲಿ ಈ ಮಾತನ್ನು ಹೇಳಿದ್ದಾನೆ.

"ಅಪಿಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥" ೪-೩೬

"ನೀನು ಎಲ್ಲರಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ, ಆ ಸಮಸ್ತ ಪಾಪವನ್ನೂ ಜ್ಞಾನವೆಂಬ ನಾವೆಯಿಂದಲೇ ದಾಟುವೆ." ಅಂತಹ ಜ್ಞಾನ ಯಾವುದು ? ಆ ಜ್ಞಾನವು ಯಾವುದರಿಂದ ಬರುತ್ತದೆ ? ಅದೇ ಯೋಗಜ್ಞಾನ. ಆ ಜ್ಞಾನವು ಯೋಗ ಶಿಕ್ಷಣದಿಂದ ಲಭ್ಯವಾಗುತ್ತದೆ.

ಹಾಗಾದರೆ 'ಯೋಗ ಶಿಕ್ಷಣ'ವೆಂದರೇನು ? ಇದರ ವಿಧಾನಗಳು ಹೇಗೆ ? ಯಾವ ವಯೋಧರ್ಮದವರಿಗೆ ಹಾಗೂ ಎಲ್ಲಿಯವರೆಗೆ ? ಪಠ್ಯಪುಸ್ತಕದ ಅಗತ್ಯವಿದೆಯೇ ? ಬೋಧಿಸುವವರ ವಿದ್ಯಾರ್ಹತೆ ಏನು ? ಎಲ್ಲಿ ಬೋಧಿಸಬೇಕು ? ಇತ್ಯಾದಿ ಪ್ರಶ್ನೆಗಳಿಗೂ ಉತ್ತರಿಸಬೇಕಾಗುತ್ತದೆ. ಈ ಎಲ್ಲ ಪ್ರಶ್ನೆಗಳಿಗೂ ದೀರ್ಘೋತ್ತರ ನೀಡುವುದು ಈ ಕಿರು ಲೇಖನದ ವ್ಯಾಪ್ತಿಗೆ ಮೀರಿದ ವಿಷಯವಾದ್ದರಿಂದ ಸಂಕ್ಷಿಪ್ತ ಮಾಹಿತಿಯನ್ನು ನೀಡಿ ಯೋಗಶಿಕ್ಷಣದ ಬಗ್ಗೆ ವಾಚಕರ ಆಸಕ್ತಿಯನ್ನು ಕೆರಳಿಸುವುದೇ ಈ ಲೇಖನದ ಮುಖ್ಯೋದ್ದೇಶ.

'ಯೋಗ' ವೆಂದರೇನು ? ಎಂಬ ಪ್ರಶ್ನೆಗೆ ಭಗವಂತನು ಗೀತೆಯಲ್ಲಿ "ಯೋಗ ಕರ್ಮಸುಕೌಶಲಮ್" ಎಂದು ಉತ್ತರಿಸಿದ್ದಾನೆ. ನಮ್ಮ ಕೆಲಸದಲ್ಲಿನ ಕುಶಲತೆಯೇ ಯೋಗ. ಭಗವಂತನ ಪ್ರಕಾರ ನಾವು ಕುಶಲ ಕರ್ಮಿಗಳಾಗಬೇಕು.

ಭಗವತ್ಪತಂಜಲಿಗಳು ತಮ್ಮ "ಯೋಗ" ಸೂತ್ರದಲ್ಲಿ "ಯೋಗಃ ಚಿತ್ತವೃತ್ತಿ ನಿರೋಧಃ" ಎಂದಿದ್ದಾರೆ. ಮರ್ಕಟದಂತೆ ಅಲೆದಾಡುತ್ತಿರುವ ಮನಸ್ಸನ್ನು ಒಂದೆಡೆ ಹಿಡಿದು ನಿಲ್ಲಿಸುವುದೇ 'ಯೋಗ'. ಇದನ್ನೇ 'ಅಷ್ಟಾಂಗ ಯೋಗ' ಅಥವಾ 'ರಾಜ ಯೋಗ' ಎಂದು ಕರೆಯುತ್ತಾರೆ. ಇಂದು ನಮ್ಮ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಮೊದಲು ಆಗಬೇಕಾಗಿದೆ. ನಮ್ಮ ಯುವಕರ ಮನಸ್ಸು ಅವರ ಹಿಡಿತದಲ್ಲೇ ಇಲ್ಲ. ಅನ್ಯರು ಅವರ ಮನಸ್ಸನ್ನು ಆಳುವ ದುರ್ದೈವ ಬಂದೊದಗಿದೆ. ರಾಜಕೀಯ

ಧುರೀಣರು ತಮ್ಮ ಸ್ವಾರ್ಥಕ್ಕಾಗಿ ನಿರಪರಾಧಿಗಳಾದ ವಿದ್ಯಾರ್ಥಿಗಳನ್ನು ಯಜ್ಞ ಪಶುಗಳಂತೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ದುಸ್ಥಿತಿ ತೊಲಗಬೇಕಾದರೆ ನಮ್ಮ ಯುವಜನಾಂಗ ತಮ್ಮ ಮನಸ್ಸನ್ನು ತಾವು ಆಳುವಂತಾಗಬೇಕು. ಶಿಕ್ಷಣದ ಬಗ್ಗೆ ಸ್ವಾಮಿ ವಿವೇಕಾನಂದರು ಹೇಳುತ್ತಾ ಯೋಗ ಮತ್ತು ಅದರ ಮಹತ್ವವನ್ನು ಹೀಗೆ ನಿರೂಪಿಸಿದ್ದಾರೆ.

"The science of the yoga claims that it has discovered the laws which develop the personality and by proper attention to those laws and strengthen his personality. This is one of the great practical things & this is the secret of all education." ಇದರಿಂದ ಯೋಗದ ಅಗತ್ಯ ಸುವೇದ್ಯ.

'ಅಷ್ಟಾಂಗ ಯೋಗವು' ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಗಳೆಂಬ ಅಷ್ಟ ಸೋಪಾನಗಳಿಂದ ಕೂಡಿದೆ. ಇವುಗಳಲ್ಲಿ ಯಮ–ನಿಯಮವು 'ನೈತಿಕ ಶಿಕ್ಷಣ'ವನ್ನು ಕುರಿತದ್ದಾಗಿದೆ. ಯೋಗಸಾಧಕನಿಗೆ ಹೇಳಿರುವ ಈ ಅಂತರಂಗ ಬಹಿರಂಗ ಶುಚಿತ್ವಗಳು ನಮ್ಮ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

'ಯಮ'ದಲ್ಲಿ ಸತ್ಯ, ಅಹಿಂಸೆ, ಆಸ್ತೇಯ ಎಂದರೆ ಕದಿಯದಿರುವಿಕೆ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳೆಂಬ ಐದು ಕಟ್ಟು ಕಟ್ಟಳೆಗಳಿವೆ. ಬ್ರಹ್ಮಚರ್ಯದಲ್ಲಿದ್ದುಕೊಂಡು ವ್ಯಾಸಂಗ ಮಾಡಬೇಕಾದ ನಮ್ಮ ವಿದ್ಯಾರ್ಥಿಗಳು ಈ ಪದದ ಅರ್ಥವನ್ನು ಅವಶ್ಯ ತಿಳಿದಿರಬೇಕು. ಬ್ರಹ್ಮಚರ್ಯದ ಬಗ್ಗೆ ಮಹಾತ್ಮಾಗಾಂಧೀಜಿಯವರು ಹೇಳಿರುವ ಮಾತು ಮನನೀಯ:

"In our language there is a beautiful word equivalent for the word student, that is, Brahmachari Vidayarthi; is a coined word and a poor equivalent for Brahmachari...All our learning of recitation of the Vedas, correct knowledge of Sanskrit, Latin, Greek and what not will avail us nothnig if they do not enable us to cultivate absolute purity of heart" 'Purity of heart.' ಅಂದರೆ "ಹೃದಯ ವಿಶುದ್ಧತೆ"ಎನ್ನುವುದೇ ಬ್ರಹ್ಮಚರ್ಯಕ್ಕೆ ಇಂಗ್ಲಿಷ್ ಸಂವಾದಿ ಪದ.

ಹೀಗೆಯೇ 'ನಿಯಮ'ದಲ್ಲಿ ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನಗಳೆಂಬ ಐದು ನೈತಿಕ ಕಟ್ಟಳೆಗಳಿವೆ. ಇದರಲ್ಲಿ ನಮ್ಮ ವಿದ್ಯಾರ್ಥಿಗಳು 'ಸ್ವಾಧ್ಯಾಯ'ದ ಬಗ್ಗೆ ಹೆಚ್ಚು ಗಮನ ಕೊಡಬೇಕು. ನಮ್ಮ ವಿದ್ಯಾರ್ಥಿಗಳಿಗೆ ಏನನ್ನು ಓದಬೇಕು, ಏನನ್ನು ಓದಬಾರದು ಎಂಬ ಪರಿಜ್ಞಾನವೇ ಇಲ್ಲವೆಂದರೆ ತಪ್ಪಾಗಲಾರದು. ರಸ್ತೆಯ ಬದಿಯಲ್ಲಿ ಮಾರುವ ಕಾಮ ಪ್ರಚೋದಕ ಸಾಹಿತ್ಯವೋ ಅಥವಾ ಕೆಲವು ನಿಯತಕಾಲಿಕಗಳಲ್ಲಿ ಬರುವ ಅಶ್ಲೀಲ ಕಥೆಗಳೋ ನಮ್ಮ ವಿದ್ಯಾರ್ಥಿಗಳ ಅಧ್ಯಯನದ ವಿಷಯವಾಗಿದೆ. ಇಂದಿನ ದಿನಗಳಲ್ಲಂತೂ 'ದೂರದರ್ಶನ' ನಮ್ಮ ವಿದ್ಯಾರ್ಥಿಗಳ ಮೇಲೆ ನಿಜಕ್ಕೂ ದುಷ್ಪರಿಣಾಮ ಬೀರಿದೆ. ಮಧ್ಯ

ರಾತ್ರಿಯವರೆಗೂ ಅವರಿಗೆ ದೂರದರ್ಶನದಲ್ಲಿ ಬರುವ ಚಿತ್ರಗಳನ್ನು ನೋಡುವುದಕ್ಕೇ ಸಮಯ ಸಾಕಾಗುವುದಿಲ್ಲ, ಹೀಗಿರುವಲ್ಲಿ ಇನ್ನು ಅವರ ವ್ಯಾಸಂಗಕ್ಕೆ ಸಮಯವೆಲ್ಲಿ ! ಇದರಿಂದ ನಮ್ಮ ಯುವಕರನ್ನು ವಿಮುಕ್ತರನ್ನಾಗಿ ಮಾಡಲು 'ನಿಯಮ'ದ ತಿಳಿವಳಿಕೆ ಅತ್ಯಗತ್ಯ.

ಪೂರ್ವೋಕ್ತ ಈ ಹತ್ತು ಕಟ್ಟುಕಟ್ಟಳೆಗಳು 'ನೈತಿಕ ಶಿಕ್ಷಣ'ದ ಜೀವನಾಡಿಯಾಗಿವೆ. ಎಳೆಯ ವಯಸ್ಸಿನ ಮೇಲೆ ಈ ನೈತಿಕ ಬೋಧನೆ ಮಾಡುವ ಪರಿಣಾಮ ಅನಿರ್ವಚನೀಯ. ಇದರಿಂದ ಯುಕ್ತಾಯುಕ್ತತೆಯ, ಕಾರ್ಯಾಕಾರ್ಯಗಳ ಪರಿಜ್ಞಾನ ಉಂಟಾಗುತ್ತದೆ. ಶಿಕ್ಷಣದ ಗುರಿಯಾದರೂ ಇದೇ ಆಗಿದೆ. ಮಹಾತ್ಮಾ ಗಾಂಧಿಯವರು ಶಿಕ್ಷಣದ ಗುರಿಯ ಬಗ್ಗೆ ಮಾತನಾಡುತ್ತ "The end of all knowledge must be the building of character" ಎಂದು ಹೇಳಿರುವ ಮಾತು ಯಥಾರ್ಥವಾದುದು

ಇದರ ಮುಂದಿನ ಹಂತವೇ 'ಆಸನ', ಯೋಗಾಸನಗಳಿಂದ ದೇಹ ಸ್ವಾಸ್ಥ್ಯವು ಲಭಿಸುವುದೇ ಅಲ್ಲದೆ, ಮುಂದೆ ಆನುವಂಶೀಯವಾಗಿ ಬರುವ ಅನೇಕ ರೋಗಗಳನ್ನು ತಡೆಗಟ್ಟುತ್ತದೆ. ಯೋಗಕ್ಕಾಗಲಿ, ಭೋಗಕ್ಕಾಗಲಿ, ಸ್ವಸ್ಥ ಶರೀರದ ಅಗತ್ಯವನ್ನು ಯಾರೂ ಅಲ್ಲಗಳೆಯುವಂತಿಲ್ಲ.ಅದಕ್ಕೆ "ಶರೀರಮಾದ್ಯಂ ಖಲು ಧರ್ಮ ಸಾಧನಮ್" ಎಂದು ಹೇಳಿದ್ದಾರೆ ಅಂದರೆ ಏನನ್ನು ಸಾಧಿಸಬೇಕಾದರೂ ಸ್ವಸ್ಥಶರೀರವು ಅಗತ್ಯ. ನಮ್ಮ ಯುವ ಜನಾಂಗವು ವಜ್ರಕಾಯವನ್ನು ಹೊಂದುವುದಕ್ಕೆ 'ಯೋಗಾಸನ' ಮತ್ತು 'ಸೂರ್ಯನಮಸ್ಕಾರಗಳು' ಅತ್ಯಗತ್ಯ. ಆಸನದ ಮುಂದಿನ ಹಂತವೇ 'ಪ್ರಾಣಾಯಾಮ'. ದೇಹಸ್ವಾಸ್ಥ್ಯ ಹಾಗೂ ಆತ್ಮಸಾಕ್ಷಾತ್ಕಾರ ಇವೆರಡೂ ಪ್ರಾಣಾಯಾಮದ ಮುಖ್ಯೋದ್ದೇಶ. ಪ್ರತ್ಯಾಹಾರ ಮತ್ತು ಧಾರಣಗಳು 'ಧ್ಯಾನ'ಕ್ಕೆ ಪೂರಕ.

ದೇಹ ಸ್ವಾಸ್ಥ್ಯಕ್ಕೆ ಸ್ವಸ್ಥ ಶರೀರದಲ್ಲಿ ಸ್ವಸ್ಥ ಮನಸ್ಸಿರಬೇಕೆಂದು ಎಲ್ಲ ಶಿಕ್ಷಣ ತಜ್ಞರೂ ಒಕ್ಕೊರಲನಿಂದ ಘೋಷಿಸಿದ್ದಾರೆ. ದೇಹ ಸ್ವಾಸ್ಥ್ಯ ಮತ್ತು ಚಿತ್ತ ಸ್ವಾಸ್ಥ್ಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಾಣ್ಯದ ಯಾವ ಮುಖ ಸವಕಲಾದರೂ ಅದು ಹೇಗೆ ಚಲಾವಣೆಗೆ ಬರುವುದಿಲ್ಲವೋ ಅಂತೆಯೇ ದೇಹ ಮತ್ತು ಚಿತ್ತಗಳೂ ಸಹ. ಧ್ಯಾನದ ಮಹತ್ವದ ಬಗ್ಗೆ ಮಹಾತ್ಮಾಜೀಯವರು ಹೀಗೆ ಹೇಳಿದ್ದಾರೆ :

"I felt that as food was indispensable for the body, so was prayer indispensable for the soul. In fact food for body is not so indispensable as prayer for the soul...prayer needs no speech. I believe that silent prayer is often mightier than overt act."

ಇದರಿಂದ ಧ್ಯಾನದ ಮಹತ್ವವೇನೆಂಬುದು ಸುವೇದ್ಯ. ಚಿತ್ತ ಸ್ವಾಸ್ಥ್ಯವು ಧ್ಯಾನದಿಂದಲ್ಲದೆ ಮತ್ತಾವುದರಿಂದಲೂ ಲಭಿಸುವುದಿಲ್ಲ. ಇದನ್ನು ಮನೋವಿಜ್ಞಾನಿಗಳು ಪ್ರಯೋಗಾತ್ಮಕವಾಗಿಯೂ ತೋರಿಸಿಕೊಟ್ಟಿದ್ದಾರೆ. ಚಿತ್ತಸ್ವಾಸ್ಥ್ಯವಿಲ್ಲದ

ನಮ್ಮ ವಿದ್ಯಾರ್ಥಿಗಳಿಗೆ ಧ್ಯಾನವು ಅಗತ್ಯವೆಂಬುದು ಇದರಿಂದ ಮನಗಾಣುತ್ತದೆ.

ಯಮ-ನಿಯಮಗಳನ್ನು ಪ್ರಾಥಮಿಕ ತರಗತಿಗಳಲ್ಲಿ ಬೋಧಿಸಿ ಮುಂದಿನ ಹಂತಗಳನ್ನು ಪ್ರೌಢಶಾಲೆಯಲ್ಲಿ ಬೋಧಿಸಬೇಕು. ಆಸನ ಪ್ರಾಣಾಯಾಮಗಳು ದೈಹಿಕ ಪ್ರಕ್ರಿಯೆಯಾದ್ದರಿಂದ ಶರೀರವು ಬಲಿತಿರಬೇಕು. ಇವಿಷ್ಟು ಅಗತ್ಯವಾಗಿ ಎಲ್ಲರಿಗೂ ಬೇಕಾಗಿರುವ ಶಿಕ್ಷಣ. ಒಂದು ವೇಳೆ ವಿದ್ಯಾರ್ಥಿಯ ಮನಸ್ಸು ಈ ಹಂತದಲ್ಲಿ ಯೋಗದ ಕಡೆಗೆ ಒಲಿದರೆ ಆತ ಕಾಲೇಜಿನಲ್ಲಿ ಅದನ್ನು ಐಚ್ಛಿಕ ವಿಷಯವಾಗಿ ವ್ಯಾಸಂಗ ಮಾಡಲು ಅವಕಾಶವಿರಬೇಕು. ಅಲ್ಲಿ ಹಠಯೋಗ, ಕುಂಡಲಿನಿಯೋಗ, ಮಂತ್ರಯೋಗ, ಲಯಯೋಗ, ಷಟ್ಕರ್ಮವಿಧಿ ಇವುಗಳನ್ನು ಅಭ್ಯಸಿಸಲು ಅನುಕೂಲವಿರಬೇಕು. ಬೋಧನಾ ವಿಷಯವೊಂದು ಶಾಲಾಕಾಲೇಜಿನ ಪಠ್ಯವಸ್ತುವಾದರೆ ಅದರಿಂದ ಅನೇಕ ಸಮಸ್ಯೆಗಳು ಉದ್ಭವಿಸುವುದು ಸಹಜ. ಆದರೆ ಸಮಸ್ಯೆಗಳು ಉದ್ಭವಿಸುತ್ತದೆಂಬ ಕಾರಣಕ್ಕಾಗಿ ಮೂಲವಿಷಯವನ್ನೇ ಕೈಬಿಡುವುದು ಸಾಧುವಲ್ಲ. ನೆಗಡಿ ಬರುತ್ತದೆಂಬ ಕಾರಣದಿಂದ ಯಾರೂ ಮೂಗನ್ನು ಕತ್ತರಿಸುವುದಿಲ್ಲವಷ್ಟೆ- ಅಂತಹ ಒಂದು ಸಮಸ್ಯೆಯೆಂದರೆ 'ಯೋಗ ಶಿಕ್ಷಣ' ವೆಂದೊಡನೆಯೇ ತಮಾಷೆ ಮಾಡಿ ಮೂಗು ಮುರಿಯುವ ಜನ. ಯೋಗದ ಬಗ್ಗೆ ಸೂಕ್ತ ತಿಳಿವಳಿಕೆ ನೀಡಿ ಅದರ ಅವಶ್ಯಕತೆಯನ್ನು ಅವರಿಗೆ ಮನಗಾಣಿಸಬೇಕು. ಯಾವುದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತಾಗುತ್ತದೋ ಅದೇ 'ಯೋಗ'.

ಎರಡನೆಯ ನಿಜವಾದ ಸಮಸ್ಯೆಯೆಂದರೆ, ಯೋಗಾಚಾರ್ಯರ ನೇಮಕಾತಿ. ಸರಕಾರಕ್ಕೆ ಇದರಿಂದ ಅಧಿಕ ವೆಚ್ಚ ತಗಲುತ್ತದೆಂಬ ದಿಗಿಲು. ಇದನ್ನು ಸಹ ಜಾಣ್ಮೆಯಿಂದ ಪರಿಹರಿಸಿಕೊಳ್ಳಬಹುದು. 'ಯೋಗ'ದ ಬಗ್ಗೆ ಆಸಕ್ತಿ ಇರುವ ಅಧ್ಯಾಪಕರನ್ನು ಯೋಗ ತರಬೇತಿಗೆ ರಜಾದಿನಗಳಲ್ಲಿ ನಿಯೋಜಿಸಿ ಅವರು ಆ ತರಗತಿಗಳನ್ನು ತೆಗೆದುಕೊಳ್ಳುವಂತೆ ಮಾಡಬಹುದು. ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯಲ್ಲಿರುವ ಅನಾಥ ಸೇವಾಶ್ರಮದಲ್ಲಿ ಶ್ರೀ ಶ್ರೀ ರಾಘವೇಂದ್ರ ಗುರೂಜಿಗಳು ಉಚಿತವಾಗಿ ಯೋಗಶಿಕ್ಷಣ ನೀಡುತ್ತಾರೆ. ಅಲ್ಲೀ ಒಂದು ವರ್ಷ ಅವಧಿಯ, ಸರ್ಕಾರದಿಂದ ಅಂಗೀಕೃತವಾದ ಯೋಗ ಸರ್ಟಿಫಿಕೇಟ್ ಕೋರ್ಸ್ ಒಂದೊಂದಿದೆ. ಅಧ್ಯಾಪಕರನ್ನು ಅದಕ್ಕೆ ನಿಯೋಜಿಸಬಹುದು.

ವಿದ್ಯಾರ್ಥಿಯು ತನ್ನ ಶಾಲಾಕಾಲೇಜಿನ ವ್ಯಾಸಂಗದ ಅವಧಿಯಲ್ಲಿ ಕಲಿತ-ಔರಂಗಜೇಬನು ಪಟ್ಟಕ್ಕೆ ಬಂದ ವರ್ಷವನ್ನಾಗಲಿ, ಮೆಡಿಟರೇನಿಯನ್ ವಾಯುಗುಣದ ಲಕ್ಷಣಗಳನ್ನಾಗಲಿ, ಜಲಜನಕದ ತಯಾರಿಕೆಗೆ ಬೇಕಾದ ರಾಸಾಯನಿಕ ವಸ್ತುವನ್ನಾಗಲೀ, ತತ್ಪುರುಷ ಸಮಾಸದ ಸೂತ್ರವನ್ನಾಗಲೀ, ಪೈಥಾಗೊರಸನ ಪ್ರಮೇಯವನ್ನಾಗಲೀ ಮರೆಯಬಹುದು. ಕಾರಣ ಇವುಗಳನ್ನು ಪರೀಕ್ಷೆಯಲ್ಲಿ ಕೇವಲ ಅಂಕಗಳನ್ನು ಗಳಿಸಲು ಮಾತ್ರ ಅಧ್ಯಯನ ಮಾಡಿರುತ್ತಾನೆ. ಒಂದು ವೇಳೆ ಮುಂದೆ ಇವನ್ನು ಮರೆತರೂ ಯಾವ ಪ್ರಮಾದವೂ ಅದರಿಂದ ಸಂಭವಿಸುವುದಿಲ್ಲ.

ಆದರೆ 'ಯೋಗ' ಶಿಕ್ಷಣ ಅವನ ಜೀವನಪರ್ಯಂತ ಅವನು ಅನುಷ್ಠಾನದಲ್ಲಿಟ್ಟುಕೊಳ್ಳಬೇಕಾದ ಪರಾವಿದ್ಯೆ. ಯಾವುದು ಆರಂಭಿಕ ದಿನಗಳಲ್ಲಿ ಕೇವಲ ದೇಹ

ಸ್ವಾಸ್ಥ್ಯಕ್ಕೆಂದು ಪ್ರಾರಂಭವಾಯಿತೋ ಅದು ಮುಂದೆ ಜೀವನದಲ್ಲಿ ಆತ್ಮ ಸಾಕ್ಷಾತ್ಕಾರಕ್ಕೂ ಕಾರಣವಾಗಬಲ್ಲದು. "ವ್ಯಕ್ತಿತ್ವ ವಿಕಾಸ"ವೇ ಶಿಕ್ಷಣದ ಗುರಿ ಎಂಬುದನ್ನು ಯೋಗ ಶಿಕ್ಷಣವು ಸಾಬೀತುಪಡಿಸುತ್ತದೆ. ಜೀವನದ ಪರಮ ಗುರಿಯೆ ಆತ್ಮ ಸಾಕ್ಷಾತ್ಕಾರ. ಆದನ್ನು ಯೋಗವು ನಮಗೆ ಬೋಧಿಸುವುದರಿಂದ ಇದು ಅಪರಾವಿದ್ಯೆ.

ಇತ್ತೀಚಿನ ದಿನಗಳಲ್ಲಿ 'ಯೋಗಾಸನ'ಗಳ ಬಗ್ಗೆ ಪತ್ರಿಕೆಗಳಲ್ಲಿ ಬಹಳವಾಗಿ ಕೇಳಿಬರುತ್ತಿದೆ. ಅಸ್ತಮ, ರಕ್ತದ ಒತ್ತಡ, ಮಧುಮೇಹ, ವಾತರೋಗ, ಮುಂತಾದ ಘೋರರೋಗಗಳಿಗೆ ಯೋಗಾಸನವು ಉತ್ತಮ ಚಿಕಿತ್ಸೆಯಾಗಿದೆ. ನಮ್ಮಲ್ಲಿ ಯೋಗದ ಬಗ್ಗೆ ಒಲವು ಮೂಡಲು ಮತ್ತೊಂದು ಕಾರಣವೇನೆಂದರೆ ಪಾಶ್ಚಿಮಾತ್ಯರು 'ಯೋಗದ' ಬಗ್ಗೆ ಆಸಕ್ತಿವಹಿಸಿ ಅದೊಂದು ವಿಜ್ಞಾನವೆಂದ ಸಾರುತ್ತಿದ್ದಾರೆ. ನಮ್ಮ ಪ್ರಾಚೀನ ಋಷಿಗಳಿಂದ ನಮಗೆ ಪರಂಪರಾಗತವಾಗಿ ವಹಿಸಲ್ಪಟ್ಟಿರುವ ಈ ವಿದ್ಯೆಯನ್ನು ನಾವು ಪಾಶ್ಚಿಮಾತ್ಯರಿಂದ ಕಲಿಯುವ ದುರ್ದೈವವು ನಮಗೆ ಒದಗದಂತೆ ಎಚ್ಚರಿಕೆ ವಹಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

ನಿಮ್ಮ ಮಗುವಿಗೆ ಬದುಕಲು ಕಲಿಸಿರಿ

ಜಿ. ಷೆ. ಶೇಷಾಚಲರಾವ್

ಮಾನವನ ಜ್ಞಾನ ಅನಂತ ಮುಖವಾಗಿ ಸ್ಫೋಟಗೊಂಡಿದೆ.ಅವನ ವೈಜ್ಞಾನಿಕ ಹಾಗೂ ತಾಂತ್ರಿಕ ಜ್ಞಾನವಂತೂ ವಾಯುವೇಗದಲ್ಲಿ ಓಡುತ್ತಲಿದ್ದು ಅವನಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಿದೆ ವಿಶ್ವಾಮಿತ್ರನ ಸೃಷ್ಟಿಯಂ ಹಮ್ಮು ಬಿಮ್ಮು ಅವನಿಗೆ. ಆದರೂ ಅವನ ಮನಸ್ಸಿಗೆ ಶಾಂತಿಯಿಲ್ಲ.

ಅಣ್ವಸ್ತ್ರವನ್ನು ತೋರಿಸುವ ಪೈಪೋಟಿ ಬಲಿಷ್ಠ ರಾಷ್ಟ್ರಗಳಲ್ಲಿ ಇಂದೊ ನಾಳೆಯೋ ಸ್ಫೋಟಗೊಂಡು ಕೆಂಡ ಕಾರುವ ಅಗ್ನಿಪರ್ವತದ ಮೇಲೆ ಕೂತಂತಿದೆ, ವಿಶ್ವ. ಆದರೂ ಮಾನವ ಕೋಟಿಗೆ ಬುದ್ಧಿ ಬಂದಿಲ್ಲ, ದ್ವೇಷ ಹೋಗಿಲ್ಲ, ಸೆಣಸಾಟ ತಪ್ಪಿಲ್ಲ, ಕ್ರೌರ್ಯದ ಕುಣಿತ ನಿಂತಿಲ್ಲ. ಮಾನವ ದಾನವನಾಗಿದ್ದಾನೆ. ಎಲ್ಲಾ ಕ್ಷೇತ್ರಗಳಲ್ಲೂ ಪಾಶವೀ ಸ್ಪರ್ಧೆ. ಒಬ್ಬ ಮತ್ತೊಬ್ಬನನ್ನು ಮೆಟ್ಟಿ ತಾನು ಹೇಗಾದರೂ ಮೇಲೇರಬೇಕೆಂಬ ಸ್ವಾರ್ಥ ಸ್ಪರ್ಧೆ.

ಇದು ಇಂದಿನ ಜಗತ್ತು. ನಿಮ್ಮ ಮಗುವಿಗೆ ಬದುಕಲು ಕಲಿಸಬೇಕು, ನಾಳಿನ ಸುಂದರ ಶಾಂತಿ ಸಮೃದ್ಧಿಯ ಜಗತ್ತಿನ ಸೃಷ್ಟಿಗಾಗಿ.

ನಿಮ್ಮ ಮಗು ನಿಮ್ಮದು ಮಾತ್ರವಲ್ಲ, ಸಮಾಜದ್ದು, ರಾಷ್ಟ್ರದ್ದು, ಇನ್ನೂ ವ್ಯಾಪಕವಾಗಿ ಹೇಳುವುದಾದರೆ ವಿಶ್ವದ್ದು ! ಇವೆಲ್ಲವುಗಳ ಅಮೂಲ್ಯ ಆಸ್ತಿ ಅದು. "ಸ್ವದೇಶೋ ಭುವನ ತ್ರಯಂ"ಎಂದು ಉದ್ಘೋಷಿಸಿದ ದಿವ್ಯ ಭಾರತ ನಮ್ಮದು ವಿಶ್ವ ಬಂಧುತ್ವದ ಎಂಥಾ ಮಧುರ ಭಾವನೆ !

ಕ್ರಿಮಿ ಕೀಟಗಳು, ಪಶು ಪಕ್ಷಿಗಳೂ ಬದುಕುತ್ತವೆ. ನಿಮ್ಮ ಮಗು ಹಾಗೆ ಬದುಕಿದರೇನು ಬಂತು ಭಾಗ್ಯ ? "ಒಂದನ್ನೊಂದು ತಿಂದು ಬದುಕುವುದು ಬದುಕಲ್ಲ ಒಂದನ್ನೊಂದು ತಿಳಿದು ಬದುಕುವುದು ಬಾಳು. ಪ್ರಾಣಿಗಳಂತೆ ಬದುಕ ಬೇಡಿರಿ, ಜೀವಿಗಳಂತೆ ಬಾಳಿರಿ; ಪ್ರಾಣ ಹಿಂಡಿ ಜೀವ ತಿನ್ನಬೇಡಿ ; ಜೀವಕ್ಕೆ ಜೀವ ಕೊಟ್ಟು ಜೀವಿಸಿರಿ"ಇದು ರಸ ಋಷಿ ಬೇಂದ್ರೆಯ ವಾಣಿ.ಜೀವನದ ಎಲ್ಲ ಕಹಿಯನ್ನೂ ಜೇನಾಗಿಸಿಕೊಂಡು ಬದುಕಿ ಬಾಳಿದ ಸಿದ್ಧ ಜೀವಿಯ ಅಮರವಾಣಿ. ಮಕ್ಕಳಿಗೆ ಬದುಕಲು ಕಲಿಸುವವರ ಕೈದೀಪ !

"ಮಕ್ಕಳಸ್ಕೂಲ್ ಮನೇಲಲ್ವೆ" ಅಂದರು ಕನ್ನಡದ ಕೈಲಾಸಂ ; ಭಾರತೀಯ ಸಂಸ್ಕೃತಿಯನ್ನು ತಮ್ಮ ರಕ್ತದ ಕಣ ಕಣದಲ್ಲೂ ಮೂಡಿಸಿಕೊಂಡಿದ್ದ ಕೈಲಾಸಂ. ನಿಜಕ್ಕೂ ಮನೆಯೇ ಮಗುವಿನ ಮೊದಲ ಶಾಲೆ, ತಂದೆ ತಾಯಿಗಳೇ ಅದರ ಆದ್ಯ ಗುರುಗಳು. ಮಗುವಿನ ಮೇಲೆ ಅವರ ಪ್ರಭಾವ ಅಷ್ಟಿಷ್ಟಲ್ಲ. "ತಾಯಿಯಂತೆ ಮಗು, ನೂಲಿನಂತೆ ಸೀರೆ" ಎಂಬ ಗಾದೆಯುಂಟು ನಮ್ಮಲ್ಲಿ. ತಂದೆ ತಾಯಿಗಳು

ಮಗುವಿನ ಎಳೆ ವಯಸ್ಸಿನಲ್ಲಿ ಬಿತ್ತಿದ ಸದ್ಭಾವನೆಯ, ಸುಸಂಸ್ಕೃತಿಯ ಬೀಜಗಳು ಹದವರಿತು ಪೋಷಿಸಲ್ಪಟ್ಟಾಗ ಸತ್ಫಲಗಳನ್ನು ಕೊಡುವುದರಲ್ಲಿ ಎಳ್ಳಷ್ಟೂ ಅನುಮಾನ ವಿಲ್ಲ. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಸರ್ ಸಿ.ವಿ. ರಾಮನ್, ನೆಹರೂ, ಸರ್ ಎಂ. ವಿಶ್ವೇಶ್ವರಯ್ಯ, ಡಾಕ್ಟರ್ ರಾಧಾಕೃಷ್ಣನ್ ಮುಂತಾದವರ ಬಾಳು ಬಂಗಾರವಾಗಲು ಬಹುಮಟ್ಟಿಗೆ ಅವರವರ ತಂದೆ ತಾಯಿಗಳೇ ಕಾರಣರು. ಅಂತೆಯೇ ಉಪನಿಷತ್ ಉದ್ಘೋಷಿಸಿತು, "ಮಾತೃದೇವೋಭಾವ,ಪಿತೃದೇವೋಭಾವ" ಎಂದು. ನಿಮ್ಮ ಮಗುವಿನ ಭವಿಷ್ಯ ನಿಮ್ಮ ಕೈಯಲ್ಲಿ ಇದೆ.

ದೇವರ ಅಸ್ತಿತ್ವದ ಬಗ್ಗೆ ಬಲವಾದ ನಂಬಿಕೆ

ಬೇರಿನ ಭದ್ರವಿಲ್ಲದೆ ಮರ ಬದುಕಲಾರದು. ಅಂತೆಯೇ ಮಾನವನಿಗೂ ಬೇಕು, ಬದುಕಲು ಒಂದು ಭದ್ರವಾದ ಒಂದು ಆಧಾರ. ಅದುವೇ ದೇವರು. ದೇವರನ್ನು ಯಾರು ಕಂಡಿದ್ದಾರೆಂದು ಪ್ರಶ್ನಿಸಿ ಮೂರ್ಖರಾಗಬೇಡಿ. ಕಾಲೇಜ್ ವಿದ್ಯಾರ್ಥಿ ನರೇಂದ್ರನಿಗೆ (ಸ್ವಾಮಿ ವಿವೇಕಾನಂದರಾಗುವ ಮುಂಚೆ)ದೇವರ ಅಸ್ತಿತ್ವದ ಬಗ್ಗೆ ಸಂದೇಹ ದೇವರ ಕಂಡವರನ್ನು ಅರಸಿಕೊಂಡು ಅಲೆದ. ಯಾರೂ ಸಿಕ್ಕಲಿಲ್ಲ. ಕೊನೆಗೆ ಶ್ರೀ ರಾಮಕೃಷ್ಣ ಪರಮಹಂಸರನ್ನು ಕಂಡ. ದಿಟ್ಟತನದಿಂದ ಪ್ರಶ್ನಿಸಿದ- "ದೇವರನ್ನು ಕಂಡಿದ್ದೀರಾ?" ಎಂದು. ಅಷ್ಟೇ ಖಡಾಖಂಡಿತವಾದ ಉತ್ತರ, "ಹೌದು, ಕಂಡಿದ್ದೇನೆ. ಈಗ ನಿನ್ನನ್ನು ನೋಡುತ್ತಿರುವುದಕ್ಕಿಂತ ಹೆಚ್ಚು ಸ್ಪಷ್ಟವಾಗಿ." ನರೇಂದ್ರ ದಂಗಾದ. ಆದರೂ ಪರೀಕ್ಷಿಸಿಯೇ ತೀರಬೇಕೆಂದು ಮನಸ್ಸು ಮಾಡಿದ ಪರೀಕ್ಷಿಸಿದ. ಮತ್ತೆ ಮತ್ತೆ ಪರೀಕ್ಷಿಸಿದ. ಪರೀಕ್ಷಿಸಿ ಪರೀಕ್ಷಿಸಿ ಅವರ ಪಟ್ಟ ಶಿಷ್ಯನೇ ಆದ. ಭಾರತೀಯ ಧರ್ಮ ಮತ್ತು ಸಂಸ್ಕೃತಿಯನ್ನು ವಿಶ್ವಾದ್ಯಂತ ಪ್ರಸಾರಮಾಡುವ ಅಧ್ವರ್ಯುವಾದ. ನಿಮ್ಮ ಮಗುವಿಗೆ ಮೊದಲಿನಿಂದಲೇ ದೇವರ ಅಸ್ತಿತ್ವದ ಬಗ್ಗೆ ನಂಬಿಕೆ ಮೂಡಿಸಿ ಬೆಳಸಿ. ಆ ನಂಬಿಕೆ ನಿಮ್ಮ ಮಗುವಿಗೆ ಅದ್ಭುತ ಆತ್ಮ ಶಕ್ತಿಯನ್ನು ಕೊಡುತ್ತದೆ. ವಿಜ್ಞಾನಿಗಳೂ ದೇವರನ್ನು ನಂಬುತ್ತಾರೆಯೆ ? ಎಂಬ ಶಂಕೆ ಬೇಡ ನಿಮ್ಮ ಮಗುವಿಗೆ. ವೆರ್ನರ್‌ವಾನ್‌ಬ್ರಾನ್ ಇಂಗ್ಲೆಂಡಿನ ವಿಖ್ಯಾತ ಬಾಹ್ಯಾಕಾಶ ವಿಜ್ಞಾನಿ. ಆತ ಹೇಳುವುದನ್ನು ಕೇಳಿ. "ಅತ್ಯಾಧುನಿಕ ಎಲ್ಲಾ ಉಪಕರಣಗಳನ್ನೂ ನಾವು ಹೊಂದಿದ್ದರೂ ಸಹಾ, ಜಗತ್ತಿಗೆ ತಿಳಿಸಬೇಕಾಗಿದೆ, ವಿಜ್ಞಾನ ಮತ್ತು ಧರ್ಮ ಒಂದಕ್ಕೊಂದು ವಿರುದ್ಧವಲ್ಲ, ಪೂರಕವೆಂದು. ವಿಶ್ವದ ಹೃದಯದಲ್ಲಿ ದೇವರನ್ನು ಪ್ರತಿಷ್ಠಾಪಿಸಿದರೆ ಮಾತ್ರ ಔದ್ಯೋಗೀಕರಣ ಕ್ರಾಂತಿಯಿಂದ ಆಗಿರುವ ಅನಾಹುತ ಹಾಗೂ ಅಪಾಯಗಳಿಂದ ಪಾರಾಗಲು ದೇವರು ನೈತಿಕ ಮಾರ್ಗದರ್ಶನ ನೀಡಬಲ್ಲ." ಎಂಥಾ ಜ್ಞಾನೋದಯ ವಿಜ್ಞಾನಿಗಳಲ್ಲಿ! ನಿಮ್ಮ ಮಗುವಿನ ಹೃದಯದಲ್ಲೂ ದೇವರ ಅಸ್ತಿತ್ವದ ಬೀಜ ಬಿತ್ತಿರಿ. ಭಕ್ತಿಯೆಂಬ ನೀರು ಗೊಬ್ಬರ ಕೊಟ್ಟು ಪೋಷಿಸಿರಿ. ಆಗ ಮಗು ಪಡೆಯುವ ಜ್ಞಾನದ ಫಲ ಕಂಡು ಆನಂದಿಸಿರಿ.

ಮಕ್ಕಳಲ್ಲಿ ಆತ್ಮ ವಿಶ್ವಾಸವನ್ನು ಬೆಳಸಿ

ಬದುಕಲು ಪುರುಷ ಪ್ರಯತ್ನವೂ, ಬೇಕೇಬೇಕೆಂಬ ಅರಿವು ಮೂಡಿಸಿ, ನಿಮ್ಮ ಮಗುವಿನಲ್ಲಿ. ಆತ್ಮವಿಶ್ವಾಸ ಏನನ್ನು ಬೇಕಾದರೂ ಮಾಡಿಸುತ್ತದೆ. ಹೆಲ್ಲನ್ ಕೆಲ್ಲರ್ ಕೆಪ್ಪಿ, ಮೂಕಿ, ಕುರುಡಿ. ತಂದೆ ತಾಯಿಗಳಿಗೆ ಬೇಡವಾದ ಮಗು. ಅವರು ಅದನ್ನು ಅಂಗವಿಕಲರ ಶಾಲೆಗೆ ಸೇರಿಸಿದರು. ಅಲ್ಲೊಬ್ಬ ಶಿಕ್ಷಕಿ. ಕಾರುಣ್ಯದ ದೇವತೆ ಆಕೆ. ಮಗುವಿನ ಮೂಕ ವೇದನೆಯನ್ನು ಅರ್ಥಮಾಡಿಕೊಂಡಳು. "ಬ್ರೇಲ್" ಸಾಧನದ ಮೂಲಕ ಮಗುವಿಗೆ ಓದಲು ಕಲಿಸಿದಳು. ಮಗುವಿನ ಉತ್ಸಾಹ ಕಂಡು ಹಿಗ್ಗಿದಳು, ಪ್ರಚೋದಿಸಿದಳು, ಪ್ರೋತ್ಸಾಹಿಸಿದಳು. ಹೆಲ್ಲಿನ್ ಇಂಗ್ಲಿಷ್ ಜೊತೆಗೆ ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನು ಕಲಿತಳು. ಪದವೀಧರಳೂ ಆದಳು. ಬಲ್ಲಿದ ಬರಹಗಾರ್ತಿಯಾದಳು. ವಿಶ್ವದ ಅಂಗವಿಕಲರ ಸಂಸ್ಥೆಗಳ ಸ್ಫೂರ್ತಿ ತುಂಬುವಂತಾದಳು, ವಿಶ್ವವಿಖ್ಯಾತಳಾದಳು. ಇದಕ್ಕೆ ಕಾರಣ ಮಗುವಿನ ಇಚ್ಛಾ ಶಕ್ತಿ. ಪುರುಷ ಪ್ರಯತ್ನ ಹಾಗೂ ಅದರ ಬೇಕು ಬೇಡಗಳನ್ನು ಅರ್ಥಮಾಡಿಕೊಂಡು ಮಾತೃವಾತ್ಸಲ್ಯದಿಂದ ಪೋಷಿಸಿ ಪ್ರೋತ್ಸಾಹಿಸಿದ ಶಿಲ್ಪಿ ಶಿಕ್ಷಕಿ. ಅಂಗವಿಕಲರೂ ರಾಷ್ಟ್ರದ ಆಸ್ತಿ. ಅವರನ್ನು ಕಡೆಗಣ್ಣಿನಿಂದ, ತಾತ್ಸಾರದಿಂದ ಕಾಣಲಾಗದು.

ಮಕ್ಕಳ ಕುತೂಹಲವನ್ನು ಹತ್ತಿಕ್ಕದಿರಿ

ನಿಮ್ಮ ಮಕ್ಕಳ ಕುತೂಹಲವನ್ನು ಹತ್ತಿಕ್ಕದಿರಿ. ಮಕ್ಕಳಿಗೆ ಕಥೆಗಳೆಂದರೆ ಮೈಯೆಲ್ಲ ಕಿವಿ. ಸುಂದರ ರಮ್ಯ ಕಥೆಗಳ ಮೂಲಕ ಅವರ ಮನೋ ಪಕ್ಷಿ ಸ್ವಚ್ಛಂದ ವಾಗಿ ಗರಿಬಿಚ್ಚಿ ಹಾರಾಡಲಿ. ಸಾಧು-ಸಂತರ ವೀರ ಧೀರರ, ಶೂರ ಸಾಹಸಿಗಳ, ವಿಜ್ಞಾನಿ ಸುಜ್ಞಾನಿಗಳ ಕಥೆಗಳನ್ನು ಕೇಳುತ್ತಾ ಕೇಳುತ್ತಾ ಮಕ್ಕಳ ಮನಸ್ಸು, ಹೃದಯ, ಆತ್ಮ ಸಂಸ್ಕಾರಗೊಂಡು ತಾವೂ ಅವರಂತೆ ಆಗಬೇಕೆಂದು ಸಂಕಲ್ಪಿಸಿಕೊಳ್ಳುತ್ತವೆ. ಮಕ್ಕಳ ಮನದ ಆಳದಲ್ಲಿ ಇಳಿದ ಈ ಸಂಕಲ್ಪಗಳು ಮೂರ್ತ ಸ್ವರೂಪ ತಾಳುತ್ತವೆ, ಸರಿಯಾದ ಅವಕಾಶ ದೊರೆತಾಗ.

ಮುಬಾರಕ್ ಆಲಿ ಒಳ್ಳೆ ಕತೆಗಾರ. ಮೊದಲ ಸ್ವಾತಂತ್ರ್ಯ ಸಂಗ್ರಾಮವನ್ನು ಕಣ್ಣಾರೆ ಕಂಡವನು. ತುಂಬಾ ನೋವು ತಿಂದವನು. ಬ್ರಿಟಿಷರ ಅಮಾನುಷ ದೌರ್ಜನ್ಯ, ಭಾರತೀಯರ ಬಲಿದಾನ ಕುರಿತು ಕಣ್ಣಿಗೆ ಕಟ್ಟುವ ಹಾಗೆ ಅಂದಿನ ಘಟನೆ ಗಳನ್ನು ವಿವರಿಸುತ್ತಿದ್ದ. ಕತೆ ಕೇಳುತ್ತಿದ್ದ ಬಾಲಕ ಜವಾಹರ್ ಬ್ರಿಟಿಷರ ದಬ್ಬಾಳಿಕೆ ಕೇಳಿ ಕೇಳಿ ಕೆಂಡವಾಗುತ್ತಿದ್ದರು ಭಾರತೀಯರ ಬಲಿದಾನ ಅವರಲ್ಲಿ ರಾಷ್ಟ್ರಾಭಿ ಮಾನವನ್ನು ಹಾಗೂ ಸ್ವಾಭಿಮಾನವನ್ನು ಮೂಡಿಸಿತು. ದೊಡ್ಡವರಾದ ಮೇಲೆ ದೇಶದ ಕರೆ ಬಂದಾಗ ಸಂಪೂರ್ಣವಾಗಿ ತಮ್ಮನ್ನು ದೇಶ ಸೇವೆಗೆ ಅರ್ಪಿಸಿಕೊಂಡರು. ಸಾಕಷ್ಟು ತ್ಯಾಗ ಮಾಡಿದರು. ಕಠೋರ ಶಿಕ್ಷೆ ಅನುಭವಿಸಿದರು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ನೇತಾರರಲ್ಲಿ ಅವರೂ ಒಬ್ಬರಾದರು. ಅಷ್ಟೇ ಅಲ್ಲ, ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಯಾದರು. ವಿಶ್ವದ ಶ್ರೇಷ್ಠ ಜವಾಹರ್ ಅರ್ಥಾತ್ ರತ್ನವೇ ಆದರು.

ನಿಮ್ಮ ಮಗು ಸಾಹಸಿಯಾಗಲು ಪ್ರೋತ್ಸಾಹಿಸಿ

ಮಣಿಪುರದ ಒಬ್ಬ ಹುಡುಗಿ. ಆವಳ ಹೆಸರು ಚಂಚಲ್ ಕುಮಾರಿ. ಏಳು ವರ್ಷ ಆವಳಿಗೆ. ದಾರಿಯಲ್ಲಿ ಹೋಗ್ತಾ ಇದ್ದಳು. ಆಳವಾದ ನೀರಿನ ಗುಂಡಿಯಲ್ಲಿ ಬಿದ್ದ ಮಗುವಿನ ರೋದನ ಕೇಳಿದಳು. ಗಕ್ಕನೆ ನಿಂತಳು. ಗುಂಡಿಯಲ್ಲಿ ಜಿಗಿದಳು. ಮಗುವನ್ನು ರಕ್ಷಿಸಿ ಮೇಲಕ್ಕೆ ತಂದಳು. ರಾಷ್ಟ್ರಮಟ್ಟದ ಶೌರ್ಯ ಪ್ರಶಸ್ತಿ ಪಡೆದಿದ್ದಾಳೆ, ಆಕೆ. ಪ್ರಶಸ್ತಿಗಳಿಕೆಗಾಗಿ ಮಾಡಿದ ಸಾಹಸವಲ್ಲ ಅದು, "ಜೀವಕ್ಕೆ ಜೀವ ಕೊಟ್ಟು ಜೀವಿಸುವ ಜೀವನ ಮೌಲ್ಯವದು."

"ದಯೆಯೇ ಧರ್ಮದ ಮೂಲವಯ್ಯಾ" ಎಂಬ ಬುದ್ಧಿ ಬಲಿಯಲಿ ನಿಮ್ಮ ಮಗುವಿನಲ್ಲಿ

ಡಾ. ಎಂ. ಸಿ. ಮೋದಿ ವಿಶ್ವವಿಖ್ಯಾತ ನೇತ್ರದಾನಿ. ಲಕ್ಷಾಂತರ ಕಣ್ಣಿನ ದೃಷ್ಟಿ ಕಳಕೊಂಡ ಆರ್ತರಿಗೆ ಕಣ್ಣು ಕೊಟ್ಟ ಮುಕ್ಕಣ್ಣ. "ದಯೆಯೇ ಧರ್ಮದ ಮೂಲವಯ್ಯಾ" ಎಂಬುದನ್ನು ಪ್ರತ್ಯಕ್ಷ ಮಾಡಿ ತೋರಿಸಿರುವ ಮಾನವತಾವಾದಿ. ಲಯನ್ಸ್ ಸಂಸ್ಥೆಯ ೩೩ ಲಕ್ಷ ರೂಪಾಯಿಗಳ ಕೊಡುಗೆಯ ಅತ್ಯುನ್ನತ ಪ್ರಶಸ್ತಿಯನ್ನು "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆಯಿರೋ" ಎಂಬ ದಾಸವರೇಣ್ಯರ ಉಕ್ತಿಯಂತೆ ಎಲ್ಲವನ್ನೂ ದರಿದ್ರ ನಾರಾಯಣರ ಸೇವೆಗಾಗಿ ಅರ್ಪಣೆ! ಅಂಗವಿಕಲರ ಆಸ್ಪತ್ರೆಗಾಗಿ! ಇದು ಸೇವೆ, ಇದು ದಾನ, ಇದು ಧರ್ಮ. ಗಿನ್ನಿಸ್ ಪುಸ್ತಕದಲ್ಲಿ ಅವರ ಹೆಸರು. ಭಾರತಕ್ಕೆ ವಿಶಿಷ್ಟ ಗೌರವ ತಂದ ಅವರದ್ದು ಆದರ್ಶ ಬದುಕು. ಆದರ್ಶ ಬಾಳು!

ಮಾತಾ ಪಿತೃಗಳಲ್ಲಿ ಭಕ್ತಿ, ಸತ್ಯಸಂಧತೆ ಮುಂತಾದ ಮೌಲ್ಯಗಳನ್ನು ಮಗುವಿನಲ್ಲಿ ಬೆಳಸಿ

ಬಾಲಕ ಗಾಂಧಿ "ಶ್ರವಣನ ಪಿತೃಭಕ್ತಿ" ನಾಟಕ ಪುಸ್ತಕವನ್ನು ಆಸಕ್ತಿಯಿಂದ ಓದಿದರು. ಬೊಂಬೆ ಪ್ರದರ್ಶಕರು ತೋರಿಸಿದ ಶ್ರವಣನ ಚಿತ್ರ ನೋಡಿದರು. ಶ್ರವಣ ತನ್ನ ಕುರುಡು ತಂದೆತಾಯಿಗಳನ್ನು ಕಾವಡಿಯಲ್ಲಿ ಕೂಡಿಸಿಕೊಂಡು ಅದನ್ನು ಹೆಗಲಮೇಲೆ ಹೊತ್ತುಕೊಂಡು ಯಾತ್ರೆ ಹೊರಟ ಚಿತ್ರ. ಆ ಪುಸ್ತಕ, ಆ ದೃಶ್ಯ ಅವರ ಅಂತರಂಗದಲ್ಲಿ ಚಿರಸ್ಥಾಯಿಯಾದವು. ಗಾಂಧೀಜಿ ತಮ್ಮ ಮನಸ್ಸಿಗೆ ಹೇಳ್ತಾರೆ: "ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಕರಿಸು" ಎಂದು. ಹರಿಶ್ಚಂದ್ರನ ನಾಟಕ ನೋಡಿದ ಬಾಲಕ ಗಾಂಧಿ ತಾನೂ ಹರಿಶ್ಚಂದ್ರನಂತೆ ಸತ್ಯಸಂಧನಾಗಬೇಕೆಂದು ಸಂಕಲ್ಪಿಸಿದರು. ಗಾಂಧೀಜಿಯವರು ತಮ್ಮ ಕೊನೆ ಉಸಿರು ಇರುವವರೆಗೂ ಸತ್ಯಕ್ಕಾಗಿ ಹೋರಾಡಿದರು. "ಸತ್ಯವೇ ದೇವರು, ದೇವರೇ ಸತ್ಯ" ಎಂಬುದನ್ನು ತಮ್ಮ ಜೀವನದಲ್ಲಿ ಪ್ರಯೋಗ ಮಾಡಿ ಸ್ಫೂರ್ತಿ ಪಡೆದರು. ಅದಕ್ಕೆಂದೇ ಅವರ ಆತ್ಮಕಥೆಯನ್ನು "ಸತ್ಯಶೋಧನೆ" ಎಂದು ಹೆಸರಿಸಿದರು.

ಜಾತಿ, ಅಂತಸ್ತು ಇತ್ಯಾದಿ ಭಾವನೆಗಳನ್ನು ಮಗುವಿನ ಮನಸ್ಸಿನಲ್ಲಿ ಬಿತ್ತದಿರಿ

ಜಗದೀಶ ಚಂದ್ರಬೋಸರು ಉತ್ಕಟ ದೇಶಪ್ರೇಮಿ. ವಿಶ್ವವಿಖ್ಯಾತ ವಿಜ್ಞಾನಿ ಅವರ ತಂದೆ ಭಗವಾನ್ ಚಂದ್ರರು ಮ್ಯಾಜಿಸ್ಟ್ರೇಟರು. ಮಗನನ್ನು ಇಂಗ್ಲಿಷ್ ಶಾಲೆಗೆ ಸೇರಿಸಬಹುದಿತ್ತು. ಆದರೆ ವರ್ನಾಕ್ಯುಲರ್ ಶಾಲೆಗೆ ಸೇರಿಸಿದರು. ಬೋಸರ ಅಕ್ಕಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದವರಲ್ಲಿ ಒಬ್ಬ ಸೇವಕನ ಮಗ, ಇನ್ನೊಬ್ಬ ಬೆಸ್ತರವನ ಮಗ. ಒಮ್ಮೊಮ್ಮೆ ಶಾಲೆಯ ನಂತರ ಬೋಸರ ಮನೆಗೆ ಮೂವರೂ ಒಟ್ಟಿಗೇ ಹೋಗುತ್ತಿದ್ದರು. ಸಂಪ್ರದಾಯಸ್ಥರಾದ ಬೋಸರ ತಾಯಿ ಆ ಮೂರು ಮಕ್ಕಳಿಗೂ ಸಹಪಂಕ್ತಿ ಊಟಕ್ಕೆ ಬಡಿಸುತ್ತಿದ್ದರು. ಜಾತಿ, ಅಂತಸ್ತು, ಸಂಪ್ರದಾಯತೆ ಯಾವುದೂ ಅಡ್ಡಿ ಬರಲಿಲ್ಲ.

ಮಗುವಿನ ಅನ್ವೇಷಣಾ ಬುದ್ಧಿಗೆ ನೀರೆರೆಯಿರಿ

ಮಕ್ಕಳು ನಿತ್ಯ ಜೀವನದಲ್ಲಿ ಆಗುವ ವ್ಯಾಪಾರಗಳನ್ನು ನೋಡುತ್ತಾರೆ. ಪ್ರಕೃತಿಯ ವೈಚಿತ್ರ್ಯವನ್ನು ಕಾಣುತ್ತಾರೆ. ಅದರಲ್ಲಿ ಆಗುವ ಬದಲಾವಣೆಗಳನ್ನು ವೀಕ್ಷಿಸುತ್ತಾರೆ. ಅದೇನು ? ಇದೇನು ? ಇದು ಹೀಗೇಕೆ ? ಅದು ಹಾಗೇಕೆ ? ಇತ್ಯಾದಿ ಪ್ರಶ್ನೆಗಳ ಸುರಿಮಳೆಯನ್ನೆ ಸುರಿಸುತ್ತಾರೆ. ಆ ಪ್ರಶ್ನೆಗಳಿಗೆಲ್ಲ ಸಾವಧಾನ ದಿಂದ ಉತ್ತರಿಸಬೇಕು. ಅವರ ಕುತೂಹಲ ಹತ್ತಿಕ್ಕಬಾರದು. ಅವರ ಅನ್ವೇಷಣಾ ಶಕ್ತಿಗೆ ಪುಷ್ಟಿ ಕೊಡಬೇಕು. ಬೋಸರ ತಂದೆ ಇವನ್ನು ಮಾಡ್ತಾ ಇದ್ದರು. "ದೊಡ್ಡವನಾದ ಮೇಲೆ ನೀನೇ ಕಂಡುಹಿಡಿ" ಎಂಬುದಾಗಿ ಒಮ್ಮೊಮ್ಮೆ ಪ್ರೋತ್ಸಾಹಿ ಸುತ್ತಿದ್ದರು. ಹೀಗಾಗಿ ಬೋಸರು ವಿಶ್ವವಿಖ್ಯಾತ ವಿಜ್ಞಾನಿ ಆದರು.

ಇಲ್ಲದ ಭೂತದ ಬಗ್ಗೆ ಭಯ ಹುಟ್ಟಿಸದಿರಿ

ಒಂದು ಸಂಜೆ ವಾಯುವಿಹಾರ ಮುಗಿಸಿಕೊಂಡು ಮನೆಗೆ ವಾಪಸಾಗುತ್ತಿದ್ದೆ. ಹಾಲು ಚೆಲ್ಲಿದ ಬೆಳುದಿಂಗಳು. ರಸ್ತೆ ಪಕ್ಕದಲ್ಲಿ ಬಿಳಿ ಬಟ್ಟೆ ಉಟ್ಟಿದ್ದ ಒಬ್ಬ ಹೆಂಗಸು. ಕೂತಂತಿದ್ದಿತು. ನನ್ನ ಜೊತೆಯಲ್ಲಿ ಯಾರೂ ಇಲ್ಲ. ಮೋಹಿನಿ ವಿಷಯ ಕೇಳಿದ್ದೆ. ಅದೇ ಇರಬೇಕೆಂದು ಶಂಕಿಸಿದೆ. ಆದರೂ ಧೈರ್ಯ ಮಾಡಿ ಮುಂದೆ ಹೆಜ್ಜೆ ಹಾಕಿದೆ. ನೋಡ್ತೀನಿ, ಅದೊಂದು ಕುರುಚಲು ಗಿಡ. ಅದರ ತುಂಬ ಜೇಡಗಳು ಜಾಣ್ಮೆ ಯಿಂದ ನೂತ ಬಲೆ. ಬೆಳುದಿಂಗಳಿನಲ್ಲಿ ಅದು ಬಿಳಿ ಉಡುಪು ಧರಿಸಿದ ಹೆಣ್ಣಿನ ರೂಪ ತಳೆದಿತ್ತು. ಇಲ್ಲದ ಕಲ್ಪನೆ ಮಕ್ಕಳಲ್ಲಿ ಮೂಡಿಸದಿರಿ. ಎಲ್ಲವನ್ನೂ ಪರೀಕ್ಷಿಸಲು ಪ್ರಚೋದಿಸಿ.

ಕೂಡಿ ಆಡುವ, ಕೂಡಿ ಬಾಳುವ ಮನೋಧರ್ಮ ಬೆಳಸಿ, ಮಗು ವಿನಲ್ಲಿ.

ಆರೋಗ್ಯವೇ ಭಾಗ್ಯ. "ಶರೀರಮಾದ್ಯಂ ಖಲು ಧರ್ಮ ಸಾಧನಮ್" ದೇಹ ಬಲವಿಲ್ಲದವನು ಮೋಕ್ಷವಿರಲಿ, ಜೀವನದಲ್ಲಿ ಏನನ್ನೂ ಸಾಧಿಸಲಾರ. ಆಟ ದೇಹಕ್ಕೆ

ಚೈತನ್ಯ ಕೊಡುತ್ತದೆ. ಮನಸ್ಸಿನ ಉಲ್ಲಾಸವನ್ನೂ ಹೆಚ್ಚಿಸುತ್ತದೆ. ಬುದ್ಧಿಯನ್ನು ಪ್ರಚೋದಿಸುತ್ತದೆ. ಕೂಡಿ ಆಡುವುದರಿಂದ ಒಗ್ಗಟ್ಟು ಬಲಗೊಳ್ಳುತ್ತದೆ. ಸೋಲು ಗೆಲುವುಗಳನ್ನು ಸಂತೋಷದಿಂದ ಸ್ವೀಕರಿಸುವ ಮನೋಧಾರ್ಢ್ಯ ಬರುತ್ತದೆ. ನಿಯಮ ಪಾಲನೆ ಆಟದ ಆತ್ಮ. ಇದನ್ನು ಕಲಿತವನು ಬೇರೆ ಕ್ಷೇತ್ರಗಳಲ್ಲೂ ತಪ್ಪದೆ ನಿಯಮ ಪರಿಪಾಲಿಸುತ್ತಾನೆ. "ಸಶಕ್ತ ಶರೀರದಲ್ಲಿ ಸ್ವಸ್ಥ ಮನಸ್ಸು" ಎಂಬ ಒಂದು ಇಂಗ್ಲಿಷ್ ಗಾದೆ. ಇದು ಅಕ್ಷರಶಃ ನಿಜ. ಆಟದಲ್ಲಿ ಕೂಡಿ ಆಡುವ ಗೆಳೆಯರು ಕೂಡಿ ಬಾಳುವುದನ್ನೂ ಕಲಿಸುತ್ತದೆ.

ಕಾಯಕವೇ ಕೈಲಾಸವೆಂಬುದು ನಿಮ್ಮ ಮಗುವಿನ ಧ್ಯೇಯವಾಗಲಿ.

ಯಾವ ಕೆಲಸವೂ ಕೀಳಲ್ಲ, ತುಚ್ಛವಲ್ಲ. ಕೆಲಸ ಸಣ್ಣದೇ ಇರಲಿ, ದೊಡ್ಡದೇ ಇರಲಿ ಶ್ರದ್ಧೆಯಿಂದ ಮಾಡಬೇಕು. ಅಚ್ಚುಕಟ್ಟಾಗಿ ಮಾಡಬೇಕು. ಸಮಾಜದ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಮಾಡಬೇಕು. ದೇವರು ಕೊಟ್ಟಿರುವ ಎರಡು ಕೈಗಳನ್ನು ಹಾಗೂ ಬುದ್ಧಿಶಕ್ತಿಯನ್ನು ಉಪಯೋಗಿಸಿ ಬೆವರು ಹರಿಸಿ ದುಡಿಯಬೇಕು. ಕೆಲಸಕ್ಕಾಗಿ ಕಂಡಕಂಡವರ ಕಾಲು ಕಟ್ಟುವ ಹೇಡಿತನ ಸಲ್ಲದು. ಕಷ್ಟಪಟ್ಟು ದುಡಿದು ಬೆವರು ಹರಿಸಿ ಅನ್ನ ಸಂಪಾದಿಸಬೇಕು. ಆ ಅನ್ನ ಪುಷ್ಟಿದಾಯಕ, ತುಷ್ಟಿದಾಯಕ. "ಅನ್ನವುಣ್ಣುವುದು ಕೇಳ್; ಅದನ್ನು ಬೇಯಿಸಿದ ನೀರ್ । ನಿನ್ನ ದುಡಿತದ ಬೆಮರೊ, ಪರರ ಕಣ್ಣೀರೋ ?" ಮಂಕುತಿಮ್ಮನ ಈ ಎಚ್ಚರಿಕೆ ಪ್ರತಿದಿನ ಊಟ ಮಾಡುವಾಗ ಜ್ಞಾಪಕಕ್ಕೆ ಬರಬೇಕು. "ತ್ಯಾಗದಿಂದ ಅನುಭವಿಸು, ಯಾರ ಧನವನ್ನೂ ಬಯಸಬೇಡ"— ಈಶೋಪನಿಷತ್ತಿನ ಈ ಮಾತು ನಿಮ್ಮ ಮಗುವಿನ ಒಳ್ಳೆಯ ಗುರಿಯಾಗಬೇಕು. ಕಾಯಕವನ್ನು ಧರ್ಮದ ಮಜಲಿಗೆ ಏರಿಸಿ ಯಾರ ಧನಕ್ಕೂ ಬಾಯಿ ಬಿಡದೆ ಬೆವರು ಹರಿಸಿ ಪ್ರತಿಯೊಬ್ಬರೂ ದುಡಿದಾಗ ಭಾರತ ಸ್ವರ್ಗವಾಗುವುದರಲ್ಲಿ ಏನಾಶ್ಚರ್ಯ ?

ಚೀನಾದ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. "ನೀವು ಒಬ್ಬನಿಗೆ ಒಂದು ಮೀನು ಕೊಟ್ಟರೆ ಒಪ್ಪತ್ತಿನ ಊಟ ಕೊಟ್ಟಂತಾಯ್ತು. ಆದರೆ ಮೀನು ಹಿಡಿಯುವುದನ್ನು ಕಲಿಸಿದರೆ ಇಡೀ ಜೀವನಪರ್ಯಂತ ಊಟ ಕೊಟ್ಟಂತಾಗುತ್ತದೆ." ಇದರಲ್ಲಿ ಎಷ್ಟು ಅರ್ಥವಿದೆ, ಒಂದು ಹಿಡಿ ಕಾಳು ಕೊಟ್ಟರೆ ಒಪ್ಪತ್ತಿನ ಗಂಜಿ ಆಯ್ತು. ಆದರೆ ಅದೇ ಹಿಡಿಕಾಳನ್ನು ನೆಲದಲ್ಲಿ ಉತ್ತು ಬಿತ್ತಿದರೆ ಖಂಡುಗವಾಯ್ತು. ಇಡೀ ವರ್ಷದ ಅನ್ನವಾಯ್ತು. ಇದರ ತತ್ವವನ್ನು ಮಕ್ಕಳಲ್ಲಿ ಮೂಡಿಸಬೇಕು

ನಿಮ್ಮ ನಡೆ-ನುಡಿ, ಆಚಾರ-ವ್ಯವಹಾರ ಪರಿಶುದ್ಧವಾಗಿರಲಿ

ಮಕ್ಕಳು ಅನುಕರಣಶೀಲರು. ಆದ್ದರಿಂದ ನಿಮ್ಮ ನಡೆ, ನುಡಿ, ಆಚಾರ ವಿಚಾರ ಪರಿಶುದ್ಧವಾಗಿರಬೇಕು. ಮಕ್ಕಳು ಅನುಸರಿಸಲು ಯೋಗ್ಯವಾಗಿರಬೇಕು. "ನಾನು ಹೇಳಿದಂತೆ ಮಾಡು, ನಾನು ಮಾಡಿದಂತೆ ಮಾಡಬೇಡ" ಎಂಬ ಕಠೋರತೆ ನಿಮ್ಮ ಬಗ್ಗೆ ಮಗುವಿಗೆ ಇರುವ ಗೌರವವನ್ನು ಕುಗ್ಗಿಸುವುದಲ್ಲದೆ ನಿಮ್ಮ ಬಗ್ಗೆ

ತಾತ್ಸಾರ ಹಾಗೂ ದ್ವೇಷ ಬೆಳೆಸಿದರೆ ಏನಾಶ್ಚರ್ಯವಲ್ಲ. ಆದ್ದರಿಂದ ನಿಮ್ಮ ನಡೆ ನುಡಿಗಳಲ್ಲಿ ಆಚಾರ ವಿಚಾರಗಳಲ್ಲಿ ಬಹಳ ಎಚ್ಚರವಿರಬೇಕು.

ರಾಷ್ಟ್ರಪ್ರಜ್ಞೆ, ರಾಷ್ಟ್ರಕ್ಕಾಗಿ ಸಮಯ ಬಂದಾಗ ಪ್ರಾಣಾರ್ಪಣೆ ಮಾಡುವ ಕೆಚ್ಚು ನಿಮ್ಮ ಮಗುವಿನ ಆದರ್ಶವಾಗಲಿ

"ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ" "ಹೆತ್ತ ತಾಯಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತ ಹೆಚ್ಚು ಶ್ರೇಷ್ಠ" ಎಂಬ ಭಾವನೆಯನ್ನು ಮಕ್ಕಳಲ್ಲಿ ಮೂಡಿಸಬೇಕು. ಸ್ವಾಮಿ ವಿವೇಕಾನಂದರು ತಮ್ಮ ಕೃತಿಶ್ರೇಣಿಯಲ್ಲಿ ಭಾರತೀಯ ರನ್ನು ಈ ರೀತಿಯಾಗಿ ಕೇಳಿಕೊಳ್ಳುತ್ತಾರೆ. ಅಭಿಮಾನ ಪೂರ್ವಕವಾಗಿ ದಿಕ್ತಟ ಗಳು ಅಣುರಣಿತವಾಗುವಂತೆ ತಾರಸ್ವರದಿಂದ ಸಾರಿ ಹೇಳಿ, "ಭಾರತೀಯರು ನಮ್ಮ ಸಹೋದರರು, ಭಾರತೀಯರು ನಮ್ಮ ಪ್ರಾಣ, ಭಾರತೀಯ ದೇವ ದೇವತೆಗಳೆ ಲ್ಲರೂ ನಮ್ಮ ದೇವರು,ಭಾರತೀಯ ಸಮಾಜ ನಮ್ಮ ಬಾಲ್ಯದ ತೊಟ್ಟಿಲು,ತಾರುಣ್ಯದ ಮನ, ವೃದ್ಧಾಪ್ಯದ ವಾರಣಾಸಿ." ಸಹೋದರನೆ, ಹೀಗೆ ಸಾರು: "ಭಾರತ ಭೂಮಿಯ ನಮ್ಮ ಪರಂಧಾಮ, ಭಾರತೀಯ ಶುಭತೆ ನಮ್ಮ ಶುಭ." ಹಗಲೂ ರಾತ್ರಿಯೂ ಇದು ನಿಮ್ಮ ಪ್ರಾರ್ಥನೆಯಾಗಲಿ. "ಹೇ ಗೌರಿನಾಥ, ಹೇ ಜಗನ್ಮಾತೆ, ಪೌರುಷವನ್ನು ಎಮಗೆ ದಯಪಾಲಿಸು. ಹೇ ಸರ್ವಶಕ್ತಿಶಾಲಿನಿ, ನಮ್ಮ ದುರ್ಬಲತೆಯನ್ನು ದಹಿಸು, ಕ್ಲೈಬ್ಯವನ್ನು ಹೋಗಲಾಡಿಸು, ನಮ್ಮನ್ನು ಪೌರುಷ ವಂತರನ್ನಾಗಿ ಮಾಡು. ಪುರುಷ ಸಿಂಹವಾಗಿಮಾಡು." ಇದು ನಿಮ್ಮ ಮಕ್ಕಳ ನಿತ್ಯ ಪ್ರಾರ್ಥನೆಯಾಗಬೇಕು.

ಭಗತ್‌ಸಿಂಗ್, ಸುಖದೇವ್, ರಾಜಗುರು ಈ ಮೂವರು ಭಾರತ ಸ್ವಾತಂತ್ರ್ಯ ಸಂಗ್ರಾಮದ ವೀರಯೋಧರು. ಅವರಿಗೆ ಗಲ್ಲಿನ ಶಿಕ್ಷೆ ವಿಧಿಸಿತು, ಕ್ರೂರ ಬ್ರಿಟಿಷ್ ಸರ್ಕಾರ. ಅವರು ಮಾಡಿದ ತಪ್ಪಾದರೂ ಏನು? ತಮ್ಮ ರಾಷ್ಟ್ರದ ಬಂಧವಿಮೋಚನೆ ಗಾಗಿ ಹೋರಾಡಿದ್ದು! ಅವರು ಸಾವನ್ನು ಹೇಗೆ ಅಪ್ಪಿದರು ಗೊತ್ತೆ? ಹೃತ್ಪೂರ್ವಕ ವಾಗಿ, ಬಾಯಿ ತುಂಬ, ಉಚ್ಚ ಧ್ವನಿಯಿಂದ, ಮಾತೃ ಭೂಮಿಯ ನಾಮೋಚ್ಚಾರ ಮಾಡಿದರು. ಕ್ರಾಂತಿಯ ವೀರ ಘೋಷಣೆಯನ್ನು ಆಕಾಶವೇ ಕಳಚಿ ನೆಲಕ್ಕೆ ಬೀಳು ವುದೋ ಎಂಬಂತೆ ಘರ್ಜಿಸಿದರು. ಗಲ್ಲಿಗಾಗಿ ಏರ್ಪಡಿಸಿದ್ದ ವೇದಿಕೆ ಏರಿದರು, ನೇಣು ಗಳಿಗೆ ಮುತ್ತಿಟ್ಟರು. ಮತ್ತೊಮ್ಮೆ "ಭಾರತ ಮಾತಾಕಿ ಜೈ" ಎಂಬುದಾಗಿ ಮುಗಿಲು ಬಿರಿಯುವಂತೆ ಘೋಷಿಸಿದರು ತನ್ನ ಶಿಲುಬೆಯನ್ನು ತಾನೆ ಹೊತ್ತ ಏಸು ಸ್ವಾಮಿಯಂತೆ ತಮ್ಮ ನೇಣುಗಳನ್ನು ತಾವೇ ಹಾಕಿಕೊಂಡು ಅಮರರಾದರು. ಏನು ಧೈರ್ಯ, ಎಂಥಾ ಉತ್ಕಟ ರಾಷ್ಟ್ರ ಭಕ್ತಿ! ಮಕ್ಕಳಲ್ಲಿ ಇಂಥ ರಾಷ್ಟ್ರ ಪ್ರೇಮ ಬೆಳಸಬೇಕಲ್ಲವೆ, ಭಾರತ ಉಳಿಯ ಬೇಕೆಂದರೆ!

ದೇವರ ಅಸ್ತಿತ್ವದ ಬಗ್ಗೆ ನಂಬಿಕೆ, ವೈಚಾರಿಕತೆ, ವೈಜ್ಞಾನಿಕ ಮನೋಭಾವ, ತಂದೆ ತಾಯಿ ಗುರು ಹಿರಿಯರಲ್ಲಿ ಗೌರವ, ಪುರುಷಪ್ರಯತ್ನದಲ್ಲಿ ವಿಶ್ವಾಸ, ರಾಷ್ಟ್ರ ಭಕ್ತಿ, ಸೇವಾಮನೋಭಾವ, ಕೂಡಿ ಆಡುವ ಕೂಡಿ ಬಾಳುವ ಜೀವನ ಕಲೆ,

ಉತ್ತಮ ಸಾಹಿತ್ಯ-ಸಂಗೀತ-ಇತರೆ ಕಲೆಗಳಲ್ಲಿ ಅಭಿರುಚಿ ಇತ್ಯಾದಿ ಉತ್ತಮ ಜೀವನ ಮೌಲ್ಯಗಳು ಮಗುವಿನ ಅಭ್ಯಾಸವಾಗಿ ರಕ್ತಗತವಾಗಿ ಬಿಡಬೇಕು' ಅಭ್ಯಾಸಗಳು ಮಗುವಿನ ಸ್ವಭಾವವೇ ಆಗಬೇಕು. ಅಭ್ಯಾಸ ಬಲವತ್ತರವಾದ ಸಂಸ್ಕಾರ. ಯಾವುದು ನಮ್ಮ ಸ್ವಭಾವವೇ ಆಗಿ ಬಿಡುತ್ತದೋ ಅದು ತನ್ನಷ್ಟಕ್ಕೆ ತಾನೇ ಯಾಂತ್ರಿಕವಾಗಿ ನಮ್ಮ ಅರಿವಿಲ್ಲದಂತೆ ಆಗಿ ಹೋಗುತ್ತದೆ. ಶ್ರಮ ಅಂತ ಅನ್ನಿಸೋದೇ ಇಲ್ಲ. "ಮೂರು ವರ್ಷದ ಬುದ್ಧಿ ನೂರು ವರ್ಷ" ಎಂಬಂತೆ ಎಲ್ಲ ಉತ್ತಮ ಆದರ್ಶನೀಯ ಮೌಲಗಳನ್ನು ಚಿಕ್ಕ ವಯಸ್ಸಿನಲ್ಲಿ ಮೂಡಿಸಿ. ನಿಮ್ಮ ಮಗುವಿಗೆ ಬದುಕಿ ಬಾಳುವ ಜೀವನಕಲೆ ಕಲಿಸಿ. ಆಗ ಭಾರತ ಬದುಕಿ ಬಾಳುತ್ತದೆ. ಭಾರತ ಬದುಕಿದರೆ ವಿಶ್ವ ಬದುಕುತ್ತದೆ. ವಿಶ್ವದಲ್ಲಿ ಶಾಂತಿ ನೆಲೆಸುತ್ತದೆ. "ಜೈಜಗತ್ತಿನ" ಕನಸು ನನಸಾಗುತ್ತದೆ.

ಮೈಸೂರು ಹವ್ಯಾಸಿ ರಂಗ ಚಟುವಟಿಕೆ

ನಾಗಚಂದ್ರ

ಕರ್ನಾಟಕ ಹವ್ಯಾಸಿ ರಂಗಭೂಮಿಗೆ ಮೈಸೂರು ರಂಗಭೂಮಿಯೂ ತನ್ನದೇ ಆದ ಕೊಡುಗೆ ನೀಡಿದೆ ಎಂಬುದನ್ನು ರಂಗಭೂಮಿಯನ್ನು ಬಲ್ಲ ಎಲ್ಲರೂ ಒಪ್ಪುತ್ತಾರೆ. ಸುಮಾರು ೭೦ ವರುಷಗಳ ಹಿಂದೆಯೇ ಮೈಸೂರಿನಲ್ಲಿ ಹವ್ಯಾಸಿ ತಂಡಗಳು ಹುಟ್ಟಿಕೊಂಡವು. ಹವ್ಯಾಸಿ ತಂಡಗಳು ಎಂದರೇನು? ನಾಟಕವಾಡಿ ತಮ್ಮ ಉದರ ಪೋಷಣೆ ಮಾಡಿಕೊಳ್ಳದ, ನಾಟಕವನ್ನು ಪ್ರದರ್ಶಿಸುವುದನ್ನು ಆತ್ಮ ಸಂತೋಷಕ್ಕಾಗಿ ಮಾಡಿಕೊಂಡ ತಂಡಗಳೇ "ಹವ್ಯಾಸಿ ತಂಡಗಳು" ಎಂದು ಗುರುತಿಸಬಹುದು. ಪಾಶ್ಚಾತ್ಯ ರಂಗಭೂಮಿಯನ್ನು ಸಾಹಿತ್ಯದ ಮೂಲಕ ಪ್ರದರ್ಶನಗಳ ಮೂಲಕ ಆರ್ಥೈಸಿಕೊಂಡ ಆಗಿನ ಕಾಲದ ಕಾಲೇಜು ಉಪನ್ಯಾಸಕರ ಒಂದು ವರ್ಗ ಹವ್ಯಾಸಕ್ಕಾಗಿ ನಾಟಕಗಳನ್ನು ಪ್ರದರ್ಶಿಸತೊಡಗಿತು. ಬಿ. ಎಂ. ಶ್ರೀ, ಕುವೆಂಪು, ಎ. ಎನ್. ಮೂರ್ತಿರಾವ್ ಇಂಗ್ಲಿಷ್ ನಾಟಕಗಳನ್ನು ಕನ್ನಡಕ್ಕೆ ತಂದು ವಿಲಾಸಿ ನಾಟಕ ಪ್ರದರ್ಶನಗಳಿಗೆ ಜೀವತುಂಬಿದರು.

ಮೈಸೂರಿನಲ್ಲಿ ವಕೀಲರೂ ನಾಟಕಾಭಿಮಾನಿಗಳೂ ಆದ ಡಿ. ಲಕ್ಷ್ಮಯ್ಯನವರು ಕೆಲವು ವಕೀಲರು, ಸರಕಾರಿ ಉದ್ಯೋಗಸ್ಥರೂ ಹಾಗೂ ವಿದ್ಯಾರ್ಥಿಗಳನ್ನು ಕಲೆಹಾಕಿ ೧೯೧೯ರಲ್ಲಿ ಲಿಟರರಿ ಅಂಡ್ ಡ್ರಮ್ಯಾಟಿಕ್ ಅಸೋಸಿಯೇಷನ್ ಎಂಬ ವಿಲಾಸಿ ನಾಟಕ ತಂಡವನ್ನು ಕಟ್ಟಿ ಇಂಗ್ಲಿಷ್ ಮತ್ತು ಕನ್ನಡ ನಾಟಕಗಳನ್ನು ಪ್ರದರ್ಶಿಸಿದರು. ಈ ನಾಟಕ ಸಂಘದ ಸದಸ್ಯರು ಸೇರುತ್ತಿದ್ದ ಸ್ಥಳ ಮರಿಮಲ್ಲಪ್ಪನವರ ಹೈಸ್ಕೂಲು. ಡಿ. ಲಕ್ಷ್ಮಯ್ಯ, ಸಿ. ಆನಂದರಾವ್, ಸಿ. ಆರ್. ಸುಬ್ಬರಾವ್ ಆ ಸಂಘದಲ್ಲಿ ಮುಖ್ಯ ನಟರು. ಶೂರಸೇನ ಚರಿತ್ರೆ (Othello), ಜಯಸಿಂಹ ಚರಿತ್ರೆ, ವೀರಸಿಂಹ ಚರಿತ್ರೆ, ನಿಂದಾಶಾಲೆ (School of Scandal) ಮೊದಲಾದ ನಾಟಕಗಳನ್ನು ಈ ಅಸೋಸಿಯೇಷನ್ ಸಹ ಪ್ರದರ್ಶಿಸುತ್ತಿದ್ದಿತು. ಇಂಗ್ಲಿಷ್ ನಾಟಕಗಳ ಕನ್ನಡ ರೂಪಾಂತರಗಳ ಜೊತೆಗೆ ಈ ಸಂಘವು ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿ ಖ್ಯಾತಿ ಪಡೆಯಿತು.

ಸದಸ್ಯರ ಭಿನ್ನಾಭಿಪ್ರಾಯದಿಂದ ಈ ವಿಲಾಸಿ ಸಂಘವು ೧೯೩೮ರಲ್ಲಿ ಮುಚ್ಚಿಹೋಗಿ ಮತ್ತೆ ೧೯೪೧ರಲ್ಲಿ ನಂಜನಗೂಡು ಶ್ರೀಕಂಠಶಾಸ್ತ್ರಿಗಳ ನೇತೃತ್ವದಲ್ಲಿ ಮೈಸೂರು ನಾಟಕ ಸಂಘ ಎಂಬ ಹೆಸರನ್ನು ತಾಳಿ 'ಅಹಲ್ಯಾಬಾಯಿ' 'ರಾಣಿ ದೇವಲಾದೇವಿ' ಎಂಬ ಐತಿಹಾಸಿಕ ನಾಟಕಗಳನ್ನು 'ಸಮಾಜಸಂಧ್ಯೆ' ಎಂಬ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸತೊಡಗಿತು. ಚಿತ್ರರಂಗದಲ್ಲೂ ತಮ್ಮ ನಟನೆಯಿಂದು

ಅದ್ಭುತವಾದ ಕಂಠಸಿರಿಯಿಂದ ಜನಪ್ರಿಯರಾಗಿದ್ದ ದಿವಂಗತ ಸಂಪತ್‌ರವರು ಮೈಸೂರಿನಲ್ಲಿ ೧೯೩೪ರಲ್ಲಿ (Sams Little Theatre) ಹವ್ಯಾಸಿ ತಂಡವನ್ನು ಕಟ್ಟಿದರು. ಅವರ ಬಹುಪಾಲು ಪ್ರಯೋಗಗಳಲ್ಲಿ ಇಂಗ್ಲಿಷ್ ನಾಟಕಗಳಿಗೆ ಸೀಮಿತವಾಯಿತು ಎಂಬುದು ಗಮನಾರ್ಹ. ಆದರೆ ಸಂಪತ್‌ರವರು ತಮ್ಮ ತಂಡದ ಮೂಲಕ ಮುಂದಿನ ಹವ್ಯಾಸಿ ಪೀಳಿಗೆಯೊಂದರ ನಿರ್ಮಾಣಕಾರರಾದರು ಎನ್ನುವುದು ನಿರ್ವಿವಾದ. ಎಂ. ವಿ. ಕೃಷ್ಣಸ್ವಾಮಿ, ಪ್ರೊ. ಆರ್. ಗುರುರಾಜರಾವ್, ನ. ರತ್ನ, ವಿಶ್ವನಾಥ ಮಿರ್ಲೆ, ಮೀನಾ ಬೆಳ್ಳಿಯಪ್ಪ ಮುಂತಾದ ನಟ-ನಟಿಯರು ಇವರ ಗರಡಿಯಲ್ಲಿ ತಾಲೀಮು ಮಾಡಿದರು.

ಹವ್ಯಾಸಿ ರಂಗಭೂಮಿಗೆ ಮೈಸೂರು ಮಹಾರಾಜ ಕಾಲೇಜು ನೀಡಿದ ಕೊಡುಗೆ ಸಾಮಾನ್ಯವಾದುದಲ್ಲ. ಸಂಪತ್‌ರವರನ್ನು ಬಿಟ್ಟರೆ ಈಚೆಗೆ ಶಿವಣ್ಣರವರು 'ಕಿಂಗ್ ಲಿಯರ್', Master Bulider, ಎನ್. ಎಸ್. ನಾರಾಯಣ ಶಾಸ್ತ್ರಿಗಳ ನೇತೃತ್ವದಲ್ಲಿ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ನಾಟಕ ಸಂಘ (ಯೂನಿವರ್ಸಿಟಿ ಅಮೆಚೂರ್ಸ್)ವನ್ನು ೧೯೨೭ರಲ್ಲಿ ಸ್ಥಾಪಿಸಿ ನಾಟಕಗಳನ್ನು ಅಭಿನಯಿಸಲು ಪ್ರಾರಂಭಿಸಿದರು. ಅವರು ಇಂಗ್ಲಿಷ್ ನಾಟಕಗಳನ್ನು ಆಡುತ್ತಿದ್ದುದಲ್ಲದೆ ಅಧ್ಯಾಪಕರು ರಚಿಸಿ ಕೊಡುತ್ತಿದ್ದ ಕನ್ನಡ ನಾಟಕಗಳನ್ನು ರಂಗದ ಮೇಲೆ ತರುತ್ತಿದ್ದರು. ಬಿ.ಎಂ. ಶ್ರೀ ಅವರ ಗದಾಯುದ್ಧಂ, 'ಅಶ್ವತ್ಥಾಮನ್', 'ಪಾರಸಿಕರು' ರಂಗದ ಮೇಲೆ ಬಂದವು. ಕುವೆಂಪು ಅವರು ರಚಿಸಿದ 'ಯಮನ ಸೋಲು' ನಾಟಕವನ್ನು ೧೯೨೮ರಲ್ಲಿ ಯಶಸ್ವಿಯಾಗಿ ಅಭಿನಯಿಸಿದರು. ಕುವೆಂಪು ಸತ್ಯವಾನನಾಗಿ, ಬಿ. ಕೃಷ್ಣ ಸಾವಿತ್ರಿಯಾಗಿ, ಬಿ. ಆರ್. ಪುಟ್ಟನಂಜಪ್ಪ ಯಕ್ಷನಾಗಿ, ಅನಂತರಂಗಾಚಾರ್ ಯಮದೂತನಾಗಿ ಅಭಿನಯಿಸಿ ಪ್ರೇಕ್ಷಕರನ್ನು ರಂಜಿಸಿದರು.

ಅನೇಕ ಕನ್ನಡ ನಾಟಕಗಳ ಪ್ರಥಮ ಪ್ರದರ್ಶನಗಳು ನಡೆದುದು ಮಹಾರಾಜ ಕಾಲೇಜಿನ ನಾಟಕ ಸಂಘದಿಂದ. ಸಂಘದ ನಟರಲ್ಲಿ ಪ್ರಸಿದ್ಧರಾದವರು ಸಿ. ಬಿ. ಜಯರಾವ್, ವಿ.ಕೆ. ಶ್ರೀನಿವಾಸನ್ (ಬುಳ್ಳ), ಬಿ. ಕೃಷ್ಣ (ತುಪ್ಪ), ಎ.ಸಿ. ನರಸಿಂಹಮೂರ್ತಿ, ಎಂ. ನಟೇಶ್, ಟಿ. ಎಂ. ಅಮಿರ್, ಡಿ. ಚಂದ್ರಶೇಖರಯ್ಯ, ನಾರಾಯಣ ಶಾಸ್ತ್ರಿ, ಎ. ಎನ್. ಮೂರ್ತಿರಾವ್, ನಾರಾಯಣಸ್ವಾಮಿ, ಪುಟ್ಟನಂಜಪ್ಪ, ಕನಕ ಲಕ್ಷಮ್ಮ, ಆರ್. ಗುರುರಾಜರಾವ್, ಮುರುಘೇಂದ್ರಸ್ವಾಮಿ, ಪೀತಾಂಬರರಾವ್, ಎಚ್. ಕೆ. ರಂಗನಾಥ್ ಮೊದಲಾದವರು.

ಮಹಾರಾಜ ಕಾಲೇಜು ಸಂಘ ೧೯೪೫ರಲ್ಲಿ ಒಡೆದಮೇಲೆ ಮಿತ್ರಮೇಳ ಯಾಕೂಬ್ ಈ ಮರಿ ಸಂಘಗಳು ಹುಟ್ಟಿಕೊಂಡು ನಾಟಕಗಳನ್ನು ಅಭಿನಯಿಸತೊಡಗಿದವು. ೧೯೫೭ರಲ್ಲಿ ಗುರುರಾಜರಾಯರು ಅಧ್ಯಾಪಕರಾಗಿ ಬೆಂಗಳೂರಿನಿಂದ ಮೈಸೂರಿಗೆ ಬಂದ ಮೇಲೆ ಸ್ನೇಹಿತರೊಡಗೂಡಿ ಮಹಾರಾಜ ಕಾಲೇಜಿನ ಸಂಘದ ಮೂಲಕ ನಾಟಕಗಳನ್ನು ಪ್ರದರ್ಶಿಸಿದರು. ಸಂಪತ್, ಸಿಂಧುವಳ್ಳಿ ಅನಂತಮೂರ್ತಿ, ನ. ರತ್ನ, ಆರ್. ಗುರುರಾಜರಾವ್ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಆಗಿನ ಕುಲಪತಿ ವಿ. ಎಲ್. ಡಿಸೌಜಾ, ಎಂ. ವಿ. ಕೃಷ್ಣಸ್ವಾಮಿ, ಶಾರದಾಪ್ರಸಾದ್ ಮುಂತಾದವರಿಂದ ಕೇವಲ ನಾಟಕ

ಗಳನ್ನು ಆಡಿಸುವುದಕ್ಕಾಗಿಯೇ ಹುಟ್ಟಿತು, ಮಿತ್ರಮೇಳ. ಶ್ರೀನಿವಾಸ್, ಕೆ. ಎಲ್. ಎನ್. ಸಿಂಹ, ಎಸ್. ಸಿದ್ದಪ್ಪ, ಎಂ. ಕೃಷ್ಣಸ್ವಾಮಿ ಮೊದಲಾದವರು ಆಗಿನ ಮಿತ್ರ ಮೇಳದಲ್ಲಿದ್ದರು.

ಮಿತ್ರಮೇಳದಲ್ಲಿ ಸುಮಾರು ೧೦೦ ಸದಸ್ಯರಿದ್ದರು. ಪ್ರವೇಶ ಧನ, ನಾಮ ಮಾತ್ರಕ್ಕೆ ವಿಧಿಸಲಾಗಿತ್ತು. ಪ್ರೊ. ಈಗಲ್ಟನ್‌ರವರು ಇದರ ಮೊದಲ ಅಧ್ಯಕ್ಷರು. ಸಿ. ಡಿ. ನರಸಿಂಹಯ್ಯನವರು ಅನಂತರ ಕೊನೆಯವರೆಗೂ ಇದರ ಅಧ್ಯಕ್ಷರಾಗಿದ್ದುದಲ್ಲದೆ ಬಹಳಷ್ಟು ಪ್ರೋತ್ಸಾಹ, ಉತ್ತೇಜನಕೊಟ್ಟು ಅನೇಕ ರೀತಿಯಲ್ಲಿ ನೆರವು ನೀಡಿದರು. ಜೊತೆಗೆ ಎಂ. ಎನ್. ಪಾರ್ಥಸಾರಥಿ (ಪಾಚು), ಭರತರಾಜ್ ಸಿಂಗ್, ಬಿ. ಎಲ್. ಮಂಜುನಾಥ, ಯೋಗನರಸಿಂಹಯ್ಯ ಮೊದಲಾದವರು ಹೆಚ್ಚು ಉತ್ತೇಜನ ನೀಡಿ ಪೋಷಿಸಿದರು.

ಮಿತ್ರಮೇಳದ ಮುಖ್ಯ ಉದ್ದೇಶ ಕೇವಲ ನಾಟಕಗಳನ್ನು ಪ್ರದರ್ಶಿಸುವುದು. ವರ್ಷಕ್ಕೆ ಸುಮಾರು ೬ ರಿಂದ ೮ ನಾಟಕಗಳಲ್ಲದೆ ವರ್ಷದಲ್ಲಿ ನಾಲ್ಕೈದು ಹಬ್ಬಗಳಲ್ಲಿ ವಿಶೇಷ ಸಮಾರಂಭ ನಡೆಸಿ ನಾಟಕಗಳನ್ನು ಪ್ರಯೋಗಿಸುತ್ತಿದ್ದುದೂ ಉಂಟು. ಮಿತ್ರ ಮೇಳದ ನಾಟಕಗಳಿಗೆ ಸಾಮಾನ್ಯವಾಗಿ ಟಿಕೇಟುಗಳನ್ನು ಇಡುತ್ತಿದ್ದರು. ವರ್ಷವಿಡೀ ಒಂದಲ್ಲ ಒಂದು ನಾಟಕಕ್ಕೆ ತಾಲೀಮು ನಡೆಯುತ್ತಿತ್ತು.

ಮಿತ್ರಮೇಳ ಆಡುತ್ತಿದ್ದ ನಾಟಕಗಳು ಹೆಚ್ಚಾಗಿ ಕೈಲಾಸಂ, ಪರ್ವತವಾಣಿ, ಕುವೆಂಪು ಅವರ ನಾಟಕಗಳು. ಹೋಂರೂಲು, ಬಂಡ್ವಾಳ್ವಿಲ್ಲದ ಬಡಾಯಿ, ಸಾತೂ ತೌರ್ಮನೆ, ಪಾತೂ ತೌರ್ಮನೆ, ವಾರ್ಷಿಕೋತ್ಸವ, ಉಂಡಾಡಿ ಗುಂಡ, ಮೀನಾ ಮದುವೆ, ರಕ್ತಾಕ್ಷಿ, ಬೆರಳ್‌ಗೆಕೊರಳ್ ಮೊದಲಾದವು. ಇವುಗಳಲ್ಲದೆ ಆಷಾಢ ಭೂತಿ, ವಿಗಡ ವಿಕ್ರಮರಾಯ ಮೊದಲಾದನಾಟಕಗಳೂ ಪ್ರದರ್ಶಿತವಾದವು.

ಕೆಲವು ವರುಷಗಳಿಂದೀಚೆಗೆ ಮಹಾರಾಜ ಕಾಲೇಜು ವಿದ್ಯಾರ್ಥಿಗಳು "ನೆಳಲು–ಬೆಳಕು" ಎಂಬ ಹೆಸರಿನಲ್ಲಿ ಅಂತರಕಾಲೇಜು ನಾಟಕ ಸ್ಪರ್ಧೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಸಂಪತ್‌ರವರನ್ನು ಬಿಟ್ಟರೆ ಈಚೆಗೆ ಶಿವಣ್ಣನವರು ಕಿಂಗ್‌ಲಿಯರ್ "ಮಾಸ್ಟರ್ ಬಿಲ್ಡರ್"ಗಳನ್ನು ಕೃಷ್ಣಮೂರ್ತಿ ಚಂದರ್‌ರವರು"ಟ್ರೂ ಸ್ಟೋರಿ" ಮತ್ತು 'ಥೇರ್ಸ್' ಎಂಬ ಇಂಗ್ಲಿಷ್ ನಾಟಕಗಳನ್ನು ಪ್ರಯೋಗಿಸಿದರು.

"ಅಮರ ಕಲಾ ಸಂಘ" ಸೆಪ್ಟೆಂಬರ್ ೩೦ ರಂದು ತನ್ನ ೩೦ ನೇ ಹುಟ್ಟು ಹಬ್ಬವನ್ನು ನಾಟ್ಯದುರಂಧರ ಮಹಮದ್ ಪೀರ್ ನಾಟಕೋತ್ಸವ ನಡೆಸಿ ನಾಟಕ ಪ್ರೇಮಿಗಳಿಂದ ಪ್ರಶಂಸೆಗೆ ಪಾತ್ರವಾಯಿತು. ಆರ್. ಎಸ್. ವಾಸುದೇವಮೂರ್ತಿ ("ವಾಸು" ಎಂದೇ ಜನಪ್ರಿಯ) ಯವರು ಅನಂತರಾವ್, ಮಾಧು, ಗುರುರಾಜ್, ವಾಗೀಶ್ ಮುಂತಾದ ಅನೇಕ ಗೆಳೆಯರೊಂದಿಗೆ ೨೩ ನವೆಂಬರ್ ೧೯೬೦ ರಂದು ಎ. ಎಸ್. ಮೂರ್ತಿಯವರ ನಾಟಕವನ್ನು ಪ್ರಯೋಗಿಸುವುದರ ಮೂಲಕ "ಅಮರ ಕಲಾ ಸಂಘ"ವನ್ನು ಹುಟ್ಟು ಹಾಕಿದರು.ಅಂದಿನಿಂದ ಇದುವರೆಗೂ ೫೦ಕ್ಕೂ ಹೆಚ್ಚು ನಾಟಕ

ಗಳನ್ನು ಪ್ರದರ್ಶಿಸಲಾಗಿದೆ. "ಹುಚ್ಚ", ನಂಜಿನನಾಲಿಗೆ, ಅಕ್ಕಪಕ್ಕ, ಭ್ರಮೆ, ತೆರೆಗಳು, ತುಘಲಕ್, ಹಾವು ಹಾರಿದಾಡತಾವ, ಅಶ್ವತ್ಥಾಮನ್, ಕೈಕಾರಾಣಿ, ಚಂದ್ರಹಾಸ, ಸಂಸಾರನೌಕ, ಷಹಜಹಾನ್, ಬುದ್ಧ ಹೀಗೆ ಕೆಲವು ನಾಟಕಗಳನ್ನು ಹೆಸರಿಸಬಹುದು. ಕೆಲವು ನಾಟಕಗಳು ಹತ್ತು ಹನ್ನೆರಡಕ್ಕೂ ಹೆಚ್ಚು ಸಲ ಪ್ರದರ್ಶನ ಕಂಡಿವೆ. ರಂಗ ಭೂಮಿ ನಿರಂತರವಾಗಿ ಜೀವಂತವಾಗಿರಬೇಕೆಂಬ ದೃಷ್ಟಿಯಿಂದ ೧೯೭೦ರಿಂದ ಅಂತರ ಪ್ರೌಢಶಾಲೆ ಸಂಗೀತ, ನೃತ್ಯ, ನಾಟಕ ಸ್ಪರ್ಧೆಗಳನ್ನು ಪ್ರತಿವರ್ಷವೂ ನಡೆಸಲಾಗುತ್ತಿದೆ. ೧೯೮೯ ರಲ್ಲಿ ಎಚ್. ಎಲ್. ಎನ್. ಸಿಂಹರವರಿಗೆ ಸನ್ಮಾನ; ೧೯೮೮ ರಲ್ಲಿ ಹವ್ಯಾಸಿ ರಂಗಭೂಮಿ ಸುಪ್ರಸಿದ್ಧ ನಟ-ನಿರ್ದೇಶಕ ಸಂಪತ್‌ರವರ ನೆನಪಿಗಾಗಿ ಸಂಪತ್ ಸ್ಮರಣೆ; ೧೯೮೪ ರಲ್ಲಿ ಕನ್ನಡ ಕಣ್ವ ಬಿ. ಎಂ. ಶ್ರೀ ಶತಮಾನೋತ್ಸವ; ಕೈಲಾಸಂರವರ ಶತ ಮಾನೋತ್ಸವ; ೧೯೮೮ ರಲ್ಲಿ ಬಿ. ವಿ. ಕಾರಂತರ ನೇತೃತ್ವದಲ್ಲಿ ರಾಜ್ಯ ನಾಟಕ ಅಕಾಡೆಮಿ ನೆರವಿನಿಂದ ಕಾಲೇಜು ಅಧ್ಯಾಪಕರ ರಂಗತರಬೇತಿ ಶಿಬಿರ. ಇದೇ ವರ್ಷ ಜಿ. ವಿ. ಶಿವಾನಂದರ ನೇತೃತ್ವದಲ್ಲಿ ಸ್ಥಳೀಯ ಕಲಾವಿದರಿಗಾಗಿ ರಂಗ ತರಬೇತಿ ಶಿಬಿರ- ಹೀಗೆ ಹವ್ಯಾಸಿ ರಂಗಭೂಮಿ ಸದಾ ಎಚ್ಚರವಾಗಿರುವಂತೆ ಮಾಡಿರುವ ಅಮರ ಕಲಾ ಸಂಘದ ಮಾಸುರವರು ಶ್ಲಾಘನಾರ್ಹರು.

ಕೆಲವು ದಿನಗಳಲ್ಲಿಯೇ ಬೆಳ್ಳಿಹಬ್ಬ ಆಚರಿಸಲು ಸಿದ್ಧತೆ ನಡೆಸುತ್ತಿರುವ ಮತ್ತೊಂದು ಹವ್ಯಾಸಿ ತಂಡವೆಂದರೆ "ಸಮತೆಂತೋ". ಸಿಂಧುವಳ್ಳಿ ಅನಂತಮೂರ್ತಿ ಯವರೇ ಇದರ ಪ್ರಾಣ. ಈ ತಂಡವು ಸ್ಥಾಪನೆಯಾದಾಗ ನ. ರತ್ನ, ಹೆಚ್. ಎಂ. ಚನ್ನಯ್ಯ ಜೊತೆಗೂಡಿದರು. ನಂತರ ವಿಶ್ವನಾಥ ಮಿರ್ಲೆ, ಬಾಲಗೋಪಾಲವರ್ಮ, ಮುಂತಾದವರು ಜೊತೆಗೂಡಿದರು. ೧೯೬೬ರಲ್ಲಿ ಸ್ಥಾಪನೆಯಾದ ಈ ತಂಡವು೩೦ ಬೇರೆ ಬೇರೆ ನಾಟಕಗಳನ್ನು ಪ್ರದರ್ಶಿಸಿದೆ. ಮೃಚ್ಛಕಟಿಕ, ರಕ್ತಾಕ್ಷಿ, ವಿಗಡ ವಿಕ್ರಮರಾಯ, ಕದಡಿದ ನೀರು, ಜೋಕುಮಾರ ಸ್ವಾಮಿ, ಸತ್ತವರನೆರಳು, ಘಾಶೀರಾಂಕೊತ್ವಾಲ್, ಹುಚ್ಚು ಕುದುರೆ, ಯಮಳ ಪ್ರಶ್ನೆ' ಹುಯ್ಯಲವೊ ಡಂಗೂರವ, ವಂಶವೃಕ್ಷ ಮೊದ ಲಾದವು ಪ್ರಸಿದ್ಧ ನಾಟಕಗಳು. ಇವುಗಳಲ್ಲಿ ಬಹುತೇಕ ನಾಟಕಗಳನ್ನು ಸಿಂಧುವಳ್ಳಿ ಅನಂತಮೂರ್ತಿ ನಿರ್ದೇಶಿಸಿದರೆ ಉಳಿದವನ್ನು ನ. ರತ್ನ, ವಿಶ್ವನಾಥಮಿರ್ಲೆ, ಪ್ರೊ. ಗುರುರಾಜರಾವ್, ಬಾಲಗೋಪಾಲವರ್ಮ ಹಾಗೂ ಬಿ. ವಿ. ಕಾರಂತರು ನಿರ್ದೇಶಿಸಿ ದ್ದಾರೆ. ಈ ತಂಡವು ಸಂಪತ್‌ರವರನ್ನು ಸನ್ಮಾನಿಸಿ ಅಭಿನಂದನಾ ಸಂಚಿಕೆ ಹೊರ ತಂದಿದೆ. ಪ್ರೊ|| ಗುರುರಾಜರಾವ್, ಜಿ. ಬಿ. ಜೋಷಿ ಹಾಗೂ ಪರ್ವತವಾಣಿಯವ ರನ್ನು ಸನ್ಮಾನಿಸಿದೆ. ಲಲಿತ ಕಲೆಗಳ ಕಾಲೇಜಿನಲ್ಲಿ ಅಭ್ಯಾಸ ಮಾಡುವ ಸ್ನಾತಕ ವಿದ್ಯಾರ್ಥಿಗಳಲ್ಲಿ ನಾಟಕ ಶಾಸ್ತ್ರ ವಿಭಾಗದಲ್ಲಿ ಹೆಚ್ಚು ಅಂಕಗಳಿಸುವ ಮೂವರು ವಿದ್ಯಾರ್ಥಿಗಳಿಗೆ ಪ್ರತಿವರ್ಷವೂ ಪ್ರೋತ್ಸಾಹಧನ ನೀಡಲು ೮೦೦೦ ರೂಪಾಯಿಗಳ ಪುದುವಟ್ಟನ್ನು ಈತಂಡದ ಹೆಸರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಡಲಾಗಿದೆ. ಹೊರಗಿನ ತಂಡಗಳನ್ನು ಮೈಸೂರಿಗೆ ಆಹ್ವಾನಿಸಿ ನಾಟಕಗಳನ್ನು ಆಡಿಸುವುದು, ಈ ತಂಡವು ಮೈಸೂರಿನಿಂದ ರಾಜ್ಯದ ವಿವಿಧಸ್ಥಳಗಳಲ್ಲಿ ನಾಟಕಪ್ರದರ್ಶಿಸುವುದು ನಡೆದಿದೆ. ಹೀಗೆ ಹವ್ಯಾಸಿ ರಂಗಭೂಮಿ ಬೆಳೆಯಲು ಸಮತೆಂತೊ ಪ್ರಮುಖ ಪಾತ್ರವಹಿಸಿದೆ.

ಕದಂಬ ರಂಗವೇದಿಕೆಯನ್ನು ರಾಜಶೇಖರ ಕದಂಬರವರು ಸುಮಾರು ೧೯೬೩ ರಲ್ಲಿ ಗೆಳೆಯರಾದ ವರದರಾಜ ಹೆಮ್ಮಿಗೆ, ನಾಗೇಶ್, ಚಿತ್ರನಟ ಸುಂದರಕೃಷ್ಣ ಅರಸ್, ಸಹೋದರರಾದ ಸಿದ್ದಪ್ಪಾಜಿ, ಬಸಪ್ಪಾಜಿ, ಪಿ. ಅಶ್ವಥ್‌ರೊಡಗೂಡಿ ಸ್ಥಾಪಿಸಿದರು. ಮುದುಕಾವತಾರ, ಮದುವೆ ಮಾರ್ಕೆಟ್, ಸಂದಿಗ್ಧ, ಕೇಳುಜನಮೇಜಯ, ಆತ್ಮ ಯಾವ ಕುಲ ಜೀವ ಯಾವ ಕುಲಗಳಂತಹ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿದರು. ಅವರ ಒಲವು ಐತಿಹಾಸಿಕ ನಾಟಕಗಳ ಕಡೆ. ಪುರೂರವ, ರಣಧೀರ ಕಂಠೀರವ, ಚಾಲುಕ್ಯಕೇಸರಿ, ರಣಪ್ರಚಂಡ, ಸಂಗೊಳ್ಳಿ ರಾಯಣ್ಣ, ಎಚ್ಚಮನಾಯಕ ಸೊಹ್ರಾಬ್-ರುಸ್ತುಂ; ಇತ್ತೀಚೆಗೆ ತ. ರಾ. ಸು. ರವರ "ದುರ್ಗಾಸ್ತಮಾನ"ದ ಪ್ರಯೋಗ ಇವರ ಈ ಒಲವಿಗೆ ನಿದರ್ಶನವಾಗಿದೆ.

ಮೈಸೂರಿನ ನೆಹರು ಯುವಕ ಕೇಂದ್ರವು ೭೦ರ ದಶಕದಲ್ಲಿ ರಂಗಕರ್ಮಿಗಳ ಆಶ್ರಯದಾಣವಾಗಿತ್ತು. ಅದಕ್ಕೆ ಕಾರಣ ಆಗ ಇಲ್ಲಿನ ಸಮನ್ವಯಾಧಿಕಾರಿಗಳಾಗಿದ್ದ ರಾಜಾರಾಂ ಗಿರಿಯನ್‌ರವರು. ಇವರು "ಸ್ನೇಹಸಂಪದ" ತಂಡವನ್ನು ಕಟ್ಟಿ ಶ್ರೀರಂಗರ ಕತ್ತಲೆ-ಬೆಳಕು, ಭರತೇಶ್ವರ, 'ಎಲ್ಲಾರು ಮಾಡುವುದು', ಲಕ್ಷ್ಮೀನಾರಾಯಣ ಭಟ್ಟರ 'ಮೃಚ್ಛಕಟಿಕ' ಲಂಕೇಶರ 'ಬಿಜ್ಜಳ'- ಹೀಗೆ ಅನೇಕ ಅದ್ದೂರಿಯಾದ, ಅಚ್ಚುಕಟ್ಟಾದ ನಾಟಕಗಳನ್ನು ನೀಡಿ ಹೆಸರು ಪಡೆದರು. ಗಿರಿಯನ್‌ರವರ ಜೊತೆಯಲ್ಲಿ ಸೇರಿಸಲೇಬೇಕಾದ ಮತ್ತೊಂದು ಹೆಸರು ಅನಂತರಂಗಾಚಾರ್. ಅವರು ನಿರ್ದೇಶಿಸಿದ 'ಗುಲಾಮ ಮತ್ತು ಅವನ ನಗು', 'ಕೋಮಲ ಗಾಂಧಾರ' 'ಅಂಜಿ' ಯಂತಹ ನಾಟಕಗಳನ್ನು ಈಗಲೂ ಪ್ರೇಕ್ಷಕರು ನೆನಪಿಸಿಕೊಳ್ಳುತ್ತಾರೆ. ಗಿರಿಯನ್ ಮೈಸೂರು ಬಿಟ್ಟು ಹೋದ ಮೇಲೆ ಬಸವರಾಜ್ ಹಾಗೂ ನಾಗಚಂದ್ರರವರು ತಂಡವನ್ನು ಉಳಿಸಲು ಹೆಣಗಿದರು. ನಿಸರ್ಗಪ್ರಿಯರ ಬೆನಕನಕೆರೆ, ಸುಶೀಲಕುಮಾರಸಿಂಹರವರ 'ಸಿಂಹಾಸನ ಖಾಲಿ ಇದೆ', ವಿಜಯಾರವರ 'ಉಳ್ಳವರ ನೆರಳು' ನಾಟಕಗಳನ್ನು ನಾಗಚಂದ್ರ ನಿರ್ದೇಶಿಸಿದರು. ಈ ತಂಡವು ದಶಮಾನೋತ್ಸವ ಆಚರಿಸಿತು.

ಚಿತ್ರರಂಗದ ಹಾಗೂ ದೂರದರ್ಶನ ಸರಣಿಗಳ ಖ್ಯಾತ ನಿರ್ದೇಶಕ ಟಿ. ಎನ್. ನರಸಿಂಹನ್, ಸಿ. ವಿ. ಶಿವಶಂಕರ್, ದಕ್ಷಿಣಾಮೂರ್ತಿ, ಚಂದ್ರಶೇಖರ್, ಪ್ರಭಾಕರ್ ರವರ ಸ್ನೇಹಸಂಗಮವೇ ಪ್ರಚೋದನ. ೧೯೭೦ ರ ಸುಮಾರಿನಲ್ಲೆ ಪಿ. ಲಂಕೇಶರ 'ಸಿದ್ಧತೆ' 'ಗಿಳಿಯು ಪಂಜರದೊಳಿಲ್ಲ' 'ಪೋಲಿಸರಿದ್ದಾರೆ ಎಚ್ಚರಿಕೆ' 'ನನ್ನ ತಂಗಿಗೊಂದು ಗಂಡು ಕೊಡಿ' ಮುಂತಾದ ಎಲ್ಲಾ ನಾಟಕಗಳನ್ನು ನರಸಿಂಹನ್ ನಿರ್ದೇಶಿಸಿದರು. ಲಂಕೇಶರೆ ತಮ್ಮ ನಾಟಕ ಸಂಗ್ರಹದಲ್ಲಿ ನರಸಿಂಹನ್ ನಿರ್ದೇಶನವನ್ನು ಮೆಚ್ಚಿ ಬರೆದಿದ್ದಾರೆ.

೧೯೭೪ ರ ಹೊತ್ತಿಗೆ ಟಿ. ಎನ್. ನರಸಿಂಹನ್ ಆನಂದರೊಡಗೂಡಿ 'ರಂಗೂ' ಗ್ಯಾಂಗ್ ಕಟ್ಟಿದರು. ಜಯರಾಮ್, ಕಾಶಿ, ರೂಪ, ಮಂಜಯ್ಯ, ಶ್ರೀರಾಮ್ ಇವರುಗಳು ಜೊತೆಯಾಗಿ ನಿಂತರು. ಏವಂ ಇಂದ್ರಜಿತ್, ಜಿ. ಪಿ. ರಾಜರತ್ನಂರವರ ಏಕಾಂಕ ನಾಟಕಗಳು, 'ಮುಂಜಾವಿಗೆ ಮೂರು ತಾಸು' ಕತ್ತಲೆ ದಾರಿದೂರ; ವಿಚಿತ್ರಜೋಡಿ, ತುಘಲಕ್ ಮುಂತಾದ್ಧವು ಇವರು ಪ್ರದರ್ಶಿಸಿದ ಪ್ರಸಿದ ನಾಟಕಗಳು.

ಹ. ಸಿ. ಉಮೇಶ್, ಕೆ. ವಿ. ಮಧುಸೂಧನ್, ಕೆ. ಶ್ರೀನಿವಾಸ್, ಶ್ರೀಕಂಠ, ಗುಂಡಪ್ಪ, ನಾಗಚಂದ್ರ, ಮತ್ತು ಹೊ. ರೆ. ಸುಬ್ರಮಣ್ಯರವರು ೧೯೭೪ರಲ್ಲಿ ಸ್ಥಾಪಿಸಿದ ತಂಡ 'ಕಲಾಪ್ರಿಯ'. ಆರ್. ಎಸ್. ಗಿರಿ, ರವೀಶ್, ತಲವಾರ್ ಮೊದಲಾದ ಗೆಳೆಯರಿಂದ ಈ ತಂಡ ಕ್ರಿಯಾಶೀಲವಾಗಿದೆ. "ಶ್ರಾದ್ಧ" ಹಾಗೂ "ತಪ್ಪಿಸಿಕೊಂಡಿದ್ದಾರೆ" ಮತ್ತು ಅದೇ "ಅದೇ ದಾರಿ" ನಾಟಕಗಳನ್ನು ಒಂದೇ ದಿನ ಪ್ರದರ್ಶಿಸುವುದರ ಮೂಲಕ ಅಸ್ತಿತ್ವಕ್ಕೆ ಬಂದಿತು. ಮೊದಲೆರಡನ್ನು ಶ್ರೀನಿವಾಸ್, ಮೂರನೆಯದನ್ನು ಶ್ರೀಕಂಠ ಗುಂಡಪ್ಪ ನಿರ್ದೇಶಿಸಿದ್ದಾರೆ. ಇದುವರೆಗೂ ೩೦ಕ್ಕೂ ಹೆಚ್ಚು ನಾಟಕಗಳನ್ನು ಈ ತಂಡ ಪ್ರದರ್ಶಿಸಿದೆ. ಇವುಗಳಲ್ಲಿ ಮೃಗ, Night of 16th January, ಮುಖ ಕಳೆದುಕೊಂಡವರು, ನಾಟಕಗಳನ್ನು ಕೆ. ಶ್ರೀನಿವಾಸ್, ಗೋಕರ್ಣದ ಗೌಡಸಾನಿ, ಅಹಂಬ್ರಹ್ಮ, ಸತ್ಯಂಥಗಳನ್ನು ಶ್ರೀಕಂಠಗುಂಡಪ್ಪ ಮಹಾಸನ್ನಿಧಾನವನ್ನು ಜಯರಾಮ ತಾತಾಚಾರ್ ; ಹಯವದನ, ಕಾಗೆಗಳನ್ನು ವಿಶ್ವನಾಥ ಮಿರ್ಲೆ; ಕಾಫಿ ಹೌಸ್‌ನಲ್ಲಿ ನಿರೀಕ್ಷಣೆಯನ್ನು ಮುದ್ದು ಕೃಷ್ಣ, ಮುಂಚೂಣಿಯಲ್ಲೇನಾಯಿತು ವನ್ನು ಮಧುಸೂಧನ್, ಸಾವಿನ ಹೆದ್ದಾರಿಯಲ್ಲಿ, ಹಕ್ಕಿಗಳು, Boys in the Bank, ಈಡಿಪಸ್, ಗಾಡೋ, ಮುದ್ರಾರಾಕ್ಷಸ ಆಗ್ರಹ, ಓ ದೇವರೆ ಇವರನ್ನು ಕ್ಷಮಿಸು, ಸೀತಾಸ್ವಯಂವರ, ಭಾರತ ಭಾಗ್ಯವಿಧಾತಾ, ಈ ಪರಿಯ ಚೋದ್ಯ, ಕಲೆಗಳು, ಕುರುಡು ಕತ್ತಲೆ, ಪೋಲೀಸ್, ಕೇಳು ಜನಮೇಜಯ, ಹೊಗೆ ಹತ್ತಿದ ಜನ, ತದ್ರೂಪಿ,ಗಾಂಧಿ-ನಾಟಕಗಳನ್ನು ಉಮೇಶ್ ನಿರ್ದೇಶಿಸಿದ್ದಾರೆ ಕಲಾಪ್ರಿಯ ತಂಡದ ಹೆಸರಿಸಲೇ ಬೇಕಾದ ಕೆಲಸವೆಂದರೆ ಎರಡು ರಂಗ ನಾಟಕ ಬರವಣಿಗೆಯ ಕಾರ್ಯಾಗಾರಗಳನ್ನು ಏರ್ಪಡಿಸಿದುದು. ಮೊದಲ ಕಾರ್ಯಾಗಾರದಲ್ಲಿ ರಚಿತವಾದ ನಾಟಕಗಳನ್ನು ಬೇರೆ ಬೇರೆ ತಂಡಗಳು ಪ್ರದರ್ಶಿಸಿದರೆ, ಎರಡನೆಯ ಕಾರ್ಯಾಗಾರದಲ್ಲಿ ರಚಿತವಾದ ಎಲ್ಲಾ ನಾಟಕಗಳನ್ನು ಕಲಾಪ್ರಿಯವೇ ಪ್ರದರ್ಶಿಸಿತು. "ಕನ್ನಡದಲ್ಲಿ ನಾಟಕಗಳಿಲ್ಲ" ಎಂಬ ಕೊರತೆಯನ್ನು ಕೊಂಚಮಟ್ಟಿಗಾದರೂ ಈ ಕಾರ್ಯಾಗಾರಗಳು ತುಂಬಿ ಕೊಟ್ಟವು.

ಚೇತನ ಕನ್ನಡ ಸಂಘ ನಾಟಕ ರಂಗಕ್ಕೂ ಸೇವೆ ಸಲ್ಲಿಸಿದೆ. ಭರತೇಶರ "ಜೋಕೆ ತಪ್ಪಿದ ಬಳಿಕ"ವನ್ನು ವಿಶ್ವನಾಥ ಮಿರ್ಲೆಯವರಿಂದ ನಿಸರ್ಗ ಪ್ರಿಯರವರ 'ಸ್ವರ್ಗಸ್ಥ' ನಾಟಕವನ್ನು ಎಚ್. ಜಿ. ಸೋಮಶೇಖರ್‌ರವರು; ಟಿ. ಜಿ. ರಾಘವರ 'ಮನೆ' ಕಾದಂಬರಿ ರೂಪಾಂತರ ನಿರ್ದೇಶನವನ್ನು ನಾಗಚಂದ್ರರವರ ನಿರ್ದೇಶನದಿಂದ ನಿರ್ವಹಿಸಿತು. "ದುಡ್ಡು ಕೊಟ್ಟು ತಿಂಗಳಿಗೊಂದು ನಾಟಕ ನೋಡಿ"ಚಳವಳಿ ಆರಂಭಿಸಿ ಬೇರೆಡೆಗಳಿಂದ ಸಿ. ಆರ್. ಸಿಂಹ, ನಾಗೇಶ್, ಚಂದ್ರಶೇಖರ ಕಂಬಾರ, ಶಿವರಾಮ ಕಾರಂತ, ಅಶೋಕ ಬಾದರದಿನ್ನಿ ಮೊದಲಾದ ಹೆಸರಾಂತ ನಿರ್ದೇಶಕರ ನಾಟಕಗಳನ್ನು ಮೈಸೂರಿನಲ್ಲಿ ಆಡಿಸುವುದರ ಮೂಲಕ ಮೈಸೂರಿನ ರಂಗ ಪ್ರೇಮಿಗಳಿಗೆ ಖುಷಿಯನ್ನು ರಂಗ ಕರ್ಮಿಗಳಿಗೆ ಹೊಸ ಹುರುಪನ್ನೂ ಉಂಟು ಮಾಡುವುದರಲ್ಲಿ ಈ ಸಂಘ ಯಶಸ್ವಿಯಾಯಿತು.

೭೦ ರ ದಶಕದ ಸುಮಾರಿನಲ್ಲಿ "ಸಮುದಾಯ" ಮೈಸೂರಿನಲ್ಲಿ ಹುಟ್ಟಿಕೊಂಡಿತು. ವಾಮಪಂಥೀಯ ಧೋರಣೆಗಳನ್ನು ಪ್ರಚಾರ ಪಡಿಸುವುದೇ ಈ ತಂಡದ ಮೂಲಉದ್ದೇಶ. ಒಡನಾಡಿ ನಾರಾಯಣ, ಲಿಂಗದೇವರು ಹಳೆಮನೆ, ವಿಶ್ವನಾಥಮಿರ್ಲೆ, ಬಾಲಗೋಪಾಲವರ್ಮ, ರಾಮೇಶ್ವರಿವರ್ಮ, ಅಬ್ದುಲ್ ರೆಹಮಾನ್ ಪಾಶ, ಕಿಕ್ಕೇರಿ ನಾರಾಯಣ, ಮೊದಲಾದವರು ಪ್ರಾರಂಭದ ದಿನಗಳಲ್ಲಿ ಹೆಗಲುಕೊಟ್ಟರು. "ತಾಯಿ" ಮಾರೀಚನ ಬಂಧುಗಳು, ಚಿಕ್ಕದೇವ ಭೂಪ; ಒಡಲಾಳ, ಹೈದರ್, ಡಾ॥ ಬೆಥೂನ್, ಕುಸುಮಬಾಲೆ, ಧರ್ಮಪುರಿಯ ದೇವದಾಸಿ, ಬಿಂಬ ಮೊದಲಾದವು ಇವರು ಪ್ರದರ್ಶಿಸಿದ ಮುಖ್ಯ ನಾಟಕಗಳು. ಕೆಲವು ವರ್ಷಗಳಿಂದ ಮುದ್ದುಕೃಷ್ಣ, ರಮೇಶ್, ಜನಾರ್ಧನ್ ಮೊದಲಾದವರು ಈ ತಂಡದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಿರ್ದೇಶಿಸುತ್ತಿದ್ದಾರೆ.

೧೯೭೪ ರಲ್ಲಿ ಪ್ರಾರಂಭವಾದ "ಸ್ನೇಹ ಕಲಾನಿಕೇತನ" ಅತ್ಯಂತ ಉತ್ಸಾಹದಿಂದ ರಂಗಚಟುವಟಿಕೆಗಳನ್ನು ಹಮ್ಮಿಕೊಂಡಿತು. ಕೆ. ಎಂ. ಮಧುಸೂಧನ್, ಕೆ. ಶ್ರೀನಿವಾಸ್, ಜಯರಾಮ ತಾತಾಚಾರ್, ನಾ. ಶ್ರೀನಿವಾಸ್. ಉದಯಕುಮಾರ್, ಪ್ರಸಾದ್ ಕೆ. ನಿರ್ದೇಶನ ಮಾಡಿದರು. ನಾಲ್ಕೇ ವರ್ಷಗಳಲ್ಲಿ ಸುಳಿಯಲ್ಲಿ ಸಿಕ್ಕವರು, ಅಮಾಸ, ಜಾತ್ರೆ, ಗೋಕರ್ಣದ ಗೌಡಸಾನಿ, ಕುರಿತೇರು ಮೊದಲಾದ ಹದಿನೈದಕ್ಕೂ ಹೆಚ್ಚು ನಾಟಕಗಳನ್ನು ಪ್ರದರ್ಶಿಸಿದರು. ಬೆಲೆ ಇಳಿದಿದೆ. ಮತ್ತು ಕನಸಿನವರು ಬೀದಿ ನಾಟಕಗಳಾಯಿತು. ಕನಸಿನವರು (ರಚನೆ ಮತ್ತು ನಿರ್ದೇಶನ ನ. ಶ್ರೀನಿವಾಸ) ನಾಟಕ ನೂರಕ್ಕೂ ಹೆಚ್ಚು ಪ್ರದರ್ಶನ ಕಂಡಿತು.

ಸುಮಾರು ೧೯೭೭ ರಲ್ಲಿ ಸದಾಶಿವರವರು ಗೆಳೆಯ ಎಂ. ದ್ವಾರಕನಾಥ್ (ದ್ವಾರಕಿ) ರೊಡಗೂಡಿ ಮೈಸೂರು ಅಮೆಚೂರ್ಸ್ ಎಂಬ ತಂಡ ಕಟ್ಟಿದರು. "ಉತ್ತಮ ಪ್ರಭುತ್ವ, ಲೊಳಲೊಟ್ಟೆ" ಈ ತಂಡದ ಮೊದಲ ಪ್ರದರ್ಶಿತ ನಾಟಕಗಳು. ರಂಗಭಾರತ, ಈಸಬೇಕು ಇದ್ದು ಜೈಸಬೇಕು, ಯಯಾತಿ, ಏವಂ ಇಂದ್ರಜಿತ್, ಹಕ್ಕಿ ಹಾರುತಿದೆ ನೋಡಿದಿರಾ, ಗುಲಾಮ ಮತ್ತು ಅವನ ನಗು, ಗುಮಾನಿ, ಬದಾಮ ರಾಣಿ ಚೌಪಟ್ ಗುಲಾಂ ಈ ನಾಟಕಗಳನ್ನು ರವೀಶ್, ಅನಂತರಂಗಚಾರ್, ಮತ್ತು ಮಾಸೂರ್‌ರವರು ನಿರ್ದೇಶಿಸಿದರು. ಏಳು ದಿನಗಳ ನಾಟಕೋತ್ಸವವೊಂದನ್ನು ನಡೆಸಿ ಮದ್ರಾಸ್, ಹೈದರಾಬಾದ್, ಬಾಂಬೆ, ಗುಲ್ಬರ್ಗ, ಬೆಂಗಳೂರು ಹಾಗೂ ಮೈಸೂರಿನ ಹವ್ಯಾಸಿ ತಂಡಗಳು ಭಾಗವಹಿಸಲು ಅವಕಾಶ ಕಲ್ಪಿಸಿತು. ಬ್ಯಾಂಕ್ ಉದ್ಯೋಗಿ ಸದಾಶಿವ ವರ್ಗವಾಗಿ ಮೈಸೂರಿನಿಂದ ಹೊರಹೋದ ಮೇಲೆ ಈ ತಂಡದ ಚಟುವಟಿಕೆ ಕುಂಠಿತವಾಯಿತು.

ಪ್ರೇಕ್ಷಕರಿಂದ ಪ್ರೇಕ್ಷರಿಗಾಗಿ, ಪ್ರೇಕ್ಷರಿಗೋಸ್ಕರ ಎಂಬ ಘೋಷಣೆಯೊಡನೆ "ಅಂಕ" ತಂಡವನ್ನು ನಾ. ಶ್ರೀನಿವಾಸರವರು ೧೯೮೩ರಲ್ಲಿ ಸ್ಥಾಪಿಸಿದರು. "ಉದ್ಭವ" ಅನಾಥ ಭಗವಂತ, ಅವ್ಯಕ್ತನಾಗು, ಮಂತ್ರಿಗಳಿದ್ದಾರೆ ಎಚ್ಚರಿಕೆ, ಒಂದು ಬಟ್ಟಲು ಹಾಲು, ಹೆಣಗಳು, ರತ್ನಾಕ್ಷರ, ಲೆಕ್ಕರಾಯಣ, ಕನಸಿನವರು, ಗಲಿಮಪಿಕ್ಸ್, ಮುಂತಾದ "ಬೀದಿ ನಾಟಕ ಚಕ್ರ"ವನ್ನು ನಡೆಸಿ ಒಂದು ಸ್ಮರಣ ಸಂಚಿಕೆಯನ್ನು ಈ

ತಂಡ ಹೊರತಂದಿತು. ನೇಣಿನ ನೆರಳಲ್ಲಿ, ನೆರಳುಗಳು ಸರಳುಗಳು ಎಂಬ ರಂಗ ಚೌಕಟ್ಟಿನ ನಾಟಕಗಳನ್ನು ಪ್ರದರ್ಶಿಸಿತು. ಪ್ರೊ॥ ಎಂ ಎಸ್. ವೇಣುಗೋಪಾಲರ ವೈದಾಸ್ ನಾಟಕವನ್ನು ನಿಕಟ ರಂಗದಲ್ಲಿ ಪ್ರದರ್ಶಿಸಿತು. ಹೆಬ್ಬಾಲೆಸೀನಿ, ಕಾಶಿ ವಿಶ್ವನಾಥರಾವ್, ನಾಗಭೂಷಣ, ಹೆಚ್. ಎನ್. ರಮೇಶ್, ವಾಸುದೇವಶರ್ಮ ಚಂದ್ರು ವಿ. ಚಾಮನಹಳ್ಳಿ, ಧೀರನಾಥ, ನಾಗಸಿಂಹರಾವ್, ಶಿವಾಜಿರಾವ್‌ಜಾದವ್, ಹ ನ ವಿಜಯಕುಮಾರ್. ನಾಗರತ್ನ ಜಿ. ರಾಮ್‌ಮೀನಾಕ್ಷಿ ಎನ್, ಸುಧಾ. ಹೆಚ್. ಇವರುಗಳು ಈ ತಂಡದೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು.

"ಲಲಿತ ಕಲೆಗಳ ಕಾಲೇಜು" ನಾಟಕ ವಿಭಾಗಕ್ಕೆ ಸಿಂಧುವಳ್ಳಿ ಅನಂತಮೂರ್ತಿ ಸೇರ್ಪಡೆಯಾದಾಗಿನಿಂದ ನಾಟಕಗಳು ಕಾಲೇಜಿನ ವತಿಯಿಂದ ಪ್ರದರ್ಶಿತಗೊಳ್ಳ ತೊಡಗಿದವು. ಅವರು ವಿಭಾಗದ ಮುಖ್ಯಸ್ಥರಾದ ಮೇಲಂತೂ ರಂಗ ಚಟುವಟಿಕೆ ಮತ್ತಷ್ಟು ಗರಿಗೆದರಿಕೊಂಡಿತು. ನಾಟಕ ವಿಭಾಗದ ಸ್ನಾತಕ ವಿದ್ಯಾರ್ಥಿಗಳು, ಡಿಪ್ಲಮೋ ವಿದ್ಯಾರ್ಥಿಗಳು ಪ್ರತಿವರ್ಷವೂ ತರಗತಿ ಪ್ರದರ್ಶನಗಳನ್ನು ನಡೆಸಿಕೊಂಡು ಬಂದಿದ್ದಾರೆ. ಬಿರುದಂತೆಂಬರ ಗಂಡ, ಕತ್ತಲೆ ಬೆಳಕು, ಈಡಿಪಸ್, ಭಗವದುಜ್ಜು ಕೀಯ, ಹಯವದನ, ಯಯಾತಿ, ನಮ್‌ಕಂಸನಿ, ಸದಾರಮೆ, ಗೌತಮಬುದ್ಧ, ತ್ರಿಶಂಕು, ಬೂರ್ಜ್ವ ಮಹನೀಯನಾದದ್ದು ಮುಂತಾದ ಪ್ರಸಿದ್ಧ ನಾಟಕಗಳನ್ನು ಪ್ರದರ್ಶಿಸಲಾಗಿದೆ. ನಾಣಿ, ಜಿ. ವಿ. ಶಿವಾನಂದ, ರಾಮಮೂರ್ತಿ, ವೆಂಕಟ ಸುಬ್ಬಯ್ಯ, ಪ್ರೇಮಕಾರಂತ ಮೊದಲಾದವರು ಈ ಕಾಲೇಜಿನ ಆಹ್ವಾನಿತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ–ನಾಟಕಗಳನ್ನು ನಿರ್ದೇಶಿಸಿದ್ದಾರೆ. ಪೀಟರ್ ಕೋ ಎಂಬ ಪಾಶ್ಚಾತ್ಯ ನಿರ್ದೇಶಕ ಒಂದು ರಂಗ ಕಾರ್ಯಾಗಾರ ನಡೆಸಿ To Night we Improvice ಎಂಬ ಒಂದು ನಾಟಕವನ್ನು ನಿರ್ದೇಶಿಸಿದರು. ಗುಬ್ಬಿ ಕಂಪನಿ ಪ್ರತಿಷ್ಠಾನ ನಾಟಕ ವಿಭಾಗದಲ್ಲಿ ಸ್ಥಾಪಿತವಾಗಿ ಈಡಿಪಸ್ ನಾಟಕವನ್ನು ಪ್ರದರ್ಶಿಸಿದೆ; 'ಕನ್ನಡ ರಂಗ ಭೂಮಿ ನೂರು ವರುಷ' ಎಂಬ ವಿಡಿಯೋ ಕ್ಯಾಸೆಟ್ ಸಿದ್ಧಪಡಿಸಿದೆ. ಈ ಪ್ರತಿಷ್ಠಾನದ ಆಶ್ರಯದಲ್ಲಿಯೇ ಚಂದ್ರಶೇಖರ ಕಂಬಾರರು "ತುಕ್ರನ ಕಥೆ" ಸಿದ್ಧಪಡಿಸಿದ್ದಾರೆ. ಗುಬ್ಬಿ ರಂಗಭೂಮಿ ನಿನ್ನೆ–ಇಂದು–ನಾಳೆ ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿ ಆ ಸಂದರ್ಭದಲ್ಲಿ ಗುಬ್ಬಿ ಕಂಪನಿಯ ಲವ–ಕುಶ, ಚಿಂದೋಡಿ ಲೀಲಾರವರ ದೇಸಾಯಿ ದರ್ಬಾರು, ಬಿ. ವಿ. ಕಾರಂತರ ಸತ್ತವರ ನೆರಳು ನಾಟಕಗಳನ್ನು ಪ್ರದರ್ಶಿಸಿತು.

"ಹೆಜ್ಜೆ-ಗೆಜ್ಜೆ" ತಂಡಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ರಮಾನಂದ ಮತ್ತು ಉದಯಕುಮಾರ ಇಬ್ಬರೇ ಈ ತಂಡದ ಸರ್ವಸ್ವ. ನಟರೂ ಅವರೇ. ನಿರ್ದೇಶಕರೂ ಅವರೇ. ಅವರ ಬೀದಿ ನಾಟಕಗಳು ಕರ್ನಾಟಕದ ಬಹುತೇಕ ಸ್ಥಳದಲ್ಲಿ ಪ್ರದರ್ಶನಗೊಂಡಿವೆ. ಮೈಸೂರಿನ ಯಾವುದೇ ತಂಡ ಆಹ್ವಾನಿಸಿದರೂ ಇರುವ ಅವಕಾಶದಲ್ಲೇ ಮಿಂಚುವ ನಟರು ಇವರು.

ದೆಹಲಿ ನಾಟಕ ಶಾಲೆಯಿಂದ ಪದವಿ ಪಡೆದುಬಂದ ಜಯರಾಮ್ ತಾತಾಚಾರ್ "ಅಂತರಂಗ" ಎಂಬ ಸಂಸ್ಥೆಯನ್ನು ಕಟ್ಟಿದರು. ಕಂಪಿನಲ್ಲಿ ಸಾವು, ಕಾಡುಪ್ರಾಣಿ,

ಜನತೆಯ ಶತ್ರು, ಮೈಲಾರಿ ಆತ್ಮಹತ್ಯೆ ಪ್ರಸಂಗ ನಾಟಕಗಳನ್ನು ಈ ತಂಡ ಪ್ರದರ್ಶಿಸಿತು.

ಬಿ. ಸೋಮಶೇಖರರವರು ಸಪ್ತಸ್ವರವನ್ನು ಪ್ರಾರಂಭಿಸಿ "ಹಾನೂಷ್" ಎಂಬ ಅಚ್ಚುಕಟ್ಟಾದ ನಾಟಕ ಪ್ರದರ್ಶಿಸಿ ಹೆಸರು ಮಾಡಿದರು. ಆದರೆ ಮುಂದೆ ಈ ತಂಡ ಮತ್ತೆ ನಾಟಕವನ್ನು ಪ್ರದರ್ಶಿಸಲೇ ಇಲ್ಲ.

"ನಟನ ಕಲಾ ಮೇಳ" (ನ.ಕ.ಮೇ) ವನ್ನು ನಾಗರಾಜ್‌ರವರು ಕಟ್ಟಿ ಈಡಿಪಸ್, ಹಲಗಲಿಯ ಬೇಡರು, ತಣ್ಣೀರು-ತಣ್ಣೀರು, ಲಂಕೇಶ್ವರ ಮುಂತಾದ ಅನೇಕ ನಾಟಕಗಳನ್ನು ಪ್ರದರ್ಶಿಸಿದರು.

ಸೋರಟ್ ಅಶ್ವತ್ಥ್‌ರವರ ಮಗ ಸುಬ್ಬಣ್ಣ "ಕಲಾಜ್ಯೋತಿ" ತಂಡದ ಮೂಲಕ ಸಮಯಕ್ಕೊಂದು ಸುಳ್ಳು; ಪ್ರತಿಮೆಗಳು ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು.

ಒಂದು ಕಾಲಕ್ಕೆ ಹೊಸ ಬಗೆಯ ನಾಟಕಗಳನ್ನು ನೋಡಬೇಕಾದರೆ "ಮಾತಾ ಅಸೋಸಿಯೇಷನ್ ಪ್ರದರ್ಶಿಸುವ ನಾಟಕಗಳನ್ನು ನೋಡಿ" ಎನ್ನುತ್ತಿದ್ದರು. ಅರುಣ ಪತ್ರಿಕೆಯ ರಾಮಣ್ಣ, ಕೆ. ವಿ. ರಾಮನ್, ವೆಂಕಟರಾಮನ್, ಬಹುಮುಖ ರಾಘವೇಂದ್ರರಾವ್ ಮುಂತಾದವರು ಈ ಸಂಸ್ಥೆಗಾಗಿ ಶ್ರಮಿಸಿದರು. 'ನಂಜಿನ ನಾಲಿಗೆ', ಅಳಿಯ ದೇವರು, ಮೂವರು ಮುತ್ಯಾಳರು, ಗಂಡಸ್ಕತ್ರಿ, ಬಂಡ್ವಾಳ ವಿಲ್ಲದ ಬಡಾಯಿ ಮೊದಲಾದ ನಾಟಕಗಳನ್ನು ಈ ತಂಡ ಪ್ರದರ್ಶಿಸಿತು.

ಚಿತ್ರ ಸಾಹಿತಿಯಾಗಿ ಹೆಸರುಗಳಿಸಿದ ಕುಂದಾಪಿ ಸತ್ಯನ್, ಸುರಭಿ ಕಲಾವಿದರು ಎಂಬ ತಮ್ಮ ತಂಡದ ಮೂಲಕ ತಾವೇ ಬರೆದ, 'ವರದಕ್ಷಿಣೆ', ಇಂಕ್ವಿಲಾಬ್ ಜಿಂದಾಬಾದ್, ಕೆಂಪೇಗೌಡ, ಕೆಚ್ಚೆದೆಯ ಎಚ್ಚಮ ನಾಯಕಗಳಲ್ಲದೆ ನಂಜಿನ ನಾಲಗೆ ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು.

"ಲಾವಣ್ಯ ಕಲಾನಿಕೇತನ"ವನ್ನು ಮೈಸೂರು ಆರ್. ಜಯರಾಮ್‌ರವರು ಇಂದಿನ ಜನಪ್ರಿಯ ಚಿತ್ರನಟ ಮೈಸೂರು ಲೋಕೇಶ್, ಕಾಶಿ ಕುಂಚ ಶ್ರೀನಿವಾಸರೊಂದಿಗೆ ಕಟ್ಟಿದರು. ಬೊಂಬೆ ಮನೆ, ಪಂಚರಾತ್ರಿ, ಸೂಳೆ, ಸಪ್ತವರ್ಣ, ಗೌಡತಿ ಗಂಗವ್ವ, ಅರಸಿ ಬಂದ ಆತ್ಮ, ವ್ಯೂಹ, ಇತ್ಯಾದಿ ನಾಟಕಗಳನ್ನು ಈ ತಂಡ ಪ್ರದರ್ಶಿಸಿತು.

ಜನಪ್ರಿಯ ಚಿತ್ರನಟ, ನಿರ್ಮಾಪಕರಾದ ಎಂ.ಪಿ. ಶಂಕರ್‌ರವರು "ಭರಣಿ ಕಲಾವಿದರು" ತಂಡದ ಮೂಲಕ ಗದಾಯುದ್ಧ, ಎಚ್ಚಮನಾಯಕ, ರಾಜ ಕೆಂಪೇಗೌಡ, ಮಿತ್ರದ್ರೋಹಿ ಮೊದಲಾದ ನಾಟಕಗಳನ್ನು ಪ್ರದರ್ಶಿಸಿದರು. ನಂಜುಂಡಪ್ಪ ಮತ್ತು ಗೆಳೆಯರು ಪ್ರದರ್ಶಿಸುತ್ತಿದ್ದ ಸೊಹ್ರಾಬ್ ರುಸ್ತುಂ, ರಾಜಾಕೆಂಪೇಗೌಡ, ವಿಷಜ್ವಾಲೆ, ಸಾಹುಕಾರ ಆಗ ಜನಪ್ರಿಯತೆ ಗಳಿಸಿತ್ತು. "ರಾಜ್ಯಧರ್ಮ" ಪತ್ರಿಕೆಯ ವಿಠ್ಠಲ್‌ರವರು ನ್ಯಾಷನಲ್ ಆರ್ಟಿಸ್ಟ್ಸ್‌ನ ಮೂಲಕ ಪ್ರದರ್ಶಿಸುತ್ತಿದ್ದ 'ಟಿಪ್ಪು ಸುಲ್ತಾನ್' ತುಂಬಾ ಜನಪ್ರಿಯವಾಗಿತ್ತು. ಶ್ರೀರಂಗ ಮೂರ್ತಿಯವರು ತಾವೆ

ಬರೆದ ಮುಮುಕಾವತಾರ, ಕೊಲೆ ಮುಂತಾದ ನಾಟಕಗಳನ್ನು ತಮ್ಮ ಮಿತ್ರಮಂಡಲಿ ಯಲ್ಲಿ ಪ್ರದರ್ಶಿಸಿದರು. 'ಸೆಲೆಕ್ಟ್ ಆರ್ಟಿಸ್ಟ್ಸ್' ತಂಡ ಕಟ್ಟಿದ ಸಿಂಗ್‌ರವರ ಕೊಹಿನೂರ್, ಗೌತಮಬುದ್ಧ ಜನಾದರಣೆ ಗಳಿಸಿತು. ಸ್ವಾಮಿ ಅಯ್ಯಪ್ಪ ಇಂದಿಗೂ ಆ ತಂಡದ ಜನಪ್ರಿಯನಾಟಕ. ಎಂ.ಆರ್. ವಿರೂಪಾಕ್ಷರವರು 'ಕರ್ನಾಟಕ ಕಲಾ ಸಂಘ'ದ ಮೂಲಕ ವಿಷಜ್ವಾಲೆ, ಕರುಳಿನ ಸೆಳೆತ, ಅಣ್ಣ–ತಂಗಿ, ಮದುವೆ ಮಾರ್ಕೆಟ್ ನಾಟಕಗಳನ್ನು ಆಡಿದರು. 'ಮಯೂರ ಆರ್ಟಿಸ್ಟ್ಸ್' ತಂಡವನ್ನು ಕಟ್ಟಿದ ಎಂ. ದೇವನ್ ರವರು ದಕ್ಷಯಜ್ಞ, ಬೇಡರ ಕಣ್ಣಪ್ಪ, ಕುಲಪುತ್ರ ಮುಂತಾದ ನಾಟಕಗಳನ್ನು ಪ್ರದರ್ಶಿಸಿದರೂ ಪೌರಾಣಿಕ ನಾಟಕಗಳತ್ತ. ಬಿ ಜಿ. ರಾವ್ "ಉಜ್ವಲಕಲಾ ಮಂದಿರ" ಮೂಲಕ ಟಿಪ್ಪುಸುಲ್ತಾನ್, ಛತ್ರಪತಿ ಶಿವಾಜಿ, ದೌರ್ಬಲ್ಯ, ಕುರುಕುಲ ಪತನ ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಪ್ರಸಿದ್ಧ ಚಿತ್ರನಟ ಸುಂದರ ಕೃಷ್ಣ ಅರಸ್, ಪಾದುರಾಯರು ಶ್ರೀನಿವಾಸರಾಯರು ಸೇರಿ ಸ್ಥಾಪಿಸಿದ 'ಮಿತ್ರ ಕೂಟ'ವು ಹುಚ್ಚ, ಕಾಶಿಯಾತ್ರೆ, ಕರುಳು ಸೆಳೆತ, ನಂಜಿನ ನಾಲಿಗೆ, ಆಷಾಢಭೂತಿ ಇತ್ಯಾದಿ ನಾಟಕಗಳನ್ನು ಪ್ರದರ್ಶಿಸಿತು.

ಕರ್ನಾಟಕ ಸರ್ಕಾರದ ವತಿಯಿಂದ ನಡೆಯುತ್ತಿರುವ "ಕರ್ನಾಟಕ ನಾಟಕ ರಂಗಾಯಣ"ವು ಬಿ. ವಿ ಕಾರಂತರ ನಿರ್ದೇಶನದಲ್ಲಿ ಪ್ರದರ್ಶಿಸುತ್ತಿರುವ ಅನೇಕ ನಾಟಕ ಗಳು ಕಲಾತಂಡಗಳಿಗೆ, ಕಲಾ ಪ್ರೇಮಿಗಳಿಗೆ ಹೊಸ ಸ್ಫೂರ್ತಿಯನ್ನು ಮುದವನ್ನು ಉಂಟುಮಾಡುತ್ತದೆ. ಇದು ಒಂದು ಬಗೆಯ ವೃತ್ತಿರಂಗ ತಂಡವಾದರೂ ಹವ್ಯಾಸಿ ತಂಡಗಳಿಗೆ ಪ್ರೇರಣೆ ನೀಡುತ್ತಿರುವುದು ಅತಿಶಯೋಕ್ತಿಯಲ್ಲ.

ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಕಾಲೇಜಿನಲ್ಲಿ ನಾಗಮಣಿ ಸ್ಮಾರಕ ಸ್ಪರ್ಧೆ ನಡೆಸುತ್ತಿದ್ದ ನಾಟಕ ಸ್ಪರ್ಧೆಯಿಂದಲೂ ಹವ್ಯಾಸಿ ರಂಗ ಬೆಳೆಯಲು ಕಾರಣ ವಾಯಿತು. ಆದರೆ ಏಕೋ ಈಚೆಗೆ ಆ ಮಟ್ಟದ ಸ್ಪರ್ಧೆ ಅಲ್ಲಿ ನಡೆಯುತ್ತಿಲ್ಲ! ೧೯೫೦ರಲ್ಲಿಯೇ ನಿರ್ದೇಶನಕ್ಕೆ ಕೈಯಿಟ್ಟ ಬಿ. ಎಸ್. ಕೇಶವರಾಯರಂತಹವರು ೧೯೫೭ರಲ್ಲಿ ಪರ್ವತವಾಣಿಯವರ ಸುಂದ್ರೋಪಸುಂದ್ರು ನಾಟಕವನ್ನು ೩ ರಂಗಮಂಚ ಗಳನ್ನು ಅಳವಡಿಸಿ ಪ್ರದರ್ಶಿಸಿದ್ದರು. 'ಕೇಶವ ಸ್ಕೋಪ್' ಎಂದೇ ಜನಪ್ರಿಯವಾಗಿದ್ದ ಆ ಪ್ರಯೋಗವನ್ನು ನೆನಪಿಸಿಕೊಳ್ಳುವವರು ಇಂದೂ ಇದ್ದಾರೆ.

ಮೈಸೂರು ರಂಗ ಚಟುವಟಿಕೆಗಳನ್ನು ಸಾಧ್ಯವಾದ ಮಟ್ಟಿಗೂ ಸೆರೆಹಿಡಿಯುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ. ಪ್ರಮಾದವಶಾತ್ ಕೆಲವು ತಂಡಗಳ ದಾಖ ಲಾತಿ ಇಲ್ಲಿ ನಡೆಯದಿದ್ದರೆ ಅದು ಉದ್ದೇಶಪೂರ್ವಕವಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತೇನೆ. ಬೆಂಗಳೂರಿಗಿಂತಲೂ ಹೆಚ್ಚಿನ ಆರೋಗ್ಯಕರ ರಂಗಚಟುವಟಿಕೆ ಮೈಸೂರಿನಲ್ಲಿ ನಡೆಯುತ್ತಿದ್ದರೂ ಕನ್ನಡದ ಜನಪ್ರಿಯ ದಿನಪತ್ರಿಕೆಗಳು, ವಾರ ಪತ್ರಿಕೆಗಳು ಕೊಡಬೇಕಾದ ಮಹತ್ವವನ್ನು ಹೇಳಬೇಕಾಗಿದೆ.

ವ್ಯವಹಾರ-ಕನ್ನಡ

ಎನ್. ಎಸ್. ಶಾರದಾ ಪ್ರಸಾದ್

ರಾಜ್ಯದ ಜನತೆಯ ಭಾಷೆಯೇ ಆಡಳಿತ ಭಾಷೆಯಾಗಿರಬೇಕಾದದು ಅತ್ಯಗತ್ಯ. ತಡವಾಗಿಯಾದರೂ ಜಾಗೃತಗೊಂಡ ಜನತೆ, ಸರ್ಕಾರ ಈ ದಿಸೆಯಲ್ಲಿ ಕಾರ್ಯ ಪ್ರವೃತ್ತವಾಗಿರುವುದು ಶ್ಲಾಘನೀಯ. ಈ ದಿಸೆಯಲ್ಲಿ ಪದಕೋಶಗಳು, ನಿಘಂಟುಗಳು, ಕೈಪಿಡಿಗಳು ಪ್ರಕಟವಾಗಿವೆ, ಪ್ರಕಟವಾಗುತ್ತಿವೆ. ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಿರುವ ಸರ್ಕಾರದ ಆಡಳಿತ ಹೊಸ ಹೊಸ ಸವಾಲುಗಳನ್ನು ಎದುರಿಸಲು, ಹೊಸ ಹೊಸ ತಂತ್ರಜ್ಞಾನಗಳ ಬಗ್ಗೆ ಜನತೆಗೆ ಪರಿಚಯಿಸಲು ಹಲವು ಕ್ರಮಗಳನ್ನು ಕೈಗೊಳ್ಳುತ್ತದೆ. ಇಂದಿನ ಪ್ರಬಲ ಪ್ರಸಾರ ಮಾಧ್ಯಮಗಳಾದ ದೂರದರ್ಶನ, ಆಕಾಶವಾಣಿಯನ್ನು ಸಹ ಸಶಕ್ತವಾಗಿ ಬಳಸಿಕೊಳ್ಳುತ್ತಿದೆ. ಹಾಗಾಗಿ ಇಂದು ದೂರವೆಂಬ ಮಾತು ದೂರವಾಗುತ್ತಿದೆ.

ವ್ಯವಹಾರಕ್ಕೆ ಕನ್ನಡವನ್ನು ಬಳಸಿಕೊಳ್ಳುವಲ್ಲಿ ಹಿಂದಿನಿಂದಲೂ–ಒಂದು ರೀತಿಯಲ್ಲಿ ಹಲ್ಮಿಡಿ ಶಾಸನದ (ಕ್ರಿ.ಶ ೪೫೦ರ ಸುಮಾರು) ಕಾಲದಿಂದಲೂ–ಸತತವಾಗಿ ಪ್ರಯತ್ನಗಳು ನಡೆದಿವೆ. ಈ ದಿಸೆಯಲ್ಲಿ ನಡೆದಿರುವ ಒಂದೆರಡು ಪ್ರಯತ್ನಗಳ ಸೋದಾಹರಣ ಪರಿಚಯವೇ ಈ ಲೇಖನದ ಉದ್ದೇಶ.

* * *

ಪರಿಶೀಲಿಸಲಿರುವ ಮೊದಲ ಕೃತಿ 'ಲೇಖ್ಯಬೋಧಿನಿ'; ಲೇಖಕರು ವೀ ನಂಜುಂಡಯ್ಯನವರು. ಸುಮಾರು ೧೫೦ ಪುಟಗಳಿವೆ. ೧೮೯೪ ರಲ್ಲಿ ಮೊದಲ ಬಾರಿಗೆ ಮದ್ರಾಸಿನಲ್ಲಿ ಮುದ್ರಿತವಾಯಿತು ಎನ್ನಲಾಗಿದ್ದು, ೧೯೨೭ ರಲ್ಲಿ ಹದಿಮೂರನೆಯ ಮುದ್ರಣ ಪ್ರಕಟವಾಗಿದೆ ಎನ್ನಲಾಗಿರುವುದು ಇದರ ಜನಪ್ರಿಯತೆ–ಉಪಯುಕ್ತತೆಯನ್ನು ತಿಳಿಸುತ್ತದೆ. "ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿ ಬರೆಯುವ 'ಲೆಟರ್' ಎಂಬುವುವರಂತೆ ಮರ್ಯಾದೆಗೆ ಸರಿಯಾದ ಕಾಗದಗಳನ್ನು ಬರೆಯುವ ಪದ್ಧತಿಯು ವಾಡಿಕೆಯಾದರೆ ಚೆನ್ನಾಗಿರುವುದು"ಎಂದು ಸೂಚಿಸಿರುವರು (ಪು.೬೩). ಇದರ ಉದ್ದೇಶ "ಕ್ಷೇಮ ಸಮಾಚಾರ ಕಾಗದಗಳು ಅರ್ಜಿಗಳು ಲೇವಾದೇವಿಯ ಪತ್ರಗಳು ಲೆಕ್ಕಗಳು ಇವನ್ನು ಬರೆಯುವ ಮಾರ್ಗವನ್ನು ವಿವರಿಸುವುದು" ಆಗಿದ್ದು, ಇದರಲ್ಲಿ ಈ ಮುಂದಿನ ನಾಲ್ಕು ಭಾಗಗಳಿವೆ : (೧) ಕ್ಷೇಮ ಸಮಾಚಾರ ಮುಂತಾದ ಕಾಗದಗಳು (೨) ಅರ್ಜಿಗಳು ಮತ್ತು ಸರ್ಕಾರ ಸಂಬಂಧವಾದ ಇತರ ಕಾಗದಗಳು (೩) ಲೇವಾದೇವಿಯ ಪತ್ರಗಳು (೪) ಲೆಕ್ಕಗಳನ್ನು ಬರೆಯುವ ಮಾರ್ಗ. ಪ್ರತಿ

ಯೊಂದು ಭಾಗವಲ್ಲಿಯೂ ಉದಾಹರಣೆಗಳನ್ನು ಸೂಚನೆಗಳನ್ನು ನೀಡಿರುವುದು ಗಮನಾರ್ಹ.

ಎರಡನೇ ಭಾಗವಾದ ಸರ್ಕಾರ ಸಂಬಂಧ ಪತ್ರವ್ಯವಹಾರದಲ್ಲಿ ಸಾಮಾನ್ಯ ಪತ್ರಗಳಿಗೂ, ಸರ್ಕಾರಿ ಪತ್ರಗಳಿಗೂ ಇರುವ ವ್ಯತ್ಯಾಸ, ಇತಿಮಿತಿಗಳು, ಅರ್ಜಿಗಳು, ಸ್ಟಾಂಪುಗಳು ಬಗ್ಗೆ ಪ್ರಾಸ್ತಾವಿಕ ಅಂಶಗಳನ್ನು ನೀಡಲಾಗಿದೆ. ಬೇನಾಮಿ ಪತ್ರ ವ್ಯವಹಾರಗ ಅನೌಚಿತ್ಯದ ಬಗ್ಗೆ ಸೂಚನೆಯಿದೆ. ಸರ್ಕಾರದ ಅಧಿಕಾರಿಗಳು ತಮ್ಮ ಅಧಿಕಾರಕ್ಕೆ ಸಂಬಂಧಿಸುವ ವಿಷಯಗಳಲ್ಲಿ ಪರಸ್ಪರ ಬರೆದುಕೊಳ್ಳುವುದರಲ್ಲಿ ವಾಡಿಕೆಯಾಗಿರುವ ಕೆಲವು ಮರ್ಯಾದೆಗಳ ಬಗ್ಗೆ ತಿಳಿವಳಿಕೆ ನೀಡಲಾಗಿದೆ. "ಅಧಿಕಾರದಲ್ಲಿ ಸಮಾನರಾದವರು ಒಬ್ಬರಿಗೊಬ್ಬರು ಬರೆದುಕೊಳ್ಳುವಾಗ 'ಯಾದಾಸ್ತು' ಎಂದು ಬರೆದುಕೊಳ್ಳುತ್ತಾರೆ. ಸಮಾನರಲ್ಲದಿದ್ದರೂ ತಮ್ಮ ಅಧಿಕಾರಕ್ಕೆ ಒಳಪಡದ ಇತರ ಅಧಿಕಾರಿಗಳಿಗೆಲ್ಲಾ ಹೀಗೆಯೇ ಬರೆಯುವ ಪದ್ಧತಿ. ಡೆಪ್ಯುಟಿ ಕಮಿಷನರು ಮುನಿಸಿಫರಿಗೆ ಬರೆಯಬೇಕಾದರೆ 'ಯಾದಾಸ್ತು' ಎಂದೇ ಬರೆಯಬೇಕು....ಡೆಪ್ಯುಟಿ ಕಮಿಷನರ್ ಮುಂತಾದ ಮೇಲ್ಪಟ್ಟ ಅಧಿಕಾರಿಗಳು ತಾಲ್ಲೂಕು ಅಮಲ್ದಾರರಿಗೆ ಅಥವಾ ಇನ್ನೂ ಕೆಳಗಿನ ಉದ್ಯೋಗಸ್ತರಿಗೆ 'ಹುಕುಂ' ಎಂದು ಬರೆಯುತ್ತಾರೆ. ಯಾವ ಯಾವ ಕೆಳಗಿನ ಅಧಿಕಾರಿಗಳಿಗೆ ಹುಕುಮನ್ನು ಬರೆಯಬಹುದೊ, ಅವರು ಆ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆಯುವಾಗ 'ಅರ್ಜಿ' ಅಥವಾ 'ಇತ್ತಿಲ್ಲೆ' ಎಂದು ಬರೆಯಬೇಕು. ಇದು ತಾಲ್ಲೂಕು ಕಚೇರಿಗಳಿಂದ ಡೆಪ್ಯುಟಿ ಕಮಿಷನರ್ ಅಥವಾ ತಾಲ್ಲೂಕಿನ ಅಧಿಕಾರವನ್ನು ವಹಿಸಿರುವ ಅಸಿಸ್ಟೆಂಟ್ ಕಮಿಷನರ್ ಮತ್ತು ಅವರಿಗೆ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆಯುವ ಕಾಗದಗಳ ನಮೂನೆಯಾಗಿದೆ (ಪು. ೬೩)." ಹಿಂದುಸ್ತಾನಿ ಅಥವಾ ಇಂಗ್ಲೀಷ್ ಪದಗಳನ್ನು ಅನಾವಶ್ಯಕವಾದ ಸ್ಥಳಗಳಲ್ಲಿ ಉಪಯೋಗಿಸುವುದು ಸರಿಯಲ್ಲ; ... ಕನ್ನಡದಲ್ಲಿ ಬರೆಯುವಾಗ ಸಾಧ್ಯವಾದ ಮಟ್ಟಿಗೂ ಬರೀ ಕನ್ನಡದ ಮಾತುಗಳನ್ನೇ ಉಪಯೋಗಿ ಸುವುದಕ್ಕೆ ಯಾವ ವಿಧವಾದ ಅಡ್ಡಿಯೂ ಇಲ್ಲ" ಎಂದಿದೆ.

ಮಾದರಿಯಾಗಿ ಅಪೀಲ್ ಅರ್ಜಿ, ಸಿವೀಲ್ ದಾವೆಯ ಅರ್ಜಿ, ಸರ್ಕಾರಿ ಕಾಗದ-ಯಾದಾಸ್ತುಗಳನ್ನು ಈ ಮುಂದೆ ನೀಡಲಾಗಿದೆ. ಸುಮಾರು ನೂರು ವರ್ಷ ಹಿಂದಿನ ಆಡಳಿತ, ವ್ಯವಹಾರ ಭಾಷೆಯ ಸ್ವರೂಪ, ಶೈಲಿ ಇದರಿಂದ ಮನದಟ್ಟಾಗುತ್ತದೆ.

ಮಾದರಿ ೧

ಕ್ರಿಮಿನಲ್ ಅಪ್ಪೀಲ್ ಅರ್ಜಿ

ಹಾಸನದ ಡಿಸ್ಟ್ರಿಕ್ಟ್ ಮೇಜಸ್ಟ್ರೇಟ್ ಸಾಹೇಬರವರ

ಕೋರ್ಟಿಗೆ

೧೮೯೩-೯೪ನೇ ವರ್ಷದ ಕ್ರಿಮಿನಲ್ ಅಪ್ಪೀಲ್

ಅರ್ಜಿ ನಂಬರು..............................

ಅರ್ಜಿದಾರ.......... ....

ಮಂಜಿರಾಬಾದ್ ತಾ.... ....

...............ಇರುವ ರಂಗೇಗೌಡನ ಮಗ ರಾಮೇಗೌಡ.

ಮೇಲ್ಕಂಡ ಅರ್ಜಿದಾರನು ಅರಿಕೆ ಮಾಡಿಕೊಳ್ಳುವದೇನೆಂದರೆ,

ಈ ಮಂಜಿರಾಬಾದು ತಾಲ್ಲೂಕು ಮೇಜಸ್ಟ್ರೇಟರವರ ಕೋರ್ಟಿನ ಇದೇ ಇಸವಿಯ ೧೮ನೆಯ ನಂಬರು ಕ್ರಿಮಿನಲ್ ಮೊಖದ್ದಮೆಯಲ್ಲಿ ಅರ್ಜಿದಾರನ ಮೇಲೆ ಜುಲುಂ ತಪ್ಪಿತವನ್ನು ಹೊರಿಸಿ ಪಿನಲ್‌ಕೋಡ್ ೩೫೨ನೆಯ ಸೆಕ್ಷನ್ ಪ್ರಕಾರ ಅವನಿಗೆ ೨೫ ರೂಪಾಯಿನ ದಂಡವನ್ನು ತೆರಬೇಕೆಂಬ ಶಿಕ್ಷೆಯನ್ನು ವಿಧಿಸಿದಾರೆ.

೨) ಫಿರ್ಯಾದಿಗೂ ಈ ಅರ್ಜಿದಾರನಿಗೂ ಮೊದಲಿಂದ ಜಿದ್ದಿತ್ತೆಂದೂ, ಫಿರ್ಯಾದಿಯ ಸಾಕ್ಷಿಗಳು ಅವನ ಕೈಕೆಳಗಿನ ಆಳುಗಳೆಂದೂ ಸಾಫಾಗಿ ರುಜುವಾತಾಗಿದೆ. ಇದರಿಂದಲೂ ಸಾಕ್ಷಿಗಳು ಪರಸ್ಪರ ವಿರೋಧವಾಗಿ ಹೇಳಿರುವುದರಿಂದಲೂ ಫಿರ್ಯಾದು ನಂಬುಗೆಗೆ ಅರ್ಹವಾದುದಲ್ಲ.

೩) ಅಪರಾಧಿಯು ಆ ದಿವಸ ಬೇರೆ ಸ್ಥಳದಲ್ಲಿದ್ದನೆಂಬ ಸಂಗತಿಯು ಅಪರಾಧಿಯ ಕಡೆಯ ಸಾಕ್ಷಿಗಳಿಂದ ರುಜುವಾತಾಗಿದೆ.

೩) ಈ ಕಾರಣಗಳಿಂದ ಖಾವಂದರು ಮೊಖದ್ದಮೆಯ ಕಟ್ಟನ್ನು ಪರಾಮರಿಸಿ ಕೆಳಗಿನ ಕೋರ್ಟಿನ ಫೈಸಲನ್ನು ರದ್ದುಮಾಡಿ ಗರೀಬನಾದ ಅರ್ಜಿದಾರರನ್ನು ಉದ್ಧಾರ ಮಾಡಬೇಕೆಂದು ಪ್ರಾರ್ಥನೆ. ಕೆಳಗಿನ ಕೋರ್ಟಿನ ಜಡ್ಜಮೆಂಟಿನ ನಕಲನ್ನು ಇದರೊಡನೆ ಹಾಜರ್ಮಾಡಿದೆ.

ತಾರೀಖು..........ನೇ...............೧೮೯........

(ರುಜು) ರಾಮೇಗೌಡ

ಮಾದರಿ ೧ (ಅ)

ಸಿವಿಲ್ ದಾವೆಯು ಅರ್ಜಿ

............................ಮುನ್ಸೀಫವರರ

ಕೋರ್ಟಿಗೆ,

.............................ನೇ ಇಸವಿಯ ಸಿವಿಲ್ ದಾವಾ ಅರ್ಜಿ

ವಾದಿ	ಪ್ರತಿವಾದಿ
ರಂಗಪುರದಲ್ಲಿರುವ ಲಿಂಗಣ್ಣನ ಮಗ	ರಾಮಾಪುರದಲ್ಲಿರುವ
೩೫ ವರ್ಷ ವಯಸ್ಸಿನ ರಂಗಣ್ಣ	....

....ನೇ ತಾರೀಖಿನಲ್ಲಿ

ಮೇಲ್ಕಂಡ ವಾದಿಯು ಹೇಳಿಕೊಳ್ಳುವದೇನೆಂದರೆ :

ವಾದಿಂದ ಪ್ರತಿವಾದಿಯು ಕೆಳಗೆ ವಿವರಿಸಿರುವ ಮನೆಯನ್ನು........ನೇ ತಾರೀಖಿನಲ್ಲಿ ಮಾಡಿಕೊಂಡ ಕರಾರಿನ ಪ್ರಕಾರ ಒಂದು ವರ್ಷದ ವಾಯಿದೆಯವರೆಗೂ ಬಾಡಿಗೆಗೆ ತೆಗೆದುಕೊಂಡನು. ಸದರೀ ಕರಾರನ್ನು ಇದರೊಡನೆ ಹಾಜರ್ಮಾಡಿದೆ.

ಆದರಲ್ಲಿ ಕಂಡ ವಾಯಿದೆಯು ಕಳೆದುಹೋದ ಮೇಲೆ ಆ ಮನೆಯನ್ನು ಬಿಡದೆ ತಕರಾರ್ ಮಾಡುತ್ತಿದ್ದಾನೆ.

ಈ ವ್ಯವಹಾರಕ್ಕೆ ಕರಾರಿನ ವಾಯಿದೆಯು ಕಳೆದುಹೋದ........ನೇ ತಾರೀಖಿನಲ್ಲಿ ಕಾರಣ ಉಂಟಾಯಿತು.

ಸದರೀ ಮನೆಯನ್ನು ಬಿಡಿಸಿಕೊಟ್ಟು ಈ ದಾವೆಯ ಖರ್ಚುಗಳನ್ನು ಕೊಡಿಸಬೇಕೆಂದು ವಾದಿಯು ಪ್ರಾರ್ಥಿಸುತ್ತಾನೆ.

ಮನೆಯ ವಿವರ

......................ಊರಿನ....................ಬೀದಿಯಲ್ಲಿರುವ
ಪೂರ್ವಕ್ಕೆ.......... ....ದಕ್ಷಿಣಕ್ಕೆ........................
ಉತ್ತರಕ್ಕೆ.......................ಪಶ್ಚಿಮಕ್ಕೆ...................

ಇವುಗಳ ಮಧ್ಯೆ ಇರುವ................ನೇ ನಂಬರುಳ್ಳ........ಮನೆ ಇದಕ್ಕೆ ಬೆಲೆ ೧೦೦೦ ರೂ.

(ರುಜು) **ರಂಗಣ್ಣ**

ಮೇಲೆ ಹೇಳಿರುವ ಸಂಗತಿಗಳೆಲ್ಲಾ ನನಗೆ ಸ್ವತಃ ತಿಳಿದಿರುವ ಮಟ್ಟಿಗೆ ಸತ್ಯವಾಗಿವೆಯೆಂದೂ ನನಗೆ ಸ್ವತಃ ತಿಳಿಯದ ಸಂಗತಿಗಳನ್ನು ನಿಶ್ಚಯವೆಂದು ನಾನು ನಂಬಿದೆನೆಂದೂ ದೃಢವಾಗಿ ಹೇಳುತ್ತೇನೆ.

(ರುಜು) **ರಂಗಣ್ಣ**

ಮಾದರಿ ೧ (ಆ)

ಸರ್ಕಾರೀ ಕಾಗದ–ಯಾದಾಸ್ತು

ಯಾದಾಸ್ತು................ಡಿಸ್ಟ್ರಿಕ್ಟ್
ಡೆಪ್ಯುಟಿ ಕಮೀಷನರ್ ಸಾಹೇಬರವರ ಆಫೀಸಿನಿಂದ

.......................ಡಿವಿಜನ್ ಎಕ್ಸಿಕ್ಯುಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿಗೆ.

ಲಕ್ಷ್ಮೀಪುರದ ಕೆರೆಯ ಕಾಮಗಾರಿಯನ್ನು ಮಾಡಿಸುವುದರಲ್ಲಿ ತಮ್ಮ ಇಲಾಖೆಯ ಕಂಟ್ರಾಕ್ಟರ್ ಆ ಗ್ರಾಮದ ರೈತನಾದ ಲಿಂಗೇಗೌಡನೆಂಬವನ

ಜಮೀನಿನಲ್ಲಿ ನಾಹಕ್ಕು ಗುಂಡಿಗಳನ್ನು ಹೊಡೆದು ನಷ್ಟಪಡಿಸಿದಾನೆಂದು ಬಂದಿರುವ ಅರ್ಜಿಯನ್ನು ತಮ್ಮ ಪರಾಮರಿಕೆ ಬಗ್ಗೆ ಇದರೊಡನೆ ರವಾನಿಸಿದೆ. ವಿಚಾರಣೆಯಿಂದ ಇದು ನಿಶ್ಚಯವಾಗಿ ತೋರಿದಲ್ಲಿ ಅದಕ್ಕೆ ತಕ್ಕ ಪರಿಹಾರದ್ರವ್ಯವನ್ನು ಕೊಡಿಸಿಕೊಡಬೇಕಾಗಿರುವುದರಿಂದ ದಯವಿಟ್ಟು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿದಲ್ಲಿ, ಮುಂದಿನ ಅಮಲನ್ನು ನಡಿಸುವುದಕ್ಕೆ ಅನುಕೂಲವಾಗಿರುವುದೆಂಬ ವಿವರವನ್ನು ಶ್ರುತಪಡಿಸಿದೆ.

ಮೊಕ್ಕಾಂ................ತಾ............ನೇ ....೧೯೫೪.

(ರುಜು)....................

ಡೆ ಕಮಿಷನರ್

೧ (ಇ)

ಉತ್ತರ

ಲಕ್ಷ್ಮೀಪುರದ ಕೆರೆಯ ಕಂಟ್ರಾಕ್ಟರ್ ಮೇಲೆ ಲಿಂಗೇಗೌಡನೆಂಬುವ ರೈತನು ಮಾಡಿರುವ ಫಿರ್ಯಾದಿನಲ್ಲಿ ಸದರೀ ಕಂಟ್ರಾಕ್ಟರೂ ಮತ್ತೂ ನಮ್ಮ ಇಲಾಖೆಯ ಓವರ್ಸಿಯರವರೂ ಹೇಳುವಪ್ರಕಾರ ಇವರು ಗುಂಡಿ ಹೊಡೆದಿರುವ ಜಮೀನು ಸದರೀ ಲಿಂಗೇಗೌಡನ ಜಮೀನಿಗೆ ಸೇರಿದ್ದಲ್ಲವೆಂದು ತಿಳಿಯಬಂತು. ಈ ತಿಂಗಳು ೪ನೇ ತಾರೀಖಿನಲ್ಲಿ ನಾವು ಆ ಪ್ರಾಂತ್ಯ ಹೋದಾಗ ಖುದ್ದು ನೋಡಿದೆವು. ಇದು ಸ್ಪಷ್ಟವಾಗಿ ಜಮೀನಿನ ಬಾಂದುಗಳಿಂದ ಹೊರಗೆ ಇರುವುದರಿಂದ ಈ ರೈತನಿಗೆ ಯಾವ ಪರಿಹಾರವನ್ನು ಹೊಂದುವುದಕ್ಕೂ ಹಕ್ಕಿರುವುದಿಲ್ಲವಾದ ಸಂಗತಿಯನ್ನು ಶ್ರುತಪಡಿಸಿವೆ.

ತಾ................೧೯೫೪, ಮೊಕ್ಕಾಂ................

ರುಜು......................

ಎಕ್ಸಿಕೂಟಿವ್ ಇಂಜಿನಿಯರ್

................ಡಿವಿಜನ್

[ಮೊದಲು ಬಂದ ಯಾದಿಯ ಕೆಳಗೆಯೇ ಅದರ ಉತ್ತರವನ್ನು ಬರೆದರೆ ಮೇಲೆ ತೋರಿಸಿರುವ ಹಾಗೆ 'ಉತ್ತರ' ಎಂದು ಬರೆದುಬಿಟ್ಟರೆ ಸಾಕಾಗಿರುವುದು. ಬೇರೆ ಕಾಗದದಲ್ಲಿ ಬರೆಯಬೇಕಾದರೆ ಮೇಲ್ಭಾಗ (೧ ಆ ದಲ್ಲಿ) ತೋರಿಸಿರುವಂತೆ ಶಿರ್ನಾಮೆಯನ್ನು (ಅಂದರೆ ಮೇಲೆ ಬರೆಯತಕ್ಕ ವಿಳಾಸ ಮುಂತಾದ ಬರವಣಿಗೆಯನ್ನು) ಬರೆಯಬೇಕು.]

* * *

ಶ್ರೀ ಎಂ. ವೆಂಕಟರಾಯರ 'ಲೇಖ್ಯತತ್ತ್ವ ಪ್ರಕಾಶಿಕೆ' (೪೨ ಪುಟಗಳು) ಮೈಸೂರಿನಲ್ಲಿ ೧೯೦೧ ರಲ್ಲಿ ಪ್ರಕಟಗೊಂಡಿತು. ಲೋಕವ್ಯವಹಾರ ವಿಷಯಕವಾದ ಸಂಗತಿಗಳ ಬಗ್ಗೆ ಅರ್ಜಿಗಳನ್ನು ಬರೆಯುವ ಪದ್ಧತಿಗಳನ್ನು ವಿವರಿಸಲಾಗಿದೆ. (೧) ಬರೆಯುವುದಕ್ಕೆ ಉಪಯುಕ್ತವಾದ ವಿಷಯುಗಳು (೨) ಸಿವಿಲ್ ಸಂಬಂಧವಾದ ಅರ್ಜಿ ಮಾದರಿಗಳು (೩) ಕ್ರಿಮಿನಲ್ ಸಂಬಂದವಾದ ಅರ್ಜಿಮಾದರಿಗಳು (೪) ರೆವಿನ್ಯೂ ಅರ್ಜಿಗಳು (೫) ಇತರ ವಿಧದ ಅರ್ಜಿ ನಮೂನೆಗಳು–ಹೀಗೆ ಈ ಪುಸ್ತಿಕೆಯಲ್ಲಿ ಐದು ಭಾಗಗಳಿವೆ.

ಇತರ ಅಂಶಗಳ ಜೊತೆಗೆ (೧) ಅನೇಕಾರ್ಥಗಳನ್ನು ಸೂಚಿಸುವ ಪರ್ಯಾಯ ಶಬ್ದಗಳನ್ನು ಉಪಯೋಗಿಸುವುದು ಸರಿಯಲ್ಲ. (೨) ಸಂದೇಹ ತೋರುವಂತೆ ತಮ್ಮ ತಮ್ಮ ಉದ್ದೇಶಗಳನ್ನು ಬರೆಯುವುದು ಸರಿಯಲ್ಲ ಎಂದೂ ಸೂಚಿಸಿರುವರು. ಮೂಗರ್ಜಿಗಳ ಬಗ್ಗೆ ಪ್ರಸ್ತಾವವಿದೆ. "ಸರ್ಕಾರಿ ಕಾಗದ-ಪತ್ರಗಳಲ್ಲಿ ಅತ್ಯಂತವಾಗಿ ದಾಕ್ಷಿಣ್ಯ ಗೌರವ ಮುಂತಾದ್ದನ್ನು ತೋರಿಸಿ, ಅನವಶ್ಯಕವಾದ ವಿಷಯಗಳನ್ನು ಬರೆಯುತ್ತಾರೆ. ಇಂಥ ಪ್ರಾರ್ಥನೆಗಳನ್ನು ಪುರಸ್ಕರಿಸಿ ಕಾನೂನು ನೇಮಗಳನ್ನು ಉಲ್ಲಂಘಿಸಿ ಉಪಕಾರ ಮಾಡುವದಕ್ಕಾಗುವದಿಲ್ಲ. ಪ್ರತಿಯೊಬ್ಬನೂ ಕಾಲೋಚಿತ ನಾಗಿ ಶ್ರುತಪಡಿಸಿಕೊಳ್ಳಬೇಕಾದ ಮುಖ್ಯಾಂಶಗಳನ್ನು ಶ್ರುತಪಡಿಸಿಕೊಳ್ಳಬೇಕು" ಎಂದೂ ಎಚ್ಚರಿಕೆಯು ಮಾತಿದೆ.*

ಕ್ರಿಮಿನಲ್ ಪಿರ್ಯಾದಿಯ ಮಾದರಿ ಹೀಗಿದೆ :

ಮೈಸೂರು ... .ಮೆಜಿಸ್ಟ್ರೇಟರವರ ಕೋರ್ಟಿಗೆ

೧೯೦೦–೧೯೦೨ನೇ ಇಸವಿಯ ಕ್ರಿಮಿನಲ್ ನಂಬರು

ಫಿರ್ಯಾದಿ	ಅಪರಾಧಿ
ಮೈಸೂರಿನಲ್ಲಿರುವ ಒಕ್ಕಲಿಗರ ಜಾತಿಯ	ಇದೇ ಊರಿನಲ್ಲಿರುವ
ಸಿದ್ದೇಗೌಡನ ಮಗ ೪೦ ವರ್ಷದ	ಕಳಸಾಚಾರೀ ಮಗ
ತಿಮ್ಮೇಗೌಡ	ಅರಮುಗಾಚಾರಿ

ಫಿರ್ಯಾಧಿಯು ಹೇಳಿಕೊಳ್ಳುವುದೇನಂದರೆ—

೧. ಅಪರಾಧಿಯು ಮೈಸೂರಿನಲ್ಲಿ ಚಿನ್ನ ಕೆಲಸ ಉದ್ಯೋಗವನ್ನು ಮಾಡಿಕೊಂಡಿದ್ದಾನೆ.

೨. ಫಿರ್ಯಾದಿಯು ಒಂದು ಚಿನ್ನದ ಅಡ್ಡಿಕೆಯನ್ನು ಮಾಡಿ ಕೊಡುವದಕ್ಕಾಗಿ....ನೇ ತಾರೀಖಿನಲ್ಲಿ ಅಪರಾಧಿಯ ವಶಕ್ಕೆ ಮೂವತ್ತು ವರಹಾ ತೂಕ ಅಪರಂಜಿ ಚಿನ್ನವನ್ನು ಕೊಟ್ಟನು. ಅಪರಾದಿಯು ಆ ಚಿನ್ನದಿಂದ ಅಡ್ಡಿಕೆಯನ್ನು ಮಾಡಿ ಒಂದು ತಿಂಗಳಲ್ಲಿ ಫಿರ್ಯಾದಿಗೆ ಕೊಡುವ ದಾಗಿ ಒಪ್ಪಿಕೊಂಡನು.

---

* ಕೃಪೆ: 'ಕನ್ನಡದಲ್ಲಿ ಕಾನೂನು ಸಾಹಿತ್ಯ', ಡಾ. ರಾ. ಯ. ಧಾರವಾಡಕರ, ಕ ವಿ ನಿ., ಧಾರವಾಡ, ೧೯೭೬ ಪು–೧೫–೧೬

೩. ಅಪರಾಧಿಯು ವಾಯಿದೇಪ್ರಕಾರ ಸದರಿ ಅಡ್ಡಿಕೆಯನ್ನು ಕೊಡದೆ ಸಬಬು ಹೇಳಿಕೊಂಡು ಕಾಲಹರಣಮಾಡುತ್ತಾ ಬಂದುದರಿಂದ, ಫಿರ್ಯಾದಿಯಾದ ನನಗೆ ಸಂದೇಹ ತೋರಿ ವಿಚಾರಿಸಿದ್ದರಲ್ಲಿ, ನಾನು ಕೊಟ್ಟಿದ್ದ ಚಿನ್ನವನ್ನು............ನಲ್ಲಿ ಗಿರವಿ ಇಟ್ಟು, ಅಪರಾಧಿಯು........ರೂಪಾಯಿ ಸಾಲಾ ತೆಗೆದುಕೊಂಡಿರುವುದಾಗಿ ತಿಳಿಯಬರುತ್ತೆ.

೪. ಅಪರಾಧಿಯು ತನ್ನ ವಶಕ್ಕೆ ಫಿರ್ಯಾದಿಯು ನಗ ಮಾಡತಕ್ಕ ಬಗ್ಗೆ ಕೊಟ್ಟಿದ್ದ ಚಿನ್ನವನ್ನು ಅಪಹರಿಕೊಂಡಿರುವುದರಿಂದ ಕೋರ್ಟಿನವರು ಅಪರಾಧಿಯನ್ನು ಶಿಕ್ಷೆ ಮಾಡಿಸಿ ನನ್ನ ಸ್ವತ್ತನ್ನು ನನಗೆ ಹಿಂದಕ್ಕೆ ಕೊಡಿಸಿ ಕೊಡಬೇಕೆಂದು ಫಿರ್ಯಾದಿಯ ಪ್ರಾರ್ಥನೆ

(ರುಜು)

* * *

ಶ್ರೀ ಆಬಾಜೀ ರಾಮಚಂದ್ರ ಸಾವಂತ ಅವರು ಬೆಳಗಾಂವದಿಂದ ಲೋಕ ಹಿತಾರ್ಥವಾಗಿ ಅತಿಶ್ರಮಪೂರ್ವಕ ಪ್ರಸಿದ್ಧಪಡಿಸಿರುವಂಥ ಕೃತಿ "ಕನ್ನಡ ಪತ್ರವ್ಯವಹಾರ ಬೋಧಿನಿಯು ಅಥವಾ ವ್ಯವಹಾರ ಸಾಹಿತ್ಯ" (ಇದು ಸುಧಾರಿಸಿದ ಎರಡನೇ ಆವೃತ್ತಿ, ೧೯೦೬, ಕ್ರಯ ೧೦ ಆಣೆ). ಇದು ಎರಡು ಭಾಗಗಳಿಂದ ಕೂಡಿದ್ದು ಮೊದಲನೆಯ ಭಾಗದಲ್ಲಿ ೧೧೪ ಪುಟಗಳೂ ಎರಡನೆಯ ಭಾಗದಲ್ಲಿ ೪೪ ಪುಟಗಳೂ ಇವೆ.

ಈ ಕೃತಿಯ ಸ್ವಾರಸ್ಯವೆಂದರೆ ಇದರ ಮೊದಲ ಭಾಗವನ್ನು ಕೇವಲ ಕೈಬರಹದ ಅಕ್ಷರಗಳಿಂದಲೇ ಪೂರ್ಣಮಾಡಿರುವುದು "ಮೊದಲನೇ ಭಾಗದಲ್ಲಿ ಒಬ್ಬರಿಗೊಬ್ಬರು ಪತ್ರಗಳನ್ನು ಹೇಗೆ ಬರೆಯತಕ್ಕದ್ದೆಂಬುದನ್ನು ಸವಿಸ್ತರವಾಗಿ ಅಜ್ಞಜನಬೋಧನವಾಗುವಂತೆಯೂ ಸುಲಭವಾಗಿ ಓದಲಿಕ್ಕೆ ಬರುವಂತೆಯೂ ಆದಷ್ಟರ ಮಟ್ಟಿಗೆ ಪ್ರಯತ್ನಮಾಡಿರುತ್ತದೆ. ಎರಡನೇ ಭಾಗದಲ್ಲಿ ವ್ಯವಹಾರದಲ್ಲಿ ಅತ್ಯುಪಯುಕ್ತವಾಗಿರುವಂಥ ಎಷ್ಟೋ ನಮೂನೆಗಳೂ, ಕಾಯದೆಗಳ ವಿಷಯದಲ್ಲಿ ಮಾಹಿತಿಯೂ ಕೇರಿಸಿದ್ದಲ್ಲದೆ ಅಂತ್ಯಭಾಗದಲ್ಲಿ ಇತರ ಅತ್ಯುಪಯುಕ್ತ ಆವಶ್ಯಕ ವ್ಯವಹಾರೋಪಯೋಗಿ ಅನೇಕ ವಿಷಯಗಳನ್ನು ಕೇರಿಸಿರುತ್ತವೆ." ಎಂದು ವಿಜ್ಞಪ್ತಿಯಲ್ಲಿ ಉದ್ದೇಶ ಸೂಚನೆ ಮಾಡಲಾಗಿದೆ. "ಉಪಯುಕ್ತ ಮಾಹಿತಿಯು" ಎಂಬ ಎರಡನೇ ಭಾಗದಲ್ಲಿ ಫೌಜದಾರಿ ಕೋರ್ಟಿನಲ್ಲಿ ಕೆಲಸ ನಡಿಸುವ ನಮೂನೆಗಳು, ಕಾಯದೇ ವಿಷಯಕ್ಕೆ ಮಾಹಿತಿಯು, ಸನ್ ೧೮೯೮ನೆ ಇಸ್ವಿಯ ೫ನೇ ಆಕ್ಟು, ದಿವಾಣಿಯಲ್ಲಿ ಫಿರ್ಯಾದು ಮಾಡುವ ಬಗ್ಗೆ ಅರ್ಜಿಯ ನಮೂನೆಗಳು, ಫೌಜದಾರೀ ಖಟ್ಲೆಯ ಸಂಬಂಧೀ ಮಾಹಿತಿಯು, ದಿವಾಣೀ ಅತ್ಯುಪಯುಕ್ತ ಖಟ್ಲೆ ಸಂಬಂಧೀ ಮಾಹಿತಿಯು ತಾರಾಯಂತ್ರ* ಸಂಬಂಧೀವೊದಲಾಗಿ ಹಲವು ವಿಷಯಗಳ ಬಗ್ಗೆ ಮಾದರಿಗಳೂ, ಮಾಹಿತಿಗಳೂ ಇವೆ.

---

* Telegram

ನಿದರ್ಶನಾರ್ಥವಾಗಿ ಮುನಿಸಿಪಾಲಿಟಿಯ ಬಗ್ಗೆ ಸಾಮಾನ್ಯ ಮಾಹಿತಿ, ಮುನಿಸಿಪಾಲಿಟಿಗೆ ನೀಡುವ ಅರ್ಜಿಗಳು, ಫವುಜದಾರೀ ಕ್ರಿಮಿನಲ್ ಕೋರ್ಟಿನಲ್ಲಿ ಕೆಲಸ ನಡಿಸುವ ನಮೂನೆಗಳ ಮಾದರಿಗಳನ್ನಷ್ಟೇ ನೀಡಲಾಗಿದೆ.

ಮಾದರಿ

೧

ಮುನಸೀಪಾಲಿಟಿಯ ಕಾಯದೇ ವಿಷಯಕ್ಕೆ ಮಾಹಿತಿಯು: ಮನೆಯು ಮುಂದಕ್ಕೆ ಬಂದಿದ್ದು ಇದ್ದರೆ ಅದನ್ನು ಹೊಸದಾಗಿ ಕಟ್ಟುವಾಗ್ಗೆ ಹಿಂದಕ್ಕೆ ಸರಿಸಿ ಕಟ್ಟುವದಕ್ಕಾಗಿ ಮುನಸೀಪಾಲ ಕಮಿಟಿಗೆ ಅಧಿಕಾರವದೆ. ಪರಂತು ಇಂಥ ತೆಗೆದುಕೊಂಡ ಜಾಗೇದ ಬದಲು ಲುಕಸಾನಿಯ ಕಾರಣ ಕೊಡಲಿಕ್ಕೆ ಬೇಕು. ಮತ್ತು ಹೊಸದಾಗಿ ಮನೆಯನ್ನು ಕಟ್ಟುವದಿದ್ದರೆ ಅಥವಾ ಇಮಾರತಿಯ ಹೊರಭಾಗಕ್ಕೆ ಫೇರಬದಲು ಮಾಡುವದಿದ್ದರೆ ಮುನಸೀಪಾಲಿಟಿಯು ೧ ತಿಂಗಳಲ್ಲಿ ಹುಕುಮು ಕೊಡಲಿಕ್ಕೆಬೇಕು. ೧ ತಿಂಗಳದಲ್ಲಿ ಹುಕುಮು ಕೊಡದಿದ್ದರೆ ನೋಟೀಸ ಕೊಟ್ಟವನು ತನ್ನ ಕೆಲಸವನ್ನು ಯಾರಿಗೆ ಕೇಳದೇ ಮತ್ತು ಹುಕುಮಿನ ಹಾದೀ ನೋಡದೇ ತನ್ನ ಕೆಲಸ ಚಾಲೂ ಮಾಡಬೇಕು. ನೋಟೀಸಕೊಡದೇ ಕಟ್ಟಿದಲ್ಲಿ ೨೫ ರೂಪಾಯಿ ದಂಡ ಕೊಡಬೇಕಾದೀತು. ಮತ್ತು ಕಟ್ಟಿದ ಇಮಾರತು ಮುನಿಸೀಪಾಲಿಟಿಯವರು ಕೆಡವ್ಯಾರು. ಹಾದಿಯ ಮೇಲಿನ ಇಮಾರತಿಯು ಜನರಿಗೆ ಲುಕ್ಸಾನಿಯಾಗುವಂತೆ ಹಾಗೂ ಬೀಳುವಂತೆ ಇದ್ದರೆ ಮುನಿಸೀಪಾಲಿಟಿಯು ೭೫ ನೇ ಕಲಮಿನ ಪ್ರಕಾರ ನೋಟೀಸು ಕೊಟ್ಟು ಮನಿಯ ಮಾಲಕನ ಖರ್ಚಿನಿಂದ ಕೆಡವಬೇಕು. ಹಾದಿಯ ಮೇಲೆ ಅಥವಾ ಸಾರ್ವಜನಿಕ ಹಾದಿಯ ಮೇಲೆ ಯಾರಾದರು ಹೊಲಸು ಮಾಡಿದರೆ ಅಥವಾ ಉಪದ್ರವ ಕಾರಕ ಪದಾರ್ಥವಿಟ್ಟಲ್ಲಿ ಅವರಿಗೆ ೭೫ ರೂಪಾಯಿಗಳ ವರೆಗೆ ದಂಡವಾದೀತು. ಮನಿಯಲ್ಲಿ ಅಥವಾ ನೆಲದ ಮೇಲೆ ಏನಾದರೂ ಹೊಲಸು ಇಡಗೊಟ್ಟಲ್ಲಿ ಅಥವಾ ಉಪದ್ರವಕಾರಕ ಪಶುವಿಗೆ ಸಾಕಿದರೆ ೨೫ ರೂಪಾಯಿ ದಂಡ ಬೀಳುವದು. ೨೫ ನೇ ಕಲವಿ ಪ್ರಕಾರ ನೋಟೀಸು ಕೊಟ್ಟು ಮುನಸೀಪಾಲಿಟಿಯ ಕಡಿಯ ಆಫೀಸರಸಿಗೆ ದಿವಸಕ್ಕೆ ಮಾತ್ರ ಮನಿಯಲ್ಲಿ ಹೋಗುವ ಅಧಿಕಾರವಿದೆ. ಸಾರ್ವಜನಿಕ ಕೆಲಸಕ್ಕಾಗಿ ಜಾಗೆಯನ್ನು ತೆಗೆದುಕೊಂಡರೆ ಲುಕಸಾನಿಯ ಹಣವು ಪಂಚರನ್ನು ನೇಮಿಸಿ ಠರಾಯಿಸಬೇಕು.

ಮುನಸೀಪಾಲಿಟಿಯು ಯಾರದಾದರೂ ಜಾಗೆಯನ್ನು ಗೈರ ಕಾಯದೇಶೀರ ತಕ್ಕೊಂಡಲ್ಲಿ ಜಾಗಾದ ಕಬಜಾ ಮತ್ತು ಹಕ್ಕು ಶಾಬೀತ ಆಗಿ ಬೇಡುವದಕ್ಕಾಗಿ ಮುನಿಸೀಪಾಲಟಿಯ ಮೇಲೆ ಫಿರ್ಯಾದು ಮಾಡುವದಕ್ಕಾಗಿ ೧೨ ವರ್ಷಗಳ ಮುದ್ದತ್ತು ಇರುತ್ತದೆ.

ಮುನಸೀಪಾಲಿಟಿಯ ಮೇಲೆ ಫಿರ್ಯಾದು ಮಾಡುವದಿದ್ದರೆ

ಮೊದಲು ಕೃತ್ಯ ಘಡಾಯಿಸಿದಂದಿನಿಂದ ೧ ತಿಂಗಳು ಮುಕ್ಕಟ್ಟು ನೋಟೀಸು ಕೊಡಲಿಕ್ಕೆಬೇಕು.

ಹಳೇ ಪಾಂಯಾದ ಮೇಲೆ ಇಮಾರತಿಯನ್ನು ಕಟ್ಟುವದಕ್ಕಾಗಿ ಮುನಸೀಪಾಲಿಟಿಯ ಪರವಾನಗಿಯನ್ನು ತೆಗೆದುಕೊಳ್ಳುವ ಕಾರಣವಿಲ್ಲ. ಮುನಿಸಿಪಾಲಿಟಿಗೆ ಅರ್ಜಿ ಅಥವಾ ನೋಟೀಸು ಕೊಡುವದಿದ್ದರೆ ಟಿಕೇಟು ಹಚ್ಚುವ ಆವಶ್ಯಕತೆಯಿಲ್ಲ.

ಮಾದರಿ

೨ (ಅ)

ಮುನಿಸೀಪಾಲಿಟಿಗೆ ಅರ್ಜಿಗಳು

ಧಾರವಾಡ ಶಹರ ಮುನಿಸೀಪಾಲಿಟಿಗೆ.

ಅರ್ಜದಾರ ಬಳವಂತ ಪಾಂಡುರಂಗ ಲೇಲೇ ಸಾಕೀನ ಧಾರವಾಡ ಈತನ ಅರ್ಜಿಯು ಏನೆಂದರೆ-ಶಹರ ಮಜಕೂರ ಮಂಗಳವಾರ ಪೇಟಿಯಲ್ಲಿ ನನ್ನ ಮನಿಇದ್ದು ಅದರ ಸುತ್ತಲು ಅವಾರಗೋಡಿ ಹಾಕ ತಕ್ಕದ್ದವೆ. ಹಾಗು ಮನಿಯ ಮುಂಭಾಗದ ಕಟ್ಟೀ ಕಟ್ಟುವದದೆ. ಆದ್ದರಿಂದ ಜಾಗೆ ಯನ್ನು ತಪಾಸಮಾಡಿ ಪರವಾನಗಿ ಕೊಡಬೇಕು. ತಾರೀಖು ೨೫ ದಿಜಂಬರ ಸನ್ನ ೧೮೯೩ ಇ.

ಸಹಿ ಬಳಸುವಂತ ಪಾಡುರಂಗ ಲೇಲೇ.

೨ (ಆ)

ಬೆಳಗಾಂವ ಮುನಸೀಪಾಲ ಮ್ಯಾನೇಜಿಂಗ್ ಕಮಿಟಿಗೆ—

ಕೆಳಗೆ ಸಹಿಗಳನ್ನು ಮಾಡುವ ಅರ್ಜದಾರರ ಅರ್ಜಿಯೇನೆಂದರೆ-ಈಗ್ಗೆ ರೇಲ ಗಾಡಿಯಾದ ಮೂಲಕಾ ನಮ್ಮ ಛಕಡಿ ಬಂಡಿಗಳ ಕೆಲಸ ಮುಣಗಲಾರಂಭಿ ಸಿದೆ. ಎಲ್ಲಿಯೂ ಬಾಡಿಗೆ ಶಿಗುವದಿಲ್ಲಾ. ಆದ್ದರಿಂದ ಎತ್ತುಗಳಿಗೆ ಹುಲ್ಲು ಶಿಗುವದು ಸಹಾ ಕಠಿಣವಾಗಿದೆ. ಕಾರಣಾ ಮುನಸಿಪಾಲ ಕರಪಟ್ಟಿಯನ್ನು ಮಾಫಮಾಡಬೇಕು. ತಾರೀಖು ೧೮ ಜಾನೇವಾರಿ ೧೮೯೪ ಇಸ್ವಿ.

೧ ಬಾಳಪ್ಪಾ ರಾಮಚಂದ್ರ ಪಾಟೀಲ. ೧. ರಾಮಗೋಂಡಾ ಗುರಗೊಂಡಾ ಜೈನ.
೧ ಹಣಮಂತ ಎಲ್ಲಪ್ಪಾ ಚವ್ರಗಲೆ. ೧. ಮೀರಾ ವಲ್ಲದ ಸದಸುದ್ದೀನ.
೧ ಬಾಳಾಜಿ ನಾರಾಯಣ ಕಾಮತ. ೧. ಎಲ್ಲ್ಯಾ ವಲ್ಲದ ನರಸ್ಯಾ ಹೊಲೀರ.

೨ (ಇ)

ಬೆಳಗಾಂವ ಮುನಸೀಪಾಲ ಮ್ಯಾನೇಜಿಂಗ್ ಕಮಿಟಿಗೆ—

ಅರ್ಜಿದಾರ ಪಾಂಡರಂಗ ನರಸಿಂಹ ರೇಷೆ ಬೆಳಗಾಂವ ಗೋಂಧಳೀಗಲ್ಲಿ ಈತನ ಅರ್ಜಿ ಏನೆಂದರೆ—ನಾನು ತಾರೀಖು ೧೨ ಮಾಹೆ ದಿಜೆಂಬರ ೧೮೯೩ ಇಸ್ವಿ

ದಿವಸ ಶೌಚಕೂಪ ಕಟ್ಟುವದಕ್ಕಾಗಿ ಅರ್ಜಿಯನ್ನು ಮಾಡಿದ್ದೆ. ಅದಕ್ಕೆ ೩ ಫೂಟ ಗಠಾರ ಬಿಟ್ಟು ಕಟ್ಟಬೇಕೆಂದು ಹುಕುಮು ಶಿಕ್ಕಿತು. ಅದು ಗ್ಯೆರವದೆ ನನ್ನ ಹದ್ದಿನಿಂದ ಸರಕಾರೀ ಮಾರ್ಗವು ೫ ಫೂಟ ದೂರವಿದ್ದು ಮಾರ್ಗದ ಕಡೆಗೆ ಅಂದರೆ ಪೂರ್ವಬಾಜೂಕ್ಕೆ ನನ್ನದು ಮುಂಚಿನ ಅವಾರ ಗೋಡೆ ಯದೆ. ಆ ಹಳೇ ಪಾಯಾದ ಮೇಲೆ ಕಟ್ಟಲಿಕ್ಕೆ ಪರವಾನಗಿ ಇರಬೇಕು. ಈಗ್ಗೆ ಕೊಟ್ಟ ಹುಕುಮಿನ ಪ್ರಕಾರ ಕಟ್ಟಿದರೆ ನನ್ನದು ಲುಕ್ಸಸಾನೆಯಾಗಿ ಆ ಜಾಗೆಯಲ್ಲಿ ಪಾಯಖಾನೆ ಆಗಲಿಕ್ಕಿಲ್ಲಾ, ಮತ್ತು ಎರಡನೇ ಕಡೆಗೆ ಕಟ್ಟಬೇಕಾದರೆ ಜಾಗಾ ಅಗದೀ ಇಲ್ಲಾ. ಆದ್ದರಿಂದ ಮೊದಲಿನ ಜಾಗಾದ ಮೇಲೆ ಕಟ್ಟಲಿಕ್ಕೆ ಪರವಾನಗಿ ಕೊಡಬೇಕು. ಮೇಹರಬಾನರವರಿಗೆ ಜಾಹೀರ ಆಗಬೇಕು.

ತಾರೀಖು ೧೮ ಮಾಹೆ ಜಾನೇವಾರಿ ಸನ್ನ ೧೮೯೪ ಇಸ್ವಿ.
ಪಾಂಡುರಂಗ ನರಸಿಂಹ ರೇಫೆ.

ಮಾದರಿ

೩ (ಅ)

ಫವುಜದಾರೀಕೋರ್ಟಿನಲ್ಲಿ ಕೆಲಸ ನಡಿಸುವ ನಮೂನೆಗಳು

ಶಮನಸ್ಸು

ಮಾಜಿಸ್ಟ್ರೇಟ ೧ ನೇ ವರ್ಗ ಜಿಲ್ಲಾ ಧಾರವಾಡ ಕಚೇರಿಯಿಂದ—

೧ ಸರಕಾರತರ್ಫೆಯಿಂದ ಪೋಲೀಸ .... ಫಿರ್ಯಾದಿ.

೧ ರಾಮಾ ಬಿನ್ನ ಗಣು ಸಾಕೀನ ನರೇಂದ್ರ, ತಾಲ್ಲೂಕ ಧಾರವಾಡ.... ಆರೋಪಿ.

ಇಂ. ಪಿಂ. ಕೋಡ ಕಲಮು ೩೫೪.

ರಾಮಾ ಬಿನ್ನ ಗಣು ಸಾಕೀನ ನರೇಂದ್ರ, ತಾಲ್ಲೂಕ ಧಾರವಾಡ ಇವನಿಗೆ—ಈ ಫಿರ್ಯಾದಿಯು ಜಬಾಬು ಕೊಡುವದರ ಬಗ್ಗೆ ೧೮೯೪ ಇಸ್ವಿಯು ಫೇಬ್ರುವಾರೀ ತಿಂಗಳ ೫ ನೇ ತಾರೀಖಿಗೆ ನಮ್ಮ ಕೋರ್ಟಿನಲ್ಲಿ ಆಗರ ಸ್ವಾರೀ ಮುಕ್ಕಾಮಿನಲ್ಲಿ ಹಾಜರಾಗಬೇಕು. ಈ ಸಮನ್ಸಿನ ಮೇಲಿಂದ ಇದರಲ್ಲಿ ಬರೆದಂತೆ ತಪ್ಪಿದಲ್ಲಿ ರೀತಿಪ್ರಕಾರ ಇಲಾಜ ಮಾಡಲಾದೀತು. ತಾರೀಖು ೩೦ ಜಾನೇವಾರಿ ಸನ್ನ ಇಸ್ವಿ.

ಶಿಕ್ಕೆ ಕೋರ್ಟಿನದು. ಬಳವಂತ ನಾರಾಯಣ
ಮಾಂ ವರ್ಗ-೧

೩ (ಆ)

ವಾರಂಟ.

ನಾರಾಯಣ ರಾಮಚಂದ್ರ, ೧ನೇ ವರ್ಗ ಮಾಜಿಸ್ಟ್ರೇಟ ಜಿ॥ ಬೆಳಗಾಂವ ಇವರ ಕೋರ್ಟಿನಿಂದ—

೧ ಸರಕಾರ ... . ಫಿರ್ಯಾದಿ.
೧ ಕೃಷ್ಣಾ ಬಿನ್ನ ವಿಠು ಹೊಲೇರ, ಸಾಕೀನ ಬಮನಳ್ಳಿ ತಾಲ್ಲೂಕ
ಬೆಳಗಾಂವ ಆರೋಪಿ.

ಇಂ. ಪಿಂ. ಕಲಮ್ಮ ೪೧೭

ಮೆಹರ್ಬಾನ ಪ್ರೋಲೀಸ ಸುಪರಿಂಟೆಂಡೆಂಟ ಸಾಹೇಬ ಬಾಹದ್ದೂರ ಜಿ|| ಬೆಳಗಾಂ ಇವರಿಗೆ–

ಕೃಷ್ಣಾ ಬಿನ್ನ ವಿಠು ಹೊಲೇರ, ಸಾಕೀನ ಬಮನಳ್ಳಿ, ಇವನ ಮೇಲೆ ಇ. ಪಿ. ಕೋಡು ಕಲಮು ೪೧೭ ರಂತೆ ಠಕಬಾಜೀ ಮಾಡಿದ ಆರೋಪ ಬಂದಿರುತ್ತದೆ. ಆದರೆ ನೀವು ಸದರೀ ಆರೋಪಿಗೆ ಹಿಡಿದು ನಮ್ಮ ಮುಂದೆ ಹಾಜರು ಮಾಡಬೇಕು ಹೀಗೆ ನಿಮಗೆ ಈ ವಾರಂಟಿನಿಂದ ಫರ್ಮಾಯಿಸಿರುತ್ತದೆ. ಇದರಲ್ಲಿ ಬರದಂತೆ ಮಾಡಲಿಕ್ಕೆ ತಪ್ಪಲಾಗದು.

ಶಿಕ್ಕೆಯು ನಾರಾಯಣ ರಾಮಚಂದ್ರ
೧ ನೇ ವರ್ಗ ಮಾಜಿಸ್ಟ್ರೇಟ.

ಆಗಿನ ಭಾಷೆ, ಶೈಲಿಗಳ ಉದಾಹರಣೆಗಳಾಗಿವೆ, ಇವು.

* * *

ಆಡಳಿತ-ವ್ಯವಹಾರ ಸಂಬಂಧವಾಗಿ, ಕಾನೂನು ಸಂಬಂಧವಾಗಿ ಕಳೆದ ಶತಮಾನದ ದ್ವಿತೀಯಾರ್ಧದಲ್ಲಿ, ಹಾಗೂ ಈ ಶತಮಾನದ ಪ್ರಾರಂಭದ ದಶಕಗಳಲ್ಲಿ ಬಂದಿರುವ ಕೃತಿಗಳ ಬಗ್ಗೆ ವಿಶೇಷ ಅಧ್ಯಯನ ಅಷ್ಟಾಗಿ ನಡೆದಂತೆ ತೋರುವುದಿಲ್ಲ. ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವವರಿಗೆ ಇದು ನಾಂದಿಯಾಗಲಿ ಎಂದು ಹಾರೈಸುತ್ತೇನೆ.

ಸರ್ಕಾರಿ ಶಾಲೆಗಳಲ್ಲಿ ಇಳಿದ ಫಲಿತಾಂಶಗಳು ಮತ್ತು ಗುಣಮಟ್ಟದ ಸಮಸ್ಯೆ

ಡಿ. ಸುಮಿತ

ಶಾಲೆಗಳಿರಲಿ ಕಾಲೇಜುಗಳಿರಲಿ ಅವುಗಳ ಗುಣಮಟ್ಟವನ್ನು ನಿರ್ಣಯಿಸುವಾಗ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಶೇಕಡವಾರು ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳುವುದು ಬೆಳೆದು ಬಂದ ಒಂದು ರೂಢಿ ಹಾಗೆಯೇ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶಕ್ಕೆ ಅಲ್ಲಿನ ಶಿಕ್ಷಕರನ್ನು ಹೊಣೆಗಾರರೆಂದು ಭಾವಿಸುವುದೂ ಅಷ್ಟೇ ರೂಢಿ. ಶಿಕ್ಷಕರಿಗೆ ಸಂಬಂಧಪಟ್ಟ ಒಂದು ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಲ್ಲೊಬ್ಬರಾದ ಶ್ರೀ ಎಸ್. ನಿಜಲಿಂಗಪ್ಪನವರು 'ನಮ್ಮ ಉಪಾಧ್ಯಾಯರುಗಳನ್ನು ಕಂಡರೆ ನನಗೇನೋ ಸಹಾನುಭೂತಿ ಇದೆ. ಆದರೆ ಹುಡುಗರು ಪರೀಕ್ಷೆಗಳಲ್ಲಿ ಫೇಲ್ ಆಗುವುದನ್ನು ಕಂಡರೆ ನನಗೆ ಸಿಟ್ಟು ಬರುತ್ತದೆ' ಎಂದು ಹೇಳಿದ್ದು ನೆನಪು. ಈ ಹೇಳಿಕೆ ಅರ್ಥಪೂರ್ಣವಾಗಿದೆ. ವಿದ್ಯಾರ್ಥಿಗಳು ಜನ ನಿರೀಕ್ಷಿಸುವಷ್ಟು ಹೆಚ್ಚು ಸಂಖ್ಯೆಯಲ್ಲಿ ಉತ್ತೀರ್ಣರಾಗುವುದಿಲ್ಲ ಎಂಬ ಬಗ್ಗೆ ಅವರಿಗಿರುವ ಅಸಹನೆ, ಅವರ ಶಿಕ್ಷಣದಲ್ಲಿ ಇರುವ ಕೊರತೆಗಳಿಗೆಲ್ಲಾ ಶಿಕ್ಷಕರು ಮಾತ್ರವೇ ಕಾರಣ ಎಂಬ ಸರಳವಾದ ತೀರ್ಮಾನ, ಶಿಕ್ಷಕರು ಏನಾದರೊಂದು ಜಾದೂ ಮಾಡಿಯಾದರೂ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿ ಪಾಸ್ ಆಗುವಂತೆ ಮಾಡಬೇಕು ಎಂಬ ನಿರೀಕ್ಷೆ ಇವು ಇಂತಹ ಹೇಳಿಕೆಗಳ ಹಿಂದಿರುವ ಧೋರಣೆಗಳು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲ ಅಸಮರ್ಪಕತೆಗಳಿಗೂ ಶಿಕ್ಷಕರನು ಬಲಿಪಶುಗಳನ್ನಾಗಿ ಒಡ್ಡುವುದು ಎಂದರೆ–ನಮ್ಮ ಯುವಪೀಳಿಗೆಯಲ್ಲಿ ಕಂಡು ಬರುತ್ತಿರುವ ಅಶಿಸ್ತು ಅವಲಕ್ಷಣಗಳಿಗೆಲ್ಲಾ ಶಿಕ್ಷಕರೇ ಏಕೈಕ ಕಾರಣ ಎಂದು ಹೇಳುವ ಹೇಳಿಕೆಯಷ್ಟೇ–ಬೇಜವಾಬ್ದಾರಿತನದ ಕೆಲಸ. ಒಂದು ರಾಜ್ಯದ ಮುಖ್ಯಮಂತ್ರಿಗಳೇ ಸಂಕೀರ್ಣವಾದ ಒಂದು ಸಮಸ್ಯೆಯನ್ನು ಇಷ್ಟು ಲಘುವಾದ ತೀರ್ಪಿನಿಂದ ಮುಗಿಸುವುದನ್ನು ಕಂಡಾಗ ಉಂಟಾಗಬೇಕಾದದ್ದು, ಅವರಿಗೆ ಆದಂತೆ, ಕೋಪವಲ್ಲ; ಒಂದು ದೊಡ್ಡ ಸಮಸ್ಯೆ-ಸಹಸ್ರಾರು ವರ್ಷಗಳ ಅವನತಿಯ ಇತಿಹಾಸದ ಅನಂತರ ಪುನರ್ ನಿರ್ಮಾಣದ ಸಂಕಲ್ಪವನ್ನು ತೊಟ್ಟು ನಿಂತಿರುವ ದೇಶದಲ್ಲಿ–ಎಷ್ಟೊಂದು ಅವಗಣನೆಗೆ ಒಳಗಾಗಿದೆ ಎಂಬ ಬಗ್ಗೆ ವಿಷಾದ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ನಮ್ಮ ಶಿಕ್ಷಣ ಮಂತ್ರಿಗಳೂ ಇತರ ಗಣ್ಯರೂ ಖಾಸಗಿ ಶಿಕ್ಷಣ ಸಂಸ್ಥೆಗಳವರು ಏರ್ಪಡಿಸುವ ಸಭೆ ಸಮಾರಂಭಗಳಲ್ಲಿ ವಿದ್ಯಾಭಿವೃದ್ಧಿಗೆ ಖಾಸಗಿ ಸಂಸ್ಥೆಗಳು ಸಲ್ಲಿಸುವ ಸೇವೆಯನ್ನೂ ಮಾಡಿರುವ ಸಾಧನೆಯನ್ನೂ ಮುಕ್ತ ಕಂಠದಿಂದ ಹೊಗಳ

ಕೊಂಡಾಡುವುದೂ ಸಾಮಾನ್ಯವಾಗುತ್ತಿದೆ ಖಾಸಗಿ ಸಂಸ್ಥೆಗಳವರು ಪ್ರದರ್ಶಿಸುವ ಆಡಂಬರ, ಕಟ್ಟಡ ಮತ್ತು ಇತರ ಸೌಲಭ್ಯ ಸಂಪನ್ಮೂಲಗಳು ಅಥವಾ ಆ ಸಂಸ್ಥೆಗಳ ಹಿಂದಿರುವ ಪ್ರಭಾವಶಾಲಿ ವ್ಯಕ್ತಿಗಳು ನಮ್ಮ ರಾಜಕಾರಣಿಗಳನ್ನೂ ಮಂತ್ರಿಗಳನ್ನೂ ಬೆರಗುಗೊಳಿಸುವಂತಿದ್ದರೆ ಆಶ್ಚರ್ಯವಲ್ಲ. ಹಾಗೆಂದೇ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿ ಇರುವಂತಹ ಸರ್ಕಾರಿ ವಿದ್ಯಾಸಂಸ್ಥೆಗಳು, ದೊಡ್ಡ ದೊಡ್ಡ ಊರುಗಳಲ್ಲಿ ವಿರಳವಾಗಿ ಇರುವಂಥ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳ ಆಡಳಿತದ (ಉದಾ.ಗೆ ಕಾರ್ಪೊರೇಷನ್ ಆಡಳಿತದ ಶಾಲೆಗಳು) ಶಾಲೆಗಳು ಸಂಪನ್ಮೂಲಗಳ ಕೊರತೆ, ಆಡಂಬರರಹಿತತ್ವ, ಸುಣ್ಣ ಬಣ್ಣ ದುರಸ್ತಿಗಳನ್ನು ಕಾಣದ ಕಟ್ಟಡಗಳು-ಇವುಗಳಿಂದಾಗಿ ದೈನ್ಯದ ಚಿತ್ರವನ್ನು ಕೊಡುತ್ತಿದ್ದು ನಮ್ಮ ಮಂತ್ರಿಗಳ ಮನಸ್ಸಿನಲ್ಲಿ ಕೇವಲ ಸಹಾನುಭೂತಿಯನ್ನು ತರುವಂತಿದ್ದರೆ ಆಶ್ಚರ್ಯವೇನೂ ಇಲ್ಲ. ಆದರೆ ಖಾಸಗಿ ಸಂಸ್ಥೆಗಳು ಸಂಪನ್ಮೂಲಗಳ ಆಧಿಕ್ಯದಿಂದ ಸಮೃದ್ಧಿ ಮತ್ತು ಶ್ರೀಮಂತಿಕೆಯ ಕೇಂದ್ರಗಳಾಗಿ ಕಂಡು ಸರ್ಕಾರಿ ಒಡೆತನದ ಸಂಸ್ಥೆಗಳು ಬಡತನದ ಚಿತ್ರಗಳಾಗಿ ಕಾಣುತ್ತಿರುವುದಕ್ಕೆ ಕಾರಣವೇನು? ಈ ವಿರೋಧಾಭಾಸದ ಹಿಂದಿರುವ ನಿಗೂಢತೆ ಅಥವಾ ರಹಸ್ಯವೇನು ಎಂಬ ಬಗ್ಗೆ ಇವರು ಗಂಭೀರವಾಗಿ ಒಂದು ಸಲವೂ ಯೋಚಿಸದೆ ಇರುವುದು ಅಥವಾ ಯೋಚಿಸಿಯೂ ಆ ಒಗಟನ್ನು ಬಿಡಿಸಲೇಬೇಕು ಎಂಬ ಹಟದ ಶ್ರಮ ಯಾತಕ್ಕೆ ಬೇಕು ಎಂಬ ಪಲಾಯನವಾದೀ ಮಾರ್ಗವನ್ನು ಹಿಡಿಯುವುದು ಒಟ್ಟಾರೆ ಒಂದು ದುರದೃಷ್ಟದ ಸಂಗತಿ.

ಸರ್ಕಾರಿ ಸಂಸ್ಥೆಗಳ ಬಗೆಗೆ ಜನರಿಗಿರುವ ಅನಾದರ ಒಂದು ಅತಿರೇಕವನ್ನೇ ಮುಟ್ಟಿದೆ. ನಮ್ಮ ನೆರೆಯವರೊಬ್ಬರು ಆಗ ತಾನೇ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಿದ್ದ ತಮ್ಮ ಮಗ ಪದವಿಪೂರ್ವ ಶಿಕ್ಷಣಕ್ಕೆ ಯಾವ ಕಾಲೇಜಿಗೆ ಸೇರಿಕೊಳ್ಳಬೇಕು ಎಂಬ ಬಗ್ಗೆ ಚರ್ಚೆ ನಡೆಸುವಾಗ ಸರ್ಕಾರಿ ಕಾಲೇಜನ್ನು ಆಯ್ಕೆಮಾಡಿಕೊಳ್ಳುತ್ತೇನೆಂದ ಹುಡುಗನನ್ನು ಛೇಡಿಸಿ 'ಸರ್ಕಾರಿ ಕಾಲೇಜಿಗೆ ಸೇರಿಕೊಳ್ಳುವಂಥ ದುರ್ಗತಿ ನಿನಗೇನು ಬಂದಿದೆಯೋ! ನೀನೇನು ಡ್ರೈವರ್‌ನ ಮಗನೋ? ಕಂಡಕ್ಟರನ ಮಗನೋ? ನಮಗೇನೂ ಅಂಥ ಹೀನಸ್ಥಿತಿ ಬಂದಿಲ್ಲ. ಸರ್ಕಾರಿ ಕಾಲೇಜು ಸೇರುತ್ತೇನೆ ಎನ್ನುವುದಕ್ಕೆ ನಿನಗೆ ನಾಚಿಕೆಯಾಗುವುದಿಲ್ಲವೆ?' ಎಂಬ ಅರ್ಥ ಬರುವ ಮಾತುಗಳಿಂದ ಮೂದಲಿಸುತ್ತಿದ್ದುದನ್ನು ಆಲಿಸಬೇಕಾದ ಸುಯೋಗ ನನಗೆ ಸಿಕ್ಕಿತ್ತು. ಈ ಪರಿಸ್ಥಿತಿಗೆ ಕಾರಣವೇನು? ಯಾರು ಕಾರಣರು ಎಂಬ ಬಗ್ಗೆ ಎಲ್ಲರೂ ಯೋಚಿಸುವಂತಿದ್ದರೆ ಚೆನ್ನಾಗಿತ್ತು. ಆದರೆ ಸರ್ಕಾರಿ ಶಾಲೆಗಳ ಹೀನಸ್ಥಿತಿಗೆ ಕಾರಣಗಳನ್ನು ಹುಡುಕುತ್ತ ಅವುಗಳ ಪರವಾಗಿ ವಕಾಲತ್ತು ವಹಿಸುವ ಕೆಲಸ ಸರ್ಕಾರಿ ಶಾಲೆಗಳ ಶಿಕ್ಷಕರಿಗೇ ಬೀಳುವಂಥ ಪರಿಸ್ಥಿತಿ ಬಂದಿರುವುದು ಇನ್ನೊಂದು ದುರದೃಷ್ಟದ ಸಂಗತಿ.

ಇಂಥದೊಂದು ಸಂದಿಗ್ಧ ಪರಿಸ್ಥಿತಿಗೆ ಈ ಲೇಖನ ಬರೆಯಹೊರಟು ನಾನು ಸಿಕ್ಕಿಹಾಕಿಕೊಂಡಿದ್ದೇನೆ ಎನ್ನಬಹುದು. ಸ್ಥಳೀಯ ಸಂಸ್ಥೆಗಳ ಆಶ್ರಯದಲ್ಲಿ ಮತ್ತು

ಸರ್ಕಾರಿ ಆಡಳಿತದಲ್ಲಿ ನಡೆಯುತ್ತಿರುವ ಪ್ರೌಢಶಾಲೆಗಳಲ್ಲಿ ನಾನು ಸುಮಾರು ಇಪ್ಪತ್ತನಾಲ್ಕು ವರ್ಷಗಳ ಕಾಲ ಪಾಠ ಹೇಳಿದ್ದೇನೆ ಈ ಅವಧಿಯ ಅನುಭವಗಳ ಬಲದ ಮೇಲೆ ನನ್ನ ಕೆಲವು ಅಭಿಪ್ರಾಯಗಳನ್ನು ಅತ್ಯಂತ ಪ್ರಾಮಾಣಿಕವಾಗಿ ನಮೂದಿಸಲು ಒಂದು ನಮ್ರ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ. ನನ್ನದೇ ಅನುಭವಗಳು ಈ ದೇಶದ ಹಲವು ಜನ ಶಿಕ್ಷಕರಿಗೆ ಬಂದಿರುವುದು ಸಾಧ್ಯ. ಅದರೆ ಈ ಅಭಿಪ್ರಾಯಗಳು ನಮ್ಮ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತಿರುವ ನಾಯಕರುಗಳ ಮನಸ್ಸನ್ನು ಮುಟ್ಟುವಂತೆ ಮಾಡಲು ಒಂದು ದೊಡ್ಡ ಸಂಘಟನಾತ್ಮಕ ಸಾಹಸವೇ ಬೇಕಾದೀತು.

ಗ್ರಾಮಾಂತರ ಪ್ರದೇಶಗಳ ಹೆಚ್ಚಿನ ಊರುಗಳಲ್ಲಿ ಸಾಮಾನ್ಯವಾಗಿ ಸರ್ಕಾರಿ ಶಾಲೆಗಳೇ ಇರುತ್ತವೆ ಎನ್ನಬಹುದು. ನಗರ ಪ್ರದೇಶಗಳಲ್ಲಿ ಈಗೀಗ ಸರ್ಕಾರಿ ಶಾಲೆಗಳ ಸಂಖ್ಯೆಯನ್ನು ಖಾಸಗಿ ಶಾಲೆಗಳ ಸಂಖ್ಯೆ ಮೀರಿಸುತ್ತಿದೆ ಹೀಗಾಗಿ ಮಕ್ಕಳನ್ನು ಯಾವ ಶಾಲೆಗಳಿಗೆ ಸೇರಿಸಬೇಕು ಎಂಬ ವಿಷಯದಲ್ಲಿ ಪೇಟೆಯವರಿಗೆ ಇರುವಆಯ್ಕೆಯ ಸೌಲಭ್ಯ ಹಳ್ಳಿಯವರಿಗೆ ಇಲ್ಲವಾಗಿದೆ. ಬಹುಶಃ ದೇಶದಲ್ಲಿ ಬರಿಯ ಸರ್ಕಾರಿ ಶಾಲೆಗಳು ಅಥವಾ ಖಾಸಗಿ ಶಾಲೆಗಳು ಮಾತ್ರ ಇರುವ ವ್ಯವಸ್ಥೆ ಇದ್ದಿದ್ದರೆ ವಿದ್ಯಾರ್ಥಿಗಳ ನಡುವಿನ ಗುಣಮಟ್ಟದ ಅಂತರ ಈಗಿರುವಷ್ಟು ಕಣ್‌ಕೋರೈಸುವಂತಿರುತ್ತಿರಲಿಲ್ಲ. ಜಾಣರು ಅಥವಾ ಚುರುಕಾದ ಹುಡುಗರ ಪ್ರಭಾವ ದಡ್ಡರು ಅಥವಾ ಮಂದಗತಿಯ ಹುಡುಗರ ಮೇಲೆ ಸ್ವಲ್ಪಮಟ್ಟಿಗಾದರೂ ಇರುತ್ತಿತ್ತು. ಅಲ್ಲದೆ ಪೋಷಕರು ಕೆಲವರಾದರೂ ಶಾಲೆಯ ಸ್ಥಿತಿಗತಿಗಳ ಬಗೆಗೆ ಈಗಿಗಿಂತ ಹೆಚ್ಚು ಆಸಕ್ತಿ ವಹಿಸುವ ಸಾಧ್ಯತೆ ಇರುತ್ತಿತ್ತು.

ನಗರ ಪ್ರದೇಶಗಳಲ್ಲಿ ಇರುವ ಸರ್ಕಾರಿ ಶಾಲೆಗಳು ಈಗ ಕೇವಲ ಆರ್ಥಿಕವಾಗಿ ಹಿಂದುಳಿದ ವರ್ಗದವರ ಮಕ್ಕಳು ಓದುವ ಶಾಲೆಗಳಾಗಿವೆ. ಬಡವರ ಮಕ್ಕಳೆಲ್ಲ ಇಲ್ಲಿಗೇ ಬಂದು ಸೇರುವುದಕ್ಕೆ ಇರುವ ಕಾರಣಗಳು ಎಲ್ಲರಿಗೂ ತಿಳಿದಂಥವೇ. ಇಲ್ಲಿ ಕ್ಯಾಪಿಟೇಶನ್ ಫೀಸು ವಿಧಿಸುವುದಿಲ್ಲ. ಅಥವಾ ಇನ್ನಾವುದೇ ಸಹಾಯಧನವನ್ನೂ ಕೇಳುವುದಿಲ್ಲ. ದಾಖಲಾತಿ ಶುಲ್ಕ ಕನಿಷ್ಠ ಮೊತ್ತದ್ದಾಗಿರುತ್ತದೆ (ಉದಾ. ಒಂದು ರೂಪಾಯಿ ಅಥವಾ ಎರಡು ರೂಪಾಯಿ). ತಿಂಗಳ ಬೋಧನಾ ಶುಲ್ಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಹಿಂದಿನ ತರಗತಿಯಲ್ಲೇ ಉಳಿದವರಿಗೆ ಹೊರತು ಬೇರೆ ಯಾರಿಗೂ ಇಲ್ಲವೇ ಇಲ್ಲ. ಪ್ರಯೋಗಶಾಲೆ ಮತ್ತು ಕ್ರೀಡಾಶುಲ್ಕ, ವಿದ್ಯಾರ್ಥಿ ಮತ್ತು ಶಿಕ್ಷಕರ ಕ್ಷೇಮನಿಧಿಗಾಗಿ ಕೊಡುವ ಶುಲ್ಕ, ವೈದ್ಯಕೀಯ ತಪಾಸಣೆ ಮತ್ತು ವಾಚನಾಲಯ ಶುಲ್ಕ, ಶುಲ್ಕ–ಮೊದಲಾದದ್ದೆಲ್ಲ ಸೇರಿ ಸರ್ಕಾರಿ ಪ್ರೌಢಶಾಲೆಯ ಒಬ್ಬ ವಿದ್ಯಾರ್ಥಿ ವರ್ಷದ ಎರಡು ಅವಧಿಗೆ ಸುಮಾರು ಇಪ್ಪತ್ತು ರೂಪಾಯಿಗಳನ್ನು ಕೊಟ್ಟರೆ ಸಾಕು. ಆರ್ಥಿಕವಾಗಿ ಹಿಂದುಳಿದವರು ಮತ್ತು ಪರಿಶಿಷ್ಟವರ್ಗದವರು ಮೇಲಿನ ಬಾಬುಗಳಿಗಾಗಿ ಕೊಡುವ ಶುಲ್ಕ ೫–೬ ರೂಪಾಯಿಗಳಿಗೆ ಮೀರುವುದಿಲ್ಲ. ಯಾವ ಖಾಸಗಿ ಶಾಲೆಯಲ್ಲಿ ಅದು ಕೇವಲ ಶಿಶುವಿಹಾರವೇ ಆಗಿದ್ದರೂ, ಇಷ್ಟು ಕಡಮೆ ವೆಚ್ಚದಲ್ಲಿ

ಹುಡುಗರನ್ನು ಸೇರಿಸುವುದಕ್ಕೆ ಬರುತ್ತದೆ? ಅಲ್ಲದೆ ಇಲ್ಲಿ ಒಂದು ತರಗತಿಗೆ ಇಷ್ಟೇ ಮಕ್ಕಳು ಎಂಬ ಮಿತಿ ಇಲ್ಲ. ಕೊಠಡಿಯಲ್ಲಿ ಎಷ್ಟು ಮಕ್ಕಳನ್ನು, ಊಟಕ್ಕೆ ಕೂಡಿಸಿದಂತೆ ಒತ್ತೊತ್ತಾಗಿ, ಕೂಡಿಸುವುದಕ್ಕೆ ಸಾಧ್ಯವಿದೆಯೋ ಅಷ್ಟು ಮಕ್ಕಳನ್ನೂ ಸೇರಿಸಬಹುದು. ಸಂಖ್ಯೆ ಹೆಚ್ಚಾಯಿತು ಎಂದರೆ 'ಸರ್ಕಾರಿ ಶಾಲೆಯಲ್ಲೇ ಸೇರಿಸಿಕೊಳ್ಳದಿದ್ದರೆ ನಾವು ಇನ್ನೆಲ್ಲಿಗೆ ಹೋಗಬೇಕು?' ಎಂದು ಪೋಷಕರು ಜಗಳವನ್ನೇ ತೆಗೆಯುತ್ತಾರೆ. ಹೀಗೆ ಜಗಳ ಮಾಡಬಾರದೆಂದು ಅವರಿಗೆ ಯಾರಾದರೂ ಹೇಳುವವರಿದ್ದಾರೆಯೇ? ಅಲ್ಲದೆ ಸರ್ಕಾರದವರು ಗೊತ್ತುಮಾಡಿದ ಪ್ರವೇಶದ ಅವಧಿಯ ಕೊನೆಯ ನಿಮಿಷದವರೆಗೂ ಮಕ್ಕಳನ್ನು ಸೇರಿಸುತ್ತಲೇ ಇರಬೇಕಾಗುತ್ತದೆ. ಖಾಸಗಿ ಶಾಲೆಗಳವರಾದರೆ ಬೇಸಗೆ ರಜ ಮುಗಿಯುವುದಕ್ಕೆ ಎಷ್ಟೋ ಮೊದಲೇ ಪ್ರವೇಶಗಳನ್ನು ಆರಂಭಿಸಿ ಅವರಿಗೆ ಬೇಕೆಂದಾಗ ಸೀಟು ಭರ್ತಿಯಾದುವು ಎಂದು ಪ್ರವೇಶಗಳನ್ನು ಬಂಧ್ ಮಾಡಬಹುದು. ಹೆಚ್ಚಿನ ಪ್ರವೇಶದ ಒತ್ತಡ ಇರುವ ಶಾಲೆಗಳಲ್ಲಿ ಮೂರು ತಿಂಗಳು ಅಥವಾ ಆರು ತಿಂಗಳ ಮೊದಲೇ ಸೀಟುಗಳನ್ನು ನೊಂದಾಯಿಸಿ ಮೀಸಲಿಡಬಹುದು. ೧೯೮೮ರ ಜೂನ್‌ನಲ್ಲಿ ಎಸ್.ಎಸ್. ಎಲ್.ಸಿ. ವಿದ್ಯಾರ್ಥಿಗಳಿಗೆ ಸಪ್ಲಿಮೆಂಟರಿ ಪರೀಕ್ಷೆ ಮಾಡಿ ಫಲಿತಾಂಶಗಳನ್ನು ಹೇಳುವುದರೊಳಗೆ ಬಹುತೇಕ ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ಪ್ರವೇಶಗಳನ್ನು ಮುಗಿಸಿ ಬಿಟ್ಟಿದ್ದರು. ಸರ್ಕಾರಿ ಸಂಸ್ಥೆಗಳಲ್ಲಿ ಮಾತ್ರವೇ ಪ್ರವೇಶಗಳನ್ನು ಪೂರೈಸದೆ, ಪಾಠಗಳನ್ನು ಆರಂಭಿಸದೆ ಈ ತಂಡದ ಹುಡುಗರಿಗಾಗಿ ಕಾಯಲಾಗಿತ್ತು.

ಸರ್ಕಾರಿ ಶಾಲೆಗಳಲ್ಲಿ ಸೇರುವ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಾದರಕ್ಷೆ, ಪುಸ್ತಕಗಳು ಮತ್ತು ಬರೆಯುವ ಸಾಧನಗಳು—ಇವುಗಳ ವಿಷಯದಲ್ಲಿ ಕಡ್ಡಾಯ ಅಥವಾ ಬಲಾತ್ಕಾರ ಇರುವುದಿಲ್ಲ. ಬಲಾತ್ಕಾರ ಇಲ್ಲವೆಂದ ಮೇಲೆ ವಿಧಿಸುವ ನಿಯಮಗಳನ್ನು ಉಲ್ಲಂಘಿಸುವುದೇ ನಿಯಮವಾಗುತ್ತದೆ. ಈ ಎಲ್ಲ ಪರಿಸ್ಥಿತಿಗಳಿಂದಾಗಿ ನಗರ ಪ್ರದೇಶದ ಹಿಂದುಳಿದ ವರ್ಗಗಳು ಮತ್ತು ಬಡವರು ಎನ್ನಬಹುದಾದವರು ಸರ್ಕಾರಿ ಶಾಲೆಗಳಲ್ಲಿ ಮಾತ್ರ ತಮ್ಮ ಮಕ್ಕಳನ್ನು ಸೇರಿಸಬಹುದು. ಏರುತ್ತಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳ ಸಂಖ್ಯೆ ಹೆಚ್ಚದೆ ಪ್ರವೇಶದ ಒತ್ತಡ ದಿನೇ ದಿನೇ ತೀವ್ರವಾಗುತ್ತಿದ್ದು ಖಾಸಗಿ ಶಾಲೆಗಳಲ್ಲಿ ಪ್ರವೇಶ ಗಿಟ್ಟಿಸುವುದು ಒಂದು ವರವನ್ನು ಪಡೆಯುವಷ್ಟೇ ಕಷ್ಟದ ಕೆಲಸವಾಗಿದೆ. ತಂದೆ ತಾಯಿಗಳ ಆರ್ಥಿಕ ಮಟ್ಟ, ಅವರಿಬ್ಬರ ವಿದ್ಯಾರ್ಹತೆ ಇವುಗಳನ್ನು ಕೂಡ ಸಂದರ್ಶನದ ವೇಳೆ ನಿಸ್ಸಂಕೋಚವಾಗಿ ಕೇಳಿ ತಿಳಿದುಕೊಂಡೇ ಮಕ್ಕಳಿಗೆ ಪ್ರವೇಶ ಕೊಡುವ ಪರಿಪಾಟ ನಗರದ ಖಾಸಗಿ ಶಾಲೆಗಳಲ್ಲಿ ಇತ್ತೀಚೆಗೆ ನಡೆಯುತ್ತಿದೆ. ಆರ್ಥಿಕ ಮಟ್ಟವನ್ನು ವಿಚಾರಿಸುವುದು ಎಂದರೆ, ದುರ್ಬಲರಾದವರಿಗೆ ವಿಶೇಷ ರಿಯಾಯಿತಿ, ಆದ್ಯತೆ ತೋರಿಸಬೇಕು ಎಂಬ ಉದ್ದೇಶ ಸಂವಿಧಾನದ ನಿರ್ದೇಶನಗಳಿಂದ ಹಿಡಿದು ಮಿಕ್ಕೆಲ್ಲ ಸಂದರ್ಭಗಳಲ್ಲೂ ಒಂದು ಅಗತ್ಯವಾದ ವಾಡಿಕೆ ಆಗಿದ್ದುದು ಸರಿಯಷ್ಟೆ. ಇದು ಸರ್ಕಾರಿ ಅಥವಾ ಸಾರ್ವಜನಿಕ ಸಂಸ್ಥೆಗಳಿಗಷ್ಟೇ ನಿಜವಾಗಿ ಖಾಸಗಿಯವರಿಗೆ ಇದಕ್ಕೆ ವಿರುದ್ಧವಾದ ಅಂದರೆ ಆರ್ಥಿಕವಾಗಿ ಮೇಲೇರಿದವರಿಗೆ ಮಾತ್ರ ಆದ್ಯತೆ ಎಂಬ, ವಾಡಿಕೆ ತನಗೆ ತಾನೇ ಬಂದು ಬಹಿರಂಗ

ವಾಗಿ ಅವರ ಅನುಸರಣ ನಡೆಯುತ್ತಿದ್ದರೂ ಸರ್ಕಾರ ಇವರ ಬಗ್ಗೆ ಏನೂ ಮಾಡದೆ ಖಾಸಗಿ ಸಂಸ್ಥೆಗಳನ್ನೇ ಮಾದರಿ ವಿದ್ಯಾದಾನ ಕೇಂದ್ರಗಳೆಂದು ಪುರಸ್ಕರಿಸುವಂಥ ಸ್ಥಿತಿ ಬಂದದ್ದು ನಮ್ಮ ಮಕ್ಕಳ ಮತ್ತು ಜನಸಾಮಾನ್ಯರ ದೌರ್ಭಾಗ್ಯ ಎನ್ನಬೇಕು. ಈ ದೃಷ್ಟಿಯಿಂದ ಜನಸಾಮಾನ್ಯರಿಗೆ, ಬಡವರಿಗೆ ಸರ್ಕಾರಿ ಶಾಲೆಗಳು ಒಂದು ವರದಾನ ಎಂದೇ ಹೇಳಬೇಕು. ಅಲ್ಲಿ ಮಾತ್ರ ಅವರು ಇದು ನಮ್ಮದು, ನಾವು ಧೈರ್ಯವಾಗಿ ಮಾತನಾಡಬಹುದು, ನಮ್ಮನ್ನು ನಿರಾಕರಿಸಿ ಯಾರೂ ಹಿಂದಕ್ಕೆ ಕಳಿಸುವುದಿಲ್ಲ ಎಂಬ ಸ್ವಾತಂತ್ರ್ಯದ ಕಿಂಚಿತ್ ಸವಿಯನ್ನು ಅನುಭವಿಸಬಹುದು. ಆದರೆ ಆ ಸವಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದ್ದಷ್ಟರಲ್ಲೇ ಪರಿಸಮಾಪ್ತಿಯಾಗುತ್ತದೆ. ಏಕೆಂದರೆ ಮುಂದೆ ಅವರ ಮಕ್ಕಳು ಕಲಿತು ತಮ್ಮ ತಿಳುವಳಿಕೆಯನ್ನು ಹಿಗ್ಗಿಸಿಕೊಳ್ಳುತ್ತಾ ಹೋಗಿ ಪೋಷಕರ ಆಸೆಗಳು ಈಡೇರುವುದನ್ನು ಕಾಣುವುದಕ್ಕೆ ಬೇಕಾದ ಸೌಲಭ್ಯಗಳಾಗಲಿ ಏರ್ಪಾಟಾಗಲಿ ಅಲ್ಲಿ ಇರುವುದಿಲ್ಲ. ಇದಕ್ಕೆ ಶಾಲೆಯ ಶಿಕ್ಷಕರು ಹೊಣೆ ಎಂದು ಪರಿಸ್ಥಿತಿಯನ್ನು ಬಲ್ಲವರು ಖಂಡಿತ ಹೇಳಲಾರರು.

ಉದಾಹರಣೆಗಾಗಿ, ನಾನು ಓದಿಸುತ್ತಿದ್ದ ಹಳ್ಳಿಯಲ್ಲಿ (ಸಾಕಷ್ಟು ದೊಡ್ಡ ಹಳ್ಳಿ) ಬಂದ ಅನುಭವಗಳು ಕೆಲವನ್ನು ಇಲ್ಲಿ ನಮೂದಿಸಬಹುದು. ಆ ಪ್ರೌಢಶಾಲೆಗೆ ಸುತ್ತಿನ ಆರೇಳು ಮೈಲಿ ಫಾಸಲೆಯ ಹಳ್ಳಿಗಳಿಂದ ಮಕ್ಕಳು ನಡೆದು ಬರುತ್ತಿದ್ದರು. ಅಷ್ಟು ಹೊತ್ತಿಗೇ ಅವರು ಏನು ತಿಂದು ಬಂದಿರುತ್ತಿದ್ದರೋ, ಯಾರಾದರೂ ಬರಿ ಹೊಟ್ಟೆಯಲ್ಲಿ ಬರುತ್ತಿದ್ದರೋ ನಮಗೆ ತಿಳಿಯುತ್ತಿರಲಿಲ್ಲ. ಅನೇಕ ಮಕ್ಕಳು ಮೊದಲ ಪೀರಿಯಡ್ಡಿನಲ್ಲೇ ತೂಕಡಿಸತೊಡಗುತ್ತಿದ್ದರು. ತೂಕಡಿಕೆ ಹಸಿದಾಗಲೂ ಬರಬಹುದು' ಬಿಸಿಬಿಸಿ ಊಟ ಮಾಡಿ ಬಿಸಿಲಿನಲ್ಲಿ ಹಾದಿ ನಡೆದು ಬಂದದ್ದರಿಂದಲೂ ಬರಬಹುದು. ಕೆಲವು ಹುಡುಗರಂತೂ ತರಗತಿಯಲ್ಲೇ ಏನನ್ನೋ ತಿನ್ನುತ್ತಾ ಬಾಯಾಡಿಸುತ್ತಾ ಇರುತ್ತಿದ್ದುದೂ ಉಂಟು. ಗದರಿಸಿ ಅಂಥವರ ಚೀಲ ಕೊಡವಿಸಿ ನೋಡಿದಾಗ ಒಣಗಿದ ರೊಟ್ಟಿ, ಮಡಕೆ ತಳದ ಹಿಟ್ಟಿನ ಸೀಕಲು ಅಥವಾ ಬೆಂದ, ಹುರಿದ ಕಾಳುಗಳು ಸಿಕ್ಕಿ ಬೀಳುತ್ತಿದ್ದವು. ಮಧ್ಯಾಹ್ನಕ್ಕೆ ಊಟ ತರುವಂತಹವರು ಬೆರಳಲ್ಲಿ ಎಣಿಸಬಹುದಾದಷ್ಟು ಜನ ಮಾತ್ರ. ಉಳಿದವರನ್ನು ಕೇಳಿದರೆ 'ಬೆಳಗ್ಗೆ ಊಟ ಮಾಡಿ ಬರುತ್ತೀವೆ' ಅನ್ನುತ್ತಿದ್ದರು. ಒಮ್ಮೆ ಒಬ್ಬ ಹುಡುಗನನ್ನು ಏಕೆ ಊಟ ತರುವುದಿಲ್ಲವೆಂದು ಒತ್ತಾಯ ಮಾಡಿ ಕೇಳಿದಾಗ 'ತರುವಂಥಾದ್ದು ನಮ್ಮ ಮನೆಯಲ್ಲಿ ಮಾಡುವುದಿಲ್ಲ ಸಾರ್!' ಎಂಬ ಉತ್ತರ ಬಂತು. 'ಮಾಡುವುದನ್ನೇ ತಗೊಂಡು ಬಾ, ಮುದ್ದೆಯೋ ರೊಟ್ಟಿಯೋ'ಎಂದು ಆಗ್ರಹ ಪಡಿಸಿದ್ದಕ್ಕೆ 'ಅಂಬಲಿ ಮಾಡ್ತೀವಿ ಸಾರ್' ಎಂದಿದ್ದ. ಉತ್ತರವನ್ನು ಕೇಳಿ ಹುಡುಗನಿಗೆ ಕಾಣದಂತೆ ನಾನು ಕಣ್ಣೊರೆಸಿಕೊಳಬೇಕಾಯಿತು. ಅವರ ಬಟ್ಟೆ, ತಲೆ ಇವುಗಳನ್ನು ಕಂಡು ಅಚ್ಚುಕಟ್ಟಾಗಿ ಶಾಲೆಗೆ ಬನ್ನಿ ಎಂದು ಉಪದೇಶಿಸಿದರೆ 'ಬೆಳಗ್ಗೇನೆ ಹೊಲಕ್ಕೆ ದನಾ ಹೊಡಕೊಂಡು ಹೋಗಿದ್ದೆ ಅಲ್ಲಿಂದ ಬಂದೆ ಟೀಚರ್', 'ಹುಲ್ಲು ಕಿತ್ತುಕೊಂಡು ಹೋಗಿ ಮನೆಗೆ ಹಾಕಿ ಬಂದೆ ಸಾರ್' ಎನ್ನುತ್ತಿದ್ದರು. (ಹಳ್ಳಿಯ ಹುಡುಗರು ಮಹಿಳಾ ಶಿಕ್ಷಕಿಯರನ್ನು ಕೂಡ 'ಸಾರ್' ಎಂದು ಕರೆಯುವುದು ಸಾಮಾನ್ಯ ಸಂಗತಿ) ತಡವಾಗಿ ಬಂದದ್ದಕ್ಕೆ ಛೇಡಿಸಿ

ದರೆ 'ಗಡಿಯಾರ ಇಲ್ಲ ಟೀಚರ್, ಟೈಮ್ ಗೊತ್ತಾಗಲಿಲ್ಲ' 'ನಡಕೊಂಡು ಬರೋಕೆ ಹೊತ್ತಾಯಿತು ಸಾರ್, ಬಸ್ ಸಿಕ್ಕಲಿಲ್ಲ ಸಾರ್, ಅಡುಗೆ ಆಗಿರಲಿಲ್ಲ ಸಾರ್, ಹೊಲಕ್ಕೆ ಕಳಿಸಿದ್ರು, ಅಲ್ಲಿಂದಲೇ ಸ್ಕೂಲಿಗೆ ಬಂದೆ, ನಮ್ಮಮ್ಮ ಬೇಗ ಬುತ್ತಿ ತರಲಿಲ್ಲ' ಇತ್ಯಾದಿ ಉತ್ತರಗಳು ನಮಗೆ ಚಿರಪರಿಚಿತವಾಗಿದ್ದುವು. ಒಂದು ಸಲ ಪಾಠ ನಡೆದಿದ್ದಾಗ ಒಬ್ಬ ಹುಡುಗ ಇದ್ದಕ್ಕಿದ್ದಂತೆ ಮೇಲೆದ್ದವನೇ ಬಾಣ ಬಿಟ್ಟಂತೆ ಓಡಿಹೋದ. ಅವನು ವಾಪಸ್ ಬಂದಾಗ ಏದುಸಿರು ಬಿಡುತ್ತ ಅಂಗಿಯಿಂದ ಬೆವರು ಒರೆಸಿಕೊಳ್ಳುತ್ತಿದ್ದ. ಆವನು ಸುಧಾರಿಸಿಕೊಂಡು ಮೇಲೆ ವಿಚಾರಿಸಿದರೆ 'ಹೊಲದಾಗೆ ಎಂಡೆಮ್ಮೆ ಸೇರ್ಕೊಂಡು ಮೇಯ್ತಿದ್ವು ಟೀಚರ್, ನೋಡಿ ಓಡ್ಹೋದೆ' ಎಂದ. ಅವನ ಹೊಲದಲ್ಲಿ ಎಮ್ಮೆಗಳು ಮೇಯುತ್ತಿದ್ದುದು ಅವನಿಗೆ ಕಿಟಕಿಯಿಂದ ಕಂಡಿತ್ತಂತೆ.

ಪಾಠದ ಮಧ್ಯೆ ಮಕ್ಕಳು ತಲೆಸುತ್ತಿ ಬೀಳುತ್ತಿದ್ದ ಪ್ರಸಂಗಗಳು ಆಗಾಗ ಬರುತ್ತಿದ್ದುವು. ಚೇತರಿಸಿಕೊಳ್ಳಲೆಂದು ಅಂಥವರಿಗೆ ಕಾಫಿ ತರಿಸಿಕೊಟ್ಟರೆ ಅವರು ಕುಡಿಯುತ್ತಿರಲೇ ಇಲ್ಲ. ಅಭಿಮಾನ ಕಾರಣವೋ, ಟೀಚರ್ ಕೈಯಿಂದ ಕಾಫಿ ತರಿಸಿಕೊಂಡು ಕುಡಿಯುವಷ್ಟು ಸಲುಗೆ ತಮಗೆ ತಕ್ಕದ್ದಲ್ಲವೆಂದೋ, ಹೇಳಲಾಗುತ್ತಿರಲಿಲ್ಲ. ಒಂದು ಸಲ ಪಾಠ ಮಾಡುತ್ತಿದ್ದಾಗ ಒಬ್ಬ ಗೃಹಸ್ಥ ಅಪ್ಪಣೆಯನ್ನು ಕೇಳದೆ ತರಗತಿಯೊಳಕ್ಕೆ ಧಾವಿಸಿ ಬಂದು ಹುಡುಗನೊಬ್ಬನನ್ನು ಹಿಡಿದುಕೊಂಡು ನನ್ನೆದುರಿಗೇ ಬಡಿಯಲಾರಂಭಿಸಿದ. ಅವನ ಕೈಯಿಂದ ಹುಡುಗನನ್ನು ಬಿಡಿಸಿ ಅವನು ಮಾಡಿದ ತಪ್ಪೇನೆಂದು ಕೇಳಿದರೆ 'ಇವತ್ತು ಸ್ಕೂಲಿಗೆ ಹೋಗಬೇಡ, ದನಾ ಹೊಡ್ಕೊಂಡು ಹೊಲದತಾಗೆ ಹೋಗೋ ಅಂದ್ರೆ ಕೇಳದೆ ಓಡಿ ಬಂದು ಕುಂತವ್ನೆ. ಬಿಡ್ರವ್ವಾ, ಚಚ್ಚಿಹಾಕ್ಬಿಡ್ತೀನಿ ನನ್ಮಗನ್ನ' ಎಂದು ಆಕ್ರೋಶ ಪ್ರದರ್ಶಿಸಿದ. ಹುಡುಗ ಓದಿನಲ್ಲಿ ಆಸಕ್ತಿ ಇದ್ದು, ತಕ್ಕಮಟ್ಟಿಗೆ ಓದುತ್ತಿದ್ದವನೇ. ಈ ಪ್ರಸಂಗಗಳಿಂದ ತಿಳಿಯುವುದೇನೆಂದರೆ ಹೊಲಕ್ಕೆ ದನ ನುಗ್ಗುವಂಥಾದ್ದು, ದನಗಳನ್ನು ಮನೆ ಹತ್ತಿರ ಉಪವಾಸ ಬಿಳಿಸದೆ ಮೇಯಲು ಅಟ್ಟಿಕೊಂಡು ಹೋಗಬೇಕಾದ್ದು ತರಗತಿಯಲ್ಲಿ ನಡೆಯುವ ಪಾಠಕ್ಕಿಂತಲೂ ಹೆಚ್ಚು ಮುಖ್ಯವಾದ ವಿಷಯ, ಮಾತ್ರವಲ್ಲ ರೈತರ ಅಳಿವು ಉಳಿವಿನ ಪ್ರಶ್ನೆ ಎಂಬುದು.

ಶಾಲೆಗೆ ಬರುತ್ತಿದ್ದ ಹೆಣ್ಣುಮಕ್ಕಳ ತಂದೆತಾಯಂದಿರನ್ನು ಕರೆಸಿ 'ಹುಡುಗಿ ಚೆನ್ನಾಗಿ ಓದುತ್ತಾಳೆ, ಮನೇಲಿ ಕೆಲಸ ಹೆಚ್ಚು ಹಚ್ಚಬೇಡಿ, ಓದಿಕೊಳ್ಳುವುದಕ್ಕೆ ಅವಕಾಶ ಕೊಡಿ' ಎಂದರೆ 'ಯವ್ವಾ ಅವಳೇನು ಓದಿ ನೌಕ್ರಿ ಮಾಡ್ಬೇಕಾ ತಾಯಿ ? ಗಂಡು ಸಿಕ್ಕಿದರೆ ಮದ್ವೆ ಮಾಡಿಬಿಡ್ತೀವಿ. ನಾವಿಬ್ರೂ ಹೊಲಕ್ಕೆ ಹೋದ್ರೆ, ಹೆಣ್ಮಗಾ ಒಂದನ್ನೇ ಮನೇಲಿ ಬಿಡಾಕ್ಕಾಗುತ್ತೇನ್ರವ್ವಾ ? ಅದಕ್ಕಳಿಸ್ತೀವಿ. ಸಂಜೇಲಿ ನಾವು ಬರೋ ಹೊತ್ಗೆ ಅದೂ ಮನೆಗ್ಬರುತ್ತೆ....ಇಲ್ಲಿದ್ದಾಗ ನೀವೇ ಅದಕ್ಕೆ ತಾಯಿ ಕಣ್ರವ್ವಾ !' ಎನ್ನುವಂಥ ಉತ್ತರ ಬಂದು ಶಾಲೆಯ ಫಲಿತಾಂಶ, ಪರೀಕ್ಷೆ ಮೊದಲಾದ ಪ್ರಶ್ನೆಗಳಿಗಿಂತ ಗಹನವಾದ ಆಲೋಚನೆಗಳು ಕಣ್ಣೆದುರು ಕವಿದುಕೊಳ್ಳು

ತ್ತಿದ್ದುವು. ಪೇಟೆಯ ಸರ್ಕಾರಿ ಶಾಲೆಗಳಲ್ಲಿ ಪೋಷಕರಿಂದ ಇಂತಹ ನಿರೀಕ್ಷೆ, ಕಾಳಜಿಗಳು ಈಗ ಹೆಚ್ಚು ಹೆಚ್ಚು ವ್ಯಕ್ತವಾಗುತ್ತವೆ. ಏಕೆಂದರೆ ಕೊಳಚೆ ಪ್ರದೇಶಗಳು, ಪುಂಡು ಪೋಕರಿಗಳು ಇರುವಂಥ ಪ್ರದೇಶಗಳು ಇವುಗಳಿಂದ ಬರುವ ಹೆಣ್ಣು ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಹೆಚ್ಚು ಇರುತ್ತಾರೆ. ಹತ್ತನೇ ತರಗತಿಗೆ ಬರುವಷ್ಟರಲ್ಲಿ ಅನೇಕ ಹೆಣ್ಣುಮಕ್ಕಳು ಮದುವೆಯಾಗಿ ಶಾಲೆಗೆ ಶರಣು ಹೊಡೆಯುವುದು ಹಳ್ಳಿಯ ಪ್ರೌಢಶಾಲೆಗಳಲ್ಲಿ ಈಗಲೂ ಸಾಮಾನ್ಯ ಸಂಗತಿಯಾಗಿದೆ.

ಮಕ್ಕಳ ಓದಿನ ಗುಣಮಟ್ಟ ಚೆನ್ನಾಗಿಲ್ಲವೆಂದು ಪರೀಕ್ಷೆಯಲ್ಲಿ ಫೇಲ್ ಮಾಡಿದರೆ ಬಹಳಷ್ಟು ಜನ ಮುಂದಿನ ಬಾರಿಗೆ ಶಾಲೆಗೆ ಬರುವುದೇ ಇಲ್ಲ. ಏಕೆಂದರೆ ಫೇಲಾದ ಮಕ್ಕಳು ಪ್ರತಿ ತಿಂಗಳೂ ಬೋಧನಾ ಶುಲ್ಕ ಕೊಡಬೇಕಾಗುತ್ತದೆ. ಇಂತಹ ಮಕ್ಕಳ ವಿಷಯದಲ್ಲಿ ಶಿಕ್ಷಕರು ಏಕಪಕ್ಷೀಯವಾಗಿ ಔದಾರ್ಯ ತೋರಿಸಿ ಮುಂದಿನ ತರಗತಿಗೆ ಕಳಿಸಬೇಕು ಎಂದರೆ ಅಂಥವರ ಉತ್ತರ ಪತ್ರಿಕೆಗಳನ್ನು ಮನೆಯಲ್ಲಿ ನಾವುಗಳೇ ರಬ್ಬರ್, ಪೆನ್ಸಿಲ್‌ಗಳನ್ನು ಹಿಡಿದು ತಿದ್ದಿ ಸರಿಯಾದ ಉತ್ತರವನ್ನು ಜೋಡಿಸಿ ಅಂಕಗಳನ್ನು ಕೊಡಬೇಕು! ಉತ್ತರ ಸರಿಯಾಗಿಲ್ಲದೆ ಹೆಚ್ಚು ಅಂಕಗಳನ್ನು ಪ್ರದಾನ ಮಾಡುವುದು ಹೇಗೆ? ಮುಂದಿನ ಸಲ ವಿಷಯ ಪರೀಕ್ಷಕರುಗಳು (Subject Inspectors) ತಪಾಸಣೆಗೆ ಬಂದಾಗ ಉತ್ತರ ಪತ್ರಿಕೆಗಳು, ನಾವು ಕೊಟ್ಟ ಅಂಕಗಳು, ಉತ್ತರಪತ್ರಿಕೆಗಳೊಂದಿಗೇ ನಾವು ಸಿದ್ಧಮಾಡಿಟ್ಟಿರಬೇಕಾದ ಮಾದರಿ ಉತ್ತರಗಳ ವಿವರ–ಎಲ್ಲವೂ ಒಪ್ಪುವಂತಿರಬೇಕಲ್ಲ!

ಇನ್ನು ಸರ್ಕಾರಿ ಶಾಲೆಗಳಲ್ಲಿ ಸೇರಿಸಿಕೊಳ್ಳುವ ಮಕ್ಕಳ ಜ್ಞಾನದ ಮಟ್ಟವನ್ನು ಹೇಳುವಂತೆಯೇ ಇಲ್ಲ. ಎಂಟನೆಯ ತರಗತಿಯಲ್ಲಿ ಆರಂಭಕ್ಕೆ ಎಷ್ಟೋ ಮಕ್ಕಳಿಗೆ ಅಕ್ಷರ ಕಲಿಸಿ ಕಾಗುಣಿತ ತಿದ್ದಿಸಬೇಕಾಗುತ್ತದೆ. ಖಾಸಗಿ ಶಾಲೆಗಳಲ್ಲಿ ಮಾಡಿದಂತೆ ನಾವು ಮಕ್ಕಳ ಮೆರಿಟ್‌ಗೆ ಆದ್ಯತೆಕೊಟ್ಟು, ಎಂಟ್ರೆನ್ಸ್ ಟೆಸ್ಟ್ ಏರ್ಪಡಿಸಿ ಜರಡಿ ಹಿಡಿದು ಸೇರಿಸಿಕೊಳ್ಳುವುದಿಲ್ಲವಲ್ಲ! ಶಾಲೆಗೆ ಸೇರಿದ ಮೇಲೂ ಅವರುಗಳು ಪಠ್ಯ ಪುಸ್ತಕಗಳನ್ನು ಕೊಂಡುಕೊಳ್ಳುವುದರಲ್ಲಿ, ಬರೆಯುವ ಪುಸ್ತಕಗಳು, ಪೆನ್ನುಗಳನ್ನು ಕೊಂಡುಕೊಳ್ಳುವುದರಲ್ಲಿ ಇನ್ನೆಷ್ಟೋ ತಕರಾರು. ಜ್ಯಾಮಿತಿ ಪೆಟ್ಟಿಗೆಗಳು, ಅಟ್ಲಾಸ್ ಮುಂತಾದ ಉಪಕರಣಗಳನ್ನು ಸರ್ಕಾರಿ ಶಾಲೆಯ ಹುಡುಗರು ತರುವುದು ಬಲು ಕಷ್ಟ. ಅವರ ಬಡತನವನ್ನು ಗಣನೆಗೆ ತೆಗೆದುಕೊಂಡರೆ ಅವರ ಲೋಪಗಳಿಗಾಗಿ ಯಾವುದೇ ತರದ ಶಿಕ್ಷೆ ಕೊಡಲು ಮನಸ್ಸು ಬರುವುದಿಲ್ಲ. ಇವರ ಕೈಲಿ 'ಹೋಂ ವರ್ಕ್' ಮಾಡಿಸುವುದು ಬಹಳ ಕಷ್ಟ. 'ಪುಸ್ತಕ ಕೊಡಿಸಿಲ್ಲ ಟೀಚರ್, ನಮ್ಮಮ್ಮನ ಜೊತೆಗೆ ಮನೆಗಳಿಗೆ ಕೆಲಸಕ್ಕೆ ಹೋಗಿದ್ದೆ (ಅನ್ಯರ ಮನೆಯಲ್ಲಿ ಕಸ ಮುಸುರೆ ಮಾಡುವವರ ಮಕ್ಕಳೂ ಈಗ ಪ್ರೌಢಶಾಲೆಗಳಿಗೆ ಬರುವುದನ್ನು ಕಾಣಬಹುದು), ಬೀಡಿ ಕಟ್ಟುತ್ತಾ ಇದ್ದೆ' ಇತ್ಯಾದಿ ಉತ್ತರಗಳು ಹುಡುಗಿಯರಿಂದ ಬರುತ್ತವೆ ತಮ್ಮ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಖಾಸಗಿ ಪಾಠದ ಮನೆಗಳಿಗೆ ಹೋಗಬಲ್ಲ ಮಕ್ಕಳು ಈ ವರ್ಗದಲ್ಲಿ ಹೆಚ್ಚು ಇರುವುದಿಲ್ಲ. ಇನ್ನು ಶಾಲೆಗಳಲ್ಲಿ ಅವರನ್ನು ತಯಾರು ಮಾಡೋಣವೆಂದರೆ ಶಿಕ್ಷಕರನ್ನು ಅಸಹಾಯಕರನ್ನಾಗಿ

ಮಾಡಿರುವ ಇನ್ನೆಷ್ಟೋ ವಿಷಯಗಳಿವೆ. ಪ್ರಯೋಗಶಾಲೆಯ ಉಪಕರಣಗಳು, ಪಾಠೋಪಕರಣಗಳು ಅಗತ್ಯವಿದ್ದಷ್ಟು ಇರುವುದಿಲ್ಲ. ಇಲ್ಲದ, ಅಥವಾ ಹದಗೆಟ್ಟ ಉಪಕರಣಕ್ಕೆ ಬದಲಿ, ಒಂದು ಚಿಕ್ಕ ವಸ್ತುವನ್ನು ತರಿಸುವುದಕ್ಕೂ ಮೇಲಧಿಕಾರಿಗಳ ಅನುಮತಿಬೇಕು. ಸಾದಿಲ್ವಾರು ನಿಧಿಯಲ್ಲಿ ಹಣವಿಲ್ಲ ಎಂದು ಮುಖ್ಯೋಪಾಧ್ಯಾಯರು ಕೈ ಅಲ್ಲಾಡಿಸುವುದು ಸಾಮಾನ್ಯ ವಿಷಯ.

ನಾನು ಈಗ ಇರುವಂಥ ಒಂದು ದೊಡ್ಡ ಹೆಣ್ಣು ಮಕ್ಕಳ ಪ್ರೌಢಶಾಲೆಯ ಸ್ಥಿತಿ ವಿಶೇಷವಾಗಿ ನಮೂದಿಸುವಂಥಾದ್ದು. ಸಂತಾನ ಹರಣ ಶಸ್ತ್ರ ಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆಗಳಿಗಾಗಿ ಶಿಬಿರಗಳು ನಡೆಯುವಾಗೆಲ್ಲ ಈ ಶಾಲೆಯನ್ನು ಅಂತಹ ಕೆಲಸಕ್ಕೆ ಬಿಟ್ಟುಕೊಡಬೇಕಾಗುತ್ತದೆ. ಲೋಕಸೇವಾ ಆಯೋಗದವರು ನಡೆಸುವ ಮೊದಲ ದರ್ಜೆ, ಎರಡನೆದರ್ಜೆ ಗುಮಾಸ್ತರ ಆಯ್ಕೆಯ ಪರೀಕ್ಷೆಗಳು, ಸರ್ಕಾರಿ ನೌಕರರಿಗೆ ನಡೆಸುವ ಇಲಾಖಾ ಪರೀಕ್ಷೆಗಳು, ಸರ್ಕಾರ ನಡೆಸುವ ವಾಣಿಜ್ಯ ಪರೀಕ್ಷೆಗಳು, ಸಂಗೀತ ನೃತ್ಯ ತಾಳ ವಾದ್ಯ ಮೊದಲಾದ ಪರೀಕ್ಷೆಗಳು ಮತ್ತು ಚುನಾವಣೆಗಳಲ್ಲಿ ವಿವಿಧ ಕಾರ್ಯಗಳಿಗಾಗಿ—ಯಾವಾಗ ಕೇಳಿದರೆ ಆಗ ಸರ್ಕಾರಿ ಶಾಲೆಗಳನ್ನು ಪ್ರತಿ ಮಾತಾಡದೆ ಬಿಟ್ಟುಕೊಡಬೇಕು. ಇಂತಹ ದಿನಗಳಿಗಾಗಿ ಒಟ್ಟು ಎಷ್ಟೋ ದಿನಗಳ ಬೋಧನಾವಧಿ ಮೊಟಕುಗೊಳ್ಳುತ್ತದೆ. ಇನ್ನು, ಇದ್ದ ಉಪಾಧ್ಯಾಯರುಗಳನ್ನು ಬೇರೆಡೆಗೆ ವರ್ಗ ಮಾಡಿದಾಗ, ಬರಬೇಕಾದ ಉಪಾಧ್ಯಾಯರು ಬೇಗ ಬರದೆ ರಜಾ ಮುಂತಾದ್ದನ್ನು ಹಾಕಿ ತಕರಾರು ಹೂಡಿದಾಗ, ಖಾಲಿ ಬಿದ್ದಿರುವ ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿ ತಡ ಆಗುವಾಗ, ಇದ್ದ ಉಪಾಧ್ಯಾಯರುಗಳನ್ನೇ ಡಿ.ಡಿ.ಪಿ.ಐಗಳ ಆಫೀಸಿನ ವಿಶೇಷ ಕೆಲಸಗಳಿಗೆ ಡೆಪ್ಯೂಟ್ ಮಾಡಿ ಕಳಿಸಿದಾಗ, ನಡುನಡುವೆ ಉಪಾಧ್ಯಾಯರುಗಳಿಗೆ ಬಡತಿ ಕೊಟ್ಟ ನೆಪದಲ್ಲಿ ಸ್ಥಳಾಂತರ ಮಾಡಿದಾಗ—ಹೀಗೆ ಅನೇಕ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠಗಳು ನಿಂತುಹೋಗಿ ಅವರ ಶಿಕ್ಷಣದ ಕೆಲಸ ಹಿಂದಕ್ಕೆ ಸರಿಯುತ್ತವೆ. ಈ ಎಲ್ಲ ಕಾರಣಗಳು ಸರ್ಕಾರಿ ಶಾಲೆಗಳನ್ನು ಕಣ್ಮುಚ್ಚಿಕೊಂಡು ಜರಿಯುವವರಿಗೆ ಎಲ್ಲಿ ತಿಳಿದಿರಲು ಸಾಧ್ಯ ?

ಪರೀಕ್ಷೆಗಳಲ್ಲಿ ಕಟ್ಟು ನಿಟ್ಟಾಗಿ ವರ್ತಿಸಿದರೆ ಶೇಕಡ ಇಪ್ಪತ್ತು ಹುಡುಗರು ಉತ್ತೀರ್ಣರಾಗಬಹುದು. ಉಳಿದವರೆಲ್ಲ ನಪಾಸು ಎಂದಾದರೆ ಶಾಲೆಗೆ ಕೆಟ್ಟ ಹೆಸರೂ ಬರಬಹುದು. ಮೇಲಧಿಕಾರಿಗಳಿಂದ, ಶಾಲೆಯ ಸಮಾರಂಭಗಳಿಗೆ ಬರುವ ಗಣ್ಯರುಗಳಿಂದ ಛೀಮಾರಿಯೂ ಪ್ರಾಪ್ತವಾಗಬಹುದು. ಮತ್ತು ಹಿಂದಕ್ಕುಳಿದ ಹುಡುಗರು ಹೊರಬಿದ್ದು ಬಾಲಕಾರ್ಮಿಕರಾಗಬಹುದು. ಹುಡುಗರು ಸಾಕಷ್ಟು ಜನ ಉತ್ತೀರ್ಣರಾಗಲಿಲ್ಲ ಎಂದು ವಾರ್ಷಿಕ ಬಡತಿಯನ್ನು ತಡೆಹಿಡಿಯುವ ಮೂಲಕ ಶಿಕ್ಷಕರನ್ನು ದಂಡಿಸಿದ ಪ್ರಕರಣಗಳೂ ಹಿಂದೆ ನಡೆದಿವೆ. ಹುಡುಗರು ಹೆಚ್ಚು ಜನ ಪಾಸಾಗಲಿ ಎಂದು, ಸಾಮೂಹಿಕವಾಗಿ ಕಾಪಿ ಮಾಡಿಸುವ ವ್ಯವಸ್ಥೆ ಮಾಡುವುದಿರಲಿ, ಪರೀಕ್ಷೆಯ ಅವ್ಯವಹಾರಗಳಿಗೆ ರಿಯಾಯಿತಿ ತೋರಿಸಿದರೆ ಹುಡುಗರಲ್ಲಿ ಅಶಿಸ್ತು ಹೆಚ್ಚುತ್ತದೆ. ಅಶಿಸ್ತಿಗೆ ಅವಕಾಶವಿರುವಲ್ಲಿ ಕಷ್ಟಪಟ್ಟು ಓದಿ ಮೇಲೆ ಬರಬೇಕೆಂಬ ಪ್ರವೃತ್ತಿ ಕಡಿಮೆಯಾಗುತ್ತದೆ.

ಸರ್ಕಾರಿ ಮತ್ತು ಖಾಸಗಿ ಶಾಲೆಗಳ ನಡುವಿನ ಗುಣಮಟ್ಟದ ಅಂತರಕ್ಕೆ ಮೇಲೆ ಹೇಳಿದಂತಹ ಇನ್ನೂ ಹಲವು ಕಾರಣಗಳು ಇರುವುದರಿಂದ ಅವುಗಳನ್ನು ಹೀಗೆ ಪಟ್ಟಿ ಮಾಡಿ ಅಡಕ ಮಾಡಬಹುದು :

ಖಾಸಗಿ ಶಾಲೆಗಳಲ್ಲಿ	ಸರ್ಕಾರಿ ಶಾಲೆಗಳಲ್ಲಿ
೧. ಮಕ್ಕಳನ್ನು ಸೇರಿಸಿಕೊಳ್ಳುವಾಗ ಮಕ್ಕಳಿಗೆ ಪರೀಕ್ಷೆ, ಪೋಷಕರ ಸಂದರ್ಶನ ಇರುತ್ತದೆ.	ಇಲ್ಲಿ ಇಲ್ಲ.
೨. ಬೇಕೆಂದರೆ ತರಗತಿಯಲ್ಲಿ ಮಕ್ಕಳ ಸಂಖ್ಯೆಯನ್ನು ನಿಯಂತ್ರಿಸಬಹುದು.	ಅನಿಯಂತ್ರಿತ.
೩. ಶಿಕ್ಷಕರಿಗೆ ವರ್ಗಾವಣೆ ಇಲ್ಲ. ಶಿಕ್ಷಕರಿಗೆ ಬಹುಮಟ್ಟಿಗೆ ನೆಮ್ಮದಿ ಇದ್ದು ಮನಸ್ಸು ಸಮಸ್ಥಿತಿಯಲ್ಲಿ ಇರಲು ಸಾಧ್ಯ.	ವರ್ಗಾವಣೆ, ವರ್ಗಾವಣೆಯ ಭೀತಿ, ಇವಕ್ಕೆ ಒಳಗಾದ ಶಿಕ್ಷಕರ ಮನಸ್ಸು ಸಮಸ್ಥಿತಿಯಲ್ಲಿ ಇಲ್ಲದೇ ಇರುವುದು–ಸಾಮಾನ್ಯ ವಿಷಯ.
೪. ಶಾಲೆಯ ಕಟ್ಟಡವನ್ನು ವಿವಿಧ ಸಾರ್ವಜನಿಕ ಕಾರ್ಯಗಳಿಗೆ ಬಿಟ್ಟು ಕೊಡುವ ಪ್ರಸಂಗ ಅಪರೂಪ	ಇಂತಹ ಪ್ರಸಂಗಗಳು ಸದಾ ಇರುತ್ತವೆ.
೫. ತರಗತಿಯ ಪರೀಕ್ಷೆಗಳಲ್ಲಿ ನಪಾಸಾದ ಹುಡುಗರನ್ನು ಟಿ.ಸಿ.ಕೊಟ್ಟು ಹೊರ ಹಾಕುವುದು ಸಾಮಾನ್ಯ ಪರಿಪಾಟ. (ಹೊರಹಾಕಲು ತಕರಾರು ಮಾಡುವ ಹುಡುಗರನ್ನು ಒಪ್ಪಿಸುವದಕ್ಕಾಗಿ ಪಾಸ್ ಎಂದು ಪ್ರಮಾಣ ಪತ್ರ ಕೊಟ್ಟು ಹೊರ ಹಾಕುವ, ಆ ತರದ ಪ್ರಮಾಣ ಪತ್ರಕ್ಕಾಗಿ ನಿಗದಿತ ಹಣ ವಸೂಲು ಮಾಡಿಕೊಳ್ಳುವ ಶಾಲೆಗಳು ಇರುವುದೂ ತಿಳಿದು ಬಂದಿದೆ.)	ಹೀಗೆ ನಪಾಸಾದದ್ದಕ್ಕೆ ಹುಡುಗರನ್ನು ಹೊರಹಾಕಲು ಸಾಧ್ಯವಿಲ್ಲ.
೬. ಶಿಸ್ತಿನ ಕಾರಣಕ್ಕೆ, ನಪಾಸಾದದ್ದಕ್ಕೆ ಬೇರೆ ಶಾಲೆಗಳಿಂದ ಬರುವ ಹುಡುಗರನ್ನು ಸೇರಿಸಿಕೊಳ್ಳುವ ಪ್ರಸಂಗ ಬಹಳ ಕಡಮೆ.	ಹೀಗೆ ಬೇರೆ ಬೇರೆ ಶಾಲೆಗಳಿಂದ ಬರುವವರನ್ನು ಸೇರಿಸಿಕೊಳ್ಳುವುದು. ಹೆಚ್ಚು ಅಂಥವರ ಪರವಾಗಿ ಒತ್ತಡಗಳು, ಶಿಫಾರಸುಗಳು ಬರುತ್ತವೆ.

೭. ಪ್ರವೇಶ, ಪ್ರವೇಶದ ರಿಜಿಸ್ಟರ್ ಬರೆಯುವುದು, ಶುಲ್ಕ–ವಸೂಲಾತಿ. ಪರೀಕ್ಷೆ ಅರ್ಜಿ ಪತ್ರಗಳನ್ನು ತುಂಬುವುದು, ವಿದ್ಯಾರ್ಥಿ ವೇತನ ಪತ್ರಗಳನ್ನು ತುಂಬುವುದು ಇತ್ಯಾದಿ ಕರಣಿಕ ಕಾರ್ಯಗಳಿಗೆ ಸಿಬ್ಬಂದಿ ಇರುತ್ತದೆ. ಪುಸ್ತಕ ಭಂಡಾರದ ಅಧಿಕಾರಿಗಳು ಇರುತ್ತಾರೆ (ಆಡಳಿತ ಮಂಡಳಿಯವರಿಗೆ ಇಚ್ಛೆ ಇದ್ದಲ್ಲಿ ಈ ಸಿಬ್ಬಂದಿ ಇದ್ದೇ ಇರುತ್ತದೆ).	ಕರಣಿಕ ಕಾರ್ಯ, ಪುಸ್ತಕ ಭಂಡಾರದ ಉಸ್ತುವಾರಿ ಮುಂತಾದ್ದನ್ನು ಉಪಾಧ್ಯಾಯರೆ ಮಾಡಬೇಕಾಗಿರುತ್ತದೆ.
೮. ಡೊನೇಶನ್ ಸಂಗ್ರಹ ಮೊದಲಾದ ವಿಧಾನಗಳಿಂದ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಖಾಸಗಿ ಶಾಲೆಗಳು ತರಗತಿಯ ಕೊಠಡಿಗಳು, ಪ್ರಯೋಗಾಲಯ, ಟಿ.ವಿ., ರೇಡಿಯೋ, ಕಪ್ಪು ಹಲಗೆ, ಭೂಪಟಗಳು, ಪುಸ್ತಕ ಭಂಡಾರದಲ್ಲಿ ಪುಸ್ತಕಗಳು ಮೊದಲಾದ ಎಲ್ಲ ಬೋಧನ ಸಾಧನಗಳಿಂದ ಸಜ್ಜುಗೊಂಡಿರಲು ಸಾಧ್ಯ.	ಈ ಸಾಧನಗಳ ಕೊರತೆ ಸರ್ಕಾರಿ ಶಾಲೆಗಳಲ್ಲಿ ಯಾವಾಗಲೂ ಇರುವಂಥದ್ದೇ. (ಇದಕ್ಕೆ ಸರ್ಕಾರ ಕೊಡಬಹುದಾದ ಕಾರಣ : ಸಂಪನ್ಮೂಲಗಳ ಅಭಾವ, ಶಾಲೆಗಳಿಂದ ಕಂದಾಯದ ರೂಪದಲ್ಲಿ ಸರ್ಕಾರಿ ಬೊಕ್ಕಸಕ್ಕೆ ಏನೂ ವರಮಾನ ಬರದೆ ಇರುವುದು ಇತ್ಯಾದಿ)
೯. ಕಾಲಕಾಲಕ್ಕೆ ಹುಡುಗರನ್ನು ಪರೀಕ್ಷೆಗಾಗಿ ಸಜ್ಜಾಗಿರಿಸಲು ಟೆಸ್ಟ್‌ಗಳು, ಉಪಪರೀಕ್ಷೆಗಳು, ಅಚ್ಚು ಮಾಡಿದ ಪ್ರಶ್ನೆ ಪತ್ರಿಕೆಗಳು, ಬೆರಳಚ್ಚು ಮಾಡಿದ ಟಿಪ್ಪಣಿಗಳ ವಿತರಣೆ–ಇತ್ಯಾದಿ ಸೌಲಭ್ಯಗಳು ಇರುತ್ತವೆ.	ಈ ಸೌಲಭ್ಯಗಳಿಗೆ ಸರ್ಕಾರಿ ಶಾಲೆಗಳಲ್ಲಿ ಅವಕಾಶವಿಲ್ಲ.
೧೦. ಶಾಲೆಯಲ್ಲಿ ಹುಡುಗರ ಪ್ರಗತಿಯ ಬಗ್ಗೆ ಪೋಷಕರನ್ನು ಎಚ್ಚರಿಸಲು ಪ್ರಗತಿಪತ್ರ ಅಥವಾ ವರದಿ ಕಳಿಸುವ ಪರಿಪಾಟಿ ಇರುತ್ತದೆ.	ಈ ಬಾಬುಗಳಿಗೆ ಖರ್ಚು ಮಾಡಲು ಇಲ್ಲಿ ಅವಕಾಶವಿಲ್ಲ.
೧೧. ಮಕ್ಕಳಿಗೆ ಹೋಂವರ್ಕ್ ಕೊಟ್ಟಾಗ, ಪರೀಕ್ಷೆಗಳು ನಡೆಯುವಾಗ-ಅವರಿಗೆ ಮನೆಯಲ್ಲಿ ತರಪೇತಿ ಕೊಡುವಲ್ಲಿ	ಇಂತಹ ಮೇಲ್ವರ್ಗದ ಪೋಷಕರು ಸರ್ಕಾರಿ ಶಾಲೆಯ ಮಕ್ಕಳಿಗೆ ಇರುವುದಿಲ್ಲ.

ತಾಯಂದಿರು ಅಥವಾ ಇತರ ದೊಡ್ಡವರು ಶ್ರಮ ವಹಿಸುತ್ತಾರೆ.	
೧೨. ಶ್ರಮಿಕ ವರ್ಗದ ಮಕ್ಕಳು ಇಲ್ಲಿ ಇರುವುದಿಲ್ಲ.	ಹೆಚ್ಚಾಗಿ ಶ್ರಮಿಕವರ್ಗದಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಕಾರ್ಮಿಕ ವರ್ಗದಿಂದ ಬರುವ ಮಕ್ಕಳು ಮನೆಯಲ್ಲಿ ನಾನಾ ವಿಧದ ತಗಾದೆಗಳು ಇದ್ದಾಗ, ಬಿತ್ತನೆ ಕಾಲ-ಸುಗ್ಗಿ ಕಾಲಗಳಲ್ಲಿ, ಶಾಲೆಗಳಿಗೆ ಪೋಷಕರ ಇಚ್ಛೆಯ ಮೂಲಕವೇ ಚಕ್ಕರ್ ಹಾಕುತ್ತಾರೆ.
೧೩. ಶಾಲೆಯಲ್ಲಿ ಮಕ್ಕಳ ಪ್ರಗತಿ ಚೆನ್ನಾಗಿಲ್ಲದಿದ್ದರೆ ಪೋಷಕರು ಚತುರೋಪಾಯಗಳಿಂದ ಅವರನ್ನು ತಿದ್ದುವ ಪ್ರಯತ್ನ ಮಾಡುತ್ತಾರೆ.	ಈ ಮಕ್ಕಳ ಪೋಷಕರು ಒರಟಾಗಿ ಮಕ್ಕಳನ್ನು ದಂಡಿಸುತ್ತಾರೆ ಇಲ್ಲವೇ ತಮ್ಮ ದುರದೃಷ್ಟವೆಂದು ಮಕ್ಕಳನ್ನು ಶಾಲೆಯಿಂದ ಬಿಡಿಸುತ್ತಾರೆ.

ಈ ಕಾರಣಗಳನ್ನು ಪರಿಭಾವಿಸಿದವರಿಗೆ ಸರ್ಕಾರಿ ಶಾಲೆಗಳ ಅತೃಪ್ತಿಕರ ಫಲಿತಾಂಶಗಳ ಬಗೆಗೆ ಸ್ವಲ್ಪವಾದರೂ ಸಮಜಾಯಿಷಿ ದೊರೆತೀತೆಂದು ಆಶಿಸುತ್ತೇನೆ. ಮೇಲೆ ಹೇಳಿದ ಅಂಶವನ್ನೇ ಮತ್ತೊಮ್ಮೆ ಹೇಳುವುದಾದರೆ ಮೇಲುವರ್ಗದವರ ಮಕ್ಕಳಿಗೆ ಹೋಂವರ್ಕ್ ಇದ್ದಾಗ, ಅವರಿಗೆ ಪರೀಕ್ಷೆಗಳು ಬಂದಾಗ ಅವರ ತಾಯಂದಿರು ಮನೆಯಲ್ಲಿ ತಮಗೇ ಪರೀಕ್ಷೆ ಒದಗಿ ಬಂದಂತೆ ಸಡಗರಿಸುವುದನ್ನೂ, ಪೇಚಾಡುವುದನ್ನೂ; ಮಕ್ಕಳ ಫಲಿತಾಂಶ ಬಂದು ಅವರು ರ್‍ಯಾಂಕ್ ಮುಂತಾದ್ದನ್ನು ಪಡೆದಾಗ ಸಂತೋಷದಿಂದ ಹಿಗ್ಗುವುದನ್ನೂ; ರ್‍ಯಾಂಕ್ ತಪ್ಪಿ ಹೋದಾಗ ಅವರು ನೆರೆಹೊರೆಯವರೊಡನೆ ಮಾತನಾಡುತ್ತ ಅನುಭವಿಸುವ ವಿಷಾದ ಯೋಗವನ್ನೂ ನೋಡಿದರೆ ಬಡವರ ಮಕ್ಕಳಿಗೆ ಅಂತಹ ಪೋಷಕರು, ತಾಯಂದಿರು ಇಲ್ಲದೇ ಇರುವುದೇ ಅವುಗಳ ಅತೃಪ್ತಿಕರ ಪ್ರಗತಿಗೆ ದೊಡ್ಡ ಕಾರಣವೆಂದು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಆದ್ದರಿಂದ ಸರ್ಕಾರಿ ಶಾಲೆಗಳಾಗಲಿ ಅದರ ಶಿಕ್ಷಕರಾಗಲಿ ತಮ್ಮ ಯಾವುದೇ ಅಂತರ್ಗತವಾದ ಕಾರಣದಿಂದ ಮಕ್ಕಳ ಕಡಮೆ ಫಲಿತಾಂಶಕ್ಕೆ ಕಾರಣವಾಗುವುದಿಲ್ಲ. ಖಾಸಗಿ ಶಾಲೆಗಳಲ್ಲಿ ಓದುವಂಥ ಮೇಲುವರ್ಗದ, ವಿದ್ಯಾವಂತ ವರ್ಗದ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೇ ಸೇರಿಸಿ ಓದಿಸಿದರೆ ಖಂಡಿತವಾಗಿಯೂ ಅಲ್ಲಿಯ ಫಲಿತಾಂಶದ ಶೇಕಡಾವಾರು ಹೆಚ್ಚುವುದರಲ್ಲಿ ಸಂದೇಹವಿಲ್ಲ. ಗ್ರಾಮಾಂತರ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ, ಖಾಸಗಿ ಶಾಲೆಗಳು ಅಲ್ಲಿ ಇಲ್ಲದೆ ಹೋದಾಗ, ಗ್ರಾಮಗಳಲ್ಲೂ ಕೂಡ ಇರುವ ಸರ್ಕಾರಿ ನೌಕರರು, ಶಿಕ್ಷಕರು ಮುಂತಾದ ಮಧ್ಯಮ ವರ್ಗದ ಪೋಷಕರ ಮಕ್ಕಳು ಚೆನ್ನಾಗಿ ಓದುವುದನ್ನು, ತಮ್ಮ ಬುದ್ಧಿವಂತಿಕೆಯಿಂದ ಬೆಳಗುವುದನ್ನು ಉಪಾಧ್ಯಾಯರುಗಳು

ಗಮನಿಸಬಹುದು. ಪೇಟೆಯ ಸರ್ಕಾರಿ ಶಾಲೆಗಳಲ್ಲಿ ಈ ವೈವಿಧ್ಯ ಕೂಡ ಕಾಣಬರುವುದಿಲ್ಲ. ಈ ಎಲ್ಲ ಸೂಕ್ಷ್ಮಗಳನ್ನೂ ನಾವು ಪರಿಗಣಿಸದೆ ಹೋದಲ್ಲಿ ನಮ್ಮ ಸಮಸ್ಯೆಗೆ ಉತ್ತರ ಕೈ ತಪ್ಪಿ ಹೋಗುತ್ತದೆ.

ಸರ್ಕಾರಿ ವಿದ್ಯಾ ಸಂಸ್ಥೆಗಳ ಪರಿಸ್ಥಿತಿ ನಮ್ಮ ಸರ್ಕಾರಗಳ ಆರ್ಥಿಕ ಪರಿಸ್ಥಿತಿಗೆ, ಅವುಗಳ ಅದಕ್ಷತೆಗೆ ಹಿಡಿದ ಕನ್ನಡಿ. ಸರ್ಕಾರಿ ಶಾಲೆಗಳ ಮತ್ತು ಖಾಸಗಿ ಶಾಲೆಗಳ ನಡುವಿನ ಅಂತರ ಎಂದರೆ ನಮ್ಮ ಸಮಾಜದ ವಿವಿಧ ವರ್ಗಗಳ, ಬಡವರು, ಮತ್ತು ಶ್ರೀಮಂತ ನಡುವೆ ಇರುವ ಅಂತರ ಮತ್ತು ನಮ್ಮ ಸರ್ಕಾರ ಶಿಕ್ಷಣದ ವಿಚಾರದಲ್ಲಿ ಮೊದಲಿನಿಂದ ಅನುಸರಿಸುತ್ತ ಬಂದಿರುವ ತಪ್ಪು ನೀತಿಯ ಫಲ. ಒಟ್ಟಿನಲ್ಲಿ ಸರ್ಕಾರಿ ಶಾಲೆಗಳಲ್ಲಿನ ಗುಣಮಟ್ಟದ ಸಮಸ್ಯೆ ನಮ್ಮ ಸಮಾಜದಲ್ಲಿನ ಆರ್ಥಿಕ ಅಸಮಾನತೆಯ ಸಮಸ್ಯೆಯಲ್ಲದೆ ಬೇರೆ ಅಲ್ಲ.





